Karnataka State Archives
(Department of Library) (B)
Accession No. 4832
Date

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE THIRTY-NINTH DAY

OF THE

FIFTH SESSION

THURSDAY, 25TH MARCH 1965

Vol. IX—No. 1

Karnataka State Archive (B)
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ವಾಪ್ತಿ ಕ್ರಮಾಂಕ Accession No. 4832
ದಿನಾಂಕ Date..........

BANGALORE:
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1965

Price: 25 Paise.

CONTENTS

		Pages
Starred Questions and Answers ...		1—18
Question for answer on the day (but not taken up) ...		18—19
Special Motion *re*: Conduct of members interupting or obstructing Governor's Address—(Deferred) ...		19—20
Budget Estimates for 1965-66—Demands for Grants—		
Demand No. 1—Taxes on Income other than Corporation Tax ...	(Voted)	20—33
Demand No. 5—Sales Tax Administration ...		
Demand No. 34—Pensions and other Retirement Benefits ...		
Demand No. 35—Territorial and Political Pensions ...		
Demand No. 36—Privy Purses and Allowances		
Demand No. 40—Commutation of Pensions ...		
Demand No. 41—Miscellaneous Compensations and Assignments ...		
Demand No. 52—Commuted Value of Pensions		
Demand No. 53—Capital outlay on Schemes of Government Trading ...		
Demand No. 54—Advances and Loans ...		
Mysore Appropriation (No. 3) Bill, 1965—(Passed) ..		33—37
Budget Estimates for 1965-66—Demands for Grants—		
Demand No. 27—Miscellaneous Social and Developmental Organisations—(Voted) ...		37—89

೨೨

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE FORTIETH DAY

OF THE

FIFTH SESSION

FRIDAY, 26TH MARCH 1965

Vol. IX—No. 2

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1965

Price: 25 Paise.

CONTENTS

		PAGES
Starred Questions and Answers	...	1b—16b
Questions for answers on the day (but not taken up)	...	16b—18b
Election of members to the—(i) House Committee ... (ii) Assurances Committee ... (iii) Committee on Subordinate Legislation ... (iv) Committee on Private Members' Bills and Resolutions ... —(Results announced) ...		19b—20b
Papers laid on the Table—		
Seventh list of Unstarred Questions and Answers	...	21b
Unstarred Questions and Answers	...	21b—34b
Report of the Committee of Privileges—(Presented)	...	35b
Privilege motion *re*: Conduct of certain Members during the Address of the Governor on 12th January 1965—(Adopted)	...	35b—57b
Budget Estimates for 1965-66—Demands for Grants—		
Demand No. 20—Agriculture, Horticulture and Fisheries ... Demand No. 21—Rural Development ... Demand No. 23—Co-operation ... Demand No. 25—Community Development, etc. Demand No. 38—Forest. ... Demand No. 39—Miscellaneous ... Demand No. 51—Capital Outlay on Forest Account ...	(Voted)	57b—107b

(91—1b to 107b)

[91—197]

THE
MYSORE LEGISLATIVE ASSEMBLY
DEBATES

OFFICIAL REPORT

OF THE

PROCEEDINGS OF THE FORTY-FIRST DAY

OF THE

FIFTH SESSION

SATURDAY, 27TH MARCH 1965

Vol. IX—No. 3

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1965

Price: 25 Paise.

CONTENTS

	Pages
Starred Questions and Answers ...	199—211
Member's Representations ...	211—214
Calling attention to a matter of urgent public importance *re*: the Cholera Epidemic in Arsikere Taluk, Gangavathi Town, Hospet and round about ...	214—215
Member's Representations ...	216—217
Papers laid on the Table—	
Notification No. PLM 11 MLR 64, dated 5th March 1965 Notification No. PLM 12 MLR 64, dated 5th March 1965 issued under Mysore Municipalities Act, 1964 ...	217—218
Motion for Election to : (i) The Senate of Bangalore University ... (ii) The Committee of Privileges ... —(Adopted) ...	218—219
Budget Estimates for 1965-66—Demands for Grants—	
Demand No. 2—Land Revenue Demand No. 7—Stamps Demand No. 8—Registration Demand No. 15—Miscellaneous Departments Demand No. 22—Animal Husbandray Demand No. 33—Famine Demand No. 42—Compensation to Zamindars Demand No. 53—Capital outlay on Schemes of Government Trading } (Voted)	219—247

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE FORTY-SECOND DAY

OF THE

FIFTH SESSION

MONDAY, 29TH MARCH 1965

Vol. IX—No. 4

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1965

Price: 25 Paise.

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE FORTY-THIRD DAY

OF THE

FIFTH SESSION

WEDNESDAY, 31ST MARCH 1965

Vol. IX—No. 5

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1965

Price: 25 Paise.

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE FORTY-FOURTH DAY

OF THE

FIFTH SESSION

WEDNESDAY, 7TH APRIL 1965

Vol. IX—No. 6

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1965

Price: 25 Paise.

CONTENTS

	Pages
Starred Questions and Answers ...	369—388
Questions for answers on the day (but not taken up) ...	389—393
Statement of the Speaker *re* : the Calling Attention Notice	393—397
Papers laid on the Table—	
Notification No. GAD 2 SSC [illegible] dated 8th February 1965 [illegible] amendment to the [illegible] Public Service Commission (Consultation [illegible], 1958) ... Notification No. PL 113 LER [illegible] 18th March 1965 issued under the Mysore [illegible] Act, 1961 ... Annual Financial Statement of the Mysore State Electricity Board for 1965-66 ...	397
Member's Representations ...	397—399
Official Resolution—	
Re : Survey and Settlement Reports—(Debate not concluded) ...	399—427
Half-an-hour Discussion arising out of answers given to *Question No. 608 ...	427—432

THE
MYSORE LEGISLATIVE ASSEMBLY
DEBATES

OFFICIAL REPORT

OF THE

PROCEEDINGS OF THE FORTY-FIFTH DAY

OF THE

FIFTH SESSION

THURSDAY, 8TH APRIL 1965

Vol. IX—No. 7

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1965

Price: 25 Paise.

(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. 4832
ದಿನಾಂಕ Date

MYSORE LEGISLATIVE ASSEMBLY

Thursday, 25th March 1965.

The House met in the Assembly Chamber, Vidhana Soudha, Bangalore, at Twelve Noon.

[MR. SPEAKER (SRI B. VAIKUNTA BALIGA, B.A., B.L.) in the Chair.]

STARRED QUESTIONS

(to which Oral Answers were given).

Permanent Posts of Assistant Commissioners and Tahsildars that are vacant.

**Q.*—74. Sri B. V. MAGAVI (Haveri).—

Will the Government be pleased to state :—

(*a*) the number of permanent posts of Assistant Commissioners and Tahsildars that are still lying vacant;

(*b*) since when they are lying vacant ;

(*c*) the reason for not filling these posts ;

(*d*) when they intend to fill up these posts ?

A—Sri S. NIJALINGAPPA (Chief Minister).—

(*a*) Assistant Commissioners. Four as on 12-3-1965.

(*b*) From 15-12-1964, 1-1-65, 16-1-65 and 11-2-1965 Tahsildars-One from 13-1-1965.

(*c*) There is no special reason. Steps are being taken to fill them.

(*d*) As early as possible.

Sri B. V. MAGAVI.—Sir, why the number of vacancies of Tahsildars is not mentioned ?

Sri S. NIJALINGAPPA.—There was no vacancy of Tahsildar when the question was sent ; now, there is one.

Sri B. V. MAGAVI.—May I know why these posts are still lying vacant ?

Sri S. NIJALINGAPPA.—They are only there for one or two months. They are not lying vacant since long.

ಶ್ರೀ ಜಿ. ದುಗ್ಗಪ್ಪ.—ಸ್ವಲ್ಪ ದಿವಸದ ಕೆಳಗೆ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು 40 ಜನ ತಹಸೀಲ್ದಾರರನ್ನು ನೇಮಕ ಮಾಡಿದ್ದುದನ್ನು ಸುಪ್ರೀಂ ಕೋರ್ಟಿನವರು ತಳ್ಳಿ ಹಾಕಿದ್ದಾರೆ. ಆ 40 ಸ್ಥಾನಗಳು ಖಾಲಿ ಇದೆಯಲ್ಲವೇ ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಅವೆಲ್ಲ ಭರ್ತಿಯಾಗಿವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಅನುಭವ ಪಡೆದ ಅಸಿಸ್ಟೆಂಟ್ ಕಮಿಷನರುಗಳನ್ನು ಆದಷ್ಟು ಮಟ್ಟಿಗೂ ಆಹಾರ ಇಲಾಖೆಗೆ ಹಾಕಿ ಅಲ್ಲಿ ಕೆಲಸಮಾಡುತ್ತಿರುವ ಪ್ರೊಬೇಷನರಿ ಅಧಿಕಾರಿಗಳನ್ನು ಸಬ್ ಡಿವಿಜನ್‌ಗಳಿಗೆ ಹಾಕುವುದಕ್ಕೆ ಸರ್ಕಾರದವರು ಮನಸ್ಸು ಮಾಡುತ್ತಾರೆಯೇ ಸ್ವಾಮಿ ?

ಶ್ರೀ ನಿಜಲಿಂಗಪ್ಪ.—ಇಲ್ಲಿ ಕೇಳಿರುವುದು ಬೇರೆನ್ನಿ ವಿಚಾರ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ಇರುವಂತ ಅಸಿಸ್ಟೆಂಟ್ ಕಮಿಷನರುಗಳು ಮತ್ತು ತಹಸೀಲ್ದಾರರು ಇವರುಗಳು ನಿವೃತ್ತರಾದ ಮೇಲೆ ಕೆಲವು ಜಾಗಗಳನ್ನು ಭರ್ತಿಮಾಡದೆ ಇರುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಒಂದು ಸೂಚನೆ ಸ್ವಾಮಿ.

Removal of Slum Area at Gadag-Betgeri

*Q.—387. Sri K. P. GADAG (Gadag).—

Will the Government be pleased to state.—

(a) whether they are aware that thousands of people are residing in an unhealthy low level slum area at Gadag—Betgeri ;

(b) whether any action has been taken for the removal of this slum area ?

A.—Sri K. PUTTASWAMY (Minister for Municipal Administration).—

(a) Yes.

(b) The question of removing the slum is under the consideration of Gadag-Betgeri Municipality.

Sri K. P. GADAG.—May I know in what stage the question of removing the slum of Gadag-Betgeri is ?

Sri K. PUTTASWAMY.—Sir, that question is under the consideration of the Municipality now. The Commissioner of Endowments has agreed and approved of the proposal of the Municipality to take the land on a lease for 99 years on 3,000 rupees rent per annum.

Sri K. P. GADAG.—May I know whether it has been accepted by the Government ?

Sri K. PUTTASWAMY.—I think the Muzrai Commissioner has approved of it and it is within his power.

Sri SIDDIAH KASIMATH.—May I know whether the Gadag-Betgeri Municipality has asked for any loan for removing this slum area ?

Sri K. PUTTASWAMY.—Under the slum clearance scheme, amounts should be made available.

Sri K. P. GADAG.—May I know whether all the works of the slum clearance are know held up due to Supreme Court judgement.

Sri K.PUTTASWAMY.—Sir, the question pertains only to this particular slum and I have answered. There has been a judicial pronouncement striking down certain provisions of the Slum Clearance Act. That matter is being examined at the Government level.

ಶ್ರೀ ಸಿದ್ದಯ್ಯ ಕಾಶಿಮಠ.—ಈ ಕೊಳಚೆ ಬಹುವರ್ಷಗಳಿಂದ ಇದ್ದು ಅಲ್ಲಿ ಜನ ವಾಸಮಾಡುತ್ತ ಇರುವುದರಿಂದ ಅದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳುವಂತೆ ಗದಗ-ಬೆಟಗೇರಿ ಮುನಿಸಿಪಾಲಿಟಿಗೆ ಸಲಹೆ ಕೊಡುತ್ತಾರೆಯೇ ಸ್ವಾಮಿ ?

Sri K. PUTTASWAMY.—Sir, there is absolutely no difference of opinion that this slum requires immediate clearance ; but it is a human problem and it takes time.

Sri T. MADIAH GOWDA.—Since how long this slum area is in existance in Gadag-Betgeri ?

ಶ್ರೀ ಕೆ. ಪುಟ್ಟಸ್ವಾಮಿ.—ಇದು ಒಂದು ಚರಿತ್ರೆ ಇದ್ದ ಹಾಗೆ ಇದೆ. ಇದು ಬಹಳ ದಿನಗಳಿಂದ ಇದೆ. ಗದುಗಿನ ಲಕ್ಷ್ಮೀನಾರಾಯಣ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಜಮೀನು ಅದು.

Bheema Major Irrigation Project.

*Q.—569. Sri MAHANTHASWAMY (Shahpur).—

Will the Government be pleased to state :—

(a) the five—year plan in which the Bheema Major Irrigation Project has been included ;

(b) the estimated cost of the same ;

(c) when they would take up the same ?

A.—Sri S. NIJALINGAPPA (Chief Minister).—

(a) The Project is under investigation and has not been included in any five-year plan.

(b) and (c) Do not arise.

ಶ್ರೀ ಮಹಂತಸ್ವಾಮಿ.—(ಅ) ಭಾಗಕ್ಕೆ ಉತ್ತರವಾಗಿ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಯಾವ ಹಂತದಲ್ಲಿದೆ ಎಂದು ಹೇಳುತ್ತಾರೆಯೇ ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಪರಿಶೀಲನೆಯಲ್ಲಿ ಎಂದರೆ ಪ್ರಾಜೆಕ್ಟನ್ನು ಎಲ್ಲಿ ಕಟ್ಟುವುದಕ್ಕೆ ಸಾಧ್ಯವಿದೆ, ಎಷ್ಟು ಖರ್ಚಾಗುತ್ತದೆ, ಎಷ್ಟು ನೀರಾವರಿಯಾಗಬಹುದು, ಎಲ್ಲಿ ಕಾಲುವೆಗಳನ್ನು ತೆಗೆಯಬಹುದು, ಯಾವುದನ್ನು ಉಪಯೋಗಿಸಬೇಕು, ಮಣ್ಣನ್ನು ಉಪಯೋಗಿಸಬೇಕೇ, ಕಲ್ಲನ್ನು ಉಪಯೋಗಿಸಬೇಕೇ ಅಥವಾ ಸಿಮೆಂಟನ್ನು ಉಪಯೋಗಿಸಬೇಕೇ ಎಂಬುದನ್ನು ನೋಡಬೇಕು. ಇದೆಲ್ಲ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಎಂ. ಕೃಷ್ಣ.—ಇದಕ್ಕೆ ಎಸ್ಟಿಮೇಟ್ ಏನಾದರೂ ಮಾಡಿದ್ದಾರೆಯೇ ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರಾರಂಭಿಕವಾಗಿ ಹತ್ತೂವರೆ ಕೋಟಿ ರೂಪಾಯಿ ಆಗಬಹುದು ಎಂದು ಅಂದಾಜಾಗಿದೆ. ಒಂದು ಲಕ್ಷ ಎಕರೆ ಸಾಗು ಆಗಬಹುದು.

ಶ್ರೀ ಮಹಂತಸ್ವಾಮಿ.—ಈ ಯೋಜನೆಗೆ ನಿವೇಶನವೇನಾದರೂ ಸರ್ಕಾರದವರು ನಿರ್ಧಾರ ಮಾಡಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಗುಲ್ಬರ್ಗದಲ್ಲಿ ತಂಗಡಿ ಎಂಬ ಒಂದು ಹಳ್ಳಿ ಇದೆ. ಅದರ ಹತ್ತಿರ ಅಥವಾ ಮೇಲ್ಗಡೆ ಹೋಗಬಹುದು ಎಂದು ಸದ್ಯದ ಅಭಿಪ್ರಾಯ.

ಶ್ರೀ ಬಿ. ವಿ. ಮಾಗಾವಿ.—ಮಹಾರಾಷ್ಟ್ರದವರು ಈ ಭೀಮಾ ನದಿಗೆ ಈಗಾಗಲೇ ಒಂದು ಯೋಜನೆಯನ್ನು ಇಟ್ಟಿರುವುದರಿಂದ ನಮ್ಮ ರಾಜ್ಯಕ್ಕೆ ಇದರಿಂದ ಕಡಿಮೆ ನೀರು ಸರಬರಾಯಿ ಆಗಬಹುದಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಭೀಮಾ ನದಿಗೆ ಅವರು ಯೋಜನೆ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಬಿ. ವಿ. ಮಾಗಾವಿ.—ಅವರಲ್ಲಿ ಅಪ್ಪರ್ ಭೀಮಾ ಯೋಜನೆ ಇದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ವಿಚಾರಮಾಡಬೇಕು.

ಶ್ರೀ ಎಸ್. ಎಂ. ಕೃಷ್ಣ.—ಉತ್ತರದಲ್ಲಿ, ಯಾವ ಪಂಚವಾರ್ಷಿಕ ಯೋಜನೆಯಲ್ಲೂ ಈ ಯೋಜನೆ ಸೇರಿಲ್ಲವೆಂದು ಹೇಳಿದೆ. ಅಂದ ಮೇಲೆ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲಾ ಇರಿಗೇಷನ್ ಪ್ರಾಜೆಕ್ಟುಗಳನ್ನು ಪ್ರಾರಂಭ ಮಾಡಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲವನ್ನೂ ಪ್ರಾರಂಭ ಮಾಡಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಅರ್ಧವಾಗಿವೆ. ಕೆಲವು ಇನ್ನೂ ಮುಗಿಯುತ್ತಾ ಇವೆ. ಕೆಲವಕ್ಕೆ ಅಸ್ತಿಭಾರ ಕೆಲಸವಾಗಿದೆ, ಮತ್ತೆ ಕೆಲವು ಪ್ರಾರಂಭವಾಗಬೇಕಾಗಿವೆ.

ಶ್ರೀ ಬಿ. ವಿ. ಮಾಗಾವಿ.—ಇದನ್ನು ನಾಲ್ಕನೆಯ ಯೋಜನೆಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರಯತ್ನ ಮಾಡಬಹುದು.

Vidyapeetas run by the State Adult Education Council.

*Q.—599. Sri SANJEEVANATH AIKALA (Suratkal).—

Will the Government be pleased to state.—

(a) the number of Vidyapeetas run by the State Adult Education Council in the State ;

(b) the places where they are located and the date of starting of these Vidyapeetas;

(c) what are the main aims, objects, programmes and functions of these Vidyapeetas ;

(d) which are the financing agencies of these Vidyapeetas and the extent of financial assistances received from such agencies in cash and kind, so far, since the starting of first Vidyapeetas ?

A.—Sri S. R. KANTHI (Minister for Education).—

(a) Eight.

(b)

Name of the Vidyapeetas	*Year of startings*
(1) Nanjangud	1947
(2) Hassan	1953
(3) Shivaragudda (Mandya District)	1957
(4) Kengeri (Bangalore District)	1957
(5) Tunga (Shimoga District)	1961
(6) Yenigadala (Kolar District)	1963
(7) Pampa (Bellary District)	1963
(8) Banthanal (Bijapur District)	1964

(c) The Vidyapeetas are residential institutions which impart education to village youths who lacked education when they were young. The main objective of Vidyapeetas scheme is to re-orient the life of the village youths by providing cultural and social education through training to enable them to become good citizens and attain the qualities of rural leadership. The training given in these institutions is mainly in agriculture and craft as bias. The syllabi of these institutions also include Cattle and Poultry Farming, History, Indian Constitution, Geography, Fine Arts, Health and Sanitation, etc.

(*d*) (1) *State Government Grant :* Rs. 5,37,000 p.a.

(*a*) Nanjangud 25,000 from 1947 (per year average)
(*b*) Hassan Rs. 28,000 from 1953 do
(*c*) Shivaragudda Rs. 47,500 from 1961 do

(2) *Financed under Ford Foundation Project.*

(*a*) Shivaragudda	(Till March 1963)
(*b*) Kengeri	
(*c*) Tunga	Rs. 10,30,246-13 paise
(*d*) Yenigadale	
(*e*) Pampa	
(*f*) Banthanal	

(3) Technical assistance from the Danish experts.

Sri SANJEEVANATH AIKALA.—What is the control exercised by this Council over these Vidyapeetas ?

† ಶ್ರೀ ಎಸ್. ಆರ್. ಕಂಠಿ.—ಸೂಪರ್‌ವಿಷನ್ ಮಾಡುವ ಅಧಿಕಾರ ಸರ್ಕಾರಕ್ಕಿದೆ.

Sri SANJEEVANATH AIKALA.—Who are the Principals of these Vidyapeetas and what are their qualifications ?

Sri S. R. KANTHI.—Those details are not with me and if the Hon'ble Member gives notice, I will certainly get them.

ಶ್ರೀ ಎಸ್. ಸುಬ್ಬಯ್ಯ ನಾಯಕ್.—(ಇ) ಉತ್ತರದಲ್ಲಿ ಈ ವಿದ್ಯಾಪೀಠಗಳು ರೆಸಿಡೆನ್ಸಿಯಲ್ ಸಂಸ್ಥೆಗಳಾಗಿವೆಯೆಂಬುದಾಗಿ ಹೇಳಿದ್ದಾರೆ. ಇದರಲ್ಲಿ ಎಷ್ಟು ವಯಸ್ಸಿನ ವಿದ್ಯಾರ್ಥಿಗಳು ಇರುತ್ತಾರೆ. ಗಂಡು, ಹೆಣ್ಣು ಭೇದವಿಲ್ಲದೆ ಎರಡು ವರ್ಗಗಳಿಗೂ ಶಿಕ್ಷಣ ಕೊಡುವ ಹಾಗೆ ತೆಗೆದುಕೊಂಡಿದ್ದಾರೆಯೋ ?

ಶ್ರೀ ಎಸ್. ಆರ್. ಕಂಠಿ.—18 ರಿಂದ 30 ರ ವಯಸ್ಸಿನವರೆಗೂ ಬರುತ್ತಾರೆ. ಅಲ್ಲಿ ಗಂಡು ಮಕ್ಕಳನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ಹೆಣ್ಣುಮಕ್ಕಳನ್ನು ತೆಗೆದುಕೊಳ್ಳುವುದಿಲ್ಲ.

Sri S. M. KRISHNA.—Does the Adult Education Council have any control over these Vidyapeetas ?

ಶ್ರೀ ಎಸ್. ಆರ್. ಕಂಠಿ.—ಅವರೇ ನಡೆಸುತ್ತಿದ್ದಾರೆ.

ಶ್ರೀ ಇ. ನಾರಾಯಣಗೌಡ.—ಈ ವಿದ್ಯಾಪೀಠಗಳಿಂದ ತರಪೇತು ಹೊಂದಿ ವಾಪಸ್ಸು ಬರುವ ವಿದ್ಯಾರ್ಥಿಗಳು ಯಥಾಪ್ರಕಾರ ನಿರುದ್ಯೋಗಿಗಳಾಗಿ ಇಲ್ಲದೇ ಇರುವ ಹಾಗೆ ಸರ್ಕಾರದವರು ಅವರಿಗೆ ಬೇರೆ ಏನಾದರೂ ಸಹಾಯ ಕೊಡುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ನಿರುದ್ಯೋಗ ಉದ್ಯೋಗ ಪ್ರಶ್ನೆ ಬರುವುದಿಲ್ಲ. ವ್ಯವಸಾಯಗಾರರೂ ಬರುತ್ತಾರೆ. ಅವರು 3ನೇ ಸ್ಟ್ಯಾಂಡರ್ಡ್ ಓದಿದರೆ ಸಾಕು ಎಂದು ಹೇಳುತ್ತಾರೆ. ಅವರು ಬಂದು 6 ತಿಂಗಳುಗಳು ಮಾತ್ರ ಇರುತ್ತಾರೆ. ಆಮೇಲೆ ತಮ್ಮ ವ್ಯವಸಾಯ ಕಸುಬಿಗೆ ಹೋಗಬಹುದು.

ಶ್ರೀ ಸಿದ್ಧಯ್ಯ ಕಾಶೀಮಠ್.—ಸರ್ಕಾರದವರು ಈ ವಿದ್ಯಾ ಪೀಠಗಳಿಗೆ ಸಹಾಯಧನ ಕೊಡುತ್ತಾ ಇರುವುದರಿಂದ ಅಲ್ಲಿ ಹೇಳತಕ್ಕ ಪ್ರತಿಯೊಂದು ವಿದ್ಯಾಭ್ಯಾಸದಲ್ಲಿ ಪ್ರತಿವರ್ಷವೂ ವ್ಯಾಸಂಗ ಪಡೆಯತಕ್ಕ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಕಂಠಿ.—ಪ್ರತಿವರ್ಷದ್ದೂ ಹೇಳುವುದಕ್ಕಾಗುವುದಿಲ್ಲ. ಹೋದವರ್ಷ 669 ವಿದ್ಯಾರ್ಥಿಗಳಿದ್ದರು.

ಶ್ರೀ ಟಿ. ಮಾದಯ್ಯಗೌಡ.—ಫೋರ್ಡ್ ಫೌಂಡೇಷನ್ ಸಂಸ್ಥೆಯವರು ಹಣವನ್ನು ಈ ವಿದ್ಯಾಪೀಠಗಳಿಗೆ ಒದಗಿಸುವಾಗ ಬರೀ ಲಂಪ್‌ಸಮ್ಮಾಗಿ ಕೊಟ್ಟರೋ ಅಥವಾ ತಮ್ಮ ಇಚ್ಛೆ ಪ್ರಕಾರ ಕೊಟ್ಟಿದ್ದಾರೋ ?

ಶ್ರೀ ಎಸ್. ಆರ್. ಕಂಠಿ.—ಇಂಥಿಂಥ ಉದ್ದೇಶಗಳಿಗೆಂದು ನಿರ್ದಿಷ್ಟವಾಗಿ ತೀರ್ಮಾನಮಾಡಿ ಕೊಟ್ಟಿದ್ದಾರೆ.

†Indicates that the remarks or speeches have not been revised by the member concerned.

ಶ್ರೀ ಟಿ. ಮಾದಯ್ಯಗೌಡ.—ಆ ಉದ್ದೇಶಗಳಾವುವು ?

ಶ್ರೀ ಎಸ್. ಆರ್. ಕಂಠಿ.—ಅಗ್ರಿಕಲ್‌ಚರ್, ಕ್ಯಾಟಲ್ ಅಂಡ್ ಪೌಲ್‌ಟ್ರಿ ಫಾರ್ಮಿಂಗ್, ಹಿಸ್ಟರಿ, ಇಂಡಿಯನ್ ಕಾನ್‌ಸ್ಟಿಟ್ಯೂಷನ್, ಜಿಯಾಗ್ರಫಿ, ಫೈನ್ ಆರ್ಟ್ಸ್, ಹೆಲ್ತ್ ಅಂಡ್ ಸ್ಯಾನಿಟೇಷನ್, ಇದೂ ಅಲ್ಲದೆ ಇನ್ನೂ ಬೇರೆ ಬೇರೆ ಉದ್ದೇಶಗಳಿವೆ. ಸ್ಪಿನ್ನಿಂಗ್, ಮ್ಯಾಟ್ ವೀವಿಂಗ್, ಬೀ ಕೀಪಿಂಗ್, ಡೈಯ್ಯಿಂಗ್, ಟೈಲರಿಂಗ್, ಕನ್‌ಸ್ಟ್ರಕ್‌ಷನ್ ಆಫ್ ವುಡ್‌ವರ್ಕ್—ಇವೆಲ್ಲವನ್ನೂ ನೋಡಿಕೊಂಡು ಆ ಪ್ರಕಾರ ಕೊಡುತ್ತಾರೆ.

ಶ್ರೀ ಬಿ. ಚನ್ನಬೈರೇಗೌಡ.—ಕೋಳಿ ಸಾಕಾಣಿಕೆ ಮತ್ತು ಪಶುಪಾಲನೆ ಇದರಿಂದ ಬರತಕ್ಕ ಆದಾಯದಲ್ಲಿ ನಷ್ಟವಿಲ್ಲದೆ ಮತ್ತು ಸರ್ಕಾರದಿಂದ ದುಡ್ಡು ಕೊಡದೆಯೇ ಇದನ್ನು ಸರ್ಕಾರವೇ ನಡೆಸಿಕೊಂಡು ಹೋಗುವುದಕ್ಕಾಗುವುದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಹಾಗೆ ಮಾಡುವುದು ಬಹಳ ಕಷ್ಟವಾಗುತ್ತದೆ. ವಿದ್ಯಾರ್ಥಿಗಳಿಗೆ ತೊಂದರೆಯಿರುವುದರಿಂದ ಸ್ಟೈಪಂಡ್ ಕೊಡುತ್ತೇವೆ. ಆದರೂ ಅವರು ಶೇಕಡ 30ರಷ್ಟು ಬೆಲೆಯನ್ನು ಕವರ್ ಮಾಡುತ್ತಾರೆ. ಆಗ ಉಳಿದ ಶೇಕಡ 70-80 ರಷ್ಟು ಅವರು ಹಾಕಬೇಕು. ಯಾವ ಸಂದರ್ಭದಲ್ಲಾಗಲೀ ಸ್ಟೈಪಂಡ್ ಕೊಡುವ ಉದ್ದೇಶದಿಂದ ಅದನ್ನು ಕವರ್ ಮಾಡುವುದಕ್ಕಾಗುವುದಿಲ್ಲ.

Sri SANJEEVANATH AIKALA.—What are the conditions that are required to start such Vidyapeetas in the remaining districts of the State and why is it that they have not been started in other districts ?

ಶ್ರೀ ಎಸ್ ಆರ್. ಕಂಠಿ.—ಇದರಲ್ಲಿ ಮೊದಲನೆಯ ಕಂಡೀಷನ್ 50 ಎಕರೆ ಜಮೀನು ಬೇಕಾಗುತ್ತದೆಂಬುದು. ಅಲ್ಲಿ ಸ್ಥಳೀಯ ಸಹಾಯ ಬೇಕಾಗುತ್ತದೆ. ಆಮೇಲೆ ಪ್ರಿಡಾಮಿನೆಂಟ್ಲಿ ಅಗ್ರಿಕಲ್‌ಚರಲ್ ಏರಿಯಾ ಇರಬೇಕು—ಇದೆಲ್ಲ ಕಂಡೀಷನ್ಸ್ ಇವೆ. ನಾನ್ ರೆಕರಿಂಗ್ 1 ಲಕ್ಷ 50 ಸಾವಿರ ಆಗುತ್ತದೆ, ರೆಕರಿಂಗ್ 40 ಲಕ್ಷ 40 ಸಾವಿರ ಆಗುತ್ತದೆ. ಆದ್ದರಿಂದ ಸರ್ಕಾರದಲ್ಲಿ ದುಡ್ಡು ಇದೆಯೋ ಇಲ್ಲವೋ ನೋಡಬೇಕು.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಇವುಗಳಲ್ಲಿ ಯಾವು ಯಾವುದಕ್ಕೆ ಕ್ರಿಯಾತ್ಮಕ ಪಾಠಗಳು ನಡೆಯುತ್ತವೆ ?

ಶ್ರೀ ಎಸ್. ಆರ್. ಕಂಠಿ.—ಎಲ್ಲಾ ಪ್ರಾಕ್ಟಿಕಲ್ಲಾಗಿ ನಡೆಯುತ್ತವೆ.

Mr. SPEAKER.—Why not take the Hon'ble Member to one of them and show it to him ?

Sri S. R. KANTHI.—I can show him.

Sri S. M. KRISHNA.—Is there a proposal pending with the Minister to abolish the Adult Education Council ?

Sri S. R. KANTHI.—There is no such proposal.

ಶ್ರೀ ಗೋಪಾಲರಾವ್ ಮುಡುಬಿ.—ಅಡಲ್ಟ್ ಎಜುಕೇಷನ್ ಕೌನ್ಸಿಲ್ ಅವರು ಈ ವಿದ್ಯಾಪೀಠಗಳನ್ನು ಪ್ರಾರಂಭಮಾಡಿಸಿದ್ದೇವೆಂದು ಹೇಳಿದ್ದಾರೆ. ಅಂದಮೇಲೆ ಕೆಲವು ಜಿಲ್ಲೆಗಳಲ್ಲಿ ಭೂಮಿ ಕೊಡುವುದಕ್ಕೆ ಜನರು ಮುಂದೆ ಬಂದರೆ ಅಲ್ಲಿ ಅವನ್ನು ಪ್ರಾರಂಭಮಾಡುತ್ತೀರಾ ? ನಮ್ಮ ತಾಲ್ಲೂಕಿನಲ್ಲಿ ಸಾಕಷ್ಟು ಜಮೀನು ಕೊಟ್ಟಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಅಲ್ಲಿನವರು 60 ಎಕರೆ ಜಮೀನನ್ನು ಕೊಟ್ಟದ್ದು ನಿಜ. ಒಳ್ಳೆಯ ಜಾಗವಿದೆ, ಅದನ್ನು ಮಾಡಬೇಕೆಂದು ಸರ್ಕಾರದ ಇಚ್ಛೆಯೂ ಇದೆ. ಬೇರೆ ಕಡೆಗಳಲ್ಲಿಯೂ ಮಾಡಬೇಕೆಂಬ ಮನಸ್ಸು ಇದೆ. ಚಿತ್ರದುರ್ಗದ ವಿಷಯ ಗೊತ್ತಿಲ್ಲ. ಅಲ್ಲಿ 40 ಎಕರೆ ಫಸ್ಟ್‌ಕ್ಲಾಸ್ ಜಮೀನು ಇದೆ. ಬೇರೆ ಕಡೆಗಳಲ್ಲಿ 3-4 ಮಾಡಬೇಕೆಂದಿದೆ. ಅದನ್ನು ಸರ್ಕಾರದವರು ಈ ವರ್ಷ ವರ್ಕ್ ಔಟ್ ಮಾಡುತ್ತಾರೆ, ಮುಂದಿನ ವರ್ಷ ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ವಿದ್ಯಾಪೀಠಗಳ ಆಡಳಿತವನ್ನು ಸ್ಟೇಟ್ ಅಡಲ್ಟ್ ಕೌನ್ಸಿಲ್‌ನವರು ನಡೆಸುತ್ತಿದ್ದರೂ ಈಗ್ಗೆ ಒಂದು ವರ್ಷದಿಂದ ಮೀಟಿಂಗ್ ಆಗದೇ ಇರತಕ್ಕ ಸನ್ನಿವೇಶದಲ್ಲಿ ಇದರ ಆಡಳಿತ ಕ್ರಮವನ್ನು ಯಾರು ನಿರ್ವಹಣೆಮಾಡುತ್ತಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಒಂದು ವರ್ಷದವರೆಗೂ ಮೀಟಿಂಗ್ ಆಗಿಲ್ಲವೆಂದೇನಿಲ್ಲ. ಮೀಟಿಂಗ್ ಆಗಿದೆ. ಆ ವಿಚಾರದಲ್ಲಿ ಸರ್ಕಾರದವರು ಬಹಳ ನಿಗಾ ಇಟ್ಟುಕೊಂಡಿದ್ದಾರೆ. ಈ ಸಂಸ್ಥೆಯವರನ್ನು ಆಗಾಗ್ಗೆ ಕರೆಸಿ ಅದರ ಚಟುವಟಿಕೆಗಳ ಬಗ್ಗೆ ಕೇಳುತ್ತಿದ್ದಾರೆ. ಹಣವೇನಾದರೂ ಕೊಡಬೇ

ಕಾಗಿದೆಯೇ ಅಥವಾ ಅದರ ಪ್ರೋಗ್ರೇಸ್ ನೋಡಿ ಅಲ್ಲಿನ ಅಧಿಕಾರಿಗಳು ಸರ್ಕಾರಕ್ಕೆ ವರದಿಯನ್ನು ಕೊಡುತ್ತಾರೆ. ಆಗ ರೂಲ್ಸ್ ಪ್ರಕಾರ ತಕ್ಕ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆ.

ಶ್ರೀ ಟಿ. ಮಾದಯ್ಯಗೌಡ.—ಈ ಸಂಸ್ಥೆಯವರಿಗೆ 10 ಲಕ್ಷ ಚಿಲ್ಲರೆ ಹಣವನ್ನು ಕೊಟ್ಟಿರುವಾಗ, ಪ್ರತಿಯೊಂದು ಜಿಲ್ಲೆಯಲ್ಲಿಯೂ ಇಂತಹ ವಿದ್ಯಾಪೀಠಗಳನ್ನು ಸ್ಥಾಪನೆ ಮಾಡಬೇಕೆನ್ನುವಾಗ, ಅದರಲ್ಲಿಯೂ ನಾನ್-ರೆಕರಿಂಗ್ ಎಕ್ಸ್‌ಪೆಂಡಿಚರ್ ಮಾತ್ರ ಉಪಯೋಗಿಸಬೇಕು ಎಂದು ಹೇಳುವುದರಿಂದ ಪ್ರತ್ಯೇಕವಾಗಿ ಸ್ತ್ರೀಯರಿಗಾಗಿ ಒಂದು ವಿದ್ಯಾಪೀಠವನ್ನು ತೆರೆಯುವುದು ಸರ್ಕಾರದ ಕರ್ತವ್ಯವಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಸ್ತ್ರೀಯರಿಗೂ ಈ ಯೋಜನೆಯನ್ನು ಮಾಡಬೇಕೆಂದು ಇದ್ದೇವೆ. ಈಗ ಗಂಡಸರು ಮಟ್ಟಿಗೆ ಮಾಡುತ್ತಿದ್ದೇವೆ. ಆ ಸಂಸ್ಥೆಯ ಯೋಜನೆಯ ಮೇರೆಗೆ ಒದಗಿಸಿರುವ ಹಣ 10,30,246-13 ರೂಪಾಯಿಗಳು. ಹಿಂದೆ ಒಂದು ಸಾರಿ ಈ ವಿಚಾರದಲ್ಲಿ ಇಲ್ಲಿ ಪ್ರಶ್ನೆ ಬಂದಾಗ ಇನ್ನೂ ಅದಕ್ಕೆ ಸಂಬಂಧಪಟ್ಟ ಕಾಗದ ಬಂದಿಲ್ಲವೆಂದು ಉತ್ತರ ಹೇಳಿದೆ. ಅದನ್ನು ಆಮೇಲೆ ಪರಿಶೀಲನೆ ಮಾಡಿದಮೇಲೆ ಅದಕ್ಕೆ ಸಂಬಂಧಪಟ್ಟಹಾಗೆ ಆಡಿಟ್ ಆಗಿರತಕ್ಕ ಅಕೌಂಟ್ಸ್ ಬಂದಿವೆ. ಮೊನ್ನೆ ಉತ್ತರ ಅಪೂರ್ಣವಾಗಿತ್ತು. ಈಗ ಸಂಪೂರ್ಣ ಉತ್ತರ ಬಂದಿದೆ.

Sri S. RAJAGOPAL.—May I know whether the Government is satisfied with the working of the Adult Education Council ?

Sri S. R. KANTHI.—So far as the Vidyapeetas are concerned, there is no complaint.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಎಂಟು ವಿದ್ಯಾಪೀಠಗಳಿಗೂ ಕೂಡ ವರ್ಷೇ ವರ್ಷೇ ಎಷ್ಟು ಹುಡುಗರನ್ನು ತೆಗೆದುಕೊಳ್ಳುತ್ತಾರೆ, ಅವರು ಆ ಹುಡುಗರನ್ನು ತೆಗೆದುಕೊಳ್ಳುವಾಗ ಅನುಸರಿಸತಕ್ಕ ಆಧಾರಗಳೇನು ಮತ್ತು ನೀತಿಗಳೇನು ?

ಶ್ರೀ ಎಸ್. ಆರ್. ಕಂಠಿ.—ಅವರನ್ನು ಸರ್ಕಾರದವರು ತೆಗೆದುಕೊಳ್ಳುವುದಿಲ್ಲ. ಆ ಸಂಸ್ಥೆಯವರೇ ತೆಗೆದುಕೊಳ್ಳುತ್ತಾರೆ. ಅವರನ್ನು ತೆಗೆದುಕೊಳ್ಳುವಾಗ ಅನುಸರಿಸತಕ್ಕ ನೀತಿ ಏನೆಂದರೆ, ವಿದ್ಯಾಪೀಠಕ್ಕೆ ಸೇರಿಸಿಕೊಳ್ಳತಕ್ಕ ಹುಡುಗರಿಗೆ 18 ವರ್ಷಗಳಿಗೆ ಮೇಲ್ಪಟ್ಟು 30 ವರ್ಷಗಳ ಒಳಗೆ ವಯಸ್ಸಾಗಿರಬೇಕು. ಅವರಿಗೆ ಕೆಲವು ಮಟ್ಟಿಗೆ ಓದು ಬರಹ ಬರಬೇಕು, ಇಂಥವರನ್ನು ಅವರು ಆ ವಿದ್ಯಾಪೀಠಗಳಿಗೆ ಸೇರಿಸಿಕೊಳ್ಳುತ್ತಾರೆ.

Sri G. V. GOWDA.—May I know whether the Danish experts are still have to render technical assistance and if so, how many are there ?

ಶ್ರೀ ಎಸ್. ಆರ್. ಕಂಠಿ.—ಅಷ್ಟು ಜನ ಎಕ್ಸ್‌ಪರ್ಟ್‌ಗಳೂ ಇದ್ದಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಬಹುಶಃ ಇಬ್ಬರು ಇದ್ದಾರೆ ಎಂದು ನನಗೆ ಅನಿಸುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅವರಿಗೆ ಶಿಕ್ಷಣ ಕೊಡುವ ಉಪಾಧ್ಯಾಯರಿಗೆ ಒಂದು ತಿಂಗಳಿಗೆ ಎಷ್ಟು ಸಂಬಳವನ್ನು ಕೊಡುತ್ತಾರೆ ?

ಶ್ರೀ ಎಸ್. ಆರ್. ಕಂಠಿ.—ಒಂದು ತಿಂಗಳಿಗೆ 30 ರೂಪಾಯಿಗಳನ್ನು ಕೊಡುತ್ತಿದ್ದಾರೆ

ಶ್ರೀ ಜಿ. ದುಗ್ಗಪ್ಪ.—ವಿದ್ಯಾಪೀಠಗಳನ್ನು ಸಮಾಜ ಶಿಕ್ಷಣ ಮಂಡಲಿಗೆ ಒಪ್ಪಿಸಿ, ವಯಸ್ಕರ ಶಿಕ್ಷಣ ಸಮಿತಿಗೆ ಕೇವಲ ಅಕ್ಷರಾಭ್ಯಾಸವನ್ನು ಬಿಡುವುದು ಒಳ್ಳೆಯದಲ್ಲವೇ ?

Sri S. R. KANTHI.—The State Social Education Council and Adult Education Council are given certain items of work. It is an executive body.

ಶ್ರೀ ಎಸ್. ಎಂ. ಕೃಷ್ಣ.—ಸ್ಟೇಟ್ ಅಡಲ್ಟ್ ಎಜುಕೇಷನ್ ಕೌನ್ಸಿಲ್ಲಿನ ಜನರಲ್ ಬಾಡಿ ಮೀಟಿಂಗ್ ನಡೆದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ನನಗೆ ತಿಳಿದ ಮಟ್ಟಿಗೆ ಅದು ನಡೆದಿದೆ ಎಂದು ಗೊತ್ತಾಗಿದೆ.

Sri S. RAJAGOPAL.—Is it a fact that Government have come to the opinion that the money spent on adult education is not satisfactorily spent ?

ಶ್ರೀ ಎಸ್. ಆರ್. ಕಂಠಿ.—ನಾನು ಹಾಗೆ ಉತ್ತರವನ್ನು ಹೇಳಿಲ್ಲ.

Sri SANJEEVANATH AIKALA.—Is there an agreement betwee the Danish Government and the Mysore State Adult Education Council regarding the mutual technical assistance and financial assistance ?

Sri S. R. KANTHI.—Yes, there is an agreement.

Sri SANJEEVANATH AIKALA.—If so what are the terms of the agreement ?

ಶ್ರೀ ಎಸ್ ಆರ್. ಕಂಠಿ.—ಅದು ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಸಂಜೀವನಾಥ ಐಕಳ.—ಫೋರ್ಡ್‌ಫೌಂಡೇಷನ್ನಿನವರ ಮತ್ತು ಡೇನಿಷ್ ಸರ್ಕಾರದವರ ಸಹಾಯವನ್ನು ಪಡೆದು, ವಿದ್ಯಾಪೀಠಗಳನ್ನು ಸ್ಥಾಪಿಸಿ ಅವುಗಳ ಮುಖಾಂತರ ಅವಿದ್ಯಾವಂತರಾಗಿರ ತಕ್ಕ ವಯಸ್ಕರ ಸ್ಥಿತಿಗತಿಗಳನ್ನು ಮಾರ್ಪಾಡು ಮಾಡಬೇಕೆಂದು ಆ ವಿದ್ಯಾ ಪೀಠಗಳನ್ನು ಸ್ಥಾಪನೆ ಮಾಡಿದ್ದೇವೆ ಎಂದು ಹೇಳಿದಿರಿ, ಹಾಗಾದರೆ ಈಗ ಅವುಗಳಿಂದ ಎಷ್ಟರ ಮಟ್ಟಿಗೆ ಉಪಯೋಗವಾಗುತ್ತಿದೆ, ಮತ್ತು ಅವುಗಳನ್ನು ಬೆಳೆಸಿಕೊಂಡು ಬರುತ್ತೇವೆಂದು ಸರ್ಕಾರದವರೇನಾದರೂ ಅದನ್ನು ವಿಚಾರ ಮಾಡಿದ್ದಾರೆಯೇ ?

ಶ್ರೀ ಎಸ್. ಆರ್. ಕಂಠಿ.—ನಾವು ಅದನ್ನು ವಿಚಾರಮಾಡಿದ್ದೇವೆ. ಫೋರ್ಡ್‌ಫೌಂಡೇಷನ್ ಸಂಸ್ಥೆಯವರು ಮತ್ತು ಡೆನ್ಮಾರ್ಕಿನವರು ಈ ವಿದ್ಯಾ ಪೀಠಗಳು ಚೆನ್ನಾಗಿ ನಡೆಯುತ್ತಿವೆ ಎಂದು ಹೇಳಿದ್ದಾರೆ. ಎಕ್ಸ್‌ಪರ್ಟ್‌ಗಳೂ ಹೇಳಿದ್ದಾರೆ. ಇಂಡಿಯಾ ಸರ್ಕಾರದವರೂ ಈ ಪೀಠಗಳು ಚೆನ್ನಾಗಿ ನಡೆಯುತ್ತವೆ ಎಂದು ಹೇಳಿದ್ದಾರೆ. ಅಮೇಲೆ ಡಾ|| ವಿ.ಕೆ.ಆರ್. ವಿ. ರಾವ್ ಅವರೂ ಕೂಡ ಇವು ಚೆನ್ನಾಗಿ ನಡೆಯುತ್ತಿವೆ ಎಂದು ಹೇಳಿದ್ದಾರೆ. ಮೊನ್ನೆ ಡೆನ್ಮಾರ್ಕಿನವರೊಬ್ಬರು ಇಲ್ಲಿಗೆ ಬಂದಿದ್ದಾಗ ಇಲ್ಲಿ ಈ ವಿದ್ಯಾಪೀಠಗಳು ಬಹಳ ಚೆನ್ನಾಗಿ ನಡೆದಿವೆ. ಇವು ಇಲ್ಲಿ ಇಷ್ಟು ಚೆನ್ನಾಗಿ ನಡೆಯುತ್ತದೆ ಎಂದು ನಮಗೆ ಗೊತ್ತಿರಲಿಲ್ಲ ಎಂದು ಹೇಳಿ ಈ ಸಂಸ್ಥೆಗಳಿಗೆ ಇನ್ನೂ ಒಂದು ಹೊಸ ಸಹಾಯವನ್ನು ಮಾಡುವುದಕ್ಕೆ ಅನುವು ಮಾಡಿ ಕೊಟ್ಟಿದ್ದಾರೆ.

ಶ್ರೀ ಜಿ. ವಿ. ಗೌಡ.—ಅಲ್ಲಿ ತರಪೇತಿಯನ್ನು ಪಡೆದಂತಹ ವಿದ್ಯಾರ್ಥಿಗಳು, ಅಲ್ಲಿ ಏನು ಕಲಿತು ಕೊಂಡಿದ್ದಾರೆಯೋ ಅದನ್ನು ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅದರಿಂದ ಅವರು ಉಪಯೋಗವನ್ನು ಪಡೆಯುವುದಕ್ಕೆ ಅನುಕೂಲವಾಗುವಂತಹ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಾ ? ಅದನ್ನು ಫಾಲೋ ಅಪ್ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಫಾಲೋ ಅಪ್ ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ಅಲ್ಲಿ ವ್ಯವಸಾಯದಲ್ಲಿ ತರಪೇತಿಯನ್ನು ಪಡೆಯುತ್ತಾರೆ, ಕೈಗಾರಿಕೆಯಲ್ಲಿ ತರಪೇತಿಯನ್ನು ಪಡೆಯುತ್ತಾರೆ ಸ್ವಲ್ಪ ಧರ್ಮ ನೀತಿ ಮುಂತಾದುವುಗಳನ್ನು ಕಲಿತುಕೊಂಡು ಹೋಗುತ್ತಾರೆ. ಸಾಧಾರಣವಾಗಿ ಅಲ್ಲಿ ತರಪೇತಿಯನ್ನು ಪಡೆಯತಕ್ಕವರು 18, 22, 23, 30 ಹೀಗೆ ಜಾಸ್ತಿ ವಯಸ್ಸಾದವರು ಇರುತ್ತಾರೆ ಆದ್ದರಿಂದ ಅವರೇನೂ ನೌಕರಿಗೆ ಹೋಗುವುದಿಲ್ಲ. ಈ ಸಂಸ್ಥೆಯಿಂದ ತರಪೇತಿಯನ್ನು ಪಡೆದುಕೊಂಡು ಹೋದಂಥವರು ಎಷ್ಟೋ ಜನ ಅನುಕೂಲವಾಗಿದ್ದಾರೆಂದು ನಾನು ಕೇಳಿದ್ದೇನೆ.

Sri B. V. MAGAVI.—Is there any vocational selection based on optitude of each student ?

ಶ್ರೀ ಎಸ್. ಆರ್. ಕಂಠಿ.—ವೊಕೇಷನಲ್ ಸೆಲೆಕ್ಷನ್ನಿಗೆ ಸಂಬಂಧಪಟ್ಟದ್ದು ದೊಡ್ಡ ಲಿಸ್ಟ್ ಇದೆ, ಅದರಲ್ಲಿ ಸಾಧಾರಣವಾಗಿ 9-10 ಲಿಸ್ಟ್‌ಗಳು ಇದೆ. ಆದಾಗ್ಯೂ ಕೂಡ ವೊಕೇಷನಲ್ ತರಪೇತಿಯನ್ನು ಕೆಲವು ಮಟ್ಟಿಗೆ ಕೊಡುತ್ತೇವೆ. ಅದರಲ್ಲಿ ಹೆಚ್ಚಿಗೆ ವ್ಯವಸಾಯಕ್ಕೆ ಉಪಯೋಗವಾಗುವಂಥಾದ್ದು ಇರುತ್ತದೆ. ಮತ್ತು ಕೋಳಿ ಸಾಕುವುದು, ಜೇನು ಸಾಕುವುದು, ಕುಶಲಕಲೆ ಇತ್ಯಾದಿಗಳು ಇರುತ್ತವೆ. ಇವುಗಳೆಲ್ಲರಲ್ಲಿ ಅವರು ತರಪೇತಿಯನ್ನು ತೆಗೆದುಕೊಂಡು ಹೋಗುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಈ ರಾಜ್ಯದಲ್ಲಿ ಎಂಟು ವಿದ್ಯಾ ಪೀಠಗಳಿವೆ ಎಂದು ಹೇಳಿದ್ದೀರಿ, ಬೆಳ್ಳಾರದಲ್ಲಿ ಒಂದು ವಿದ್ಯಾಪೀಠವನ್ನು ಹಿಂದೆ ಸ್ಥಾಪನೆ ಮಾಡಿದ್ದರು. ಈಗ ಅದನ್ನು ತೆಗೆದುಹಾಕುವುದಕ್ಕೆ ಮಹತ್ತರವಾದ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಬೆಳ್ಳಾರದಲ್ಲಿ ವಿದ್ಯಾಪೀಠ ಇದ್ದದ್ದು ನನಗೆ ಗೊತ್ತಿಲ್ಲ. ಅಲ್ಲಿ ಒಂದು ಟ್ರೈನಿಂಗ್ ಕಾಲೇಜನ್ನು ನಡೆಸುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಳ್ಳಾರದಲ್ಲಿ ವಿದ್ಯಾಪೀಠ ಇರುವುದು ನನಗೆ ಗೊತ್ತಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಅಲ್ಲಿ ಇದ್ದ ಚಿನ್ನದ ಗಣಿಯನ್ನು ತೆಗೆದ ಮೇಲೆ ಅಲ್ಲಿ ಬೇಕಾದಷ್ಟು ಕಟ್ಟಡಗಳು ಇವೆಯೆಂದು ಹೇಳಿ ಅಲ್ಲಿ ಒಂದು ವಿದ್ಯಾಪೀಠವನ್ನು ನಡೆಸುತ್ತಿದ್ದರು ಈಗ ಅದನ್ನು ತೆಗೆಯುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಬಳ್ಳಾರಿಯಲ್ಲಿ ವಿದ್ಯಾಪೀಠ ಇದ್ದದ್ದು ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರು ಈಗ ಹೇಳುತ್ತಿದ್ದಾರೆ ಅಲ್ಲಿ ಒಂದು ವಿದ್ಯಾಪೀಠ ಇತ್ತು ಎಂದು. ಈ ವಿಚಾರ ನನಗೆ ಗೊತ್ತಿಲ್ಲ. ಈಗ ಅಲ್ಲಿ ಎನ್.ಇ.ಎಸ್. ಯೋಜನೆಯಲ್ಲಿ ಒಂದು ಫಿಜಿಕಲ್ ಎಜುಕೇಷನ್ ಸೆಂಟರ್ ಮಾಡಬೇಕೆಂಬ ಯೋಚನೆ ಇದೆ.

ಶ್ರೀ ಜಿ. ದುಗ್ಗಪ್ಪ.—ಚಿತ್ರದುರ್ಗ ಜಿಲ್ಲೆಯಲ್ಲಿಯಲ್ಲಿರುವ ಕಾಕತಾಳ ಎಂಬ ಊರಿನಲ್ಲಿ ವಿದ್ಯಾಪೀಠಕ್ಕೋಸ್ಕರ ಸುಮಾರು 35-40 ಎಕರೆ ಜಮೀನನ್ನು ಕೊಟ್ಟಿದ್ದಾರೆ. ಅದನ್ನು ಸರ್ಕಾರದವರು ಒಪ್ಪಿಕೊಂಡು ಅಲ್ಲಿ ಒಂದು ವಿದ್ಯಾಪೀಠವನ್ನು ತೆರೆಯುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಕಾಕತಾಳದಲ್ಲಿ ಒಂದು ವಿದ್ಯಾಪೀಠವನ್ನು ಸ್ಥಾಪನೆ ಮಾಡಬೇಕೆಂದು ಸರ್ಕಾರದ ಉದ್ದೇಶ ಇದೆ. ಮುಂದಿನ ಏಪ್ರಿಲ್ ತಿಂಗಳಿನಲ್ಲಿ ಅದನ್ನು ಯಾವ ರೀತಿ ಮಾಡಬೇಕೆಂಬುದನ್ನು ವಿಚಾರ ಮಾಡುತ್ತೇವೆ. ಹಾಗೆಯೇ ಬಸವಕಲ್ಯಾಣ, ಜಮಖಂಡಿ ಈ ಪ್ರದೇಶಗಳಲ್ಲಿಯೂ ಒಂದೊಂದು ವಿದ್ಯಾಪೀಠವನ್ನು ಸ್ಥಾಪನೆ ಮಾಡಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತುಮಕೂರು ಡಿಸ್ಟ್ರಿಕ್ಟಿನಲ್ಲಿರತಕ್ಕ ಹೇಮಗಿರಿಯಲ್ಲಿ ಒಂದು ವಿದ್ಯಾಪೀಠವನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರೇ 40 ಎಕರೆ ಜಮೀನನ್ನು ತೆಗೆದುಕೊಂಡು ಆದನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಹೇಮಗಿರಿಯಲ್ಲಿ ವಿದ್ಯಾಪೀಠವನ್ನು ಸ್ಥಾಪನೆ ಮಾಡತಕ್ಕ ವಿಚಾರ ನನಗೆ ಗೊತ್ತಿಲ್ಲ. ಸೂಚನೆ ಬಂದರೆ ನೋಡೋಣ.

Sri SANJEEVANATH AIKALA.—How many principals of these vidyapithas were sent to Denmark and what was the duration of their stay there ? Did they after their return go back to the Vidyapithas and work there as principals ?

ಶ್ರೀ ಎಸ್. ಆರ್. ಕಂಠಿ.—ಪ್ರಿನ್ಸಿಪಾಲರುಗಳು ಯಾರೂ ಹೋದದ್ದು ನನಗೆ ಗೊತ್ತಿಲ್ಲ. ಚೀಫ್ ಎಗ್ಸಿಕ್ಯುಟೀವ್ ಆಫೀಸರು ಶ್ರೀ ಮುನಿಸ್ವಾಮಿ ಎನ್ನುವವರು ಅಲ್ಲಿಗೆ ಹೋಗಿದ್ದಾರೆ. ಆಮೇಲೆ ಅಡಲ್ಟ್ ಎಜುಕೇಷನ್ ಸೆಕ್ರೆಟರಿ ಒಬ್ಬರು ಅಲ್ಲಿಗೆ ಹೋಗಿದ್ದಾರೆ.

12-30 P. M.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಆ ವಯಸ್ಕರ ಶಿಕ್ಷಣ ಪರಿಷತ್ತಿನ ಆಡಳಿತವರ್ಗದ ಅಧ್ಯಕ್ಷರು ಯಾರು, ಕಾರ್ಯದರ್ಶಿಗಳು ಯಾರು ಆದರ ಸದಸ್ಯರು ಯಾರು, ಅದರ ಆಫೀಸು ಎಲ್ಲಿದೆ ?

ಶ್ರೀ ಎಸ್. ಆರ್. ಕಂಠಿ.—ಎಕ್ಸಿಕ್ಯೂಟೀವ್ ಬಾಡಿಯಲ್ಲಿ ಯಾರಿದ್ದಾರೆ, ಜನರಲ್ ಬಾಡಿಯಲ್ಲಿ ಯಾರಿದ್ದಾರೆ, ಎಲ್ಲಿದ್ದಾರೆ ಎಂದು ಇಷ್ಟು ಉದ್ದ ಪ್ರಶ್ನೆ ಕೇಳಿದರೆ ಹೇಗೆ ಹೇಳುವುದಕ್ಕಾಗುತ್ತದೆ ? ಅಡಲ್ಟ್ ಎಜುಕೇಷನ್ ಕೌನ್ಸಿಲ್ಲಿನ ಆಫೀಸು ಮೈಸೂರಿನಲ್ಲಿದೆ.

Mr. SPEAKER.—It does not arise. Management of the Adult Education Council does not come within the purview of this Question.

Sri R. S. HEGDE.—Is it not desirable to entrust the panchayatraj training centres to these Vidyapeetas ?

ಶ್ರೀ ಎಸ್. ಆರ್. ಕಂಠಿ.—ಈ ವಿಚಾರ ಸರ್ಕಾರಕ್ಕೆ ಇದೆ.

Sri SANJEEVANATH AIKALA.—May I know for what specific purpose the Ford Foundation grants were earmarked ?

Mr. SPEAKER.—Should all those statistical details be asked for in a supplementary ?

Sri SANJEEVANATH AIKALA.—If possible, it may be laid on the Table.

ಶ್ರೀ ಎಸ್. ಆರ್. ಕಂಠಿ.—ತರಿಸಿ ಕೊಡೋಣ.

Mr. SPEAKER.—Does it mean that anything and everything comes under that ? The member is asking regarding the function ; and whether there is supervision. It is answered that there is supervision. He further goes and asks who is the Principal and what duties are done, and so on.

Sri S. R. KANTHI.—Sir, I will not disclose names but I say one thing. The person who had gone to foreign countries was the President of the Adult Education Council. He has returned and taken charge. The Secretary of this institution is an hon'ble member of this House.

Sri C. J. MUCKANNAPPA.—In the answer it is stated "scheme to reorient the life of the village youths". These unfortunate youths who did not get education are trained. May I know what other facilities the Government are going to provide other than what is stated here ?

Sri S. R. KANTHI.—In the first place the youths who go to these institutions are not unfortunate. I consider them to be very fortunate because they are going to get best of training. This is a very useful scheme. Certain items of instruction and also work are already there. Beyond that Government is not contemplating anything.

Sri SANJEEVANATH AIKALA.—Was it not a fact that it was one of the conditions between the Danish Government and the Mysore Adult Education Gouncil that lands made available to these vidyapeetas must be self-supporting ?

Mr. SPEAKER.—Does it mean that the lands yield sufficient production to make the institutions self-supporting ?

Sri S. R. KANTHI.—It is not a condition. That is the ideal which the Adult Education Council is attempting. Now they are covering 30 per cent of the expenditure and every year they are trying to increase production. So that they may reach to 70 to 80 per cent of the expenditure.

Sri SANJEEVANATH AIKALA.—Is it not a fact that lands made available in Pampapet in Hampi and Kengeri, were not fully utilised and consequently the work in these vidyapeetas are not going in a way as stipulated in the agreement ?

Sri S. R. KANTHI.—I have seen both Kengeri and Pampapet. I had specially gone there. They are doing excellent work. It is not possible for the vidyapeeta to cover every area by irrigation. They are taking up both irrigation project and also dry cultivation.

ಶ್ರೀ ಸಿದ್ದಯ್ಯ ಕಾಶಿಮಠ.—ಪ್ರತಿಯೊಂದು ವಿದ್ಯಾಪೀಠದಲ್ಲಿಯೂ ಇಲ್ಲಿ ಸೂಚಿಸಿರತಕ್ಕಂಥ ಪಶುಪಾಲನೆ, ಕೋಳಿ ಸಾಕುವುದು, ವ್ಯವಸಾಯ, ಚರಿತ್ರೆ, ಭಾರತದ ಸಂವಿಧಾನ, ಭೂಗೋಳ ಕುಶಲಕಲೆ, ಆರೋಗ್ಯ, ನೈರ್ಮಲ್ಯತೆ ಕಲಿಸುತ್ತಿರುವರೋ ?

ಶ್ರೀ ಎಸ್. ಆರ್. ಕಂಠಿ.—ಪ್ರತಿಯೊಂದು ವಿದ್ಯಾಪೀಠದಲ್ಲಿಯೂ ಕಲಿಸುತ್ತಿದ್ದಾರೆಂದು ನಿಶ್ಚಿತವಾಗಿ ಹೇಳುವುದಕ್ಕಾಗುವುದಿಲ್ಲ. ಕೆಲವು ಕಡೆ ಕಲಿಸುತ್ತಿದ್ದಾರೆ, ಕೆಲವು ಕಡೆ ಇಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನಾನು ಕೇಳಿದ ಪ್ರಶ್ನೆ ಇದು. ಈ ಶಿಕ್ಷಣ ಪರಿಷತ್ತಿನ ಅಧ್ಯಕ್ಷರಾಗಿ, ಆಡಳಿತ ನಡೆಸತಕ್ಕಂಥವರು ಒಬ್ಬರು ಇರಬೇಕು. ರಾಜ್ಯದ ಅಡಲ್ಟ್ ಎಜುಕೇಶನ್ ಕೌನ್ಸಿಲ್ಲಿನ ಅಧ್ಯಕ್ಷರು ಮತ್ತು ಆಡಳಿತ ವರ್ಗ ಯಾರು ?

ಅಧ್ಯಕ್ಷರು.—ಅಡಲ್ಟ್ ಎಜುಕೇಶನ್ ಪರಿಷತ್ತಿನ ಆಡಳಿತ ವರ್ಗದ ಪ್ರಶ್ನೆ ಇಲ್ಲಿ ಬರುವುದಿಲ್ಲ. ಇದು ವಿದ್ಯಾಪೀಠಕ್ಕೆ ಸಂಬಂಧಪಟ್ಟದ್ದು.

ಶ್ರೀ ಬಿ. ಬೈರಪ್ಪಾಜಿ.—ಮೈಸೂರು ವಯಸ್ಕರ ಶಿಕ್ಷಣ ಸಮಿತಿಯ ವ್ಯವಹಾರ ದೇಶದ ಜನತೆಯ ಮೇಲೆ ಆಶಾದಾಯಕವಾಗಿಲ್ಲವೆಂದು ಜನತೆಯ ಮೇಲೆ ಒಂದು ಆತಂಕವನ್ನು ಉಂಟು ಮಾಡುತ್ತಿದೆ. ಆದ್ದರಿಂದ ಇದರ ಮೇಲ್ವಿಚಾರಣೆಯನ್ನು ಈ ಸಂಸ್ಥೆಗೆ ಒಳಪಡಿಸದೆ, ವಿದ್ಯಾಭ್ಯಾಸ ಇಲಾಖೆಗೆ ಒಳಪಡಿಸಿ ಅದರ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ ? ಮತ್ತು ಎಲ್ಲಿ ಜಮೀನನ್ನು ಕೊಡುವುದಕ್ಕೆ ಜನಗಳು ಮುಂದೆ ಬಂದು ವಿದ್ಯಾಪೀಠವನ್ನು ಪ್ರಾರಂಭಮಾಡಿ ಎಂದು ಕೇಳುತ್ತಾರೊ ಅಂಥ ಸ್ಥಳಗಳಲ್ಲೆಲ್ಲಾ ವಿದ್ಯಾಪೀಠಗಳನ್ನು ಪ್ರಾರಂಭ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ಎಸ್. ಆರ್. ಕಂಠಿ.—ಅಡಲ್ಟ್ ಎಜುಕೇಶನ್ ಕೌನ್ಸಿಲ್ ಈ ವಿದ್ಯಾಪೀಠಗಳನ್ನು ನಡೆಸುತ್ತಾ ಇವೆ, ಅವುಗಳನ್ನು ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತಾರೆಯೆ ಎಂದು ಕೇಳುತ್ತಾರೆ—ಇದು ಒಂದು ಸೂಚನೆ. ಆ ಮೇಲೆ, ಎಲ್ಲಿ ಜನಗಳು ಮುಂದೆ ಬಂದು ವಿದ್ಯಾಪೀಠಗಳನ್ನು ನಡೆಸುತ್ತೇವೆ ಅನ್ನುತ್ತಾರೊ, ಅಂಥಕಡೆ ಅದಕ್ಕೆ ಅನುಕೂಲತೆ ಮಾಡಿಕೊಡುತ್ತೀರ ಎಂದು ಕೇಳುತ್ತಿದ್ದಾರೆ. ಇದು ಅಷ್ಟು ಸುಲಭವಾದ ಪ್ರಶ್ನೆ ಅಲ್ಲ. ಲೋಕಲ್ ಜನಗಳು ಸಹಾಯ ಮಾಡುತ್ತಾರೆ, ಆದರೆ ಅವರು ವಿದ್ಯಾಪೀಠಗಳನ್ನು ನಡೆಸುವುದಕ್ಕೆ ಆಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿದ್ಯಾಪೀಠಗಳ ಕಾರ್ಯಕ್ರಮ ತೃಪ್ತಿಕರವಾಗಿ ಮತ್ತು ಯಶಸ್ವಿಯಾಗಿ ನಡೆಯುತ್ತಿದೆ ಎಂಬ ಅಭಿಪ್ರಾಯವಿರುತ್ತದೆ. ಆದ್ದರಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಈ ವಿದ್ಯಾಪೀಠಗಳನ್ನು ತೆರೆಯುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ ! ಹಾಕಿಕೊಂಡಿದ್ದರೆ, ಅದನ್ನು ಎಷ್ಟು ದಿವಸದಲ್ಲಿ ಪೂರೈಸುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—ಈಗಾಗಲೇ ನಾನು ಹೇಳಿದ ಹಾಗೆ, ಕೆಲವನ್ನು ಎಕ್ಸ್‌ಟೆಂಡ್ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಮೂರನ್ನು ಎಕ್ಸ್‌ಟೆಂಡ್ ಮಾಡಬೇಕೆಂದಿದೆ. ಆಗಲೇ ಹೇಳಿದ ಹಾಗೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಮಾಡುವುದು ಸರ್ಕಾರದ ಧೋರಣೆ ಇದೆ. ಅದು ಇವತ್ತು ಆಗುವ ಪ್ರಶ್ನೆ ಅಲ್ಲ, ಕಾಲ ಸ್ವಲ್ಪ ಜಾಸ್ತಿ ಹಿಡಿಯುತ್ತದೆ.

Sri T. MADAIAH GOWDA.—Is it not the object of the Vidyapeetas to train Mysore youths in becoming good citizens and also to build rural leadership and to give them training in that respect and that this poultry farming and so on are only the media of intructions.

ಶ್ರೀ ಎಸ್. ಆರ್. ಕಂಠಿ.—ಈ ಪೌಲ್ಟ್ರಿ ಫಾರ್ಮಿಂಗ್ ಮತ್ತು ವೀವಿಂಗ್ ಈ ಎಲ್ಲಾ ಆಕ್ಯುಪೇಶನ್ನನ್ನು ಕಲಿಸುತ್ತಾ ಇದ್ದಾರೆ. ಅವು ಮುಖ್ಯವಾದುವು—ಸಂಪೂರ್ಣವಾದಂಥ ಜೀವನವನ್ನು ಮಾಡುವುದಕ್ಕೆ ಕಲಿಸುತ್ತಾ ಇದ್ದಾರೆ. ಒಕ್ಕಲುತನ ಹಾಗೂ ಸಣ್ಣ ಸಣ್ಣ ಕೈಗಾರಿಕೆಗಳನ್ನು, ಸಂಪೂರ್ಣವಾದಂಥ ಜೀವನವನ್ನು ಮಾಡುವುದಕ್ಕೆ ಸಾಧ್ಯವಾಗಬೇಕೆಂದು ಯೋಚನೆ ಮಾಡಿದ್ದಾರೆ.

Sri SANJEEVANATH AIKALA.—Will the Government call for the report of the working of the Vidyapeetas and place it on the Table of the House ?

ಶ್ರೀ ಎಸ್. ಆರ್. ಕಂಠಿ.—ಬೇಕಾದರೆ ತರಿಸಿ ಕೊಡೋಣ. ನನ್ನ ಕಡೆಗೆ ರಿಪೋರ್ಟು ಇದೆ. ಕಾಪಿಗಳನ್ನು ಬೇಕಾದರೆ ತರಿಸಿ ಕೊಡೋಣ.

Enforcement of the Mysore Municipalities Act of 1964.

* *Q.*—659. Sri G. V. GOWDA (Palyam).—

Will the Government be pleased to state :—

(*a*) when the Mysore Municipalities Act, 1964 received the assent of the President of India ;

(*b*) the reasons why the same has not been brought into force ?

A.—Sri K. PUTTASWAMY (Minister for Municipal Administration).—

(*a*) On 7-4-1964.

(*b*) The Act cannot be enforced without framing Rules under certain sections. The Rules are being framed.

Sri G. V. GOWDA.—May I know whether Government need more than 12 months to frame Rules ?

Sri K. PUTTASWAMY.—It has taken.

Sri S. M. KRISHNA.—Does this reflect the efficiency with which the Mysore Government has been functioning ?

Sri K. PUTTASWAMY.—To bring these into force, several rules have to be framed. Now the Department has been able to frame about 20 sets of rules ; three sets of rules have been finalised ; about 15 sets of rules are before the Law Department for scrutiny and another 4 sets of rules are before the P.L.M. Department. It takes time. The Law Department must find time and has to attend to the needs of all other Departments. So it takes time.

Sri S. M. KRISHNA.—Are we to understand that the Bill is in the Law Department and not in the Department of Municipal Administration ?

Sri K. PUTTASWAMY.—I have suggested that there is no delay. Whatever time is required for the Law Department, they have to take.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರಂತೆ ಚುನಾವಣೆ ಮಾಡಿ ಮುಗಿಸಬೇಕು ಎಂದು ತಾವು ಇಲ್ಲಿ ಅವಸರವಸರವಾಗಿ ಬಿಲ್ಲನ್ನು ಈ ಸಭೆಯಲ್ಲಿ ತಂದು ಪಾಸುಮಾಡಿಸಿಕೊಂಡು ಬಿಟ್ಟಿರಿ. ಇದನ್ನು ಮಾಡಿ 360 ದಿನಗಳಾದರೂ ಕೂಡಾ ಈಗ ಲಾ ಡಿಪಾರ್ಟ್‌ಮೆಂಟು ಮೇಲೆ ಅಥವಾ ಇನ್ನೊಬ್ಬರ ಮೇಲೆ ಹಾಕುತ್ತಿದ್ದರೆ ಇದರಿಂದ ನಾವೇನು ಇನ್‌ಫರೆನ್ಸ್ ಡ್ರಾ ಮಾಡಬೇಕು ?

ಶ್ರೀ ಕೆ. ಪುಟ್ಟಸ್ವಾಮಿ.—360 ದಿನಗಳೂ ಆಗಿಲ್ಲ ಮತ್ತು ಇದರ ಮೇಲಿನ ಜವಾಬುದಾರಿಯನ್ನು ಯಾರ ಮೇಲೂ ಹಾಕುತ್ತಿಲ್ಲ. It has received the assent of the President.

Mr. SPEAKER.—Rules are to be framed when it goes on the Statute Book. Passing of a Bill is not the material point. It has to be operated from the date it has received assent. If any rules are framed, they have to be adopted.

Sri S. M. KRISHNA.—That is how the Ministry is functioning. The moment the legislature passes an enactment, the Ministry come out with some rules. No sooner it receives the assent of the President, they should promulgate rules.

Sri G. DUGGAPPA.—In the absence of the rules various difficulties have been found by Municipality while exercising the provisions of this Act. Has it come to the notice of the Government ? And if so, the Government should see the rules are finalised as early as possible.

Sri K PUTTASWAMY.—I do not know whether Hon'ble member s referring to the Act in force. Even with reference to the Act which is now inforce, several rules have been framed. The Municipalities are finding certain difficulties. Therefore we are taking every care to see that all the rules are framed under this Act and this has taken some time.

Sri G. DUGGAPPA.—That is why the Government should see that the rules are finalised as early as possible without any unnecessary delay.

Sri GANJI VEERAPPA.—May I know when the revised Act will be brought into force ?

Sri K. PUTTASWAMY.—It will be brought into force from 1st April 1965.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಹಳೇ ಅಕ್ಟು ಪ್ರಕಾರ ಅನೇಕ ಮುನಿಸಿಪಾಲಿಟಿಗಳಲ್ಲಿ ಚುನಾವಣೆಗಳು ನಡೆದಿವೆ. ಹೊಸ ಅಕ್ಟನ್ನು ಮುಂದುವರಿಸಿಕೊಂಡು ಸ್ಟ್ಯಾಟ್ಯೂಟುಗಳು ಇರಬೇಕೆಂದು ಪಾಪ್ಯುಲೇಷನ್ನು ಆಧಾರದ ಮೇಲೆ ಮಾಡಬೇಕೆಂದು ಇದ್ದೀರಿ. ಇಂತಹ ಚುನಾವಣೆಗಳು ನಡೆದಿರತ ! ಮುನಿಸಿಪಾಲಿಟಿಗಳ ಎಲೆಕ್ಷನ್ನುಗಳು ಇನ್‌ಆರ್ಡಿನೇಟು ಡಿಲೇಯಾಗುತ್ತದೆಯಲ್ಲವೇ ?

Sri K. PUTTASWAMY.—This evidently shows the Hon'ble member has not been able to read the provisions of the Act. There is an enabling provision enabling the Government to continue the Bodies that have come into existence for the duration of the period that they have ordinarily to function under the old Act.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಕೇಳುತ್ತಿರುವ ಪ್ರಶ್ನೆ, residency powers ನಿಂದ ತಾವು ಕೆಲವು ಮುನಿಸಿಪಾಲಿಟಿಗಳಿಗೆ ಜೀವದಾನ ಕೊಡುತ್ತಿದ್ದೀರಿ. ಅದಕ್ಕೆ ಅನುಕೂಲ ಮಾಡುವುದಕ್ಕಾಗಿ ಈ ಸಭೆಯಲ್ಲಿ ಅಂಗೀಕಾರ ಮಾಡಿದ ಕಾನೂನಿನಲ್ಲಿ ಒಂದು ಪ್ರಾವಿಷನ್ನು ಏಕೆ ಮಾಡಬಾರದು ?

ಶ್ರೀ ಕೆ. ಪುಟ್ಟಸ್ವಾಮಿ.—ರಿಸಿಡ್ಯುಯರಿ ಪವರ್ಸ್ ಈ ಸಭೆಯಲ್ಲಿ ಒಪ್ಪಿರುವ ಪ್ರಾವಿಷನ್ನು ಪ್ರಕಾರವೇ ಮಾಡಲಾಗಿದೆ.

Restricted competitive examinations for I.A.S.

* *Q.*—704. Sri E. NARAYANA GOWDA (Bangarpet).—

Will the Government be pleased to state :—

(*a*) whether it is a fact that only officers in the maximum grade of Rs. 250 are permitted to appear for the restricted competitive examination for I.A.S. ;

(*b*) if so, the steps Government intend to take to protect the interests of the Officers like Extension Officers of Development Department whose maximum pay is Rs. 240 to appear for the said examination?

A.—Sri S. NIJALINGAPPA (Chief Minister).—

(*a*) Yes. This provision has been made in the Scheme of Limited Competitive Examination proposed by the Government of India.

(*b*) As the Extension Officers of the Development Department do not come within the proposed limit, the question does not arise.

ಶ್ರೀ ಎಸ್. ನಿಜಲಿಂಗಪ್ಪ.—ಇದರಲ್ಲಿ ಸ್ವಲ್ಪ ತಿದ್ದಿಕೊಳ್ಳಬೇಕಾಗಿದೆ. 250 ರೂಪಾಯಿ ಎಂದಿರುವುದನ್ನು ಕೇಂದ್ರ ಸರಕಾರದ ಸ್ಕೀಮಿನ ಪ್ರಕಾರ 300 ಇರಬೇಕು ಎಂದು.

ಶ್ರೀ ಇ. ನಾರಾಯಣ ಗೌಡ.—ಇದರಲ್ಲಿ ಮೈಸೂರು ಸರಕಾರದವರು ಕೇಂದ್ರ ಸರಕಾರಕ್ಕೆ 250 ರೂಪಾಯಿಗಳ ಸಂಬಳ ಇರಬೇಕೆಂದು ನಿಗದಿ ಮಾಡಿ ಕಳುಹಿಸಿದರೋ ಇಲ್ಲ ಕೇಂದ್ರದವರೇ ನಿಗಧಿ ಮಾಡಿದ್ದರೋ ?

ಶ್ರೀ ಎಸ್. ನಿಜಲಿಂಗಪ್ಪ.—ಕೇಂದ್ರದವರ ಸೂಚನೆ 300 ರೂಪಾಯಿಗಳು ಇರಬೇಕೆಂದು ಇತ್ತು. ಇದನ್ನು ನಮ್ಮ ಸರಕಾರದವರು 250 ಇಳಿಸಬೇಕೆಂಬ ಸೂಚನೆಯನ್ನು ಕಳುಹಿಸಲಾಗಿದೆ.

ಶ್ರೀ ಇ. ನಾರಾಯಣ ಗೌಡ.—ಕೆಲವು ಇಲಾಖೆಗಳಲ್ಲಿರುವ ಪದವೀಧರರುಗಳು ಪಡೆದಿರುವ ಅನುಭವ ಮತ್ತು ಅವರು ಮಾಡಿರುವ ಕೆಲಸ ಚೆನ್ನಾಗಿ ಇದ್ದರೂ ಕೂಡ ಅವರುಗಳಿಗೆ ಇರುವ ಸಂಬಳದಲ್ಲಿ ಸುಮಾರು 40 ಹಾಗೂ ಹತ್ತು ರೂಪಾಯಿಗಳು ಸಂಬಳದ ಮಟ್ಟದಲ್ಲಿ ಕಡಿಮೆಯಾಗಿರುವುದರಿಂದ ಅಂತಹವರ ಕಡೆಗೂ ಸರಕಾರ ಸ್ವಲ್ಪ ಗಮನಕೊಡಲು ಯೋಜನೆ ಮಾಡುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕಾಗಿಯೇ 300 ರೂಪಾಯಿಗಳಷ್ಟು ಇದ್ದದ್ದನ್ನು ಇನ್ನೂ ಕೆಳಮಟ್ಟಕ್ಕೆ ಇಳಿಸಬೇಕೆಂದು ನಾವು ಸೂಚನೆ ಕಳುಹಿಸಿದ್ದೇವೆ.

ಶ್ರೀ ಗೋಪಾಲ ಸಾಲೆನ್ನ.—ವೀಕರ್ ಸೆಕ್ಷನ್ನು ಎಂದು ಇರತಕ್ಕವರಲ್ಲಿ ಅನೇಕರು ಸರಕಾರ ಕೊಡುತ್ತಿರುವ 250 ರೂಪಾಯಿಗಳ ಸಂಬಳಕ್ಕಿಂತ ಕಡಿಮೆ ಪಡೆಯುತ್ತಿರುವುದರಿಂದ ಅವರಿಗೂ ಅನುಕೂಲಗಳು ಸಿಗಬೇಕಾಗಿತ್ತು. ಈಗ ಕೇಂದ್ರದವರು 300 ಎಂದು ಮಾಡಿದುದನ್ನು 250 ಎಂದು ಇಳಿಸಿ ರಾಜ್ಯಾಂಗದಂತೆ ಯಾರು ವೀಕರ್ ಸೆಕ್ಷನ್ನು ಎಂದು ಇದ್ದಾರೋ ಅವರಿಗೆ ಅನುಕೂಲವಾಗುವಂತೆ ಇಲ್ಲಿ ವಿಮರ್ಶೆ ಯಾಕೆ ಮಾಡಬಾರದು ?

ಶ್ರೀ ಎಸ್. ನಿಜಲಿಂಗಪ್ಪ.—ಇವೆಲ್ಲ ದೃಷ್ಟಿಯಿಂದಲೇ ಈಗ ಮಾಡಿರತಕ್ಕದ್ದು ಸರಿ ಎಂದು ಕಾಣುತ್ತದೆ.

Sri G. V. GOWDA.—I wish to know whether Officers working in all the Departments are being allowed to appear for this restricted examination and Officers working in the Technical Dapartment, *i.e.*, Medical and Agriculture are also being allowed to appear for this Examination ?

Sri S. NIJALINGAPPA.—I do not believe the Medical and Engineering people are permitted. It is only in the Administrative Section it is contemplated.

ಶ್ರೀ ಸುಬ್ಬಯ್ಯ ನಾಯಕ್.—ದೇಶದಲ್ಲಿ ಐ. ಎ. ಎಸ್. ಪರೀಕ್ಷೆಗೆ ಕುಳಿತುಕೊಳ್ಳಬೇಕಾದರೆ ಅದಕ್ಕೆ ಎಜುಕೇಷನಲ್ ಕ್ವಾಲಿಫಿಕೇಷನ್ನು ಮತ್ತು ಇತರ ಅನುಭವಗಳು ಇರಬೇಕೆಂದು ಪರಿಮಿತಿಯನ್ನೇನಾದರೂ ಹಾಕಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೆ ಇಂತಿಂತಹ ಕ್ವಾಲಿಫಿಕೇಷನ್ನುಗಳು ಇರಬೇಕು, ಇಷ್ಟು ದಿವಸಗಳು ಇಲಾಖೆಯಲ್ಲಿ ಕೆಲಸ ಮಾಡಿರಬೇಕು ಎಂದು ಇವನ್ನೆಲ್ಲಾ ಇಟ್ಟುಕೊಂಡೇ ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಎಕ್ಸಾಮಿನೇಷನ್ನುಗಳನ್ನು ನಡೆಸುವವರು ಯೂನಿಯನ್ ಪಬ್ಲಿಕ್ ಸರ್ವಿಸ್ಸು ಕಮಿಷನ್ನಿನವರೋ ಅಥವಾ ಸ್ಟೇಟು ಪಬ್ಲಿಕ್ ಸರ್ವಿಸ್ಸು ಕಮಿಷನ್ನಿನವರೋ ?

ಶ್ರೀ ಎಸ್. ನಿಜಲಿಂಗಪ್ಪ.—ಇದನ್ನು ಯೂನಿಯನ್ ಪಬ್ಲಿಕ್ ಸರ್ವಿಸ್ಸು ಕಮಿಷನ್ನಿನವರು ನಡೆಸುತ್ತಾರೆ.

Construction of Police quarters in the State.

*Q.—379. Sri S. RAJAGOPAL (K. G. F.).—

Will the Government be pleased to state :—

(a) whether they have sanctioned construction of Police quarters in the State at a cost of 35 lakhs or thereabouts during the year 1963-64 ;

(b) whether the contracts for the said buildings are being given to a single contractor or given on piece work basis to several contractors?

A.—Sri R. M. PATIL (Minister for Home).—

(a) A total sum of Rs. 60 lakhs was provided during 1963-64 in the budget for financing the works all over the State under the Police Housing Scheme.

(b) According to rules and caprtice of the Public Works Department, separate tenders are being called for and the work awarded to the lowest tenderer in each case and not to any particular contractor throughout the State, or in any part of it.

Sri S. RAJAGOPAL.—May I know the places where the construction of quarters is going on during the year 1963–64 ?

† Sri R. M. PATIL.—In large number of places quarters are being constructed. I will place the list on the Table of the House.

Sri S. RAJAGOPAL.—Is it possible to give the information at least with regard to Bangalore where the number is small, Sir ?

Sri R. M. PATIL.—In Bangalore, at the following three places :

1. Mysore Road,
2. Rajanakunte,
3. Kengeri.

Sri S. RAJAGOPAL.—May I know the number of houses proposed to be constructed ?

Sri R. M. PATIL.—

Place	*No. of quarters.*	*Accommodation for*	*Estimated cost.*
			Rs.
1. Mysore Road	12	—	1,11,000
2. Rajanakunte	5	1 Head P.C. 4 P.C.S.	33,500
3. Kengeri	5	-do-	39,000

There are two more recent sanctions, one at Mysore Road-reconstuction of 324 Police Constables quarters estimated at Rs. 30,00,000 and the other at Rajajinagar in respect of one Head Constable and four Constables estimated at Rs- 45,000.

Sri S. RAJAGOPAL.—May I know the number of contractors who have been entrusted with this work ?

Sri R. M. PATIL.—They are separate contractors. So far as the names are concerned, the information is not available with me, Sir.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಕೆಲಸಕ್ಕೆ ಹಣ ಒದಗಿಸುವುದು ಜಿಲ್ಲಾವಾರು ಹಂಚಿಕೆ ಮಾಡುತ್ತೀರಾ ಅಥವಾ ಸ್ಟೇಟ್‌ವೈಜ್ ಹಂಚಿಕೆ ಮಾಡುತ್ತೀರಾ ?

Sri R. M. PATIL.—We have to take a number of factors into consideration. There is paucity of space. For example in Bidar, space was not available in a number of places. Therefore, the work was delayed. Now the sites are being made available and we are taking up the works. We have taken up works wherever site is available and that too at the disposal of the Police Department. Secondly, the proportion of the accommodation is also being taken into consideration. These are the two important factors that are taken into consideration before the proposal is being made.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ನಮ್ಮ ಸಂಸ್ಥಾನದಲ್ಲಿ ಪ್ರತಿಯೊಬ್ಬ ಕಾನ್‌ಸ್ಟೇಬಲ್‌ನಿಗೂ ವಾಸಕ್ಕೆ ಮನೆ ಕಟ್ಟಿಸಿಕೊಡುವುದನ್ನು ಎಷ್ಟು ದಿವಸದಲ್ಲಿ ಮಾಡುತ್ತೀರಿ ?

Sri R. M. PATIL.—It is a growing force. It cannot be estimated at this stage. So far as the present force is concerned, we have reached a target of 45 per cent and some buildings are under construction. If we complete those buildings, we will reach the target of 60 per cent. It may take another 10 to 15 years to provide quarters for the full force and by that time the strength may also increase.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತುಮಕೂರು ಜಿಲ್ಲೆಯ ಉತ್ತರ ಭಾಗದಲ್ಲಿ ಯಾವ ತಾಲ್ಲೂಕಿನಲ್ಲಿಯೂ ಪೋಲೀಸಿನವರಿಗೆ ವಾಸಕ್ಕೆ ಮನೆ ಕಟ್ಟಿ ಕೊಟ್ಟಿಲ್ಲ, ವಾಸಕ್ಕೆ ಮನೆ ಕಟ್ಟಿಸಿ ಕೊಡುವುದಕ್ಕೆ ಸರಕಾರ ಯೋಚನೆ ಮಾಡುತ್ತಾರೆಯೇ ?

Sri R. M. PATIL.—At Bukkapatna in Tumkur District, the work has been taken up and at other places work will be taken up as and when funds are being made available.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸ್ವಾಮಿ, ಗೌರಿಬಿದನೂರಿನಲ್ಲಿ ಪೋಲೀಸಿನವರಿಗೆ ವಾಸಕ್ಕೆ ಮನೆ ಕಟ್ಟಿಸುವುದಕ್ಕಾಗಿ ಫೌಂಡೇಷನ್ ಹಾಕಿದ್ದಾರೆ. ಆದರೆ ಕಂಟ್ರಾಕ್ಟರ್ ಮತ್ತು ಇಲಾಖೆಯವರ ವೈಮನಸ್ಸಿನಿಂದ ಕೆಲಸ ನಿಂತು ಹೋಗಿದೆ. ಈ ಕೆಲಸ ಶೀಘ್ರವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri R. M. PATIL.—If the Hon'ble Member had brought it to my notice earlier, the problem would have been solved.

ಶ್ರೀ ಗೋಪಾಲರಾವ್ ಮೂಡಬಿ.—ಬಿದರ್ ಡಿಸ್ಟ್ರಿಕ್ಟನಲ್ಲಿ ಪೋಲೀಸಿನವರಿಗೆ ವಾಸಕ್ಕೆ ಮನೆ ಇಲ್ಲ. ಅವರಿಗೆ ಕ್ವಾರ್ಟರ್ಸ್ ಕಟ್ಟಿಸಿಕೊಡುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ?

Sri R. M. PATIL.—Sir, as I have stated earlier, in Bidar District there is only 4 per cent police accommodation uptill now. During my last visit, we have taken consent of the owners to give sites at 13 places and the sites have been given. At Kamalnagar and Kusnur, the construction work has been taken up and in the remaining places, work will be taken as early as possible as and when funds are available.

ಶ್ರೀಮತಿ ಸುಶೀಲಾಬಾಯಿ ಶಹಾ.—ಸ್ವಾಮಿ, ತಾಲ್ಲೂಕ್ ಹೆಡ್ ಕ್ವಾರ್ಟರ್ಸನಲ್ಲಿ ಪೋಲೀಸಿನವರಿಗೆ ವಾಸಕ್ಕೆ ಮನೆ ಕಟ್ಟಿಸಿ ಕೊಡುತ್ತೀರಿ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಕಡೆ ಪೋಲೀಸ್ ಸ್ಟೇಶನ್ಸ್ ಇವೆ. ಅಲ್ಲಿ ಅವರಿಗೆ ವಾಸಕ್ಕೆ ಮನೆ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಪೋಲೀಸ್ ಸ್ಟೇಶನ್ ಇದ್ದಲ್ಲಿ ಮನೆ ಕಟ್ಟಿಸಿ ಕೊಡುತ್ತೀರಾ ?

Sri R. M. PATIL.—That is the object of the Government. ಅದೇ ಉದ್ದೇಶದಿಂದ ನಾವು ಕೆಲಸ ಮಾಡುತ್ತಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಾಗಿ ಮನೆಗಳು ಆಗಬೇಕು ಎಂದು ಸರಕಾರದ ಉದ್ದೇಶ ಇದೆ.

Sri BAPU RAO HULSULKAR.—May I know the names of other persons who have given consent to part with lands in Bidar District ?

Sri R. M. PATIL.—That list is not with me, Sir.

Sri BAPU RAO HULSULKAR.—I have given consent before 1½ years, but the quarters are not yet constructed. May I know the reason ?

Sri R. M. PATIL.—It is because funds are not available.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮ್ಮ ಶಿರಾ ತಾಲ್ಲೂಕಿನಲ್ಲಿ ಮೂರು ರೇಂಜುಗಳಿವೆ. ಪೋಲೀಸಿನವರಿಗೆ ವಾಸಕ್ಕೆ ಮನೆ ಇಲ್ಲ. ಅವರಿಗೆ ವಾಸಕ್ಕೆ ಮನೆ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಕಳೆದ ಮೂರು ವರ್ಷಗಳಿಂದ ಹೇಳುತ್ತಿದ್ದೇವೆ. ಈ ವರ್ಷದಲ್ಲಿಯಾದರೂ ಈ ಮೂರು ಸ್ಥಳಗಳಲ್ಲಿ ಪೋಲೀಸಿನವರಿಗೆ ವಾಸಕ್ಕೆ ಮನೆ ಕಟ್ಟಿಸಿಕೊಡುವುದಕ್ಕೆ ಸಹಾನುಭೂತಿಯಿಂದ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಬೇಕಾದಷ್ಟು ಸಹಾನುಭೂತಿ ಸರಕಾರಕ್ಕೆ ಇದೆ. ಆದರೆ ದುಡ್ಡು ಇಲ್ಲ.

Sri SANJEEVANATH AIKALA.—What is the House Rent allowance that is paid to the Police Constables wherever quarters are not provided ?

Sri R. M. PATIL.—I want notice, Sir.

ಶ್ರೀ ಗೋಪಾಲ ಸಾಲೆನ್ನ.—ಮಂಗಳೂರಿನಲ್ಲಿ ಮೊದಲಿನಿಂದಲೂ ಒಂದು ಸಣ್ಣ ಪ್ರದೇಶದಲ್ಲಿ ಪೋಲೀಸ್ ಕ್ವಾರ್ಟರ್ಸ್ ಏನು ಇದೆಯೋ ಆ ಪ್ರದೇಶ ಸ್ಲಂ ಏರಿಯಾ ಆಗಿ ಬೆಳೆಯುತ್ತಿದೆ. ಅಲ್ಲಿಂದ ತೆಗೆದು ಬಿಟ್ಟು ಬೇರೆ ಕಡೆ ಪೋಲೀಸ್ ಕ್ವಾರ್ಟರ್ಸ್ ಕಟ್ಟಿಸಿ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ನನ್ನ ಮಿತ್ರರು ಮಂಗಳೂರು ಪೋಲೀಸ್ ಕ್ವಾರ್ಟರ್ಸ್ ನೋಡಿಲ್ಲ ಎಂದು ಕಾಣುತ್ತದೆ. ಇತ್ತೀಚೆಗೆ ಇದರ ಬಗ್ಗೆ ವಿಶೇಷ ಆಸ್ಥೆ ವಹಿಸಿ ನಡೆದ ಕೆಲಸ ಅವರಿಗೆ ಕಾಣುತ್ತಿಲ್ಲ. 96 ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ ಬೇಕಾಗುವಂಥ ಕ್ವಾರ್ಟರ್ಸ್ ಕಟ್ಟುತ್ತಾ ಇದ್ದೇವೆ ಅದಕ್ಕೆ 9,24,000 ರೂಪಾಯಿಗಳು ಖರ್ಚು ಮಾಡುತ್ತೇವೆ.

ಶ್ರೀ ಎನ್. ಹುಚ್ಚ ಮಾಸ್ತಿಗೌಡ.—ರಾಜ್ಯದ ಪೋಲೀಸ್ ಫೋರ್ಸಿಗೆ ಸರಾಸರಿ 45 ಪರ್ಸೆಂಟ್ ವಸತಿ ಸೌಕರ್ಯ ಸಿಕ್ಕಿದೆ. ಆದರೆ ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ಇದು ಸರಾಸರಿಗಿಂತ ಕಡಿಮೆ ಇದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಸರಾಸರಿಗಿಂತ ಕಡಿಮೆ ಇಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಮುನಿಸಿಪಾಲಿಟಿಯವರು ಸೈಟ್ ಕೊಟ್ಟಿದ್ದರೂ ಕೂಡ ಲಕ್ಷ್ಮೇಶ್ವರದಲ್ಲಿ ಪೋಲೀಸ್ ಕ್ವಾರ್ಟರ್ಸ್ ಮಂಜೂರು ಮಾಡದೇ ಇರುವುದಕ್ಕೆ ಕಾರಣ ಏನು ?

ಶ್ರೀ ಆರ್. ಎಂ. ಪಾಟೀಲ್.—ಲಕ್ಷ್ಮೇಶ್ವರದಲ್ಲಿ ಮಂಜೂರು ಮಾಡಿಲ್ಲ ಯಾಕೆಂದರೆ, ಪ್ರೊಪೋಸಲ್ ಬಂದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೀದರ್ ಜಿಲ್ಲೆಯಲ್ಲಿ ಪೋಲೀಸ್ ಕ್ವಾರ್ಟರ್ಸ್ ಯಾಕೆ ಮಾಡಲಿಲ್ಲ ಎಂದರೆ ಜಮೀನು ಇಲ್ಲ ಎಂದು ಹೇಳುತ್ತೀರಿ. ನಮ್ಮಲ್ಲಿ ಏಕೆ ಕಟ್ಟಲಿಲ್ಲ ಎಂದರೆ ಹಣ ಇಲ್ಲ ಎಂದು ಹೇಳುತ್ತೀರಿ. ನಮ್ಮ ಜಿಲ್ಲೆಯಲ್ಲಿ ಜಮೀನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಆದುದರಿಂದ ಕಳ್ಳಂಬೆಳ್ಳ, ತೆರೆಯಾಗಳಹಳ್ಳಿ ಸಿರಾ ಈ ಮೂರು ಸ್ಥಳಗಳಲ್ಲಿ 40-50 ಜನ ಪೋಲೀಸರು ಬಹಳ ಕಷ್ಟದಲ್ಲಿದ್ದಾರೆ. ಅವರ ವಸತಿಗಾಗಿ ಕಟ್ಟಡ ಕಟ್ಟಿಸಲು ಸರಕಾರ ಯೋಚನೆ ಮಾಡುತ್ತಾರೆಯೇ ?

ಶ್ರೀ ಆರ್. ಎಂ. ಪಾಟೀಲ್.—ಈಗ ಕೈಯಲ್ಲಿ ತೆಗೆದುಕೊಂಡಿರುವ ಮೂರು ಕೋಟಿ ರೂಪಾಯಿ ಕೆಲಸ ಇದೆ. ಈ ಕೆಲಸ ಮುಗಿಯಬೇಕಾದರೆ, ಈ ವರ್ಷ ಹೋಗಬೇಕು. ಮುಂದಿನ ವರ್ಷ ಸಹ ಹೋಗಬಹುದು. ಕೈಯಲ್ಲಿರುವ ಕೆಲಸ ಮುಗಿದ ಮೇಲೆ ಆ ಕೆಲಸ ತೆಗೆದುಕೊಳ್ಳಬಹುದು. ಒಮ್ಮೆಲೆ ಎಲ್ಲಾ ಕೆಲಸ ತೆಗೆದುಕೊಳ್ಳಲು ದುಡ್ಡು ಸಾಲದು. ಹಣ ಒದಗಿಸಲು ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡಿದೆ. ರಾಜ್ಯ ಸರಕಾರ ಕೂಡ ಶಕ್ತಿಮೀರಿ ಸಹಾಯ ಮಾಡುತ್ತಿದ್ದೇ. ಇದನ್ನು ಮನಗಂಡು ಕೆಲವು ವಿಷಯದ ಬಗ್ಗೆ ಹೆಚ್ಚಾಗಿ ಒತ್ತಾಯ ಮಾಡುವ ಹವ್ಯಾಸ ಇಟ್ಟುಕೊಳ್ಳುವುದು ಸರಿಯಲ್ಲ.

ಶ್ರೀಮತಿ ಸಿದ್ದಮ್ಮ ಮೈಲಾರ್.—ಸ್ವಾಮಿ, ಬ್ಯಾಡಗೀ ತಾಲ್ಲೂಕಿನಲ್ಲಿ ಪೋಲೀಸ್ ಕ್ವಾರ್ಟರ್ಸ್ ಮತ್ತು ಪೋಲೀಸ್ ಆಫೀಸರ ಕ್ವಾರ್ಟರ್ಸ್ ಇರುವುದಿಲ್ಲ ಎಂಬ ಸಂಗತಿ ಸರ್ಕಾರದವರಿಗೆ ಗೊತ್ತಿದೆಯೆ ?

1-00 P.M.

ಶ್ರೀ ಆರ್. ಎಂ. ಪಾಟೀಲ್.—ನನಗೆ ಎಲ್ಲವೂ ಗೊತ್ತಿದೆ. ಈಗ ಎಲ್ಲ ಕಡೆಯಲ್ಲೂ ಕಟ್ಟಲಿಕ್ಕೆ ಹತ್ತಿದ್ದಾರೆ. ಆದರೆ ಬ್ಯಾಡಗೀ ಪೋಲೀಸರ ಕ್ವಾರ್ಟರ್ಸ್ ವಿಚಾರ ನನಗೆ ಗೊತ್ತಿಲ್ಲ. ಈಗ ನನ್ನ ಮುಂದೆ ಬಂದಿದೆ. ಅದನ್ನು ವಿಚಾರ ಮಾಡೋಣ.

ಶ್ರೀಮತಿ ಅನ್ನಪೂರ್ಣಾ ಬಾಯಿ.—ಮಾನ್ಯ ಸಚಿವರು ಬಸವಕಲ್ಯಾಣಕ್ಕೆ ಬಂದಿದ್ದಾಗ ಅಲ್ಲಿ ಪೋಲೀಸ್ ಕ್ವಾರ್ಟರ್ಸ್‌ಗಳನ್ನು ಕಟ್ಟಿಸಿಕೊಡುತ್ತೇವೆಂದು ಆಶ್ವಾಸನ ಕೊಟ್ಟಿದ್ದು ನಿಜವೇ ?

ಶ್ರೀ ಆರ್. ಎಂ. ಪಾಟೀಲ್.—ಆ ಬಸವಕಲ್ಯಾಣದ ವಿಚಾರ ಈ ಪಟ್ಟಿಯಲಿಲ್ಲ. ಅಲ್ಲಿಯೂ ಬಿಲ್ಡಿಂಗುಗಳು ಆಗುತ್ತವೆ.

ಶ್ರೀಮತಿ ಸಿದ್ದಮ್ಮ ಮೈಲಾರ್.—ರಾಣೇಬೆನ್ನೂರು ತಾಲ್ಲೂಕ್ ತುಂಬಿನಕಟ್ಟೆಯಲ್ಲಿ ಪೋಲೀಸ್ ಕ್ವಾರ್ಟರ್ಸುಗಳಿಲ್ಲ ಎಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಅಲ್ಲಿ ಜಮೀನು ಸಿಗದೆ ಅದು ಹಾಗೇ ಉಳಿದಿದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಸೂಳ್ಯದಲ್ಲಿ ಸಬ್‌ಇನ್‌ಸ್ಪೆಕ್ಟರ ವಾಸದ ಮನೆ ಇಲ್ಲ. ಅಲ್ಲಿರತಕ್ಕದ್ದು ಬೀಳತಕ್ಕ ಸ್ಥಿತಿಯಲ್ಲಿದೆ. ಅದು ಮಳೆನಾಡುವ ಪ್ರದೇಶ. ಅಲ್ಲಿ ಹಾವುಗಳ ಕಾಟ ಬೇರೆ ಜಾಸ್ತಿ. ಅದರ ಬಗ್ಗೆ ನಾನು ತಮ್ಮಲ್ಲಿ ಹಿಂದೆಯೇ ಒಂದು ಮನವಿ ಮಾಡಿಕೊಂಡಿದ್ದೆ. ಈಗ ಏನು ಮಾಡುತ್ತೀರಿ ?

ಶ್ರೀ ಆರ್. ಎಂ. ಪಾಟೀಲ್.—ಹಾಗೆ ಡೈಲಾಪಿಡೇಟಿಂಗ್ ಕಂಡೀಷನ್ನಿನಲ್ಲಿರತಕ್ಕ ಕಟ್ಟಡಗಳಿರುವುದು ಆ ಸೂಳ್ಯ ಒಂದರಲ್ಲೇ ಅಲ್ಲ, ಎಲ್ಲಾ ಕಡೆಯಲ್ಲೂ ಇರುತ್ತವೆ. ಆದರೆ ಇವೆಲ್ಲಾ ಹಣವಿಲ್ಲದೆ ಉಳಿದಿವೆಯೇ ಹೊರತು, ಬೇರೆ ಇನ್ನೇನೂ ಕಾರಣದಿಂದಲ್ಲ.

ಶ್ರೀಮತಿ ಬಸವರಾಜೇಶ್ವರಿ.—ಹಟ್ಟಿ ಗೋಲ್ಡ ಮೈನಿಂಗ್ ಏರಿಯಾದಲ್ಲಿ ಸಬ್-ಇನ್‌ಸ್ಪೆಕ್ಟರ ಹಾಗೂ ಪೋಲೀಸರ ವಾಸದ ಮನೆಗಳಿಲ್ಲ ಎಂಬ ಅಂಶ ಸರ್ಕಾರದವರಿಗೆ ಗೊತ್ತಿದೆಯೋ ?

ಶ್ರೀ ಆರ್. ಎಂ. ಪಾಟೀಲ್—ಗೊತ್ತಿದೆ.

ಶ್ರೀಮತಿ ಬಸವರಾಜೇಶ್ವರಿ.—ಈ ವರ್ಷವಾದರೂ ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತಿರಾ !

ಶ್ರೀ ಆರ್. ಎಂ. ಪಾಟೀಲ್.—ಈ ವರ್ಷದ ಲಿಸ್ಟಿನಲ್ಲಿ ಅದು ಇನ್‌ಕ್ಲೂಡಾದಹಾಗೆ ಕಾಣುವುದಿಲ್ಲ.

ಅಧ್ಯಕ್ಷರು.—ಈಗಲಾದರೂ ಇನ್‌ಕ್ಲೂಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂತ ಕೇಳಿ.........

ಶ್ರೀ ಆರ್. ಎಂ. ಪಾಟೀಲ್.—ಪರಿಶೀಲನೆ ಮಾಡೋಣ.

ಶ್ರೀ ಗೋಪಾಲ ಸಾಲೆನ್ಸ.—ಸರ್ಕಾರದವರು ನಮ್ಮ ಮಂಗಳೂರಿಗೆ ಲಕ್ಷಾಂತರ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿರುವುದಾಗಿ ತಿಳಿಸಿದರು. ಇರಬಹುದು. ಆದರೆ ಅಲ್ಲಿ ಈಗ ಕಟ್ಟಡ ಆಗುತ್ತಿರುವ ಸ್ಥಳ ಯೋಗ್ಯವಾದ್ದಲ್ಲ, ಅವರಿಗೆ ಸ್ವಲ್ಪ ಆರೋಗ್ಯಕರವಾದ ಸ್ಥಳದಲ್ಲಿ ಅವನ್ನು ಕಟ್ಟಿಸಬೇಕು ಎಂಬುದು ನನ್ನ ಪ್ರಶ್ನೆ...........

ಶ್ರೀ ಆರ್. ಎಂ. ಪಾಟೀಲ್.—ಮಂಗಳೂರಿನ ಬಗ್ಗೆ ನಾವು ಹೆಚ್ಚಿನ ಆಸ್ಥೆ ವಹಿಸಿದ್ದೇವೆ. ಈಗಾಗಲೇ ಅಲ್ಲಿಗೆ 9 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಇನ್ನೂ ಅಲ್ಲಿ ಬೇರೆ ಎರಡು ಕಡೆಗಳಲ್ಲಿ ಕ್ಟಟಡ ಕಟ್ಟಿಸಬೇಕಾಗಿ ಬರಬಹುದು. ಆಗ ತಾವು ಹೇಳಿದ್ದನ್ನು ವಿಚಾರ ಮಾಡೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಮಾನ್ಯ ಸಚಿವರು ಅವರಲ್ಲಿರತಕ್ಕ ಪಟ್ಟಿಯಲ್ಲಿ ಕೆಲವು ಇಲ್ಲ ಎಂತ ಹೇಳಿದರು, ಈಗ ಸದಸ್ಯರುಗಳು ಕೇಳಿದ ವಿಚಾರಗಳು ಇರತಕ್ಕ ಪಟ್ಟಿಯಾವುದು ?

ಶ್ರೀ ಆರ್. ಎಂ. ಪಾಟೀಲ್.—ಈಗ ನನ್ನಲ್ಲಿರತಕ್ಕ ಪಟ್ಟಿಯನ್ನೆಲ್ಲಾ ನಾನು ಟೇಬಲ್ ಮೇಲೆ ಇಡುತ್ತೇನೆ. ಮಾನ್ಯ ಸದಸ್ಯರು ನೋಡಿಕೊಳ್ಳಬಹುದು.

ಶ್ರೀ ಸಂಜೀವನಾಥ ಐಕಳ.—ಧಾರ್ವಾಡ ಜಿಲ್ಲೆಯ ನವಿಲುಗುಂದ ತಾಲ್ಲೂಕಿನಲ್ಲಿ ಎಷ್ಟು ಕಟ್ಟಡಗಳು ಬೇಕೆಂದಿತ್ತು, ಅಲ್ಲಿ ಈಗ ಎಷ್ಟು ಕಟ್ಟಡಗಳನ್ನು ಕಟ್ಟಿಸಲಾಗಿದೆ !

ಶ್ರೀ ಆರ್. ಎಂ. ಪಾಟೀಲ್.—ಅಲ್ಲಿಗೆ ಕಟ್ಟಡಗಳೇನೂ ಬೇಕಾಗಿಲ್ಲ, ಕಟ್ಟಿಸಿಲ್ಲ.

Mr. SPEAKER.—Question Hour is over.

QUESTION FOR ANSWER ON THE DAY

(but not taken up)

Starting of an Agricultural School and Soil Conservation Training Centre at Babbur.

*Q.—306. Sri V. MASIYAPPA (Hiriyur).—

Will the Government be pleased to state :—

(a) whether there have been representations for starting an Agricultural School and Soil Conservation Training Centre in the Agricultural Research Station at Babbur in Hiriyur Taluk ;

(b) if so, the action taken by them in this behalf so far ?

A.—Sri H. C. BORAIAH (Parliamentary Secretary to Minister for Agriculture).—

(*a*) Yes.

(*b*) The proposals are under consideartion of the Government.

Mr. SPEAKER.—Now we will take up discussion on Appropriation (No. 3) Bill, 1965.

ಸ್ವಾಮಿ, ಈ ಇಲಾಖೆಗೆ ಖರ್ಚು ಮಾಡತಕ್ಕಂಥ 2,42,00,000 ರೂಪಾಯಿ ಹಣದಲ್ಲಿ ಕನಿಷ್ಟ ಪಕ್ಷ ಸಂಬಳ ಸಾರಿಗೆ, ತುಟ್ಟಿ ಭತ್ಯ, ಟೀ. ಎ. ಇವುಗಳಿಗೆ ಖರ್ಚಾಗತಕ್ಕಂಥಾದ್ದು ಸುಮಾರು ಲಕ್ಷಗಟ್ಟಲೆ ಆಗುತ್ತದೆ. ಕನಿಷ್ಟಪಕ್ಷ ಒಂದು ಕೋಟಿ ಹತ್ತಿರ ಹತ್ತಿರ ಹಣ ಇದಕ್ಕಾಗಿ ವ್ಯಯವಾಗುತ್ತಾ ಇದೆ. ಬಡ ಜನತೆಯ ಉದ್ಧಾರಕ್ಕಾಗಿ ಖರ್ಚು ಮಾಡುವಂತೆ ವ್ಯವಸ್ಥೆ ಮಾಡಲಿಲ್ಲ. ಈ ಮೊತ್ತ ಹೆಚ್ಚಾಗಿ ಸ್ಟಾಫ್‌ಗೋಸ್ಕರ ಖರ್ಚಾಗುತ್ತಿದೆ. ಕೆಲಸವಿಲ್ಲದೆ ಅನಾವಶ್ಯಕವಾಗಿ ಇರತಕ್ಕಂಥ ಅಧಿಕಾರಿಗಳನ್ನು ಈ ಇಲಾಖೆಯಲ್ಲಿ ಸೇರ್ಪಡೆ ಮಾಡಲಾಗಿದೆ. ಒಂದು ತಾಲ್ಲೂಕು ಮಟ್ಟದಲ್ಲಿ ಹತ್ತು ಸಾವಿರ ಇಪ್ಪತ್ತು ಸಾವಿರ ಖರ್ಚು ಮಾಡುವುದಕ್ಕೆ ಒಬ್ಬ ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರ್ ನೇಮಕ ಮಾಡಿದ್ದೀರಿ. ಹರಿಜನರ ಗಿರಿಜನರ ಮನೆ ಕಟ್ಟುವುದಕ್ಕೆ ಇನ್ನೂ ರಿಕಾರ್ಡ್ ಮಾಡಿಸಬೇಕಾಗಿದೆ. ಈಗ ಈ ದುಡ್ಡು ಅವರ ಸಂಬಳಕ್ಕಾಗಿ ವಿನಿಯೋಗವಾಗುತ್ತಾ ಇದೆ. ಸಾವಿರಾರು ರೂಪಾಯಿ ಸಂಬಳ ಪಡೆಯತಕ್ಕಂಥ ಅಧಿಕಾರಿಗಳಿಗೆ ಯಾವ ಕೆಲಸವಿಲ್ಲ. ಹಿಂದುಳಿದ ಜನಾಂಗದ ಏಳಿಗೆಯ ವಿಚಾರದಲ್ಲಿ ನ್ಯಾಯವಾದ ಒಂದು ಕೆಲಸವನ್ನು ಅಂಥ ಅಧಿಕಾರಿಗೆ ವಹಿಸಿಲ್ಲ. ಜನತೆಯ ಶೋಷಣೆಮಾಡಿ ಅವರನ್ನು ಬಡತನಕ್ಕೆ ಎಳೆಯತಕ್ಕಂಥ ಕೆಲಸದಲ್ಲಿ ತೊಡಗಿದ್ದಾರೆ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯಾಗಲಾರದು. ಹೀಗೆ ಎಲ್ಲಾ ಕಡೆ ನಡೆಯುತ್ತಿದೆ. ಖರ್ಚು ಮಾಡತಕ್ಕ ಹಣಕ್ಕೆ ಸರಿಯಾಗಿ ಪ್ರತಿಫಲ ಜನಗಳಿಗೆ ಸಿಕ್ಕುತ್ತಿಲ್ಲ. ಹಣ ಮಾತ್ರ ವ್ಯಯವಾಗುತ್ತಿರುವ ಅನೇಕ ಸಂದರ್ಭಗಳನ್ನು ನಾವು ಕಾಣುತ್ತಿದ್ದೇವೆ. ಡಿಸ್ಟ್ರಿಕ್ಟ್ ಸ್ಟಾಫ್, ತಾಲ್ಲೂಕು ಸ್ಟಾಫ್‌ಗೆ ಲಕ್ಷಾನುಗಟ್ಟಲೆ ಹಣ ಖರ್ಚು ಮಾಡಲಾಗುತ್ತಿದೆ. ಹಣ ಖರ್ಚು ಆಗುವುದಕ್ಕೆ ತಕ್ಕಂತೆ ಕೆಲಸ ಮಾಡದರೆ ಬೇಕಾದಷ್ಟು ಕೆಲಸವಾಗುತ್ತದೆ. ಇದನ್ನು ಸರಿಯಾಗಿ ನೋಡಿಕೊಳ್ಳಬೇಕಾದುದು ಸರಕಾರದ ಕರ್ತವ್ಯ ಎಂದು ನಾನು ತಿಳಿದಿದ್ದೇನೆ. ಇದಕ್ಕಾಗಿ ಸರಿಯಾದ ಏರ್ಪಾಡು ಮಾಡಬೇಕು. ಬ್ಯಾಕ್‌ವರ್ಡ್ ಕ್ಲಾಸ್ ಅವರ ವಿದ್ಯಾಭ್ಯಾಸಕ್ಕಾಗಿ 54 ಲಕ್ಷ 72 ಸಾವಿರ ಚಿಲ್ಲರೆ ಹಣ ಏನು ಇಟ್ಟಿದ್ದೀರೋ ಅದು ಸಾಲದು. ಈ ಹಣದಲ್ಲಿ ಮಕ್ಕಳ ಪುಸ್ತಕಗಳನ್ನು ಕೊಂಡುಕೊಳ್ಳಬೇಕೆಂದು ಇದ್ದರೂ ಕೂಡ ಹಣ ಸಾಕಾಗುವುದಿಲ್ಲ. ಬಹು ಮಟ್ಟಿಗೆ ಹಣ ಪೋಲು ಆಗುತ್ತದೆ. ಒಂದು ಪರ್ಚೇಸ್ ಕಮಿಟೀ ಎಂದು ಮಾಡಿದ್ದಾರೆ. ಆದರೆ ತಮಗೆ ಯಾರು ಬೇಕೋ ಅವರಿಗೆ ಸಹಾಯ ಮಾಡುವುದಕ್ಕೋಸ್ಕರ ಒಂದಕ್ಕೆ ಎರಡರಷ್ಟು ಬೆಲೆ ಕೊಟ್ಟು ಕೊಂಡುಕೊಳ್ಳುತ್ತಾರೆ. ಇಂಥ ಸನ್ನಿವೇಶಗಳು ಕಡಿಮೆಯಾಗಬೇಕು. ನ್ಯಾಯವಾದ ಬೆಲೆಗೆ ಪುಸ್ತಕಗಳನ್ನು ಕೊಂಡುಕೊಳ್ಳಬೇಕು. ಬಡವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಿ ಕೊಡಬೇಕು. ಇದನ್ನು ಸರಕಾರ ಯೋಚನೆ ಮಾಡಬೇಕಾದುದು ಅಗತ್ಯ. ಹರಿಜನರ ಹೆಸರಿನಲ್ಲಿ ಮಧ್ಯವರ್ತಿಯಾಗಿರುವ ದಳ್ಳಾಳಿಗಳು ಶೋಷಣೆ ಮಾಡುವುದು ತಡೆಗಟ್ಟಬೇಕು. ಆದುದರಿಂದ ಸರಕಾರ ಇದರ ಬಗ್ಗೆ ತೀವ್ರ ಆಸಕ್ತಿ ವಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೆಲವು ಸೆಂಟರುಗಳಲ್ಲಿ ಅನಾವಶ್ಯಕವಾಗಿ ಗೊಂದಲಕ್ಕೆ ಕಾರಣವಾಗಿದೆ. ಇಂಥ ಸೆಂಟರ್ಸ್ ಇದ್ದರೆ ಅವುಗಳನ್ನು ತೆಗೆದು ಹಾಕಬೇಕು ಎಂದು ಹೇಳುತ್ತೇನೆ.

ಕೆಲವು ಸೆಂಟರ್ಸ್ ಬಗ್ಗೆ ಸ್ವಲ್ಪ ಹೇಳಬೇಕು ಎಂದು ಅನಿಸುತ್ತದೆ. ಹೆಚ್ಚಾಗಿ ಹೇಳುವುದಕ್ಕೆ ಹೋಗು ವುದಿಲ್ಲ. ಯಾಕಂದರೆ ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ, ಸರಕಾರಕ್ಕೂ ಗೊತ್ತಿದೆ. ನೀತಿ ಬಾಹಿರವಾದ, ಅವಿವೇಕದ ಪರಮಾವಧಿ ಇದ್ದರೆ ಸ್ವಲ್ಪ ವಿಮರ್ಶೆ ಮಾಡಬೇಕಾಗುತ್ತದೆ. ಬಡವರ ಉದ್ಧಾರವಾಗಬೇಕಾದರೆ, ಹಿಂದುಳಿದವರ ಏಳಿಗೆಯಾಗಬೇಕಾದರೆ ಅವರ ವಿದ್ಯಾಭ್ಯಾಸದ ಪ್ರಗತಿಯಾಗುವುದಕ್ಕೆ ಅನೇಕ ಮಾರ್ಗಗಳನ್ನು ಕಲ್ಪಿಸಿಕೊಡುವುದಕ್ಕೆ ಈ ಹಣವನ್ನು ವಿನಿಯೋಗಿಸ ಬೇಕು. ಹೋದ ವರ್ಷಕ್ಕಿಂತಾ ಸ್ವಲ್ಪ ಹೆಚ್ಚು ಹಣ ಈ ವರ್ಷ ಈ ಬಾಬಿಗೆ ಇಟ್ಟಿದ್ದೀರಿ. ಹಿಂದುಳಿದ ಜನ ಮುಂದೆ ಬರುವುದಕ್ಕೆ ಈ ಹಣ ಸಹಾಯಕವಾಗಲಾರದು. ಅವರ ಆರ್ಥಿಕ ಉನ್ನತಿ ಸಾಧನೆ ಮಾಡುವುದರ ಜೊತೆಗೆ ಅವರ ವಿದ್ಯಾಭ್ಯಾಸದ ಮಟ್ಟ ಏರಿಸುವುದಕ್ಕೆ ಖರ್ಚು ಮಾಡಿ ಎಂದು ನಾನು ಸರಕಾರಕ್ಕೆ ಸೂಚನೆ ಮಾಡಲು ಬಯಸುತ್ತೇನೆ. ಜನತೆಯ ನೈತಿಕ ಮಟ್ಟವನ್ನು ಇಳಿಸುವುದಕ್ಕೆ ಅವಕಾಶ ಕೊಡಬೇಡಿ. ಸರಕಾರಕ್ಕೆ ಕೆಟ್ಟ ಹೆಸರು ಬರುವುದು ಬೇಡ. ಹಿಂದುಳಿದವರು ಮುಂದೆ ಬಂದು ಅವರ ಉದ್ಧಾರವಾಗಬೇಕು. ಕೆಲವು ಕೇಂದ್ರಗಳು ಪ್ರಯತ್ನ ಮಾಡುತ್ತಿದ್ದರೂ ಕೂಡ ಅವು ವ್ಯವಸ್ಥಿತವಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಟೇಲರಿಂಗ್ ಶಿಕ್ಷಣ ಕೊಡುವ ಏರ್ಪಾಡು ಮಾಡಿದ್ದಾರೆ. ಆದರೆ ಹೊಲಿಗೆಯ ಮಿಷನ್ನು ಯಾರದೋ ಮನೆಯಲ್ಲಿ ಇರುತ್ತದೆ. ಯಾರದೋ ಹೆಸರಿನಲ್ಲಿ ಹಣ ಬರುತ್ತಿದ್ದು ಅದನ್ನು ಇನ್ನೊಬ್ಬರು ತಿನ್ನುತ್ತಿರುತ್ತಾರೆ. ಇಂಥ ಅನೇಕ ನಿದರ್ಶನ ಗಳು ಇವೆ, ನಾನು ನೋಡಿದ್ದೇನೆ. ಸರಕಾರ ಕೊಡತಕ್ಕಂಥ ಹಣ ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಾ ಇಲ್ಲ ಎಂಬುದು ಕಂಡು ಬಂದಿದೆ. ಈ ವರ್ಷದ ಬಜೆಟ್ಟಿನಲ್ಲಿ 1,22,800 ರೂಪಾಯಿ ಈ ಬಾಬಿಗೆ ಇಟ್ಟಿದ್ದೀರಿ. ಹಿಂದುಳಿದ ಜನಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಈ ಹಣ ಸರಿಯಾದ ರೀತಿಯಲ್ಲಿ ಖರ್ಚಾಗುವ ಹಾಗೆ ಸರಕಾರ ಏರ್ಪಾಡು ಮಾಡುವುದಕ್ಕೆ ಮುಂದೆಬರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಾಂಟ್ರಿಬ್ಯೂಷನ್ ಟು ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸಿನ ಬಗ್ಗೆ ಇಲ್ಲಿ ಸರ್ಕಾರದವರೇನು ಕೊಟ್ಟಿದ್ದಾರೆ. ಅದು ಸರಿಯಾದ ರೀತಿಯಲ್ಲಿ ಆ ಜನರಿಗೆ ವಿನಿಯೋಗವಾಗಿ ಅನುಕೂಲವನ್ನು ಒದಗಿಸುತ್ತಿಲ್ಲ. ಸೋಷಿಯಲ್ ವೆಲ್‌ಫೇರ್ ಬೋರ್ಡಿಗೆ ಸರ್ಕಾರ ದವರು ಸಹಾಯಧನವನ್ನು ಒದಗಿಸುತ್ತಿದ್ದಾರೆ. ಕಳೆದ ವರ್ಷ ಇದಕ್ಕೆ 41 ಸಾವಿರದ 500 ರೂಪಾಯಿ ಗಳನ್ನು ಒದಗಿಸಿದ್ದು, ಈ ಸಾಲಿಗೆ 43 ಸಾವಿರದ 200 ರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ ಈ ಸೋಷಿಯಲ್ ವೆಲ್‌ಫೇರ್ ಬೋರ್ಡಿನ ಒಂದು ಕಾರ್ಯವ್ಯಾಪ್ತಿಯೇನು, ಇದರ ಪರಿಮಿತಿಯೇನು ಇದನ್ನು ಯಾವ ಜನಾಂಗವನ್ನು ಮುಂದಕ್ಕೆ ತರಬೇಕೆಂದು ಸರ್ಕಾರ ಈ ಒಂದು ಅನುದಾನವನ್ನು ನೀಡಿದೆಯೋ, ಅದನ್ನು ಅನುಸರಿಸಿ ಈ ಇಲಾಖೆ ಕೆಲಸಕಾರ್ಯಗಳನ್ನು ಮಾಡುತ್ತಿಲ್ಲ. ಅದಕ್ಕಾಗಿ ನಾವು ಈ ವಿಚಾರವನ್ನು ಈಗ ಪರಿಶೀಲನೆ ಮಾಡಬೇಕಾಗಿದೆ. ಈ ಇಲಾಖೆ ಇಲ್ಲಿಯವರೆಗೂ ಆ ಜನಾಂಗಗಳಿಗೆ ಯಾವ ಒಂದು ಅನುಕೂಲವನ್ನೂ ಕಲ್ಪಿಸಿಲ್ಲ. ಸರ್ಕಾರದವರೇನು ಉದ್ದೇಶವಿಟ್ಟು ಕೊಂಡು ಇದನ್ನು ಮಾಡಿದರೋ ಆ ಉದ್ದೇಶ ಸಾಧನೆಯಾಗಿಲ್ಲ. ಇವು ಕೇವಲ ಒಂದು ವಿಹಾರ ಕೇಂದ್ರವಾಗಿ, ಕೆಲವು ಜನರಿಗೆ ಹಣ ಖರ್ಚುಮಾಡಲು ಇವು ಒಂದು ತಂಗತಕ್ಕ ಸ್ಥಳಗಳಾಗಿವೆ. ಸರ್ಕಾರದವರೇನೋ ಈ ಸಂಸ್ಥೆಗಳನ್ನು ಜನರ ಏಳಿಗೆಗಾಗಿ, ಅವರ ಉದ್ಧಾರಕ್ಕಾಗಿ ಮಾಡಿದ್ದೇವೆಂದು ಹೇಳಬಹುದು, ಆದರೆ ಅಂಥ ಅನುಕೂಲಗಳನ್ನು ಎಲ್ಲಿಯಾದರೂ ಮಾಡಿರತಕ್ಕದ್ದು ಇದ್ದರೆ ಮಾನ್ಯ ಮಂತ್ರಿಗಳು ತಿಳಿಸಲಿ, ಆಗ ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ನಾವೇನು ಒಂದು ನಿರೀಕ್ಷಣೆಯನ್ನು ಇವುಗಳ ಬಗ್ಗೆ ಇಟ್ಟುಕೊಂಡಿದ್ದೇವೋ ಅಷ್ಟು ಉತ್ತಮ ಮಟ್ಟದಲ್ಲಿ ಈ ಇಲಾಖೆ ಕೆಲಸಮಾಡಿಲ್ಲವೆಂದು ನಾನು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

2–30 P.M.

ಇನ್ನು ಹಾಸ್ಟಲುಗಳನ್ನು ಕಟ್ಟಿಸುವುದಕ್ಕೆ ಬಹಳ ಹಣವನ್ನು ವೆಚ್ಚಮಾಡುತ್ತಿದ್ದಾರೆ. ಹರಿಜನರಿಗೇ ಬೇರೆ, ಬೋಯಿಗಳು ಕೇಳಿದರೆ ಅವರಿಗೇ ಬೇರೆ, ಇನ್ನು ಬೇರೆ ಯಾವುದಾದರೂ ಹಿಂದುಳಿದ ವರ್ಗ ದವರು ಕೇಳಿದರೆ ಅವರಿಗೇ ಬೇರೆ ಹೀಗೆ ಹಾಸ್ಟಲುಗಳನ್ನು ಕಟ್ಟಿಸುವುದಕ್ಕೆ ಹೊರಟಿದ್ದಾರೆ. ಹೀಗೆ ಮಾಡುತ್ತಾ ಹೋದರೆ ಸಮಾಜದಲ್ಲಿರತಕ್ಕ ಅಂತರ ಹಾಗೂ ಏರು ಪೇರುಗಳನ್ನು ಕಡಿಮೆ ಮಾಡಿದಂ ತಾಗುತ್ತದೆಯೇ ಎಂದು ಕೇಳುತ್ತೇನೆ ? ಇಂದು ನಮ್ಮ ಸರ್ಕಾರ ಜಾತ್ಯಾತೀತ ಸಮಾಜವನ್ನು ರಚನೆ ಮಾಡುತ್ತಿದ್ದೇವೆ, ವರ್ಗರಹಿತ ಸಮಾಜವನ್ನು ರಚನೆ ಮಾಡುತ್ತಿದ್ದೇವೆ, ಎಂದು ಹೇಳುತ್ತಾ ಮುಂದೆ ನಾವು ರಾಮ ರಾಜ್ಯವನ್ನು ನಿರ್ಮಾಣಮಾಡುವುದಾಗಿ ಸರ್ಕಾರದವರೇನು ಒಂದು ಸೋಗು, ಕೂಗನ್ನು ಹಾಕುತ್ತಿದ್ದಾರೋ ಅದನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಿದೆಯೇ ಎಂದು ಕೇಳು ತ್ತೇನೆ! ಸರ್ಕಾರದವರ ಇಂದಿನ ಕಾರ್ಯ ಕ್ರಮಗಳೇನಿವೆ ಇವುಗಳಿಂದ ಅದನ್ನು ಸಾಧಿಸಲು ಖಂಡಿತಾ ಸಾಧ್ಯವಿಲ್ಲ. ಸರ್ಕಾರದವರು ಈ ದಿವಸ ಹಾಸ್ಟಲುಗಳನ್ನು ಕಟ್ಟಲು ಮಾಡುತ್ತಿರುವ ಖರ್ಚು ಮುಂದೆ ದೇಶಕ್ಕೆ ಇದೇ ದೊಡ್ಡ ಕಂಟಕವಾಗಿ ಉಳಿಯುತ್ತದೆ. ಸರ್ಕಾರದವರು ಏನೇ ಮಾಡಲಿ ಇಂದ್ಯ

(ಶ್ರೀ ಬಿ. ಬೈರಪ್ಪಾಜಿ)

ಸಮಾಜದಲ್ಲಿ ನಾವು ಕಾಣುತ್ತಿರುವ ತಾರತಮ್ಯಗಳೂ ಏರುಪೇರುಗಳೂ ಇದ್ದೇ ಇರುತ್ತವೆ. ಸರ್ಕಾರ ಕಾಣಬೇಕೆಂದು ಇಟ್ಟಿಸಿರತಕ್ಕ ಈ ರಾಮರಾಜ್ಯದ ಕನಸು ನನಸಾಗುವುದಿಲ್ಲ, ಇದು ಖಂಡಿತ. ಅದಕ್ಕಾಗಿ ನಾನು ಹೇಳತಕ್ಕದ್ದೇನೆಂದರೆ—ಎಲ್ಲಾ ಜನಾಂಗಗಳಿಗೂ ಸರ್ಕಾರದವರು ಒಂದೇ ಹಾಸ್ಟಲನ್ನು ಕಟ್ಟಿಸಿ ಅಲ್ಲಿ ಅಭ್ಯಾಸ ಮಾಡತಕ್ಕ ಮಕ್ಕಳೇನಿವೆ ಅವು ತಮ್ಮ ಬಾಲಾರಭ್ಯದಿಂದಲೇ ಈ ಜಾತಿ ಮತಗಳ ಸೋಂಕನ್ನು ಬಿಟ್ಟು ಅವರೆಲ್ಲರೂ ಹೊಂದಾವಣಿಕೆಯಿಂದ ಕೂಡಿ ಬಾಳತಕ್ಕದ್ದನ್ನು ಕಲಿಯುವಂತೆ ಮಾಡಬೇಕು. ಇಂಥ ಒಂದು ಜವಾಬ್ದಾರಿಯನ್ನು ಈ ಸಂಸ್ಥೆಯಮೇಲೆ ಹಾಕಬೇಕು. ಹಾಗೆ ಮಾಡದೆ ಇಂದು ಅನುಸರಿಸುತ್ತಿರುವ ಮಾರ್ಗದಲ್ಲೇ ಮುಂದುವರಿದಲ್ಲಿ ಇದರಿಂದ ಜನಾಂಗಕ್ಕೇನೂ ಉಪಕಾರವಾಗುವುದಿಲ್ಲ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಇಂಥ ಹಾಸ್ಟಲುಗಳನ್ನು ತೆರೆಯುವುದಕ್ಕಿಂತ ಇವುಗಳನ್ನು ತೆರೆಯದಿರುವುದೇ ಲೇಸೆಂದು ಹೇಳುತ್ತೇನೆ.

ಇನ್ನು ಹಿಂದುಳಿದ ವರ್ಗಗಳಿಗೆ ಕೊಡುತ್ತಿರುವ ಸ್ಕಾಲರ್‌ಷಿಪ್ಪುಗಳ ವಿಚಾರವಾಗಿ ನಾನು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈಗ ಸರ್ಕಾರದವರು ಹರಿಜನರಿಗೆ ಪ್ರಾಥಮಿಕ, ಮಾಧ್ಯಮಿಕ, ಹೈಸ್ಕೂಲು ಮತ್ತು ಕಾಲೇಜುಗಳವರೆಗೂ ಸ್ಕಾಲರ್‌ಷಿಪ್ಪುಗಳನ್ನು ಕೊಡುತ್ತಿದ್ದಾರೆ. ಈ ಸ್ಕಾಲರ್‌ಷಿಪ್ಪುಗಳನ್ನು ಹಂಚತಕ್ಕ ಬಗ್ಗೆ ಸರ್ಕಾರದವರು ಕಮಿಟಿಗಳನ್ನು ಮಾಡಿದ್ದಾರೆ. ಬೆಂಗಳೂರಿನಲ್ಲಿ ಈ ಜಿಲ್ಲೆಯಲ್ಲಿ ಓದತಕ್ಕ ಹರಿಜನ ವಿದ್ಯಾರ್ಥಿಗಳಬಗ್ಗೆ ಡಿ. ಡಿ. ಪಿ. ಐ. ಅವರು ಒಂದು ಕಮಿಟಿಯನ್ನು ಮಾಡಿದ್ದಾರೆ. ಆ ಕಮಿಟಿಯವರು ಇಲ್ಲಿ ಬೆಂಗಳೂರಿನಲ್ಲಿ ಕುಳಿತುಕೊಂಡು ಇವುಗಳನ್ನು ಹಂಚುತ್ತಿದ್ದರೆ ಅವರಿಗೆ ಜಿಲ್ಲೆಯಲ್ಲಿರತಕ್ಕ ಹುಡುಗರಲ್ಲಿ ಯಾರು ಬಡವರು ಎನ್ನತಕ್ಕದ್ದು ಹೇಗೆ ಗೊತ್ತಾಗುತ್ತದೆ? ಇಂಥವರೇ ಬಡವರು ಎಂಬುದನ್ನು ಎಷ್ಟು ಜನ ಆ ಕಮಿಟಿಯಲ್ಲಿರತಕ್ಕವರು ಅರಿತಿದ್ದಾರೆ? ಇನ್ನು ಕೆಲವು ಸ್ಕೂಲುಗಳಿಗೆ ಆಯಾಯ ಸ್ಥಳದಲ್ಲೇ ಹಂಚತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ. ಹರಿಜನರೊಬ್ಬರಿಗೆ ಮಾತ್ರ ಇಂಥ ಒಂದು ವ್ಯವಸ್ಥೆಯನ್ನೇಕೆ ಮಾಡಿದ್ದಾರೋ ಗೊತ್ತಾಗಲಿಲ್ಲ. ಈಗಲಾದರೂ ಈ ವ್ಯವಸ್ಥೆಯನ್ನು ಕೂಡಲೆ ತಪ್ಪಿಸಿ ಅರ್ಹರಾದವರಿಗೆ ಅದು ದೊರೆಯುವಂತೆ ಮಾಡತಕ್ಕ ಬಗ್ಗೆ ಆಯಾಯ ಸ್ಥಳದಲ್ಲೇ ಆಯಾಯ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಇನ್ನಿಬ್ಬರು ಸದಸ್ಯರುಗಳು ಇರುವಂತೆ ಒಂದು ಕಮಿಟಿಯನ್ನು ಮಾಡಿ ಸ್ಕಾಲರ್‌ಷಿಪ್ಪುಗಳನ್ನು ಹಂಚತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈ ಸೂಚನೆಯನ್ನು ಸರ್ಕಾರದವರು ಪರಿಶೀಲಿಸಬೇಕು.

ಇನ್ನು ಹರಿಜನರ ಮನೆಗಳ ವ್ಯವಸ್ಥೆಗೆ ಬಂದರೆ: ಹಿಂದೆ ಇವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಮುಫತ್ತಾಗಿ 400 ರೂಪಾಯಿಗಳನ್ನು ಕೊಡುತ್ತಿದ್ದರು. ಅಂಥ ಒಂದು ವ್ಯವಸ್ಥೆ ಇತ್ತು. ಆದರೆ ಈ ದಿವಸ ಅವರಿಗೆ ಈ ಮನೆಗಳನ್ನೊದಗಿಸಲು 1 ಸಾವಿರದಿಂದ 3 ಸಾವಿರದವರೆಗೂ ಹಣವನ್ನು ಕೊಡತಕ್ಕ ವ್ಯವಸ್ಥೆಮಾಡಿದ್ದಾರೆ. ಆದರೆ ಇದು ಒಂದು ಸ್ಕೀಮಾಗಿ ಉಳಿದಿದೆಯೇ ವಿನಾ ಇದು ಕಾರ್ಯರೂಪಕ್ಕಂತೂ ಬಂದಂತೆ ಕಾಣುವುದಿಲ್ಲ. ಇದನ್ನು ಜಾರಿಗೆ ತರತಕ್ಕ ಬಗ್ಗೆ ಪ್ರತಿಜಿಲ್ಲೆಯಲ್ಲೂ ಈಗ 4–5 ಸೊಸೈಟಿಗಳನ್ನು ಮಾಡಲಾಗಿದೆ. ಈ ಸೊಸೈಟಿಗಳು ಆ ಮನೆ ಮಠಗಳಿಲ್ಲದೆ ಗುಡಿಸಲುಗಳಲ್ಲಿ ವಾಸಮಾಡತಕ್ಕ ಜನರಿಗೆ ಎಂದು ಮನೆಗಳನ್ನು ಒದಗಿಸುತ್ತವೆಯೋ ನನಗಂತೂ ತಿಳಿಯದು. ಇವರು ಕಟ್ಟಿಕೊಡತಕ್ಕ ಮನೆಯಲ್ಲಿ ಇವರು ತಮ್ಮ ಮಕ್ಕಳು ಮರಿಗಳ ಸಮೇತ ಬಾಳಲು ಇನ್ನೆಷ್ಟು ವರ್ಷಗಳು ಬೇಕೋ ಗೊತ್ತಿಲ್ಲ. ಇದರ ಬಗ್ಗೆ ನಾನು ಸೂಚಿಸುವುದೇನೆಂದರೆ: ಸರ್ಕಾರದವರು ಅವರಿಗೆ 3 ಸಾವಿರ ರೂಪಾಯಿಗಳನ್ನು ಕೊಡದಿದ್ದರೂ ಚಿಂತೆಯಿಲ್ಲ, ಪ್ರತಿಯೊಂದು ಸಹಕಾರ ಸಂಘವೂ ಇವರಿಗೆ ಸಕಾಲಕ್ಕೆ ಒಂದು ಸಾವಿರ ರೂಪಾಯಿಗಳನ್ನಾದರೂ ಒದಗಿಸುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಸೂಚನೆ ಮಾಡಬಯಸುತ್ತೇನೆ. ಇಷ್ಟು ನೆರವನ್ನಾದರೂ ಸರ್ಕಾರದವರು ಅಗತ್ಯವಾಗಿ ಕೊಡಲೇಬೇಕು.

ಇನ್ನು ಸೋಷಿಯಲ್‌ವೆಲ್‌ಫೇರ್ ಅಧಿಕಾರಿಗಳನ್ನು ಹಿಂದೆ ಜಿಲ್ಲಾ ಮಟ್ಟದಲ್ಲೂ ಮತ್ತು ತಾಲ್ಲೂಕ್ ಮಟ್ಟದಲ್ಲೂ ಇಟ್ಟಿದ್ದುದನ್ನು ಸ್ವಲ್ಪ ದಿನಗಳ ಹಿಂದೆ ಜಿಲ್ಲೆಯ ಮಟ್ಟದಲ್ಲಿದ್ದವರನ್ನು ತೆಗೆದುಹಾಕಿ ತಾಲ್ಲೂಕ್ ಮಟ್ಟದಲ್ಲಿ ಮಾತ್ರ ಇಟ್ಟುಕೊಂಡಿದ್ದರು. ಈಗ ಮತ್ತೆ ಜಿಲ್ಲಾಮಟ್ಟದಲ್ಲೂ ಆ ಅಧಿಕಾರಿಗಳನ್ನಿಡಲು ಅರ್ಜಿಗಳನ್ನು ಕಾಲ್‌ಫಾರ್ ಮಾಡಿದ್ದಾರೆಂದು ತಿಳಿಯುತ್ತಿದ್ದೇನೆ. ಆದರೆ ಈಗ ಇವರ ಔಚಿತ್ಯವೇನೆಂಬುದನ್ನು ನಾನು ಕೇಳಬೇಕಾಗಿದೆ. ಆ ಅಧಿಕಾರಿಗಳಿಲ್ಲದ್ದರಿಂದ ಕೆಲಸಗಳೇನಾದರೂ ಹಾಗೆ ನಿಂತಿವೆಯೇ? ಏನು ಎಂಬುದನ್ನು ನೋಡುವುದಾದರೆ—ಈ ಅಧಿಕಾರಿಗಳು ಇಲ್ಲದ ಕಾರಣ ಅನೇಕ ಗ್ರಾಮಾಂತರ ಪ್ರದೇಶದಲ್ಲಿ ನಿವೇಶನಗಳನ್ನು ವಿಂಗಡಿಸತಕ್ಕ ಕೆಲಸ ಹಾಗೆ ನಿಂತು ಹೋಗಿತ್ತು ಎಂಬುದಾಗಿ ತಿಳಿದು ಬಂದಿದೆ. ಅನೇಕ ತಾಲ್ಲೂಕುಗಳಲ್ಲಿ ಇಲ್ಲಿಗೆ ಹತ್ತಾರು ವರ್ಷಗಳಿಂದ ಕೆಲವು ತಾಲ್ಲೂಕುಗಳಲ್ಲಿ ಹರಿಜನರು ಮನೆಗಳನ್ನು ಕಟ್ಟಿಕೊಳ್ಳಲು ನಿವೇಶನಗಳನ್ನು

ವಿಂಗಡಿಸಿ ಕೊಡಬೇಕೆಂದು ಒತ್ತಾಯಮಾಡುತ್ತಿದ್ದರೂ ಅದಿನ್ನೂ ಆಗಿಲ್ಲ. ಹೀಗೆ ಆ ಕೆಲಸ ಹತ್ತಾರು ತಾಲ್ಲೂಕುಗಳಲ್ಲಿ ನಿಂತಿರತಕ್ಕ ಸಾವಿರಾರು ಉದಾಹರಣೆಗಳಿವೆ. ಇಲ್ಲಿ ಸರ್ಕಾರದವರು ಬಾಯಿನಲ್ಲಿ ಹೇಳತಕ್ಕದ್ದನ್ನು ಅಲ್ಲಿ ಕಾರ್ಯರೂಪಕ್ಕೆ ತಾರದೇ ವಿನಾ ಇದು ಸಾಧ್ಯವಿಲ್ಲ. ಹರಿಜನರ ಉದ್ಧಾರ ಹೀಗೆ ಬರಿಯ ಭಾಷಣಗಳ ಸುರಿಮಳೆಯಿಂದ ಆಗುವುದಿಲ್ಲ, ಅವರ ಕಷ್ಟ ನಿವಾರಣೆಯಾಗುವುದಿಲ್ಲ, ಆದ್ದರಿಂದ ತಾವು ಇಲ್ಲಿ ಹೇಳತಕ್ಕದ್ದು ಭಾಷಣದಲ್ಲೇ ಪರ್ಯವಸಾನವಾಗಬಾರದು ಎಂದು ಹೇಳುತ್ತೇನೆ. ಇಷ್ಟನ್ನು ಹೇಳಿ ನನಗೆ ಈ ನಾಲ್ಕು ಮಾತುಗಳನ್ನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸುಳ್ಯ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರುವ ಡಿಮ್ಯಾಂಡ್ ನಂಬರ್ 27 ಕ್ಕೆ 2,42,21,000 ರೂಪಾಯಿಗಳನ್ನು ಹಂಚಲಾಗಿದೆ. ಇದರ ಬಗ್ಗೆ ಸಂಪೂರ್ಣವಾದ ಸಮರ್ಥನೆಯನ್ನು ಕೊಡುತ್ತೇನೆ. ಈ ಡಿಮ್ಯಾಂಡಿನ ಸಬ್‌ಹೆಡ್ (ಇ) ವೆಲ್‌ಫೇರ್ ಆಫ್ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್ ಅಂಡ ಅದರ್ ಬ್ಯಾಕ್‌ವರ್ಡ್ ಕ್ಲಾಸಸ್ ವಿಷಯವಾಗಿ ಕುರಿತು ಒಂದೆರಡು ಮಾತನ್ನು ಆಡಬೇಕೆಂದು ಅಪೇಕ್ಷಿಸುತ್ತೇನೆ. ಒಟ್ಟಿನಲ್ಲಿ ಈ ಹೆಡ್‌ಗೆ 1,58,65,300 ರೂಪಾಯಿಗಳನ್ನು ಒದಗಿಸಿದ್ದೀರಿ. ಇದರಲ್ಲಿ ಹೇಳುವುದಾದರೆ ಇತ್ತೀಚಿನ ಕೆಲವು ವರ್ಷಗಳಲ್ಲಿ ಅದರಲ್ಲೂ ಈಗ ಒಂದೆರಡು ವರ್ಷಗಳಲ್ಲಿ ಅಂತೂ ಶಿಬ್ಬಂದಿ ವರ್ಗ ವ್ಯವಸ್ಥಿತವಾದ ರೂಪದಲ್ಲಿ ಎಲ್ಲಾ ಆಗಿದೆ, ಎಂದು ಹೇಳುವುದಕ್ಕೆ ಸಂತೋಷವಾಗುತ್ತದೆ. ಇನ್ನೂ ವ್ಯವಸ್ಥಿತವಾದ ರೂಪದಲ್ಲಿ ಆಗುವುದಕ್ಕೆ ಏರ್ಪಾಡು ಆದೀತು ಎಂಬ ನಿರೀಕ್ಷೆ ಇದೆ. ಒಬ್ಬರು ಡೈರೆಕ್ಟರು, ಅಸಿಸ್ಟೆಂಟ್ ಡೈರೆಕ್ಟರುಗಳು 3 ಜನ, ಸ್ಪೆಷಲ್ ಆಫೀಸರು ಒಬ್ಬರು, ಅಕೌಂಟ್ಸ್ ಆಫೀಸರು ಒಬ್ಬರು, ಮತ್ತು ವಿಮನ್ ವೆಲ್‌ಫೇರ್ ಆಫೀಸರು ಒಬ್ಬರು ರಾಜ್ಯಮಟ್ಟದಲ್ಲಿ ಹೀಗೆ ವ್ಯವಸ್ಥಿತವಾದ ರೂಪದಲ್ಲಿ ಶಿಬ್ಬಂದಿ ವರ್ಗ ಇದೆ ಆದರೂ ಇದರಲ್ಲಿ ಸ್ವಲ್ಪ ತೊಂದರೆಯಾಗಿದ ಎಂದು ನನಗೆ ತಿಳಿದು ಬಂದಿದೆ. ರಾಜ್ಯದ ಅರ್ಧಾಂಶ ಜನಸಂಖ್ಯೆ ಇರತಕ್ಕ ಹೆಂಗಸರಿಗೆ ಸಂಬಂದಪಟ್ಟಂತೆ ಒಬ್ಬ ವಿಮೆನ್ ವೆಲ್‌ಫೇರ್ ಆಫೀಸರು ಇದ್ದಾರೆ. ಅಂದರೆ ಮಹಿಳೆಯರ ಪರವಾಗಿ ಕೆಲಸ ನಿರ್ವಹಿಸುತ್ತಾ ಇದ್ದಾರೆ. ಅವರು ರಾಜ್ಯ ಮಟ್ಟದ ಆಫೀಸರು. ಅವರ ಸರ್ವಿಸ್ ಯೋಗ್ಯತೆ, ಕ್ವಾಲಿಫಿಕೇಷನ್ ನೋಡಿದರೆ ಅವರು ಪದವೀಧರ ರಾಗಿದ್ದಾರೆ. ಆದಾಗ್ಯೂ ಸಹ ಅವರಿಗೆ ಅಸಿಸ್ಟೆಂಟ್ ಡೈರೆಕ್ಟರಿಗೆ ಕೊಟ್ಟ ಸ್ಟೇಟಸ್ ಕೊಡದೇ ಇರುವುದು ವಿಷಾದದ ಸಂಗತಿ. ಅದರಲ್ಲೂ ಮಹಿಳಾ ಸಚಿವರು ಇರುವಾಗ ಅವರ ಗಮನಕ್ಕೆ ಇದು ಬರದೇ ಇರುವುದು ಎಂದರೆ ಇದು ಬಹಳ ವಿಷಾದ ಪೂರ್ವಕವಾದ ಸಂಗತಿ ಎಂದು ತಿಳಿಸಬೇಕಾಗಿದೆ.

ಜಿಲ್ಲಾ ಮಟ್ಟದಲ್ಲಿ ಡಿಸ್ಟ್ರಿಕ್ಟ್ ವೆಲ್‌ಫೇರ್ ಆಫೀಸರರ ನೇಮಕವಾಗುತ್ತಾ ಇದೆಯಷ್ಟೆ, ತಾಲ್ಲೂಕಿನಲ್ಲಿರತಕ್ಕ ಇನ್‌ಸ್ಪೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಎನ್ನುವವರು ಮತ್ತು ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರು ಇವರುಗಳನ್ನು ಟ್ರೈನಿಂಗ್ ಇಲ್ಲದೇ ಕೆಲಸಕ್ಕೆ ನೇಮಕ ಮಾಡುವುದು ಬೇಡ ಎಂದು ಖಡಾ ಖಂಡಿತವಾಗಿ ಹೇಳುತ್ತೇನೆ. ಮೂಕ ಜನರು, ಪ್ರಾಣಿಗಳೋಪಾದಿಯಲ್ಲಿರತಕ್ಕ ಗುಡ್ಡ ಗಾಡು ಜನರ ಪರಿಸ್ಥಿತಿಯನ್ನು ಚೆನ್ನಾಗಿ ಅರಿತು ಅವರಿಗೆ ಭೋದನೆಯನ್ನು ಮಾಡಿ, ಅವರನ್ನು ನಾಗರೀಕರನ್ನಾಗಿ ಮಾಡಬೇಕಾದರೆ ಅವರ ಮೇಲ್ವಿಚಾರಣೆಯನ್ನು ನೋಡಿಕೊಳ್ಳತಕ್ಕ ಜನರು ತರಬೇತಿಯನ್ನು ಹೊಂದಿರಬೇಕು. ಅದರಲ್ಲೂ ಕೂಡ ಪ್ರಾಮುಖ್ಯವಾಗಿ ಸೋಷಿಯಲ್ ವೆಲ್‌ಫೇರ್ ಫಾರ್ ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್ ಆಫೀಸರ್‌ಗಳಿಗೆ ಕನಿಷ್ಟ ಪಕ್ಷ 10 ತಿಂಗಳ ಟ್ರೈನಿಂಗ್ ಆದರೂ ಕೊಡಬೇಕು. ಮತ್ತು ಅವರಿಗೆ ಸರ್ವೆ ಟ್ರೈನಿಂಗ್ ಕೊಟ್ಟು ಹರಿಜನರು, ಗಿರಿಜನರು ಯಾರಿದ್ದಾರೆ ಅವರಿಗೆ ಭೂಮಿಯನ್ನು ಕೊಡುವಂತಹ ಅರ್ಥಾತ್ ವಿತರಣೆ ಮಾಡುವಂತಹ ಕೆಲಸವನ್ನು ಅವರಿಗೆ ಒಪ್ಪಿಸಿ ಅವರ ಸಂಪೂರ್ಣ ಪರಿಪಾಠ ಇರುವಂತೆ ಮಾಡಬೇಕು. ಇಲ್ಲವೇ ಇದ್ದರೆ ಈ ಬಡ ಜನರಿಗೆ ಭೂಮಿ ಸಿಕ್ಕುವುದಕ್ಕೆ ಅನಾನುಕೂಲ ಪರಿಸ್ಥಿತಿಯನ್ನು ಕಲ್ಪಿಸಿದಂತೆ ಆಗುತ್ತದೆ. ಸೋಷಿಯಲ್ ವೆಲ್‌ಫೇರ್ ಆಫೀಸರರ ಕಾರ್ಯಕ್ಷೇತ್ರ ದೊಡ್ಡದು, ಇಡೀ ತಾಲ್ಲೂಕು ಅವರ ಕಾರ್ಯಕ್ಷೇತ್ರವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಬಹಳ ದೊಡ್ಡ ತಾಲ್ಲೂಕುಗಳು ಇವೆ. ಸುಮಾರು 40-50 ಮೈಲಿ ದೂರ ಬಸ್‌ನಲ್ಲಿ ಪ್ರಯಾಣ ಮಾಡಿ 8-10 ಮೈಲಿ ಕಾಲು ನಡಗೆಯಲ್ಲಿ ಹೋಗಬೇಕಾಗುತ್ತದೆ. ಆಯಾದಿನ ಹೋಗಿ ಅಂದೇ ಬರಲಿಕ್ಕೆ ಆಗುವುದಿಲ್ಲ ಹೋದದ್ದು ಆಯಿತು, ಬಂದದ್ದು ಆಯಿತು ಎಂದರೆ ಹೋದ ಕೆಲಸ ಆಗಲಿಕ್ಕೆ ಸಾಧ್ಯವಿಲ್ಲ. ಅದಕ್ಕೇ ಅವರು ಅಲ್ಲಿಗೆ ಹೋಗಿ ಒಂದೆರಡು ದಿನ ಹರಿಜನ ಗಿರಿಜನರ ಒಟ್ಟಿಗೆ ಇದ್ದು ಅವರ ನಡೆ, ನುಡಿ ಇತ್ಯಾದಿಗಳನ್ನೆಲ್ಲಾ ಅಭ್ಯಾಸ ಮಾಡಿಕೊಂಡು ಅವರ ವಿಶ್ವಾಸಗಳಿಸಿ ಕೆಲಸ ಮಾಡಬೇಕಾದರೆ ಆ ಆಫೀಸರು ಅವರೊಡನೆ ಒಟ್ಟಿಗೆ ಇರಬೇಕಾಗುತ್ತದೆ. ಅಷ್ಟುದೂರ ಹೋಗುವಾಗ ಅವರಿಗೆ ಫಿಕ್ಸೆಡ್ ಟಿ.ಎ. 30 ರೂಪಾಯಿಗಳಷ್ಟು ಕೊಟ್ಟರೆ ಅದು ಎಷ್ಟಕ್ಕೂ ಸಾಲದು. ದೊಡ್ಡ ದೊಡ್ಡ ಕ್ಷೇತ್ರಗಳಲ್ಲಿ ಸಂಚಾರ ಮಾಡಬೇಕಾದರೆ, ಅದರಲ್ಲೂ ಒಳಭಾಗದ ಪ್ರದೇಶಗಳಿಗೆ ಹೋಗಿ ಅವರು ಬಡ ಜನರ ಹತ್ತಿರ ಸಂಪರ್ಕವನ್ನು

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಬೆಳಸಬೇಕಾದರೆ ಇತರ ಆಫೀಸರುಗಳಂತೆ ಜೀಪ್‌ನಲ್ಲಿ ಹೋಗಿ ಮೀಟಿಂಗ್ ಮಾಡಿ ಜನರಿಗೆ ತಿಳುವಳಿಕೆಯನ್ನು ಕೊಡಬೇಕಾದರೆ ಅವರಿಗೆ ಇನ್ನೂ ಹೆಚ್ಚಿನ ಸೌಲತ್ತನ್ನು ಒದಗಿಸಬೇಕು. ಅವರಿಗೆ ಹೆಚ್ಚಿಗೆ ಸ್ಪೆಷಲ್ ಅಲೋಯನ್ಸ್‌ನ್ನು ಕೊಡಬೇಕಾದ್ದು ಅತ್ಯಂತ ಅವಶ್ಯಕ ಎಂದು ಹೇಳುತ್ತೇನೆ.

ಶ್ರೀಮಾನ್ ಬೈರಪ್ಪಾಜಿಯವರು ಒಬ್ಬ ಇನ್‌ಸ್ಪೆಕ್ಟರು 10-20 ಸಾವಿರ ರೂಪಾಯಿ ಹಂಚಿಕೆ ಮಾಡಲು ಅನಾವಶ್ಯಕ ಎಂದು ಹೇಳಿದರು ಅವರ ಉದ್ದೇಶ ಅದು ಅಲ್ಲ ಎಂದು ಅಂದುಕೊಳ್ಳುತ್ತೇನೆ. ಪ್ರತ್ಯಕ್ಷವಾಗಿ 10-20 ಸಾವಿರ ರೂಪಾಯಿ ಹಂಚುತ್ತಾರೆ ಎಂದು ಕಂಡರೂ ಕೂಡ ಅದರ ಒಳ ಅರ್ಥ, ಉದ್ದೇಶವೇ ಬೇರೆ ಇದೆ. ಏಕೆಂದರೆ ದೀನ, ದಲಿತರಿಗೆ ಅಥವಾ ಬಡಜನರು, ಹರಿಜನರು ಗಿರಿಜನರು ಯಾರಿದ್ದಾರೆ ಅವರಲ್ಲಿ ಸುಧಾರಣೆಯ ಜಾಗೃತಿಯನ್ನುಂಟು ಮಾಡಲಿಕ್ಕೆ ಅವರಲ್ಲಿ ಜೀವನ ಸುಧಾರಣೆಯಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಲಿಕ್ಕೆ, ಎಲ್ಲಾ ವಿಧವಾದ ಸಂಸ್ಕೃತಿ ಸಾಮಾಜಿಕವಾಗಿ, ಆರ್ಥಿಕವಾಗಿ ಯಾವುದೇ ಒಂದು ವಿಧದ ಪ್ರಗತಿಯನ್ನು ಸಾಧಿಸುವುದಕ್ಕೆ, ಈ ಹಣ ಇರುವಂತಹದಾಗಿದೆ. ಬೈರಪ್ಪಾಜಿಯವರು ಹೇಳುವ ಪ್ರಕಾರ ಈ ಉದ್ದೇಶ ನೆರವೇರಿಲ್ಲ ಎಂದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬೇರೆ ಇಲಾಖೆಗಳಲ್ಲಿ ಹಾಗೆ ಇದೆ ಹೀಗೆ ಇದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ಇಲಾಖೆಗೆ ಮಾತ್ರ ಇದರಲ್ಲಿ ಹೆಚ್ಚಿನ ಆಸಕ್ತಿ ಇರುವವರನ್ನೇ ಆರಿಸಿ ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರುಗಳನ್ನು ನೇಮಕ ಮಾಡಿದರೆ ಖರ್ಚು ಮಾಡತಕ್ಕ ಹಣದಿಂದ ಪ್ರತಿಫಲ ದೊರೆಯುತ್ತದೆಯೇ ಹೊರತು ಇಲ್ಲದೇ ಇದ್ದರೆ ಅನಾವಶ್ಯಕವಾಗಿ ಹಣ ಖರ್ಚಾಗಿ ಆ ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆ.

ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ಸ್ಟೇಟ್ ಷೆಡ್ಯೂಲ್ಡ್ ಟ್ರೈಬ್ಸ್ ಅಡ್ವೈಸರಿ ಕಮಿಟಿ ಎಂಬುದನ್ನು ಮಾಡಿದ್ದೀರಿ. ಅದು ರಚನೆಯಾಗಿ ಸುಮಾರು ಮೂರು ವರ್ಷ ಆಯಿತು, ಆ ಕಮಿಟಿ ವರ್ಷಕ್ಕೆ ಕನಿಷ್ಟ ಪಕ್ಷ ಎರಡು ಸಾರಿಯಾದರೂ ಕೊಡಬೇಕೆಂದು ಅವರ ಉದ್ದೇಶದಲ್ಲಿ ಹೇಳಿದೆ. 3 ವರ್ಷದಲ್ಲಿ 3 ಮೀಟಿಂಗ್‌ಗಳನ್ನು ಕರೆದಿದ್ದಾರೆ ಅದೂ ಸಹ ಒಂದು ದಸರಾ ಟೈಂನಲ್ಲಿ—ಆಗ ದೊಡ್ಡ ಸಮಾರಂಭ—ಮೀಟಿಂಗಿಗೆ ಗೌಣರೂಪವಾದ ಸ್ಥಾನವನ್ನು ಕೊಟ್ಟು ಒಂದು ದಿನ ಸ್ವಲ್ಪ ಸಮಯದಲ್ಲಿ ಮೀಟಿಂಗ್ ಮಾಡಿದ್ದಾರೆ. ಆ ಸಮಯದಲ್ಲಿ ಎಲ್ಲಾ ವಿಚಾರಗಳನ್ನೂ ವಿಮರ್ಶೆ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಇನ್ನೊಂದು ಸಂದರ್ಭ ಎಂದರೆ ಆಲ್ ಇಂಡಿಯಾ ಷೆಡ್ಯೂಲ್ಡ್ ಟ್ರೈಬ್ಸ್ ಕಾನ್‌ಫರೆನ್ಸ್ ಆದಾಗ ಒಂದು ಮೀಟಿಂಗ್‌ನ್ನು ಕರೆದರು. ಇನ್ನೊಂದು ಮೀಟಿಂಗ್‌ನ್ನು ಮಂಗಳೂರಿನಲ್ಲಿ ಕರೆದಿದ್ದರು. ಇದರಿಂದ ಹೆಚ್ಚಿನ ಲಾಭ ಆಗಲಿಲ್ಲ ಎಂದು ನಾನು ತಿಳಿಯುತ್ತೇನೆ. ಅದು ಹೇಗಾದರೂ ಇರಲಿ. ಈ ಸಮಿತಿಯ ಸಭೆಗೆ ಇಲಾಖೆಯ ಸೆಕ್ರೆಟರಿಯವರೇ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದರು. ಆಫೀಸಿನಲ್ಲೂ ಅವರೇ, ಸಲಹಾ ಸಮಿತಿಯಲ್ಲೂ ಅವರೇ ಇದ್ದರೆ ಸಲಹೆ ಸೂಚನೆಗಳನ್ನು ಕೊಡಲಿಕ್ಕೆ ಅನಾನುಕೂಲ, ಅವರು ಆಫೀಸಿನಲ್ಲಿ ಏನು ಹೇಳುತ್ತಾರೋ ಅದನ್ನೇ ಇಲ್ಲೂ ಹೇಳಬೇಕಾಗುತ್ತದೆ. ಆದ್ದರಿಂದ ಇತರರನ್ನು ಸಭೆಯ ಅಧ್ಯಕ್ಷಸ್ಥಾನಕ್ಕೆ ನೇಮಕ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಸರ್ವೇಸಾಮಾನ್ಯವಾಗಿ ಎಲ್ಲಾ ಕಮಿಟಿಗಳಲ್ಲೂ ಉಪಾಧ್ಯಕ್ಷರು ಇರುತ್ತಾರೆ, ದುರಾದೃಷ್ಟವಶಾತ್ ಈ ಕಮಿಟಿಯಲ್ಲಿ ಉಪಾಧ್ಯಕ್ಷರೇ ಇಲ್ಲ. ಮಾನ್ಯ ಸಚಿವರು ಸಂಚಾರ ಹೋದಾಗ ಅಥವಾ ಇತರ ಕೆಲಸಗಳ ನಿಮಿತ್ತ ಅದರಲ್ಲಿ ಭಾಗವಹಿಸಲಿಕ್ಕೆ ಅನಾನುಕೂಲ ಪರಿಸ್ಥಿತಿ ಉಂಟಾಗುತ್ತಾ ಇತ್ತು. ಉಪಾಧ್ಯಕ್ಷರನ್ನು ನೇಮಕ ಮಾಡಿದ್ದರೆ ಹೆಚ್ಚು ಅನುಕೂಲವಾಗುತ್ತಾ ಇತ್ತು. ಆದ್ದರಿಂದ ಉಪಾಧ್ಯಕ್ಷರನ್ನು ನೇಮಕ ಮಾಡಬೇಕು. ನಮ್ಮ ಮೈಸೂರು ರಾಜ್ಯದಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್ 2 ಲಕ್ಷ ಜನ, ನೊಮ್ಯಾಡಿಕ್ ಟ್ರೈಬ್ಸ್ ನಾಲ್ಕೂವರೆ ಲಕ್ಷ ಜನ, ಡೀನೋಟಿಫೈಡ್ ಟ್ರೈಬ್ಸ್ ಆರೂವರೆ ಲಕ್ಷ ಜನ ಮತ್ತು ಹಾಲಕ್ಕಿ, ಸಿದ್ದಿ, ಕಚ್ಚೇಗೌಡ, ಕುಡುಬಿ ಈ ರೀತಿ ಕೆಲವು ಗುಡ್ಡಗಾಡಿನ ಜನರು ಒಂದು ಲಕ್ಷ ಹೀಗೆ ಒಟ್ಟು 14 ಲಕ್ಷ ಜನರು ಇದ್ದಾರೆ. ಈ ವರ್ಗಕ್ಕೆಲ್ಲಾ ಬೇರೆ ಬೇರೆ ಕಮಿಟಿಯನ್ನು ಮಾಡುವುದಕ್ಕೆ ಬದಲಾಗಿ ಅವರೆಲ್ಲರಿಗೂ ಒಂದೇ ಕಮಿಟಿಗಳನ್ನು ಮಾಡಿದರೆ ಒಳ್ಳೆಯದು ಎಂದು ನಾನು ಈ ಮೂಲಕ ಸೂಚನೆ ಮಾಡಲಿಕ್ಕೆ ಅಪೇಕ್ಷೆಪಡುತ್ತೇನೆ. ಹಾಗೆ ಮಾಡಿ 3 ಜನ ಉಪಾಧ್ಯಕ್ಷರನ್ನು ನೇಮಕ ಮಾಡಬೇಕು. ಡೀನೋಟಿಫೈಡ್ ಟ್ರೈಬ್ಸ್ ಕಮಿಟಿಗೆ ಒಬ್ಬರು ನೋಮ್ಯಾಡಿಕ್ ಟ್ರೈಬ್ಸ್ ಕಮಿಟಿಗೆ ಒಬ್ಬರು, ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಒಬ್ಬರು ಈ ರೀತಿ ಮೂರು ಜನ ಉಪಾಧ್ಯಕ್ಷರನ್ನು ನೇಮಕ ಮಾಡಿ—ವರ್ಷದಲ್ಲಿ ಈಗಿರುವಂತೆ ಎರಡು ಸಾರಿ ಸೇರಬೇಕೆಂದು ರೂಲ್‌ನಲ್ಲಿ ಇದೆ— ಅದಕ್ಕೆ ಬದಲಾಗಿ ಕನಿಷ್ಠಪಕ್ಷ ವರ್ಷಕ್ಕೆ ನಾಲ್ಕು ಮೀಟಿಂಗ್‌ಗಳನ್ನಾದರೂ ಮಾಡ ಬೇಕೆಂದು ನಿಗದಿ ಮಾಡ ಬೇಕೆಂದು ಸೂಚನೆ ಮಾಡುತ್ತೇನೆ. ಗಿರಿಜನರಿಗಿರುವ ಕಷ್ಟಸುಖಗಳು, ಆಗುಹೋಗುಗಳು ತಿಳಿಯುವಂತೆ ಅವಕಾಶ ಮಾಡಿದರೆ ಮಾಡಿದ ಕೆಲಸ ಸಾರ್ಥಕವಾಗುತ್ತದೆ. ಮತ್ತು ಈಗ ಷೆಡ್ಯೂಲ್ಡ್ ಟ್ರೈಬ್ಸ್ ಲಿಸ್ಟಿನಲ್ಲಿರುವ ಯಾವುದೇ

ಒಂದು ವರ್ಗವನ್ನೂ ಕೂಡ ತೆಗೆದುಹಾಕಬಾರದು. ತೆಗೆದು ಹಾಕಿದರೆ ಅವರು ದುಸ್ಥಿತಿಗೆ ಬರುತ್ತಾರೆ. ಇದನ್ನು ಹೇಳುವುದಕ್ಕೆ ಕಾರಣ ಅವರಲ್ಲಿ ಕೆಲವು ವರ್ಗಗಳನ್ನು ತೆಗೆದುಹಾಕಬೇಕೆಂದು ಶಿಫಾರ್ಸುಮಾಡಿರುವುದಾಗಿ ತಿಳಿಯಬಂತು. ಆದರೆ ಸತ್ಯವಂತರಾದ ಮಂತ್ರಿಮಂಡಲದವರು ಇದನ್ನು ಪರಾಮರ್ಶೆಮಾಡಿ ಲಿಸ್ಟಿನಲ್ಲಿರುವವರನ್ನು ತೆಗೆದುಹಾಕಿ ಅವರನ್ನು ನಿಕೃಷ್ಟ ಸ್ಥಿತಿಗೆ ತರದೆ ಅವರನ್ನು ಉದ್ಧಾರಮಾಡಬೇಕು.

ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಮತ್ತು ಇತರ ಹಿಂದುಳಿದ ಪಂಗಡಗಳವರಿಗೆ 4 ಕೋಟಿ 40 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಆದರೆ 1962ರಲ್ಲಿ ತುರ್ತುಪರಿಸ್ಥಿತಿಯ ಕಾರಣದಿಂದ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಖೋತಾಮಾಡಿದ್ದಾರೆ ಎಂದು ತಿಳಿದುಬಂದಿದೆ. ಹಾಗೆ ಖೋತಾ ಮಾಡಿರುವುದನ್ನು ಅವಶ್ಯಕವಾಗಿ ಖರ್ಚುಮಾಡಬೇಕು ಎಂದು ಒತ್ತಾಯ ಪೂರ್ವಕವಾಗಿ ಮತ್ತು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಬಹುಶಃ ಯೋಜನೆ ತಯಾರಿಸುವ ಅಧಿಕಾರಿಗಳು ಅಥವಾ ಸರಕಾರದವರ ಲೋಪದಿಂದ ಹೀಗಾಗುವುದಿಲ್ಲ. ಆ ಹಣವನ್ನು ಅಗ್ರಿಕಲ್ಚರಲ್ ಕಾಲೋನಿಗಳು, ಅಗ್ರಿಕಲ್ಚರಲ್ ಕೋ ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳು ಮುಂತಾದುವುಗಳನ್ನು ಮಾಡುವುದರ ಮೂಲಕ ಖರ್ಚುಮಾಡಿ ಜನರಿಗೆ ಹೆಚ್ಚು ಭೂಮಿ ಸಿಕ್ಕಿ ಆಹಾರದ ಉತ್ಪತ್ತಿ ಹೆಚ್ಚು ಮಾಡಲು ಅವಕಾಶ ಕಲ್ಪಿಸಬೇಕು.

ಇನ್ನು ಹಾಸ್ಟಲುಗಳ ವಿಚಾರ : ಹೆಚ್ಚು ಹಾಸ್ಟೆಲುಗಳನ್ನು ಮತ್ತು ರೆಸಿಡೆನ್‌ಷಿಯಲ್ ಸ್ಕೂಲುಗಳನ್ನು ತೆರೆಯಬೇಕು. ಶ್ರೀ ಬೈರಪ್ಪಾಜಿಯವರು ಹೇಳಿದಂತೆ ಬೇರೆಬೇರೆ ಕೋಮುಗಳಿಗೆ ಬೇರೆ ಬೇರೆ ಹಾಸ್ಟಲುಗಳನ್ನು ತೆರೆಯಬಾರದು, ಮಿಕ್ಸೆಡ್ ಹಾಸ್ಟೆಲುಗಳನ್ನು ಸ್ಥಾಪಿಸಬೇಕು, ಅವರು ಹೇಳಿದ್ದನ್ನು ನಾನು ಸ್ವಾಗತಿಸುತ್ತೇನೆ. ಹಾಗೆ ಮಾಡುವುದರಿಂದ ತೊಂದರೆ ಇಲ್ಲ, ಹಾಗೆ ಮಾಡಿದರೆ ಎಲ್ಲ ಜನಾಂಗದವರೂ ಕಲೆತು ವಿಚಾರವಿನಿಮಯ ಮಾಡಿಕೊಂಡು ಕಲಿಯಲು ಹೆಚ್ಚು ಅವಕಾಶವಾಗುತ್ತದೆ. ಆದುದರಿಂದ ಮಿಶ್ರಜಾತಿ ಹಾಸ್ಟೆಲಿರುವುದು ಅನುಕೂಲ. ಈಗ ಹಾಸ್ಟೆಲುಗಳು ಕೇವಲ ಸರಕಾರದ ಮೂಲಕ ನಡೆಯುತ್ತಿವೆ. ಅವನ್ನು ಖಾಸಗಿ ಸಂಸ್ಥೆಗಳ ಮೂಲಕ ನಡೆಸುವುದಕ್ಕೆ ಪ್ರೋತ್ಸಾಹ ಕೊಡಬೇಕು. ಹಾಗೆ ಮಾಡಿದರೆ ಸ್ಪರ್ಧಾ ರೀತಿಯಲ್ಲಿ ಕೆಲಸಮಾಡಲು ಅವಕಾಶವಾಗುತ್ತದೆ. ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುತ್ತೇನೆ. ಹಾಸ್ಟೆಲುಗಳಿಗೆ ಕಟ್ಟಡವಿಲ್ಲವೆಂದು ಗಲಾಟೆಮಾಡುವುದು ಬೇಡ, ಇಂದು ಮಕ್ಕಳಿಗೆ ವಿದ್ಯೆ ಕಲಿಸುವುದು ಮುಖ್ಯವಾದುದು. ಹಾಗಿರುವಾಗ ಕಟ್ಟಡವಿದಿದ್ದರೂ ಪರವಾಗಿಲ್ಲ, ಹಂಗಾಮಿ ಕಟ್ಟಡ, ಹುಲ್ಲಿನಛಾವಣಿ, ಅಥವಾ ಇತರ ಸಾಮಾನ್ಯ ಕಟ್ಟಡಗಳಲ್ಲಿ ಬಾಡಿಗೆಕಟ್ಟಡಗಳಲ್ಲಿ ಎಲ್ಲಾದರೂ ಅವನ್ನು ನಡೆಸಬಹುದು. ಹರಿಜನ ಗಿರಿಜನರಲ್ಲಿ ಶೇಕಡ ತೊಂಬತ್ತೊಂಬತ್ತು ಜನರು ಬಡವರೇ ಇರುವುದರಿಂದ ಅವರು ಮನೆಗಳಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶವಿಲ್ಲ. ಆದುದರಿಂದ ಹಾಸ್ಟಲುಗಳನ್ನು ಹೆಚ್ಚಾಗಿ ತೆರೆಯಬೇಕು. ಹಾಗೆ ತೆರೆದರೆ ಎಲ್ಲರೂ ವಿದ್ಯಾಭ್ಯಾಸ ಮಾಡಬಹುದು. ಈಗ ಹಾಸ್ಟಲುಗಳಲ್ಲಿ ಊಟ ಮತ್ತು ಇತರ ಖರ್ಚುಗಳಿಗೆ ಕೊಡುವ 18 ರೂಪಾಯಿ ಏತಕ್ಕೂ ಸಾಕಾಗುವುದಿಲ್ಲ. ಹೈಸ್ಕೂಲು ವಿದ್ಯಾರ್ಥಿಗಳು ಊಟ ಮಾಡುವುದು ಹೆಚ್ಚು, ಅವರು ಬೆಳೆಯುವ ವಯಸ್ಸಿನವರಾಗಿರುತ್ತಾರೆ, ಆದುದರಿಂದ ಅವರಿಗೆ ಹೆಚ್ಚು ಆಹಾರ ಬೇಕು. ಈಗ ಅವರಿಗಾಗಿ ಕೊಡುವ 18 ರೂಪಾಯಿ ಸಾಲದು, ಸಾಧ್ಯವಿರುವಷ್ಟು ಹೆಚ್ಚು ಹಣ ಕೊಡಬೇಕು. 25 ರೂಪಾಯಾದರೂ ಕೊಡಬೇಕೆಂಬುದು ನನ್ನ ಅಭಿಪ್ರಾಯ.

ಇನ್ನು ಹರಿಜನರು ಮತ್ತು ಗಿರಿಜನರ ಸುಧಾರಣೆಗೆ ಯೋಗ್ಯರಾದ ಪ್ರಚಾರಕರನ್ನು ಆರಿಸಿ ಖಾಸಗಿ ಸಂಸ್ಥೆಗಳ ಮೂಲಕ ಅಥವಾ ಇತರ ಸಂಸ್ಥೆಗಳ ಮೂಲಕ ಕೆಲಸಮಾಡುವಂತೆ ವ್ಯವಸ್ಥೆ ಮಾಡಬೇಕು. ಬರೀ ಸರಕಾರ ಮಾಡಿದರೆ ಮಿತಿಯಷ್ಟೇ ಅಲ್ಲದೆ ಹೆಚ್ಚು ಮಾಡುವುದಕ್ಕಾಗುವುದಿಲ್ಲ. ಉದಾಹರಣೆಗೆ ಈಗ ಹಾಸ್ಟೆಲುಗಳಲ್ಲಿ ಕೊಡುತ್ತಿರುವ 18 ರೂಪಾಯಿ ಸಾಕಾಗುವುದಿಲ್ಲ, ಮಧ್ಯಾಹ್ನ ಮತ್ತು ರಾತ್ರಿ ಊಟಕ್ಕೆ ಅದು ಸಾಕಾಗುತ್ತದೆ. ಆದರೆ ಶಾಲೆ ಬಿಟ್ಟವೇಳೆ ಬೇರೆ ಏನಾದರೂ ತಿಂಡಿ ತಿನ್ನಲು ಸಾಕಾಗುವುದಿಲ್ಲ, ಅದಕ್ಕೆ ಒಂದು ರೂಪಾಯಾದರೂ ಬೇಕು, ಮಕ್ಕಳ ರಕ್ಷಕರನ್ನು ಆಫಿಸರು ಕೇಳಿದರೆ ಕೊಡಲು ಸಾಧ್ಯವಿಲ್ಲವೆಂದು ಹೇಳುತ್ತಿರುವುದಾಗಿ ತಿಳಿದುಬಂದಿದೆ. ಆದುದರಿಂದ ಖಾಸಗಿಯವರು ಅಥವಾ ಸಂಸ್ಥೆಗಳು ಹಾಸ್ಟಲುಗಳನ್ನು ನಡೆಸಿದರೆ ಈ ತೊಂದರೆ ತಪ್ಪುತ್ತದೆ. ಸರಕಾರನಡೆಸುವ ಕಡೆ ಆಫೀಸರರು 1 ರೂಪಾಯಿ ಹೆಚ್ಚು ವಸೂಲು ಮಾಡಲು ಸಾಧ್ಯವಿಲ್ಲ ಆದರೆ ಖಾಸಗಿಯವರು ತಂದೆತಾಯಿಗಳು ಕೊಡುವಂತೆ ಕೇಳಬಹುದು. ಮಕ್ಕಳಿಗೆ ಊಟ, ಬಟ್ಟೆ, ವಿದ್ಯಾರ್ಥಿವೇತನ ಸರಕಾರ ಕೊಟ್ಟರೆ ಕೇವಲ ಒಂದು ರೂಪಾಯನ್ನು ಎಂಥ ಬಡವರಾದರೂ ಕೊಡಲು ಹಿಂದೆಗೆಯುವುದಿಲ್ಲ. ಹೀಗೆಮಾಡಿ ಆ ಮೂಲಕ ತಿಂಗಳಿಗೆ ಸುಮಾರು 50 ವಿದ್ಯಾರ್ಥಿಗಳಿಂದ 50 ರೂಪಾಯಿ ಬಂದರೆ ಮುಂದೆ ಮಕ್ಕಳಿಗೆ ತಿಂಡಿ ಕೊಡಬಹುದು. ಇಲ್ಲದಿದ್ದರೆ ಮಕ್ಕಳಿಗೆ ಸಂಜೆ ತಿಂಡಿಯಿಲ್ಲದೆ ಕಷ್ಟವಾಗುತ್ತದೆ.

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ವಿದ್ಯಾರ್ಥಿವೇತನದ ವಿಚಾರ ಹೇಳುವುದಕ್ಕೆ ಬೇಸರ ಬರುತ್ತದೆ. ಪ್ರತಿಸಲವೂ ಹೇಳಿದ್ದೇ ಹೇಳಬೇಕಾಗಿದೆ. ಸಂಬಂಧಪಟ್ಟ ಆಫೀಸರುಗಳು ಈ ವರ್ಷ ಕಾರಣಾಂತರದಿಂದ ವಿಳಂಬವಾಯ್ತು, ಬರುವ ವರ್ಷ ವೇಳೆಗೆ ಸರಿಯಾಗಿ ಕೊಡುತ್ತೇವೆ ಎಂದು ಸ್ಟೇಟ್ ಲೆವಲ್‌ನಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಹೇಳುವುದುಂಟು. ಈ ವರ್ಷ ಸಹ ಹೆಚ್ಚು ವಿಳಂಬವಾಗಿದೆ. ಇದೇ ಮಾರ್ಚಿ 12ರ ವರೆಗೂ ಬಂದಿರಲಿಲ್ಲ, ಅಲ್ಲಿಂದೀಚೆಗೆ ಬಂದಿರುವುದು ನನಗೆ ಗೊತ್ತಿಲ್ಲ ಜಿಲ್ಲೆಗೆ ಕಳುಹಿಸಿದ್ದೇವೆ, ಅಲ್ಲಿನವರು ಕೊಟ್ಟಿಲ್ಲ ಎಂದು ಸ್ಟೇಟ್ ಲೆವಲ್ ಆಫೀಸರು ಹೇಳಬಹುದು. ಆದರೆ ಹೀಗೆ ಹೇಳಿದರೆ ಅದರಿಂದ ಕರ್ತವ್ಯ ಮಾಡಿದಂತಾಗುವುದಿಲ್ಲ. ಹೆಚ್ಚು ಮುತವರ್ಜಿ ವಹಿಸಿ ಸಕಾಲದಲ್ಲಿ ದೊರೆಯುವಂತೆ ಮಾಡಬೇಕು. ನನಗೆ ಗೊತ್ತಿರುವಂತೆ ಒಬ್ಬ ಮೆಡಿಕಲ್ ವಿದ್ಯಾರ್ಥಿನಿಗೆ ಇದೇ ಮಾರ್ಚಿ 20 ರಂದು ವಿದ್ಯಾರ್ಥಿವೇತನ ಕೊಡಲಾಗಿದೆ. ಹೀಗೆ ನಿಧಾನವಾಗಿ ದೊರೆತರೆ ಅದರಿಂದ ಸಾಕಾದಷ್ಟು ಅನುಕೂಲವಾಗುವುದಿಲ್ಲ. ವೇಳೆಗೆ ಸರಿಯಾಗಿ ಸಿಕ್ಕದಿದ್ದರೆ ನಿರಾಶೆಯಾಗುತ್ತದೆ. ಇತರ ಕೆಲಸಗಳ ಬಗ್ಗೆ ಆಡಿಟ್ ಮಾಡುವಹಾಗೆ ಏನಾದರೂ ವ್ಯವಸ್ಥೆಮಾಡಿ ಸಕಾಲದಲ್ಲಿ ದೊರೆಯುವಹಾಗೆ ವ್ಯವಸ್ಥೆ ಮಾಡಬೇಕು.

ಇನ್ನು ಆಲ್ ಇಂಡಿಯಾ ಕಮಿಷನರು 1958-59ನೆಯ ಸಾಲಿನಲ್ಲಿ ತಯಾರಿಸಿರುವ ವರದಿಯ 77ನೆಯ ಪುಟದಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಭೂಮಿ ಹಂಚಿಕೆಗೆ ಒಂದು ವಿಶೇಷ ಯೋಜನೆ ಮಾಡಬೇಕೆಂದು ಒತ್ತಾಯಮಾಡಿದ್ದಾರೆ. ಇದೇ ಕಳೆದ 64ನೇ ಇಸವಿ ಡಿಸೆಂಬರಿನಲ್ಲಿ ಪುತ್ತೂರು ತಾಲ್ಲೂಕಿನ ಬಡಿಗನ್ನೂರು ಮುಂತಾದ ಗ್ರಾಮಗಳ ಸರ್ವೆಮಾಡಿದಾಗ 70 ಕುಟುಂಬಗಳಲ್ಲಿ 413 ಜನರಿದ್ದಾರೆ, ಅವರಲ್ಲಿ ಕೇವಲ 5 ಕುಟುಂಬಗಳಿಗೆ ಜಮೀನಿದೆ. ಅದರ ಪ್ರಕಾರ ಸರಾಸರಿ 3 ಎಕರೆ ಜಮೀನಿದ್ದಂತಾಯ್ತು. ಆಲ್-ಇಂಡಿಯಾ ಲೆವಲ್‌ನಲ್ಲಿ 6 ಎಕರೆ ಇದೆ 5.2 ಜನರಿರುವ ಕುಟುಂಬಗಳಿಗೆ 6.5 ಎಕರೆ ಜಮೀನಿದೆ. ನಮ್ಮಲ್ಲಿ 6 ಜನರಿರುವ ಕುಟುಂಬಕ್ಕೆ 3.10 ಎಕರೆ ಜಮೀನಿದೆ. ಇದನ್ನು ನೋಡಿದರೆ ಭೂಮಿ ಸಿಕ್ಕುವುದು ಕಷ್ಟವಾಗಿದೆ ಎಂದು ಗೊತ್ತಾಗುತ್ತದೆ. ಎಲ್ಲಕ್ಕೂ ಸ್ಪೆಷಲ್ ಯೋಜನೆ ಮಾಡುವಾಗಲೂ ಪರಿಸ್ಥಿತಿ ಹೀಗಿದೆ. ನಮ್ಮಲ್ಲಿ ಬಂದ ಡೆಪ್ಯುಟಿ ಕಮಿಷನರು ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರಿಗೆ ಭೂಮಿ ಹಂಚುವ ಕೆಲಸ ಕೊಟ್ಟರು. ಅವರು ರೆವೆನ್ಯೂ ಅಧಿಕಾರಿಗಳ ಮಾತನ್ನು ಮೀರಿ ಭೂಮಿ ಹಂಚುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳಿಗೇ ಅವಕಾಶ ಕೊಡುವುದಿಲ್ಲ ಮತ್ತೆ ಇವರಿಗೆಲ್ಲಿಯ ಸಾಧ್ಯ? ಅಲ್ಲದೆ ಅವರಿಗೆ ಮಾಹಿತಿ ಇರುವುದಿಲ್ಲ ಹೀಗಾಗಿ ಕಷ್ಟವಾಗುತ್ತಿದೆ. ಈ ಜನರಿಗೆ ಭೂಮಿಯನ್ನು ಒದಗಿಸಲಿಕ್ಕೆ ಒಂದು ಸ್ಪೆಷಲ್ ಸ್ಕೀಂ ತಯಾರಿಸಬೇಕು ಎಂದು ನನ್ನ ವಿನಂತಿ.

3-00 P.M.

ಕಟ್ಟಡಗಳಿಗಾಗಿ ಸಹಕಾರ ಸಂಘಗಳಿಗೆ ಹಣ ಕೊಡುತ್ತೇವೆಂದು ಎಷ್ಟೋ ಸಮಯದಿಂದ ಹೇಳುತ್ತ ಬರುತ್ತಿದ್ದಾರೆ. ಇನ್ನಾದರೂ ಸಹಕಾರ ಸಂಘಗಳಿಗೆ ಹಣವನ್ನು ಒದಗಿಸುವ ಹಾಗೆ ಮಾಡಬೇಕು ಎಂದು ಬೇಡಿಕೊಳ್ಳುತ್ತೇನೆ.

ಅಂಕಿ ಅಂಶಗಳ ಇಲಾಖೆಯ ಬಗ್ಗೆ ಒಂದು ಮಾತು. ಅವರು ಅಂಕಿ ಅಂಶಗಳನ್ನು ತಯಾರಿಸುವಾಗ ವಾಸ್ತವಾಂಶಕ್ಕೆ ಹೊಂದಿರಬೇಕು. ಅಂಕಿ ಅಂಶಗಳು ಒತ್ತಟ್ಟಿಗೆ, ಕ್ರಿಯಾತ್ಮಕವಾಗಿರುವುದು ಒತ್ತಟ್ಟಿಗೆ ಆಗುತ್ತಿದೆ. ಇಲಾಖೆಯವರು ಒದಗಿಸುವ ಅಂಕಿ ಅಂಶಗಳು ಸರಿಯಾಗಿದ್ದರೆ ನಮ್ಮ ಆಹಾರ ಪರಿಸ್ಥಿತಿಯಲ್ಲಿ ಇಷ್ಟು ಬವಣೆ ಬರಬೇಕಾದ್ದಿರಲಿಲ್ಲ. ಆದುದರಿಂದ ಈ ಇಲಾಖೆಯರು ವಾಸ್ತವಾಂಶಕ್ಕೆ ಹೊಂದಿರುವಂಥ ಅಂಕಿ ಅಂಶಗಳನ್ನು ಕೊಡಬೇಕೆಂದು ಹೇಳಿ ನನ್ನ ಮಾತಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲ ಸಾಲೆನ್ನ (ಮೂಡಬಿದ್ರೆ).—ಸ್ವಾಮಿ, ಅಧ್ಯಕ್ಷರೇ, ಸಮಾಜಕಲ್ಯಾಣ ಅಭಿವೃದ್ಧಿ ರಾಷ್ಟ್ರದ ಹಲವು ಕಲ್ಯಾಣಾಭಿವೃದ್ಧಿ ವಿಷಯಗಳಿಗಿಂತಲೂ ಕೂಡ ಬಹಳ ಪ್ರಾಮುಖ್ಯವಾದ ವಿಚಾರ. ಹಿಂದುಳಿದ ರಾಷ್ಟ್ರ ಎಂದು ಯಾವುದು ಇದೆಯೋ ಅಲ್ಲಿ ಯಾವುದಾದರೂ ಒಂದು ಹಿಂದುಳಿದ ಜನ ವಿಭಾಗ ತಮ್ಮ ರಾಷ್ಟ್ರೀಯ ರಕ್ಷಣೆಗಾಗಿಯೇ ಏರ್ಪಟ್ಟ ಸಮಾಜ ಕಲ್ಯಾಣ ಇಲಾಖೆಯ ನೆರವನ್ನು ಪಡೆಯತಕ್ಕದ್ದು ಎಂದರೆ ಅದು ಬಹಳ ಹಿಂದುಳಿದ ದೀನದಲಿತ ಪಂಗಡ. ಈ ಪಂಗಡದ ಸುಧಾರಣೆ ಸಾಮಾಜಿಕ, ಆರ್ಥಿಕವಾಗಿ ಬೆಳೆದು ಈ ಪಂಗಡದ ಜನರ ಸಾಮಾಜಿಕ ಮಟ್ಟವು ಉಳಿದ ರಾಷ್ಟ್ರದ ಇತರ ಜನರ ಸಾಮಾಜಿಕ ಮಟ್ಟಕ್ಕೆ ಎಂದು ಬರಲಿಲ್ಲವೋ ಅಂದಿನ ತನಕ ನಮ್ಮ ರಾಜ್ಯದಲ್ಲಾಗಲೀ, ರಾಷ್ಟ್ರದಲ್ಲಾಗಲೀ ಪರಿಪೂರ್ಣತೆಯ ಸ್ವಾತಂತ್ರ್ಯವನ್ನು ಪಡೆದಿದ್ದೇವೆ ಎಂದು ಹೆಮ್ಮೆಯಿಂದ ಹೇಳು

ವಂಥ ಕಾಲ ನಮಗೆ ಒದಗಲಾರದು. ಇದನ್ನು ದೇಶದಲ್ಲೆಲ್ಲಾ ಪ್ರತಿಯೊಬ್ಬ ಭಾರತೀಯನೂ ಕೂಡ ಉನ್ನತ ಜವಾಬುದಾರಿಕೆಯಿಂದ ಲಕ್ಷ್ಯದಲ್ಲಿಟ್ಟುಕೊಳ್ಳತಕ್ಕದ್ದು. ಈ ರೀತಿಯ ಧ್ಯೇಯ ಧೋರಣೆಗಳಿಂದಾಗಿ ಪ್ರತಿಯೊಂದು ಸರ್ಕಾರದ ಸಚಿವ ಖಾತೆಗಳೂ, ಇಲಾಖಾಧಿಕಾರಿಗಳೂ, ಸಾರ್ವಜನಿಕ ಕಾರ್ಯಕರ್ತರೂ, ರಾಜಕೀಯ ಮುಖಂಡರೂ ಎಲ್ಲರೂ ಕೂಡ ಈ ಉದ್ದೇಶವನ್ನಿಟ್ಟು, ಸಮಾಜದಲ್ಲಿ ಅಸ್ಪೃಶ್ಯರು, ಅಸಮರ್ಥರು, ಅಶಕ್ತರು ಎಂಬ ಈ ಕಳಂಕವನ್ನು ಪರಿಪೂರ್ಣವಾಗಿ ಹೋಗಲಾಡಿಸುವುದಕ್ಕೆ ಒಮ್ಮನಸ್ಸಿನ ಪ್ರಯತ್ನ ಮಾಡುವುದು ಅವಶ್ಯಕ.

ಈಗ ನಮ್ಮ ಮುಂದೆ ಈ ಅಧಿವೇಶನದಲ್ಲಿ ಯಥಾಪ್ರಕಾರ ಪ್ರತಿ ವರ್ಷ ಕೊಡಲಾಗುತ್ತಿರುವಂತೆಯೇ ಬಹು ದೊಡ್ಡ ಮೊತ್ತವನ್ನು ಸರಕಾರವು ಈ ಬೇಡಿಕೆಯಲ್ಲಿ ಕೇಳಿದೆ. ಅದನ್ನು ಮಂಜೂರು ಮಾಡಿ ಕೊಡುವ ವಿಚಾರದಲ್ಲಿ ಈ ವರ್ಷವೂ ಪ್ರತಿ ವರ್ಷವೂ ಮಂಜೂರು ಮಾಡುವ ಹಾಗೆಯೇ ಯಥಾಪ್ರಕಾರ ಮಾಡುತ್ತ ಇದ್ದೇವೆ. ಆದರೆ ಇದರ ಸದ್ವಿನಿಯೋಗವಾಗುತ್ತದೆಯೆ ಇಲ್ಲವೇ ಅಥವ ಖರ್ಚು ಹೇಗೆ ಆಗುತ್ತದೆ, ಇದರಿಂದ ಏನು ಪರಿಣಾಮ ಅಬಲರಾದ ರಾಷ್ಟ್ರರಕ್ಷಣೆಯಲ್ಲಿರುವ ಈ ಜನತೆಯಲ್ಲಿ ಆಗುತ್ತದೆ ಎನ್ನುವುದನ್ನು ಅತೀ ಸೂಕ್ಷ್ಮವಾಗಿ ಎಚ್ಚರಿಕೆಯಿಂದ ಎದುರು ನೋಡುತ್ತಾ ಕೂಲಂಕಷವಾಗಿ ಆಗಾಗ್ಯೆ ಪರಿಶೀಲನೆ ಮಾಡಿ ಅಭ್ಯಾಸ ಮಾಡಿದ ನನ್ನ ಕೆಲವು ಯೋಗ್ಯ ಸಲಹೆಗಳನ್ನು ಈ ಸರ್ಕಾರದ ಮುಂದೆ ಇಡುವುದು ಅಗತ್ಯವಿದೆ.

ಈಗಾಗಲೇ ಅನೇಕ ಸದಸ್ಯರು ಈ ಸಭೆಯಲ್ಲಿ ಬಜೆಟ್ ಚರ್ಚೆಯಲ್ಲಿ ಅಥವ ಪ್ರಶ್ನೋತ್ತರ ಕಾಲದಲ್ಲಿ ಮಾತನಾಡಿದಾಗ ವಿವರಗಳನ್ನೆಲ್ಲ ಸರಿಯಾಗಿ ಹೇಳಿದ್ದಾರೆ. ಪ್ರಥಮವಾಗಿ ಸರಕಾರವು ಕೇಳುವ ಈಗಿರುವ ಮೊತ್ತದಲ್ಲಿ ದೊಡ್ಡ ಅಂಶ ಕೇವಲ ಕಲ್ಯಾಣಾಭಿವೃದ್ಧಿ ಖಾತೆಯ ಸಿಬ್ಬಂದಿಯ ವೆಚ್ಚಕ್ಕಾಗಿಯೇ ಹೋಗುತ್ತಿದೆ. ಇದರ ಸಿಬ್ಬಂದಿಯಲ್ಲಿ ಡೈರೆಕ್ಟರಿದ್ದಾರೆ, ಹಲವು ಮಂದಿ ಡೆಪ್ಯುಟಿ ಡೈರೆಕ್ಟರಿದ್ದಾರೆ, ಮಹಿಳಾ ವೆಲ್‌ಫೇರ್ ಆಫೀಸರ್ ಉದ್ಯೋಗಾಧಿಕಾರಿ, ಮತ್ತು ಇತರೆ ಹಲವು ಮಂದಿ ಅಧಿಕಾರಿಗಳಿದ್ದಾರೆ. ಈ ಅಧಿಕಾರಿಗಳ ಸಂಖ್ಯೆ ಖಾತೆಯಲ್ಲಿ ಎಷ್ಟು ಜಾಸ್ತಿ ಏರುತ್ತಾ ಇದೆಯೋ ಅಷ್ಟೂ ಆ ಇಲಾಖೆಯಲ್ಲಿ ಒಂದು ತರಹ ಅಸ್ಪಷ್ಟತೆಯ ಗೊಂದಲವೇ ಬೆಳೆದು ಅವ್ಯವಸ್ಥೆಗಳೇ ಬೆಳೆದು ಜಾಸ್ತಿಯಾದಂತೆ ನಿತ್ಯ ಕಾಣುತ್ತದೆ. ಆ ಇಲಾಖೆಯ ಆಫೀಸಿನಲ್ಲಿ ಹೋಗುವಂಥ ಸಾಮಾನ್ಯ ಜನರಿಗೆ 5 ಮಾಡಿ ಮೇಲೇರಿ ಅಲ್ಲಿ ಯಾರನ್ನು ಕಾಣಬೇಕು, ಯಾವ ವಿಷಯವನ್ನು ತಿಳಿಯಬೇಕು, ಅವರೆಲ್ಲಿದ್ದಾರೆ, ಏನು ವಿಚಾರ ಮಾಡಬೇಕು. ತನಗೆ ಇನ್ನೇನು ಮಾರ್ಗ ಎನ್ನುವ ದೊಡ್ಡ ಸಮಸ್ಯೆಗಳನ್ನು ಎದುರಿಸಬೇಕಾದ ಪ್ರಸಂಗಗಳೇ ಹೆಚ್ಚು. ಹೀಗೆ ತಮ್ಮ ತಾಪತ್ರಯಗಳನ್ನು ಕಟ್ಟಿಕೊಂಡು ಯಾವ ಸಮಸ್ಯೆಯನ್ನು ಹಿಡಿದುಕೊಂಡು ದಲಿತ ಜನರ ಪರವಾಗಿ ನಾವು ಹೋಗುತ್ತೇವೆಯೋ ಆ ವಿಚಾರದಲ್ಲಿ ವಿಮೋಚನೆ ದೊರಕದೆ ಅದಕ್ಕೆ ಪರಿಹಾರ ದೊರಕದೆ ನನ್ನಂಥವರಿಗೇ ಬೇಕಾದಷ್ಟು ಕಷ್ಟವಾಗುವಾಗ ಸಾಮಾನ್ಯ ಬಡ ಹಿಂದುಳಿದ ನಿಮ್ನವರ್ಗದ ಒಬ್ಬ ವ್ಯಕ್ತಿಯ ಪಾಡೇನು ಎಂದು ಸರ್ಕಾರದ ಮುಂದೆ ನಾನಾದರೋ ಕೇಳುತ್ತೇನೆ. ಈ ಅಧಿಕಾರಿಗಳು ಜೀಪ್‌ಗಳಲ್ಲಿ, ವ್ಯಾನ್‌ಗಳಲ್ಲಿ ಸಂಚಾರ ಮಾಡಿ ಪಟ್ಟಣಗಳಲ್ಲಿ ನಿಮ್ನವರ್ಗದವರಿಗೆ ಏರ್ಪಡಿಸಿರುವ ಹಾಸ್ಟಲುಗಳನ್ನು, ಶಾಲೆಗಳನ್ನು ಮಹಿಳಾ ಕೇಂದ್ರಗಳನ್ನು ಸಂದರ್ಶಿಸಿ ಬಂದ ಕೂಡಲೇ ಸಮಾಜ ಕಲ್ಯಾಣ ಪೂರ್ತಿಯಾಗಲಿಲ್ಲ. ಅವರಿಗೆ ಸರಿಯಾದ ಕಾರ್ಯಕ್ರಮನ್ನು, ಯೋಜಿತವಾದ ಕಾರ್ಯಕ್ರಮಗಳನ್ನು ಹಾಕಿ ಕೊಡಬೇಕಾದ್ದು ಸರ್ಕಾರದ ಕರ್ತವ್ಯ.

1925ರಲ್ಲಿ ಮದ್ರಾಸ್ ಸಂಸ್ಥಾನದೊಳಗೆ ಲೇಬರ್ ಇಲಾಖೆ ಮೂಲಕ ಲೇಬರ್ ಶಾಲೆಗಳು, ಹಾಸ್ಟಲುಗಳು ಈ ರೀತಿ ವಿದ್ಯಾಸಂಸ್ಥೆಗಳನ್ನು ಮಾಡುವಂಥ ವ್ಯವಸ್ಥೆ ಆ ಕಾಲದಲ್ಲಿ ಇತ್ತು. ಸ್ವಾತಂತ್ರ್ಯ ಬಂದ ನಂತರ ಹರಿಜನ ಹಾಸ್ಟಲ್‌ಗಳು, ಹರಿಜನ ಶಾಲೆಗಳು, ಹರಿಜನ ಕಲ್ಯಾಣ ಇಲಾಖೆ ಎಂದು ಮಾರ್ಪಾಟಾಯಿತು. ಆದರೆ ಅಂದು ಯಾವ ಸ್ಥಿತಿಯಲ್ಲಿ ಈ ಸಂಸ್ಥೆಗಳು ನಡೆಯುತ್ತಿದ್ದುವೋ ಅದೇ ವಾತಾವರಣದಲ್ಲಿ, ಅದೇ ರೀತಿಯ ಮಾನಸಿಕ ಸ್ಥಿತಿಯಲ್ಲಿ ಆ ಸಂಸ್ಥೆಗಳು ನಡೆಯುತ್ತಿವೆಯೇ ವಿನಾ ಇವತ್ತು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಈ ಸಂಸ್ಥೆಗಳು ನಡೆಯುತ್ತ ಇಲ್ಲ ಎಂದು ತಿಳಿಸಲು ತುಂಬ ಶೋಚನೀಯವಾಗುತ್ತದೆ.

ಅಧಿಕಾರಿಗಳ ಸಂಬಳ ಸಾರಿಗೆಗಳಿಗಾಗಿ 11,20,200 ರೂಪಾಯಿ ಸರ್ಕಾರಕ್ಕೆ ಖರ್ಚಾಗುತ್ತಿದೆ. ಇಷ್ಟು ದೊಡ್ಡ ಮೊತ್ತವನ್ನು ಅಧಿಕಾರ ವರ್ಗಕ್ಕೆ ಖರ್ಚು ಮಾಡುವುದರ ಬದಲು ಅದರಲ್ಲಿ ಹೆಚ್ಚಿನ ಅಂಶವನ್ನು ಸಮಾಜದ ಆರ್ಥಿಕ ಸುಧಾರಣೆಗೆ, ಅವರನ್ನು ಆರ್ಥಿಕವಾಗಿ ಸ್ವತಂತ್ರರನ್ನಾಗಿ ಮಾಡತಕ್ಕ ಉದ್ಯಮಗಳಿಗೆ ಹಾಗೂ ಆ ಕುಟುಂಬಗಳು ಅಲ್ಲಲ್ಲಿ ಸ್ವತಂತ್ರವಾಗಿ ಮುಂದೆ ಬರುವುದಕ್ಕೆ ಖರ್ಚು ಮಾಡಿದ್ದರೆ ಎಷ್ಟೋ ಕಾಲದ ಹಿಂದೆ ಅವರ ಸುಧಾರಣೆ ಆಗುತ್ತಿತ್ತು. ಈಗ ಸರ್ಕಾರ ಕೊಡುತ್ತಿರುವಂಥ ಸ್ಪೂನ್ ಫೀಡಿಂಗ್ ರೀತಿಯ ಸಹಾಯ ಅದಕ್ಕೆ ಪ್ರಯೋಜನವಿಲ್ಲ. ಸಿಬ್ಬಂದಿ ಖರ್ಚು, ಭತ್ತೆ ಕೆಲವು ಸಂಸ್ಥೆಗಳಲ್ಲಿರುವ ದುರಾಡಳಿತ ವೆಚ್ಚ, ಈ ರೀತಿಯಿಂದ ನಷ್ಟವಾಗುತ್ತಿರುವ ಅಂಶ ಇಲಾಖೆಯಲ್ಲಿ ಜಾಸ್ತಿ ಇದೆ. ಇದರ ಕಡೆಗೆ ಸರ್ಕಾರ ಕಣ್ಣು ಇಡಬೇಕಾಗಿದೆ.

(ಶ್ರೀ ಎಸ್. ಗೋಪಾಲ ಸಾರೆನ್ನ)

ಶ್ರೀ ಸುಬ್ಬಯ್ಯ ನಾಯಕ್ ಅವರು ಷೆಡ್ಯೂಲ್ ಟ್ರೈಬ್ಸ್ ವಿಚಾರದಲ್ಲಿ ಹೇಳಿದರು. ನಾನು ಮೊದಲು ಹೇಳಿದ ಹಾಗೆ ಲೇಬರ್ ವಿಭಾಗ, ಎಂದು ಪ್ರಾರಂಭವಾಗಿ ಹರಿಜನ ಕಲ್ಯಾಣ ವಿಭಾಗ ಆಯಿತು. ಅದು ಕಾಲಕ್ರಮೇಣ ಷೆಡ್ಯೂಲ್ ಟ್ರೈಬ್ಸ್, ಷೆಡ್ಯೂಲ್ ಕ್ಯಾಸ್ಟ್, ನೋಟಿಫೈಡ್ ಟ್ರೈಬ್ಸ್, ಡೀನೋಟಿಫೈಡ್ ಟ್ರೈಬ್ಸ್, ಎಡ, ಬಲ, ಈ ರೀತಿಯ ವಿವಿಧ ವಿಭಾಗಗಳನ್ನಾಗಿ ಮಾಡಿ ಅವರಿಗೆ ಪ್ರತ್ಯೇಕ ಪ್ರತ್ಯೇಕ ಶಾಲೆಗಳು, ಹಾಸ್ಟಲುಗಳು, ಕಮಿಟಿಗಳು ಇವೆನ್ನೆಲ್ಲ ರಚನೆ ಮಾಡಿ ಇದರಿಂದ ಆ ವಿಭಾಗಗಳಲ್ಲಿ ಭಿನ್ನಮತವನ್ನು ಹೆಚ್ಚಿಸಿ ಇನ್ನೂ ಅಷ್ಟು ಜಾತೀಯತೆಯ ಕಲಹವನ್ನು ಬೆಳೆಸಲಿಕ್ಕೆ ಈ ಸರ್ಕಾರ ಅವಕಾಶವನ್ನು ಕೊಟ್ಟಂತಾಗಿದೆ. ಇದನ್ನೆಲ್ಲ ಹೋಗಲಾಡಿಸಲು ಹಿಂದುಳಿದ ವರ್ಗಗಳು, ಷೆಡ್ಯೂಲ್ ಕ್ಯಾಸ್ಟ್ಸ್ ಷೆಡ್ಯೂಲ್ ಟ್ರೈಬ್ಸ್ ಎಂದು ಇರುವುದನ್ನೆಲ್ಲ ಒಟ್ಟು ಮಾಡಿ ಪ್ರತಿಯೊಂದು ಕೇಂದ್ರದಲ್ಲಿಯೂ ಒಂದೇ ಸಂಸ್ಥೆಯಾಗಿ ಬೆಳೆಯುವಂತೆ ಮಾಡಬೇಕು. ಹಾಗೆಯೇ ಕಮಿಟಿಗಳು, ಸಲಹಾ ಸಮಿತಿಗಳು ಇವನ್ನೂ ಒಟ್ಟಿಗೆ ಮಾಡಿ ಒಂದೇ ಸಮಿತಿಯ ಆಶ್ರಯದಲ್ಲಿ ನಡೆಯುವುದು ಉತ್ತಮ. ಈಗ ಈ ಸಂಸ್ಥೆಗಳು ಇವೆಯೋ ಇಲ್ಲವೋ ಸಂಶಯಕ್ಕೂ ಸಹ ಆಸ್ಪದವಾಗಿದೆ.

ಮಾನ್ಯ ಸುಬ್ಬಯ್ಯ ನಾಯಕರು ಮಾತನಾಡುವಾಗ ಷೆಡ್ಯೂಲ್ ಟ್ರೈಬ್ಸ್ ವಿಭಾಗಕ್ಕೇ ಒಬ್ಬ ಉಪಾಧ್ಯಕ್ಷರು ಬೇಕು ಎಂದು ಹೇಳಿದರು. ಆ ವಿಭಾಗದಿಂದ ಬಂದಿರುವ ಸದಸ್ಯರು ಅವರೊಬ್ಬರೇ ಇರುವುದರಿಂದ ಅವರನ್ನೇ ಉಪಾಧ್ಯಕ್ಷರನ್ನಾಗಿ ಮಾಡಬೇಕಾಗುತ್ತದೆ. ಆದರೆ ನಾನು ಹೇಳಿದ ಹಾಗೆ ಎಲ್ಲ ವಿಭಾಗಗಳಿಗೂ ಅನ್ವಯಿಸುವಂತೆ ಒಂದೇ ಸಲಹಾ ಸಮಿತಿ ಅಥವಾ ಕಮಿಟಿಯನ್ನು ಇಟ್ಟುಕೊಂಡು ಕೆಲಸ ಮಾಡಬೇಕು. ಮಾನ್ಯ ಸದಸ್ಯರನ್ನು ಉಪಾಧ್ಯಕ್ಷರನ್ನಾಗಿ ಆ ಕಮಿಟಿಯಲ್ಲಿ ಮಾಡುವುದಕ್ಕೆ ನನ್ನ ಆಕ್ಷೇಪವೇನೂ ಇಲ್ಲ. ಇನ್ನು ಕೆಲವು ಅಧಿಕಾರಿಗಳಿಗೆ ನಾನು ಹೇಳಿದ ಹಾಗೆ ಕೆಲವಾರು ಜಿಲ್ಲೆಗಳಲ್ಲಿ ಜೀಪನ್ನು ಒದಗಿಸುವುದುಉಂಟು. ಇವರು ಈ ಜೀಪನ್ನು ಒದಗಿಸುವುದು ನೋಡಿದರೆ ಹೆಚ್ಚಾಗಿ ಡೆಪ್ಯುಟಿ ಕಮಿಷನರ ಇತರ ಕಾರ್ಯಕ್ರಮಗಳಿಗೆಂಬುದು ಅವರಲ್ಲಿರುವ ಲಾಗ್ ಬುಕ್ಕನ್ನು ನೋಡಿದರೆ ಸ್ಪಷ್ಟವಾಗುತ್ತದೆ. ಅದರಲ್ಲಿ ಪರಿಶಿಷ್ಟ ಜನರ ಕೆಲಸಗಳಿಗಾಗಿ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರ ಕೆಲಸಗಳಿಗಾಗಿ ವರ್ಷಗಳಲ್ಲಿ ಎಷ್ಟು ಕಾಲ ಅವು ಉಪಯೋಗವಾಗಿವೆ; ಬೇರೆ ಇಲಾಖೆಗಳ ವಿಚಾರಗಳಿಗೆ ಎಷ್ಟು ಕಾಲ ಉಪಯೋಗವಾಗಿವೆ ಎಂಬುದರ ಅಂಕಿ ಅಂಶಗಳು ಅದರಲ್ಲಿ ಸ್ಪಷ್ಟವಾಗಿದೆ. ಎಲ್ಲೆಲ್ಲಿ ಮಾರ್ಗಗಳು ಚೆನ್ನಾಗಿ ಉಂಟೋ ಅಲ್ಲಿ ಮಾತ್ರ ಪರಿಶಿಷ್ಟ ಅಥವಾ ಗಿರಿಜನ ವೆಲ್‌ಫೇರ್ ಮುಟ್ಟಿದೆ ವಿನಹ ಇನ್ನಿತರ ಕಾಡು ಗುಡ್ಡ ಹಳ್ಳಿಗಳಲ್ಲಿ ಈ ಸಲುವಾಗಿ ಅನೇಕ ಒಳ ಪ್ರದೇಶದಲ್ಲಿರುವ ಹಳ್ಳಿಯ ಗ್ರಾಮಾಂತರಗಳಿಗೆ ಅಷ್ಟಾಗಿ ವೆಲ್‌ಫೇರ್ ಇಲಾಖೆಯ ಕೆಲಸಗಳು ಪೂರ್ತಿಯಾಗಿ ಇನ್ನೂ ಮುಟ್ಟಿಲ್ಲ ಸ್ವತಂತ್ರವಾಗಿ 18 ವರ್ಷಗಳನಂತರ ಸ್ಥಿತಿ ಸುಧಾರಿಸಿಲ್ಲ. ಇದು ಬಹಳ ಶೋಚನೀಯವಾಗಿದೆ. ಕೇವಲ ಸರ್ಕಾರ ಕೊಟ್ಟ ಗ್ರ್ಯಾಂಟನ್ನು ಹಂಚುವುದಕ್ಕೆ ಒಂದು ಇಲಾಖೆ, ಸ್ಕಾಲರ್‌ಷಿಪ್ ಹಂಚುವುದಕ್ಕೆ ಒಂದು ಇಲಾಖೆ ಇರಬೇಕೆ? ಎಂಬುದಾಗಿ ಪರಾಂಬರಿಸಿ ಮಾಡಿದರೆ ಒಳ್ಳೆಯದು. ಏಕೆಂದರೆ ಈಗಿನ ಸೋಶಿಯಲ್ ವೆಲ್‌ಫೇರ್ ಇಲಾಖೆ ಈಗಿರುವಂತಿದ್ದರೆ ಅದರಿಂದ ಇದ್ದೂ ಪ್ರಯೋಜನವಿಲ್ಲ ಇದನ್ನು ಪೂರ್ತಿಯಾಗಿ ಮುಚ್ಚಿಬಿಡಿ. ಅಂಥ ಕೆಲಸಗಳನ್ನೆಲ್ಲಾ ಈಗಿರತಕ್ಕ ಡಿ.ಡಿ.ಓ. ಬಿ.ಡಿ.ಓ. ಮತ್ತಿತರ ಬ್ಲಾಕ್ ಡೆವಲಪ್‌ಮೆಂಟ್ ಅಧಿಕಾರಿಗಳು ತಾಲ್ಲೂಕು ಬೋರ್ಡು, ವಿದ್ಯಾ ಇಲಾಖೆಯವರೆಲ್ಲರ ಮೂಲಕ ಇವನ್ನಿಷ್ಟೆ ಹಂಚುವುದಕ್ಕೆ ಸಾಧ್ಯವಿದೆ. ಯಾವ ಕಾಯಿದೆಬದ್ಧ ಉದ್ದೇಶಗಳಿಗಾಗಿ ಈ ಇಲಾಖೆ ಇದೆಯೋ ಅದು ಸಾಧಿಸುವುದಿಲ್ಲ, ಅಲ್ಲದೆ ಈಗ ಎಷ್ಟೋ ಕೇಂದ್ರ, ರಾಜ್ಯ ಹಾಗೂ ಜಿಲ್ಲಾ ಸಮಿತಿಗಳಿವೆ. ಅವುಗಳ ವರದಿಯಲ್ಲಿನ ಸಲಹೆಗಳ ಬಗ್ಗೆ ಅನೇಕ ಅಧಿಕಾರ ವರ್ಗದವರು ಸಾಕಷ್ಟು ಗಮನ ಕೊಡುವುದಿಲ್ಲ. ಉದಾ: ಶೆಡ್ಯೂಲ್ಡ್ ಕ್ಯಾಸ್ಟ್ ಕಮೀಶನರ ವರದಿಗಳು ಈಗಾಗಲೇ ದೇಶದಲ್ಲೆಲ್ಲಾ ಅಸ್ಪೃಶ್ಯತಾ ನಿವಾರಣೆಯಾಗಿದೆಯೆಂದು ಹೇಳುತ್ತಾರೆ. ಅಷ್ಟು ಘಟನೆಯಲ್ಲಿದೆ. ಆದರೆ ನಿಜವಾದ ರೀತಿಯಲ್ಲಿ ಅಸ್ಪೃಶ್ಯತಾ ನಿವಾರಣೆ ಇನ್ನು ನಿಜವಾದ ಕ್ರಮದಲ್ಲಿ ಆಗಿಲ್ಲ. ಅದು ನೂರಾರು ವರ್ಷಗಳ ಹಿಂದೆಯೇ ಸಮಾಜದ ದುಷ್ಟಪದ್ಧತಿಗಳಲ್ಲೊಂದಾಗಿ ಬೇರೂರಿದೆ. ಆ ಕಡೆಗೆ ಅಧಿಕಾರವರ್ಗದವರು ಅಷ್ಟಾಗಿ ಗಮನ ಕೊಡದೆ ಅತ್ತಿತ್ತ ಓಡಾಡಿ ಡೈರಿ ತುಂಬಿಸಿ ತೋರಿಕೆಯ ಮಾತ್ರದಿಂದ ಈ ದುಶ್ಚಟ ನಿವಾರಣೆಯಾಗದು. ಇವತ್ತಿಗೂ ಕೂಡ ಅವನ್ನು ಪ್ರತ್ಯೇಕವಾಗಿ ಜೀವನದ ಎಲ್ಲಾ ವ್ಯವಹಾರಗಳಲ್ಲೂ ಅಸ್ಪೃಶ್ಯತೆಯು ಎದ್ದು ತೋರುತ್ತಿವೆ. ಇದರಿಂದ ದಲಿತರ ಹಿತ ಹಿಂದಕ್ಕೇ ಹೋಗುತ್ತಿದೆಯೆಂದೇ ತಿಳಿಯಬೇಕಾಗಿದೆ. ಕೆರೆ ಬಾವಿ ತೆಗೆಯುವುದರಲ್ಲಿಯೂ ತಮ್ಮ ಅಲ್ಪ ಸ್ವಲ್ಪ ಜಮೀನು ರಕ್ಷಿಸುವುದರಲ್ಲಿಯೂ ಇವತ್ತು ಅವರು ಹಣವಿಲ್ಲದೆ ಕಷ್ಟದಲ್ಲಿದ್ದಾರೆ. ಸಾಲ ಸಿಗದೆ ಹೆಚ್ಚಾಗಿ ಆಫೀಸುಗಳಲ್ಲಿ ಸುತ್ತಾಡಿ ಹಿಂದೆ ಹೋಗುತ್ತಿದ್ದಾರೆಂಬುದು ಚೆನ್ನಾಗಿ ಕಾಣುತ್ತದೆ. ಅಧಿಕಾರವರ್ಗ ಇವತ್ತು ಪರಿಣಾಮಕಾರಿಯಾದ ಯಾವ ಅಭಿವೃದ್ಧಿಯನ್ನೂ ಅವರ ಬಗ್ಗೆ ಮಾಡುತ್ತಾ ಇಲ್ಲ. ರೆವಿನ್ಯೂ ಇಲಾಖೆಯ ವಿಚಾರವಾಗಿ

ದಲಿತ ಜನರಿಗೆ ನ್ಯಾಯವಾಗಿ ಮಂಜೂರು ಮಾಡಬೇಕಾದ ದರಖಾಸ್ತು ಸ್ಥಳ ಸೌಕರ್ಯವೇನಾದರೂ ಕೊಟ್ಟಿದ್ದಾರೆಂದರೆ ಸಾವಿರಾರು ಅರ್ಜಿಗಳು ವರ್ಷಗಟ್ಟಲೆ ತಾಲ್ಲೂಕು ಆಫೀಸುಗಳಲ್ಲಿಯೇ ಇವೆ. ಅದೇನೂ ಅಷ್ಟು ಸಮರ್ಪಕವಾಗಿಲ್ಲ. ಆದ್ದರಿಂದ ಅಲ್ಲಲ್ಲಿರತಕ್ಕ ದಲಿತರು ನಿವಾಸವಿರುವಷ್ಟು ಆಯಾ ಸ್ಥಳೀಯ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಭೂಸುಧಾರಣೆಯಾಗುವುದರೊಳಗೆ ದರಖಾಸ್ತು ಕೊಡಬೇಕು. ವಸತಿ ನಿರ್ಮಾಣಕ್ಕಾಗಿ ಬೇಕಾದಷ್ಟು ಯೋಜನೆಗಳನ್ನು ಪುಸ್ತಕದಲ್ಲಿ ಹಾಕಿದ್ದಾರೆ. 4–5 ಸಾವಿರ ರೂಪಾಯಿಗಳನ್ನು ವರ್ಷಂಪ್ರತಿ ಬಡ್ಜೆಟ್ಟಿನಲ್ಲಿ ಇಟ್ಟಿದ್ದಾರೆ. ಆದರೂ ಆ ಹಣ ನನ್ನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ವರ್ಷಗಳಿಂದಲೂ ಖರ್ಚಾಗದೆ ಲ್ಯಾಪ್ಸ್ ಆಗುತ್ತಾ ಇದೆ. ನಾನು ಉನ್ನತ ಅಧಿಕಾರಿಗಳಿಗೆ ಒಂದು ಪ್ರಶ್ನೆ ಕೇಳುತ್ತೇನೆ. ಕೆಲವು ವರ್ಷಗಳಿಂದ ಲ್ಯಾಂಡ್ ಅಕ್ವಿಸಿಷನ್ನಿಗೆ ಒದಗಿಸಿದ್ದ ಹಣ ಇವತ್ತಿಗೂ ಯಾಕೆ ಖರ್ಚಾಗಿಲ್ಲ ? ಇದರ ಬಗ್ಗೆ ಪ್ರತಿವರ್ಷವೂ ಈ ಅಧಿವೇಶನಗಳಲ್ಲಿಯೂ ಮತ್ತು ಅಡ್ವೈಸರಿ ಕಮಿಟಿಗಳಲ್ಲಿಯೂ ಅನೇಕ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಆದರೂ ಇನ್ನೂ ಲ್ಯಾಂಡ್ ಅಕ್ವಿಸಿಷನ್ ಕಾನೂನಿನಲ್ಲಿ ಇದಕ್ಕೆ ಅಡ್ಡಿಗಳಿವೆ, ಆತಂಕಗಳಿವೆ ಎಂಬ ಕುಂಟು ನೆಪಗಳನ್ನೇ ಹಾಕಿ ಕಾಲ ಕಳೆಯುತ್ತಿರುವ ನೀತಿಯನ್ನು ಯಾರೂ ತಡೆಹಿಡಿಯಲಿಲ್ಲ ? ಕೇವಲ ಕೆಲವು ಗುಡಿಸಲುಗಳನ್ನು ಹಾಕಿಕೊಂಡಿರತಕ್ಕ ಗ್ರಾಮಾಂತರ ವಲಯಗಳಲ್ಲಾದರೂ ಈ ಹಣವನ್ನು ಯಾಕೆ ಉಪಯೋಗಿಸಿಲ್ಲ ? ಈ ಪರಿಸ್ಥಿತಿಯನ್ನು ತಪ್ಪಿಸುವುದಲ್ಲವೆ ಅವರಿಗೆ ಸರಿಯಾದ ರೀತಿಯಲ್ಲಿ ಇಂತಹ ಸೌಲಭ್ಯವನ್ನು ಕಲ್ಪಿಸುವ ಸಲುವಾಗಿ ಲ್ಯಾಂಡ್ ಅಕ್ವಿಸಿಷನ್ ಕಾಯಿದೆಯಲ್ಲಿರತಕ್ಕ ಎಲ್ಲಾ ಲೋಪದೋಷಗಳನ್ನು ಸರ್ಕಾರ ಕೂಡಲೇ ತಿದ್ದುಪಡಿ ಮಾಡಿ ಹೋಗಲಾಡಿಸಬೇಕು. ಅದೇನು ದೊಡ್ಡವಿಚಾರವಲ್ಲ. ಇದು ನೆಪ ಮಾತ್ರಕ್ಕೆ ಅಧಿಕಾರಿಗಳ ವಾದ. ಮದ್ರಾಸು ಸರಕಾರವಿರುವಾಗ ಬಂಟ್ವಾಳದಲ್ಲಿ ಭೂ ಸ್ವಾದೀನ ಪಡೆದು ದಲಿತರಿಗೆ ಹಕ್ಕನ್ನು ಕೊಟ್ಟಾಗ ಯಾವ ಕಾಯಿದೆಯ ಆತಂಕವೂ ಬರಲಿಲ್ಲ. ಇನ್ನು ಪಬ್ಲಿಕ್ ವರ್ಕ್ಸ್ ವಿಷಯವಾಗಿ ಹೇಳುವುದಾದರೆ ದಲಿತ ನಿವಾಸ ಕಾಲನಿಗಳ ಸಮೀಪ ಕೂಡಾ ರಸ್ತೆಗಳು ಬೇಕು. ನಿಮ್ಮ ಪಂಗಡದವರಿಗೆ ಇದರಲ್ಲಿ ಹೊಸ ರಸ್ತೆಯ ಯೋಜನೆಗಳನ್ನು ಹಾಕುವಾಗ ಅಂಥ ಕಾಲೊನಿಗಳಿಗೂ ಆಗಬೇಕಾದ ಸೌಲಭ್ಯಗಳ ಕಡೆಗೆ ಸರ್ಕಾರ ಏಕೋ ಇನ್ನು ಗಮನ ಕೊಟ್ಟಿಲ್ಲ. ಅವರ ಹಿತರಕ್ಷಣೆಗಾಗಿ ಶೇ 18% ರಷ್ಟನ್ನು ಉಪಯೋಗ ಮಾಡುತ್ತೇವೆಂಬ ಮಾತು ಕಾಗದದಲ್ಲಿ ಮಾತ್ರ ಇದೆಯಷ್ಟೆ. ಅದನ್ನು ಕಾರ್ಯರೂಪಕ್ಕೆ ತರಲು ಇವರ ಕೈಯಲ್ಲಿ ಆಗಲಿಲ್ಲ. ಮರಾಮತ್ ಶಾಖೆ ಇದ್ದರೂ ಗ್ರಾಮಾಂತರಗಳಲ್ಲಿ ರಸ್ತೆ ಸಾರಿಗೆ ಇಲ್ಲದೆ ಈ ಬಗ್ಗೆ ಇರತಕ್ಕ ಅಡ್ಡಿ ಆತಂಕಗಳನ್ನು ಇನ್ನೂ ಹೋಗಲಾಡಿಸಿಲ್ಲ. ಈ ವಿಚಾರದಲ್ಲಿ ಸರ್ಕಾರ ಹೆಚ್ಚು ನಿಗಾ ಕೊಡಬೇಕು.

ಇನ್ನು ಉದ್ಯೋಗ ವಿಚಾರ. ಈಗ ಎಷ್ಟೋ ಜನರು ನಿಮ್ಮ ವರ್ಗಗಳಲ್ಲಿ ನಿಮ್ಮ ಪಂಗಡದವರಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಶೇಕಡ 18 ರಷ್ಟು ಹುದ್ದೆಗಳನ್ನು ಈ ಪಂಗಡದವರಿಗೆ ಉದ್ಯೋಗಗಳಲ್ಲಿ ರಿಜರ್ವ್ ಮಾಡಿದ್ದೇವೆಂದು ಘಟನಾಬದ್ಧವಾಗಿ ಬರೆಯಲಾಗಿದೆ ಆಗಾಗ್ಯೆ ಸಾರಿ ಸಾರಿ ಹೇಳುತ್ತಾರೆ. ನಾನು ಎಲ್ಲಾ ಇಲಾಖೆಗಳನ್ನು ವಿಚಾರಿಸಿ ನೋಡಿ ಬಂದಿದ್ದೇನೆ. ಅಲ್ಲಿರತಕ್ಕ ಗುಮಾಸ್ತರು ಹಾಗೂ 4ನೇ ದರ್ಜೆ ನೌಕರರ ಕೇಡರ್‌ನ ಸಂಖ್ಯೆ ನೋಡಿದರೆ ಶೇಕಡ 18 ರಷ್ಟು ಇವರಿಗೆ ಮೀಸಲಾಗಿಟ್ಟಿರುವುದು ಯಾವ ಇಲಾಖೆಯಲ್ಲೂ ಇಲ್ಲವೆಂಬುದಾಗಿ ನಾನು ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳುತ್ತೇನೆ. ಇದನ್ನು ಬೇಕಾದರೆ ಅಂಕಿಅಂಶಗಳಿಂದ ಉದಹರಿಸಿ ಹೇಳುತ್ತೇನೆ. ಇಲಾಖೆಗಳಲ್ಲಿರತಕ್ಕ ಎಸ್ಟಾಬ್ಲಿಷ್‌ಮೆಂಟ್ ಸೆಕ್ಷನ್ ಅನೇಕ ವೇಳೆ ಯೂನಿಟ್ ಆಫೀಸರುಗಳಿಗೆ ಸರಿಯಾದ ಅಂಕಿ ಅಂಶಗಳನ್ನು ಕೊಡದೇ ಇರುವ ನಿದರ್ಶನಗಳನ್ನು ಸರ್ಕಾರದ ಮುಂದೆ ಇಡಲಿಕ್ಕೂ ಸಿದ್ಧವಿರುತ್ತೇನೆ. ಇದೆಲ್ಲವನ್ನೂ ಬಿಟ್ಟು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಇಲಾಖೆಗಳಲ್ಲಿ ಅವರ ಉದ್ಯೋಗದ ಸಂಖ್ಯೆ ಕೇಳಿದರೂ ಅಂಕಿ ಅಂಶಗಳು ಸರಿಯಾಗಿ ಒದಗುತ್ತಾ ಇಲ್ಲ. ಸ್ಟೇಟಿಸ್ಟಿಕಲ್ ಡೈರೆಕ್ಟರ್ ಕೇಳಿದ ಪ್ರಶ್ನೆಗಳಿಗೂ ಸಹ ಸರಿಯಾದ ಅಂಕಿ ಅಂಶಗಳನ್ನು ಒದಗಿಸದೇ ಇರತಕ್ಕ ಇಲಾಖೆಗಳು ಕೆಲವು ಇವೆ. ಇದರಿಂದಾಗಿ ಶೆಡ್ಯೂಲ್ಡ್ ಕಾಸ್ಟ್ ಕಮೀಶನ್ನಿಗೆ ವರದಿಯೂ ಸಿಗಲಿಲ್ಲ ಅವನ್ನು ಬೇಕಾದರೆ ಪ್ರತ್ಯೇಕವಾಗಿ ಹೇಳುತ್ತೇನೆ. ಒಂದು ಇಲಾಖೆ ಹೆಸರು ಹೇಳಿದರೆ ಮತ್ತೊಂದು ಇಲಾಖೆಗೆ ಬೇಜಾರು ಆದೀತೆಂದು ಇಲ್ಲಿ ಹೇಳುವುದಿಲ್ಲ ಅಗತ್ಯಬಿದ್ದರೆ ನಾನು ಸ್ಪಷ್ಟವಾದ ಒಂದು ಪಟ್ಟಿಯನ್ನೇ ಕೊಡುತ್ತೇನೆ. ಇನ್ನು ಯೂನಿಟ್ ಆಫೀಸರುಗಳಿಂದ ಬಂದಂಥ ವರದಿಗಳನ್ನು ನೋಡಿದರೆ ಅದರಲ್ಲಿ I ಗ್ರೇಡ್, II ಗ್ರೇಡ್ ಮತ್ತು III ಗ್ರೇಡ್ ಗೆಜೆಟೆಡ್ ಅಧಿಕಾರಿ ಕೇಡರಿನಲ್ಲಿ ಕೇವಲ ಒಂದೆರಡು ಹುದ್ದೆಗಳು ದಲಿತ ಪಂಗಡದವರಿಗೆ ಬಂದಿರಬಹುದೆಂದು ಕಾಣುತ್ತದೆ ಅದನ್ನೂ ಸಹ ವರದಿ ಮಾಡದಂಥ ನಿದರ್ಶನಗಳಿವೆ. ಮೊನ್ನೆ ತಾನೇ 1960ರ ಇತ್ತೀಚೆಗೆ ಸರ್ಕಾರ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಪಟ್ಟಿ ತರಿಸಿ ದಲಿತವರ್ಗದ ಉದ್ಯೋಗಸ್ಥಾನವನ್ನು ಲೋಕಲ್ ಕ್ಯಾಂಡಿಡೇಟಾಗಿ ನೇಮಿಸಬಹುದು ಎಂಬುದಾಗಿ ಆಜ್ಞೆ ಮಾಡಿದೆ. ಸಾಕಷ್ಟು ಉದ್ಯೋಗದಲ್ಲಿ ಪ್ರಾತಿನಿಧ್ಯವಿದ್ದದ್ದರಿಂದಲೇ ಈ ಆಜ್ಞೆ ಮಾಡಲಾಗಿತ್ತು. 1–1–1961 ರಿಂದ ಕೆಲವು ಜನರನ್ನು ಆಯಾ ಸ್ಥಳೀಯ ಅಧಿಕಾರಿ

(ಶ್ರೀ ಎಸ್. ಗೋಪಾಲ ಸಾಲಿನ್ನ)

ಗಳು ನೇಮಕ ಮಾಡಿದ್ದರು. ಯಾರ್ಯಾರನ್ನು ಹೀಗೆ ನೇಮಕ ಮಾಡಿದ್ದರೋ ಅವರ ಹುದ್ದೆಗಳನ್ನು ರೆಗ್ಯುಲರೈಜ್ ಮಾಡಿ ಖಾಯಂಗೊಳಿಸಲಾಗಿದೆ. ಆದರೆ ಇದರಲ್ಲಿ ಸರ್ಕಾರದವರು ಏನು ಅಂಕಿ ಅಂಶ ಗಳನ್ನು ಕೊಟ್ಟಿದ್ದಾರೋ ಆ ದಾಖಲೆಯ ಪ್ರಕಾರ ದಲಿತರಿಗೆ ಸಿಕ್ಕಲಿಲ್ಲ. ಆಗ ಇನ್ನು ಸ್ಥಳೀಯ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಿಂದ ಅಥವ ಜಿಲ್ಲಾ ಸೋಷಿಯಲ್ ವೆಲ್‌ಫೇರ್ ಅಧಿಕಾರಿಯಿಂದ ಉಮೇದುವಾರರ ಪಟ್ಟಿ ಕರೆದು ಅವರೇ ನೇಮಕ ಮಾಡಿಕೊಳ್ಳಬಹುದು ಎಂಬುದಾಗಿ ಸರ್ಕಾರ ಮತ್ತೊಂದು ಆಜ್ಞೆಯನ್ನು ಹೊರಡಿಸಿದರು. ಆ ಪ್ರಕಾರ ಅನೇಕ ಅಧಿಕಾರಿಗಳನ್ನು ನೇಮಕ ಮಾಡಿ ಕೊಂಡರು. ಆದರೆ ಇತ್ತೀಚೆಗೆ ಮತ್ತೊಂದು ಸರ್ಕಾರೀ ಆಜ್ಞೆಯಲ್ಲಿ ಸ್ಥಳೀಯ ಉಮೇದುವಾರರನ್ನು ಹೊರಗೆ ಹಾಕಿ ಪಬ್ಲಿಕ್ ಸರ್ವಿಸ್ ಅಥವ ರಿಕ್ರೂಟ್‌ಮೆಂಟ್ ಕಮಿಟಿ ಚುನಾಯಿಸಿದವರನ್ನು ತೆಗೆದು ಕೊಳ್ಳಬೇಕೆಂಬ ಆಜ್ಞೆ ಬಂತು. ಈ ಆಜ್ಞೆ ಒಂದು ಅಸ್ಥಿರವಾದುದು ಮತ್ತು ದಲಿತರ ನೇಮಕದ ಹಿಂದಿನ ಆಜ್ಞೆ ಉಲ್ಲೇಖವಾಗಿಲ್ಲ. ಆದರೂ 1-1-1960ರ ನಂತರ ಸೇರಿದ ಎಲ್ಲಾ ದಲಿತ ನೌಕರರೂ ಇದರಿಂದ ಪ್ರಥಮ ಹೊರಬೀಳುವಂತಾಗಿದೆ, ಇದರಿಂದ ಷೆಡ್ಯೂಲ್ಡ್ ಕ್ಯಾಸ್ಟಿಗೆ ಬಹಳ ಬಾಧಕವಾಗಿದೆ. ಅನೇಕರಿಂದ ಮನವಿಗಳು ಸರ್ಕಾರಕ್ಕೆ ಮುಟ್ಟಿವೆ. ಸುಮಾರು 3—4 ವರ್ಷಗಳ ಸರ್ವಿಸ್ ಆದವರನ್ನು ಉದ್ಯೋಗದಿಂದ ಹೊರಹಾಕಿ ಮನೆಗೆ ಹೋಗಿ ಎಂಬುದಾಗಿ ಹೇಳಿದರೆ ಅವರ ಗತಿಯೇನು? ಯಾವರೀತಿ ಜೀವನ ಮಾಡಬೇಕು? ನನ್ನ ಜಿಲ್ಲೆಗೆ ಸಂಬಂಧಪಟ್ಟವರು ರಿಜಿಸ್ಟ್ರೇಶನ್ನಿನಿಂದ 6 ಜನ ಹೊರಗೆ ಹೋದವರ ಪೈಕಿ 4 ಜನ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನ ಪಟ್ಟಿಯಿಂದ ಆಯ್ಕೆಯಾಗಿ 4 ವರ್ಷಗಳಷ್ಟು ಸರ್ವಿಸ್ಸಿನ ದಲಿತರು ಕೋ-ಆಪರೇಟಿವ್, ಲೇಬರ್ ಇತ್ಯಾದಿ ಇಲಾಖೆಗಳಲ್ಲೂ ಹಾಗೆಯೇ ಹೊರಗೆ ಹೋಗಿದ್ದಾರೆ. ಕೆಲವು ಇಲಾಖೆಗಳಿಂದ ಈಗಾಗಲೇ ನಾನು ಸಂಬಂಧಪಟ್ಟ ಮಂತ್ರಿಗಳಿಗೂ, ಚೀಫ್ ಸೆಕ್ರೆಟರಿಯವರಿಗೂ ನಾನು ದೂರು ಕೊಟ್ಟಮೇಲೆ ಕೆಲವು ಇಲಾಖೆಗಳೇನೋ ಅಂಕಿ ಅಂಶಗ ಳನ್ನು ಕೊಡಲು ಕೇಳಲಾಗಿದೆ. ಇನ್ನು ಕೆಲವು ಇಲಾಖೆಗಳವರು ಅಂಕಿ ಅಂಶಗಳನ್ನು ಕೊಡಲು ಹಿಂಜರಿಯುತ್ತಿದ್ದಾರೆ. ಸೆಕ್ರೆಟೇರಿಯಟ್‌ನಲ್ಲೂ ಸಹ ಕೆಲವು ಇಲಾಖೆಗಳಿಂದ ಇನ್ನೂ ಅಂಕಿ ಅಂಶಗಳು ಬಂದಿಲ್ಲ. ಸರಕಾರ ಸ್ಪಷ್ಟವಾಗಿ ತನಿಖೆ ನಡಿಸಿ ತಪ್ಪಿತಸ್ಥರನ್ನು ಬಯಲಿಗೆ ತರಲೇಬೇಕು. ಈ ರೀತಿ ಯಾಗಿ ಅವ್ಯವಸ್ಥೆ ಇರುವಂಥಾದ್ದು ಸರಿಯಲ್ಲ. ನಾವು ಏನು ನೌಕರಿಯಲ್ಲಿ ಕಾದಿಡಲ್ಪಟ್ಟ ಪರ್ಸೆಂ ಟೇಜನ್ನು ನಿರೀಕ್ಷೆ ಮಾಡಿದ್ದೇವೋ ಅದು ಅವರಿಗೆ ನ್ಯಾಯವಾಗಿ ಸಿಕ್ಕದೆ ಸುಮ್ಮನೆ ಕಾಗದದಲ್ಲಿರತಕ್ಕ ಅಂಕಿ ಅಂಶಗಳು ಮಾತ್ರವಾದರೆ ಏನು ಪ್ರಯೋಜನ? ಇದರಿಂದ ಈ ಬಡ ಹಿಂದುಳಿದ ಜನರ ಹಿತರಕ್ಷ ಣೆಗೆ ಕಲ್ಯಾಣಾಭಿವೃದ್ಧಿ ಇಲಾಖೆ ಏನು ಕೆಲಸ ಮಾಡಿದೆ ಎಂಬುದಾಗಿ ನಾನು ಕೇಳುತ್ತೇನೆ.

ಇನ್ನು ಗೆಜೆಟೆಡ್ ಅಧಿಕಾರಿಗಳ ವಿಚಾರವಾಗಿ ಸಾಕಷ್ಟು ಯೋಗ್ಯತೆಯುಳ್ಳ ಅಭ್ಯರ್ಥಿಗಳಿರುವು ದಿಲ್ಲವೆಂಬ ವಾದ ಇಷ್ಟಾರ್ಥ ಸಿದ್ಧಿಗೆ ಸುಲಭವಾಗಿವೆ ಇವರ ಪ್ರಮೋಷನ್ ಬಗ್ಗೆ ಪ್ರತಿಯೊಂದು ಸಾರಿ ಯೂ ಈ ಸಭೆಯ ಮುಂದೆ ಬರುತ್ತಲೇ ಇದೆ ಇತರರಂತೆ ಬಡ್ತಿ ಪಡೆಯಲು ಅನೇಕ ವೇಳೆ ಕಷ್ಟಗಳೇ ಹೆಚ್ಚು ಸುಪ್ರೀಂ ಕೋರ್ಟಿನವರು ಸಹ ಪ್ರಮೋಷನ್ ವೇಕೆನ್ಸಿಯೊಳಗೆ ರಿಜರ್ವೇಷನ್ ಅನುಕರಣೆ ಮಾಡಬೇಕೆಂಬ ಸಲಹೆಯನ್ನು ಕೆಲವು ಕಾಲದ ಹಿಂದೆಯೇ ನೀಡಿದ್ದಾರೆ. ಅದು ಯಾವಾಗ ಸರಕಾರ ಗಮನಿಸುತ್ತದೋ ಗೊತ್ತಿಲ್ಲ. ಆ ಸಲಹೆ ಡೈರೆಕ್ಟಿವ್ ಅಲ್ಲ, ಅದನ್ನು ಕಡ್ಡಾಯವಾಗಿ ಮಾಡಬೇಕಾ ಗಿಲ್ಲವೆಂದು ಇಲ್ಲಿ ಅನೇಕ ಸಲ ಸಚಿವರು ಹೇಳುತ್ತಾ ನಮಗೆ ಪ್ರಶ್ನೆಗಳಿಗೆ ಜವಾಬನ್ನು ಕೊಡುತ್ತಾರೆ. ಅದನ್ನು ಮಾಡುವುದು ಬೇಡವೆಂದು ಆರ್ಡರ್ ಹೇಳುವುದು ಸರಿಯಲ್ಲ. ನಿಮ್ಮ ಪಂಗಡದವರಿಗೆ ಶೇಕಡ 18ರಷ್ಟನ್ನು ರಿಜರ್ವ್ ಗಿಡಬೇಕೆಂಬುದಾಗಿ ಕಾನ್‌ಸ್ಟಿಟ್ಯೂಷನಲ್ ಡೈರೆಕ್ಟಿವ್ ಇರುವಾಗ, ಆ ಒಂದು ನೀತಿಯನ್ನು ಇವರು ಪಾಲಿಸಬೇಕೇ, ಬೇಡವೇ ಎಂದು ನಾನು ಕೇಳುತ್ತೇನೆ. ಶೇಕಡ 18ರಷ್ಟು ಪ್ರಕಾರ ಹೊಸ ಹುದ್ದೆಗಳನ್ನು ಮಾತ್ರ ಕೊಡುವುದಾದರೆ ವ್ಯವಸಾಯ ಶಾಖೆಯಲ್ಲಿ ಸುಮಾರು ಶೇಕಡ 80 ಅಥವಾ ಇನ್ನು ಕೆಲವು ಇಲಾಖೆಗಳಲ್ಲಿ 60ರಷ್ಟು ಪ್ರಮೋಷನಲ್ ವೇಕೆನ್ಸಿಗಳಿವೆ. ಇನ್ನುಳಿದ ಶೇಕಡಾ 20 ರಲ್ಲಿ ಅಥವಾ ಶೇಕಡಾ 40ರಲ್ಲಿ ಮಾತ್ರ ಈ ಪಂಗಡದವರಿಗೆ ಶೇಕಡ 18ರಷ್ಟು ಸಿಗುತ್ತ ಲ್ಲವೆ. ಬಾಕಿ ಈ ಇಲಾಖೆಗಳಲ್ಲಿಯ ಶೇಕಡಾ 60-80ರಷ್ಟು ಪ್ರಮೋಷನಲ್ ವೇಕೆನ್ಸಿಗಳಲ್ಲವೆ ಉಳಿದ ಶೇಕಡ 30-40ರಲ್ಲಿ ಮಾತ್ರ ಶೇಕಡ 18ರಷ್ಟು ನಮ್ಮ ಪಂಗಡದವರಿಗೆ ಬರುವುದಾದರೆ ಇದರಿಂ ದಾಗುವ ಅನ್ಯಾಯವೆಷ್ಟು? Total No. of Sanctioned posts ನಲ್ಲಿ ಕಾದಿಡಲ್ಪಡುವ ಪರ್ಸೆಂ ಟೇಜ್ ಆಫ್ ಪೋಸ್ಟ್ಸ್ ಎಷ್ಟು ಭರ್ತಿಯಾಗುತ್ತವೆಂಬುದನ್ನು ತಿಳಿಯುವುದು ಅವಶ್ಯಕ. ಅದನ್ನು ಕ್ರಮವಾಗಿ ತುಂಬಿಸಲೇಬೇಕು. ಎಷ್ಟು ದಕ್ಷರಾಗಿದ್ದರೂ ಕೂಡ ಅಥವಾ ಬುದ್ಧಿವಂತರಾಗಿದ್ದರೂ ಕೂಡ ಹಿಂದುಳಿದ ಪಂಗಡದವರು weaker sections ಸಾಮಾಜಿಕ ತುಳಿತಕ್ಕೊಳಪಟ್ಟವರು ಎಂದು ಕೆಲವು ಕಡೆಗಳಲ್ಲಿ ಅವರು ಮುಂದುವರಿಯಬೇಕೆಂದರೆ ಸ್ಥಳೀಯ ವಾತಾವರಣ ಮತ್ತು ಪರಿಸ್ಥಿತಿಯಿಂ ದಾಗಿ ಸಾಕಷ್ಟು ಅವಕಾಶವಿಲ್ಲ. ಈ ಒಂದು ಸಂಪ್ರದಾಯವನ್ನು ನೌಕರಿ ವರ್ಗದಲ್ಲಿ ಅನ್ಯೋನ್ಯತೆ

ಬೆಳಿಸುವುದಕ್ಕೆ ಇಲಾಖೆಗಳಲ್ಲಿ ಅಧಿಕಾರಿಗಳ ಗಮನ ಸೆಳೆಯಲು ಸರ್ಕಾರ ಏನು ಅವಕಾಶವನ್ನು ಕೊಟ್ಟಿದೆ, ಯಾವ ರೀತಿಯಲ್ಲಿ ಈ ವಿಚಾರವನ್ನು ಪರಿಶೀಲನೆ ಮಾಡಿ ಈ ಬಡ ನೌಕರರಿಗೆ ನ್ಯಾಯ ಕೊಡುವರೆ ಏನು ಮಾಡಿದ್ದೀರೆಂದು ತಿಳಿಸಬೇಕು. ನಾವು ಇಲ್ಲಿ ಇವೆಲ್ಲವನ್ನು ಹೇಳುವಾಗ ಸಂಬಂಧಪಟ್ಟ ಮಂತ್ರಿಗಳೇ ಇಲ್ಲ. ಟ್ರೆಜರಿ ಬೇಂಚಿನವರು ಯಾರು ಕೇಳುತ್ತಾರೋ ಗೊತ್ತಿಲ್ಲ. ಇದೆಲ್ಲ ಅರಣ್ಯ ರೋದನವಾದಂತಾಗುತ್ತದೋ ಏನೋ ನನಗಂತೂ ಅರ್ಥವಾಗಲಿಲ್ಲ. ಅರಣ್ಯ ಶಾಖೆಯ ಸಚಿವರು ಮಾತ್ರ ಇದ್ದಾರೆ. ಆದರೂ ಕೂಡ ನಮ್ಮ ಕೆಲಸವನ್ನು ನಾವು ಮಾಡಿಯೇ ತೀರಬೇಕು. ಶೇಕಡ 18 ರಷ್ಟು ಹುದ್ದೆಗಳನ್ನು ಪ್ರಮೋಷನ್ ವೇಕೆನ್ಸಿಯೊಳಗೆ ರಿಜರ್ವ್ ಮಾಡುವ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಮಾನವನ್ನು ಅಥವಾ ಸಲಹೆಯನ್ನು ಕಾರ್ಯರೂಪಕ್ಕೆ ತರಲೇ ಬೇಕಾಗಿದೆ. ಆದರೆ ಈ ಇಲಾಖೆ ಮಂತ್ರಿಗಳು ಅದರಲ್ಲೂ ನಮ್ಮ ಷೆಡ್ಯೂಲ್ಡ್ ಕ್ಯಾಸ್ಟ್ ಪ್ರತಿನಿಧಿಯಾಗಿ ಮಂತ್ರಿಮಂಡಲದಲ್ಲಿರುವ ಶ್ರೀಮಾನ್ ರಾಚಯ್ಯನವರು ಮಂತ್ರಿಮಂಡಲದಲ್ಲಿ ಇರುವಾಗ ಆ ಘನತರವಾದ ಒಂದು ಸಲಹೆಯನ್ನು ಕೂಡಲೇ ಯಶಸ್ವಿಯಾಗಿ ಕಾರ್ಯಾಚರಣೆಗೆ ತರುವುದರ ಪ್ರಯತ್ನದಲ್ಲಿ ಹಿಂದುಳಿಯಬಾರದು. ಏಕೆ ಈ ಮಂತ್ರಿ ಮಂಡಲ ಇದರಲ್ಲಿ ಹಿಂದೆ ಬಿದ್ದರೋ ಎಂಬುದು ಶೋಚನೀಯ ಮತ್ತು ತಿಳಿಯುವುದು ಅಗತ್ಯ. ಆದ್ದರಿಂದ ಸರ್ಕಾರದವರು ಆ ಕಡೆ ಗಮನ ಕೊಡಬೇಕು, ಮತ್ತು ಅವರಿಗೆ ಅವಕಾಶವನ್ನು ಕಲ್ಪಿಸಿಕೊಡಲೇ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಯ ಮಂತ್ರಿಗಳು).—ಈ ವಿಷಯ ದಲ್ಲಿ ಕೇಂದ್ರ ಸರ್ಕಾರದವರು ಏನು ಆರ್ಡರನ್ನು ಮಾಡಿದ್ದಾರೆಯೋ ಆ ರೀತಿ ಅವರ ತತ್ವವನ್ನು ನಾವು ಅನುಸರಿಸಿಕೊಂಡು ಬರುತ್ತಿದ್ದೇವೆ. ನಾಲ್ಕನೆಯ ದರ್ಜೆಯ ನೌಕರರಿಗೆ, ಮೂರನೆಯ ದರ್ಜೆಯ ಕೆಲಸಕ್ಕೆ ಪ್ರಮೋಷನ್ ಕೊಡತಕ್ಕ ಕಾಲದಲ್ಲಿ ರಿಜರ್ವೇಷನ್ ಮಾಡಬೇಕೆಂದು ನಾವು ಒಪ್ಪಿಕೊಂಡಿದ್ದೇವೆ.

ಶ್ರೀ ಎಸ್. ಗೋಪಾಲ ಸಾಲೆನ್ನ.—ಮಾನ್ಯ ಅರಣ್ಯಶಾಖೆಯ ಸಚಿವರು ನನ್ನ ಪ್ರಶ್ನೆಗೆ ಉತ್ತರ ವನ್ನು ಕೊಟ್ಟಿದ್ದಾರೆ. ಬಹಳ ಸಂತೋಷ. ಈಗ ನಾನು ಹೇಳತಕ್ಕ ವಿಚಾರ ಪ್ರತ್ಯೇಕ. ಅದು ಅವರ ಇಲಾಖೆಗೂ ಅನ್ವಯಿಸುತ್ತದೆ. ಯೋಗ್ಯ ವಿದ್ಯಾವಂತರಿಗೆ ಉತ್ತಮವಾದ, ಉನ್ನತವಾದ ಅಧಿಕಾರ ಸ್ಥಾನಗಳಿಗೆ ಬಡ್ತಿ ಅವಕಾಶ ಸಿಕ್ಕುವುದಿಲ್ಲ. ಸುಪ್ರೀಮ್ ಕೋರ್ಟಿನ ಸಲಹೆಯನ್ನು ಈ ಸರ್ಕಾರ ಅನುಕರಣ ಮಾಡಿಲ್ಲ. ಅದರಿಂದ ಹಾಗೆ ಬಡ್ತಿ ಪಡೆಯುವರೆ ಬಾಧಕ ಬಂದಿದೆ ಎಂದು ನಾನು ಹೇಳುತ್ತೇನೆ. ಡೆಪ್ಯುಟಿ ಕಮೀಷನರುಗಳ ಮತ್ತು ಡಿವಿಜನಲ್ ಕಮೀಷನರಗಳ ಸ್ಥಾನಗಳು ಎಷ್ಟಿತ್ತು, ಆ ಸ್ಥಾನಗಳಿಗೆ ಯಾವ ಯಾವ ಜಾತಿಗಳವರನ್ನು ನೇಮಕ ಮಾಡಿದ್ದಾರೆ ಎಂಬುದನ್ನು ಕೂಲಂಕಷ ವಾಗಿ ವಿಚಾರ ಮಾಡಿದರೆ ಆಗ ಅದು ಗೊತ್ತಾಗುತ್ತದೆ. ದಲಿತವರ್ಗದವರನ್ನು ಇವುಗಳಿಗೆ ನೇಮಕವೇ ಮಾಡಿಲ್ಲ ಅದರಿಂದ ಅನ್ಯಾಯವಾಗಿದೆ.

ಶ್ರೀ ಬಿ. ರಾಚಯ್ಯ.—ಆ ವಿಷಯದಲ್ಲಿ ಸುಪ್ರೀಮ್ ಕೋರ್ಟಿನವರು ಏನು ಡಿಸಿಷನ್ ತೆಗೆದು ಕೊಂಡು, ಏನೊಂದು ಡೈರೆಕ್ಷನ್ ಕೊಟ್ಟಿದ್ದಾರೆಯೋ ಅದನ್ನು ಕೇಂದ್ರ ಸರ್ಕಾರದವರು ಪರಿಶೀಲನೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆ ತೀರ್ಮಾನವನ್ನು ಅನುಸರಿಸಿ ನಮ್ಮ ಸರ್ಕಾರದವರು ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎಸ್. ಗೋಪಾಲ ಸಾಲೆನ್ನ.—ಈಗ ಈ ವಿಷಯದಲ್ಲಿ ಕೇಂದ್ರ ಸರ್ಕಾರದವರು ಏನು ತೀರ್ಮಾನ ತೆಗೆದುಕೊಂಡಿದ್ದಾರೆಯೋ ಅದು ಕೇಂದ್ರ ಸರ್ಕಾರದವರು ಇಂಪ್ಲಿಮೆಂಟ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅವರು ಹಾಗೆಯೇ ಮಾಡುತ್ತಾರೆ. ಆದರೆ ನಮ್ಮ ರಾಜ್ಯದಲ್ಲಿ ದಲಿತರಿಗೆ ಶೇಕಡಾ 18 ರಷ್ಟು ಸ್ಥಾನಗಳನ್ನೇನು ಸರಕಾರಿ ಹುದ್ದೆಗಳಲ್ಲಿ ಕೊಡಬೇಕೆಂದು ತೀರ್ಮಾನ ಮಾಡಿ ದ್ದಾರೆಯೋ ಹಾಗಿದ್ದರೆ ಅದು ಭರ್ತಿ ಆಗಿಲ್ಲ. ಅದು ಭರ್ತಿ ಆಗುವ ಎಲ್ಲಾ ರೀತಿಯಲ್ಲಿ ಅವಕಾಶ ವನ್ನು ಸರ್ಕಾರದವರು ಕಲ್ಪಿಸಿಕೊಡಬೇಕು. ಷೆಡ್ಯೂಲ್ ಕ್ಯಾಸ್ಟಿನವರಿಗೆ ಮತ್ತು ಟ್ರೈಬಿನವರಿಗೆ ಡಿವಿಜನಲ್ ಕಮೀಷನವರು ಮತ್ತು ಡೆಪ್ಯುಟಿ ಕಮೀಷನರು ಮುಂತಾದ ಕೀ ಪೋಸ್ಟುಗಳಲ್ಲಿ ಹೆಚ್ಚಿಗೆ ಯೋಗ್ಯರಾದಂತಹ ಜನಗಳಿಗೆ ಸಾಕಷ್ಟು ಅವಕಾಶವನ್ನು ಕಲ್ಪನೆ ಮಾಡಿಕೊಳ್ಳಬೇಕು. ಈ ತತ್ವವನ್ನು ಜಾರಿಗೆ ತರಬೇಕು. ಕೇಂದ್ರ ಸರ್ಕಾರದವರು ಏನು ಮಾಡಿದ್ದಾರೆಯೋ ಅದನ್ನು ನಾವು ಅನುಸರಿಸು ತ್ತೇವೆ ಎಂದರೆ ಸಾಲದು ಅಲ್ಲ ನಾನು ಹೇಳುವ ಕೊರತೆಯ ವಿಚಾರವೇ ಇಲ್ಲ. ಅದನ್ನು ನೀವು ಅನುಸರಿಸಿ ಈಗ ನಮ್ಮ ರಾಜ್ಯದಲ್ಲಿ ಇರುವಂತಹ ನಿಯಮದ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಕೊಡತಕ್ಕ ಸೌಲಭ್ಯದಲ್ಲಿ ಇನ್ನೂ ಕೊಡದೆ ಏನು ಕಡಿಮೆ ಬಿದ್ದಿದೆಯೋ ಅದನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಈ ಡಿವಿಜನಲ್ ಕಮೀಷನರ್ ಮತ್ತು ಡೆಪ್ಯುಟೀ ಕಮೀ ಷನರ ಹುದ್ದೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇತ್ತು. ಈಗ ಎಷ್ಟು ಜನಗಳನ್ನು ನೇಮಕ ಮಾಡಿಕೊಂಡಿ

(ಶ್ರೀ ಎಸ್. ಗೋಪಾಲ ಸಾರೆನ್ನ)

ದ್ದೀರಿ, ಈಗ ನೇಮಕ ಮಾಡಿಕೊಂಡಂತಹ ಹುದ್ದೆಗಳಲ್ಲಿ ಷೆಡ್ಯೂಲ್ ಕ್ಯಾಸ್ಟಿನವರಿಗೆ ಮತ್ತು ಟ್ರೈಬ್ಸಿಗೆ 18 ಪರ್ಸೆಂಟಿನವೂ ಹುದ್ದೆಗಳನ್ನು ಕೊಟ್ಟಿದ್ದೀರಾ ಎಂದು ನಾನು ಸರ್ಕಾರದವರನ್ನು ಕೇಳುತ್ತೇನೆ. ಅದು ಕೊಡಲಿಲ್ಲ.

ಇನೊಂದು ವಿಚಾರ. ಬಡ್ಜೆಟ್ ಪುಸ್ತಕದಲ್ಲಿ ಕೆಲವು ಆದಿಕರ್ನಾಟಕ ಹಾಸ್ಟಲುಗಳಿಗೆ, ಕೆಲವು ಬೋವಿ ಹಾಸ್ಟಲುಗಳಿಗೆ ಕೆಲವು ಆದಿಜಾಂಬವ ಹಾಸ್ಟೆಲುಗಳಿಗೆ 2 ಲಕ್ಷ ಅಥವ 3 ಲಕ್ಷ 14 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಅದರಲ್ಲಿ ಬಾಕಿ ಜಾತಿಯವರದೇನೂ ಗೊತ್ತಾಗುವುದಿಲ್ಲ. ಅದರಲ್ಲಿ ಬೋವಿಹಾಸ್ಟಲ್ ಅಥವ ಆದಿಕರ್ನಾಟಕ ಜಾತಿಯವರ ಹಾಸ್ಟಲಿನ ಪ್ರಶ್ನೆ ಹೇಗೆ ಬಂತು ? ಷೆಡ್ಯೂಲ್ ಕ್ಯಾಸ್ಟಿನವರಲ್ಲಿಯ ಆದಿಕರ್ನಾಟಕ ಜಾತಿಯವರೂ ಬೋವಿಯವರೂ ಸೇರಿಕೊಂಡಿದ್ದಾರೆ. ಆದ್ದರಿಂದ ಅದು ಏನಾದರೂ ತಪ್ಪು ಇದೆಯೋ ಏನೋ ಗೊತ್ತಾಗಲಿಲ್ಲ ಅದನ್ನು ಸರ್ಕಾರದವರು ನೋಡಬೇಕು. ಇನ್ನುಮುಂದೆ ಷೆಡ್ಯೂಲ್ ಕ್ಯಾಸ್ಟಿನವರಿಗೆ ಸಂಬಂಧಪಟ್ಟಹಾಗೆ ಕಮ್ಯುನಲ್ ಹೋಸ್ಟಲ್‌ಗಳು ಬರಬಾರದು ಎಂದು ನಾನು ಹೇಳುತ್ತೇನೆ.

ಇನ್ನು ಈ ಇಲಾಖೆಯಲ್ಲಿ ಕೆಲವು ಒಳ್ಳೆಯ ಸಂಸ್ಥೆಗಳು ಇವೆ. ತಪ್ಪಿತಸ್ಥರಾದ ಸಣ್ಣ ಸಣ್ಣ ಮಕ್ಕಳನ್ನು ರಿಮ್ಯಾಂಡ್ ಹೋಮ್‌ಗಳಲ್ಲಿ ಸೇರಿಸಿಕೊಂಡು ಅವರನ್ನು ಸರ್ಟಿಫೈಯ್ಡ್ ಸ್ಕೂಲುಗಳಿಗೆ ಕಳುಹಿಸುತ್ತಿದ್ದಾರೆ. ಈ ರಿಮ್ಯಾಂಡ್ ಹೋಮ್‌ನವರು ನಡೆಸತಕ್ಕ ಸರ್ಟಿಫೈಯ್ಡ್ ಸ್ಕೂಲುಗಳು ಏನಿದೆ ಇವುಗಳನ್ನು ನಡೆಸತಕ್ಕ ಕ್ರಮ ಸರಿಯಾಗಿಲ್ಲ. ಅದು ಕೂಡ ಇತರ ಶಾಲೆಗಳಂತೆಯೇ ಯೋಗ್ಯತೆಯ ಶಾಲೆಗಳಾಗಿರಬೇಕು. ಏನೋತಪ್ಪು ಮಾಡಿದ ಮಕ್ಕಳು ಸಿಕ್ಕುತ್ತವೆ ಎಂದು ಕರೆದು ಕೊಂಡು ಬಂದು ಅವರನ್ನು ಪ್ರಾಣಿಗಳ ಹಾಗೆ ಸಾಕಿ ನೋಡತಕ್ಕದ್ದು ಸರಿಯಲ್ಲ. ಆದ್ದರಿಂದ ಈ ರಿಮ್ಯಾಂಡ್ ಹೋಮ್‌ನವರು ನಡೆಸತಕ್ಕ ಸರ್ಟಿಫೈಯ್ಡ್ ಸ್ಕೂಲುಗಳು ಏನಿವೆ ಇವುಗಳನ್ನು ವಿದ್ಯಾ ಖಾತೆಯವರ ವಶಕ್ಕೆ ಕೊಟ್ಟು ಅವರು ಈ ಸ್ಕೂಲುಗಳಿಗೆಲ್ಲಾ ಒಂದು ಯೂನಿಫಾರಮ್ ಸಿಲಬಸ್ ಅನ್ನು ಮಾಡಿ ಆ ಸ್ಕೂಲುಗಳನ್ನು ವಿದ್ಯಾ ಖಾತೆಯವರೇ ಏತಕ್ಕೆ ನಡೆಸಬಾರದು ? ಅದಕ್ಕೋಸ್ಕರವಾಗಿ ಈ ಸರ್ಟಿಫೈಯ್ಡ್ ಸ್ಕೂಲುಗಳು ಏನಿವೆ ಇವುಗಳನ್ನು ವಿದ್ಯಾ ಖಾತೆಗೆ ವಹಿಸಿ ಒಳ್ಳೆಯ ಅನುಭವಶಾಲಿಗಳಾದಂತಹ ವಿದ್ಯಾವಂತರ ಆಡಳಿತದಲ್ಲಿ ಇವುಗಳನ್ನು ನಡೆಸುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಿದರೆ ಒಳ್ಳೆಯದು ಎಂದು ನಾನು ಹೇಳುತ್ತೇನೆ. ಅದೇರೀತಿ ತಪ್ಪಿತಸ್ಥರಾದ ಹೆಣ್ಣುಮಕ್ಕಳನ್ನು ಸುಧಾರಣೆ ಮಾಡುವುದಕ್ಕೋಸ್ಕರ ಅವರನ್ನು ರಿಮ್ಯಾಂಡ್ ಹೋಮಿನಲ್ಲಿ ಇಟ್ಟುಕೊಂಡಿರುತ್ತಾರೆ. ಅಂಥಾ ದಾರಿತಪ್ಪಿದ ಮಹಿಳೆಯರನ್ನು ಪೇಟೆ ಪಟ್ಟಣಗಳ ಮಧ್ಯೆ ಬಾಡಿಗೆ ಕಟ್ಟಡದಲ್ಲಿ ಸಾಕುವುದಕ್ಕಿಂತಲೂ ನಗರಗಳ ಹೊರಗಡೆ ವಿಶಾಲಸ್ಥಳ ಕಟ್ಟಡ ಒದಗಿಸಿ ಕೈಗಾರಿಕೆ, ಕೃಷಿ, ನರ್ತನ, ಗಾಯನಾದಿಗಳಲ್ಲಿ ತರಬೇತಿಕೊಟ್ಟು ಮಹಿಳಾದಿಗಳ ರಕ್ಷಣೆಯಲ್ಲಿ ಜೈಲಿನವರ ವಶಕ್ಕೆ ಕೊಟ್ಟರೆ ಒಳ್ಳೆಯದು. ಏತಕ್ಕೆಂದರೆ ಅಲ್ಲಿ ಮಹಿಳಾ ಪೋಲೀಸಿನವರು ಇರುತ್ತಾರೆ ಅವರು ಬಹಳ ಭದ್ರತೆಯಿಂದ ಆ ಮಹಿಳೆಯರನ್ನು ಸರಿಯಾಗಿ ನೋಡಿಕೊಳ್ಳುತ್ತಾರೆ. ಮಹಿಳಾ ರಿಮ್ಯಾಂಡ್ ಹೋಮ್‌ನಲ್ಲಿ ತಪ್ಪಿತಸ್ಥರಾದಂತಹ ಮಹಿಳೆಯರಿಗೆ ಕೊಡತಕ್ಕಂಥ ಕಿರುಕುಳವನ್ನು ಸಹಿಸುವುದಕ್ಕೆ ಆಗುವುದಿಲ್ಲ. ಅಲ್ಲದೆ ಅವರಿಗೆ ಅಲ್ಲಿ ಈಗ ಮಾನಸಿಕವಾಗಿ ಪರಿವರ್ತನೆಗೆ ಅವಕಾಶವಿಲ್ಲ. ಈ ದೃಷ್ಟಿಯಿಂದ ಅವರನ್ನು ಜೈಲಿಗೆ ಕಳುಹಿಸುವುದು ಒಳ್ಳೆಯದು. ಉತ್ತಮ ಆರೋಗ್ಯ ವಾತಾವರಣದ ಉತ್ತಮ ಮಹಿಳೆಯರಾಗಿ ಪರಿವರ್ತನೆಗೆ ಸಾಧ್ಯವಿದೆ ಇಲ್ಲದೆ ಹೋದರೆ ಅವರು ಅಲ್ಲಿ ಬಹಳ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಮತ್ತು ಹಿಂದಿನ ದುರಭ್ಯಾಸವನ್ನೇ ಜೀವನ ಸಾಗಿಸಲು ಮುಂದುವರಿಸಬೇಕಾಗುತ್ತದೆ.

ಇನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್‌ಗಳನ್ನು ಬಹಳ ವಿಳಂಬವಾಗಿ ಕೊಡುತಿದ್ದಾರೆ. ಆ ರೀತಿ ಅವರು ವಿದ್ಯಾರ್ಥಿಗಳಿಗೆ ಕೊಡತಕ್ಕಂಥ ಸ್ಕಾಲರ್‌ಷಿಪ್‌ಗಳನ್ನು ಯಾವಕಾಲದಲ್ಲೋ ಕೊಟ್ಟರೆ ಅದು ವಿದ್ಯಾರ್ಥಿಗಳಿಗೆ ಏನೂ ಪ್ರಯೋಜನವಾಗುವುದಿಲ್ಲ. ಈಗಾಗಲೇ ನಮ್ಮ ಸ್ನೇಹಿತರಾದ ಶ್ರೀಮಾನ್ ಸುಬ್ಬಯ್ಯ ನಾಯಕ್ ಅವರು ಹೇಳಿದಹಾಗೆ ವರ್ಷದ ಪ್ರಾರಂಭದಲ್ಲಿ ವಿದ್ಯಾರ್ಥಿಗಳಿಗೆ ಸ್ಕಾಲರ್ ಷಿಪ್‌ಗಳನ್ನು ಕೊಟ್ಟರೆ ಅವರು ತಮ್ಮ ವಿದ್ಯಾಭ್ಯಾಸಕ್ಕೆ ಬೇಕಾದ ಪುಸ್ತಕ ಡ್ರೆಸ್ ಮುಂತಾದ ಸಲಕರಣೆಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅದು ಬಿಟ್ಟು ಅವರಿಗೆ ಯಾವುದೋ ಕಾಲದಲ್ಲಿ ಮಾರ್ಚಿ ತಿಂಗಳಲ್ಲಿ ಸ್ಕಾಲರ್‌ಷಿಪ್ ಅನ್ನು ಕೊಟ್ಟರೆ ಅವರು ಅದನ್ನು ಯಾವುದೋ ಒಂದು ಬಾಬಿಗೆ ಖರ್ಚು ಮಾಡಿಕೊಳ್ಳುತ್ತಾರೆ. ಅದು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆಯೇ ಎಂದು ನಾನು ಕೇಳುತ್ತೇನೆ. ಖಂಡಿತವಾಗಿ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ವಿದ್ಯಾರ್ಥಿಗಳಿಗೆ ಏನು ಸವಲತ್ತನ್ನು ಕೊಡುತ್ತಾರೆಯೋ ಅದನ್ನು ಅವರಿಗೆ ಕಾಲಕ್ಕೆ ಸರಿಯಾಗಿ ಕೊಡದೇ ಇದ್ದರೆ ಪ್ರಯೋಜನ

ಕರ್ನಾಟಕ ರಾಜ್ಯ [illegible] (B)
([illegible] ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No......4832

 ದಿನಾಂಕ Date.............................

ವೇನು ? ಹಾಸ್ಟೆಲ್‌ಗಳಿಗೆ ವೆಲ್‌ಫೇರ್ ಗ್ರಾಂಟನ್ನು ಒಬ್ಬೊಬ್ಬರಿಗೆ 18 ರಿಂದ 20 ರೂಪಾಯಿ ಗಳವರೆಗೆ ಜಾಸ್ತಿ ಮಾಡಿದ್ದೇವೆಂದು ಮೊನ್ನೆ ಮಾನ್ಯ ಮಂತ್ರಿಗಳು ಹೇಳಿದರು. ಅದೇರೀತಿ ಚಿಲ್ಡ್ರನ್ಸ್ ವೆಲ್‌ಫೇರ್ ಗ್ರಾಂಟನ್ನು ಕೂಡ ಜಾಸ್ತಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಷೆಡ್ಯೂಲ್ ಕ್ಯಾಸ್ಟಿನವರ ಅಭಿವೃದ್ಧಿಗಾಗಿ, ವೆಲ್‌ಫೇರ್‌ಗೋಸ್ಕರವಾಗಿ ಸರ್ಕಾರದವರು ಏನು ಗ್ರಾಂಟನ್ನು ಕೊಡುತ್ತಾರೆಯೋ ಅದನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಉಪಯೋಗ ಮಾಡು ವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ಹೇಳುತ್ತೇನೆ. ಈಗ ಕೆಲವು ಜಿಲ್ಲೆಗಳು ಹೆಚ್ಚು ಹೆಚ್ಚಾಗಿ ಉಪಯೋಗಿಸಿ ಕೆಲವು ಜಿಲ್ಲೆಗಳಿಗೆ ತೀರಾಕಡಿಮೆಯಾಗುತ್ತೇವೆ.

ಇನ್ನು ಷೆಡ್ಯೂಲ್ ಕ್ಯಾಸ್ಟಿನವರಿಗೆ ಹೌಸಿಂಗ್ ಗ್ರಾಂಟ್ ಲೋನ್ ಕೊಡುವುದಕ್ಕೋಸ್ಕರ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಹೌಸಿಂಗ್ ಸೊಸೈಟಿಯನ್ನು ಫಾರಮ್ ಮಾಡಿ ಆ ಸೊಸೈಟಿಯ ಮುಖಾಂತರ ಅವರಿಗೆ ಮನೆಗಳನ್ನು ಕಟ್ಟುವುದಕ್ಕೋಸ್ಕರ ಸಾಲದರೂಪದ ಸಹಾಯವನ್ನು ಮಾಡಬೇಕೆಂದು ಕೆಲವು ಕಾಲದಿಂದ ಹೇಳಿದ್ದಾರೆ. ಈಗ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿಯೂ ಹೌಸಿಂಗ್ ಸೊಸೈಟಿಗಳನ್ನು ಫಾರಮ್ ಮಾಡಿಕೊಂಡಿದ್ದಾರೆ. ಅದರಲ್ಲಿ ಕೆಲವು ಸೊಸೈಟಿಗಳಿಗೆ ಸರ್ಕಾರದವರು ಸ್ವಲ್ಪಮಟ್ಟಿಗೆ ಹಣವನ್ನು ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಒಂದು ಸೊಸೈಟಿಗೆ ಒಂದು ಲಕ್ಷ 64 ಸಾವಿರದ 200 ರೂಪಾಯಿಗಳನ್ನು ಕೊಟ್ಟಿದಾರೆ. ಆ ಹಣದಲ್ಲಿ ಈ ವರೆಗೂ ಕೂಡ 91, 700 ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಸೌತ್ ಕೆನರಾದಲ್ಲಿ 7 ಸೊಸೈಟಿಗಳಲ್ಲಿ 2 ಸೊಸೈಟಿಗಳಿಗೆ ಕೇವಲ 7 ಮನೆಗಳನ್ನು ಕಟ್ಟುವುದಕ್ಕೆ ರೂ. 21,000 ಮಾತ್ರ ಹಣವನ್ನು ಕೊಟ್ಟಿದ್ದಾರೆ. ಆ 7 ಮನೆಗಳಲ್ಲಿ ಎರಡು ಮನೆಗಳು ಮಳೆ ಬಂದರೆ ಬಿದ್ದುಹೋಗುವ ಪರಿಸ್ಥಿಗೆ ಬಂದಿವೆ. ಸರ್ಕಾರದವರು ಷೆಡ್ಯೂಲು ಕ್ಯಾಸ್ಟಿನವರ ಹೌಸಿಂಗ್ ಯೋಜನೆಗೋಸ್ಕರ ಸ್ವಲ್ಪ ಹಣ ವನ್ನು ಒದಗಿಸಿದ್ದರೂ ಕೂಡ ಎಷ್ಟೋ ಕಡೆಗಳಲ್ಲಿ ಸೊಸೈಟಿಗಳಿಗೆ ಹಣವನ್ನು ಕೊಟ್ಟಿಲ್ಲ. ಈಗ ಉದಾರಣೆಗೆ ಹೇಳುವುದಾದರೆ ಮಂಡ್ಯಾಜಿಲ್ಲೆಯಲ್ಲಿ ಒಂದು ಪೈ ಕೂಡ ಸಿಕ್ಕಿಲ್ಲ. ಎಷ್ಟೋ ಕಡೆಗಳಲ್ಲಿ ಜನಗಳು ಸೊಸೈಟಿಗಳನ್ನು ಫಾರಮ್ ಮಾಡಿಕೊಂಡಿದ್ದಾರೆ. ಆದರೆ ಆ ಸೊಸೈಟಿಗಳಿಗೆ ಸರ್ಕಾರ ದವರು ಹಣವನ್ನು ಒದಗಿಸಿಲ್ಲ. ಈಗ ಎರಡು ವರ್ಷಗಳಿಂದ ಗುಡಿಸಲುಗಳು ಇಲ್ಲವೆಂದರೆ ಇದು ಯಾವ ಯೋಜನೆ ? ಏತಕ್ಕೆ ಈ ಯೋಜನೆಯನ್ನು ಮಾಡಬೇಕು. ಸಂಖ್ಯಾನುಸಾರವಾಗಿ, ತಾಲ್ಲೂಕು ವಾರು ಪ್ರತಿಯೊಬ್ಬನಿಗೂ ಹಂಚಬೇಕು. ಈ ರೀತಿಯಾದ ಒಂದು ಯೋಜನೆಯನ್ನು ಸರಿಯಾದ ರೀತಿಯಲ್ಲಿ ಹಾಕಿಕೊಳ್ಳಬೇಕು. ಯಾರು ಶಕ್ತಿವಂತರೋ, ಯಾರು ಬಲವಂತರಾಗಿದ್ದಾರೋ, ಯಾರು ಪ್ರಭಾವಶಾಲಿಗಳಾಗಿದ್ದಾರೋ ಅವರೇ ಇದನ್ನು ಉಪಯೋಗಮಾಡಿಕೊಳ್ಳುತ್ತಿದ್ದಾರೆಯೇ ಹೊರತು, ಇದರ ಪ್ರಯೋಜನ ಸಾಮಾನ್ಯ ಜನತೆಗೆ ಸಿಗುವುದಿಲ್ಲವೆಂದು ಸರಕಾರದ ಗಮನಕ್ಕೆ ತರಬೇಕಾಗಿದೆ.

3-30 P.M.

ಒಂದೊಂದು ಸೊಸೈಟಿಗೆ ಲಕ್ಷಗಟ್ಲೆ ಹೇಗೆ ಹೋಯಿತು, ಅದು ಏಕೆ ಖರ್ಚಾಗಿಲ್ಲವೆಂದು ಸಂಬಂಧಪಟ್ಟ ಸೋಷಿಯಲ್ ವೆಲ್‌ಫೇರ್ ಇಲಾಖೆಯವರು ಕೂಲಂಕಷವಾಗಿ ತನಿಖೆ ನಡೆಸಿ, ವಿವರಗಳನ್ನು ಸಂಗ್ರಹಿಸುವುದು ಅಗತ್ಯ. ಹೀಗೆ ಮುಂದೆ ಆಗದ ಹಾಗೆ ಮುಂಜಾಗ್ರತೆ ಕ್ರಮ ಗಳನ್ನು ತೆಗೆದುಕೊಳ್ಳಬೇಕು. ಇದು ನನ್ನ ಇಲಾಖೆಗೆ ಸಂಬಂಧಪಟ್ಟದ್ದಲ್ಲವೆಂದು ಹೇಳಬಹುದು, ಅದು ಸರಿಯಲ್ಲ. ಸಂಬಂಧವಿರಲಿ, ಇಲ್ಲದಿರಲಿ, ಯಾವುದೇ ಇಲಾಖೆಯಲ್ಲಿ ದಲಿತರಿಗೆ, ಗಿರಿಜನರಿಗೆ ಸಂಬಂಧಪಟ್ಟ ಸವಲತ್ತುಗಳನ್ನು ದುರುಪಯೋಗವಾಗುತ್ತಿದೆಯೋ, ಅಥವಾ ಅಲ್ಲಿಯ ಕ್ರಮಕ್ಕೆ ವಿರುದ್ಧವಾಗಿ ಇವರಿಗಾಗಿರುವ ಹಣ ಪೋಲಾಗುತ್ತಿದೆಯೋ, ಅಂಥ ಸಂದರ್ಭಗಳಲ್ಲಿ ಈ ಇಲಾಖೆ ಯವರು ಪ್ರವೇಶ ಮಾಡಿ ಅದನ್ನು ತಡೆಗಟ್ಟಬೇಕು. ಯಾವ ಸಂದರ್ಭದಲ್ಲಿ ಯಾವುದು ಮಾಡುತ್ತಿರು ತ್ತಾರೆ ಎಂದು ಇಲಾಖೆಯ ಅಧಿಕಾರಿಗಳನ್ನು ಸರ್ಕಾರದ ಮೂಲಕ ಕೇಳಬೇಕಾಗಿದೆ.

ಇನ್ನು ಹರಿಜನ ಸೇವಾ ಸಂಘದ ವಿಚಾರವನ್ನು ಇಲ್ಲಿ ಸ್ವಲ್ಪ ತರಲೇಬೇಕಾಗಿದೆ, ಏಕೆಂದರೆ ಮಾನ್ಯ ಮಂತ್ರಿಣಿಯವರು ಅದರ ಅಧ್ಯಕ್ಷಿಣಿಯಾಗಿದ್ದಾರೆ. ಅದು ಬಹಳ ಸಂತೋಷ. ಇವರು ಅಧ್ಯಕ್ಷಿಣಿಯಾಗಿ ಬಂದ ಮೇಲೆ ಅಲ್ಲಿ ವ್ಯವಹಾರ ಕೂಲಂಕಶವಾಗಿ ಸರ್ಕಾರದ ಗಮನಕ್ಕೆ ಬಂದು ಒಂದು ಪರಿಣಾಮವಾದೀತು. ಹರಿಜನ ಸೇವಾ ಸಂಘಕ್ಕೆ ಕೇಂದ್ರ ಸರ್ಕಾರದವರು ಧಾರಾಳವಾಗಿ ಹಣವನ್ನು ಕೊಡುತ್ತಾರೆ, ಅವರು ಪ್ರತಿ ರಾಜ್ಯಕ್ಕೂ ಕೊಡುತ್ತಾರೆ. ಅದೇ ರೀತಿ ಹಾಸ್ಟಲು ಗಳಿಗೆ ಕೊಡುತ್ತಾರೆ, ಬಡವರಿಗೆ ಸ್ಕೈಟುಗಳನ್ನು ಕೊಡಲಾಗುತ್ತದೆ. ಆದ್ದರಿಂದ ಲಕ್ಷಾಂತರ ರೂಪಾಯಿ ಬೆಲೆ ಬಾಳುವಂಥ ಸ್ವತ್ತುಗಳು ಹರಿಜನ ಸೇವಾ ಸಂಘದಲ್ಲಿವೆ. ಆದರೆ ಅನೇಕ ಕಡೆ ಅವುಗಳ ಬಗ್ಗೆ ಲೆಕ್ಕಪತ್ರಗಳಿಲ್ಲ. ಆಸ್ತಿ ಪಾಸ್ತಿಗಳ ರಿಕಾರ್ಡುಗಳಿಲ್ಲ, ಯಾರ್ಯಾರಿಗೋ ಆ ಆಸ್ತಿ

(ಶ್ರೀ ಎಸ್. ಗೋಪಾಲ ಸಾರೆನ್ನ)

ಅಕ್ರಮವಾಗಿ ಹೋಗುತ್ತಿದೆ. ಅಕ್ರಮವಾಗಿ ಕ್ರಯಪತ್ರಗಳೂ ಆಗಿವೆ. ಅವನ್ನೆಲ್ಲಾ ಪರಿಶೋಧಿಸಿದರೆ ಸಂಘದ ಸ್ವತ್ತನ್ನು ಸರ್ಕಾರ ಪತ್ತೆ ಮಾಡಬಹುದು. ಅದು ಸಾರ್ವಜನಿಕ ಸ್ವತ್ತು ಮತ್ತು ಸಾರ್ವಜನಿಕ ''ಟ್ರಸ್ಟ್'' 1932ರಲ್ಲಿ ಗಾಂಧೀಜಿಯವರು ಭಿಕ್ಷೆ ಮಾಡಿ ಸಂಗ್ರಹಿಸಿದ ಹಣದಿಂದ ಸಂಪಾದಿಸಿದ ಸ್ವತ್ತು ಇದು. ಈ ಸಂಘದ ಸ್ವತ್ತು ಸಂಪಾದಿಸಲು ಗಾಂಧೀಜಿಯ ಭಿಕ್ಷೆಯ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಧಾರಾಳವಾಗಿ ಗ್ರಾಂಟು ಮಂಜೂರು ಮಾಡಿ ಸಹಾಯ ಒದಗಿಸಿದೆ. ಗಾಂಧೀಜಿಯವರು ಸಂಪಾದಿಸಿದಂಥ ಸ್ವತ್ತನ್ನು ಸರ್ಕಾರ ಸಿಕ್ಕಿದವರ ಪಾಲಾಗಲೂ ಅವಕಾಶ ಕೊಟ್ಟಿದೆ. ಆ ಸ್ವತ್ತು ಈಗ ಪೋಲಾಗುತ್ತಾ ಇದೆ. ಅದು ಯಾರ್ಯಾರ ಕೈಗೋ ಹೋಗುತ್ತಿದೆ. ಇದು ಆಗಬಾರದು. ಸರ್ಕಾರ ಅದಕ್ಕೆ ಪ್ರವೇಶಿಸಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೋಡಿದರೆ ಒಂದು ಗ್ರಾಮದಲ್ಲಿ 50 ಎಕರೆ ಜಮೀನನ್ನು ಹರಿಜನ ಸೇವಾ ಸಂಘಕ್ಕೆ ಕೊಟ್ಟಿದೆ, ಹಾಗೆಯೇ ವಿಜಯ ಬ್ಯಾಂಕಿನಲ್ಲಿ ಸಂಘದ ಲೆಖ್ಖದಲ್ಲಿ ಹಣವಿದೆ. ಅದರ ಬ್ರಾಂಚುಗಳ ಅಧ್ಯಕ್ಷರುಗಳು, ಕಾರ್ಯದರ್ಶಿಯವರೂ, ಅದರ ಅಕೌಂಟ್ಸ್‌ನ್ನು ಆಡಿಟ್ ಮಾಡಿಸದೆ, ಸಭೆಗಳನ್ನು ಕೂಡಿಸದೆ. ವಾರ್ಷಿಕ ವರದಿಗಳನ್ನು ತಯಾರಿಸದೆ, ರಿಜಿಸ್ಟ್ರಾರರಿಗೆ ಕಳುಹಿಸದೆ ರಿಜಿಸ್ಟ್ರೇಷನ್ ಸಹ ರದ್ದಾಗಿದೆ. ಅಲ್ಲಲ್ಲಿಯ ಆಸ್ತಿಪಾಸ್ತಿಗಳು ಆಯಾ ಅಧ್ಯಕ್ಷ ಕಾರ್ಯದರ್ಶಿಗಳ ಸ್ವಂತ ಸ್ವತ್ತುಗಳಾಗಿ ಹೋಗಿವೆ. ಇಲ್ಲಿ ಮಾತ್ರ ಅಂತಹ ಅಕ್ರಮದ ಬಗ್ಗೆ ಕ್ರಮ ನಡೆಸಿರುವುದಿಲ್ಲ. ಹೀಗೆಯೇ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಹಣ ; ಆಸ್ತಿಪಾಸ್ತಿ ಪೋಲಾಗಿವೆಯೆಂದು ಸರ್ಕಾರ ತನಿಖೆ ಮಾಡಬೇಕು. ಬೆಂಗಳೂರು ಶ್ರೀರಾಮಪುರದಲ್ಲಿರುವ ಹರಿಜನ ಸೇವಕ ಸಂಘದಲ್ಲಿ ಸಂಘದ ಸ್ವತ್ತುಗಳು ಪರರ ಕೈಗೆ ಅಕ್ರಮವಾಗಿ ಸೇರಿ, ಅವುಗಳ ವಿಚಾರದಲ್ಲಿ ವಿವಾದಗಳು ನಡೆದು, ಈಗ ಪೋಲೀಸು ತನಿಖೆಗಳು ನಡೆದು ಈಗ ಕೋರ್ಟಿಗೆ ಸಹ ಹೋಗಿದೆ. ಅದಕ್ಕೆ ಕೋರ್ಟಿನಿಂದ ಸ್ಟೇ ಆರ್ಡರ್ ತರಬೇಕೆಂದು ಏನೇನೋ ಮಾಡುತ್ತಿದ್ದಾರೆ. ರಿಜಿಸ್ಟ್ರೇಶನ್ ಆಕ್ಟ್ ಪ್ರಕಾರ ಇರಬೇಕಾದ ರೆಕಾರ್ಡುಗಳನ್ನು ಮರೆಮಾಚುತ್ತಿದ್ದಾರೆ. ಈ ಸಾರ್ವಜನಿಕ ಆಸ್ತಿಪಾಸ್ತಿಗೆ ಸರ್ಕಾರದ ಗಮನವನ್ನು ಕೊಟ್ಟು ರಕ್ಷಣೆ ಕೊಡಬೇಕು. ನಾನಾದರೂ ಈ ವಿಚಾರದಲ್ಲಿ ನಮ್ಮ ಮಾನ್ಯ ಸಚಿವೆಯರು ಬಹಳ ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೆಂದು ನಂಬಿದ್ದೇನೆ. ಕಳೆದ ಸಾಲಿನಲ್ಲಿ ಅವರು ಉತ್ತರ ಕೊಡುವಾಗ ಬಹಳ ಹುಮ್ಮಸ್ಸಿನಿಂದ ಕೆಲಸ ಕಾರ್ಯಗಳನ್ನು ಪರಿಶೀಲಿಸುತ್ತಿದ್ದೇನೆ ಅಂತ ಹೇಳಿದ್ದರು. ಅದನ್ನು ಒಪ್ಪುತ್ತೇನೆ. ಅವರಿಗೆ ಈಗೀಗ್ಯೆ ಸ್ಫೂರ್ತಿ ಇಲ್ಲವೆಂದು ಹೇಳುವುದಿಲ್ಲ. ಆದರೆ ಅದಕ್ಕೆ ಹೆಚ್ಚಿನ ಲೈಫ್ ಬರಬೇಕು, ಈಗ ಅದು ಸ್ವಲ್ಪ ಕಮ್ಮಿ ಆಗಿದೆ. ಅದನ್ನು ಸಂಶೋಧನೆ ಮಾಡಿ ನೋಡಬೇಕು. ಹರಿಜನೋದ್ಧಾರ ಕಾರ್ಯಗಳ ಇಲಾಖೆಗೆ ಸಂಬಂಧಪಟ್ಟ ಉನ್ನತ ಮಟ್ಟದ ಅಧಿಕಾರಿಗಳು ಅಂದರೆ ಸಮಾಜ ಕಲ್ಯಾಣ ಡೈರೆಕ್ಟರವರು ಈ ವಿಚಾರವಾಗಿ ಕೂಡಲೇ ಪರಿಶೀಲಿಸಬೇಕಾಗಿದೆ.

ಒಂದು ವಿಚಾರ ಮರೆತುಬಿಟ್ಟೆ ; ಹೇಳಲಿಕ್ಕೆ ; ಡಿಸ್ಟ್ರಿಕ್ಟ್ ಸೋಶಿಯಲ್ ವೆಲ್‌ಫೇರ್ ಆಫೀಸರ್ ನೇಮಕ ಮಾಡುವ ಪ್ರಶ್ನೆ ಇದೆ. ಅವರಿಗೆ ಒಂದು ಸ್ಟೇಟಸ್ ಇರಬೇಕು. ಅವರು ಡೆಪ್ಯುಟಿ ಕಮೀಷನರ ಕೈ ಕೆಳಗೆ ಇರುವ ಬದಲು, ನೇರವಾಗಿ ಸಮಾಜ ಕಲ್ಯಾಣ ಇಲಾಖಾ ಡೈರೆಕ್ಟರವರ ಅಧೀನದಲ್ಲಿರಬೇಕು. ಅವರು ಡೆವಲಪ್‌ಮೆಂಟ್ ಅಸಿಸ್ಟೆಂಟರ ಕೈ ಕೆಳಗಿರುವುದರಿಂದ, ಅವರ ವರದಿಗಳು ಡೆವಲಪ್‌ಮೆಂಟ್ ಅಸಿಸ್ಟೆಂಟರು ಮತ್ತು ಜಿಲ್ಲಾ ಡೆಪ್ಯುಟಿ ಕಮೀಷನರ ಮೂಲಕ ಸರ್ಕಾರಕ್ಕೆ ಬರಬೇಕಾಗಿದೆ. ಅಥವಾ ಡೈರೆಕ್ಟರಿಗೆ ಬರಬೇಕು. ಈ ಮೂರು ಮಟ್ಟದಲ್ಲಿ ಹೋಗಬೇಕಾಗಿರುವುದರಿಂದ ಯೋಜನೆಗಳು ಕಾರ್ಯಗತವಾಗಲು ತಡವಾಗುತ್ತದೆ. ಈ ಡಿಸ್ಟ್ರಿಕ್ಟ್ ವೆಲ್‌ಫೇರ್ ಆಫೀಸರ ಹುದ್ದೆ ಕೆಲವು ತಿಂಗಳುಗಳಿಂದ ಭರ್ತಿಯಾಗಿಲ್ಲ. ಇವರಿಲ್ಲದೆ ಈಗ ಬಹಳ ಸುಸೂತ್ರವಾಗಿ ಕೆಲಸ ಕಾರ್ಯಗಳು ಆಗುತ್ತಿವೆ. ಈ ಹುದ್ದೆ ಬೇಡವೇ ಬೇಡ. ಈಗಿನ ರೀತಿ ವ್ಯವಸ್ಥೆ ಅಗತ್ಯವಿಲ್ಲ ಮತ್ತು ಅನಾವಶ್ಯಕ. ಇದನ್ನು ರದ್ದು ಮಾಡಿದರೆ ಬಹಳ ಹಣ ಉಳಿಯುತ್ತದೆ. ಈ ಉದ್ಯೋಗಗಳ ರದ್ದಿನಿಂದ ಉಳಿಯುವ ಹಣದಿಂದ ಆರ್ಥಿಕ ಸುಧಾರಣಾ ಕೆಲಸ ಕಾರ್ಯ ಮಾಡಬಹುದು. ಆಗ ಸುಸೂತ್ರವಾಗಿ ಕೆಲಸ ಆಗುತ್ತದೆ. ಈ ಹುದ್ದೆಗಳಿಂದ ಕೂಡ ಅಪಾರವಾದ ಹಣ ವ್ಯಯವಾಗುತ್ತದೆ ಇದರ ಜೊತೆ ಬಿ.ಡಿ.ಓ. ಮತ್ತು ರೆವಿನ್ಯೂ ಆಫೀಸರು ಸುಮ್ಮನೆ ಜೀಪುಗಳಲ್ಲಿ ತಿರುಗಾಡಿಕೊಂಡು, ಟಿ.ಎ. ಡ್ರಾ ಮಾಡಿ, ಟ್ರೆಜರಿ ಹಣ ಹಾಳುಮಾಡುತ್ತಿದ್ದಾರೆ. ಈ ಹುದ್ದೆಯಿಂದ ಯಾವ ಪ್ರಯೋಜನವೂ ಹೆಚ್ಚಿನ ರೀತಿಯಲ್ಲಿ ಆಗುವುದಿಲ್ಲ. ಈ ಡಿಸ್ಟ್ರಿಕ್ಟ್ ಸೋಶಿಯಲ್ ವೆಲ್‌ಫೇರ್ ಆಫೀಸರಿಗೆ ಡೆವಲಪ್‌ಮೆಂಟ್ ಅಸಿಸ್ಟೆಂಟ್ ''ಸ್ಟೇಟಸ್'' ಕೊಟ್ಟು ಆ ಹುದ್ದೆಯನ್ನು ಮುಂದುವರಿಸಬೇಕು. ಇಲ್ಲದೇ ಹೋದರೆ, ಬಿ.ಡಿ.ಓ. ಮತ್ತು ಇತರೇ ಅಧಿಕಾರಿಗಳು ಈ ಯೋಜನೆಯನ್ನು ಇಂಪ್ಲಿಮೆಂಟ್ ಮಾಡಿದರೆ, ಏನೂ ತೊಂದರೆಯಾಗುವುದಿಲ್ಲ. ಈ ವೆಲ್‌ಫೇರ್ ಆಫೀಸರ ಬದಲು ಸ್ಪೆಷಲ್ ಆರ್.ಐ.ಗಳನ್ನು ಜಾಸ್ತಿ ಮಾಡಬೇಕು. ಅವರ ಕಾರ್ಯರಂಗವನ್ನು ಹೆಚ್ಚಿಸಿ, ಎಲ್ಲಾ ಅಭಿವೃದ್ಧಿ ಮತ್ತು

ಸಂಶೋಧನೆ ಕಾರ್ಯವನ್ನು ಅವರ ಮೂಲಕ ಮಾಡಿಸಬೇಕು. ಈ ರೀತಿಯಲ್ಲಿ ಸಿಬ್ಬಂದಿ ವೆಚ್ಚವನ್ನೂ ಕಡಿಮೆ ಮಾಡಬಹುದು. ಆರ್ಥಿಕ ನೆರವನ್ನೂ ಹೆಚ್ಚಿಸಬಹುದು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯಿ ಭೋಗಲೆ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, ಈ ಸೋಷಿಯಲ್ ವೆಲ್‌ಫೇರ್ ಡಿಮ್ಯಾಂಡನ್ನು ಅನುಮೋದಿಸುತ್ತಾ, ನಾನು ಒಂದೆರಡು ಸಲಹೆಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ.

ಸರಕಾರದವರು ಮಾಡುವ ಕೆಲಸ ದೇವರ ಕೆಲಸ ಎಂಬ ಮಾತನ್ನು ಹೇಳಿಕೊಂಡೇ ಬಂದಿದ್ದಾರೆ. ಮಹಾತ್ಮ ಗಾಂಧಿಯವರು ಹಾಕಿಕೊಟ್ಟಂಥ ಹಾದಿಯಲ್ಲಿಯೇ ಹೋಗುತ್ತಿದ್ದೇವೆ ಅಂತ ಹೇಳುತ್ತಿದ್ದಾರೆ. ಆದರೆ ಇಲ್ಲಿಯತನಕ ಯಾವುದು ಮುಖ್ಯವಾಗಿ ಆಗಬೇಕೋ ಅದು ಆಗಿಲ್ಲ. ಬಹುಶಃ ಅವರೆ ಪುನರ್‌ಜನ್ಮ ತಾಳಿ ಬರಬೇಕೋ ಎಂದು ಅನಿಸುತ್ತದೆ. ಸರಕಾರದವರು ಎಷ್ಟೋ ಕಾನೂನುಗಳನ್ನು ಮಾಡಿದ್ದಾರೆ. ಆದರೆ ಈ ಸ್ಟೇಟಿನಲ್ಲಿ ಈ ಒಂದು ಕಾನೂನು ಬದಲಾಯಿಸಲಿಕ್ಕೆ ಆಗಿಲ್ಲ. ಇದು ಬಹಳ ಶೋಚನೀಯವಾದ ಸಂಗತಿ. ಅಲ್ಲೊಂದು ಇಲ್ಲೊಂದು, ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಆಕ್ಟುಗಳಿವೆ. ಯಾವಾಗ ಒಂದೇ ಕಾನೂನು ಮಾಡುತ್ತೀರಿ ? ಪ್ರತಿ ಸಲ ಬಜೆಟ್ ಮೇಲೆ ಮಾತನಾಡುವಾಗ ಈ ಮಾತನ್ನು ಹೇಳಬೇಕಾಗಿದೆ ; ಆದರೆ ಇನ್ನೂ ತನಕ ಕಾನೂನು ಬದಲಾವಣೆ ಆಗಿಲ್ಲ. ಹೀಗಾದರೆ ಅಸ್ಪೃಶ್ಯತಾ ನಿವಾರಣೆ ಹೇಗೆ ಆಗುತ್ತದೆ ಎಂದು ವ್ಯಸನ ಪಡಬೇಕಾಗುತ್ತದೆ. ಹೋದ ವರ್ಷದಲ್ಲಿ ಸರಕಾರದವರು 20 ಲಕ್ಷ ರೂಪಾಯಿ ಕಡಿಮೆ ಕೊಟ್ಟಿದ್ದರು.; ಈ ಸಲ ಬಜೆಟ್ಟಿನಲ್ಲಿ ಅದನ್ನು ಕೊಡಿಸಿರಿ ಅಂತ ಹೇಳಿ ಮಾನ್ಯ ಹಣಕಾಸಿನ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡೆ. ಅವರು ಹೇಳಿದರು : ಕೊಟ್ಟಿದ್ದನ್ನು ಖರ್ಚು ಮಾಡಿ, ಬೇಕಾದಷ್ಟು ಹಣ ಕೊಡುತ್ತೇನೆ ಎಂದು. ಈ ಸಮಾಜ ಕಲ್ಯಾಣ ಶಾಖೆ ಹಣ ಖರ್ಚು ಮಾಡುವುದಿಲ್ಲ, ಹಣಕಾಸಿನ ಸಚಿವರು ಕೊಡುವುದಿಲ್ಲ. ಮಾನ್ಯ ಹಣಕಾಸಿನ ಸಚಿವರು ಬಹಳ ಹಣ ಕೊಟ್ಟಾರು, ಆದರೆ ಅದನ್ನು ಖರ್ಚು ಮಾಡಲಿಕ್ಕೆ ಏಕೋ ಇವರು ಹಿಂಜರಿಯುತ್ತಿದ್ದಾರೆ. ಹೀಗಾಗಿ ಒಳಗೊಳಗೆ ಈ ಒಂದು ಸಮಾಜದ ಕೊಲೆ ಆಗಲಿಕ್ಕೆ ಹತ್ತಿದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಹರಿಜನರು ಅಲ್ಲಿಯೇ ಮಲಗಲಿಕ್ಕೆ ಹತ್ತಿದ್ದಾರೆ. ಇದು ಗುರುವಿನ ಪ್ರಸಾದ ತೆಗೆದುಕೊಂಡು ಮಾಡುತ್ತಿರುವ ಕೆಲಸವೇ ಎನ್ನುವುದನ್ನು ತಾವು ಇಲ್ಲಿ ಹೇಳಬೇಕಾಗಿದೆ. ಎಲ್ಲಾ ಜಿಲ್ಲಾಮಟ್ಟದಲ್ಲಿಯೂ ಅಧಿಕಾರಿಗಳನ್ನು ಮಾಡಿರುತ್ತಾರೆ. ಆದರಂತೆ ಡೆವಲಪ್‌ಮೆಂಟ್ ಸ್ಕೀಮುಗಳನ್ನು ಮಾಡುವುದಕ್ಕಾಗಿ ತಾಲ್ಲೂಕದಲ್ಲಿ ಡೆವಲಪ್‌ಮೆಂಟು ಸ್ಕೀಮುಗಳನ್ನು ಬಿ. ಡಿ. ಓ. ಗಳನ್ನು ಮಾಡಿದ್ದಾರೆ. ಆದರೆ ಈ ಬಿ. ಡಿ. ಓ. ಗಳಿಗೇ ಮಾಡಲು ತುಂಬಾ ಕೆಲಸಗಳಿರುತ್ತವೆ. ಇದರ ಜೊತೆಗೆ ಸೋಷಿಯಲ್ ವೆಲ್‌ಫೇರು ಸ್ಕೀಮನ್ನು ಅವರೇ ಮಾಡಬೇಕೆಂದು ಹೇಳಿದರೆ ಅವರಿಂದ ಏನನ್ನು ತಾನೇ ಮಾಡಲು ಸಾಧಕವಾಗುತ್ತದೆ? ಅದಕ್ಕಾಗಿ ನಾನು ಹೇಳುವುದು ಈಗಿರುವ ಕಾನೂನನ್ನು ಸರಿಯಾಗಿ ಬದಲಾವಣೆ ಮಾಡಬೇಕು. ಇದನ್ನು ಇಲ್ಲಿಯವರೆಗೆ ಏಕೆ ಮಾಡಲಿಲ್ಲ ಎನ್ನುವುದು ನೋಡಿ ಬಹಳ ವ್ಯಥೆಯಾಗುತ್ತದೆ. ಕಾನೂನನ್ನು ಏಕೆ ಬದಲಾವಣೆ ಮಾಡಬಾರದು ಎಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಮಹಾತ್ಮ ಗಾಂಧಿಯವರು ಅಸ್ಪೃಶ್ಯರ ಉದ್ಧಾರ ಮಾಡುತ್ತೇವೆಂದು ಹೇಳತಕ್ಕಂತಹ ಮಹಾತ್ಮರ ಅನುಯಾಯಿಗಳು ಎಂದು ಇರುವ ನಮ್ಮ ಸರ್ಕಾರದಲ್ಲಿ ಅಸ್ಪೃಶ್ಯರ ಜನರು ಇಲ್ಲಿ ಸೋಷಿಯಲ್ ವೆಲ್‌ಫೇರು ಡಿಮ್ಯಾಂಡು ಬಂದಾಗ ಆ ಜನರ ಬಗ್ಗೆ ಮತ್ತು ಆ ಸಮಾಜದ ಬಗ್ಗೆ ಇಲ್ಲಿ ಏನು ಹೇಳುತ್ತಾರೆ ಎನ್ನುವುದನ್ನು ತಾವು ಸ್ವಲ್ಪ ವಿಚಾರ ಮಾಡಿ ಅದಕ್ಕೆ ತಕ್ಕಂತೆ ಕಾನೂನುಗಳನ್ನು ಬದಲಾಯಿಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಎಜುಕೇಷನ್ನು: ಇದರೊಳಗೆ ರಿಸರ್ವೇಷನ್ನು ಮೂಲಕ ಬಂದಿರತಕ್ಕ ಜನಕ್ಕಾಗಿ ಅವರ ಹಕ್ಕು ಬಾಧ್ಯತೆಗಳನ್ನು ಕೇಳಲಿಕ್ಕಾಗಿ ಆ ಸಮಾಜದ ಪರವಾಗಿ ಇಲ್ಲಿ ಸರ್ಕಾರವನ್ನು ಕೇಳಬೇಕಾಗಿದೆ. ಇದರಲ್ಲಿ ಮಾಡುವ ಕಾರ್ಯಗಳು ಬಹಳ ಮಹತ್ವದ್ದಾಗಿವೆ. ಮಾಡದೇ ಇರುವ ಕೆಲಸಗಳೂ ಬಹಳ ಇವೆ. ನಾನು ಒಂದು ಕೂಸಿನ ತಾಯಿಯಾಗಿರುವುದರಿಂದ ಆ ಹಿಂದುಳಿದ ಸಮಾಜದ ತಾಯಿಯು ಮಗಳಂತೆ ಇಲ್ಲಿಗೆ ಬಂದು ಅವರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವುದಕ್ಕಾಗಿ ಸರಕಾರಕ್ಕೆ ಸಲಹೆಗಳನ್ನು ಕೊಡುವುದು ನನ್ನ ಕರ್ತವ್ಯ ಎಂದು ಹೇಳುತ್ತಿದ್ದೇನೆ. ಮಧ್ಯದಲ್ಲಿ ನನ್ನನ್ನು ಮಾತನಾಡಿಸುವುದು ಬೇಡ.

ಶ್ರೀ ಜಿ. ವಿ. ಗೌಡ.—ನಮಗೂ ಮಾತನಾಡಲು ಅವಕಾಶ ಕೊಡಿ. ನಾವೂ ಮಾತನಾಡುತ್ತೇವೆ.

ಶ್ರೀಮತಿ ಚಂಪಾಬಾಯಿ ಭೋಗಲೆ.—ನಮ್ಮ ಸರ್ಕಾರದವರು ಎಜುಕೇಷನ್ನು ಬಗ್ಗೆ ಎಲ್ಲಾ ಜಿಲ್ಲೆಗಳಲ್ಲಿಯೂ ಶಾಲೆಗಳನ್ನು ಹಾಸ್ಟಲುಗಳನ್ನು ತೆರೆದಿದ್ದಾರೆ, ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕವಾದ ಹಾಸ್ಟಲುಗಳನ್ನು ತೆರೆದಿದ್ದಾರೆ ಮತ್ತು ಅದಕ್ಕೆ ಬೇಕಾದ ಸೌಕರ್ಯಗಳನ್ನೂ ಕೊಟ್ಟಿರುತ್ತಾರೆ.

(ಶ್ರೀಮತಿ ಚಂಪಾಬಾಯಿ ಬೋಗಲೆ)

ಇದರಲ್ಲಿ 18 ರೂಪಾಯಿಗಳಿಂದ 20 ರೂಪಾಯಿಗಳವರೆಗೆ ಹಣದ ಸಹಾಯ ಕೊಡಬೇಕೆಂದು ಮಾಡಿರುವುದನ್ನು 25 ರೂಪಾಯಿಗಳವರೆಗೆ ಮಾಡಬೇಕಾಗಿತ್ತು. ಹಾಸ್ಟಲುಗಳಿಗೆ ಬರುವ ಈ ಹಿಂದುಳಿದ ಪಂಗಡದ ಜನಕ್ಕೆ ಸರಿಯಾದ ಸೌಲಭ್ಯಗಳು, ಹರಿಪಿ. ಸ್ಕಾಲರ್‌ಷಿಪ್‌ಗಳು ಇತ್ಯಾದಿ ಸಾಲಭ್ಯಗಳನ್ನು ಕೊಡಬೇಕಾಗಿದೆ.

ಆದರೆ ಕೆಲವು ಕಡೆಗಳಲ್ಲಿ ಸ್ಕಾಲರ್‌ಷಿಪ್ಪು ಕೊಡಬೇಕೆಂದು ಇದ್ದರೂ ಹಾಸ್ಟಲುಗಳಲ್ಲಿ ಇದ್ದ ಮಕ್ಕಳಿಗೆ ಇಂತಿಂತಹ ಸ್ಕಾಲರುಷೀಪ್ಪುಗಳನ್ನು ಕೊಡಬಾರದು ಎಂದು ಒಂದು ಕಾನೂನು ಮಾಡಿದ್ದಾರೆ ಇದನ್ನು ಏಕೆ ಬದಲಾವಣೆ ಮಾಡಬಾರದು? ಎಲ್ಲರಿಗೂ ಒಂದೇರೀತಿಯಾಗಿ ಸ್ಕಾಲರುಷಿಪ್ಪುಗಳನ್ನು ರಿಸರ್ವೇಷನ್ನಿನಲ್ಲಿ ಷೆಡ್ಯೂಲು ಕ್ಯಾಸ್ಟು ಹಾಸ್ಟಲುಗಳಲ್ಲಿ ಇದ್ದ ಮಕ್ಕಳಿಗೆ ಏಕೆ ಕೊಡಬಾರದು ಎನ್ನುವುದಕ್ಕೆ ಮಾನ್ಯ ಮಂತ್ರಿಗಳು ಅವರ ಉತ್ತರದಲ್ಲಿ ಹೇಳಬೇಕೆಂದು ಕೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸರಕಾರದ ಗಂಡುಮಕ್ಕಳ ಷೆಡ್ಯೂಲ್ ಕ್ಯಾಸ್ಟ್ ಹಾಸ್ಟಲ್ ಇಲ್ಲ ಕಾರಣ ತೀವ್ರ ಅದನ್ನು ತೆಗೆದು ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಬಿನ್ನವಿಸುತ್ತೇನೆ.

ನಮ್ಮ ಸರಕಾರದ ಕೋ-ಅಪರೇಷನ್ನು ಮಾಡಿ ಎಂದು ಹೇಳುತ್ತಾರೆ. ಅದರಂತೆ ಸಹಕಾರ ಸಂಘಗಳನ್ನು ಮಾಡಿಕೊಂಡಿದ್ದಾರೆ. ಕೋ-ಅಪರೇಟೀವ್ ಹೌಸಿಂಗ್ ಸ್ಕೀಮುಗಳೆಂದು ಇವೆ. ಇದರಂತೆ ಹರಿಜನರುಗಳಿಗೆ ಸೌಕರ್ಯಗಳನ್ನು ಮಾಡಿ ಕೊಡದೆ ಹೋದರೆ ಅವರು ಹೇಗೆ ಸೆಟಲ್ ಆಗಬೇಕು ಇತರ ರೈತರುಗಳಿಗೆ ಯಾವ ಯಾವ ಸೌಕರ್ಯಗಳನ್ನು ಕೊಡುತ್ತಾರೋ ಅದರಂತೆ ಇಲ್ಲಿಯೂ ಕೂಡ ತಗಾಯಿ ಸಾಲಗಳನ್ನು ಈ ಜನಾಂಗದವರಿಗೆ ಕೊಡುವುದಕ್ಕೆ ತಯಾರಾಗಿಲ್ಲ. ಇದರ ಬಗ್ಗೆ ನಾನು ಒಂದು ಅರ್ಜಿಯನ್ನು ರೆವೆನ್ಯೂ ಮಂತ್ರಿಗಳ ಕಡೆಗೆ ಕೊಟ್ಟರೆ ಅದನ್ನು ಅವರು ಅಗ್ರಿಕಲ್ಚರು ಮಿನಿಸ್ಟರವರ ಕಡೆಗೆ ಕೊಡಿ ಎಂದು ಹೇಳಿದರು. ತಗಾಯಿ ಸಾಲ ಕೊಡುವುದು ರೆವೆನ್ಯೂ ಇಲಾಖೆಯವರು, ಇವನ್ನು ಸಂಬಂಧಪಟ್ಟ ರೆವೆನ್ಯೂ ಮಂತ್ರಿಗಳು ಅಗ್ರಿಕಲ್ಚರು ಮಿನಿಸ್ಟರವರ ಕಡೆಗೆ ಕಳುಹಿಸಬೇಕೆಂದು ಕಳುಹಿಸಿದರೆ ಇದರ ಅಭಿಪ್ರಾಯವೇನು? ಕಾನೂನಿನಂತೆ ಇದನ್ನು ಅನ್ವಯ ಮಾಡುವುದಕ್ಕೆ ಏಕೆ ನಿಧಾನಮಾಡುತ್ತಾರೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಹೀಗೆ ಮಾಡಿದರೆ ಕೆಲಸಗಳೂ ನಿಧಾನವಾಗುತ್ತವೆ. ಇದರಿಂದ ಹರಿಜನರ ಉನ್ನತಿ ಹೇಗೆ ತಾನೇ ಆಗುತ್ತದೆಯೋ ನನಗಂತೂ ಗೊತ್ತಿಲ್ಲ. ಇದರಬಗ್ಗೆ ತಿಳಿಸಬೇಕು. ಕೋ-ಅಪರೇಟೀವ್ ಹೌಸಿಂಗ್ ಸ್ಕೀಮಿನಂತೆ ಮನೆ ಕಟ್ಟಿಕೊಂಡರೆ ಅವರಿಗೇಕೆ ತಗಾಯಿ ಸಾಲ ಮತ್ತು ಸಬ್‌ಸಿಡಿಯನ್ನು ಏಕೆ ಕೊಡಬಾರದು ? ಕಾನೂನು ಮಾಡಿರುವುದರ ಅರ್ಥವೇನು ? ಈ ಸಾರಿ ಒಂದು ಕಡೆ ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಮಾಡಿಕೊಂಡು ಅದರ ಮೂಲಕ ಬೆಳೆಗಳನ್ನು ಮಾಡಿದಾಗ ಸುಮಾರು 15 ಎಕರೆಗಳಲ್ಲಿ ಕಬ್ಬಿನ ಫಸಲಾಗಬೇಕಾದರೆ ಅದಕ್ಕೆ ಸರಿಯಾದ ಗೊಬ್ಬರ ಬೇಕು, ಫರ್ಟಿಲೈಸರು ಮಿಕ್ಚರು ಬೇಕು ಎಂದು ಇದಕ್ಕಾಗಿ ಸಾಲ ಬೇಕೆಂದು ಕೇಳಿದರೂ ಸಿಗುತ್ತಿಲ್ಲ ಇದು ನ್ಯಾಯವಾದುದೇ? ಇದಕ್ಕಾಗಿ ಕಾನೂನಿನಲ್ಲಿ ಏನಾದರೂ ತೊಡಕುಗಳಿದ್ದರೆ ಅದನ್ನು ಬದಲಾವಣೆ ಮಾಡಬೇಕು ಮತ್ತು ಇದನ್ನು ಸರಿಪಡಿಸಬೇಕೆಂದು ನಮ್ಮ ಸರಕಾರದಲ್ಲಿ ಹೇಳಬೇಕಾಗಿದೆ, ಪರಿಸ್ಥಿತಿ ಹೇಗಿದೆ ಎಂದರೆ ನಮ್ಮ ಉನ್ನತಿ ಹಿಂಬಡತಿಯಲ್ಲಿ ಹೋಗುತ್ತಿದೆ. ಒಳಗಿಂದೊಳಗೆ ನಮ್ಮ ಈ ಸಮಾಜದ ಕೊಲೆಯನ್ನು ಮಾಡುತ್ತಿದ್ದಾರೆ.

ನಮ್ಮ ಹಳ್ಳಿಯಲ್ಲಿರುವ ಜನರು ನನ್ನನ್ನು ಈ ಸರಕಾರ ಹೀಗೇಕೆ ನಡೆಯುತ್ತಿದೆ ಮತ್ತು ನಮ್ಮ ಸಮಾಜವನ್ನು ಉದ್ಧಾರ ಮಾಡಲು ನಮ್ಮ ಹಕ್ಕುಬಾಧ್ಯತೆಗಳನ್ನು ಪಡೆಯಲು ನಾಲ್ಕು ತಿಂಗಳ ಕಾಲ ಇಲ್ಲಿಗೆ ಬಂದು ಮೊದಲಿನ ಸರಕಾರ ಮಹಿಷಾಸುರನಂತೆ ಕೆಲಸ ಮಾಡಿತ್ತು ಈಗಿನ ನಿಮ್ಮ ಸರಕಾರ ನಮ್ಮ ಜನಾಂಗಕ್ಕೆ ಸರಿಯಾಗಿ ಏಕೆ ಸಹಾಯ ಮಾಡಬಾರದು ಎಂದು ಕೇಳುತ್ತಾರೆ. ಆಗ ನಾನು ಅವರಿಗೆ ನಮ್ಮ ರಾಜ್ಯ ನಾಲ್ಕು ವರ್ಷದಿಂದಲೂ ಚೆನ್ನಾಗಿ ನಡೆಯುತ್ತಿದೆ. ಆದರೆ ರಾಜ್ಯದಲ್ಲಿ ಯಾವ ರೀತಿಯಾದ ಕಾನೂನು ಮೊದಲು ಆಗಿದೆಯೋ ಆದರಂತೆ ಅನ್ವಯ ಮಾಡಬೇಕಾಗುತ್ತದೆ. ಆದ್ದರಿಂದ ಜನಕ್ಕೆ ತೊಂದರೆಯಾಗುವಂತೆ ಇದ್ದರೆ ಅಂತಹ ಕಾನೂನುಗಳನ್ನು ಬದಲಾವಣೆ ಮಾಡಬೇಕು ಎಂದು ಮಾನ್ಯ ಸರಕಾರಕ್ಕೆ ತಿಳಿಸಬೇಕೆಂದು ಇಲ್ಲಿ ಕಾನೂನುಗಳನ್ನು ಸರಕಾರ ಬದಲಾವಣೆ ಮಾಡಿಲ್ಲ, ಈಗಲಾದರೂ ಮಾಡಿ ಎಂದು ಹೇಳುತ್ತೇನೆ.

ಇನ್ನು ಅಗ್ರಿಕಲ್ಚರು ಸ್ಕೀಮುಗಳನ್ನು ಮಾಡಬೇಕೆಂದು ಕೆಲವು ಮೈಲಿಗಳ ದೂರದಷ್ಟು ವಸಹತ್ತುಗಳನ್ನು ಮಾಡಬೇಕೆಂದು ಸುಮಾರು 15—20 ವರ್ಷಗಳಿಂದಲೂ ಮಾಡುತ್ತಿದ್ದಾರೆ. ಸರಕಾರದವರು ಸ್ಕೀಮುಗಳನ್ನು ಇಟ್ಟುಕೊಂಡಿದ್ದರೂ ಅದರಂತೆ ಅಧಿಕಾರಿಗಳು ಮಾಡುತ್ತಿಲ್ಲ. ಎಜುಕೇಷನ್ ಕಡೆಗಳಲ್ಲಿ ಸೋಷಿಯಲ್ ವೆಲ್‌ಫೇರು ಸ್ಕೀಮುಗಳಲ್ಲಿ ಕೆಲಸ ಕೊಡಬೇಕೆಂದು ಇರುವಾಗ ನಾನು ಸೂಚನೆ ಮಾಡುವುದು ನಮ್ಮ ಚೀಫ್ ಮಿನಿಸ್ಟ

ರವರು, ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮತಿ ಯಶೋಧರಮ್ಮನವರು ಹಾಗೂ ಹಣಕಾಸಿನ ಸಚಿವರಾದ ಶ್ರೀಮಾನ್ ಜತ್ತಿಯವರೂ ಒಂದುಕಡೆ ಕಲೆತು ಇಂತಿಂತಹ ಸ್ಕೀಮುಗಳನ್ನು ಈ ಸಾರಿ ತೆಗೆದುಕೊಳ್ಳಬೇಕೆಂದು ಹಾಕಿ ಹಾಗೆ ಮಾಡಬಹುದು. ಹಾಗೆ ಮಾಡದೆ ಈಗ ಮಾಡುತ್ತಿರುವಂತೆ ಸ್ಕೀಮುಗಳನ್ನು ಮಾಡಿದರೆ ಅದರಿಂದ ಜನಕ್ಕೇನೂ ಪ್ರಯೋಜನವಾಗುವುದಿಲ್ಲ. ಇದಕ್ಕೆ ತಕ್ಕ ಒಂದು ಬಂದೋಬಸ್ತು ಹಾಗೂ ನಿಯಂತ್ರಣವಿರಬೇಕು. ಇದಕ್ಕಾಗಿ ಆಯಾ ಜಿಲ್ಲಾ ಮಟ್ಟದಲ್ಲಿ ತಾಲ್ಲೂಕಾ ಮಟ್ಟದಲ್ಲಿ ಯಾವ ಯಾವ ಸ್ಕೀಮುಗಳು ಮಾಡಬೇಕೆಂದು ಇದೆಯೋ ಅದರಂತೆ ಮಾಡಿದರೆ ಜನಕ್ಕೆ ಅನುಕೂಲವಾಗುತ್ತದೆ. ಅಲ್ಲದೆ ಜಿಲ್ಲಾ ಮಟ್ಟದಲ್ಲಿ ಪ್ರತಿಯೊಂದು ಸ್ಕೀಮನ್ನು ಮಾಡುವಾಗ ಒಬ್ಬರು ಡಿಸ್ಟ್ರಿಕ್ಟ್ ಆಫೀಸರು ಎಂದು ಮಾಡಿದರೆ ಅವರೊಬ್ಬರಿಂದಲೇ ಎಲ್ಲ ಕೆಲಸಗಳನ್ನೂ ಮಾಡುವುದಕ್ಕಾಗುವುದಿಲ್ಲ. ಅವರ ಕೈಕೆಳಗೆ ಒಬ್ಬೊಬ್ಬರು ಅಸಿಸ್ಟೆಂಟ್ ಡೈರೆಕ್ಟರುಗಳು ಎಂದು ನೇಮಕ ಮಾಡಿದರೆ ಅನುಕೂಲವಾಗುತ್ತದೆ, ಹಾಗೇಕೆ ಮಾಡಬಾರದು? ಈಗಿರುವ ಒಬ್ಬರು ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಹಿಂದೆ ಏನೊಂದು ಹೊಲಸಾಗಿತ್ತು ಅದನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈಗ ಸರಕಾರ ಅನುಸರಿಸುತ್ತಿರುವ ನೀತಿಯಿಂದಾಗಿ ಹರಿಜನರ ಉದ್ಧಾರವಾಗುತ್ತಿಲ್ಲ, ಇದರಿಂದ ಇಲಾಖೆಗೆ ಕೆಟ್ಟ ಹೆಸರು ತರುತ್ತಿದೆ ಎಂದು ಇಲ್ಲಿ ಅದಕ್ಕಾಗಿ ನಮ್ಮ ಡಿಪಾರ್ಟ್‌ಮೆಂಟಿಗೆ ಸೆಕ್ರೆಟೇರಿಯೆಟ್‌ನಲ್ಲಿ ಏಕೆ ಬದಲಾವಣೆ ಮಾಡಬಾರದು! ಹೇಳಬೇಕಾಗಿದೆ.

ಹೌಸಿಂಗು ಸ್ಕೀಮಿನಲ್ಲಿ ಒಂದು ಮನೆ ಕಟ್ಟಲು 400 ರೂಪಾಯಿಗಳಂತೆ ಕೊಡುತ್ತಿದ್ದಾರೆ. ಈಗಾಗಲೇ ಹೌಸಿಂಗು ಕೋ-ಆಪರೇಟೀವ್ ಸೊಸೈಟಿಗಳನ್ನು ಮಾಡುತ್ತೇವೆಂದು ಹೇಳಿ ಅದಕ್ಕಾಗಿ ಎರಡು ಮೂರು ಸಾವಿರ ರೂಪಾಯಿಗಳಷ್ಟು ಹಾಕಿದ್ದರೂ ಅದನ್ನು ಇನ್ನೂ ಕಾರ್ಯಗತ ಏಕೆ ಮಾಡಲಿಲ್ಲ! ಇಂತಹ ಒಂದು ಸ್ಕೀಮನ್ನು ಹಾಕಿ ಇದರಿಂದ ಜನಕ್ಕೆ ಅನುಕೂಲ ಮಾಡದೇ ಹೋದರೆ ಅದರಿಂದ ನಮ್ಮ ಜನ ಮುಂದಕ್ಕೆ ಹೇಗೆ ಬರಬೇಕು! ಪ್ರತಿವರ್ಷವೂ ಇಲ್ಲಿಗೆ ಬಂದಾಗಲೆಲ್ಲಾ ಹೇಳುತ್ತಲೇ ಬರುತ್ತಿರುತ್ತೇವೆ. ಮುಂದಿನ ವರ್ಷ ನೋಡೋಣ ಎಂದು ಇಲ್ಲಿ ಬಂದಾಗ ಪುನಃ ಇದನ್ನೇ ಇಲ್ಲಿ ಹೇಳಬೇಕಾಗಿದೆ. ಕಾನ್‌ಸ್ಟಿಟ್ಯೂಷನ್‌ನಲ್ಲಿ ನಮ್ಮ ಹಿಂದುಳಿದ ಸಮಾಜಕ್ಕಾಗಿ ಸರ್ವಿಸಿನಲ್ಲೂ ಅನುಕೂಲಗಳನ್ನು ಮಾಡಿ ಕೊಡಬೇಕೆಂದು ಅವರ ಹೆಸರಿನಲ್ಲಿ ರಿಜರ್ವೇಷನ್ನು ಮಾಡಿದ್ದರೂ ಕೂಡ ಅವರಿಗೆ ಏನೂ ಅನುಕೂಲಗಳು ಆಗುತ್ತಿಲ್ಲ. ಈಗಲಾದರೂ ಅವನ್ನೆಲ್ಲಾ ಮಾಡಿಸಿಕೊಡಬೇಕೆಂದು ಇಲ್ಲಿ ಕೇಳಿಕೊಳ್ಳಬೇಕಾಗಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಪ್ರಶ್ನೆ ಕೇಳಿದ್ದೆ. ರಿಸರ್ವೇಷನ್ನು ಮಾಡುವುದಾದರೆ ಅವರ ಸಲುವಾಗಿ ಒಂದು ವರ್ಷದಲ್ಲಿ ನಿಗದಿಯಾದ ಮೊಬಲಗನ್ನು ಉಪಯೋಗಿಸದೆ ಹೋದರೆ ಅದನ್ನು ಮುಂದಿನ ವರ್ಷದಲ್ಲಾದರೂ ಬಡ್ಜೆಟ್ಟಿನಲ್ಲಿ ಸೇರಿಸಿ ಅದನ್ನು ಉಪಯೋಗ ಮಾಡಬೇಕೆಂದು ಹೇಳಿದ್ದೆ. ಅದರಂತೆ ಕಾನೂನನ್ನು ಬದಲಾವಣೆ ಮಾಡಬೇಕಾದರೆ ಮಾಡಬೇಕೆಂದು ರಿಸರ್ವೇಷನ್ನು ಪಂಗಡದವರ ಪರವಾಗಿ ಇಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಆರ್ಟಿಕಲ್ 179ರ ಪ್ರಕಾರ ಕಲಂನಲ್ಲಿ ಏನಿದೆಯೋ ಅದನ್ನು ತಾವೇಕೆ ಸ್ವಲ್ಪ ಲೂಸ್ ಮಾಡಬಾರದು ಎಂದು III ಮತ್ತು IV ದರ್ಜೆಗಳಿಗೆ ಪ್ರೊಮೋಶನ್‌ದಲ್ಲಿ ರಿಜರ್‌ವೇಷನ್ ಮಾಡಬೇಕೆಂದು ಇಲ್ಲಿ ಕಳಕಳಿಯಿಂದ ಕೇಳುತ್ತೇನೆ.

ಇನ್ನು ಕ್ರಾಫ್ಟ್‌ಮೆನ್ ಉದ್ಯಮಗಳಿಗಾಗಿ ನಮ್ಮ ಜನಕ್ಕೆ ತರಪೇತಿ ಕೊಡಲು ಸೋಷಿಯಲ್ ವೆಲ್‌ಫೇರ್ ಸ್ಕೀಮುಗಳಲ್ಲಿ ಕುರಿ ಹಾಗೂ ಕೋಳಿ ಸಾಕಾಣಿಕೆಗಳಿಗೆ ಅನುಕೂಲವಾಗುವಂತಹ ಉದ್ದಿಮೆಗಳನ್ನು ಮಾಡಲು ಸರಿಯಾದ ಸ್ಕೀಮುಗಳನ್ನು ಮಾಡಬೇಕು. ಈ ಕೆಲಸಕ್ಕಾಗಿ ಸೆಂಟ್ರಲ್ ಗವರ್ನಮೆಂಟಿನವರು ರಾಜ್ಯ ಸರ್ಕಾರಕ್ಕೆ ರೊಕ್ಕ ಕೊಡುತ್ತಾರೆ. ಈ ರೊಕ್ಕ ಖರ್ಚು ಮಾಡುವುದಕ್ಕೆ ನನ್ನ ಅಭಿಪ್ರಾಯ ಏನು ಅಂದರೆ ಜಿಲ್ಲಾ ಮಟ್ಟದಲ್ಲಿ ಉದ್ಯೋಗದಂಧೆ ಪ್ರಾರಂಭ ಮಾಡಬೇಕು. ಈಗಾಗಲೇ ಬಡಿಗತನ ಕಮ್ಮಾರತನ ಕಲಿಸುವುದನ್ನು ತೆಗೆದಿದ್ದೀರಿ. ನಾನು ಸೂಚನೆ ಮಾಡುವುದು ಏನೆಂದರೆ ಹಿಂದುಳಿದ ವರ್ಗದ ಹೆಣ್ಣುಮಕ್ಕಳ ಅಭಿವೃದ್ಧಿಗಾಗಿ ಒಂದು ನೂಲುವ ಕೇಂದ್ರ ಪ್ರಾರಂಭ ಮಾಡಬೇಕು. ಅದೇ ರೀತಿಯಾಗಿ ಸಣ್ಣ ಮಕ್ಕಳ ಆಟಕ್ಕೆ ಸಾಮಾನು ತಯಾರು ಮಾಡುವ ಒಂದು ಕೇಂದ್ರ ತೆರೆಯಬೇಕು. ಇದಲ್ಲದೆ ಈ ಹಣ ಉಪಯೋಗಿಸಿ ನೇಕಾರರ ಕೆಲಸ ಒದಗಿಸಬೇಕು. ಇಷ್ಟೇ ಅಲ್ಲದೆ ಟ್ರಂಕ ಮುಂತಾದ ಸಾಮಾನು ತಯಾರಿಸುವ ಹಾಗೂ ಇನ್ನೂ ಅನೇಕ ಸಣ್ಣ ಸಣ್ಣ ಕೆಲಸ ಮಾಡುವುದಕ್ಕೆ ಒಂದೊಂದು ಕೇಂದ್ರ ತೆರೆದು ವ್ಯವಸ್ಥೆ ಮಾಡಬೇಕು. ಬರೀ ಕುರಿ ಕೋಳಿ ಕೋಣ ಕಳಿಸುವುದರಿಂದ ಏನೂ ಉಪಯೋಗವಾಗುವುದಿಲ್ಲ. ಉದ್ಯೋಗ ದಂಧೆಯ ಬಗ್ಗೆ ಒಂದು ಸ್ಕೀಂ ಮಂಜೂರು ಯಾಕೆ ಮಾಡಬಾರದು ? ತಾಲ್ಲೂಕು ಮಟ್ಟದಲ್ಲಿ ಜನಗಳು ಆಹಾರ ಪರಿಸ್ಥಿತಿಯು ಜಟಿಲವಾದ ಮೂಲಕ ಇದನ್ನು ನಿವಾರಣೆ ಮಾಡಬೇಕಾದುದು ಅತ್ಯಗತ್ಯ. ಇಂಥ ಉದ್ಯೋಗ ದಂಧೆ ಸ್ಕೀಂ ಮಾಡಬೇಕೆಂದು ಮಾನ್ಯ ಸಚಿವರಾದ ಶ್ರೀಮತಿ ಯಶೋಧರಮ್ಮನವರನ್ನು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

(ಶ್ರೀಮತಿ ಚಂಪಾಬಾಯಿ ಬೋಗಳೆ)

ಸರಕಾರ ಸಾಕಷ್ಟು ದೊಡ್ಡ ಮನಸ್ಸು ಮಾಡಿದ್ದಾರೆ. ಕೋ-ಆಪರೇಟಿವ್ ಬೇಸಿಸ್ ಮೇಲೆ ಮಾಡಬೇಕೆಂದರೆ ಯಾವ ಕಡೆಯಿಂದಲೂ ಕೋ-ಆಪರೇಶನ್ ಸಿಕ್ಕುತ್ತಾ ಇಲ್ಲ. ರೆವಿನ್ಯೂ ಇಲಾಖೆಯಿಂದ ಸಹ ಕೋ-ಆಪರೇಶನ್ ಸಿಕ್ಕುತ್ತಿಲ್ಲ. ಆದುದರಿಂದ ಈ ಡಿಪಾರ್ಟ್‌ಮೆಂಟನ್ನು ತಾವು ತೆಗೆದುಕೊಂಡು ಕಾರ್ಯರೂಪಕ್ಕೆ ತರಬೇಕು. ಅಗ್ರಿಕಲ್ಚರಲ್ ಸ್ಕೀಮ್ಸ್ ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರಾಷ್ಟ್ರೀಯ ವಿಸ್ತರಣಾ ಕ್ಷೇತ್ರಗಳಲ್ಲಿ ಹೆಣ್ಣು ಮಕ್ಕಳು ಬಿ. ಡಿ. ಓ. ಅವರ ಚಾರ್ಜಿನಲ್ಲಿ ಇರುವುದು ಒಳ್ಳೆಯದಲ್ಲ. ಒಬ್ಬ ಲೇಡಿ ಅಧಿಕಾರಿಯನ್ನು ನೇಮಕ ಮಾಡಬೇಕು ಎಂದು ಹೇಳುತ್ತೇನೆ. ಹೊಲಗೆ ಕೇಂದ್ರ ಹೆಣ್ಣು ಮಕ್ಕಳ ಹಾಸ್ಟೆಲ್ ನೋಡಿಕೊಳ್ಳುವುದಕ್ಕಾಗಿ ಒಬ್ಬ ಲೇಡಿ ಅಧಿಕಾರಿಯನ್ನು ನೇಮಕ ಮಾಡಬೇಕೆಂದು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಒಂದು ಸ್ಕೀಂ ಇದೆ. ಆದರೆ ಈ ಸ್ಕೀಂ ಬದಲಿಸಬೇಕು. ಹೆಣ್ಣು ಮಕ್ಕಳ ಅನುಕೂಲತೆಗಾಗಿ ಕಾನೂನು ಸಡಿಲು ಮಾಡಿಯಾದರೂ ಈ ಸ್ಕೀಂ ಬದಲಿಸಬೇಕು. ರಿಜರ್ವೇಶನ್ ಪಡೆದಿರುವ ಹಕ್ಕು ಇದೆ. ಇದಕ್ಕಾಗಿ ಮಂತ್ರಿಗಳು ಇದ್ದಾರೆ. ಸೋಶಿಯಲ್ ವೆಲ್‌ಫೇರ್ ಸಾಧನೆ ಮಾಡುವುದಕ್ಕಾಗಿ ನೀವು ಕೇಂದ್ರ ಸರಕಾರದೊಡನೆ ಸಾಕಷ್ಟು ಬಡಿದಾಡಿರಿ. ಆದರಮೇಲೆ ದೇವರು ಇದ್ದಾನೆ. ದೇವರು ನಿಮ್ಮ ಕೆಲಸಕ್ಕೆ ಯಶಸ್ಸು ಕೊಟ್ಟೇ ಕೊಡುತ್ತಾನೆ. ಈಗಾಗಲೇ ಸ್ವಾತಂತ್ರ್ಯ ಬಂದು ಹದಿನೆಂಟು ವರ್ಷವಾಯಿತು. ಇನ್ನೂ ಥೋಡೇ ದಿವಸ ಆಗುತ್ತದೆ. ಇದನ್ನು ಮಾಡಬೇಕು ಅದನ್ನು ಮಾಡಬೇಕು ಎಂದು ಚೆನ್ನಾಗಿ ಹೊಡೆದಾಡಿರಿ. ನಾನು ಬಡಿದಾಡಿರಿ ಎಂದು ಹೇಳಿದರೆ ನೀವು ಬಡಿದಾಡಲು ಹೋಗುತ್ತೀರಾ? ಸರ್ವಿಸ್‌ನಲ್ಲಿ ಇದ್ದವರಿಗೆ ನಾಲ್ಕನೇ ವರ್ಗದಿಂದ ಮೂರನೇ ವರ್ಗ ಕೊಡಬೇಕೆಂದು ಉದ್ದೇಶ ಇದೆ ಎಂದು ಒಂದು ಸಲ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಹಾಗೆಯೇ ಮಾತೆತ್ತಿದರೆ ರಿಜರ್ವೇಷನ್ ಇದೆ ಎಂದು ಹೇಳುತ್ತಾರೆ. ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಹೆಣ್ಣು ಮಕ್ಕಳ ಹಾಸ್ಟೆಲ್ ಗ್ರ್ಯಾಂಟು ಯೂನಿಫಾರ್ಮ್ ಡ್ರೆಸ್ಸಿಗಾಗಿ ಗ್ರ್ಯಾಂಟು ಹಾಸ್ಟೆಲ್‌ಗಾಗಿ ಗ್ರ್ಯಾಂಟು ಕೊಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ನನ್ನ ಈ ಭಾಷಣ ಮುಗಿಸುತ್ತೇನೆ. ಮತ್ತು ಮಾನ್ಯ ಆಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಇರತಕ್ಕಂಥ ಬೇಡಿಕೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಈ ಬೇಡಿಕೆಯ ಮೂಲಕ ಲಕ್ಷಾಂತರ ರೂಪಾಯಿಗಳನ್ನು ಈ ಇಲಾಖೆಯವರು ಕೇಳಿದ್ದಾರೆ. ಸಮಾಜ ಏಳಿಗೆಗಾಗಿ ಅಂದರೆ ಸಮಾಜದಲ್ಲಿ ಯಾರು ಅತ್ಯಂತ ಹಿಂದುಳಿದ ವರ್ಗಕ್ಕೆ ಸೇರಿದ್ದಾರೋ ಅಂಥವರ ಪುರೋಭಿವೃದ್ಧಿಗಾಗಿ ಲಕ್ಷಾಂತರ ರೂಪಾಯಿ ಸರಕಾರಕ್ಕೆ ಖರ್ಚು ಮಾಡುತ್ತಾ ಇದೆ. ಪಂಚವಾರ್ಷಿಕ ಯೋಜನೆಯ ಅಂಗವಾಗಿ ಸರಕಾರ ಜಾರಿಗೆ ತಂದಿರುವ ಯೋಜನೆಗಳನ್ನು ಪ್ರಸ್ತಾಪ ಮಾಡುವುದಕ್ಕೆ ಮುಂದೆ ಅತ್ಯಂತ ಹಿಂದುಳಿದ ವರ್ಗದ ಪುರೋಭಿವೃದ್ಧಿ ಹೇಗೆ ಎಷ್ಟರಮಟ್ಟಿಗೆ ಮುಂದುವರಿದಿದೆ ಎಂಬುದನ್ನು ಸ್ವಲ್ಪ ಗಣನೆಗೆ ತೆಗೆದುಕೊಂಡು ಮುಂದೆ ಏನು ಮಾಡಬೇಕು ಎನ್ನುವುದಕ್ಕೆ ಎರಡು ಮಾತು ಹೇಳಬಯಸುತ್ತೇನೆ. 1952ನೇ ಇಸವಿಯಿಂದ ಈ ವಿಧಾನ ಸಭೆಯಲ್ಲಿ ಮಾತನಾಡುವುದಕ್ಕೆ ನನಗೆ ಒಂದು ಅವಕಾಶ ದೊರೆತಿದೆ. ಸಮಾಜದಲ್ಲಿ ಹಿಂದುಳಿದ ವರ್ಗದ ಪರವಾಗಿ ಯಾವ ಕಾರ್ಯಗಳು ಆಗಬೇಕಾಗಿದೆ, ಪುರೋಭಿವೃದ್ಧಿ ಹೇಗೆ ಆಗಬೇಕು ಮುಂತಾದ ಅನೇಕ ವಿಚಾರಗಳನ್ನು ಹೇಳತಕ್ಕಂಥ ಹಾಗೂ ಕೇಳತಕ್ಕಂಥ ಅವಕಾಶ ನನಗೆ ದೊರೆತಿದೆ. ಸರಕಾರ ಕಾರ್ಯಗತ ಮಾಡಿರತಕ್ಕಂಥಾದ್ದನ್ನು ಕಣ್ಣಾರೆ ಕಂಡು ಸ್ವಲ್ಪ ಮನನೊಂದು ಹೇಳಬೇಕಾಗುತ್ತದೆ. ಯಾಕೆಂದರೆ ನಮ್ಮ ಕಷ್ಟ ನಮಗೆ ಚೆನ್ನಾಗಿ ಗೊತ್ತು. ಅದು ತಮಗೆ ಗೊತ್ತಾಗುವುದಿಲ್ಲ. ನನಗೆ ಈ ಅವಕಾಶ ಇದೆ. ನನ್ನ ಪಾಲಿಗೆ ಬಂದಿರುವುದು ಇದು ಒಂದು ದುರಂತವಾಗಿದೆ. ಇಟ್ ಈಜ್ ಎ ಟ್ರ್ಯಾಜೆಡೀ. ನಾನು ವಿಚಾರ ಮಾಡಿ ಈ ದುರಂತ ಪದ ಉಪಯೋಗ ಮಾಡುತ್ತೇನೆ. ಸುಮ್ಮನೆ ಭಾಷಣ ಮಾಡಬೇಕೆಂಬ ಉದ್ದೇಶದಿಂದ, ಭಾಷಣ ಮಾಡುವ ಚಟಕ್ಕೋಸ್ಕರ ನಾನು ಮಾತನಾಡುತ್ತಿಲ್ಲ. ಸುಮಾರು 10–15 ವರ್ಷದಿಂದ ಈ ದುರಂತ ನಡೆದಿದೆ. ಹಾಗಾದರೆ ಸಮಾಜದಲ್ಲಿ ಅತ್ಯಂತ ಕೆಳದರ್ಜೆಯಲ್ಲಿ ಇರತಕ್ಕಂಥವರ ಪುರೋಭಿವೃದ್ಧಿ ಹೇಗೆ ಆಗಿದೆ? ರಾಜಕೀಯವಾಗಿ ಆರ್ಥಿಕವಾಗಿ ಸಾಮಾಜಿಕವಾಗಿ ಪುರೋಭಿವೃದ್ಧಿಯಾಗಿದೆಯೇ? ವಿದ್ಯಾಭ್ಯಾಸದಲ್ಲಿ ಪ್ರಗತಿಯಾಗಿದೆಯೇ? ತಮಗೆ ಗೊತ್ತಿರುವ ಹಾಗೆ ಇದನ್ನು ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ. ಸಮಾಜದಲ್ಲಿ ಭದ್ರತೆ ಇದೆಯೇ? ಸಮಾಜದಲ್ಲಿ ಸಮಾನತೆ ಎಷ್ಟರ ಮಟ್ಟಿಗೆ ದೊರೆತಿದೆ? ಇದನ್ನು ನಾನು ಹೇಳಬೇಕೇ? ನಿಡುವಣಿ ಪ್ರಕರಣದಿಂದ ಹಿಡಿದು ಶಿವಮೊಗ್ಗ ಜಿಲ್ಲೆಯ ಆರಕೆರೆ ಪ್ರಕರಣದವರೆಗೆ ಕೊಲೆ, ಸುಲಿಗೆ, ದರೋಡೆ ಹರಿಜನರ ಚಿತ್ರ ವಿಚಿತ್ರ ಹಿಂಸೆ ನಡೆದ ಪ್ರಕರಣಗಳು ಏನನ್ನು ಸೂಚಿಸುತ್ತವೆ? ಬರೀ ಭಾಷಣ

ಮಾಡಿ ಹೇಳತಕ್ಕ ಕಟ್ಟು ಕಥೆ ಇದು ಅಲ್ಲ. ನಮ್ಮ ಕಣ್ಣಾರೆ ಕಂಡು ನಾವು ಅನುಭವಿಸಿದ ನಿತ್ಯ ಸತ್ಯ ಸಂಗತಿ ಅದು ಏನನ್ನು ಸೂಚಿಸುತ್ತದೆ? ಸಮಾಜದಲ್ಲಿ ಯಾರು ಬಹಳ ಹಿಂದುಳಿದಿದ್ದಾರೋ ಯಾರು ಅಶಕ್ತರಾಗಿದ್ದಾರೋ ಅವರಿಗೆ ಸಮಾಜದಲ್ಲಿ ಬೆಂಬಲ ಇದೆಯೇ? ಹಿಂದುಳಿದವರ ಪ್ರತಿನಿಧಿ ಯಾರೇ ಇರಲಿ ನನ್ನಂಥ ನತದೃಷ್ಟನನ್ನೊಳಗೊಂಡು ಯಾವುದೇ ಯಃಕಶ್ಚಿತ್ ಮನುಷ್ಯನಾಗಿರಲಿ ಆವನು ತಲೆ ಎತ್ತಿ ಬಾಳಲು ಸಮಾಜದಲ್ಲಿ ಇವತ್ತಿನ ದಿವಸ ಅವಕಾಶವಿಲ್ಲ. ಇದು ಬರೀ ಮಾತು ಅಲ್ಲ. ನಿಡುವಣಿ, ಅರಕೆರೆ, ಹೊಸಹಳ್ಳಿ, ಕಾಳೀಹುಂಡಿ ಹಾಗೂ ಜಮಖಂಡಿಯ ಹತ್ತಿರ ಒಂದು ಹಳ್ಳಿಯಲ್ಲಿ ಬೆಳಗಿನ ಜಾವದಲ್ಲಿ ಕಲ್ಲು ಎಸೆದು ಹೊಡೆದು ಕೊಲೆ ಮಾಡಿದರು. ಹಿಂದುಳಿದವರಿಗೆ ಸಮಾಜದಲ್ಲಿ ಭದ್ರತೆ ಇದೆಯೇ? ವಿಷಾದದಿಂದ ಹೇಳುತ್ತೇನೆ. ಇಲ್ಲ. ಆ ಮೇಲೆ ಆರ್ಥಿಕವಾಗಿ ಏನು ಆಗಿದೆ? ಕೇಂದ್ರ ಸರಕಾರದ ಒಂದು ಆದೇಶ ಇದೆ. ನಾವು ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಅನೇಕ ಯೋಜನೆಗಳನ್ನು ಜಾರಿಗೆ ತಂದು ಈಗ ನಾಲ್ಕನೇ ಯೋಜನೆಯನ್ನು ಇಂದು ನಾವು ರೂಪಿಸುತ್ತಿದ್ದೇವೆ. ಎಷ್ಟೋ ಕೋಟಿ ರೂಪಾಯಿ ಖರ್ಚು ಮಾಡುವಾಗ ಅದರಲ್ಲಿ ಐದನೇ ಒಂದು ಭಾಗ ನಿಜವಾಗಿಯೂ ಹಿಂದುಳಿದವರಿಗೆ ಸೇರಿದೆಯೇ? ಧೈರ್ಯವಾಗಿ ಹೇಳುತ್ತೇನೆ ಸೇರಿಲ್ಲಾ ಎಂದು. ಸರಕಾರ ಹೇಳಿದ್ದಾರೆ, ರಾಜ್ಯಪಾಲರ ಭಾಷಣದಲ್ಲಿ ಸೇರಿದೆ ಎಂದು ಇದೆ. ಕೇಂದ್ರ ಸರ್ಕಾರದ ಆದೇಶ ಇದೆ. ಏನಾದರೂ ಸಾಮಾನ್ಯವಾದ ಪ್ರಗತಿ ಜನರಲ್ ಡೆವಲಪ್‌ಮೆಂಟ್ ಆಗಿದೆಯೇ? ಪಂಚವಾರ್ಷಿಕ ಯೋಜನೆ ಕಾರ್ಯಗತ ಮಾಡಿದ ಫಲವಾಗಿ ಹಿಂದುಳಿದವರ ಜನ ಸಂಖ್ಯೆಗೆ ಅನುಗುಣವಾಗಿ ಐದನೇ ಒಂದು ಭಾಗ ಜನರಿಗೆ ಸಹಾಯ ದೊರೆತಿದೆಯೇ? ಅವರು ಅಭಿವೃದ್ಧಿ ಹೊಂದಿರುತ್ತಾರೆಯೇ? ರಿಪೋರ್ಟು ಕೊಡುತ್ತಾ ಇದ್ದಾರೆ. ನಾನು ಕೇಳುತ್ತೇನೆ. ಈಗ ಇಲ್ಲಿ ವ್ಯವಸಾಯ ಮಂತ್ರಿಗಳೂ ಇದ್ದಾರೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 30 ಸಾವಿರ ಪಂಪ್‌ಸೆಟ್ಸ್ ನೀರಾವರಿಗಾಗಿ ದೇಶದಲ್ಲಿ ಹಂಚಿದ್ದೀರಿ. ಹದಿನೆಂಟನೇ ಒಂದು ಭಾಗ ಅಥವಾ ಐದನೇ ಒಂದು ಭಾಗ ಹಿಂದುಳಿದ ವರ್ಗದವರಿಗೆ ಸೇರಿದೆಯೇ? ಅವರಿಗೆ ಮೀಸಲಾಗಿ ಇಟ್ಟಿದ್ದೀರಾ? ಫೈನಾನ್ಸ್ ಕಾರ್ಪೊರೇಷನ್ ಅವರು ಎಷ್ಟು ದುಡ್ಡು ಕೊಟ್ಟಿದ್ದಾರೆ? ಸಹಕಾರ ಸಂಘಗಳಿಗೆ ಎಷ್ಟು ದುಡ್ಡನ್ನು ಕೊಟ್ಟಿದ್ದೀರಿ? ಸಾಮಾನ್ಯವಾದ ಜನತೆಗೆ ಈ ಹಣ ಕೊಟ್ಟಿದ್ದೀರಾ? ಅವರ ಆರ್ಥಿಕ ಪ್ರಗತಿಗೆ ಸುಧಾರಿಸಲು ಎಷ್ಟು ಶ್ರಮ ಪಟ್ಟಿದ್ದೀರಿ? ನೀವು ಧೈರ್ಯವಾಗಿ ಹೇಳಬಲ್ಲಿರಾ?

Can you say definitely that this class of people have at least got the benefit of one-fifth of the amount that we have spent in the Plan programme?

4-00 P.M.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಪ್ಲಾನುಗಳಲ್ಲಿ ಒದಗಿಸಲಾಗಿದ್ದ ಒಟ್ಟು ಮೊಬಲಗಿನಲ್ಲಿ ಐದನೇ ಒಂದು ಭಾಗದ ಹಣ ನಮಗೆ ಸೇರಿದೆಯೇ ಎಂಬುದಾಗಿ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ಆದರೆ ನಾನು ಅವರನ್ನು ಒಂದು ವಿಚಾರ ಕೇಳಬೇಕಾಗಿದೆ: ಸಮಾಜದಲ್ಲಿ ಶೇ. 51ರಷ್ಟು ಇರತಕ್ಕ ಮಹಿಳೆಯರಿಗೆ ಅದರಲ್ಲಿ ಶೇ. 51ರಷ್ಟು ಹಣ ಸೇರಿದೆಯೇ? ಎಂದು

ಶ್ರೀ ಜಿ. ದುಗ್ಗಪ್ಪ.—ಅವರು ಬಹಳ ಮುಖ್ಯವಾದ ಪ್ರಶ್ನೆಯನ್ನೇ ಎತ್ತಿದ್ದಾರೆ. ಆದರೆ ನಾನು ತಿಳಿಸುತ್ತಿದ್ದ ಈ ನನ್ನ ನತದೃಷ್ಟ ಜನಾಂಗವಲ್ಲಿ ಐದನೇ ಒಂದು ಭಾಗದ ಜನಾಂಗವನ್ನೊಳಗೊಂಡ ಈ ಜನಾಂಗದಲ್ಲಿ ಶ್ರೀಮತಿ ನಾಗರತ್ನಮ್ಮನವರ ಅಕ್ಕತಂಗಿಯರೂ ಅಲ್ಲಿದ್ದಾರೆ. ಆದರೆ ಅವರು ಇವರ ಹಾಗೆ ಇಷ್ಟು ಮೇಲ್ಮಟ್ಟದಲ್ಲಿಲ್ಲ ಎಂಬುದನ್ನು ಇವರೂ ಸಹಾ ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ನಾನೀಗ ಸಮಾಜದ ಒಂದು ಪ್ರಗತಿಯನ್ನು ಹೇಳುತ್ತಿದ್ದೇನೆ. ಈ ಕೆಲವೊಂದು ಸಮಾಜದಲ್ಲಿ ಯಾವುದಾದರೊಂದು ವರ್ಗ ಮುಂದುವರಿದಿದೆಯೇ, ಇಲ್ಲವೇ ಎಂಬುದನ್ನು ನಾವು ಗಣನೆಗೆ ತೆಗೆದುಕೊಳ್ಳುವುದಾದರೆ, ಆಗ ನಾವು ಇದರ ಜೊತೆಯಲ್ಲೇ ಕೆಲವು ಇಲಾಖೆಗಳ ವಿಚಾರವನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುವುದು. ಆ ಒಂದು ದೃಷ್ಟಿಯಿಂದ ನಾನೀಗ ಈ ಪಾನನಿರೋಧ ಇಲಾಖೆಯ ವಿಚಾರವನ್ನು ಹೇಳಬೇಕಾಗಿದೆ. ಇದೇ ಸಭೆಯಲ್ಲಿ ಈ ವಿಚಾರವಾಗಿ ಬಹಳವಾಗಿ ಚರ್ಚೆಯಾಗಿದೆ. ಆದರೆ ಈ ಹಿಂದೆ ಈ ಬಾಬಿನಿಂದ ಸರ್ಕಾರಕ್ಕೆ ಬಹಳ ಹಣ ಬರುತ್ತಿತ್ತು. ಆ ದಿವಸ ಮಹಾತ್ಮಾ ಗಾಂಧಿಯವರು ಆ ಹಣವನ್ನು ಅದು ಪಾಪದ ಹಣ ಎಂತ ಹೇಳಿದ್ದರು. ಅಂಥ ಹಣದಿಂದ ಸರ್ಕಾರದ ಬೊಕ್ಕಸವನ್ನು ಭರ್ತಿಮಾಡುವುದು ಬೇಡ ಅಂತ ಅವರು ಹೇಳಿದ್ದರು. ಆ ದಿವಸ ಅವರು ಹಾಗೆ ಅದು ಪಾಪದ ಹಣ ಅಂತ ಏತಕ್ಕೆ ಹೇಳಿದ್ದರು?

(ಶ್ರೀ ಜಿ. ದುಗ್ಗಪ್ಪ)

ಸಮಾಜದಲ್ಲಿರತಕ್ಕ ಜನರಲ್ಲಿ ಯಾರನ್ನು ಬಹಳ ಕೀಳು ಎಂಬುದಾಗಿ ತಿಳಿದಿದ್ದರೋ ಅಂಥಾ ಜನರು ಯಾರಿದ್ದರೋ ಅವರು ಆ ದಿವಸ ಈ ಕುಡಿತಕ್ಕೆ ಬಿದ್ದು ಹಾಳಾಗಿ ಹೋಗಿದ್ದರು. ಅವರು ಹಳ್ಳಿಯಲ್ಲಿದ್ದರೂ ಮನೆಗಳಲ್ಲಿ ದೀಪ ಯಾರೂ ಅಂಟಿಸುತ್ತಿರಲಿಲ್ಲ, ಅವರು ಮೈತುಂಬಾ ಬಟ್ಟೆಯನ್ನು ಹಾಕುತ್ತಿರಲಿಲ್ಲ. ಆ ಹೆಣ್ಣುಮಕ್ಕಳು ಅಂಥ ಹೀನಾಯಕರವಾದ ಸ್ಥಿತಿಯಲ್ಲಿದ್ದರು.

ಅಂಥ ದುರವಸ್ಥೆಯಲ್ಲಿದ್ದ ಜನಾಂಗದವರು ಈ ದಿವಸ ಈ ಪಾನನಿರೋಧ ಜಾರಿಗೆ ಬಂದುದರಿಂದ ಅವರು ಹೊಟ್ಟೆತುಂಬ ಅನ್ನ, ಮೈತುಂಬಾ ಬಟ್ಟೆ ಕಾಣುವುದಕ್ಕೆ ಒಂದು ಅವಕಾಶವಾಗಿದೆ. ಅವರು ಈ ದಿವಸ ಕಷ್ಟಪಟ್ಟು ದುಡಿದಂಥ ದುಡಿಮೆಯಿಂದ ಅವರು ಅವರ ಹೆಂಡರು-ಮಕ್ಕಳೂ ನೆಮ್ಮದಿಯಿಂದ ಇದ್ದಾರೆ. ಅವರಿಗೆ ಸಮಾಜದಲ್ಲಿ ಈ ದಿವಸ ಒಂದು ಗೌರವ ದೊರೆತಿದೆ. ಇದರಿಂದ ನಾನು ಸಮಾಜದಲ್ಲಿ ಸ್ವಲ್ಪಮಟ್ಟಿಗಾದರೂ ಸುಧಾರಣೆಯಾಗಿದೆ ಎಂದು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಹೀಗೆ ಈ ಜನಾಂಗದವರು ಈ ಒಂದು ಕುಡಿತವನ್ನು ಬಿಟ್ಟಿದ್ದರಿಂದಲೇ ಇಂದಿನ ಸಮಾಜದ ಒಂದು ಚೌಕಟ್ಟಿನಲ್ಲಿ, ಈ ಒಂದು ಆಯಕಟ್ಟಿನಲ್ಲಿ ಅವರು ಗೌರವ ಮರ್ಯಾದೆಗಳನ್ನು ಗಳಿಸಿದ್ದಾರೆ ಎಂದು ಧೈರ್ಯವಾಗಿ ಹೇಳಬಲ್ಲೆ. ಆದರೆ ಆ ಪಾನನಿರೋಧ ತತ್ವವನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಲು ಶ್ರೀಮತಿ ಯಶೋಧರಮ್ಮನವರು ಒಂದು ಸಂಪೂರ್ಣ ಪಣತೊಟ್ಟಿದ್ದಾರೆ. ಅವರು ಈ ದಿವಸ ಸಮಾಜ ಕಲ್ಯಾಣ ಇಲಾಖೆಯ ಆಡಳಿತ ವಹಿಸಿಕೊಂಡಿರತಕ್ಕ ಒಬ್ಬ ಮಂತ್ರಿಗಳಾಗಿರುವುದರಿಂದ ಅವರು ನಮಗೊಂದು ಆಶ್ವಾಸನವನ್ನು ಕೊಡಬೇಕಾಗಿದೆ. ಸಹಸ್ರಾರು ವರ್ಷಗಳಿಂದ ಹಿಂದುಳಿದಿದ್ದ ಯಾವ ಒಂದು ದೀನದಲಿತ ಜನಾಂಗವಿದೆಯೋ ಆ ಒಂದು ಜನಾಂಗದ ಏಳಿಗೆ ಹಾಗೂ ಅವರ ಪುರೋಭಿವೃದ್ಧಿಯನ್ನು ಅವರೆಲ್ಲರಿಗೂ ಇಂದಿನ ಸಮಾಜದಲ್ಲಿ ಮರ್ಯಾದೆ ಗೌರವಗಳಿಂದ ಬಾಳತಕ್ಕ ಒಂದು ಸ್ಥಾನಮಾನವನ್ನು ದೊರಕಿಸಿಕೊಡಬೇಕೆಂಬ ಒಂದು ಉದ್ದೇಶ ನಮ್ಮ ಮಂತ್ರಿಗಳಲ್ಲಿ ಅಚಲವಾಗಿದೆ. ಅವರು ಈ ಉದ್ದೇಶವನ್ನು ಸಾಧಿಸುತ್ತಾರೆಂಬ ಭರವಸೆ ನಮಗಿದೆ. ನಾನು ಈ ವಿಚಾರವನ್ನು ಏತಕ್ಕೆ ಪ್ರಸ್ತಾಪಮಾಡುತ್ತಿದ್ದೇನೆ ಎಂದರೆ—ಇತ್ತೀಚೆಗೆ ಅಲ್ಲಲ್ಲೇ ಕೆಲವರು ಪಾನನಿರೋಧವನ್ನು ತೆಗೆದುಹಾಕಿ ಮತ್ತೆ ದೇಶದಲ್ಲಿ ಕುಡಿತವನ್ನು ಜಾರಿಗೆ ತರುತ್ತಾರೆಂಬ ಸುದ್ದಿಯನ್ನು ನಾನು ಕೇಳುತ್ತಿದ್ದೇನೆ......

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕ್ಕೆ ನೀವೇನು ಮಾಡುತ್ತೀರಾ ?

ಶ್ರೀ ಜಿ. ದುಗ್ಗಪ್ಪ.—ಅದನ್ನು ಜಾರಿಗೆ ತಂದಿದ್ದೇ ಆದರೆ ನಾವು ಇಲ್ಲಿಯವರೆಗೂ ಈ ದಲಿತ ವರ್ಗದವರ ಬಗ್ಗೆ ಏನೊಂದು ಸಾಧನೆಯನ್ನು ಸಾಧಿಸಿದ್ದೇವೋ ಅದೆಲ್ಲವೂ ಅಧಃಪಾತಾಳಕ್ಕೆ ಹೋಗಿ, ನಾವು ಈ ಹಿಂದೆ 10,000 ವರ್ಷಗಳ ಹಿಂದೆ ಹೇಗಿದ್ದೇವೋ ಆ ಸ್ಥಿತಿಗೇ ಮತ್ತೆ ಬರುತ್ತೇವೆ. ಆದುದರಿಂದ ನಾವೇನೋ ಇದನ್ನು ಉಗ್ರವಾಗಿ ಪ್ರತಿಭಟಿಸುತ್ತೇವೆ; ಅದನ್ನು ವಿರೋಧಿಸುತ್ತೇವೆ. ಈ ಬಗ್ಗೆ ನಾವು ನಮ್ಮ ಶಕ್ತಿಮೀರಿ ಹೋರಾಟ ಮಾಡುತ್ತೇವೆ. ಇದನ್ನು ನಾವು ಅದಷ್ಟೂ ಪ್ರತಿಭಟಿಸುತ್ತೇವೆ. ಇದು ಎಷ್ಟೇ ಕಠಿಣವಾಗಲೀ ಇದನ್ನು ಶ್ರೀಮತಿ ಯಶೋಧರಮ್ಮನವರು ಸಾಧಿಸಲೇಬೇಕೆಂದು ಹೇಳುತ್ತೇನೆ.

ಇನ್ನು ಇವರ ವಿದ್ಯಾಭ್ಯಾಸದ ಬಗ್ಗೆ ನಾನಾದರೂ ಹೇಳತಕ್ಕದ್ದಿಷ್ಟೇ, ಅಂದರೆ ನಾವು ಕೇವಲ ಈ ವಿಚಾರಗಳಲ್ಲಿ ಒಂದು ಟೀಕೆಟಿಪ್ಪಣಿಯನ್ನು ಮಾಡುವುದರಲ್ಲಾಗಲೀ ಅಥವಾ ಲೋಪದೋಷಗಳನ್ನೆತ್ತಿ ಭಾಷಣ ಮಾಡುವುದರಲ್ಲಾಗಲೀ ಮುಗಿಸದೆ ಈ ವಿಚಾರದಲ್ಲಿ ಕೆಲವು ಸಲಹೆಗಳನ್ನೂ ಸಹಾ ಸೂಚಿಸುವುದಕ್ಕೆ ನನ್ನಲ್ಲಿ ಕೆಲವು ಮಾಹಿತಿಗಳಿವೆ. ಆ ನನ್ನ ಸಲಹೆಗಳಲ್ಲಿ ಬಹು ಮುಖ್ಯವಾದದ್ದು ವಿದ್ಯಾಭ್ಯಾಸ. ಯಾವುದೇ ಒಂದು ದೇಶದ ಪ್ರಗತಿಯನ್ನು ಸಾಧಿಸಿರತಕ್ಕ ವಿಚಾರದಲ್ಲಿ ಆ ದೇಶ ಸಾಧಿಸಿರತಕ್ಕ ಪ್ರಗತಿಯನ್ನು ಆ ದೇಶದಲ್ಲಿ ಕಟ್ಟಿರತಕ್ಕ ದೊಡ್ಡ ದೊಡ್ಡ ಮನೆಗಳ ಲೆಕ್ಕದ ಮೇಲಲ್ಲಾಗಲೀ ಇಲ್ಲವೇ ಅಲ್ಲಿ ಪ್ರಾರಂಭಿಸಿರತಕ್ಕ ಕೈಗಾರಿಕೆಗಳಿಂದಾಗಲೀ ಯಾರೂ ಎಣಿಸುವುದಿಲ್ಲ. ಆದರೆ ಒಂದು ದೇಶ ಪ್ರಗತಿ ಹೊಂದಿದ್ದರೆ ಆ ದೇಶದಲ್ಲಿ ಎಷ್ಟು ಜನ ವಿದ್ಯಾವಂತರಿದ್ದಾರೆ, ದೇಶ ವಿದ್ಯೆಯಲ್ಲಿ ಎಲ್ಲಿಯವರೆಗೆ ಮುಂದುವರಿದಿದೆ ಎಂಬುದನ್ನು ಲೆಕ್ಕಹಾಕುತ್ತಾರೆ. ಆದುದರಿಂದ ದೇಶದ ಪ್ರಗತಿಯಲ್ಲಿ ವಿದ್ಯೆ ಬಹು ಮುಖ್ಯವಾದದ್ದು, ಇನ್ನು ಎರಡನೆಯದೆಂದರೆ, ಅದು ಜನರ ಆರ್ಥಿಕ ಪ್ರಗತಿಗೆ ಸಂಬಂಧಿಸಿದ್ದಾಗಿದೆ. ಈ ಆರ್ಥಿಕಾಭಿವೃದ್ಧಿಯಾದರೂ ಇದು ಜನರ ವಿದ್ಯಾರ್ಜನೆಯನ್ನೇ ಅವಲಂಬಿಸಿದೆ. ಆದರೆ ಹರಿಜನರು ಈ ದಿವಸ ವಿದ್ಯಾರಂಗದಲ್ಲಿ ಬಹಳ ದುರ್ದೆಶೆಯಲ್ಲಿದ್ದಾರೆ. ಹಾಸ್ಟಲುಗಳಲ್ಲಿ ಅಭ್ಯಾಸ ಮಾಡತಕ್ಕ ಒಬ್ಬ ಹುಡುಗನಿಗೆ ಒಂದು ತಿಂಗಳಿಗೆ 18 ರೂಪಾಯಿಗಳನ್ನು ಗ್ರಾಂಟ್ ರೂಪದಲ್ಲಿ ಕೊಡುತ್ತಿದ್ದಾರೆ. ಇಷ್ಟು ಹಣದಲ್ಲಿ ಒಂದು ತಿಂಗಳು ಒಬ್ಬ ಹುಡುಗ ಜೀವನ ಸಾಗಿಸುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ನಾವು ಆಲೋಚನೆ ಮಾಡತಕ್ಕ ವಿಚಾರ ಇದು.

ಅದರಲ್ಲೂ ಧಾರಣೆವಾಸಿಗಳು ದಿನದಿನಕ್ಕೂ ಏರುತ್ತಿರುವ ಈ ಕಾಲದಲ್ಲಿ ಆ 18 ರೂಪಾಯಿಗಳಿಂದ ಏನು ಮಾಡುವುದಕ್ಕೆ ಸಾಧ್ಯವಿದೆ ? ನಾವು ಈ ವಿಚಾರ ಹೇಳಿದರೆ ಸರ್ಕಾರದವರು ಹಾಗೆ ಸಾಲದೆ ಬರತಕ್ಕದ್ದಕ್ಕೆ ಯಾರಾದರೂ ಖಾಸಗಿಯವರು ಮುಂದೆ ಬಂದು ಸಹಾಯ ಮಾಡಲಿ, ಅದಕ್ಕಿಂತ ಹೆಚ್ಚಿನ ಗ್ರ್ಯಾಂಟನ್ನು ಸರ್ಕಾರದವರು ಕೊಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಆದರೆ ನನಗೂ ಹತ್ತಾರು ಸಂಘ ಸಂಸ್ಥೆಗಳಲ್ಲಿ ಕೆಲಸಮಾಡಿ ಇವುಗಳ ಅನುಭವ ನನಗೆ ಚೆನ್ನಾಗಿ ಗೊತ್ತಿದೆ. ಸರ್ಕಾರದವರು ಈ ದಿವಸ ಹಾಸ್ಟಲುಗಳಿಗೆ ಕೊಡತಕ್ಕ ಗ್ರ್ಯಾಂಟನ್ನು ಲೆಕ್ಕಹಾಕಿದರೆ ಅದು ಸರಾಸರಿ ಒಬ್ಬ ಹುಡುಗನಿಗೆ ತಿಂಗಳಿಗೆ 15 ರೂಪಾಯಿ ಸಿಕ್ಕುತ್ತದೆ. ಇಷ್ಟು ಗ್ರ್ಯಾಂಟಿನಲ್ಲಿ ಹಾಸ್ಟಲುಗಳನ್ನು ನಡೆಸಲು ಸಾಧ್ಯವೇ ಎಂಬುದನ್ನು ತಾವುಗಳೆಲ್ಲರೂ ಆಲೋಚಿಸಬೇಕಾಂಥ ವಿಷಯ. ಸಾಮಾನ್ಯ ವ್ಯವಹಾರದಲ್ಲಿರತಕ್ಕವರಿಗೆ ಇದು ವೇದ್ಯವಾಗದಂಥ ವಿಚಾರವೇನಲ್ಲ. ಒಬ್ಬ ಜವಾನನಿಗೂ 20 ರೂಪಾಯಿಗಳು, ಒಬ್ಬ ಅಡಿಗೆಯವನಿಗೂ 25 ರೂಪಾಯಿಗಳ ಸಂಬಳ ಎಂದರೇನರ್ಥ ? ಅಲ್ಲಿ ಅಡಿಗೆ ಕೆಲಸ ಮಾಡತಕ್ಕವನಿಗೆ ಆ 25 ರೂಪಾಯಿ ಸಂಬಳ ಬಿಟ್ಟರೆ ಆತನಿಗೆ ಡಿ.ಎ. ಇತ್ಯಾದಿ ಇನ್ನಾವ ಅಲೋಯನ್ಸುಗಳೂ ಇಲ್ಲ. ಅದ್ಯಾರೋ ಹೇಳುತ್ತಿದ್ದಂತೆ—ಮಗಳೇ ನಿನ್ನನ್ನು ನಾನು ಗಿಣಿ ಸಾಕಿದ ಹಾಗೆ ಸಾಕುತ್ತೇನೆ ಎಂದು ಅಪ್ಪ ಹೇಳಿ, ಆಕೆಗೆ ಒಂದು ತುತ್ತು ಅನ್ನ ಹಾಕಿದಂತಾಗಿದೆ ಈ ವ್ಯವಹಾರ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾರ ಮಗಳು ?

ಶ್ರೀ ಜಿ. ದುಗ್ಗಪ್ಪ.—ನಿಮ್ಮ ಮಗಳು ರಾಜರಾಜೇಶ್ವರಿ ಇದಾಳಲ್ಲ. ಹೀಗೆ ತಲಾ 20-25, 18 ರೂಪಾಯಿಗಳನ್ನು ಕೊಟ್ಟು ಹಾಸ್ಟಲುಗಳನ್ನು ನಡೆಸಿ ಎಂದರೆ ಅದು ಸಾಧ್ಯವಿಲ್ಲದ ಮಾತು.

ಹಿಂದಿನಿಂದ ನಡೆದುಕೊಂಡು ಬಂದಿದೆ ಅದಕ್ಕೆ ನಾವೇನು ಮಾಡೋಣ ಎಂದು ಹೇಳುತ್ತಾರೆ. ಈ ಕಂದಾಚಾರ—ಅಡ್ಮಿನಿಸ್ಟ್ರೇಟೀವ್ ರಟ್—ಹೋಗಬೇಕು. ವಾಸ್ತವಾಂಶ ಏನೆಂಬುದನ್ನು ತಾವು ತಿಳಿದುಕೊಂಡು ಅದಕ್ಕೆ ಪರಿಹಾರವನ್ನು ನೀಡಬೇಕು. ಏನು ಖಾಯಿಲೆ ಎಂದು ತಿಳಿದು ಗುಣಪಡಿಸಬೇಕು. ಈ ವಿಷಯದಲ್ಲಿ ತಾತ್ಸಾರ ಮನೋಭಾವ ಖಂಡಿತ ಕೂಡದು.

ಇನ್ನು ಹಾಸ್ಟೆಲ್‌ಗಳನ್ನು ಮಾಡಿದ್ದೀರಿ ಒಂದೊಂದು ತಾಲ್ಲೂಕಿನಲ್ಲಿ 3 ಹಾಸ್ಟಲುಗಳು ಇವೆ. ಒಂದೊಂದು ತಾಲ್ಲೂಕಿನಲ್ಲಿ ಒಂದು ಹಾಸ್ಟೆಲೂ ಸಹ ಇಲ್ಲ. ಎಲ್ಲೆಲ್ಲಿ ಎಷ್ಟೆಷ್ಟು ಹಾಸ್ಟೆಲುಗಳು ಇವೆ ಎಂಬುದನ್ನು ಗೊತ್ತಿಲ್ಲ ಎಂದು ತಾವೇ ಹಿಂದೆ ಒಂದು ಸಾರಿ ಹೇಳಿದ್ದೀರಿ. ಆದ್ದರಿಂದ ಕ್ರಮವರಿತು ಒಂದೊಂದು ತಾಲ್ಲೂಕಿಗೆ ಒಂದೊಂದು ಅಥವಾ ಎರಡೆರಡು ಹಾಸ್ಟೆಲುಗಳನ್ನು ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ 3 ಹಾಸ್ಟೆಲುಗಳು ಇವೆ, ಇದು ಬಹಳ ಅಭಾಸ ಇದನ್ನು ತೆಗೆದು ಹಾಕಿ ಒಂದೂ ಹಾಸ್ಟೆಲು ಇಲ್ಲದೇ ಇರತಕ್ಕ ತಾಲ್ಲೂಕು ಯಾವುದು ಇದೆಯೋ ಅದಕ್ಕೆ ಹಾಸ್ಟೆಲನ್ನು ಕೊಡಿ ಎಂದು ನಾನು ಹೇಳುತ್ತೇನೆ. ಇದೇ ಅಸೆಂಬ್ಲಿಯಲ್ಲಿ ಮಾನ್ಯ ಮಂತ್ರಿಗಳು—ಕೋ ಆಪರೇಟೀವ್ ಮಂತ್ರಿಗಳು ಸಹಕಾರ ಸಂಘಗಳ ಮೂಲಕ ಮನೆಗಳನ್ನು ಕಟ್ಟುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರು. ಬಡ್ಜೆಟ್ಟನ್ನು ಇಡುತ್ತಾ ಮಾನ್ಯ ಹಣಕಾಸಿನ ಮಂತ್ರಿಗಳು ಏನು ಹೇಳಿದ್ದಾರೆ ಎಂದರೆ: ಅನುಸೂಚಿತ ಜಾತಿಗಳವರಿಗೆ ಮನೆ ಕಟ್ಟಿಸಿ ಕೊಡುವ ಸಲುವಾಗಿ ರಾಜ್ಯ ಸರ್ಕಾರದವರು ಕೊಡಬೇಕೆಂದಿರುವ ಸಾಲದ ಸಂಬಂಧದಲ್ಲಿ ರಿಸರ್ವ್ ಬ್ಯಾಂಕಿನವರಿಂದ ಸೂಚಿತವಾದ ಷರತ್ತುಗಳನ್ನು ಒಪ್ಪಿಕೊಳ್ಳುವಂತೆ ರಾಜ್ಯ ಸರ್ಕಾರದವರು ಜೀವ ವಿಮಾ ಕಂಪೆನಿಗಳಿಗೆ ವಿನಂತಿ ಮಾಡಿಕೊಂಡಿದ್ದಾರೆ. ಷರತ್ತುಗಳ ವಿಚಾರದಲ್ಲಿ ಒಮ್ಮತಕ್ಕೆ ಬಂದೊಡನೆ, ಈ ಸಾಲವನ್ನು ಪಡೆದುಕೊಂಡು, ಧನ ಸಹಾಯದಿಂದ ಕೊಡತಕ್ಕ ಬಡ್ಡಿ ದರಗಳ ಮೇರೆಗೆ ಸಹಕಾರ ಸಂಘಗಳಿಗೆ ಸಾಲ ಕೊಡಲು ಸಾಧ್ಯವಾಗುವುದು. ಹೋದ ವರ್ಷದಿಂದಲೂ ಹೇಳುತ್ತಾ ಇದ್ದರು ಒಂದು ಕೋಟಿ ರೂಪಾಯಿ ಕೊಡುತ್ತೇವೆ ಎಂದು. ಕೊಂಡಜ್ಜಿ ಬಸಪ್ಪನವರಿಗೆ ಗೊತ್ತು ಸೊಸೈಟಿಗಳನ್ನು ಸ್ಥಾಪನೆ ಮಾಡಿ 30 ಲಕ್ಷ ರೂಪಾಯಿಗಳವರೆಗೂ ರಿಕಾರ್ಡ್‌ಗಳನ್ನು ತರಿಸಿ ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿ ಇಟ್ಟಿದ್ದಾರೆ. ಮನೆ ಇಲ್ಲದೇ ಇರತಕ್ಕವರು ಸಾಲ ಸೋಲ ಮಾಡಿ ಕಷ್ಟಪಟ್ಟು ಷೇರ್ ಹಣವನ್ನು ಕಟ್ಟಿ, ಇವತ್ತೊ ನಾಳೆಯೋ ಸಾಲದ ಹಣ ಬರುತ್ತದೆ ಎಂದು ನಂಬಿಕೊಂಡು ಕುಳಿತುಕೊಂಡಿದ್ದಾರೆ. 30 ಲಕ್ಷ ರೂಪಾಯಿನ ರೆಕಾರ್ಡ್ ತಯಾರು ಮಾಡಿ ತಂದು ಇಟ್ಟುಕೊಂಡಿದ್ದಾರೆ. ಮಾರ್ಚಿ 25ನೇ ತಾರೀಖು ಆಯಿತು ಇವತ್ತಿನವರೆಗೂ ದುಡ್ಡು ಬರತಕ್ಕ ಸೂಚನೆ ಇಲ್ಲ. ಈ ವರ್ಷ ಬರುವುದೂ ಇಲ್ಲ. 31ನೇ ತಾರೀಖು ಆಗಿ ಹೋಗುತ್ತದೆ. ನೀವೇನಾದರೂ ಪ್ರಯತ್ನ ಮಾಡಿದಿದ್ದರೆ ಖಂಡಿತವಾಗಿಯೂ ಈ ಹಣವನ್ನು ಒದಗಿಸಿಕೊಡಬಹುದಾಗಿತ್ತು. ಅನೇಕ ಇಲಾಖೆಗಳು ಇವೆ.

It was easy for the Government to find at least 15 lakhs out of the savings in the various Departments. If they had the heart and if they had the mind, they could have found out. But they are not doing it. We do not want mere lip sympathy.

(ಶ್ರೀ ಜಿ. ದುಗ್ಗಪ್ಪ)

ಎಷ್ಟೋ ಪ್ರಚಾರ ಮಾಡಿ ಸೊಸೈಟಿಗಳನ್ನು ಮಾಡಿದೆವು. ಇವತ್ತು ಅವರಿಗೆ ತೋರಿಸುವುದಕ್ಕೆ ನಮಗೆ ಮುಖ ಇಲ್ಲ. ಬಹಳವಾಗಿ ನೊಂದುಕೊಂಡಿದ್ದೇವೆ, ನಮ್ಮ ಕೈಯ್ಯಲ್ಲಿ ಯಾವ ಕೆಲಸವನ್ನೂ ಮಾಡುವುದಕ್ಕೆ ಆಗುತ್ತಾ ಇಲ್ಲ. ಇದು ನಿಜವಾದ ಮಾತು. ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುವುದಕ್ಕಿಂತಲೂ ಹಿಂದುಳಿದ ವರ್ಗದವರ ಪ್ರಗತಿಗೆ ಅತ್ಯಂತ ಮುಖ್ಯವಾದ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ. ಅವರಲ್ಲಿ ಅನೇಕ ಜನ ವಿದ್ಯಾವಂತ ಹುಡುಗರು ಇದ್ದಾರೆ. ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್ ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಅವರ ಎಂಪ್ಲಾಯ್‌ಮೆಂಟ್ ಪೊರ್ಟೆಷಿಯರ್‌ನ್ನು ಜಾಸ್ತಿಮಾಡಿ, ಅನೇಕ ವಿಧವಾದ ಸ್ಕೀಂಗಳು ಇವೆ ಅವನ್ನು ಜಾರಿಗೆ ಕೊಡುವಾಗ ಅವರಿಗೆ ಹೆಚ್ಚಿನ ಒಂದು ಅನುಕೂಲವನ್ನು ಕಲ್ಪಿಸಿ ಕೊಟ್ಟಿದ್ದೇ ಆದರೆ ನಮ್ಮ ದೇ ದ ಪ್ರಗತಿಯಾದ ಹಾಗೆ ಆಗುತ್ತದೆ ತನ್ಮೂಲಕ ಬಹಳ ಹಿಂದುಳಿದ ವರ್ಗಗಳವರ ಪ್ರಗತಿಯನ್ನೂ ಸಹ ಸಾಧಿಸಿದ ಹಾಗಾಗುತ್ತದೆ. ಇಷ್ಟು ಹೇಳಿ ಸಮಾಜ ಕಲ್ಯಾಣ ಮಂತ್ರಿಗಳಿಗೆ ಹಿಂದೆ ಒಂದು ಸಾರಿ ಹೇಳಿದ್ದೆ ತಾವು ರಾಜೀನಾಮೆ ಕೊಡಿ ಎಂದು ಆದರೆ ಇವತ್ತು ಅವರಿಗೆ ಹೇಳುತ್ತೇನೆ. ತಾವು ರಾಜೀನಾಮೆ ಕೊಡುವುದು ಬೇಡ. ತಾವು ಇದ್ದು ಪಾನನಿರೋಧವನ್ನು ಯಶಸ್ವಿಯಾಗಿ ಜಾರಿಗೆ ತರಲು ಪ್ರಯತ್ನ ಮಾಡಿ, ತನ್ಮೂಲಕ ಸಮಾಜದ ಕಲ್ಯಾಣವನ್ನು ಸಾಧನೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ಸಿಟಿ ಉತ್ತರ).—ಅಧ್ಯಕ್ಷರೇ, ಸಮಾಜ ಕಲ್ಯಾಣದ ಡಿಮ್ಯಾಂಡಿನ ಬಗ್ಗೆ ಮಾತನಾಡುತ್ತಾ ಸ್ವಾಮಿ, ಇದನ್ನು 1962-63ನೇ ಇಸವಿಯಲ್ಲಿ ತಂದು ಒಂದು ಹೊಸ ಮೇಜರ್ ಹೆಡ್ ಆಗಿ ಮಂಡಿಸಿದರು. ಇದರಲ್ಲಿ ಮಿಸಲೇನಿಯಸ್ ಡಿಪಾರ್ಟ್‌ಮೆಂಟ್ 26, ಜನರಲ್ ಅಡ್ಮಿನಿಸ್ಟ್ರೇಷನ್ 19 ಮತ್ತು ರೂರಲ್ ಡೆವಲಪ್‌ಮೆಂಟ್ 32 ಈ ಮೂರು ಭಾಗಗಳನ್ನು ಸೇರಿಸಿ ಒಂದು ಮೇಜರ್ ಹೆಡ್ ಮಾಡಿ ಒಂದು ನಾಮಕರಣ ಮಾಡಿದ್ದೀರಿ. ಸ್ವಾಮಿ, ಇದನ್ನು ಓದುವಾಗ ನನಗೆ ಬಹಳ ಆಶ್ಚರ್ಯವಾಯಿತು. ಒಂದು ಗಾದೆ ಹೇಳುತ್ತಾರೆ ಅರಬರ ಪಾಪಿ ಮೇಲೆ ಎಂದು ಆ ರೀತಿ ಆ ಗಾದೆಗೆ ತಕ್ಕಂತೆ ಈ ಪುಸ್ತಕ ನೋಡುವುದಾದರೆ ಅರ್ಥವಾಗುತ್ತದೆ, ಯಾರೋ ಮಾಡಿದ ತಪ್ಪು ಈ ಡಿಪಾರ್ಟ್‌ಮೆಂಟಿನ ಮೇಲೆ ಇದೆ ಎಂದು ಹೇಳಿದಂತೆ ಇದರಲ್ಲಿ ವೇದ್ಯವಾಗುತ್ತದೆ. ಇನ್ನೊಂದು ಆಶ್ಚರ್ಯದ ಮಾತನ್ನೂ ಕೂಡ ಹೇಳಬೇಕಾಗುತ್ತದೆ, ಇದನ್ನೆಲ್ಲಾ ವಿವರವಾಗಿ ನೋಡಿದ್ದರಲ್ಲಿ ಬರೀ ಅನ್ಯಾಯಕ್ಕೆ ಈ ಖಾತೆ ಇದೆ ಎಂದು ಹೇಳಬಹುದು. ಇದನ್ನು ಐದು ವಿಭಾಗಗಳನ್ನಾಗಿ ಮಾಡಿದ್ದೀರಿ ಆ ಐದು ವಿಭಾಗದಲ್ಲೂ ಕೂಡ ನೋಡುವುದಾದರೆ ಒಂದು ವಿಭಾಗಕ್ಕೆ ಲಕ್ಷದ 25ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಪುಟ 438ರಲ್ಲಿ ನಮೂದಾಗಿರುವಂತೆ ಬರೀ ಎಷ್ಟ್ಯಾಬ್ಲಿಷ್‌ಮೆಂಟಿಗೆ ಅಲ್ಲದೇ ಒಂದು ಕಾಸೂ ಕೂಡ ಬೇರೆದಕ್ಕೆ ಖರ್ಚಾಗಿಲ್ಲ. ಹಾಗೆಯೇ ಸ್ಟ್ಯಾಟಿಸ್‌ಟಿಕ್ಸ್ ಅಂತ ಹೇಳಿ ಅದಕ್ಕೆ 13 ಲಕ್ಷ 13 ಸಾವಿರದ 400 ರೂಪಾಯಿ ಖರ್ಚು ಮಾಡಿದ್ದೀರಿ. ಅದರಲ್ಲೂ ಕೂಡ ಬರೀ ಎಸ್ಟ್ಯಾಬ್ಲಿಷ್‌ಮೆಂಟಿನ ವಿನಾ ಬೇರೆ ಯಾವುದಕ್ಕೂ ಖರ್ಚಾಗಿಲ್ಲ. ಇದೇ ರೀತಿ ಒಂದರಲ್ಲಿ 22 ಲಕ್ಷ 35 ಸಾವಿರದ 800 ರೂಪಾಯಿ ಮತ್ತೊಂದರಲ್ಲಿ 1 ಕೋಟಿ 85 ಲಕ್ಷ 65 ಸಾವಿರದ 300 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಮಾನ್ಯ ಮಂತ್ರಿಗಳು ಇಬ್ಬರು ಇದ್ದೀರಿ. ಬಹುಶಃ ಇದು ಅವರ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂಬುದು ಅರ್ಥವಾಗುತ್ತಾ ಇಲ್ಲ. ಏಕೆಂದರೆ 1 ಕೋಟಿ 85 ಲಕ್ಷ 65 ಸಾವಿರದ 300 ರೂಪಾಯಿಗಳಲ್ಲಿ 6 ಬಾಬುಗಳನ್ನು ಬಿಟ್ಟರೆ ಉಳಿದ ಯಾವುದೂ ಕೂಡ ಪಾರ್ಟಿಗಳಿಗೆ ಸಲ್ಲುವುದಿಲ್ಲ. ನಾನು ಎಲ್ಲವನ್ನೂ ನೋಡಿದ್ದೇನೆ. ಸುಮಾರು 2 ಕೋಟಿ 42 ಲಕ್ಷ 21 ಸಾವಿರ ರೂಪಾಯಿಗಳಲ್ಲಿ ನೇರವಾಗಿ ಸಹಾಯಕ್ಕೆ ಒದಗುತ್ತಿರುವುದು 80 ಲಕ್ಷ ಮಾತ್ರ. ಇನ್ನು 1 ಕೋಟಿ 62 ಲಕ್ಷ ಬರೇ ಸಂಬಳ ಸಾರಿಗೆಗೇ ಈ ಇಲಾಖೆಯಲ್ಲಿ ಖರ್ಚಾಗುತ್ತದೆ. 80 ಲಕ್ಷವಾದರೂ ನೇರವಾಗಿ ಬೇಕಾದವರಿಗೆ ಸಲ್ಲುತ್ತದೆಯೇ ಎಂದು ಪುನರ್ವಿಮರ್ಶೆ ಮಾಡಬೇಕಾದ್ದು ಬಹಳ ಅತ್ಯಗತ್ಯ. 80 ಲಕ್ಷದಲ್ಲಿ ಕೂಡ ಸೇರುವುದು 40 ಲಕ್ಷ ಮಾತ್ರ. ಇದರ ಪ್ರಕಾರ ಸೇಕಡ 50ರಷ್ಟು ಸೇರುತ್ತದೆ. ಉಳಿದ 2 ಕೋಟಿ ರೂಪಾಯಿ ದಂಡದೋಷಗಳಿಗೆ ಖರ್ಚಾಗುತ್ತದೆಯೆಂದು ಧಾರಾಳವಾಗಿ ಹೇಳುತ್ತೇನೆ. ಹರಿಜನರ ಉದ್ಧಾರಕ್ಕಾಗಿ ಈ ಹಣವನ್ನು ಖರ್ಚು ಮಾಡುತ್ತಿರುವುದಾಗಿ ತೋರಿಸಿದ್ದಾರೆ. ಯಾರಿಗಾಗಿ ಈ ಹಣ ಮೀಸಲಾಗಿದೆಯೋ ಅವರು ಪಾಪಿಗಳೋ ಅಥವಾ ಸಂಬಂಧಪಟ್ಟ ಅಧಿಕಾರಿಗಳು ಪಾಪಿಗಳೋ ಎಂದು ಯೋಚನೆ ಮಾಡಬೇಕಾದ ಕಾಲ ಈಗ ಬಂದಿದೆ. 2 ಕೋಟಿ 40 ಲಕ್ಷ ರೂಪಾಯಿ ಖರ್ಚು ಮಾಡುವ ಈ ಒಂದು ಬಾಬಿನಲ್ಲಿ ಸುಮಾರು 2 ಕೋಟಿಯನ್ನು ಬೇರೆ ಜನರು ಲಪಟಾಯಿಸುತ್ತಿದ್ದಾರೆ. ಆದುದರಿಂದ ಈ ಸರಕಾರ ಉತ್ತಮವಾದ ಸರಕಾರವೆಂದು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಬಹಳ ವ್ಯಥೆಯಿಂದ ಇದನು ಹೇಳುವುದಾಗಿ ನಮ್ಮ ಮಿತ್ರರು ಹೇಳಿದರು. ನಾನು ಇನ್ನೂ ಹೆಚ್ಚಿನ ವ್ಯಥೆಯಿಂದ ಹೇಳುತ್ತೇನೆ

V-31 N65
N65-9.1-7
(B)4832

ಈ ಒಂದು ಇಲಾಖೆಯ ಸಚಿವೆಯರಾದ ಶ್ರೀಮತಿ ಯಶೋಧರಮ್ಮನವರನ್ನು ನಾನು ಬಾಲ್ಯದಿಂದಲೂ ಬಲ್ಲೆ, ಅವರು ಸಮಾಜ ಕಲ್ಯಾಣಕ್ಕಾಗಿ ತಮ್ಮ ಇಡೀ ಜೀವಮಾನವನ್ನೇ ಧಾರೆಯೆರೆದಿದ್ದಾರೆ. ಈ 3 ವರ್ಷದಲ್ಲಿ, ಅವರ ಕಾಲದಲ್ಲಿ ಬಹುಶಃ ಈ ಇಲಾಖೆಯನ್ನು ಬಹಳ ಉತ್ತಮ ರೀತಿಯಲ್ಲಿ ನಡೆಯುವ ಹಾಗೆ ವ್ಯವಸ್ಥೆ ಮಾಡುತ್ತಾರೆಂದು ನಾನು ಭಾವಿಸಿದ್ದೆ. ಆದರೆ ಅವರು ಕೆಲಸದ ಒತ್ತಡದಲ್ಲಿ ಸರಿಯಾಗಿ ನೋಡಿದ್ದಾರೋ ಇಲ್ಲವೋ ಎಂದು ಅನುಮಾನವಾಗುತ್ತದೆ. ಬಾಲ್ಯದಿಂದಲೂ ಕೂಡ ಅವರು ಗಾಂಧೀಜಿಯವರ ಆಶ್ರಯದಲ್ಲಿದ್ದು ಬಹಳವಾಗಿ ಸೇವೆಸಲ್ಲಿಸಿದವರು. ಅಂಥವರ ಕಾಲದಲ್ಲೇ ಈ ಇಲಾಖೆ ಅಧೋಗತಿಗೆ ಇಳಿಯುತ್ತಿದ್ದರೆ ಅವರು ಹೇಗೆ ಸಹಿಸಿಕೊಂಡಿದ್ದಾರೋ ತಿಳಿಯದು, ಅವರು ರಾಜೀನಾಮೆ ಕೊಟ್ಟರೆ ಬಹಳ ಕ್ಷೇಮ. ಈ ಇಲಾಖೆಯಲ್ಲಿ ಮಾಡುವ ಖರ್ಚಿನ ರೀತಿಯನ್ನು ನೋಡಿ ಅವರು ಹೇಗೆ ಸಹಿಸಿಕೊಂಡಿದ್ದಾರೋ ತಿಳಿಯದು. ರೀಆರ್ಗನೈಜೇಷನ್ನಾದರೂ ಮಾಡಿ ಸರಿಯಾಗಿ ನಡೆಸುವುದು ಸೂಕ್ತ. ಒಂದೊಂದು ಬಾಬನ್ನೂ ನೋಡಿದರೆ ನಿಜವಾಗಿಯೂ ವ್ಯಸನವಾಗುತ್ತದೆ, ಬಹುಶಃ ತಪಶೀಲಾಗಿ ನೋಡುವುದಾದರೆ ಒಂದೊಂದು ಇಲಾಖೆಯಲ್ಲೂ ಕೂಡ ಬೇಕಾದಷ್ಟು ಸಿಬ್ಬಂದಿ ಬೆಳೆದಿದೆ, ಸರಕಾರ ಇದನ್ನು ಒಪ್ಪಿಕೊಳ್ಳುತ್ತದೆಂದು ಭಾವಿಸುತ್ತೇನೆ. ಎಲ್ಲಿ ನೋಡಿದರೂ ಕೂಡ ಸಿಬ್ಬಂದಿ. ನೇರವಾಗಿ ಸೇಕಡ 50 ಭಾಗ ಮಾತ್ರ ಸತ್ಪಾತ್ರರಿಗೆ ಸಲ್ಲುವುದು. ಹಿಂದುಳಿದ ಪಂಗಡದವರ ವಿದ್ಯಾಭ್ಯಾಸಕ್ಕಾಗಿ 54,72,000 ರೂಪಾಯಿಗಳನ್ನು ಒದಗಿಸಲಾಗಿದೆ. ಬಹುಶಃ ಅದು ಅವರಿಗೆ ಸೇರಬಹುದು. ಮಧ್ಯೆ ಅನ್ಯಾಯವಾಗುವುದು ಗೊತ್ತಿಲ್ಲ. ಪಬ್ಲಿಕ್‌ಹೆಲ್ತ್‌ಗೆ ಕೇವಲ 87,100 ರೂಪಾಯಿ ಇರುವುದು ಕೂಡ ಸೇರಬಹುದು. ಇನ್ನು ಕೆಲವು ಕಡೆ ಮೂರನೆಯ ಪಂಚವಾರ್ಷಿಕ ಯೋಜನೆಯ ಕೆಲವು ಯೋಜನೆಗಳಿಗೆ 1 ಕೋಟಿ 15 ಲಕ್ಷ ಕೊಡಲಾಗಿದೆ. ಅದರಲ್ಲಿ ಸೇಕಡ 50 ಭಾಗ ಸಿಬ್ಬಂದಿಗೇ ಹೋಗುತ್ತದೆ. ಕಾಂಗ್ರೆಸ್ ಸರಕಾರ ಆಡಳಿತಕ್ಕೆ ಬಂದರೂ, ಬಂದು 17 ವರ್ಷಗಳಾದರೂ ಹೀಗೆಯೇ ಅವ್ಯವಸ್ಥೆಯಾಗಿದೆ. ಹೀಗಿರುವಾಗ ಹೇಗೆ ನಿಮಗೆ ಜನರು ಓಟುಕೊಡುತ್ತಾರೋ ತಿಳಿಯದು, ತಿಳಿವಳಿಕೆ ಇಲ್ಲದೆ ಕೊಡಬಹುದೆಂದು ಕಾಣುತ್ತದೆ. ಈ ಜನರ ಬಗ್ಗೆ ಉದಾಸೀನ ಮಾಡಲಾಗುತ್ತಿದೆ, ಭಾಷಣಗಳಲ್ಲಿ ಮಾತ್ರ ಏನೇನೋ ಹೇಳಿ ಕರ್ತವ್ಯದಲ್ಲಿ ಕಾರ್ಯತಃ ಹೇಳಿದಂತೆ ಮಾಡದೇ ಇದ್ದರೆ ದೇಶದ ಕಲ್ಯಾಣವನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ದೇಶದಲ್ಲಿ ಹಿಂದೆಬಿದ್ದಿರುವ 9 ಕೋಟಿ ಜನರ ಬಾಯಿಗೆ ತುಪ್ಪ ಸವರುವ ಮಾತನ್ನಾಡಿ ಕಾರ್ಯತಃ ಏನೂ ಮಾಡದಿದ್ದರೆ ಪ್ರಗತಿಯಾಗುವುದಿಲ್ಲ. ಜಮೀನು ಕೊಡುವುದು, ಮರ ಕೊಡುವುದು ಅಥವಾ ಮನೆ ಕೊಡಬೇಕೆಂಬ ತಮ್ಮ ತತ್ವ ಬರೀ ಬಾಯಲ್ಲಿದೆ. ನಿಜವಾಗಿಯೂ ಕೂಡ ಬಾಯಲ್ಲಿ ಹೇಳುವುದನ್ನು ಕಾರ್ಯಗತ ಮಾಡುವುದಾದರೆ ಉಳಿದಿರುವ ಸೇಕಡ 50 ಭಾಗ ಸಹ ಜನತೆಗೆ ದೊರೆಯುವಂತೆ ಏರ್ಪಾಡುಮಾಡಿ. ಸೇಕಡ 18 ಅಧಿಕಾರಸ್ಥಾನಗಳು ದೊರೆಯಬೇಕಾಗಿರುವಾಗ ಕೇವಲ ಸೇಕಡ 4 ಮಾತ್ರ ದೊರೆತಿವೆ, ಇನ್ನೂ 14 ಜಾಗಗಳನ್ನು ಭರ್ತಿಮಾಡಲು ತಮಗೆ ಸಾಧ್ಯವೇ ಎಂದು ಪ್ರಶ್ನೆ ಮಾಡಬೇಕಾಗಿದೆ. ಉದ್ಯೋಗಗಳಲ್ಲಿ 18 ಭಾಗ ಕೊಡಬೇಕೆಂದು ಹೇಳುವುದನ್ನು ಯಾವ ರೀತಿ ಕಾರ್ಯರೂಪಕ್ಕೆ ತರಲಾಗಿದೆ? ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ 3 ವರ್ಷಗಳ ಹಿಂದೆ ರಿಜಿಸ್ಟರು ಮಾಡಿರುವುದಕ್ಕೆ ಪ್ರಾಶಸ್ತ್ಯ ಕೊಡದೆ ಫೋನ್ ಮೂಲಕ ತಿಳಿಸಿ ಹೊಸದಾಗಿ ರಿಜಿಸ್ಟರು ಮಾಡಿ ಬೇಕಾದವರಿಗೆ ಸ್ಥಾನ ಕೊಡುತ್ತಾರೆ. ಇಂಥ ಸರಕಾರ ಸೇಕಡ 18 ಸ್ಥಾನಗಳನ್ನು ಭರ್ತಿಮಾಡಲು ಸಾಧ್ಯವೇ? ಇದಲ್ಲದೆ ಮಂತ್ರಿಮಂಡಲದಲ್ಲಿ 3 ಜನರಾದರೂ ದಲಿತವರ್ಗದವರಿರಬೇಕು, ನಮಗೆ ಅಧಿಕಾರವಿದ್ದರೆ ಇನ್ನೂ ಜಾಸ್ತಿ ಕೊಡುತ್ತಿದ್ದೆವು. 1967 ರ ಹೊತ್ತಿಗೆ ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ, ಈಗ ಅಧಿಕಾರದಲ್ಲಿರುವವರು ಉರುಳುತ್ತಾರೆ, ಅದು ಖಂಡಿತ. ಮುಖ್ಯಮಂತ್ರಿಗಳು ಕೂಡ ದಲಿತವರ್ಗದವರೇ ಇರಬೇಕು, ಇಲ್ಲದಿದ್ದರೆ ಜಾತ್ಯಾತೀತ ರಾಜ್ಯ ಎಂದಿಗೂ ಸ್ಥಾಪನೆಯಾಗುವುದಿಲ್ಲ. ಜಾತ್ಯಾತೀತ ರಾಜ್ಯ ಸ್ಥಾಪಿಸಲು ಒಂದು ಕಾನೂನು ಆಗಿದೆ. ಯಾರೂ ಕೂಡ ಜಾತಿಯ ಆಧಾರದ ಮೇಲೆ ರಾಜ್ಯ ಕಟ್ಟುವುದು ಬೇಡ, ಸಮಾಜವು ನಿಜವಾಗಿಯೂ ಉದ್ಧಾರವಾಗಬೇಕಾದರೆ ಹಿಂದೂಧರ್ಮ ಮತ್ತು ಸತ್ಯದ ಆಧಾರದಮೇಲೆ ರಾಜ್ಯ ಕಟ್ಟಬೇಕು. ಹಾಗೆ ಮಾಡಿದರೆ ಯಾರೇ ಅಧಿಕಾರದಲ್ಲಿರಲಿ ರಾಜ್ಯ ಬಹಳ ದಿವಸ ಬಾಳಬಹುದು ಎಂದು ನಾನು ಹೇಳುತ್ತೇನೆ. ನಮ್ಮ ಸಚಿವರು ತಮ್ಮ ಜೀವಮಾನವನ್ನೇ ಸಮಾಜ ಕಲ್ಯಾಣಕ್ಕಾಗಿ ಮುಡಿಪಾಗಿಟ್ಟು ದುಡಿಯುತ್ತಿದ್ದಾರೆ. ಅವರಿಗೆ ಇನ್ನೂ ಎರಡು ವರ್ಷ ಅಧಿಕಾರವಿದೆ. ಆ ಕಾಲದಲ್ಲಿ ಇನ್ನೂ ಹೆಚ್ಚು ಕಾರ್ಯವನ್ನು ಮಾಡುತ್ತಾರೆಂದು ನಾನು ನಂಬಿದ್ದೇನೆ.

4-30 P.M.

ಇನ್ನೊಂದು ವಿಚಾರವನ್ನು ನನ್ನ ಸ್ನೇಹಿತರು ಹೇಳಿದರು. ಒಂದು ವರ್ಷದೊಳಗೆ ಕೇವಲ ಎರಡು ಮೀಟಿಂಗ್‌ಗಳು ಮಾತ್ರ ಮಾಡಿದ್ದಾರೆ ಎಂದು. ಎರಡೂವರೆ ಕೋಟಿ ರೂಪಾಯಿ ಖರ್ಚು ಮಾಡುವಾಗ ಕೇವಲ ಎರಡು ಮೀಟಿಂಗ್‌ಗಳನ್ನು ಮಾಡಿದ್ದಾರೆ ಎಂದರೆ ದುಡ್ಡು ಎಷ್ಟರಮಟ್ಟಿಗೆ

(ಶ್ರೀ ಬಿ. ಕೆ. ಪುಟ್ಟಯ್ಯ)

ಅನ್ಯಾಯವಾಗುತ್ತದೆ ಎನ್ನುವುದನ್ನು ನಾವು ಊಹೆ ಮಾಡಬಹುದು. ತಿಂಗಳಿಗೆ ಒಂದು ಸಲ ಮೀಟಿಂಗ್ ಮಾಡುವಾಗಲೇ ಬೇಕಾದಷ್ಟು ಲೋಪವಾಗುತ್ತಿರುವ ಕಾಲದಲ್ಲಿ ವರ್ಷಕ್ಕೆ ಎರಡು ಸಲ ಮೀಟಿಂಗ್ ಕರೆಯುವ ಸಂಸ್ಥೆಗಳು ಎಷ್ಟರಮಟ್ಟಿಗೆ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತವೆ ಎನ್ನುವುದನ್ನು ನಾವು ಊಹೆ ಮಾಡಬಹುದು. ಇವನ್ನೆಲ್ಲ ನೋಡಿದರೆ ಇಲ್ಲಿ ಲಂಗು ಲಗಾಮು ಇಲ್ಲದ ಆಡಳಿತ ನಡೆಯುತ್ತಿದೆ ಎಂದು ಹೇಳಬಹುದು. ಅದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ಬಜೆಟ್ಟಿನಲ್ಲಿ 437 ರಿಂದ 445 ನೆ ಪುಟದವರೆಗೂ ಎಲ್ಲಿ ನೋಡಿದರೂ ಸಿಬ್ಬಂದಿಯ ಸಂಬಳ, ಭತ್ಯ ಇವುಗಳಿಗಾಗಿಯೇ ಹೆಚ್ಚು ಹಣ ಖರ್ಚಾಗುತ್ತಿದೆ. ಸಂಬಳಕ್ಕಿಂತ ಹೆಚ್ಚಾಗಿ ಟಿ.ಎ. ಮತ್ತು ಡಿ.ಎ. ತೆಗೆದುಕೊಂಡಿರುವ ಸಂದರ್ಭಗಳೂ ಉಂಟು. ಇಂಥ ವ್ಯವಸ್ಥೆಯಲ್ಲಿ ನಾವು ಕಣ್ಣುಮುಚ್ಚಿಕೊಂಡು ಸಭೆಯ ಸದಸ್ಯರು ಈ ಬೇಡಿಕೆಗಳಿಗೆ ಒಪ್ಪಿಗೆಯನ್ನು ಕೊಡುವುದಾದರೆ ಅದಕ್ಕಿಂತ ಮಹಾಪರಾಧ ಬೇರೆ ಇಲ್ಲ. ದಯವಿಟ್ಟು ಇದನ್ನೆಲ್ಲ ಸರಿಯಾಗಿ ನೋಡಿ ಮಾನ್ಯ ಮಂತ್ರಿಗಳು ಮುಂದಿನ ವರ್ಷಕ್ಕಾದರೂ ಕೂಡ ಎಷ್ಟು ಸಾಧ್ಯವೋ ಅಷ್ಟು ಆಡಳಿತದ ಮೇಲೆ ಹಿಡಿತವನ್ನು ತಂದುಕೊಳ್ಳಬೇಕೆಂದು ಅಭಿಪ್ರಾಯಪಟ್ಟು ನನಗೆ ಅಧ್ಯಕ್ಷರು ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸುತ್ತೇನೆ.

ಶ್ರೀ ಜೆ. ಎಲ್. ಕಬಾಡಿ (ಬಾರ್ದೋಲಿ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಮುಂದೆ ಇರತಕ್ಕ ಬೇಡಿಕೆಗಳ ಮೇಲೆ ನಾನು ಕೆಲವೊಂದು ಸೂಚನೆಗಳನ್ನು ಕೊಡಬಯಸುತ್ತೇನೆ. ಈ ಬೇಡಿಕೆ ಸಮಾಜ ಕಲ್ಯಾಣ ಖಾತೆಗೆ ಸಂಬಂಧಪಟ್ಟಿದ್ದರೂ ಕೂಡ ಇವತ್ತಿನ ಸನ್ನಿವೇಶದಲ್ಲಿ ನಮಗೆ ಒದಗಿಸಿರತಕ್ಕ ಪ್ಲಾನ್‌ನಲ್ಲಿ ಎಷ್ಟೆಷ್ಟು ಖರ್ಚಾಗಿದೆ, ಏನುಮಾಡಿದ್ದಾರೆ, ಎನ್ನುವುದನ್ನು ಸ್ವಲ್ಪ ವಿಮರ್ಶೆ ಮಾಡಿ ನೋಡಿದರೆ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಈ ಖಾತೆಯಲ್ಲಿ ಪ್ಲಾನ್ ಔಟ್‌ಲೇ ಎಷ್ಟಿದ್ದರೂ ಸಹಿತ ಅದನ್ನು ಖರ್ಚು ಮಾಡುವಂಥ ಯೋಗ್ಯತೆಯುಳ್ಳ, ಅದಕ್ಕೆ ತಕ್ಕ ಸಿಬ್ಬಂದಿ ಇದೆಯೋ ಇಲ್ಲವೋ ಎನ್ನುವ ಶಂಕೆ ಉದ್ಭವವಾಗುತ್ತದೆ. ಇದನ್ನು ಪದೇ ಪದೇ ಹೇಳುತ್ತ ಬಂದಿದ್ದರೂ ಸಹಿತ ಅದಕ್ಕೆ ತಕ್ಕಂತೆ ಸರ್ಕಾರ ಒಂದು ಯೋಗ್ಯ ವ್ಯವಸ್ಥೆಯನ್ನು ಏಕೆ ಮಾಡಿಲ್ಲ ಎನ್ನುವುದನ್ನು ಕೂಡ ಇಲ್ಲಿ ಹೇಳಬೇಕಾಗುತ್ತದೆ. ಪ್ಲಾನ್‌ನಲ್ಲಿ ಒದಗಿಸಿರುವ ಹಣ ಮತ್ತು ಅದರಲ್ಲಿ ಖರ್ಚು ಮಾಡಿರುವ ಹಣ ಈ ರೀತಿ ಇದೆ. ಷೆಡ್ಯೂಲ್ ಕ್ಯಾಸ್ಟ್‌ನವರ ಕಲ್ಯಾಣಕ್ಕಾಗಿ ಮೊದಲನೆ ಯೋಜನೆಯಲ್ಲಿ 1,15,90,000 ರೂಪಾಯಿ ಕೊಟ್ಟಿದ್ದರೆ ಸ್ಟೇಟ್ ಸರ್ಕಾರಿನಿಂದ ಕೇವಲ 83 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಅದರಂತೆ 1956-61ರ ಅವಧಿಯಲ್ಲಿ 2,07,75,500 ರೂಪಾಯಿ ಇಟ್ಟಿದ್ದರಲ್ಲಿ 1 ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿದ್ದಾರೆ. ಅದರಂತೆ 1961-66 ರಲ್ಲಿ ನಮಗೆ 2 ಕೋಟಿ 75 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದರಲ್ಲಿ 30-9-1963 ರ ವರೆಗೆ ಕೇವಲ 94 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಅವಧಿಯಲ್ಲಿ ನಾಲ್ಕು ವರ್ಷ ಮುಗಿದು ಹೋದರೂ ಕೂಡ ಒಂದು ಕೋಟಿ ರೂಪಾಯಿ ಸಹಿತ ಖರ್ಚು ಮಾಡಲಿಕ್ಕೆ ಆಗಿಲ್ಲ. ಇದರಿಂದ ಏನು ತೋರಿಸುತ್ತದೆ ಎಂದರೆ ಈ ಖಾತೆಯಲ್ಲಿ ಸಿಬ್ಬಂದಿ ಯಾವುದಾದರೂ ಕೆಲಸ ಮಾಡುತ್ತದೆಯೇ, ಆ ಖಾತೆ ಯಾವುದಾದರೂ ಕೆಲಸವನ್ನು ನಡೆಸಿಕೊಂಡು ಹೋಗುತ್ತದೆಯೇ, ಸಮಾಜ ಕಲ್ಯಾಣದ ಸಲುವಾಗಿ ಯಾವ ರೀತಿಯಿಂದ ಕೆಲಸ ನಡೆಯುತ್ತಿದೆ ಎನ್ನುವುದು ಸ್ಪಷ್ಟವಾಗುತ್ತದೆ.

ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಸಲುವಾಗಿ ಸೆಂಟ್ರಲ್ ಸರ್ಕಾರಿನಿಂದ 10 ಲಕ್ಷ 82 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರೂ ಸಹಿತ ಇಲ್ಲಿಯವರೆಗೂ 3 ಲಕ್ಷ 23 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಎಂದರೆ ಕೇಂದ್ರದಿಂದ ಹೆಚ್ಚು ಹಣವನ್ನು ತಂದು, ಎಷ್ಟೋ ಯೋಜನೆಗಳನ್ನು ಪಡೆದು ಆ ಹಣವನ್ನು ಖರ್ಚು ಮಾಡಬೇಕು, ಸಮಾಜ ಕಲ್ಯಾಣವನ್ನು ಪ್ರಗತಿಪರವಾಗಿ ಹೇಗೆ ಮಾಡಬೇಕು, ಸಮಾಜಕಲ್ಯಾಣವಾಗಬೇಕು ಎಂದು ಎಷ್ಟು ಹೇಳಿದರೂ ಸಹಿತ ಕೇಂದ್ರದವರು ಸಾಕಷ್ಟು ಹಣವನ್ನು ಕೊಟ್ಟರೂ ಸಹಿತ ಅದನ್ನು ಖರ್ಚುಮಾಡುವುದಕ್ಕಾಗಿಲ್ಲ. ಮೂರನೆ ಪ್ಲಾನಿನಲ್ಲಿ ಷೆಡ್ಯೂಲ್ ಕ್ಯಾಸ್ಟ್‌ನವರಿಗಾಗಿ ಪ್ಲಾನ್ ಔಟ್‌ಲೇ 34,99,360 ರೂಪಾಯಿ ಇದ್ದರೂ ಕೇವಲ 9,91,477 ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇದು ನಮ್ಮ ಸರಕಾರಕ್ಕೆ ಭೂಷಣವಾಗದೆ ಇರುವ ಮಾತು ಎಂದು ಹೇಳಬೇಕಾಗಿದೆ. ಸರ್ಕಾರ ಸಾಕಷ್ಟು ಸಿಬ್ಬಂದಿಯನ್ನು ಇಟ್ಟುಕೊಂಡು ಜಿಲ್ಲಾ ಮಟ್ಟದಲ್ಲಾಗಲೀ, ರಾಜ್ಯ ಮಟ್ಟದಲ್ಲಾಗಲೀ, ಖರ್ಚುಮಾಡಲಿಕ್ಕೆ ಆಗುವುದಿಲ್ಲ ಎನ್ನುವ ಮಾತು ವ್ಯಕ್ತವಾಗುತ್ತದೆ. ಇನ್ನು ಉಳಿದಿರುವ ಒಂದು ವರ್ಷದಲ್ಲಿ ಇಷ್ಟೊಂದು ಹಣ ಅರ್ಧಕ್ಕಿಂತ ಹೆಚ್ಚು ಹಣ ಖರ್ಚಾಗುತ್ತದೆಯೇ ಹೇಗೆ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ.

ಡೀ ನೋಟಿಫೈಡ್ ಮತ್ತು ಸೆಮಿ ನೊಮ್ಯಾಡಿಕ್ ಟ್ರೈಬ್ಸ್ ಸಲುವಾಗಿ, ಖರ್ಚು ಆಗಿರುವುದರಲ್ಲಿಯೂ ಹೀಗೆಯೇ ಇದೆ. 1956–61 ಕ್ಕೆ: 20 ಲಕ್ಷ ರೂಪಾಯಿ ಇಟ್ಟಿದ್ದರಲ್ಲಿ 10 ಲಕ್ಷ ರೂಪಾಯಿ

ಖರ್ಚು ಮಾಡಿದ್ದಾರೆ. 1961-66 ಕ್ಕೆ 36 ಲಕ್ಷ ರೂಪಾಯಿನಲ್ಲಿ ನಾಲ್ಕು ಲಕ್ಷ ಏಳು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ವೆಲ್‌ಫೇರ್ ಆಫ್ ಅದರ್ ಬ್ಯಾಕ್‌ವರ್ಡ್ ಕ್ಲಾಸಸ್‌ಗಾಗಿ ಸ್ಟೇಟ್ ಸೆಕ್ಟಾರಿನಲ್ಲಿ 15 ಲಕ್ಷ 3 ಸಾವಿರ ರೂಪಾಯಿ ಇಟ್ಟಿದ್ದುದರಲ್ಲಿ 9 ಲಕ್ಷ 58 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮೂರನೆಯ ಯೋಜನೆಯಲ್ಲಿ 28 ಲಕ್ಷ ರೂಪಾಯಿ ಇದ್ದರೆ 8 ಲಕ್ಷ ರೂಪಾಯಿ ಖರ್ಚಾಗಿದೆ. ಇದರಿಂದ ಎಷ್ಟು ಹಣ ಲ್ಯಾಪ್ಸ್ ಆಗಿದೆ, ಇದನ್ನು ಖರ್ಚು ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೋ ಎನ್ನುವ ಮಾತನ್ನು ಸ್ಪಷ್ಟಪಡಿಸಿದ್ದೇನೆ.

ಅಲ್ಲದೆ ಸರ್ವಿಸ್ ವಿಚಾರದಲ್ಲಿ ನಾವು ನೋಡುವುದಾದರೆ ಅದಕ್ಕೆ ಆದಂಥ ಅನ್ಯಾಯವನ್ನು ಮತ್ತೆ ಯಾವುದಕ್ಕೂ ಆಗಿಲ್ಲವೋ ಏನೋ ಎನ್ನುವ ರೀತಿಯಲ್ಲಿ ಹೇಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ 153 ಡಿಪಾರ್ಟ್‌ಮೆಂಟ್‌ಗಳಿವೆ. ಆದರೂ ಸಹಿತ ಎರಡು ಡಿಪಾರ್ಟ್‌ಮೆಂಟುಗಳಲ್ಲಿ ಎಷ್ಟೆಷ್ಟು ಯಾವ ಯಾವ ರೀತಿಯ ಪರ್‌ಸೆಂಟೇಜ್ ಇಟ್ಟುಕೊಂಡು ಬಂದಿದ್ದಾರೆ ಎನ್ನುವುದನ್ನು ಚೆನ್ನಾಗಿ ಅರ್ಥವಾಗುತ್ತದೆ. ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಕಮಿಟಿಯವರು ಕೊಟ್ಟಿರುವ ವರದಿಯನ್ನು ನೋಡಿದರೆ ಈ ವಿಷಯ ಗೊತ್ತಾಗುತ್ತದೆ. ಯಾವುದೇ ಒಂದು ಆರ್ಡರನ್ನು ನಮ್ಮ ಸರ್ಕಾರ ಮಾಡಬೇಕಾಗಿದ್ದರೆ, ಈ ಸಮಾಜಕ್ಕೆ ಅನುಕೂಲವಾಗುವಂತೆ ಆ ಆರ್ಡರು ಕಾರ್ಯಗತವಾಗುತ್ತದೆಯೇ ಎನ್ನುವುದನ್ನು ನೋಡದೆ ಆರ್ಡರ್ ಮಾಡುವುದರಿಂದ ಎಷ್ಟೋ ತೊಂದರೆಗಳು ಆಗಿವೆ. ಇವತ್ತು ನಮ್ಮ ರಾಜ್ಯದ ಚೀಫ್ ಸೆಕ್ರೆಟರಿಯವರು ಲೋಕಲ್ ಕ್ಯಾಂಡಿಡೇಟುಗಳನ್ನು ತೆಗೆದುಕೊಳ್ಳುವ ಸಂಬಂಧದಲ್ಲಿ ಒಂದು ಆರ್ಡರನ್ನು ಹೊರಡಿಸಿದ್ದಾರೆ. ಆದರೆ ಇಲ್ಲಿಯವರೆಗೂ ಯಾವುದೂ ಕಾರ್ಯಗತವಾಗಿಲ್ಲ ಎಂದು ಹೇಳಬಹುದು. ಇಷ್ಟೇ ಅಲ್ಲ, ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಬೇರೆ ಬೇರೆ ಜನರನ್ನು ತೆಗೆದುಕೊಂಡಿದ್ದರೂ ಸಹಿತ ಅದರಲ್ಲಿ ಶೇಕಡಾವಾರು ಪ್ರಮಾಣವನ್ನು ಇಟ್ಟುಕೊಳ್ಳದೆ, ಹರಿಜನರನ್ನು ತೆಗೆದುಕೊಳ್ಳದೆ ಬೇರೆ ಜನರನ್ನೇ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ಹರಿಜನ ಗಿರಿಜನರಿಗೆ ಬಹಳ ಅನ್ಯಾಯವಾಗಿದೆ ಎಂದು ಹೇಳಬೇಕಾಗುತ್ತದೆ. ಸರ್ವಿಸ್‌ನಲ್ಲಿ ಪ್ರಮೋಷನ್ ಕೊಡುವಾಗಲೂ ಕೂಡ ದೇಶದಲ್ಲಿರತಕ್ಕ ಐದನೇ ಒಂದು ಭಾಗದಷ್ಟು ಜನರಿರುವ ನಮಗೆ ನೂರಕ್ಕೆ 18 ಭಾಗ ಸ್ಥಾನಗಳನ್ನು ಇಟ್ಟುಕೊಂಡು ಬರಬೇಕು ಎನ್ನುವ ಮಾತನ್ನು ಪದೇ ಪದೇ ಹೇಳುತ್ತ ಇದ್ದರೂ ಸಹಿತ, ನಮ್ಮ ಸರ್ಕಾರ ಅದಕ್ಕೆ ಗಮನ ಕೊಟ್ಟಿಲ್ಲ. 11-11-1963 ರಲ್ಲಿ ಕೇಂದ್ರ ಸರ್ಕಾರದ ಗೃಹ ಸಚಿವ ಖಾತೆಯಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಒಂದು ಪತ್ರವನ್ನು ಕಳಿಸಿದ್ದಾರೆ. ಅದರಲ್ಲಿ ಏನು ಹೇಳುತ್ತಾರೆಂದರೆ :

The policy in regard to reservation for S.C. and S.T. has to be filled up by promotion has since been reviewed and decision has been taken. ಇನ್ನು ರಿಜರ್‌ವೇಷನ್ ವಿಷಯವಾಗಿ ಹೇಳಿದರೆ :

> "Promotions against such reserved vacancies will continue to be there subject to the candidates' satisfying the prescribed minimum standards."

SRI SIDDIAH KASIMATH (Shirahatti).—Sir, the Hon'ble Member it reading the order. Where did he get that order from ?

ಶ್ರೀ ಜೆ. ಎಲ್. ಕಟಾಡಿ.—ಇದು ಗೆಜೆಟ್ ನೋಟಿಫಿಕೇಷನ್ ಪಬ್ಲಿಕೇಷನ್ ಆಗಿದ್ದರಲ್ಲದೆ. ಅದುವರೆಗೂ ಇದು ಎಲ್ಲಿತ್ತು, ಏನಾಯಿತು ಎಂಬುದು ಗೊತ್ತಾಗಲಿಲ್ಲ. ಇದರ ಬಗ್ಗೆ ಕಾನ್‌ಫಿಡೆನ್ಸ್ ರಿಪೋರ್ಟ್ ಏನೂ ಇಲ್ಲ. ಎಷ್ಟೋ ಸಾರಿ ಇಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಮುಖ್ಯ ಮಂತ್ರಿಗಳು ಅದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಏನು ಮಾಡಬೇಕು, ಏನು ಕ್ರಮವನ್ನು ತೆಗೆದುಕೊಳ್ಳಬೇಕು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅದರ ಬಗ್ಗೆ ಯಾವ ಸಂಶಯವೂ ಇಲ್ಲ. ಈಗ ಟೆಂಪೂರರಿಯಾಗಿ ತೆಗೆದುಕೊಂಡಿರುವವರ ಬಗ್ಗೆ ಅದರಲ್ಲೂ ಸರ್ವಿಸ್‌ದಾರರ ವಿಚಾರವಾಗಿ ಪಂಜಾಬ್ ಸರ್ಕಾರದವರು ಈ ರೀತಿ ಒಂದು ಮಾತನ್ನು ಹೇಳಿದ್ದಾರೆ. ಅಲ್ಲಿನ ಕಮಿಟಿ ವರದಿಯಲ್ಲಿ ಈ ರೀತಿಯಾಗಿ ಹೇಳಿದ್ದಾರೆ. ಅದನ್ನು ಓದುತ್ತೇನೆ :

> "The Heads of Departments and other competent officers concerned are permitted to appoint candidates from other communities in these temporary reserved vacancies which are

(ಶ್ರೀ ಜೆ. ಎಲ್. ಕಬಾಡಿ)

to last for a short period. They could be filled up without reference to the recruiting agency. The reserved post carrying less than Rs. 50 can be filled up."

ಈ ರೀತಿಯಾಗಿ ಪಂಜಾಬ್ ಸರಕಾರದವರೂ ಸಹ ಇಷ್ಟು ವೇಕೆನ್ಸೀಸ್ ಇರುತ್ತವೆ. ಅಲ್ಲಿ ಕೆಲಸಗಾರರನ್ನು ಟೆಂಪೊರರಿಯಾಗಿ ತೆಗೆದುಕೊಂಡು ಅವರನ್ನು ಕಂಟಿನ್ಯೂ ಮಾಡಬೇಕೇ ಅಥವಾ ತೆಗೆಯಬೇಕೆಂಬ ಬಗ್ಗೆ ಒಂದು ಆರ್ಡರನ್ನು ಹೊರಡಿಸಿದ್ದಾರೆ. ಆ ರೀತಿಯಾಗಿ ಇಲ್ಲಿಯೂ ಇರುವುದು ಸೂಕ್ತ. ನಮ್ಮ ಸರ್ಕಾರದವರಿಗೆ ನನ್ನ ಒಂದು ಸಲಹೆ ಏನೆಂದರೆ, ಪಂಜಾಬ್ ಸರ್ಕಾರದವರು ಯಾವ ರೀತಿಯಾಗಿ ಒಂದು ಆರ್ಡರನ್ನು ಹೊರಡಿಸಿದ್ದಾರೋ ಅದೇ ರೀತಿಯಾಗಿ ಇವರೂ ಹೊರಡಿಸ ಬೇಕೆಂದು ನಾನು ಹೇಳುತ್ತೇನೆ. ಮದ್ರಾಸ್ ಸರ್ಕಾರದವರೂ ಸಹ ಒಂದು ರಿಕ್ರೂಟ್‌ಮೆಂಟ್ ಮಾಡುವ ಕಾಲದಲ್ಲಿ ಏನು ರಿಜರ್ವ್‌ನಲ್ಲಿ ಇಟ್ಟಿರುತ್ತಾರೋ ಅವನ್ನು ಪ್ರಮೋಷನ್ ಕಾಲದಲ್ಲೂ ಅನುಸರಿಸಬೇಕು ಎಂಬುದಾಗಿ ಹೇಳುತ್ತಾರೆ. ಮದ್ರಾಸ್ ಸರ್ಕಾರದಲ್ಲಿಯೂ ಯಾವ ರೀತಿ ಮಾಡಿದ್ದಾರೆನ್ನುವುದನ್ನು ಅವರ ಸರ್ವಿಸ್ ರೂಲ್ಸಿನಲ್ಲಿ ಹೇಳಿದ್ದಾರೆ. ಅದು ಈ ರೀತಿ ಇದೆ :—

"Under Madras State and Subordinate Service Rules and under special rules certain concessions in respect of educational qualifications have been given to candidates belonging to Scheduled Castes and Scheduled Tribes both for initial recruitment as well as for promotions. The members of these communities are exempted from payment of application fees and examination fees prescribed for recruitment to various serviccs within and outside the purview of the Public Service Commission."

ಹೀಗೆ ಫೀಸ್ ಸಹಿತ ಮಾಫಿ ಮಾಡಿದ್ದಾರೆ. ಹೀಗೆ ಎಷ್ಟೋ ಸೌಲಭ್ಯಗಳನ್ನು ಬೇರೆ ಬೇರೆ ರಾಜ್ಯಗಳವರು ಕೊಟ್ಟಿರುವಾಗ ನಮ್ಮಲ್ಲಿ ಇದುವರೆಗೆ ಕೊಟ್ಟಿಲ್ಲ. ಇನ್ನೊಂದು ವಿಷಯ. ಪಂಜಾಬಿನಲ್ಲಿ ಕೇವಲ ಹರಿಜನೋದ್ಧಾರಕ್ಕಾಗಿ ಹರಿಜನ ವೆಲ್‌ಫೇರ್ ಟ್ಯಾಕ್ಸ್ ಎಂಬುದಾಗಿ ಹಾಕಿ ಬೇರೆ ಜನರಿಂದ ವಸೂಲು ಮಾಡಿದ್ದನ್ನು ಅವರ ಹಿತರಕ್ಷಣೆಗಾಗಿ ಖರ್ಚು ಮಾಡುತ್ತಿದ್ದಾರೆ. ಮಾನ್ಯ ಸಚಿವರಿಗೆ ತಮ್ಮ ಮುಖಾಂತರ ಒಂದು ವಿಷಯವನ್ನು ಹೇಳುತ್ತೇನೆ. ಈ ರೀತಿಯಾಗಿ ಆ ಒಂದು ತೆರಿಗೆಯನ್ನು ಹಾಕಿದರೆ ಎಲ್ಲ ಸುವರ್ಣಿಯವರಿಗೂ ಒಂದು ತಿಳುವಳಿಕೆ ಬರುತ್ತದೆ. ಅಲ್ಲಿ ಹರಿಜನರ ಕಲ್ಯಾಣಕ್ಕಾಗಿ ಆ ರೀತಿ ಟ್ಯಾಕ್ಸ್ ಹಾಕುತ್ತಿದ್ದಾರೆಂದು ನಾನು ತಿಳಿಯುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಹರಿಜನರಿಗಾಗಿರತಕ್ಕ ಕೈಗಾರಿಕೆಗಳು ಏನಿವೆ ಅದರ ಅಭಿವೃದ್ಧಿ ಯಾವ ರೀತಿಯಲ್ಲೂ ಆಗಿಲ್ಲ. ಆ ರೀತಿಯಾಗಿ ಆಗುವುದಕ್ಕೆ ಇವರಲ್ಲಿ ಯಾವ ಯೋಜನೆಯೂ ಇಲ್ಲ. ಇದಕ್ಕಾಗಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿರುವುದು ಏನೆಂದರೆ ಲೆದರ್ ಇಂಡಸ್ಟ್ರಿಸ್ ಬೋರ್ಡ್ ಎಂಬುದಾಗಿ ಈ ರಾಜ್ಯದಲ್ಲಿ ಸ್ಥಾಪಿಸಿ ಅದರ ಬಗ್ಗೆ ಒಂದು ಯೋಜನೆಯನ್ನು ಕೂಡಲೇ ತಯಾರು ಮಾಡಬೇಕು. ಅದಕ್ಕಾಗಿ ಆಂಧ್ರದವರು ಮಾಡಿರುವ ಹಾಗೆ ಒಂದು ಡ್ರಾಫ್ಟ್ ಮಾಸ್ಟರ್ ಪ್ಲಾನನ್ನು ಮಾಡಿಸಿ ಅದರ ಬಗ್ಗೆ ಒಂದು ಸ್ಟ್ಯಾಟ್ಯೂಟ್ ಬೋರ್ಡನ್ನು ನಿರ್ಮಿಸಿ ಆ ಒಂದು ಇಂಡಸ್ಟ್ರೀಸಿಗೆ ಉತ್ತೇಜನ ಕೂಡ ಬೇಕಾಗಿದೆ. ಹರಿಜನೋದ್ಧಾರಕ್ಕಾಗಿ ಮಾಡಬೇಕಾದ ಕಾರ್ಯಕ್ರಮಗಳಲ್ಲಿ ಮಾನ್ಯ ಸದಸ್ಯರೆಲ್ಲರಿಗೂ ಆಶಯವಿರುತ್ತದೆ. ಮಹಾರಾಷ್ಟ್ರ ಸರ್ಕಾರವು ಮೈಸೂರು ರಾಜ್ಯದಲ್ಲ Industrial Agricultural Settlement ಅಂತಾ ಬಿಜಾಪುರದಲ್ಲಿದ್ದು ಅಲ್ಲಿ ಸೆಟ್ಲರ್ಸ್ ಯಾರೂ ಇಲ್ಲಾ. ಅಲ್ಲಿಂದ ಕೆಲವೊಂದು ಜನರನ್ನು ಮೈಸೂರು ದೇಶದ ಒಂದು ಇಂಡಸ್ಟ್ರಿಯಲ್ ಸೆಟಲ್‌ಮೆಂಟಿಗಾಗಿ ಜನರನ್ನು ಕಳಿಸುತ್ತಿದ್ದರು. ನಮ್ಮಲ್ಲಿ ಇಂಡಸ್ಟ್ರಿಯಲ್ ಸೆಟಲ್‌ಮೆಂಟಿನಲ್ಲಿ ಎಷ್ಟೋ ಜನರು ಬರುತ್ತಿರುವಾಗ ಹಿಂದೆ ಒಂದು ಅನುಕೂಲವಿತ್ತು. ಮಹಾರಾಷ್ಟ್ರ ಸರ್ಕಾರದವರು ಬೇರೆ ತಮ್ಮದೇ ಆದಂಥ ಒಂದು ಯೋಜನೆಯನ್ನು ಮಾಡಿಕೊಂಡರು. ನಮ್ಮಲ್ಲಿ ಇರತಕ್ಕ ಆ ಒಂದು ಸೆಟಲ್‌ಮೆಂಟ್ ಇವತ್ತು ಖಾಲಿ ಇದೆ. ಅದಕ್ಕಾಗಿ ಮುಂದೆ ಏನು ಕ್ರಮವನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಸರಿಯಾದ ಒಂದು ಎನಾಕ್ಟ್‌ಮೆಂಟ್ ಇದ್ದರೂ ಪೋಲೀಸ್ ಮತ್ತು ಇತರ ಇಲಾಖೆಗಳಲ್ಲಿ ಅದಕ್ಕೆ ತಕ್ಕಹಾಗೆ ಕೆಲಸ ಮಾಡತಕ್ಕ ತಿಳುವಳಿಕೆ ಇಲ್ಲ. ಆ ರೀತಿಯಲ್ಲಿ ಕೆಲಸ ಮಾಡುವುದರಿಂದ. ಅದಿನ್ನೂ ಖಾಲಿ ಇದೆ. ಆದರೆ Chief Inspector of Certified Schools ಇವರು ಈ ವಿಷಯದ ಬಗ್ಗೆ ಏನೂ ವಿಚಾರ ಮಾಡದೆ ಅದನ್ನು ಬೇರೆ ಯಾವುದಕ್ಕಾದರೂ ಕೊಟ್ಟು ಈ ಸೆಟಲ್‌ಮೆಂಟನ್ನು ಕ್ಲೋಜ್

ಮಾಡಬೇಕಾದ ವಿಚಾರ ಇದೆಯೆಂದು ನನಗನ್ನಿಸುತ್ತದೆ. ಆದರೆ ಆ ವಿಚಾರವನ್ನು ಹಾಗೆ ಮಾಡದೆ ಅದನ್ನು ಒಂದು ರೂಪದಲ್ಲಿ ತರುವಂತೆ ಮಾಡಬೇಕೆಂದು ಹೇಳಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ಸಮಾಜ ಕಲ್ಯಾಣ ಮತ್ತು ಇತರೇ ಬಾಬುಗಳ ಬೇಡಿಕೆಗಳ ಮೇಲೆ ನಾನು ಮಾತನಾಡತಕ್ಕ ಕಾಲದಲ್ಲಿ ಕೇವಲ ಒಂದು ಮುಖ್ಯವಾದ ವಿಚಾರವನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ. ಸಮಾಜ ಕಲ್ಯಾಣ ಮತ್ತು ಇತರ ಬಾಬುಗಳ ವಿಚಾರದಲ್ಲಿ ಮಾತನಾಡುತ್ತಾ ನಮ್ಮ ಸಮಾಜ ಎಷ್ಟರಮಟ್ಟಿಗೆ ಮುಂದುವರಿಯುತ್ತಿದೆ, ಈ ಸಮಾಜದಲ್ಲಿ ಎಷ್ಟರಮಟ್ಟಿಗೆ ಬಡ ಜನಗಳಿಗೆ ರಕ್ಷಣೆ ದೊರೆಯುತ್ತಿದೆ ಎನ್ನುವ ವಿಚಾರವನ್ನು ಮಿಸಿಲೇನಿಯಸ್ ಹೆಡ್ ಮೇಲೆ ಮಾತನಾಡುತ್ತಾ ಮಾನ್ಯ ಅಧ್ಯಕ್ಷರ ಮೂಲಕ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟದ್ದನ್ನು ಈ ಸಭೆಯ ಅವಗಾಹನೆಗೆ ತರುತ್ತಿದ್ದೇನೆ. ನನ್ನ ತಾಲ್ಲೂಕಿನಲ್ಲಿ ಒಂದು ವಿಷಾದಕರವಾದ ಘಟನೆ ಮೊನ್ನೆ ದಿವಸ ನಡೆದಿದೆ. ಹಿಂದೆ ಈ ಶಾಸನ ಸಭೆಯಲ್ಲಿಯೇ ಹೇಳಿದ್ದೇನೆ. ನನ್ನ ಕ್ಷೇತ್ರದಲ್ಲಿ ಒಬ್ಬ ಪೋಲೀಸ್ ಅಧಿಕಾರಿ ಎಷ್ಟರಮಟ್ಟಿಗೆ ಅಲ್ಲಿನ ಜನಗಳಿಗೆ ಕಿರುಕುಳ ಕೊಡುತ್ತಿದ್ದಾನೆ, ಎಷ್ಟರಮಟ್ಟಿಗೆ ಅವನಿಂದ ಲಂಚ ಸುಲಿಗೆಯಾಗುತ್ತದೆಂಬುದಾಗಿ. ಇಲ್ಲಿ ಪಾನ ನಿರೋಧ ಕಾನೂನನ್ನು ಜಾರಿ ಮಾಡುತ್ತೇವೆಂದು ಹೇಳತಕ್ಕ ಗೃಹ ಸಚಿವರು ಯಾವ ಯಾವಾಗ ಈ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂದಿದ್ದರೋ ಅದು ನನ್ನ ತಾಲ್ಲೂಕಿನಲ್ಲಿ ಲೀಲಾಜಾಲವಾಗಿ ನಡೆಯುತ್ತಿದೆ. ನಾನು ನನ್ನ ಕ್ಷೇತ್ರಕ್ಕೆ ಮೊನ್ನೆ ಹೋದಾಗ್ಗೆ ನನ್ನ ಜೊತೆಯಲ್ಲಿ ಕೆಲವು ಮಾನ್ಯ ಸದಸ್ಯರು ಬಂದಿದ್ದರು. ಶ್ರೀಮಾನ್ ವೀರೇಂದ್ರ ಪಾಟೀಲ್ ಅವರೂ ಸಹ ನನ್ನ ಜೊತೆಯಲ್ಲಿದ್ದರು. ಎಷ್ಟು ಈಚಲು ಮರಗಳಿಗೆ ಹೆಂಡದ ಗಡಿಗೆಗಳನ್ನು ಸಾಲು ಸಾಲಾಗಿ ಕಟ್ಟಿದ್ದಂಥ ದೃಶ್ಯವನ್ನು ಅವರು ಕಂಡಿದ್ದಾರೆ. ಅಲ್ಲಿಯ ಸ್ಥಳೀಯ ಪೋಲೀಸ್ ಅಧಿಕಾರಿ ಲಂಚ ಸ್ವೀಕಾರ ಮಾಡಿ ಅನೇಕ ಬಡ ಜನರಿಂದ ಬೇಕಾದಷ್ಟು ಲಂಚವನ್ನು ಸುಲಿಗೆ ಮಾಡಿ ಹೀನಾಯಾತ್ಮಕವಾದ ರೀತಿಯಲ್ಲಿ ವರ್ತಿಸಿ ಅನೇಕ ಕೇಸುಗಳನ್ನು ಬಡ ಜನರ ಮೇಲೆ ಹಾಕುವ ರೀತಿಯಲ್ಲಿ ಕಿರುಕುಳ ಕೊಡುತ್ತಿದ್ದಾನೆ. ಅಂತಹವರನ್ನು ಅಲ್ಲಿ ಇಡಬೇಡಿ, ಅಂತಹ ಪೋಲೀಸ್ ಅಧಿಕಾರಿ ಅಲ್ಲಿ ಬೇಡವೆಂದು ನಾನು ಹಿಂದೆಯೇ ಈ ಶಾಸನ ಸಭೆಯಲ್ಲಿಯೇ ಹೇಳಿದ್ದೆ. ನನ್ನ ಕ್ಷೇತ್ರದಲ್ಲಿ ಅವನು ಬಹಳ ಕಿರುಕುಳ ಕೊಡುತ್ತಿದ್ದಾನೆಂದು ಆಗಲೇ ಹೇಳಿದಾಗ ಆ ಪೋಲೀಸ್ ಅಧಿಕಾರಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗೃಹ ಮಂತ್ರಿಗಳು ಒಂದು ವರ್ಷದ ಕೆಳಗೆ ಬೇರೆ ಕಡೆಗೆ ವರ್ಗಾವಣೆ ಮಾಡಿದರು. ಆದರೆ ಅಲ್ಲಿನ ಸ್ಥಳೀಯ ರಾಜಕಾರಣಿಗಳು ಬಂದ ಮೇಲೆ ಅವರ ಒಂದು ಇಚ್ಛೆಯಂತೆ ಗೃಹ ಮಂತ್ರಿ ಮತ್ತು ಮುಖ್ಯ ಮಂತ್ರಿಗಳು ಸೇರಿಕೊಂಡು ಆ ಪೋಲೀಸ್ ಅಧಿಕಾರಿಯನ್ನು ಅದೇ ಸ್ಥಳದಲ್ಲಿ ನೇಮಕ ಮಾಡಿದರು. ಯಾವ ಒಬ್ಬ ಲಂಚಕೋರ ಅಧಿಕಾರಿಯೆಂದು ಹಿಂದೆ ಸರ್ಟಿಫೈಯಾಗಿತ್ತೋ ಪುನಃ ಅವನನ್ನೇ ತರುವಂತಾಗಿದೆ. ಈಗ ಅವನಿಂದಲೇ ನನ್ನ ತಾಲ್ಲೂಕಿನಲ್ಲಿ ಎಷ್ಟೋ ಲಂಚ ಸುರಿಮಳೆಯಾಯಿತು.

ಗೌರವಸ್ಥರು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಅವಕಾಶವಿಲ್ಲದಂತಾಗಿದೆ. ಅಲ್ಲಿಂದ ನೂರಾರು ಅರ್ಜಿಗಳನ್ನು ಕಳುಹಿಸಿದ್ದಾರೆ. ಮಾಜಿ ಶಾಸನಸಭಾ ಸದಸ್ಯರಾದ ಶ್ರೀಮಾನ್ ಎನ್.ಜಿ. ನರಸಿಂಹೇಗೌಡರ ಸಂಸಾರದ ಮೇಲೆ ಪೋಲೀಸಿನವರು 17 ಕೇಸುಗಳನ್ನು ಹಾಕಿದ್ದಾರೆ. ಒಂದು ಮನೆತನದವರ ಮೇಲೆ ಇಷ್ಟೊಂದು ಕೇಸುಗಳನ್ನು ಹಾಕಿದ್ದಾರೆ. ಈ ಸರ್ಕಾರದಲ್ಲಿ ಇಂಥಾ ಒಂದು ದುರಂತ ನಡೆದಿದೆ. ಆ ವಿಷಯದಲ್ಲಿ ಹಳೆಯ ಶಾಸನಸಭಾ ಸದಸ್ಯರಾದ ಶ್ರೀಮಾನ್ ನರಸಿಂಹೇಗೌಡರು ರಿಜಿಸ್ಟರ್ಡ್ ಪೋಸ್ಟಿನಲ್ಲಿ ಮುಖ್ಯಮಂತ್ರಿಗಳಿಗೊಂದು ಕಾಗದವನ್ನ ಬರೆದಿದ್ದಾರೆ ಅದರ ಕಾಪಿಯನ್ನ ಈ ಸಭೆಯ ಅಧ್ಯಕ್ಷರು, ಹೋಮ್ ಮಿನಿಸ್ಟರು ಮತ್ತು ಈ ಸಭೆಯ ಅನೇಕ ಮಾನ್ಯ ಸದಸ್ಯರಿಗೂ ಕಳುಹಿಸಿದ್ದಾರೆ. ಒಬ್ಬ ತರುಣ ವ್ಯಕ್ತಿ ಈ ಸರ್ಕಾರದ ಆಡಳಿತದಲ್ಲಿ ಗೌರವಸ್ಥನಾಗಿ ಬಾಳುವುದಕ್ಕೆ ಸಾಧ್ಯವಿಲ್ಲದೆ ಇಹಲೋಕವನ್ನು ಬಿಟ್ಟು ಪರಲೋಕಕ್ಕೆ ಹೋಗಿದ್ದಾನೆ. ಅವನು ವಿಷವನ್ನು ತೆಗೆದುಕೊಂಡು ಸತ್ತಿದ್ದಾನೆ. ಅವನು ಸಾಯುವಾಗ ಒಂದು ಪತ್ರವನ್ನು ಬರೆದಿಟ್ಟು ಹೋಗಿದ್ದಾನೆ. ಆ ತರುಣ ವ್ಯಕ್ತಿ ವಿಷವನ್ನು ಕುಡಿದು ಪ್ರಾಣವನ್ನು ಬಿಟ್ಟಿರುವುದು ಅತಿ ದಾರುಣವಾದ ವಿಷಯ. ಆ ವ್ಯಕ್ತಿ ಮಾಜಿ ಶಾಸನ ಸಭಾಸದಸ್ಯರಾದ ಶ್ರೀಮಾನ್ ನರಸಿಂಹೇಗೌಡರ ತಮ್ಮ ಆಗಿದ್ದಾರೆ. ಅವರ ಹೆಸರು ಎನ್. ಜಿ. ಚನ್ನಯ್ಯ ಎಂದು. ಸಮಾಜ ಕಲ್ಯಾಣ ಮಂತ್ರಿಗಳಿಗೆ ಆ ಮನೆತನದವರು ಚೆನ್ನಾಗಿ ಗೊತ್ತಿದೆ. ಅವರು ಬಹಳ ಗೌರವಸ್ಥ ಮನೆತನದವರು. ಅಂಥಾ ಮನೆತನದ ವ್ಯಕ್ತಿ ಕಾಗದವನ್ನು ಬರೆದಿಟ್ಟು ತನ್ನ ಪ್ರಾಣಾರ್ಪಣೆ ಮಾಡತಕ್ಕಂಥ ಅವಕಾಶ ಈ ಈ ಸರ್ಕಾರದ ಆಡಳಿತದಲ್ಲಿ ಬಂದಿದೆ. ನನ್ನ ಕ್ಷೇತ್ರದಲ್ಲಿ ಒಬ್ಬ ಅಧಿಕಾರಿಯಿಂದ ಜನಗಳಿಗೆ ಕಿರುಕುಳ ಬರುತ್ತದೆ ಎಂದು ಈ ಸಭೆಯಲ್ಲಿ ಕೆಲವು ಸಂದರ್ಭಗಳಲ್ಲಿ ನಾನು ಹೇಳಿದ್ದೇನೆ. ಅದಕ್ಕೆ

(ಶ್ರೀ ಎಸ್. ಶಿವಪ್ಪ)

ಈ ಶಾಸನ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ತಾನೆ ಹೇಳಿದರು ಅವರು ದಕ್ಷರಾದ ಅಧಿಕಾರಿಗಳು, ಮತ್ತು ಪ್ರಾಮಾಣಿಕ ಅಧಿಕಾರಿಗಳು ಅವರನ್ನು ಅಲ್ಲಿಂದ ಬೇರೆ ಕಡೆ ವರ್ಗಾವಣೆ ಮಾಡುವುದಿಲ್ಲ ಎಂದು. ಅಲ್ಲಿ ಆ ಅಧಿಕಾರಿಯು ತನ್ನ ದುರಾಚಾರವನ್ನು ನಡೆಸುತ್ತಿದ್ದಾರೆ. ಅವರು ಮಾಡತಕ್ಕಂಥ ದುರಾಚಾರ ಮತ್ತು ಕಿರುಕುಳಗಳಿಂದ ಅಲ್ಲಿ ಗೌರವಸ್ಥರಾಗಿ ಬಾಳುವುದಕ್ಕೆ ಸಾಧ್ಯ ವಿಲ್ಲದೆ ಒಬ್ಬ ವ್ಯಕ್ತಿ ಪಾಷಾಣವನ್ನು ತೆಗೆದುಕೊಂಡು ಇಹಲೋಕದಿಂದ ಪರಲೋಕಕ್ಕೆ ಹೋಗಿದ್ದಾನೆ. ಹೀಗಾದರೆ ಇವೊತ್ತಿನ ದಿವಸ ನನ್ನ ಕ್ಷೇತ್ರದಲ್ಲಿ ಜನ ಬಾಳಬೇಕೇ ಅಥವಾ ಸಾಯಬೇಕೇ ಎಂದು ನಾನು ಸರ್ಕಾರದವರನ್ನು ಕೇಳಬೇಕಾಗಿದೆ. ಆ ಒಬ್ಬ ಸಣ್ಣ ಅಧಿಕಾರಿಯನ್ನು ಬೇರೆ ಕಡೆ ವರ್ಗ ಮಾಡಿ ಎಂದು ನಾನು ಸರ್ಕಾರದವರಿಗೆ ಹಲವಾರು ಸಾರಿ ಹೇಳಿದೆ. ಆದರೂ ಸರ್ಕಾರದವರು ಆ ಅಧಿಕಾರಿಯನ್ನ ಬೇರೆ ಕಡೆ ವರ್ಗಾವಣೆ ಮಾಡಲಿಲ್ಲ. ಅದಕ್ಕೋಸ್ಕರ ಶಾಶ್ವತವಾದ ರಕ್ಷಣೆ ಯನ್ನು ಪಡೆಯುವುದಕ್ಕೋಸ್ಕರ ಒಬ್ಬ ಗೌರವಸ್ಥನಾದ ವ್ಯಕ್ತಿ ಪಾಷಾಣವನ್ನು ತೆಗೆದುಕೊಂಡು ಪ್ರಾಣಾರ್ಪಣೆ ಮಾಡಿದ್ದಾನೆ. ಇದು ಸಮಾಜಕ್ಕೆ ಒಳ್ಳೆಯದಾಗುತ್ತದೆಯೇ ! ಜನತೆಗೆ ಸರ್ಕಾರದ ರಕ್ಷಣೆ ಇದೆಯೇ? ನ್ಯಾಯ, ಧರ್ಮ, ಸತ್ಯದಿಂದ ಬಾಳತಕ್ಕವರಿಗೆ ಅವಕಾಶವನ್ನು ಕಲ್ಪನೆ ಮಾಡಿ ಕೊಡಿ. ಪಾಷಾಣವನ್ನು ತೆಗೆದುಕೊಂಡು ಪ್ರಾಣಾರ್ಪಣೆ ಮಾಡಿದಂತಹ ವ್ಯಕ್ತಿ ಅವನ ಪತ್ರದಲ್ಲಿ ಈ ರೀತಿ ಬರೆದಿದ್ದಾನೆ. ''ನನ್ನ ಪ್ರಾಣಾರ್ಪಣೆಗೆ ಈ ದೇಶದಲ್ಲಿ ಯಾರೂ ಕಾರಣರಲ್ಲ, ನನ್ನ ಪ್ರಾಣಾರ್ಪಣೆಗೆ ಪೋಲೀಸ್ ಅಧಿಕಾರಿ ಮತ್ತು ವಿಧಾನ ಸಭೆಯಲ್ಲಿ ಆ ಪೋಲೀಸ್ ಅಧಿಕಾರಿಯ ಬಗ್ಗೆ ಹೇಳಿಕೆಯನ್ನು ಕೊಟ್ಟ ಮುಖ್ಯ ಮಂತ್ರಿಗಳು ಕಾರಣರು ಎಂದು'' ಕಾರಣವನ್ನು ಕೊಟ್ಟಿದ್ದಾನೆ. ಈ ರೀತಿ ಪ್ರಾಣಾರ್ಪಣೆ ಮಾಡಿದಂತಹ ತರುಣ ವ್ಯಕ್ತಿ ತಾನು ಪ್ರಾಣ ಬಿಡುವುದಕ್ಕೆ ಮುಂಚೆ ಬರೆದಿರುವ ಈ ಪತ್ರದ ನಕಲನ್ನು ಮುಖ್ಯ ಮಂತ್ರಿಗಳಿಗೂ ಕಳುಹಿಸಿಕೊಟ್ಟಿದ. ಈ ಪಾಶವೀದೃಶ್ಯವನ್ನು ನೋಡಿದರೆ ಆ ಪೋಲೀಸ್ ಅಧಿಕಾರಿಯ ದುರಾಡಳಿತ ಮೀರಿ ಹೋಗುತ್ತಿದೆ. ಕೆಲವು ದಿವಸಗಳ ಹಿಂದೆ ಆ ಅಧಿಕಾರಿಯ ದಕ್ಷತೆ ಮತ್ತು ಪ್ರಾಮಾಣಿಕತೆಯ ವಿಷಯದಲ್ಲಿ ಈ ಶಾಸನ ಸಭೆಯಲ್ಲಿ ಮುಖ್ಯಮಂತ್ರಿಗಳು ಹೇಳಿದ ಮಾತನ್ನು ಕೇಳಿ ಇದರಿಂದ ಉನ್ಮತ್ತನಾದ ಅಧಿಕಾರಿ ತನ್ನ ದಬ್ಬಾಳಿಕೆಯನ್ನೂ ದುರಾಡಳಿತವನ್ನೂ ಮತ್ತಷ್ಟು ಹೆಚ್ಚಿಸಿದ್ದಾನೆ. ಲಂಚಕೋರ ಅಧಿಕಾರಿಗಳಹಾವಳಿಯಿಂದ ರಕ್ಷಣೆಯನ್ನ ದೊರಕಿಸಿಕೊಳ್ಳುವುದು ಬಹಳ ಕಷ್ಟವಾಗುತ್ತಿದೆ. ಈ ದಾರುಣವಾದ ವಿಚಾರವನ್ನು ಕೇಳಿ ನನಗೆ ಕಣ್ಣಿನಲ್ಲಿ ನೀರು ಸುರಿಯುತ್ತಿದೆ. ನನಗೆ ಊಟವನ್ನು ಮಾಡುವುದಕ್ಕೆ ಆಗಲಿಲ್ಲ. ನನ್ನ ಕ್ಷೇತ್ರದಲ್ಲಿ ಅನೇಕ ದಿನಗಳಿಂದ ನಡೆಯುತ್ತಿದ್ದ ದುರಾಡಳಿತದ ವಿಷಯವನ್ನು ನಾನು ಈ ಸಭೆಯಲ್ಲಿ ಎರಡು ಸಾರಿ ಹೇಳಿದ್ದೇನೆ. ಆ ವಿಷಯವನ್ನು ಸರ್ಕಾರ ಮನಗಂಡಿದೆ. ಅದಕ್ಕೆ ಮುಖ್ಯ ಸಾಕ್ಷಿ ಆ ತರುಣ ವ್ಯಕ್ತಿ ಪ್ರಾಣಾರ್ಪಣೆ ಮಾಡಿರುವುದೇ ಆಗಿದೆ. ಸರ್ಕಾರ ಕಣ್ಣುತೆರೆಯಲಿ. ಆ ದುರಂತದ ವಿಷಯವನ್ನ ಕೇಳಿದರೆ ನಮಗೆ ಬಹಳ ದುಃಖ ವಾಗುತ್ತದೆ. ಸಭಾಪತಿಯವರೇ, ಈ ಪ್ರಕರಣದ ಬಗ್ಗೆ ಸರ್ಕಾರ ಕೂಡಲೇ ನ್ಯಾಯಾಂಗ ವಿಚಾರಣೆ ಮಾಡಬೇಕು. ಅಷ್ಟೇ ಅಲ್ಲ ಇದಕ್ಕೆ ಮುಖ್ಯ ಕಾರಣಕರ್ತಯಾರು, ಯಾವ ಸನ್ನಿವೇಶದಲ್ಲಿ ಏನು ನಡೆದಿದೆ ಎನ್ನುವುದನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆ ಮಾಡಬೇಕು. ಈ ದೇಶದಲ್ಲಿ ಸುವ್ಯವಸ್ಥೆ ಗೋಸ್ಕರ, ಜನತೆಗೆ ರಕ್ಷಣೆಯನ್ನು ಕೊಡುವುದಕ್ಕೋಸ್ಕರ ಪೋಲೀಸು ಇದೆ. ಜನತೆಗೆ ಒಳ್ಳೆಯ ಆಡಳಿತವನ್ನ ಕೊಡುತ್ತೇವೆ ಎನ್ನುವಂತಹ ನಂಬಿಕೆಯನ್ನು ಈ ದೇಶದಲ್ಲಿ, ಸಮಾಜದಲ್ಲಿ ಸರ್ಕಾರ ಉಂಟು ಮಾಡದಿದ್ದರೆ ಖಂಡಿತವಾಗಿಯೂ ನಾನು ಹೇಳುತ್ತೇನೆ ಈ ದೇಶದಲ್ಲಿ ಗೌರವಸ್ಥರು ಬಾಳು ವುದಕ್ಕೆ ಅವಕಾಶವಿಲ್ಲ. ಸತ್ಯವಂತರು ಬಾಳುವುದಕ್ಕೆ ಕಷ್ಟವಾಗುತ್ತಿದೆ. ಪೋಲೀಸಿನವರ ದೌರ್ಜನ್ಯ ಜಾಸ್ತಿಯಾಗುತ್ತಿದೆ. ರಾಜ್ಯ ಪೋಲೀಸ್ ರಾಜ್ಯವಾಗುತ್ತಿದೆ. ಪ್ರಜಾಪ್ರಭುತ್ವದಲ್ಲಿ ನಮ್ಮ ರಾಜ್ಯವು ಒಂದು ಪೋಲೀಸ್ ರಾಜ್ಯ ಎಂದು ಘೋಷಣೆ ಮಾಡಿಬಿಡಿ. ಪ್ರಜಾಪ್ರಭುತ್ವದ ಬೆಳಕಿನಲ್ಲಿ ಪ್ರಜಾ ಪ್ರಭುತ್ವದ ಸೋಗಿನಲ್ಲಿ ಯಾವ ಗುಲಾಮಗಿರಿಯೂ ಇರಬಾರದು. ಪ್ರಜಾಪ್ರಭುತ್ವದೇಶ ಎಂದು ಹೇಳುವ ಈ ದೇಶದಲ್ಲಿ ಗೌರವಸ್ಥ ಮನೆತನ ಒಂದರ ಮೇಲೆ ಪೋಲೀಸಿನವರು 18 ಕೇಸುಗಳನ್ನು ಹಾಕಿದ್ದಾರೆ. ಗೌರವಸ್ಥರನ್ನು ಪೋಲೀಸಿನವರು ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಅವರನ್ನ ಹೆದರಿಸಿ ಬೆದರಿಸಿ ಅವರಿಂದ ಲಂಚವನ್ನ ತೆಗೆದುಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ, ಪೋಲೀಸಿ ನವರು ಬೀದಿ ಬೀದಿಯಲ್ಲೆಲ್ಲಾ ಲಂಚವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದಕ್ಕೆ ಲಂಗು ಲಗಾಮು ಏನೂ ಇಲ್ಲದಂತಾಗಿದೆ. ಈ ದೇಶದಲ್ಲಿ ಲಂಚಕೋರ ಅಧಿಕಾರಿಗಳು ಜಾಸ್ತಿಯಾಗಿ ಗೂಂಡಾಗಿರಿ ಯನ್ನ ನಡೆಸುತ್ತಿದ್ದಾರೆ. ಇಂಥ ಗೂಂಡಾಗಿರಿ ದೌರ್ಜನ್ಯ ಕೃತ್ಯಗಳು ಈ ದೇಶದಲ್ಲಿ ನಡೆದರೆ ಈ ದೇಶ ಏಳಿಗೆಯಾಗುತ್ತದೆಯೇ ? ಸಭಾಪತಿಯವರೇ, ತಮ್ಮ ಮುಖಾಂತರ ನಾನು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಮುಖ್ಯ ಮಂತ್ರಿಗಳು ಪೋಲೀಸ್ ಅಧಿಕಾರಿಗಳಿಗೆ ಇಷ್ಟೊಂದು ಅಧಿಕಾರವನ್ನ

ಕೊಡತಕ್ಕದ್ದು ಸರಿಯಲ್ಲ. ಈಗ ನಡೆದಿರತಕ್ಕ ಪ್ರಕರಣ ಏನಿದೆ ಈ ವಿಚಾರದಲ್ಲಿ ಶ್ರೇಷ್ಠ ದರ್ಜೆಯ ನ್ಯಾಯಾಂಗ ವಿಚಾರಣೆಯಾಗಬೇಕು. ಈ ದೇಶದಲ್ಲಿ ಒಂದು ವ್ಯವಸ್ಥಿತವಾದ ಆಡಳಿತವನ್ನು ಸ್ಥಾಪನೆ ಮಾಡಬೇಕು. ಈ ವಿಚಾರದಲ್ಲಿ ಕೂಡಲೇ ಒಂದು ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ತಾವು ಮುಖ್ಯ ಮಂತ್ರಿಗಳಿಗೆ ಹೇಳಬೇಕು. ನನ್ನ ಕ್ಷೇತ್ರದಲ್ಲಿ ವಿರೋಧ ಪಕ್ಷದವರನ್ನು ಮಟ್ಟ ಹಾಕಬೇಕೆಂಬ ಉದ್ದೇಶ ಏನಾದರೂ ಇವರು ಈ ರೀತಿ ಮಾಡಿಸುತ್ತಿದ್ದಾರೋ ಏನೋ ಗೊತ್ತಾಗುವುದಿಲ್ಲ. ಪ್ರಜಾಪ್ರಭುತ್ವಕ್ಕಾಗಿ ನಾವು ಪ್ರಾಣಾರ್ಪಣೆ ಮಾಡುವುದಕ್ಕೆ ಸಿದ್ಧರಾಗಿದ್ದೇವೆ. ನಮಗೆ ಬೇಕಾಗಿರತಕ್ಕದ್ದು ಪ್ರಜಾಪ್ರಭುತ್ವದಲ್ಲಿ ಸತ್ಯ, ನ್ಯಾಯ, ಧರ್ಮ ಇವುಗಳ ರಕ್ಷಣೆಯಾಗತಕ್ಕದ್ದು. ನಾವು ಪ್ರಜಾಪ್ರಭುತ್ವದಲ್ಲಿ ಯಾವ ತ್ಯಾಗವನ್ನು ಬೇಕಾದರೂ ಮಾಡುವುದಕ್ಕೆ ಸಿದ್ಧರಾಗಿದ್ದೇವೆ. ಈ ದೇಶದಲ್ಲಿ ಗೌರವಸ್ಥರಾದ ಜನರು ನೆಮ್ಮದಿಯಿಂದ ಜೀವನಮಾಡತಕ್ಕ ಅವಕಾಶಗಳನ್ನು ಕಲ್ಪಿಸತಕ್ಕ ಒಂದು ಭರವಸೆಯನ್ನು ಇವೊತ್ತಿನ ದಿವಸ ತಮ್ಮಿಂದ ಮತ್ತು ಸರ್ಕಾರದಿಂದ ನಾನು ಅಪೇಕ್ಷೆ ಮಾಡುತ್ತೇನೆ. ಈ ಪ್ರಕರಣದಲ್ಲಿ ಕೂಡಲೇ ನ್ಯಾಯಾಂಗ ವಿಚಾರಣೆಯನ್ನು ಮಾಡಬೇಕೆಂದು ನಾನು ವಿನಯದಿಂದ ಬೇಡಿಕೊಳ್ಳುತ್ತೇನೆ.

Mr. DEPUTY SPEAKER.—Sri Munichinnappa may speak for 5 minutes.

Sri C. J. MUCKANNAPPA.—Sir, the Leader of the Opposition has just brought to your notice a case of suicide. It was under special circumstances that he was permitted to make a statement.

Mr. DEPUTY SPEAKER.—Since it was a serious matter, I allowed him though strictly it does not come under the Demand under the rules.

Sri C. J. MUCKANNAPPA.—I want to place before you......

Mr. DEPUTY SPEAKER.—The member may do it later on.

Sri C. J. MUCKANNAPPA.—I want to know the reaction of the Government because the Leader of the Opposition has made a statement and he has demanded a judicial enquiry. It is through you that he has demanded this judicial enquiry.

Mr. DEPUTY SPEAKER.—He has made the statement and the Government's reaction to it will be known in due course.

Sri C. J. MUCKANNAPPA.—A person has sacrifeed his life by taking poison because of the harassment meted out to him by a Police Sub-Inspector. This has happened on account of the statement made by the Chief Minister of Mysore the other day. Because of that statement this officer gained momentum and he began to harass him in all ways. As a result of that this person has taken poison and put an end to his own life. Now it is the sacred duty of the Speaker to call upon the Government to state what action they are going to take against such an officer who is committing atrocities and harassing the people. So in this matter I am seeking the protection of the Chair to compel the Government to make a statement on this serious matter.

ಶ್ರೀ ಸಿದ್ದಯ್ಯ ಕಾಶೀಮಠ್.—ಸ್ವಾಮಿ, ಶ್ರೀಮಾನ್ ಎಸ್. ಶಿವಪ್ಪನವರು ಹೇಳಿದ ವಿಚಾರ ಬಹಳ ತೀಕ್ಷ್ಣವಾದ ಸಂಗತಿಯಾಗಿರುವುದರಿಂದ The Government should take immediate action in this matter. I also support the plea of the Hon'ble Member because this is a serious matter- The person has written a letter to the Chief Minister and all the members of his family. That is why through you we want the Government to take action immediately against this officer.

†ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ಸೌತ್).—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದೆ ಮಂಡಿಸಿರತಕ್ಕ ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳ ವಿಚಾರವಾಗಿ ಈಗಾಗಲೇ ಈ ಸಭೆಯ ಮಾನ್ಯ ಸದಸ್ಯರು ಅನೇಕರು ಒಳ್ಳೆಯ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಮಾತ್ರ ಈ ಸಭೆಯ ಮುಂದಿಡಲು ನಾನು ಇಷ್ಟ ಪಡುತ್ತೇನೆ. ಸ್ವಾಮಿ, ಈ ದೇಶದಲ್ಲಿ ಈಗ ಹಿಂದುಳಿದಿರತಕ್ಕ ಜನಾಂಗದವರಿಗೆ ಸರ್ಕಾರದವರು ಕೊಡುತ್ತಿರುವ ಗ್ರಾಂಟು ಬಹಳ ಅಲ್ಪ ಎಂದು ನಾನು ಭಾವಿಸುತ್ತೇನೆ. ಈ ವಿಚಾರದಲ್ಲಿ ನಮ್ಮ ಮಾನ್ಯ ಮಂತ್ರಿಗಳು ಪರಿಶೀಲಿಸಿ ಸೂಕ್ತ ಸಹಾಯಮಾಡಬೇಕೆಂಬುದು ನನ್ನ ವಿನಂತಿ.

5-00 P. M.

ಮತ್ತೆ ಈಗ ದೇಶದಲ್ಲಿ ಹೌಸಿಂಗ್ ಬೋರ್ಡ್ ಮತ್ತು ಹೌಸಿಂಗ್ ಕಾರ್ಪೊರೇಷನ್ನಿನವರು ಈ ರಾಜ್ಯದಲ್ಲಿ ಅನೇಕ ಕಡೆ ಸಾವಿರಾರು ಮನೆಗಳನ್ನು ಕಟ್ಟುತ್ತಾ ಇದ್ದಾರೆ. ಆದರೆ ಹಿಂದುಳಿದ ಜನಾಂಗಕ್ಕೆ ಕೆಲವು ಕಡೆ ಒಂದು ಮನೆಯೂ ಕೂಡ ಸಿಕ್ಕ ಹಾಗೆ ಕಾಣುತ್ತಾ ಇಲ್ಲ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ತಾವು ಸರ್ಕಾರಕ್ಕೆ ತಿಳಿಸಿ, ಎಷ್ಟು ಮನೆ ಕಟ್ಟುತ್ತಾರೊ, ಅದರಲ್ಲಿ ಶೇಕಡ 10 ರಷ್ಟನ್ನಾದರೂ ಹಿಂದುಳಿದ ಜನಾಂಗಕ್ಕೆ ಕೊಡಬೇಕು. ಅವರಿಗೆ ಮನೆಗಳನ್ನು ಕೊಡದೆ ಬಹಳ ಅನ್ಯಾಯವಾಗಿದೆ ಎಂದು ನಾನು ತಮಗೆ ಈ ಸಮಯದಲ್ಲಿ ತಿಳಿಸಬೇಕಾಗಿದೆ.

ಮತ್ತೆ ಸ್ವಾಮಿ, ಈ ಜನಾಂಗಕ್ಕೆ ಜಮೀನು ಕೊಡಲು ಕೆಲವು ಕಡೆ ಜಮೀನು ಅಕ್ವೈರು ಮಾಡುವ ರಿಕಾರ್ಡ್ ನಡೆಯುತ್ತಾ ಇದೆ. 8-10 ವರ್ಷವಾದರೂ ರೆಕಾರ್ಡು ಪೂರ್ತಿಯಾಗಿ ಜಮೀನು ಬರುವುದಿಲ್ಲ. ಈ ಅಧಿಕಾರಿ ವರ್ಗ ಹೀಗೆ ಉದಾಸೀನ ಮಾಡುವುದಕ್ಕೆ ಕಾರಣವೇನು ಎಂದು ತಾವು ಬರೆಸಿಕೊಂಡು, ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿ ಕೊಳ್ಳುತ್ತೇನೆ.

ಈ ದೇಶದಲ್ಲಿ ಕೆಲವು ಕಡೆ ಈ ಜನಾಂಗಕ್ಕೆ ಕುಡಿಯುವುದಕ್ಕೆ ಸ್ವಚ್ಛವಾದ ನೀರಿನ ವ್ಯವಸ್ಥೆ ಇಲ್ಲ. ಕೆರೆಗಳೊಳಗೆ, ಕೊಳಗಳೊಳಗೆ ಇರುವ ಕೊಳೆ ನೀರನ್ನು ಕುಡಿಯುವ ಪರಿಸ್ಥಿತಿ ಇದೆ. ಸರ್ಕಾರದವರು ದಯೆಯಿಟ್ಟು ಅವರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಹಿಂದುಳಿದ ಜನಾಂಗದವರಲ್ಲಿ ಬಹಳ ಹಿಂದುಳಿದಿರತಕ್ಕಂಥ ಮೈನಾರಿಟಿ ಜನ ಇದ್ದಾರೆ. ಎಲ್ಲಿ ಒಂದು ಅಣೆಕಟ್ಟು ಕಟ್ಟಲಿ, ಒಂದು ಕೆರೆ ಕಟ್ಟಲಿ, ಇವರು ಅಲ್ಲಿಗೆ ಜೀವನಕ್ಕೆ ಹೋಗಿ ಎರಡು ಚಾಪೆ, ನಾಲ್ಕು ಗಳುಹಾಕಿಕೊಂಡು, ಗುಡಿಸಿಲಿನಲ್ಲಿ ವಾಸ ಮಾಡುತ್ತಾ ಇದ್ದಾರೆ. ಯಾವ ಯಾವ ದೊಡ್ಡ ದೊಡ್ಡ ಡ್ಯಾಮುಗಳ ಕೆಲಸ ನಡೆಯಲಿ, ಅವರು ಅಲ್ಲಿರುತ್ತಾರೆ. ಆದರೆ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಕೂಡ ಸಿಗುವುದಿಲ್ಲ. ಈ ವಿಚಾರವನ್ನು ಮನಸ್ಸಿಗೆ ತೆಗೆದುಕೊಂಡು ಇಂಥ ಬಡ ಜನಾಂಗದ ಮಕ್ಕಳಿಗೆ ಶಾಲೆಗಳನ್ನು ಏರ್ಪಡಿಸಿ ಸ್ವಲ್ಪ ವಿದ್ಯಾ ಸೌಕರ್ಯವನ್ನು ಕೊಟ್ಟರೆ ಒಳ್ಳೆಯದೆಂದು ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗ ದೇಶದಲ್ಲಿ ಹೌಸಿಂಗ್ ಬೋರ್ಡ್ ಸ್ಕೀಮ್ ಇದೆ. ಅದರಲ್ಲಿ ಹರಿಜನರು ಗಿರಿಜನರಿಗೆ ಮನೆಗಳನ್ನು ಕಟ್ಟಬೇಕೆಂಬ ಒಂದು ಯೋಜನೆಯನ್ನು ತಂದಿದ್ದಾರೆ. ಆದರೆ ಎಲ್ಲ ಕಡೆಯೂ ಮನೆ ಕಟ್ಟುತ್ತಾ ಇಲ್ಲ, ಕೆಲವು ಕಡೆ ಸ್ವಲ್ಪ ಕಟ್ಟುತ್ತಾ ಇದ್ದಾರೆ. ಆ ಮನೆಗಳನ್ನು ಕಟ್ಟಲು ಕೊಟ್ಟ ಹಣವೂ ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಅದು ಯಾರೋ ಕೆಲವು ಜನರಿಗೆ ಸಿಗುತ್ತದೆ, ಬಡವರಿಗೆ ವಿಲೇವಾರಿಯಾಗದೆ ಇವರಿಗೆ ಉಪಯೋಗವಾಗಿಲ್ಲ. ಅದಕ್ಕೋಸ್ಕರ ಸಂಬಂಧಪಟ್ಟ ಮಂತ್ರಿಗಳು ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಂಡು, ಶೆಡ್ಯೂಲ್ಡ್ ಕ್ಯಾಸ್ಟಿನಲ್ಲಿರುವ ಮೈನಾರಿಟಿ ಕಮ್ಯೂನಿಟಿಯವರಿಗೆ ಮನೆ ಸಿಗುವ ಹಾಗೆ ಮಾಡಬೇಕು. ಅವರಿಗೆ ಒಂದು ಮನೆ ಕೂಡ ಕಟ್ಟಿಲ್ಲ. ಏಕೆ ಕಟ್ಟಿಲ್ಲವೆಂದು ರಿಕಾರ್ಡು ತರಿಸಿ ನೋಡಬೇಕು. ಅವರಿಗಾಗಿ ಇಟ್ಟ ಹಣ ಕೂಡ ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಅವರಿಗೆ ಇನ್ನೂ ಹೆಚ್ಚಿನ ಹಣ ಒದಗಿಸಿ, ಬಹಳ ಹಿಂದುಳಿದ ಜನಾಂಗಕ್ಕೆ ಸಹಾಯ ಮಾಡಬೇಕೆಂದು ತಮ್ಮಲ್ಲಿ ಬಹಳ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಬೈರಸಂದ್ರ ಅಂತ ಒಂದು ಗ್ರಾಮವಿದೆ. ಆ ಗ್ರಾಮದ ಒಂದು ಜಮೀನಿನ ಬಗ್ಗೆ ಒಬ್ಬ ಮನುಷ್ಯ ಹೈಕೋರ್ಟಿಗೆ ಹೋಗುವುದರಲ್ಲಿದ್ದ. ನಾನು ಆತನಿಗೆ ಹೇಳಿ ಜಮೀನನ್ನು ಟ್ರಸ್ಟ್ ಬೋರ್ಡಿಗೆ ಕೊಡಿಸಿಕೊಟ್ಟೆ, ಹಿಂದುಳಿದ ಜನಾಂಗದವರಿಗೆ ಕಾಲೋನಿ ಮಾಡಿ ಅನುಕೂಲ ಮಾಡಿಕೊಡಲಿ ಎಂದು. ಟ್ರಸ್ಟ್ ಬೋರ್ಡಿನವರು ಅಲ್ಲಿ ಒಂದು ಲೇ-ಔಟ್ ಮಾಡಿದರು, ಈ ಜನಾಂಗದವರಿಗೆ ಅದರಲ್ಲಿ ಅನುಕೂಲಮಾಡಿಕೊಡುತ್ತೇವೆಂದು ಹೇಳಿಬಿಟ್ಟರು. ಒಂದೊಂದು ಮನೆಗೂ 400 ರೂಪಾಯಿ ಗ್ರಾಂಟ್ ಸಿಕ್ಕಿತು. ಅವರು ಕೆಲವು ಮನೆಗಳನ್ನು ಕಟ್ಟಿದರು, ಅವನ್ನು ಎಷ್ಟರ ಮಟ್ಟಿಗೆ

ಕಟ್ಟಿದ್ದಾರೆಂದರೆ ಅವು ಇವತ್ತು ಬೀಳುವ ಪರಿಸ್ಥಿತಿಯಲ್ಲಿವೆ. ಸರ್ಕಾರ ಕೊಟ್ಟ 400 ರೂಪಾಯಿಯನ್ನೂ ಟ್ರಸ್ಟ್ ಬೋರ್ಡಿನವರು ಲ್ಯಾಪ್ಸ್ ಮಾಡಿದ್ದಾರೆ, ಟ್ರಸ್ಟ್ ಮಾಡಿದ ತಪ್ಪಿಗೆ ಬಡವರನ್ನು ಕಾರಣ ಮಾಡಿದ್ದಾರೆ, ಆ ದುಡ್ಡು ಪಂಚವಾರ್ಷಿಕ ಯೋಜನೆಯಲ್ಲಿ, ಮನೆ ತೆಗೆದುಕೊಂಡವರೆ ಆ ದುಡ್ಡು ಕೊಡಬೇಕೆಂದು ಹೇಳಿ ಬಹಳ ಅನ್ಯಾಯ ಮಾಡಿದರು. ಬಡವರಿಗೆ ರಿಯಾಯಿತಿ ತೋರಿಸುವುದು ಬಿಟ್ಟು ಕಂಟ್ರಾಕ್ಟರಿಗೆ 20 ಪರ್ಸೆಂಟ್ ಜಾಸ್ತಿ ಕೊಟ್ಟಿದ್ದಾರೆ. ಆ ಮನೆಯ ಖರೀದಿ 3 ಸಾವಿರ ಚಿಲ್ಲರೆ ಎಂದು ನಿಗದಿ ಮಾಡಿದ್ದಾರೆ, ಆ ಮನೆ ಒಂದು ಸಾವಿರ ರೂಪಾಯಿ ಬಾಳುವುದಿಲ್ಲ. ಮನೆ ಕಟ್ಟುವುದಕ್ಕೆ ಜಮೀನು ಫ್ರೀಯಾಗಿ ಕೊಡಿಸಿ, ಪಾಪ ಬಡವರಿಂದ 3-4 ಸಾವಿರ ರೂಪಾಯಿ ಸರ್ಕಾರ ತೆಗೆದುಕೊಳ್ಳುವುದು ಸರಿಯಲ್ಲವೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ದುಬಾರಿ ಖರ್ಚಿಂದಿದ್ದರೆ ಅವರೇ ಸ್ವಂತವಾಗಿ ಕಟ್ಟಿಕೊಳ್ಳಬಹುದಾಗಿತ್ತು. ಅದೂ ಅಲ್ಲದೆ, ಇವತ್ತಿನವರೆಗೂ ಹೌಸಿಂಗ್ ಸ್ಕೀಮಿನಿಂದ ಬಹಳ ಜನಕ್ಕೆ ಸಹಾಯ ದೊರಕಿಲ್ಲ. ಈ ವಿಚಾರದಲ್ಲಿ ಒಂದು ಪ್ರಶ್ನೆಯನ್ನೂ ಕಳುಹಿಸಿದ್ದೇನೆ, ಏಕೆಂದರೆ ಸರ್ಕಾರದ ಗಮನವನ್ನು ಸೆಳೆದು ಬಡ ಜನತೆಗೆ ಸಹಾಯವಾಗಬೇಕೆಂದು.

ಈ ಸ್ಕಾಲರ್ ಶಿಪ್ ವಿಚಾರ ಹೇಳುವುದಾದರೆ, ಅದನ್ನು ಕೊಡುವುದು ದೊಡ್ಡ ಜನತೆಗೆ, ಬಡವರಿಗೆ ಸಿಗುವುದಿಲ್ಲ. ಬಡವರಿಗೆ ಸೀಟು ಕೊಡುವುದೂ ಬಹಳ ಕಡಿಮೆ. ಬೇಕಾದರೆ ಸ್ಟ್ಯಾಟಿಸ್ಟಿಕ್ಸ್ ತರಿಸಿಕೊಂಡು ನೋಡಬಹುದು. ಮಾನ್ಯಮಂತ್ರಿಗಳು ದಯೆಯಿಟ್ಟು ಈ ವಿಚಾರದಲ್ಲಿ ಬಡಜನತೆಗೆ ಸಹಾಯ ಮಾಡಬೇಕೆಂದು ಅರಿಕೆ ಮಾಡುತ್ತೇನೆ.

ಇನ್ನು ಹಾಸ್ಟೆಲ್ಲುಗಳ ವಿಚಾರ ಸ್ವಲ್ಪ ಹೇಳಬೇಕಾಗಿದೆ. ಹಿಂದುಳಿದ ಜನಾಂಗದಲ್ಲಿ ಕೆಲವು ಮೈನಾರಿಟಿ ಕಮ್ಯೂನಿಟಿಯವರಿಗೆ ಒಂದು ಹಾಸ್ಟಲು ಕೂಡ ಇಲ್ಲ, ಒಂದು ಬಿಲ್ಡಿಂಗೂ ಇಲ್ಲ. ಏನು ಅವರು ಈ ದೇಶದಲ್ಲಿ ಹುಟ್ಟಲಿಲ್ಲವೆ ? ಅವರು ದೇಶಕ್ಕೆ ದುಡಿಯುವುದಿಲ್ಲವೆ ? ಪ್ರತಿಯೊಂದು ಅಣೆಕಟ್ಟಿನಲ್ಲಿ, ಸುರಂಗ ಜಾಗಗಳಲ್ಲಿ ಮುನ್ನುಗ್ಗಿ ಕೆಲಸ ಮಾಡುತ್ತಾರೆ. ಅಂಥ ಜನತೆಗೆ ಒಂದು ಹಾಸ್ಟಲ್ ಕೂಡ ಇಲ್ಲ. ಈಗ ಚಿತ್ರದುರ್ಗದಲ್ಲಿ ಒಂದು ಹಾಸ್ಟಲ್ ಮತ್ತು ಮೈಸೂರಿನಲ್ಲಿ ಒಂದು ಹಾಸ್ಟಲ್ ಮಾಡಿ ಅವರಿಗೆ, ಎಂದು ಸರ್ಕಾರದಲ್ಲಿ ಅರಿಕೆಮಾಡಿಕೊಂಡಿದ್ದಾರೆ. ಸರ್ಕಾರದವರು ಈ ವಿಚಾರದಲ್ಲಿ ದಯೆಯಿಟ್ಟು ಸಹಾಯ ಮಾಡಬೇಕೆಂದು ಪ್ರಾರ್ಥಿಸಿ ನನ್ನ ಈ ಎರಡು ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The Minister will begin his reply.

Sri C. J. MUCKANNAPPA.—Sir, this being a very important Demand, we request that some more members might be permitted to speak. We have no objection to sit for some more time.

Mr. DEPUTY SPEAKER.—Both sides should agree.

Sri C. J. MUCKANNAPPA.—Sir, this Demand touches about 27 lakhs of people. There is a committee which meets only twice in a year. We request you to be a little lenient and allow some of us to participate.

ಶ್ರೀಮತಿ ಯಶೋಧರ ದಾಸಪ್ಪ (ಸಮಾಜ ಕಲ್ಯಾಣ ಶಾಖೆಯ ಮಂತ್ರಿಗಳು).—ಜಾಸ್ತಿ ಹೊತ್ತು ಕೂತುಕೊಳ್ಳುವುದಕ್ಕೆ ಇಷ್ಟಪಡುವುದಾದರೆ, ನನ್ನದು ಅಭ್ಯಂತರವಿಲ್ಲ. ಅವರು ಹೇಳುವ ವಿಚಾರಗಳಿದ್ದರೆ, ಅವರಿಗೆ ತಾವು ಸಮಯ ಕೊಡಿರಿ, ಕೇಳೋಣ. ನಾನು 7 ಗಂಟೆಯವರೆಗೂ ಇರುವುದಕ್ಕೆ ತಯಾರಿದ್ದೇನೆ. ಅವರು ಹೇಳುವುದೆಲ್ಲಾ ಹೇಳಲಿ.

Mr. DEPUTY SPEAKER.—We will sit for half an hour more.

ಶ್ರೀ ಎಂ. ಎನ್. ಕೃಷ್ಣ ಸಿಂಗ್ (ಜಗಳೂರು).—ಸ್ವಾಮಿ, 1965-66ನೇ ಸಾಲಿಗೆ ಸಂಬಂಧಪಟ್ಟಂತೆ ಮಂಡಿಸಿರುವ ಈ ಬೇಡಿಕೆಗಳನ್ನು ಅನುಮೋದಿಸುತ್ತಾ ನಾನು ಒಂದೆರಡು ಮಾತುಗಳನ್ನು ಸರಕಾರಕ್ಕೆ ಸಲಹೆ ಮಾಡಬೇಕೆಂದು ಬಯಸುತ್ತೇನೆ.

ಈ ಸಮಾಜ ಕಲ್ಯಾಣ ಇಲಾಖೆಗೆ ಸಚಿವರಾಗಿರತಕ್ಕ ಶ್ರೀಮತಿ ಯಶೋಧರಾ ದಾಸಪ್ಪನವರು ಸಹ ಬಹಳ ಸ್ಫೂರ್ತಿಯುತವಾಗಿ ಶ್ರಮಿಸುತ್ತಿರುವುದರಿಂದಾಗಿ ನಿಮ್ಮ ವರ್ಗದವರಲ್ಲಿ ಯಶಸ್ವಿಯಾಗಿ ವಿದ್ಯಾಭ್ಯಾಸಮಾಡಿದವರಿಗಾಗಿ ಐ.ಎ.ಎಸ್. ಹಾಗೂ ಐ.ಪಿ.ಎಸ್. ಶಿಕ್ಷಣಕ್ಕೆ ಒಂದು ಕಾಲೇಜನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡಿ ಅದಕ್ಕಾಗಿ ಒಂದು ಹಾಸ್ಟಲನ್ನು ತೆರೆದಿರುತ್ತಾರೆ. ಇದಕ್ಕಾಗಿ ನಿಮ್ಮ ವರ್ಗದವರ ಪರವಾಗಿ ಹೃತ್ಪೂರ್ವಕವಾಗಿ ವಂದನೆಗಳನ್ನು ಸಲ್ಲಿಸುತ್ತ ಒಂದೆರಡು ಮಾತುಗಳನ್ನು ಅನಿವಾರ್ಯವಾಗಿ ಇಲ್ಲಿ ಹೇಳಬೇಕಾಗಿದೆ.

(ಶ್ರೀ ಎಂ. ಎನ್. ಕೃಷ್ಣಸಿಂಗ್)

ವಿದ್ಯಾಭ್ಯಾಸದ ಇಲಾಖೆ ಬಹಳ ಮುಖ್ಯವಾದ ಇಲಾಖೆ. ಜನಗಳಿಗೆ ವಿದ್ಯಾಭ್ಯಾಸಕೊಟ್ಟು ಅವರನ್ನು ವಿದ್ಯಾವಂತರನ್ನಾಗಿ ಮಾಡಿ ಅವರು ತಮ್ಮ ಕಾಲಿನಮೇಲೆ ನಿಂತುಕೊಳ್ಳುವ ಶಕ್ತಿ ಬಂದು ತಮ್ಮ ಮನೆಮಠಗಳನ್ನು ಮಾಡಿಕೊಳ್ಳುವ ಶಕ್ತಿ ಬರುವಂತಹ ಯಾವ ಒಂದು ಅವಕಾಶಗಳೂ ಇಲ್ಲ. ನನ್ನ ಸಲಹೆ ಇಷ್ಟು. ಪ್ರಾಥಮಿಕ, ಮಾಧ್ಯಮಿಕ ವಿದ್ಯಾಭ್ಯಾಸ ಬಹಳ ಮುಖ್ಯವಾದುದು. ಇದು ಮೊದಲನೇ ಮೆಟ್ಟಲು ಇದನ್ನು ಸರಕಾರವೇ ವಹಿಸಿಕೊಂಡು, ದೀನದಲಿತರಾಗಿರುವವರಿಗೆ ಹೊಟ್ಟೆಬಟ್ಟೆಗಳನ್ನು ಕೊಟ್ಟು ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಈ ಸಲಹೆಗಳನ್ನು ತಮ್ಮ ಮೂಲಕ ಸರಕಾರಕ್ಕೆ ನೀಡುತ್ತೇನೆ. ಇಷ್ಟು ಮಾತ್ರವಲ್ಲದೇ ವಿದ್ಯಾಭ್ಯಾಸದ ಬಗ್ಗೆ ಈ ಸಲಹೆಗಳನ್ನು ಕೊಡುತ್ತೇನೆ. ಸ್ಕಾಲರುಷಿಪ್ಪನ್ನು ಜನರಲ್ ರೆವಿನ್ಯೂದಿಂದ ಕೊಡಿ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಒಂದು ವ್ಯವಸ್ಥೆ ಕಲ್ಪಿಸಿ ಕೊಡಿ ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ.

ಎರಡನೇದು, ವ್ಯವಸಾಯ ಬಹಳ ಮುಖ್ಯವಾದುದು. ಈ ಜನಕ್ಕೆ ಜಮೀನು ಇಲ್ಲದೆ ಇರುವುದರಿಂದಾಗಿ ಊರಿಂದೂರಿಗೆ ವಲಸೆ ಹೋಗುತ್ತಿದ್ದಾರೆ ಎನ್ನುವುದು ಸರಕಾರದ ಗಮನಕ್ಕೂ ಬಂದಿದೆ ಮತ್ತು ಮಾನ್ಯ ಸದಸ್ಯರಿಗೂ ತಿಳಿದೇ ಇದೆ. ನಮ್ಮ ಮಲೆನಾಡು ಭಾಗದಲ್ಲಿ ಎಲ್ಲಿನೋಡಿದರೂ ಅಲ್ಲಲ್ಲಿ ಹರಿಜನ ಗಿರಿಜನರೇ ಹೆಚ್ಚಾಗಿರುತ್ತಾರೆ. ಇವರಿಗೆ ಯಾವ ಜಮೀನೂ ಇಲ್ಲದೇ ಇರುವುದರಿಂದ ಯಾವ ನಾಲೇ ಅಥವಾ ಕೆರೆ ಕಟ್ಟುವ ಕೆಲಸದಲ್ಲೇ ಆಗಲೀ ಇವರು ಕೂಲಿ ಕೆಲಸ ಮಾಡುತ್ತಿರುತ್ತಾರೆ. ಇವರು ಜೀವನ ನಡೆಸಿಕೊಂಡು ಬದುಕುವುದೇ ಬಹು ಕಷ್ಟ. ಇಂತಹ ಪರಿಸ್ಥಿತಿಯಲ್ಲಿರುವ ಈ ಜನಾಂಗಕ್ಕೆ ಜಮೀನನ್ನು ಹೆಚ್ಚು ಹೆಚ್ಚಾಗಿ ಒದಗಿಸಿಕೊಡಲು ಪ್ರತ್ಯೇಕವಾದ ಒಂದು ಇಲಾಖೆಯನ್ನೇ ನೇಮಿಸಿ ಇವರಿಗೆಲ್ಲ ಜಮೀನನ್ನು ಒದಗಿಸಿಕೊಡುವ ಸೌಲಭ್ಯವನ್ನು ಕೊಡಿಸಿಕೊಡಬೇಕೆಂದು ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜಮೀನಿನಲ್ಲಿ ವ್ಯವಸಾಯ ಮಾಡುವಾಗ ಇದಕ್ಕೆ ಬೇಕಾದ ಪಂಪುಸೆಟ್ಟುಗಳಿಗಾಗಿ, ಆಯಿಲ್ ಎಂಜಿನ್ನುಗಳಿಗಾಗಿ ಯಾರು ಅರ್ಜಿಗಳನ್ನು ಕೊಟ್ಟಿರುತ್ತಾರೋ ಅವರಿಗೆಲ್ಲ ಸರಕಾರದವರೇ ಹೆಚ್ಚಿಗೆ ಖರ್ಚು ಇಲ್ಲದಂತೆ ಜಾಗ್ರತೆಯಾಗಿ ಒದಗಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟೇ ಅಲ್ಲ ಹಾಸ್ಟಲುಗಳ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಶ್ರೀಮಾನ್ ಸುಬ್ಬಯ್ಯ ನಾಯಕರು ಹೇಳಿದ ಹಾಗೆ, ಜಾತೀಯ ಹಾಸ್ಟಲ್ಲುಗಳು ಬೇಡ. ಎಲ್ಲ ವರ್ಗದವರಿಗೂ ಸೇರಿದಂತೆ ಒಂದೇ ತರದ ಹಾಸ್ಟಲುಗಳಿರಬೇಕು. ನಾನು ಇದಕ್ಕಿಂತ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದು, ನಿಮ್ನವರ್ಗದವರಿಗಾಗಿಯೇ ಹಾಸ್ಟಲುಗಳನ್ನು ತೆರೆಯುವುದನ್ನು ಬಿಟ್ಟು ಜನರಲ್ ಹಾಸ್ಟಲ್ ಎಂದು ಕರೆದು ನಿಮ್ನವರ್ಗದವರ ಮಕ್ಕಳೂ ಬೆರೆತು ಬಾಳುವ ಒಂದು ಅವಕಾಶ, ಅಂತಹ ಒಂದು ವಾತಾವರಣ ದೊರೆಯುವಂತೆ ಮಾಡುವುದೊಳ್ಳೆಯದು. ಹಾಸ್ಟಲ್ಲುಗಳ ಬಗ್ಗೆ ಒಂದು ಉದಾಹರಣೆ ಹೇಳಬೇಕಾಗಿದೆ. ಹಾಸ್ಟಲುಗಳನ್ನು ಮೈನಾರಿಟಿ ಕಮ್ಯುನಿಟಿಗಾಗಿ ಮಾಡುವಾಗ ಬಿಲ್ಡಿಂಗಿನ ಕೊರತೆ ಬಹಳವಾಗಿದೆ. ಬಹಳ ವರ್ಷಗಳಿಂದಲೂ ಚಿತ್ರದುರ್ಗಕ್ಕೆ ಒಂದು ದಾವಣಗೆರೆಗೆ ಒಂದು ಈ ಎರಡು ಹಾಸ್ಟಲ್ಲುಗಳಿಗೆ ಕಟ್ಟಡಗಳನ್ನು ಕೇಳುತ್ತಿದ್ದೇವೆ. ಆದರೆ ಈಚೆಗೆ ನಮ್ಮ ಸಮಾಜಕಲ್ಯಾಣ ಶಾಖೆಯ ಸಚಿವರು ಒಪ್ಪಿಕೊಂಡ ಹಾಗೆ ಕಾಣುತ್ತೆ. ಬಹುಶಃ ಇವೆರಡು ಹಾಸ್ಟಲ್ಲು ಕಟ್ಟಡಗಳ ಕೊರತೆ ನೀಗುವ ಸ್ಥಿತಿಯಲ್ಲಿದೆ ಮತ್ತು ಈ ವರ್ಷವೇ ಮುಗಿಸಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇವೆ.

ಈ ಜನಾಂಗದವರು ಕೊಡುವ ಸಲಹೆಗಳನ್ನು ಚರ್ಚೆಮಾಡಿ ತಮ್ಮ ತಮ್ಮ ಸಲಹೆಗಳನ್ನು, ಕಷ್ಟಗಳನ್ನು ಪರಿಹರಿಸಿಕೊಳ್ಳಲು ಹರಿಜನ ಹಾಗೂ ಗಿರಿಜನರ ಸ್ಟೇಟು ಅಡ್ವೈಸರಿ ಬೋರ್ಡು ಎಂದು ಮಾಡಿದ್ದಾರೆ. ಇದನ್ನು ವರ್ಷಕ್ಕೆ ನಾಲ್ಕು ಸಾರಿಯಾದರೂ ಸೇರಿಸಿ ತಮ್ಮ ಕಷ್ಟಗಳನ್ನು ನಿವಾರಣೆ ಮಾಡಿಕೊಳ್ಳಲು ಸರಕಾರಿ ಏರ್ಪಾಡು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ, ಸಬ್ ಕಮಿಟಿಗಳನ್ನು ಮಾಡಿದ್ದಾರೆ. ಎಜುಕೇಷನ್ನು ಸಬ್ ಕಮಿಟಿ, ಅಗ್ರಿಕಲ್ಚರಲ್ ಕಮಿಟಿ, ಹೆಲ್ತ್ ಕಮಿಟಿ ಎಂದು ಹಿಂದೆ ಇದ್ದಂತೆ ಜಾರಿಗೆ ತರಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ, ಒಂದು ಸಣ್ಣಸಲಹೆ ಕೊಡುತ್ತೇನೆ. ಕೆಲವುಕಡೆಗಳಲ್ಲಿ ಹಿಂದುಳಿದ ಈ ಜನಾಂಗಕ್ಕೆ ಸೇರಿದ ಕೆಲವರು 100-120 ವರ್ಷಗಳ ಮುದುಕರಾಗಿರುತ್ತಾರೆ. ಅವರ ಮೈಮೇಲೆ ಯಾವ ತರಹದ ಬಟ್ಟೆಗಳೂ ಇಲ್ಲದೆ ಹೊಟ್ಟೆಗೆ ಹಿಟ್ಟಿಲ್ಲದೆ ಬೀದಿಯ ಭಿಕಾರಿಗಳಾಗಿ ಅಲೆಯುತ್ತಿರುವುದನ್ನು ದಿನವೂ ನೋಡುತ್ತಿದ್ದೇವೆ. ಇವರ ಸ್ಥಿತಿ ನೋಡಿದರೆ ಖಂಡಿತ ತುಂಬಾ ವಿಷಾದ

ವಾಗುತ್ತದೆ. ಸರಕಾರ ದೊಡ್ಡ ಮನಸ್ಸುಮಾಡಿ ಇಂತಹವರು ಎಷ್ಟು ಎಷ್ಟು ಜನರಿದ್ದಾರೆ ಎನ್ನುವುದನ್ನು ಸರ್ವೆಮಾಡಿಸಿ, ಅವರಿಗೆಲ್ಲ ತಕ್ಕ ಅನುಕೂಲಗಳನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮಲ್ಲಿ ಕಾಲೋನಿಗಳನ್ನು ಮಾಡಬೇಕೆಂದು ಲಕ್ಷಾಂತರ ರೂಪಾಯಿಗಳಷ್ಟು ಖರ್ಚು ಮಾಡು ತ್ತಿರುತ್ತಾರೆ. ಆದರೆ ಈ ಕಾಲೋನಿಗಳು ಸರಿಯಾದ ವ್ಯವಸ್ಥೆಯಲ್ಲಿಲ್ಲ. ಕಾಲೋನಿಗಳು ಸರಿಯಾದ ವ್ಯವಸ್ಥೆ ಮಾಡಿ ಪ್ರತಿಯೊಬ್ಬರಿಗೂ ಜಮೀನು, ಒಂದು ಮನೆ, ಕುಡಿಯುವ ನೀರಿನ ಬಾವಿ, ಧಾರ್ಮಿಕ ಕೆಲಸಗಳಿಗನುಕೂಲವಾಗುವಂತೆ ಒಂದು ಕಮ್ಯೂನಿಟಿ ಸೆಂಟರು ಇವುಗಳನ್ನೆಲ್ಲಾ ಮಾಡಿ, ಆ ಪ್ರಾಯಮಾನವಾಗಿ ಇಲ್ಲಿ ಕಾಲ ಕಳೆಯುವ ಹಾಗೆ ಒಂದು ಏರ್ಪಾಡನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಇಲ್ಲಿ ಮಹಿಳಾ ಕೇಂದ್ರಗಳನ್ನು ಮಾಡಿ ಅಲ್ಲಿ ಹೊಲಿಗೆ ಶಿಕ್ಷಣವನ್ನು ಮತ್ತಿತ್ತರ ಸೌಕರ್ಯಗಳನ್ನು ಹೆಚ್ಚು ಹೆಚ್ಚು ಮಕ್ಕಳಿಗೆ ಉತ್ತೇಜನ ಸಿಗುವಂತೆ ಕಲ್ಪಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

I. T. C. ಟ್ರೇಡಿಂಗ್‌ಗಾಗಿ ಎಂದು ಪಾಲಿಟೆಕ್ನಿಕ್ ಇನ್ಸ್‌ಟಿಟ್ಯೂಟ್‌ಗಳಿವೆ. ದಾವಣಗೆರೆ ಯಲ್ಲಿ ಇಂತಹ ಒಂದು ಇನ್ಸ್‌ಟಿಟೂಟು ಇದೆ. ಇದಕ್ಕಾಗಿ ಒಂದು ಹಾಸ್ಟಲನ್ನೂ ಮಾಡಿದ್ದಾರೆ. ಹಾಸ್ಟಲುಗಳಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳಿಗಾಗಿ ಕೊಟ್ಟಿರುವ ಕಟ್ಟಡ ನಾಲಾಯಕ್ಕಾಗಿದೆ. ಮೂರು ವರ್ಷಗಳಿಂದಲೂ ಇದಕ್ಕೆ ಸರಿಯಾದ ಕಟ್ಟಡ ಕೊಡಬೇಕೆಂದು ಸರಕಾರಕ್ಕೆ ಹೇಳಿದರೂ ಅವರ ಮನಸ್ಸಿಗೆ ಬಾರದೇ ಹೋಯಿತು. ಅದೇನು ದುರಾದೃಷ್ಟವೋ ತಿಳಿಯಲಿಲ್ಲ. ಈಗ ಲಾದರೂ ಈ ಕಟ್ಟಡವನ್ನು ಬದಲಾಯಿಸಿ ಬೇರೆ ಕಟ್ಟಡದಲ್ಲಿ ಇಲ್ಲಿನ ಮಕ್ಕಳ ವಿದ್ಯಾಭ್ಯಾಸ ಪಡೆ ಯಲು ಸರಕಾರ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳು ತ್ತೇನೆ. ಇಷ್ಟನ್ನು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ದೇವ್.—ಸ್ವಾಮಿ, ಈ ದಿವಸ ಸಮಾಜ ಖಾತೆಯ ಮಂತ್ರಿಗಳು ಬಹಳ ಆಸಕ್ತಿಯಿಂದ ಕೆಲಸ ಮಾಡತಕ್ಕಂಹವರಾಗಿದ್ದಾರೆ. ಅವರು ಈ ಇಲಾಖೆಗೆ ಮಿನಿಸ್ಟರಾಗುವುದಕ್ಕೆ ಮೊದಲನ ದಿನಗಳಲ್ಲಿಯೂ ಕೂಡ ಅವರು ಮಾಡುತ್ತಿದ್ದ ಕೆಲಸಗಳಿಂದ ಚೆನ್ನಾಗಿ ಗೊತ್ತಾಗುತ್ತದೆ, ನಮ್ಮ ಜಿಲ್ಲೆಯ ಜನ ಕೂಡ ಹೇಳುತ್ತಾರೆ, ಹಾಲು ಸಕ್ಕರೆಯನ್ನುಂಡಂತೆ ಇರುವ ಮಂತ್ರಿಗಳು ಇವರು ಅಷ್ಟು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅವರು ರಾಷ್ಟ್ರದ ಮಟ್ಟದಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರ ವೈಯುಕ್ತಿಕವಾದ ಜೀವನದಲ್ಲೂ ಉತ್ತಮ ಕಾರ್ಯಮಾಡಿದ್ದಾರೆ. ಬಹಳ ಹತ್ತಿರದಲ್ಲಿ ನೋಡಿದ್ದೇನೆ. ಸರಕಾರಕ್ಕೆ ಇವರಿಂದ ಇನ್ನೂ ಬಹಳ ಕೆಲಸವಾಗಬೇಕೆಂದು ಇದ್ದರೂ ಈಗ ಏನಾಗಿದೆ ಎಂದರೆ. ಮಂತ್ರಿಗಳಾಗಿ ಅದೇ ಶಾಖೆಯಲ್ಲಿದ್ದರೂ ಅವರಿಗೆ ಶಾಸನದ ನಿರ್ಬಂಧ ಇದೆ. ಇದರಿಂದ ಯಾವ ಮಟ್ಟದಲ್ಲಿ ಇಲ್ಲಿ ಕೆಲಸ ಮಾಡಬೇಕೋ ಅವರಮನಸ್ಸಿನಲ್ಲಿ ಎಷ್ಟು ಕೆಲಸ ಮಾಡಬೇಕೆಂದಿತ್ತೋ ಅಷ್ಟು ಮಾಡಲು ಬರುವುದಿಲ್ಲವೇನೋ ಎನ್ನುವ ಅನುಮಾನ ಅವರಿಗೆ ಬಂದಿದೆ ಎಂದು ನನಗನಿಸುತ್ತದೆ. ಈ ದೃಷ್ಟಿಯಿಂದ ಇಲ್ಲಿ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ.

ನಮ್ಮಲ್ಲಿ ಹಿಂದೆ Dr. Ambedkar's pact ಎಂದಿತ್ತು, ಅದರಂತೆ ಈ ಹಿಂದುಳಿದ ಜನಾಂಗಕ್ಕೆ ಶೇಕಡಾ 30ರಷ್ಟು ಸ್ಥಾನಗಳನ್ನು ಮೀಸಲಾಗಿರಿಸಬೇಕಿತ್ತು. ಆದರೆ ಆಗಿನ ಗೊಂದಲಗಳಿಂದಾಗಿ ಹಿಂದುಳಿದ ಪಂಗಡಕ್ಕಾಗಿ ಇದನ್ನು ರೂಪಿಸಲಿಲ್ಲ. ಮಂತ್ರಿಗಳಲ್ಲಿ ಕೂಡ ಆಗಿನವರಿಗೂ ಈಗಿನವರಿಗೂ ಹೆಚ್ಚು ವ್ಯತ್ಯಾಸ ಇಲ್ಲ ಹೀಗಿದ್ದರೂ ಇದಕ್ಕೆಲ್ಲಾ ಕಾರಣವೇನು ಎನ್ನುವುದನ್ನು ನಾವು ಬಹಳ ಯೋಚಿಸಬೇಕಾಗಿದೆ. ಒಂದು ನಿರ್ದಿಷ್ಟ ಕೆಲಸ ಮಾಡುತ್ತಾ ಇಲ್ಲ. ಇಂಥ ಕೆಲಸ ಮಾಡಬೇಕಾದರೆ ಕ್ರಾಂತಿ ಪುರುಷ ಆಗಬೇಕಾಗುತ್ತದೆ. ಸಾವಿರಾರು ವರ್ಷ ಗುಲಾಮಗಿರಿಯಲ್ಲಿ ಇದ್ದು ಜನತೆಯ ಶಕ್ತಿ ಹೋಗಿದೆ. ಸ್ವಾತಂತ್ರ್ಯ ಬಂದು 18 ವರ್ಷವಾದರೂ ಕೂಡ ಜನರನ್ನು ಹೊಡೆದು ಎಬ್ಬಿಸುತ್ತಿದ್ದೀರಿ. 500 ಎಕರೆ ಜಮೀನು ಕೊಟ್ಟಿದ್ದರೂ ಕೂಡ ಯಾರೂ ಉಳುಮೆ ಮಾಡುತ್ತಿಲ್ಲ. ಮುಖ್ಯವಾಗಿ ಹಿಂದುಳಿದವರ ಏಳಿಗೆಯಾಗಬೇಕು ಎಂಬ ಉದ್ದೇಶ ಇದೆ. ಇದನ್ನು ಚೆನ್ನಾಗಿ ವಿಚಾರ ಮಾಡುತ್ತೀರಾ ? ಜಮೀನು ಕೊಡುತ್ತೀರಿ. ದುಡ್ಡು ಕೊಡುತ್ತೀರಿ ಆದರೆ ಸರಿಯಾಗಿ ಏಳಿಗೆ ಯಾಗುತ್ತಿಲ್ಲ. ಸರಿಯಾದ ರೀತಿಯಲ್ಲಿ ಏಳಿಗೆಯಾಗಬೇಕಾದರೆ ಜಮೀನು ಪರಭಾರೆ ಮಾಡದ ಹಾಗೆ ಕ್ರಮ ತೆಗೆದುಕೊಂಡು ತಾನೇ ಉಳುಮೆ ಮಾಡುವುದಕ್ಕೆ ಅವಕಾಶ ಮಾಡಬೇಕು. ಜೀವನ ಹಸನು ಮಾಡುವುದಕ್ಕೆ ಅವಕಾಶವಾಗುವ ಹಾಗೆ ವ್ಯವಸ್ಥೆ ಮಾಡಬೇಕು. ಇದಕ್ಕೆ ದಾರಿ ಮಾಡಿಕೊಡಬೇಕು. ಹಣ ಖರ್ಚು ಆಗುತ್ತಾ ಇದೆ. ಆದರೆ ಅದು ಸದ್ವಿನಿಯೋಗವಾಗುತ್ತಿಲ್ಲ. ಹಾಸ್ಟೆಲ್ ಮಾಡುವುದು ಊಟ ಹಾಕುವುದು, ಓದಿಸುವುದಕ್ಕೆ ಸ್ಕಾಲರ್‌ಷಿಪ್ ಕೊಡುವುದು ಅಷ್ಟೇ ಆಗಿದೆ. ಹಿಂದಕ್ಕೆ ಗಾಂಧಿ ಅಂಬೇಡಕರ್ ಪ್ಯಾಕ್ಟ್ ಆಯಿತು. ಅದು ಸರಿಯಾಗಿ ಕಾರ್ಯಗತವಾಗಿದೆಯೇ ? ಈ ವಿಷಯವನ್ನು ಮಾನ್ಯ ಸದಸ್ಯರಾದ ಶಿವಪ್ಪನವರು ಚೆನ್ನಾಗಿ ಹೇಳಿದರು. ಅನುಸೂಚಿತ ವರ್ಗಕ್ಕೆ ಏಟು ಬೀಳುತ್ತಾ ಇದೆ. ಈ ಏಟು ಎಲ್ಲರಿಗೂ ಬೀಳುತ್ತಾ ಇದೆ. ಇದರಿಂದ ಒಳ್ಳೆಯದಾಗುವುದಿಲ್ಲ.

(ಶ್ರೀ ಎ. ಎಂ. ದೇವ್)

ಪಕ್ಷದಲ್ಲಿ ಬಡಿದಾಡಿದರೆ ಪಕ್ಷ ಒಡೆದು ಹೋಗುತ್ತದೆ. ವೈಯಕ್ತಿಕ ಲಾಭಕ್ಕಾಗಿ ಆಶೆ ಪಡುತ್ತಾರೆ. ರಾಜ್ಯ ಸರಕಾರದಲ್ಲಿ ಸ್ಥಾನ ಸಿಕ್ಕಲಿಲ್ಲ, ಕೇಂದ್ರ ಸರಕಾರದಲ್ಲಿ ಸ್ಥಾನ ಸಿಕ್ಕಲಿಲ್ಲ ಎಂದು ಬಡದಾಡಿದರೆ ಫೈನಲ್ ಕ್ರೈಸಿಸ್ ಬರುತ್ತದೆ. ಇದರ ಪರಿಣಾಮ ಏನಾಗುತ್ತದೆ ಎಂದರೆ, ನೀವು ಭಾಷಣ ಮಾಡು ವುದಕ್ಕೂ ಪೇಪರ್‌ಗಳಲ್ಲಿ ಓದುವುದಕ್ಕೂ ಒಂದಕ್ಕೊಂದು ಅರ್ಥವಿಲ್ಲ, ಯಾವ ತಾಳೆ ಇಲ್ಲ. ಆದುದರಿಂದ ಜನಜೀವನ ಗರ್ಭದಲ್ಲಿ ಕ್ರಾಂತಿ ಶಿಶು ಹುಟ್ಟುತ್ತದೆ. ದೇಶದಲ್ಲಿ ರಕ್ತಪಾತವಾಗುತ್ತದೆ. ಅಹಿಂಸಾ ಕ್ರಾಂತಿಗೆ ಒಂದು ಚಾನ್ಸ್ ಇದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಯಾವ ಡಿಮ್ಯಾಂಡ್ ಮೇಲೆ ಮಾತನಾಡುತ್ತಿರುವುದು ?

ಶ್ರೀ ಎಂ. ಎ. ದೇವ್.—ಸ್ವಾಮಿ, ಒಂದು ಮಹತ್ವದ ವಿಷಯ ಹೇಳಬೇಕಾಗಿದೆ ಎಂದು ಇದನ್ನು ಹೇಳುತ್ತಿದ್ದೇನೆ. ಗುಲಾಮಗಿರಿಯಿಂದ ಆರ್ಥಿಕ ಹಿನ್ನೆಲೆಗೆ ಕಳಂಕ ಬಂದಿದೆ. ಈ ಪರಿಸ್ಥಿತಿ ನಾಯಿ ನರಿ ಪಾಡು ಆಗಿದೆ. ವಿದ್ಯಾಭ್ಯಾಸ ಕೊಟ್ಟರೂ ಕೂಡ ಯೋಚನಾ ಶಕ್ತಿ ಕಡಮೆಯಾಗಿದೆ. ಇಂಥವರ ಏಳಿಗೆಯಾಗಬೇಕಾದರೆ ಯಾವ ರೀತಿ ಹೋರಾಡಬೇಕು. ಇಂಥ ಪರಿಸ್ಥಿತಿಯು ವಿಚಾರದಲ್ಲಿ ತೂಗಿ ನೋಡಬೇಕು. ಯೋಚನೆಮಾಡಬೇಕು. ಒಂದು ಮಾತನ್ನು ಹೇಳುತ್ತೇನೆ. ಮಿನಿಸ್ಟ್ರಿಯಲ್ಲಿ, ಪಬ್ಲಿಕ್ ಪ್ರೈವೇಟ್ ಇಂಡಸ್ಟ್ರೀಸ್‌ನಲ್ಲಿ ಹರಿಜನರಿಗೆ 30 ಪರ್ಸೆಂಟ್ ಎಂಪ್ಲಾಯಮೆಂಟ್ ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಹಳ್ಳಿಗಳನ್ನು ಎತ್ತಿ ಹಿಡಿಯುವುದಕ್ಕೆ ಒಂದು ನಿರ್ದಿಷ್ಟವಾದ ಗಳಿಗೆಯಲ್ಲಿ ಮಾಡುತ್ತೇವೆಂದು ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ಇದನ್ನು ಕಾರ್ಯಗತ ಮಾಡುವುದಕ್ಕೆ ಕೈಲಾದಷ್ಟು ಪ್ರಯತ್ನ ಮಾಡಿ ಎಂದು ಹೇಳುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸ್ವಾಮಿ, ಇವತ್ತಿನ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಈ ಬೇಡಿಕೆಯನ್ನು ಸ್ವಾಗತಿಸುತ್ತೇನೆ. ನನಗೆ ಮಾತನಾಡಲು ಕೊಟ್ಟಿರುವ ಕೆಲವೇ ನಿಮಿಷಗಳ ವೇಳೆಯಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಈ ಖಾತೆ ಪಡೆದಿರತಕ್ಕಂಥ ಸಚಿವೆಯರು ಬಹಳ ದಿವಸಗಳಿಂದಲೂ ನಮ್ಮ ದೇಶದ ಜನಗಳ ಕಲ್ಯಾಣದ ಬಗ್ಗೆ ಶ್ರಮಿಸಿದ್ದಾರೆ. ಅದನ್ನು ನಾವೆಲ್ಲರೂ ಒಪ್ಪಿಕೊಳ್ಳತಕ್ಕದ್ದು. ಶ್ರೀಮಾನ್ ಯಶೋಧರಮ್ಮನವರು... ಕ್ಷಮಿಸಬೇಕು ಶ್ರೀಮತಿ ಯಶೋಧರಮ್ಮ ದಾಸಪ್ಪನವರು.........

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀಮಾನ್ ಯಶೋಧರಮ್ಮ ದಾಸಪ್ಪನವರು ಎಂದು ಅವರು ಹೇಳುತ್ತಿದ್ದಾರಲ್ಲವೇ ?

(ಸಭೆಯಲ್ಲಿ ನಗು)

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ಖಾತೆಯಲ್ಲಿ ಅವರು ಬಹಳ ಶ್ರಮ ವಹಿಸಿ ದುಡಿದಿದ್ದಾರೆ. ಹಿಂದುಳಿದ ವರ್ಗದವರ ಏಳಿಗೆಗಾಗಿ ಕಳಕಳಿಯಿಂದ ದುಡಿಯುತ್ತಿದ್ದಾರೆ. ಆದುದರಿಂದ ಶ್ರೀಮತಿ ಯಶೋಧರಮ್ಮನವರು ಅಭಿನಂದನೀಯರಾಗಿದ್ದಾರೆ. ಆಡಳಿತದಲ್ಲಿ ಎಲ್ಲಿ ಲೋಪದೋಷಗಳಿವೆ, ಏನು ಆಗುತ್ತಿದೆ ಎನ್ನುವುದನ್ನು ನೋಡಬೇಕು. ನಿಜವಾಗಿಯೂ ಆಡಳಿತದಲ್ಲಿ ದೋಷವಿಲ್ಲ. ಅವರ ಕೈಕೆಳಗೆ ಕೆಲಸ ಮಾಡತಕ್ಕಂಥ ಅಧಿಕಾರಿಗಳ ಮೂಲಕ ಕೆಲವು ಸಲ ವಿಳಂಬವಾಗುತ್ತಿದೆ. ಭದ್ರಾವತಿಯಲ್ಲಿ ಒಂದು ಹರಿಜನ ಹಾಸ್ಟೆಲ್ ಬಾಪೂಜಿಯವರ ಹೆಸರಿನಲ್ಲಿ ತೆಗೆದುಕೊಳ್ಳುವುದು ಇದೆ. ಈಗ ಮೂರು ವರ್ಷವಾಯಿತು. ಈ ಸಭೆಗೆ ಸದಸ್ಯನಾಗಿ ಬಂದು ಮೂರು ವರ್ಷದಿಂದ ಹೇಳುತ್ತಿದ್ದೇನೆ. ಈ ಹಾಸ್ಟೆಲ್ಲಿಗೆ ಗ್ರಾಂಟು ಕೂಡ ಕೊಟ್ಟಿಲ್ಲ. ಗ್ರ್ಯಾಂಟ್ ಇಲ್ಲದೆ ಅಲ್ಲಿಯ ಹುಡುಗರ ಗತಿ ಏನಾಗಿದೆ ಎಂಬುದು ದೇವರಿಗೆ ಗೊತ್ತು. ಕಾಗದಗಳು ಜಿಲ್ಲಾಧಿಕಾರಿಯಿಂದ ಹೋಗುತ್ತವೆ. ಮೂರು ವರ್ಷ ಈ ಫೈಲ್ ಓಡಾಡುತ್ತಿದೆ. ಇದನ್ನು ವ್ಯಥೆಪಟ್ಟು ಹೇಳಬೇಕಾಗಿದೆ. ತಕ್ಷಣ ಈ ಫೈಲು ತರಿಸಿಕೊಂಡು ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

[MR. SPEAKER in the Chair.]

ನಮ್ಮ ತಾಲ್ಲೂಕಿನಲ್ಲಿ ಅರಣಿಕೊಪ್ಪ, ಚನ್ನಗಿರಿ, ಅಳಕನೂರು, ಈ ಸ್ಥಳಗಳಲ್ಲಿ ಒಂದು ಸ್ಕೀಂ ಮಾಡುವುದರ ಬಗ್ಗೆ ಡೆಪ್ಯೂಟಿ ಕಮಿಷನರ್ ಅವರು ಬರೆದಿದ್ದಾರೆ. ಆದರೆ ಸ್ಕೀಂ ಕಾರ್ಯಗತವಾಗುತ್ತಾ ಇಲ್ಲ. ಇದು ಬಹಳ ವ್ಯಥೆಪಡತಕ್ಕ ವಿಚಾರ. ಆದುದರಿಂದ ಇದನ್ನು ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ. ಆದಷ್ಟು ಮಟ್ಟಿಗೆ ಹರಿಜನರ ಏಳಿಗೆಯ ಬಗ್ಗೆ ಪ್ರಯತ್ನ ಮಾಡಬೇಕು. ಅಧಿಕಾರಿಗಳಲ್ಲಿಯೂ ಈ ಭಾವನೆ ಉಂಟಾಗಬೇಕು. ಹಿಂದುಳಿದ ವರ್ಗದವರ ಮಕ್ಕಳು ಮರಿಗಳ ಬಗ್ಗೆ ಕನಿಕರ ಉಂಟಾಗಬೇಕು. ಲಕ್ಷಾಂತರ ರೂಪಾಯಿ ಖರ್ಚು ಮಾಡಲ್ಪಡುತ್ತಿದೆ. ಅಧಿಕಾರಿಗಳಿಗೆ

ಸ್ವಲ್ಪವೂ ಕನಿಕರವಿಲ್ಲವೇ ? ದಯವಿಟ್ಟು ಇದಕ್ಕೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ದಯವಿಟ್ಟು ಆಗಬಾರದ್ದು ಆಗದ ರೀತಿಯಲ್ಲಿ ಅಧಿಕಾರಿಗಳಿಗೆ ದೇವರು ಬುದ್ಧಿ ಕೊಡಲಿ ಎಂದು ವಿಧಿ ಇಲ್ಲದೆ ಪ್ರಾರ್ಥನೆ ಮಾಡುತ್ತೇನೆ.

ಸ್ವಾಮಿ, ಇವತ್ತಿನ ದಿವಸ ಹಿಂದುಳಿದವರಿಗೆ ಮನೆಗಳನ್ನು ಕಟ್ಟಿಸಿ ಕೊಡುವ ಒಂದು ಯೋಜನೆ ಸರಕಾರ ಹಾಕಿಕೊಂಡಿದೆ. ಈ ಯೋಜನೆ ಎಷ್ಟರ ಮಟ್ಟಿಗೆ ಫಲಕಾರಿಯಾಗಿದೆ ಎನ್ನುವುದನ್ನು ಪ್ರಸ್ತಾಪ ಮಾಡಬೇಕಾಗಿದೆ. ಇವತ್ತಿನ ದಿವಸ ಈ ಬಡ ಜನರಿಗಾಗಿ 500 ರೂಪಾಯಿಯಲ್ಲಿ ಒಂದು ಸಣ್ಣ ಮನೆ ಮಾಡುವುದಕ್ಕೆ ಸಾಧ್ಯವಿದೆ. ಹತ್ತು ಹನ್ನೆರಡು ಜಿಂಕ್ ಷೀಟು ತೆಗೆದುಕೊಂಡು ಎರಡು ಬಾಗಿಲು ಎರಡು ಕಿಟಕಿ ಇರುವ ಒಂದು ಸಣ್ಣ ಮನೆ ಕಟ್ಟಲು ಸಾಧ್ಯವಿದೆ. ಬಡವರು ಹುಲ್ಲಿನ ಗುಡಿಸಲು ಬಿಟ್ಟು ಇಂಥ ಮನೆಯಲ್ಲಿರಲು ಸಾಧ್ಯವಿದೆ. ಗುಡಿಸಲಿಗೆ ಬೆಂಕಿ ಹಾಕಿ ಗುಡಿಸಲು ಅದರಲ್ಲಿಯ ದವಸಧಾನ್ಯ ಸುಟ್ಟು ಹೋದ ಸಮಾಚಾರದ ರಿಪೋರ್ಟು ಆಗಾಗ್ಗೆ ಬರುತ್ತಿದೆ ಇದರಿಂದ ಜನರು ಹಾಳಾಗುತ್ತಿದ್ದಾರೆ. ತೀವ್ರ ನಷ್ಟ ಉಂಟಾಗಿದೆ. ಈ ಸಮಸ್ಯೆಯನ್ನು ಪರಿಶೀಲನೆ ಮಾಡಬೇಕು. ಮನೆ ಕಟ್ಟುವ ಕೆಲಸ ಸೊಸೈಟಿ ಮೂಲಕ ಸರಿಯಾಗಿ ಕಾರ್ಯಗತ ವಾಗುತ್ತಿಲ್ಲ. ವರ್ಷೇ ವರ್ಷೇ ಬೇರೆ ಬೇರೆ ಸ್ಕೀಮ್ಸು ಮಾಡಲಾಗುತ್ತಿದೆ. ಸೊಸೈಟಿ ರಚನೆ ಮಾಡು ವುದರಲ್ಲಿ ಕಾಲ ಕಳೆದು ಅಧಿಕಾರಿಗಳು ಸಂಬಳ ಮಾತ್ರ ಹೇರಳವಾಗಿ ತೆಗೆದುಕೊಳ್ಳುತ್ತಿದ್ದಾರೆ. ಸಂಬಳಕ್ಕಾಗಿ ಹಣ ಮಾತ್ರ ಖರ್ಚಾಗುತ್ತಿದೆ. ಹರಿಜನರ ಗಿರಿಜನರ ಕಲ್ಯಾಣಕ್ಕಾಗಿ ಹಣ ಮಾತ್ರ ಖರ್ಚಾಗುತ್ತಿಲ್ಲ. ಹರಿಜನ ಗಿರಿಜನರ ಕಲ್ಯಾಣವಾಗುತ್ತಿಲ್ಲ.

5-30 P. M.

ಇದು ಬಹಳ ಸಂಕಟಪಟ್ಟುಕೊಂಡು ಹೇಳತಕ್ಕ ವಿಚಾರ. ಈ ಬಾಬನ್ನು ಒಂದು ಸುವ್ಯವಸ್ಥಿತಿ ಯಾದ ರೀತಿಯಲ್ಲಿ, ಉತ್ತಮ ರೀತಿಯಲ್ಲಿ ನಡೆಸುವಂತೆ ಮಾಡಲು ಸಚಿವೆಯರು ಹೆಚ್ಚಿನ ನಿಗಾ ತೆಗೆದು ಕೊಂಡು ಇದರಲ್ಲಿ ಆಗಾಗ್ಗೆ ಕಂಡುಬರತಕ್ಕ ಲೋಪ ದೋಷಗಳನ್ನು ತಡೆಗಟ್ಟಿ ಅವರು ಒಂದು ಕೀರ್ತಿ ಗಳಿಸಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ.—ಅಧ್ಯಕ್ಷರೇ, ಸರ್ಕಾರದವರು ಹರಿಜನ ಗಿರಿಜನರ ಏಳಿಗೆಗಾಗಿ ಪ್ರತಿವರ್ಷವೂ ಬಡ್ಜೆಟ್ಟಿನಲ್ಲಿ ಹೆಚ್ಚು ಹೆಚ್ಚಿನ ಗ್ರಾಂಟನ್ನು ಕೊಡುತ್ತಾ ಬರುತ್ತಿರುವುದು ಒಂದು ಸಂತೋಷದ ಸಂಗತಿಯಾಗಿದೆ. ಆದರೆ ಈ ಗ್ರಾಂಟನ್ನು ಮೇಲಿಂದ ಮೇಲೆ ಹಂಚತಕ್ಕ ಕ್ರಮದಲ್ಲಿ ಬರತಕ್ಕ ಕೆಲವು ಲೋಪದೋಷಗಳನ್ನು ಸರಿಪಡಿಸಿಕೊಂಡರೆ ಆಗ ಸರ್ಕಾರದವರು ಈ ಹರಿಜನ ಗಿರಿಜನರಬಗ್ಗೆ ಏನೊಂದು ಸದುದ್ದೇಶವನ್ನಿಟ್ಟುಕೊಂಡಿದ್ದಾರೋ ಅದು ಸರ್ವತೋಮುಖವಾಗಿ ಸಾಧನೆಯಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಸ್ವಾಮಿ, ಈ ಹರಿಜನ ಗಿರಿಜನರ ಏಳಿಗೆಗಾಗಿ ಬರೀ ಅವರ ಮಕ್ಕಳಿಗೊಂದು ಸ್ಕಾಲರ್‌ಷಿಪ್ಪನ್ನು ಕೊಟ್ಟರೆ ಅವರ ಸರ್ವತೋಮುಖವಾದ ಅಭಿವೃದ್ಧಿಯಾಯಿತೆಂದು ಹೇಳಲಿಕ್ಕಾಗುವದಿಲ್ಲ. ಹಾಗೇ ಅವರು ಆರ್ಥಿಕ ಸ್ಥಿತಿಯಲ್ಲೂ ಮುಂದುವರಿಯಬೇಕು. ಇವರಿಗೆ ಎಲ್ಲಿಯೋ ತಾಲ್ಲೂಕಿನಲ್ಲಿ ಒಬ್ಬಿಬ್ಬರಿಗೆ ಅಥವಾ ಒಂದು ಪಟ್ಟಣದಲ್ಲಿ ಒಬ್ಬಿಬ್ಬರಿಗೆ ಈ ಸೌಲತ್ತುಗಳನ್ನು ಒದಗಿಸಿಕೊಟ್ಟರೆ ಅದರಿಂದೇನೂ ಪ್ರಯೋಜನವಿಲ್ಲ. ಇಂಥ ಒಂದು ಪಾಲಸಿಯಿಂದ ಅವರ ಸರ್ವತೋಮುಖವಾದ ಅಭಿವೃದ್ಧಿಯಾಗಲಾರದು ನಾವು ಇನ್ನಾದರೂ ಇವರ ವಿಚಾರದಲ್ಲಿ ಒಂದು ಕಟ್ಟುನಿಟ್ಟಾದ ಆಚರಣೆ ಯನ್ನು ಜಾರಿಗೆ ತರಬೇಕಾಗಿದೆ. ಸರ್ಕಾರದವರು ಇವರಿಗೆ ಬರಿಯ ಒಂದು ವಿದ್ಯಾಭ್ಯಾಸದಲ್ಲೇ ಅಲ್ಲದೆ ಇನ್ನುಳಿದ ಬಾಬುಗಳಲ್ಲಿಯೂ ಆಸ್ತೆವಹಿಸಬೇಕು. ಇವರಲ್ಲಿ ಕೈಗಾರಿಕಾ ಪ್ರಗತಿ ಆಗಬೇಕು. ಇವರಿಗೆ ವ್ಯವಸಾಯದ ಕಾಲೋನಿಗಳನ್ನು ಸ್ಥಾಪಿಸಬೇಕು. ಈ ದಿವಸ ಇಲ್ಲೊಂದು ಅಲ್ಲೊಂದು ಏನು ವ್ಯವಸಾಯದ ಕಾಲೋನಿಗಳನ್ನು ಮಾಡಿದ್ದಾರೆ ಅವು ಏನೇನೂ ಸಾಲದು. ಇವರಿಗೆ ಈ ವ್ಯವಸಾಯದ ಕಾಲೋನಿಗಳನ್ನು ಹೆಚ್ಚಿಸಿ ಅವರ ಆರ್ಥಿಕ ಮುಗ್ಗಟ್ಟನ್ನು ನಿವಾರಣೆ ಮಾಡಬೇಕು. ಆದರೆ ಸರ್ಕಾರದವರು ತಾವಿದನ್ನು ಈಗಾಗಲೇ ಜಾರಿಗೆ ತಂದಿದ್ದೇವೆಂದು ಹೇಳಬಹುದು. ಆದರೆ ಅದು ಸಾಲದು ಎಂದು ಹೇಳುತ್ತೇನೆ. ದೊಡ್ಡ ಜನಸಂಖ್ಯೆಯುಳ್ಳ ಜನಾಂಗಕ್ಕೆ ಇವು ಏನೇನೂ ಸಾಲವು. ಇವರನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡಿ ಅವರಿಗೆ ನೌಕರಿಗಳನ್ನು ದೊರಕಿಸಿ ಕೊಡಲು ಸಾಧ್ಯವಿದೆಯೇ ?

ಇನ್ನು ಹರಿಜನಗಿರಿಜನರ ವಿದ್ಯಾಭ್ಯಾಸದ ಬಗ್ಗೆ, ಹೈಸ್ಕೂಲುಗಳ ವಿದ್ಯಾರ್ಥಿಗಳಿಗೆ ಹಾಸ್ಟಲನ್ನು ಮಾಡಿರತಕ್ಕ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಸರ್ಕಾರದವರು ಈ ದಿವಸ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹಾಸ್ಟಲುಗಳ ಅನುಕೂಲವನ್ನು ಕಲ್ಪಿಸಿರಬಹುದು. ಆದರೆ ಇವರು

(ಶ್ರೀ ಸಿದ್ದಯ್ಯ ಕಾಶೀಮಠ್)

ಗ್ರಾಮಾಂತರ ಪ್ರದೇಶದಲ್ಲಿರತಕ್ಕವರಿಗೇನು ಮಾಡಿದ್ದಾರೆ? ಅಲ್ಲಿಯೂ ಕೂಡ ಒಂದೆರಡು ಕಡೆ ಮಾಡಿದ್ದಾರೆ, ಆದರೆ ಅವರಿಗೆ ಇವುಗಳ ವಿಚಾರದಲ್ಲಿ ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲ. ಅನೇಕ ಜನರಿಗೆ ಇಂದು ಯಾವರೀತಿ ಗ್ರ್ಯಾಂಟನ್ನು ಪಡೆಯಬೇಕು, ಯಾವಾಗ ಪಡೆಯಬೇಕು ಎಂಬ ವಿಚಾರಗಳು ಸರಿಯಾಗಿ ಗೊತ್ತಿರುವುದಿಲ್ಲ. ಹೀಗಾಗಿ ಕೆಲವುಕಡೆ ಗ್ರ್ಯಾಂಟ್ ಲ್ಯಾಪ್ಸಾಗಿರತಕ್ಕ ನಿದರ್ಶನಗಳಿವೆ. ಈಗತಾನೆ ಮಾತನಾಡಿದ ಶ್ರೀ ದೇವೇಂದ್ರಪ್ಪನವರು ಹರಿಜನರ ಹಾಸ್ಟಲಿನ ಒಂದು ಫ್ಲೋರು 3—4 ವರ್ಷ ಬರೀ ಓಡಾಟದಲ್ಲೇ ಇತ್ತು ಎಂಬುದಾಗಿ ಹೇಳಿದ್ದಾರೆ. ಆದುದರಿಂದ ಈ ಗ್ರ್ಯಾಂಟಿನ ವಿಚಾರದಲ್ಲಿ ಜನರಿಗೊಂದು ಸರಿಯಾದ ತಿಳುವಳಿಕೆಯನ್ನು ಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಈ ವ್ಯವಹಾರದಲ್ಲಿ ಏನೇ ನ್ಯೂನತೆಗಳು ಅಥವಾ ಲೋಪದೋಷಗಳು ಕಂಡುಬಂದಾಗ್ಗೂ ಅವುಗಳನ್ನು ಬೇಗ ಸರಿಪಡಿಸಿ ಅನುಕೂಲ ಮಾಡಬೇಕು. ಹೀಗೆ ಧಾರವಾಡದಲ್ಲಿ ಒಂದು ಹರಿಜನ ಹಾಸ್ಟಲಿಗೆ 5 ಸಾವಿರ ರೂಪಾಯಿಗಳ ಗ್ರ್ಯಾಂಟನ್ನು ಕೊಡಲಾಗಿತ್ತು. ಅವರು ಅದನ್ನು ಬೇರೆ ಯಾವುದೋ ಕೆಲಸಕ್ಕೆ ಉಪಯೋಗಿಸಿದ್ದಾರೆಂದು ಹೇಳಿ ಅವರಿಗೆ ಆಹಾರಕ್ಕಾಗಿ ಕೊಡುತ್ತಿದ್ದ ಗ್ರ್ಯಾಂಟಿನಲ್ಲಿ 5 ಸಾವಿರ ರೂಪಾಯಿಗಳನ್ನು ಕಡಮೆ ಮಾಡಿದ್ದಾರೆ. ಇದರಿಂದ ಅವರಿಗೆ ಬಹಳ ತೊಂದರೆಯಾಗಿದೆ. ಇದನ್ನು ಕೂಡಲೇ ಸರಿಪಡಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ: ಈ ಹರಿಜನಗಿರಿಜನರಂತೆಯೇ ಯಾವ ಆಸ್ತಿ ಅಥವಾ ಮನೆ ಮಠಗಳೂ ಇಲ್ಲದೆ ಯಾವಾಗಲೂ ತಿರುಗಾಡಿಕೊಂಡಿರತಕ್ಕ ನೊಮ್ಯಾಡಿಕ್ ರೇಸಿಗೂ ಸರ್ಕಾರದವರು ಸೂಕ್ತ ಕಾರ್ಯಕ್ರಮ ಹಾಕಿಕೊಂಡು ಅವರಿಗೂ ಅನುಕೂಲಗಳನ್ನು ಒದಗಿಸಬೇಕು. ಈ ದಿವಸ ಇವರ ಒಂದು ಜನಸಂಖ್ಯೆ ಸುಮಾರು 40 ಲಕ್ಷ ಇರಬಹುದೆಂದು ತಿಳಿಯುತ್ತೇನೆ. ಆದುದರಿಂದ ಈ ಜನಾಂಗಕ್ಕೂ ಈ ಹರಿಜನ ಗಿರಿಜನರಿಗೆ ಸೌಲಭ್ಯಗಳನ್ನೊದಗಿಸಿರುವಂತೆ ಇವರಿಗೂ ಒದಗಿಸಿ ಇವರನ್ನೂ ಅಭಿವೃದ್ಧಿಗೆ ತರಬೇಕೆಂದು ಹೇಳುತ್ತೇನೆ. ಇವರಿಗೂ ವ್ಯವಸಾಯದ ಕಾಲೋನಿಗಳನ್ನು ಮಾಡಿಕೊಟ್ಟರೆ ಇವರ ಅಭಿವೃದ್ಧಿಯನ್ನು ಸಹಾ ಸಾಧಿಸಿದಂತಾಗುವುದು.

ಇನ್ನು ನಾನು ಅಂಕಿಅಂಶಗಳ ಇಲಾಖೆಯ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಈ ಇಲಾಖೆಯಲ್ಲಿ ಜಿಲ್ಲಾಮಟ್ಟದಲ್ಲಿರತಕ್ಕ ಅಧಿಕಾರಿಗಳಿಗೇನೂ ಕೆಲಸವಿಲ್ಲ. ಇವರು ಏನಾದರೂ ಮಾಹಿತಿ ಬೇಕಾಗಿದ್ದರೆ ಅದನ್ನು ತಾಲ್ಲೂಕ್‌ಲೆವೆಲ್‌ನಲ್ಲಿರತಕ್ಕ ಅಧಿಕಾರಿಗಳಿಂದ ತರಿಸಿಕೊಳ್ಳುತ್ತಿದ್ದಾರೆ. ಆದುದರಿಂದ ಇವರನ್ನು ತಗೆದುಹಾಕುವುದು ಒಳ್ಳೆಯದು. ಇವರನ್ನು ತಾಲ್ಲೂಕಿಗೊಬ್ಬರಂತೆ ಇಟ್ಟರೆ ಸಾಕು. ಅವರೇ ಎಲ್ಲವನ್ನೂ ನಡೆಸಿಕೊಂಡು ಹೋಗಬಹುದು.

ಇನ್ನು ದಸರಾ ಪ್ರದರ್ಶನದ ಬಗ್ಗೆ ನೇಮಕವಾಗತಕ್ಕ ಕಮಿಟಿಗಳೇನಿವೆ ಅವುಗಳಬಗ್ಗೆ ಅನೇಕ ನ್ಯೂನತೆಗಳಿವೆ. ಅದರಿಂದ ಅನೇಕರಿಗೆ ಬಹಳ ತೊಂದರೆಯಾಗಿದೆ. ಆ ಕಮಿಟಿಗಳಲ್ಲಿ ಎಂತಹವರಿಗೆ ಮಹತ್ವಕೊಡುತ್ತಿದ್ದಾರೆಂಬುದನ್ನು ಹೇಳತೀರದಾಗಿದೆ. ಯಾವ ಒಂದು ಬಾಬಿನಲ್ಲೂ ಪರಿಣತೆಯನ್ನು ಪಡೆಯದಿರತಕ್ಕಂಥ ಜನರನ್ನು ಆರಿಸಿ ಹಾಕಿದ್ದಾರೆ. ಇದು ಸರಿಯಾದ್ದಲ್ಲ. ಇನ್ನಾದರೂ ಆ ಕಮಿಟಿಗಳನ್ನು ರಚನೆಮಾಡುವಾಗ ಅವುಗಳಿಗೆ ಉತ್ತಮ ಪಾಂಡಿತ್ಯವಿರತಕ್ಕ ಜನರನ್ನು ಆರಿಸಿ ಹಾಕಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಅನೇಕ ಕಲೆಗಳಲ್ಲಿ ಪರಿಣತರಾಗಿರತಕ್ಕ ಜನರು ನಮ್ಮಲ್ಲಿದ್ದಾರೆ. ದೊಡ್ಡ ದೊಡ್ಡ ವಿದ್ವಾಂಸರಿದ್ದಾರೆ. ಪರಿಣತರಿದ್ದಾರೆ. ಇಂಥ ಜನರನ್ನು ಆರಿಸಿ ಕಮಿಟಿಗಳಲ್ಲಿ ಹಾಕಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಟೂರಿಸ್ಟ್ ಬಗ್ಗೆ ನಮ್ಮ ರಾಜ್ಯದಲ್ಲಿ ಯಾವ ಕಾರ್ಯಕ್ರಮಗಳೂ ಇದ್ದಂತೆ ಕಂಡುಬರುತ್ತಿಲ್ಲ. ಈಗ ಇರತಕ್ಕ ಟೂರಿಸ್ಟ್ ಸೆಂಟರುಗಳು ಸಾಲದು. ಅದಕ್ಕಾಗಿ ನಮ್ಮ ಹುಬ್ಬಳ್ಳಿ ಮತ್ತು ಬಿಜಾಪುರಗಳಲ್ಲಿ ಟೂರಿಸ್ಟ್ ಸೆಂಟರುಗಳನ್ನು ತೆರೆದು ಜನರಿಗೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಚಾರಗಳಲ್ಲಿ ಹೆಚ್ಚಿನ ತಿಳುವಳಿಕೆಯನ್ನು ಉಂಟುಮಾಡಿಕೊಡಬೇಕೆಂದು ಹೇಳಿ ನಾನು ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಹರಿಜನ, ಗಿರಿಜನರು, ಅವರ ಕಲ್ಯಾಣಕ್ಕಾಗಿ ಒಂದು ಖಾತೆ, ಆ ಖಾತೆಗೆ ಹಣ, ಹಣ ಖರ್ಚು ಮಾಡುವುದಕ್ಕೆ ಒಬ್ಬ ಮಂತ್ರಿ. ಅದಕ್ಕೆ ಒಂದು ಖಾತೆ.—

ಅಧ್ಯಕ್ಷರು.—ಅದಕ್ಕಾಗಿ ಒಬ್ಬರು ಮಂತ್ರಿ ಎಂದರೆ ತಾವು ಬಡ್ಜೆಟ್ ಚರ್ಚೆ ಮಾಡುತ್ತಾ ಇದ್ದೀರಾ ಹೇಗೆ?

Sri C. J. MUCKANNAPPA.—Now I have given up padding. I straightaway go to the topic.

ಅಧ್ಯಕ್ಷರು.—ಅವರು ಎದುರಿಗೇ ಇದ್ದಾರಲ್ಲಾ ಹೇಳಿ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಸ್ವಾಮಿ, ಈ 17 ವರ್ಷಗಳಿಂದ ಹರಿಜನರನ್ನು ಉದ್ಧಾರ ಮಾಡುತ್ತೇವೆ, ಗಿರಿಜನರ ವಿಷಯದಲ್ಲಿ ಅನುಕಂಪವನ್ನು ತೋರಿಸುತ್ತೇವೆ, ಮನೆಗಳನ್ನು ಕಟ್ಟಿಸಿ ಕೊಡುತ್ತೇವೆ, ಕಾಲೋನಿಗಳನ್ನು ಪ್ರಾರಂಭ ಮಾಡುತ್ತೇವೆ, ಬಾವಿಗಳನ್ನು ತೆಗೆಸಿಕೊಡುತ್ತೇವೆ, ಅವರಿಗೆ ವಿದ್ಯಾಭ್ಯಾಸವನ್ನು ಮಾಡಿಸುತ್ತೇವೆ, ನೌಕರಿಗಳನ್ನು ಒದಗಿಸಿಕೊಡುತ್ತೇವೆ, ಅವರಿಗಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಅನುಕೂಲಗಳನ್ನು ಕಲ್ಪಿಸಿಕೊಡುತ್ತೇವೆ ಎಂದು ಹೇಳಿ ಭಾಷಣಗಳನ್ನು ಮಾಡಿಕೊಂಡು ಬಂದರು. ಈ ಭಾಷಣದ ವೈಖರಿ ಎಲ್ಲಾ ಏನಾಗಿದೆ ಎಂದರೆ ಈ ರಾಜ್ಯದಲ್ಲಿ 27 ಲಕ್ಷ ಜನ ಈ ಜನರಿದ್ದಾರೆ ಅವರ ಓಟುಗಳನ್ನು ಹಿಡಿಯುವುದಕ್ಕೆ ಸುಮ್ಮನೆ ಇದು ಒಂದು ಪ್ರಚಾರ. ಮೈಸೂರು ಸರ್ಕಾರ ಇವತ್ತು ಹರಿಜನರನ್ನು ಏಕೆ ಇಟ್ಟುಕೊಂಡಿದ್ದಾರೆ ಎಂದರೆ ಓಟು ತಮ್ಮ ಪೆಟ್ಟಿಗೆಯು ತುಂಬಾ ತುಂಬಬೇಕು. ಎಲ್ಲಿ ಏನೂ ಬೆಳೆಯದೆ ಇರತಕ್ಕ ಭೂಮಿ ಇದೆ ಅದನ್ನು ಅವರಿಗೆ ಕೊಡುವುದು, ಎಲ್ಲಿ ನೀರು ಸಿಕ್ಕುವುದಿಲ್ಲ ಅಲ್ಲಿ ಬಾವಿ ತೆಗೆಸುವುದು, ಕೋಳಿ ಕೊಡುತ್ತೇವೆ ಎನ್ನುವುದು ಕುರಿಕೊಡುತ್ತೇವೆ ಎನ್ನುವುದು, ದನ, ಎತ್ತು, ಎಮ್ಮೆ, ಕೋಣ ಕೊಡುತ್ತೇವೆ ಎಂದು ಹೇಳಿ 67ನೇ ಇಸವಿ ಜನವರಿಯಲ್ಲಿ ನಡೆಯುವ ಚುನಾವಣೆಯಲ್ಲಿ ಜೋಡೆತ್ತಿನ ಪೆಟ್ಟಿಗೆಗೆ ತಮ್ಮ ಓಟನ್ನು ಹಾಕುವುದನ್ನು ಮರೆಯಬೇಡಿ ಎಂದು ಹೇಳುವುದು ಇದಕ್ಕೋಸ್ಕರವೇ ಅವರು ಹರಿಜನರನ್ನು ಇಟ್ಟುಕೊಂಡಿರುವುದು. ತಾವು ಯಾರಾದರೂ ಒಂದು ಅಂಕಿ ಅಂಶ ತೆಗೆದುಕೊಂಡು ಪರಿಶೀಲನೆ ಮಾಡಿ ನೋಡಿ. ಈ ರಾಜ್ಯ ಸ್ವತಂತ್ರವಾದ ಮೇಲೆ ಈ ಹರಿಜನ ಗಿರಿಜನರ ಪರಿಸ್ಥಿತಿ ಹೇಗೆ ಇದೆ ಸ್ವತಂತ್ರವಾಗುವುದಕ್ಕೆ ಮುಂಚೆ ಇದ್ದಂಥ ಬ್ಯೂರೋಕ್ರೆಟಿಕ್ ಗವರ್ನ್ಮೆಂಟ್ ಅವರಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಿಕೊಟ್ಟಿತ್ತು ಎಂಬುದನ್ನು ಸ್ವಲ್ಪ ನಾವೂ, ನೀವೂ ಇವತ್ತು ನೋಡಬೇಕು. ಆ ದಿನ ಆ ಸರ್ಕಾರದವರಿಗೆ ನಿಜವಾಗಿಯೂ ಕೂಡ ಅನುಕಂಪ ಇತ್ತು. ನೇರಳೇ ಮಾದಯ್ಯನವರು ಇವತ್ತಿನ ದಿವಸ ಮೇಲ್ಮನೆಯಲ್ಲಿ ಸದಸ್ಯರಾಗಿದ್ದಾರೆ, ಬ್ಯೂರೋಕ್ರೆಟಿಕ್ ಗವರ್ನ್ಮೆಂಟ್ ಇದ್ದಾಗ ಅವರನ್ನು ಮೈಸೂರು ಸಂಸ್ಥಾನದ ಲೆಜಿಸ್ಲೇಟೀವ್ ಕೌನ್ಸಿಲ್‌ನ ಡೆಪ್ಯೂಟಿ ಚೇರ್ಮನ್ ಆಗಿ ಮಾಡಿದ್ದರು. ಪಬ್ಲಿಕ್ ಸರ್ವೀಸ್ ಕಮಿಷನ್‌ರಾಗಿರುವ ಚನ್ನಿಗರಾಮಯ್ಯನವರನ್ನು ಲೆಜಿಸ್ಲೇಟೀವ್ ಅಸೆಂಬ್ಲಿ ಮತ್ತು ಲೆಜಿಸ್ಲೇಟೀವ್ ಕೌನ್ಸಿಲ್‌ನ ಮೆಂಬರಾಗಿ ತರಬೇಕೆಂಬ ಅನುಕಂಪ ಅವರಲ್ಲಿ ಆಗ ಇತ್ತು. ಈಗ ಯಾವ ಪರಿಸ್ಥಿತಿ ಇದೆ ! 19 ಜನ ಸದಸ್ಯರು ಇಲ್ಲಿ ಕುಳಿತುಕೊಂಡು, ನಮಗೆ ಹಾಸ್ಟೆಲ್‌ಗೆ ದುಡ್ಡು ಕೊಟ್ಟಿಲ್ಲ, ಮನೆ ಕಟ್ಟುವುದಕ್ಕೆ ದುಡ್ಡು ಕೊಟ್ಟಿಲ್ಲ. ನಮಗೆ ಕೆಲಸ ಸಿಕ್ಕಿಲ್ಲ, ಯಾವ ಪರ್ಸೆಂಟೇಜ್ ಮೇಲೆ ನೌಕರಿ ದೊರಕಬೇಕೋ ಅದು ದೊರೆಯುತ್ತಾ ಇಲ್ಲ ಎಂದರೆ ಈ 19 ಜನ ಸದಸ್ಯರೂ ಕೂಡ ಇವತ್ತು ರಾಜೀನಾಮೆ ಕೊಡಬೇಕು. ಅವರು ಅಲ್ಲಿದ್ದ ಪಕ್ಷದಲ್ಲಿ ಅವರ ಒಂದು ಜನಾಂಗಕ್ಕೆ ಇವತ್ತಿನ ದಿವಸ ದ್ರೋಹ ಮಾಡಿದಂತೆ ಆಗುತ್ತದೆ. ಆದ್ದರಿಂದ ಅವರುಗಳು ರಾಜೀನಾಮೆ ಕೊಟ್ಟು ಈ ಮನೆಯಿಂದ ಆಚೆಗೆ ಹೋಗಬೇಕು ಇಲ್ಲವೇ ಹೋದರೆ ಅವರು ಆ 27ಲಕ್ಷ ಜನರ ಹೆಸರಿನಲ್ಲಿ ತಮ್ಮ ಪ್ರತಿಷ್ಠೆಯನ್ನು ತೋರಿಸುತ್ತಾ ಇದ್ದಾರೆ ಎಂದು ನಾನು ತಮ್ಮ ಮುಖಾಂತರ ಸರ್ಕಾರದವರಿಗೆ ಹೇಳುತ್ತಾ ಇದ್ದೇನೆ. ಸರ್ಕಾರದವರಿಗೆ ಈ ಜನ ಎಷ್ಟುಮಟ್ಟಿಗೆ ಬೇಕು ಎಂದರೆ ಮಂತ್ರಿಮಂಡಲವನ್ನು ರಚನೆ ಮಾಡುವಾಗ ಅವರದೂ ಒಂದು ಓಟು ಬೇಕು. ಅವರಿಗೆ ಯಾರ್ಯಾರು ಅನುಕೂಲರಾಗಿದ್ದಾರೋ ಅವರೆಲ್ಲರಿಗೂ ಕಾಂಗ್ರೆಸ್ ಟಿಕೆಟ್ ಕೊಟ್ಟು ಒಂದೊಂದು ಕಾನ್ಸ್ಟಿಟ್ಯೂಯನ್ಸಿಯನ್ನೇ ರಿಸರ್ವ್ ಮಾಡಿಕೊಂಡಿದ್ದಾರೆ. ಈ 19 ಜನರಿಗೆ, ಅವರಿಗೆ ಧೈರ್ಯ ಇದ್ದರೆ ಇವತ್ತೇ ಸಾಯಂಕಾಲ ಅವರ ರಾಜೀನಾಮೆಯ ಪತ್ರವನ್ನು ಮುಖ್ಯ ಮಂತ್ರಿಗಳ ಮುಂದೆ ಇಡಬೇಕು, ಈ ಮಿನಿಸ್ಟ್ರಿಯಲ್ಲಿ ಇರುವುದಕ್ಕೆ ನಮಗೆ ಶಕ್ಯ ಇಲ್ಲ, ಇಲ್ಲಿ ಇದ್ದುಕೊಂಡು ನಾವೇನೂ ಸಾಧನೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಬೇಕು. ನಾನಾದರೂ ಕೇಳುತ್ತೇನೆ ಇವತ್ತು ಯಾವ ಮಂತ್ರಿಗಳ ಕೈಯಲ್ಲಿ ಈ ಹರಿಜನ, ಗಿರಿಜನರ ಅಭಿವೃದ್ಧಿಯ ಶಾಖೆ ಇದೆ ಅವರು ಏನೂ ಸಾಧನೆ ಮಾಡಲಿಲ್ಲ, ಮಾಡುವುದಕ್ಕೆ ಆಗಲಿಲ್ಲ ಎಂದು ಹೇಳುವುದಕ್ಕೆ ಬದಲಾಗಿ ಅವರೇ ತಮ್ಮ ಹೃದಯವನ್ನ ಪರೀಕ್ಷೆ ಮಾಡಿಕೊಳ್ಳಬೇಕು. ಮಾಡಿಕೊಂಡು ಅವರು ಏನು ಸಾಧನೆ ಮಾಡಬೇಕೆಂದು ಹೊರಟಿದ್ದರೋ ಅದನ್ನು ಕೈಗೂಡಿಸುವುದಕ್ಕೆ ಆಗದಿದ್ದ ಪಕ್ಷದಲ್ಲಿ ತಮ್ಮ ಸ್ಥಾನವನ್ನು ಬಿಟ್ಟು ಹೊರಕ್ಕೆ ಬರಬೇಕಾದ್ದು ಅವರ ಕರ್ತವ್ಯವಲ್ಲವೇ ? 19 ಜನ ಸದಸ್ಯರು ಇದ್ದುಕೊಂಡು ಒಬ್ಬರು ಫಾರೆಸ್ಟ್ ಮಂತ್ರಿಗಳು, ಅವರಿಗೆ ಇಬ್ಬರು ತುಂಡು ಮಂತ್ರಿಗಳು-ಯಾವುದಾದರೂ ಒಂದು ಫಿಲ್ಮ್‌ಫೇರ್ ಹಿಡಿದುಕೊಂಡು ಓಡಾಡಿ ಎಂದು ಹೇಳಿದ್ದೀರೇನೋ-ಒಬ್ಬರಿಗೂ ಕೂಡ ಧೈರ್ಯ ಇಲ್ಲ. ಸಂಬಂಧಪಟ್ಟ ಮಂತ್ರಿಗಳು ರಾಜೀನಾಮೆ ಕೊಡುವುದಕ್ಕೆ ತಯಾರಾಗಿಲ್ಲ ಇನ್ನು 17 ಜನರು ಯಾರಿದ್ದಾರೆ.........

Mr. SPEAKER.—If the Hon'ble Member says that outside the House, I do not mind. Is he criticising the Budget ?

Sri C. J. MUCKANNAPPA.—May I submit to the Chair, Sir, while speaking on the Budget that is before......

Mr. SPEAKER.—The Member is entitled to say 'let these Members resign' and have I to shut their mouth ?

Sri C. J. MUCKANNAPPA.—No, Sir. It is left to them.

Mr. SPEAKER.—It is up to me to see that no Member is unnecessarily embarrassed. If he criticises the Government I do not mind it. But to say that other Members—19 Members are not doing their duty and they should resign—it does not come anywhere near the Budget.

Sri C. J. MUCKANNAPPA.—Sir, what are they doing here ?

Sri G. DUGGAPPA.—Sir, this Hon'ble Member is again continuing his own way.

Sri C. J. MUCKANNAPPA.—Sir, this Hon'ble Member is criticising here and he has not done any service to his people.

Mr. SPEAKER.—I advised the Member, that he would have been wiser if he does not drag him......

Sri C. J. MUCKANNAPPA.—Sir, because Sri G. Duggappa has got some grievance against me about Sirigere Mutt......

Sri G. DUGGAPPA.—Sir, while making remarks on the Budget, is it open to any Member to make personal references and criticise Members personally on the Floor of the House ?

Mr. SPEAKER.—Rules are very clear. No Member is entitled to cast aspersions and insinuations against others.

Sri C. J. MUCKANNAPPA.—He brought in my child of six years on the Floor of the House ? Is it fair on his part, Sir ?

Mr. SPEAKER.—I would like to see the child and bless it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಾನು ಯಾವುದೇ ರೀತಿಯಲ್ಲಿ ಅವರಿಗೆ ನೋವನ್ನು ಉಂಟುಮಾಡಬೇಕೆಂದು ಇಲ್ಲ, ಅವರ ಕರ್ತವ್ಯ ಪರಿಪಾಲನೆ ಮಾಡಿಲ್ಲ ಎಂಬುದನ್ನು ಮಾತ್ರ ಹೇಳುತ್ತಾ ಇದ್ದೇನೆ ಅಷ್ಟೆ. ಈಗಲಾದರೂ ಅವರು ಯಾವ ಮಂತ್ರಿಮಂಡಲದಲ್ಲಿದ್ದಾರೆ ಆ ಮಂತ್ರಿಮಂಡಲದಲ್ಲಿ ಹರಿಜನರು, ಗಿರಿಜನರು ಮತ್ತು ಹಿಂದುಳಿದವರ ಕಲ್ಯಾಣಕ್ಕಾಗಿ ಪ್ರಯತ್ನ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ.

ದೊಡ್ಡದಾಗಿ ಮದ್ಯಪಾನ ನಿರೋಧಕ್ಕೆ ವಿರುದ್ಧವಾಗಿ ಮಾತನಾಡಬಾರದು ಎಂದು ಭಾಷಣ ಮಾಡುತ್ತಾರೆ. ಈಗ ನಮಗೆ ಬಂದಿರುವ ವರ್ತಮಾನದ ಪ್ರಕಾರ ಪರ್ಮಿಟ್ ಮೇಲೆ ಹೆಂಡ ಕುಡಿಸುತ್ತೇವೆ. ಅದು ಬಹಳ ಮೈಲ್ಡ್ ಆಗಿರತಕ್ಕ ಮಾದಕ ಪದಾರ್ಥ. ಅದನ್ನು ಮಾರಾಟ ಮಾಡಬೇಕೆಂದು ಇದ್ದೇವೆ ಎಂದು ಹೇಳುತ್ತಾ ಇದ್ದಾರೆ. ನಾನಾದರೂ ಹೇಳುತ್ತೇನೆ, ಯಾರಾದರೂ ಅಗಲಿ ತಮ್ಮ ಹೃದಯದಿಂದ, ಆತ್ಮವಂಚನೆ ಇಲ್ಲದೇ ಹೇಳಬೇಕು. ಈ ಮದ್ಯ ಪಾನವನ್ನು ಯಾವುದೇ ರೀತಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಮಾಡುವುದಕ್ಕೆ ಅವಕಾಶ ಕೊಡುವುದಾದರೆ ಅವರು ಈ ಮಂತ್ರಿಮಂಡಲದಲ್ಲಿ ಇರುವುದಕ್ಕೆ ಅರೆಗಳಿಗೆ ಕೂಡ ಅರ್ಹರಲ್ಲ ಎಂದು ಹೇಳಬೇಕಾಗಿದೆ. ಶ್ರೀಮಾನ್ ದುಗ್ಗಪ್ಪನವರು ಹೇಳುತ್ತಾ ಇದ್ದರು ಕೆಳಗೆ ಬಿದ್ದಿರತಕ್ಕ ಜನರನ್ನು ಕುಡಿಸಿ, ಅವರು ಕುಡಿದು, ತಿಂದು ಮೆರೆದು ಬೀದಿಯಲ್ಲಿ ಭಿಕಾರಿಗಳಾಗಿ ಹೋಗುತ್ತಾ ಇದ್ದಾರೆ, ಇಂತಹ ರಾಜ್ಯಬಾರ ಮಾಡುತ್ತಾ ಇದ್ದೀರಿ ಎಂದು. ಆದಕ್ಕೇ ಪಾನ ನಿರೋಧವನ್ನು ಯಶಸ್ವೀಗೊಳಿಸಬೇಕೆಂದು ಹೇಳತಕ್ಕ ಶ್ರೀಮಾನ್ ದುಗ್ಗಪ್ಪನವರಿಗೆ ಹೇಳುತ್ತೇನೆ. ಸರ್ಕಾರದವರಿಗೆ ನಾವೂ ನೀವೂ ಎಲ್ಲರೂ ಕೂಡ ಹೇಳಬೇಕು. ಮದ್ಯಪಾನವನ್ನು ಇವತ್ತು ಏನಾದರೂ ಸರ್ಕಾರ ಕೈ ಬಿಟ್ಟರೆ, ಅದನ್ನು ಸ್ಕ್ರ್ಯಾಪ್ ಮಾಡುತ್ತೇವೆ ಎಂದು ಅವರು ಹೇಳುವುದಾದರೆ ನಾನಾದರೂ ಹೇಳುತ್ತೇನೆ, ಎಷ್ಟು ಜನ ಈ ಸಭೆಯಲ್ಲಿ ಇದ್ದಾರೆ ಅಷ್ಟು ಜನರೂ ಕೂಡ ಇವತ್ತು ಸರ್ಕಾರದವರಿಗೆ ಸವಾಲು ಹಾಕಬೇಕು. ಬಡವರಾಗಿ, ಕುಡಿತದಿಂದ ಜೀವನ ಮಾಡಿ, ಜೀವನವನ್ನು ಹಾಳು ಮಾಡಿಕೊಳ್ಳತಕ್ಕ ಜನರನ್ನು ಉದ್ಧಾರ ಮಾಡುತ್ತೇವೆ ಎಂದು ಮೊನ್ನೆತಾನೆ ಪ್ರೊಹಿಬಿಷನ್ ಮಿನಿಸ್ಟರು ಹೇಳಿದ್ದಾರೆ. ಕಾಂಗ್ರೆಸ್ ಪ್ರಭುತ್ವ ಎಂತಹ ಸಮಯದಲ್ಲೇ ಅಗಲಿ ಈ

ನೀತಿಯನ್ನು ಕೈ ಬಿಡುವುದಿಲ್ಲ ಎಂದು ತಿಳಿಸುತ್ತಾ ಬಂದು ಈಗ ಒಂದು ಕೈಯಲ್ಲಿ ಕೊಟ್ಟಿದ್ದನ್ನು ಇನ್ನೊಂದು ಕೈಯಲ್ಲಿ ಕಿತ್ತುಕೊಳ್ಳುವುದು ಎಲ್ಲಾದರೂ ಇದೆಯೇ ಎಂದು ಕೇಳುತ್ತೇನೆ. ಆದ್ದರಿಂದ ನಾನು ಈ ಸಮಯದಲ್ಲಿ ಎಚ್ಚರಿಕೆ ಕೊಡುತ್ತೇನೆ—ಅದರಲ್ಲೂ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರಿಗೆ ಎಚ್ಚರಿಕೆ ಕೊಡುತ್ತೇನೆ-ಅವರು ಅನೇಕಕಡೆಗಳಲ್ಲಿ ಭಾಷಣ ಮಾಡಿದ್ದಾರೆ. ಪಾನನಿರೋಧವನ್ನು ಜಾರಿಗೆ ತರದೆ ಅದನ್ನು ಸ್ಕ್ರ್ಯಾಪ್ ಮಾಡುವುದಾದರೆ ನೀವು ಅಲ್ಲಿ ಇರುವುದಕ್ಕೆ ಲಾಯಕ್ ಅಲ್ಲ, ನೀವು ಅಲ್ಲಿಗೆ ರಾಜೀನಾಮೆ ಕೊಡಬೇಕು ಎಂದು ಬಹಳ ಕಳಕಳಿಯಿಂದ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಯಾರ ಕಲ್ಯಾಣಕ್ಕಾಗಿ ಈ ಖಾತೆಯನ್ನು ಹಿಡಿದುಕೊಂಡಿದ್ದಾರೋ ಅವರ ಕಲ್ಯಾಣಕ್ಕಾಗಿ ಅವರ ಏಳಿಗೆಗಾಗಿ ಈ ಪಾನ ನಿರೋಧವನ್ನು ಕೊನೆಯವರೆಗೂ ಜಾರಿಗೆ ತರುವುದಕ್ಕೆ ಅವರು ಪ್ರಯತ್ನ ಮಾಡಬೇಕು, ಪಾನ ನಿರೋಧವನ್ನು ಸ್ಕ್ರ್ಯಾಪ್ ಮಾಡುವುದಕ್ಕೆ ಅವಕಾಶ ಕೊಡಬಾರದು ಎಂದು ಹೇಳುತ್ತೇನೆ. ಇಲ್ಲಿರತಕ್ಕ ಈ 19 ಜನ ಸದಸ್ಯರೂ ಕೂಡ ಇದಕ್ಕೆ ಪ್ರಯತ್ನ ಮಾಡುತ್ತಾರೆ, ಅವರ ಜೊತೆಯಲ್ಲಿ ನಾವೂ ಕೂಡ ಕೈ ಸೇರಿಸಿ ಈ ಪಾನನಿರೋಧವನ್ನು ಜಾರಿಗೆ ತರಬೇಕು. ಬಡವರ ಕಲ್ಯಾಣವಾಗಬೇಕು ಅದಕ್ಕೆ ನಾವೂ ನೀವೂ ದುಡಿಯಬೇಕೆಂದು ಮೈಸೂರು ಸರ್ಕಾರ ಯಾವ ಒಂದು ಉದ್ದೇಶವನ್ನು ಹೊಂದಿದೆ ಅದಕ್ಕೆ ವಿರುದ್ಧವಾಗಿ ನಡೆಯತಕ್ಕ ಒಂದು ವರ್ತಮಾನ ಬಂದಿದೆ. ಆ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಈ ಸರ್ಕಾರ ಪತ್ರ ಬರೆದಿದೆ ಎಂದು ಗೊತ್ತಾಗಿದೆ ಆ ಪತ್ರದ ಪ್ರಕಾರ ಮೈಸೂರು ಸಂಸ್ಥಾನದಲ್ಲಿ ಮತ್ತೆ ಕುಡಿತದ ಹಾವಳಿ ಜಾಸ್ತಿಯಾಗುತ್ತದೆ, ಬಡವರ ಮನೆ ಕೆಟ್ಟು ಹಾಳಾಗುತ್ತದೆ, ಬಡವರು ಕೆಟ್ಟು ಹೋಗುತ್ತಾರೆ. ಇವತ್ತು ಈ ರಾಜ್ಯ ಕುಡುಕರ ರಾಜ್ಯವಾಗುತ್ತದೆ ಇಂತಹ ರಾಜ್ಯವನ್ನು ನಿರ್ಮಾಣ ಮಾಡುವುದಕ್ಕೆ ಕಾಂಗ್ರೆಸ್ ಸರ್ಕಾರ ಆಜ್ಞೆ ಮಾಡುವುದಾದರೆ ಈ ಸರ್ಕಾರ ಅರೆಗಳಿಗೆ ಅಧಿಕಾರದಲ್ಲಿ ಇರುವುದಕ್ಕೆ ಲಾಯಕ್ ಅಲ್ಲ ಎಂದು ಹೇಳುತ್ತೇನೆ. ಆದ್ದರಿಂದ ಈ ಪಾನನಿರೋಧದ ವಿಷಯದಲ್ಲಿ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರು, ಮುಖ್ಯ ಮಂತ್ರಿಗಳು ಮತ್ತು ಇದಕ್ಕೆ ಸಂಬಂಧಪಟ್ಟ ಪಕ್ಷ ಇವತ್ತು ಖಚಿತವಾದ, ಖಂಡತುಂಡವಾದ ನಿರ್ಧಾರಕ್ಕೆ ಬರಬೇಕು ಇಲ್ಲದೇ ಹೋದರೆ ಮಹಾತ್ಮಾ ಗಾಂಧಿಜಿಯವರು ಹೇಳಿದಂತಹ ನೀತಿ, ತತ್ವಕ್ಕೆ ತಿಲಾಂಜಲಿಯನ್ನು ಕೊಟ್ಟು, ಗಾಳಿಗೋಪುರ ಮಾಡಿ ಅಧಿಕಾರಕ್ಕೆ ಅಂಟಿಕೊಂಡಿರತಕ್ಕ ಜನ ನೀವು ಅಂತ ತಮಗೆ ಕೆಟ್ಟ ಹೆಸರು ಬರುತ್ತದೆ, ಮತ್ತೆ ಪುನಃ 1967ನೇ ಇಸವಿಯಲ್ಲಿ ತಾವು ಚುನಾವಣೆಯನ್ನು ಎದುರಿಸಬೇಕಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Next Sri K. P. Revanasiddappa : Before he commences, I want to inform the Members that to-morrow's papers have been put in the pigeon holes. Let there be no controversy to-morrow.

†ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಈ ಪೋಲೀಸು ರಾಜ್ಯದಲ್ಲಿ ನಮ್ಮ ಸಮಾಜ ಕಲ್ಯಾಣ ಖಾತೆಯನ್ನು ಹೊತ್ತಿರುವ ಮಂತ್ರಿಗಳು ಸರಿಯಾಗಿ ಕೆಲಸಮಾಡಬೇಕೆಂಬ ಮನಸ್ಸುಳ್ಳವರಾಗಿದ್ದರೂ ಅವರ ಮಾರ್ಗದಲ್ಲಿ, ಕೆಲಸಕಾರ್ಯಗಳಲ್ಲಿ ಅಡ್ಡಿಆತಂಕಗಳನ್ನೊಡ್ಡುವುದು ಬಹಳವಾಗಿದೆ, ಇಂದು ಈ ಖಾತೆಗೆ ಮೀಸಲಾಗಿರುವ ಹಣದಲ್ಲಿ ಬಹುಭಾಗ ಸಂಬಳ ಸಾರಿಗೆಗೇ ಹೋಗುತ್ತಿದೆ, ಉಳಿದುದು ಕೆಲವು ಹಾಸ್ಟಲುಗಳಿಗೆ ಗ್ರಾಂಟು ಕೊಡುವುದು ಮುಂತಾದ ಕೆಲಸಗಳಿಗೆ ವಿನಿಯೋಗವಾಗುತ್ತಿದೆ. ಸಮಾಜ ಕಲ್ಯಾಣ ಶಾಖೆ ಎಂಬ ಹೆಸರಿದ್ದರೂ ಸಹ ಅಧಿಕಾರದಲ್ಲಿರುವವರು ಮಂತ್ರಿಮಂಡಲದಲ್ಲಿರುವ ಕೆಲವರು ರೈಟ್‌ಹ್ಯಾಂಡ್ ಮತ್ತು ಲೆಫ್ಟ್‌ಹ್ಯಾಂಡ್ ಎಂದು ಹೇಳುವ ಪಂಗಡದವರ ಹಾಸ್ಟಲುಗಳಿಗೆ ಫೌಂಡೇಷನ್ ಸ್ಟೋನ್ ಹಾಕುವುದರಿಂದ ಸಮಾಜ ಸುಧಾರಣೆಯಾಗುವುದಿಲ್ಲ, ಇದನ್ನು ನೋಡಿದರೆ ಬಹಳ ವಿಷಾದವಾಗುತ್ತದೆ.

ಶ್ರೀ ಜಿ. ದುಗ್ಗಪ್ಪ.—ಉದಾಹರಣೆ ಹೇಳಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಿಪಟೂರಿನಲ್ಲಿ ಆಸ್ತಿಭಾರ ಶಿಲೆ ಹಾಕಿರುವುದು ಬಿಸಿಲಿನಲ್ಲಿ ಒಣಗುತ್ತಿದೆ, ಕಟ್ಟಡ ಕಟ್ಟಲು ಗ್ರಾಂಟನ್ನು ಕೊಟ್ಟಿಲ್ಲ, ಬೇಕಾದರೆ ಕಲ್ಲನ್ನು ಕಿತ್ತುಕೊಂಡು ಬಂದು ತೋರಿಸುತ್ತೇನೆ. ಈ ರೀತಿ ಇದೆ. ನಮ್ಮ ದೇಶದಲ್ಲಿ ಕೆಲವು ಕುಡಿಯುವ ನೀರಿನ ಬಾವಿಗಳಿವೆ. ಆದರೆ ಆದರ ನೀರನ್ನು ಎಲ್ಲರೂ ಉಪಯೋಗಿಸಲು ಸಾಧ್ಯವಿಲ್ಲ. ದಲಿತವರ್ಗಕ್ಕೆ ಸೇರಿದ ಮೂರು ಮಂದಿ ಈಗ ಮಂತ್ರಿಮಂಡಲದಲ್ಲಿದ್ದಾರೆ, ಆವರು ಹೋಗಿ ಜನರಿಗೆ ಸಮಾಧಾನ ಹೇಳಿ ಎಲ್ಲರಿಗೂ ಅವಕಾಶವಿರುವಂತೆ ಮಾಡಬೇಕು. ನಾವೂ ಎಷ್ಟೋ ಪ್ರಯತ್ನಪಟ್ಟಿದ್ದೇವೆ. ಮಂತ್ರಿಗಳು ಹೋಗಿ ಸ್ವಲ್ಪ ಹೊಂದಾಣಿಕೆ ಮಾಡಿ ಸರಿಪಡಿಸುತ್ತಾರೆಂದು ನಂಬಿದ್ದೇನೆ. ನಿಜವಾಗಿಯೂ ಸಮಾಜ ಸುಧಾರಣೆಯಾಗಬೇಕಾದರೆ ಅತಿ ಬಡವನಿಗೂ ಕೂಡ ಮೊದಲು ರಕ್ಷಣೆ ದೊರೆಯಬೇಕು. ದೇಶದಲ್ಲಿ ಇವತ್ತಿನವರೆಗೆ ಖೂನಿ, ಕೊಲೆ, ದರೋಡೆ ಮುಂತಾದುವು ಎಷ್ಟಾಗಿವೆ, ಅದರಮೇಲೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರ ಎಂಬುದನ್ನು ಯೋಚನೆಮಾಡಬೇಕು. ಈ ಶಾಸನಸಭೆಯಲ್ಲಿ ಮಾತ

(ಶ್ರೀ ಕೆ. ಪಿ. ರೇವಣಸಿದ್ದಪ್ಪ)

ನಾಡಿದರೆ ಏನು ಪ್ರಯೋಜನವಿದೆ ಎಂದು ಯೋಚನೆಮಾಡಬೇಕಾಗಿದೆ. ಇಲ್ಲಿಗೆ ಸುಮಾರು 3 ವರ್ಷಗಳ ಕೆಳಗೆ ಈ ಶಾಸನಸಭೆಯಲ್ಲಿ ಒಬ್ಬ ಸಬ್-ಇನ್‌ಸ್ಪೆಕ್ಟರ ವಿಷಯ ಪ್ರಸ್ತಾಪಿಸಲ್ಪಟ್ಟಿತ್ತು. ಒಬ್ಬ ಉತ್ತಮ ಗೃಹಸ್ಥನಮೇಲೆ ಅತ್ಯಾಚಾರ ನಡೆಯುತ್ತಿದೆ ಎಂದು ಪೋಲೀಸಿನವರಿಗೆ ತಿಳಿಸಿದಮೇಲೆ ಅವರು ಸೂಕ್ತ ಕ್ರಮ ತೆಗೆದುಕೊಳ್ಳುವ ಸಂದರ್ಭದಲ್ಲಿ ಮಾನ್ಯ ಗೃಹ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಕೈಹಾಕಿ ಅದನ್ನು ನಿಲ್ಲಿಸಿದರು. ಹಿಂಸೆಗೆ ಗುರಿಯಾದ ಮನುಷ್ಯ ನಿಮಗೂ, ಸರಕಾರಕ್ಕೂ ಕಾಗದ ಬರೆದಿದ್ದಾನೆ, ಆತನಿಗೆ ಎರಡು ಮಕ್ಕಳಿವೆ, 30 ವರ್ಷ ವಯಸ್ಸಾಗಿದೆ, ಅಂಥ ಮನುಷ್ಯ ವಿಷ ತೆಗೆದುಕೊಂಡು ಪ್ರಾಣಬಿಡಬೇಕೇ ? ಇದನ್ನು ನೋಡಿದರೆ ಸರಕಾರ ದೇಶದಲ್ಲಿದೆ ಎಂದು ಭಾವಿಸಲು ಸಾಧ್ಯವೇ ? ಇದನ್ನು ಯೋಚನೆ ಮಾಡಬೇಕು. ಇವತ್ತಿಗೆ ಎಂಟು ದಿವಸಗಳಲ್ಲಿ ಇದೇ ಮಾತು ಹೇಳಿದೆ. ದೇಶದಲ್ಲಿ ಜನರಿಗೆ ನೈತಿಕ ರಕ್ಷಣೆ ಇಲ್ಲದಿದ್ದರೆ ಅವರ ಗತಿಯೇನು ! ಇದನ್ನು ನಾನು ಈ ಸಭೆಯಮುಂದೆ ಹೇಳ ಬೇಕೇ? ಈಗ ಪ್ರಾಣತತ್ತ ವ್ಯಕ್ತಿಗೆ 2 ವರ್ಷ ಮತ್ತು 4 ವರ್ಷ ವಯಸ್ಸಾಗಿರುವ ಇಬ್ಬರು ಮಕ್ಕಳಿದ್ದಾರೆ, ಅವರನ್ನು ನೋಡಿದರೆ ಸಂಕಟವಾಗುತ್ತದೆ. ಜನರಿಗೆ ತಮ್ಮ ಮಾನಮರ್ಯಾದೆ, ರಕ್ಷಣೆ ಮಾಡಿಕೊಳ್ಳಲು ಸಾಧ್ಯವಿಲ್ಲದಿದ್ದರೆ ಅವರೆಲ್ಲ ಹೋಗಬೇಕು ? ಪ್ರಾಣಬಿಟ್ಟ ಮನುಷ್ಯ ಎಲ್ಲರಿಗೂಕಾಗದ ಬರೆದಿದ್ದಾರೆ. ಅಂಥ ಕಷ್ಟ ಪ್ರಾಪ್ತವಾಗಿ ಆತ ಆತ್ಮಹತ್ಯೆ ಮಾಡಿಕೊಂಡ. ಅವರ ಮನೆಯವರ ಗತಿಯೇನು ! ಜನತೆಗೆ ಸರಿಯಾದ ರಕ್ಷಣೆ ಇಲ್ಲದಿದ್ದರೆ, ಅವರು ವಿಷ ಕುಡಿದು ಪ್ರಾಣ ಬಿಡಬೇಕಾಗಿ ಬಂದಮೇಲೆ ಇವರು ರಾಜ್ಯಭಾರ ಮಾಡಿದರೇನು ? ಬಿಟ್ಟರೇನು ? ಇನ್ನು ನಾನು ಮಾತನಾಡದೆ ಇಲ್ಲಿಗೇ ಸಾಕುಮಾಡುತ್ತೇನೆ.

†ಶ್ರೀಮತಿ ಯಶೋಧರ ದಾಸಪ್ಪ.—ಅಧ್ಯಕ್ಷರೇ, ಇದುವರೆವಿಗೂ ಈ ಸಭೆಯ ಮಾನ್ಯ ಸದಸ್ಯರು ಸಮಾಜ ಕಲ್ಯಾಣದ ವಿಚಾರವಾಗಿ ಅನೇಕ ಸಲಹೆ, ಸೂಚನೆ ಕೊಟ್ಟು ಟೀಕೆ ಸಹ ಮಾಡಿದ್ದಾರೆ. ಸಮಾಜ ಕಲ್ಯಾಣದಲ್ಲಿ ನಮ್ಮ ಇಲಾಖೆ ಯಾವರೀತಿಯಲ್ಲಿ ಜನಾಂಗದ ಸುಧಾರಣೆ ಮತ್ತು ಯಾವ ರೀತಿಯಲ್ಲಿ ಕಷ್ಟತಮವಾದ ಕೆಲಸವನ್ನು ಸಾಮಾನ್ಯ ಜನರ ಏಳಿಗೆಗಾಗಿ ಮಾಡುತ್ತಿದೆ ಎಂಬುದನ್ನು ಸರಿಯಾಗಿ ತಿಳಿಯದೆ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಕೋಟ್ಯಾಂತರ ರೂಪಾಯಿ ದೇಶದಲ್ಲಿ ವೆಚ್ಚವಾಗುತ್ತಿರುವಾಗ ಸಮಾಜ ಕಲ್ಯಾಣಕ್ಕಾಗಿ ಎಷ್ಟು ಹಣ ವೆಚ್ಚಮಾಡುತ್ತಿದ್ದೇವೋ ಅದರಲ್ಲಿ ಹೆಚ್ಚು ಭಾಗ ಸಿಬ್ಬಂದಿಗೇ ಖರ್ಚಾಗುತ್ತಿದೆ ಎಂಬುದು ಒಂದು ಟೀಕೆ, ಕೊಟ್ಟಿರುವ ಹಣ ಸರಿಯಾದ ರೀತಿಯಲ್ಲಿ ಜನರಿಗೆ ಸೇರುತ್ತಿಲ್ಲ ಎಂಬುದು ಎರಡನೆಯದು, ಹಣವೆಷ್ಟು ಖರ್ಚಾಗಬೇಕೋ ಅಷ್ಟನ್ನು ಮಾಡದೆ ಲ್ಯಾಪ್ಸ್ ಮಾಡುತ್ತಿದ್ದಾರೆ ಎಂಬುದು ಮತ್ತೊಂದು, ಹೀಗೆ ಟೀಕೆಮಾಡಿ ಈ ಖಾತೆಯಲ್ಲಿರುವ ಕೆಲವು ಇಲಾಖೆಗಳನ್ನು ಬೇರೆ ಯಾವುದಾದರೂ ಖಾತೆಗಾದರೂ ವರ್ಗಾಯಿಸಬೇಕು ಎಂದು ನಾನಾ ವಿಧವಾದ ಸೂಚನೆಗಳನ್ನು ಮಾಡಿದ್ದಾರೆ.

6–00 P.M.

ಸಮಾಜ ಕಲ್ಯಾಣದ ವಿಚಾರದಲ್ಲಿ ಅಂಕಿ ಅಂಶಗಳನ್ನು ನಾನು ಕೊಡುವುದಕ್ಕೆ ತಯಾರಾಗಿಲ್ಲ. ಏಕೆಂದರೆ ಮೂರು ನಾಲ್ಕು ತಿಂಗಳಿಗೊಮ್ಮೆ ಒಂದು ಬುಲೆಟಿನ್ ಹೊರಡಿಸುತ್ತೇವೆ. ಅದರ ಪ್ರತಿಗಳು ಈ ಮಾನ್ಯ ಸಭೆಯ ಸದಸ್ಯರೆಲ್ಲರಿಗೂ ಸೇರಿರಬೇಕು ಎಂದು ಕಾಣಿಸುತ್ತದೆ. ಈಗಾಗಲೇ ಮೂರು ಬುಲೆಟಿನ್‌ಗಳು ಹೊರಟಿವೆ. ಸಮಾಜ ಕಲ್ಯಾಣ ಏನು ಕೆಲಸ ಮಾಡುತ್ತಿದೆ, ನಮಗೆ ಕೊಟ್ಟಿರತಕ್ಕ ಹಣ ಹೇಗೆ ವಿನಿಯೋಗವಾಗುತ್ತಿದೆ, ಎಷ್ಟು ಕೇಂದ್ರಗಳನ್ನು, ಹಾಸ್ಟಲುಗಳನ್ನು, ಸ್ತ್ರೀಯರ ಕಲ್ಯಾಣ ಕೇಂದ್ರಗಳನ್ನು, ತೆರೆದಿದ್ದೇವೆ, ನಾವು ಏನು ಮಾಡುತ್ತಿದ್ದೇವೆ ಎನ್ನುವುದನ್ನೆಲ್ಲ ಇದರಲ್ಲಿ ಕೊಟ್ಟಿದೆ. ಇಷ್ಟೇ ಅಲ್ಲದೆ ಬಡ್ಜೆಟ್ ಭಾಷಣದಲ್ಲಿ ಕೂಡ ನಮ್ಮ ಹಣಕಾಸಿನ ಮಂತ್ರಿಗಳು ಎಷ್ಟೆಷ್ಟು ಕೆಲಸವಾಗಿದೆ ಎನ್ನುವುದನ್ನು ಸೂಚಿಸಿರುತ್ತಾರೆ. ಪದೇ ಪದೇ ಅದನ್ನೇ ಹೇಳುವುದಕ್ಕೆ ಇಷ್ಟ ಪಡದೆ ಮಾನ್ಯ ಸದಸ್ಯರು ಮಾಡಿರುವ ಕೆಲವು ಟೀಕೆಗಳಿಗೆ ಉತ್ತರ ನಮ್ಮ ಪಾಲಿಸಿ ಮ್ಯಾಟರ್ ಏನಿದೆ, ಸರ್ಕಾರ ಯಾವರೀತಿ ಸಮಾಜ ಕಲ್ಯಾಣದ ಅಭಿವೃದ್ಧಿಯನ್ನು ಮಾಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎನ್ನುವುದರಲ್ಲಿ, ಕೆಲವನ್ನು ಮಾತ್ರ ಸಭೆಯ ಮುಂದೆ ಇಡುವುದಕ್ಕೆ ಬಯಸುತ್ತೇನೆ.

ಸಲಹಾ ಸಮಿತಿಗಳು ಎಂದು ಏನು ಮಾಡಿದೆವೋ ಅವು ಬಹಳ ಸೇರಬೇಕಾಗಿತ್ತು, ಸೇರಲಿಲ್ಲ ಎಂದು ಕೆಲವರು ಹೇಳಿದರು. ಇನ್ನು ಕೆಲವರು ಹೇಳಿದರು ಸ್ಕಾಲರ್‌ಷಿಪ್ಸ್ ಜಾಗ್ರತೆಯಾಗಿ ಮಕ್ಕಳ ಕೈ ಸೇರಲಿಲ್ಲ ಎಂದು. ಹಣ ಕೂಡ ಸರಿಯಾದ ವೇಳೆಗೆ ಇಲ್ಲಿಂದ ಕಳಿಸುತ್ತಿಲ್ಲ ಎಂದು ಕೆಲವರು ಹೇಳಿದರು. ಈ ಎಲ್ಲ ವಿಚಾರಗಳನ್ನೂ ಅಂಕಿ ಅಂಶಗಳೊಡನೆ ನಾನು ತಿಳಿಸುತ್ತೇನೆ. ಯಾವಾಗ, ಹೇಗೆ ನಮ್ಮ ಇಲಾಖೆಯಿಂದ ಹೊರಟಿತು, ಅದು ಯಾವ ರೀತಿ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ

ಮಟ್ಟದಲ್ಲಿ ವಿಲೇವಾರಿ ಆಯಿತು ಅದಕ್ಕೆ ಯಾರು ಯಾರು ಕಾರಣಕರ್ತರು ಎಂದು ಸದಸ್ಯರು ಟೀಕೆ ಮಾಡಿದ್ದೂ ಸರಿ, ಅವರು ಕೇಳುವುದೂ ಸರಿ. ಈ ಸಮಾಜ ಕಲ್ಯಾಣ ಒಬ್ಬ ಮಂತ್ರಿಗಳಿಂದ, ಕೆಲವು ಸಿಬ್ಬಂದಿಯಿಂದ ಆಗುವ ಕೆಲಸವಲ್ಲ ಎನ್ನುವುದನ್ನು ತಾವೆಲ್ಲರೂ ಮನಗಾಣಬೇಕು. ಹಣ ಸರ್ಕಾರ ದಿಂದ ಹೊರಟ ಕೂಡಲೇ ಆ ಹಣ ಬೆನಿಫಿಷಿಯರೀಸ್‌ಗೆ ಸರ್ವರಿಗೂ ಎಷ್ಟು ಸಿಬ್ಬಂದಿಯನ್ನು ಇಟ್ಟಿದ್ದರೂ ಕೂಡ ಸರಿಯಾದ ರೀತಿಯಲ್ಲಿ ವಿಲೇವಾರಿ ಆಗುತ್ತ ಇಲ್ಲ ಎಂದು ತಿಳಿಸಬೇಕಾಗಿದೆ. ಯಾವ ಕಾರಣ ದಿಂದ ಈ ರೀತಿ ಆಗುತ್ತಿದೆ ಎನ್ನುವುದನ್ನು ತಾವೂ ಎಲ್ಲರೂ ಆಲೋಚಿಸಬೇಕು. ಹಣ ಮಂಜೂ ರಾಗಿದೆ, ಅದನ್ನು ಖರ್ಚು ಮಾಡಬೇಕು, ಲ್ಯಾಪ್ಸ್ ಆಗಬಾರದು, ಯಾವುದಾದರೂ ರೀತಿಯಲ್ಲಿ ಹಣ ವನ್ನು ಜಾಗ್ರತೆಯಾಗಿ ವಿಲೇವಾರಿ ಮಾಡಬೇಕು ಎನ್ನುವುದು ನಮ್ಮ ಸರ್ಕಾರದ ನೀತಿಯಲ್ಲ. ಸರಿ ಯಾದ ರೀತಿಯೊಳಗೆ ಖರ್ಚಾಗಬೇಕು, ಯಾವುದು ಬಹು ಮುಖ್ಯವೋ ಅದಕ್ಕೆ ಹಣವನ್ನು ಖರ್ಚು ಮಾಡಬೇಕು, ಇದನ್ನೆಲ್ಲ ಬಹಳ ಯೋಚನೆ ಮಾಡಿ, ವಿಮರ್ಶೆ ಮಾಡಿ ಹಣವನ್ನು ಖರ್ಚು ಮಾಡು ತ್ತಿದ್ದೇವೆ. ಆದರಲ್ಲಿ ಲವಲೇಶವೂ ಅಪನಂಬಿಕೆ ಬೇಡ. ಹಣ ಲ್ಯಾಪ್ಸ್ ಆದರೆ ಅದು ಖಜಾನೆಯಲ್ಲಿ ರುತ್ತದೆ. ಒಂದು ವೇಳೆ ಕೊಟ್ಟಿರುವ ಎರಡು ಕೋಟಿ ರೂಪಾಯಿ ಲ್ಯಾಪ್ಸ್ ಆಗಿದ್ದರೂ ಕೂಡ ಮುಖ್ಯ ಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಇಬ್ಬರೂ ಇಲ್ಲಿದ್ದಾರೆ, ಯಾವ ಸಂಸ್ಥೆಗೆ ಹಣ ಬೇಕು ಎಂದು ಕೇಳಿದರೂ ಒದಗಿಸುವುದಕ್ಕೆ ಸಿದ್ಧವಾಗಿದ್ದೇವೆ. ಪ್ಲಾನ್‌ನಲ್ಲಾಗಲೀ, ನಾನ್ ಪ್ಲಾನ್ ಸ್ಕೀಂನಲ್ಲಾಗಲೀ, ನಾವು ಈ ಹಿಂದುಳಿದ ಜನಾಂಗದ ಏಳಿಗೆಗೋಸ್ಕರ ಯಾವ ಸಂದರ್ಭ ದಲ್ಲಾದರೂ ಕೂಡ ಹಣ ಸರಿಯಾದ ರೀತಿಯಲ್ಲಿ ವಿಲೇವಾರಿಯಾಗುವಂತೆ ಯೋಜನೆಗಳನ್ನು ಹಾಕಿ ಕೊಂಡು ಅದನ್ನು ಅಚ್ಚುಕಟ್ಟಿನಿಂದ ಸರ್ಕಾರ ನಡೆಸತಕ್ಕ ರೀತಿ ಬಂದ ಕೂಡಲೇ ಆ ಹಣ ಎಲ್ಲ ಕಡೆಗೂ, ಎಲ್ಲ ರೀತಿಯಲ್ಲೂ ಸುಧಾರಣೆಗೆ ಹೋಗಬೇಕು ಎನ್ನುವ ಸಂಪೂರ್ಣ ನಂಬಿಕೆ ಸರ್ಕಾರಕ್ಕೆ ಇದೆ, ಅದೇ ರೀತಿಯಿಂದ ನಡೆಯುತ್ತದೆ.

ವಿದ್ಯಾಭ್ಯಾಸಕ್ಕೆ ಹೆಚ್ಚು ಹಣ ಖರ್ಚಾಗಬೇಕು, ಅದು ಕಡಮೆಯಾಗಬಾರದು. ಯಾವ ಜನಾಂಗವೇ ಆಗಲಿ ಅದಕ್ಕೆ ಸರಿಯಾದ ವಿದ್ಯಾಭ್ಯಾಸ ಆಗದೆ ಹೋದರೆ ಆ ಜನಾಂಗ ಏಳಿಗೆಗೆ ಬರುವು ದಿಲ್ಲ. ಆದುದರಿಂದ ಮಕ್ಕಳಿಂದ ಹಿಡಿದು ದೊಡ್ಡವರವರೆಗೆ ಈ ಜನಾಂಗದ ಸೌಕರ್ಯ ಮತ್ತು ಸೌಲಭ್ಯ ಗಳನ್ನು ನೋಡಿಕೊಳ್ಳತಕ್ಕದ್ದು ಈ ಸಮಾಜ ಕಲ್ಯಾಣದ ಮುಖ್ಯ ಕರ್ತವ್ಯ. ಸ್ತ್ರೀಯರ ಕಲ್ಯಾಣ ಕೇಂದ್ರಗಳು, ನರ್ಸರಿ ಶಾಲೆಗಳು, ಹಾಸ್ಟಲುಗಳು, ಇವನ್ನು ನಡೆಸುವುದಕ್ಕೆ ಇದರಲ್ಲಿ ಕೆಲವು ಜನ ಗಳನ್ನು ನೇಮಕ ಮಾಡಿಕೊಳ್ಳುತ್ತೇವೆ. ಒಬ್ಬಿಬ್ಬರು ತಪ್ಪಿ ನಡೆದ ಮಾತ್ರಕ್ಕೆ ಹಾಸ್ಟಲುಗಳನ್ನು ಮುಚ್ಚಿಬಿಡಿ, ಸ್ಕೂಲುಗಳನ್ನು ಮುಚ್ಚಿಬಿಡಿ, ಅವುಗಳಿಗೆ ಹಣವನ್ನು ಖರ್ಚು ಮಾಡಬೇಡಿ ಎಂದರೆ ಹೇಗೆ ? ಯಾವ ಯೋಜನೆಯನ್ನು ಮಾಡಿದರೂ ಅದರಲ್ಲಿ ಕೆಲವು ಲೋಪದೋಷಗಳಿರುತ್ತವೆ. ಸ್ವಲ್ಪ ತಪ್ಪು ನಡೆದ ಮಾತ್ರಕ್ಕೆ ಆ ಯೋಜನೆಯೇ ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಸರಿಯಾದ ತರಪೇತು ಶಿಕ್ಷಣ ಕೊಡಬೇಕು. ಹಿಂದುಳಿದ ಜನಾಂಗದವರ ಸೇವೆ ಮಾಡತಕ್ಕ ಗುರಿಯನ್ನು ಆಫೀಸರಿಂದ ಹಿಡಿದು ಕೆಲಸಗಾರರವರೆಗೂ ಹೊಂದಿರಬೇಕು. ಇಲ್ಲವಾದರೆ ಈ ಸಮಾಜ ಮುಂದೆ ಬರ ವುದು ಬಹಳ ಕಷ್ಟ.

ಏಡೆಡ್ ಹಾಸ್ಟಲುಗಳಲ್ಲಿ ಅಡಿಗೆಯವರಿಗೆ 20 ರೂಪಾಯಿ ಕೊಡುತ್ತಾರೆ. ಸರ್ಕಾರದ ಹಾಸ್ಟಲುಗಳಲ್ಲಿ 60-70 ರೂಪಾಯಿ ಕೊಡುತ್ತಿದ್ದಾರೆ. ಏಡೆಡ್ ಹಾಸ್ಟಲ್‌ಗಳಲ್ಲಿರುವ ಬೇರೆ ಕೆಲಸಗಾರರಿಗೂ ಕಡಮೆ ಸಂಬಳವನ್ನು ಕೊಡುತ್ತಾರೆ. ಹೀಗಾದರೆ ಯಾವ ರೀತಿ ಮಕ್ಕಳನ್ನು ನೋಡಿಕೊಳ್ಳುತ್ತಾರೆ ಎನ್ನುವುದು ಸರ್ಕಾರದ ಗಮನದಲ್ಲಿದೆ.

ಹಾಸ್ಟಲುಗಳಲ್ಲಿರುವ ಹುಡುಗರಿಗೆ 15 ರೂಪಾಯಿ ಕೊಡುತ್ತಿದ್ದರು. ಅದನ್ನು 18ಕ್ಕೆ ಏರಿಸಲಾಯಿತು. ಈಗ 20 ರೂಪಾಯಿ ಮಾಡಿದ್ದೇವೆ. ಈಗಿನ ಆಹಾರ ಪರಿಸ್ಥಿತಿಯನ್ನು ನೋಡಿದರೆ ಇಷ್ಟೂ ಸಾಲದು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದ್ದರೂ ಕೂಡ ಹಣದ ಮುಗ್ಗಟ್ಟಿನಿಂದ ಸ್ವಲ್ಪ ತಡವಾಗಿದೆ. ಆದರೂ ಕೂಡ ಮಕ್ಕಳಿಗೆ ಸರಿಯಾದ ರೀತಿಯೊಳಗೆ ಆಹಾರ ವನ್ನು ಒದಗಿಸಬೇಕು, ಅವರಿಗೆ ಪೌಷ್ಟಿಕಾಂಶದ ಆಹಾರವನ್ನು ಕೊಡುವುದನ್ನೂ ನೋಡಿಕೊಳ್ಳ ಬೇಕು, ಇದು ನಮ್ಮ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಆದಷ್ಟು ಜಾಗ್ರತೆ ಮಾಡುವುದಕ್ಕೆ ಕೂಡ ತಯಾರಾಗಿದ್ದೇನೆ.

ಮೆರಿಟ್ ಸ್ಕಾಲರ್‌ಷಿಪ್ಸ್‌ಗಾಗಿ 55 ಲಕ್ಷ ರೂಪಾಯಿಗಳು ಕೊಡುತ್ತಿದ್ದುದನ್ನು ಹೋದ ಸಲ ಕಾರಣಾಂತರದಿಂದ ನಿಲ್ಲಿಸಿದರು. ಆದರೆ ಮಕ್ಕಳು ಬಹಳ ಚೆನ್ನಾಗಿ ಸ್ಫೂರ್ತಿಯಿಂದ ಓದಿ ವಿದ್ಯಾವಂತರಾಗಲು ಇದರಿಂದ ಅಡ್ಡಿಯಾದುದರಿಂದ ಅಲ್ಲಿ ಇಲ್ಲಿ ಸ್ವಲ್ಪ ಸರಿಮಾಡಿ ಒಂದು ಲಕ್ಷ ರೂಪಾಯಿಗಳವರೆಗೆ ಮಾಡಿ ಸ್ಕಾಲರ್‌ಷಿಪ್‌ಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮುಂದೆಯೂ ಕೂಡ ಅದೇ ರೀತಿ ನಡೆಸಿಕೊಂಡು ಹೋಗುತ್ತೇವೆ.

(ಶ್ರೀಮತಿ ಯಶೋಧರ ದಾಸಪ್ಪ)

ಸ್ಕಾಲರ್‌ಷಿಪ್‌ಗಳ ವಿಲೇವಾರಿಯಲ್ಲಿ ಸ್ವಲ್ಪ ಲೋಪದೋಷ ಇದೆ ಎಂದು ಹೇಳಿದರು. ನಿಜ. ಆಯಾ ಜನಾಂಗ ಹೆಚ್ಚು ಹೆಚ್ಚಾಗಿರತಕ್ಕ ಸ್ಥಳಗಳಲ್ಲಿ ಮಕ್ಕಳಿಗೆ ಮಿಡಲ್‌ಸ್ಕೂಲುಗಳಲ್ಲಿ 20 ಮತ್ತು ಹೈಸ್ಕೂಲುಗಳಲ್ಲಿ 10 ಹೀಗೆ, ಯಾರು ಬಹಳ ಚೆನ್ನಾಗಿ ವಿದ್ಯಾವಂತರಾಗಿರುತ್ತಾರೆಯೋ ಅಂಥವರಿಗೆ ಮೆರಿಟ್ ಸ್ಕಾಲರ್‌ಷಿಪ್‌ಗಳನ್ನು ಕೊಡಬೇಕೆಂದು ಮಾಡಿದ್ದೇವೆ.

ಸರ್ಕಾರಿ ಹಾಸ್ಟಲ್‌ನಲ್ಲಿರುವ ಮಕ್ಕಳಿಗೆ ಪುಸ್ತಕ, ಬಟ್ಟೆ ಕೊಡುತ್ತೇವೆ. ಏಡೆಡ್ ಹಾಸ್ಟಲ್‌ಗಳಿಗೆ ಇಷ್ಟು ಎಂದು ಒಂದು ಮೊಬಲಗನ್ನು ಕೊಡುತ್ತೇವೆ. ಇದರಿಂದ ಆ ಹಾಸ್ಟಲುಗಳಲ್ಲಿ ಮ್ಯಾನೇಜ್‌ಮೆಂಟ್ ಮಾಡುವುದು, ಕಷ್ಟವಾಗಬಹುದು. ಇಲ್ಲವೆಂದು ಹೇಳುವುದಿಲ್ಲ. ಆದರೆ ಎಲ್ಲರಿಗೂ ಕೂಡ ಒಂದೇ ಸಮನೆ ಮಾಡಬೇಕಾದರೆ ಎಷ್ಟು ಹಣ ಬೇಕಾಗುತ್ತದೆ ಎಂದು ಯೋಚಿಸಿ. ಏಡೆಡ್ ಹಾಸ್ಟಲ್‌ಗಳಲ್ಲಿ 100-150 ಹುಡುಗರಿಗೆ ಮೇಲ್ಪಟ್ಟು ಇದ್ದರೆ ಸರ್ಕಾರದಿಂದ ನಡೆಸುವ ಹಾಸ್ಟಲುಗಳಲ್ಲಿ 200ಕ್ಕೆ ಮೇಲ್ಪಟ್ಟು ಹುಡುಗರಿದ್ದಾರೆ. ಹಾಸ್ಟಲ್‌ಗಳೂ ಬೇಕಾದಷ್ಟಿವೆ. 80 ಮಕ್ಕಳನ್ನು ಹೆಚ್ಚಿಸಿದ್ದೇವೆ. ಈ ರೀತಿ ಪ್ರತಿಯೊಂದು ವಿಷಯದಲ್ಲಿಯೂ ಕೂಡ ಯಾವುದೇ ಕೆಲಸ ತೆಗೆದುಕೊಂಡರೂ ಹಾಗೆ ಬೇರೆ ಕಡೆ ಆಗಿಲ್ಲ. ಅಲ್ಲದೆ ಇಂಡಿಯಾ ದೇಶದಲ್ಲಿ ಎಲ್ಲಿಯೂ ಮಾಡದೆ ಇರತಕ್ಕ ಒಂದು ಎಂಪ್ಲಾಯ್‌ಮೆಂಟ್ ಸೆಲ್ ಡೈರೆಕ್ಟೊರೇಟ್ ಲೆವಲ್‌ನಲ್ಲಿ ಮಾಡಿದ್ದೇವೆ. ನೂರಕ್ಕೆ 18 ಭಾಗ ಈ ಜನಾಂಗಕ್ಕೆ ಸರಿಯಾದ ರೀತಿಯಲ್ಲಿ ದೊರೆಯುತ್ತಿಲ್ಲ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ಈ ಸೇಕಡಾವಾರು ಪ್ರಮಾಣ ದೊರೆಯುವವರೆಗೂ ಪ್ರತಿಯೊಂದು ಮಟ್ಟದಲ್ಲಿಯೂ ಕೂಡ ನಮ್ಮ ಡೈರೆಕ್ಟೊರೇಟ್ ಎಚ್ಚರಿಕೆಯಿಂದ ಇರಬೇಕೆಂದು ಹೇಳುತ್ತೇನೆ. ಈ ಬಗ್ಗೆ ಸೂಕ್ತ ನಿರ್ದೇಶನಗಳನ್ನು ಕೊಡುವುದಕ್ಕಾಗಿಯೇ ನಮ್ಮ ಡೈರೆಕ್ಟೊರೇಟ್‌ನಲ್ಲಿ ಎಂಪ್ಲಾಯ್‌ಮೆಂಟ್ ಸೆಲ್ ಒಂದನ್ನು ಮಾಡಿದ್ದೇವೆ. ಇಂಡಿಯಾ ಸರ್ಕಾರ ಕೂಡ ಅದಕ್ಕೆ ಮೆಚ್ಚುಗೆಯನ್ನು ತೋರಿಸಿದೆ. ಅಷ್ಟೇ ಅಲ್ಲ ನಮ್ಮ ಕೆಲಸದಲ್ಲಿ ಎಲ್ಲಿ ಲೋಪದೋಷ ಇದೆ, ಯಾವ ರೀತಿ ತಿದ್ದಿಕೊಳ್ಳಬೇಕು, ಯಾವ ಯೋಜನೆ ಜನಪ್ರಿಯವಾಗಿದೆ, ಯಾವುದನ್ನು ಮಾಡಿದರೆ ಆ ಜನಾಂಗ ಬಹಳ ತ್ವರಿತವಾಗಿ ಮುಂದೆ ಬರಬಹುದು ಎಂದು ಎವಾಲ್ಯುಯೇಟ್ ಮಾಡಿ ಆ ರೀತಿ ಸರ್ಕಾರ ನಡೆಯುತ್ತಿದೆ. ಈ ರೀತಿಯಿಂದ ಒಂದು ವ್ಯವಸ್ಥಿತ ರೀತಿಯಲ್ಲಿ ಹಣವನ್ನು ಖರ್ಚು ಮಾಡುತ್ತಾ ಇದ್ದೇವೆ. ವಿದ್ಯಾಭ್ಯಾಸದ ವಿಷಯ ಹೇಳಿದರು. ಮತ್ತು ಕುರಿ ಕೋಳಿ ವಿಚಾರ ಹೇಳಿದರು. ಹೌದು ? ಅದು ಮಾಯವಾಗಿದೆ. ನಾನು ಮುಚ್ಚುಮರೆ ಇಲ್ಲದೆ ತಮ್ಮ ಅವಗಾಹನೆಗೆ ತರಬೇಕಾಗಿದೆ. ಜಮೀನು ಕೊಟ್ಟಿದ್ದು ಪರಭಾರೆಯಾಗುತ್ತಿದೆ. ಅವರು ಮಾರುವುದು ಕಷ್ಟದ ದೆಸೆಯಿಂದ; ಅವರು ಕಷ್ಟದಿಂದ ಮಾರುವುದಕ್ಕೆ ತಯಾರಾಗಿದ್ದರೆ, ಅದನ್ನು ಕೊಂಡುಕೊಳ್ಳುವವರು ಎಷ್ಟರಮಟ್ಟಿಗೆ ಆಸಕ್ತರಾಗಿರುತ್ತಾರೆ ? ಇದು ಸರಿಯೆ ? ಇಂಥವರು ಇರುವವರೆಗೂ ಸಮಾಜ ಉದ್ಧಾರ ಮಾಡುವುದಕ್ಕೆ ಕಷ್ಟ. ಇಂಥ ಕೀಳು ಮನೋವ್ಯಕ್ತಿಯುಳ್ಳವರು ಸಮಾಜದಲ್ಲಿ ಒಂದೇ ಜನಾಂಗದಲ್ಲಿಲ್ಲ; ಹರಿಜನರೊಬ್ಬರಲ್ಲೇ ಇಲ್ಲ. ಇಡೀ ಮಾನವ ಜನಾಂಗದಲ್ಲಿ ಒಂದು ರೀತಿಯಿಂದ ಈ ರೋಗ ಸಾಂಕ್ರಾಮಿಕವಾಗಿ ಎಲ್ಲ ಕಡೆಯೂ ಹರಡಿದೆ. ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಹಣ ಕೊಟ್ಟಿದ್ದು ಪೋಲಾಗುತ್ತಿದೆ. ಮತ್ತೆ ಕೊಟ್ಟರೆ ಅದನ್ನು ಮಾರಿಬಿಡುತ್ತಾರೆ; ಜಮೀನು ಕೊಟ್ಟರೆ ಅದನ್ನು ಇಟ್ಟುಕೊಂಡು ರೂಢಿಸಿಕೊಳ್ಳುವುದಿಲ್ಲ. ಮನೆ ಕಟ್ಟುವುದಕ್ಕೆ ಮರ ಕೊಟ್ಟರೆ ಮಾರಿಬಿಡುತ್ತಾರೆ; ಮೊನ್ನೆತಾನೆ ಹುಣಸೂರಿನಲ್ಲಿ 200 ರೂಪಾಯಿ ಮರ ಕೊಟ್ಟರೆ, ವ್ಯಾಪಾರಸ್ಥರು ಹೋಗಿ ಬಡ ಹರಿಜನರಿಂದ ಅದನ್ನು ಕೊಂಡುಕೊಂಡಿದ್ದಾರೆ. ಸಮಾಜದಲ್ಲಿ ಎಷ್ಟು ದೋಷವಿದೆ, ಇದನ್ನು ಇಲ್ಲಿ ತಾವು ಭಾಷಣ ಮಾಡಿ ಈ ಮಂತ್ರಿಗೆ ಅವರ ಈ ವಯಸ್ಸಿನಲ್ಲಿ ತಿಳುವಳಿಕೆ ಕೊಡಲು ಹೇಳುತ್ತಾ ಇದ್ದೀರಿ. ಅವೆಲ್ಲಾ ನನಗೆ ಬಹಳ ಮಟ್ಟಿಗೆ ಗೊತ್ತಿದೆ. ಆದರೆ ಆ ದೋಷ ನಿವಾರಣೆಯಾಗುವುದಕ್ಕೆ ಜನರೂ, ಹೇಳುವವರೂ ಪ್ರಯತ್ನ ಮಾಡಬೇಕು. ಪಾನನಿರೋಧದ ವಿಚಾರ ಹೇಳಿದರು. ನನಗೆ ಮಹಾತ್ಮ ಗಾಂಧಿಯವರ ತತ್ವವನ್ನು ಕೂಡ ಈಗ ಬೋಧಿಸುತ್ತಾ ಇದ್ದಾರೆ. ನನಗೆ ಈ ವಯಸ್ಸಿನಲ್ಲಿ ನಿಮ್ಮಿಂದ ಬೋಧಿಸಿಕೊಳ್ಳುವ ಸುಯೋಗ ಲಭಿಸಿದ್ದು ನನಗೆ ಸಂತೋಷವೇ ? ಬಹಳ ಸಂತೋಷ, ಇಷ್ಟು ಒಳ್ಳೆಯ ತತ್ವಗಳು ನಿಮ್ಮ ಕಡೆಯಿಂದ ಬೋಧನೆಯಾಗುತ್ತಿದೆಯಲ್ಲಾ. ಅವುಗಳನ್ನೂ ಕೇಳಿಯೇ ಅಧ್ಯಕ್ಷರಲ್ಲಿ ಅರಿಕೆ ಮಾಡಿಕೊಂಡೆ; ಅವರು ನಿಯಮಿತ ಕಾಲಕ್ಕೆ ನನಗೆ ರಿಪ್ಲೈ ಪ್ರಾರಂಭ ಮಾಡಿ ಎಂದು ಅವರು ಅಪ್ಪಣೆ ಮಾಡಿದಾಗ, ನಾನು ಸದಸ್ಯರಿಗೆ ಇನ್ನೂ ಸ್ವಲ್ಪ ಸಮಯಕೊಡಿರಿ, ಎಲ್ಲರೂ ಮಾತನಾಡಲಿ, ಯಾರ್ಯಾರಿಂದ ಏನೇನು ತತ್ವಗಳು ಬರುತ್ತವೊ, ಅವುಗಳನ್ನು ಕೇಳೋಣ ಎಂದು ಹೇಳಿದೆ. ನಾನು ಹೇಳಿದ್ದನ್ನು ಅನುಷ್ಠಾನಕ್ಕೆ ತರುವುದಕ್ಕೆ ಸಿದ್ಧಳಿದ್ದೇನೆ. ತಾವು ಹೇಳಿದ ಹಾಗೆ ಮಾಡುವುದಕ್ಕೆ ಎಷ್ಟರ ಮಟ್ಟಿಗೆ ಸಿದ್ಧರಿದ್ದೀರಿ ಅನ್ನುವುದನ್ನು ನೋಡೋಣ. ಇದು ಎಲ್ಲಾ ಸುಲಭವಾಗಿ ಹೇಳಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಮ್ಮ ಹಿಂದುಗಡೆ ತಿರುಗಿನೋಡಿ ಹೇಳಿ.

ಶ್ರೀಮತಿ ಯಶೋಧರ ದಾಸಪ್ಪ.—ನಾನು ಯಾವಾಗಲೂ ಹಿಂದೆ ನೋಡುವ ವ್ಯಕ್ತಿಯಲ್ಲ. ನಾನು ಯಾವಾಗಲೂ ಮುಂದೆ ನೋಡುತ್ತಿರುತ್ತೇನೆ. ಹಿಂದೆ ನೋಡಬಾರದು. ನಾವು ಇನ್ನೊಬ್ಬರಲ್ಲಿ ದೋಷ ಕಂಡುಹಿಡಿಯಬೇಕಾದರೆ, ನಾವು ಒಂದು ಶ್ರೇಷ್ಠ ನೈತಿಕ ಮಟ್ಟದಲ್ಲಿರಬೇಕು. ಇನ್ನೊಬ್ಬನ ದೋಷ ಕಂಡುಹಿಡಿಯುವುದಕ್ಕೆ ಮನುಷ್ಯನಲ್ಲಿ ಅಸಾಧ್ಯವಾದ ಪ್ರಾಮಾಣಿಕತೆ, ಶಕ್ತಿ ಇರಬೇಕು. ಅದಿಲ್ಲದೆ, ಸಾಮಾನ್ಯ ವ್ಯಕ್ತಿಗಳು ಇನ್ನೊಬ್ಬರನ್ನು ಮನಸ್ಸಿಗೆ ಬಂದಹಾಗೆ ಟೀಕೆ ಮಾಡಿದರೆ, ಅದರ ಪರಿಣಾಮ ಏನಾಗುತ್ತದೆ ಎಂದು ಯೋಚಿಸುವುದಕ್ಕೆ ಕೂಡ ಬಹಳ ಭಯವಾಗುತ್ತದೆ.

ಈ ಜನತೆಯ ಏಳಿಗೆಗೋಸ್ಕರವಾಗಿ ನಾವು ಎಷ್ಟರಮಟ್ಟಿಗೆ ಒಂದು ಯೋಜನೆಯನ್ನು ಹಾಕಿಕೊಂಡು, ಅದನ್ನು ಸಾಧಿಸಲು ಏನೇನು ಕ್ರಮವನ್ನು ತೆಗೆದುಕೊಂಡಿದ್ದೇವೆ ಅನ್ನುವುದನ್ನು ದಯೆಯಿಟ್ಟು ತಿಳಿದುಕೊಳ್ಳಬೇಕು. ಇವತ್ತಿನ ದಿವಸ ಈ ಡೈರೆಕ್ಟೊರೇಟಿನಲ್ಲಿ, ಮತ್ತು ನಮ್ಮ ಸೆಕ್ರೆಟೇರಿಯೇಟ್ಟಿನಲ್ಲಿ 15 ದಿವಸಕ್ಕೆ, ತಿಂಗಳಿಗೆ ಯಾವ ರೀತಿ ಕೆಲಸವನ್ನು ಜಾಗ್ರತೆಯಾಗಿ ಮಾಡಬೇಕು ಎಂದು ವಿಮರ್ಶಿಸಿ, ಈ ಜನಗಳಿಗೆ ಅನುಕೂಲತೆಗಳನ್ನು ಬಹು ಶೀಘ್ರದಲ್ಲಿ ಒದಗಿಸಲು ಯೋಚನೆ ಮಾಡಿದ್ದೇವೆ. ಈಗ ಸ್ಕಾಲರ್‌ಷಿಪ್ ವಿಚಾರ ಹೇಳಿದರು ಮುಚ್ಚುಮರೆ ಇಲ್ಲದೆ ಹೇಳುತ್ತೇನೆ. ಈ ಅದರ್ ಬ್ಯಾಕ್‌ವರ್ಡ್ ಕ್ಲಾಸುಗಳವರು ಸರಿಯಾಗಿ ಸರ್ಟಿಫಿಕೇಟುಗಳನ್ನು ಕಳುಹಿಸುದಿರುವುದರಿಂದ ಒಂದೊಂದು ಸಲ ನಿಧಾನವಾಗಿದೆ. ಸರಿಯಾದ ಸರ್ಟಿಫಿಕೇಟುಗಳನ್ನು ತರದೆ ಹೋದರೆ, ತೆಗೆದುಕೊಂಡು ಬರುವವರೆಗೆ ವಿಲೇವಾರಿ ಮಾಡುವುದಕ್ಕಾಗುವುದಿಲ್ಲ. ಈ ಕಾರಣದಿಂದ other backward classes ನಲ್ಲಿ ಮಾತ್ರ ಸ್ವಲ್ಪ ನಿಧಾನವಾಗಿರಬಹುದು. ಸರಿಯಾದ ಸರ್ಟಿಫಿಕೇಟು ತರದೆ ಇರುವಾಗ ಮಾತ್ರ ವಿಮರ್ಶೆ ಮಾಡಿ, ವಿಲೇವಾರಿಯಾಗುವುದರಲ್ಲಿ ನಿಧಾನವಾಗಿದೆ ಎಂದು ಹೇಳಬಹುದೇ ಹೊರತು ಸ್ಕಾಲರ್‌ಷಿಪ್ ಅವರಿಗೆ ತಲುಪಿಯೇ ಇಲ್ಲವೆಂದು ಹೇಳುವುದು ಸರಿಯಲ್ಲ.

ಇನ್ನು ಕೆಲವರು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ಗಳಿಗೆ ಕೊಟ್ಟಿರುವ ಹಣ ಎಷ್ಟೋ ಲ್ಯಾಪ್ಸ್ ಆಗಿ ಹೋಗಿದೆಯೆಂದು ಹೇಳಿದರು. ನಾನು ಅಂಕಿ ಅಂಶಗಳ ಆಧಾರದ ಮೇಲೆ ಹೇಳುತ್ತೇನೆ. ನಾನು ಸದಸ್ಯರು ಕಳುಹಿಸಿರುವ ಕಟ್ ಮೋಷನ್ನುಗಳನ್ನು ಸಂಗ್ರಹಿಸಿ, ಅವುಗಳ ಮೇಲೆ ಪಟ್ಟಿ ತಯಾರಿಸಿ, ಟೈಪ್ ಮಾಡಿದ ಒಂದು ಸ್ಟೇಟ್ ಮೆಂಟ್ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ಅದರ ಪ್ರಕಾರ ಎಲ್ಲಿಯೂ ಲೋಪದೋಷ ಕಂಡು ಬಂದಿಲ್ಲ. ಅದನ್ನು ಮುಚ್ಚಿಡುವುದಕ್ಕಾಗುವುದಿಲ್ಲ. ಡೆಪ್ಯುಟಿ ಕಮಿಷನರ ಮುಖಾಂತರ ಹಣ ಬರುತ್ತದೆ. ತಾಲ್ಲೂಕು ಮಟ್ಟದಲ್ಲಿ ಬಂದಾಗ, ತಾಲ್ಲೂಕು ಬೋರ್ಡು ಮೆಂಬರುಗಳು, ಬಿ.ಡಿ.ಓ. ಇವರು ಎಲ್ಲಾ ನಿಗಾ ವಹಿಸುತ್ತಾರೆ. ಈ ಇನ್‌ಸ್ಪೆಕ್ಟರುಗಳಿಂದ ಜನಗಳಿಗೆ ತುಂಬಾ ತೊಂದರೆಯಾಗಿವೆ ಎಂದೂ ಹೇಳಿದ್ದಾರೆ. ಆದರೆ ತಾಲ್ಲೂಕು ಬೋರ್ಡು ಮಟ್ಟದಲ್ಲಿಯೇ ಆಗಲಿ, ಇನ್ನಾವುದೇ ಮಟ್ಟದಲ್ಲಿಯೇ ಆಗಲಿ, ಜನಗಳಿಗೆ ಸಹಾಯ ಮುಟ್ಟುವ ರೀತಿಯಲ್ಲಿ ಒದಗಿಸಬೇಕಾದ್ದು ಎಲ್ಲರ ಕರ್ತವ್ಯ. ಮೂರನೇ ಯೋಜನೆಯಲ್ಲಿ 1961-62 ರಲ್ಲಿ 65 ಲಕ್ಷ ಸ್ಯಾಂಕ್ಷನ್ ಆಗಿದ್ದು 47 ಲಕ್ಷ ರೂಪಾಯಿ ಖರ್ಚಾಗಿದೆ. 1962-63 ರಲ್ಲಿ 70 ಲಕ್ಷ ಸ್ಯಾಂಕ್ಷನ್ ಆಗಿದ್ದು 72,79,000 ಖರ್ಚಾಗಿದೆ. 1963-64 ರಲ್ಲಿ 56 ಲಕ್ಷಕ್ಕೆ ಸುಮಾರು 55 ಲಕ್ಷ ಖರ್ಚಾಗಿದೆ. 1964-65 ರಲ್ಲಿ ಇಷ್ಟು ಲ್ಯಾಪ್ಸ್ ಆಗುವುದಕ್ಕೆ 4-5 ಸಾವಿರ ಲ್ಯಾಪ್ಸ್ ಆಗಿದ್ದರೂ ಕೂಡ, ಮಕ್ಕಳಿಗೆ ಬಟ್ಟೆಬರೆ, ಹಾಸ್ಟಲ್ ಮುಂತಾದುದಕ್ಕೆ ಹಣ ಕೊಡಬೇಕೆಂದು ಹೇಳಿದ್ದೇವೆ. ಅಲ್ಲಿ ಇಲ್ಲಿ ಲ್ಯಾಪ್ಸ್ ಬಂದ ಹಣವನ್ನು ಮೆರಿಟ್ ಸ್ಕಾಲರ್‌ಷಿಪ್ ಕೊಡುವುದಕ್ಕೆ, ಮಕ್ಕಳಿಗೆ ಬಟ್ಟೆ ಬರೆ ತೆಗೆದುಕೊಳ್ಳುವುದಕ್ಕೆ ಕೊಡುತ್ತಾರೆ. ಹಣ ಲ್ಯಾಪ್ಸ್ ಆಗದ ಹಾಗೆ ನೋಡಿಕೊಳ್ಳಬೇಕೆಂದು ಇಲಾಖೆಗೆ ಹೇಳಿದೆ.

ಈ ಆಫೀಸರುಗಳಿಗೆ ಕೂಡ ಟ್ರೇನಿಂಗ್ ಇರಬೇಕೆಂದು ಹೇಳಿ ಯೋಚನೆ ಮಾಡಿ, ಅದನ್ನು ಏರ್ಪಾಡು ಮಾಡಲು ಗವರ್ನ್‌ಮೆಂಟ್ ಆಫ್ ಇಂಡಿಯಾರವರ ಅಪ್ಪಣೆ ಕಾಯುತ್ತಾ ಇದ್ದೇವೆ. ಒಂದು ರಿಸರ್ಚ್ ಸೆಂಟರ್ ಕೂಡ ಮೈಸೂರಿನಲ್ಲಿ ಪ್ರಾರಂಭ ಮಾಡಬೇಕೆಂಬ ಸ್ಕೀಮು ಪರಿಶೀಲನೆಯಲ್ಲಿದೆ. ನಮ್ಮ ಆಫೀಸರುಗಳು ಯಾರೇ ಆಗಿರಲಿ, ಎಲ್ಲಿಂದಲೇ ಬಂದರೂ ಕೂಡ ಅವರು ಅವರ ಹೊಸ ಕೆಲಸಕ್ಕೆ, ವಾತಾವರಣಕ್ಕೆ ಹೊಂದಿಕೊಳ್ಳುವುದಕ್ಕೆ ಒಂದು ಶಿಕ್ಷಣ ಯಾವ ರೀತಿಯಲ್ಲಿ ಕೊಡಬೇಕು, ಕೆಲಸ ಸರಿಯಾಗಿ ಮಾಡಲು ಒಂದು ರಿಫ್ರೆಷರ್ ಕೋರ್ಸು ತೆಗೆಯಬೇಕು ಅನ್ನುವುದು ಇಲಾಖೆಯ ಗಮನದಲ್ಲಿ ಇದೆ.

ಈ ಜನಾಂಗದ ಆರ್ಥಿಕಾಭಿವೃದ್ಧಿ ವಿಚಾರ ಹೇಳಿದರು. ಗೌರಿಬಿದನೂರಿನಲ್ಲಿ ಒಂದು ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್ ಪ್ರಾರಂಭ ಮಾಡಿದ್ದೇವೆ. ಅದೇ ರೀತಿಯಾಗಿ ಮಂಗಳೂರಿನಲ್ಲಿ ಒಂದು ಹುಬ್ಬಳ್ಳಿಯಲ್ಲಿ ಒಂದು ಮಾಡಬೇಕೆಂದು ಪ್ರಯತ್ನ ಮಾಡಿದ್ದೇವೆ. ಕಾಯರ್ ಇಂಡಸ್ಟ್ರಿ ನಾಲ್ಕು

(ಶ್ರೀಮತಿ ಯಶೋಧರ ದಾಸಪ್ಪ)

ನೋಡಲಾಗಿದೆ. ಇವರಿಗೆ ಯಾವ ಕಾಲೋನಿಗಳೂ ಇರಲಿಲ್ಲ. ಈಗ ಅವರು ಇರುವ ಜಾಗದಲ್ಲಿ ಎಷ್ಟು ಅನುಕೂಲಗಳನ್ನು ಅವರಿಗೆ ಕಲ್ಪಿಸಿಕೊಡಬಹುದೋ ಅದನ್ನು ಮಾಡುತ್ತಿದ್ದೇವೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅವರಿಗೆ ಎಲ್ಲಾ ಅನುಕೂಲಗಳೂ ದೊರೆಯುತ್ತವೆ. ಈಗ ಬೆಂಗಳೂರಿನಲ್ಲಿ ಟ್ರಸ್ಟ್ ಬೋರ್ಡಿನವರಿಂದ 70 ಸಾವಿರ ರೂಪಾಯಿಗಳಿಗೆ ಸೈಟುಗಳನ್ನು ಪಡೆದು ಅವರಿಗೆ ಎರಡು ಹಾಸ್ಟಲುಗಳನ್ನು ಕಟ್ಟಿದ್ದೇವೆ. ಅವುಗಳಲ್ಲಿ 4-5 ಅಂತಸ್ತುಗಳಿವೆ. ಅದಕ್ಕೆ ಸುಮಾರು 5 ಲಕ್ಷ ರೂಪಾಯಿಗಳು ಖರ್ಚಾಗಿದೆ. ಒಂದು ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್‌ಮಾಡಿ ಆ ಜನಾಂಗದ ಮಕ್ಕಳಿಗೆ ಕೈಗಾರಿಕಾ ಶಿಕ್ಷಣವನ್ನು ಕೊಡಲು ಹೆಚ್ಚಿನ ಸೌಲಭ್ಯವನ್ನು ಒದಗಿಸುತ್ತಿದ್ದೇವೆ. ಈ ರೀತಿ ಪ್ರತಿಯೊಂದು ವಿಷಯದಲ್ಲಿಯೂ ಕೂಡ ಎಲ್ಲಾ ಮಾನ್ಯ ಸದಸ್ಯರೂ ಈ ಇಲಾಖೆಯ ವಿಷಯದಲ್ಲಿ ಮಾಡಿರತಕ್ಕ ಟೀಕೆಗಳಿಗೆ ನಾನು ಉತ್ತರ ಕೊಟ್ಟಿದ್ದೇನೆ ಎಂದು ನಾನು ನಂಬಿದ್ದೇನೆ. ನಾವು ಈ ಇಲಾಖೆಯಲ್ಲಿ ಮಾಡಿರತಕ್ಕ ಪ್ರತಿಯೊಂದು ಕೆಲಸಕಾರ್ಯವೂ ಕೂಡ ನಮ್ಮ ಇಲಾಖೆಯಿಂದ ಹೊರಡಿಸತಕ್ಕ ನಾಲ್ಕನೆಯ ಬುಲೆಟಿನ್‌ನಲ್ಲಿ ಬರುತ್ತದೆ.

ಇನ್ನು ಬಿಜಾಪುರದಲ್ಲಿರತಕ್ಕ ಸೆಟ್ಲ್‌ಮೆಂಟ್ ಏರಿಯಾವನ್ನು ಮುಚ್ಚಬೇಕು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಅದನ್ನು ನಾವು ಮುಚ್ಚುವುದಿಲ್ಲ. ಅದನ್ನು ಸರಿಯಾದ ರೀತಿಯಲ್ಲಿ ನಡೆಸಬೇಕೆಂದು ನಮ್ಮ ಉದ್ದೇಶ ಇದೆ. ಅದೂ ಅಲ್ಲದೆ ಅದು ಚೀಫ್‌ಇನ್ಸ್‌ಪೆಕ್ಟರ್ ಆಫ್ ಸರ್ಟಿಫೈಯ್ಡ್ ಸ್ಕೂಲ್ಸ್ ಅವರ ಕೈಕೆಳಗೆ ಇದೆ.

ಇನ್ನೊಂದು ವಿಷಯವೇನೆಂದರೆ, ಹೆಣ್ಣು ಮಕ್ಕಳ ವಿಷಯದಲ್ಲಿ ಯಾವ ಮಾನ್ಯ ಸದಸ್ಯರೂ ಸಹ ಮಾತನಾಡಲಿಲ್ಲ. ಇದು ಬಹಳ ವಿಷಾದಕರ. ಮಾನ್ಯ ಸದಸ್ಯರಾದ ಗೋಪಾಲಸ್ವಾಮಿ ಅವರು ಹೇಳಿದರು ತಪ್ಪಿತಸ್ಥರಾದ ಹೆಣ್ಣುಮಕ್ಕಳನ್ನು ರಿಮ್ಯಾಂಡ್ ಹೋಮಿನಲ್ಲಿ ಇಡುವುದಕ್ಕಿಂತ ಜೈಲಿಗೆ ಕಳುಹಿಸಿಬಿಡಿ ಎಂದು. ಸಮಾಜದಲ್ಲಿ ಕಷ್ಟಗಳಿಗೆ ಒಳಗಾಗಿ ಯಾವ ಯಾವ ಕಾರಣದಿಂದಲೋ ಆ ಸ್ಥಿತಿಯಲ್ಲಿರುವವರನ್ನು ತಪ್ಪಿತಸ್ಥರು ಎಂದು ಹೇಳಿ, ಅವರನ್ನು ತಪ್ಪಿತಸ್ಥರ ಸ್ಥಾನದಲ್ಲಿ ನಿಲ್ಲಿಸಿ ಅವರನ್ನು ಜೈಲಿಗೆ ಕಳುಹಿಸಬೇಕೆಂದು ಹೇಳಿದರೆ ಅದು ಸರಿಯಲ್ಲ. ಈಗ ಹೆಣ್ಣು ಮಕ್ಕಳು ಎಚ್ಚೆತ್ತಿದ್ದಾರೆ. ಹರಿಜನರು ಎಚ್ಚೆತ್ತಿದ್ದಾರೆ, ಗಿರಿಜನರು ಎಚ್ಚೆತ್ತಿದ್ದಾರೆ ಎಂಬುದನ್ನು ಯಾರೂ ಮರೆಯಬಾರದು. ಇವೊತ್ತು ಅವರಿಗೆ ಸ್ವಸಾಮರ್ಥ್ಯ ಬಂದಿದೆ. ಸಮಾಜದಲ್ಲಿ ಅವರು ಕೇವಲ ವೀಕರ್ ಸೆಕ್ಷನ್ ಆಗಿದ್ದಾರೆ ಎನ್ನುವ ದೃಷ್ಟಿಯಿಂದ ಅವರು ಆ ರೀತಿ ಹೇಳಿರಬಹುದೆಂದು ಕಾಣುತ್ತದೆ. ಈಗ ತಾವು ಅವರನ್ನು ವೀಕರ್ ಸೆಕ್ಷನ್ ಎಂದು ತಿಳಿದು ಕೊಂಡಿದ್ದೀರಿ, ಮುಂದೆ ಅವರು ಪ್ರಬಲವಾದ ಶಕ್ತರಾಗುತ್ತಾರೆ ಎಂಬುದನ್ನು ಯಾರೂ ಮರೆಯಬಾರದು. ಇವೊತ್ತು ಹರಿಜನರಿಗೆ ಕುಡಿಯುವುದು ಬೇಕಾಗಿಲ್ಲ. ಆದರೆ ಬೇರೆ ಜನಗಳಿಗೆ ಕುಡಿಯುವುದು ಬೇಕಾಗಿದೆ. ಇದನ್ನು ನೋಡಿ ಯಾವ ಜನ ಮುಂದುವರಿಯುತ್ತಿದ್ದಾರೆಂಬುದನ್ನು ಯೋಚನೆ ಮಾಡಬೇಕು.

6-30 P. M.

ಇಂತಹ ಜಾಡ್ಯಗಳಿಂದ ನಮ್ಮನ್ನು ಪಾರುಮಾಡಿ, ನಮ್ಮನ್ನು ರಕ್ಷಿಸಿ ಎಂದು ಅವರು ಕೋರುತ್ತಾ ಇರಬೇಕಾದರೆ, ಆ ಒಂದು ಸದ್ಗುಣದ ಕಡೆಗೆ ಮತ್ತು ಆ ಒಂದು ಸತ್ಕಾರ್ಯದ ಕಡೆಗೆ ಹೋಗುವ ಜನಾಂಗ ವೀಕರ್ ಸೆಕ್ಷನ್ ಎಂದು ಮಾನ್ಯ ಸದಸ್ಯರು ಕೆಲವರು ಏನು ತಿಳಿದುಕೊಂಡಿದ್ದಾರೋ ಅದು ತಪ್ಪು. ನಾನು ಆ ರೀತಿಯಲ್ಲಿ ತಿಳಿದುಕೊಂಡಿಲ್ಲ. ಮಹಾತ್ಮ ಗಾಂಧೀಜಿಯವರು ಯಾವಾಗ ಹರಿಜನರು ಎಂಬುದಾಗಿ ನಿಮ್ನವಂಗಡದವರಿಗೆ ಹೆಸರು ಇಟ್ಟರೋ ಆಗಲೇ ನಾನು ಅವರನ್ನು ದೇವರ ಮಕ್ಕಳು ಎಂಬುದಾಗಿ ತಿಳಿದಿದ್ದೇನೆ. ಇಂದಲ್ಲ, ನಾಳೆ ಅವರು ಸತ್ಪ್ರಜೆಗಳಾಗಿ ಬರುತ್ತಾರೆಂಬ ನಂಬಿಕೆ ನನಗೆ ಇದೆ. ಕೇವಲ 2-3 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಈ ಜನಾಂಗವನ್ನು ಉದ್ಧಾರಮಾಡುತ್ತೇವೆಂಬುದೇನೂ ದೊಡ್ಡಸ್ತಿಕೆಯಲ್ಲ. ಈ ಜನಾಂಗದವರ ತಿಳುವಳಿಕೆ ಮಟ್ಟ ಏರಬೇಕು ಎಂಬುದು ಅವರಿಗೆ ಗೋಚರವಾಗಬೇಕು. ಈಗಿನ ರೀತಿಯಲ್ಲಿ ಜೀವನ ನಡೆಸಿದರೆ ನಾವೂ ಕೂಡ ಸಮಾಜದಲ್ಲಿ ಒಂದು ಸ್ಥಾನವನ್ನು ಪಡೆಯುವುದಕ್ಕಾಗುತ್ತದೆ ಎಂಬುದನ್ನು ಅವರು ಮನಗಾಣಬೇಕು.

ಇನ್ನು ಸ್ಕಾಲರ್‌ಷಿಪ್ ಕೊಡುವ ವಿಚಾರದಲ್ಲಿ ಕೆಲವರು ಸಲಹೆಗಳನ್ನು ಕೊಟ್ಟಿದ್ದಾರೆ. ಕೇವಲ ಮಂತ್ರಿಗಳಿಂದ ಇದೆಲ್ಲಾ ನಡೆಯುವುದು ಎಂಬುದಾಗಿ ಹೇಳಿದರು. ನಾನು ಹೇಳುವುದಿಷ್ಟೆ: ಬ್ಯಾಕ್‌ವರ್ಡ್ ಕ್ಲಾಸಸ್ ವಿಚಾರದಲ್ಲಿ ಹಳ್ಳಿಗಳಿಂದ ಬೇಕಾದರೆ ಯಾರೋ ಸರ್ಟಿಫಿಕೇಟುಗಳನ್ನು

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಮ್ಮ ಹಿಂದುಗಡೆ ತಿರುಗಿನೋಡಿ ಹೇಳಿ.

ಶ್ರೀಮತಿ ಯಶೋಧರ ದಾಸಪ್ಪ.—ನಾನು ಯಾವಾಗಲೂ ಹಿಂದೆ ನೋಡುವ ವ್ಯಕ್ತಿಯಲ್ಲ. ನಾನು ಯಾವಾಗಲೂ ಮುಂದೆ ನೋಡುತ್ತಿರುತ್ತೇನೆ. ಹಿಂದೆ ನೋಡಬಾರದು. ನಾವು ಇನ್ನೊಬ್ಬರಲ್ಲಿ ದೋಷ ಕಂಡುಹಿಡಿಯಬೇಕಾದರೆ, ನಾವು ಒಂದು ಶ್ರೇಷ್ಠ ನೈತಿಕ ಮಟ್ಟದಲ್ಲಿರಬೇಕು. ಇನ್ನೊಬ್ಬನ ದೋಷ ಕಂಡುಹಿಡಿಯುವುದಕ್ಕೆ ಮನುಷ್ಯನಲ್ಲಿ ಅಸಾಧ್ಯವಾದ ಪ್ರಾಮಾಣಿಕತೆ, ಶಕ್ತಿ ಇರಬೇಕು. ಅದಿಲ್ಲದೆ, ಸಾಮಾನ್ಯ ವ್ಯಕ್ತಿಗಳು ಇನ್ನೊಬ್ಬರನ್ನು ಮನಸ್ಸಿಗೆ ಬಂದಹಾಗೆ ಟೀಕೆ ಮಾಡಿದರೆ, ಅದರ ಪರಿಣಾಮ ಏನಾಗುತ್ತದೆ ಎಂದು ಯೋಚಿಸುವುದಕ್ಕೆ ಕೂಡ ಬಹಳ ಭಯವಾಗುತ್ತದೆ.

ಈ ಜನತೆಯ ಏಳಿಗೆಗೋಸ್ಕರವಾಗಿ ನಾವು ಎಷ್ಟರಮಟ್ಟಿಗೆ ಒಂದು ಯೋಜನೆಯನ್ನು ಹಾಕಿಕೊಂಡು, ಅದನ್ನು ಸಾಧಿಸಲು ಏನೇನು ಕ್ರಮವನ್ನು ತೆಗೆದುಕೊಂಡಿದ್ದೇವೆ ಅನ್ನುವುದನ್ನು ದಯೆಯಿಟ್ಟು ತಿಳಿದುಕೊಳ್ಳಬೇಕು. ಇವತ್ತಿನ ದಿವಸ ಈ ಡೈರೆಕ್ಟೊರೇಟಿನಲ್ಲಿ, ಮತ್ತು ನಮ್ಮ ಸೆಕ್ರೆಟೇರಿಯೆಟ್ಟಿನಲ್ಲಿ 15 ದಿವಸಕ್ಕೆ, ತಿಂಗಳಿಗೆ ಯಾವ ರೀತಿ ಕೆಲಸವನ್ನು ಜಾಗ್ರತೆಯಾಗಿ ಮಾಡಬೇಕು ಎಂದು ವಿಮರ್ಶಿಸಿ, ಈ ಜನಗಳಿಗೆ ಅನುಕೂಲತೆಗಳನ್ನು ಬಹು ಶೀಘ್ರದಲ್ಲಿ ಒದಗಿಸಲು ಯೋಚನೆ ಮಾಡಿದ್ದೇವೆ. ಈಗ ಸ್ಕಾಲರ್‌ಷಿಪ್ ವಿಚಾರ ಹೇಳಿದರು ಮುಚ್ಚುಮರೆ ಇಲ್ಲದೆ ಹೇಳುತ್ತೇನೆ. ಈ ಅದರ್ ಬ್ಯಾಕ್‌ವರ್ಡ್ ಕ್ಲಾಸುಗಳವರು ಸರಿಯಾಗಿ ಸರ್ಟಿಫಿಕೇಟು ಗಳನ್ನು ಕಳುಹಿಸುದಿರುವುದರಿಂದ ಒಂದೊಂದು ಸಲ ನಿಧಾನವಾಗಿದೆ. ಸರಿಯಾದ ಸರ್ಟಿಫಿಕೇಟುಗಳನ್ನು ತರದೆ ಹೋದರೆ, ತೆಗೆದುಕೊಂಡು ಬರುವವರೆಗೆ ವಿಲೇವಾರಿ ಮಾಡುವುದಕ್ಕಾಗುವುದಿಲ್ಲ. ಈ ಕಾರಣದಿಂದ other backward classes ನಲ್ಲಿ ಮಾತ್ರ ಸ್ವಲ್ಪ ನಿಧಾನವಾಗಿರಬಹುದು. ಸರಿಯಾದ ಸರ್ಟಿಫಿಕೇಟು ತರದೆ ಇರುವಾಗ ಮಾತ್ರ ವಿಮರ್ಶೆ ಮಾಡಿ, ವಿಲೇವಾರಿಯಾಗುವುದರಲ್ಲಿ ನಿಧಾನವಾಗಿದೆ ಎಂದು ಹೇಳಬಹುದೇ ಹೊರತು ಸ್ಕಾಲರ್‌ಷಿಪ್ ಅವರಿಗೆ ತಲುಪಿಯೇ ಇಲ್ಲವೆಂದು ಹೇಳುವುದು ಸರಿಯಲ್ಲ.

ಇನ್ನು ಕೆಲವರು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸುಗಳಿಗೆ ಕೊಟ್ಟಿರುವ ಹಣ ಎಷ್ಟೋ ಲ್ಯಾಪ್ಸ್ ಆಗಿ ಹೋಗಿದೆಯೆಂದು ಹೇಳಿದರು. ನಾನು ಅಂಕಿ ಅಂಶಗಳ ಆಧಾರದ ಮೇಲೆ ಹೇಳುತ್ತೇನೆ. ನಾನು ಸದಸ್ಯರು ಕಳುಹಿಸಿರುವ ಕಟ್ ಮೋಷನ್ನುಗಳನ್ನು ಸಂಗ್ರಹಿಸಿ, ಅವುಗಳ ಮೇಲೆ ಪಟ್ಟಿ ತಯಾರಿಸಿ, ಟೈಪ್ ಮಾಡಿದ ಒಂದು ಸ್ಟೇಟ್‌ಮೆಂಟ್ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ಅದರ ಪ್ರಕಾರ ಎಲ್ಲಿಯೂ ಲೋಪದೋಷ ಕಂಡು ಬಂದಿಲ್ಲ. ಅದನ್ನು ಮುಚ್ಚಿಡುವುದಕ್ಕಾಗುವುದಿಲ್ಲ. ಡೆಪ್ಯುಟಿ ಕಮಿಷನರ ಮುಖಾಂತರ ಹಣ ಬರುತ್ತದೆ. ತಾಲ್ಲೂಕು ಮಟ್ಟದಲ್ಲಿ ಬಂದಾಗ, ತಾಲ್ಲೂಕು ಬೋರ್ಡು ಮೆಂಬರುಗಳು, ಬಿ.ಡಿ.ಓ. ಇವರು ಎಲ್ಲಾ ನಿಗಾ ವಹಿಸುತ್ತಾರೆ. ಈ ಇನ್ಸ್‌ಪೆಕ್ಟರುಗಳಿಂದ ಜನಗಳಿಗೆ ತುಂಬಾ ತೊಂದರೆಯಾಗಿದೆ ಎಂದೂ ಹೇಳಿದ್ದಾರೆ. ಆದರೆ ತಾಲ್ಲೂಕು ಬೋರ್ಡು ಮಟ್ಟದಲ್ಲಿಯೇ ಆಗಲಿ, ಇನ್ನಾವುದೇ ಮಟ್ಟದಲ್ಲಿಯೇ ಆಗಲಿ, ಜನಗಳಿಗೆ ಸಹಾಯ ಮುಟ್ಟುವ ರೀತಿಯಲ್ಲಿ ಒದಗಿಸಬೇಕಾದ್ದು ಎಲ್ಲರ ಕರ್ತವ್ಯ. ಮೂರನೇ ಯೋಜನೆಯಲ್ಲಿ 1961-62 ರಲ್ಲಿ 65 ಲಕ್ಷ ಸ್ಯಾಂಕ್ಷನ್ ಆಗಿದ್ದು 47 ಲಕ್ಷ ರೂಪಾಯಿ ಖರ್ಚಾಗಿದೆ. 1962-63 ರಲ್ಲಿ 70 ಲಕ್ಷ ಸ್ಯಾಂಕ್ಷನ್ ಆಗಿದ್ದು 72,79,000 ಖರ್ಚಾಗಿದೆ. 1963-64 ರಲ್ಲಿ 56 ಲಕ್ಷಕ್ಕೆ ಸುಮಾರು 55 ಲಕ್ಷ ಖರ್ಚಾಗಿದೆ. 1964-65 ರಲ್ಲಿ ಇಷ್ಟು ಲ್ಯಾಪ್ಸ್ ಆಗುವುದಕ್ಕೆ 4-5 ಸಾವಿರ ಲ್ಯಾಪ್ಸ್ ಆಗಿದ್ದರೂ ಕೂಡ, ಮಕ್ಕಳಿಗೆ ಬಟ್ಟೆಬರೆ, ಹಾಸ್ಟಲ್ ಮುಂತಾದುದಕ್ಕೆ ಹಣ ಕೊಡಬೇಕೆಂದು ಹೇಳಿದ್ದೇವೆ. ಅಲ್ಲಿ ಇಲ್ಲಿ ಲ್ಯಾಪ್ಸ್ ಬಂದ ಹಣವನ್ನು ಮೆರಿಟ್ ಸ್ಕಾಲರ್‌ಷಿಪ್ ಕೊಡುವುದಕ್ಕೆ, ಮಕ್ಕಳಿಗೆ ಬಟ್ಟೆ ಬರೆ ತೆಗೆದುಕೊಳ್ಳುವುದಕ್ಕೆ ಕೊಡುತ್ತಾರೆ. ಹಣ ಲ್ಯಾಪ್ಸ್ ಆಗದ ಹಾಗೆ ನೋಡಿಕೊಳ್ಳಬೇಕೆಂದು ಇಲಾಖೆಗೆ ಹೇಳಿದೆ.

ಈ ಆಫೀಸರುಗಳಿಗೆ ಕೂಡ ಟ್ರೇನಿಂಗ್ ಇರಬೇಕೆಂದು ಹೇಳಿ ಯೋಚನೆ ಮಾಡಿ, ಅದನ್ನು ಏರ್ಪಾಡು ಮಾಡಲು ಗವರ್ನ್‌ಮೆಂಟ್ ಆಫ್ ಇಂಡಿಯಾರವರ ಅಪ್ಪಣೆ ಕಾಯುತ್ತಾ ಇದ್ದೇವೆ. ಒಂದು ರಿಸರ್ಚ್ ಸೆಂಟರ್ ಕೂಡ ಮೈಸೂರಿನಲ್ಲಿ ಪ್ರಾರಂಭ ಮಾಡಬೇಕೆಂಬ ಸ್ಕೀಮು ಪರಿಶೀಲನೆಯಲ್ಲಿದೆ. ನಮ್ಮ ಆಫೀಸರುಗಳು ಯಾರೇ ಆಗಿರಲಿ, ಎಲ್ಲಿಂದಲೇ ಬಂದರೂ ಕೂಡ ಅವರು ಅವರ ಹೊಸ ಕೆಲಸಕ್ಕೆ, ವಾತಾವರಣಕ್ಕೆ ಹೊಂದಿಕೊಳ್ಳುವುದಕ್ಕೆ ಒಂದು ಶಿಕ್ಷಣ ಯಾವ ರೀತಿಯಲ್ಲಿ ಕೊಡಬೇಕು, ಕೆಲಸ ಸರಿಯಾಗಿ ಮಾಡಲು ಒಂದು ರಿಫ್ರೆಷರ್ ಕೋರ್ಸು ತೆಗೆಯಬೇಕು ಅನ್ನುವುದು ಇಲಾಖೆಯ ಗಮನದಲ್ಲಿ ಇದೆ.

ಈ ಜನಾಂಗದ ಆರ್ಥಿಕಾಭಿವೃದ್ಧಿ ವಿಚಾರ ಹೇಳಿದರು. ಗೌರಿಬಿದನೂರಿನಲ್ಲಿ ಒಂದು ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್ ಪ್ರಾರಂಭ ಮಾಡಿದ್ದೇವೆ. ಅದೇ ರೀತಿಯಾಗಿ ಮಂಗಳೂರಿನಲ್ಲಿ ಒಂದು ಹುಬ್ಬಳ್ಳಿಯಲ್ಲಿ ಒಂದು ಮಾಡಬೇಕೆಂದು ಪ್ರಯತ್ನ ಮಾಡಿದ್ದೇವೆ. ಕಾಯರ್ ಇಂಡಸ್ಟ್ರಿ ನಾಲ್ಕು

(ಶ್ರೀಮತಿ ಯಶೋಧರ ದಾಸಪ್ಪ)

ಕಡೆ ಪ್ರಾರಂಭ ಮಾಡಬೇಕೆಂದಿದ್ದೇವೆ. ಚನ್ನಪಟ್ಟಣದಲ್ಲಿ ಲ್ಯಾಕರ್ ವೇರ್ ಇಂಡಸ್ಟ್ರಿ ಮಾಡಿ, ಹರಿಜನ ಹೆಣ್ಣುಮಕ್ಕಳಿಗೆ ಸ್ಕಾಲರ್‌ಷಿಪ್ ಕೊಟ್ಟು, ಆಟದ ಸಾಮಾನುಗಳ ತಯಾರಿಕೆಯಲ್ಲಿ ಶಿಕ್ಷಣ ಕೊಡುತ್ತಾ ಇದ್ದೇವೆ. ಈ ಹೊಲಿಗೆ ಯಂತ್ರಗಳನ್ನು ಕೊಡುತ್ತಿರುವುದನ್ನು ಶ್ರೀ ಬೈರಪ್ಪಾಜಿಯವರು ಪ್ರಸ್ತಾಪ ಮಾಡಿ ಹೇಳಿದರು. ಹೊಲಿಗೆ ಯಂತ್ರಗಳನ್ನು ಮಾರಿಕೊಂಡಿದ್ದಾರೆಂದು ಹೇಳಿದರು. ಅದು ಇಲ್ಲ ಅಂತ ಹೇಳುವುದಿಲ್ಲ, ಕೆಲವು ಕಡೆ ಆಗಿದೆ. ಹೆಣ್ಣುಮಕ್ಕಳು ಹೊಲಿಗೆಯಲ್ಲಿ ಒಂದು ವರ್ಷ ಶಿಕ್ಷಣವನ್ನು ಪಡೆದ ನಂತರ, ಜೀವನ ನಡೆಸಬೇಕು ಅನ್ನುವುದು ಸರ್ಕಾರ ಘನ ಉದ್ದೇಶ. ಒಂದು ವೇಳೆ ಬಡತನದಿಂದ ಹೊಲಿಗೆ ಯಂತ್ರವನ್ನು ಮಾರುವುದಕ್ಕೆ ಅವರು ಬಂದರೆ, ಅದನ್ನು ತೆಗೆದುಕೊಳ್ಳುವುದಕ್ಕೆ ಮುಂದೆ ಬರುವವರು ಯಾರು ಎಂದು ಪುನಃ ಯೋಚನೆ ಮಾಡಿ. ಇಂಥ ಸಂದರ್ಭಗಳನ್ನೇ ಕಾಯ್ದುಕೊಂಡು, ಬಡವರನ್ನು ಶೋಷಿಸಿ, ಸಾಮಾನುಗಳನ್ನು ಸುಲಭ ರೀತಿಯಲ್ಲಿ ಲಪಟಾಯಿಸುವ ಜನಗಳು ಒಂದು ಕಡೆ ಇದ್ದಾರೆ; ಅವರನ್ನೆಲ್ಲಾ ಏನು ಮಾಡಬೇಕು ಅನ್ನುವುದನ್ನೂ ತಾವು ಯೋಚನೆ ಮಾಡಬೇಕು. ಮೊನ್ನೆತಾನೆ ಎರಡೆರಡು ಎಕರೆ ಗದ್ದೆಯನ್ನು ಈ ಜನಾಂಗದವರಿಗೆ ಕೊಟ್ಟರೆ, ಅದರ ಮೌಲ್ಯ ಕೊಡುವುದಕ್ಕೆ ಅವರ ಹತ್ತಿರ ಹಣವಿರಲಿಲ್ಲ; ಅದೇ ಸಮಯವನ್ನು ಕಾದು, ಆ ಹಣ ಬೇರೆಯವರು ಕೊಟ್ಟು, ಎರಡೆರಡು ಎಕರೆ ಗದ್ದೆಯನ್ನು ಅವರಿಂದ ತಾವು ಬರಸಿಕೊಂಡು ಬಿಟ್ಟಿದ್ದಾರೆ.

ಆದ್ದರಿಂದ ಸರ್ಕಾರದವರು ಅದನ್ನು ಪರಿಶೀಲನೆ ಮಾಡಿ ಆ ರೀತಿ ಜಮೀನು ತೆಗೆದುಕೊಳ್ಳುವವರಿಗೂ ಶಿಕ್ಷೆಯನ್ನ ವಿಧಿಸಬೇಕು, ಮತ್ತು ಕೊಟ್ಟವರಿಗೂ ಶಿಕ್ಷೆಯನ್ನ ವಿಧಿಸಬೇಕು. ಸಬ್ ರಿಜಿಸ್ಟ್ರಾರ್ ಅವರು ಹೇಳುತ್ತಾರೆ, ಎರಡು ಪಾರ್ಟಿಯವರೂ ಒಪ್ಪಿ ಹಣ ಕೊಟ್ಟು ರಿಜಿಸ್ಟ್ರೇಷನ್ನಿಗೆ ಅವರು ಸಬ್‌ರಿಜಿಸ್ಟ್ರಾರ್ ಅವರ ಆಫೀಸಿಗೆ ಬಂದರೆ ನಾವು ಅದನ್ನು ತಡೆ ಹಿಡಿಯುವುದಕ್ಕೆ ಕಾನೂನು ಇಲ್ಲ ಎಂದು. ಒಂದು ವೇಳೆ ಸರ್ಕಾರದವರು ಈ ಬಗ್ಗೆ ಒಂದು ಕಾನೂನನ್ನ ಮಾಡಿದರೆ ಅದು ಆಗ ಬಹುದು; ಎಂದು ಹೇಳುತ್ತಾರೆ. ಆದ್ದರಿಂದ ಜಮೀನು ಕೊಡುವವರಿಗೂ ಮತ್ತು ಅದನ್ನ ತೆಗೆದು ಕೊಳ್ಳುವವರಿಗೂ ಇಬ್ಬರಿಗೂ ಶಿಕ್ಷೆಯನ್ನ ವಿಧಿಸುವಂತಹ ಒಂದು ಕಾನೂನನ್ನ ಮಾಡಿ ಸರ್ಕಾರ ದವರು ಸಬ್‌ರಿಜಿಸ್ಟ್ರಾರ್ ಅವರ ಆಫೀಸಿಗೆ ಕಳುಹಿಸದೇ ಹೋದರೆ ಸರ್ಕಾರದವರು ಯಾರಿಗೆ ಜಮೀನು ಕೊಡುತ್ತಾರೆಯೋ ಅದು ಅವರಿಗೆ ಸಲ್ಲುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಹಾಸ್ಟಲುಗಳ ವಿಷಯದಲ್ಲಿ ಒಂದು ಸಂತೋಷದ ವಿಷಯ ಇದೆ. ಅದೇನೆಂದರೆ ಹಾಸ್ಟಲು ಗಳನ್ನು ಪ್ರಾರಂಭ ಮಾಡುವಾಗ ಇಂಥಾ ಜಾತಿಯವರಿಗೇ ಎಂದು ಜಾತಿಯ ಮೇಲೆ ಹಾಸ್ಟಲು ಗಳನ್ನು ಪ್ರಾರಂಭ ಮಾಡವುದು ಬೇಡ, ಜನರಲ್ ಹಾಸ್ಟಲ್ ಎಂದು ಪ್ರಾರಂಭ ಮಾಡಿ ಅದರಲ್ಲಿ ಎಲ್ಲಾ ಜಾತಿಯ ಜನಗಳಿಗೂ ಅವಕಾಶವನ್ನು ಕೊಡಬೇಕೆಂದು ಮಾಡಿದೆ. ಈ ವರ್ಷ ಸರ್ಕಾರದ ನೀತಿಯ ಪ್ರಕಾರ 14 ಜನರಲ್ ಹಾಸ್ಟಲುಗಳನ್ನ ಪ್ರಾರಂಭ ಮಾಡಬೇಕೆಂದು ಮಾಡಿದೆ. ಹಾಸ್ಟಲು ಗಳಿಗೆ ಹಣವನ್ನು ಕೊಡತಕ್ಕ ವಿಷಯದಲ್ಲಿ ಹರಿಜನರ ಹಾಸ್ಟಲುಗಳಿಗೇ 75 ಪರ್ಸೆಂಟು ಹಣವನ್ನು ಕೊಡಬೇಕೆಂದು 25 ಪರ್ಸೆಂಟ್ ಹಣವನ್ನು ಅದರ್ ಬ್ಯಾಕ್‌ವರ್ಡ್ ಕ್ಲಾಸಿನವರಿಗೆ ಕೊಡಬೇಕೆಂದು ಮಾಡಿದೆ. ಯಾವ ಹಾಸ್ಟಲನ್ನು ತೆಗೆದರೂ ಕೂಡ ಜನರಲ್ ಹಾಸ್ಟಲ್ ಎಂದು ತೆಗೆಯಬೇಕೆಂಬುದೇ ಸರ್ಕಾರದ ನೀತಿ ಆಗಿದೆ.

ಇನ್ನು ಅಸ್ಪೃಶ್ಯತೆಯನ್ನ ಹೋಗಲಾಡಿಸುವ ವಿಷಯದಲ್ಲಿ ಕೆಲವು ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದರು. ನಾವು ಅಸ್ಪೃಶ್ಯತೆಯನ್ನು ಹೋಗಲಾಡಿಸುವುದಕ್ಕಾಗಿ ಯಾವ ಹಳ್ಳಿಯ ಪಂಚಾಯಿತಿಯ ಬಾವಿಯಲ್ಲಾಗಲೀ ನೀರು ತೆಗೆದುಕೊಳ್ಳುವ ವಿಷಯದಲ್ಲಿ ಜನಗಳು ಅಸ್ಪೃಶ್ಯತಾ ಭಾವನೆಯನ್ನು ತೋರಿಸುವುದಿಲ್ಲವೋ ಅಂಥಾ ಹಳ್ಳಿಗಳಿಗೆ ಎಲ್ಲಾ ರೀತಿಯ ಸೌಲಭ್ಯವನ್ನೂ ಒದಗಿಸಲಾಗುತ್ತದೆ ಎಂದು ಸೂಚನೆಯನ್ನು ಕೊಡಲಾಗಿದೆ. ಮತ್ತು ಆ ಹಳ್ಳಿಗೆ 1,500 ರೂಪಾಯಿಗಳಿಂದ 2,500 ರೂಪಾಯಿಗಳವರೆಗೆ ಹಣವನ್ನು ಬಹುಮಾನ ರೂಪವಾಗಿ ಕೊಡ ಲಾಗುತ್ತದೆ ಎಂದು ತಿಳಿಸಲಾಗಿದೆ. ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ಹಳ್ಳಿಯಲ್ಲಿ ಈ ರೀತಿ ಅಸ್ಪೃಶ್ಯತಾ ಭಾವನೆಯನ್ನು ತೋರ್ಪಡಿಸುವುದಿಲ್ಲವೋ ಅಂಥ ಪ್ರತಿಯೊಂದು ಹಳ್ಳಿಗೂ ಕೂಡ ಈ ರೀತಿ ಉತ್ತೇಜನವನ್ನು ಕೊಡಬೇಕೆಂದು ಸರ್ಕಾರ ಒಂದು ಯೋಜನೆಯನ್ನು ಹಾಕಿ ಕೊಂಡಿದೆ.

ಇನ್ನು 1965-66 ನೇ ಸಾಲಿನಲ್ಲಿ ಸುಮಾರು 99 ಲಕ್ಷ ರೂಪಾಯಿಗಳನ್ನು ಹರಿಜನರ ಏಳಿಗೆ ಗಾಗಿ ಖರ್ಚುಮಾಡಬೇಕೆಂದು ಸರ್ಕಾರದವರು ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಸರ್ಕಾರ ದವರು, ಆಫೀಸರುಗಳು ಮತ್ತು ಸಾರ್ವಜನಿಕರು ಎಲ್ಲರೂ ಕೂಡ ಮುತವರ್ಜಿವಹಿಸಿ ಹರಿಜನರ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ. ಗ್ರಾಂಟ್-ಇನ್-ಏಯ್ಡ್ ಮುಖಾಂತರ 11 ಲಕ್ಷ ರೂಪಾಯಿ

ಗಳನ್ನು ಸರ್ಟಿಫೈಯ್ಡ್ ಸ್ಕೂಲುಗಳು ಮತ್ತು ರಿಮ್ಯಾಂಡ್ ಹೋಮ್‌ಗಳಿಗೆ ಹಣವನ್ನು ಜಾಗ್ರತೆಯಾಗಿ ಒದಗಿಸಿ ಪ್ರತಿಯೊಂದು ಯೋಜನೆಯನ್ನು ಕೂಡ ಏಪ್ರಿಲ್ ಒಂದನೇ ತಾರೀಖಿನಿಂದಲೇ ಪ್ರಾರಂಭ ಮಾಡಬೇಕೆಂದಿದ್ದೇವೆ. ಸಮಾಜ ಕಲ್ಯಾಣಕ್ಕಾಗಿ ಹರಿಜನರ ಏಳಿಗೆಗಾಗಿ ಏನೇನು ಮಾಡಬೇಕೋ ಅವೆಲ್ಲವನ್ನೂ ಕೂಡ ಮಾಡಲು ಆದಷ್ಟು ತೀವ್ರವಾಗಿ ಕೆಲಸಗಳು ಪ್ರಾರಂಭವಾಗುತ್ತವೆ. ಆ ಬಾಬಿಗೆ ಹಣ ಕೂಡ ಒದಗಿಸಿ ಎಲ್ಲವೂ ಸಿದ್ಧವಾಗಿದೆ. ಡೆಪ್ಯುಟಿ ಕಮೀಷನರಿಂದ ಹಿಡಿದು ಬಿ. ಡಿ. ಓ ವರೆಗೆ ಪ್ರತಿಯೊಬ್ಬರೂ ಕೂಡ ಸಮಾಜ ಕಲ್ಯಾಣ ಶಾಖೆಯ ಕೆಲಸ ಕಾರ್ಯಗಳಿಗೆ ಹೆಚ್ಚು ಮುತುವರ್ಜಿಯನ್ನು ವಹಿಸಿ ಜವಾಬ್ದಾರಿಯಿಂದ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ. ಪ್ರತಿಯೊಂದು ಜೋನ್‌ನಲ್ಲೂ, ಪ್ರತಿಯೊಂದು ಜಿಲ್ಲೆಯಲ್ಲಿಯೂ ಹಣ ಸರಿಯಾದ ರೀತಿಯಲ್ಲಿ ಉಪಯೋಗವಾಗಬೇಕು ಎನ್ನುವ ದೃಷ್ಟಿಯಿಂದ ಆಗಾಗ್ಗೆ ಇನ್‌ಸ್ಪೆಕ್ಷನ್ ಆಗುತ್ತಿದೆ. ಮುಂದಿನ ವರ್ಷ ಷೆಡ್ಯೂಲ್ಡ್ ಕ್ಯಾಸ್ಟಿನವರ ಅಭಿವೃದ್ಧಿಕಾರ್ಯಗಳಿಗಾಗಿ 52 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಷೆಡ್ಯೂಲ್ಡ್ ಟ್ರೈಬ್‌ನವರಿಗೆ16 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಡಿನೋಟಿಫೈಡ್ ಪಂಗಡದವರಿಗೆ 14 ಲಕ್ಷ 96 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ. ನೊಮ್ಯಾಡಿಕ್ ಮತ್ತು ಸೆಮಿನೊಮ್ಯಾಡಿಕ್ ಪಂಗಡದವರಿಗೆ 9 ಲಕ್ಷ 34 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ. ಅದರ್ ಬ್ಯಾಕ್‌ವರ್ಡ್ ಕ್ಲಾಸಿನವರಿಗೆ 6 ಲಕ್ಷ 72 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಬಾಬಿಗೆ ಕೇಂದ್ರ ಸರ್ಕಾರದವರು ಕೊಟ್ಟಿರುವುದು ಈ ರೀತಿ ಇದೆ. ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ 2 ಲಕ್ಷ ರೂಪಾಯಿಗಳು ಡೀ ನೋಟಿ ಫೈಯ್ಡ್ ಟ್ರೈಬ್ಸ್ ಪಂಗಡದವರಿಗೆ 3.52 ಲಕ್ಷ ರೂಪಾಯಿಗಳು, ಡಿನೋಟಿಫೈಡ್ ಪಂಗಡದವರಿಗೆ 8. 8 ಲಕ್ಷ ರೂಪಾಯಿಗಳು. ಈ ರೀತಿ ಅವರು ಈ ಬಾಬಿಗೆ ಹಣವನ್ನು ಒದಗಿಸಿದ್ದಾರೆ. ಈ ರೀತಿ ನಾವು ಇದನ್ನು ಬ್ರೇಕ್‌ಅಪ್ ಮಾಡಿಕೊಂಡಿದ್ದೇವೆ ಅದರಂತೆ ಹಣವನ್ನು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಸೋಷಿಯಲ್ ವೆಲ್‌ಫೇರ್ ಆಫೀಸರನ್ನು ಚುನಾಯಿಸಿ ಕಳುಹಿಸಿ ಕೊಟ್ಟಿದ್ದಾರೆ. ಅವರಿಗೆ ಈ ಕೆಲಸಗಳನ್ನೆಲ್ಲಾ ಹೇಗೆ ಮುತವರ್ಜಿ ವಹಿಸಿ ಮಾಡಬೇಕೆಂಬುದನ್ನೆಲ್ಲಾ ತಿಳಿಸಿ ಅವರನ್ನು ಕಳುಹಿಸಿ ಕೊಡುತ್ತೇವೆ. ಸರ್ವೆ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಎಂದು ಈ ಪ್ರಾರಂಭ ಮಾಡುತ್ತೇವೆ. ಅದರಲ್ಲಿ ಈ ಇಲಾಖೆಯಲ್ಲಿರತಕ್ಕ ಎಲ್ಲಾ ಕಾರ್ಯಕರ್ತರಿಗೂ ಹೆಚ್ಚಿಗೆ ಕೆಲಸವನ್ನು ಮಾಡುವುದಕ್ಕೆ ಮಾಹಿತಿ ಕೊಟ್ಟು ಟ್ರೈನಿಂಗ್ ಕೊಟ್ಟು ಅವರು ಸರಿಯಾಗಿ ಕೆಲಸವನ್ನು ಮಾಡುವಂತೆ ವ್ಯವಸ್ಥೆ ಮಾಡುತ್ತೇವೆ.

ಇನ್ನು ಇಲಾಖೆಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಒಂದು ಬುಲೆಟಿನ್ ಅನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಇಂಡಿಯಾ ಸರ್ಕಾರದವರೂ ಸಹ ಈ ಬುಲೆಟಿನ್ ನೋಡಿ ಬಹಳ ಸಂತೋಷ ಪಟ್ಟಿದ್ದಾರೆ. ಮತ್ತು ಪ್ಲಾನಿಂಗ್ ಕಮಿಷನ್‌ನವರು ಇಲ್ಲಿಗೆ ಬಂದಿದ್ದಾಗ ಈ ಬುಲೆಟಿನ್ ತೆಗೆದುಕೊಂಡು ಹೋಗಿದ್ದಾರೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಇನ್ನು ಹೆಚ್ಚಿನ ಸೌಕರ್ಯ, ಹೆಚ್ಚಿನ ಉತ್ತೇಜನವನ್ನು ಕೊಡುತ್ತಾರೆಂಬ ನಂಬಿಕೆ ನಮಗೆ ಇದೆ. ಈಗ ನಮ್ಮ ರಾಜ್ಯದಲ್ಲಿ ಎಂಪ್ಲಾಯ್‌ಮೆಂಟ್ ಸೆಲ್ ಪ್ರಾರಂಭವಾಗಿರುವುದರಿಂದ ಅದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಇದರಲ್ಲಿ ಯಾವ ರೀತಿಯ ಒಂದು ಟೀಕೆಯೂ ಬಾರದಂತೆ ನೋಡಿಕೊಳ್ಳುವುದಕ್ಕೆ ಒಬ್ಬರು ಡೈರೆಕ್ಟರ್ ಕೂಡ ಇದ್ದಾರೆ. ಇನ್ನುಮುಂದೆ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ 18 ಪರ್ಸೆಂಟ್ ಕೆಲಸಗಳು ಸರಿಯಾಗಿ ಸಿಕ್ಕಬಹುದು. ಪ್ರತಿಯೊಂದು ಸರ್ಕಾರಿ ಇಲಾಖೆಗಳಲ್ಲದೆ ಸಾಧಾರಣವಾದ ಪ್ರೈವೇಟ್ ಕಂಪನಿಗಳಿಗೂ ಕೂಡ ನಮ್ಮ ಡೈರೆಕ್ಟರವರು ಖುದ್ದು ಹೋಗಿ ವಿಚಾರ ಮಾಡಿ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಸಿಕ್ಕಬೇಕಾದ 18 ಪರ್ಸೆಂಟ್ ಕೆಲಸಗಳನ್ನು ಒದಗಿಸುವುದಕ್ಕೆ ಅವರು ಪ್ರಯತ್ನ ಮಾಡುತ್ತಿದ್ದಾರೆ. ಅನುಸೂಚಿತ ಜಾತಿಯವರಿಗೆ ಉನ್ನತ ಹುದ್ದೆಗಳಲ್ಲಿ ಅವಕಾಶವನ್ನು ಕೊಡುವುದಕ್ಕೋಸ್ಕರ ಅವರು ಐ. ಎ. ಎಸ್. ಮತ್ತು ಐ. ಪಿ. ಎಸ್. ಪರೀಕ್ಷೆಗಳಿಗೆ ಕುಳಿತುಕೊಳ್ಳಲು ತರಪೇತಿಯನ್ನು ಕೊಡಲು ತರಪೇತಿ ಕೇಂದ್ರಗಳನ್ನು ಪ್ರಾರಂಭ ಮಾಡಿದ್ದಕ್ಕೋಸ್ಕರ ಮೊದಲನೆಯವರ್ಷ ಈ ಸಭೆಯಲ್ಲಿ ಅನೇಕರು ಟೀಕೆಯನ್ನು ಮಾಡಿದ್ದಾರೆ. ಒಬ್ಬ ಹುಡುಗ ಪಾಸಾಗಿದ್ದಾನೆ ಎಂದು. ಈ ವರ್ಷ 12 ಜನ ಐ. ಎ. ಎಸ್. ಮತ್ತು ಐ. ಪಿ. ಎಸ್. ಪರೀಕ್ಷೆಗಳಲ್ಲಿ ಪಾಸಾಗಿದ್ದಾರೆ ಎಂದು ಹೇಳುವುದಕ್ಕೆ ಸಂತೋಷವಾಗುತ್ತದೆ.

ಇನ್ನು ಡಿನೋಟಿಫೈಯ್ಡ್ ಪಂಗಡಕ್ಕೆ ಸೇರಿದ ಜನಗಳ ವಿಷಯದಲ್ಲಿ ಒಬ್ಬರು ಮಾನ್ಯ ಸದಸ್ಯರು ಒಂದೆರಡು ವಿಚಾರಗಳನ್ನು ಹೇಳಿದರು. ಅವರ ಅಭಿವೃದ್ಧಿಯ ವಿಚಾರದಲ್ಲಿಯೂ ಸಹ ಕೆಲಸ ಕಾರ್ಯಗಳು ಚೆನ್ನಾಗಿ ನಡೆದಿವೆ. ಮೊನ್ನೆ ಒಂದು ಸೆಮಿನಾರ್ ನಡೆಯಿತು. ಆ ಸೆಮಿನಾರ್‌ನಲ್ಲಿ ಕೂಡ ಈ ಜನಾಂಗದ ವಿಚಾರವಾಗಿ ಯಾರೂ ಹೆಚ್ಚು ಮಾತನಾಡಲಿಲ್ಲ. ಪ್ಲಾನಿಂಗ್ ಕಮಿಷನ್ನಿನವರು ಬಹಳ ತೀವ್ರಶಕ್ತಿಯನ್ನು ವಹಿಸಿ ನೊಮ್ಯಾಡಿಕ್ ಮತ್ತು ಸೆಮಿನೊಮ್ಯಾಡಿಕ್ ಜನಗಳಿಗೆ ಸಂಬಂಧಪಟ್ಟಹಾಗೆ ಸ್ಟೇಟ್ ಲೆವೆಲ್‌ನಲ್ಲಿ ಮೊನ್ನೆ ಒಂದು ಸೆಮಿನಾರ್ ಮಾಡಿದರು. ಈ ವಿಚಾರ ಎಲ್ಲರಿಗೂ ಗೊತ್ತಿರಬಹುದು. ಈ ಜನಾಂಗದ ಯೋಗಕ್ಷೇಮವನ್ನು ಸರಿಯಾದ ರೀತಿಯಲ್ಲಿ

(ಶ್ರೀಮತಿ ಯಶೋಧರ ದಾಸಪ್ಪ)

ನೋಡಲಾಗಿದೆ. ಇವರಿಗೆ ಯಾವ ಕಾಲೋನಿಗಳೂ ಇರಲಿಲ್ಲ. ಈಗ ಅವರು ಇರುವ ಜಾಗದಲ್ಲಿ ಎಷ್ಟು ಅನುಕೂಲಗಳನ್ನು ಅವರಿಗೆ ಕಲ್ಪಿಸಿಕೊಡಬಹುದೋ ಅದನ್ನು ಮಾಡುತ್ತಿದ್ದೇವೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅವರಿಗೆ ಎಲ್ಲಾ ಅನುಕೂಲಗಳೂ ದೊರೆಯುತ್ತವೆ. ಈಗ ಬೆಂಗಳೂರಿನಲ್ಲಿ ಟ್ರಸ್ಟ್ ಬೋರ್ಡಿನವರಿಂದ 70 ಸಾವಿರ ರೂಪಾಯಿಗಳಿಗೆ ಸೈಟುಗಳನ್ನು ಪಡೆದು ಅವರಿಗೆ ಎರಡು ಹಾಸ್ಟಲುಗಳನ್ನು ಕಟ್ಟಿದ್ದೇವೆ. ಅವುಗಳಲ್ಲಿ 4-5 ಅಂತಸ್ತುಗಳಿವೆ. ಅದಕ್ಕೆ ಸುಮಾರು 5 ಲಕ್ಷ ರೂಪಾಯಿಗಳು ಖರ್ಚಾಗಿದೆ. ಒಂದು ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್‌ಮಾಡಿ ಆ ಜನಾಂಗದ ಮಕ್ಕಳಿಗೆ ಕೈಗಾರಿಕಾ ಶಿಕ್ಷಣವನ್ನು ಕೊಡಲು ಹೆಚ್ಚಿನ ಸೌಲಭ್ಯವನ್ನು ಒದಗಿಸುತ್ತಿದ್ದೇವೆ. ಈ ರೀತಿ ಪ್ರತಿಯೊಂದು ವಿಷಯದಲ್ಲಿಯೂ ಕೂಡ ಎಲ್ಲಾ ಮಾನ್ಯ ಸದಸ್ಯರೂ ಈ ಇಲಾಖೆಯ ವಿಷಯದಲ್ಲಿ ಮಾಡಿರತಕ್ಕ ಟೀಕೆಗಳಿಗೆ ನಾನು ಉತ್ತರ ಕೊಟ್ಟಿದ್ದೇನೆ ಎಂದು ನಾನು ನಂಬಿದ್ದೇನೆ. ನಾವು ಈ ಇಲಾಖೆಯಲ್ಲಿ ಮಾಡಿರತಕ್ಕ ಪ್ರತಿಯೊಂದು ಕೆಲಸಕಾರ್ಯವೂ ಕೂಡ ನಮ್ಮ ಇಲಾಖೆಯಿಂದ ಹೊರಡಿಸತಕ್ಕ ನಾಲ್ಕನೆಯ ಬುಲೆಟಿನ್‌ನಲ್ಲಿ ಬರುತ್ತದೆ.

ಇನ್ನು ಬಿಜಾಪುರದಲ್ಲಿರತಕ್ಕ ಸೆಟ್ಲ್‌ಮೆಂಟ್ ಏರಿಯಾವನ್ನು ಮುಚ್ಚಬೇಕು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಅದನ್ನು ನಾವು ಮುಚ್ಚುವುದಿಲ್ಲ. ಅದನ್ನು ಸರಿಯಾದ ರೀತಿಯಲ್ಲಿ ನಡೆಸಬೇಕೆಂದು ನಮ್ಮ ಉದ್ದೇಶ ಇದೆ. ಅದೂ ಅಲ್ಲದೆ ಅದು ಚೀಫ್‌ಇನ್ಸ್‌ಪೆಕ್ಟರ್ ಆಫ್ ಸರ್ಟಿಫೈಡ್ ಸ್ಕೂಲ್ಸ್ ಅವರ ಕೈಕೆಳಗೆ ಇದೆ.

ಇನ್ನೊಂದು ವಿಷಯವೇನೆಂದರೆ, ಹೆಣ್ಣು ಮಕ್ಕಳ ವಿಷಯದಲ್ಲಿ ಯಾವ ಮಾನ್ಯ ಸದಸ್ಯರೂ ಸಹ ಮಾತನಾಡಲಿಲ್ಲ. ಇದು ಬಹಳ ವಿಷಾದಕರ. ಮಾನ್ಯ ಸದಸ್ಯರಾದ ಗೋಪಾಲಸ್ವಾಮಿ ಅವರು ಹೇಳಿದರು ತಪ್ಪಿತಸ್ಥರಾದ ಹೆಣ್ಣುಮಕ್ಕಳನ್ನು ರಿಮ್ಯಾಂಡ್ ಹೋಮಿನಲ್ಲಿ ಇಡುವುದಕ್ಕಿಂತ ಜೈಲಿಗೆ ಕಳುಹಿಸಿಬಿಡಿ ಎಂದು. ಸಮಾಜದಲ್ಲಿ ಕಷ್ಟಗಳಿಗೆ ಒಳಗಾಗಿ ಯಾವ ಯಾವ ಕಾರಣದಿಂದಲೋ ಆ ಸ್ಥಿತಿಯಲ್ಲಿರುವವರನ್ನು ತಪ್ಪಿತಸ್ಥರು ಎಂದು ಹೇಳಿ, ಅವರನ್ನು ತಪ್ಪಿತಸ್ಥರ ಸ್ಥಾನದಲ್ಲಿ ನಿಲ್ಲಿಸಿ ಅವರನ್ನು ಜೈಲಿಗೆ ಕಳುಹಿಸಬೇಕೆಂದು ಹೇಳಿದರೆ ಅದು ಸರಿಯಲ್ಲ. ಈಗ ಹೆಣ್ಣುಮಕ್ಕಳು ಎಚ್ಚೆತ್ತಿದ್ದಾರೆ. ಹರಿಜನರು ಎಚ್ಚೆತ್ತಿದ್ದಾರೆ, ಗಿರಿಜನರು ಎಚ್ಚೆತ್ತಿದ್ದಾರೆ ಎಂಬುದನ್ನು ಯಾರೂ ಮರೆಯಬಾರದು. ಇವೊತ್ತು ಅವರಿಗೆ ಸ್ವಸಾಮರ್ಥ್ಯ ಬಂದಿದೆ. ಸಮಾಜದಲ್ಲಿ ಅವರು ಕೇವಲ ವೀಕರ್ ಸೆಕ್ಷನ್ ಆಗಿದ್ದಾರೆ ಎನ್ನುವ ದೃಷ್ಟಿಯಿಂದ ಅವರು ಆ ರೀತಿ ಹೇಳಿರಬಹುದೆಂದು ಕಾಣುತ್ತದೆ. ಈಗ ತಾವು ಅವರನ್ನು ವೀಕರ್ ಸೆಕ್ಷನ್ ಎಂದು ತಿಳಿದು ಕೊಂಡಿದ್ದೀರಿ, ಮುಂದೆ ಅವರು ಪ್ರಬಲವಾದ ಶಕ್ತರಾಗುತ್ತಾರೆ ಎಂಬುದನ್ನು ಯಾರೂ ಮರೆಯಬಾರದು. ಇವೊತ್ತು ಹರಿಜನರಿಗೆ ಕುಡಿಯುವುದು ಬೇಕಾಗಿಲ್ಲ. ಆದರೆ ಬೇರೆ ಜನಗಳಿಗೆ ಕುಡಿಯುವುದು ಬೇಕಾಗಿದೆ. ಇದನ್ನು ನೋಡಿ ಯಾವ ಜನ ಮುಂದುವರಿಯುತ್ತಿದ್ದಾರೆಂಬುದನ್ನು ಯೋಚನೆ ಮಾಡಬೇಕು.

6-30 P. M.

ಇಂತಹ ಜಾಡ್ಯಗಳಿಂದ ನಮ್ಮನ್ನು ಪಾರುಮಾಡಿ, ನಮ್ಮನ್ನು ರಕ್ಷಿಸಿ ಎಂದು ಅವರು ಕೋರುತ್ತಾ ಇರಬೇಕಾದರೆ, ಆ ಒಂದು ಸದ್ಗುಣದ ಕಡೆಗೆ ಮತ್ತು ಆ ಒಂದು ಸತ್ಕಾರ್ಯದ ಕಡೆಗೆ ಹೋಗುವ ಜನಾಂಗ ವೀಕರ್ ಸೆಕ್ಷನ್ ಎಂದು ಮಾನ್ಯ ಸದಸ್ಯರು ಕೆಲವರು ಏನು ತಿಳಿದುಕೊಂಡಿದ್ದಾರೋ ಅದು ತಪ್ಪು. ನಾನು ಆ ರೀತಿಯಲ್ಲಿ ತಿಳಿದುಕೊಂಡಿಲ್ಲ. ಮಹಾತ್ಮ ಗಾಂಧೀಜಿಯವರು ಯಾವಾಗ ಹರಿಜನರು ಎಂಬುದಾಗಿ ನಿಮ್ನವಂಗಡದವರಿಗೆ ಹೆಸರು ಇಟ್ಟರೋ ಆಗಲೇ ನಾನು ಅವರನ್ನು ದೇವರ ಮಕ್ಕಳು ಎಂಬುದಾಗಿ ತಿಳಿದಿದ್ದೇನೆ. ಇಂದಲ್ಲ, ನಾಳೆ ಅವರು ಸತ್ಪ್ರಜೆಗಳಾಗಿ ಬರುತ್ತಾರೆಂಬ ನಂಬಿಕೆ ನನಗೆ ಇದೆ. ಕೇವಲ 2-3 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಈ ಜನಾಂಗವನ್ನು ಉದ್ಧಾರಮಾಡುತ್ತೇವೆಂಬುದೇನೂ ದೊಡ್ಡಸ್ತಿಕೆಯಲ್ಲ. ಈ ಜನಾಂಗದವರ ತಿಳುವಳಿಕೆ ಮಟ್ಟ ಏರಬೇಕು ಎಂಬುದು ಅವರಿಗೆ ಗೋಚರವಾಗಬೇಕು. ಈಗಿನ ರೀತಿಯಲ್ಲಿ ಜೀವನ ನಡೆಸಿದರೆ ನಾವೂ ಕೂಡ ಸಮಾಜದಲ್ಲಿ ಒಂದು ಸ್ಥಾನವನ್ನು ಪಡೆಯುವುದಕ್ಕಾಗುತ್ತದೆ ಎಂಬುದನ್ನು ಅವರು ಮನಗಾಣಬೇಕು.

ಇನ್ನು ಸ್ಕಾಲರ್‌ಷಿಪ್ ಕೊಡುವ ವಿಚಾರದಲ್ಲಿ ಕೆಲವರು ಸಲಹೆಗಳನ್ನು ಕೊಟ್ಟಿದ್ದಾರೆ. ಕೇವಲ ಮಂತ್ರಿಗಳಿಂದ ಇದೆಲ್ಲಾ ನಡೆಯುವುದು ಎಂಬುದಾಗಿ ಹೇಳಿದರು. ನಾನು ಹೇಳುವುದಿಷ್ಟೆ: ಬ್ಯಾಕ್‌ವರ್ಡ್ ಕ್ಲಾಸಸ್ ವಿಚಾರದಲ್ಲಿ ಹಳ್ಳಿಗಳಿಂದ ಬೇಕಾದರೆ ಯಾರೋ ಸರ್ಟಿಫಿಕೇಟುಗಳನ್ನು

ಕೊಡುತ್ತಾರೆ. ಆತನಿಗೆ ಜಮೀನು ಇರುತ್ತದೆ, ಆತನಿಗೆ ಜೀವನ ನಡೆಸುವುದಕ್ಕೆ ಶಕ್ತಿ ಇರುತ್ತದೆ, ಆದರೂ ಸರ್ಟಿಫಿಕೇಟನ್ನು ತಂದಿರುತ್ತಾನೆ. ಅದೇ ರೀತಿಯಾಗಿ ಇನ್ನೂ ಮುಂದೆ ನೋಡುತ್ತಾ ಹೋದ ಪಕ್ಷದಲ್ಲಿ ಈ ವಿಧಾನ ಸೌಧದಲ್ಲಿ ಒಬ್ಬನು ಜವಾನನಾಗಿರುತ್ತಾನೆ. ಸಾಧಾರಣವಾಗಿ ಅವನ ಮಗನಿಗೆ ಸ್ಕಾಲರ್‌ಷಿಪ್‌ನ್ನು ಕೊಡಿಸಬೇಕಾದರೆ ನನಗೇ ಬಹಳ ಕಷ್ಟವಾಗುತ್ತದೆ. ಏಕೆಂದರೆ ಅವನ ಸಂಬಳ ಸರಿಯಾಗಿ ಗೊತ್ತಿರುತ್ತದೆ, ವರಮಾನ 2,400 ರೂಪಾಯಿಗಳನ್ನು ಅರ್ಜಿಯಲ್ಲಿ ತೋರಿಸಿರುತ್ತಾನೆ. ಆತನ ಸಂಬಳವನ್ನೂ ಸರಿಯಾಗಿ ತೋರಿಸಲೇ ಬೇಕಾಗುತ್ತದೆ. ಸುಳ್ಳು ಹೇಳುವುದಕ್ಕೆ ಸಾಧ್ಯವಿಲ್ಲ. ಆತನ ಮಗ ಮೆರಿಟ್‌ನಿಂದ ಓದುವುದಕ್ಕೆ ಶಕ್ತಿ ಇದ್ದರೂ, ಅವನಿಗೆ ಸ್ಕಾಲರ್‌ಷಿಪ್ ಕೊಡಿಸುವುದಕ್ಕೆ ಸಾಧ್ಯವಿಲ್ಲ. ಅನೇಕ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳಲ್ಲಿ ಮಾತನಾಡಿ ಆ ಒಂದು ಶಿಫಾರ್ಸಿನ ಯೋಗ್ಯತೆ ಮೇಲೆ ಅನೇಕ ಜನ ಸಾಹುಕಾರರ ಮಕ್ಕಳು ಸ್ಕಾಲರ್‌ಷಿಪ್ಪನ್ನು ಪಡೆಯುತ್ತಾರೆ. ಅಂಥಾದ್ದನ್ನೂ ಕೂಡ ಚೆನ್ನಾಗಿ ವಿಚಾರಮಾಡಿ ತುಂಬಾ ಬಲಹೀನರೂ ಹಾಗೂ ಬಡವರೂ ಅಶಕ್ತರೂ ಯಾರೆಂಬುದನ್ನು ನೋಡಿಕೊಂಡು ಈ ಹಣವನ್ನು ಖರ್ಚುಮಾಡುತ್ತಿದ್ದೇವೆ.

ಶ್ರೀ ಸಂಜೀವನಾಥ್ ಐಕಳ.—ಪಾವರ್ಟಿ ಕಂ ಪ್ರೋಗ್ರೆಸ್ ಇದ್ದೇ ಇರಬೇಕು.

ಶ್ರೀಮತಿ ಯಶೋಧರ ದಾಸಪ್ಪ.—ಮಾನ್ಯ ಸದಸ್ಯರು ಅದನ್ನು ಹೇಳದೇ ಇದ್ದರೂ ಅದು ನಮ್ಮ ಮನಸ್ಸಿನಲ್ಲಿ ಇದ್ದೇ ಇದೆ. ಅನೇಕ ಮಕ್ಕಳು ಈ ಜನಾಂಗದವರಲ್ಲಿ ಗ್ರಾಜುಯೇಟ್ಸ್ ಮತ್ತು ಡಬ್ಬಲ್ ಗ್ರಾಜುಯೇಟ್ಸ್ ಆಗಿದ್ದಾರೆ. ವೀಕರ್ ಸೆಕ್ಷನ್ಸ್‌ನಲ್ಲಿ ಒಳ್ಳೆಯ ಸೊಸೈಟಿಗಳು ಎಲ್ಲಿಲ್ಲವೆ ಎಂಬುದನ್ನು ಹುಡುಕಿಕೊಂಡು ಹೋಗಿ ಅವರಿಗೆ ರಿಯಾಯಿತಿ ಕೊಟ್ಟು ಅವರ ಕಷ್ಟಗಳನ್ನು ಪರಿಹಾರಮಾಡುವುದೇ ಸರ್ಕಾರದ ಕರ್ತವ್ಯ. ಆದ್ದರಿಂದ ಈ ಇಲಾಖೆಯಲ್ಲಿರತಕ್ಕ ಲೋಪದೋಷಗಳನ್ನೇನಾದರೂ ಮಾನ್ಯ ಸದಸ್ಯರು ಹೇಳಿದ್ದರೆ ಖಂಡಿತವಾಗಿ ಅಂಥಾದ್ದು ಇದ್ದರೆ ನಿರ್ಭಯವಾಗಿ ಇಂಥಿಂಥ ಕಡೆ ಲೋಪದೋಷಗಳಿವೆ ಎಂಬುದಾಗಿ ನನ್ನಲ್ಲಿ ತೆಗೆದುಕೊಂಡು ಬರಲಿ, ಅದನ್ನು ಸರಿಪಡಿಸುವುದು ಸರ್ಕಾರದ ಕರ್ತವ್ಯ. ಅದನ್ನು ಮಾಡಲೇ ಬೇಕು. ನಾವು ಮಾನ್ಯ ಸದಸ್ಯರ ಟೀಕೆಟಿಪ್ಪಣಿಗಳಿಗೆ ಕಿವಿಗೊಡದೇ ಹೋದರೆ ಖಂಡಿತವಾಗಿ ಉದ್ಧಾರವಾಗುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಉಪಮಂತ್ರಿಗಳು ನಿದ್ದೆಮಾಡುತ್ತಿದ್ದಾರಷ್ಟೆ.

ಶ್ರೀಮತಿ ಯಶೋಧರ ದಾಸಪ್ಪ.—ಇನ್ನು ಅಡ್ವೈಸರಿ ಕಮಿಟೀಸ್ ವಿಚಾರವಾಗಿ ಕೆಲವರು ಮಾತನಾಡಿದ್ದಾರೆ. ಈ ಕಮಿಟಿಯನ್ನು ವರ್ಷಕ್ಕೆ ಎರಡು ಸಲ ಕರೆಯಬೇಕೆಂದು ಮಾಡಿರುವುದು ನಿಜ. ನಾವು ಅದನ್ನು 3 ಸಲ ಕರೆದಿದ್ದೇವೆ. ಕ್ರಮವಾಗಿ ಮೂರು ಮೀಟಿಂಗುಗಳಲ್ಲಿ ಕೆಲವು ನಿರ್ಣಯಗಳನ್ನು ಮಾಡಿದ್ದಾರೆ, ಅದರಲ್ಲಿ ಅಕ್ಸೆಪ್ಟ್ ಮಾಡಿಕೊಂಡದ್ದು ಕೆಲವು ಆಮೇಲೆ ಅಂಡರ್ ಕನ್‌ಸಿಡರೇಷನ್ ಕೆಲವು ಇನ್ನುಳಿದುದನ್ನು ಸರ್ಕಾರದವರು ತೆಗೆದುಕೊಳ್ಳುವುದಕ್ಕಾಗದೆ ರಿಜಕ್ಟ್ ಮಾಡಿದುದು. ಹೀಗೆ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಅಡ್ವೈಸರಿ ಕಮಿಟಿಯನ್ನೂ ಮೂರು ಸಾರಿ ಕರೆದಿದ್ದಾರೆ. ಒಂದು ಸಲ 11, ಇನ್ನೊಂದು ಸಲ 6-ಹೀಗೆ ಶಿಫಾರ್ಸು ಕಳುಹಿಸಿದ್ದರ ಪೈಕಿ 5-5 ಅಕ್ಸೆಪ್ಟ್ ಮಾಡಿದ್ದಾರೆ. ಪರ್ಯಾಲೋಚನೆಯಲ್ಲಿರುವುದು 4-5 ಆಗಿದೆ. ಅಕ್ಸೆಪ್ಟ್ ಮಾಡದೇ ಇರುವುದು ಮೂರು ಇವೆ. ಒಟ್ಟಿಗೆ ಈ ಕಮಿಟಿಗಳನ್ನು 3 ಸಾರಿ ಕರೆದಿದ್ದಾರೆ. ಸಬ್-ಕಮಿಟಿಗಳು ಇರಲಿ ಎಂದು ಹೇಳುತ್ತಾರೆ. ಈಗ ಅದರ ಕೆಲಸ ಆದಮೇಲೆ ಅದನ್ನು ರದ್ದುಮಾಡಿದ್ದಾರೆ. ಒಂದು ವೇಳೆ ಸ್ಪೆಷಲ್ಲಾಗಿ ಯೋಜನೆ ಹಾಕಿಕೊಂಡು ಎಲ್ಲರ ಸಹಾಯ, ಸಹಕಾರ ಬೇಕು ಎಂದು ತೋರಿದಾಗ ತಕ್ಷಣ ಮೀಟಿಂಗನ್ನು ಕರೆಯುತ್ತಾರೆ. ಇವತ್ತು ಅಲ್ಲಿ ಏನೇನು ಆಗಬೇಕು ಎಂಬ ಬಗ್ಗೆ ಪ್ರತಿಯೊಬ್ಬ ಸದಸ್ಯರಿಗೂ ತಕ್ಕ ಮಾಹಿತಿಯನ್ನು ಒದಗಿಸಿದಮೇಲೆ ಅವರು ಒಂದು ವರದಿಯನ್ನು ತಯಾರುಮಾಡಿದನಂತರ ಅದನ್ನು ಅಡ್ವೈಸರಿ ಕಮಿಟಿಯಲ್ಲಿಟ್ಟು ಅವರ ಸಲಹೆಯನ್ನು ತೆಗೆದುಕೊಂಡಿದ್ದೇವೆ. ಅಂಥಾದ್ದನ್ನು ಸರ್ಕಾರದವರು ಯಾವರೀತಿ ಪರಿಶೀಲನೆಮಾಡಬೇಕು, ಅನುಸರಿಸಬೇಕೆನ್ನುವುದರಲ್ಲಿ ಚೆನ್ನಾಗಿ ವಿಚಾರಮಾಡುತ್ತಾರೆಂದು ನಾನು ಹೇಳುತ್ತೇನೆ. ಬೀರಪ್ಪ ಕಮಿಟಿ ವರದಿಯ 22 ಶಿಫಾರಸ್ಸುಗಳಲ್ಲಿ 16 ಶಿಫಾರ್ಸುಗಳನ್ನು ಈಗಾಗಲೇ ಜಾರಿಯಲ್ಲಿ ತಂದಿದ್ದೇವೆ. ಯಾವ ವಿಷಯವನ್ನಾದರೂ ಚೆನ್ನಾಗಿ ತಿಳಿದುಕೊಳ್ಳಿ. ಮಾನ್ಯ ಸದಸ್ಯರಿಗೇನಾದರೂ ಅನುಮಾನ ಬಂದರೆ ಡೈರೆಕ್ಟಾಗಿ ಸೆಕ್ರೆಟೇರಿಯಟ್ಟಿಗೆ ಬರಲಿ. ಇಲ್ಲಿ ವಿಷಯ ಸರಿಯಾಗಿ ತಿಳಿದುಕೊಳ್ಳದೆ ಏನು ಕೆಲಸವಾಗಿದೆ ಏನು ಕೆಲಸವಾಗಿಲ್ಲವೆಂದು ಹೇಳುವುದು ಸರಿಯಲ್ಲ. ನನ್ನಲ್ಲಿ ಅಂಕಿಅಂಶಗಳಿವೆ. ಯಾವ ಮಾನ್ಯ ಸದಸ್ಯರಾದರೂ ಬಂದು ನೋಡಲಿ. ನಾನೇನು ಕೆಲಸಗಳನ್ನು ಮಾಡಿದ್ದೇನೆಂಬುದು ತಿಳಿಯುತ್ತದೆ. ಕೇಂದ್ರ ಸರ್ಕಾರದಿಂದ ಯಾರು ಬಂದರೂ ಕೂಡ ನನಗೆ ತೊಂದರೆಯಾದರೂ ಚಿಂತೆ ಇಲ್ಲ ಅವರಿಗೆ ನಾವು ಮಾಡಿದಂಥ ಕೆಲಸಗಳನ್ನು ತೋರಿಸಿ ಬರುತ್ತಿದ್ದೇನೆ. ಆ ರೀತಿ ತೋರಿಸುವಾಗ ಇದರಲ್ಲಿ ಏನಾದರೂ ಲೋಪದೋಷಗಳು ಇದ್ದರೆ, ಇಂಥಿಂಥ ರೀತಿಗಳಲ್ಲಿ ತೊಂದರೆಗಳಿವೆ ಎಂಬುದನ್ನು ಹೇಳಿದರೆ ಅವನ್ನು ಯಾವರೀತಿ ಸರಿಪಡಿಸಬೇಕೆಂಬುದನ್ನು ಯೋಚನೆ ಮಾಡುತ್ತೇವೆ. ಪ್ರತಿಯೊಂದು ಕೆಲಸವನ್ನೂ ತೋರಿಸುತ್ತಿದ್ದೇನೆ. ಅದರಲ್ಲಿ ಯಾವ ರೀತಿಯಲ್ಲೂ

(ಶ್ರೀಮತಿ ಯಶೋಧರ ದಾಸಪ್ಪ)

ಮುಚ್ಚುಮರೆ ಮಾಡುವುದಿಲ್ಲ. ಒಳ್ಳೆಯ ಕೆಲಸಗಳು ಒಳ್ಳೆಯದಾಗಿಯೇ ಇರುತ್ತವೆ ಮಾನ್ಯ ಸದಸ್ಯರು ಟೀಕೆ ಮಾಡುವುದನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಆದರೆ ಒಂದು ಮಾತ್ರ ಅನ್ಯಾಯ, ಇದು ಆಗುತ್ತಿರುವುದು ಸರಿಯಲ್ಲ. ಪ್ರತಿಯೊಬ್ಬರೂ ಸೋಷಿಯಲ್ ವೆಲ್‌ಫೇರ್ ಸೆಂಟರ್ಸ್‌ಗೆ ಸರಿಯಾದ, ಅದರಲ್ಲೂ ಯೋಗ್ಯವಾದ ಜನಗಳು ಹೋಗುವಂಥ ಜಾಗವಲ್ಲವೆಂದು ಹೇಳಿದರೆ ಹೇಗೆ? ಮಾನ್ಯ ಶ್ರೀಮಾನ್ ಬೈರಪ್ಪಾಜಿಯವರು ಅಂತಹ ಒಂದು ನಿದರ್ಶನವಿದ್ದರೆ ನನಗೆ ತಿಳಿಸಲಿ. ಅವರು ಹೆಣ್ಣು ಮಕ್ಕಳೇ ಆಗಿರಲಿ ಅಥವಾ ಗಂಡುಮಕ್ಕಳೇ ಆಗಿರಲಿ, ಅವರನ್ನು ಕೆಲಸದಿಂದ ಡಿಸ್‌ಮಿಸ್ ಮಾಡುವುದಕ್ಕೂ ನಾನು ಹಿಂಜರಿಯುವುದಿಲ್ಲ. ಅದನ್ನು ಬಿಟ್ಟು ಈ ಕೇಂದ್ರ ಸರಿಯಾಗಿ ಕೆಲಸಮಾಡುತ್ತಿಲ್ಲ, ಎಷ್ಟೋ ಜನ ಹೆಣ್ಣುಮಕ್ಕಳಿಗೆ ಅಲ್ಲಿ ಕೆಲಸಗಳನ್ನು ಕೊಟ್ಟಿದ್ದಾರೆ, ಅನೇಕರನ್ನು ಕೈಗಾರಿಕೆಗಳಲ್ಲಿಯೂ ನರ್ಸರಿ ಸ್ಕೂಲುಗಳಲ್ಲಿಯೂ ಹಾಕಿದ್ದಾರೆಂದು ಕೆಲವರು ಹೇಳಿದರು. ನಾನು ಹೇಳುವುದು ಇಷ್ಟೆ. ಅವರಿಗೂ ಕೂಡ ಆರ್ಥಿಕಾಭಿವೃದ್ಧಿಯಾಗಬೇಕು. ಅನೇಕ ಜನ ಹೆಣ್ಣುಮಕ್ಕಳು ತಮ್ಮ ತಾಯಿ ತಂದೆಗಳನ್ನು ಕಳೆದುಕೊಂಡು ತಮ್ಮ ಗಂಡಂದಿರನ್ನು ಬಿಟ್ಟು ಇಂತಹ ಕೆಲಸಗಳಿಗೆ ಬರುತ್ತಾರೆ. ಅಂತಹ ಕಷ್ಟಗಳು ಹೆಣ್ಣುಮಕ್ಕಳಿಗೆ ಒದಗಿರುವಾಗ ಅವರಿಗೆ ಜೀವನಮಾಡುವುದೇ ಕಷ್ಟವೆಂದು ಹೇಳಿಕೊಳ್ಳುವಾಗ ಅವರಿಗೆ ಎಷ್ಟು ಬೇಕಾದರೂ ಉದ್ಯೋಗಗಳನ್ನು ಕೊಡಬೇಕಾಗುತ್ತದೆ. ಆದ್ದರಿಂದ ಈ ಇಲಾಖೆಯಲ್ಲಿ ಹೆಣ್ಣುಮಕ್ಕಳಿಗೆ ವಿಶೇಷವಾಗಿ ಕೊಡಬೇಕಾದ ಪ್ರಸಂಗಗಳು ಒದಗಿಬರುತ್ತವೆ. ಅವರೇ ಈ ಜನಾಂಗದವರ ಏಳಿಗೆಯನ್ನು ನೋಡಿಕೊಳ್ಳಬೇಕು. ಬರೀ ಹೆಣ್ಣುಮಕ್ಕಳೇ ಇದರಲ್ಲಿ ತಪ್ಪಿತಸ್ಥರು ಎಂಬುದಾಗಿ ತಿಳಿಯಬಾರದು. ಗಂಡುಮಕ್ಕಳೂ ಸಹ ಜವಾಬ್ದಾರಿ ವಹಿಸಬೇಕು. ಯಾವಾಗಲೂ ಅಶ್ಲೀಲವಾದ ನಡತೆ ಮತ್ತು ಶೀಲವಿಲ್ಲದೆ ಇರತಕ್ಕವರ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಇವತ್ತು ಒಂದು ಒಳ್ಳೆಯ ಮೇಲ್ಪಂಕ್ತಿಯನ್ನು ನಾವು ಹಾಕಿ ಕೊಡದೇ ಹೋದರೆ ಮುಂದಿನ ಪೀಳಿಗೆಗೆ ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಅಂತಹ ವಿಷಯಗಳು ಏನಾದರೂ ಇದ್ದರೆ ರುಜುವಾತು ಮಾಡಬೇಕು. ಬರೀ ಹೇಳಿಕೆ ಮಾತ್ರದಿಂದಲೇ ಏನೂ ಪ್ರಯೋಜನವಾಗುವುದಿಲ್ಲ. ಇವತ್ತಿನ ದಿವಸ ಸ್ಟೇಟ್ ರಿಮ್ಯಾಂಡ್ ಹೋಂನಲ್ಲಿ ಕೆಲಸಗಳಿಗಾಗಿ ಬಂದಿರುವವರು ಅನೇಕರು ಕಷ್ಟ ಸ್ಥಿತಿಯಲ್ಲಿ ಇರುತ್ತಾರೆ.

ಶ್ರೀ ಸಂಜೀವನಾಥ ಐಕಳ.— ಗಂಡ ಬಿಟ್ಟವರೇ ?

ಶ್ರೀಮತಿ ಯಶೋಧರ ದಾಸಪ್ಪ.—ಬೇಕಾದರೆ ಅದನ್ನು ರುಜುವಾತು ಮಾಡುತ್ತೇನೆ. ಸಮಾಜದಲ್ಲಿ ಅವರಿಗೆ ಎಷ್ಟು ಕಷ್ಟವಿದೆ, ಅದನ್ನು ಬೇಡವೆಂದು ಅನೇಕ ಹೆಣ್ಣು ಮಕ್ಕಳು ಇಲ್ಲಿ ಕೆಲಸಕ್ಕಾಗಿ ಬರುತ್ತಿದ್ದಾರೆ. ಇಂಥಾದ್ದನ್ನು ಮಾನ್ಯ ಸದಸ್ಯರು ಚೆನ್ನಾಗಿ ಪರಿಶೀಲನೆಮಾಡಬೇಕು. ಅಂಕಿ ಅಂಶಗಳ ಜೊತೆಯಲ್ಲಿ ಎಷ್ಟು ಜನ ಹೆಣ್ಣುಮಕ್ಕಳು ಕೆಲಸಗಳಿಗೆ ಯಾವ ರೀತಿಯಲ್ಲಿ ಸೇರಿದ್ದಾರೆಂಬುದನ್ನು ತಿಳಿಸುವುದಕ್ಕೆ ನಾನು ಹಿಂಜರಿಯುವುದಿಲ್ಲ. ವಿಷಯಗಳನ್ನು ಮಾನ್ಯ ಸದಸ್ಯರು ಚೆನ್ನಾಗಿ ತಿಳಿದುಕೊಳ್ಳಬೇಕು, ಸಮಾಜ ಕಲ್ಯಾಣವೆಂದರೆ ಕೇವಲ ಹರಿಜನ—ಗಿರಿಜನರ ಕಲ್ಯಾಣವಲ್ಲ, ಎಲ್ಲರೂ ಮುಂದೆ ಬರಬೇಕು. ಆದ್ದರಿಂದ ಸುಮ್ಮನೆ ಇಲ್ಲಿ ಟೀಕೆ ಮಾಡುವುದೇ ಒಂದು ದೊಡ್ಡದಲ್ಲ. ಸರ್ಕಾರವನ್ನು ನಡೆಸುವವರು ದೇವತೆಗಳಲ್ಲ. ನಾವು ಏನು ತಪ್ಪಿದ್ದರೂ ಅದನ್ನು ತಿದ್ದಿಕೊಳ್ಳೋಣ. ಮಾನ್ಯ ಸದಸ್ಯರು ಹೀಗೆ ಹೇಳಿದರೆಂದು ನಮಗೇನೂ ಸಿಟ್ಟಿಲ್ಲ. ಯಾವುದೇ ವಿಷಯವನ್ನು ಇಲ್ಲಿ ಹೇಳುವಾಗ ಚೆನ್ನಾಗಿ ವಿಚಾರಗಳನ್ನು ಗ್ರಹಿಸಿ ಮಾತನಾಡುವುದು ಒಳ್ಳೆಯದು. ಎಷ್ಟೆಷ್ಟು ಹಣ ಏನೇನು ಆಗಿದೆ ಎಂಬುದನ್ನು ತಿಳಿದುಕೊಳ್ಳಲಿ. ಇಂಥಾದ್ದರಲ್ಲಿ ಅನ್ಯಾಯವಾಗಿದೆ ಎಂದು ಹೇಳಲಿ. ಸಾಮಾನ್ಯವಾಗಿ ಹೇಳುವುದಾದರೆ ಈ ಕಡೆ ಬಿ. ಡಿ. ಓ. ಗಳು, ಡೆಪ್ಯುಟಿ ಕಮಿಷನರ್, ಇತರೇ ಅಧಿಕಾರಿಗಳು, ನಮ್ಮ ಇಲಾಖೆಯ ಇನ್‌ಸ್ಪೆಕ್ಟರ್, ಸೋಷಿಯಲ್ ವೆಲ್‌ಫೇರ್ ಆಫೀಸರ್, ಆ ಕಡೆ ತಾಲ್ಲೂಕುಬೋರ್ಡ್, ವಿಲೇಜ್ ಪಂಚಾಯತಿ ಮುಖಂಡರೂ ಇರುತ್ತಾರೆ. ಎಂ. ಎಲ್. ಎ. ಗಳು ಬೇರೆ ಇರುತ್ತಾರೆ. ಎಲ್ಲಿಯೇ ತಪ್ಪು ಇರಲಿ ಅದನ್ನು ಏತಕ್ಕೆ ಸರಿಪಡಿಸುವುದಕ್ಕೆ ಸಾಧ್ಯವಿಲ್ಲವೆಂದು ನಾನು ಕೇಳುತ್ತೇನೆ. ಇನ್ನೂ ಹೆಚ್ಚಿಗೆ ಹೇಳುವುದಕ್ಕೆ ನಾನು ಬಯಸುವುದಿಲ್ಲ. ಶ್ರೀಮಾನ್ ದುಗ್ಗಪ್ಪನವರು ಪಾನ ನಿರೋಧ ವಿಚಾರವಾಗಿ ಬಹಳವಾಗಿ ಹೇಳಿದ್ದಾರೆ. ಅದನ್ನು ನಾನು ಹೇಳುವ ಅಗತ್ಯವಿಲ್ಲ.

ನನ್ನ ಸ್ವಂತ ವಿಷಯ ಒಂದನ್ನು ಹೇಳುವುದಕ್ಕೆ ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಬೇಡುತ್ತೇನೆ. ಹಿಂದಿಯನ್ನು ಮೊದಲು ನಾನು ಗಾಂಧೀಜಿ ಅವರ ಹತ್ತಿರ ಕಲಿತಾಗ ಮೊಟ್ಟ ಮೊದಲನೆಯ ವಾಕ್ಯ ನಾನು ಓದಿದ್ದು : (ಹಿಂದಿ ವಾಕ್ಯವನ್ನು ಹೇಳಿದರು.) ಆದುದರಿಂದ ನಾನು ಹೆಚ್ಚು ಮಾತು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾವು ಅಂಥ ಜನರಲ್ಲಿ ಒಬ್ಬರಾಗುವುದಿಲ್ಲ. ಯಾರು ಬಾಯಿ ಮಾತಿನಲ್ಲಿ ಹೇಳಿ ಅದರಂತೆ ನಡೆಯುವುದಿಲ್ಲವೋ ಅವರಲ್ಲಿ ನಾವು ಒಬ್ಬರಾಗುವುದಿಲ್ಲ. ಯಾರು ಸತ್ಯಶೀಲರಾಗಿರುತ್ತಾರೆ, ಅವರು ಯಾವುದನ್ನು ಹೇಳುತ್ತಾರೆಯೋ ಅದನ್ನು ಮಾಡಿ ತೋರಿಸುತ್ತಾರೆ. ಆದುದರಿಂದ ಅಂಥ

ಸನ್ನಿವೇಶ, ಅಂಥ ಅವಕಾಶ ಒದಗಿದಾಗ ಅಂಥ ಒಂದು ಪರಿಸ್ಥಿತಿ ಬಂದಾಗ ಎಂದಿಗೂ ಹಿಂಜರಿಯು ವುದಿಲ್ಲ. ಇದು ಕೇವಲ ಹರಿಜನರಿಗೆ ಸಂಬಂಧಪಟ್ಟದ್ದಲ್ಲದೆ, ನೂರಕ್ಕೆ 50 ಭಾಗ ಇರುವ ಹೆಣ್ಣು ಮಕ್ಕಳ ಅಭಿವೃದ್ಧಿಗೆ ಸಂಬಂಧಪಟ್ಟ ವಿಷಯವೂ ಆಗಿದೆ. ಆದುದರಿಂದ ಅಂಥ ಒಂದು ಪರಿಸ್ಥಿತಿ ಒದಗಿ ದಾಗ ಈ ಸ್ಥಾನಕ್ಕಾಗಿ ಅಂಟಿಕೊಂಡು ಕುಳಿತಿರುತ್ತೇನೆಂದು ತಿಳಿಯಬೇಕಾದ್ದಿಲ್ಲ. ಒಂದು ವೇಳೆ ಹಾಗ ಬಿಡಬೇಕಾದ ಸಂದರ್ಭ ಬಂದರೆ ಬಿಡುವುದಕ್ಕೆ ಸಿದ್ಧ. ಆದರೆ ಯಾರಿಗಾದರೂ ಹೆದರಿ ಓಡಿ ಹೋಗುತ್ತೇನೆ ಎಂದು ತಿಳಿಯಬೇಕಾಗಿಲ್ಲ. ಅಂಥ ಪರಿಸ್ಥಿತಿ ಬಂದರೆ ಒಂದು ತತ್ವಕ್ಕಾಗಿ ಹೋಗು ತ್ತೇನೆಯೇ ವಿನಾ ಬೆದರಿಕೆಗೆ ಹೋಗುವುದಿಲ್ಲ. ಬ್ರಿಟಿಷರಿಗೇ ಹೆದರದವರು ನಿಮ್ಮಂಥವರಿಗೆ ಹೆದರು ವುದಕ್ಕೆ ಸಾಧ್ಯವೇ ? ಒಂದು ತತ್ವದ ದೃಷ್ಟಿಯಿಂದ ಅಂಥ ಒಂದು ಸಂದರ್ಭ ಒದಗಿದಾಗ ನಾನು ಹೋಗುವುದಕ್ಕೆ ಸಿದ್ಧ. ಶ್ರೀ ಮುಕ್ಕಣ್ಣಪ್ಪನಂಥವರು ಹೇಳಿದರೆ ಹೋಗುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

12 ಜನ ಐ. ಎ. ಎಸ್. ಪರೀಕ್ಷೆಯಲ್ಲಿ ಪಾಸಾಗಿರುತ್ತಾರೆ, ಅವರು ಇಂಟರ್‌ವ್ಯೂಗೆ ಹೋಗ ಬೇಕಾಗಿರುತ್ತದೆ ಎನ್ನುವುದನ್ನು ಮಾನ್ಯ ಸಭೆಗೆ ತಿಳಿಸುತ್ತೇನೆ.

ಶ್ರೀಮತಿ ಚಂಪಾಬಾಯಿ ಬೋಗಲೆ.—ಬೆಳಗಾಂ ಜಿಲ್ಲೆಯಲ್ಲಿರುವ ಹಾಸ್ಟೆಲ್‌ನಲ್ಲಿರುವ ಮಕ್ಕ ಳಿಗೆ ಸ್ಕಾಲರ್‌ಷಿಪ್ ಸಿಕ್ಕುವುದಿಲ್ಲ. ಇನ್ನು ಮುಂದಾದರೂ ಕೊಡಿಸುವ ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಮೆರಿಟ್ ಸ್ಕಾಲರ್‌ಷಿಪ್ ಕೊಟ್ಟೇ ಕೊಡುತ್ತೇವೆ. ಹರಿ ಜನರಿಗೆ ಕೊಡುವ ಸ್ಕಾಲರ್‌ಷಿಪ್ ಹಣವೆಲ್ಲ ಕೇಂದ್ರ ಸರ್ಕಾರದಿಂದ ಬರುತ್ತದೆ. ಮೆರಿಟ್ ಸ್ಕಾಲರ್ ಷಿಪ್ ಖಾಸಗಿ ಹಾಸ್ಟೆಲ್‌ನಲ್ಲಿರಲಿ, ಸರ್ಕಾರದ ಹಾಸ್ಟೆಲ್‌ನಲ್ಲಿರಲಿ ಅರ್ಹತೆಯ ಮೇಲೆ ಸಿಕ್ಕುತ್ತದೆ.

ಶ್ರೀ ಎಸ್. ಸುಬ್ಬಯ್ಯನಾಯಕ.—ಹರಿಜನರ ಮತ್ತು ಗಿರಿಜನರ ಭೂಮಿಯನ್ನು ಇತರೆಯವರು ತೆಗೆದುಕೊಳ್ಳುತ್ತಾರೆ. ತನಗೆ ಸಾಮರ್ಥ್ಯವಿಲ್ಲ, ವೃದ್ಧಾಪ್ಯದಿಂದ ಕೃಷಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಬರೆಸಿಕೊಂಡು ಹರಿಜನರ ಮತ್ತು ಗಿರಿಜನರ ಭೂಮಿಯನ್ನು ಇತರೆಯವರು ಕೊಂಡುಕೊಳ್ಳು ತ್ತಿದ್ದಾರೆ. ಈ ರೀತಿ ಪರಭಾರೆ ಆಗದಂತೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ? ಆ ರೀತಿ ಜಾರಿಗೆ ಕೊಟ್ಟರೆ ಏನು ತೊಂದರೆ ಇದೆ ?

ಶ್ರೀಮತಿ ಯಶೋಧರ ದಾಸಪ್ಪ.—ಆ ರೀತಿ ಜಾರಿಗೆ ತರಬೇಕೆಂಬುದೇ ಸರ್ಕಾರದ ಅಭಿಪ್ರಾಯ ವಾಗಿದೆ.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ತುಮಕೂರು ಜಿಲ್ಲೆಯಲ್ಲಿ ದೇವರಾಯನದುರ್ಗದ ಹತ್ತಿರ ಲಂಬಾಣಿ ಜನರು ಒಂದುಸಾವಿರ ಇದ್ದಾರೆ. ಅವರು ಹರಿಜನರಲ್ಲೂ ಸೇರಿಲ್ಲ, ಗಿರಿಜನರಲ್ಲೂ ಸೇರಿಲ್ಲ. ಅವರಿಗೆ ಯಾವ ಸಹಾಯವೂ ಆಗಿಲ್ಲ, ಅನುಕೂಲಗಳೂ ಆಗಿಲ್ಲ. ಈ ಬಗ್ಗೆ ನಾನು ಮಾನ್ಯ ಮಂತ್ರಿ ಯವರಿಗೆ ಕಾಗದವನ್ನು ಬರೆದಿದ್ದೇನೆ, ಇಲಾಖೆಗೂ ಅನೇಕ ಕಾಗದಗಳನ್ನು ಬರೆದಿದ್ದೇನೆ. ಅದರ ಬಗ್ಗೆ ಏನೂ ಜವಾಬು ಬಂದಿಲ್ಲ, ಯಾವ ಕಾರ್ಯವೂ ಆಗಿಲ್ಲ. ಇದು ಸರ್ಕಾರದ ರೀತಿ ನೀತಿಯೇ ಎನ್ನುವುದನ್ನು ಸ್ಪಷ್ಟಪಡಿಸಬೇಕು.

ಶ್ರೀಮತಿ ಯಶೋಧರ ದಾಸಪ್ಪ.—ಹರಿಜನರು, ಒಡ್ಡರು. ಷೆಡ್ಯೂಲ್ ಕ್ಯಾಸ್ಟ್‌ನೊಳಗೆ ಬರು ತ್ತಾರೆ. ಬೊಂಬಾಯಿ ಕರ್ಣಾಟಕದಲ್ಲಿ ಇವರು ಡೀನೋಟಿಫೈಡ್ ಗುಂಪಿನಲ್ಲಿ ಬರುತ್ತಾರೆ. ಈ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ ! ಯಾವ ರೀತಿ ಇವರನ್ನು ತೆಗೆದುಕೊಳ್ಳಬೇಕು ಎಂದು ಕೇಳಿದ್ದೇವೆ. ಷೆಡ್ಯೂಲ್ ಕಾಸ್ಟ್‌ನವರಿಗೆ ಕೊಟ್ಟಿರುವ ರೀತಿಯಲ್ಲಿ ಲಂಬಾಣಿಗರಿಗೂ ಹಾಸ್ಟೆಲ್ ಹಾಕ ಬೇಕು ಎಂದರೆ ಸಾಧ್ಯವಾಗುವುದಿಲ್ಲ. ಲಂಬಾಣಿಗರ ಕಾಲೋನಿ ಅಲ್ಲಲ್ಲಿ ಒಂದೊಂದು ಇದೆ ಎಂದು ಹೇಳಿದ್ದಾರೆ. ಈ ವರ್ಷ ಹೆಚ್ಚು ದುಡ್ಡು ಬಂದಿದೆ. ಅದರಲ್ಲಿ ಏನಾದರೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕೆಲವು ಕಡೆ ಡೀನೋಟಿಫೈಡ್ ಎಂದೂ ಕೆಲವು ಕಡೆ ಷೆಡ್ಯೂಲ್ ಕ್ಯಾಸ್ಟ್ ಎಂದೂ ಲಂಬಾಣಿ ಜನರನ್ನು ಪರಿಗಣಿಸಿರುವುದರಿಂದ ನಾವು ಇಂಡಿಯಾ ಸರ್ಕಾರಕ್ಕೆ ಬರೆದಿದ್ದೇವೆ. ಇವರನ್ನು ಯಾವುದಾದರೂ ಒಂದು ರೀತಿಯಲ್ಲಿ ಮಾತ್ರ ಪರಿಗಣಿಸಬೇಕು ಎಂದು. ಡೀನೋಟಿಫೈಡ್ ನಮ್ಮಲ್ಲಿ 14 ಲಕ್ಷ ಜನರಿದ್ದಾರೆ. ಲಂಬಾಣಿಯವರನ್ನೂ ಅವರಲ್ಲಿ ಸೇರಿಸಿದರೆ ಆ ಜನಾಂಗದ ಏಳಿಗೆಗೋಸ್ಕರ ಹಣವನ್ನು ತೆಗೆದುಕೊಂಡು ಖರ್ಚು ಮಾಡುವುದಕ್ಕೆ ಸಿದ್ಧರಾಗಿದ್ದೇವೆ. ಅತಿ ಜಾಗ್ರತೆಯಾಗಿ ಇಂಡಿಯಾ ಸರ್ಕಾರದವರು ತೀರ್ಮಾನ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ.

ಶ್ರೀ ಡಿ. ಐ. ಗೌಡ.—ಹಾಸ್ಟಲುಗಳಲ್ಲಿರುವ ವಿದ್ಯಾರ್ಥಿಗಳಿಗೆ ಕೊಡುವ ಹಣವನ್ನು 18 ರೂಪಾಯಿಗಳಿಂದ 20 ರೂಪಾಯಿಗಳಿಗೆ ಏರಿಸಿರುವುದಾಗಿ ಹೇಳಿದರು. ಆದರೆ ಅದಕ್ಕೆ ಬೇಕಾದ ಮೊತ್ತವನ್ನು ಜಿಲ್ಲಾಧಿಕಾರಿಗಳ ಕಡೆಗೆ ಕಳಿಸಿಕೊಟ್ಟಿಲ್ಲ. ಈ ವರ್ಷ ಮುಗಿಯುವುದಕ್ಕೆ ಇನ್ನು ಐದಾರು ದಿವಸ ಮಾತ್ರ ಉಳಿದಿರುವುದರಿಂದ ಬೇಗ ಕಳಿಸಿಕೊಡುವ ವ್ಯವಸ್ಥೆ ಮಾಡುತ್ತಾರೆಯೆ ?

ಶ್ರೀಮತಿ ಯಶೋಧರ ದಾಸಪ್ಪ.—ಈ ವರ್ಷವೇ ಕಳಿಸಿಕೊಡುತ್ತೇವೆ. ಇಲ್ಲದೆ ಇದ್ದರೆ ಬರುವ ವರ್ಷಕ್ಕೆ ಕಳಿಸುತ್ತೇವೆ.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಕೇಂದ್ರದಿಂದ ಆದೇಶ ಬರುವವರೆಗೂ ಲಂಬಾಣಿ ಜನಗಳಿಗೆ ಏನೂ ಸಹಾಯ ದೊರೆಯುವುದಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಲಂಬಾಣಿ ಜನರಿಗೆ ಖಂಡಿತ ಸಹಾಯ ಮಾಡುತ್ತೇವೆ.

ಶ್ರೀ ಗೋಪಾಲ ಸಾರೆನ್ನ.—ಕೇಂದ್ರ ಸರ್ಕಾರ ಕೊಡುವ ಸ್ಕಾಲರ್‌ಷಿಪ್ ಅಲ್ಲದೆ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಖಾತೆಯ ಮೂಲಕ ಕೊಟ್ಟ ಸ್ಕಾಲರ್‌ಷಿಪ್‌ಗಳನ್ನೆಲ್ಲ ಕೊಟ್ಟಿದ್ದೇವೆಂದು ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸ್ಕಾಲರ್‌ಷಿಪ್‌ಗಳು ಸಿಕ್ಕಲಿಲ್ಲ. ಈ ವಿಚಾರದಲ್ಲಿ ಒಂದು ವರದಿಯನ್ನು ಆ ಇಲಾಖೆಯ ಅಧಿಕಾರಿಗಳು ತರಿಸಿದ್ದಾರೆ. ಅದರ ಸತ್ಯಾಂಶವೇನು ಎನ್ನುವುದನ್ನು ತಿಳಿಸುತ್ತಾರೆಯೇ ಸ್ವಾಮಿ ?

ಶ್ರೀಮತಿ ಯಶೋಧರ ದಾಸಪ್ಪ.—ಮಾನ್ಯ ಸದಸ್ಯರು ಹೇಳಿದ ಹಾಗೆ ಷೆಡ್ಯೂಲ್ ಕ್ಯಾಸ್ಟ್‌ಗೆ ಸಂಬಂಧಪಟ್ಟ ಹಾಗೆ 30-9-64 ರಲ್ಲಿ ಒಂದು ಕಳಿಸಿದ್ದಾರೆ, ಷೆಡ್ಯೂಲ್ ಟ್ರೈಬ್ಸ್‌ಗೆ ಸಂಬಂಧಪಟ್ಟಂತೆ 17-3-1965 ರಲ್ಲಿ ಕಳಿಸಿದ್ದಾರೆ. ಇತರ ಹಿಂದುಳಿದ ವರ್ಗಗಳಿಗೆ ಹೊಸ ಅಪ್ಲಿಕೇಷನ್ ಪಡೆಯಲು 20-8-1964 ಕೊನೆಯ ದಿವಸ. ಇದರಿಂದ ಅವರವರ ಅಪ್ಲಿಕೇಷನ್ ತೆಗೆದುಕೊಂಡು ಕಳಿಸುವುದರಲ್ಲಿ ಇತರ ಹಿಂದುಳಿದ ವರ್ಗದವರ ಸಂಬಂಧದಲ್ಲಿ ಸ್ವಲ್ಪ ನಿಧಾನವಾಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಮ್ಮ ತಿಪಟೂರಿನಲ್ಲಿ ಒಂದು ಹರಿಜನ ಕಾಲೋನಿ ಮಾಡಬೇಕೆಂದು ಎಂಟು ವರ್ಷದಿಂದ ಹೇಳುತ್ತಾ ಇದ್ದೇವೆ. ಮೊದಲು ವ್ಯವಸಾಯ ಮಾಡುವುದಕ್ಕೆಂದು 25 ಎಕರೆ ಜಮೀನು ಕೊಟ್ಟರು. ಆದರೆ ನಿಮ್ಮ ಇಲಾಖೆಯವರು ಅಲ್ಲಿ ಒಂದು ಹರಿಜನ ಕಾಲೋನಿ ಮಾಡಬೇಕೆಂದು ಈ 25 ಎಕರೆ ಜಮೀನನ್ನು ವ್ಯವಸಾಯಕ್ಕೆ ಕೊಡದೆ ಇಟ್ಟುಕೊಂಡರು. ಹರಿಜನ ಕಾಲೋನೀನೂ ಮಾಡಲಿಲ್ಲ, ಉಳುಮೆಗೆ ಜಮೀನೂ ಕೊಡಲಿಲ್ಲ. ಇದಕ್ಕೆ ಕಾರಣ ಏನು ?

ಶ್ರೀಮತಿ ಯಶೋಧರ ದಾಸಪ್ಪ.—ನನಗೆ ಗೊತ್ತಿಲ್ಲ.

MR. SPEAKER.—The Hon'ble Member says that the Social Welfare Department intervened and they got the building. But, nothing has been done to colonise that though eight years have elapsed.

ಶ್ರೀಮತಿ ಯಶೋಧರ ದಾಸಪ್ಪ.—30 ಸಾವಿರ ರೂಪಾಯಿ ಖರ್ಚುಮಾಡಿ ಹರಿಜನ ಕಾಲೊನಿ ಮಾಡುತ್ತಾ ಇದ್ದೇವೆ. ಹೊಸ ಕಾಲೊನಿ ಮಾಡುವುದಕ್ಕೆ ಹಣ ಇಲ್ಲ. ಇದು ಹೊಸದಾಗಿ ಮಾಡಬೇಕಾಗಿರುವುದರಿಂದ ಈ ಕಾಲೊನಿ ಬಗ್ಗೆ ಶಿಫಾರಸ್ಸು ಮಾಡಬೇಕೆಂದು ಇದ್ದರೂ ಕೂಡ ಮಾಡಿಲ್ಲ. ಹಣದ ಅನುಕೂಲತೆಯಾದ ಕೂಡಲೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಹಣವಿಲ್ಲದ್ದರಿಂದ ಈಗ ಮಾಡಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹಾಗಾದರೆ ಈ ಭೂಮಿಯನ್ನು ಉಳುಮೆ ಮಾಡುವುದಕ್ಕೆ ಏತಕ್ಕೆ ಬಿಟ್ಟುಕೊಡಬಾರದು ?

ಶ್ರೀಮತಿ ಯಶೋಧರ ದಾಸಪ್ಪ.—ಏತಕ್ಕೆ ಕೊಟ್ಟಿಲ್ಲ ಎನ್ನುವ ವಿಷಯ ತಿಳಿದುಕೊಂಡು ಹೇಳುತ್ತೇನೆ.

MR. SPEAKER.—I will now put the Demand to the Vote of the House :

THE QUESTION IS :

"That a sum not exceeding Rs. 2,42,21,000 be granted to the Governmeut to defray the charges which will come in course of payment during the financial year for the period ending 31st day of March 1966, in respect of "Miscellaneous, Social and Developmental Organisation."

The motion was adopted.

Mr. SPEAKER.—The House will now rise to meet tomorrow at 12 Noon.

The House adjourned at Eleven of the Clock to meet again at Twelve of the Clock on Friday, the 26th March 1965.

WD 4907—GPB—500 -12-8-1965

MYSORE LEGISLATIVE ASSEMBLY

Friday, 26th March 1965.

The House met in the Assembly Chamber, Vidhana Soudha, Bangalore, at One of the Clock.

[MR. SPEAKER (SRI B. VAIKUNTA BALIGA, B.A., B.L.) in the Chair.]

STARRED QUESTIONS

(to which oral answers were given).

Rural Water Supply Scheme for Harohalli in Kanakapura Taluk.

*Q.—12. SRI S. KARIAPPA (Kanakapura).—

Will the Government be pleased to state :—

(a) the year in which the Rural Water Supply Scheme for Harohally in Kanakapura Taluk was sanctioned ;

(b) the year in which the work had been entrusted to the Contractor ;

(c) the progress of work that has been done up to date ;

(d) the work that still remains to be done ;

(e) the period required to supply water to the above village ?

A.—SRI RAMAKRISHNA HEGDE (Minister for Development, Panchayati Raj and Co-operation).—

(a) 1958-59.

(b) 1959.

(c) All Civil Engineering Works are completed.

(d) Installation of pumping machinery and harnessing borewell.

(e) In about six months.

ಶ್ರೀ ಎಸ್. ಕರಿಯಪ್ಪ.—ಈ ಯೋಜನೆಯ ಅಂದಾಜು ಮೊಬಲಗು ಎಷ್ಟು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಒಟ್ಟು 87 ಸಾವಿರದ 700 ರೂಪಾಯಿಗಳು.

ಶ್ರೀ ಎಸ್. ಕರಿಯಪ್ಪ.—ಇಷ್ಟು ಚಿಕ್ಕ ಕೆಲಸವನ್ನು ಸುಮಾರು 7 ವರ್ಷಗಳಾದರೂ ಮುಗಿಸ ಲಿಲ್ಲವೇ ? ಇಷ್ಟು ನಿಧಾನಕ್ಕೇನು ಕಾರಣ ?.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮೊದಲನೆಯ ಕಾರಣ ಒಳ್ಳೆಯ ಕಂಟ್ರಾಕ್ಟರ್ ಸಿಗಲಿಲ್ಲ. ಟೆಂಡರ್ ಕರೆದು, ಬಾರದೇ ಇದ್ದುದರಿಂದ ಈಗ ಪುನಃ ಮತ್ತೊಂದು ಸಾರಿ ಆಗದಿದ್ದರೆ ಡಿಪಾರ್ಟ್‌ಮೆಂಟ್ ಮೂಲಕ ಮಾಡಬೇಕಾದುದು ಇದೆ. ಸಾಕಷ್ಟು ಲೇಬರ್ ಬರುತ್ತಿಲ್ಲ. ಮುಖ್ಯವಾದ ಸಿವಿಲ್ ವರ್ಕ್ಸ್ ಮುಗಿದಿದೆ. ಬಾಕಿ ಕೆಲಸ ಇನ್ನು 6 ತಿಂಗಳಲ್ಲಿ ಮುಗಿಸುತ್ತೇವೆ.

ಶ್ರೀ ಎಸ್. ಕರಿಯಪ್ಪ.—ಮೆಷಿನರಿಗಳು ಬಂದಿವೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದೂ ಬಂದಿರಬಹುದು. ಅದರ ಬಗ್ಗೆ ಯಾವ ತರಹ ತೊಂದರೆಯೂ ಇಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಬೋರ್‌ವೆಲ್ ಹಾಕುವುದು ಎಂದರೆ ಏನು, ಹಾರ್ನೆಸಿಂಗ್ ಬೋರ್‌ವೆಲ್ ಎಂದರೇನು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಪಂಪುಹಾಕುವುದು ಒಂದು, ನೀರನ್ನು ಸರಬರಾಜು ಮಾಡಿ ಉಪಯೋಗಕ್ಕೆ ಬಿಡುವುದೂ ಒಂದು.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—1959 ರಲ್ಲಿ ಈ ಕೆಲಸವನ್ನು ಕಂಟ್ರಾಕ್ಟ್ ದಾರನಿಗೆ ಕೊಟ್ಟಿದ್ದು ಎಂದು ಉತ್ತರದಲ್ಲಿ ಹೇಳಿದೆ. ಹಾಗಾದರೆ ಕೆಲಸ ಯಾವಾಗ ಷುರುಮಾಡಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕೆಲಸ ಈಗಾಗಲೆ ಷುರುಮಾಡಿರಬೇಕು. ಕೆಲವು ಭಾಗವನ್ನೂ Time limit ಹಾಕಿ ಮಾಡಬೇಕಾಗಿ ಬಂತು. ನಾಲ್ಕೈದು ತಿಂಗಳಿನಿಂದಲೂ ಬೇಕಾದಷ್ಟು ಕೆಲಸ ನಡೆದಿದೆ. ಕೆಲಸ ಜಾಗ್ರತೆಯಾಗಿ ಮುಗಿಸಬೇಕೆಂದು ಕಂಟ್ರಾಕ್ಟರಿಗೆ ತಿಳಿಸಿದೆ. ಈಗಾಗಲೇ ಆರ್.ಸಿ.ಸಿ. ಟ್ಯಾಂಕ್ ಕೆಲಸ ಮುಗಿದಿದೆ. ಇನ್ನಾರು ತಿಂಗಳೊಳಗಾಗಿ ಈ ಕಾಮಗಾರಿ ಪೂರೈಸಲಾಗುತ್ತದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಈ ಕಾಮಗಾರಿಯನ್ನು ಅವನಿಗೆ ವಹಿಸಿಕೊಡುವಾಗ ಎಷ್ಟು ಸಮಯ ಕೊಟ್ಟಿತ್ತು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಬೇರೆ ಬೇರೆ ಕೆಲಸಗಳಿಗೆ ಬೇರೆ ಬೇರೆ ಅವಧಿಯನ್ನು ನಿರ್ಧಾರ ಮಾಡಿತ್ತು.

ಶ್ರೀ ಬಿ. ಕೆ. ಪುಟ್ಟಯ್ಯ.—1959ರಲ್ಲಿ ಇದ್ದಂಥ ದರಕ್ಕಿಂತಲೂ ಜಾಸ್ತಿಯಾಗಿ ಈಗ ಖರ್ಚಾಗುತ್ತಿದೆಯಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹೆಚ್ಚು ಖರ್ಚಾದರೆ ಅದಕ್ಕೆ ನಾವು ಜವಾಬ್ದಾರಿಯಾಗುವುದಿಲ್ಲ ಅದು ಕಂಟ್ರಾಕ್ಟರಿಗೆ ಸೇರಿದ್ದು.

ಶ್ರೀ ಎಚ್. ಆರ್. ಕೇಶವಮೂರ್ತಿ.—ರೂರಲ್ ವಾಟರ್ ಸಪ್ಲೈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ಲಾನ್ ಮತ್ತು ಅಂದಾಜುಗಳನ್ನು ಕಳುಹಿಸಿರುವುದರಿಂದ ಎಷ್ಟು ಊರುಗಳಿಗೆ ನೀರು ಸರಬರಾಜು ಯೋಜನೆ ಕಾರ್ಯಸಾಧನೆಯಾಗುತ್ತದೆ ? ಯಾವಾಗ ಅದನ್ನು ಪೂರೈಕೆ ಮಾಡುತ್ತಾರೆ ? Of course it is a question pertinent to the main question ? Though it is a State question, it is important from many aspects.

Mr. SPEAKER.—From the individual the Hon'ble Member is going to general. If the Hon'ble Minister has to answer, he must have papers.

Sri RAMAKRISHNA HEGDE.—I can give information which has been already stated several times in this House. We have sent to the Government of India schemes costing about eight crores under the National Rural Water Supply Scheme. I am happy to inform the Hon'ble members that out of those schemes, schemes costing about Rs. 1,20,00,000 have been received sanctioned, only the other day. With regard to the remaining works, we are pressing the Government of India and we hope that early action will be taken by them.

Sri K. S. SURYANARAYANA RAO.—May I know when the Civil Engineering Works were completed ?

Sri RAMAKRISHNA HEGDE.—There are different types of works and they were completed at different times. Is it necessary to give all details ?

Sri K. S. SURYANARAYANA RAO.—If the Civil Engineering works were over long before and if the installation of pumping machinery and harnessing borewells are delayed, would it not amount to waste of money over the project ?

Mr. SPEAKER.—So, fishing information for the purpose of further questioning. The Hon'ble Member wants to know the time of completion and then charge the Government that there has been delay and so on. Next question.

General Body Meeting of Sathnur Service Co-operative Society

*Q.—455 Sri K. L. SHIVALINGE GOWDA (Virupakshipura).—

Will the Government be pleased to state :—

(a) since when the general body meeting of Sathnur Service Co-operative Society, Sathnur Hobli, Kanakapura Taluk, has not been convened;

(b) the reasons for the same ?

A.—Sri KONDAJJI BASAPPA (Deputy Minister for Co-operation).—

(a) The general body meeting of the Society is not due yet, the last general body meeting having been convened on 28-2-1965.

(b) Does not arise in view of reply to clause (a) above.

ಶ್ರೀ ಕೊಂಡಜ್ಜಿ ಬಸಪ್ಪ.—ಉತ್ತರದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕಾಗಿದೆ. (ಅ) ಉತ್ತರದಲ್ಲಿ ಕಳೆದ ಸರ್ವಸದಸ್ಯರ ಸಭೆಗೆ ಬದಲಾಗಿ 1962-63 ಮತ್ತು 1963-64ನೇ ಸರ್ವಸದಸ್ಯರ ಸಭೆ ಎಂಬುದಾಗಿ ತಿದ್ದಿಕೊಳ್ಳಬೇಕು.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈ ಸಭೆ ನಡೆಸಿದಾಗ ಸಂಘದ ಅಧ್ಯಕ್ಷರು ಹಾಜರಿ ಇದ್ದರೂ ಬೇರೆಯವರು ಅಧ್ಯಕ್ಷತೆ ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅದು ಕ್ರಮ ಬದ್ಧವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅದು ಸರ್ಕಾರದ ಗಮನಕ್ಕೆ ಬಂದಿದೆ. ಅಧ್ಯಕ್ಷರೇನಾದರೂ ಗೈರುಹಾಜರಿಯಾಗಿದ್ದರೆ ಅವರ ಜಾಗದಲ್ಲಿ ಇಂತಹವರನ್ನು ಚುನಾವಣೆ ಮಾಡಿದ್ದಾರೆಂಬುದೇ ಅಲ್ಲಿ ಅನುಮಾನಾಸ್ಪದವಾಗಿದೆ. ಆದರೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಇದು ಬೈಲಾಗಳಿಗೆ ಅನುಸರಿಸಿ ಆಗಿಲ್ಲ ಆದ್ದರಿಂದ ಈ ವಿಚಾರವನ್ನು ಶಿಫಾರಸು ಮಾಡುವುದಕ್ಕಾಗುವುದಿಲ್ಲ ಎಂಬುದ ಗಿ ಅವರು ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಸಂಘದ ಸದಸ್ಯರ ಪೈಕಿ ಕೆಲವರು ಡಿಫಾಲ್ಟರ್ಸ್ ಆಗಿದ್ದರೂ ಅವರು ಸಂಘದ ಡೈರೆಕ್ಟರುಗಳಾಗಿ ಚುನಾವಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದೂ ಕೂಡ ಬಂದಿದೆ. ಕೆಲವರು ಡಿಫಾಲ್ಟರ್ಸ್ ಇದ್ದರೆಂದು ವರದಿ ಸಹ ಬಂದಿದೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈ ಸಂಘದ ಕಾರ್ಯದರ್ಶಿಗಳಿಂದ ಹಣ ದುರುಪಯೋಗ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಸುಮಾರು ರೂ. 2275-81 ಪೈಸಾಗಳಷ್ಟು ಹಣ ಆ ಸಂಘದ ಗೌರವಕಾರ್ಯದರ್ಶಿಗಳಿಂದ ದುರುಪಯೋಗವಾಗಿದೆಯೆಂದು ವರದಿಬಂದಿದೆ. ಅವರ ಮೇಲೆ ಕ್ರಿಮಿನಲ್ ಕಂಪ್ಲೇಂಟನ್ನು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಲಾಡ್ಜ್ ಮಾಡಿದ್ದಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸಂಘದ ಅಧ್ಯಕ್ಷರು ಜನರಲ್ ಬಾಡಿ ಮೀಟಿಂಗ್‌ನಲ್ಲಿ ಅಧ್ಯಕ್ಷತೆ ವಹಿಸದೇ ಇದ್ದಾಗ ಸದಸ್ಯರ ಪೈಕಿ ಬೇರೆ ಯಾರಾದರೂ ಅಧ್ಯಕ್ಷತೆ ವಹಿಸಬಹುದು ಎಂಬುದಾಗಿ ಏಕೆ ಸರ್ಕಾರದವರು ಆದೇಶವನ್ನು ಹೊರಡಿಸಬಾರದು ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ರೀತಿ ಮಾಡುವುದಕ್ಕಾಗುವುದಿಲ್ಲ. ಸಂಘದ ಅಧ್ಯಕ್ಷ ಕಾನೂನು ಪ್ರಕಾರ ಪ್ರಿಸೈಡ್ ಮಾಡಬೇಕಾಗುತ್ತದೆ. ಅವರ ಗೈರುಹಾಜರಿಯಲ್ಲಿ ಸದಸ್ಯರಲ್ಲದವರು ಮಾನ್ಯ ಸದಸ್ಯರಲ್ಲಿ ಯಾರಾದರೂ ಪ್ರಿಸೈಡ್ ಮಾಡಬಹುದು. ಬೇರೆ ಯಾರೋ ಬಂದು ಪ್ರಿಸೈಡ್ ಮಾಡಿದರೆ ಮೀಟಿಂಗಿನ ಎಲ್ಲಾ ಪ್ರೊಸೀಡಿಂಗ್ಸ್ ಇಲ್ಲೀಗಲ್ ಆಗುತ್ತದೆ.

Mr. SPEAKER.—He suggested amendments in the rules is it not desiable that some one else presides? What do the Government consider?

Sri KONDAJJI BASAPPA.—It is not desirable Sir

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಇವರು ಕಾರ್ಯಕಾರಿ ಸಮಿತಿಯ ಸದಸ್ಯರೊಬ್ಬರ ಅಣ್ಣಂದಿರ ಮಕ್ಕಳೆಂಬುದಾಗಿ ಅವರ ಮೇಲೆ ಸರ್ಕಾರದವರು ಯಾವಕ್ರಮವನ್ನು ತೆಗೆದುಕೊಳ್ಳ ಬಾರದೆಂದು ಅಭಿಪ್ರಾಯವೇ!

ಶ್ರೀ ಕೊಂಡಜ್ಜಿ ಬಸಪ್ಪ.—ಅದು ನನಗೆ ಗೊತ್ತಿಲ್ಲ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಇಂತಹ ಸೇವಾ ಸಹಕಾರ ಸಂಘಗಳಲ್ಲಿ ಗೌರವ ಕಾರ್ಯದರ್ಶಿಗಳ ಬದಲು ಒಬ್ಬ ಖಾಯಂ ಸೆಕ್ರೆಟರಿಯನ್ನು ನೇಮಿಸುವ ಬಗ್ಗೆ ತಕ್ಕಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಯೇ!

ಶ್ರೀ ಕೊಂಡಜ್ಜಿ ಬಸಪ್ಪ.—ಎಲ್ಲೆಲ್ಲಿ ಇಂತಹ ಸೇವಾಸಹಕಾರ ಸಂಘಗಳಿವೆಯೋ ಅಲ್ಲೆಲ್ಲಾ ಖಾಯಂ ಸೆಕ್ರೆಟರಿಗಳನ್ನು ನೇಮಿಸಬೇಕೆಂದು ಅನುಮತಿ ಕೊಟ್ಟಿದ್ದೇವೆ. ಕೆಲವು ಕಡೆಗಳಲ್ಲಿ ಇಲಾಖೆಯ ಅಧಿಕಾರಿಗಳನ್ನು ಕೂಡ ಕೊಡುತ್ತಿದ್ದೇವೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಉತ್ತರದಲ್ಲಿ 2 ಸಾವಿರ ಚಿಲ್ಲರೆ ಹಣ ದುರುಪಯೋಗವಾಗಿದೆ ಎಂಬುದಾಗಿ ಹೇಳಿದ್ದೀರಿ. ಅದು ಯಾವವರ್ಷದಲ್ಲಿ ದುರುಪಯೋಗವಾಗಿದೆ? ಈಗ ಆ ಸೊಸೈಟಿ ಚೆನ್ನಾಗಿ ಕೆಲಸ ಮಾಡುತ್ತಿದೆಯೇ!

ಶ್ರೀ ಕೊಂಡಜ್ಜಿ ಬಸಪ್ಪ.—ಈ ಪ್ರೊಸೀಡಿಂಗ್ಸ್ ನೋಡಿದರೆ ಅದು ಅಷ್ಟು ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬ ನಂಬಿಕೆ ಬರುವುದಿಲ್ಲ. ಆದ್ದರಿಂದ ನಮ್ಮ ಇಲಾಖೆಯವರು ಮ್ಯಾನೇಜ್‌ಮೆಂಟಿನವರಿಗೆ ಷೋಕಾಸ್ ನೋಟೀಸ್ ಕೊಟ್ಟು ಆಕ್ಟಿನ 30 ನೇ ಸೆಕ್ಷನ್ ಪ್ರಕಾರ ಅದನ್ನು ಸೂಪರ್‌ಸೀಡ್ ಮಾಡಬೇಕಾದ ಸಂದರ್ಭ ಕಂಡುಬರುತ್ತಾ ಇದೆ.

ಶ್ರೀ ಕೆ.ಎಲ್. ಶಿವಲಿಂಗೇಗೌಡ.—ಈ ಸೊಸೈಟಿಯು ರಿಜಿಸ್ಟ್ರೇಷನ್ ಆಗಿ ಎಷ್ಟು ವರ್ಷ ಆಯಿತು ಎಷ್ಟು ವರ್ಷಗಳಿಂದ ಈ ಸೊಸೈಟಿಯ ಲೆಕ್ಕಗಳು ಆಡಿಟ್ ಆಗಿಲ್ಲ, ಎಷ್ಟು ವರ್ಷಗಳ ಆಡಿಟ್ ಆಗಿದೆ?

ಶ್ರೀ ಕೊಂಡಜ್ಜಿಬಸಪ್ಪ.—ಈ ಸೊಸೈಟಿಯು 28-4-1959ರಲ್ಲಿ ರಿಜಿಸ್ಟರಾಗಿದೆ. 63-64ನೇ ಸಾಲಿನಲ್ಲಿ ಈ ಸೊಸೈಟಿಯ ಆಡಿಟ್ ಆಗಿದೆ. 1964-65ನೇ ಸಾಲಿನ ಆಡಿಟ್ ಆಗಿಲ್ಲ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈ ಸೊಸೈಟಿಯು ಆಡಿಟ್ ಆಗದೆ ಅದರ ಜನರಲ್‌ಬಾಡಿ ಮೀಟಿಂಗ್ ನಡೆಸುವುದಕ್ಕೆ ಅವಕಾಶ ಇದೆಯೇ?

ಶ್ರೀ ಕೊಂಡಜ್ಜಿಬಸಪ್ಪ.—ಆ ಸೊಸೈಟಿಯಲ್ಲಿ ಬೇರೆ ಯಾವ ವಿಧವಾದ ನಡೆವಳಿಕೆಗಳೂ ಇಲ್ಲದಿದ್ದರೆ ಆಗ ಆ ಸೊಸೈಟಿಯ ಜನರಲ್‌ಬಾಡಿ ಮೀಟಿಂಗ್ ನಡೆಸಬಹುದು.

ಶ್ರೀ ಕೆ. ಎಸ್. ಶಿವಲಿಂಗೇಗೌಡ.—ಷಾರ್ಟ್ ಟರ್ಮ್, ಮೀಡಿಯಂ ಟರ್ಮ್ ಸಾಲಕ್ಕೆ ಸಂಬಂಧಪಟ್ಟ ಹಾಗೆ ಈ ಸೊಸೈಟಿಯವರು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕಿಗೆ ಕೊಡಬೇಕಾದ ಬಾಕಿ ಎಷ್ಟಿದೆ?

Mr. SPEAKER.—How does it arise out of this question? This is asking for detailed information spreading over a number of years full of statistics? If the information is readily available it may be given. I have no objection.

Sri KONDAJJI BASAPPA.—A sum of Rs. 11,189 is overdue to the District Central Co-operative Bank, Bangalore.

V-31-1965
1965-9.1-7
(B) 4832

Equation of Posts of Assistannt and Junior Market Superintendents in Gulbarga Division.

*Q.—606. Sri VEERABHADRAPPA ERAPPA (Yelburga).—

Will the Government be pleased to state.—

(*a*) Whether the posts of Assistant and Junior Market Superintendents in Gulbarga Division have been equated with similar posts in the other Divisions in the State and if not, the reasons for the same ;

(*b*) whether the posts of Key Markets Superintendents and Senior Market Superintendents in Gulbarga Division have been equated with similar posts in the Department ;

(*c*) if so, the reason for not conceding the equation of the posts of Junior and Assistant Market Superintendents ;

(*d*) whether it is not a fact that injustice has been done in not equating the posts of Superintendents in 1958 even though the posts of Markets Officers in old Mysore and Bombay Karnatak areas have been equated during the said year ?

A.—Sri RAMAKRISHNA HEGDE (Minister for Development, Panchayathi Raj and Co-operation).—

(*a*) No, since there are no similar posts in the other Divisions of the State.

(*b*)— (i) Key Market Superintendents have been equated with the Marketing Assistants of old Mysore.

(ii) Senior Market Superintendents have been equated with the District Marketing Inspectors of old Mysore.

(*c*) Does not arise in view of reply to clause (a) above.

(*d*) No.

ಶ್ರೀ ವೀರಭದ್ರಪ್ಪ ಈರಪ್ಪ.—ಗುಲ್ಬರ್ಗ ವಿಭಾಗದಲ್ಲಿ ಅಸಿಸ್ಟೆಂಟ್ ಮತ್ತು ಜೂನಿಯರ್ ಮಾರ್ಕೆಟ್ ಸೂಪರಿಂಟೆಂಡೆಂಟರುಗಳ ಹುದ್ದೆಗಳು ಎಷ್ಟಿವೆ, ಮತ್ತು ಅವರ ಪೇ ಸ್ಕೇಲ್ಸ್ ಏನಿದೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅಲ್ಲಿ ಜೂನಿಯರ್ ಮಾರ್ಕೆಟ್ ಸೂಪರಿಂಟೆಂಡೆಂಟರುಗಳ ಹುದ್ದೆಗಳು 3 ಇವೆ. ಅವರ ಪೇಸ್ಕೇಲ್ 105—4—129—7—164—6—170 ಇದೆ ಆ ಮೇಲೆ ಅಸಿಸ್ಟೆಂಟ್ ಮಾರ್ಕೆಟ್ ಸೂಪರಿಂಟೆಂಡೆಂಟರುಗಳ ಹುದ್ದೆಗಳು 10 ಇವೆ. ಅವರ ಪೇ ಸ್ಕೇಲ್ 80 ರೂಪಾಯಿಗಳಿಂದ 130 ರೂಪಾಯಿಗಳವರೆಗೆ ಇದೆ.

Sri GANJI VEERAPPA.—May I know what were the criteria adopted to decide the seniority of these officers when there were no similar posts ?

Sri RAMAKRISHNA HEGDE.—The Rebello Committee which went into the question of equation with regard to non-gazetted officers found it difficult to equate particularly these two or three categories of officers with any of the counterparts in old Mysare area. Subsequently the Government setup another Committee and that Committee has decided that

(SRI RAMAKRISHNA HEGDE)

the Key Marketing Superintendents of ex-Hyderabad should be equated with the Marketing Assistants of old Mysore, the Senior Market Superintendents of ex-Hyderabad should be equated with the District Marketing Inspectors of old Mysore and the Junior Market Superintendents of ex-Hyderabad should be equated with the Assistant Marketing Inspectors of old Mysore. The criteria adopted while equating these posts are (1) the scale of pay, (2) the responsibility and (3) jurisdiction, and so on.

Sri GANJI VEERAPPA.—May I know whether the recommendations of this Committee have been accepted by Government.

Sri RAMAKRISHNA HEGDE.—Yes.

Sri H. R. KESHAVA MURTHY.—Why should there not be uniform pay scales in these cadres throughout the State ?

Sri RAMAKRISHNA HEGDE.—This is very difficult to answer. We did not create the posts in ex-Hyderabad areas before they were integrated in new Mysore. These Officers belonged to ex-Hyderabed Government and therefore they had different scales of pay. We cannot compietely iron out these differences. It would be against the rules.

ಶ್ರೀ ಸಿದ್ದಯ್ಯ ಕಾಶೀಮಠ್.—ಮೈಸೂರು ದೇಶದಲ್ಲಿರತಕ್ಕ ಎಲ್ಲಾ ಮಾರ್ಕೆಟ್ ಅಫೀಸರುಗಳ ಪೇ ಸ್ಕೇಲ್ಸ್ ಮತ್ತು ಕಾನೂನುಗಳನ್ನು ಯೂನಿಫಾರಂ ಮಾಡುವುದಕ್ಕೆ ಸರ್ಕಾರದವರೇನಾದರೂ ಯೋಚನೆ ಮಾಡಿದ್ದಾರೆಯೇ ?

Sri RAMAKRISHNA HEGDE.—It is the view of Government that we should have uniform scales of pay, and rules for this. Actually the Select Committee on the Regulated Markets Bill has gone into the question and made certain recommendatious.

Writ Petitions filed by Offical of the State regarding Inter-state Senioritty lists.

Q.—636. Sri ANDANAIAH (Kunigal).—(19-2-1965)

Will the Government be pleased to state :—

(*a*) number of writ petitions filed by the Officials of Mysore State after integration challenging Inter-State Seniority Lists in the High Court of Mysore (both in the case of provisional and final Inter-State Seniority lists);

(*b*) in how may cases the Government Order in the above matter was upheld by the High Court (Departmentwar information may be furnished)?

Sri S. NIJALINGAPPA (Chief Minister).—(24-3-1965).

A.—(*a*) 80.

(*b*) Information is not readily available. This is being collected and placed on the table of the House.

Sri ANDANAIAH.—I put Question No. 636.

Sri S. NIJALINGAPPA.—As printed.

Sri ANDANAIAH.—I request that this question may be held over because in answer to (b) they have not given the information, but have said that the information is not readily available and it is being collected and placed on the Table of the House.

Mr. SPEAKER.—And so the Hon'ble Member would like it to be held over?

Sri ANDANAIAH.—Yes.

Mr. SPEAKER.—Then he should have told me at the beginning it self and not after he has put the question and the Hon'ble Chief Minister has answered. Now it becomes part heard. Anyhow, as it is a special case I will hold it over. As soon as the information is collected, it may be given.

Constitution of a Co-ordination Committee to conduct Research on the Life and Culture of Karnataka.

*Q.—730. Sri A. J. DODDHMETI (Ron).—

Will the Government be pleased to state :—

(a) whether they intend to constitute a Co-ordination Committee to conduct research on the life and coulture of Karnataka;

(b) the time required by them to constitute the said Committee ?

A.—Sri S. R. KANTHI (Minister for Education).—

(a) Yes.

(b) Formal orders would issue very soon.

ಶ್ರೀ ಎ. ಜೆ. ದೊಡ್ಡಮೇಟಿ.—ಕರ್ನಾಟಕದ ಜೀವನ ಹಾಗೂ ಸಂಸ್ಕೃತಿಯ ಬಗ್ಗೆ ಸಂಶೋಧನೆಯನ್ನು ನಡೆಸುವುದಕ್ಕಾಗಿ ಸಮಿತಿಯೊಂದನ್ನ ರಚಿಸಲು ಸರ್ಕಾರದವರು ಔಪಚಾರಿಕ ಆದೇಶಗಳನ್ನ ಇಷ್ಟರಲ್ಲಿಯೇ ಸಾದರ್ಮಾಡಲಾಗುವುದು ಎಂದು ಹೇಳಿದ್ದೀರಿ, ಆ ಸಮಿತಿಯ ಸ್ವರೂಪ ಏನು ?

† ಶ್ರೀ ಎಸ್. ಆರ್. ಕಂಠಿ.—ಆ ಸಮಿತಿಯ ಸ್ವರೂಪ ಏನು ಎಂದರೆ, ಆ ಸಮಿತಿಗೆ ವಿದ್ಯಾಖಾತೆಯ ಮಂತ್ರಿಗಳು ಚೇರ್ಮನ್ ಆಗಿರುತ್ತಾರೆ. ಆ ಮೇಲೆ ನಮ್ಮ ರಾಜ್ಯದಲ್ಲಿರತಕ್ಕ ಮೂರು ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳೂ ಅದರಲ್ಲಿ ಇರುತ್ತಾರೆ. ಡೈರೆಕ್ಟರ್ ಆಫ್ ಆರ್ಕಿಯಾಲಜಿ ಅದರಲ್ಲಿ ಇರುತ್ತಾರೆ. ಆ ಮೇಲೆ ಅದರಲ್ಲಿ ಇಬ್ಬರು ಲೆಜಿಸ್ಲೇಟರ್ಸ್ ಇರುತ್ತಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಆ ಸಮಿತಿಯ ಅಧಿಕಾರಿ ವ್ಯಾಪ್ತಿ ಏನು ಮತ್ತು ಅದರ ಕಾರ್ಯಕ್ಷೇತ್ರ ಏನು ?

Sri S. R. KANTHI.—The terms of reference of the Committee would be as per the recommendation of the R. R. Diwakar Committee of which the Hon'ble Member Sri Doddameti also was a member. That Committee was constituted to advise the Government on this matter and it has suggested that a Committee should be formed and according to that

---

†. Indicates that the remarks or speeches have no been revised by the member concerned.

(SRI S. R. KANTHI)

suggestion the Cabinet has taken a decision. This Committee is being formed and its terms of reference will be in accordance with the suggestion made by the other Committee.

Sri S. SIVAPPA.—May I know the terms of reference proposed for this Committee ?

Sri S. R. KANTHI.—They are contained in a G.O. and I can place the G. O. on the table of the House.

Mr. SPEAKER.—Yes.

ಶ್ರೀ ಟಿ. ಮಾದಯ್ಯಗೌಡ.—ಈಗ ಸರ್ಕಾರದವರು ನೇಮಕ ಮಾಡತಕ್ಕ ಸಮಿತಿಯಲ್ಲಿ ಎಷ್ಟು ಜನ ಸದಸ್ಯರು ಇರುತ್ತಾರೆ, ಆ ಸಮಿತಿಯವರು ತಮ್ಮ ವರದಿಯನ್ನು ಎಷ್ಟು ದಿವಸಗಳಲ್ಲಿ ಕೊಡ ಬೇಕೆಂದು ತೀರ್ಮಾನ ಮಾಡಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—1961ನೇ ಇಸವಿಯಲ್ಲಿ ಈ ಬಗ್ಗೆ ಒಂದು ಕಮಿಟಿಯನ್ನು ಸರ್ಕಾರ ದವರು ನೇಮಕ ಮಾಡಿದ್ದರು. ಆ ಕಮಿಟಿಯವರು ತಮ್ಮ ರಿಪೋರ್ಟನ್ನು ಈಗಾಗಲೇ ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ರಿಪೋರ್ಟಿನ ಬಗ್ಗೆ ಕ್ಯಾಬಿನೆಟ್‌ನವರು ಈಗ ಒಂದು ತೀರ್ಮಾನವನ್ನು ತೆಗೆದು ಕೊಂಡಿದ್ದಾರೆ. ಆ ಪ್ರಕಾರ ಈಗ ಹೊಸದಾಗಿ ಒಂದು ಕಮಿಟಿಯನ್ನು ಮಾಡಿ ಆ ಕಮಿಟಿಯವರು ಕರ್ನಾಟಕದ ಜೀವನ ಹಾಗೂ ಸಂಸ್ಕೃತಿಯ ಬಗ್ಗೆ ಸಂಶೋಧನೆಯನ್ನು ನಡೆಸಬೇಕಾಗಿದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ತಾವು ಈ ಕಮಿಟಿ ರಕಮೆಂಡೇಷನ್ಸ್ ಕಳುಹಿಸಿದೆ ಎಂದು ಹೇಳಿದಿರಿ. ಆ ರೆಕಮೆಂಡೇಷನ್ಸ್‌ಗೆ ಪೂರ್ಣವಾಗಿ ಒಪ್ಪಿಗೆ ಕೊಟ್ಟಿದ್ದೀರೊ ಅಥವ ಕೆಲವೊಂದಕ್ಕೆ ಒಪ್ಪಿಗೆ ಕೊಟ್ಟಿದ್ದೀರೊ ? What are the recommendations you have accepted ?

ಶ್ರೀ ಎಸ್. ಆರ್. ಕಂಠಿ.—ಅಲ್ಟರ್‌ನೇಟೀವ್ ರೆಕಮೆಂಡೇಷನ್ ಮಾಡಿದ್ದರು ಅದರಲ್ಲಿ ಒಂದನ್ನು ಒಪ್ಪಿಕೊಂಡಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ಕಮಿಟಿ ವ್ಯಾಪ್ತಿ ಬೇರೆ ಪ್ರಾಂತ್ಯಗಳಿಗೂ ಉಂಟೋ ? ಆಂಧ್ರದಲ್ಲಿರುವ ಅಥೋಣಿ ಮತ್ತು ಕಾಸರಗೋಡ್ ಪ್ರದೇಶಗಳಲ್ಲಿರತಕ್ಕಂಥ ಕನ್ನಡ ಮಾತನಾಡ ತಕ್ಕಂಥ ಜನಗಳನ್ನೂ ಸೇರಿಸಿದ್ದೀರೊ ಅಥವಾ ಎರಡನ್ನೂ ಕೈಬಿಟ್ಟಿದ್ದೀರೋ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ಬರುವುದಿಲ್ಲ. ಕರ್ಣಾಟಕ ಲೈಫ್ ಅಂಡ್ ಕಲ್ಚರ್ ಅಂತ ಇದೆ. ಒಂದೊಂದು ಸ್ಥಳವನ್ನೂ ನಾವು ಹೇಳುವುದಕ್ಕಾಗುವುದಿಲ್ಲ. ಕಮಿಟಿ ಸೆಟ್-ಅಪ್ ಮಾಡಿದ್ದೇವೆ, ಅವರು ವಿಚಾರ ಮಾಡುತ್ತಾರೆ.

ಶ್ರೀ ಸಿದ್ದಯ್ಯ ಕಾಶಿಮಠ.—ಇದಕ್ಕೆ ಸಹಾಯಧನವೆಷ್ಟು ?

ಶ್ರೀ ಎಸ್. ಆರ್. ಕಂಠಿ.—ಈ ಕೆಲಸ ಹೇಗೆ ಹೇಗೆ ನಡೆಯಬೇಕು ಎಂದು ಸ್ಕೀಮುಗಳನ್ನು ಕಳುಹಿಸುತ್ತಾರೆ, ಅದರ ಮೇಲೆ ಡಿಪೆಂಡ್ ಆಗುತ್ತದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈಗ ಸರಕಾರದವರು ರಚಿಸಲಿರುವ ಕಮಿಟಿಯ ಕಾರ್ಯಕ್ಷೇತ್ರ ಮತ್ತು ಕಾರ್ಯವ್ಯಾಪ್ತಿ ಮುಂತಾದುದರ ಬಗ್ಗೆ ನೇಮಿಸಿದಂಥ ಕಮಿಟಿಯ ಶಿಫಾರಸು ಅನುಕೂಲ ವಾದುದಲ್ಲವೆನ್ನುವುದು ಗೊತ್ತಿದೆಯೆ ?

ಶ್ರೀ ಎಸ್. ಆರ್. ಕಂಠಿ.—ಒಂದು ಕಮೀಷನ್ ನೇಮಿಸಬೇಕು ಅಂತ ಹೇಳಿದರು. ಆಮೇಲೆ ಕೋಆರ್ಡಿನೇಟಿಂಗ್ ಕಮಿಟಿ ಮಾಡಬೇಕು ಅಂತ ಹೇಳಿದರು. ಕಮೀಷನ್ ನೇಮಿಸುವುದಕ್ಕೆ ಆಗುವುದಿಲ್ಲ, ಒಂದು ಕೋಆರ್ಡಿನೇಟಿಂಗ್ ಕಮಿಟಿ ಮಾಡೋಣವೆಂದು ಗವರ್ನಮೆಂಟಿನವರು ನಿರ್ಧಾರ ಮಾಡಿದ್ದಾರೆ. ಕೋಆರ್ಡಿನೇಟಿಂಗ್ ಕಮಿಟಿ ಎಕ್ಸಿಕ್ಯೂಟೀವ್ ಬಾಡಿ ಅಲ್ಲ; ಅದು ಅಡ್‌ವೈಸರಿ ಬಾಡಿ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಈಗ ತಾವು ಮಾಡತಕ್ಕಂಥ ಕಮಿಟಿ ಸುಮಾರು ಎಷ್ಟು ದಿವಸಗಳೊಳಗೆ ಅವರ ವರದಿಯನ್ನು ಕಳುಹಿಸಬಹುದು ? ಅವರು ಇತರ ಪ್ರಾಂತ್ಯಗಳಿಗೂ ಹೋಗಿ ಅಲ್ಲಿಯ ಕೆಲಸ ಸ್ಟಡಿಮಾಡಿ, ಕೆಲಸ ಮಾಡುವುದಕ್ಕೆ ಅವಕಾಶವಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅದು ಅಡ್‌ವೈಸರಿ ಬಾಡಿ. ಗವರ್ನ್‌ಮೆಂಟಿಗೆ ಅಡ್‌ವೈಸ್ ಮಾಡುವುದಕ್ಕೆ ಆ ಬಾಡಿ ಮಾಡುತ್ತಾ ಇದ್ದೇವೆ.

ಶ್ರೀ ಡಿ. ವಿ. ಗೌಡ.—ಈ ಸಮಿತಿ ರಚನೆಯಾದ ಮೇಲೆ ಎಷ್ಟು ಅವಧಿಯೊಳಗೆ ನಮ್ಮ ಕರ್ಣಾಟಕ ಜೀವನ ಮತ್ತು ಸಂಸ್ಕೃತಿ ಬಗ್ಗೆ ವಿಷಯ ಕಂಡುಹಿಡಿಯಬೇಕು ? ಅದಕ್ಕೆ ಆಗತಕ್ಕಂಥ ಖರ್ಚಿನ ಅಂದಾಜು ಮಾಡಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಆಗಲೇ ಹೇಳಿದೆ, ಈ ಕಮಿಟಿಯವರು ಕರ್ಣಾಟಕ ಲೈಫ್ ಅಂಡ ಕಲ್ಚರ್ ಬಗ್ಗೆ ರಿಸರ್ಚ್, ಹಿಸ್ಟಾರಿಕಲ್ ಡಾಕ್ಯುಮೆಂಟ್ಸ್, ಎಲ್ಲಾ ವಿಚಾರವಾಗಿ ಸರಕಾರಕ್ಕೆ ಈ ರೀತಿಯಾಗಿ ಮಾಡಿ ಅಂತ ಉಪದೇಶ ಹೇಳುತ್ತಾರೆ; ಮುಂದೆ ಮಾಡುವ ಕೆಲಸ ಸರಕಾರದ್ದು. ಅದನ್ನು ಡೈರೆಕ್ಟರ್ ಅಫ್ ಅರ್ಕಿಯಾಲಜಿ ಮುಖಾಂತರ ಮಾಡಬೇಕು.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಸಮಿತಿಗೆ ಸಲಹೆ ಮಾಡುವ ಸ್ವರೂಪವಿಲ್ಲ, ಯಾವ ಹಣ ವೆಚ್ಚ ಮಾಡುವ ಅಧಿಕಾರವಿಲ್ಲ, ಗ್ರ್ಯಾಂಟು ಮಂಜೂರು ಮಾಡುವ ಸಂಭವವಿಲ್ಲ ಅನ್ನುವುದು ಸರಿಯೆ ?

ಶ್ರೀ ಎಸ್. ಆರ್. ಕಂಠಿ—ಅಡ್ವೈಸರಿ ಬಾಡಿಯವರು ಇಂಥಿಂಥ ಸ್ಕೀಮಿದೆ, ಅದನ್ನು ಸರಕಾರ ದವರು ತೆಗೆದುಕೊಳ್ಳಿ, ಎಕ್ಸಿಕ್ಯೂಟ್ ಮಾಡಿ ಅಂತ ಹೇಳುತ್ತಾರೆ. ಆ ಪ್ರಕಾರ ಸರಕಾರದವರು ಮಾಡಬಹುದು. ಅದನ್ನು ಯೋಚನೆ ಮಾಡುತ್ತಾರೆ ಸರಕಾರದವರು. ಆದ್ದರಿಂದ ಅಡ್ವೈಸರಿ ಬಾಡಿಯವರಿಗೆ ಹಣ ಕೊಡುವ ಪ್ರಶ್ನೆ ಬರುವುದಿಲ್ಲ.

Sri S. SIVAPPA.—Is not the subject of research on the life and culture of Karnataka to be pursued by the university at the academic level ?

Sri S. R. KANTHI.—I must inform the Hon'ble Member that the entire question was before the universities excepting the Bangalore Univesity The two university were consulted and they gave an opinion that there should be a co-ordinating Advisory Committee in which they expressed their willingness to be as members.

Sri S. SIVAPPA.—May I know whether it includes history of Karnataka also or only life and culture ?

Sri S. R. KANTHI.—Karnataka life means, Karnataka life extending over centuries

ಶ್ರೀ ಎಚ್. ಆರ್. ಕೇಶವಮೂರ್ತಿ.—ತಾವು ಈ ರಿಸರ್ಚನ್ನು ಮಾಡುವಾಗ ಕರ್ಣಾಟಕ ವೈಭವ ವವನ್ನು ಎಂದಿನಿಂದ ತೆಗೆದುಕೊಳ್ಳುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—ಕರ್ಣಾಟಕ ಗತವೈಭವ ಎಂದಿನಿಂದ ಪ್ರಾರಂಭವಾಯಿತೋ ಅಂದಿನಿಂದ ತೆಗೆದುಕೊಳ್ಳುತ್ತೇವೆ.

Sri G. DUGGAPPA.—BIHAR THROUGH THE AGES ಎಂಬ ಪುಸ್ತಕ ವನ್ನು ಪಬ್ಲಿಷ್ ಮಾಡಿದ್ದಾರೆ. ಅದೇರೀತಿಯಾಗಿ KARNATAKA THROUGH THE AGES ಅಂತ ಮಾಡುತ್ತೀರೋ ?

Sri S. R. KANTHI.—KARNATAKA THROUGH THE AGES ಅಂತ ಮಾಡಿದ್ದೇವೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಈ ಕೆಲಸ ಈ ವರ್ಷದಲ್ಲಿ ಷುರುವಾಗುವ ಸೂಚನೆ ಏನಾದರೂ ಇದೆಯೊ ?

ಶ್ರೀ ಎಸ್. ಆರ್ ಕಂಠಿ.—ಇದಕ್ಕೆ ಬಹಳ ಟೈಂ ಹಿಡಿಯುವುದಿಲ್ಲವೆಂದು ನನಗೆ ಅನ್ನಿಸುತ್ತದೆ. ಏಕೆಂದರೆ, ಕೋಆರ್ಡಿನೇಟಿಂಗ್ ಕಮಿಟಿ ಮಾಡಿದ್ದು ತೀವ್ರವಾಗಿ ಕೆಲಸ ಮಾಡುವುದಕ್ಕೆ ಅದನ್ನು ಮಾಡುತ್ತಾ ಇದ್ದೇವೆ. ಸನ್ಮಾನ್ಯ ಅನ್ನದಾನಪ್ಪ ದೊಡ್ಡಮೇಟಿಯವರಿಗೆ ಈ ವಿಚಾರವಾಗಿ ಬಹಳ ಗೊತ್ತಿದೆ. ಈಗ ಯಾವ ಸ್ಟೇಜಿನಲ್ಲಿದೆ ಅನ್ನುವುದೂ ಗೊತ್ತಿದೆ.

ಶ್ರೀ ಟಿ. ಮಾದಯ್ಯ ಗೌಡ.—ಕೋಆರ್ಡಿನೇಶನ್ ಕಮಿಟಿಯಲ್ಲಿ ಕೋಆರ್ಡಿನೇಶನ್ ಇರಬೇಕು. ಆದ್ದರಿಂದ ಅದರಲ್ಲಿ ಯಾವ ಯಾವ ಜನಗಳಿರಬೇಕು ಮತ್ತು ಯಾವ ವಿಧವಾದ ಕೋಆರ್ಡಿನೇಶನ್ ಇರಬೇಕು ?

ಶ್ರೀ ಎಸ್. ಆರ್. ಕಂಠಿ.—ಯಾವ ವಿಧಾನದ ಕೋಆರ್ಡಿನೇಶನ್ ಇರಬೇಕೆಂಬ ವಿಚಾರವಾಗಿ ಸರ್ಕಾರಕ್ಕೆ ಸೂಚನೆ ಕೊಡುವುದಕ್ಕೆ ಈ ಕಮಿಟಿ ಇದೆ.

Amount allotted to Co-operative Societies in Tumkur District for procurement of rice

Q.*—526. Sri K. LAKKAPPA (Hebbur).—

Will the Government be pleased to state:—

(*a*) the amount allotted by the Government recently to the Co-operative Societies in Tumkur District for procurement of rice ;

(*b*) who are the officers that are supervising the procurement of rice by such Societies in the said district ;

(*c*) the number of quintals procured by such Societies so far ?

A.—Sri M. V. KRISHNAPPA (Minister for Revenue).—

(*a*) A sum of Rs. 1,85,000 has been given to Co-operative Societies in Tumkur District as share capital contribution to enable the Co-operatives to raise their resources and to purchase paddy with the resources so secured.

(*b*) The officers of the Food Department and the Assistant Registrar of Co-operative Societies in the Co-operative Department.

(*c*) Paddy—7634 quintals.
Rice—4870 quintals.

ಶ್ರೀ ಕೆ. ಲಕ್ಕಪ್ಪ.—ಎಷ್ಟು ಸಹಕಾರ ಸಂಘಗಳು ತುಮಕೂರು ಜಿಲ್ಲೆಯಲ್ಲಿ ಬತ್ತ ಮತ್ತು ಅಕ್ಕಿಯನ್ನು ಪ್ರೊಕ್ಯೂರ್‌ಮೆಂಟ್ ಮಾಡಿದ್ದಾರೆ ?

† ಶ್ರೀ ಎಂ. ವಿ. ಕೃಷ್ಣಪ್ಪ.—12 ಸಹಕಾರ ಸಂಘಗಳಿಗೆ ಷೇರ್ ಕ್ಯಾಪಿಟಲ್ ಸರಕಾರದವರು ಕೊಟ್ಟಿದ್ದಾರೆ. ಅದರಲ್ಲಿ 10 ಸಂಘಗಳವರು ಮಾಡಿದ್ದಾರೆ. ಇನ್ನು ಎರಡು ಸಂಘಗಳವರು ಅಂದರೆ ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರಿನವು—ಈ ಸೀಸನ್ನಿನಲ್ಲಿ ಬತ್ತ ಇಲ್ಲವೆಂತ ಮಾಡಿಲ್ಲ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಜಿಲ್ಲೆಗೆ ಎಷ್ಟು ಅಕ್ಕಿ ಬೇಕಾಗುತ್ತದೆಂದು ನಿರ್ಧಾರಮಾಡಿ ಹಣ ಕೊಟ್ಟಿದ್ದಾರೆ ಸಹಕಾರ ಸಂಘಗಳಿಗೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಪ್ರೊಕ್ಯೂರ್‌ಮೆಂಟಿನಲ್ಲಿ ತುಮಕೂರು ಜಿಲ್ಲೆಗೆ ಎಷ್ಟು ಬೇಕು ಅಂತ ಲೆಕ್ಕ ಹಾಕುವುದಿಲ್ಲ. ಸಂಸ್ಥಾನಕ್ಕೆಲ್ಲಾ ಎಷ್ಟು ಅಕ್ಕಿ ಬೇಕು ಅಂತ ಲೆಕ್ಕ ಹೇಳಿದ್ದೇವೆ. ಮಾನ್ಯ ಸಭೆಗೂ ತಿಳಿಸಿದೆ. ಅದರಲ್ಲಿ ಸರ್‌ಪ್ಲಸ್ ಏರಿಯಾದಿಂದ ಎಷ್ಟು ಪ್ರೊಕ್ಯೂರ್‌ಮೆಂಟಾಗುತ್ತದೆಂದು ಟಾರ್ಗೆಟ್ ಹಾಕಿಕೊಂಡು ಏರ್ಪಾಡು ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಜಿಲ್ಲೆಯಲ್ಲಿ ಬಹುಭಾಗದ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡದೆ ಇರುವುದರಿಂದ, ಯಾವ ಸಹಕಾರ ಸಂಘಗಳು ಕೆಲಸ ಮಾಡುತ್ತಿಲ್ಲವೋ ಅಂಥವುಗಳಿಗೆ ಹಣ ಕೊಡುವುದನ್ನು ಸರಕಾರ ನಿಲ್ಲಿಸುತ್ತದೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲಿ ಸಹಕಾರ ಸಂಘಗಳು ಕೆಲಸ ಮಾಡುವುದಿಲ್ಲ ಅನ್ನುವ ಪ್ರಶ್ನೆ ಬರುವುದಿಲ್ಲ. ಸರಕಾರದವರೇ ರೈತರಿಂದ ಪರ್ಚೇಸ್ ಮಾಡುತ್ತಾರೆ. ಪ್ರೊಕ್ಯೂರ್‌ಮೆಂಟ್ ಆರ್ಡರ್ ಪ್ರಿನ್ಸಿಪಲ್ ಅದು. ಆದ್ದರಿಂದ ಎಲ್ಲೆಲ್ಲಿ ಸಹಕಾರ ಸಂಘಗಳಿಗೆ ಶಕ್ತಿ ಇಲ್ಲ ಅಥವ ಸರಿಯಾಗಿ ಅವು ನಡೆಯುತ್ತಿಲ್ಲ ಅನ್ನುವ ಪ್ರಶ್ನೆ ಇಲ್ಲ. ಎಲ್ಲಾ ಅಧಿಕಾರಿಗಳೇ ನೇರವಾಗಿ ಪರ್ಚೇಸ್ ಮಾಡುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಈ ಜಿಲ್ಲೆಯಲ್ಲಿ ಒಂದು ಮೀಟಿಂಗ್ ಮಾಡಿ, ಎಲ್ಲೆಲ್ಲಿ ಸಹಕಾರ ಸಂಘಗಳು ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು ನೋಡಿ, ಒಂದು ಪಟ್ಟಿ ತರಿಸಿ, ಅದನ್ನು ಸರಕಾರಕ್ಕೆ ಕಳುಹಿಸಿ ಆ ಸಹಕಾರ ಸಂಘಗಳು ಹಣ ದುರುಪಯೋಗ ಮಾಡುತ್ತಿರುವುದರಿಂದ ಅವುಗಳಿಗೆ ಹಣ ಒದಗಿಸ ಬಾರದೆಂದು ಹೇಳಿ ಆದೇಶವಿರುವುದು ಸರಕಾರ ಮನಗಂಡಿದೆಯೇ ?

Mr. SPEAKER.—Is it for the purchase of paddy ?

ಶ್ರೀ ಎಂ. ವಿ. ಕೃಷ್ಣಪ್ಪ.—ಭತ್ತ ಕೊಳ್ಳುವುದಕ್ಕೂ, ಸಹಕಾರ ಸಂಘದ ಹಿಸ್ಸರಿಗೂ ಸಂಬಂಧ ವಿಲ್ಲ. ನಮ್ಮ ಪರವಾಗಿ ಏಜೆಂಟುಗಳಾಗಿರುತ್ತಾರೆ. ಅಧಿಕಾರಿಗಳು ಕೊಳ್ಳುತ್ತಾರೆ; ಮತ್ತು ಅವರೆ ರೈತರು ಎಷ್ಟೆಷ್ಟು ಕೊಡಬೇಕೆಂದು ಡಿಮ್ಯಾಂಡ್ ನಿರ್ಧರ ಮಾಡುತ್ತಾರೆ. ರೈತ ಕೊಟ್ಟಿದ್ದನ್ನು ಸಹಕಾರ ಸಂಘಗಳು ತೆಗೆದುಕೊಂಡು, ಸರಕಾರದ ಏಜೆಂಟಾಗಿ ಗೋಡೌನಿನಲ್ಲಿ ಇಟ್ಟುಕೊಂಡು, ಬೇಕಾದಾಗ ಸರಕಾರಕ್ಕೆ ಕೊಡುವುದು ಅವರ ಕರ್ತವ್ಯ. ಆದ್ದರಿಂದ ಅವರ ಹಿಂದಿನ ನಡೆವಳಿಕೆಗಳಿಗೆ ನಾವು-ಅಂದರೆ ನಮ್ಮ ಡಿಪಾರ್ಟ್‌ಮೆಂಟಿನವರು ಕೈಹಾಕುವುದಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಈ ಜಿಲ್ಲೆಗೆ ಎಷ್ಟು ಪ್ರೊಕ್ಯೂರ್‌ಮೆಂಟ್ ಆಗಬೇಕೆಂದು ನಿಗದಿ ಮಾಡಿದ್ದೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ, ಆ ತರದ ನಿಗದಿ ಮಾಡಿಲ್ಲ. ಮುಂದೆ ಬರುವ ಬೆಳೆಗೆ ನಿಗದಿ ಮಾಡುತ್ತೇವೆ. ಈಗ ಎಷ್ಟು ವಸೂಲಾದರೆ ಅಷ್ಟು ಮಾಡುತ್ತಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸೊಸೈಟಿಯಲ್ಲಿ ಕೊಳ್ಳತಕ್ಕಂಥ ಭತ್ತ ಬಹಳ ಜೊಳ್ಳು, ಬಹಳ ಅಕ್ಕಿ ಬರುವುದಿಲ್ಲ. ಮಿಲ್ಲಿಗೆ ಕೊಟ್ಟರೆ ಎರ್ಲಾ ಹಿಟ್ಟು ಆಗುತ್ತದೆ. ಅದನ್ನು ಸರಕಾರ ಹೇಗೆ ಪರಿಹಾರ ಮಾಡುತ್ತದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಿಲ್ಲೆ ಜಿಲ್ಲೆಗೆ ಏನೂ ವ್ಯತ್ಯಾಸವಿಲ್ಲ. ವರ್ತಕರಿಂದಾಗಲಿ, ಸಹಕಾರ ಸಂಘಗಳಿಂದಾಗಲಿ ಯಾರಿಂದ ಕೊಂಡುಕೊಂಡರೂ ಜೊಳ್ಳು ಬರುತ್ತದೆ. ಏಕೆಂದರೆ ಹೋದ ಬೆಳೆಗೆ ಫ್ಲವರಿಂಗ್ ಸ್ಟೇಜಿನಲ್ಲಿ ಮಳೆ ಜಾಸ್ತಿಯಾಗಿ, ತುಮಕೂರು ಮತ್ತು ಕೋಲಾರ ಜಿಲ್ಲೆ ಯಲ್ಲಿ ಜೊಳ್ಳು ಜಾಸ್ತಿಯಾಯಿತು. ಈಗಿನ ಸ್ಟ್ಯಾಂಡಿಂಗ್ ಕನ್‌ಸ್ಯೂಮರ್ ಕ್ರಾಪಿನಲ್ಲಿ ಬಹಳ ಭತ್ತ ಬರುತ್ತದೆ. ಜೊಳ್ಳು ಬರುವುದಿಲ್ಲ.

Sri K. P. GADAG.—May I know whether the Purchasing Officer takes into account the quality of the paddy while purchasing?

12-30 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ಕ್ವಾಲಿಟಿಯನ್ನೂ ನಿಗದಿ ಮಾಡಿದ್ದೇವೆ. ಇಂತಿಂತಹ ಕ್ವಾಲಿಟಿ ಗಳಿಗೆ ಬೆಲೆ ಎಷ್ಟು ಎನ್ನುವುದನ್ನೂ ನಿಗದಿ ಮಾಡಲಾಗಿದೆ. ಕ್ವಾಲಿಟಿ ಬಹಳ ಪ್ರಾಮುಖ್ಯವಾದುದು.

ಶ್ರೀ ಬಿ. ಬೈರಪ್ಪಾಜಿ.—ತುಮಕೂರು ಜಿಲ್ಲೆಯಲ್ಲಿರುವ ತುರುವೇಕೆರೆ ತಾಲ್ಲೂಕಿನ ತಹಶೀಲು ದಾರರು ಸರಕಾರದ ನಿಯಮವೇನೂ ನೋಡದೆ ಜನಗಳಿಂದ ಹಿಂಸಾರೀತಿಯಿಂದ ಭತ್ತವನ್ನು ವಸೂಲು ಮಾಡಿದ್ದಾರೆಂಬ ದೂರುಗಳು ಸರಕಾರಕ್ಕೆ ಬಂದಿವೆಯೇ? ಹಾಗೆ ಬಂದಿರುವ ದೂರುಗಳ ಮೇಲೆ ಏನು ಕಾರ್ಯಕ್ರಮವನ್ನು ಕೈಗೊಳ್ಳುತ್ತೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ತುಮಕೂರು ಜಿಲ್ಲೆಯಲ್ಲಿರುವ ತುರುವೇಕೆರೆ ತಾಲ್ಲೂಕಿನಲ್ಲಿ ಬಹಳ ಕಡಿಮೆ ಪ್ರಮಾಣದ ಭತ್ತ ವಸೂಲಾಗಿರುವುದು. ಇಲ್ಲಿ ಸುಮಾರು 225 ಕ್ವಿಂಟಾಲುಗಳಷ್ಟು ಮಾತ್ರ ವಸೂಲಾಗಿದೆ. ಬೇರೆ ಕಡೆಗಳಲ್ಲಿ ಎರಡು ಮೂರು ಸಾವಿರ ಕ್ವಿಂಟಾಲುಗಳಷ್ಟು ಭತ್ತ ಬರುತ್ತಿದೆ. ಅಲ್ಲದೆ ಇಲ್ಲಿನ ಅಧಿಕಾರಿಗಳು ತೊಂದರೆ ಕೊಡುತ್ತಿದ್ದಾರೆಂದು ದೂರುಗಳೂ ಬಂದಿವೆ ಮತ್ತು ಮಾನ್ಯ ಸದಸ್ಯರಿಂದಲೂ ಟೆಲಿಗ್ರಾಂ ಕೂಡ ಬಂದಿದೆ. ಬೇಕಾದರೆ ಅಂತಹ ನಿರ್ಬಂಧ ಮಾಡಿ ವಸೂಲು ಮಾಡಬೇಡಿ ಎಂದು ಹೇಳಬಹುದು.

Sri A. P. APPANNA.—Since the Government is not advancing money to the Co-operative Societies, may I know whether the Government is going to pay the interest for the amount that the Co-operative Societies have raised for buying the foodgrains?

Sri M. V. KRISHNAPPA.—The question of paying interest, godown charges, shortages, and various other points are being considered.

ಶ್ರೀ ಅಂದಾನಯ್ಯ.—ಸರಕಾರದವರ ಷೇರು ಕ್ಯಾಪಿಟಲ್ಲಿಗಾಗಿ ಕೊಡುತ್ತಿರುವ ಹಣವನ್ನು ಸೊಸೈಟಿಗಳವರು ತಮ್ಮ ಸ್ವಂತ ವ್ಯಾಪಾರಕ್ಕಾಗಿ ಉಪಯೋಗಿಸಿಕೊಂಡು ಅದರಿಂದ ಲಾಭ ಸಂಪಾ ದನೆ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಸೊಸೈಟಿಗಾಗಿ ಷೇರು ಕ್ಯಾಪಿಟಲ್‌ಗೆ ಸುಮಾರು 1,85,000 ರೂಪಾಯಿಗಳನ್ನು ತುಮಕೂರು ಜಿಲ್ಲೆಗಾಗಿ ಕೊಡಲಾಗಿದೆ. ಈಗಾಗಲೇ ಸರಕಾರಕ್ಕಾಗಿ ಸುಮಾರು ಏಳು ಲಕ್ಷ ರೂಪಾಯಿಗಳಷ್ಟು ಭತ್ತವನ್ನು ಕೊಂಡುಕೊಂಡಿದ್ದಾರೆ. ಇದಕ್ಕೆ ಐದರಷ್ಟು ಭತ್ತ ಕೊಳ್ಳಬೇಕೆಂದು ಮಲ್ಟಿಪ್ಲೈ ಮಾಡಿಕೊಂಡು ಭತ್ತವನ್ನು ಕೊಳ್ಳಬೇಕೆಂದು ಮಾಡಿಕೊಂಡಿದ್ದಾರೆ. ಅವರೇ ಬೇರೆ ಭತ್ತವನ್ನು ಕೊಂಡುಕೊಂಡು ಮಾರುತ್ತಿದ್ದರೆ ಅದಕ್ಕೆ ನಾವೇನೂ ಅವರನ್ನು ಅಡ್ಡಿ ಪಡಿಸುವುದಿಲ್ಲ. ವರ್ತಕರು ಜನರಲ್ ಆಗಿ ಹೇಗೆ ವ್ಯಾಪಾರ ಮಾಡುತ್ತಾರೋ ಅವರೂ ಹಾಗೆ ವ್ಯಾಪಾರ ನಡೆಸಬಹುದು.

ಶ್ರೀ ಜಿ. ವಿ. ಗೌಡ.—ತಾವು ಈ ಜಿಲ್ಲೆಗೆ ಕೊಟ್ಟಿರುವುದು 1,85,000 ರೂಪಾಯಿಗಳು, ಇದಕ್ಕೆ ಐದರಷ್ಟು ಎಂದರೆ ಸುಮಾರು 23 ಸಾವಿರ ಕ್ವಿಂಟಾಲುಗಳಷ್ಟು ವಸೂಲು ಮಾಡಬೇಕಾಗಿತ್ತು. ಆದರೆ ಇಲ್ಲಿಯವರೆಗೆ ವಸೂಲು ಆಗಿರುವುದು ಸುಮಾರು 12,600 ಕ್ವಿಂಟಾಲುಗಳಷ್ಟು ಮಾತ್ರ. ಮುಂದೆ ಹೇಗೆ ಮಾಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇನ್ನೂ ಕಲೆಕ್ಟ್ ಮಾಡುತ್ತಾರೆ, ಬೆಳೆಯೂ ಚೆನ್ನಾಗಿ ಬರುತ್ತಿದೆ. ಮೊದಲನೇ ಬೆಳೆಯಲ್ಲಿ ವಸೂಲು ಆಗಿಲ್ಲ, ಈಚೆಗೆ ಫಸಲು ಚೆನ್ನಾಗಿ ಆಗಿದೆ. ಸಮ್ಮರ್ ಕ್ರಾಪ್‌ನಲ್ಲಿ ಬಹಳ ಚೆನ್ನಾಗಿ ಬೆಳೆಯಾಗಿದೆ, ಇಲ್ಲಿ ಸುಮಾರು 60 ಸಾವಿರ ಎಕರೆಯಲ್ಲಿ ಭತ್ತದ ಬೆಳೆಯಾಗಿದೆ. ಕೋಲಾರದಲ್ಲಿ ಸುಮಾರು 40,000 ಎಕರೆಗಳಲ್ಲಿ ಒಳ್ಳೆಯ ಭತ್ತದ ಬೆಳೆಯಾಗಿದೆ. ಚಿತ್ರದುರ್ಗದಲ್ಲಿ ಸುಮಾರು 35,000 ಎಕರೆಗಳಲ್ಲಿ ಭತ್ತದ ಬೆಳೆಯಾಗಿದೆ. ಬರುತ್ತಿರುವ ಬೆಳೆ ಕೂಡ ಬಹಳ ಚೆನ್ನಾಗಿ ಬರುತ್ತಿದೆ.

ಶ್ರೀ ಬಿ. ಬೈರಪ್ಪಾಜಿ.—ತುರುವೇಕೆರೆ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ಮೇಜರು ಟ್ಯಾಂಕ್ಸ್‌ಗಳಿಂದಲೇ ಜನಗಳಿಗೆ ಬೆಳೆ ಬರುತ್ತಿದೆ. ಈ ಪ್ರಕಾರ ಸುಮಾರು ಐದಾರು ಸಾವಿರ ಪಲ್ಲದಷ್ಟು ಬೆಳೆ ಬರುತ್ತಿದೆ. 10, 15 ಹಾಗೂ 20 ಎಕರೆ ಒಳಗಡೆ ಇರತಕ್ಕ ಭಾಗಗಳಲ್ಲಿ ಬರತಕ್ಕ ಕೆರೆಗಳೂ ಕೆಲವು ಇರುತ್ತವೆ. ಆದರೆ ಅಧಿಕಾರಿಗಳು ಸರ್‌ಪ್ಲಸು ಹೋಲ್ಡರುಗಳು ಯಾರು ಇದ್ದಾರೆ ಯಾರು ಇಲ್ಲ ಎನ್ನುವುದೊಂದನ್ನೂ ನೋಡದೆ ಕಡ್ಡಾಯವಾಗಿ ಹಿಂಸೆ ಕೊಟ್ಟು ಜನಗಳಿಂದ ವಸೂಲು ಮಾಡುತ್ತಿರುವುದನ್ನು ಸರಕಾರದವರು ತಪ್ಪಿಸುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಮೊದಲೇ ಹೇಳಿದೆ. ಮೊದಲು ಆದ ಬೆಳೆಗಳು ಸರಿಯಾಗಿ ಬರಲಿಲ್ಲ. ಆದರೂ ಕೆಲವು ಜನಗಳಿಗೆ ತೊಂದರೆಯಾಗಿದೆ ವಸೂಲಿಯಿಂದ ಎಂದು, ತಮ್ಮ ತಾಲ್ಲೂಕು ಬಗ್ಗೆ ಹೇಳುವಾಗ ಮಾನ್ಯ ಸದಸ್ಯರು ಸ್ವಲ್ಪ ನಿರ್ಬಂಧದಿಂದ ಮಾಡುತ್ತಿದ್ದಾರೆ ಎಂದು ಹೇಳಿರುವುದರಿಂದ ಪುನಃ ಅಲ್ಲಿನ ಅಧಿಕಾರಿಗಳಿಗೆ ಬರೆಯುತ್ತೇನೆ, ನಿರ್ಬಂಧ ಮಾಡಬೇಡಿ ಎಂದು.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಜಿಲ್ಲೆಯಲ್ಲಿರುವ ಸಹಕಾರ ಸಂಘಗಳು ಕೆಲವು ಕಡೆಗಳಲ್ಲಿ ಸರಿಯಾಗಿ ನಡೆಯದೆ ಇರುವುದರಿಂದ ಸರಕಾರದವರೇ ನೇರವಾಗಿ ಮಾಡಿರುವ ಫೇರು ಪ್ರೈಸು ಡಿಪೋಗಳವರು ಕೊಂಡುಕೊಂಡು ಭತ್ತವನ್ನು ಮಾರಲು ಅವರಿಗೇ ಹಂಚುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಕೊಂಡುಕೊಳ್ಳುವುದಿಲ್ಲ. ಇದಕ್ಕಾಗಿ ಆಥರೈಸ್ಡ್ ಏಜಂಟುಗಳು ಇರುತ್ತಾರೆ. ಅವರಿಂದ ತೆಗೆದುಕೊಂಡು ಎಲ್ಲ ಡಿಪೋಗಳಿಗೂ ಆ ನಂತರದಲ್ಲಿ ಹಂಚುತ್ತಾರೆ. ಈ ಸೊಸೈಟಿಗಳವರು ಸುಮಾರು 5 ಸಾವಿರ ಪಲ್ಲದಷ್ಟು ದವಸವನ್ನು ಶೇಖರಣೆ ಮಾಡಿದ್ದರೆ ಅದನ್ನು ಅವರೇ ಹಂಚುವುದಕ್ಕೆ ಅಧಿಕಾರ ಕೊಡುವುದಿಲ್ಲ. ಅಲ್ಲಿರುವ ಡೆಪ್ಯುಟಿ ಕಮೀಷನರವರು ನೋಡಿಕೊಂಡು ಎಲ್ಲ ಡಿಪೋಗಳಿಗೂ ಒದಗಿಸುವ ಏರ್ಪಾಡನ್ನು ಮಾಡುತ್ತಾರೆ. ಇದಕ್ಕೆಲ್ಲಾ ಪ್ರಿಸ್‌ಕ್ರೈಬ್ಡ್ ಏಜಂಟರುಗಳಿರುತ್ತಾರೆ.

ಶ್ರೀ ಅಂದಾನಯ್ಯ.—ಈ ಸಾಲಿನಲ್ಲಿ ಸರಕಾರಕ್ಕೆ ಎಷ್ಟು ಉತ್ಪತ್ತಿಯಾಗಿದೆಯೋ ಅದರಲ್ಲಿ ಕಡಿಮೆಯಾಗಿದ್ದರೆ ಅದನ್ನು ತುಂಬಿಕೊಳ್ಳಲು ಏನು ಕಾರ್ಯಕ್ರಮ ಹಾಕಿಕೊಂಡು ಇದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರುಗಳಿಗೆ ಆಗಲೇ ಈ ಸಭೆಯಲ್ಲಿ ಹಿಂದೆ ಹೇಳಿದ್ದೆ. ಹೆಚ್ಚು ಕಡಿಮೆ ಸುಮಾರು 40 ಲಕ್ಷ ಟನ್ನುಗಳಷ್ಟು ಆಹಾರ ಬೆಳೆಯುತ್ತೇವೆ, ಇದರಲ್ಲಿ ಸುಮಾರು 14-15 ಲಕ್ಷ ಟನ್ನುಗಳಷ್ಟು ಜೋಳ, 6-7 ಲಕ್ಷ ಟನ್ನುಗಳಷ್ಟು ರಾಗಿ, ನವಣೆ ಇತ್ಯಾದಿಗಳೆಲ್ಲಾ ಸೇರಿಕೊಂಡು ಸುಮಾರು 40 ಲಕ್ಷ ಟನ್ನುಗಳಷ್ಟು ದವಸಗಳನ್ನು ಬೆಳೆಯುತ್ತಿದ್ದೇವೆ. ಸುಮಾರು 15 ಲಕ್ಷ ಟನ್ನುಗಳಷ್ಟು ಭತ್ತ ವಸೂಲು ಮಾಡಬೇಕೆಂದಿದೆ. ಇದರಲ್ಲಿ ಸುಮಾರು ಎರಡು ಲಕ್ಷ ಟನ್ನುಗಳಷ್ಟು ಭತ್ತ ಈಗಾಗಲೇ ವಸೂಲಾಗಿದೆ. ಇನ್ನೂ ಒಂದೂವರೆ ಲಕ್ಷ ಟನ್ನುಗಳಷ್ಟು ವಸೂಲು ಮಾಡಬೇಕೆಂದು ಇದೆ. ಇದರಲ್ಲಿ ಮುಕ್ಕಾಲು ಟನ್ನುಗಳಷ್ಟು ವಸೂಲಾಗಿದೆ. ಬೇರೆ ಒಂದು ಲಕ್ಷ ಟನ್ನುಗಳಷ್ಟು ಕೂಡ ವಸೂಲು ಆಗುವುದರಲ್ಲಿದೆ.

ಶ್ರೀ ಕೆ. ಲಕ್ಕಪ್ಪ.—ಅಂಗೀಕೃತವಾದ ರೈಸನ್ನು ಪಡೆದಂತಹ ಫೇರು ಪ್ರೈಸು ಡಿಪೋಗಳಿಗೆ ತಾವು ಭತ್ತವನ್ನು ಕೊಳ್ಳುವುದಕ್ಕೆ ಸೊಸೈಟಿಗಳಲ್ಲಿ ಮಾಡದೆ ಇದ್ದರೆ ಅಂತಹವರಿಗೆ ಅವಕಾಶ ಕೊಡತಕ್ಕ ಪರಿಸ್ಥಿತಿ ಏನಾದರೂ ಇದೆಯೇ ? ಅದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾಲ್ಲೂಕ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗಳ ಮೂಲಕವೇ ಎಲ್ಲವನ್ನೂ ಕೊಳ್ಳುತ್ತಾರೆ. ಅವರಿಗೆ ಎಲ್ಲ ಜವಾಬುದಾರಿಗಳೂ ಇವೆ. It has been entrusted with the job of distribution and procurement. Because, it is the mother Society in the Taluk.

Sri K. LAKKAPPA.—I want to know by way of supplementary. The Co-operative Societies do not come forth for procurement of rice or paddy. When that is so, what is the alternative ?

Sri M. V. KRISHNAPPA.—Each Taluk Marketing Society has been entrusted with the work of purchasing of paddy on behalf of Government. If there are any Societies capable of purchasing paddy, we will consider such cases also.

Sri SIDDIAH KASHIMATH.—May I know who is to authorise and who is authorised to supervise and purchase paddy ?

Sri M. V. KRISHNAPPA.—At present District Rationing Officer is the Deputy Commissioner aud he deputes Tahsildar to supervise and purchase.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ತಾವು ಭತ್ತ ಕೊಳ್ಳುವಾಗ ಸಿಗುವುದು ಬರೀ ಹಸೀ ಭತ್ತ. ಇಂತಹ ಹಸೀ ಭತ್ತವನ್ನು ವಿಂಗಡಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದರೊಳಗೆ ನಾವೇನು ಪ್ರೋಗ್ರಾಂ ಹಾಕಿದ್ದೆವೋ ಅದರಂತೆ ಪ್ರೊಕ್ಯೂರ್ಮೆಂಟು ಮಾಡುವುದೂ ಈ ಸಾರಿ ಲೇಟು ಆಯಿತು. ಏನೋ ಅದೃಷ್ಟವಶಾತ್ ನಾವು ಕೊಳ್ಳುವ ಹೊತ್ತಿಗೆ ಹಸೀ ಭತ್ತ ಹೋಗಿ ಒಣಗಿದ ಭತ್ತ ಸಿಗಲು ಅವಕಾಶವಾಯಿತು. ಮೊದಲಿಗೆ ಇದರ ಮೇಲೆ ಲೆವಿ ಹಾಕಬೇಕೆಂದು ಇದ್ದುದು ಹಾಗೂ ಇನ್ನಿತರ ಸಮಸ್ಯೆಗಳು ಮಧ್ಯದಲ್ಲಿ ಬಂದು ಸ್ವಲ್ಪ ತೊಂದರೆಯಾದುದರಿಂದ ವಸೂಲಿ ಕೆಲಸ ಸ್ವಲ್ಪ ನಿಧಾನವಾಯಿತು, ಆಗ ಹೊಸ ಭತ್ತವನ್ನು ತೆಗೆದುಕೊಂಡು ಶೇಖರಣೆ ಮಾಡಲು ಕಷ್ಟವೇನೂ ಆಗಲಿಲ್ಲ. ನಾವು ಜನವರಿ ತಿಂಗಳಲ್ಲೇ ವಸೂಲಿ ಮಾಡಬೇಕಾಗಿತ್ತು. ಆದರೆ ಮೂರು ತಿಂಗಳು ಮುಂದಕ್ಕೆ ಹೋದುದರಿಂದಾಗಿ ಅನುಕೂಲವಾಯಿತು. ಮೊದಲೇ ವಸೂಲು ಮಾಡಿದ್ದರೆ ಹಸೀ ಭತ್ತವನ್ನು ವಿಂಗಡಣೆ ಮಾಡಬೇಕಾಗಿತ್ತು. ಅದು ಈಗ ತಪ್ಪಿದೆ.

Increasing the Boarding Grant in Government Aided Hostels for Scheduled Castes and Tribes, etc.

*Q.—657. Sri G. V. GOWDA (Palyam).—

Will the Government be pleased to state :—

(a) whether they are aware that the boarding grant of Rs. 18 per boarder in Government aided hostels for Scheduled Castes, Scheduled Tribes and other Backward Classes is too inadequate ;

(b) whether they would take an early decision to increase the same with retrospective effect from 1-4 1964 ?

A.—**Smt. YASHODARA DASAPPA** (Minister for Social Welfare).—

(*a*) Yes.

(*b*) Orders have been issued on 25-2-1965 enhancing the boarding charges from Rs. 18 to Rs. 20 in respect of Government Hostels and Residential Schools. The question of extending the same to aided hostels also is under consideration.

ಶ್ರೀ ಜಿ. ವಿ. ಗೌಡ.—ಸರ್ಕಾರದವರು ಬೋರ್ಡಿಂಗು ವೆಚ್ಚಕ್ಕಾಗಿ 18 ರೂಪಾಯಿಗಳಷ್ಟು ಕೊಡುತ್ತಿರುವುದು ಪರಿಹಾರ ಬಹಳ ಕಡಿಮೆ ಎಂದು ಸರಕಾರಕ್ಕೆ ಗೊತ್ತಿಲ್ಲವೆ ?

† ಶ್ರೀಮತಿ ಯಶೋಧರ ದಾಸಪ್ಪ.—ಸರಕಾರದ ಹಾಸ್ಟಲುಗಳಲ್ಲಿ ಪ್ರತಿಯೊಬ್ಬರಿಗೂ 20 ರೂಪಾಯಿಗಳಷ್ಟು ಕೊಡಬೇಕೆಂದು ಮಾಡಿರುವುದರಿಂದಲೇ ಸರಕಾರಕ್ಕೆ ಇಲ್ಲಿರುವ 24,917 ವಿದ್ಯಾರ್ಥಿಗಳಿಗಾಗಿ ಸುಮಾರು 10,050 ಹಾಸ್ಟಲ್ಲುಗಳಿಗೆ ಅಂದಾಜು ಮಾಡಿರುವಂತೆ ಸುಮಾರು 4,43,530 ರೂಪಾಯಿಗಳಷ್ಟು ಖರ್ಚಾಗುತ್ತದೆ. ಈಗ 20 ರೂಪಾಯಿಗಳಂತೆ ಹೆಚ್ಚು ಮಾಡಿರುವುದರಿಂದಲೇ ಸುಮಾರು ಮೂರು ನಾಲ್ಕರಷ್ಟು ಹೆಚ್ಚು ಕೊಟ್ಟಂತೆ ಆಗುತ್ತದೆ.

ಶ್ರೀ ಜಿ. ವಿ. ಗೌಡ.—ಬೋರ್ಡಿಂಗ್ ಚಾರ್ಜಸ್ 20 ರೂಪಾಯಿ ಸರಕಾರ ಹಾಸ್ಟೆಲ್ಲಿಗೆ ಮಾಡಿರುವುದನ್ನು ಏಡೆಡ್ ಹಾಸ್ಟೆಲ್ಲುಗಳಿಗೆ ಯಾವಾಗ ಅನ್ವಯಿಸುತ್ತೀರಿ ?

ಶ್ರೀಮತಿ ಯಶೋಧರ ದಾಸಪ್ಪ.—ಏಡೆಡ್ ಹಾಸ್ಟೆಲ್ಲುಗಳಿಗೆ ಅನ್ವಯಿಸುವುದು ಇನ್ನೂ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಹಣದ ಅನುಕೂಲತೆ ನೋಡಿಕೊಂಡು ಮುಂದೆ ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪ್ರತಿವರ್ಷ ಹಾಸ್ಟೆಲುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಹಾಸ್ಟೆಲ್‌ಗಳೂ ಜಾಸ್ತಿಯಾಗಬೇಕಾಗಿದೆ. ಆದುದರಿಂದ ಕೊಡತಕ್ಕ ಹಣ ಜಾಸ್ತಿ ಮಾಡುವುದಕ್ಕಾಗುವುದಿಲ್ಲವೆ ?

ಶ್ರೀಮತಿ ಯಶೋಧರ ದಾಸಪ್ಪ.—ಈಗಾಗಲೇ 800-900 ಮಕ್ಕಳನ್ನು ಹಾಸ್ಟೆಲನಲ್ಲಿ ತೆಗೆದುಕೊಂಡಲ್ಲಿ ಸಹ ಹಣ ಕೊಡುತ್ತಿದ್ದೇವೆ. ಮುಂದೆ ಹೆಚ್ಚು ಮಕ್ಕಳನ್ನು ಬೋರ್ಡಿಂಗ್‌ನಲ್ಲಿ ತೆಗೆದುಕೊಳ್ಳಲು ಹಣ ಕೊಡುತ್ತೇವೆ.

ಶ್ರೀ ಜಿ. ವಿ. ಗೌಡ.—ಈಗ ಆಹಾರ ಧಾನ್ಯಗಳ ಬೆಲೆ ಧಾರಣೆವಾಸಿ ಜಾಸ್ತಿಯಾಗಿರುವುದರಿಂದ ಖಾಸಗಿ ಹಾಸ್ಟಲ್ ನಡೆಸತಕ್ಕ ಆಡಳಿತ ವರ್ಗಕ್ಕೆ ಹೆಚ್ಚು ಖರ್ಚು ಮಾಡಬೇಕಾಗಿದೆ. ಅವರಿಗೆ ಸಹಾಯವಾಗುವ ರೀತಿಯಲ್ಲಿ ಏನಾದರೂ ಮಾಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಏಡೆಡ್ ಇನ್‌ಸ್ಟಿಟ್ಯೂಷನ್‌ಗಳಿಗೆ ಕೊಡತಕ್ಕದ್ದು ನಟ್ಸಡಿ ರೂಪದಲ್ಲಿ ಕೊಡಬೇಕಾಗುತ್ತದೆ. ಸರ್ಕಾರದವರು ಕೊಡತಕ್ಕಂಥ ಹಣಕ್ಕೆ ಮ್ಯಾಚಿಂಗ್ ಗ್ರ್ಯಾಂಟ್ ಕಂಡು ಹಿಡಿಯಬೇಕಾಗಿದೆ. ಈ ಧಾರಣೆವಾಸಿಯ ಕಷ್ಟನಷ್ಟ ಎಲ್ಲರಿಗೂ ಇದೆ. ಏಡೆಡ್ ಹಾಸ್ಟಲ್‌ಗಳಿಗೆ ಕೊಡಬೇಕಾದರೆ ನಾಲ್ಕೈದು ಲಕ್ಷ ರೂಪಾಯಿ ಆಗುತ್ತದೆ. ಇದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಸುಬ್ಬಯ್ಯ ನಾಯಕ್.—ಸರಕಾರಿ ಹಾಸ್ಟೆಲ್ಲುಗಳಿಗೆ ಹೆಚ್ಚು ಹಣ ಕೊಡಬೇಕೆಂದು ಮಾಡಿರುವುದನ್ನು ಯಾವ ತಿಂಗಳಿನಿಂದ ಜಾರಿ ಮಾಡಿಕೊಡುತ್ತೀರಿ ?

ಶ್ರೀಮತಿ ಯಶೋಧರ ದಾಸಪ್ಪ.—ಈ ವರ್ಷ ಏಪ್ರಿಲ್ ತಿಂಗಳಿನಿಂದ ಕೊಡುತ್ತೇವೆ.

ಶ್ರೀ ವೀರಭದ್ರಪ್ಪ ಈರಪ್ಪ.—ಕೆಲವೊಂದು ಹಾಸ್ಟೆಲ್ಲುಗಳಲ್ಲಿ ಸರಕಾರದಿಂದ ಪಡೆಯುವ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂಬುದು ಸರಕಾರದ ಗಮನಕ್ಕೆ ಬಂದಿವೆಯೆ ?

ಶ್ರೀಮತಿ ಯಶೋಧರ ದಾಸಪ್ಪ.—ಬೇಕಾದಷ್ಟು ಬಂದಿವೆ.

ಶ್ರೀ ವೀರಭದ್ರಪ್ಪ ಈರಪ್ಪ.—ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಏಡೆಡ್ ಹಾಸ್ಟಲ್‌ಗೆ ಕೊಡುವ ಹಣ ನಿಲ್ಲಿಸಿದೆ. ಹಾಗೂ ಅವುಗಳನ್ನು ಸರಕಾರಿ ಹಾಸ್ಟೆಲ್ ಆಗಿ ಪರಿವರ್ತನೆ ಮಾಡಲು ಏರ್ಪಾಡು ಮಾಡುತ್ತೇವೆ. ಎಲ್ಲಿಯಾ ಹಣ ದುರುಪಯೋಗವಾದುದು ತಮಗೆ ಕಂಡು ಬಂದಿದ್ದರೆ ತವು ಅದನ್ನು ಸರಕಾರದ ಗಮನಕ್ಕೆ ತಂದರೆ ಹಣ ಕೊಡುವುದನ್ನು ನಿಲ್ಲಿಸುತ್ತೇವೆ.

ಶ್ರೀ ಜಿ. ವಿ. ಗೌಡ.—ಏಡೆಡ್ ಹಾಸ್ಟೆಲ್‌ಗಳಿಗೆ ಮ್ಯಾನೇಜ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟಿಗಾಗಿ ಪ್ರತ್ಯೇಕವಾಗಿ ಯಾವ ಗ್ರಾಂಟ್ ಕೊಡುವುದಿಲ್ಲ. ಇದರಿಂದ ಕಷ್ಟವಾಗುತ್ತದೆ. ಆದುದರಿಂದ ಹಣ ಕೊಡುವುದನ್ನು ಏನಾದರೂ ಹೆಚ್ಚಿಸುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಸರಕಾರದ ಅನುಮೋದನೆ ಪಡೆದು ಸಂಖ್ಯೆ ಹೆಚ್ಚಿಸಿದಂಥ ಮಕ್ಕಳಿಗೆ ಹಣ ಕೊಡುತ್ತೇವೆ. ಆದರೆ 50-60 ಜನ ಹುಡುಗರು ಹೆಚ್ಚಾಗಿದ್ದಾರೆ ಎಂದು ಅಂದರೆ ಅದು ಆಗುವುದಿಲ್ಲ. ಸ್ಟ್ರೆಂಗ್ತ್ ಎಷ್ಟು ಇದೆ, ಮಕ್ಕಳು ಎಷ್ಟು ಇದ್ದಾರೆ ಎನ್ನುವ ವಿವರ ಮೇಲಾಧಿಕಾರಿಗಳಿಗೆ ತಿಳಿಸಿ ಅವರ ಅನುಮತಿ ಪಡೆದು ಮಾಡಿದ್ದರೆ ಸರಕಾರ ಹೆಚ್ಚು ಹಣ ಕೊಡುವುದು ಸಾಧ್ಯವಿದೆ.

ಶ್ರೀ ಜಿ. ವಿ. ಗೌಡ.—ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದ ಹಾಗೆ ಪ್ರತಿಯೊಬ್ಬರಿಗೆ 20 ರೂಪಾಯಿ ಎಲ್ಲ ಹಾಸ್ಟೆಲ್‌ಗಳಿಗೆ ಅನ್ವಯಿಸಿ ಜಾರಿಗೆ ಕೊಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಹಣ ನೋಡಿಕೊಂಡು ವಿದ್ಯಾಭ್ಯಾಸಕ್ಕೆ ಹೆಚ್ಚು ಮಾಡುವುದಾದರೆ ಹಣವನ್ನು ಅಗತ್ಯವಾಗಿ ಕೊಡುತ್ತೇವೆ.

ಶ್ರೀ ಗೋಪಾಲ ಸಾಲೆನ್ನ.—ಹಾಸ್ಟಲ್‌ಗಳಿಗೆ ಸಕಾಲದಲ್ಲಿ ಹಣ ದೊರೆಯದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಆದುದರಿಂದ ಇಂಥ ಎಲ್ಲ ಹಾಸ್ಟಲ್‌ಗಳನ್ನು ಸರಕಾರದವರೇ ತೆಗೆದುಕೊಂಡು ಹಾಸ್ಟಲ್‌ಗಳನ್ನು ಮುಂದುವರಿಸುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಯಾವ ಯಾವ ಕಡೆ ಗ್ರಾಂಟ್-ಇನ್-ಏಡ್ ಹಾಸ್ಟಲ್‌ಗಳು ಸರಿಯಾದ ರೀತಿಯಲ್ಲಿ ನಡೆಯದೆ ಹಣ ದುರುಪಯೋಗವಾದುದು ಕಂಡುಬಂದರೆ ಅಲ್ಲಿಯ ಮಕ್ಕಳನ್ನು ಗವರ್ನಮೆಂಟ್ ಹಾಸ್ಟೆಲ್ಲಿಗೆ ಸೇರಿಸುವುದಕ್ಕೆ ಅನುಮತಿ ಕೊಡುತ್ತೇವೆ. ಹೆಚ್ಚಾಗಿ ವಿದ್ಯಾರ್ಥಿಗಳು ಬಂದರೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಇರುವ ಭದ್ರಾವತಿಯಲ್ಲಿಯ ಬಾಪೂಜಿ ಹಾಸ್ಟೆಲ್ಲು ಬಂದಾಗಿ ಆರು ತಿಂಗಳಾಯಿತು. ಮೂರು ವರ್ಷದಿಂದ ಗ್ರಾಂಟ್ ಕೊಡದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಸರಕಾರ ಇದರ ಬಗ್ಗೆ ಗಮನ ಕೊಟ್ಟು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ?

The development of fisheries simultaneously stimulates the growth of many many ancillary industries and allied industries like the Boat Buildings, Manufacture and service of marine diesel engines, Ice plant and refrigeration industry, Fish meal industry, Fish oil industry, Fish canning industry, transport industry, etc., and finally commercial fishing. But we have found out that capital is very shy in flowing into this trade for three reasons. One is lack of adequate data about the economics of this industry. Secondly the hunting element or the very high risk element that is associated with this industry due to very high fluctuation in prices here and abroad. Thirdly, but not the least is the social and religious stigma attached to this particular trade. Hence, Government must come forward to encourage these industries in Mysore State. Government must also undertake in the public sector some of these industries, to tap resources of the fish industry to the fullest extent for three reasons. One is to increase labour possibilities. The second is to earn foreign exchange for the country and thirdly to augment the food resources not only for the people, but also for the cattle. At present, it is estimated that the total investment in this industry in Mysore State is only 2.5 crores of rupees. I humbly submit that this could be increased ten or even hundred fold.

Coming to Co-operation, the Co-operative movement amongst fishermen must be strengthened further. There are 88 co-operative societies. When our Hon'ble Minister for Fisheries toured our fishing villages last month, several representations were given to him. In that, nothing was mentioned about the ice plants or fishery schools or some other things. But most of them were regarding the non-availability of foodgrains especially along the coastal region. Our Hon'ble Minister for Revenue, who is also the Food Minister, was a Deputy Minister in the Centre for Fisheries. He knows the plight of fishermen who are huddled together on the coast. Speaking of my own village malpe, it is half a square mile in area and there are 12,000 people living there. Fishermen are not agriculturists. It is very difficult for them to find foodgrains at this time of scarcity. Our Hon'ble Minister has been pleased to assure the fishermen that the available foodgrains will be supplied to fishermen through fishermen co-operative societies at the Government controlled rates. Taking this opportunity, I request the Minister for Fisheries and the Minister for Food to take up this immediately and to supply to the fishermen foodgrains and other requisites at controlled prices. I am also happy to state that all these co-operative societies are running very well. This Government has given fishermen ten lakhs Rupees during the fish famine. I am happy to state that the entire loan has been paid back, and that Government is giving them loan for mechanised boats, which is also paid back regularly and without default. I hope and feel that there is vast scope to improve and strengthen these co-operative societies in the Fisheries Sector. I think

there is a move that this department be taken back to the Co-operative Department. I am against this and suggest that it must be retained within the fold of Fisheries.

The most important thing is the socio-economic condition of the fishermen. Smt. Vasanthalatha Mirjankar referred to it and brought to the attention of the House that a survey of the socio-economic condition of the fishermen must be made and the Minister has agreed. It must be done immediately. Fishermen are huddled together like cattle in tiny, dilapidated huts with coconut leaves on the top and sand as their floor and they are exposed to the fury of monsoons, tidal waves of the sea and stormy weather. They are very much lacking in sanitation, health care and drinking water and schools. I have seen so many schemes for rehabilitation of fishermen. But I am sorry to say that nothing has been done in this respect. The basic problem is that there is not serious thought given by this Government for these basic problems. Hundreds of fishermen have been dislocated in Mangalore Harbour. They have not been rehabilitated. I have just received a telegram saying that the fishermen are being evicted from their homes and that they and their families have to go into the streets and they have requested for the extension of time for eviction. I wish to know where they are supposed to go ? Should they go back into the sea with all their fishing nets, their families and their children ? I think the Hon'ble Chief Minister will look into this matter sympthetically. I request that some extension of time may given to be these poor people.

I suggest to the Government to have fishermen colonies as far as possible. In each fishing village, there should at least be small tiled houses and a primary school, and a drinking water well. I am happy that in the field of education, the department is running about 13 high schools and 37 primary schools. Every fishing village must have a primary school and two or three fishing villages must have a high school.

One appeal, I wish to make to the Minister for Fisheries. The Government have discontinued the subsidy on salt and other fishing requisites, which even the predecessor Government, the British Government used to give to the fishermen people. After all, the loss to the exchequer is only alakh of rupees. But this benefit goes direct to the fishermen, to eachand every individual consisting of one lakh of population. I reqeust the Minister to implement this immediately. Though this is small, whatever Government does, fishermen will have some satisfaction and happinessthat the Government is serious in taking care to improve their plight andbaneful condition.

Now, about the fishing harbours. It is also in the Budget, I have seen, for the last three years. Lot of money has been kept for this. But, I have not seen even one port taken up for the development of fishing harbour. There are 21 minor ports along North Kanara and South Kanara districts But, nothing has been done in this important matter, which is not only for the development of fishery but also for the development of marine trade. These ports must give facility and must have a jetty to facilitate berthing of boats for repair and also

(SRI M. MADHWARAJ)

for landing, handling and distribution of fish. I have been hearing and also the Minister also has made a statement that Malpe harbour will be taken under Yugoslovia Aid. I would like the Hon. Minister to inform this house as to how far this has progressed. I would suggest that the Fisheries Department must buy a dredger of their own to dig the sand that accumulates where the river meets the sea, not only to allow the fishery boats but also other country boats to facilitate the transport of fish, tiles and timber. I suggest that the beautiful harbours at Karwar, Bhatkal, Kundapur and Malpe which the Government of Mysore is fortunately having, must be developed to the fullest extent for the purpose of fishing harbours.

Our State is very fortunate to have many foreign aids from Japan, Norway, FAO, WHO and UNICIF. Taking advantage of Indo.Norwegian Project. it is possible to develop Karwar as an ideal fishing harbour. The marine Fish processing centre which has been started at Mangalore has been giving successful result and 30 traniees have passed out and 30 trainees are passing out this year. I understand that this Government is contemplating collaboration with Japan for Tuna fishery. Our coast off Laccadive Islands and the Arabian sea is full of this Tuna fish which is a very valuable fish. I had been to Tokio fish mar et and I hope the Hon. Minister for Fisheries also has gone there and seen Tokio Fish Market. This is the biggest fish market in the world. They handle 2000 tons of fish daily. I was surprised to see that most of the Tuna fish are brought from Indian ocean off and the Lacadive islands. They take this fish all the way of 3000 to 4000 miles and they process and export it probably to our own country. Something has to be done by this Government to tap all this rich fishery resource we are having within the folds of this State. As I said earlier, Japan is the worlds biggest fishing centre. After the Second World War 20 per cent of their food requirements were being imported from outside. But, today, they are exporting. They are catching 5 million tons of fish in a year which contributes to 17 per cent of the world fisheries and Vying close to Japan is China. The other countries to follow are Russia, U. S. A., Norway, U. K., and Canada- It is indeed a happy auguary to India that it has just recently been taken as one of the ten countries in the world which produces more than one million tons of fish. Mysore State, as I have been saying always, has 200 miles of rich coast with 10,000 sq. miles of fishable area. This has attracted the attention and has focussed the attention of the world that there is tremendous development scope for the fishing in Mysore State. I wish to state that countries like U. S. A., U. K., Japan, Norway, Hungery, Yugoslovia, Sweden, Denmark and Zechoslovokia are willing to invest any amount of capital in this trade. only an earnest attempt is to be made in the right direction. It is not possible for private people to enter into this collaboration. It is for the Government to make some attempt to make this suggestion successful. In addition to marine

fisheries, we have extensive backwaters, large number of rivers, reservoirs, countless tanks and ponds which find a rich potential for Inland fisheries. The development of Inland fisheries has not yet passed the infant stage in Mysore State. This is to be intensified further. A few fish that is grown in the reservoirs is not enough for the success of the demonstration schemes. It must reach the common man in sufficient quantities and in all times of the year.

Any development of fishery must begin with the social and economic development of the proverbially poor 'sons of the sea'. I take this opportunity to suggest humbly to Government "to go back to the sea" for food. I thank all the Members for hearing me patiently and I thank the Hon. Speaker for giving me an opportunity.

Mr. SPEAKER.—I do not put any time limit to Hon' Members' speech because I find the House is thin. If I find it necessary, I impose time later on. I have received no names from any person. But, I will not shut out because names are not given. Now, Sri A. S. Patil may speak.

[MR. DEPUTY SPEAKER in the Chair]

†ಶ್ರೀ ಎ. ಎಸ್. ಪಾಟೀಲ್ (ನರಗುಂದ).—ಮಾನ್ಯ ಅಧ್ಯಕ್ಷರೇ, ವ್ಯವಸಾಯ, ಸಹಕಾರ ಮತ್ತು ಗ್ರಾಮಾಂತರ ಅಭಿವೃದ್ಧಿ, ಈ ಎಲ್ಲ ವಿಷಯಗಳ ಬೇಡಿಕೆಗಳಿಗೆ ಬೆಂಬಲ ಕೊಡುತ್ತ ಮೊಟ್ಟ ಮೊದಲನೆಯದಾಗಿ ಸಹಕಾರ ಬೇಡಿಕೆಯಿಂದ ಷುರು ಮಾಡುತ್ತೇನೆ.

ಸಹಕಾರ ನಮ್ಮ ಮೈಸೂರು ರಾಜ್ಯದಲ್ಲಿ ಎಲ್ಲ ಕಡೆಗೂ ಅವರಿಸಿಕೊಂಡಿದ್ದು, ಈ ಸಹಕಾರ ಸಂಘಗಳ ಸಂಘಟನೆಯಾದಷ್ಟು ನೋಡಿದರೆ ನಮ್ಮ ರಾಜ್ಯದ ಕೇಂದ್ರಸಂಸ್ಥೆಗಳು, ಎಂದರೆ ರಾಜ್ಯದ ಅಪೆಕ್ಸ್ ಬ್ಯಾಂಕ್, ರಾಜ್ಯದ ಸೆಂಟ್ರಲ್ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್, ಮಾರ್ಕೆಟಿಂಗ್ ಸೊಸೈಟಿ ಹೀಗೆ ಅನೇಕ ರಾಜ್ಯಮಟ್ಟದ ಸಂಸ್ಥೆಗಳೇನಿವೆ ಇವು ಹೆಚ್ಚು ಆಸಕ್ತಿ ವಹಿಸಿ ಕಲಸಮಾಡುತ್ತ ಸಹಕಾರ ಕ್ಷೇತ್ರದಲ್ಲಿ ಮುನ್ನಡೆ ನಡೆದದ್ದು ನಮಗೆ ಗೋಚರವಾಗುತ್ತದೆ. ಇದರಲ್ಲಿ ಮುಖ್ಯವಾಗಿ ವ್ಯವಸಾಯದ ಬಗ್ಗೆ ಒಂದು ಮಹತ್ವದ ಹೆಜ್ಜೆಯನ್ನು ಇಟ್ಟಂತಾಗಿದೆ.

3-00 P.M.

ಮೊದಲನೆಯದಾಗಿ ಇಲ್ಲಿಯ ಕೇಂದ್ರ ಅಪೆಕ್ಸ್ ಬ್ಯಾಂಕ್ ರಾಜ್ಯ ಪುನರ್ವಿಂಗಡಣೆ ಯಾದಾಗ್ಗೆ ಅಸ್ತಿತ್ವದಲ್ಲಿತ್ತು. ಈಗ ಆ ಬ್ಯಾಂಕಿನಲ್ಲಿ ಉತ್ತಮ ರೀತಿಯಲ್ಲಿ ವ್ಯವಹಾರ ನಡೆದು ರೈತರಿಗೆ ಸಾಕಷ್ಟು ಹಣದ ಸಹಾಯ ಸಿಕ್ಕುಹಂತೆ ವ್ಯವಸ್ಥೆಯಾಗಿದೆ. ನಮ್ಮ ರಾಜ್ಯದ ಅಪೆಕ್ಸ್ ಬ್ಯಾಂಕಿನಿಂದ ಸೆಂಟ್ರಲ್ ಬ್ಯಾಂಕಿಗೆ ಹೋಗಿ ನಂತರ ಅಲ್ಲಿಂದ ಸೇವಾ ಸಹಕಾರ ಸಂಘಗಳಿಗೆ ವಿತರಣೆಯಾಗುವ ವ್ಯವಸ್ಥೆ ಇದೆ. ಇದರೊಳದೆ ಮೂರು ತರಹ ಸಾಲಗಳಿವೆ. ಒಂದು ಅಲ್ಪಾವಧಿ ಸಾಲ, ಇನ್ನೊಂದು ಮಧ್ಯಮಾವಧಿ ಸಾಲ, ಮತ್ತೊಂದು ದೀರ್ಘಾವಧಿ ಸಾಲ. ಅಲ್ಪಾವಧಿ ಸಾಲದ ಬಗ್ಗೆ ರೈತರಿಗೆ ಸಾಕಷ್ಟು ಹಣ ಸಿಕ್ಕುವುದಕ್ಕೆ ಈಗ ಕೆಲವು ಅಡ್ಡಿ ಆತಂಕಗಳು ಬಂದಿವೆ. ಮೊದಲನೆಯದಾಗಿ ಸೆಂಟ್ ಪರ್ಸೆಂಟ್ ರಿಕವರಿ ಆಗಬೇಕೆಂದು ಒಂದು ತರಹ ಅಭಿಪ್ರಾಯವನ್ನು ವ್ಯಕ್ತಪಡಿಸಿ, ರೈತರು ಸಾಲವನ್ನು ಪೂರ್ತಿಯಾಗಿ ಕೊಟ್ಟರೆ ಮತ್ತೆ ಅವರು ಈ ವ್ಯವಹಾರ ಮಾಡುವುದಕ್ಕೆ ಅರ್ಹರಾಗುತ್ತಾರೆಂಬ ವಿಷಯವನ್ನು ಹೇಳಿದ್ದಾರೆ. ಎಷ್ಟೋ ಜನರು ಬರಗಾಲ ದುಸ್ಥಿತಿಗೊಳಗಾದವರು ಅದರಲ್ಲೂ ಅಂತಹ ತೊಂದರೆಗಳಿಗೀಡಾಗಿರುವವರು ಕೊಡುತ್ತಾರೆ. ಆದರೆ ಕೆಲವರು ಅದನ್ನು ಕೊಡದೇ ಬಿಟ್ಟಿರುವುದರಿಂದ ಈ ಅಲ್ಪಾವಧಿ ಸಾಲದ ವಿತರಣೆ ಅಷ್ಟು ಸಮಾಧಾನಕರವಾಗಿ ಆಗಿಲ್ಲವೆಂಬುದು ನಮ್ಮ ಅಂಕಿ ಅಂಶಗಳಿಂದ ವ್ಯಕ್ತಪಡುತ್ತದೆ. ಇದರಿಂದಲೇ ನಮ್ಮ ವ್ಯವಸಾಯ ಆಹಾರೋತ್ಪನ್ನ ಸರಿಯಾಗಿ ಸಾಗುವುದಿಲ್ಲ. ಇದಕ್ಕಾಗಿ ಹಳ್ಳಿಯಲ್ಲಿರತಕ್ಕವರು ಎಲ್ಲರೂ ಆಸಕ್ತಿ ವಹಿಸಬೇಕು. ಹಳ್ಳಿಯ ರೈತನಿಗೆ ಸಾಲ ಸರಿಯಾಗಿ ಮುಟ್ಟಬೇಕು. ಅವನು ಒಕ್ಕಲುತನವನ್ನು ಸಾಗಿಸಬೇಕು. ಬೀಜ, ಗೊಬ್ಬರ, ಎಲ್ಲಾ ಔಷಧಿಗಳು ಸರಿಯಾಗಿ ಸಿಕ್ಕಿ ಆಹಾರೋತ್ಪಾದನೆಯಾಗಬೇಕು, ಅರ್ಥಿಕಾಭಿವೃದ್ಧಿಯಾಗಬೇಕು. ಈ ಬಗ್ಗೆ ಪ್ರಯತ್ನ ನಡೆದಿದೆ. ಇದು ಇನ್ನೂ ಹೆಚ್ಚು ಭರದಿಂದ ಸಾಗಬೇಕು,

(ಶ್ರೀ ಎ. ಎಸ್. ಪಾಟೀಲ್)

ರೈತನ ಆರ್ಥಿಕಮಟ್ಟ ಏನಿದೆ ಅದು ನಿಜವಾಗಿ ಹೆಚ್ಚಬೇಕು, ಈಗಿನ ಅವರ ಆರ್ಥಿಕಕಷ್ಟ ನಿವಾರಣೆಯಾಗಬೇಕು ಎಂಬುದಾಗಿ ಪ್ರತಿಯೊಬ್ಬರ ಕೂಗು ಇದೆ. ಇದರ ಹಿನ್ನೆಲೆ ನೋಡಿದರೆ 1904ನೇ ಇಸವಿಯಿಂದಾಚೆಗೆ ಅನಂತರ 20 ವರ್ಷಗಳ ಕೆಳಗೆ ಪ್ರತಿಯೊಂದು ಊರಿನಲ್ಲಿ ಸಾಹುಕಾರರ ಹತ್ತಿರ ಬಡ್ಡಿ ಸಾಲ ತೆಗೆದುಕೊಳ್ಳುವುದು ಆಗಿದೆ. ಅದು ಈಗಲೂ ಇದ್ದರೂ ಹೆಸರಿಗೆ ಮಾತ್ರ ಉಳಿದಿದೆ. ಆದರೂ ಎಷ್ಟೋ ಈಗ ನಿಂತುಹೋಗಿವೆ. ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವವರು ಎಲ್ಲಾ ಹಳ್ಳಿಗಳಲ್ಲೂ ಸುಮಾರು ಶೇಕಡ 85 ಅಥವಾ 90ರಷ್ಟು ಇದ್ದಾರೆ. ಸುಮಾರು ಶೇಕಡ 60 ಅಥವಾ 70ರಷ್ಟು ಜನರು ಸಹಕಾರ ಕ್ಷೇತ್ರಕ್ಕೆ ಒಳಪಟ್ಟಿದ್ದಾರೆ. ಈಗ ಸಾಹುಕಾರರ ಹತ್ತಿರ ಸಾಲ ಮಾಡುವುದಿಲ್ಲ. ಶೇಕಡ 80 ರಷ್ಟು ಜನರು ಪಟ್ಟಣದಲ್ಲಿರತಕ್ಕ ಸಂಘಗಳಮೇಲೆ ಅವಲಂಬನ ಮಾಡಿ ಅವುಗಳಿಂದ ಒಕ್ಕಲುತನ ಉತ್ಪಾದನೆಗೆ ಹಾಗೂ ಎಲ್ಲ ತರಹ ದರ್ದುಗಳಿಗೆ ಅಲ್ಲಿ ಸಾಲಕ್ಕಾಗಿ ಹೋಗುತ್ತಾರೆ. ಇದರ ನಿವಾರಣೆ ಸಾಕಷ್ಟು ಆಗದೇ ಇದ್ದರೂ ಸಹ ಹೆಚ್ಚು ಸಾಲ ಅವರಿಗೆ ಸಿಗುವಂತೆ ವ್ಯವಸ್ಥೆ ಮಾಡುವುದು ಸರ್ಕಾರದವರ ಕರ್ತವ್ಯ ಹಾಗೂ ನಮ್ಮೆಲ್ಲರ ಕರ್ತವ್ಯವೂ ಆಗಿದೆ. ಆದ್ದರಿಂದ ಇನ್ನಷ್ಟು ಹೆಚ್ಚು ಆಸಕ್ತಿ ವಹಿಸಿ ಬಡ ರೈತನಿಗೆ ಸಿಕ್ಕುವ ಸಾಲ ಸುಲಭ ರೀತಿಯಿಂದ ಸಿಕ್ಕಲು ವ್ಯವಸ್ಥೆ ಮಾಡುವುದು ಸಹಕಾರ ಚಳುವಳಿಯ ಮುಖ್ಯೋದ್ದೇಶ. ಅದನ್ನು ಹೆಚ್ಚಿಗೆ ಸಾಧಿಸುವುದು ನಮ್ಮೆಲ್ಲರ ಕರ್ತವ್ಯ. ಈಗ ಏನು ಪ್ರಗತಿಯಾಗಿದೆಯೋ ಅದಕ್ಕಿಂತ ಇನ್ನೂ ಹೆಚ್ಚಿಗೆ ಪ್ರಗತಿಯನ್ನು ಸಾಧಿಸುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ಮಧ್ಯಮಾವಧಿ ಸಾಲದ ವಿಷಯ. ಇದನ್ನು ನೀರಾವರಿ ಬಾವಿಗಳನ್ನು ತೋಡುವುದಕ್ಕೆ ಹಾಗೂ ವ್ಯವಸಾಯ ಮಾಡುವುದಕ್ಕೆ ಕೊಡುತ್ತಾರೆ. ಇದನ್ನು ಕೊಡುವುದು 3 ವರ್ಷ ಮತ್ತು 5 ವರ್ಷದ ಅಭಿವೃದ್ಧಿ ಕಾರ್ಯಗಳಿಗೆ ಎಂಬುದಾಗಿ ವ್ಯವಸ್ಥೆ ಇದೆ. ಇದನ್ನು ಸಾಕಷ್ಟು ರೈತರಿಗೆ ಕೊಟ್ಟಿಲ್ಲ. ಇದರ ಬಗ್ಗೆ ರೈತರಿಗೆ ರಿಜರ್ವ್ ಬ್ಯಾಂಕು ಮತ್ತು ಅಪೆಕ್ಸ್ ಬ್ಯಾಂಕು ಹೆಚ್ಚು ಹಣವನ್ನು ಸಾಲದ ರೂಪವಾಗಿ ಕೊಟ್ಟಿಲ್ಲ. ಆ ಕಾರಣ ಹೆಚ್ಚಿನ ಸುಧಾರಣೆಯಾಗಬೇಕು. ಇದರಿಂದ ಹೆಚ್ಚು ಉತ್ಪಾದನೆಗೆ ಸಹಾಯ ಆಗುವುದು ಅವಶ್ಯಕ. ಆದ್ದರಿಂದ ಇನ್ನೂ ಮಧ್ಯಮಾವಧಿ ಸಾಲವನ್ನು ಕೊಡಲು ವ್ಯವಸ್ಥೆ ಮಾಡುವುದು ಅವಶ್ಯಕ. ಈ ವ್ಯವಸ್ಥೆಯಿಂದ ಸಾಲದ ಮೊಬಲಗು ಬಹಳ ಕಡಿಮೆ ಬರುತ್ತದೆ. ಆದರೂ ರೈತರಿಗೆ ಈ ಮಧ್ಯಮಾವಧಿ ಸಾಲ ಹೆಚ್ಚಿಗೆ ಸಿಗುವಂತೆ ಮಾಡಬೇಕು.

ಇನ್ನು ದೀರ್ಘಾವಧಿ ಸಾಲ. ಇದರಲ್ಲಿ ಸೆಂಟ್ರಲ್ ಮಾರ್ಟ್‌ಗೇಜ್ ಬ್ಯಾಂಕಿನವರು 165-170 ಬ್ಯಾಂಕುಗಳನ್ನು ಮಾಡಿದ್ದಾರೆ. ಇಲ್ಲಿಗೆ ಬಂದರೆ, ಮುಂಬೈ ಕರ್ಣಾಟಕದ ಅನೇಕ ತಾಲ್ಲೂಕುಗಳಲ್ಲಿ ಪ್ರೈಮರಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕುಗಳಿದ್ದಂತೆ ಇಲ್ಲ. ಈಗ ಅವು ಸ್ಥಾಪನೆಯಾಗಿ ಇಡೀ ಮೈಸೂರು ದೇಶಾದ್ಯಂತ ಎಲ್ಲಾ ಪ್ರಾಥಮಿಕ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕುಗಳಿಗೆ ಸಾಲ ಸಿಗುವ ವ್ಯವಸ್ಥೆ ನಡೆಸಬೇಕು. ಆದರೆ ಅದರಲ್ಲಿ ಕೆಲವು ತೊಂದರೆಗಳಿವೆ. ಆ ಬ್ಯಾಂಕುಗಳಿಗೆ ಕೇಂದ್ರ ಸರ್ಕಾರದವರು ಸಹಕಾರ ಸಂಘಗಳ ಮೂಲಕ ಸಾಲ ಕೊಡಬೇಕಾದರೆ ಡಿಬೆಂಚರುಗಳ ಮೂಲಕ ಅವರು ಸಾಲವನ್ನು ಫ್ಲೋಟ್‌ಮಾಡಿ ಅದರಿಂದ ಬಂದಂಥ ಸಾಲ, ಷೇರುಗಳಿಂದ ಸಾಲ ಕೊಡಿಸಬೇಕಾಗಿದೆ. ಇದನ್ನು ನೋಡಿದರೆ ಆ ಮೊಬಲಗಿನಂದರೇ ಸಾಲಕೊಡಬೇಕಾಗಿದೆ. ರಿಜರ್ವ್ ಬ್ಯಾಂಕಿನವರು ಡಿಬೆಂಚರನ್ನು ಫ್ಲೋಟ್ ಮಾಡಿದಾಗ ಸಬ್‌ಸ್ಕ್ರೈಬರ್ಸ್ ಮತ್ತು ಇನ್‌ಷೂರೆನ್ಸ್ ಕಾರ್ಪೊರೇಷನ್ನಿನವರು ಶೇಕಡ 30ರಷ್ಟು, ಮತ್ತು 20ರಷ್ಟು ರಿಜರ್ವ್ ಬ್ಯಾಂಕಿನವರು, ಇನ್ನುಳಿದ ಶೇಕಡ 50ರಷ್ಟನ್ನು ಬೇರೆ ಬೇರೆ ಬ್ಯಾಂಕುಗಳಿಂದ ಮತ್ತು ಇತರೇ ಆರ್ಥಿಕ ಸಂಸ್ಥೆಗಳಿಂದ ಅವರು ಕೂಡಿಸಬೇಕೆಂದು ಹೇಳಿದರು. ಇದನ್ನು ಈ ರೀತಿ ಕೂಡಿಸುವುದರಿಂದ ಎಷ್ಟೋ ಒಮ್ಮತವಾಗುತ್ತದೆ. ಡಿಬೆಂಚರ್ ಫ್ಲೋಟ್ ಮಾಡಿದಾಗ 4 ಲಕ್ಷ ರೂಪಾಯಿಗಳನ್ನು ಕೊಡುವುದು ಬಹಳ ತೊಂದರೆಯಾಗುತ್ತದೆ. ಆಗ ಕೆನರಾ ಬ್ಯಾಂಕ್ ಮತ್ತು ಇತರೇ ಷೆಡ್ಯೂಲ್ಡ್ ಬ್ಯಾಂಕುಗಳಿಗೆ ಹೇಗೆ ಇಟ್ಟಿದ್ದರೋ ಹಿಂದೆ ಹಾಗೆ ಅದನ್ನು ಕೂಡಿಸಬೇಕು ಎಂಬುದಾಗಿ ವಿನಂತಿ ಮಾಡುವ ಪ್ರಸಂಗ ಬರುತ್ತದೆ. ಆಗ ಇನ್ನೂ ಡಿಫಿಸಿಟ್ ಉಳಿಯುತ್ತದೆ. ಕೇಂದ್ರ ಸರ್ಕಾರವಾಗಲಿ, ಇತರೇ ಆರ್ಥಿಕ ಸಂಸ್ಥೆಗಳಾಗಲಿ, ರಿಜರ್ವ್ ಬ್ಯಾಂಕಿನವರೇ ಆಗಲೀ ಡಿಫಿಸಿಟ್ ಏನು ಬರುತ್ತದೋ ಇದನ್ನು ಸಬ್‌ಸ್ಕ್ರೈಬ್ ಮಾಡುವುದಕ್ಕೆ ಅವರಿಗೆ ಯೋಗ್ಯತೆ ಇದೆ. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಇನ್ನೂ ಡಿಬೆಂಚರ್ ಫ್ಲೋಟ್ ಮಾಡುವಾಗ ಅದಿನ್ನೂ ಸುಗಮ ಕಂಟ್ರಿಬ್ಯೂಷನ್ ಆಗದೆ ಆ ರೀತಿ ಉಳಿಯುವ ಪ್ರಸಂಗ ಬರಬಹುದು ಆ ತರಹ ಸನ್ನಿವೇಶ ಒದಗಬಹುದು ಎಂಬುದಾಗಿ ನನಗನ್ನಿಸುತ್ತದೆ. ಆದ್ದರಿಂದ ಈ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕುಗಳಿಗೆ ಹಳ್ಳಿಯ ಜನಗಳ ಸಾಲದ ಬೇಡಿಕೆ ಸಾಕಷ್ಟು ಹೆಚ್ಚಾಗುತ್ತದೆ. ಅನೇಕ ತಾಲ್ಲೂಕುಗಳಲ್ಲಿ ಲ್ಯಾಂಡ್

ಮಾರ್ಟಗೇಜ್ ಬ್ಯಾಂಕುಗಳು ಸ್ಥಾಪನೆಯಾಗಿ ಸಾಲದ ವಿತರಣೆಯಾಗಬೇಕಾದರೆ ಹಿಂದೆ 2-3 ಕೋಟಿ ರೂಪಾಯಿಗಳಷ್ಟು ಇದ್ದದ್ದು ಈ ವರ್ಷ ಸಾಲ ಕೊಡಬೇಕಾದುದು 4 ಕೋಟಿ ರೂಪಾಯಿಗಳಿಗೆ ಹೋಗಿದೆ. ಡಿಬೆಂಚರುಗಳಿಂದ ಸಾಲದ ವ್ಯವಸ್ಥೆಮಾಡುವುದರಲ್ಲಿ ಈ ರೀತಿಯಾಗಿ ಮಾಡಬೇಕು ಇದಕ್ಕೆ ಶೇಕಡ 4ರಷ್ಟು ಬಡ್ಡಿ ಕೊಡಬೇಕು.

ಇದಕ್ಕೆ ಏಪೆಕ್ಸ್ ಬ್ಯಾಂಕಿನವರು ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಆಮೇಲೆ ಸ್ಟೇಟ್ ಬ್ಯಾಂಕಿನವರು ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ರಾಜ್ಯ ಸರ್ಕಾರದವರು 40 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಇದಕ್ಕೆ ಪ್ರತಿವರ್ಷ ರಾಜ್ಯ ಸರ್ಕಾರದವರು ಒಂದು ಗ್ಯಾರಂಟಿಯನ್ನು ಕೊಟ್ಟಮೇಲೆ ಆ ಬ್ಯಾಂಕಿನವರು ಆ ಹಣವನ್ನು ಕೊಡುವಂತಹ ಒಂದು ವ್ಯವಸ್ಥೆ ಇದೆ. ಈ ರೀತಿ ರಾಜ್ಯ ಸರ್ಕಾರದವರು ಗ್ಯಾರಂಟಿಯನ್ನು ಕೊಡುವುದರಲ್ಲಿ 3-4 ತಿಂಗಳು ವಿಳಂಬವಾಗಿ ರೈತರಿಗೆ ಸಾಲವನ್ನು ವಿತರಣೆ ಮಾಡುವುದರಲ್ಲಿ ಅನೇಕ ತೊಂದರೆಗಳು ಬರುತ್ತವೆ. ಇದರ ದೆಶೆಯಿಂದ ಆದಕ್ಕೆ ರಾಜ್ಯ ಸರ್ಕಾರದವರು 3 ವರ್ಷದ ಗ್ಯಾರಂಟಿಯನ್ನು ಕೊಡಬೇಕು. ಆ ರೀತಿ ಮಾಡುವುದಾದರೆ ಅಲ್ಪಾವದೀ ಸಾಲವಾಗಲೀ ಮಧ್ಯಮಾವದಿಯ ಸಾಲವಾಗಲೀ, ದೀರ್ಘಾವಧಿಯ ಸಾಲವಾಗಲೀ ಸಾಲದ ವಿತರಣೆ ಸುಗಮವಾಗಿ ನಡೆದು ರೈತರಿಗೆ ಸಕಾಲದಲ್ಲಿ ಸಾಲ ಸಿಕ್ಕುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ 3 ವರ್ಷದ ಗ್ಯಾರಂಟಿಯನ್ನು ರಾಜ್ಯ ಸರ್ಕಾರದವರು ಕೊಟ್ಟರೆ ರೈತರಿಗೆ ಸಾಲವನ್ನು ಹಂಚುವುದಕ್ಕೆ ಅನುಕೂಲವಾಗುತ್ತದೆ. ರೈತರಿಗೂ ಯೋಗ್ಯ ವೇಳೆಗೆ ಸಾಲ ದೊರಕಿ ಅವರಿಗೆ ಒಂದು ಸ್ಫೂರ್ತಿ ಬರುತ್ತದೆಂದು ಎನಿಸುತ್ತದೆ.

ಸಹಕಾರಿ ಮತ್ತು ಮಾರಾಟದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದು ಅವಶ್ಯ ಇದೆ. ಅನೇಕ ಸಹಕಾರಿ ಸಂಘಗಳಲ್ಲಿ ಇಂಥಾ ಒಂದು ಮಾರಾಟದ ಪದ್ಧತಿ ನಡೆಯುತ್ತಿದೆ. ಈಗ ರೈತರು ಎಷ್ಟೋ ಸಹಕಾರ ಸಂಘಗಳಲ್ಲಿ ಸಾಲವನ್ನು ತೆಗೆದುಕೊಳ್ಳುತ್ತಾರೆ. ಆದರೆ ರೈತರು ತಾವು ಬೆಳೆದಂತಹ ಮಾಲಿನಲ್ಲಿ ಎಷ್ಟು ಸರ್‌ಪ್ಲಸ್ ಇರುತ್ತದೆಯೋ ಅದನ್ನು ನೇರವಾಗಿ ಸಹಕಾರ ಸಂಘಕ್ಕೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದು ಬಹಳ ವಿರಳ ಇದೆ. ರೈತರು ಬೆಳೆದಂತ ಧಾನ್ಯ ಮಾಲು ಎಲ್ಲಿ ಮಾಯವಾಗಿ ಹೋಗುತ್ತದೆಯೋ ಗೊತ್ತಿಲ್ಲ. ಎಲ್ಲೋ ಸ್ವಲ್ಪ ರೈತರು ಒಂದು ತಾತ್ವಿಕ ದೃಷ್ಟಿಯಿಂದ ಆಹಾರ ಧಾನ್ಯವನ್ನು ಮಾರಾಟ ಮಾಡುವುದಕ್ಕೋಸ್ಕರ ಸಹಕಾರ ಸಂಘಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಮೊದಲು ಎಷ್ಟು ಜನರು ಆಹಾರಧಾನ್ಯವನ್ನು ಮಾರಾಟ ಮಾಡುವುದಕ್ಕೆ ಸಹಕಾರ ಸಂಘಗಳಿಗೆ ತೆಗೆದು ಕೊಂಡು ಹೋಗುತ್ತಿದ್ದರೋ ಈಗಲೂ ಅಷ್ಟೇ ಜನರು ಹೋಗುತ್ತಿದ್ದಾರೆ. ಆದಕ್ಕೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿಲ್ಲ. ಅಲ್ಲದೇ ಕೆಲವು ಸಹಕಾರ ಸಂಘಗಳು ಗೊಬ್ಬರ ಮತ್ತು ಇನ್‌ಸೆಕ್ಟಿಸೈಡ್ಸ್ ಇವುಗಳ ಮಾರಾಟಕ್ಕೆ ಹೆಚ್ಚಿನ ಆಸಕ್ತಿಯನ್ನು ತೋರಿಸಿದ್ದು ನಮಗೆ ಯಾವುದೂ ಕಾಣುವುದಿಲ್ಲ. ಆ ಕಡೆ ಸರ್ಕಾರದವರು ಸ್ವಲ್ಪ ಲಕ್ಷ್ಯವನ್ನು ಇಡಬೇಕು. ರೈತ ತಾನು ಬೆಳೆದಂತಹ ಮಾಲನ್ನು ಹೆಚ್ಚು ಹೆಚ್ಚಾಗಿ ಮಾರಾಟ ಸಹಕಾರ ಸಂಘಗಳಿಗೆ ತೆಗೆದುಕೊಂಡು ಹೋಗಿ ಹಾಕಿ ಆದರಲ್ಲಿ ಅವನಿಗೆ ಹೆಚ್ಚಿನ ಒಂದು ಧಾರಣೆ ಬರುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ರೈತ ತಾನು ಬೆಳೆದಂತಹ ಮಾಲನ್ನು ಸಹಕಾರ ಸಂಘಗಳಿಗೆ ತೆಗೆದುಕೊಂಡು ಹೋದಾಗ ಅದು ಲೀಲಾಜಾಲವಾಗಿ ಮಾರಾಟವಾಗಿ ಅದಕ್ಕೆ ಒಂದು ಹೆಚ್ಚಿನ ಧಾರಣೆ ದೊರೆಯುವಂತಾದರೆ ರೈತನಿಗೆ ಒಂದು ತರಹ ಉತ್ತೇಜನ ದೊರೆತಂತಾಗುತ್ತದೆ.

ಇನ್ನೊಂದು ವಿಷಯವೇನೆಂದರೆ, ಪ್ರತಿಯೊಂದು ಜಿಲ್ಲೆಯಲ್ಲಿಯೂ ಮಾರಾಟಗಾರರ ಸಂಘ ಎಂದು ಸ್ಥಾಪನೆ ಮಾಡಿ ಅದರಲ್ಲಿ ಒಂದು ಫ್ಲಕ್ಚುಯೇಷನ್ ಫಂಡ್ ಎಂದು ನಿರ್ಮಾಣ ಮಾಡಿಕೊಂಡು ರೈತರು ಆ ಸಂಘಕ್ಕೆ ತರತಕ್ಕಂತ ಮಾಲಿಗೆ ಹೆಚ್ಚಿನ ಧಾರಣೆಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುವುದಾದರೆ ರೈತರಿಗೆ ಒಂದು ಉತ್ತೇಜನವನ್ನು ಕೊಟ್ಟಂತಾಗುತ್ತದೆ. ನಮ್ಮ ಮಾನ್ಯ ಮಿತ್ರರಾದ ಶ್ರೀಮಾನ್ ಎಂ. ಆರ್. ಪಾಟೀಲ್ ಅವರು ಧಾರವಾಡ ಜಿಲ್ಲೆಯಲ್ಲಿ ಒಂದು ಮಾರಾಟಗಾರರ ಫೆಡರೇಷನ್ ಎಂದು ಸ್ಥಾಪನೆ ಮಾಡಿದ್ದಾರೆ. ಆ ಸಂಸ್ಥೆಗೆ ರೈತರು ತರತಕ್ಕಂಥ ಮಾಲಿಗೆ ಒಂದು ಹೆಚ್ಚಿನ ಧಾರಣೆ ಸಿಕ್ಕುತ್ತಿದೆ. ಈ ರೀತಿ ಮಾರಾಟಗಾರರ ಸಂಘವನ್ನು ಸ್ಥಾಪನೆ ಮಾಡಿ ರೈತರು ಅಲ್ಲಿಗೆ ತರತಕ್ಕಂತ ಮಾಲಿಗೆ ಒಂದು ಹೆಚ್ಚಿನ ಧಾರಣೆ ಸಿಕ್ಕುವುದಾದರೆ ರೈತರಿಗೂ ಒಂದು ಉತ್ತೇಜನ ಕೊಟ್ಟಂತಾಗುತ್ತದೆ, ಮತ್ತು ದಳ್ಳಾಳಿಗಳ ಪೈಪೋಟಿಯೂ ಸಹ ಕಡಿಮೆಯಾಗುತ್ತದೆ. ರೈತರು ತಾವು ಬೆಳೆದಂತಹ ಮಾಲನ್ನು ಹೆಚ್ಚು ಹೆಚ್ಚಾಗಿ ಈ ಮಾರಾಟ ಸಂಘಗಳಿಗೆ ತರುವುದಕ್ಕೆ ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಮಾರಾಟ ಸಂಘಗಳನ್ನು ಸ್ಥಾಪನೆ ಮಾಡಬೇಕು. ಮತ್ತು ಆ ಸಂಘಗಳಲ್ಲಿ ಏನು ಫಾಯಿದೆ ಬರುತ್ತದೆಯೋ ಅದರಲ್ಲಿ ಕೆಲವು ಅಂಶವನ್ನು ಆ ಸಂಘಕ್ಕೂ ಮತ್ತು ಕೆಲವು ಅಂಶವನ್ನು ಆ ಸಂಘದ ಸದಸ್ಯರಿಗೂ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಇಂಥಾ ಒಂದು ವ್ಯವಸ್ಥೆಯನ್ನು ಮಾಡುವುದರಿಂದ ಹತ್ತಿ, ಗೋಧಿ ಶೇಂಗಾ ಇವುಗಳನ್ನು

(ಶ್ರೀ ಎ. ಎಸ್. ಪಾಟೀಲ್)

ಬೆಳೆಯತಕ್ಕ ರೈತರಿಗೂ ಸಹ ಒಂದು ಉತ್ತೇಜನವನ್ನು ಕೊಟ್ಟಂತಾಗುತ್ತದೆ. ಈ ರೀತಿಯಾದಂತಹ ಒಂದು ಆಕರ್ಷಣೆಯನ್ನು ಮಾಡದೇ ಹೋದರೆ ಯಾರಿಗೂ ಪ್ರೋತ್ಸಾಹ ಸಿಕ್ಕಿದಂತಾಗುವುದಿಲ್ಲ. ಅದಕ್ಕೋಸ್ಕರವಾಗಿ ಮಾರಾಟ ಸಂಘಗಳನ್ನು ಸ್ಥಾಪನೆ ಮಾಡಲು ಅನುಕೂಲವಾಗುವಂತೆ ಮಾರ್ಕೆಟಿಂಗ್ ಸೊಸೈಟಿಯ ಬೈಲಾ ಏನಿದೆ ಅದನ್ನು ತಿದ್ದುಪಡಿ ಮಾಡಿ ಮಾರಾಟ ಸಂಘಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಬೇಕು. ಮತ್ತು ರೈತರು ಆ ಸಂಘಗಳಿಗೆ ತರತಕ್ಕಂಥ ಮಾಲಿಗೆ ಹೆಚ್ಚಿನ ಧಾರಣೆಯನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಆ ರೀತಿ ಮಾಡದೇ ಹೋದರೆ ಪತ್ತು ಮಾರಾಟ ಜೋಡಣೆ ಸರಿಯಾಗಿ ನಡೆಯುವುದಿಲ್ಲ ಎನಿಸುತ್ತದೆ. ಅದರ ಸಲುವಾಗಿ ಪತ್ತು ಮಾರಾಟ ಜೋಡಣೆಯ ವ್ಯವಸ್ಥೆಯನ್ನು ಮಾಡುವುದಕ್ಕೋಸ್ಕರ ಆದಷ್ಟು ತೀವ್ರವಾಗಿ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಈಗ ರೈತ ಬೆಳೆಯುವಂತಹ ಮಾಲಿನಲ್ಲಿ 100ಕ್ಕೆ 10 ರಷ್ಟೂ ಸಹ ಮಾರಾಟ ಸಂಘಕ್ಕೆ ಹೋಗುವುದಿಲ್ಲ. ರಿಜರ್ವ್ ಬ್ಯಾಂಕಿನವರು ಕೇಂದ್ರದ ಬ್ಯಾಂಕಿನವರು ಪತ್ತು ಜೋಡಣೆ ಮಾರಾಟದ ವ್ಯವಸ್ಥೆಗೋಸ್ಕರ ಬೇಕಾದಷ್ಟು ಹಣವನ್ನು ಮೀಸಲಾಗಿಟ್ಟಿದ್ದಾರೆ. ಆದರೆ ಅದರ ವಿನಿಯೋಗ ಈ ದೆಶೆಯಲ್ಲಿ ಹೆಚ್ಚು ನಡೆಯದೆ ಅದರ ವಿನಿಯೋಗ ದಳ್ಳಾಳಿಗರಲ್ಲಿ ಮಾತ್ರ ನಡೆಯುತ್ತಿದೆ. ಇದರಿಂದಾಗಿ ರೈತ ಬೆಳೆದಂತಹ ಮಾಲಿಗೆ ಸರಿಯಾದ ಧಾರಣೆ ಸಿಕ್ಕುವುದಿಲ್ಲ. ಆದ್ದರಿಂದ ಈ ದೆಶೆಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದು ನಮ್ಮ ಕರ್ತವ್ಯ ಅನಿಸುತ್ತದೆ.

ಇನ್ನೊಂದು ವಿಚಾರ ಈಗ ನಮ್ಮ ರಾಜ್ಯದಲ್ಲಿ ಪ್ರೋಸೆಸಿಂಗ್ ಯೂನಿಟ್ಸ್ ಸಕ್ಕರೆ ಕಾರ್ಖಾನೆಗಳು ಏನಿವೆ ಅವುಗಳಲ್ಲಿ 3 ಸಕ್ಕರೆ ಕಾರ್ಖಾನೆಗಳು ಸಹಕಾರಿ ಕ್ಷೇತ್ರದಲ್ಲಿ ನಡೆಯುತ್ತಿವೆ. ನಮ್ಮ ಹಿಂದೂಸ್ಥಾನದಲ್ಲಿ ಸುಮಾರು 48 ಸಕ್ಕರೆ ಕಾರ್ಖಾನೆಗಳು ಸಹಕಾರೀ ಕ್ಷೇತ್ರದಲ್ಲಿ ನಡೆಯುತ್ತಿವೆ. ಹೀಗಿರುವಾಗ ನಮ್ಮ ರಾಜ್ಯದಲ್ಲಿ 3—4 ಸಕ್ಕರೆ ಕಾರ್ಖಾನೆಗಳು ಮಾತ್ರ ಸಹಕಾರ ಕ್ಷೇತ್ರದಲ್ಲಿ ನಡೆಯುತ್ತಿವೆ. ಈಗ ಹಿಂದೂಸ್ಥಾನದಲ್ಲಿ ಸಹಕಾರೀ ಕ್ಷೇತ್ರದಲ್ಲಿ ಸ್ಥಾಪನೆಯಾಗಿರತಕ್ಕ ಸಕ್ಕರೆ ಕಾರ್ಖಾನೆಗಳು ಹೆಚ್ಚು ಉತ್ಸಾಹದಿಂದ ಕೆಲಸಮಾಡುತ್ತಿವೆ ಎಂದು ನಮಗೆ ಗೊತ್ತಾಗಿದೆ. ಈಗ ನಮ್ಮ ರಾಜ್ಯದಲ್ಲಿ ಸಹಕಾರಿ ಕ್ಷೇತ್ರದಲ್ಲಿ ನಡೆಯುತ್ತಿರುವ ಪ್ರೊಸೆಸಿಂಗ್ ಯೂನಿಟ್ಸ್ ಸಕ್ಕರೆ ಕಾರ್ಖಾನೆಗಳು ಏನಿವೆ ಅವುಗಳಿಗೆ ನಮ್ಮ ಸರ್ಕಾರದವರು ಹೆಚ್ಚು ಸಹಾಯವನ್ನು ಮಾಡಬೇಕು. ಆ ಕಾರ್ಖಾನೆಗಳವರಿಗೆ ಕೆಲವೊಂದು ತೊಂದರೆಗಳು ಏನು ಬರುತ್ತವೆಯೋ ಅವುಗಳನ್ನು ನಿವಾರಣೆ ಮಾಡುವುದಕ್ಕೆ ಸಾಕಷ್ಟು ಪ್ರಯತ್ನಮಾಡಿ ಪ್ರೋಸೆಸಿಂಗ್ ಯೂನಿಟ್ಸ್‌ಗಳನ್ನು ಸರಿಪಡಿಸಬೇಕು. ಈಗ ಸಹಕಾರಿ ಕ್ಷೇತ್ರದಲ್ಲಿ ನಮ್ಮ ರಾಜ್ಯದಲ್ಲಿ 42 ಅಕ್ಕಿ ಗಿರಣಿಗಳನ್ನು ಸ್ಥಾಪಿಸಬೇಕೆಂದು ಸರ್ಕಾರದವರು ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಈಗ ತುರ್ತು ಪರಿಸ್ಥಿತಿ ಬಂದಿರುವುದರಿಂದ ಆಹಾರದ ಕೊರತೆ ಏನು ಬಂದಿದೆ ಅದನ್ನು ನಿವಾರಣೆಮಾಡುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯ ಇದೆ. ಇದರ ದೆಶೆಯಿಂದ ಸಹಕಾರಿ ಕ್ಷೇತ್ರದಲ್ಲಿ ಸ್ಥಾಪನೆ ಮಾಡತಕ್ಕ ಗಿರಣಿಗಳಿಗೆ ಸರ್ಕಾರದವರು ಮಿಷನರಿ ಮುಂತಾದ ಅನೇಕ ತರಹ ಸಹಾಯವನ್ನು ಕೊಡಬೇಕು. ಮತ್ತು ಕಟ್ಟಡಗಳನ್ನು ಕಟ್ಟುವುದಕ್ಕೆ ಬೇಕಾದ ಕಬ್ಬಿಣ ಸಿಮೆಂಟ್ ಇತ್ಯಾದಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು.

ಈಗ ಒಂದು ತೊಂದರೆಯಾಗಿದೆ. ಇದು ಮಹತ್ವದ್ದು. ಮೊನ್ನೆ ಕೇಂದ್ರ ಸರಕಾರದವರು ಬ್ಯಾಂಕ್ ರೇಟನ್ನು ಬಡಾಯಿಸಿದ್ದಾರೆ—ಒಂದು ಪರ್ಸೆಂಟ್ ಜಾಸ್ತಿ ಮಾಡಿದ್ದಾರೆ; 5 ಇದ್ದದ್ದನ್ನು 6 ಮಾಡಿದರು. ಇದರಿಂದ ಒಕ್ಕಲುತನದವರು ಸಾಲ ಪಡೆಯುವುದಕ್ಕೆ ದೊಡ್ಡ ಧಕ್ಕೆ ಬಂದಿವೆ. ಒಮ್ಮಿಂದೊಮ್ಮಿಗೆ ಬಡ್ಡಿದರ 5 ಇದ್ದುದು 6 ಆಯಿತು. ಹಳ್ಳಿಯ ರೈತನಿಗೆ ಬಡ್ಡಿ ದರ ಅದರಿಂದ 10 ಪರ್ಸೆಂಟ್ ಆಗುವ ಸಂಭವವಿದೆ; ಅದು ಶೇಕಡ 11ರವರೆಗೂ ಹೋಗಬಹುದು ಎಲ್ಲಿ 9 ಪರ್ಸೆಂಟ್ ಇತ್ತೊ, ಅದು ಈಗ 10 ಪರ್ಸೆಂಟ್‌ವರೆಗೂ ಆಗುತ್ತದೆ. ಇದರಿಂದ ಅವರಿಗೆ ಮುಂದೆ ಏನು ಮಾಡಬೇಕೆಂದರೆ, ಕೆಲವು ಸಬ್‌ಸಿಡಿಯನ್ನು ಸರ್ಕಾರದವರು ವ್ಯವಸ್ಥೆ ಮಾಡಬೇಕು. ಇಲ್ಲವಾದರೆ ಕೇಂದ್ರ ಸರ್ಕಾರದವರು ಏನು ಬ್ಯಾಂಕ್ ರೇಟನ್ನು ಸಂಘಗಳಿಗೆ ಕೊಡುವ ಸಾಲಕ್ಕೆ ಬಡಾಯಿಸಿದ್ದಾರೆ, ಆ ಒಂದು ಪರ್ಸೆಂಟನ್ನು ಹೆಚ್ಚು ಮಾಡಬಾರದು. ಈ ರೀತಿಯಲ್ಲಿ ನಮ್ಮ ಸರಕಾರದವರು ಕೇಂದ್ರ ಸರ್ಕಾರಕ್ಕೆ ಮನವಿ ಕೊಡಬೇಕು. ಇಲ್ಲವಾದರೆ, ಹಳ್ಳಿಯ ರೈತರಿಗೆ, ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ತೆಗೆದುಕೊಳ್ಳುವವರಿಗೆ, ಬಡ್ಡಿ ದರ ಬಹಳವಾಗುತ್ತದೆ; ಇಷ್ಟು ವಿಪರೀತ ಬಡ್ಡಿ ದರದಲ್ಲಿ ದುಡ್ಡು ಕೊಡುವುದೆಂದರೆ ಬಹಳ ತೊಂದರೆಯಾಗುತ್ತದೆ. ರೈತರಿಗೆ ಸಾಕಷ್ಟು ಕ್ರೆಡಿಟ್ ಸುಲಭವಾಗಿ ಸಿಗಬೇಕು. ಅದು 5 ಪರ್ಸೆಂಟ್ 6 ಪರ್ಸೆಂಟ್ ಇದ್ದಾಗಲೆ ಭಾರಿ ಅನ್ನಿಸುತ್ತಿತ್ತು, ಅಂತಹುದರಲ್ಲಿ 10 ಪರ್ಸೆಂಟ್ ಕ್ರೆಡಿಟ್ ಹಣಕ್ಕೆ ಬಡ್ಡಿಯಾದರೆ, ಯಾವ ರೀತಿಯಿಂದಲೂ ಗವರ್ನ್

ಮೆಂಟಿನಿಂದ ಸಾಲ ತೆಗೆದುಕೊಳ್ಳುವುದು ಕಠಿಣವಾಗುತ್ತದೆ. ಈಗಿನ ಪರಿಸ್ಥಿಯಲ್ಲಿ ಅನೇಕ ಖರ್ಚಿನ ಬಾಬು ಅದಾವೆ, ಕೂಲಿ ಕೊಡುವುದು ಬಹಳ ಹೆಚ್ಚಿದೆ, ದನ ಕೊಳ್ಳುವುದಕ್ಕೆ, ಯಂತ್ರ ಕೊಳ್ಳುವುದಕ್ಕೆ ಹೆಚ್ಚು ಕೊಡಬೇಕಾಗಿದೆ. ತಾವು ಹೆಚ್ಚಿನ ಬಡ್ಡಿ ದರದ ಬಗ್ಗೆ ನಿಗಾ ವಹಿಸಬೇಕು, 10 ಪರ್ಸೆಂಟ್ ಕೊಡುವುದೆಂದರೆ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ನಮ್ಮ ಸರ್ಕಾರದವರು ಏನಾದರೂ ಒಳ್ಳೆಯ ವ್ಯವಸ್ಥೆ ಮಾಡಿಕೊಡಬೇಕು. ಸಬ್‌ಸಿಡಿಯಿಂದಲೊ, ಬೇರೆ ಯಾವ ತರಹದಿಂದಲೊ, ಸಾಲ ಸಿಗುವ ವ್ಯವಸ್ಥೆ ಮಾಡುವುದು ಯೋಗ್ಯವೆಂದು ನನಗನಿಸುತ್ತದೆ. ಇದರ ಬಗ್ಗೆ ನೋಡಿದರೆ ಈಗಾಗಲೆ 9-10 ಪರ್ಸೆಂಟ್ ಇದೆ ಅನ್ನಬಹುದು ; ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನವರು ಬಡ್ಡಿ ದರವನ್ನು ಈ ಹೊಸ ಆಧಾರದ ಮೇಲೆ ಹಾಕುತ್ತಾರೆ. ದೀರ್ಘಾವದಿ ಸಾಲಕ್ಕೆ 9 ಪರ್ಸೆಂಟಿನಷ್ಟು ಕೂಡ ಹಾಕುತ್ತಾರೆಂದರೆ ಎಷ್ಟರಮಟ್ಟಿಗೆ ನ್ಯಾಯವಾಗಿರುತ್ತದೆ ? ಸಾಲ ಕೊಡುವ ಸಂಸ್ಥೆಗಳಿಗೂ ಕಷ್ಟವಿದೆ; ಅವರಿಗೆ ಅಷ್ಟು ದರವಿಲ್ಲದವಾದರೆ, ಸಿಬ್ಬಂದಿ ಖರ್ಚು ಮತ್ತಿತರ ಖರ್ಚಿಗೆ ಸಾಕಾಗದಂತಾಗಿ ಆಡಳಿತಕ್ಕೆ ಬಹಳ ತೊಂದರೆಯಾಗುತ್ತದೆ ಈ ಬಡ್ಡಿದರದ ಬಗ್ಗೆ ಸರ್ಕಾರದವರು ರಿಸರ್ವ್ ಬ್ಯಾಂಕಿನೊಂದಿಗೆ ಹೆಚ್ಚಿನ ವಿಚಾರ ವಿನಿಮಯ ಮಾಡಬೇಕು.

ಸಹಕಾರ ಸಂಘದೊಳಗೆ ನಾವು ಈ 2-3 ವರ್ಷದೊಳಗೆ ಎಷ್ಟೊಂದು ಪ್ರಗತಿ ಹೊಂದಿದ್ದೇವೆ ಎಂದು ಈಗಾಗಲೇ ಬಹಳ ಸದಸ್ಯರು ಹೇಳಿದ್ದಾರೆ. ಕೇಂದ್ರ ಸಂಸ್ಥಗಳು ಸಹಿತ ಹೆಚ್ಚು ಕೆಲಸ ಮಾಡಿ ಕೊಂಡು ಬಂದಿವೆ. ನಮ್ಮ ಕೇಂದ್ರ ಅಪೆಕ್ಸ್ ಬ್ಯಾಂಕ್ ಸಾಕಷ್ಟು ಲಾಭವನ್ನು ಪಡೆಯುತ್ತಾ ಇರುತ್ತದೆ ; ಹೋದ ವರ್ಷ 15 ಲಕ್ಷದಷ್ಟು ಲಾಭ ಪಡೆದಿದ್ದಾರೆ. ಈ ಲಾಭವನ್ನು ಹೇಗೆ ವಿನಿಯೋಗ ಮಾಡಬೇಕು ? ಅದನ್ನು ರೈತರ ಒಂದು ಅಭಿವೃದ್ಧಿಗೆ ಉಪಯೋಗಿಸಬೇಕೆ ಹೊರತು, ವರ್ಷವರ್ಷ 15 ಲಕ್ಷ ಇರುವುದನ್ನು, 2 ಕೋಟಿ ಲಾಭ ಮಾಡಿದರೂ ಪ್ರಯೋಜನವಿಲ್ಲ ಹೆಚ್ಚು ಲಾಭ ಬರುವುದನ್ನು ಉಪಯೋಗಿಸಲು ಯಾವ ತರಹ ವ್ಯವಸ್ಥೆ ಮಾಡಬೇಕು ಎಂದು ಸರಕಾರದವರು ಕಂಡು ಹಿಡಿಯ ಬೇಕು. ದೇಶದಲ್ಲಿ ಸಾಲದ ವಿತರಣೆ ಮಾತ್ರ ಇದ್ದರೆ ಸಾಲದು, ಅದರಂತೆ ಫಾಯಿದೆ ವಿತರಣೆಯೂ ಇರಬೇಕು. ಯಾರಿಂದ ಫಾಯಿದೆ ಇರುತ್ತದೋ, ಅವರ ಅಭಿವೃದ್ಧಿ ದಿಶೆಯಿಂದ, ಅದು ಅವರಿಗೇ ಪುನಃ ಪುನಃ ಉಪಯೋಗವಾಗಬೇಕು ; ಅದು ಸೂಕ್ತವೆಂದು ನನಗನಿಸುತ್ತದೆ.

ಇದೂ ಅಲ್ಲದೆ, ಈಗ ಸಹಕಾರ ಕ್ಷೇತ್ರದೊಳಗೆ ಹೆಚ್ಚು ಶಿಕ್ಷಣ ಹೊಂದಿದ, ಹೆಚ್ಚು ತರಪೇತಿ ಹೊಂದಿದ ಸಿಬ್ಬಂದಿ ಇರಬೇಕೆಂಬ ದೃಷ್ಟಿಯಿಂದ ನಮ್ಮ ರಾಜ್ಯದಲ್ಲಿ ಒಟ್ಟು 5 ಸಹಕಾರಿ ಶಾಲೆಗಳನ್ನು ನಾವು ಈಗಾಗಲೇ ನಡೆಸಿದ್ದೇವೆ ; 80ರಂತೆ ಕೆಲವು ಲೋಕಲ್ ಭಾಗಗಳಿಂದ, ಇನ್‌ಸ್ಟಿಟ್ಯೂಶನ್ನಿಗಳಿಂದ ನೌಕರರನ್ನು ತೆಗೆದುಕೊಂಡು ತರಪೇತಿ ಮಾಡಿದ್ದೇವೆ. ಇದು ಎಲ್ಲಾ ಬೆಂಗಳೂರಿನಲ್ಲಿ ಬಂದು ಇಂಟರ್‌ಮೀಡಿಯಟ್ ಕಾಲೇಜ್ ಸೆಂಟರ್ ಅಂತ ಮಾಡಿ, ಶಿಕ್ಷಣದ ಬಗ್ಗೆ ವ್ಯವಸ್ಥೆ ಮಾಡಲಾಗಿದೆ, ಗ್ರ್ಯಾಜುಯೇಟ್ ಆಗಿದ್ದವರೂ ಸಹ ಈ ಶಿಕ್ಷಣ ಕೇಂದ್ರಕ್ಕೆ ಬಂದು ಶಿಕ್ಷಣವನ್ನು ಹೊಂದಿದ್ದಾರೆ, ಅದರ ಲಾಭ ಪಡೆದುಕೊಂಡಿದ್ದಾರೆ. ಹೀಗಾಗಿ ಅನೇಕ ಸಹಾಕಾರ ಸಂಸ್ಥೆಗಳು ಈ ಎಲ್ಲಾ ರೀತಿಯಿಂದ ಶಿಕ್ಷಣ ಹೊಂದಿದವರನ್ನು ತರಪೇತಿ ಪಡೆದವರನ್ನು ಪಡೆದಿದ್ದಾರೆ. ಈ ರೀತಿ ಅನುಭವ ಹೊಂದಿದ ಸಿಬ್ಬಂದಿ ಇಲ್ಲದಿದ್ದರೆ, ದೊಡ್ಡ ಸಂಸ್ಥೆಗಳನ್ನು ನಡೆಸಲಿಕ್ಕೆ ತೊಂದರೆಯಾಗುತ್ತದೆ. ಅನೇಕ ಲೆಕ್ಕ ಪತ್ರಗಳನ್ನು ಇಡುವುದು, ಜಮಾ ಖರ್ಚು ಮಾಡಿದಂಥ ಲೆಕ್ಕ ಇಡುವುದು, ಮತ್ತು ವ್ಯವಹಾರಿ ಮಾಡು ವುದರಲ್ಲಿ ತರಪೇತಿ ಹೊಂದದೆ, ಸಹಕಾರ ಸಂಸ್ಥೆಗಳಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಶಿಕ್ಷಣ ಸಂಸ್ಥೆಗಳು ಅತ್ಯವಶ್ಯಕವಾಗಿ ಬೇಕಾಗಿದೆ. ಆ ಅವಶ್ಯಕತೆಯನ್ನು ಮನಗಂಡು, ತರಪೇತಿ ಹೊಂದಲಿಕ್ಕೆ ಅವಕಾಶವನ್ನು ಮಾಡಿದ್ದುಂಟು. ಆದರೆ ಇನ್ನೂ ಕೆಲವು ಜಿಲ್ಲೆಗಳೊಗೆ ಈ ತರಹ ಶಿಕ್ಷಣ ಸಂಸ್ಥೆಗಳನ್ನು ನಾವು ತೆರೆಯುವುದು ಅವಶ್ಯಕ, ಏಕೆಂದರೆ ಈಗ ಅಲ್ಲಲ್ಲಿ 4-5 ಜಿಲ್ಲೆಗೆ ಒಂದು ಸಂಸ್ಥೆ ಇದೆ. ಹೈದರಾಬಾಬ್ ಕರ್ಣಾಟಕದೊಳಗೆ ಬಂದಿದೆ; ಮೈಸೂರಿನೊಳಗೆ ಎಲ್ಲಾ 7 ಜಿಲ್ಲೆ ಕೂಡಿ ಬಂದಿದೆ. ಹೆಡ್‌ಕ್ವಾರ್ಟರಿನಲ್ಲಿ ಇಲ್ಲಿ ಒಂದು ಇದೆ ಮಂಗಳೂರಿಗೆ ಒಂದು ಬೇಕು ; ಇನ್ನೂ 3-4 ಶಿಕ್ಷಣ ಸಂಸ್ಥೆಗಳನ್ನು ಹೆಚ್ಚಾಗಿ ತೆರೆಯುವುದು ಅವಶ್ಯಕವೆಂದು ನನಗನಿಸುತ್ತದೆ. ಆ ಪ್ರಕಾರ ಅದರ ಬಗ್ಗೆ ವ್ಯವಸ್ಥೆ ಮಾಡುವುದು ಅವಶ್ಯಕ.

ಇನ್ನು ಎರಡನೆಯ ಮಾತೆಂದರೆ, ನಾವು ಸಹಕಾರದೊಳಗೆ ಉತ್ಪಾದನೆ ಜಾಸ್ತಿ ಮಾಡಲಿಕ್ಕೆ ಏನು ಪ್ರಯತ್ನ ಮಾಡಿದ್ದೇವೆ, ಅದು ಹೆಚ್ಚು ಫಲಕಾರಿಯಾಗಿದೆ ಎಂದು ಹೇಳಿದಿದ್ದರೂ ರೈತರನ್ನು ವ್ಯವಸಾಯನ್ನು ಸುಗಮವಾಗಿ ಮಾಡಲಿಕ್ಕೆ ಸಹಕಾರದೊಳಗೆ ಸಾಕಷ್ಟು ಪ್ರಯತ್ನ ನಡೆದಿದೆ. ಆದು ಇನ್ನೂ ಹೆಚ್ಚಾಗಲಿ ಎಂದು ಬಯಸುತ್ತೇನೆ.

ಮುಂದೆ ಒಕ್ಕಲುತನದ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬೇಕೆಂದಿದ್ದೇನೆ; ಅಂದರೆ ವ್ಯವ ಸಾಯದ ವಿಷಯದಲ್ಲಿ ಬೀಜದ ರಿಸರ್ಚಿಗಾಗಿ ಸೀಡ್ ಫಾರ್ಮುಗಳು ಏನಿವೆ, ಅವುಗಳಿಂದ ಬೀಜದ ವ್ಯವಸ್ಥೆ ಸರಿಯಾಗಿಲ್ಲ, ಸಾಕಷ್ಟು ಬೀಜ ಸಿಗುತ್ತಿಲ್ಲ. 70–72 ಸೀಡ್ ಫಾರ್ಮುಗಳಿದ್ದರೂ, ಸಾಕಷ್ಟು ಬೀಜ ಉತ್ಪಾದನೆಯಾಗುವುದಿಲ್ಲ ; ಬೀಜ ಬಹಳ ಕಡಿಮೆ ಸಿಗುತ್ತಿದೆ. ಈ ಬೀಜದ ಕೇಂದ್ರ

(ಶ್ರೀ ಎ. ಎಸ್. ಪಾಟೀಲ್)

ಗಳು ಸರಿಯಾಗಿ ಕೆಲಸ ಮಾಡುವುದಿಲ್ಲ. ಅಲ್ಲಿ ನೀರಾವರಿ ವ್ಯವಸ್ಥೆ ಇರುವುದಿಲ್ಲ. ಅದೂ ಅಲ್ಲದೆ ಅವು ಸಾಕಷ್ಟು ವಯಬಲ್ ಯೂನಿಟ್ ಅಲ್ಲ, 15-20 ಎಕರೆಯ ಸಣ್ಣ ಸಣ್ಣ ಯೂನಿಟ್ಟುಗಳಿವೆ. ಅವನ್ನು ಹೆಚ್ಚು ಬಡಾಯಿತ ಬೇಕಾಗಿದೆ. ಈ ಬೀಜದ ಕೇಂದ್ರಗಳಲ್ಲಿರುವ ಆಫೀಸರುಗಳಿಗೆ ಸಂಶೋಧನೆಯಲ್ಲಿ ತರಪೇತಿ ಇರುವುದಿಲ್ಲ; ಯಾರೋ ತಮಗೆ ಬೇಕಾದವರನ್ನು ಎಕ್ಸಿಕ್ಯೂಟೀವ್ ಲೈನಿನಲ್ಲಿದ್ದವರನ್ನು ಹಾಕುವ ವ್ಯವಸ್ಥೆ ಉಂಟು. ಇದೂ ಅಲ್ಲದೆ ಅನೇಕ ಟೀಕೆ ಟಿಪ್ಪಣಿಗಳನ್ನು ಈ ಒಕ್ಕಲುತನದ ಖಾತೆಯ ಇಲಾಖೆಯ ಅಧಿಕಾರಿಗಳಿಗೂ ತರೆನೋವು ಉಂಟು. ಅವರು ತಮಗೆ ಸೀನಿಯಾರಿಟಿ ಸಿಕ್ಕಿವೆಂದು ಸಂಕಟ ಹೇಳುತ್ತಾರೆ. ಈ ಕಾರಣದಿಂದ ಅವರು ಸೀಡ್ ಫಾರ್ಮ್ ವ್ಯವಸ್ಥೆ ಮಾಡುವುದಿಲ್ಲ, ರಿಸರ್ಚ್ ಕಡೆ ಲಕ್ಷ್ಯ ಹೋಗುವುದಿಲ್ಲ. ಒಟ್ಟಿನಲ್ಲಿ ಒಕ್ಕಲುತನ ಅಸ್ತ್ರಾವ್ಯಸ್ತವಾಗಿದೆ. ಅದನ್ನು ಸಮನ್ವಯಗೊಳಿಸುವುದು ನಮ್ಮ ಮಂತ್ರಿವರ್ಯರ ಆದ್ಯ ಕರ್ತವ್ಯ.

ನಮ್ಮ ಭಾಗದೊಳಗೆ ಗೋಧಿ ಮತ್ತು ಹತ್ತಿ—ಇವುಗಳ ಬೀಜ ಪೂರ್ಣವಾಗಿ ಹಾಳಾಗಿ, ಕೆಟ್ಟು ಹೋಗಿದೆ, ಅದರ ಕಡೆ ಏನೂ ಲಕ್ಷ್ಯ ಕೊಟ್ಟಿಲ್ಲ. ನಮ್ಮ ರಾಜ್ಯ ಪುನರ್ವಿಂಗಡಣೆಯಾದಾಗಿನಿಂದ ಇಲ್ಲಿಯಾರೆಗೆ, ನಮ್ಮ ಒಕ್ಕಲುತನ ಖಾತೆಯ ಮುಖ್ಯಾಧಿಕಾರಿಗಳು ಮುಂಬೈ ಪ್ರಾಂತ್ಯದ ಈ ನಾಲ್ಕು ಜಿಲ್ಲೆಗಳಿಗೆ ಬೇಕಾದಂಥ ಗೋಧಿ ಮತ್ತು ಹತ್ತಿ ಬೀಜಗಳ ವ್ಯವಸ್ಥೆ ದಿಶೆಯಿಂದ ಎವಾಲ್ವ್ ಮಾಡುವ ಕಡೆ ಲಕ್ಷ್ಯ ಕೊಡುತ್ತಿಲ್ಲ, ಅವರಿಗೆ ಕೊಡದೆ ಹೋದರೆ, ಲಕ್ಷ್ಯ ಕೊಡುವುದಕ್ಕೆ, ನಿರ್ದಿಷ್ಟವಾಗಿ ಮನಸ್ಸಿಗೆ ತಿಳಿಯುವ ಹಾಗೆ ಹೇಳುವುದಕ್ಕೆ ತಯಾರಾಗಿದ್ದೇನೆ.
ಗೋಧಿ ಬೀಜದ ಬಗ್ಗೆ ನೋಡಿದರೆ ಮೊದಲು ಮಹಾಬಳೇಶ್ವರದಿಂದ ಸೀಡ್‌ಲಿಂಗ್ಸ್‌ಗಳನ್ನು ಪಡೆದು ಅದನ್ನು ಯಾವ ರೀತಿಯಾಗಿ ಇಲ್ಲಿ ಉಪಯೋಗಿಸಬೇಕೆಂದು ಮತ್ತು ಅದರ ವ್ಯಾವಸಾಯ ಹೇಗೆ ಮಾಡಬೇಕೆಂದು ಎಷ್ಟು ಸಲಹೆ ಕೊಟ್ಟರೂ ಕೂಡ ಅದರ ಕಡೆಗೆ ಇಲ್ಲಿರುವ ಒಕ್ಕಲುತನದ ಅಧಿಕಾರಿಗಳು ಲಕ್ಷ್ಯಕೊಡುತ್ತಿಲ್ಲ. ಇದನ್ನು ಹೇಗೆ ಎವಾಲ್ವ್ ಮಾಡಬೇಕೆನ್ನುವುದದು ಇಲ್ಲಿನ ಜನಕ್ಕೆ ತಿಳಿಯದು, ಯಾವುದಾದರೂ ಕೆಟ್ಟು ಹೋದರೆ ಹೋಗಲಿ ಎಂದು ಸುಮ್ಮನೆ ಇರುತ್ತಾರೆ.

3-30 P. M.

ಈಗ ಅಮೃತ ಬೀಜ ಎನ್ನುವುದು ಬಂದದೆ ಎಂದು ಮತ್ತು ಅದರಂತೆ ಉಪಯೋಗಿಸಿ ಮಾಡುವಾಗ ಉತ್ಪತ್ತಿ ಕೂಡ ಹೆಚ್ಚಾಗುತ್ತದೆ ಎಂದರೂ ಆದರ ಬಗ್ಗೆ ಸರಿಯಾಗಿ ಜನಕ್ಕೆ ತಿಳುವಳಿಕೆ ಕೊಡುವುದಿಲ್ಲ. ರಸ್ಟ್ ಡಿಸೀಸ್ ಅಲ್ಲಲ್ಲಿ ಬರುವುದರಿಂದಾಗಿ ಬೆಳೆ ಕೆಟ್ಟು ಹೋಗುತ್ತಿದೆ ಇದನ್ನು ಸರಿ ಮಾಡಲು ತಕ್ಕ ಕ್ರಮಗಳನ್ನು ಎವಾಲ್ವ್ ಮಾಡಿ ಎಂದು ಹೇಳಿದರೂ ಮಾಡುತ್ತಿಲ್ಲ. ಇಲ್ಲಿ ಇರುವ ಅಧಿಕಾರಿಗಳ ಹೊಲಸು ನೀತಿಯಿಂದಾಗಿ ವಕ್ಕಲುತನ ಸರಿಯಾಗಿ ಆಗುತ್ತಿಲ್ಲ. ಹಿಂದಿನ ವರ್ಷ ಮಳೆಯಾಯಿತು, ಬೆಳೆಯೂ ಚೆನ್ನಾಗಿ ಆಯಿತು, ಹವೆಯೂ ಸರಿಯಾಗಿತ್ತು, ಆದರೆ ಈ ರೋಗದಿಂದ ಬೆಳೆಗಳು ಹಾಳಾಗಿ ಎಲ್ಲ ವಕ್ಕಲುತನದ ಉದ್ಯಮವೇ ಸಂಪೂರ್ಣವಾಗಿ ನಾಶಮಾಡಲು ಇಲ್ಲಿರುವ ವಕ್ಕಲುತನದ ಅಧಿಕಾರಿಗಳು ಸಮ್ಮನೆ ಕುಳಿತಂತೆ ಭಾಸವಾಗುತ್ತದೆ. ಇದಕ್ಕೆ ಲಕ್ಷ್ಯ ಕೊಡಬೇಕು, ವಕ್ಕಲುತನದ ಮಂತ್ರಿಗಳು ಬೀಜದ ಬಗ್ಗೆ ಹೇಗೆ ಮಾಡುತ್ತಿದ್ದಾರೆನ್ನುವುದಕ್ಕೆ ಅವರೇ ಇಲ್ಲಿಗೆ ಹೋಗಿ ನೋಡಿದರೆ ಎಲ್ಲ ಚೆನ್ನಾಗಿ ತಿಳಿದುಕೊಳ್ಳ ಬಹುದು. ಇನ್ನು ಹತ್ತಿ ಬೀಜದ ಬಗ್ಗೆ ನೋಡಿದರೆ ಇದರಲ್ಲಿ ಜಯಧರ್ ಹತ್ತಿ ಹಾಗೂ ಲಕ್ಷ್ಮಿ ಹತ್ತಿ ಎಂದು ಎರಡು ತರಹದ ಬೀಜಗಳಿವೆ. ಇದನ್ನು ತರಿಸಿ ಜನರು ಹೇಗೆ ಉಪಯೋಗಮಾಡುವುದು ಎನ್ನುವುದರ ಬಗ್ಗೆ ಇಲ್ಲಿನ ಅಧಿಕಾರಿಗಳು ಸರಿಯಾಗಿ ಸಂಶೋಧನೆ ಮಾಡಿಲ್ಲ. ಜಯಧರ ಹತ್ತಿ ಕೆಲವು ಕಡೆ ಇರುವ ಹವಾ ಗುಣದಿಂದಾಗಿ ಫಸಲು ಬಾರದೆ ಒಣಗಿ ಹೋಗುತ್ತದೆ, ಇಲ್ಲಿನ ಅಧಿಕಾರಿಗಳು ಸರಿಯಾದ ಹತ್ತಿ ಬೀಜವನ್ನು ಕೊಟ್ಟು ಸಹಾಯ ಮಾಡಲು ಇಲ್ಲಿರುವ ಡೈರೆಕ್ಟರುಗಳು ಸೂಕ್ತವಾದ ಸಲಹೆ ಕೊಡದೇ ಲಕ್ಷ್ಮಿಹತ್ತಿ ಬೀಜವೂ ಕೂಡ ನಾಶವಾಗಿ ಒಳ್ಳೆಯ ಬೆಳೆಯೂ ಬಾರದೆ ನಾಶವಾಗಿ ಹೋಗುತ್ತವೆ. ಕೆಲವು ಕಡೆ ಕೆಟ್ಟು ಹೋಗುತ್ತವೆ. ಇದರ ಬಗೆ ಇಲ್ಲಿರುವ ವಕ್ಕಲುತನದ ಅಧಿಕಾರಿಗಳಿಗೆ ಎಷ್ಟು ಹೇಳಿದರೂ ಕೂಡ ಆ ಬಗ್ಗೆ ಏನೂ ಸಲಹೆ ಕೊಡುತ್ತಿಲ್ಲ ಮತ್ತು ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಇದರಿಂದಾಗಿ ಬ್ಲಾಕು ಕಾಟನ್ ಸಾಯಿಲ್‌ನಲ್ಲಿ ಲಕ್ಷ್ಮಿ ಹತ್ತಿ ಬೀಜವನ್ನುಪಯೋಗಿಸಿದುದರಿಂದಾಗಿ ಅದು ಕೆಟ್ಟು ಹೋಗಿದೆ, ಇದಕ್ಕಾಗಿ ಯಾವುದಾದರೂ ಯೋಜನೆಯನ್ನು ಎವಾಲ್ವ್ ಮಾಡಿ ಎಂದು ಹೇಳಿದರೂ ಅವರು ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಅನೇಕ ಸಾರಿ ಇದನ್ನು ಮಂತ್ರಿಗಳ ಗಮನಕ್ಕೂ ತಂದಿದ್ದೇವೆ. ಆದರೆ ಯಾವ ಧೋರಣೆಯೂ ಇದರಲ್ಲಿ ಬದಲಾವಣೆಯಾದಂತೆ ತಿಳಿಯಬರುತ್ತಿಲ್ಲ. ಇಲ್ಲಿರುವಂತಹ ಅಧಿಕಾರಿಗಳು ಜನತೆಗೆ ಉಪಯೋಗವಾಗುವಂತೆ ಯಾವ ಕಾರ್ಯಗಳನ್ನೂ ಮಾಡುತ್ತಿಲ್ಲ. ಇವರಲ್ಲಿ ಕಾಣುವ ಒಂದು

ಮನೋಭಾವ ತಮಗೆ ಸೀನಿಯಾರಿಟಿ ಪ್ರಶ್ನೆ ಸರಿಯಾಗಿ ಇತ್ಯರ್ಥವಾಗಿಲ್ಲ ಎನ್ನುವುದು. ಮೇಲಿನ ಕರ್ಣಾಟಕದ ಜಿಲ್ಲೆಗಳಲ್ಲಿ ಇದ್ದಂತಹ ಒಕ್ಕಲುತನದ ಅಧಿಕಾರಿಗಳು ಅವರು ಲೈಸೆನ್‍ಷಿಯೇಟು ಪದವಿ ಪಡೆದ ಅಧಿಕಾರಿಗಳಾಗಿದ್ದು ನಾವು ಗ್ರ್ಯಾಜುಯೇಟುಗಳಾಗಿದ್ದರೂ ಕೂಡ ನಮ್ಮನ್ನು ಕೆಳಮಟ್ಟದಲ್ಲಿ ಹಾಕಿದ್ದಾರೆ ಎನ್ನುವಂತಹ ಮನೋಭಾವನೆ ಮೂಡಿ ಅವರುಗಳು ಯಾರೂ ಏನೋ ಎಷ್ಟು ಕೆಲಸ ಕೊಟ್ಟರೆ ಅಷ್ಟು ಮಾಡುವುದು ಎಂದು ನಿರುತ್ಸಾಹದಿಂದ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇದನ್ನು ಆದಷ್ಟು ನಿವಾರಣೆಮಾಡಬೇಕೆಂದು ನನ್ನ ಸೂಚನೆ. ನನ್ನ ಜಿಲ್ಲೆಯಲ್ಲೇ ಒಂದು ನಿದರ್ಶನವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತೆಗೆದು ಕೊಂಡು ಬಂದು ತೋರಿಸಿದ್ದೆ. ಹೈ ಕೋರ್ಟಿಗೆ ಈಚೆಗೆ ಕೆಲವರು ಹೋಗಿರುವುದೂ ಸರಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ಸರಿಯಾಗಿ ಪರಿಶೀಲಿಸಲು ಪ್ರತ್ಯೇಕವಾದ ಒಂದು ಕಮಿಟಿಯನ್ನಾದರೂ ನೇಮಿಸುವುದು ಒಳ್ಳೆಯದು ಎಂದು ಹೇಳುತ್ತಿದ್ದರು. ಇದರಲ್ಲಿ ನನ್ನ ಒಂದು ಸೂಚನೆ ವಕ್ಕಲುತನದ ಡಿಪಾರ್ಟುಮೆಂಟು ಒಂದು ಮಹತ್ವದ ಡಿಪಾರ್ಟುಮೆಂಟು. ಇದರಿಂದಲೇ ದೇಶಕ್ಕೆ ಅರ್ಧದಷ್ಟು ಉತ್ಪನ್ನ ಬರುವುದು. ಇದರ ಬಗ್ಗೆ ಮುಖ್ಯ ಮಂತ್ರಿಗಳನ್ನೊಳಗೊಂಡ ಒಂದು ಕ್ಯಾಬಿನೆಟ್ಟು ಸಬ್ ಕಮಿಟಿ ಎಂದು ಮಾಡುವುದು ಸರಿ ಕಾಣುತ್ತದೆ, ಅದರಿಂದ ಸಾಕಷ್ಟು ಈ ಕಡೆಗೆ ಲಕ್ಷ್ಯ ಕೊಡಲು ಸಹಾಯವಾಗುತ್ತದೆ. ಇಡೀ ದೇಶದ ಎಕಾನಮಿ ಎಂದರೆ ನಮ್ಮ ಆರ್ಥಿಕ ಸ್ಥಿತಿಗೆ ಬುನಾದಿ ಈ ವಕ್ಕಲುತನ.

ಶ್ರೀ ಜಿ. ನಾರಾಯಣ ಗೌಡ.—ಈಗಲೂ ಕ್ಯಾಬಿನೆಟ್ಟು ಸಬ್-ಕಮಿಟಿ ಇದೆ.

ಶ್ರೀ ಎ. ಎಸ್. ಪಾಟೀಲ್.—ಕ್ಯಾಬಿನೆಟ್ಟು ಸಮಿತಿ ಏನು ಮಾಡುತ್ತದೋ ಅದು ಜನಕ್ಕೆ ಗೊತ್ತಾಗುತ್ತಿಲ್ಲ.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಯ ಮಂತ್ರಿಗಳು).—ಕ್ಯಾಬಿನೆಟ್ಟು ಕಮಿಟಿಯಲ್ಲಿ ಏನೇನು ಮಾಡುತ್ತೇವೋ ಅದನ್ನೆಲ್ಲಾ ಇಲ್ಲಿ ಹೇಳುವುದಕ್ಕೆ ಆಗುತ್ತದೆಯೇ ?

ಶ್ರೀ ಎ. ಎಸ್. ಪಾಟೀಲ್.—ಅವರೇನು ಮಾಡುತ್ತಾರೆನ್ನುವುದು ನಮಗೆ ಗೊತ್ತಾಗುತ್ತಿಲ್ಲ. ಅದರಿಂದ ನಾನು ಹೇಳುವುದು ಐದು ಜನರಿಂದ ಕೂಡಿದ ಒಂದು ಕಮಿಟಿಯನ್ನು ಮಾಡಿ ಅದರಲ್ಲಿ ಮುಖ್ಯ ಮಂತ್ರಿಗಳು ಇರುವಂತೆ ಮಾಡಬೇಕೆಂದು ತಿಳಿಸುತ್ತೇನೆ. ಹಿಂದೆ ನಮ್ಮ ಮುಖ್ಯ ಮಂತ್ರಿಗಳು ಒಂದು ರೀತಿಯಾದ ಕನ್‌ಸಲ್ಟೇಟೀವ್ ಕಮಿಟಿಗಳನ್ನು ಮಾಡುತ್ತೇವೆಂದು ತಿಳಿಸಿದ್ದರು. ಆ ಬಗ್ಗೆ ವಕ್ಕಲುತನದ ತಜ್ಞರು ಸಲಹೆಗಳನ್ನು ಕೊಟ್ಟರೋ ಇಲ್ಲವೋ ಗೊತ್ತಾಗಲಿಲ್ಲ. ಅಂತಹ ಕನ್‌ಸಲ್ಟೇಟೀವ್ ಕಮಿಟಿಗಳನ್ನು ಏರ್ಪಾಡು ಮಾಡಬೇಕು.

ಇನ್ನು ಈಕ್ವೇಷನ್ನು ಮಾಡುವಾಗ ಕೆಲವು ಲೋಪಗಳಾಗಿವೆ. ನಮ್ಮ ಜಿಲ್ಲೆಯಲ್ಲಿ ಒಬ್ಬರು ಡಿಸ್ಟ್ರಿಕ್ಟು ಅಗ್ರಿಕಲ್‌ಚರು ಆಫಿಸರಾಗಿದ್ದವರನ್ನು 50 ನಂಬರು ಕೆಳಕ್ಕೆ ಲಿಸ್ಟಿನಲ್ಲಿ ಹಾಕಿದ್ದರು. ಇದನ್ನು ಮಾಡುವಾಗ ಇಲಾಖೆಯವರು ಕೆಳಗೆ ಮೇಲೆ ಮಾಡಿ ಇಂತಹ ತೊಂದರೆಗಳಾಗಿವೆ ಎಂದು ಮಂತ್ರಿಗಳ ಗಮನಕ್ಕೆ ತಂದರೂ; ಅನಂತರ ಅದು ಸರಿಯಾಯಿತು ಎಂದು ನನಗೂ ಗೊತ್ತಾಗಿದೆ. ಯಾರು ಯಾರಿಗೆ ನ್ಯಾಯವಾದ ಜಾಗಗಳು ಸಲ್ಲಬೇಕೋ ಅದರಂತೆ ಇಲ್ಲಿ ಮಾಡಿಲ್ಲ. ಈ ಖಾತೆಯಲ್ಲಿರುವ ಅಧಿಕಾರಿಗಳೇಕೆ ಇಷ್ಟು ಬೇಜವಾಬುದಾರಿಯಿಂದ ಹೋಗುತ್ತಾರೆ ಎನ್ನುವುದನ್ನು ತಮ್ಮ ಗಮನಕ್ಕೆ ಇಲ್ಲಿ ತರಬೇಕಾಗಿದೆ. ಇಂತಹ ಅಧಿಕಾರಿಗಳಿಂದ ವಕ್ಕಲುತನ ಬೆಳೆಯಬೇಕು ಎಂದರೆ ಹೇಗೆ ಆಗುತ್ತವೆ ? ಇಲ್ಲಿರುವ ಪ್ಲಾನುಗಳಂತೆ ಯಾವ ಕೆಲಸಗಳನ್ನು ಮಾಡಬೇಕೆಂದು ಇರುತ್ತಾರೋ ಅದರಂತೆ ಮಾಡದೆ ಇಲ್ಲಿ ಎಲ್ಲ ಕೆಲಸಗಳೂ ಕೆಟ್ಟು ಹೋಗುತ್ತಿವೆ. ಅದರಿಂದ ನಾನು ಇಲ್ಲಿ ವಿನಂತಿ ಮಾಡಿಕೊಳ್ಳುವುದು ವಕ್ಕಲುತನದ ಇಲಾಖೆಗಾಗಿಯೇ ಒಂದು ಕನ್‌ಸಲ್ಟೇಟೀವ್ ಕಮಿಟಿಯನ್ನು ಮಾಡಬೇಕು, ಅವರಿಂದ ಬರುವ ಸಲಹೆಗಳನ್ನು ತೆಗೆದುಕೊಂಡು ಇಲ್ಲಿನ ಕೆಲಸಗಳನ್ನು ಮಾಡಿದರೆ ಚೆನ್ನಾಗಿರುತ್ತದೆ. ಇವೊತ್ತು ಒಳ್ಳೆಯ ಗೋಧಿಬೀಜ, ಲಕ್ಷ್ಮಿ ಹತ್ತಿ ಬೀಜ ಮತ್ತು ಇತರ ಬೀಜಗಳು ಯಾವುದು ಚೆನ್ನಾಗಿದೆ ಎಂದು ಶಿಫಾರಸು ಮಾಡುತ್ತಾರೋ ಅದನ್ನು ಜನರಿಗೆ ಉಪಯೋಗಮಾಡಲು ಸರಿಯಾದ ತಿಳುವಳಿಕೆ ಕೊಡಬೇಕು. ಇನ್ನು ಕೆಲವು ಸೆಂಟ್ರಲ್ ಸ್ಪಾನ್‌ಸರ್ಡ್ ಸ್ಕೀಮುಗಳಿವೆ. ಅವುಗಳ ಬಗ್ಗೆ ಕೊಟ್ಟ ಹಣವನ್ನು ಪೂರ್ತಿಯಾಗಿ ಯುಟಿಲೈಸು ಮಾಡಿಲ್ಲ ಮತ್ತು ಖರ್ಚೂ ಆಗಿಲ್ಲ, ಹೀಗಾದರೆ ವಕ್ಕಲು ತನದ ಇಲಾಖೆಯಲ್ಲಿ ಯಾವ ರೀತಿಯಾದ ರೀಸರ್ಚು ವ್ಯವಸ್ಥೆಯನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ನನಗನಿಸುತ್ತದೆ. ಇಂತಹ ಉತ್ತಮವಾದ ವಕ್ಕಲುತನದ ಇಲಾಖೆಯಲ್ಲಿ ಸರಕಾರದವರು ಇನ್ನೂ ಹೆಚ್ಚಿನ ಆಸಕ್ತಿಯನ್ನು ವಹಿಸಿ ಅದು ಜನಗಳಿಗೆ ಉಪಯುಕ್ತವಾಗಿ ನೆರವು ಕೊಡುವಂತೆ ಮಾಡಬೇಕು ಎಂದು ಹೇಳಿ ಇಲ್ಲಿ ಮಂಡಿಸಿರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ವ್ಯವಸಾಯ, ಆರೋಗ್ಯ, ಸಹಕಾರ, ಗ್ರಾಮಾಭಿವೃದ್ಧಿ ಇವುಗಳ ಡಿಮ್ಯಾಂಡುಗಳ ಬಗ್ಗೆ ನಾನು ನಾಲ್ಕಾರು ಮಾತುಗಳನ್ನು ಆಡಬೇಕೆಂದು ಇಲ್ಲಿ ನಿಂತುಕೊಂಡಿದ್ದೇನೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ನಮ್ಮ ತಾಲ್ಲೂಕು ಗುಂಡಲುಪೇಟೆ. ಆಕಾಶದ ಮಳೆ ಮತ್ತು ಭೂಮಿಯ ಬೆಳೆ ಬರುತ್ತದೆಂದು ನಂಬಿಕೊಂಡು ಯಾವ ವಿಧವಾದ ಇರಿಗೇಷನ್ನು ಫೆಸಿಲಿಟೀಸ್‌ಗಳೇ ಆಗಲಿ ಇಂಡಸ್ಟ್ರೀಯಲ್ ಡೆವಲಪ್ ಮೆಂಟ್ ಆಗಲೀ, ಯಾವುದೂ ಇಲ್ಲದೆ ಇದು ಬರೀ ಒಣ ವ್ಯವಸಾಯ ಮಾಡಲು ಅದಕ್ಕೂ ಹೆಚ್ಚು ಅವ ಕಾಶವಿಲ್ಲದ ಸುಮಾರು 135 ಹಳ್ಳಿಗಳಿರುವ ಸುಮಾರು ಒಂದು ಲಕ್ಷ ಹದಿನೈದು ಸಾವಿರದಷ್ಟು ಪ್ರಜಾ ಸಂಖ್ಯೆ ಇರತಕ್ಕ ಬರೀ ಬಡವರ ತಾಲ್ಲೂಕು. ಸರ್ಕಾರ ಈ ತಾಲ್ಲೂಕಿನ ಜನರ ಅಭಿವೃದ್ಧಿ ಇದರ ಅಕ್ಕರೆ ಬಗ್ಗೆ ನಾನು ಇಲ್ಲಿ ಎಷ್ಟು ಹೇಳಿದರೂ ಅದನ್ನು ಒಪ್ಪಿಕೊಳ್ಳದೇ ಇರಬಹುದು. ನನಗೇನೋ ಬೇಕಾ ಬಿಟ್ಟಿಯಾಗಿ ನಡೆದಿದೆ ಎಂದೂ ಹಾಗೆ ಹೇಳಿದರೂ ಇದು ಜಾಸ್ತಿ ತಪ್ಪಾಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ವರ್ಷಕ್ಕೆ ನಮ್ಮ ತಾಲ್ಲೂಕಿನಲ್ಲಿರುವ ನಾಲ್ಕು ಹೋಬಳಿಗಳ ಪೈಕಿ ಸುಮಾರು 3 ಹೋಬಳಿಗಳಲ್ಲಿ 15 ಅಥವಾ 16 ಇಂಚುಗಳಷ್ಟು ಮಳೆ ಬರುತ್ತೆ. ಅದೂ ಕಾಲ ಕಾಲಕ್ಕೆ ಮಳೆ ಯಾಗುವುದಿಲ್ಲ. ಮಳೆಯಾಗದೇ ಇರುವ ಪ್ರದೇಶಕ್ಕೆ ಇಂತಿಂತಹ ವ್ಯವಸ್ಥೆ ಆಗಬೇಕು. ಇಂತಿಂತಹ ಪದ್ಧತಿಗಳು ಹೋಗಬೇಕು ಮತ್ತು ಇವರResearch ಪದ್ಧತಿಗಳು ಅವರಿಗೆ ತಲಪಬೇಕು ಎಂದು— ನಾವು ಕೇಳಿಕೊಳ್ಳುತ್ತಿದ್ದರೂ ನಮ್ಮನ್ನು ಕೇಳುವವರು ಯಾರೂ ಇಲ್ಲ. ಇಲ್ಲಿರುವ ರೈತರು ಮೊದಲಿಂದಲೂ ಬಡವರು, ಇದರ ಮೇಲೆ ಇವರಿಗೆ ಇಂಪ್ರೂವ್ಡ್ ಅಗ್ರಿಕಲ್‌ಚರ್ ಇಂಪ್ಲಿಮೆಂಟುಗಳನ್ನು ಅಥವಾ ಫರ್ಟಿಲೈಸರುಗಳನ್ನು ಆಗಲೀ ಇನ್‌ಸೆಕ್ಟಿಸೈಡುಗಳನ್ನಾಗಲೀ ಅದನ್ನು ಉಪಯೋಗಿಸು ವುದರ ಬಗ್ಗೆ ಸರಿಯಾದ ಸಲಹೆಗಳನ್ನು ಕೊಡುತ್ತಿಲ್ಲ. ಇದರ ಮೇಲಿನ ಜನರಲ್ಲಿ ಏನೋ ಒಂದು ತರಹದ ಭಯ ಬಂದು ಬೆಳೆಗಳಮೇಲೆ ಯಾವುದಾದರೂ ಹುಳ ಬಂದರೆ ಅದೇನೋ ಮಾರಿ ಬಂತು ಅದಕ್ಕೆ ಕಾಣಿಕೆ ಕಟ್ಟಿ ಕೈ ಮುಗಿಯರಿ ಎನ್ನುವಂತೆ ಆಗಿದೆ. ಇವರಿಗೆ ಹುಳವನ್ನು ನಾಶ ಮಾಡಲು ಎಲ್ಲಿ ಸ್ಪ್ರೇ ಮಾಡಬೇಕು ಎನ್ನುವುದನ್ನು ತಿಳಿಸಿ ಬೆಳೆಯನ್ನುಳಿಸಿಕೊಳ್ಳಲು ಯಾವ ಬುದ್ಧಿ ವಂತಿಕೆಯೂ ಬಂದಿಲ್ಲ ಹಳ್ಳಿಗಳಲ್ಲಿ ಹೋಗಿ ಡೆಮಾನ್‌ಸ್ಟ್ರೇಷನ್ನು ಫಾರ್ಮ್‌ಂಗಳನ್ನು ಎಲ್ಲಿ ಜನರಿಗೆ ತಿಳುವಳಿಕೆ ಇದೆಯೋ ಅಲ್ಲಿ ಮಾಡುತ್ತಾರೆ. ತಿಳುವಳಿಕೆ ಇಲ್ಲದ ಕಡೆಗಳಲ್ಲಿ ಮಾಡುತ್ತಿಲ್ಲ.
ಇದು ಸರ್ವೇ ಸೆಟಲ್‌ಮೆಂಟ್ ರಿಪೋರ್ಟಿನಲ್ಲಿ ಕಂಡುಬರುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಇಂದಿಗೂ ಕೂಡ ಕಬ್ಬಿಣದ ನೇಗಿಲು ತೆಗೆದುಕೊಳ್ಳುವ ಶಕ್ತಿ ರೈತನಿಗೆ ಇಲ್ಲ. ಹಳೇಕಾಲದ ಮರದ ನೇಗಿಲು ಉಪಯೋಗಿಸಿ ರೈತ ವ್ಯವಸಾಯ ಮಾಡುತ್ತಿದ್ದಾನೆ. ಇಂಥಾ ಹೀನಸ್ಥಿತಿ ಇರತಕ್ಕಂಥ ರೈತನ ಉದ್ಧಾರ ಮಾಡುವುದಕ್ಕೆ ಸರಕಾರ ಏನು ಕೆಲಸ ಮಾಡಿದೆ? ಸರಕಾರ ಒಂದು ಕೆಲಸ ಮಾಡಿದ್ದನ್ನು ನನ್ನ ಕಣ್ಣಿನಿಂದ ನಾನು ನೋಡುತ್ತಿಲ್ಲ. ಇಂಥ ಹಿಂದುಳಿದ ಪ್ರದೇಶದಲ್ಲಿ ಡಿಮಾನ್ ಸ್ಟ್ರೇಷನ್‌ಮಾಡಿ ರೈತನಿಗೆ ಮಾರ್ಗ ತೋರಿಸಿ ಕೊಡಬೇಕು. ಮುಂದೆ ಬಂದಿರುವ ಪ್ರದೇಶದಲ್ಲಿ ಅದನ್ನು ಮಾಡಿದರೆ ಅದು ಒಳ್ಳೆಯದಲ್ಲ. ಇದು ಶೋಭಾಯಮಾನವಾಗುವುದಿಲ್ಲ. ಪ್ರತಿ ವರ್ಷ ಸ್ಕೇರ್ಸಿಟಿ ಕಂಡೀಷನ್ಸಿಗೆ ನಮ್ಮ ತಾಲ್ಲೂಕ್ ಒಳಗಾಗುತ್ತದೆ. ನಮ್ಮ ತಾಲ್ಲೂಕಿಗೆ ಚೀಫ್ ಮಿನಿಸ್ಟರ್ ಬರುತ್ತಾರೆ, ಅಗ್ರಿಕಲ್ಚರಲ್ ಮಿನಿಸ್ಟರ್ ಬರುತ್ತಾರೆ, ರೆವಿನ್ಯೂ ಮಿನಿಸ್ಟರ್ ಬರುತ್ತಾರೆ, ಫಾರೆಸ್ಟ್ ಮಿನಿಸ್ಟರ್ ಬರುತ್ತಾರೆ; ಆದರೆ ಕೋ-ಆಪರೇಶನ್ ಮಿನಿಸ್ಟರ್ ಮಾತ್ರ ನಮ್ಮ ಬಡವರ ತಾಲ್ಲೂಕಿಗೆ ಬರುವುದಿಲ್ಲ. ನಮ್ಮ ಬಡತನದ ತಾಲ್ಲೂಕಿಗೆ ಬರಬೇಕೆಂದೂ ಅನುಕೂಲತೆ ಮಾಡಿಕೊಡಬೇಕೆಂದು ರೂರಲ್ ಡೆವಲಪ್ಮೆಂಟ್ ಮಿನಿಸ್ಟರ್ ಅವರನ್ನು ಕೇಳಿದರೆ ಬರುತ್ತೇನೆ ಆದರೆ ಏನಾದರೂ ಒಂದು ಸೆಮಿನಾರ್ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳುತ್ತಾರೆ. ಅವರು ಬಂದು ನಮ್ಮ ಕಷ್ಟ ಸುಖ ನೋಡುವುದಿಲ್ಲ. ಅವರು ನಮ್ಮ ಕೆಲಸವನ್ನಾದರೂ ಮಾಡಿಕೊಟ್ಟರೆ ಸಾಕಾಗಿದೆ. ನಮ್ಮ ತಾಲ್ಲೂಕಿನಲ್ಲಿ ಸಾಯಿಲ್ ಕನ್‌ಜರ್ವೇಷನ್ ಪ್ರೋಗ್ರಾಂ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇ ಹೇಳಿದ್ದು, ಮಾಡಿದ್ದೇ ಮಾಡಿದ್ದು. ಡಿವಿಜನಲ್ ಕಮಿಷನರ್ ಅವರು ಒಬ್ಬ ಆಫೀಸರನ್ನು ನೇಮಕ ಮಾಡಿದರು. ಅವರು ನಾಲ್ಕು ತಿಂಗಳು ಕೆಲಸ ಮಾಡಿದರೂ ಕೂಡ ಅವರ ಸಂಬಳ ಸ್ಯಾಂಕ್ಷನ್ ಮಾಡಲಿಲ್ಲ. ಆ ಮೇಲೆ ಶಿವಮೊಗ್ಗಾಕ್ಕೆ ಹೊರಟು ಹೋಗು ಎಂದು ಹೇಳಿದರು. ನಮ್ಮ ತಾಲ್ಲೂಕಿ ನಲ್ಲಿ ಸಾಯಿಲ್ ಕನ್‌ಸರ್ವೇಶನ್ನೂ ಇಲ್ಲ ಕೆಲಸವೂ ಇಲ್ಲ ಪ್ರೋಗ್ರಾಮೂ ಇಲ್ಲ. ಇಷ್ಟು ಉದಾರ ವಾಗಿರತಕ್ಕ ಹೆಚ್ಚಿನ ಬಹುಮಾನ ನಮ್ಮ ತಾಲ್ಲೂಕಿಗೆ ಇದೆ. ಯಾವ ಸ್ಕೀಂ ಇರಲಿ ಯಾವ ಪ್ರೋಗ್ರಾಂ ಇರಲಿ ಮೊದಲು ಅನೌನ್ಸ್ ಮಾಡಿ ಬಿಡುತ್ತಾರೆ. ಅದು ಪತ್ರಿಕೆಗಳಲ್ಲಿ ವರದಿಯಾಗುತ್ತದೆ. ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಮಾಡುವುದಿಲ್ಲ. ಆಫೀಸರ್ ಹತ್ತಿರ ಹೋಗಿ ಕೇಳಿದರೆ ಕಾಗದಗಳು ಸೆಕ್ರೆ ಟೆರಿಯಟ್ಟಿನಲ್ಲಿವೆ ಎಂದು ಹೇಳುತ್ತಾರೆ. ಸೆಕ್ರೆಟೆರಿಯೆಟ್‌ನಲ್ಲಿ ಕೇಳಿದರೆ ಲಾ ಡಿಪಾರ್ಟಮೆಂಟಿನಲ್ಲಿದೆ ಎಂದು ಹೇಳುತ್ತಾರೆ. ಎರಡು ಮೂರು ವರ್ಷಗಳಾಗಿ ಹೋದರೂ ಕೂಡ ರೂಲ್ಸ್ ಬರುವುದಿಲ್ಲ. ರೂಲ್ಸ್ ಇಲ್ಲದೆ ಇದ್ದರೆ ತಕ್ಷಣ ಲೋನ್ಸ್ ಸಬ್‌ಸೀಡಿ ಕೊಡುವುದಕ್ಕಾಗುತ್ತದೆಯೇ? ಕಳೆದ ಮೂರು

ವರ್ಷಗಳಿಂದ ಈ ಅಸೆಂಬ್ಲಿಯಲ್ಲಿ ಹೇಳುತ್ತಾ ಬಂದಿದ್ದೇನೆ. ಇನ್ನೂ ರೂಲ್ಸ್ ಹೊರಗೆ ಬಂದಿಲ್ಲ. ಏನು ಮಾಡಿದ್ದೀರಿ ಎಂದು ಸೆಕ್ರೆಟೇರಿಯಟ್‌ನಲ್ಲಿ ಕೇಳಿದರೆ ಫೈನಲ್ ಆಗಿ ಆಯಿತು ಎಂದು ಹೇಳಿದರು. ಬಹಳ ಸಂತೋಷ.

ಇನ್ನು ಅಪಾಯಿಂಟ್‌ಮೆಂಟ್ ವಿಚಾರ ಶ್ರೀ ಪಾಟೀಲರು ಹೇಳುತ್ತಾ ಇದ್ದರು. ಬಹಳ ಡಿಲೇ ಆಗುತ್ತದೆ. ಆಫೀಸರರಿಗೂ ಕೂಡ ಕೆಟ್ಟ ಹೆಸರು ಬರುತ್ತದೆ. ಗವರ್ನಮೆಂಟಿನವರು ಕೊಡತಕ್ಕಂಥ ಆರ್ಡರ್ ಕೊಡದೇ ಇರುವುದರಿಂದ ಡಿಲೇ ಆಗಿ ಸಂಬಂಧಪಟ್ಟವರು ಹೈಕೋರ್ಟಿಗೆ ಹೋದಾಗ್ಗೆ ಹೈ ಕೋರ್ಟಿನಿಂದ ಸ್ಟ್ರಿಕ್ಚರ್ಸ್ ಬರುವಂತಾಗಿದೆ. ಈ ಕಾಲದಲ್ಲಿ ಕೂಡ ಆನೆಸ್ಟ್ ಆಗಿ ಕೆಲಸ ಮಾಡ ತಕ್ಕಂಥ ಆಫೀಸರ್ಸ್ ಇದ್ದಾರೆ. ಮಾನ ಮರ್ಯಾದೆ ಇರತಕ್ಕ ಆಫೀಸರ್ಸ್ ಇದ್ದಾರೆ. ಅವರಿಗೆ ಇಂಥಹದು ಏನಾದರೂ ಅನ್ಯಾಯ ಆದರೆ ಮನಸ್ಸಿಗೆ ದುಃಖವಾಗಿ ಪೆಟ್ಟು ಆಗುತ್ತದೆ. ಹೀಗೆ ಆಗಬಾರದ ಹಾಗೆ ನೋಡಿಕೊಳ್ಳಬೇಕು. ಸರಕಾರದ ಸಿಬ್ಬಂದಿಯಲ್ಲಿ ಆಫೀಸರರ ಮಾನ ಮರ್ಯಾದೆ ಗೌರವ ಕಾಪಾಡು ವುದು ಸರಕಾರದ ಕರ್ತವ್ಯ. ಸರಕಾರದ ಕೆಲಸ. ಮಾನ ಮರ್ಯಾದೆ ಹೋದರೆ ಅವರ ಹೆಲ್ತ್‌ಗೂ ಫ್ಯಾಮಿಲಿಗೂ ತೊಂದರೆಯಾಗುತ್ತದೆ. ಹೀಗೆ ಆಗಬಾರದು ಎಂದು ಮಂತ್ರಿಗಳಿಗೆ ಹೇಳುತ್ತೇನೆ.

ಇನ್ನು ಕೆಲವು ಆಫೀಸರ್ಸ್ ಇರುತ್ತಾರೆ. ಅವರಿಗೆ ಮಂತ್ರಿಗಳ ಸಂಬಂಧ ಇದ್ದರೆ ಅಂಥವರಿಗೆ ಏನೂ ಭಯ ಇರುವುದಿಲ್ಲ. ನಮ್ಮಂಥವರು ಹೋಗಿ ಏನಾದರೂ ಕೇಳಿದರೆ ಮಾತನಾಡುವ ರೀತಿಯಲ್ಲಿ ಸೌಜನ್ಯ ಇರುವುದಿಲ್ಲ. ಇಂಥ ಆಫೀಸರುಗಳು ಏನು ಭೂಮಿಯ ಮೇಲೆ ನಡೆಯು ತ್ತಾರೋ ಅಥವಾ ಆಕಾಶದಲ್ಲಿ ನಡೆಯುತ್ತಾರೋ ? ಎಲ್ಲಾ ತಲೆ ಕೆಳಕಾಗಿದೆ ಎಂದು ಈ ವಿಚಾರ ಸರಿಮಾಡಬೇಕೆಂದು ಹೇಳಲು ಇಷ್ಟಪಡುತ್ತೇನೆ.

ಇನ್ನು ಪ್ಯಾಕೇಜ್ ಪ್ರೋಗ್ರಾಂ ಬಗ್ಗೆ ಹೇಳುವುದಾದರೆ ಎಲ್ಲವೂ ಅವರಿಗೆ ಮೀಸಲಾಗಿ ಹೋಗಿದೆ. ನಮ್ಮಂಥ ಗತಿಗೆಟ್ಟ ತಾಲ್ಲೂಕಿಗೆ ಒಬ್ಬ ಅಗ್ರಿಕಲ್ಚರಲ್ ಬೀ. ಎಜೀ. ಆದ ಬಿ.ಡಿ.ಓ. ಇರತಕ್ಕವನನ್ನು ತೆಗೆದುಕೊಂಡು ಹೋಗಿದ್ದಾರೆ. ಡಿವಿಜನಲ್ ಕಮಿಷನರ್ ಅವರು ಟ್ರಾನ್ಸ್‌ಫರ್ ಮಾಡಿ ಬಿಟ್ಟರು. ಪ್ಯಾಕೇಜ್ ಪ್ರೋಗ್ರಾಂಕ್ಕೆ ಹೋಗಬೇಕೆಂದು ಹೇಳಿದರು. ಇದು ಯಾವ ಊರಿನ ನ್ಯಾಯ ? ಭತ್ತ ಬೆಳೆಯುವ ಕಡೆ ಪ್ಯಾಕೇಜ್ ಪ್ರೋಗ್ರಾಂ ಇರಬೇಕೇನು ? ಜೋಳ ಬೆಳೆಯುವ ಕಡೆ ಪ್ಯಾಕೇಜ್ ಪ್ರೋಗ್ರಾಂ ಏತಕ್ಕೆ ಮಾಡುವುದಿಲ್ಲ. ? ಸಹಾಯ ಇರುವುದು ಬೇರೆ ಕಡೆ ಹೋಗಬೇಕು. ಇದು ನಿಮ್ಮ ನೀತಿಯಾಗಿದೆಯೇ ? ಯಾವ ಒಂದು ಸ್ಕೀಂ ನಮ್ಮ ತಾಲ್ಲೂಕಿನಲ್ಲಿ ಇಟ್ಟಿಲ್ಲ ಎಂದು ಹೇಳಲು ಇಷ್ಟ ಪಡುತ್ತೇನೆ.

ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಭತ್ತ ಬೆಳೆಯುವ ತರಿ ಪ್ರದೇಶ ಇದೆ. ನಂಜನಗೂಡು ಏರಿಯಾದಲ್ಲಿ ಪಾವರ್ ಸ್ಪ್ರೇಯರ್ಸ್ ಕಂ ಡಸ್ಟರ್ಸ್ ಪ್ಯಾಕೇಜ್ ಸ್ಕೀಂನಲ್ಲಿ ಕೊಟ್ಟಿದ್ದಾರೆ. ನಂಜನಗೂಡು ಏರಿಯಾ ದಲ್ಲಿ ಹೈಯರ್ ಪರ್ಚೇಜ್ ಸಿಸ್ಟಂನಲ್ಲಿ ಸಬ್‌ಸೀಡಿ ಕೊಟ್ಟು ತೆಗೆದುಕೊಳ್ಳುವುದಕ್ಕೆ ಅವರಿಗೆ ಅನುಕೂಲ ಮಾಡಿ ಕೊಡಬೇಕು. ಬಹಳ ಚನ್ನಾಗಿ ಭತ್ತ ಬೆಳೆದದ್ದನ್ನು Ministerರನ್ನು ಕರೆದುಕೊಂಡು ಹೋಗಿ ತೋರಿಸಿದ್ದಾರೆ. ಈ ರೀತಿ ಎಲ್ಲ ಕಡೆ ಅನುಕೂಲ ಮಾಡಿ ಕೊಡದೇ ಹೋದರೆ ಈ ಸ್ಕೀಂ ವಿಚಾರದಲ್ಲಿ ಸೆಂಟ್ರಲ್ ಗವರ್ನ್‌ಮೆಂಟಿನವರು ಮಾತನಾಡಿದ್ದೇ ಮಾತನಾಡಿದ್ದು. ಯಾಕಂದರೆ ಡೆವ ಲಪ್‌ಮೆಂಟ್ ರಿಸ್ಪಾನ್‌ಸಿಬಿಲಿಟಿ ನೋಬಡೀಸ್ ರಿಸ್ಪಾನ್‌ಸಿಬಿಲಿಟಿಯಾಗಿದೆ. ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿ ಒಂದು ಪ್ಯಾಕೇಜ್ ಪ್ರೋಗ್ರಾಂ ಕೊಟ್ಟಿದ್ದಾರೆ. ಮೈಸೂರಿಗೂ ಒಂದು ಸೆಟ್ ಕೊಟ್ಟು ಡಿಮಾನ್ ಸ್ಟ್ರೇಷನ್ ಪರ್ಪಸಿಗಾಗಿ ಸಪ್ಲೈ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬುಲ್‌ಡೋಜರ್ಸ್ ಪರ್ಚೇಸ್ ಮೇಲೆ ಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಟ್ರಾಕ್ಟರ್ಸ್ ವಿಚಾರದಲ್ಲಿ ಹೇಳುವುದಾದರೆ ರೈತ ಟ್ರಾಕ್ಟರ್ಸ್ ತೆಗೆದುಕೊಂಡಿದ್ದಾನೆ. ಆದರೆ ಇಂದು ಡೀಜೆಲ್ ಬೆಲೆ ಜಾಸ್ತಿ ಯಾಗಿ ತೇಲಗಣ್ಣು ಮೇಲಗಣ್ಣು ಮಾಡಿ ಓಡಿಸಬೇಕಾಗಿದೆ. ರೈತನಿಗೆ ಅನೂಕೂಲ ಮಾಡಿ ಕೊಡ ಬೇಕು. ಡೀಜೆಲ್ ಬೆಲೆ ಜಾಸ್ತಿ ಮಾಡಿದರೆ ನಿಜವಾಗಿಯೂ ನಿಮ್ಮ ಸ್ಕೀಂ ನಡೆಯುವುದಿಲ್ಲ. ಆದುದ ರಿಂದ ಡೀಜೆಲ್ ಸಬ್‌ಸಿಡೈಜ್ಡ್ ರೇಟಿನಲ್ಲಿ ಸಪ್ಲೈ ಮಾಡಬೇಕು ಮತ್ತು ಪಂಪ್‌ಸೆಟ್ಸ್ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಬಾವಿಯ ವಿಚಾರದಲ್ಲಿ ಕೆಲವು ರೈತರಿಗೆ ಮೂರು ಸಾವಿರ ರೂಪಾಯಿ ಲಿಬರಲೈಜ್ ಸ್ಕೀಂನಲ್ಲಿ ಬಾವಿ ತೆಗೆಯುವುದಕ್ಕೆ ಕೊಟ್ಟಿದ್ದಾರೆ. ಕೆಲವು ಬಾವಿಗಳಲ್ಲಿ ಬಂಡೆ ಬಂದಿದೆ. ಬಾವಿಯಲ್ಲಿ ಬಂಡೆ ಅಷ್ಟೇ ಬಂದಿಲ್ಲ ತಲೆಗೂ ಬಂಡೆ ಬಂದಿದೆ. ಅರ್ಧ ಬಾವಿ ತೆಗೆದ ಮೇಲೆ ಬಂಡೆ ಬಂದರೆ ರೈತನ ತಲೆಯ ಮೇಲೂ ಸಹ ಬಂಡೆ ಬೀಳುತ್ತದೆ. ಒಂದು ಬಾವಿಯ ಕೆಲಸ ಪೂರ್ತಿ ಮಾಡಲು ಮೂರು ಸಾವಿರ ರೂಪಾಯಿ ಸಾಕಾಗುವುದಿಲ್ಲ. ಇದನ್ನು ಐದು ಸಾವಿರ ರೂಪಾಯಿಗಳವರೆಗೆ ಜಾಸ್ತಿ ಮಾಡಬೇಕು ಇದಲ್ಲದೆ ಸಬ್‌ಸೀಡಿ ಕೊಡುವಾಗ್ಗೆ ಟೈಂ ಲಿಮಿಟ್ ಹಾಕಿ ವರ್ಷದ ಕೊನೆಯಲ್ಲಿ ಕೆಲಸ ಮುಗಿಸಿದರೆ ಕೊಡುತ್ತಾರೆ. ಅದು ಸಾಧ್ಯವಾಗುವುದಿಲ್ಲ. ಬಾವಿಯ ಕೆಲಸ ಪೂರ್ತಿ ಮಾಡುವುದಕ್ಕೆ ಎರಡು ಮೂರು ವರ್ಷ ಬೇಕಾಗುತ್ತದೆ. ಆದುದರಿಂದ ರೂಲ್ಸ್ ರಿಲಾಕ್ಸ್ ಮಾಡಬೇಕೆಂದು ಹೇಳು-

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ತ್ತೇನೆ. ಪಂಪ್‌ಸೆಟ್ ಕೊಡುತ್ತಾರೆ ಆದರೆ ಇಲೆಕ್ಟ್ರಿಕ್ ಪಂಪ್‌ಸೆಟ್ ನಮ್ಮ ಊರಿಗೆ ಮಾಡುವುದಿಲ್ಲ. ಎಲ್ಲಾ ಮಾನ್ಯ ಮಂತ್ರಿಗಳ ಊರಿಗೆ ಮೀಸಲಾಗಿ ಹೋಗಿದೆ. ನಮಗೆ ಟ್ರಾನ್ಸಫಾರ್ಮರ್ ಇಲ್ಲ, ವೈರ್ ಇಲ್ಲ, ಪಂಪ್ ಇಲ್ಲ, ಏನೂ ಇಲ್ಲ ಅಂದರೆ ಯಾವ ಸ್ಕೀಂನಲ್ಲಿ ಯಾವುದು ಸಿಕ್ಕುತ್ತದೆ? ನಮಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಇರಿಗೇಶನ್ ವಿಚಾರದಲ್ಲಿ ಸ್ಪ್ರಿಂಕಲ್ ಇರಿಗೇಶನ್ ಬಹಳ ಚನ್ನಾಗಿ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಯಾರಾದರೂ ಮುಂದೆ ಬಂದು ಸಹಾಯ ಮಾಡಿ ತಜ್ಞರ ಗೈಡನ್ಸ್ ಕೊಟ್ಟು ಅನುಕೂಲ ಮಾಡಿಕೊಡಬೇಕು, ಲೋನ್ಸ್ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಿನ ಬಗ್ಗೆ ಶ್ರೀ ಎ. ಎಸ್. ಪಾಟೀಲರು ಹೇಳಿದರು. ಸಹಕಾರ ವಿಚಾರದಲ್ಲಿ ಬಹಳ ಪ್ರಗತಿಯಾಗಿದೆ ಆದರೂ ಕೂಡ ಇನ್ನೂ ಮಾಡುವುದು ಬಹಳ ಇದೆ ಎಂದು ಹೇಳಿದರು. ಡಿಪಾರ್ಟ್‌ಮೆಂಟ್ ಕೆಲಸ ಮಾಡಿದೆ. ಆದರೆ ಸಹಾಯ ಸಮಯದಲ್ಲಿ ಸಿಕ್ಕುವುದಿಲ್ಲ. ರೈತರಿಗೆ ಬೇಕಾಗತಕ್ಕ ಸಾಮಾನು ಸಿಕ್ಕುತ್ತದೆ, ಆದರೆ ಕಷ್ಟ ಈ ಡಿಪಾರ್ಟ್‌ಮೆಂಟಿನಿಂದ ಒದಗಿದೆ.

ಹೀಗೆ ರೈತರಿಗೆ ಯಾವಾಗ ಸಾಲ ಬೇಕೋ ಆಗ ಸಾಲ ಸಿಕ್ಕುತ್ತಿಲ್ಲ. ವ್ಯವಸಾಯದ ಸೀಜನ್ ಮುಗಿದ ಮೇಲೆ ಅವರಿಗೆ ಸಾಲ ಸಿಕ್ಕುವುದರಿಂದ ಅವರು ಆ ಹಣವನ್ನು ಮದುವೆ ಮುಂಜಿಗಳನ್ನು ಮಾಡುವುದಕ್ಕೆ ಉಪಯೋಗಿಸಿ ಬಿಡುತ್ತಾರೆ. ಆ ಸಾಲದ ಹಣವನ್ನು ರೈತರು ಭೂಮಿಯನ್ನು ಫಲವತ್ತಾಗಿ ಮಾಡುವುದಕ್ಕೆ ಅದಕ್ಕೆ ಗೊಬ್ಬರ ಗೋಡುಗಳನ್ನು ಹಾಕುವುದಕ್ಕೆ ಬದಲಾಗಿ ಅದನ್ನು ಅವರು ಬೇರೆ ಕೆಲಸಕಾರ್ಯಗಳಿಗೆ ಉಪಯೋಗಿಸುವುದರಿಂದ ಭೂಮಿಯಲ್ಲಿ ಫರ್ಟಿಲಿಟಿ ಕಡಮೆಯಾಗಿ ಬರತಕ್ಕ ಬೆಳೆಯೂ ಸಹಾ ಕಡಮೆಯಾಗುವುದು. ಇದರಿಂದ ಅವರಿಗೆ ಸಾಲ ತೀರಿಸುವುದಕ್ಕೆ ವರಮಾನ ಸಾಕಷ್ಟಿರುವುದಿಲ್ಲ. ಅದಕ್ಕಾಗಿ ಅವರು ತಮ್ಮ ತಪ್ಪಲೆ, ತಂಬಿಗೆಗಳನ್ನು ಹರಾಜು ಹಾಕಿ ಸಾಲ ತೀರಿಸಬೇಕಾಗುವುದು. ಆದ್ದರಿಂದ ಇಂಥ ಸಾಲಗಳಿಂದ ರೈತರಿಗೆ ಅನುಕೂಲವಾಗುವ ಬದಲು ಅನಾನುಕೂಲವೇ ಹೆಚ್ಚಾಗಿರುತ್ತದೆ. ಹೀಗೆ ರೈತರಿಗೆ ಸಕಾಲಕ್ಕೆ ಸಾಲ ದೊರೆಯದಿದ್ದರೆ ಅದರಿಂದ ಅವರಿಗೆ ಡಬ್ಬಲ್ ತೊಂದರೆಯಾಗತಕ್ಕ ಪರಿಸ್ಥಿತಿಯುಂಟಾಗುತ್ತದೆ. ಆದರೆ ಈ ದಿವಸ ಈ ಸಾಲಗಳಿಂದ ಯಾರು ಪ್ರಗತಿಯನ್ನ ಕಾಣುತ್ತಿದ್ದಾರೆಂದರೆ—ಯಾರು ಸಾಹುಕಾರರಾಗಿದ್ದಾರೋ ಅವರೇ ಈ ಸಾಲದ ರೆಕಾರ್ಡುಗಳನ್ನು ಬಿಲ್ಡಪ್ ಮಾಡಿಸತಕ್ಕವರು, ಅವರೇ ಮುಂದಕ್ಕೆ ಆ ಹಣವನ್ನು ರೈತರ ಹೆಸರಿನಲ್ಲಿ ಪಡೆದು ಅವರಿಗೇ ಅದನ್ನು ಬಡ್ಡಿಗೆ ಕೊಟ್ಟು, ಪುನಃ ಅವರೇ ಅದನ್ನು ಅವರಿಂದ ವಸೂಲ್ಮಾಡಿ ಮತ್ತೆ ಇಲಾಖೆಗೆ ವಾಪಸ್ಸು ಮಾಡತಕ್ಕವರು. ಆದರೆ ನಾನು ಕೇಳತಕ್ಕ ಪ್ರಗತಿ ಇದಲ್ಲ. ನಾನೀಗ ಕೇಳುತ್ತಿರುವುದು ರೈತನ ನಿಜವಾದ ಪ್ರಗತಿಯನ್ನು. ರೈತರು ಪ್ರಗತಿ ಹೊಂದಬೇಕಾಗಿದ್ದರೆ ಸರ್ಕಾರದವರು ಸಾಲಕೊಡತಕ್ಕ ಸಂದರ್ಭದಲ್ಲಿ ಆತನ ಆಸ್ತಿಪಾಸ್ತಿಗಳನ್ನು ನೋಡಬಾರದು, ಅವರ ಕ್ರೆಡಿಟ್ ವರ್ದಿನೆಸ್‌ನ್ನು ನೋಡಿ, ನಮ್ಮ ರೈತರಿಗೆ ಸಾಲ ಕೊಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಸೆಂಟ್ರಲ್ ಮಿನಿಸ್ಟರವರು ಫುಡ್ ಕಾರ್ಪೊರೇಷನ್ ಮೂಲಕ ಹಣವನ್ನು ಕೊಡಿಸುತೇವೆಂದು ಹೇಳಿದ್ದರು. ಆ ವಿಚಾರಕ್ಕೆ ಹೆಚ್ಚಿನ ನಿಗಾ ಕೊಡಬೇಕೆಂದು ನಾನು ನಮ್ಮ ಕೋ-ಆಪರೇಷನ್ ಮಂತ್ರಿಗಳಲ್ಲಿ ಬಿನ್ನಹ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ರೂರಲ್ ಡೆವಲಪ್‌ಮೆಂಟಿನ ವಿಷಯಕ್ಕೆ ಬಂದರೆ—ನಮ್ಮ ತಾಲ್ಲೂಕಿನಲ್ಲಿ ಸುಮಾರು 25—30 ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲ. ಅವರಿಗೆ ನೀರೂ ಗತಿಯಿಲ್ಲದಂತಾಗಿದೆ. ನಾನು ಇದೇ ವಿಚಾರದಲ್ಲಿ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆನು. ಅದಕ್ಕೆ ಉತ್ತರವನ್ನು ಕೊಡುತ್ತಾ ಆ ಗ್ರಾಮಗಳಿಗೆಲ್ಲಾ ಆದಷ್ಟು ಬೇಗ ಬಾವಿಗಳನ್ನು ಒದಗಿಸುತ್ತೇವೆಂದು ಹೇಳಿದ್ದರು. ಅಲ್ಲದೆ ಇಲ್ಲಿಗೆ 3—4 ತಿಂಗಳ ಹಿಂದೆ ಮುಖ್ಯ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ನಾನು ಅವರನ್ನು ಆ ಗ್ರಾಮಗಳಿಗೆ ಕರೆದುಕೊಂಡು ಹೋಗಿ ಇದನ್ನು ತೋರಿದಾಗ ಅವರು—ಇದೇನು ಅನ್ಯಾಯ ? ಹೀಗೂ ಉಂಟೇ ? ಅಯ್ಯೋ ಪಾಪ, ಪಾಪ ಎಂತ ಎಂದು ನೂರು ಸಾರ್ತಿ ಹೇಳಿದರು, ಆದರೆ ಅದು ಅಷ್ಟರಲ್ಲೇ ಮುಕ್ತಾಯವಾಯಿತು. ಆ ಗ್ರಾಮಗಳಿಗಿನ್ನೂ ಬಾವಿಗಳನ್ನು ಮಾಡಿಸಿಲ್ಲ, ಅವರಿಗೆ ಯಾವಾಗ ಕುಡಿಯುವುದಕ್ಕೆ ನೀರನ್ನೊದಗಿಸುತ್ತಾರೆಯೋ ಗೊತ್ತಿಲ್ಲ. ಹೀಗೆ ನಾವು ಇಲ್ಲಿಯತನಕ ಅವರಿಗೆ ಕುಡಿಯುವ ನೀರನ್ನಾದರೂ ಒದಗಿಸದಮೇಲೆ ನಾವು ಬದುಕಿದ್ದು ಏನು ಸಾರ್ಥಕವಾಯಿತು !

ಇನ್ನು ಫಾರೆಸ್ಟ್ ಇಲಾಖೆಯ ವಿಚಾರ : ಇನ್ನು ಕೆಲವು ಕಡೆ ಉದ್ಯೋಗವನ್ನು ಕಳೆದುಕೊಂಡು ನಿರುದ್ಯೋಗಿಗಳಾಗಿದ್ದ ಅಕ್ಕಸಾಲಿಗರಿಗೆ ಸಾಗುವಳಿಗಾಗಿ ಜಮೀನುಗಳನ್ನು ರೆವಿನ್ಯೂ ಇಲಾಖೆಯವರು ಮಂಜೂರುಮಾಡಿದ್ದರು. ಅಂಥ ಜಮೀನುಗಳನ್ನು ಕೆಲವು ಕಡೆ ಫಾರೆಸ್ಟ್ ಇಲಾಖೆಯವರು ಅದು ಫಾರೆಸ್ಟ್ ಇಲಾಖೆಗೆ ಸೇರಿದ ಜಮೀನು ಎಂಬುದಾಗಿ ಹೇಳಿ ಅವರ ಬೌಂಡರಿಯ ಪಕ್ಕದಲ್ಲಿದ್ದ

ಜಮೀನುಗಳನ್ನೆಲ್ಲಾ ಕಿತ್ತುಕೊಂಡು ಆ ಜನರನ್ನು ಅಲ್ಲಿಂದ ಓಡಿಸಿಬಿಟ್ಟಿದ್ದಾರೆ. ಅದು ಫಾರೆಸ್ಟ್ ಇಲಾಖೆಗೆ ಸೇರಿರತಕ್ಕ ಜಮೀನಲ್ಲ, ಅದನ್ನು ರೆವಿನ್ಯೂಖಾತೆಯಲ್ಲಿದ್ದುದರಿಂದ ಅವರಿಗೆ ರೆವಿನ್ಯೂ ಇಲಾಖೆಯವರು ಕೊಟ್ಟಿದ್ದಾರೆ. ಅದನ್ನು ಮಾನ್ಯ ಫಾರೆಸ್ಟ್ ಮಂತ್ರಿಗಳು ಅವರಿಗೆ ಬಿಡಿಸಿಕೊಡಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಹಾರ್ಟಿಕಲ್ಚರಲ್ ಇಲಾಖೆಗೆ ಬಂದರೆ—ಇದೂ ಒಂದು ದೊಡ್ಡ ಇಲಾಖೆಯಾಗಿದೆ. ಈಗ. ಈ ಇಲಾಖೆಯವರು ನಡೆಸತಕ್ಕ ಕೆಲಸ ಕಾರ್ಯಗಳು ಇತ್ತೀಚೆಗೆ ಬಹಳ ಜಾಸ್ತಿಯಾಗಿದೆ. ಈ ಇಲಾಖೆಯವರು ಈ ದಿವಸ ನಗರಗಳನ್ನು ಶೋಭಾಯಮಾನವಾಗಿಡುವುದು ಮತ್ತು ತೋಟಗಳನ್ನು ಶೃಂಗಾರವಾಗಿಡುವುದೂ ಎಲ್ಲವೂ ಇವರಿಗೆ ಸೇರಿರುತ್ತದೆ. ನಮ್ಮ ಬೆಂಗಳೂರಿನಲ್ಲಿರತಕ್ಕ ಲಾಲ್ ಬಾಗ್ ತೋಟವು ನಾವು ಹುಟ್ಟುವುದಕ್ಕಿಂತ, ಮೊದಲೇ ಇದು ಬಹಳ ಪ್ರಸಿದ್ಧಿಯಾಗಿತ್ತು. ಆದರೆ ಈ ದಿವಸ ಅದರ ಮೈಂಟನೆನ್ಸ್ ಸರಿಯಾಗಿಲ್ಲ. ನಾವೇನೋ ಅದರ ಪಕ್ಕದಲ್ಲೇ ಇದ್ದೇವೆ. ನಮ್ಮ ಅಧ್ಯಕ್ಷರು ಅತ್ತಕಡೆ ಒಂದಾವರ್ತಿ ವಾಕಿಂಗ್ ಬಂದಪಕ್ಷದಲ್ಲಿ ಅಲ್ಲಿ ಬರತಕ್ಕ ಆ ಗಬ್ಬು ವಾಸನೆ, ಅಲ್ಲಿರತಕ್ಕ ಕೊಳಕು, ಅಲ್ಲಿ ಎಲೆಗಳು ಗುಂಪು ಗುಂಪಾಗಿ ಬಿದ್ದಿರುವುದು, ಇದನ್ನೆಲ್ಲಾ ನೋಡಿದರೆ ಮನಸ್ಸಿಗೆ ಬಹಳ ಖೇದವಾಗುತ್ತದೆ ಈ ಲಾಲ್‌ಬಾಗ್ ತೋಟವನ್ನು ಬೆಂಗಳೂರಿಗೊಂದು ಗೌರವ ತರತಕ್ಕ ರೀತಿಯಲ್ಲಿ ಇಡಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ವ್ಯವಸಾಯಕ್ಕೆ ಸಂಬಂಧಪಟ್ಟ ಬೇಡಿಕೆಗಳನ್ನೂ ಮತ್ತು ಇನ್ನಿತರ ಬೇಡಿಕೆಗಳನ್ನೂ ಅನುಮೋದಿಸುತ್ತಾ ನಾನು ಸರ್ಕಾರದವರಿಗೆ ಕೆಲವು ಸಲಹೆಗಳನ್ನು ಮಾಡಲಿಕ್ಕೆ ಇಚ್ಛೆಪಡುತ್ತೇನೆ".

ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೆ ಇಲ್ಲಿಯವರೆಗೂ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ಸದಸ್ಯರಾದ ಎ. ಎಸ್. ಪಾಟೀಲರೂ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅವರು ಮಾತನಾಡುತ್ತಾ ಹೇಳಿದ್ದೇನೆಂದರೆ : ಹತ್ತಿ ಬೀಜ ಹೋಯಿತು, ಗೋಧಿ ಬೀಜ ಹೋಯಿತು ಎಲ್ಲಾ ಹೋಯಿತು ಎಂದು ಹೇಳಿ ಈ ದಿವಸ ಇಲಾಖೆಯಲ್ಲಿರತಕ್ಕ ಅಧಿಕಾರಿಗಳಲ್ಲಿ ಬಹಳ ಅಸಮಾಧಾನ ಉಂಟಾಗಿ ಅವರಾರೂ ರಿಸರ್ಚಿನ ಕಡೆಗೆ ಗಮನವನ್ನೇ ಕೊಡುತ್ತಿಲ್ಲ ಅಂತ ಹೇಳಿದರು. ಶ್ರೀ ಎ. ಎಸ್. ಪಾಟೀಲರಾದರೋ ದೊಡ್ಡ ವ್ಯವಸಾಯಗಾರರು, ಒಳ್ಳೆಯ ಅನುಭವಿಗಳು. ಈ ದಿವಸ ಗೋಧಿಯಲ್ಲಿ ಉತ್ತಮವಾದ 3-4 ಜಾತಿಯ ಬೀಜವನ್ನು ಕಂಡು ಹಿಡಿದಿದ್ದಾರೆ. ಜಯಧರ ಮತ್ತು ಲಕ್ಷ್ಮಿ ಹತ್ತಿಯಲ್ಲೂ ರಿಸರ್ಚನ್ನು ನಡೆಸುತ್ತಿದ್ದಾರೆ. ಆದರೆ ಲಕ್ಷ್ಮೀ ಹತ್ತಿ ಸ್ವಲ್ಪಮಟ್ಟಿಗೆ ಹವಾಮಾನವನ್ನು ಅನುಸರಿಸಿ ಬೆಳೆಯತಕ್ಕ ಬೆಳೆಯಾಗಿದೆ. ಆದರೆ ಅದಕ್ಕೆ ಪ್ರತಿ ವರ್ಷವೂ ರೋಗ ಬರುತ್ತಿಲ್ಲ. ಆದರೆ ಈ ಬೆಳೆಯಲ್ಲಿ ಹಾಲಿ ಕಂಡುಬರತಕ್ಕದ್ದೇನೆಂದರೆ : ಬೋರ್ ವರ್ಮ್ಸಗಳಿಂದ ಬೆಳೆ ಕೆಡುತ್ತಿದೆ. ಅದನ್ನು ಪ್ರಿವೆಂಟ್ ಮಾಡುವುದಕ್ಕೆ ಇಲಾಖೆಯವರೀಗ ಪ್ರಯತ್ನ ಮಾಡುತ್ತಿದ್ದಾರೆ. ಸ್ವಲ್ಪಮಟ್ಟಿಗೆ ಇದರ ನಿವಾರಣೆಯೂ ಆಗಿದೆ. ಈ ದಿವಸ ಈ ಹತ್ತಿಬೀಜಕ್ಕೆ ರೈತರಿಂದ ಬಹಳ ಡಿಮ್ಯಾಂಡ್ ಬರುತ್ತಿದೆ. ಈ ಸೀಡ್ಸ್‌ಗಳ ಬಗ್ಗೆ ಈಗ ಸಿರಗುಪ್ಪೆಯಲ್ಲಿ ಒಂದು ರಿಸರ್ಚ್ ನಡೆಯುತ್ತಿದೆ. ಅವರಲ್ಲಿ ಉತ್ತಮ ಬೀಜವನ್ನು ಕೊಡುತ್ತಿದ್ದಾರೆ. ಹೀಗೆಲ್ಲಾ ಇರುವಾಗ ಮಾನ್ಯ ಸದಸ್ಯರು ಸ್ವಲ್ಪ ತಿಳಿದುಕೊಂಡು ಮಾತನಾಡುವುದು ಚೆಲೋದೆಂದು ಹೇಳುತ್ತೇನೆ.

ಇನ್ನು ವ್ಯವಸಾಯದ ಇಲಾಖೆಯ ಬಗ್ಗೆ ನಾನು ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಈ ದಿವಸ ಈ ಲ್ಯಾಂಡ್ ರಿಕ್ಲಮೇಷನ್ ವಿಚಾರದಲ್ಲಿ ಟ್ರಾಕ್ಟರ್ ಪ್ಲೋಯಿಂಗ್ ಮತ್ತು ಬುಲ್‌ಡೋಜರುಗಳು ಬೇಕಾಗಿಲ್ಲ, ಅವುಗಳನ್ನು ಸರ್ಕಾರದವರು ಕೊಂಡುಕೊಳ್ಳುವುದು ಬೇಡ, ಅವುಗಳಿಂದ ಸರ್ಕಾರಕ್ಕೆ ಹೆಚ್ಚಿನ ಲಾಸಾಗುತ್ತೆ. ಎಂಬುದಾಗಿ ಹೇಳಿದ್ದಾರೆ. ಆದರಿಂದ ಸರ್ಕಾರದವರು ಅವುಗಳನ್ನು ಕೊಳ್ಳತಕ್ಕದ್ದನ್ನು ನಿಲ್ಲಿಸಿಬಿಡುತ್ತಾರೆಂದು ನಾನು ಕೇಳಿದ್ದೇನೆ. ಆದರೆ ಹಾಗೆ ಮಾಡುವುದು ಸರಿಯಾದ್ದಲ್ಲ. ಆ ಭಾಗದ ಜನರಿಗೆ ಅವು ಬೇಡವಾಗಿದ್ದಿರಬಹುದು. ಅವು ಅವರಿಗೆ ಅನುಕೂಲವಿಲ್ಲದೆ ಇರಬಹುದು. ಆದರೆ ನಮ್ಮ ಕಡೆಯಲ್ಲಂತೂ ಕರೀಭೂಮಿ ಇರುವಲ್ಲಿ ಗರಿಕೆಯನ್ನು ತೆಗೆದುಹಾಕಲು ನಮ್ಮಲ್ಲಿ ಟ್ರಾಕ್ಟರುಗಳು ಬೇಕೇಬೇಕು. ಈ ದಿವಸ ಈ ಡಿಪಾರ್ಟ್‌ಮೆಂಟಿನಲ್ಲಿ ಎಷ್ಟಿದ್ದರೂ ಅವುಗಳನ್ನು ನಮ್ಮ ರಾಯಚೂರು ಜಿಲ್ಲೆಗೆ ಕೊಡಲಿ, ನಾವು ತೆಗೆದುಕೊಂಡು ಅವುಗಳಿಗೆ ಹಣ ಸಹಾ ಕಟ್ಟಲಿಕ್ಕೆ ನಾವು ಸಿದ್ಧನಾಗಿದ್ದೇವೆ. ಇವುಗಳಿಗೆ ರೈತರಿಂದ ವಿಪರೀತ ಡಿಮ್ಯಾಂಡ್ ಬರುತ್ತಿದೆ. ನಮ್ಮಲ್ಲೀಗ ಇವು ಮೂರೇ ಇರುತ್ತವೆ. ಇವು ವರ್ಷದಲ್ಲಿ ಮೂರು ತಿಂಗಳ ಕಾಲ ಕೆಲಸಮಾಡಿದರೆ ಅವುಗಳು 3 ಸಾವಿರ ಎಕರೆಗೆ ಜಾಸ್ತಿಯಾಗಿ ಉಳುವುದಕ್ಕೆ ಸಾಧ್ಯವಿಲ್ಲ, ಆದ್ದರಿಂದ ಇವುಗಳನ್ನು ಮುಂದುವರಿಸಿಕೊಂಡೇ ಬರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಈ ದಿವಸ ಈ ಟ್ರಾಕ್ಟರುಗಳನ್ನು ಬಾಡಿಗೆ ಕೊಡತಕ್ಕ ವಿಚಾರದಲ್ಲಿ ಎಕರೆಗೆ 30-40 ರೂಪಾಯಿಗಳನ್ನು ಛಾರ್ಜ್‌ಮಾಡಿ

(ಶ್ರೀಮತಿ ಬಸವರಾಜೇಶ್ವರಿ)

ಅಷ್ಟೂ ಹಣವನ್ನೂ ಒಂದೇ ಗಂಟಿನಲ್ಲಿ ಕಟ್ಟಬೇಕೆಂದು ಹೇಳುತ್ತಿದ್ದಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಇದನ್ನು ಕಂತುರೂಪದಲ್ಲಿ ಪಾವತಿಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತಿದ್ದೇನೆ. ಇನ್ನು ಸರ್ಕಾರದವರು ಇತ್ತೀಚೆಗೆ ಸಣ್ಣ ಸಣ್ಣ ಟ್ರಾಕ್ಟರುಗಳನ್ನು ತರಿಸುತ್ತಿದ್ದಾರೆ. ಈ ದಿವಸ ನಮ್ಮಲ್ಲಿ ಮೆಕನೈಜ್ಡ್ ಕಲ್ಟಿವೇಷನ್ನಿಗೆ ಅಭಾವವಿರುವುದರಿಂದ ಕೆಲವಲ್ಲಿಯಾದರು ಈ ಮೆಕನೈಜ್ಡ್ ಕಲ್ಟಿವೇಷನ್ನಿಗೆ ಅವಕಾಶ ಮಾಡಿಕೊಡಬೇಕು. ಇವುಗಳನ್ನು ಇನ್ನೂ ಹೆಚ್ಚುಹೆಚ್ಚಾಗಿ ತರಿಸಿ. ಇವುಗಳ ಬೆಲೆ ಕೂಡ 3–4 ಸಾವಿರದೊಳಗೇ ಸಿಕ್ಕುತ್ತೆಂದು ಹೇಳುತ್ತಿದ್ದಾರೆ. ಇವುಗಳನ್ನು ರೈತರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಒದಗಿಸಬೇಕೆಂದು ಹೇಳುತ್ತೇನೆ. ಇನ್ನು ಟ್ರಾಕ್ಟರುಗಳನ್ನು ಹೈರ್‌ಫರ್ಚೇಜ್ ಸಿಸ್ಟಂ ಮೇಲೆ ಮಾರಾಟ ಮಾಡಲಾಗುವುದೆಂದು ಹೇಳುತ್ತಿದ್ದಾರೆ. ಇದರಲ್ಲಿ ಅಂದರೆ ಮಾರಾಟ ಮಾಡತಕ್ಕ ಕ್ರಮದಲ್ಲಿ ರೈತರಿಗೆ ಬಹಳ ಅನಾನುಕೂಲವಾಗುತ್ತಿದೆ. ಅವರಿಂದ ಡಬ್ಬಲ್ ಸೆಕ್ಯೂರಿಟಿ, ಸಾಲ್‌ವೆನ್ಸಿ ಸರ್ಟಿಫಿಕೇಟು ಮತ್ತು ಎನ್‌ಕಂಬ್ರೆನ್ಸ್ ಇತ್ಯಾದಿ ಅನೇಕ ಕಂಡೀಷನ್‌ಗಳನ್ನು ಹಾಕಲಾಗುತ್ತಿದೆ. ಆದರೆ ಈ ದಿವಸ ಪಂಪ್ ಸೆಟ್ಟುಗಳನ್ನು ರೈತರಿಗೆ ಒದಗಿಸತಕ್ಕ ಕ್ರಮದಲ್ಲಿ ಹೇಗೆ ಲಿಬರಲೈಜ್ ಮಾಡಲಾಗಿದೆಯೋ ಹಾಗೆಯೇ ಇಲ್ಲಿಯೂ ರೂಲ್ಸ್ ಲಿಬರಲೈಜ್ ಮಾಡಿ ಆ ರೀತಿ ಕೊಡಬೇಕೆಂದು ಹೇಳುತ್ತೇನೆ.

ಸಾಯಿಲ್ ಕನ್‌ಸರ್ವೇಷನ್ ಆಕ್ಟನ್ನು ಫೈನಲೈಸ್ ಮಾಡಿದ್ದೀರಿ ಆದರೆ ರೂಲ್ಸ್ ಇನ್ನೂ ಮಾಡಿಲ್ಲ ಬೇಕಾದಷ್ಟು ಜಮೀನು ಸರ್ವೇ ಆಗಿದೆ. ಇದು ಕೆಲಸ ನಡೆಯುತಕ್ಕ ಸೀಸನ್ ಇಂತಹ ಸಂದರ್ಭದಲ್ಲಿ ರೂಲ್ಸನ್ನು ಫೈನಲೈಜ್ ಅದನ್ನು ಮಾಡದಿದ್ದರೆ ಮುಂದೆ ಕೆಲಸವಾಗುತ್ತದೆಯೇ ! ಅದು ಬಹಳ ವಿಳಂಬವಾಗಿದೆ ಆದ್ದರಿಂದ ದಯವಿಟ್ಟು ತಕ್ಷಣ ಮಾಡಬೇಕೆಂದು ಹೇಳುತ್ತಾ ಇದ್ದೇನೆ. ಕಾಟನ್ ಬೆಳೆಯತಕ್ಕ ಈ ದಿವಸದಲ್ಲಿ ರೂಲ್ಸನ್ನು ಫೈನಲೈಸ್ ಮಾಡದಿದ್ದರೆ ಹತ್ತಿ ಬೆಳೆಯತಕ್ಕ ರೈತರಿಗೆ ಏನೇನು ಅನಾನುಕೂಲವಾಗುತ್ತದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತಾ ಇದ್ದೇನೆ.

4-00 P. M.

ಅಗ್ರಿಕಲ್ಚರಲ್ ಗ್ರಾಜುಯೇಟ್ಸ್ ವಿಚಾರದಲ್ಲಿ ಒಂದೆರಡು ಮಾತನ್ನು ಹೇಳಬೇಕಾಗಿದೆ. ಎರಡು ಮೂರು ವರ್ಷಗಳಿಗೆ ಮುಂಚೆ ಅಗ್ರಿಕಲ್ಚರಲ್ ಕಾಲೇಜಿನವರು ಸ್ಟ್ರೈಕ್ ಮಾಡಿದ್ದರು, ಬೇರೆ ಗ್ರಾಜ್ಯುಯೇಟ್ಸ್‌ನಂತೆ ನಮ್ಮನ್ನೂ ಪರಿಗಣಿಸಬೇಕು, ನಮಗೆ ಕೊಡತಕ್ಕ ಸಂಬಳ ಸಾಲುವುದಿಲ್ಲ ಎಂದು ಮನವಿ ಮಾಡಿಕೊಂಡಾಗ ಅದನ್ನು ಪರೀಕ್ಷೆ ಮಾಡುತ್ತೇವೆ ಅದು ಸರ್ಕಾರದವರ ಗಮನದಲ್ಲಿ ಇದೆ ಎಂದು ಹೇಳಿದಿರಿ. ಆ ಭರವಸೆಯ ಮೇಲೆ ಅವರು ಅವತ್ತಿನ ದಿವಸ ಸ್ಟ್ರೈಕ್‌ನ್ನು ವಾಪಸು ತೆಗೆದುಕೊಂಡರು. ಇವತ್ತಿನವರೆಗೂ ಆ ವಿಚಾರದಲ್ಲಿ ಏನು ಮಾಡಿದ್ದೀರಿ ? ಇವತ್ತಿನ ದಿವಸ ಆ ಗ್ರಾಜುಯೇಟ್‌ಗಳಿಗೆ ಷಾವ್ಯಾಲೇಸ್ ಮುಂತಾದ ಕಡೆಗಳಲ್ಲಿ 500-600 ರೂಪಾಯಿಗಳ ಸಂಬಳ ಕೊಡುತ್ತಾ ಇದ್ದಾರೆ ಆದೇ ನೀವು ಕೊಡುತ್ತಾ ಇರತಕ್ಕ ಸಂಬಳ ಎಂದರೆ 150 ರೂಪಾಯಿ. ಇಷ್ಟು ಕಡಿಮೆ ಸಂಬಳಕ್ಕೆ ಯಾರುತಾನೆ ನಿಮ್ಮಲ್ಲಿ ಕೆಲಸಕ್ಕೆ ಬರುತ್ತಾರೆ ? ಸರ್ಕಾರದವರು ಅದು ನಮ್ಮ ಗಮನದಲ್ಲಿ ಇದೆಎಂದು ಹೇಳುತ್ತಾ ಇದ್ದೀರೇ ಹೊರತು ಯಾವ ಒಂದು ಕಾರ್ಯಕ್ರಮವನ್ನೂ ಕೂಡ ತೆಗೆದುಕೊಂಡು ಇಲ್ಲ. ಆದಷ್ಟು ತೀವ್ರ ಅದನ್ನು ಪರಿಶೀಲನೆ ಮಾಡಿ ಇತರ ಗ್ರಾಜ್ಯುಯೇಟ್‌ಗಳಂತೆಯೇ ಅವರನ್ನು ಸರಿಯಾಗಿ ನೋಡಿಕೊಳ್ಳಬೇಕೆಂದು ಈ ವಿಷಯದಲ್ಲಿ ಮಾನ್ಯ ಮಂತ್ರಿಗಳಿಗೆ ಬಹಳವಾಗಿ ಒತ್ತಾಯದಿಂದ ಹೇಳುತ್ತಾ ಇದ್ದೇನೆ.

ಇವತ್ತಿನ ದಿವಸ ಆಹಾರ ಹೆಚ್ಚಾಗಿ ಬೆಳೆಯಬೇಕು, ಸುಧಾರಿಸಿದ ಪರಿಸ್ಥಿತಿಯ ಮೇಲೆ ನಮ್ಮ ಒಕ್ಕಲುತನ ಆಗಬೇಕು ಅವರು ಸುಧಾರಿಸಿದ ಬೀಜ ಉಪಯೋಗಿಸಬೇಕು, ಎಂದು ಹೇಳಿ ಭಾಷಣ ಮಾಡುತ್ತಾ ಇದ್ದೀರಿ. ಗ್ರಾಜ್ಯುಯೇಟ್ಸ್ ಬಂದು ಹಳ್ಳಿಗಳಲ್ಲಿ ರೈತರಿಗೆ ಇದನ್ನು ಕಲಿಸುವುದಕ್ಕೆ ಸಾಧ್ಯವೇ ? ಈಗ ನಮ್ಮ ದೇಶದಲ್ಲಿ ಕೇವಲ 5-6 ಅಗ್ರಿಕಲ್ಚರಲ್ ಸ್ಕೂಲುಗಳು ಇವೆ, ಅದು ಸಾಲದು. ಒಂದೊಂದು ಜಿಲ್ಲೆಗೆ ಒಂದೊಂದು ಸ್ಕೂಲನ್ನು ತೆಗೆದು ರೈತರ ಮಕ್ಕಳಿಗೆ ಅಲ್ಲಿ ತರಬೇತು ಕೊಡುವುದು ಉತ್ತಮ ಎಂದು ನಾನು ಹೇಳುತ್ತಾ ಇದ್ದೇನೆ.

ಪೆಸ್ಟ್ಸ್ ಮತ್ತು ಡಿಸೀಸಸ್ ಅನ್ನು ಇರ್ರ್ಯಾಡಿಕೇಟ್ ಮಾಡುವುದಕ್ಕೆ ತಮ್ಮಲ್ಲಿ ಒಂದು ಪ್ರೊಗ್ರಾಂನ್ನು ಹಾಕಿಕೊಂಡಿದ್ದೀರಿ. ಹೋದ ಸಲ ಹಾವೇರಿಯಲ್ಲಿ ಮತ್ತು ಇನ್ನಿತರ ಭಾಗಗಳಲ್ಲಿ ಗ್ರಾಸ್ ಹಾಪರ್ಸ್‌ಗಳ ಕಾಟ ಹೆಚ್ಚಾದಾಗ ಅದನ್ನು ಎರ್ರ್ಯಾಡಿಕೇಟ್ ಮಾಡಿದಿರಿ. ಈ ಸ್ಕೀಂ ಇಡೀ ಸ್ಟೇಟ್‌ಗೆ

ಅನ್ವಯಿಸುವಂತೆ ಆಗಬೇಕು, ಈ ರೋಗ ಅನೇಕ ಕಡೆಗಳಲ್ಲಿ ಬರುವ ಸಂಭವ ಇದೆ. ಔಷಧಿಗಳಿಗೆ ಖರ್ಚಾಗತಕ್ಕ ಹಣವನ್ನು ರೈತರಿಂದ ಸಬ್ಸಿಡಿ ಮೇಲೆ ವಸೂಲು ಮಾಡುವುದು ಉತ್ತಮ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಇಂಪ್ರೂವ್ಡ್ ಸೀಡ್ಸ್ ವಿಚಾರ. ಪ್ರತಿಯೊಂದು ಗ್ರಾಮದಲ್ಲೂ ಪಂಚಾಯಿತ್ ಲೆವಲ್‌ನಲ್ಲಿ ಒಂದು ಪ್ಲಾನ್‌ನ್ನು ಹಾಕಿಕೊಂಡಿದ್ದೀರಿ. ಇವತ್ತಿನ ದಿವಸ ಆ ಪ್ಲಾನ್ ಪ್ರಕಾರ ಒಂದು ಟಾರ್ಗೆಟ್ ಕೂಡ ಇದೆ. ಅದರಲ್ಲಿ ಅಳವಡಿಸಿರುವಂತೆ ಇಂಪ್ರೂವ್ಡ್ ಸೀಡ್ಸ್‌ನ್ನು ಕೊಡುವುದು ನಿಮ್ಮ ಆದ್ಯ ಕರ್ತವ್ಯ. ಎಕ್ಸ್‌ಟೆನ್‌ಷನ್ ಆಫೀಸರುಗಳಾಗಲಿ, ಅಥವಾ ನಿಮ್ಮ ಗ್ರಾಮಾಧಿಕಾರಿಗಳಾಗಲಿ ಯಾವುದಾದರೂ ಆ ತರಹ ಒಂದು ಟಾರ್ಗೆಟ್ ಎಷ್ಟಿದೆ ಅದನ್ನು ಮುಟ್ಟುವುದಕ್ಕೆ ಪ್ರಯತ್ನ ಮಾಡಿದ್ದಾರೇನೊ ಎಂದು ಕೇಳಬೇಕಾಗಿದೆ. ಇಷ್ಟು ಜಮೀನು. ಅಗ್ರಿಕಲ್ಚರಲ್ ಪ್ರೊಡಕ್ಷನ್ ಪ್ಲಾನ್‌ನಲ್ಲಿದೆ, ಇಷ್ಟು ಫೌಂಡೇಷನ್ ಸೀಡ್ಸ್ ಬೇಕು, ರಿಜಿಸ್ಟರ್ಡ್ ಸೀಡ್ ಗ್ರೋಯರ್ಸ್ ಎಷ್ಟು ಜನ ಇದ್ದಾರೆ ಅವರು ಎಷ್ಟು ಕೊಡುತ್ತಾರೆ ಎಂಬ ಯಾವುದಾದರೂ ಒಂದು ನಿರ್ದಿಷ್ಟವಾದ ವಿಷಯ ತಮ್ಮಲ್ಲಿ ಇದೆಯೋ ಎಂದು ಕೇಳುತ್ತೇನೆ. ಯಾವ ಟೈಂಗೆ ಬೇಕೋ ಆಟೈಂಗೆ ಸರಿಯಾಗಿ ಫೌಂಡೇಷನ್ ಸೀಡ್ಸ್‌ನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ನ್ಯಾಷನಲ್ ರೂರಲ್ ವಾಟರ್‌ಸಪ್ಲೈ ಸ್ಕೀಂನಲ್ಲಿ ಬೇಕಾದಷ್ಟು ದುಡ್ಡು ಇದೆ. ಇಂಡಿಯಾ ಸರ್ಕಾರದವರು ಸಹಾಯ ಮಾಡುತ್ತಾ ಇದ್ದಾರೆ. ನಾವು ಕೊಡತಕ್ಕ ಹಣ ಕೂಡ ಕೇವಲ 25 ಪರ್ಸೆಂಟು, 10 ಪರ್ಸೆಂಟು, ಕೆಲವು ಸಂದರ್ಭಗಳಲ್ಲಿ 10 ಪರ್ಸೆಂಟು ಇದೆ. ಇದು ಬಹಳ ಉಪಯುಕ್ತವಾದ ಕೆಲಸ ಇದನ್ನು ತಾವು ಮುಂದುವರಿಸಬೇಕು. ಇವತ್ತು ಏನು ಆಗುತ್ತಾ ಇದೆ ಎಂದರೆ ಸ್ಕೀಂ ಏನೋ ಮಂಜೂರಾಗಿ ಬರುತ್ತಾ ಇದೆ ಆದರೆ ಯಾರು ಕೆಲಸ ಮಾಡಬೇಕೆನ್ನುವುದು ತಿಳಿಯದ ಹಾಗೆ ಆಗಿದೆ. ಏಕೆಂದರೆ ಪಿ. ಡಬ್ಲ್ಯು. ಡಿ. ಅವರಿಗೆ ವಹಿಸಿದರೆ ಅವರಿಗೆ ಮಾಡತಕ್ಕ ಕೆಲಸಗಳು ಬಹಳ ಇವೆ, ಅವರಿಗೆ ಟೈಂಗೆ ಸರಿಯಾಗಿ ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೋ ಎಂಬ ಸಂಶಯ ಇದೆ. ಇದಕ್ಕಾಗಿಯೇ ಒಂದು ಪ್ರತ್ಯೇಕ ಡಿವಿಜನ್ ಅನ್ನು ತೆಗೆಯುತ್ತೀರಿ ಎಂದು ತಿಳಿದು ಬಂತು ತಕ್ಷಣ ಆ ಡಿವಿಜನ್ ಅನ್ನು ತೆಗೆದು ನೀರಿನ ಅಗತ್ಯತೆ ಎಲ್ಲಿದೆಯೋ ಅಲ್ಲಿಗೆ ಒಂದು ಪ್ರಯಾರಿಟಿಯನ್ನು ನಿಗದಿ ಮಾಡಿಕೊಂಡು ಈ ಸ್ಕೀಂ ಮಂಜೂರಾದ ಹಾಗೆಲ್ಲಾ ಕೆಲಸ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಈ ಸಮಯದಲ್ಲಿ ಸರ್ಕಾರದವರಿಗೆ ಸೂಚನೆ ಮಾಡಬಯಸುತ್ತೇನೆ.

ಇನ್ನು ರೂರಲ್ ಹೌಸಿಂಗ್ ಸ್ಕೀಂ. ಇದು ಒಂದು ಬಹಳ ಜನರಿಗೆ ಉಪಯುಕ್ತವಾದ ಸ್ಕೀಂ ಆಗಿತ್ತು. ಎಮರ್ಜನ್ಸಿಯಿಂದ ಈ ಸ್ಕೀಂನ್ನು ಮುಂದುವರಿಸದೇ ಇದ್ದುದರಿಂದ ಬಹಳ ಜನರಿಗೆ ಅನಾನುಕೂಲವಾಗಿದೆ. ಏಕೆಂದರೆ ಪ್ರವಾಹ ಮತ್ತು ಬೆಂಕಿಯಿಂದ ಅನಾಹುತಕ್ಕೆ ಒಳಗಾದ ಪ್ರದೇಶಗಳಿಗೆ ಇದರ ಅವಶ್ಯಕತೆ ಬಹಳವಾಗಿದೆ. ಈ ವರ್ಷ ಮುಂದುವರಿಸಿಕೊಂಡು ಬಂದಿದ್ದೀರಿ. ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ ಇಂದ 5 ಲಕ್ಷ ರೂಪಾಯಿಗಳ ಸಾಲವನ್ನು ಕೊಟ್ಟಿದ್ದೀರಿ. ಇದಕ್ಕೂ ಕೂಡ ಪ್ರಯಾರಿಟಿ ಲಿಸ್ಟ್ ಹಾಕಿಕೊಂಡು ಎಲ್ಲಿ ಅಗತ್ಯ ಇದೆಯೋ ಎಲ್ಲಿ ಪ್ರವಾಹಕ್ಕೆ ಒಳಗಾದ ಪ್ರದೇಶಗಳು ಇರುತ್ತವೆಯೋ ಅಂತಹ ಕಡೆಗಳಲ್ಲಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಮಯದಲ್ಲಿ ಮಾನ್ಯ ಮಂತ್ರಿಗಳಿಗೆ ಹೇಳುತ್ತಾ ಇದ್ದೇನೆ.

ಇನ್ನು ಡೆವಲಪ್‌ಮೆಂಟ್ ಬ್ಲಾಕ್‌ಗಳಲ್ಲಿ ಹೆಣ್ಣು ಮಕ್ಕಳ ವಿಚಾರದಲ್ಲಿ ಹೇಳಬೇಕೆಂದರೆ ನಮ್ಮ ರಾಯಚೂರು ಜಿಲ್ಲೆಯಲ್ಲಿ ಮಹಿಳೆಯರು ಮತ್ತು ಮಕ್ಕಳ ಬಗ್ಗೆ ಕೆಲಸ ಸಮರ್ಪಕವಾಗಿ ನಡೆದಿಲ್ಲ. ಇಡೀ ಜಿಲ್ಲೆಯಲ್ಲಿ ತಿರುಗಿದರೂ ಕೂಡ ಮುಖ್ಯಸ್ಥರು ಕೆಲಸ ಮಾಡುತ್ತಾ ಇದ್ದಾರೆಯೇ ಹೊರತು ಗ್ರಾಮ ಸೇವಕಿಯರು ಅಂತೂ ಇಲ್ಲವೇ ಇಲ್ಲ. ಹೀಗಿರುವಾಗ ಅಲ್ಲಿನ ಕೆಲಸಕಾರ್ಯಗಳು ಯಾವ ರೀತಿ ನಡೆಯಬೇಕೆಂಬುದನ್ನು ತಾವು ಆಲೋಚವೆ ಮಾಡಬೇಕು. ಗಂಗಾವತಿಯಲ್ಲಿ ತರಬೇತಾದ ಹೆಣ್ಣುಮಕ್ಕಳು ಎಲ್ಲಿಗೆ ಹೋಗುತ್ತಾರೋ, ಅವರನ್ನು ಎಲ್ಲಿಗೆ ಪೋಸ್ಟ್ ಮಾಡುತ್ತಾರೋ ಗೊತ್ತಿಲ್ಲ. ಇನ್ನು ಮುಂದೆ ಆದರೂ, ಹಿಂದುಳಿದ ಈ ಮೂರು ಜಿಲ್ಲೆಗಳಿಗೆ ಹೆಚ್ಚು ಗಮನಕೊಡಬೇಕೆಂದು ಹೇಳುತ್ತೇನೆ. ಅಲ್ಲಿ ಕೆಲಸ ಮಾಡತಕ್ಕ ಹೆಣ್ಣುಮಕ್ಕಳು ಬಹಳ ಜನ ಇದ್ದಾರೆ, ಅವರುಗಳು ಮತ್ತು ಮಕ್ಕಳ ಕಾರ್ಯಕ್ರಮದ ಬಗ್ಗೆ ಅಲ್ಲದೇ ಗ್ರಾಮಸೇವಕಿಯರನ್ನು ಪೋಸ್ಟ್ ಮಾಡುವ ಸಲುವಾಗಿ ಆ ಮೂರು ಜಿಲ್ಲೆಗಳಿಗೂ ನಿಗಾ ಕೊಡಬೇಕೆಂದು ಹೇಳಿ, ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ನಂಜೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ನಮ್ಮ ಮುಂದೆ ಇರತಕ್ಕ ವ್ಯವಸಾಯದ ಡಿಮ್ಯಾಂಡ್‌ಗೆ 4ಕೋಟಿ 86 ಲಕ್ಷ 8ಸಾವಿರ ರೂಪಾಯಿಗಳನ್ನು ಕೇಳಿರುವುದನ್ನು ಅನುಮೋದಿಸುತ್ತಾ ಇದರಲ್ಲಿ ಇರತಕ್ಕ ಕೆಲವು ಲೋಪದೋಷಗಳನ್ನು ನಾನು ಸರ್ಕಾರದವರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ವ್ಯವಸಾಯದ ಇಲಾಖೆ ಬಹಳ ಮುಖ್ಯವಾದ ಇಲಾಖೆ. ಈ ದಿವಸ ಆಹಾರದ ಅಭಾವದಿಂದ ಜನ ಕಂಗಾಲಾಗುತ್ತಾ ಇರುವಾಗ ಈ ವ್ಯವಸಾಯದ ಇಲಾಖೆ ಬಹಳ ಮುತುವರ್ಜಿಯನ್ನು ವಹಿಸಿ ಕೆಲಸ ಮಾಡಬೇಕು. ಹಾಗೆ ಮಾಡುತ್ತಾ ಇದೆಯೇ ಎಂದು ಯೋಚನೆ ಮಾಡಿದರೆ ಅಮೇರಿಕಾದಲ್ಲಿ ಶೇಕಡ 16 ಜನರು ಮಾತ್ರ ವ್ಯವಸಾಯದಲ್ಲಿ ನಿರತರಾಗಿದ್ದು ಇವತ್ತು ಪ್ರಪಂಚಕ್ಕೇ ಆಹಾರವನ್ನು ಕೊಡುವ ಸ್ಥಿತಿಯಲ್ಲಿ ಇದ್ದಾರೆ. ನಾವು ಶೇಕಡ 80 ಜನ ಇದ್ದು ಈ ದಿವಸ ಪರದೇಶಗಳಿಗೆ ಭಿಕ್ಷೆ ಬೇಡುವುದಕ್ಕೆ ಹೋಗುತ್ತಾ ಇರುವುದು ನಾಚಿಕೆ ಗೇಡು, ಬಹಳ ಹಿಂದೆ ಬಿದ್ದಿದ್ದೇವೆ. ಆಧುನಿಕ ಪದ್ಧತಿಯನ್ನು ಅನುಸರಿಸುತ್ತಾ ಇಲ್ಲ, ಬರೀ ರೆಕಾರ್ಡ್ ಮೇಲೆ ಯೋಜನೆಗಳನ್ನು ಮಾತ್ರ ಮಾಡುತ್ತಾ ಇದ್ದೇವೆಯೇ ಹೊರತು ಅವನ್ನು ಕಾರ್ಯಗತ ಮಾಡುತ್ತಾ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ನಮ್ಮ ಮಂಡ್ಯ ಜಿಲ್ಲೆಯಲ್ಲಿ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಹೇಳಿದರು. ಇದೇನು ಕಲ್ಪವೃಕ್ಷವೋ ಎಂಬ ಭಾವನೆ ಬರುವಂತೆ, ಆದರೆ ಮಂಡ್ಯಜಿಲ್ಲೆ ಪ್ಯಾಕೇಜ್ ಪ್ರೋಗ್ರಾಂ ಯಾವ ರೀತಿ ಆಗುತ್ತಾ ಇದೆ ಎಂಬುದನ್ನು ನೆನೆದುಕೊಂಡರೆ ಅದು ನಮ್ಮ ದುರಾದೃಷ್ಟ ಎಂಬ ಭಾವನೆ ನಮ್ಮಲ್ಲಿ ಬರುತ್ತಾ ಇದೆ ಏಕೆಂದರೆ ದೇಶದ ದುಡ್ಡು ನ್ಯಾಯವಾಗಿ ಖರ್ಚಾಗುತ್ತಾ ಇಲ್ಲ, ಅದರಿಂದ ದೇಶದ ಪ್ರಗತಿಗೆ ಉಪಯೋಗವಾಗುತ್ತಾ ಇಲ್ಲ. ಈ ರೀತಿ ಹಣವನ್ನು ವೇಸ್ಟ್ ಮಾಡುವುದಕ್ಕೆ ಬದಲು ಯಾವುದಾದರೂ ಉತ್ತಮವಾದ ನೀರಾವರಿ ಕಾಂಗಾರಿಗಳಿಗೆ ಉಪಯೋಗ ಮಾಡಿ ಆಹಾರದ ಪರಿಸ್ಥಿತಿಯನ್ನು ಉತ್ತಮಪಡಿಸುವುದು ಒಳ್ಳೆಯದೆಂದು ನಾನು ಭಾವನೆ ಮಾಡುತ್ತಾ ಇದ್ದೇನೆ. ಕಾರಣವೇನೆಂದರೆ, ಒಂದೊಂದಾಗಿ ಹೇಳುತ್ತೇನೆ, ಫ್ಯಾಕೇಜ್ ಪ್ಲಾನ್‌ನಲ್ಲಿ ಮೊದಲು ಒಂದು ಪ್ಲಾನ್ ಅನ್ನು ಬರೆಯುತ್ತಾರೆ ಒಂದು ಸಂಸಾರದ ಒಂದು ಪುಸ್ತಕಕ್ಕೆ ಎರಡೂವರೆ ರೂಪಾಯಿ ಆಗುತ್ತದೆ ಒಂದು ದಿವಸದಲ್ಲಿ ವಿಲೇಜ್ ಲೆವಲ್ ವರ್ಕರ್ 4 ಪ್ಲಾನ್ ಮೇಲೆ ಬರೆಯುವುದಕ್ಕೆ ಆಗುವುದಿಲ್ಲ. ಹೀಗೆ ಬರೆದಂತಹ ಪ್ಲಾನ್ ಏನಿದೆ, ವ್ಯವಸಾಯಗಾರನಿಗೆ ಜಮೀನು ಎಷ್ಟಿದೆ, ಖರ್ಚು ಏನು ಕೊಡಬೇಕು ಎಂಬುದನ್ನೆಲ್ಲಾ ನೋಡಿದರೆ ಇದನ್ನು ನೆರವೇರಿಸುವುದಕ್ಕೆ ಸಾಧ್ಯವಾಗುತ್ತದೆಯೋ ಇಲ್ಲವೋ ಎಂದು ಅನುಮಾನ ಬರುತ್ತದೆ. ನೆರವೇರಿಸುವುದಕ್ಕೆ ಸಾಧ್ಯವಿಲ್ಲದೇ ಇದ್ದರೆ ಪ್ಲಾನ್‌ಏಕೆ ಬರೆಯಬೇಕು ! ಇದರಿಂದ ಪ್ರಯೋಜನ ಏನು ? ದೇಶದ ದುಡ್ಡು ನಿಜವಾಗಿಯೂ ನವ ಪಯೋಗವಾಗುತ್ತದೆಯೇ ಎಂಬುದನ್ನು ಸರ್ಕಾರದವರು ಮನಗಾಣಬೇಕು. ಹೇಗೆ ಅಂದರೆ, ಈಗ ಎಕರೆಗೆ 300 ರೂಪಾಯಿ ಎಂದು ಗೊತ್ತು ಮಾಡಿರುವುದರಲ್ಲಿ 150 ರೂಪಾಯಿ ರೈತನ ಭಾಗವಾಗಿಯೂ ಸಾಲದ ರೂಪದಲ್ಲಿ 150 ರೂಪಾಯಿಗಳನ್ನು ನಗದಾಗಿಯೂ ಗೊಬ್ಬರ ರೂಪದಲ್ಲಿ ಕೊಡುತ್ತಾರೆ. ಹಾಗೆ ತೆಗೆದುಕೊಳ್ಳಬೇಕೆಂದು ಒಂದು ಕಂಡೀಷನ್ ಇದೆ. ವ್ಯವಸಾಯದ ಇಲಾಖೆ ಪ್ಲಾನ್ ಬರೆದರೂ ಸಹಾಯ ದೊರೆಯಬೇಕಾದರೆ ಅನೇಕ ಕಡೆ ಅರ್ಜಿ ಓಡಾಡಬೇಕು. ಸಾಲದ ಅರ್ಜಿಯನ್ನು ಸಹಕಾರ ಸಂಘ ಭರ್ತಿ ಮಾಡುವುದು, ಬ್ಯಾಂಕು ಹಣ ಮಂಜೂರು ಮಾಡುವುದು, ಗೊಬ್ಬರ ಸರಬರಾಯಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗೆ ಮಾಡುವುದು, ಅಲ್ಲಿಂದ ಸರ್ಕಲ್ ಸೊಸೈಟಿಗೆ ಸರಬರಾಯಿ ಮಾಡಲಾಗುವುದು. ಅಲ್ಲದೆ ಈ ಮಧ್ಯೆ ರಿಜಿಸ್ಟ್ರೇಷನ್ ಆಕ್ಟ್ ಬೇರೆ ಇದೆ. ಮಾರ್ಚಿ ತಿಂಗಳು ಬಂದರೂ ಫ್ರೀ ರಿಜಿಸ್ಟ್ರೇಷನ್ ಆಕ್ಟ್ ಹೊರಕ್ಕೆ ಬಂದಿಲ್ಲ. ಹೋದ ಸಲ ಕೂಡ ಅದು ಆಗಸ್ಟ್ ತಿಂಗಳಲ್ಲಿ ರಿಲೀಜ್ ಆಗಿ ಸಬ್ ರಿಜಿಸ್ಟ್ರಾರರ ಆಫೀಸಿಗೆ ಅಪ್ಲಿಕೇಷನ್ ತೆಗೆದುಕೊಂಡು ಹೋಗಿ ಎಲ್ಲಾ ಆಗಬೇಕಾದರೆ ಸೆಪ್ಟಂಬರ್ ಅಕ್ಟೋಬರ್ ಆಯಿತು. ಸಕಾಲದಲ್ಲಿ ಈ ಕೆಲಸವಾಗಿ ವ್ಯವಸಾಯಕ್ಕಾಗಿ ಕೊಡುವ ಹಣ ನಿಜವಾಗಿಯೂ ವ್ಯವಸಾಯಕ್ಕೆ ಖರ್ಚಾಗುವಂತೆ ನೋಡಿಕೊಳ್ಳಬೇಕಾದ್ದು ಅಗತ್ಯ. ಅಧಿಕಾರಿಗಳು ಇದನ್ನು ವಿಮರ್ಶೆ ಮಾಡಿ ನೋಡಿ ಸಕಾಲದಲ್ಲಿ ಸಹಾಯ ಮಾಡಲು ಮನಸ್ಸು ಮಾಡಬೇಕು.

ಈಗ ಎಸ್. ಇ. ಓ. ವಿಲೇಜ್ ಲೆವಲ್ ವರ್ಕರ್ ಮುಂತಾದವರನ್ನು ನೇಮಿಸಿದ್ದಾರೆ. ಅವರೇನು ಮಾಡುತ್ತಾರೆಂಬುದನ್ನು ವಿಮರ್ಶೆ ಮಾಡಬೇಕು. ಬೈಸಿಕಲ್ ಹತ್ತಿಕೊಂಡು ಹೋಗಿ ಮುಖಂಡರ ಪ್ರೀತಿ ಸಂಪಾದಿಸಿ ಡೈರಿಯಲ್ಲಿ ಬರೆದು ವಾಪಸು ಹೋಗುತ್ತಾರೆ. ಇದು ಸರಿಯಲ್ಲ, ಅವರ ಮನಸ್ಸು ಪರಿವರ್ತನೆಯಾಗಿ ಬಡವರಿಗೆ ಸಹಾಯ ಮಾಡಬೇಕೆಂಬ ಬುದ್ಧಿ ಅವರಲ್ಲಿ ಬೆಳೆಯಬೇಕು. ಇದನ್ನು ಗಮನಿಸಿ ಇರುವ ಲೋಪವನ್ನು ಸರಿಪಡಿಸಬೇಕು. ಹಾಗೆ ಮಾಡದಿದ್ದರೆ ಒದಗಿಸಿದ ಹಣ ಅನ್ಯಾಯವಾಗಿ ಖರ್ಚಾಗುತ್ತದೆಯೇ ಹೊರತು ನ್ಯಾಯವಾಗಿ ದೇಶದ ಅಭ್ಯುದಯಕ್ಕೆ, ಆಹಾರದ ಉತ್ಪಾದನೆಗೆ ಸಹಾಯಕವಾಗುವುದಿಲ್ಲ.

ಇನ್ನೊಂದು ಈಗ ಗೊಬ್ಬರ ಸರಬರಾಯಿ ಮಾಡುತ್ತಾರೆ, ಹಾಗೆ ಮಾಡುವಾಗ ರೈತರಿಗೆ 360 ರೂಪಾಯಿಗೆ ಸಪ್ಲೈ ಮಾಡಬೇಕೆಂದು ಆಜ್ಞೆ ಇದೆ. ಸೂಪರ್ ಫಾಸ್ಫೇಟಿಗೆ ಕಂಟ್ರೋಲ್ ಇಲ್ಲ. ಬಿಲ್ಲು ಹಾಕಿರುವುದನ್ನು ವ್ಯವಸಾಯ ಇಲಾಖೆ ಮಂತ್ರಿಗಳಿಗೆ ತೋರಿಸಿದೆ, ಕೃಷ್ಣರಾಜನಗರದಲ್ಲಿ ಬಿಲ್ಲು ಹಾಕಿರುವುದು, ಅದು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋದಾಗ ಏರಿರುತ್ತದೆ. ಅಮೋನಿಯಂ ಸಲ್ಫೇಟ್ 360 ರೂಪಾಯಿನಿಂದ 390 ರೂಪಾಯಿಗೆ ಏರಿರುವುದುಂಟು. ಹೀಗೆ ದರ ಒಂದು ಕಡೆಯಿಂದ ಇನ್ನೊಂದು ಕಡೆಗೆ ವ್ಯತ್ಯಾಸವಾಗುತ್ತಾ ಹೋದರೆ ಸರಕಾರದಲ್ಲಿ ನಂಬಿಕೆ ಬರುವುದೇ ? ಜನರು ಸರಕಾರವನ್ನು ಗೌರವಿಸುವರೇ ? ಸರಕಾರ ಕಟ್ಟುನಿಟ್ಟಾಗಿ ಆಜ್ಞೆಮಾಡಿ ಅಕ್ರಮ ನಡೆದಾಗ ತಪ್ಪಿತಸ್ಥರನ್ನು ಸರಿಯಾಗಿ ಶಿಕ್ಷಿಸಬೇಕು. 360 ರೂಪಾಯಿಗೆ ಮಾರಬೇಕಾದ್ದನ್ನೂ 390 ರೂಪಾಯಿಗೆ ಖಾಸಗಿ ವರ್ತಕ ಜನರಿಗೆ ಮಾರಿದರೆ ಲೈಸೆನ್ಸ್ ಹೋಲ್ಡರಾಗಿದ್ದರೆ ಏನಾಗುತ್ತದೆ ಎಂದು ಯೋಚನೆ ಮಾಡಬೇಕು. ಇದರಿಂದ ಸಾರ್ವಜನಿಕ ಹಿತಕ್ಕೆ ಧಕ್ಕೆ ಬರುತ್ತದೆ. ಹೀಗೆ ಅನ್ಯಾಯವಾಗುವುದಕ್ಕೆ ಅವಕಾಶ ಕೊಡಬಾರದು. ಸೂಪರ್ ಫಾಸ್ಫೇಟ್ ಒಂದು ತಾಲ್ಲೂಕಿನಲ್ಲಿ ಒಂದು ಮೂಟೆಗೆ ಇಪ್ಪತ್ತೊಂದೂವರೆ ರೂಪಾಯಿ ಇದ್ದರೆ ಇತರ ಕೆಲವು ತಾಲ್ಲೂಕುಗಳಲ್ಲಿ ಇಪ್ಪತ್ತೆರಡೂವರೆ, ಇಪ್ಪತ್ತೈದೂವರೆ, 26 ರೂಪಾಯಿ ಹೀಗೆಲ್ಲಾ ಇದ್ದು ಆ ಬೆಲೆಗೆ ಮಾರಾಟವಾದರೆ ಅದಕ್ಕೆ ಕಾರಣವೇನು ? ಎಲ್ಲ ಕಡೆಯೂ ಸಹಕಾರ ಸಂಘವೇ ಮಾರಾಟ ಮಾಡುವುದು. ಒಂದೊಂದು ಕಡೆ ಒಂದೊಂದು ದರ ಇದ್ದರೆ ಸಹಕಾರ ಸಂಘಗಳಲ್ಲಿ ಜನರಿಗೆ ನಂಬಿಕೆ ಬರುತ್ತದೆಯೇ ? ನ್ಯಾಯವಾಗಿದ್ದರೆ ಜನ ನಂಬುತ್ತಾರೆ. ನಮ್ಮನ್ನು ಜನ ಕೇಳಿದರೆ ನಾವೇನು ಹೇಳಬೇಕು ? ನಾನು ಒಂದು ಜನರಲ್‌ಬಾಡಿ ಮೀಟಿಂಗಿಗೆ ಹೋಗಿದ್ದಾಗ ಬೇರೆ ಬೇರೆ ಬಿಲ್ಲುಗಳನ್ನು, ರಸೀದಿಗಳನ್ನು ತೋರಿಸಿದೆ. ಜನರು ಈ ರೀತಿ ವ್ಯತ್ಯಾಸವಿರುವುದಕ್ಕೆ ಕಾರಣವೇನೆಂದು ಕೇಳಿದರೆ ನಾನೇನು ಉತ್ತರ ಹೇಳಬೇಕೆಂಬುದನ್ನು ಸರಕಾರ ಯೋಚನೆಮಾಡಬೇಕು. ನಾನು ಕಣ್ಣಾರೆ ನೋಡಿರುವುದನ್ನು ಹೇಳುತ್ತಿದ್ದೇನೆ. ಸಚಿವರು ಕೂಲಂಕಷವಾಗಿ ಇದನ್ನು ವಿಚಾರಮಾಡಬೇಕು. ಅದೇ ಅಮೋನಿಯಂ ಸಲ್ಫೇಟಿನ ಬೆಲೆ ಎಲ್ಲಕಡೆಯೂ ಒಂದೇ ರೇಟು ಫಿಕ್ಸ್ ಮಾಡಿ ಇರುವಾಗ ಸೂಪರ್ ಫಾಸ್ಫೇಟಿನ ಬೆಲೆಯೇಕೆ ಒಂದೊಂದು ಕಡೆ ಒಂದೊಂದು ರೀತಿ ಇದೆ ? ಸಹಕಾರ ಸಂಘಗಳು ಮಾತ್ರ ಇವುಗಳ ಮಾರಾಟ ಮಾಡುತ್ತಿರುವುದರಿಂದ ವ್ಯತ್ಯಾಸಕ್ಕೆ ಕಾರಣವೇನು ? ಲಾಭ ನಷ್ಟದ ಪ್ರಶ್ನೆ ಇಲ್ಲದೆ ಕೆಲವು ಸಂಘಗಳು ಮಾರಾಟ ಮಾಡುವುದು ಕೆಲವು ಸಂಘಗಳು ಲಾಭಕ್ಕೆ ಮಾರಾಟಮಾಡುತ್ತಿವೆ, ಇದನ್ನು ಪರಿಶೀಲಿಸಬೇಕು. ಅಲ್ಲಲ್ಲಿ ಸಹಕಾರ ಸಂಘಗಳು ಬೆಳೆಯಬೇಕು, ಹಳ್ಳಿಗಳಲ್ಲಿ ಅವನ್ನು ಬೆರೆಯಬೇಕು, ಜನರು ಮುಂದೆ ಬರಬೇಕು ಎಂದು ಹೇಳುತ್ತೀರಿ. ಆದರೆ ಈ ರೀತಿ ಅವ್ಯವಸ್ಥೆಯಾದರೆ ಹೇಗೆ ? 21-9-63 ರಲ್ಲಿ ಗೊಬ್ಬರ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ 6 ರೂಪಾಯಿ ಲಾಭ ಬರುವಂತೆಯೂ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ 18 ರೂಪಾಯಿ ಲಾಭ ಬರುವಂತೆ ಸರ್ಕಲ್ ಸೊಸೈಟಿಯಲ್ಲಿ 16 ರೂಪಾಯಿ ಲಾಭ ಬರುವಂತೆ ಮಾರಲು ಆಜ್ಞೆಯಾಯಿತು. ನಂತರ 27-4-64ರಲ್ಲಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗೆ 1 ರೂಪಾಯಿ, ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗೆ 8 ರೂಪಾಯಿ, ಸರ್ಕಲ್ ಸೊಸೈಟಿಗೆ 21 ರೂಪಾಯಿ ಬರುವಂತೆ ಮಾರಲು ಆಜ್ಞೆಯಾಯಿತು. ಪುನಃ 1-8-64ರಲ್ಲಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ 1 ರೂಪಾಯಿ ಎಂದು ನಿಗದಿಮಾಡಿದ್ದನ್ನು 10 ರೂಪಾಯಿ ಮಾಡಿದರು. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ 11 ರೂಪಾಯಿ ಮಾಡಿದರು. ಕಾರಣವೇನಿತ್ತು.

ಶ್ರೀ ರಾಮಕೃಷ್ಣ ಹೆಗ್ಗಡೆ (ಅಭಿವೃದ್ಧಿ, ಪಂಚಾಯಿತಿ ರಾಜ್ಯ ಮತ್ತು ಸಹಕಾರ ಶಾಖೆಯ ಮಂತ್ರಿಗಳು).—ಟ್ರಾನ್ಸ್‌ಪೋರ್ಟ್ ಮಾಡುವ ಛಾರ್ಜು ಸೇರಿಸಿದ್ದಾರೆಂದು ಕಾಣುತ್ತದೆ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ತಾಲ್ಲೂಕು ಸೊಸೈಟಿಗೆ ಕೊಡುತ್ತದೆ. ತಾಲ್ಲೂಕು ಸೊಸೈಟಿ ಸರ್ವಿಸ್ ಸೊಸೈಟಿಗೆ ಕೊಡುವುದು. ಹಾಗೆ ಮಾಡುವಾಗ ನಿವ್ವಳ ಲಾಭ ಕೊಡಬೇಕೆಂದು ಗೊತ್ತು ಮಾಡಿದ್ದೇವೆ.

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಶಿವಮೊಗ್ಗದಲ್ಲಿ ತಯಾರಾಗುವ ಸಕ್ಕರೆಗೆ ಶಿವಮೊಗ್ಗ ಮತ್ತು 185 ಮೈಲಿಗಳ ದೂರದಲ್ಲಿರುವ ಬೆಂಗಳೂರಿನಲ್ಲಿ 119 ರೂಪಾಯಿ ಬೆಲೆಯಾದರೆ ಚನ್ನಗಿರಿಯಲ್ಲಿ 127 ರೂಪಾಯಿಗೆ ಮಾರುತ್ತಿದ್ದಾರೆ. ಹತ್ತಿರವಿರುವ ಊರಿನಲ್ಲಿ ಜಾಸ್ತಿಬೆಲೆಗೆ ಮಾರಿ ದೂರದಲ್ಲಿರುವ ಊರಿನಲ್ಲಿ ಕಡಮೆ ಬೆಲೆಯಲ್ಲಿ ಮಾರಾಟಮಾಡಲು ಕಾರಣವೇನು ?

ಶ್ರೀ ಎನ್. ನಂಜೇಗೌಡ.—ಸರ್ವಿಸ್ ಸೊಸೈಟಿಯಲ್ಲಿ 1-2 ಸಾವಿರ ರೂಪಾಯಿ ಗೊಬ್ಬರ ವ್ಯಾಪಾರ ಮಾಡಲಾಗುವುದು. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗೆ 10 ರೂಪಾಯಿ ಲಾಭ. 2 ಸಾವಿರ ರೂಪಾಯಿ ವ್ಯಾಪಾರ ಮಾಡುವ ಸರ್ಕಲ್ ಸೊಸೈಟಿಕಡೆ ಇರುವುದಕ್ಕೆ ಅದನ್ನು ಹೋಲಿಕೆಮಾಡಿ ನೋಡಬಹುದು. 18 ರೂಪಾಯಿ ಇದ್ದಕಡೆ 11 ರೂಪಾಯಿ ಮಾಡಿದರು. ಕೋಟಿಗಟ್ಟಲೆ ವ್ಯಾಪಾರ ಮಾಡುವ

(ಶ್ರೀ ಎನ್. ನಂಜೇಗೌಡ)

ಕಡೆ ಎಷ್ಟೊ ಉಳಿಯುವುದು ಎಂಬುದನ್ನು ಸಹಕಾರ ಮಂತ್ರಿಗಳು ಗಮನಿಸಬೇಕು. ಟ್ರಾನ್ಸ್‌ಪೋರ್ಟ್ ಛಾರ್ಜನ್ನು ವಹಿಸಬೇಕಾಗುತ್ತದೆಂದು ಹೇಳಿದರು. ನಾನು ಬಿಲ್ ಸಹ ಕಳಿಸಿದ್ದೇನೆ. ತಾಲ್ಲೂಕಿನ ಸೊಸೈಟಿಯಿಂದ ಸರ್ಕಲ್ ಸೊಸೈಟಿಗೆ ಕಳಿಸಿರುವುದಕ್ಕೆ ಬಿಲ್ ಇದೆ. ಒಂದು ಟನ್ನಿಗೆ ಒಂದೂವರೆ ರೂಪಾಯಿ ಲೋಡಿಂಗ್ ಅನ್‌ಲೋಡು ಛಾರ್ಜ್, ಎಂಟು ಟನ್ನಿಗೆ 12 ರೂಪಾಯಿ, ನಾಲ್ಕೂವರೆ ಮೈಲಿಗೆ 35 ರೂಪಾಯಿ ಲಾರಿ ಛಾರ್ಜ ಹಾಕಿ ಬಿಲ್ಲು ಕೊಟ್ಟಿರುತ್ತಾರೆ. ಸಹಕಾರಿ ಲಾರಿಯಲ್ಲಿ ಸಾಗಿಸಿರುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಅದು ಹಿಂದಿನದಿರಬೇಕು.

ಶ್ರೀ ಎನ್. ನಂಜೇಗೌಡ.—ಅಲ್ಲ, ಸರಕಾರಿ ಆಜ್ಞೆಯಾದ ಮೇಲೆ ಈಚೆಗೆ ಆಗಿರುವುದು. ಇವತ್ತು ವಸೂಲು ಮಾಡಿರುವುದನ್ನು ಹೇಳಿದೆ. ಲಾಭ ಹಾಕಿ ಒಂದು ಮೂಟೆಗೆ 39 ರೂಪಾಯಿ ಎಂದು ಹೇಳಿದರೆ ಹೀಗೆ ಆರ್ಡರು ಮಾಡಿದರೆ ಒಬ್ಬರಿಗೂ ನಂಬಿಕೆ ಬರುವುದಿಲ್ಲ. ಹೀಗಾದರೆ ಸಹಕಾರ ಸಂಘಗಳು ಬೆಳೆಯುವುದು ಹೇಗೆ ಎಂಬುದನ್ನು ಯೋಚನೆ ಮಾಡಬೇಕು.

ಕೃಷ್ಣರಾಜಪೇಟೆ ತಾಲ್ಲೂಕು ಸೋಮನಹಳ್ಳಿ ಸೊಸೈಟಿಯಲ್ಲಿ 23 ಸಾವಿರ ರೂಪಾಯಿಗಳ ಷಾರ್ಟೇಜ್ ಇದೆಯೆಂದು ಆಡಿಟ್ ರಿಪೋರ್ಟಿನಲ್ಲಿದೆ 3 ವರ್ಷಗಳಿಂದ ಹೇಳುತ್ತಿದ್ದೇನೆ. ಅದಕ್ಕೆ ಜವಾಬ್ದಾರರು ಯಾರೆಂಬುದನ್ನು ಗೊತ್ತುಮಾಡಿರುವುದಿಲ್ಲ. ಇಷ್ಟು ಅನ್ಯಾಯವಾಗಿದೆಯಾದರೂ ಅದನ್ನು ಯಾರು ಕೊಡಬೇಕು, ಅದಕ್ಕೆ ಜವಾಬ್ದಾರರು ಯಾರು ಎಂಬುದನ್ನು ಇದುವರೆಗೂ ನಮೂದು ಮಾಡಿಲ್ಲ. ಹಾಗೆ ಮಾಡುವುದಾದರೆ ಆಡಿಟ್ ಏಕೆ ಮಾಡುತ್ತಾರೆ, ಅದರಿಂದ ಏನು ಪ್ರಯೋಜನ ? ಆಡಿಟ್ ಮಾಡುವುದರ ಉದ್ದೇಶವಾದರೂ ಏನು ? ಯಾರು ಹಣವನ್ನು ತಿಂದಿರುತ್ತಾರೆ, ಯಾರು ದ್ರೋಹ ಮಾಡುತ್ತಾರೆ ಅಂಥವರಿಂದ ವಸೂಲ್ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇಂಥ ಸಹಕಾರ ಸಂಘದಲ್ಲಿ ಇಷ್ಟು ಸಾವಿರ ರೂಪಾಯಿ ನಷ್ಟವಾಗಿದೆ ಎಂದು ಹೇಳುತ್ತಾರೆ. ಆದರೆ ಅದಕ್ಕೆ ಜವಾಬ್ದಾರರು ಯಾರು ಎನ್ನುವುದನ್ನು ಮಾತ್ರ ತಿಳಿಸುವುದಿಲ್ಲ. ಈ ತರಹ ಆಡಿಟ್ ಮಾಡುವುದು ತಪ್ಪಿ ಇಂಥವರು ಅದಕ್ಕೆ ಜವಾಬ್ದಾರರು ಎನ್ನುವುದನ್ನು ಗೊತ್ತುಮಾಡಬೇಕು ಎಂದು ಹೇಳುತ್ತೇನೆ. ಈ ವರ್ಷ ಹೊಸದಾಗಿ ನಡೆಯುತ್ತಿರುವ ಸೊಸೈಟಿಗಳಲ್ಲಿ ಕೂಡ 300 ರೂಪಾಯಿ, 400 ರೂಪಾಯಿ, 800 ರೂಪಾಯಿ, ಸಾವಿರ ರೂಪಾಯಿ ಈ ತರಹ ಷಾರ್ಟೇಜ್ ತೋರಿಸಿದ್ದಾರೆ. ಅದಕ್ಕೆ ಯಾರು ಜವಾಬ್ದಾರರು ಎನ್ನುವುದನ್ನು ಗೊತ್ತುಮಾಡಿಲ್ಲ. ಷಾರ್ಟೇಜ್ ಆಗುವುದಕ್ಕೆ ಯಾರು ಕಾರಣರು ಎಂದು ಜವಾಬ್ದಾರಿಯನ್ನು ಗೊತ್ತು ಮಾಡಬೇಕೆಂದು ಜನರಲ್‌ಬಾಡಿ ಮೀಟಿಂಗ್‌ನಲ್ಲಿ ವಾಪಸ್ ಮಾಡಿದ್ದೇವೆ. ಇದಕ್ಕೆ ಪುನಃ ಆಡಿಟ್ ಆಗಬೇಕಾಗಿದೆ. ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಯಾರು ಆಡಿಟ್ ಮಾಡುತ್ತಾರೆಯೋ ಅವರು ಷಾರ್ಟೇಜ್ ಬರುವುದಕ್ಕೆ ಯಾರು ಜವಾಬ್ದಾರರು ಎನ್ನುವುದನ್ನು ಗೊತ್ತುಮಾಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿ ಇಷ್ಟು ಮಾತ ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕುಂದೂರು ರುದ್ರಪ್ಪ.—ಸ್ವಾಮಿ, ಅಧ್ಯಕ್ಷರೇ, ಈ ದಿವಸ ವ್ಯವಸಾಯ ಫಾರೆಸ್ಟ್ ಮತ್ತು ಸರ್ಕಾರ ನಮ್ಮ ಮುಂದಿರುವ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತ ಕೆಲವು ವಿಚಾರ ಗಳನ್ನು ಸರ್ಕಾರದ ಗಮನಕ್ಕೆ ತರುವುದಲ್ಲದೆ ಇದನ್ನು ಕಾರ್ಯರೂಪಕ್ಕೆ ತರಬೇಕು ಎಂದು ಮತ್ತೊಮ್ಮೆ ಪ್ರಾರ್ಥನೆ ಮಾಡುತ್ತೇನೆ.

ವ್ಯವಸಾಯ ಎಂದರೆ ದೇಶದಲ್ಲಿ ಬಹಳ ಮುಖ್ಯವಾದ ವಿಚಾರ. ಪ್ರತಿಯೊಬ್ಬರಿಗೂ ದಿನ ಬೆಳಗಾದರೆ ವ್ಯವಸಾಯ. ನೂರಕ್ಕೆ 80 ಜನ ಹಳ್ಳಿಗಾಡಿನಲ್ಲಿರುವ ರೈತರಿಗೆ, ದುಡಿಯತಕ್ಕ ಜನಗಳಿಗೆ ಪ್ರೋತ್ಸಾಹವಿಲ್ಲ. ಜನಸಂಖ್ಯೆ ಜಾಸ್ತಿ ಆಗುತ್ತಿದೆಯೇ ಹೊರತು ಭೂಮಿ ಮಾತ್ರ ಹಿಗ್ಗುವುದಿಲ್ಲಾ ಚೆನ್ನಾಗಿ ತಿಳಿಯಬೇಕು. ಭೂಮಿ ಇದ್ದರೆ ಚೆನ್ನಾಗಿ ಬೆಳೆಯಬಹುದು. ಅದಕ್ಕೆ ರೈತರಿಗೆ ಬೇಕಾಗುವ ಸಲಕರಣೆಗಳು, ಗೊಬ್ಬರ, ಬೀಜ, ಮತ್ತು ಪ್ರತಿಯೊಂದು ಸಹಾಯವನ್ನೂ ಸರ್ಕಾರ ಕೊಡಬೇಕು. ಈ ಪದಾರ್ಥಗಳ ಬೆಲೆಯಲ್ಲಿ ಶೇಕಡ 50 ಭಾಗವನ್ನು ಸಬ್ಸಿಡಿಯಾಗಿ ಕೊಟ್ಟು ಉಳಿದುದನ್ನು ದುಡಿಮೆ ಮಾಡಿ ಬೆಳೆದ ಫಸಲಿನಲ್ಲಿ ತೀರಿಸಿ ಕೊಳ್ಳುವಂತೆ ಇರಬೇಕು. ನಾನು ಈ ಮಾನ್ಯ ಸಭೆಗೆ ಬಂದ ರಾಗಾಯ್ತು ಪ್ರತಿವರುಷ ಹೇಳುತ್ತಿದ್ದೇನೆ. ಆದರೆ ಯಾವುದೂ ಕಾರ್ಯರೂಪಕ್ಕೆ ಬಂದಿಲ್ಲ ಎಂದು ಹೇಳುತ್ತೇನೆ. ರೈತರಿಗೆ ಬಹಳ ಅನ್ಯಾಯವಾಗುತ್ತಿದೆ ಅವರಿಗೆ ನ್ಯಾಯ ದೊರಕಿಸಿಕೊಡಿ. ಸರ್ಕಾರಿ ನೌಕರಿಯಲ್ಲಿ ಇರುವವರಿಗೆ ಹೆಬ್ಬಾಳ್ ಅಗ್ರಿಕಲ್ ಕಾಲೇಜುಗಳನ್ನು ತೆಗೆದು ಬೆಂಗಳೂರಲ್ಲಿರುವವರಿಗೆ ವಿದ್ಯಾಭ್ಯಾಸಕ್ಕೆ ಅನುಕೂಲಮಾಡಿಕೊಡುತ್ತಿದ್ದೀರಿ. ಆದರೆ ರೈತರಿಗೆ ಯಾವ ವಿಧವಾದ ಸಹಾಯ ವನ್ನೂ ಮಾಡುತ್ತಿಲ್ಲ. ಕೆಮಿಕಲ್ ಎಗ್ಜಾಮಿನೇಷನ್ ಎಂದು ಹುಡುಗರನ್ನು ಓದಿಸುತ್ತೀರೇ ಹೊರತು ರಾಜ್ಯದ ಹೆಬ್ಬಾಳ್ ಕಾಲೇಜು ಬೆಂಗಳೂರಲ್ಲಿ ಮಾತ್ರ ಇರುತ್ತೆ, ಬೆಂಗಳೂರು ಬಿಟ್ಟು ಹೊರಗೆ

ಹೋಗಿರ್ಲಾ ನಾನಾ ಭಾಗದಲ್ಲಿ ಹತ್ತಿ, ಸೇಂಗಾ, ರಾಗಿ, ಬತ್ತ, ಮೆಣಸಿನಕಾಯಿ, ಹೀಗೆ ಪ್ರತಿಯೊಂದಕ್ಕೂ ರೋಗವನ್ನು ತಡೆಗಟ್ಟುವ ಕಾರ್ಯ ಸರಿಯಾಗಿ ಮಾಡುವುದಿಲ್ಲ. ರೈತನಾದವನು ರೋಗ ನಿವಾರಣೆ ಮಾಡಿಕೊಳ್ಳಬೇಕಾದರೆ ಅವನಿಗೆ ದುಡ್ಡಿನ ತೊಂದರೆ ಇದೆ. ಅವನು ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿ ಅಧೋಗತಿಗೆ ಬರುತ್ತಿದ್ದಾನೆ. ರೈತರಿಗೆ ಬೇಕಾದ ಕೃತಕ ಗೊಬ್ಬರ, ಮುಂತಾದುವುಗಳ ಬೆಲೆ ದಿನೇ ದಿನೇ ಏರುತ್ತಿದೆ. ಅಮೋನಿಯಾ ಸಲ್‌ಫೇಟ್‌ನ ಬೆಲೆ 280 ರೂಪಾಯಿ ಇದೆ. ಅದು ನಮ್ಮ ರಾಜ್ಯದಲ್ಲಿ ಎಲ್ಲಿಯೂ ಸ್ಟಾಕಿಲ್ಲ ಎಂದು ಹೇಳುತ್ತಿದ್ದಾರೆ. ನಾವು ಕೇಳಿದರೆ ಸೂಪರ್ ಫಾಸ್ಪೇಟ್ ಪಾಮಾರಾಸ್ ಉಪಯೋಗಿಸಿ ಎನ್ನುತ್ತಾರೆ. ಅದರ ಬೆಲೆ 570 ರೂಪಾಯಿ ಇದೆ. ಇದರ ಬೆಲೆ ಬಹಳ ಜಾಸ್ತಿ. ರೈತರಿಗೆ ಬೇಕಾದ ಸಾಮಾನುಗಳು ಸಕಾಲದಲ್ಲಿ ಸಿಕ್ಕುತ್ತಿಲ್ಲ.

ವ್ಯವಸಾಯ ಇಲಾಖೆಯಲ್ಲಿ ಬಹಳ ಅತೃಪ್ತಿ ರೈತರಿಗೆ ಇದೆ. ಅವರಿಗೆ ಸರಿಯಾದ ಉತ್ತೇಜನ ಕೊಡುತ್ತಿಲ್ಲ. ಆ ಇಲಾಖೆಗೆ ಜನ ಜಾಸ್ತಿಯಾಗಬೇಕಾದರೆ ದುಡ್ಡು ಜಾಸ್ತಿ ಕೊಡಬೇಕು. ರೈತರಿಗೆ ಉಪಕಾರ ಮಾಡಬೇಕಾದರೆ ಹೆಚ್ಚು ದುಡ್ಡನ್ನು ಕೊಡಬೇಕು. ರೈತನಿಗೆ ಗೊಬ್ಬರ, ಸರಿಯಾದ ಬೀಜ ಸಲಕರಣೆಗಳು ಇವನ್ನೆಲ್ಲ ಕೊಟ್ಟರೆ ವ್ಯವಸಾಯದಿಂದ ಹೆಚ್ಚು ಪ್ರತಿಫಲ ಬರುತ್ತದೆ. ಬರೀ ಭೂಮಿ ಇದ್ದರೆ ಆಗುವುದಿಲ್ಲ. ದನಗಳಿಗೆ ರೋಗ ಬಂದರೆ ವ್ಯವಸಾಯ ಇಲಾಖೆಯವರು ಹೇಗೆ ಕೆಲಸ ಮಾಡುತ್ತಾರೆಯೋ ಹಾಗೆಯೇ ವ್ಯವಸಾಯ ಇಲಾಖೆಯಲ್ಲಿಯೂ ಒಂದು ವಾಹನವನ್ನು ಇಟ್ಟುಕೊಂಡು ಬೆಳೆಗೆ ರೋಗ ತಗುಲಿದಾಗ ಅದನ್ನು ನಿವಾರಣೆ ಮಾಡಿ ಮುಂದೆ ಹರಡದಂತೆ ಮಾಡಬೇಕು. ಇದರ ಕಡೆ ಸ್ವಲ್ಪವಾದರೂ ಯೋಚನೆ ಮಾಡಬೇಡವೇ ? ರೈತರ ಮೇಲೆ ಕಂದಾಯವನ್ನು ಹೇರಿ ವಸೂಲ್ಮಾಡುತ್ತೀರಿ.

ಬ್ಲಾಕುಗಳಲ್ಲಿ ವ್ಯವಸಾಯ ಇಲಾಖೆ, ಸಹಕಾರ ಇಲಾಖೆ, ಅಭಿವೃದ್ಧಿ ಇಲಾಖೆ ಈ ಮೂರು ಇಲಾಖೆಗಳಲ್ಲಿಯೂ ಹೊಂದಾಣಿಕೆಯೇ ಇಲ್ಲ. ಅವರ ಮೇಲೆ ಇವರು ಹೇಳುತ್ತಾರೆ, ಇವರ ಮೇಲೆ ಅವರು ಹೇಳುತ್ತಾರೆ. ಆಳಿನ ಮೇಲೆ ಆಳು ಬಿದ್ದು ಗೋಣಿ ನಾಶವಾಯಿತು ಎನ್ನುವ ಹಾಗೆ ಆಗಿದೆ. ಈ ಇಲಾಖೆಗಳು ಹೊಂದಾಣಿಕೆಯಿಂದ ಕೆಲಸ ಮಾಡುವುದು ಯಾವಾಗ ? ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಹಂತ ಹಂತಕ್ಕೂ ಒಬ್ಬ ಅಧಿಕಾರಿ ಇರುವಂತೆ ಈ ಎಲ್ಲ ಇಲಾಖೆಗಳಿಗೂ ಇರಬೇಕು.• ಆದರೆ ಈಗ ಒಬ್ಬರ ಆರ್ಡರನ್ನು ಒಬ್ಬರು ಪಾಲಿಸುವುದಿಲ್ಲ.

ರೈತರಿಗೆ ಬೇಕಾದ ಕುಳ, ಗಾಡಿಪಟ್ಟೆ ಇವುಗಳನ್ನೆಲ್ಲ ರೈತನಿಗೆ ಸುಲಭವಾಗಿ ಸಿಕ್ಕುವಂತೆ ಮಾಡಬೇಕು. ರೈತನು ಬೆಳೆಯುವ ಪದಾರ್ಥಗಳಿಗೆ ಮಾತ್ರ ಪ್ರತಿಬಂಧಕವನ್ನು ಹಾಕುತ್ತಾರೆ. ಅವನು ಬೆಳೆಯತಕ್ಕ ಬೆಳೆಗೆ ಬೆಲೆ ಕಟ್ಟುವುದಕ್ಕೆ ನಿಮಗೆ ಹಕ್ಕಿರುವುದಿಲ್ಲ. ನಾನು ಈ ಸಭೆಯ ಸದಸ್ಯನಾಗಿರುವುದರಿಂದ ಸರ್ಕಾರ ಹೇಳಿದಕ್ಕೆ ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಈ ರೈತನಿಗೆ ಯಾವ ರೀತಿಯ ಸಹಾಯವನ್ನು ಕೊಡುತ್ತೀರಿ ಎಂದು ಕೇಳುತ್ತೇನೆ. ಈಗ ಬೆಲ್ಲದ ಧಾರಣೆ ಮೂರು ನಾಲ್ಕು ರೂಪಾಯಿ ಆಗಿದೆ. ಸರ್ಕಾರ ಈ ಬಗ್ಗೆ ರೈತನ ಸಹಾಯಕ್ಕೆ ಬರದ ನಿರ್ಲಕ್ಷ್ಯದಿಂದ ಇದೆ. ಬೆಲೆ ಬಹಳ ಇಳಿದಿರುವಾಗ ಸರಿಯಾದ ಬೆಲೆಗೆ ಕೊಂಡುಕೊಳ್ಳುವುದಕ್ಕೆ ಸರ್ಕಾರ ಮುಂದೆ ಬರುವುದಿಲ್ಲ. ಜಪಾನ್ ದೇಶದಲ್ಲಿ ಏನು ಮಾಡುತ್ತಾರೆ ಎಂದರೆ ಬೆಳೆ ತೆಗೆಯುವುದಕ್ಕೆ ಮುಂಚೆಯೇ ಪ್ರತಿಯೊಂದರ ಧಾರಣೆಯನ್ನೂ ಗೊತ್ತು ಮಾಡುತ್ತಾರೆ. ಯಾವ ಪದಾರ್ಥದ ಬೆಲೆ ಜಾಸ್ತಿ ಇರುತ್ತದೆಯೋ ಅದನ್ನು ರೈತರು ಜಾಸ್ತಿ ಬೆಳೆಯುತ್ತಾರೆ. ಆ ದೃಷ್ಟಿಯಿಂದ ಬೆಳೆಯುವುದರಿಂದ ನಮಗೆ ಆ ಪದಾರ್ಥ ಸಿಕ್ಕುತ್ತದೆ. ನಮ್ಮಲ್ಲಿ ಬೆಳೆ ಬಂದಮೇಲೆ ಬೆಲೆಯನ್ನು ನಿಷ್ಕರ್ಷೆ ಮಾಡುತ್ತಾರೆ. ಆ ವೇಳೆಗೆ ಅದು ಹೊರಗಡೆಗೆ ಹೋಗಿರುತ್ತದೆ. ಜೋಳದ ಬೆಳೆ ಬಂದ ಎಷ್ಟೋ ಕಾಲವಾದ ಮೇಲೆ ಅದರ ಮೇಲೆ ಕಂಟ್ರೋಲ್ ಈಗ ಹಾಕಿದ್ದಾರೆ. ಆದ್ದರಿಂದ ಟ್ರೇಡಿಂಗ್ ಸರಿಯಾಗಿ ಮಾಡುತ್ತಿಲ್ಲ. ಅನ್ಯಾಯವಾಗುತ್ತಿದೆ. ಈ ಇಲಾಖೆಯನ್ನು ಪ್ರತ್ಯೇಕ ಮಾಡಿ ಒಂದು ಆಫೀಸು ಮಾಡಿದರೆ ಅನುಕೂಲವಾಗುತ್ತದೆ. ಒಳ್ಳೆಯ ಬೆಳೆ ಬರುವ ಕಾಲದಲ್ಲಿ ಸರಿಯಾದ ಗೊಬ್ಬರ ವಗೈರೆ ಅನುಕೂಲಗಳು ಇಲ್ಲ. ಇದರಿಂದ ತುಂಬಾ ತೊಂದರೆಯಾಗುತ್ತದೆ.

4-30 P.M.

ಇನ್ನು ರಿಸರ್ಚ್ ವಿಷಯ. ಹೆಚ್ಚು ಹೆಚ್ಚಾಗಿ ಬೆಳೆಗಳನ್ನು ಬೆಳೆಯಬೇಕಾದರೆ ಒಂದು ಸೆಂಟರ್ ಮಾಡಬೇಕು. ನಾವು ರೈತರಿಗೆ ಹೀಗೆ ಬೆಳೆಯಿರಿ ಎಂದು ಹೇಳುವಾಗ ಅವರಿಗೆ ಸರಿಯಾದ ಸೌಕರ್ಯಗಳನ್ನು ಕೊಡದೆ ಇದ್ದರೆ ಏಕೆ ಪ್ರೊಪಗ್ಯಾಂಡ ಎಂದು ನಾನು ಕೇಳುತ್ತೇನೆ. ಅವೆಲ್ಲಾ ಪುಸ್ತಕದಲ್ಲಿದೆಯಷ್ಟೆ. ವ್ಯವಸಾಯ ಶಾಖೆ ನಿದ್ದೆ ಮಾಡುತ್ತಾ ಇದೆ. ಗ್ರಾಮಸೇವಕರನ್ನು ಅನೇಕ ಕಡೆಗಳಲ್ಲಿ ನೇಮಿಸಿಲ್ಲ ಸಹಕಾರ ತತ್ವವನ್ನು ಆಚರಣೆಗೆ ತರುವುದರಲ್ಲಿ ಅವರ ಮೇಲೆ ಇವರು ಇವರ ಮೇಲೆ ಅವರು ಜವಾಬ್ದಾರಿಯನ್ನು ಹೊರಿಸಿ ಹೀಗೆ ಒಬ್ಬರಿಗೊಬ್ಬರು ಸರಿಯಾಗಿ ದಕ್ಷತೆಯಿಂದ ಕೆಲಸ

(ಶ್ರೀ ಕುಂದೂರು ರುದ್ರಪ್ಪ)

ನಿರ್ವಹಿಸುತ್ತಿಲ್ಲ. ಇದರಿಂದ ರೈತರು ಕೆಟ್ಟು ಹೋಗುತ್ತಾರೆ. ಸುಮ್ಮನೆ ರಿಕಾರ್ಡ್ ಮಾಡಿದರೆ ಪ್ರಯೋಜನವಾಗುವುದಿಲ್ಲ. ಈ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕು. ರೈತರಿಗೆ ಹೆಚ್ಚು ಪ್ರೋತ್ಸಾಹ ಬೇಕು.

ಹಿಂದೆ ಶ್ರೀಮಾನ್ ಹೆಚ್. ಎಸ್. ರುದ್ರಪ್ಪನವರು ಮಂತ್ರಿಗಳಾಗಿದ್ದಾಗ ನಾನು ಸದಸ್ಯನಾಗಿದ್ದೆ. ಆಗ ಫಾರೆಸ್ಟ್, ಅಗ್ರಿಕಲ್ಚರ್ ವಿಷಯವಾಗಿ ಮಾತನಾಡಿ ನಮ್ಮ ತಾಲ್ಲೂಕಿನ ಮಲಾಳ ಫಾರೆಸ್ಟ್ ರಿಜೀಜ್ ಮಾಡಿ ಸಾಗುವಳಿಗೆ ಕೊಡಲು ಕೇಳಿದ್ದೆ ಒಂದು ಕಾಡಿನಲ್ಲಿ ಸಾವಿರ ಎಕರೆಗಳಷ್ಟು ಜಮೀನು ಇದೆ ಅದನ್ನು ರಿಲೀಜ್ ಮಾಡಿ ರೈತರಿಗೆ ಕೊಡಿ. ಆ ವಿಷಯವಾಗಿ ಏನು ತೀರ್ಮಾನ ತೆಗೆದುಕೊಂಡರೋ ಗೊತ್ತಿಲ್ಲ. ಸುಮ್ಮನೆ ಏತಕ್ಕೋಸ್ಕರ ಜಮೀನು ರಿಲೀಜ್ ಮಾಡ್ಸಿ ಕೊಡದೆ ಕಾಲಹರಣ ಮಾಡುತ್ತಾರೋ ತಿಳಿಯದು. ರೆವಿನ್ಯೂ ಇಲಾಖೆಯವರನ್ನ ಕೇಳಿದರೆ ಇನ್ನೂ ರಿಲೀಜ್ ಆಗಿಲ್ಲಾ ಎಂದು ಹೇಳುತ್ತಾರೆ. ಆದ್ದರಿಂದ ಅವನ್ನು ಪರಿಶೀಲಿಸಬೇಕು ನೀರಾವರಿ ಚಾನಲ್ ಏರಿಯಾದಲ್ಲಿ ಪ್ಯಾಕೇಜ್ ಸ್ಕೀಮುಗಳು ಅವಶ್ಯಕವಿದೆಯೋ ಅಲ್ಲೆಲ್ಲಾ ಕೊಡಬೇಕು. ಇನ್ನು ಕೋಟ್ಯಾಂತರ ರೂಪಾಯಿಗಳನ್ನು ನೀರಾವರಿಗಾಗಿ ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಬಾವಿಗಳಿಗಾಗಿ ಹೆಚ್ಚಾಗಿ ಹಣವನ್ನು ಕೊಡಬೇಕು. ಆಗ ಸುಲಭವಾಗಿ ರೈತರಿಗೆ ಸೌಕರ್ಯ ಒದಗುತ್ತವೆ. ಸಾಲ ವಗೈರೆ, ಬುಲ್‌ಡೋಜರುಗಳ ಅನುಕೂಲಗಳನ್ನು ರೈತರಿಗೆ ಕಲ್ಪಿಸಿ ಕೊಡಬೇಕು. ಆಗ ಜಮೀನು ಸಾಗುವಳಿ ಮಾಡುವುದಕ್ಕೆ ಅನುಕೂಲವುಂಟಾಗುತ್ತದೆ. ಒಂದಕ್ಕೆ 10-20 ರಷ್ಟು ಬೆಳೆಯಬಹುದು. 1957ನೇ ಇಸವಿಯಲ್ಲಿ ಜನಸಂಖ್ಯೆ 1 ಲಕ್ಷ. ನನ್ನ ತಾಲ್ಲೂಕಿನಲ್ಲಿಯೇ ಈಗ ಒಂದೂವರೆ ಲಕ್ಷ ಜನ ಹೆಚ್ಚಿದ್ದಾರೆ. ಒಂದು ಸರಿಯಾದ ಕೈಗಾರಿಕೆ ಸ್ಕೂಲು ಇದೆಯೇ ಎಂದರೆ ಅಂತಹ ಸೌಕರ್ಯವೇ ಇಲ್ಲ. ಮಾಡಲ್ ಕಾಲೋನಿನಲ್ಲಿ ಸುಮಾರು ಐದೂವರೆ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಬೇಕಾದಷ್ಟು ಕಟ್ಟಡಗಳನ್ನು ಕಟ್ಟಿಸಿದ್ದಾರೆ. ವಿದ್ಯಾ ಇಲಾಖೆ ಮಂತ್ರಿಗಳು ಭೇಟಿ ಮಾಡಿದಾಗ ಇಲ್ಲಿಗೆ ಟ್ರೈನಿಂಗ್ ಸ್ಕೂಲು, ಬೇಸಿಕ್ ಸ್ಕೂಲುಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಒಂದೂ ಕಾರ್ಯತಃ ನಡೆಯುತ್ತಾ ಇಲ್ಲ. ಹೀಗಿರುವಾಗ ಏಕೆ ನಮಗೆ ಸುಳ್ಳು ಹೇಳಬೇಕು. ಇನ್ನು ಪಂಪ್‌ಸೆಟ್ಟುಗಳನ್ನು ಹಂಚುತ್ತೇವೆಂದು ಹೇಳುವ ಕಾರ್ಯದಲ್ಲೂ ಇವರು ಅಶಕ್ತರಾಗಿದ್ದಾರೆ. ಸರ್ಕಾರದ ದುಡ್ಡನ್ನು ವೇಸ್ಟ್ ಮಾಡಬಾರದು ಸುಮ್ಮನೆ ಮುಖ್ಯಮಂತ್ರಿಗಳು ಬಂದ ಕಾಗದಕ್ಕೆ for necessary action ಎಂದು ಬರೆದರೆ ಸಾಕೆ, ಆ ರೀತಿ ಬರೆದಾಕ್ಷಣಕ್ಕೆ ಜನ ತೃಪ್ತಿ ಪಡೆಯುತ್ತಾರೆಯೇ ? ಇವರು ಆಡಳಿತವನ್ನು ಸರಿಯಾಗಿ ನೋಡುತ್ತಿಲ್ಲ. ಅನ್ಯಾಯವಾಗುತ್ತಿರುವುದನ್ನು ಕೂಡಲೇ ಸರಿಪಡಿಸಬೇಕು. ಇನ್ನು ರೈತರ ಮೇಲೆ ಕಂದಾಯ ಹೊರೆ ಹೇರುತ್ತಿದ್ದಾರೆ. ಇವರ ಸ್ಥಿತಿಗತಿಗಳನ್ನು ಕೂಡ ಸ್ವಲ್ಪಮಟ್ಟಿಗೆ ಯೋಚನೆ ಮಾಡಬೇಕು. ಬೆಲ್ಲದ ಧಾರಣೆ 4 ರೂಪಾಯಿ ಅಥವಾ 5 ರೂಪಾಯಿಗಳಾದರೆ ಹೇಗೆ ? ನಾಳೆ ಇನ್ನೂ ಕಡಮೆಯಾಗುವುದಾದರೆ ಆ ವಿಚಾರವನ್ನು ಏತಕ್ಕೆ ಯೋಚನೆ ಮಾಡಬೇಕು ಸರ್ಕಾರದ ಬೆನ್ನುಮೂಳೆಯಂತೆ ರೈತರು ಇದ್ದಾರೆಂದು ಇವರೇ ಹೇಳುತ್ತಿದ್ದಾರೆ. ಇಂತಿಂಥ ಪದಾರ್ಥಕ್ಕೆ ಇಷ್ಟೇ ಬೆಲೆಯೆಂದು ಇವರು ನಿರ್ಧಾರಮಾಡಲಿ ಹೆಚ್ಚಿಗೆ ಆಹಾರ ಅದರಿಂದ ಹೆಚ್ಚಿಗೆ ಬೆಳೆ ಕೊಡುತ್ತಾರೆ. ಇವರು ಇದನ್ನು ಮಾಡುವುದಕ್ಕಾಗುವುದಿಲ್ಲವೆಂದರೆ, ಏನು ಸ್ವಾಮಿ ನ್ಯಾಯ ? ನಿಜವಾಗಿ ವ್ಯವಸಾಯ ಮಾಡುವವರಿಗೆ ಸುಮ್ಮನೆ ತೊಂದರೆ ಕೊಡುವುದು ಸರಿಯಲ್ಲ. ಈಗ ಬೇಕಾದಷ್ಟು ಕೇಂದ್ರ ಸರ್ಕಾರದವರು ಎಲ್ಲಾ ಡೆವಲಪ್‌ಮೆಂಟು ಗ್ರಾಂಟು ನಮ್ಮ ಸರ್ಕಾರ ಏಕೆ ಹೆಚ್ಚಿಗೆ ಗ್ರಾಂಟು ಕೇಳುವುದಿಲ್ಲವೋ ಗೊತ್ತಿಲ್ಲ. ಈ ವಿಚಾರದಲ್ಲಿ ರೈತರಿಗೆ ಏನು ಹೇಳುವುದೂ ಸಹ ನನಗೆ ತಿಳಿಯಲಿಲ್ಲ. ಕೇಂದ್ರ ಸರ್ಕಾದವರು ಕೊಡತಕ್ಕ ದುಡ್ಡನ್ನು ಪೂರ್ತಿ ಖರ್ಚುಮಾಡಬೇಕು. ಒಂದು ವೇಳೆ ಆ ರೀತಿ ಖರ್ಚು ಮಾಡದೇ ಇರುವ ಅಧಿಕಾರಿಗಳಿಗೆ ವಿಚಾರಣೆ ಹಾಕಬೇಕು ಸಬ್ಸಿಡಿ ಬೇಕಾದರೆ ಅದನ್ನೂ ಸಹ ರೈತರಿಗೆ ಕೊಡಬೇಕು. ಸಬ್‌ಸಿಡಿ ರೈತರಿಗೆ ಸಲ್ಲುತ್ತಿಲ್ಲ ನಮ್ಮ ಊರಿಗೆ 15 ಮೈಲಿ ದೂರದಲ್ಲಿ ದಾವಣಗೆರೆ ಇದೆ. ಅಲ್ಲಿ ಒಂದು ಮೂಟೆ ಗೊಬ್ಬರಕ್ಕೆ 26 ರೂಪಾಯಿ ಇದ್ದರೆ ನನ್ನ ಹೋಬಳಿಯಲ್ಲಿ ಅಲ್ಲಿಂದ ಅದನ್ನು ತಂದು 28 ರೂಪಾಯಿಗೆ ಮಾರುತ್ತಾರೆ. ಬೆಂಗಳೂರಿನಲ್ಲಿ 119 ರೂಪಾಯಿಗಳಿಗೆ ಕೊಡುತ್ತಾರೆ. ಸಕ್ಕರೆ ನಮ್ಮಲ್ಲಿ 127. ಹೀಗೆ ರೈತರ ತಲೆಯನ್ನು ಹೊಡೆಯುತ್ತಿದ್ದಾರೆ. ಯಾರಿಗೆ ಅನ್ಯಾಯವೆಂಬುದನ್ನು ಸರ್ಕಾರ ಯೋಚನೆಮಾಡಬೇಕು. ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರುತ್ತಾರೆ. ಇದೆಲ್ಲವನ್ನೂ ಕೂಡಲೆ ತಪ್ಪಿಸಬೇಕು, ರೈತರಿಗೆ ಸಾಕಷ್ಟು ಗೊಬ್ಬರ, ಸರ್ಟಿಫೈಡ್ ಬೀಜ ಬೇಕು ಎಂದು ಹೇಳುತ್ತೇನೆ. ದೇಶದ ಸಂಪತ್ತು ಬಹಳವಾಗಿ ಹಿಂದುಳಿದಿದೆ. ಜನಗಳು ವ್ಯವಸಾಯದಲ್ಲಿ ಉತ್ಸಾಹದಲ್ಲಿದ್ದರೂ ತಕ್ಕ ಪ್ರೋತ್ಸಾಹ ಸಾಲದು. ರೈತರಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟು ಅವರನ್ನು ಉದ್ಧಾರಮಾಡಿ. ರಾಗಿ ಮತ್ತು ಜೋಳದ 10 ರಷ್ಟು ಜಾಸ್ತಿ ಇದೆ ಎಂದು ಹೇಳುತ್ತಿದ್ದೀರಿ: ಹಿಂದೆ ರೈತನ ಜೀವನವೇ ಹಾಳಾಗಿ

ಹೋಗಿತ್ತು. ಅನೇಕ ರೈತರು ಅಗ್ಗೆ ಮನೆಮಠಗಳನ್ನು ಒತ್ತೆ ಇಟ್ಟು ಕಂದಾಯವನ್ನು ಕಟ್ಟುವ ಪರಿಸ್ಥಿತಿ ಇರಲಿಲ್ಲಾ. ಆದ್ದರಿಂದ ಅವನು ಬೆಳೆಯತಕ್ಕ ಮಾಲಿಗೆ ಸರ್ಕಾರ ಒಂದು ಬೆಲೆಯನ್ನು ನಿಗದಿಮಾಡುವುದು ಒಳ್ಳೆಯದು. ಕಂಟ್ರೋಲ್ ಬೆಲೆಯಲ್ಲಿ ಅವನು ಬೆಳೆಯತಕ್ಕ ಮಾಲುಗಳನ್ನು ಮಾರಬೇಕೆಂದು ಕಡ್ಡಾಯವಾಗಿ ಸರ್ಕಾರ ಆಜ್ಞೆ ಮಾಡಬೇಕು.

ಇನ್ನು ಸೀಡ್ ಫಾರಂ ವಿಷಯ. ಅದು ನಿಜವಾಗಿ hopeless ಆಗಿದೆ. ಇದನ್ನು ಕೂಡಲೇ ತೆಗೆದುಹಾಕಬೇಕು. ಇದಕ್ಕೆ ಖರ್ಚು ಮಾಡಬೇಕಾದರೆ ಒಂದು ಪಲ್ಲಾಕ್ಕೆ 50-60 ರೂಪಾಯಿಗಳು ಬೇಕಾಗುತ್ತದೆ. ಅಂದಮೇಲೆ ರೈತರಿಗೆ ಆ ಹಣವನ್ನೇ ರೈತರಿಗೆ ಕೊಟ್ಟರೆ ಚೆನ್ನಾಗಿ ಬೆಳೆಯುತ್ತಾರೆ. ನಮ್ಮ ಮಾಲನ್ನು ಕೊಡತಕ್ಕ ಏಜೆನ್ಸಿ ಯಾರು ? ನಮ್ಮ ಸೊಸೈಟಿಗಳನ್ನು ನಿಜವಾಗಿ ರಿಜಿಸ್ಟರ್ ಮಾಡಿಸಿದ್ದೀರಾ ? ಕೇಳುವವರು ದಿಕ್ಕಿಲ್ಲ.

ಇನ್ನು ಹತ್ತಿ ಬೀಜದ ವಿಷಯವನ್ನು ಹೇಳುವುದಾದರೆ ಈ ವರ್ಷದಲ್ಲಿ ಸಾಕಷ್ಟು ಹತ್ತಿ ಬೆಳೆ ಬರಲಿಲ್ಲ. ಬೀಜ ಒಳ್ಳೆಯದನ್ನು ಕೊಟ್ಟರೆ ಚೆನ್ನಾಗಿ ಆ ಬೆಳೆಯನ್ನು ಬೆಳೆಯುತ್ತೇವೆ. ಹೋದ ವರ್ಷ ಎಲ್ಲಾ ಹುಲ್ಲು ಬಿದ್ದಿರಬಹುದು ಎಂದು ನಾನು ಹೇಳಬೇಕಾಗಿದೆ. ನಾನು ಆ ವ್ಯವಸಾಯ ವನ್ನು ಸ್ವಂತವಾಗಿ ಮಾಡುವವನು. ಚರೋ ಬೀಜಗಳನ್ನು ಕೊಟ್ಟರೆ ಚೆನ್ನಾಗಿ ಹತ್ತಿ ಬರುತ್ತೆ. ಒಳ್ಳೆಯ ಬತ್ತ ಇಂಡಿಯಾ ಜಪಾನಿಕಾ. ಬತ್ತ ಮಂಡ್ಯದಲ್ಲಿ ಸಿಗುತ್ತದೆ. ಎಲ್ಲಾ ಕಡೆಗಳಲ್ಲೂ ಒಳ್ಳೆಯ ಬೀಜಗಳನ್ನು ಕೊಟ್ಟು ಈ ಬೆಳೆಯನ್ನು ಪ್ರೋತ್ಸಾಹ ಮಾಡಬೇಕು. ಇನ್ನು ಕಬ್ಬಿನ ಬೀಜ ವನ್ನು ಸಹ ಶೇಕಡ 50 ರಷ್ಟು ಎಕರೆಗೆ ಸಹ ಸರಬರಾಜು ಮಾಡುತ್ತಿಲ್ಲ. ಈ ಬೆಳೆಯಲ್ಲಿ ದುಡಿಮೆ ಮಾಡುವವರು ಸರ್ಕಾರಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಅರಣ್ಯ ಮಂತ್ರಿಗಳು, ಆಹಾರ ಮಂತ್ರಿಗಳು, ಸಹಕಾರ ಮಂತ್ರಿಗಳು, ಹೊಂದಾಣಿಕೆ ಇಟ್ಟುಕೊಂಡು ರೈತರ ಕಷ್ಟವನ್ನು ಶೀಘ್ರ ವಾಗಿ ಬಗೆಹರಿಸಬೇಕು. ಇಲ್ಲಿ ನಾವು ಹೇಳುವ ಮಾತು ಒಂದು ಕೂಡ ಕಾರ್ಯರೂಪಕ್ಕೆ ಬರುತ್ತಿಲ್ಲ. ಅಧ್ಯಕ್ಷರು ಈ ವರ್ಷ ಆಯವ್ಯಯ ಅಧಿವೇಶನದಲ್ಲಿ ಸಾಕಷ್ಟು ಸಮಯ ಕೊಟ್ಟಿಲ್ಲ.

ಅಧ್ಯಕ್ಷರು.—ತಮಗೆ ಕೊಟ್ಟ ಸಮಯದವರೆಗೆ ಮಾತನಾಡಿ. ನಾನು ಟೈಂ ನೋಡುತ್ತಿದ್ದೇ ನಷ್ಟೆ.

ಶ್ರೀ ಕುಂದೂರು ರುದ್ರಪ್ಪ.—ಮಾನ್ಯ ಅಧ್ಯಕ್ಷರು ಈ ಸಾರಿ ಮಾತ್ರ ನನಗೆ ಮಾತನಾಡಲು ತುಂಬಾ ಅಭಿಮಾನದಿಂದ ಹೆಚ್ಚು ಅವಕಾಶವನ್ನು ಕೊಟ್ಟರು. ಅದಕ್ಕಾಗಿ ತುಂಬ ವಂದನೆಗಳು. ಜಪಾನ್‌ನಲ್ಲಿ ಯಾವ ರೀತಿ ವ್ಯವಸಾಯ ಅಭಿವೃದ್ಧಿಯಾಗುತ್ತಿದೆಯೋ ಅದಕ್ಕಿಂತಲೂ ಹೆಚ್ಚಿಗೆ ನಾವೂ ಸಹ ವ್ಯವಸಾಯ ಅಭಿವೃದ್ಧಿ ಮಾಡುತ್ತೇವೆ. ಹೆಚ್ಚಿಗೆ ಬೆಳೆಗಳನ್ನು ಬೆಳೆಯುತ್ತೇವೆಂದು ಡಿಕ್ಲೇರ್ ಮಾಡುತ್ತೇವೆ ಆದರೆ ಸರ್ಕಾರದವರು ಸರಿಯಾಗಿ ವ್ಯವಸಾಯ ಮಾಡಲು ಬೆಳೆಗಳಿಗೆ ಯಾವ ರೋಗವೂ ಬಾರದಂತೆ ನೋಡಿಕೊಳ್ಳುವ ಬಗ್ಗೆ ಹೆಚ್ಚಿಗೆ ಪ್ರೋತ್ಸಾಹ ಕೊಟ್ಟರೆ ನಾವು ಖಂಡಿತವಾಗಿ ಹೆಚ್ಚು ಹೆಚ್ಚು ಆಹಾರಧಾನ್ಯಗಳನ್ನು ಬೆಳೆಯಬಹುದು ಎಂಬುದಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸನ್ಮಾನ್ಯ ಸಭಾಧ್ಯಕ್ಷರೇ, ಈಗ ಈ ಸಭೆಯ ಮುಂದಿಟ್ಟಿರುವ ಎಲ್ಲಾ ಬೇಡಿಕೆಗಳನ್ನೂ ಅನುಮೋದಿಸುತ್ತಾ ಫಾರೆಸ್ಟ್ ಇಲಾಖೆಯ ಬಗ್ಗೆ ನಾನು ಒಂದೆರಡು ಮಾತುಗಳನ್ನು ಆಡಬೇಕೆಂದಿದ್ದೇನೆ. ಮೊದಲನೆಯದಾಗಿ ಶಿವಮೊಗ್ಗ ಜಿಲ್ಲೆಯು ಅರಣ್ಯ ಸಂಪತ್ತಿನಿಂದ ಕೂಡಿದೆ. ಈ ಇಲಾಖೆ ಬಗ್ಗೆ ಕೆಲವು ಸಲಹೆಗಳನ್ನು ಮಾಡಬೇಕೆಂದಿದ್ದೇನೆ. ಫಾರೆಸ್ಟ್ ಇಲಾಖೆಯಲ್ಲಿ 1900ನೆಯ ಇಸವಿಯಲ್ಲಿ ಮಾಡಿದ ರೂಲ್ಸುಗಳೊಂದನ್ನೂ ಬದಲಾವಣೆ ಮಾಡಿಲ್ಲ. ಅದು ಹಾಗೆಯೇ ಇದೆ. ಅದರ ಪರಿಣಾಮ ಏನಾಗುತ್ತಿದೆ ಎಂದರೆ ರಹದಾರಿ ಇಲ್ಲದೆ ಗಾಡಿಗಳಲ್ಲಿ ನಾಟಾಗಳನ್ನು ಕಳ್ಳಸಾಗಾಣಿಕೆಮಾಡಿಕೊಂಡು ಬಂದದ್ದನ್ನು ಹಿಡಿದು ಕೇಸು ಹಾಕಿದರೂ ಕೂಡ ಅದು ಸ್ಟ್ಯಾಂಡ್ ಆಗುವುದಿಲ್ಲ. ಅದರಿಂದ ಸಲೀಸಾಗಿ ಗಾಡಿಗಳಲ್ಲಿ ನಾಟಾಗಳನ್ನು ತುಂಬಿಕೊಂಡು ಹೋಗಿ ಮಾರಾಟ ಮಾಡುತ್ತಾರೆ. ಇದನ್ನು ತಿಳಿದೂ ಕೂಡ ಸರ್ಕಾರದವರು ರೂಲ್ಸನ್ನು ಬದಲಾವಣೆ ಮಾಡದೇ ಇರುವುದು ತುಂಬಾ ವಿಷಾದಕರ. ಅದನ್ನು ಆದಷ್ಟು ಬೇಗ ಬದಲಾವಣೆ ಮಾಡ ಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಕಳ್ಳತನದಿಂದ ಗಾಡಿಗಳಲ್ಲಿ ನಾಟಾ ಗಳನ್ನು ತುಂಬಿಕೊಂಡು ಹೋಗಿ ಜನಗಳು ಮಾರಾಟ ಮಾಡುವ ಬಗ್ಗೆ ಸರ್ಕಾರದವರು ಹೆಚ್ಚಿಗೆ ಗಮನವನ್ನು ಕೊಡಬೇಕು. ಮರಗಳನ್ನೇನೋ ಕಡಿಯುತ್ತೀರಿ. ಕಡಿದಷ್ಟು ಮರವನ್ನು ಲೆಕ್ಕ ಹಾಕಿ ವರ್ಷಕ್ಕೆ ಇಷ್ಟು ಅಂತ ಗೊತ್ತು ಮಾಡಿಕೊಂಡು ಮರಗಳನ್ನು ಹಾಕಲೇ ಬೇಕು. ಏನೋ ಅಲ್ಪಸಲ್ಪ ಮರಗಳನ್ನು ಹಾಕಿದರೆ ಅದರಿಂದೇನೂ ಪ್ರಯೋಜನ ವಾಗುವುದಿಲ್ಲ. ಮುಂದೆ ಬಹಳ ಕಷ್ಟವಾಗುತ್ತದೆ. ಪ್ಲಾಂಟೇಷನ್ ಬೆಳೆಸುವುದಕ್ಕೆ ಹೆಚ್ಚಿಗೆ ಗಮನಕೊಟ್ಟು ಅದರಲ್ಲಿ ಹೆಚ್ಚು ಬೆಲೆ ಬಾಳುವ ಮರಗಳನ್ನು ಹಾಕಿಸಬೇಕು. ಬರೀ ನೀಲಗಿರಿ ಮರಗಳನ್ನು ಹಾಕಿಸುವುದರಿಂದ ಸೌದೆಗೆ

(ಶ್ರೀಮತಿ ರತ್ನಮ್ಮ ಮಾಧವರಾವ್)

ಅನುಕೂಲವಾಗುತ್ತದೆ. ಆದರೆ ಅದರಿಂದ ಅರಣ್ಯ ಬೆಳೆಯುವುದಿಲ್ಲ. ಶಿವಮೊಗ್ಗದಿಂದ ಜೋಗಿಗೆ ಹೋಗುವ ದಾರಿಯಲ್ಲಿ ದಟ್ಟವಾಗಿದ್ದ ಕಾಡು ಮತ್ತು ಮರಗಳನ್ನೆಲ್ಲಾ ಕಡಿದು ಹಾಕಿ ಬರೀ ನೀಲಗಿರಿ ಮರಗಳನ್ನು ಹಾಕಿದ್ದಾರೆ. ಅದು ಏನಿದ್ದರೂ ಸೌದೆಗೆ ಅನುಕೂಲವಾಗುತ್ತದೆಯೇ ಹೊರತು ಬೇರೆ ಯಾವ ಸಾಮಾನುಗಳನ್ನೂ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಆ ಪ್ರದೇಶದಲ್ಲಿ ಬೆಳೆಬಾಳುವ ಮರಗಳನ್ನು ಹಾಕಿಸಬೇಕು. ಅರಣ್ಯವನ್ನು ಚೆನ್ನಾಗಿ ಬೆಳೆಸಬೇಕು. ಈಗ ನಮ್ಮ ರಾಜ್ಯದಲ್ಲಿ ವನ ಮಹೋತ್ಸವಗಳು ಸಮರ್ಪಕವಾಗಿ ನಡೆಯುತ್ತಿವೆ. ಅದನ್ನು ನಾವೂ ಕೂಡ ನೋಡುತ್ತಿದ್ದೇವೆ. ವನಮಹೋತ್ಸವದಲ್ಲಿ ಗಿಡಗಳು ಎಷ್ಟು ಬೆಳೆಯುತ್ತವೆ, ಯಾವ ಗಿಡ ಎಷ್ಟು ದೊಡ್ಡದಾಗಿದೆ, ಎನ್ನತಕ್ಕ ಕೆಲವು ವಿಷಯಗಳಲ್ಲಿ ಸರ್ಕಾರದವರು ಗಮನಕೊಡಬೇಕು. ಈಗಿನ ಅರಣ್ಯ ಶಾಖೆಯ ಮಂತ್ರಿಗಳು ಅರಣ್ಯವನ್ನು ಬೆಳೆಸತಕ್ಕ ವಿಷಯದಲ್ಲಿ ಪ್ರೋತ್ಸಾಹವನ್ನೇನೋ ಕೊಡುತ್ತಿದ್ದಾರೆ. ಅವರು ಈ ವಿಷಯದಲ್ಲಿ ಇನ್ನೂ ಹೆಚ್ಚು ಗಮನ ಕೊಟ್ಟರೆ ಒಳ್ಳೆಯದು. ಅವರು ಪ್ರವಾಸ ಮಾಡು ವಾಗ ಇದರ ಬಗ್ಗೆ ಗಮನ ಕೊಡಬೇಕು.

ಡಿಪೋಗಳಲ್ಲಿ ನಾಟಾಗಳು ಮತ್ತು ಪೋಲ್ಸ್‌ಗಳನ್ನು ಸರ್ಕಾರದವರು ಹರಾಜು ಮಾಡು ತ್ತಾರೆ. ಆ ರೀತಿ ಅವುಗಳನ್ನು ಹರಾಜು ಮಾಡುವಾಗ ಅವು ರೈತರಿಗೆ, ಸ್ಥಳದವರಿಗೆ ಸಿಗುವಂತೆ ಮಾಡಬೇಕು. ಸರ್ಕಾರದವರು ನಾಟಾಗಳು ಮತ್ತು ಪೋಲ್ಸ್‌ಗಳಿಗೆ ಏನು ರೇಟನ್ನು ಫಿಕ್ಸ್ ಮಾಡುತ್ತಾರೆಯೋ ಆ ರೇಟಿಗೇ ಅವು ರೈತರಿಗೆ ಸಿಕ್ಕುವಂತೆ ಮಾಡಬೇಕು. ಮರ್ಚೆಂಟ್ಸ್ ಹೊರಗಡೆ ಕಳುಹಿಸಲು ಅವುಗಳಿಗೆ ಜಾಸ್ತಿ ರೇಟನ್ನು ಮಾಡುವುದರಿಂದ ಅವು ಸ್ಥಳದವರಿಗೆ ಸಿಕ್ಕುವುದಿಲ್ಲ. ಇದ ರಿಂದ ರೈತರು ಬೇಸತ್ತು ಬೇರೆ ರೀತಿಯಲ್ಲಿ ಮರಗಳನ್ನು ತೆಗೆದುಕೊಳ್ಳಲು ಅವಕಾಶವಾಗುತ್ತದೆ. ಈಗ ಡಿಪೋಗಳಿಗೂ ಮತ್ತು ಅರಣ್ಯ ಶಾಖೆಯ ಕೆಲಸಕ್ಕೂ ಒಂದೇ ಸಿಬ್ಬಂದಿಯನ್ನು ನೇಮಕ ಮಾಡಿದ್ದಾರೆ. ಇದು ಸರಿಯಲ್ಲ. ಡಿಪೋಗಳಿಗೇ ಬೇರೆ ಸಿಬ್ಬಂದಿ ಇರಬೇಕು, ಅರಣ್ಯ ಶಾಖೆಯ ಕೆಲಸಕ್ಕೆ ಬೇರೆ ಸಿಬ್ಬಂದಿ ಇರಬೇಕು. ಆ ರೀತಿ ಸರ್ಕಾರದವರು ವ್ಯವಸ್ಥೆಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಫಾರೆಸ್ಟ್ ಗಾರ್ಡ್ಸ್‌ಗಳಿಗೆ ಸರಿಯಾದ ಸೇಫ್ಟಿ ಕೊಟ್ಟಿಲ್ಲ. 1 Gun ಕೊಡಬೇಕು ಕಳ್ಳಸಾಗಾಣಿಕೆಯಿಂದ ಮರಗಳನ್ನು ಸಾಗಿಸುವವರು 8—10 ಜನಗಳಿರುತ್ತಾರೆ. ಅಂಥಾ ಸಂದರ್ಭಗಳಲ್ಲಿ ಗಾರ್ಡು ಒಬ್ಬನೇ ಇದ್ದರೆ ಅವನನ್ನು ಮರಕ್ಕೆ ಕಟ್ಟಿಹಾಕಿ ಅವರು ತಮ್ಮ ಕೆಲಸವನ್ನು ಮಾಡಿಕೊಂಡು ಹೋಗುತ್ತಾರೆ. ಆದ್ದರಿಂದ ಫಾರೆಸ್ಟ್ ಗಾರ್ಡುಗಳಿಗೆ ಸರಿಯಾದಂತಹ ರಕ್ಷಣೆ ಯನ್ನು ಕೊಡಬೇಕು.

ಇನ್ನು ಅರಣ್ಯ ಇಲಾಖೆಯಲ್ಲಿ ಸಾಕಷ್ಟು ವರಮಾನ ಬಂದಿದೆ. ಮತ್ತು ಬರುತ್ತಿದೆ. ಹೀಗಿರು ವಾಗಿ ಫಾರೆಸ್ಟ್ ಇಲಾಖೆಯ ಕೆಳದರ್ಜೆ ನೌಕರರ ಸಂಬಳ ತೀರಾ ಕಡಿಮೆ ಇದೆ. ಆದ್ದರಿಂದ ಅವರಿಗೆ ಹೆಚ್ಚಿಗೆ ಸಂಬಳವನ್ನು ಕೊಡಬೇಕು. ಈ ಡಿಪಾರ್ಟ್‌ಮೆಂಟಿಗೆ ಹೆಚ್ಚಿಗೆ ಆದಾಯ ಇದೆ. ಆದ್ದರಿಂದ ಇವರಿಗೆ ಹೆಚ್ಚಿಗೆ ಸಂಬಳವನ್ನು ಕೊಟ್ಟರೆ ಅವರು ಹೆಚ್ಚಿಗೆ ಕೆಲಸವನ್ನು ಮಾಡುತ್ತಾರೆ ಈಗ ಪೋಲೀಸು ಇಲಾಖೆಯಲ್ಲಿ ಕಳ್ಳತನಮಾಡಿದವರನ್ನು ಹಿಡಿದವರಿಗೆ ಇಲಾಖೆಯಿಂದ ಬಹುಮಾನ ವನ್ನು ಕೊಡುತ್ತಾರೆ. ಅದೇ ರೀತಿ ಇಲ್ಲಿಯೂ ಕಾಡಿನಲ್ಲಿ ಮರ ಮುಂತಾದುವುಗಳನ್ನು ಕಳ್ಳತನದಿಂದ ಸಾಗಿಸತಕ್ಕವರನ್ನು ಹಿಡಿದವರಿಗೆ ಬಹುಮಾನವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇಲ್ಲದೇ ಇದ್ದರೆ ಇಷ್ಟು ಪರ್ಸೆಂಟೇಜ್ ಎಂದಾದರೂ ಅವರಿಗೆ ಕೊಡಬೇಕು. ಆ ರೀತಿ ಸರ್ಕಾರದವರು ಮಾಡುವುದಾದರೆ ಅವರು ಆ ಕೆಲಸದಲ್ಲಿ ತುಂಬಾ ಸಹಾಯ ಮಾಡಬಹುದು ಎನಿಸುತ್ತದೆ.

ಇನ್ನು ಈ ಅರಣ್ಯ ಇಲಾಖೆಯಲ್ಲಿ ಆನೆ ಡಾಕ್ಟರು ಎಂದು ಇದ್ದಾರೆ. ಅವರು ಹೆಚ್ಚು ಜನ ಇದ್ದಾರೋ ಇಲ್ಲವೋ ಅದು ನನಗೆ ಗೊತ್ತಿಲ್ಲ. ಇವರ ಪೈಕಿ ಕೆಲವರು 10—18 ವರ್ಷಗಳಿಂದ ಒಂದೇ ಕಡೆ ಇದ್ದಾರೆ. ಇವರುಗಳನ್ನು ಸ್ವಲ್ಪ ಬದಲಾವಣೆ ಮಾಡಬೇಕು. ಆನೆ ಡಾಕ್ಟರುಗಳಿಗೆ ಸಂಬಂಧಪಟ್ಟಹಾಗೆ ಏನೇನೋ ನಡೆಯುತ್ತಿದೆ. ಅದೆಲ್ಲವೂ ನಮಗೆ ಗೊತ್ತಾಗುವುದಿಲ್ಲ. ಆನೆಗಾಗಿ ಬರುವ ಬ್ರಾಂದಿ, ಆಹಾರ ಎಲ್ಲಿ ಏನೇನೋ ಆಗುತ್ತೆ. ಅದರ ಬಗ್ಗೆ ಸರ್ಕಾರದವರು ಸ್ವಲ್ಪ ನಿಗಾ ಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಈ ಅರಣ್ಯ ಇಲಾಖೆಯಲ್ಲಿ ಸೀನಿಯಾರಿಟಿ ಪ್ರಕಾರ ಲಿಸ್ಟ್ ತಯಾರು ಮಾಡಿಲ್ಲ. ಸೀನಿಯರ್ಸ್ ಮೇಲೆ ಜೂನಿಯರ್ಸ್ ಬಂದಿದ್ದಾರೆ. ಇದರಿಂದ ಈ ಇಲಾಖೆಯಲ್ಲಿ ಕೆಲಸ ಸರಿಯಾಗಿ ನಡೆಯುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಸೀನಿಯಾರಿಟಿ ಲಿಸ್ಟ್‌ನ್ನು ಜಾಗ್ರತೆಯಾಗಿ ಖಚಿತಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಮಲೆನಾಡಿನ ರಸ್ತೆಗಳು ಚೆನ್ನಾಗಿಲ್ಲ. ಶಿವಮೊಗ್ಗ ತಾಲ್ಲೂಕು ಆಯನೂರು-ಮಾಳೂರು-ಹಣಗೆರೆ ರೋಡು ಇವುಗಳಲ್ಲಿ ಫಾರೆಸ್ಟ್ ಇಲಾಖೆಯ ಲಾರಿಗಳು ಓಡಾಡುತ್ತಿರುತ್ತವೆ. ಆದ್ದರಿಂದ

ಅರಣ್ಯ ಇಲಾಖೆಯು ಉತ್ಪತ್ತಿಯಲ್ಲಿ ಈ ರಸ್ತೆಗಳ ರಿಪೇರಿಗಾಗಿ ಹಣವನ್ನು ಕೊಡಬೇಕು. ಅವರ ಪಕ್ಕದಲ್ಲಿರುವ P. W. D. ಮಂತ್ರಿಗಳಿಗೆ ತಿಳಿಸಿ ಹಣಕೊಟ್ಟು ರಸ್ತೆ ಮಾಡಿಸಿ ಅರಣ್ಯ ಶಾಖೆಯ ಮಂತ್ರಿಗಳು ಬಹಳ ದಕ್ಷರು ಎಂದು ನಾನು ಹಿಂದಿನ ಸಲವೇ ಹೇಳಿದ್ದೇನೆ. ನಾವೇನಾದರೂ ಸಲಹೆಯನ್ನು ಕೊಟ್ಟರೆ ಅವರು ಅದನ್ನು ಬೇಗ ಮನಸ್ಸಿಗೆ ತೆಗೆದುಕೊಂಡು ಕೆಲಸ ಮಾಡುತ್ತಾರೆ. ಅರಣ್ಯದಲ್ಲಿರತಕ್ಕ ದುಷ್ಟ ಮೃಗಗಳನ್ನು ಓಡಿಸಿ ವನ್ಯ ಮೃಗಗಳನ್ನು ರಕ್ಷಿಸಬೇಕು. ಅರಣ್ಯ ಸಂಪತ್ತನ್ನು ಅಭಿವೃದ್ಧಿ ಮಾಡುವ ವಿಷಯದಲ್ಲಿ ಸರ್ಕಾರದವರು ನಿಗಾ ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಶಿವಮೊಗ್ಗ ತಾಲ್ಲೂಕು ಹರಮಗಟ್ಟ ಗ್ರಾಮಕ್ಕೆ ರೂರಲ್ ವಾಟರ್ ಸಪ್ಲೈ ಯೋಜನೆಯನ್ನು ಮಂಜೂರು ಮಾಡಿದ್ದಾರೆ. ಅದಕ್ಕಾಗಿ ಸರ್ಕಾರದವರಿಗೆ ನಾನು ಅಭಿನಂದಿಸುತ್ತೇನೆ. ಆದರೆ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಈ ಕೆಲಸವನ್ನು ಜಾಗ್ರತೆ ತೆಗೆದುಕೊಳ್ಳುವುದು ಕಷ್ಟ. ಬೇಗ ಆಗೋಲ್ಲ. ನನ್ನ ಮಾನ್ಯ ಸೋದರಿ ಬಸವರಾಜೇಶ್ವರಿ ಮಾತನಾಡುವಾಗ ತಿಳಿಸಿದಂತೆ ನಿಮ್ಮ ಇಲಾಖೆಯಿಂದಲೇ ಮಾಡುವ ಯೋಜನೆ ಜಾಗ್ರತೆ ಜಾರಿಗೆ ತಂದು ಕಾರ್ಯ ಜಾಗ್ರತೆ ಆಗುವಂತೆ ಮಾಡಿ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಈ ಕೆಲಸವನ್ನು ಶುರು ಮಾಡಿಸಿ ಆ ಊರಿಗೆ ಜಾಗ್ರತೆ ನೀರನ್ನು ಒದಗಿಸುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಸಹಕಾರ ಸಂಘಗಳ ಬಗ್ಗೆ ಒಂದು ಮಾತನ್ನು ನಾನು ಹೇಳಬಯಸುತ್ತೇನೆ. ಸರ್ಕಾರದವರು ಸಹಕಾರ ಸಂಘಗಳ ಬಗ್ಗೆ ಸಾಕಷ್ಟು ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ಆದರೆ ಎಲ್ಲ ಸಹಕಾರ ಸಂಘಗಳು ಚೆನ್ನಾಗಿ ನಡೆಯುತ್ತವೆ ಎಂದು ಹೇಳುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಎಲ್ಲ ಸಹಕಾರ ಸಂಘಗಳಿಗೆ ಸಾಕಷ್ಟು ಸೌಲಭ್ಯವನ್ನು ಒದಗಿಸಿಕೊಟ್ಟಿದ್ದರೂ ಕೂಡ ಚೆನ್ನಾಗಿ ನಡೆಯುವ ಸಹಕಾರ ಸಂಘಗಳಿಗೆ ಸ್ಥಳೀಯ ಅಧಿಕಾರಿಗಳು ಅವಕ್ಕೆ ಭೇಕಾದ ಅವಶ್ಯಕತೆಗಳನ್ನು ಪೂರೈಸಲು ಬಹಳ ತೊಂದರೆಯನ್ನು ಕೊಡುತ್ತಿದ್ದಾರೆ. ಅದರಲ್ಲೂ ಹಳ್ಳಿಗರಿಗೆ ತುಂಬಾ ತೊಂದರೆ ಕೊಡುತ್ತಾರೆ. ಪ್ರತಿಯೊಂದಕ್ಕೂ ನಾವು ಸರ್ಕಾರದವರ ಹತ್ತಿರಕ್ಕೆ ಬಂದು ಕೆಲಸವನ್ನು ಮಾಡಿಸಬೇಕಾಗುತ್ತದೆ. ಈ ಬಗ್ಗೆ ಅಧಿಕಾರಿಗಳಿಗೆ ಸರ್ಕಾರದವರು ಸಾಕಷ್ಟು ಎಚ್ಚರಿಕೆಯನ್ನು ಕೊಡಬೇಕು. ನಮ್ಮ ತಾಲ್ಲೂಕಿನಲ್ಲಿ ಸಹಕಾರ ಸಂಘಗಳ ಎಲ್ಲಾ ಕೆಲಸ ಕಾರ್ಯಗಳ ಬಗ್ಗೆ ನಾನು ಉಪಮಂತ್ರಿಗಳಿಗೆ ಆಗಾಗ್ಗೆ ತೊಂದರೆಯನ್ನು ಕೊಡುತ್ತಿದ್ದೇನೆ. ಅವರು ಬೇಸರವಿಲ್ಲದೆ ಆ ಬಗ್ಗೆ ಗಮನ ಕೊಡುತ್ತಾರೆ. ಅದಕ್ಕಾಗಿ ಅವರಿಗೆ ನನ್ನ ವಂದನೆಗಳು. ಸಹಕಾರ ಸಂಘಗಳಲ್ಲಿ ಬಹಳ ದುರುಪಯೋಗವಾಗುತ್ತಿದೆ ಎಂದು ಈ ಸಭೆಯಲ್ಲಿ ಪ್ರಶ್ನೆಗಳ ಸುರಿಮಳೆ ಆಗುತ್ತಿದೆ. ಆದ್ದರಿಂದ ತಪ್ಪಿತಸ್ಥರಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡಬೇಕು. ಮುಂದಿನ ಅಧಿವೇಶನದಲ್ಲಿ ಇಂಥಾ ಆಕ್ಷೇಪಣೆಗಳಿಗೆ ಅವಕಾಶ ಕೊಡದಂತೆ ತಪ್ಪಿತಸ್ಥರು ಯಾರೇ ಇರಲಿ ಯಾವ ದಾಕ್ಷಿಣ್ಯವೂ ಇಲ್ಲದೆ ಅವರಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri THIRUMALA DEVARAYA (Gangavathi).—Sir, the Estimates Committee has rightly pointed out that agriculture deserves first priority next to defence. The Committee has here and there criticised the working of the Department and it has also given some valuable suggestions. I request the Hon'ble Minister to look into them and try to rectify the defects in the working of the Department.

The Government are trying to help the agriculturists by giving them short-term, medium-term and long-term loans, fertilizers, seeds, etc. The intention of Government is good, but implementation is far from satisfactory. The ryot gets his loan only after he finishes his agricultural operations. He cannot wait for the loan or the fertilizer, but he has to finish his work in season and in time and so when he gets the loan and the fertilizer naturally he utilizes it far some other purpose. Instead of giving him relief, that amount would be a burden on him. So, I request the concerned authorities to see that the agriculturist gets loans and fertilizers in time.

(SRI THIRUMALA DEVARAYA)

Besides that, the Agriculture Department should find out the requirements of a particular place or taluka and they should keep adequate stocks there. Sometimes it happens that when we want some fertilizers, they would ask us to go to some other far off place and get it from there. Cartage has to be borne by the agriculturist. So I suggest that enough and adequate stocks shonld be kept at every taluka headquarters according to the requirement of the place.

I cannot understand why agriculturists are required to purchase things which they do not want. If he wants to purchase ammonium sulphate he is asked to purchase along with it urea or some other fertilizer also. Why should they insist on his purchasing other fertilizer when he does not require it? This is an imposition on him. So I suggest the Hon'ble Minister to see that the agriculturists are supplied with whatever fertilizers they want and they are not compelled to purchase what they do not want. Under the Tungabhadra Left Bank Canal about 5 lakh acres of land are to be irrigated. But, during the last six years, only one lakh acres are brought under cultivation. The area localised for heavy that is paddy or sugar-cane is fully developed but that localised for light that is, dry cum wet is as barren as before. The Government should not impose crop pattern to the agriculturists until and unless they have conducted some experiments and found that the returns are satisfactory. Then only they should propagate this localisation scheme. A large quantity of water is flowing back to the River and the Andhra Government is taking advantage of it. If water is given to our ryots without imposing any fine and wherever there is no tail end defect, I am sure it will go a long way to help the agriculturists. In Gangavathi, alone in addition to what we are growing now we can grow paddy and groundnut in another five lakhs of pallas. So, I suggest the Government to think seriously and see that the water is made available to the agriculturists who are willing to cultivate paddy or groundnut.

If a person wants to take up horticulture, it will take about 5 to 6 years to get any returns. We are lacking in nutritious food and fruits. In order to encourage horticulturists, we should try to see that horticulturists get plants on subsidised basis and some loan is given to them. If it is not out of place, I would suggest that we may give some remission in land revenue also if any agriculturist comes forward to take up to horticulture.

The question of equation and seniority list is not yet completed in this department. I do not know why there has been so much delay. On account of this delay officers are not working properly. I would like to draw the attention of the Government to see that the seniority list is published as early as possible. Now most of the posts are not filled up and that is the reason why agriculture work is hindered. I

request the Minister to see that all the vacancies are filled up as early as possible.

With these words, I conclude my speech.

†ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಸನ್ಮಾನ್ಯ ಅಧ್ಯಕ್ಷರೆ, ಇಂದು ನಮ್ಮ ಮುಂದಿರತಕ್ಕಂಥ ಅತಿ ಪ್ರಾಮುಖ್ಯವಾದ ವ್ಯವಸಾಯ, ವಗೈರೆ ಬೇಡಿಕೆಗಳಿಗೆ ನನ್ನ ಅನುಮೋದನೆಯನ್ನು ಕೊಡುತ್ತಾ, ಈ ಒಂದು ಕಾರ್ಯಕ್ಕೆ ಸಾಕಾದಷ್ಟು ಕಾಲ ಕೊಡದಿರುವುದರಿಂದ, ಕಾಲದ ಒತ್ತಡದಿಂದ ನನ್ನ ಭಾಷಣವನ್ನು ಮೊಟಕು ಮಾಡುತ್ತಿದ್ದೇನೆ.

ಅಧ್ಯಕ್ಷರೆ, ಇಂದು ವ್ಯವಸಾಯ ಮುಖ್ಯವಾದುದು; ಅದಕ್ಕೆ ಸಂಬಂಧಪಟ್ಟ ಕಸಬು ಏನಿದೆ, ಅದನ್ನು ದೇಶದಲ್ಲಿ ಸುಮಾರು 80 ಭಾಗದ ಜನರು ನಿರ್ವಹಣೆ ಮಾಡುತ್ತಾ ಇದ್ದಾರೆ. ಇವತ್ತು ಆಹಾರದ ಪರಿಸ್ಥಿತಿಯಿಂದ, ಆಹಾರ ಪದಾರ್ಥಗಳಿಗೆ ಏನೊ ಸ್ವಲ್ಪ ಬೆಲೆ ಇರುವುದರಿಂದ ಬೆಳೆಯಬೇಕು ಎಂಬ ಆಸೆ ಜನತೆಗೆ ಇದೆ. ಇದರ ಬಗ್ಗೆ ಈಗಾಗಲೆ ಮಾನ್ಯ ಸದಸ್ಯರುಗಳು ಸಾಕಾದಷ್ಟು ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈಗತಾನೆ ಎಸ್ಟಿಮೇಟ್ಸ್ ಕಮಿಟಿ ಸದಸ್ಯರುಗಳೂ, ಛೇರ್ಮನ್ನರೂ ಬಹಳ ಉಪಯುಕ್ತವಾದ ಒಂದು ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ ಬಹುಶಃ ಈ ವರದಿಯನ್ನು ಪರಿಶೀಲನೆ ಮಾಡಿದರೆ, ಈ ಇಲಾಖೆ ಯಾವ ರೀತಿಯಲ್ಲಿ ಕೆಲಸ ಮಾಡುತ್ತಾ ಇದೆ ಎಂದು ಗೊತ್ತಾಗುತ್ತದೆ. ಈ ಸಮಿತಿಯ ಸದಸ್ಯರುಗಳು ಬಹಳ ಕೂಲಂಕುಷವಾಗಿ ಪರಿಶೀಲನೆ ಮಾಡಿ, ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡಿದ್ದಾರೆ.

ಇನ್ನೊಂದು ಸಣ್ಣ ವಿಷಯವನ್ನು ಹೇಳಬೇಕಾಗಿದೆ; ಸಾಲವನ್ನು ಸರ್ಕಾರ ಕೊಡತಕ್ಕಂಥ ರೀತಿಯಲ್ಲಿ, ಕೈಗಾರಿಕೋದ್ಯಮಗಳಿಗೆ ಹೇಗೆ ಕೊಡುತ್ತಿದ್ದಾರೋ ಹಾಗೆ ವ್ಯವಸಾಯಗಾರರಿಗೂ ಕೊಡಬೇಕು. ವ್ಯವಸಾಯಗಾರರಿಗೆ ಕೊಡುವ ಸಾಲದ ಪ್ರೊಸೀಜರಿನಲ್ಲಿ ಬೇಕಾದಷ್ಟು ಅವ್ಯವಸ್ಥೆ ಇದೆ ಎಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೇವೆ. ಆದರೆ ಇದುವರೆಗೆ ಅದು ಸರಿಹೋಗಿಲ್ಲ. ಇಂಡಸ್ಟ್ರಿಯಲ್ ಪೀಪಲ್ಗೆ ಸಾಲವನ್ನು ಕೊಟ್ಟರೆ ಸಂಬಂಧಪಟ್ಟ ಸಾಮಾನನ್ನು ಮಾತ್ರ ಅದಕ್ಕೆ ಸೆಕ್ಯುರಿಟಿಯಾಗಿ ಇಟ್ಟುಕೊಳ್ಳುತ್ತಾರೆ. ಆದರೆ ವ್ಯವಸಾಯಗಾರರಿಗೆ ಟ್ರಾಕ್ಟರಿಗೆ ಸಾಲ ಕೊಡುವ ಸಂದರ್ಭದಲ್ಲಿ ಆತನ ಜಮೀನು, ಟ್ರಾಕ್ಟರು ಇಷ್ಟನ್ನೂ ತೆಗೆದುಕೊಳ್ಳುತ್ತಾರೆ; ಅದಕ್ಕೂ ಹೆಚ್ಚಿನ ಸೆಕ್ಯೂರಿಟಿ ತೆಗೆದುಕೊಳ್ಳುತ್ತಾರೆ; ಅದರ ಜೊತೆಗೆ ಇಬ್ಬರ ಜಾಮೀನು ಬೇಕು; ಅವರೂ ಬಹಳ ಧಡೂತಿ ಮನುಷ್ಯರಾಗಿರಬೇಕೆಂದು ಹೇಳುತ್ತಾರೆ. ಇಷ್ಟು ಕಠಿಣ ಷರತ್ತುಗಳನ್ನು ರೈತರಿಗೆ ಹಾಕಿದ್ದಾರೆ. ನಮ್ಮ ರೈತರ ಮೇಲೆ ಇಷ್ಟು ಅನುಮಾನ ಏತಕ್ಕೆ, ಸಂಶಯ ಏತಕ್ಕೆ ಎಂದು ನನಗೆ ಇವತ್ತಿನ ವರೆಗೂ ಅರ್ಥವಾಗುತ್ತಾ ಇಲ್ಲ. ಇಷ್ಟು ಅನುಮಾನಾಸ್ಪದವಾಗಿದ್ದು, ರೈತರ ಮೇಲೆ ಇಷ್ಟು ಜವಾಬ್ದಾರಿಯನ್ನೂ, ಹೊರೆಯನ್ನೂ ಹೊರಿಸಲು ಮನಸ್ಸು ಮಾಡಿ, ಹೆಚ್ಚು ಆಹಾರವನ್ನು ಬೆಳೆಯಿರಿ ಅಂತ ಹೇಳಿದರೆ ಅವರಿಗೆ ಏನು ಆಸಕ್ತಿ ಇರುತ್ತದೆ, ಹೆಚ್ಚಿಗೆ ಉತ್ಪತ್ತಿ ದೇಶಕ್ಕೆ ಆಗುತ್ತದೆಯೆ ಎಂದು ಪ್ರಶ್ನೆ ಮಾಡಬೇಕಾಗಿದೆ. ಈಗಲೂ ಸಹ ಕಾಲ ಮೀರಿಹೋಗಿಲ್ಲ. ಕೊಡತಕ್ಕಂಥ ಏನು ಒಂದು ಅನುಕೂಲತೆ ಇದೆಯೊ, ಅದನ್ನು ಒಂದೇ ಮನಸ್ಸಿನಿಂದ ಕೊಡತಕ್ಕಂಥ ಪರಿಸ್ಥಿತಿ ಬಂದರೆ, ಬಹಳ ಒಳ್ಳೆಯದು.

ಒಂದು ಕೃತಕ ಗೊಬ್ಬರದ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ನನ್ನ ಮನಸ್ಸಿಗೆ ಏನೊ ಅನ್ನಿಸುತ್ತಿದೆ. ಈ ವ್ಯವಸಾಯ ಇಲಾಖೆ ಹತ್ತಾರು ವರ್ಷಗಳಿಂದ ಕರ್ತವ್ಯ ಮಾಡಿದ್ದರೂ ಕೂಡ, ಇವತ್ತು ಅಮೇರಿಕಾ ದೇಶದಿಂದ ಒಬ್ಬ ತಜ್ಞರು ಬಂದು, ಅವರ ಪ್ರಚಾರಕ್ಕೆ ನಮ್ಮ ಜನದ ಮೋಹ ಹೋಗಿದೆ; ಅವರು ಬಂದು ಹೇಳಿದ್ದರಿಂದ ಈ ಫರ್ಟಿಲೈಸರನ್ನು ಉಪಯೋಗಿಸಬೇಕೆಂದು ಮನಸ್ಸು ಮಾಡಿದ್ದಾರೆಯೇ ಹೊರತು, ನಮ್ಮ ಇಲಾಖೆಯವರ ಪ್ರಯತ್ನದಿಂದಲ್ಲ. ನಮ್ಮ ಅಧಿಕಾರಿಗಳಿದ್ದಾರೆ; ಇದನ್ನು ಅವರು ಜವಾಬ್ದಾರಿಯಿಂದ ಮಾಡುವ ಕರ್ತವ್ಯ; ಪ್ರಚಾರ ಕಾರ್ಯದಲ್ಲಿ ನಮ್ಮ ಅಧಿಕಾರಿಗಳು ಏಕೆ ಮುಂದುವರಿಯಲಿಲ್ಲವೆಂದು ಪ್ರಶ್ನೆ ಮಾಡಬೇಕಾಗಿದೆ. ಖುಷ್ಕಿ ಬೇಸಾಯಕ್ಕೆ ಫರ್ಟಿಲೈಸರ್ ಹಾಕಬೇಕೆಂದು ಇಲಾಖೆಗೆ ಸಂಬಂಧಪಟ್ಟವರು ಹೇಳದೆ, ಅಮೇರಿಕಾ ದೇಶದ ತಜ್ಞರು ಇಲ್ಲಿಗೆ ಬಂದು ಪ್ರಚಾರ ಮಾಡುತ್ತಾ ಇದ್ದಾರೆ. ಇದನ್ನು ನೋಡಿದರೆ ಒಂದು ಕಡೆ ಸಂತೋಷವಾಗುತ್ತದೆ; ಇನ್ನೊಂದು ಕಡೆ ಅಷ್ಟೂ ವ್ಯಸನವಾಗುತ್ತದೆಂದು ಹೇಳಬೇಕಾಗಿದೆ; ನಮ್ಮ ಅಧಿಕಾರಿಗಳು ಇದ್ದು, ಅದು ಅವರ ಕರ್ತವ್ಯ; ನಮ್ಮವರು ಕರ್ತವ್ಯ ನಿರತರಾಗಿರದಿದ್ದರಿಂದ, ಅವರು ಪ್ರಚಾರ ಮಾಡಬೇಕಾಗಿಬಂತು ಎಂಬ ಈ ಒಂದು ಅಪಾದನೆಗೆ ನಮ್ಮ ಅಧಿಕಾರಿಗಳು ಒಳಗಾಗಿದ್ದಾರೆ. ನಮ್ಮವರ ಮಾತಿಗೆ ಎಷ್ಟು ಬೆಲೆ ಇದೆ ಅನ್ನುವುದು ಅನುಭವದಿಂದ ಕಂಡಹಾಗಾಯಿತು.

ಆಮೇಲೆ ಈ ಕೆಮಿಕಲ್ ಸ್ಪ್ರೇಯರ್ಸ್ಸು ಒಂದು ಪೈಪೋಟಿ ರೀತಿಯಲ್ಲಿ ನಡೆಯುತ್ತಿದೆ. ನಮ್ಮ ಇಲಾಖೆಯವರೂ ಇದ್ದಾರೆ. ಇದರ ಬಗ್ಗೆ ಪ್ರಸ್ತಾಪ ಮಾಡುತ್ತಾ ಒಬ್ಬ ಸದಸ್ಯರು ಹೇಳಿದರು:

(ಶ್ರೀ ಕೆ. ವಿ. ಬೈರೇಗೌಡ)

ಧಾರವಾಡ ಡಿಸ್ಟ್ರಿಕ್ಟಿನಲ್ಲಿ ರೋಗ ಬಂದ ಸಮಯದಲ್ಲಿ ನಾವು ಖಾಸಗಿ ಉದ್ಯಮಿಗಳವರಲ್ಲಿ ಹೋಗಿ 40 ಸಾವಿರ ಎಕರೆಗೆ ಸ್ಪ್ರೇ ಮಾಡಿಸಬೇಕಾಗಿ ಬಂದಿತು ಎಂದು ಹೇಳಿದರು. ನಮ್ಮ ಸರ್ಕಾರ ಇಷ್ಟು ನಿಶ್ಶಕ್ತವಾಗಿದೆಯೇ, ನಮ್ಮಲ್ಲಿ ಸಾಕಷ್ಟು ಉಪಕರಣಗಳು ಇಲ್ಲವೆ ಎಂಬ ಪ್ರಶ್ನೆ ಬರುತ್ತದೆ. ಸಾಧ್ಯವಾದ ಮಟ್ಟಿಗೆ ನಮ್ಮ ಶಕ್ತಿ ಏನಿದೆ ಅದನ್ನು ಹೆಚ್ಚಾಗಿ ಉಪಯೋಗಿಸಿ, ಅದರಿಂದ ಹೆಚ್ಚಿನ ಕೆಲಸ ಮಾಡುವುದಕ್ಕೆ ಪ್ರಯತ್ನ ಪಟ್ಟ ಹೊರತು, ನಮ್ಮ ವ್ಯವಸಾಯಗಾರರು ಭದ್ರವಾಗಿ ಮುಂದುವರಿಯಲು ಕಷ್ಟ ; ಖಾಸಗಿ ಜನತೆಯ ಪ್ರಚೋದನೆಗೆ, ಯಾವುದೊ ಫರ್ಮುಗಳ ಶಕ್ತಿಗೆ ಒಳಗಾಗುವಂತೆ ಮಾಡುವುದು ಅಷ್ಟು ಯೋಗ್ಯವಲ್ಲ.

ನೀರಾವರಿ ಬಾವಿಗಳಿಗೆ ಸಾಕಾದಷ್ಟು ಹಣ ಕೊಟ್ಟಿದ್ದೀರಿ, ಸಾಕಾದಷ್ಟು ಎಲೆಕ್ಟ್ರಿಕ್ ಪಂಪುಗಳನ್ನೂ ಕೊಟ್ಟಿದ್ದೀರಿ. ನನಗೆ ಒಂದು ಶಂಕೆ ಆಗುತ್ತಿದೆ ಇದರ ವಿಷಯದಲ್ಲಿ. ಎಲ್ಲೆಲ್ಲಿ ಬಾವಿಗಳನ್ನು ನಿರ್ಮಿಸಿರುತ್ತಾರೋ, ಅಲ್ಲಲ್ಲೇ ಪ್ರತಿವರ್ಷ ಬಹಳ ಹತ್ತಿರ ಹತ್ತಿರ ಹೆಚ್ಚುಹೆಚ್ಚಾಗಿ ಬಾವಿಗಳನ್ನು ತೆಗೆಯುವುದರಿಂದ, ಬಾವಿಗಳು ಖಾಲಿಯಾಗತಕ್ಕಂಥ ಪರಿಸ್ಥಿತಿ ಬಂದಿದೆ, ಒಂದೊಂದು ಬಾವಿಗೂ ವಿಸ್ತಾರದ ಅಂತರ ಕಡಿಮೆ ಇದೆ. ಆದ್ದರಿಂದ ಬಾವಿಗಳಲ್ಲಿ ಸಾಕಾದಷ್ಟು ನೀರು ಇಲ್ಲದೆ ಹೋಗಿ ರೈತರಿಗೆ ಬಹಳ ಕಷ್ಟ ಪರಿಸ್ಥಿತಿ ಬಂದಿದೆ. ಅದಕ್ಕೆ ತಜ್ಞರು ಕೂಡಲೆ ತಕ್ಕ ಸಲಹೆಗಳನ್ನು ಕೊಡದೆ ಹೋದರೆ, ಬಹುಶಃ ಸಹಸ್ರಾರು ರೂಪಾಯಿ ಖರ್ಚು ಮಾಡಿದ ಬಾವಿಗಳು ನಿರುಪಯೋಗವಾಗಿ ರೈತನಿಗೆ ನಷ್ಟವಾಗಬಹುದು.

ಈ ಬಾವಿಗಳಲ್ಲಿ ಹಾಕುವ ಬೋರ್‌ವೆಲ್ಲು ಮೀಶಿನುಗಳ ಬಗ್ಗೆ ಇಲಾಖೆಗೆ ಸಂಬಂಧ ಪಟ್ಟ ಅಧಿಕಾರಿಗಳಲ್ಲಿ ಪ್ರಸ್ತಾಪಮಾಡಿದೆ. ಅವರು ಇಂಜನಿಯರುಗಳನ್ನು ಕಳುಹಿಸಿ ಕೊಟ್ಟಿದ್ದರು. ಅವರಲ್ಲಿರತಕ್ಕಂಥ ಬೋರ್‌ವೆಲ್ ಮಿಶೀನುಗಳು ಬಹಳ ಭಾರವಾದುವು, ಅವುಗಳು ಬಾವಿಗಳ ಒಳಗೆ ಹೋಗಿ, ಆಳ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ನೋಡಿ ಹೇಳಿದರು. ಈ ದೊಡ್ಡ ಮಿಶೀನುಗಳ ಬದಲು, ಸಣ್ಣ ಮಿಶೀನುಗಳನ್ನು ತಂದು ಉಪಯೋಗಿಸುವುದು ಒಳ್ಳೆಯದು ; ಅದರಿಂದ ಸಾವಿರಾರು ರೂಪಾಯಿ ಖರ್ಚುಮಾಡಿ ತೆಗೆದ ಬಾವಿಗಳಿಗೆ ಅನುಕೂಲವಾಗುತ್ತದೆ. ಸಣ್ಣ ಬೋರ್‌ವೆಲ್ ಮಿಶೀನುಗಳನ್ನು ತರಬೇಕು, ಇಲ್ಲವಾದರೆ ಕಷ್ಟವಾಗುತ್ತದೆ.

ಸಾಯಿಲ್ ಕನ್ಸರ್ವೇಶನ್ ಬಹಳ ಪ್ರಾಮುಖ್ಯವಾದ ವಿಷಯ. ಅದು ನೇಷನ್ನಿಗೇ ಸಂಬಂಧಪಟ್ಟ ಒಂದು ಪ್ರಶ್ನೆ. ಅದನು ಕಾರ್ಯರೂಪಕ್ಕೆ ತರಲು ಪ್ರಯತ್ನಪಟ್ಟರೂ ಸಹ, ಅದರ ಪ್ರತಿಪಲ ನಮಗೆ ಕಾಣುತ್ತಾ ಇಲ್ಲ.

ತ್ವರಿತವಾಗಿ ಏನು ಕೆಲಸ ಆಗಬೇಕಾಗಿತ್ತೋ ಅದು ಆಗದೆ, ಇದ್ದ ಮಣ್ಣು ಕೊಚ್ಚಿಕೊಂಡುಹೋಗಿ ಭೂಮಿಯ ಸಾರಾಂಶವೇ ಕನಿಷ್ಟ ಮಟ್ಟಕ್ಕೆ ಬರುತ್ತಿದೆ. ಇದರಿಂದಾಗಿ ಸಹಸ್ರಾರು ಎಕರೆಗಳಷ್ಟು ಭೂಮಿಯಲ್ಲಿ ಎಷ್ಟು ಸಾರವಿರಬೇಕೋ ಅಷ್ಟು ಇರುವುದಿಲ್ಲ. ಅದರಿಂದ ಸಾಯಿಲ್ ಕನ್‌ಸರ್ವೇಷನ್ನು ಕಾರ್ಯವನ್ನು ಬಹಳ ಬೇಗನೆ ಆಗುವಂತೆ ಮಾಡಬೇಕು. ಅಲ್ಲದೆ ಈ ಕೆಲಸಗಳನ್ನು ಮಾಡುವಾಗ ರಸ್ತೆಗಳ ಪಕ್ಕದಲ್ಲಿ ಮಾಡುತ್ತಿದ್ದಾರೆ, ಎಂದರೆ ನ್ಯಾಷನಲ್ ಹೈವೇಸ್ ರೋಡುಗಳು ಇಂತಹ ಕಡೆಗಳಲ್ಲಿ ಜನಗಳ ಕಣ್ಣಿಗೆ ಕಾಣಬೇಕು ಎಂದು ಮಾಡುವುದಕ್ಕಿಂತ ಎಲ್ಲೆಲ್ಲಿ ಈ ಕೆಲಸಗಳು ಆಗಿಲ್ಲವೋ ಅಂತಹ ಎಲ್ಲ ಭಾಗಗಳಲ್ಲೂ ಭೂಮಿ ಉಳಿಯುವಂತೆ ಮಾಡಬೇಕು. ಹಾಗೆ ಸಾಯಿಲ್ ಕನ್‌ಸರ್ವೇಷನ್ನು ಕಾರ್ಯರೂಪಕ್ಕೆ ತರಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ.

5-00 P.M.

ಬೆಲ್ಲದ ಧಾರಣೆ ವಿಷಯದಲ್ಲಿ ಸರಕಾರದವರು ಪ್ರಸ್ತಾಪಿಸಿದ್ದಾರೆ. ಇದನ್ನು ಹೊರಗಡೆ ಕಳುಹಿಸುವುದಕ್ಕೆ ಅವಕಾಶ ಮಾಡದೆ ಇರುವುದರಿಂದಾಗಿ ಬೆಲೆಗಳು ಇಷ್ಟು ಇಳಿಯಲು ಕಾರಣವಾಗಿದೆ, ಇದರಿಂದಾಗಿ ರೈತರಿಗೆ ಬಹಳ ತೊಂದರೆಯಾಗಿದೆ, ಇಂತಹ ನಷ್ಟಗಳನ್ನು ರೈತರು ತುಂಬಿಕೊಳ್ಳಬೇಕಾದರೆ, ಹತ್ತು ವರ್ಷಕ್ಕೊಮ್ಮೆ, ಐದು ವರ್ಷಕ್ಕೊಮ್ಮೆ ಪುನಃ ಸುಧಾರಿಸಿ ಕೊಳ್ಳಬೇಕಾದರೆ, ಐದಾರು ವರ್ಷಗಳ ಕಾಲವಾದರೂ ಬೇಕಾಗುತ್ತದೆ. ಈಗ ಬೆಲ್ಲದ ಧಾರಣೆ ನಾಲ್ಕು ರೂಪಾಯಿಗಳಷ್ಟು ಆಗಿದೆ. ಇದನ್ನು ಮಾಡಬೇಕಾದರೆ ರೈತ 13 ತಿಂಗಳ ಕಾಲ ವ್ಯವಸಾಯ ಮಾಡಬೇಕಾಗುತ್ತದೆ. ಸರಕಾರದವರು ಇವನ್ನೆಲ್ಲಾ ಪರಿಶೀಲನೆ ಮಾಡಿ ಈಗಲಾದರೂ ಹೊರಕ್ಕೆ ಹೋಗಲು ಅವಕಾಶ ಮಾಡಿಕೊಟ್ಟರೆ ಬಹಳ ಅನುಕೂಲ ವಾಗುತ್ತದೆ.

ನಮ್ಮ ಜಮೀನುಗಳಲ್ಲಿ ರಾಗಿ ಬೆಳೆಯನ್ನು ಉತ್ತಮಪಡಿಸಬೇಕೆಂದು ಎಕ್ಸ್-22 ಎನ್ನುವ ರಾಗಿ ಬೀಜಗಳನ್ನು ಕೊಡುತ್ತಿದ್ದಾರೆ. ಸುಮಾರು 20-25 ವರ್ಷಗಳಿಂದಲೂ ಎರಡು ಮೂರು ಜಾತಿಯ ರಾಗಿಗಳನ್ನು ಬೆಳೆಯುತ್ತಿದ್ದೇವೆ. ಆದರೆ ಹೆಚ್-22 ರಾಗಿ ಬೀಜ ಉತ್ತಮವಾಗಿ ಬೆಳೆದರೂ ಇಳು

ವರಿ ಸರಿಯಾಗಿ ಆಗುತ್ತಿಲ್ಲ, ಇದಕ್ಕಾಗಿ ಉತ್ತಮವಾದ ತಳಿಗಳನ್ನು ತಂದು ಸಾಕದಷ್ಟು ಪ್ರಚಾರ ಮಾಡಿ ಇದರ ಕೆಲಸವನ್ನು ಇನ್ನೂ ಹೆಚ್ಚು ಉತ್ತಮಪಡಿಸಬೇಕಾಗಿ ಕೇಳುತ್ತೇನೆ. ಆದರೆ ಇಲ್ಲಿ ರಾಗಿ ಬೀಜಗಳನ್ನು ಕೊಡುವಾಗ ಅದರಿಂದ ಎಷ್ಟು ಉತ್ಪತ್ತಿ ಬರಬಹುದು ಮತ್ತು ಅದಕ್ಕೆ ಏನೇನು ತಿಳುವಳಿಕೆಗಳನ್ನು ಜನಕ್ಕೆ ಬೇಸಾಯ ಮಾಡುವಾಗ ಕೊಡಬೇಕೋ ಅದನ್ನು ಸರಿಯಾಗಿ ಕೊಡದೇ ಇರುವುದರಿಂದಾಗಿ ಬೇಸಾಯ ಮಾಡತಕ್ಕ ರೈತರಿಗೆ ಬಹಳವಾಗಿ ಕಷ್ಟ ವಾಗುತ್ತಿದೆ. ಇದೇಕೆ ಹೀಗಾಗುತ್ತದೋ ನನಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ಸರಿಯಾದ ತಜ್ಞರೊಳಗೊಂಡ ಯಾವ ತರಹದ ರೀಸರ್ಚನ್ನು ಮಾಡಲು ಸರಿಯಾದ ಕಮಿಟಿಯನ್ನು ಕಾನ್ಸ್‌ಟಿಟ್ಯೂಟು ಮಾಡಿಲ್ಲ. ಈಗಲಾದರೂ ಅಂತಹ ಕಮಿಟಿಯನ್ನು ಮಾಡಿ ಅದರ ಮೂಲಕ ಕೆಲಸಗಳು ಚೆನ್ನಾಗಿ ನಡೆಯುವಂತೆ ಮಾಡಬೇಕು. ನಮಗೆ ಬಂದಿರುವ ಎಸ್ಟಿಮೇಟ್ಸ್ ಕಮಿಟಿ ರಿಪೋರ್ಟಿನಲ್ಲಿ ರೀಸರ್ಚು ಬಗ್ಗೆ ಸಾಕಾದಷ್ಟು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಕೂಲಂಕಷವಾಗಿ ನೋಡಿದರೆ ಈಗ ಮಾಡುತ್ತಿರುವ ಕೆಲಸಗಳಂತೆ ಅಲ್ಲೊಂದು ಇಲ್ಲೊಂದು ಎಂದು ಇಟ್ಟುಕೊಂಡು ಮಾಡಿದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ನಮ್ಮ ಇಲಾಖೆಯಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಅದರಲ್ಲೂ ಪಾಶ್ಚಿಮಾತ್ಯ ದೇಶಗಳಿಂದ ತರಬೇತಿ ಪಡೆದು ಬಂದವರೂ ಇದ್ದಾರೆ. ಹಾಗಿದ್ದರೂ ಈ ಇಲಾಖೆಯಲ್ಲಿ ಆಗುತ್ತಿರುವ ಕೆಲಸಗಳು ಕಡಿಮೆಯಾಗುತ್ತಿವೆ. ಅದಕ್ಕೆ ಕಾರಣ ವೇನು ನಮಗೆ ಅರ್ಥವಾಗುತ್ತಿಲ್ಲ. ಆದುದರಿಂದ ಈ ಇಲಾಖೆಯಲ್ಲಿ ಇನ್ನು ಮುಂದಾದರೂ ಉತ್ತಮವಾಗಿ ಕೆಲಸಗಳು ಆಗುವಂತೆ ಮಾಡಲು ಪ್ರಯತ್ನಿಸಬೇಕು. ಮೊದಲು ಇದ್ದಂತಹ ಒಂದು ಮನೋಭಾವನೆ ಈಚೆಗೆ ಕಡಿಮೆಯಾಗುತ್ತಾ ಬರುತ್ತಿದೆ. ಇದನ್ನೆಲ್ಲಾ ವಿಚಾರ ಮಾಡಿ ಬಡಜನಕ್ಕೆ ಅನುಕೂಲವಾಗುವಂತೆ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಫರ್ಟಿಲೈಸರುಗಳನ್ನು ಸ್ಟೇಟು ಮಾರ್ಕೆಟಿಂಗ್ ಸೊಸೈಟಿಯಿಂದ ತಾಲ್ಲೂಕಾ ಮಾರ್ಕೆಟಿಂಗ್ ಸೊಸೈಟಿಗೆ ಹೋಗುವಾಗ ಅವರುಗಳಿಗೆ ನೂರು ರೂಪಾಯಿಗಳಿಗೆ ಹತ್ತು ರೂಪಾಯಿನಂತೆ ತಾಲ್ಲೂಕಾ ಮಾರ್ಕೆಟಿಂಗು ಸೊಸೈಟಿಗಳವರು ಒಂಭತ್ತು ರೂಪಾಯಿನಂತೆ ಕೊಡುತ್ತಾರೆ. ಪ್ರೈಮರಿ ಕೋ-ಆಪರೇಟೀವ್ ಸೊಸೈಟಿಗಳನ್ನು ಬೆಳಸಬೇಕೆಂದು ಉದ್ದೇಶವಿರುವಾಗ ಈ ರೀತಿಯಾಗಿ ಲಾಭ ಬರುವಂತೆ ನೀತಿಯನ್ನು ಅನುಸರಿಸಿ ಮಾಡಿದರೆ ಅದರಿಂದ ಈ ಸೊಸೈಟಿಗಳು ಉಳಿಯುವುದಕ್ಕಾಗುವುದಿಲ್ಲ, ಇದು ಬಹು ಕಷ್ಟವಾಗುತ್ತದೆ ಎಂದು ಸರಕಾರದ ಗಮನಕ್ಕೆ ತರಬೇಕಾಗಿದೆ. ಈಗಾಗಲೇ ಮಂತ್ರಿಗಳು ಹೇಳಿರುವಂತೆ ಎಲ್ಲವನ್ನೂ ಸೊಸೈಟಿಗಳ ಮೂಲಕವೇ ಕೊಡಬೇಕು ಎಂದು ಅದರಂತೆ ಕೆಲಸಗಳೂ ನಡೆಯುತ್ತಿವೆ.

ಇನ್ನು ಆಲೂಗಡ್ಡೆ ಬೀಜವನ್ನು ಹೊರಗಿನಿಂದ ತರಿಸುತ್ತಿದ್ದಾರೆ. ಇದು ಕಾಲ ಕಾಲಕ್ಕೆ ಸರಿಯಾಗಿ ಬಾರದೆ ಇದರ ಬೆಳೆಯೂ ಕೂಡ ಸರಿಯಾಗಿ ಬರುತ್ತಿಲ್ಲ. ಇದು ಯಾವಾಗಲೂ ಬೇಸಿಗೆಯಲ್ಲಿ ಬರುವಂತಹ ಬೆಳೆ. ಇದಕ್ಕೆ ಸಿಮ್ಲಾ ಹಾಗೂ ರಂಗೂನು ಕಡೆಗಳಿಂದ ಬೀಜಗಳನ್ನು ಸಕಾಲದಲ್ಲಿ ತರಿಸಿ ಒದಗಿಸಿಕೊಡುವ ಏರ್ಪಾಡನ್ನು ಮಾಡಬೇಕು ಮತ್ತು ಇದರ ಬಗ್ಗೆ ರೀಸರ್ಚು ಕೆಲಸಗಳನ್ನೂ ಮಾಡಲು ಸರಕಾರದವರು ಗಮನ ಕೊಡಬೇಕೆಂದು ಇಲ್ಲಿ ಹೇಳುತ್ತೇನೆ.

† ಶ್ರೀ ಜಿ. ನಾರಾಯಣ ಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಸ್ವಾಮೀ, ವ್ಯವಸಾಯದ ಬೇಡಿಕೆಯ ಮೇಲೆ ಮಾತನಾಡಿದ ಮಾನ್ಯ ಸದಸ್ಯರು ಅನೇಕರು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಡುತ್ತಾ ಒಬ್ಬಿಬ್ಬರು ಸದಸ್ಯರು ಈ ವ್ಯವಸಾಯ ಇಲಾಖೆ ತಮಗಾಗಿಯೇ ಇದೆಯೋ ಇಲ್ಲವೋ ಎನ್ನುವ ಒಂದು ಸಂಶಯವನ್ನು ವ್ಯಕ್ತಪಡಿಸಿದರು. ನಾನು ಕೆಲವು ವಿಷಯಗಳಿಂದ ಇಂತಹ ಸಂಶಯಗಳನ್ನು ಅಳಿಸುವುದು ಮೊದಲನೆಯದು ಎಂದು ಕೆಲವು ವಿಷಯಗಳನ್ನು ಇಲ್ಲಿ ಹೇಳಬಯಸುತ್ತೇನೆ.

ಸ್ವಾಮೀ, ಈ ಸಭೆಯ ಮಾನ್ಯ ಸದಸ್ಯರಲ್ಲಿ ಅನೇಕರು ವ್ಯವಸಾಯಗಾರರ ಸಂಸಾರಗಳಿಂದ ಬಂದವರೇ ಆಗಿರುತ್ತಾರೆ. ವ್ಯವಸಾಯದಲ್ಲೇ ತೊಡಗಿರುವವರೂ ಆಗಿದ್ದಾರೆ. ಬಹುಶಃ ನನಗನಿಸುತ್ತದೆ, ಸರಿಯಾದ ರೀತಿಯೊಳಗೆ ಈ ವ್ಯವಸಾಯದ ಉತ್ಪತ್ತಿ ಕಡೆ ನೋಡಿದ್ದಿದ್ದರೆ ಬಹುಶಃ ಈ ಟೀಕೆಗಳಿಗೆ ಅವಕಾಶವಿರಲಿಲ್ಲ ಎಂದು ನಾನು ತಿಳಿಯುತ್ತೇನೆ. ನಮ್ಮಲ್ಲಿ ಮುಖ್ಯವಾಗಿ ವ್ಯವಸಾಯಕ್ಕೆ ಉತ್ತಮವಾದ ಬೀಜ ಬಹಳ ಪ್ರಾಮುಖ್ಯವಾದುದು. ವ್ಯವಸಾಯಗಾರರಾದವರಿಗೂ ಗೊತ್ತು. ಉತ್ತಮವಾದ ಬೀಜವನ್ನುಪಯೋಗಿಸಿದರೆ ಶೇಕಡಾ ಹತ್ತರಷ್ಟು ಉತ್ಪತ್ತಿ ಹೆಚ್ಚಾಗುತ್ತದೆ. ಅದಕ್ಕೋಸ್ಕರವಾಗಿ ಉತ್ತಮವಾದ ಬೀಜಗಳನ್ನು ನಮ್ಮ ಸಂಸ್ಥಾನದಲ್ಲಿರತಕ್ಕ ಇಲಾಖೆಗಳವರು ಕಂಡುಹಿಡಿದು ಅದನ್ನು ನಮ್ಮ ಸೀಡು ಫಾರಂಗಳಲ್ಲಿ ಹೆಚ್ಚು ಗಮನ ಕೊಟ್ಟು ಫೌಂಡೇಷನ್ನು ಸೀಡುಗಳಾಗಿ ಮಾಡಿ ಅದನ್ನು ನಾವು ರಿಜಿಸ್ಟರ್ಡ್ ಗ್ರೋಯರುಗಳ ಮೂಲಕ ಸರ್ಟಿಫೈಡ್ ಸೀಡ್ ಆಗಿ ರೈತರಿಗೆ ಹಂಚುತ್ತಿದ್ದೇವೆ. ಇದು ಒಂದು ಕ್ರಮ. ನಮ್ಮಲ್ಲಿರುವ ಅನೇಕ ಮಾನ್ಯ ಸದಸ್ಯರು

(ಶ್ರೀ ಜಿ. ನಾರಾಯಣ ಗೌಡ)

ತಾಲ್ಲೂಕಾ ಮಂಡಲಗಳಲ್ಲಿ ಸದಸ್ಯರುಗಳಾಗಿದ್ದಾರೆ. ನನಗನಿಸುವುದು, ಅವರೂ ಸಹಿತ ಸ್ವಲ್ಪ ಮನಸ್ಸಿಟ್ಟು ಫೌಂಡೇಷನ್ನು ಸೀಡು ಎಂದು ಏನು ಮಾಡಿದ್ದೇವೋ ಅದನ್ನು ಸರಿಯಾದ ರೀತಿಯಲ್ಲಿ ಸರ್ಟಿಫೈಡು ಸೀಡಾಗಿ ಮಾಡಿಕೊಂಡು ರಿಜಿಸ್ಟರ್ಡ್ ಗ್ರೋಯರುಗಳ ಮೂಲಕ ಬೆಳೆಯಲು ಅದನ್ನು ಹಂಚಬಹುದಾಗಿತ್ತು. ಬಹುಶಃ ನನಗನಿಸುವುದು ಮಾನ್ಯ ಸಭೆಯ ಅನೇಕ ಸದಸ್ಯರುಗಳು ವ್ಯಕ್ತಪಡಿಸಿರುವ ಹಾಗೆ ಸರ್ಟಿಫೈಡ್ ಸೀಡನ್ನು ವ್ಯವಸಾಯ ಇಲಾಖೆಯೊಳಗೆ ರೈತರಿಗೆ ಹಂಚುತ್ತಿದ್ದರೂ ಅವರುಗಳು ಅದರಲ್ಲಿ ವಿಶ್ವಾಸವನ್ನು ಬೆಳೆಸಿ ಅನುಸರಿಸದೇ ಇದ್ದರು ಎಂದು ನನಗೆ ಭಾಸವಾಗುತ್ತದೆ. ನಾವು ಉತ್ತಮವಾದ ಬೀಜವನ್ನು ಹಂಚಬೇಕಾದರೆ ಒಂದು ಕಾರ್ಯಕ್ರಮ ಅನುಸರಿಸಬೇಕು. ಆ ಸಮಯದಲ್ಲಿ ಬಂದಂತಹ ನ್ಯೂಕ್ಲಿಯಸ್‌ಗಳನ್ನು ನೋಡಿಕೊಂಡು ಫೌಂಡೇಷನ್ನು ಸೀಡೆಂದು ಮಾಡಿ ಅದು ಎಷ್ಟು ಬೇಕೋ ಅಷ್ಟನ್ನು ಹಂಚುವ ಹೊಣೆಗಾರಿಕೆ ರಾಜ್ಯದಲ್ಲಿರುವ ವ್ಯವಸಾಯದ ಇಲಾಖೆ. ಇದರ ಬಗ್ಗೆ ಕೆಲವು ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ. ಭತ್ತದ ಬೀಜ, ಇದು ನಮಗೆ ಫೌಂಡೇಷನ್ನು ಸೀಡುಗಳು ಎಷ್ಟು ಬೇಕೋ ಅಷ್ಟು—ನಮಗೆ ಸಾಕಾದಷ್ಟು ಇದೆ. ಇದನ್ನು ತಾಲ್ಲೂಕಾ ಲೆವಲ್ಲುಗಳಲ್ಲಿ ರಿಜಿಸ್ಟರ್ಡ್ ಗ್ರೋಯರುಗಳು ತೆಗೆದುಕೊಂಡು ಅದನ್ನು ಮಲ್ಟಿಪ್ಲೈ ಮಾಡಬೇಕು. ಇದು ಮಾಡುತ್ತಿದ್ದಾರೆಯೇ ಇಲ್ಲವೇ ಎನ್ನುವುದಕ್ಕೆ ಬಹುಶಃ ರಾಜ್ಯದ ಮಟ್ಟದಲ್ಲಿ ಹಾಗೂ ಕೇಂದ್ರ ಸರಕಾರದ ಮಟ್ಟದಲ್ಲಿ ಇದು ಚರ್ಚೆಗೆ ಒಳಗಾಗಿ ಇನ್ನೂ ಚರ್ಚೆ ನಡೆಯುತ್ತದೆ. ರಿಜಿಸ್ಟರ್ಡ್ ಗ್ರೋಯರುಗಳಿಗೆ ಬದಲಾಗಿ ಒಂದೊಂದು ಹಳ್ಳಿಯನ್ನೇ ಬೇರೆ ಏಕೆ ಮಾಡಬಾರದು ಎನ್ನುವುದು ಇತ್ತೀಚೆಗೆ ನಾವು ನ್ಯಾಷನಲ್ ಡೆವಲಪ್‌ಮೆಂಟು ಕೌನ್ಸಿಲ್‌ನಲ್ಲಿ ಚರ್ಚೆಗೆ ಬಂದು ಒಂದು ತೀರ್ಮಾನಕ್ಕೆ ಬರುವುದರಲ್ಲಿದ್ದಾರೆ. ಅದನ್ನು ನೋಡಿಕೊಂಡು ಫೌಂಡೇಷನ್ನು ಸೀಡುಗಳನ್ನು ಸರಬರಾಜು ಮಾಡಲು ಸರಿಯಾದ ರೀತಿಯಲ್ಲಿ ಸಾಕಾದಷ್ಟು ಮಾಡಬಹುದು.

ಆಮೇಲೆ ರೀಸರ್ಚ್ ಗ್ರೂಪಿಂಗ್. ಮಾನ್ಯ ಸದಸ್ಯರು ಹೇಳಿದ ಹಾಗೆ ನಮ್ಮ ರಾಷ್ಟ್ರಕ್ಕೆ ಎಷ್ಟು ರೀಸರ್ಚು ಸೌಕರ್ಯಗಳು ಕಾರ್ಯಗತವಾಗಬೇಕೋ ಅಷ್ಟನ್ನು ಮಾಡದೇ ಇರುವುದರಿಂದ ಅಷ್ಟು ಉತ್ಪತ್ತಿಯಾಗುತ್ತಿಲ್ಲ. ನಾವು ಎಲ್ಲವನ್ನೂ ಹೊರಗಡೆಯಿಂದ ತರಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಆದುದರಿಂದ ಕೆಲವು ಅಂಕಿ ಅಂಶಗಳನ್ನು ಕೊಟ್ಟರೆ ಅದರಿಂದ ತಿಳಿಯುತ್ತದೆ.

1961—62 ರಲ್ಲಿ	ಇಂಡೆಂಟ್ ಮಾಡಿದ್ದು	1,49,309	ಟನ್ಸ್
	ಅಲಾಟ್‌ಮೆಂಟ್ ಮಾಡಿದ್ದು	94,000	ಟನ್ಸ್
	ಸಪ್ಲೈ ಆದುದು	62,498	
	ಹಂಚಿಕೆಯಾದುದು	53,250	ಟನ್ಸ್
1962—63	ಇಂಡೆಂಟ್ ಆದುದು	1,35,000	
	ಅಲಾಟ್‌ಮೆಂಟ್	1,09,915	
	ಸಪ್ಲೈ	1,04,849	
	ವಿತರಣೆಯಾದುದು	73,115	
1963—64	ಇಂಡೆಂಟ್ ಆದುದು	1,44,000	
	ಅಲಾಟ್‌ಮೆಂಟ್	1,06,289	
	ಸಪ್ಲೈ	1,06,327	
	ವಿತರಣೆ	1,07,422	
1964—65	ಇಂಡೆಂಟ್	1,57,000	
	ಅಲಾಟ್‌ಮೆಂಟ್	91,033	

31ನೇ ಮಾರ್ಚದವರೆಗೆ ಈ ಅಂಕಿ ಅಂಶಗಳು ಇರುತ್ತವೆ. ಸಪ್ಲೈ ಆದುದು ವಿತರಣೆಯಾಗಿದೆ. ಅಂಕಿಅಂಶಗಳಿಂದ ಮೂರನೇ-ಎರಡು ಭಾಗ ಅಲಾಟು ಮಾಡಿದ್ದಾರೆ. ಹಾಗು ಅಲಾಟಮೆಂಟಗಿಂತ ಕಡಿಮೆ ಸಪ್ಲೈ ಮಾಡುತ್ತಾರೆ ಎಂಬುದು ಕಂಡು ಬರುತ್ತದೆ. ರಾಸಾಯನಿಕ ಗೊಬ್ಬರ ಸರಿಯಾದ ರೀತಿಯಲ್ಲಿ ಸರಬರಾಜು ಆಗುತ್ತಾ ಇಲ್ಲ. ರೈತನಿಗೆ ಎಷ್ಟು ಬೇಕೋ ಅಷ್ಟು ಸಪ್ಲೈ ಆಗುತ್ತಾ ಇಲ್ಲ ಎಂದು ಹೇಳಬಯಸುತ್ತೇನೆ.

ಸಸ್ಯ ಸಂರಕ್ಷಣೆ ಮಾಡಿ ಬೆಳ ಉತ್ತಮವಾಗಬೇಕಾದರೆ ಉತ್ತಮ ಬೀಜ ಪಡೆದು ರಾಸಾಯನಿಕ ಗೊಬ್ಬರ ಕೊಡಬೇಕು. ಅನೇಕ ಕ್ಷೇತ್ರಗಳಲ್ಲಿ ಸಸ್ಯ ಸಂರಕ್ಷಣ ಕಡೆ ನಿಗಾ ಕೊಡುವುದಿಲ್ಲ. ಅನೇಕ

ರೈತರಿಗೆ ಇದರ ಉಪಯೋಗ ಗೊತ್ತಿಲ್ಲ ಎಂದು ಕಾಣುತ್ತದೆ. ಆದುದರಿಂದ ರೈತರು ಸಿಗಾ ಕೊಡುತ್ತಿಲ್ಲ. ಈ ಸಭೆಯ ಅನೇಕ ಮಾನ್ಯ ಸದಸ್ಯರು ತಾಲ್ಲೂಕು ಮಂಡಳಿಯ ಸದಸ್ಯರು ಆಗಿದ್ದಾರೆ ಅನೇಕ ಕ್ಷೇತ್ರಗಳಲ್ಲಿ ಗ್ರಾಮಸೇವಕರ ಸಹಾಯದಿಂದ ಪ್ರಚಾರ ಸಹ ಮಾಡಿಸುತ್ತಾರೆ. ಡಿಮಾನ್ ಸ್ಟ್ರೇಷನ್ ಪ್ಲಾಟ್ಸ್ ಬಗ್ಗೆ ಅವರಿಗೆ ಅಧಿಕಾರ ಇದೆ. ತಾಲ್ಲೂಕ ಲೆವಲ್ಲಿನಲ್ಲಿ ಅವರು ಇದನ್ನು ಮಾಡಿಸಬೇಕು. ರೈತರಿಗೆ ತಿಳುವಳಿಕೆ ಕೊಟ್ಟು ಹೇಳಿದರೆ ಅವರು ಹೆಚ್ಚು ಗಮನ ಕೊಟ್ಟು ಆ ರೀತಿ ನಡೆದುಕೊಳ್ಳುತ್ತಾರೆ. ಈ ರೀತಿ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

[MR. DEPUTY SPEAKER in the Chair.]

ಇನ್ನು ಸಸ್ಯ ಸಂರಕ್ಷಣ ವಿಷಯದಲ್ಲಿ ಇಲಾಖೆಯವರು ಏನು ಮಾಡಿದ್ದಾರೆ ಅದನ್ನು ಸ್ವಲ್ಪ ಹೇಳುತ್ತೇನೆ. ಈ ಇಲಾಖೆಯವರು ಸುಮ್ಮನೆ ಇದ್ದಾರೆ ಏನೂ ಕೆಲಸ ಮಾಡುತ್ತಿಲ್ಲ ಎಂದು ಮಾನ್ಯ ಸದಸ್ಯರು ತಿಳಿದುಕೊಂಡು ಹಾಗೆ ಇದೆ ಎಂದು ನನಗೆ ಅನ್ನಿಸುತ್ತದೆ. ಧಾರವಾಡ ಮತ್ತು ಬೇರೆಜಿಲ್ಲೆಗಳಲ್ಲಿ ಕಳೆದ ಹತ್ತು ಹದಿನೈದು ವರ್ಷಗಳಿಂದ ಜಿಗಟ ಹಾವಳಿ ಮಾಡುತ್ತಾ ಇದ್ದು ಅದರ ಕಡೆ ಗಮನ ಕೊಟ್ಟಿಲ್ಲ ಎಂದು ಹೇಳಿದರು. 1963-64 ನೇ ಸಾಲಿನಲ್ಲಿ ನಮ್ಮ ಇಲಾಖೆಯು ಈ ಕೆಲಸ ತೆಗೆದುಕೊಂಡು ಸುಮಾರು 30,400 ಎಕರೆ ಭೂಮಿಯಲ್ಲಿ ಸ್ಪ್ರೇ ಮಾಡಿದ್ದಾರೆ. ಇದರಲ್ಲಿ ಹತ್ತು ಸಾವಿರ ಎಕರೆ ಜಮೀನು ಪ್ರೈವೇಟ್ ಫರ್ಮ್‌ಕ್ಕೆ ಸ್ಪ್ರೇ ಮಾಡುವುದಕ್ಕೆ ಅನುಮತಿ ಕೊಟ್ಟಿದೆ. ಉಳಿದ ಕೆಲಸವನ್ನು ಇಲಾಖೆಯವರು ಮಾಡಿದ್ದಾರೆ. ಬೇರೆಯವರ ಸಹಾಯವಿಲ್ಲದೆ 1964-65ರಲ್ಲಿ 36,820 ಎಕರೆ ಭೂಮಿಯಲ್ಲಿ ನಮ್ಮ ಇಲಾಖೆಯವರು ಸ್ಪ್ರೇ ಮಾಡಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಹಾಗಾದರೆ ಆಹಾರ ಅಭಾವ ಆಗುವುದಕ್ಕೆ ಕಾರಣವೇನು ?

ಶ್ರೀ ಜಿ. ನಾರಾಯಣ ಗೌಡ.—ದೇಶದಲ್ಲಿ ಪ್ರಜಾಸಂಖ್ಯೆ ಜಾಸ್ತಿಯಾಗುತ್ತಾ ಇದೆ. ವಿಜಾಪುರ, ಬೆಳಗಾಂವ್, ಚಿತ್ರದುರ್ಗ, ಕೋಲಾರ, ರಾಯಚೂರು ಈ ಜಿಲ್ಲೆಗಳಲ್ಲಿ ಸಸ್ಯ ಸಂರಕ್ಷಣೆಯ ಕಾರ್ಯಕ್ರಮವನ್ನು ತಾಲ್ಲೂಕು ಬೋರ್ಡ್ ಸಹಾಯದಿಂದ ನಮ್ಮ ಇಲಾಖೆಯವರು ತೆಗೆದುಕೊಂಡು ಅದಕ್ಕೆ ಆದ್ಯತೆ ಕೊಟ್ಟಿದ್ದಾರೆ. ಸಸ್ಯ ಸಂರಕ್ಷಣೆಯ ಕೆಲಸ ಚನ್ನಾಗಿ ನಡೆದಿದೆ. ಸಸ್ಯ ಸಂರಕ್ಷಣೆಯ ಬಗ್ಗೆ ರೈತರಿಗೆ ತಿಳುವಳಿಕೆ ಕೊಟ್ಟು ಸಸ್ಯ ಸಂರಕ್ಷಣೆ ಮಾಡಬೇಕಾದ್ದು ನಮ್ಮ ಕರ್ತವ್ಯ ಎಂದು ತಿಳಿದುಕೊಂಡಿದ್ದೇವೆ.

ಶ್ರೀ ಕೆ. ರುದ್ರಪ್ಪ.—ಒಂದು ಪಾಯಿಂಟ ಆಫ್ ಆರ್ಡರ್. ವ್ಯವಸಾಯದ ಬಗ್ಗೆ ನಮಗೆ ಚನ್ನಾಗಿ ಅನುಭವ ಇದೆ. ಆದರೂ ಕೂಡ ನಾವು ಹೇಳಿದ್ದು ಮಾಡಿದ್ದು ತಪ್ಪು ಸುಳ್ಳು ಎಂದು ಭಾವಿಸಿ ಅಧಿಕಾರಿಗಳು ತಮಗೆ ಹೇಳುವುದು ನಿಜವಾಗಿದೆ ಎಂದು ಭಾವಿಸಿಕೊಂಡಿರುವ ಹಾಗೆ ಇದೆ. ನಾವು ಹೇಳುವುದು ಸರಿಯಾಗಿದೆ ಎಂದು ಧೈರ್ಯವಾಗಿ ನಾನು ಹೇಳುತ್ತೇನೆ. ಇದಕ್ಕೆ ತಮ್ಮ ಅಭಿಪ್ರಾಯವೇನು ?

Mr. DEPUTY SPEAKER.—There is no point of order in it.

ಶ್ರೀ ಜಿ. ನಾರಾಯಣ ಗೌಡ.—ಮಾನ್ಯ ಸದಸ್ಯರು ಹೇಳುವುದು ಸುಳ್ಳು ಎಂದು ನಾನು ಹೇಳುವುದಿಲ್ಲ. ಮಾನ್ಯ ಸದಸ್ಯರು ಹೇಳುವುದಕ್ಕೆ ಗಮನ ಕೊಡುತ್ತೇವೆ.

ಶ್ರೀ ಎ. ಎಸ್. ಪಾಟೀಲ್.—ಹೈದರಾಬಾದ್ ಪ್ರದೇಶದಲ್ಲಿ ಉತ್ತಮ ಗೋಧಿ ಬೀಜ ಕೊಡಲಾಗಿದೆ ಎಂದು ಹೇಳಿದರು. ಈ ಗೋಧಿ ಬೀಜ ಎಲ್ಲಿಂದ ತಂದಿದ್ದೀರಿ ? ನಾನು ಎಸ್ಟಿಮೇಟ್ ಕಮಿಟಿ ಚೇರ್‌ಮನ್ ಇದ್ದಾಗ್ಗೆ ಎಲ್ಲ ಕಡೆ ಹೋಗಿನೋಡಿಕೊಂಡು ಬಂದಿದ್ದೇನೆ. ಗೋಧಿ ಬೀಜ ಕೆಟ್ಟು ಹೋಗಿದೆ. ಒಕ್ಕಲತನದ ಅನುಭವವಿದ್ದ ನಮ್ಮಂಥವರು ಇದು ಉತ್ತಮ ಬೀಜ ಎಂದು ನಂಬುವುದು ಹೇಗೆ ?

ಶ್ರೀ ಜಿ. ನಾರಾಯಣ ಗೌಡ.—ನಾವು ಏನು ಮಾಡಿದ್ದೇವೆ ಅದನ್ನು ಹೇಳುತ್ತೇನೆ. ಒಟ್ಟಿನಲ್ಲಿ 94,837 ಎಕರೆಯಲ್ಲಿ ಸಸ್ಯ ಸಂರಕ್ಷಣೆಗೆ ನಾವು ಕ್ರಮ ತೆಗೆದುಕೊಂಡಿದ್ದೇವೆ. 1964-65ನೇ ಸಾಲಿನಲ್ಲಿ ಪಂಚಾಯತಿ ಸಹಾಯದಿಂದ ತಾಲ್ಲೂಕ್ ಬೋರ್ಡು ಸಹಾಯದಿಂದ 1,01,000 ಎಕರೆಯಲ್ಲಿ ಕ್ರಮ ತೆಗೆದುಕೊಂಡಿದೆ. ಮುಖ್ಯವಾಗಿ ಒಳ್ಳೇ ಉಪಕರಣಗಳನ್ನು ಒದಗಿಸಿಕೊಡಬೇಕೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಬುಲ್‌ಡೋಜರ್ಸ್ ಟ್ರಾಕ್ಟರ್ ಸರ್ವಿಸ್ ಕೊಡುವುದಕ್ಕೆ ಸರಕಾರ ಯೋಜನೆ ಮಾಡಿದ್ದಾರೆ. ಇದರ ಬಗ್ಗೆ ಅನೇಕರು ಸಲಹೆ ಮಾಡಿದ್ದಾರೆ. ಕೆಲವರು ಈ ಯೋಜನೆಯನ್ನು ನಿಲ್ಲಿಸಬೇಕು ಎಂದೂ ಕೆಲವರು ನಿಲ್ಲಿಸಬಾರದು ಎಂದೂ ಸಲಹೆ ಮಾಡಿದ್ದಾರೆ. ಬುಲ್‌ಡೋಜರ್ಸ್ ಟ್ರಾಕ್ಟರ್ ಸರ್ವಿಸ್ ನಿಲ್ಲಿಸಿಲ್ಲ. ಇದನ್ನು ನಡೆಸಿಕೊಂಡು ಬರುತ್ತಾ ಇದ್ದೇವೆ.

ಶ್ರೀಮತಿ ಸುಶೀಲಾದಾಯಿ ಷಹಾ (ಬಾಗೇವಾಡಿ).—ಎಲ್ಲಾ ಜಿಲ್ಲೆಗಳಲ್ಲಿ ಟ್ರಾಕ್ಟರ್ಸ್ ಕೆಟ್ಟು ಹೋಗಿವೆ. ಅರ್ಜಿ ಹಾಕಿ ಮೂರು ವರ್ಷಗಳಾದರೂ ಕೂಡ ರೈತರಿಗೆ ಅವು ಸಿಕ್ಕುವುದಿಲ್ಲ.

ಶ್ರೀ ಜಿ. ನಾರಾಯಣ ಗೌಡ.—ಸಾಧಾರಣವಾಗಿ ಈಗ ಇದನ್ನು ಹಾಗೂ ಹೀಗೂ ದೊಡ್ಡ ದೊಡ್ಡ ರೈತರುಗಳಿಗೆ ಹೈರ್‌ಪರ್ಚೇಜ್ ಸಿಸ್ಟಂ ಮೇಲೆ ಒದಗಿಸಿ ಕೊಟ್ಟಿದ್ದೇವೆ. ಈ ಬಗ್ಗೆ ಕೆಲವು ಮಾನ್ಯ ಸದಸ್ಯರು ಹೇಳಿದರು ಅವುಗಳಿಂದ ಕೇವಲ ದೊಡ್ಡ ದೊಡ್ಡ ರೈತರಿಗೆ ಮಾತ್ರ ಅನುಕೂಲ ವಿದೆಯೇ ವಿನಾ ಅವುಗಳಿಂದ ಚಿಕ್ಕಪುಟ್ಟ ರೈತರುಗಳಿಗೂ ಮತ್ತು ಮಧ್ಯಮ ವರ್ಗದ ರೈತರು ಗಳಿಗೂ ಅವುಗಳಿಂದೇನು ಪ್ರಯೋಜನವಾಗುತ್ತಿಲ್ಲ ಎಂದು. ಅದಕ್ಕಾಗಿ ಸರ್ಕಾರದವರು ಇತ್ತೀಚೆಗೆ ಜಪಾನಿನಿಂದ ಕೆಲವು ಚಿಕ್ಕ ಸೈಜಿನ ಟ್ರಾಕ್ಟರುಗಳನ್ನು ತರಿಸುತ್ತಿದ್ದೇವೆ. ಈಗಾಗಲೇ 25 ಬಂದಿವೆ. ಸದ್ಯದಲ್ಲೇ ಇನ್ನೂ 180 ಬರುವುದಿದೆ.

ಇನ್ನು ಕೆಲವು ಮಾನ್ಯ ಸದಸ್ಯರು ಹೇಳಿದರು ನಮ್ಮಲ್ಲಿ ರೈತರ ಮಕ್ಕಳಿಗೆ ಉತ್ತಮ ರೀತಿಯ ವ್ಯವಸಾಯ ಮಾಡಲು ಅವರಿಗೆ ಸರಿಯಾದ ತಿಳುವಳಿಕೆಯನ್ನುಂಟು ಮಾಡುವುದಕ್ಕಾಗಿ ಹೆಚ್ಚು ಹೆಚ್ಚಾಗಿ ಅಗ್ರಿಕಲ್ಚರಲ್ ಸ್ಕೂಲುಗಳನ್ನು ತೆರೆಯಬೇಕೆಂದು ಹೇಳಿದ್ದಾರೆ. ಅವುಗಳನ್ನು ಪ್ರತಿ ಜಿಲ್ಲಾದಲ್ಲೂ ಮಾಡಬೇಕೆಂದು ಹೇಳಿದ್ದಾರೆ. ಆದರೆ ಅಂಥ ಸ್ಕೂಲುಗಳು ನಮ್ಮಲ್ಲಿ ಈಗ 6 ಮಾತ್ರ ಇವೆ. ಇನ್ನು ಮೇಲೆ ಇವುಗಳನ್ನು ಪ್ರತಿ ಜಿಲ್ಲೆಯಲ್ಲೂ ಸ್ಥಾಪಿಸಬೇಕೆಂಬ ಉದ್ದೇಶ ಸರ್ಕಾರದವರಿಗೂ ಇದೆ ಎಂದು ತಿಳಿಸಲಿಚ್ಛಿಸುತ್ತೇನೆ.

ಇನ್ನು ರಿಸರ್ಚ್ ಬಗ್ಗೆ ಪ್ರಸ್ತಾಪ ಮಾಡುತ್ತಾ ಶ್ರೀ ಕೆ. ವಿ. ಬೈರೇಗೌಡರು ನಮ್ಮ ಅಗ್ರಿಕಲ್ಚ ರಲ್ ಕಾಲೇಜನ್ನು ಮುಂದೆ ಯೂನಿವರ್ಸಿಟಿಗೆ ಒಳಪಡಿಸಲಾಗುತ್ತದೆಯೋ ಅಥವಾ ಅದನ್ನು ಇಲಾ ಖೆಯ ಮೂಲಕವೇ ನಡೆಸಲಾಗುತ್ತದೆಯೋ ಎಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಅನೇಕ ಸಲಹೆಗಳನ್ನಿತ್ತಿದ್ದಾರೆ. ಅವುಗಳನ್ನೆಲ್ಲಾ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅದರ ವಿಚಾರದಲ್ಲಿ ಸದ್ಯದಲ್ಲೇ ಒಂದು ನಿರ್ಧರಕ್ಕೆ ಬರುತ್ತಾರೆಂದು ತಿಳಿಸಲಿಚ್ಛಿಸುತ್ತೇನೆ. ಇನ್ನು ಕೆಲವು ಮಾನ್ಯ ಸದಸ್ಯರು ಸರ್ಕಾರದವರು ಅಗ್ರಿ ಕಲ್ಚರಲ್ ಕಾಲೇಜಿನಲ್ಲಿ ಪಾಸಾದ ಗ್ರಾಜುಯೇಟುಗಳಿಗೆ ಕೊಡುತ್ತಿರುವ ಸಂಬಳ ಬಹಳ ಕಡಮೆ ಯಾಗಿರುವುದರಿಂದ ಅವರಿಲ್ಲಿ ಕೆಲಸವನ್ನು ಬಿಟ್ಟು ಬೇರೆ ಕಡೆಗೆ ಖಾಸಗೀ ಫರ್ಮುಗಳಲ್ಲಿ ಕೆಲಸಕ್ಕೆ ಹೋಗುತ್ತಿದ್ದಾರೆ. ಈ ವಿಚಾರದಲ್ಲಿ ಮುಂದಕ್ಕೆ ಇವರಿಗೂ ಇಂಜನಿಯರಿಂಗ್ ಗ್ರಾಜುಯೇಟುಗಳಿಗೆ ಸಂಬಳ ಕೊಡುವಂತೆ ಕೊಡಬೇಕೇ ಬೇಡವೇ ಎಂಬ ವಿಚಾರ ಈಗ ಸರ್ಕಾರದವರ ಪರಿಶೀಲನೆಯಲ್ಲಿದೆ. ಸರ್ಕಾರ ಇದರ ಬಗ್ಗೆ ಬೇಗ ಒಂದು ತೀರ್ಮಾನಕ್ಕೆ ಬರುತ್ತದೆಂದು ತಿಳಿಸಲಿಚ್ಛಿಸುತ್ತೇನೆ.

ಇನ್ನು ಸರ್ಕಾರದವರು ಕೈಗೊಂಡಿರತಕ್ಕ ಸಾಯಿಲ್ ಕನ್‌ಸರ್ವೇಷನ್ ವಿಚಾರದಲ್ಲಿ ಶ್ರೀ ಕೆ. ವಿ. ಬೈರೇಗೌಡು ಕೆಲವು ವಿಷಯಗಳನ್ನು ಹೇಳಿದ್ದಾರೆ. ನಮ್ಮಲ್ಲಿ ಹೆಚ್ಚು ಬೆಳೆ ತೆಗೆಯಲು ಅದರಲ್ಲೂ ಡ್ರೈ ಏರಿಯಾದಲ್ಲಿರತಕ್ಕ ಜಿಲ್ಲೆಗಳಲ್ಲಿ ಇದರ ಉಪಯೋಗ ಬಹಳವಾಗಿದೆ. ಈ ವರೆಗೆ ಒಂದು ಲಕ್ಷ ಮೂವತ್ತು ಸಾವಿರ ಎಕರೆಗಳನ್ನೊಳಗೊಂಡ ಪ್ರದೇಶದಲ್ಲಿ ಕಾಂಟೂರ್ ಬಂಡಿಂಗನ್ನು ಮಾಡಲಾಗಿದೆ. 1964-65ರಲ್ಲಿ ಒಂದು ಲಕ್ಷ 80 ಸಾವಿರ ಎಕರೆಗಳನ್ನೊಳಗೊಂಡ ಪ್ರದೇಶಕ್ಕೆ ಇದನ್ನು ಮುಂದುವರಿಸಬೇಕೆಂದು ನಮ್ಮ ಗುರಿಯಿದೆ. ಆದರೆ ಸಾಯಿಲ್ ಕನ್‌ಸರ್ವೇಷನು ಬಗ್ಗೆ ಕೆಲವು ತೊಂದರೆಗಳೂ ಎಡರು ತೊಡರುಗಳೂ ಇರುತ್ತವೆ. ಇಲ್ಲಿಯ ತನಕ ನಮ್ಮಲ್ಲಿ ಟ್ರೈನಿಂಗಾದ ಜನರು ಇರಲಿಲ್ಲ. ಆದ್ದರಿಂದ ಅಶಿಕ್ಷಿತ ಜನರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳಲು ಕಾನೂನಿನಲ್ಲಿ ಅವ ಕಾಶವಿರಲಿಲ್ಲ. ಈಗ ಅವರಿಗೆಲ್ಲಾ ಟ್ರೈನಿಂಗನ್ನು ಕೊಡಲಾಗಿದೆ. ಈ ಒಂದು ಕಾರಣಕ್ಕಾಗಿ ಈ ಕಾರ್ಯದಲ್ಲಿ ಸ್ವಲ್ಪ ತಡವಾಯಿತು. ಆದಷ್ಟೂ ಇದಕ್ಕೆ ಹೆಚ್ಚಿನ ಗಮನ ಕೊಡಬೇಕೆಂಬುದೇ ಸರ್ಕಾರದವರ ಉದ್ದೇಶವೂ ಕೂಡ ಆಗಿದೆ.

ಇನ್ನು ಎರಡನೆಯದಾಗಿ : ನಮ್ಮ ಮಾನ್ಯ ಸದಸ್ಯರಾದ ಶ್ರೀ ಕೆ. ವಿ. ಬೈರೇಗೌಡರು ಬೋರ್‌ವೆಲ್ ಸ್ಕೀಮನ್ನು......

ಶ್ರೀ ಎ. ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ಕೇವಲ ಬೈರೇಗೌಡರ ಒಬ್ಬರ ವಿಚಾರ ವನ್ನೇ ಹೇಳುತ್ತಿದ್ದಾರೆ, ನಾನು ಸೀನಿಯಾರಿಟಿ ವಿಚಾರ ಕೇಳಿದ್ದರೆ ಅದರ ಬಗ್ಗೆ ಏನೂ ಹೇಳಲಿಲ್ಲ...

ಶ್ರೀ ಕುಂದೂರು ರುದ್ರಪ್ಪ.—ಮಾನ್ಯ ಮಂತ್ರಿಗಳಿಗೆ ಬೈರೇಗೌಡರ ಒಬ್ಬರ ವಿಚಾರ ಬಿಟ್ಟರೆ ನಿಮಗೆ ಬೇರೆ ಯಾರೂ ಏನೂ ಕೇಳಿಯೇ ಇಲ್ಲವೋ?

ಶ್ರೀ ಜಿ. ನಾರಾಯಣ ಗೌಡ.—ಎಲ್ಲ ಮಾನ್ಯ ಸದಸ್ಯರ ಪ್ರಶ್ನೆಗಳಿಗೂ ಕಡೆಯಲ್ಲಿ ಉತ್ತರ ಕೊಡುತ್ತೇನೆ. ಶ್ರೀ ಎ. ಎಸ್. ಪಾಟೀಲರು ಸೀನಿಯಾರಿಟಿ ವಿಚಾರ ಎತ್ತಿ ಆದರಿಂದ ಅನೇಕರಿಗೆ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಇರಬಹುದು. ಆದರೆ ಈ ದಿವಸ ಐದು ಬೇರೆ ಬೇರೆ ಪ್ರದೇಶಗಳು ಒಟ್ಟಾಗಿ ಒಂದು ರಾಜ್ಯವಾಗಿದೆ. ಒಂದೊಂದು ಪ್ರದೇಶದಿಂದ ಬಂದಿರತಕ್ಕ ಅಧಿ ಕಾರಿಗಳ ಸಂಬಳದ ಸ್ಕೇಲುಗಳು ಒಂದೊಂದು ರೀತಿಯಲ್ಲಿರುತ್ತವೆ. ಅವುಗಳನ್ನು ಈಕ್ವೇಟ್ ಮಾಡ

ತಕ್ಕ ವಿಚಾರದಲ್ಲಿ ಸ್ವಲ್ಪ ತೊಡರುಗಳಿವೆ. ಆ ಬಗ್ಗೆ ಈಗಾಗಲೇ ಕೆಲವರು ಕೋರ್ಟುಗಳಿಗೂ ಹೋಗಿದ್ದಾರೆ. ಆದ್ದರಿಂದ ನಾನೀಗ ಈ ವಿಚಾರದಲ್ಲಿ ಹೆಚ್ಚಿಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ.

ಇನ್ನು ನಮ್ಮಲ್ಲಿ ಕೆಲವರು ಉತ್ತಮ ಬಿತ್ತನೆ ರಾಗಿಯನ್ನು ರಿಸರ್ಚ್ ಮಾಡಬೇಕೆಂದು ಹೇಳಿದ್ದಾರೆ. ಈಗಾಗಲೇ ನಾವು ಅನ್ನಪೂರ್ಣ ರಾಗಿ, ಎಂಬ ಜಾತಿಯೊಂದನ್ನು ಕಂಡುಹಿಡಿದು ಅದನು ಟ್ರಯಲ್ ಬಗ್ಗೆ ಕಾವೇರಿ ಡೆಲ್ಟದಲ್ಲಿ ಕೊಡಲಾಗಿದೆ. ಅಲ್ಲಿ ಅದರ ಟ್ರಯಲ್ ನಡೆಯುತ್ತಿದೆ.

ಇನ್ನು ಅನೇಕರು ಜಯಧರ ಹತ್ತಿ ಮತ್ತು ಲಕ್ಷ್ಮಿ ಹತ್ತಿ ವಿಚಾರ ಎತ್ತಿ ಈ ಬೆಳೆಗಳು ಕೆಡುತ್ತಿವೆ, ಅನೇಕ ಸಂದರ್ಭಗಳಲ್ಲಿ ಸರಿಯಾದ ಉತ್ಪತ್ತಿ ಬರುತ್ತಿಲ್ಲ. ಇದಕ್ಕೆ ಸರ್ಕಾರದವರು ಹೆಚ್ಚಿನ ನಿಗವನ್ನು ಕೊಡಬೇಕೆಂದು ಹೇಳಿದ್ದಾರೆ. ಹಾಗೇ ಇನ್ನು ಕೆಲವು ಮಾನ್ಯ ಸದಸ್ಯರು ಆಲೂಗಡ್ಡೆ ವಿಚಾರ ಹೇಳಿದ್ದಾರೆ. ಇದು ಇಲ್ಲಿಯತನಕ ಬರ್ಮಾದಿಂದ ಎಷ್ಟು ಬರುತ್ತಿತ್ತೋ ಅದರ ನಾಲ್ಕರಷ್ಟನ್ನು ಈಗ ಸಿಲೋನಿನಿಂದ ಬರುತ್ತಿದೆ. ಸರ್ಕಾರ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದೆ ಎಂದು ಹೇಳುತ್ತೇನೆ.

ಇನ್ನು ನಮ್ಮಲ್ಲಿ ಬೆಳೆಯಲಾಗುತ್ತಿರುವ ಹಣ್ಣು ಹಂಪಲುಗಳ ಹಾಗೂ ತರಕಾರಿಗಳ ವಿಚಾರದಲ್ಲಿ ಸರ್ಕಾರದವರು ಈ ಬಗ್ಗೆ ಒಂದು ಕ್ರಾಷ್ ಪ್ರೋಗ್ರಾಮನ್ನು ಮಾಡಿ ಅದರ ಅಂಗವಾಗಿ ಮೈಸೂರು, ಮಂಗಳೂರು, ಧಾರವಾಡ, ಹುಬ್ಬಳ್ಳಿ, ರಾಯಚೂರು ಇತ್ಯಾದಿ ದೊಡ್ಡ ದೊಡ್ಡ ಪಟ್ಟಣಗಳಿಗೆ ಇನ್ಸೊಲೇಟೆಡ್ ವ್ಯಾನು ಮೂಲಕ ಹಣ್ಣು ಮತ್ತು ತರಕಾರಿಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇದರಿಂದ ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕವರಿಗೂ ಅನುಕೂಲವಾಗಿ ಈ ಹಣ್ಣು ಮತ್ತು ತರಕಾರಿಗಳನ್ನು ಬೆಳೆಯತಕ್ಕವರಿಗೂ ಗಿರಾಕಿಗಳು ಸಿಕ್ಕಿ ಉಭಯತ್ರರಿಗೂ ಅನುಕೂಲವಾಗುವುದು. ನಾನು ಇಷ್ಟನ್ನು ಹೇಳಿ ಸರ್ವರೂ ಈ ಬೇಡಿಕೆಗಳಿಗೆ ತಮ್ಮೆಲ್ಲರ ಸರ್ವಾನುಮತ ಬೆಂಬಲವನ್ನು ನೀಡಬೇಕೆಂದು ಪ್ರಾರ್ಥಿಸಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

5-30 P. M.

ಶ್ರೀ ಟಿ. ಡಿ. ದೇವೇಂದ್ರಪ್ಪ.—ತಾವು ಬಹಳ ಚೆನ್ನಾಗಿ ಮಾತನಾಡಿದಿರಿ. ಈ ಡಿಮ್ಯಾಂಡಿಗೆ ಒಪ್ಪಿಗೆ ಕೊಡುವುದು ಅನಿವಾರ್ಯ ಒಪ್ಪಿಗೆ ಕೊಡುತ್ತೇವೆ. ಈ ಇಲಾಖೆ ಎಷ್ಟುಮಟ್ಟಿಗೆ ಕೆಲಸ ಮಾಡಿದೆ ಎನ್ನುವುದನ್ನು ಈಗ ಮಾನ್ಯ ಅರ್ಥ ಸಚಿವರೂ ಇದ್ದಾರೆ. ಇದರ ಬಗ್ಗೆ ಅವರೂ ಕೂಡ ಉತ್ತರ ದಯಪಾಲಿಸಬೇಕೆಂದು ಹೇಳುತ್ತೇನೆ. 1963-64ನೇ ಸಾಲಿನಲ್ಲಿ ಗ್ರೂಪ್ 12ಕ್ಕೆ 25 ಲಕ್ಷ 63 ಸಾವಿರ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದರೆ ಅದರಲ್ಲಿ ಎರಡೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಗ್ರೂಪ್ 13 ರಲ್ಲಿ 10 ಲಕ್ಷ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರೆ 5 ಲಕ್ಷ 40 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. 27 ಲಕ್ಷ ರೂಪಾಯಿ ಲ್ಯಾಪ್ಸ್ ಆಗಿದೆ. ಇದನ್ನು ನೋಡಿದರೆ ಈ ಖಾತೆಯನ್ನು ವಹಿಸಿಕೊಂಡಿರುವ ಸಚಿವರ ಮತ್ತು ಅವರ ಸಿಬ್ಬಂದಿಯವರು ಆಹಾರದ ಬೆಳವಣಿಗೆಗೆ ಎಷ್ಟು ಮಟ್ಟಿಗೆ ಕೆಲಸ ಮಾಡಿದ್ದಾರೆ ಎನ್ನುವುದು ಅರ್ಥವಾಗುತ್ತದೆ, ಎಮ್ಮೆ ಕೆಸರಿನೊಳಗೆ ಮುಳುಗಿದಾಗ ಕೆಸರು ಹೇಗೆ ಹತ್ತಿಕೊಳ್ಳುತ್ತದೆಯೋ ಹಾಗೆ ಈ ಇಲಾಖೆಗೆ ಕೆಸರು ಹತ್ತಿಕೊಂಡಿದೆ. ಆದ್ದರಿಂದ ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ನಾರಾಯಣ ಗೌಡ.—ಕೆಲವು ಸಂದರ್ಭಗಳಲ್ಲಿ ಈ ಸ್ಕೀಂಗಳು ಕಡೆಯೊಳಗೆ ಮಂಜೂರಾಗುತ್ತವೆ, ಮಂಜೂರಾದ ಮೇಲೆ ಖರ್ಚು ಮಾಡುವುದಕ್ಕೆ ಕಾಲಾವಕಾಶ ಇರುವುದಿಲ್ಲ ಆದ್ದರಿಂದ ಹೀಗೆ ಆಗಿದೆ.

ಶ್ರೀ ಎ. ಎಸ್. ಪಾಟೀಲ್.—ಅನೇಕ ಸಂದರ್ಭಗಳಲ್ಲಿ ಮಂಜೂರಾದ ಹಣವನ್ನೂ ಕೂಡ ಖರ್ಚು ಮಾಡದೇ ಕೆಲಸ ಕಾರ್ಯಗಳನ್ನು ಮಾಡಿಸದೇ ಇರುವವರ ಮೇಲೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಜಿ. ನಾರಾಯಣ ಗೌಡ.—ಮಂಜೂರಾಗಿ ಬರುವುದೇ ತಡವಾಗುತ್ತದೆ ಎಂದು ಹೇಳಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹಾಗೆ ಉತ್ತರ ಕೊಡುವುದು ಸರಿಯಲ್ಲ. ಈ ರೀತಿ ಅನ್ಯಾಯವಾಗುವುದನ್ನು ತಪ್ಪಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಯುವಕರು ಮಂತ್ರಿಗಳು ಇದ್ದಾರೆ. ನಿಮಗೆ ಸಾರ್ಥಕವಾಗಿ ಕೆಲಸ ಮಾಡುವುದಕ್ಕೆ ಶಕ್ತಿ ಇಲ್ಲದೆ ಇದ್ದರೆ ಅವರಿಗಾದರೂ ಈ ಕೆಲಸ ಮಾಡ್ರಿ,

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಎಂದು ಹೇಳಿ. ಈ ರೀತಿ ಅನ್ಯಾಯ ಮಾಡುವುದು ಬೇಡ. ರೈತರಿಗೆ ಆಹಾರದ ಸಮಸ್ಯೆ ಒಂದು ಕಡೆ ಇದೆ, ಒಂದು ಕಡೆ ಮತ್ತೊಂದು ರೀತಿಯಲ್ಲಿ ಸಂಕಟ ಪಡುತ್ತಾ ಇದ್ದಾರೆ. ಹೀಗಾದರೆ ಏನು ಅನ್ಯಾಯ ಇದು ?

ಶ್ರೀ ಕುಂದೂರು ರುದ್ರಪ್ಪ.—ಮೈಸೂರು ಸಂಸ್ಥಾನದಲ್ಲಿ ಸೀಡ್ ಫಾರಂಗಳನ್ನು ಮಾಡಿದ್ದೀರಿ. ನೂರಕ್ಕೆ 90 ಭಾಗ ಸರಿಯಾಗಿ ನಡೆಯುತ್ತಾ ಇಲ್ಲ. ಒಂದು ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. 10 ಸಾವಿರ ರೂಪಾಯಿಗಳಷ್ಟು ಕೂಡ ಸರಿಯಾಗಿ ವಿನಿಯೋಗವಾಗಿಲ್ಲ. ಬಹಳ ಹಣ ರ್‍ಯಾಪ್ ಆಗುತ್ತಾ ಇದೆ.

ಶ್ರೀ ಜಿ. ನಾರಾಯಣ ಗೌಡ.—ಕೆಲವು ಸೀಡ್ ಫಾರಂಗಳನ್ನು ಸೆಲೆಕ್ಟ್ ಮಾಡಿಕೊಂಡಿರುವುದೇ ಸರಿಯಾಗಿಲ್ಲ. ಸರಿಯಾದ ಸ್ಥಳ ನೋಡಿ ಸೆಲೆಕ್ಟ್ ಮಾಡಿಕೊಂಡಿಲ್ಲ. ಆದ್ದರಿಂದ ತೊಂದರೆಯಾಗಿದೆ, ಅದಕ್ಕೆ ಗಮನ ಕೊಡುತ್ತೇವೆ.

ಶ್ರೀ ಕುಂದೂರು ರುದ್ರಪ್ಪ.—ನಮ್ಮ ಇಲಾಖೆಯಲ್ಲಿ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಎಲ್ಲಾ ಹೇಳಿದಿರಿ. ಈಗ ಎನ್. ಇ. ಎಸ್ ಬ್ಲಾಕ್‌ನಲ್ಲಿ ಗ್ರಾಮ ಸೇವಕರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾ ಇದ್ದೀರಿ, ಅನೇಕ ಕಡೆಗಳಲ್ಲಿ ಅವರ ನೇಮಕ ಆಗಿಲ್ಲ. ನೇಮಕ ಮಾಡಿದರೂ ಕೂಡ ಅವರು ಬಂದಿಲ್ಲ ಎಂದು ಹೇಳುತ್ತಾ ಇದ್ದಾರೆ. ಈ ವಿಷಯದಲ್ಲಿ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಜಿ. ನಾರಾಯಣ ಗೌಡ.—ಒಂದು ವೇಳೆ ಕೆಲವು ಕಡೆಗಳಲ್ಲಿ ಇಲ್ಲದೆ ಇದ್ದರೆ ಅವರನ್ನು ನೇಮಕ ಮಾಡುವುದಕ್ಕೆ ಬೇಗನೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಗೋಪಾಲರಾವ್ ಪಾಂಡವ (ಹಮನಬಾದ್).—ಗುಲ್ಬರ್ಗಾದಲ್ಲಿ ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಒಂದು ಡಿವಿಜನ್ ಮಂಜೂರಾಗಿ ಒಂದು ವರ್ಷ ಆಯಿತು. ಅಲ್ಲಿ ಸಿಬ್ಬಂದಿ ಇಲ್ಲ. ಈ ವಿಷಯದಲ್ಲಿ ಏನು ಮಾಡುತ್ತೀರಿ ?

ಶ್ರೀ ಜಿ. ನಾರಾಯಣ ಗೌಡ.—ಇನ್ನೂ ಕೂಡ ತರಬೇತಿ ಆಗಬೇಕು ಅದು ಆಗದೇ ಇರುವುದರಿಂದ ಈ ಕಷ್ಟ ಬಂದಿದೆ. ಇನ್ನು ಕೆಲವು ಸಂದರ್ಭಗಳಲ್ಲಿ ಕ್ಲಾಸ್ 3 ರಿಂದ ಕ್ಲಾಸ್ 2ಕ್ಕೆ ಪ್ರಮೋಷನ್ ಮಾಡುವಾಗ ಸೀನಿಯಾರಿಟಿ ಲಿಸ್ಟ್ ಫೈನಲೈಸ್ ಆಗದೇ ಇರುವುದರಿಂದ ತೊಂದರೆಯಾಗಿದೆ ಆದ್ದರಿಂದ ಇದನ್ನು ಬೇಗನೆ ಮಾಡುತ್ತೇವೆ.

ಶ್ರೀ ಕೆ. ಎಸ್. ನಾಗರತ್ನಮ್ಮ.—ಪವರ್ ಸ್ಪ್ರೇ ವಿಚಾರ ಹೇಳಿದೆ, ಕ್ರಷರ್ ವಿಚಾರ ಹೇಳಿದೆ ಡೀಸೆಲ್ ಸೆಟ್ಸ್ ಕೊಡಬೇಕೆಂದು ಹೇಳಿದೆ ಇದು ಯಾವದಕ್ಕೂ ಕೂಡ ತಾವು ಉತ್ತರ ಹೇಳಲಿಲ್ಲ.

ಶ್ರೀ ಜಿ. ನಾರಾಯಣ ಗೌಡ.—ಡೀಸಲ್ ಸೆಟ್ಸ್‌ಗೆ ತಮಗೆ ಗೊತ್ತಿರುವ ಹಾಗೆ ರೇಟ್ಸ್ ಫಿಕ್ಸ್ ಮಾಡುವವರು ಕೇಂದ್ರ ಸರ್ಕಾರದವರು, ನಾವೂ ಸಹ ಅವರನ್ನು ಕೇಳಿಕೊಂಡಿದ್ದೇವೆ ಅವರಿಂದ ಅದು ಬರಬೇಕು.

(ಶ್ರೀ ಎ. ಎಸ್. ಪಾಟೀಲ್ ಅವರು ನಿಂತುಕೊಂಡರು)

ಅಧ್ಯಕ್ಷರು.—ಶ್ರೀಮಾನ್ ಪಾಟೀಲ್ ಅವರು ಏನು ಕೇಳಿದರೋ ನನಗೆ ಗೊತ್ತಿಲ್ಲ. ಅವರು ಇನ್ನೂ ಕೂಡ ಕ್ಲಾರಿಫಿಕೇಷನ್ ಕೇಳಬೇಕೆಂದು ಅಪೇಕ್ಷೆಪಡುವುದಾದರೆ ನನ್ನ ಸಮ್ಮತಿ ಇದೆ. ಆದರೆ ಇದನ್ನು 6 ಗಂಟೆಗೆ ಓಟಿಗೆ ಹಾಕುತ್ತೇನೆ. ಹೇಗೆ ಮಾಡೋಣ ಎಂಬುದನ್ನು ತಾವು ಸೂಚಿಸಿ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹೀಗೆ ಅವಸರ ಮಾಡಿದರೆ ನಾವೇನು ಮಾಡೋಣ ? ನಮ್ಮ ಬಾಯಿಗೆ ಬೀಗ ಆದರೂ ಹಾಕಿ ಸುಮ್ಮನೆ ಕುಳಿತುಕೊಂಡು ಬಿಡುತ್ತೇವೆ.

ಅಧ್ಯಕ್ಷರು.—ನೀವು ಹೇಳುವುದಾದರೂ ಏನು ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ಇಲಾಖೆಯ ವಿಷಯದಲ್ಲಿ ಹೇಳಬೇಕಾದ ವಿಷಯ ಬಹಳ ಇದೆ. ಅದಕ್ಕೆ ಅವಕಾಶ ಕೊಡಿ, ಇಲ್ಲದೆ ಇದ್ದರೆ ನಾವು ಏನೂ ಹೇಳುವುದಕ್ಕೆ ಆಗುವುದಿಲ್ಲ. ಆಹಾರದ ಸಮಸ್ಯೆ ಎಷ್ಟು ಇದೆ ಎಂಬುದನ್ನು ತಾವು ತಿಳಿದುಕೊಂಡಿದ್ದೀರಿ, ರೈತರ ಕಷ್ಟ ತಾವು ಅರಿತವರಾಗಿದ್ದೀರಿ ಆದ್ದರಿಂದ ತಮ್ಮಲ್ಲಿ ಹೇಳುತ್ತಾ ಇದ್ದೇನೆ ನಮಗೆ ಸ್ವಲ್ಪ ವಿಷಯಗಳನ್ನು ತಿಳಿದುಕೊಳ್ಳಲು ಅವಕಾಶ ಕೊಡಿ.

ಅಧ್ಯಕ್ಷರು.—ತಾವು ಬಹಳ ಉತ್ತಮ ಮನುಷ್ಯರು, ನಿಮ್ಮ ಮೇಲೆ ನನಗೆ ತುಂಬಾ ಪ್ರೀತಿ ಇದೆ. ಆದರೆ ಈಗ ಮಾತನಾಡಲು ತಾವು ನಿಮ್ಮ ವ್ಹಿಪ್ ಹತ್ತಿರ ಮಾತನಾಡಿದ್ದಿರಾ ? ನಿಮ್ಮ ಹೆಸರು ಕೊಟ್ಟಿದ್ದಿರಾ ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ನಾನೇನೂ ಆಕ್ಷೇಪಣೆ ಮಾಡುತ್ತಾ ಇಲ್ಲ, ಪ್ರಶ್ನೆಗಳನ್ನು ಕೇಳಲು ಸ್ವಲ್ಪ ಅವಕಾಶ ಕೊಡಿ ಎಂದು ಕೇಳಿದೆ ಅಷ್ಟೆ.

ಅಧ್ಯಕ್ಷರು.—ಅವಕಾಶ ಕೊಡಲಿಕ್ಕೆ ನನಗೂ ಸಂತೋಷ ಇದೆ. ಆದರೆ ಉತ್ತರ ಕೊಡಬೇಕಾದ ವರು ಇಬ್ಬರು ಮಂತ್ರಿಗಳು ಇದ್ದಾರೆ, ಅವರಿಗೆ ನೀವು 6 ಗಂಟೆಯ ನಂತರ ಭಾಷಣ ಮಾಡುವುದು ಬೇಡ ಎಂದು ಹೇಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್ (ತಿಕೋಟ).—ಟೈಂ ಅಲಾಟ್‌ಮೆಂಟ್ ಸರಿಯಾಗಿ ಆಗಲಿಲ್ಲ ಆದ್ದರಿಂದ ನಮಗೆ ಟೈಂ ಸಿಕ್ಕಲಿಲ್ಲ.

ಅಧ್ಯಕ್ಷರು.—ಟೈಂ ಅಲಾಟ್‌ಮೆಂಟ್ ಮಾಡುವವರು ಯಾರು ಅಂತ ನೋಡಿ ಆಮೇಲೆ ಅವರ ಮೇಲೆ ದೂಷಣೆ ಮಾಡೋಣ.

ಶ್ರೀ ಟಿ. ಕೆ. ಕಂಬಳಿ (ಕುಂದಗೋಳ್).—ಬೇರೆ ಡಿಮ್ಯಾಂಡ್‌ಗಳ ಮೇಲೆ ಯಾರು ಮಾತನಾಡಿ ದ್ದರೋ ಅವರಿಗೆ ಈ ಡಿಮ್ಯಾಂಡಿನ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡದೆ ಇದ್ದಿದ್ದರೆ ನಮಗೂ ಅವಕಾಶ ಸಿಕ್ಕುತ್ತಾ ಇತ್ತು, ಆ ರೀತಿ ಮಾಡಲಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅಧ್ಯಕ್ಷರಲ್ಲಿ ಒಂದು ಮನವಿ, ವರ್ಷಕ್ಕೆ ಒಂದು ಸಾರಿ ಬಡ್ಜೆಟ್ ಸೆಕ್ಷನ್ ಕರೆಯುತ್ತಾರೆ. ಆಹಾರದ ಸಮಸ್ಯೆ ಏನು, ವ್ಯವಸಾಯದ ಇಲಾಖೆಯಲ್ಲಿ ಏನೇನು ಲೋಪ ದೋಷ ಇದೆ ಎಂಬುದನ್ನು ಹೇಳುವುದಕ್ಕೆ ಮತ್ತು ತಿಳಿದುಕೊಳ್ಳುವುದಕ್ಕೆ ಅಧ್ಯಕ್ಷರು ಅವಕಾಶ ಕೊಡು ವುದಿಲ್ಲ ಎಂದು ಹೇಳಿದರೆ ನಾವಾದರೂ ಇಲ್ಲಿಗೆ ಏಕೆ ಬರಬೇಕು, ಇಲ್ಲಿ ಕುಳಿತುಕೊಳ್ಳಬೇಕು !

ಅಧ್ಯಕ್ಷರು.—ನಿಮ್ಮ ಮನಸ್ಸಿನಲ್ಲಿ ಏನಿದೆ ಎಂಬುದು ಸಂಪೂರ್ಣವಾಗಿ ವೇದ್ಯವಾಯಿತು. ಇತರ ಮಿನಿಸ್ಟರುಗಳು ಮಾತನಾಡುವುದು ಬೇಡ ಎಂದರೆ ನಿಮಗೇ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ವರ್ಷಕ್ಕೆ ಒಮ್ಮೆ ಬಡ್ಜೆಟ್ ಸೆಷನ್ ಕರೆಯುತ್ತಾರೆ ಎಂದು ಹೇಳಿದರು, ಬಡ್ಜೆಟ್ ಸೆಷನ್ ಒಂದೇ ಸಾರಿ ಆಗುವುದು ಎರಡು ಸಾರಿ ಕರೆಯುವುದಕ್ಕೆ ಆಗುವುದಿಲ್ಲವಲ್ಲಾ !

ಶ್ರೀ ಗೋಪಾಲರಾವ್ ಮುಡಬಿ.—ನಾಳೆ ಒಂದು ದಿವಸ ಇದರ ಚರ್ಚೆಗೆ ಅವಕಾಶ ಕೊಟ್ಟರೆ ಆದೀತು.

ಅಧ್ಯಕ್ಷರು.—ಇಷ್ಟರವರೆಗೂ ಆಲೋಚನೆ ಮಾಡಿದ ಪ್ರಕಾರ ನಾಳೆ ಬೆಳಿಗ್ಗೆ ನಾಳೆ ಸಾಯಂಕಾಲ ಕುಳಿತುಕೊಂಡರೂ ಆಗಲಿಕ್ಕೆ ಇಲ್ಲ, ಸಾಧ್ಯವಾದಷ್ಟೂ ಎಲ್ಲರಿಗೂ ಸಮಾಧಾನ ವಾಗುವಂತೆ ಅವಕಾಶವನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದೇನೆ, ತಮ್ಮ ಅಭಿಪ್ರಾಯ ಆ ರೀತಿ ಇರುವುದಾದರೆ ನನ್ನದೇನೂ ಆಕ್ಷೇಪಣೆ ಇಲ್ಲ—I have no objection. Shall I continue this demand tomorrow also ? The only thing is, there are important demands.

Any way, I put it to the House: Shall I hold this over till tomorrow ? I have no objection.

SRI B. D. JATTI.—If necessary, we can sit for fifteen minutes and finish.

MR. SPEAKER.—Till 7-30 I am prepared to sit. I am giving time for clarification till 7-15. But there must be some method.

† ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಗಳ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಮೀನುಗಾರಿಕೆ ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೆ ಒಬ್ಬರು ಮಾನ್ಯ ಸದಸ್ಯರು ಬಹಳ ಉಪಯುಕ್ತವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಮೀನುಗಾರಿಕೆಯ ಜನಾಂಗದಿಂದ ಬಂದಿರುವವರು ಮತ್ತು ಅತ್ಯಂತ ಅನುಭವಿಗಳು. ಅವರು ಈ ದಿವಸ ಮೀನುಗಾರಿಕೆಯ ವಿಷಯ ದಲ್ಲಿ ಹೆಚ್ಚು ಆಸಕ್ತಿ ವಹಿಸಿ ಇಡೀ ಡಿಫೆನ್ಸ್ ಇಲಾಖೆಗೆ ಬೇಕಾಗಿರುವ ಮೀನನ್ನು ಸರಬರಾಯಿ ಮಾಡು

(ಶ್ರೀ ಬಿ. ರಾಚಯ್ಯ)

ತ್ತಿದ್ದಾರೆ. ಅವರು ಕೊಟ್ಟಂಥ ಅಭಿಪ್ರಾಯಗಳಲ್ಲಿ ಬಹುಶಃ ಯಾವುದನ್ನೂ ಕೂಡ ಅಲ್ಲಗಳೆಯುವಂತಿಲ್ಲ. ಆದರೆ ಈ ಇಲಾಖೆಯಲ್ಲಿ 2-3 ವಿಷಯಗಳಮೇಲೆ ಹೆಚ್ಚಿನ ಗಮನವನ್ನು ತೆಗೆದುಕೊಳ್ಳಬೇಕೆಂದು ನಮ್ಮನ್ನು ಒತ್ತಾಯ ಮಾಡಿದ್ದಾರೆ. ಮುಖ್ಯವಾಗಿ ಮೀನುಗಾರಿಕೆ ಅತ್ಯಂತ ಹಿಂದುಳಿದ ಬಡಜನರಿಗೆ ಸೇರಿದ ಕಸಬಾಗಿದೆ. ಅವರು ತಮ್ಮ ಜೀವನವನ್ನು ಇದಕ್ಕಾಗಿ ಮುಡುಪಾಗಿಟ್ಟು ಸಮುದ್ರಕ್ಕೆ ಹೋಗಿ ತಮ್ಮ ಜೀವನವನ್ನು ಸಾಗಿಸಬೇಕಾಗಿದೆ. ಇಂಥವರ ವಿಚಾರವನ್ನು ಹೆಚ್ಚಿನ ಅನುಕಂಪವಿಟ್ಟು ಅವರ ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ಹೇಗೆ ಸುಧಾರಿಸುತ್ತಿದ್ದಾರೆಂದು ರೀಸರ್ವೆ ಕೂಡ ಮಾಡಬೇಕೆಂದು ಒತ್ತಾಯಮಾಡಿದೆ. ಆ ವಿಷಯವನ್ನು ಆಗಲೇ ಹೇಳಿದ್ದೇನೆ. ಸರ್ಕಾರದವರು ಆದಷ್ಟುಬೇಗ ಇದಕ್ಕೆ ಬೇಕಾದ ಅಂಕಿಅಂಶಗಳನ್ನು ಪತ್ತೆ ಹಚ್ಚಲು ಸಂಬಂಧಪಟ್ಟ ಸಿಬ್ಬಂದಿಗೆ ತಿಳಿಸಿದ್ದಾರೆ, ಆ ಕೆಲಸ ನಡೆಯುತ್ತಿದೆ. ಈ ಕೈಗಾರಿಕೆಯನ್ನು ಅವಲಂಬಿಸಿರುವ ಜನ ಈ ದಿವಸ ಸುಮಾರು, ಆಗಲೇ ತಿಳಿಸಿರುವಂತೆ, 6 ಲಕ್ಷ ಚಿಲ್ಲರೆ ಇದ್ದಾರೆ. ಉತ್ತರ ಕನಡ ಮತ್ತು ದಕ್ಷಿಣ ಕನಡ ಜಿಲ್ಲೆಗಳಲ್ಲಿ ಈ ಕಸಬನ್ನವಲಂಬಿಸಿರುವ ಸುಮಾರು 20 ಸಾವಿರ ಜನರಿದ್ದಾರೆ. ಅವರಿಗೆ ಬೇಕಾದ ತರಬೇತಿಯನ್ನು ಕೊಡಲು ಹಿಂದೆ ಎರಡು ಕೇಂದ್ರಗಳಿದ್ದುವು, ಈ ವರ್ಷ ಅದರ ಜೊತೆಗೆ 3 ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ. ಮತ್ತು ಕಾರವಾರ, ಮಂಗಳೂರು—ಈ ಎರಡು ಸ್ಥಳಗಳಲ್ಲಿ ಯಾಂತ್ರಿಕ ದೋಣಿಗಳನ್ನು ಕಟ್ಟುತ್ತಿತ್ತು; ಅದರ ಜೊತೆಗೆ ಫಾರೆಸ್ಟ್ ಇಲಾಖೆಯಿಂದ ಒಂದು ಯಾಂತ್ರಿಕ ದೋಣಿಗೆ ಸಂಬಂಧಪಟ್ಟ ಕೇಂದ್ರವನ್ನು ತೆರೆಯಲು ಯೋಚನೆಮಾಡುತ್ತಿದ್ದೇವೆ. ಅಲ್ಲದೆ ಸಹಕಾರಿ ಸಂಸ್ಥೆಗಳು ಮತ್ತು ಖಾಸಗಿಯವರು ಮುಂದೆ ಬಂದಾಗ ಯಂತ್ರವನ್ನು ಅವರಿಗೆ ಕೊಟ್ಟು ಅವರು ದೋಣಿ ಕಟ್ಟುವುದಕ್ಕೆ ಸಹಾಯ ಧನ ಮತ್ತು ಸಾಲ ಕೊಡುತ್ತಿದ್ದೇವೆ. ಇದರ ಪ್ರಯುಕ್ತ ಈ ವರ್ಷ ಸುಮಾರು 191 ದೋಣಿಗಳು ನಮ್ಮ ಸಂಸ್ಥಾನದ ಸಮುದ್ರದಲ್ಲಿ ಓಡಾಡುವುದಕ್ಕೆ ಅವಕಾಶವಾಗಿದೆ. ಸುಮಾರು 10 ಸಾವಿರ ಚದರಮೈಲಿ ಇರುವ ಸಮುದ್ರ ತೀರದಲ್ಲಿ ಉತ್ಕೃಷ್ಟವಾದ ಮೀನಿದೆ. ಅದನ್ನು ಹಿಡಿದು ರಫ್ತು ಮಾಡಿ ವಿದೇಶಿ ವಿನಿಮಯ ಸಂಪಾದನೆ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹೆಚ್ಚು ಗಮನ ಕೊಡಬೇಕೆಂದು ಹೇಳಿರುವುದರಿಂದ ಸುಮಾರು ಆರೂವರೆ ಕೋಟಿ ರೂಪಾಯಿಗಳ ಒಂದು ಅಂದಾಜು ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸಲಾಗಿದೆ. ಕೇಂದ್ರದವರು ಅರವತ್ತೆರಡೂವರೆ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ನಮ್ಮ ಸರಕಾರ ಅದನ್ನು ಕ್ರ್ಯಾಷ್ ಪ್ರೋಗ್ರಾಂಗೆ ಉಪಯೋಗಿಸಬೇಕು, ಕೊಟ್ಟಿರುವ ಹಣದಲ್ಲಿ ಒಂದು ಕಾಸೂ ಉಳಿಸಕೂಡದು ಎಂದು ತಿಳಿಸಿದೆ, ಎರಡು ವರ್ಷಗಳಿಗೆ ಇದನು ಖರ್ಚುಮಾಡಬೇಕು. ಕೇಂದ್ರಸರಕಾರದವರು ಕೊಟ್ಟಿರುವ ಹಣದಲ್ಲಿ ಸ್ವಲ್ಪವೂ ಉಳಿಯದ ಹಾಗೆ ಈ ಎರಡು ವರ್ಷಗಳಲ್ಲಿ ಖರ್ಚುಮಾಡುತ್ತೇವೆಂದು ಹೇಳುತ್ತಾ ಅವರು ಹೇಳಿದಂತೆ ಮೆಕ್ಯನೈಜ್ಡ್ ಬೋಟ್ಸ್ ಹೆಚ್ಚಾದಮೇಲೆ ಅದಕ್ಕೆ ಬೇಕಾದ ಫಿಷಿಂಗ್ ಹಾರ್ಬರ್ಸ್ ನಾಲ್ಕನ್ನು ಮಂಜೂರು ಮಾಡಲಾಗಿದೆ. ಪ್ರತಿಯೊಂದು ಕೆಲಸಕಾರ್ಯವೂ ತ್ವರಿತವಾಗಿ ಆಗಬೇಕೆಂದು ಹೇಳಿದೆ. ಪಬ್ಲಿಕ್ ವರ್ಕ್ಸ್ ಸಿಬ್ಬಂದಿ ಈ ಕೆಲಸ ಮಾಡಬೇಕಾಗಿದೆ. ಆದುದರಿಂದ ಸ್ವಲ್ಪಮಟ್ಟಿಗೆ ಟೆಂಡರು ಕರೆಯುವಾಗ ಮತ್ತು ಇತರ ಸಂದರ್ಭಗಳಲ್ಲಿ ಸ್ವಲ್ಪ ತಡವಾಗಿದೆ. ಸರಕಾರ ಈ ವಿಷಯದಲ್ಲಿ ಗಮನಕೊಡದೆ ಸುಮ್ಮನೆ ಕುಳಿತಿಲ್ಲ. ಅಲ್ಲದೆ ಮಲ್ಪೆ ಬಂದರನ್ನು ಯುಗೋಸ್ಲೇವಿಯಾದ ಸಹಾಯ ಪಡೆದು ದೊಡ್ಡ ಬಂದರನ್ನಾಗಿ ಮಾಡಬೇಕೆಂದು ಯುಗೋಸ್ಲೇವಿಯಾದವರು ಇಲ್ಲಿಗೆ ಬಂದಾಗ ಅವರೊಡನೆ ಆ ವಿಷಯ ಚರ್ಚೆಮಾಡಿದ್ದೇವೆ. ಹೊರದೇಶಗಳ ಸಹಕಾರ ಪಡೆದು ಈ ಉದ್ಯಮದಲ್ಲಿ ಹೆಚ್ಚಿನ ಕೆಲಸ ಮಾಡಬೇಕಾಗಿದೆ. ಈ ಪ್ರಕಾರ ಹೆಚ್ಚು ಗಮನ ಕೊಡಲಾಗುತ್ತಿದೆ. ಆದುದರಿಂದ ಹಾರ್ಬರ್ ಕನ್‌ಸ್ಟ್ರಕ್ಷನ್, ಫ್ರೀಜಿಂಗ್ ಪ್ಲಾಂಟ್, ಕ್ಯಾನಿಂಗ್‌ಪ್ಲಾಂಟ್, ಮೆಕನೈಜೇಷನ್ ಮುಂತಾದ್ದೆಲ್ಲಕ್ಕೂ ಕೇಂದ್ರ ಸರ್ಕಾರದ ನೆರವನ್ನು ಪಡೆಯುವುದೂ ಅಲ್ಲದೆ ಹೊರದೇಶಗಳ ಸಹಾಯ ಮತ್ತು ಅವರ ತಾಂತ್ರಿಕ ಜ್ಞಾನ ಪಡೆದು ಈ ದೇಶದಲ್ಲಿರುವ 10 ಸಾವಿರ ಚದರಮೈಲಿ ಇರುವ ಸಮುದ್ರ ಪ್ರದೇಶದಲ್ಲಿ ಮೀನನ್ನು ಹಿಡಿದು ಅದರ ಮೂಲಕ ಹೆಚ್ಚಿನ ಲಾಭ ಸಂಪಾದನೆ ಮಾಡುವುದಕ್ಕೆ ಮತ್ತು ಈ ಕಸಬಿನಲ್ಲಿ ನಿರತರಾಗಿರುವವರಿಗೆ ಆರ್ಥಿಕವಾಗಿ ಹೆಚ್ಚು ಸಹಾಯವೇನು ಬೇಕೋ ಅದನ್ನೂ ಮಾಡಲು ಸರಕಾರದವರು ಶ್ರಮಿಸುತ್ತಿದ್ದಾರೆ. ಕೇಂದ್ರ ಸರಕಾರದವರು ಕೊಡುತ್ತಿದ್ದ ಫಿಷರಿ ರಿಕ್ವಿಜಿಟ್ಸ್, ಸಾಲ್ಟ್ಸ್, ಸಹಾಯ ಧನ ಮುಂತಾದುವನ್ನು ಎಲ್ಲಾ ಪ್ರಾಂತಗಳಿಗೂ ನಿಲ್ಲಿಸಿದ್ದಾರೆ. ಆದುದರಿಂದ ನಾವು ಕೊಡಲಿಲ್ಲ. ಇದನ್ನು ಮತ್ತೆ ಕೊಡಬೇಕಾಗಿದೆ. ಸುಮಾರು 32 ಫಿಷ್ ಕ್ಯೂರಿಂಗ್ ಯಾರ್ಡ್‌ಗಳಲ್ಲಿ ಇದೇ ವರ್ಷ ಉಪ್ಪು ಮಾರಾಟವಾಗುತ್ತಿದ್ದಾಗ ನಮ್ಮ ಇಲಾಖೆ ಬೆಲೆ ಜಾಸ್ತಿ, ಸಾರ್ವತ್ರಿಕವಾಗಿ ಉಪ್ಪಿನ ಬೆಲೆ ಕಡಮೆ ಇತ್ತು. ಆದುದರಿಂದ ಈ ವರ್ಷ ಹೆಚ್ಚು ಮಾರಾಟವಾಗಿಲ್ಲ, ಇದರಿಂದ ಸಿಬ್ಬಂದಿಯನ್ನು ಸಂಬಳ ಕೊಟ್ಟು ಸುಮ್ಮನೆ ಕೂಡಿಸಿದಂತಾಗಿದೆ. ಇದಕ್ಕೆ ಸಹಾಯ ಧನವನ್ನು

ಕೇಂದ್ರ ಸರಕಾರ ಮತ್ತು ನಾವೂ ಸೇರಿ ಶೇಕಡ 50 ರಷ್ಟು ಕೊಡುತ್ತಿದ್ದೆವು. ಅಷ್ಟಿಲ್ಲದಿದ್ದರೂ ಶೇಕಡ 25 ರಷ್ಟಾದರೂ ನಮ್ಮ ಸರಕಾರದಿಂದ ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಈ ಕಸಬಿನ ಜನ ಹೆಚ್ಚು ಖರ್ಚನ್ನು ವಹಿಸಬೇಕಾಗಿಲ್ಲ, ಅವರ ನೆಲ ಮರಳು, ತೆಂಗಿನಗರಿ ಉಪಯೋಗ ಮಾಡುತ್ತಾರೆ ವಾಸಮಾಡುವುದಕ್ಕೆ. ಅವರ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಇದರ ಜೊತೆಗೆ ಮಂಗಳೂರು ಬಂದರನ್ನು ಮಾಡುವಾಗ ಅವರಿಗೆ ಬೇರೆ ಪುನರ್ವ್ಯವಸ್ತೆ ಮಾಡಬೇಕಾಗಿದೆ. ಅದಕ್ಕೆ ಸರಿಯಾದ ಲೇಔಟ್ ಮಾಡಿ ಸ್ಥಳ ಅವರಿಗೆ ಒದಗಿಸಬೇಕಾಗಿದೆ; ಮನೆ ಕಟ್ಟಬೇಕಾಗಿದೆ. ಪಿ. ಡಬ್ಲ್ಯು. ಸಚಿವರು ಮತ್ತು ಮುಖ್ಯ ಮಂತ್ರಿಗಳಿಗೆ ಇದನ್ನು ತಿಳಿಸಿ ಅವಕಾಶ ಮಾಡಿಕೊಡ ಬೇಕಾಗಿದೆ. ಇಷ್ಟು ಹೇಳಿ ಮಾನ್ಯ ಸದಸ್ಯರು ಕೊಟ್ಟಿರುವ ಹಲವು ಸಲಹೆಗಳನ್ನು ಗಮನಿಸಿ ತಮ್ಮ ಅನುಭವವನ್ನು ಉಪಯೋಗ ಮಾಡಿಕೊಂಡು ಈ ಇಲಾಖೆಯಲ್ಲಿ ಹೆಚ್ಚಿನ ಕೆಲಸ ಮಾಡುವುದಾಗಿ ಮಾನ್ಯ ಸಭೆಗೆ ತಿಳಿಸುತ್ತೇನೆ. ಫಿಷರಿ ಇಲಾಖೆ ಟ್ರೈನಿಂಗ್ ಸೆಂಟರ್ ಬಗ್ಗೆ ಒಂದು ಮಾತು ಹೇಳ ಬಹುದು. ಇನ್‌ಲೆಂಡ್ ಫಿಷರಿ ವಿಷಯ ಹೇಳುತ್ತಾ ಉತ್ತರ ಕನ್ನಡ ಜಿಲ್ಲೆಗೆ ಶೀತಲ ಗೃಹಗಳನ್ನು ಹೆಚ್ಚಾಗಿ ಕೊಟ್ಟಿಲ್ಲ, ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚಾಗಿ ಕೊಟ್ಟಿದೆ ಎಂದು ಹೇಳಿದರು. ಮಾನ್ಯ ಆಹಾರ ಸಚಿವರು ಬಂದಾಗ ಆ ವಿಚಾರವನ್ನು ಅವರಲ್ಲಿ ಕೇಳಿ ತಿಳಿದುಕೊಂಡೆ. ಈ ದಿವಸ ಕಾಗದ ಬರೆ ದಿದ್ದಾರೆ, 7 ಮಂಜೂರು ಮಾಡಬೇಕೆಂದು ಹೇಳಿದೆ, ಮಂಜೂರಾಗುತ್ತದೆ.
ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಿರುವಂತೆ ಉತ್ತರ ಕನ್ನಡ ಜಿಲ್ಲೆಯೊಳಗೆ ಗ್ರೂಪುಗಳನ್ನೂ ಮಾಡಿ ಅಲ್ಲಿಯೂ ಎಲ್ಲ ಕೆಲಸಗಳನ್ನೂ ಮಾಡಬೇಕೆಂದು ಈಗಾಗಲೇ ತಿಳಿಸಿದ್ದೇನೆ. ಈಗಾಗಲೇ ಇನ್‌ಲೆಂಡು ಫಿಷರಿ ಬಗ್ಗೆ ಹೇಳಿದ್ದೇನೆ. ಕೆರೆ ಕಟ್ಟೆಗಳಲ್ಲಿ ಮೀನುಮರಿಗಳನ್ನು ಮಾಡುವುದಕ್ಕೋಸ್ಕರ ಸುಮಾರು 82 ಲಕ್ಷದಷ್ಟು ಮೀನು ಮರಿಗಳನ್ನು ತಂದು ಜಿಲ್ಲಾ ಮಟ್ಟದಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಮೈಸೂರು ಸಂಸ್ಥಾನದೊಳಗಡೆಯಿಂದಲೇ ಅಲ್ಲದೆ ಹೊರಗಡೆಯಿಂದಲೂ ಮರಿಗಳನ್ನು ತರಿಸುತ್ತಲಿ ದ್ದೇವೆ. ತುಂಗಭದ್ರಾ ಏರಿಯಾದಲ್ಲಿ ಸುಮಾರು 14 ಲಕ್ಷ ಎಕರೆಗಳಷ್ಟು ಭೂಮಿಯಲ್ಲಿ ಮೀನು ಸಾಗಾಣಿಕೆ ಕೆಲಸವನ್ನು ಮಾಡಲು ಮರಿಗಳನ್ನು ಹಂಚಲಾಗಿದೆ ಮತ್ತು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇವೊತ್ತು ಸುಮಾರು 28 ಲಕ್ಷ ಮೀನು ಮರಿಗಳನ್ನು ಇಲ್ಲಿಗೆ ಬಂಗಾಳ ದಿಂದ ತರಿಸಿಕೊಡಲಾಗಿದೆ. ಇನ್ನು ಕೆಲವು ಕಡೆ ನಮ್ಮಲ್ಲಿರುವ ರಿಸರ್ವಾಯಿರುಗಳಲ್ಲಿ ನರ್ಸರಿಗಳನ್ನು ಮಾಡಿದ್ದೇವೆ. ನಮಗೆ ಬೇಕಾದ ಮೀನು ಮರಿಗಳನ್ನು ಇಲ್ಲಿಯೇ ಮಾಡದೇಕಾದರೆ ಇನ್ನೂ ಕೆಲವಾರು ವರ್ಷಗಳು ಬೇಕಾಗುತ್ತವೆ. ಸ್ವಲ್ಪ ಮಟ್ಟಿಗೆ ಈಗ ನಾನು ಹೇಳಿದಂತೆ ಮುಂದುವರಿಯುತ್ತಿದ್ದೇವೆ. ಶ್ರೀಮಾನ್ ಮಧ್ವರಾಜ್‌ರವರು ಹೇಳಿದ ವಿಷಯಗಳ ಬಗ್ಗೆ ಎಂದರೆ, ಮೀನುಗಾರರ ವಸತಿಯ ಬಗ್ಗೆ ಎಲ್ಲ ಸಹಾಯಗಳನ್ನೂ ಮಾಡಬೇಕಾಗಿದೆ. ಇದರಲ್ಲಿರುವ ಕೆಲವು ನಿರ್ಬಂಧಗಳಿಗಾಗಿ ಸ್ವಲ್ಪ ಕೆಲಸಗಳು ನಿಧಾನವಾಗುತ್ತಿವೆ. ಇವರುಗಳಿಗಾಗಿ ಒಂದು ಟ್ರೈನಿಂಗು ಸ್ಕೂಲು ಮತ್ತು ಸಹಕಾರ ಸಂಸ್ಥೆಗಳನ್ನು ಮಾಡುವುದಕ್ಕೆ ಈಗಾಗಲೇ ಸಾಕಷ್ಟು ತೀವ್ರವಾದ ಕ್ರಮಗಳನ್ನು ಸರಕಾರ ಮಾಡುತ್ತಿದೆ ಎಂದು ಮಾನ್ಯ ಸದಸ್ಯರಾದ ಮಧ್ವರಾಜ್‌ರವರಿಗೆ ಇಲ್ಲಿ ತಿಳಿಸುತ್ತೇನೆ. ಅವರು ಹೇಳಿದಂತೆ ಈ ಜನರ ಪರಿಸ್ಥಿತಿ ನೋಡಿದರೆ ನಮಗೂ ತುಂಬಾ ವಿಷಾದವಾಗುತ್ತದೆ. ಇದಕ್ಕಾಗಿ ಸುಮಾರು 125 ಕೋ-ಆಪರೇಟೀವ್ ಸೊಸೈಟಿಗಳನ್ನು ಇವರ ಅನುಕೂಲಕ್ಕಾಗಿ ಮಾಡಿ ಸಾಲದ ಹಣವನ್ನು ಸರಕಾರ ಕೊಟ್ಟಿದ್ದಾರೊ. ಅದರಲ್ಲಿ ಒಂದು ಕಾಸೂ ಬಾಕಿ ಇಲ್ಲದಂತೆ ವಾಪಸು ಕೊಟ್ಟು ಯಾವ ತರಹದ ಡಿಫಾಲ್ಟ್ ಕೂಡ ಮಾಡಿಲ್ಲ. ಮೊದಲು ಹತ್ತು ಲಕ್ಷದಷ್ಟು ಸಾಲದ ಹಣವನ್ನು ಕೊಟ್ಟುದರಲ್ಲಿ ಒಂದು ಕಾಸೂ ಬಾಕಿ ಇಲ್ಲದಂತೆ ಸರಕಾರಕ್ಕೆ ವಾಪಸು ಮಾಡಿದ್ದಾರೆ. ಈಗ ಪುನಃ ಏಳು ಲಕ್ಷದಷ್ಟು ಸಾಲ ಬೇಕೆಂದು ಕೇಳಿ ದ್ದಾರೆ. ಅದನ್ನು ಕೊಡಲು ತಕ್ಕ ಕಾರ್ಯಕ್ರಮಗಳು ನಡೆಯುತ್ತಿವೆ, ಇವರ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಇಟ್ಟು ಇನ್ನೂ ಹೆಚ್ಚು ಕೋ-ಆಪರೇಟಿವ್ ಸಂಸ್ಥೆಗಳನ್ನು ಮಾಡುವುದಕ್ಕೆ ಎಷ್ಟು ಸಹಾಯ ಸಾಲದ ಮೊಬಲಗನ್ನು ಬೇಕೆಂದು ಕೇಳುತ್ತಾರೋ ಅವನ್ನೆಲ್ಲಾ ಸರಕಾರದವರು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ಇಲ್ಲ ಹೇಳುತ್ತೇನೆ. ಇವರಿಗೆ ಆಹಾರ ಧಾನ್ಯಗಳನ್ನೂ ಆಹಾರ ಸಚಿವರು ಕೊಡಬೇಕೆಂದು ಅವರಲ್ಲಿ ಮನವಿ ಮಾಡಿಕೊಂಡಿದ್ದೇನೆ. ಅವರು ಕೊಡುವ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರುಗಳಾದ ಶ್ರೀಮತಿ ಕೆ. ಎಸ್. ನಾಗ ರತ್ನಮ್ಮನವರು, ಶ್ರೀಮತಿ ರತ್ನಮ್ಮ ಮಾಧವರಾಯರು, ಮತ್ತು ಇತರ ಕೆಲವು ಸದಸ್ಯರುಗಳು ಇಲ್ಲಿ ಮಾತನಾಡಿದಾಗ ಯಾರೂ ಅಷ್ಟು ಕಟುವಾದ ಟೀಕೆಗಳನ್ನು ಮಾಡಿದ ಹಾಗೆ ಕಾಣಲಿಲ್ಲ. ಬಹಳ ಉಪಯುಕ್ತವಾದ ಸಲಹೆಗಳನ್ನೂ ಇರತಕ್ಕ ಲೋಪದೋಷಗಳನ್ನೂ ತಿಳಿಸಿದ್ದಾರೆ. ಅದಕ್ಕೋಸ್ಕರ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದರಲ್ಲೂ ಕೂಡ ಇಬ್ಬರು ಮಾನ್ಯ ಸದಸ್ಯರು ರೆವೆನ್ಯೂ ಇಲಾಖೆಗೆ ಅರಣ್ಯ ಖಾತೆಯಿಂದ ಹೋಗಿರತಕ್ಕ ಭೂಮಿಯನ್ನು ವಾಪಸು ಕೊಡಿಸಿಕೊಡ ಬೇಕೆಂಧು ಸಲಹೆ ಮಾಡಿದಾರೆ. ಆದನ್ನು ಮಾಡಿದರೆ ಅನುಕೂಲವಾಗುತ್ತದೆ ಎಂದು ಅದಕ್ಕೋಸ್ಕರ

(ಶ್ರೀ ಬಿ. ರಾಚಯ್ಯ)

ಸರಕಾರದವರು ಒಂದು ಕಮಿಟಿಯನ್ನು ಜಿಲ್ಲಾಮಟ್ಟದಲ್ಲಿ ಏರ್ಪಾಡು ಮಾಡಿದ್ದಾರೆ. ಅವರು ಮಾಡಿದಂತಹ ಶಿಫಾರಸುಗಳನ್ನು ಸರಕಾರ ಒಪ್ಪಿಕೊಂಡು ಅದರ ಪ್ರಕಾರ ಸುಮಾರು 5 ಲಕ್ಷ ಎಕರೆಗಳಷ್ಟು ಭೂಮಿಯನ್ನು ರೆವೆನ್ಯೂ ಇಲಾಖೆಯಿಂದ ನಮ್ಮ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ. ಇದೇ ರೀತಿ ಸುಮಾರು ಒಂದೂವರೆ ಲಕ್ಷ ಎಕರೆಗಳಷ್ಟು ಭೂಮಿಯನ್ನು ಅರಣ್ಯ ಇಲಾಖೆಗೆ ರೆವೆನ್ಯೂ ಇಲಾಖೆಯಿಂದ ವರ್ಗಾಯಿಸಬೇಕೆಂದು ಸರಕಾರ ಅಷ್ಟು ಭೂಮಿಯನ್ನು ಕೊಡುವುದಕ್ಕೂ ಒಪ್ಪಿಕೊಂಡಿದೆ. ಇವುಗಳೆಲ್ಲಾ ಸ್ವಲ್ಪ ಗೆಜೆಟ್ಟಿನಲ್ಲಿ ನೋಟಿಫಿಕೇಷನ್ನುಗಳು ಆದ ಮೇಲೆ ಮಾಡಲು ಅನುಕೂಲವಾಗುತ್ತದೆ.

ಇನ್ನು ಕೆಲವು ಮಾನ್ಯ ಸದಸ್ಯರುಗಳು ಅರಣ್ಯ ಇಲಾಖೆಯಲ್ಲಿರುವ ಅಧಿಕಾರಿಗಳ ಅವ್ಯವಸ್ಥೆಯಿಂದಾಗಿ ಒಳ್ಳೆಯ ನಾಟಾಗಳು ಕಳುವಾಗಿ ಸರಕಾರಕ್ಕೆ ನಷ್ಟವಾಗುತ್ತಿದೆ ಎಂದು ಹೇಳಿದರು. ಇದಕ್ಕೆ ಕಾರಣ ಇಲ್ಲಿ ಇರುವ ಕಾನೂನು ಬಹಳ ಹಳೆಯದು, ಅದು 1901 ರಲ್ಲಿ ಆದುದು. ಇದರಲ್ಲಿರುವ ಕೆಲವು ನಿರ್ಬಂಧಗಳಿಂದಾಗಿ ಇಲ್ಲಿ ಸಾಕಷ್ಟು ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಅರಣ್ಯದಲ್ಲಿ ಎಲ್ಲಿ ನೀರಾವರಿ ಸೌಕರ್ಯ ಸಿಗುತ್ತದೋ ಅಲ್ಲಿ ಬೆಳೆಯನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತದೆ. ಹಾಗೆ ಎಲ್ಲ ಭೂಮಿಯನ್ನು ವ್ಯವಸಾಯಕ್ಕೇ ವರ್ಗಾಯಿಸಬೇಕೆಂದು ಮಾಡುವುದಕ್ಕೆ ಸಾಧ್ಯವಿಲ್ಲ. ಇಂತಿಂತಹ ಕಡೆಗಳಲ್ಲಿ ಇಂತಿಂತಹ ಕೆಲಸಗಳು ಆಗಿವೆ ಎಂದು ಹೇಳಿದ್ದೇನೆ. ಇನ್ನು ಮೂರು ನಾಲ್ಕು ತಿಂಗಳುಗಳಲ್ಲಿ ಜಮೀನಿನ ವಿಲೇವಾರಿ ಕೆಲಸಗಳಾಗುತ್ತವೆ ಎಂದು ಇಲ್ಲಿ ಮಾನ್ಯ ಸದಸ್ಯರಿಗೆ ತಿಳಿಸಲು ಇಷ್ಟಪಡುತ್ತೇನೆ. ಅಲ್ಲದೆ ಅರಣ್ಯ ಇಲಾಖೆಗೆ ಮಾಡಿರುವ ಕಾನೂನು ಬಹಳ ಹಿಂದಿನದು, ಎಂದರೆ, 1901 ರಲ್ಲಿ ಮಾಡಿರುವುದರಿಂದ ಕೆಲವಾರು ಕಡೆಗಳಲ್ಲಿ ಮರಗಳ ದುರುಪಯೋಗಗಳಾಗುತ್ತಿರುವುದು ಗಮನಕ್ಕೆ ಬಂದಿದೆ. ಇದಕ್ಕೆ ಸಂಬಂಧಪಟ್ಟ ಹೊಸ ಕಾನೂನು ಈ ಸಭೆಯ ಮುಂದೆ ಬಂದು ಪಾಸಾಗಿದೆ ಇದಕ್ಕೆ ಸಂಬಂಧಪಟ್ಟ ರೂಲ್ಸುಗಳನ್ನು ಮಾಡಿ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಒಂದೆರಡು ಅಬಸರ್ವೇಷನ್ನುಗಳನ್ನು ಮಾಡಿದ್ದಾರೆ. ನಾನು ಆಗಲೇ ಉತ್ತರ ಕೊಟ್ಟಂತೆ ರೂಲ್ಸುಗಳು ಫೈನಲೈಸು ಆಗುವುದರಲ್ಲಿದೆ. ಅದಾದ ಮೇಲೆ ಅರಣ್ಯ ಇಲಾಖೆಯಲ್ಲಿ ನಡೆಯುತ್ತಿರುವ ಕಳ್ಳಸಾಗಾಣಿಕೆಯನ್ನು ತಪ್ಪಿಸಲು ಸಾಕಷ್ಟು ಸಿಬ್ಬಂದಿಗಳನ್ನು ನೇಮಕ ಮಾಡಿ ಈ ಸಿಬ್ಬಂದಿ ವರ್ಗದವರಿಗೆ ಉಪಕರಣಗಳನ್ನು ಕೊಡಬೇಕೆಂದು ಮಾಡಿದ್ದೇವೆ ಮತ್ತು ಫೈರ್ ಆರಂಸ್‌ಗಳನ್ನು ಕೊಡುವ ಉದ್ದೇಶವೂ ಇದೆ. ಅದಕ್ಕೋಸ್ಕರ ಒಬ್ಬ ಅಧಿಕಾರಿಯನ್ನು ಕಳುಹಿಸಿಕೊಡುವ ಏರ್ಪಾಡನ್ನೂ ಮಾಡುತ್ತಿದ್ದೇವೆ. ಅಲ್ಲದೆ ಬಡವರಾಗಿರುವ ನಾಲ್ಕನೆ ವರ್ಗದ ಈ ಅಧಿಕಾರಿಗಳ ಸಂಬಳ ಸಾರಿಗೆಗಳನ್ನು ಹೆಚ್ಚಿಸಬೇಕೆಂದು ಹೇಳಿದ್ದಾರೆ. ಸರಕಾರಕ್ಕೆ ಅದಷ್ಟು ಮಟ್ಟಿಗೆ ನಾಲ್ಕನೇ ವರ್ಗದ ಜನರ ಕೆಲಸಗಳೇನು ಎನ್ನುವುದು ಗೊತ್ತಿದೆ. ಇಲ್ಲಿರುವವರು ಬಿಸಿಲ, ಮಳೆ, ಚಳಿ, ಗಾಳಿಗಳೆನ್ನದೇ ಬಹಳ ಕಷ್ಟದಿಂದ ಕಾಡುಗಳಲ್ಲಿ ತಿರುಗುತ್ತಿದ್ದಾರೆ. ಕೆಲವಾರು ಸಂದರ್ಭಗಳಲ್ಲಿ ಸರಕಾರದ ಹಣಕಾಸಿನ ಪರಿಸ್ಥಿತಿ ಹೇಗಿದೆ ಎಂದು ಹೇಳಿದ್ದೇವೆ. ಅದನ್ನು ನೋಡಿಕೊಂಡು ಮಾಡಬೇಕಾಗಿರುವುದರಿಂದ ಸ್ವಲ್ಪ ನಿಧಾನವಾಗಿದೆ. ಇವರ ಮೇಲೆ ಸರಕಾರಕ್ಕೆ ಹೆಚ್ಚಿನ ಆಸಕ್ತಿ ಇಲ್ಲ ಎಂದು ತಿಳಿಯಬಾರದು. ಕಾಡಿನಲ್ಲಿರುವ ಕಷ್ಟಗಳನ್ನು ಗಮನಿಸದೆ ಇವರು ಕೆಲಸಮಾಡುತ್ತಿರುವುದರಿಂದ ಇವರಿಗೆ ಸಾಧ್ಯವಾದಷ್ಟು ಸಹಾಯಗಳನ್ನು ಕೊಡಬೇಕೆಂದು ಇದೆ ಅದನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ ಎಂದು ಇಷ್ಟು ಉತ್ತರ ತಿಳಿಸುತ್ತೇನೆ.

ನಮ್ಮ ಅರಣ್ಯದ ಇಲಾಖೆಯಲ್ಲಿ ಹೆಚ್ಚಾಗಿ ಕಾಡುಗಳನ್ನು ಕಡಿಯುತ್ತಿದ್ದಾರೆ, ಎಷ್ಟು ಕಾಡುಗಳನ್ನು ಕಡಿಯುತ್ತಿದ್ದಾರೋ ಅದಕ್ಕೆ ಪ್ರತಿವರ್ಷವೂ ಅಷ್ಟು ಕಾಡುಗಳ ಮರಗಳನ್ನು ಬೆಳೆಸುತ್ತಿದ್ದಾರೆಯೆ ಎಂದು ಶ್ರೀಮತಿ ರತ್ನಮ್ಮ ಮಾಧವರಾಯರು ಕೇಳಿದರು. ಅದಕ್ಕೋಸ್ಕರ ಕೆಲವಾರು ಅಂಕೆ ಅಂಶಗಳನ್ನು ಇಲ್ಲಿ ಕೊಡಬೇಕೆಂದು ಇಚ್ಛೆಪಡುತ್ತೇನೆ. ಈ ಇಲಾಖೆಯಲ್ಲಿ ಸುಮಾರು ವರ್ಷಂಪ್ರತಿ 63,706 ಎಕರೆಗಳಷ್ಟು ಭೂಮಿಯಲ್ಲಿ ಪ್ಲಾಂಟೇಷನ್ನುಗಳನ್ನು ಬೆಳೆಸುವ ಪ್ರಯತ್ನ ನಡೆದಿದೆ. ಇದರಲ್ಲಿ ಟೀಕ್ ಪ್ಲಾಂಟೇಷನ್ನು ಸುಮಾರು 12,346 ಎಕರೆಗಳಷ್ಟು ಭೂಮಿಯಲ್ಲಿ ಬೆಳೆದಿದೆ. ಸಾಫ್ಟ್ ವುಡ್ ಪ್ಲಾಂಟೇಷನ್ನು ಸುಮಾರು 12,155 ಎಕರೆಗಳಷ್ಟು ಭೂಮಿಯಲ್ಲಿ ಬೆಳೆದಿದೆ; ಕ್ಯಾಷ್ಯೂ ಪ್ಲಾಂಟೇಷನ್ನು 13,292 ಎಕರೆಗಳಷ್ಟು ಭೂಮಿಯಲ್ಲಿ ಬೆಳೆದಿದೆ. ರಬ್ಬರು ಪ್ಲಾಂಟೇಷನ್ನುಗಳು 797 ಎಕರೆಗಳಷ್ಟು ಭೂಮಿಯಲ್ಲಿ ಬೆಳೆದಿದೆ. ಲನೋಲಿಯಾ ಪ್ಲಾಂಟೇಷನ್ನು 1,015 ಎಕರೆಗಳಷ್ಟು ಭೂಮಿಯಲ್ಲಿ ಬೆಳೆದಿದೆ. ರಬ್ಬರು ಹಾಗೂ ಲನೋಲಿಯಾ ಪ್ರಾರಂಭಮಾಡಿರುವುದು ಬಹಳ ಚೆನ್ನಾಗಿ ಯಶಸ್ವಿಯಾಗಿ ಬೆಳೆಯುತ್ತಾ ಬಂದಿದೆ. ಒಟ್ಟಿನಲ್ಲಿ ಇದುವರೆಗೆ ಸುಮಾರು 4,63,519 ಎಕರೆಗಳಷ್ಟು ಭೂಮಿಯಲ್ಲಿ ವಿವಿಧ ಮರಗಳ ಜಾತಿಯನ್ನು ಮೂರನೇ ಯೋಜನೆಯಲ್ಲಿ ಮಾಡಬೇಕೆಂದು ಮಾಡಿ ಅವುಗಳು ಸುವ್ಯವಸ್ಥಿತವಾಗಿ ಬೆಳೆಯುತ್ತಾ ಬರುತ್ತಿವೆ. ಆದುದರಿಂದ ನೀಲಗಿರಿ ಮರಗಳನ್ನೇ ಬೇರೆ ತರಹದ ಜಾತಿಯ ಮರಗಳಾಗಿ ಬೆಳೆ ಮಾಡಬೇಕೆಂದು ಮತ್ತು

ಹೆಚ್ಚಾಗಿ ಬೆಳೆಯಬೇಕೆಂದು ಅದಕ್ಕೋಸ್ಕರ ವರ್ಕಿಂಗ್ ಪ್ಲಾನನ್ನು ಇಟ್ಟುಕೊಂಡು ಅಂಡರ್ ಆರ್ಗನೈಸ್ಡ್ ಫಾರೆಸ್ಟು ಎಂದು ಮಾಡಲಾಗಿದೆ. ಇದು ಶೇಕಡಾ 50 ರಷ್ಟು ಮಾಡಿ ಮುಗಿಸಬೇಕೆಂದು ಈ ದೇಶದಲ್ಲಿ ವರ್ಷಂಪ್ರತಿ ಸುಮಾರು ನೂರು ಜಾತಿಯ ಮರಗಳನ್ನು ಬೆಳಸಬೇಕೆಂದು ಒಂದು ಕಾರ್ಯಕ್ರಮ ಇಟ್ಟುಕೊಂಡು ಮಾಡುತ್ತಿದ್ದೇವೆ. ಇದರ ಪ್ರಕಾರ ನಾನಾ ಕಡೆಗಳಲ್ಲಿ ಕಾಡುಗಳನ್ನು ಬೆಳೆಸಲು ಸಾಧ್ಯವಾಗಿದೆ ಎಂದು ಇಲ್ಲಿ ಸಂತೋಷದಿಂದ ತಿಳಿಸುತ್ತೇನೆ.

ಎಲ್ಲ ಪ್ರಾಂತಗಳಲ್ಲಿಯೂ ನಡೆದ ವನ ಮಹೋತ್ಸವದಲ್ಲಿ ನಮ್ಮ ಮೈಸೂರು ರಾಜ್ಯ ಸರಕಾರವೂ ಭಾಗವಹಿಸಿತ್ತು. ಅದಕ್ಕೆ ಎಲ್ಲ ಪ್ರಾಂತಗಳಿಗಿಂತಲೂ ನಮ್ಮ ಪ್ರಾಂತಕ್ಕೆ ಅರಣ್ಯದಲ್ಲಿ ಹೆಚ್ಚು ಕೆಲಸಗಳನ್ನು ಮಾಡಿದ್ದಾರೆ ಎಂದು ಇದಕ್ಕೆ ಪ್ರಥಮ ಬಹುಮಾನವನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ ಎಂದು ಇಲ್ಲಿ ಹೇಳಲು ಸಂತೋಷಪಡುತ್ತೇನೆ. ಇಷ್ಟು ಕಾಡುಗಳನ್ನು ಇಷ್ಟು ಹೆಚ್ಚಿನ ಪ್ರಮಾಣದಲ್ಲಿ ಬೇರೆ ಯಾವ ಪ್ರಾಂತಗಳವರೂ ಬೆಳೆದಿಲ್ಲ ಎಂದು ಆಲ್ ಇಂಡಿಯಾ ಫಾರೆಸ್ಟು ಬೋರ್ಡಿನವರು ಪರಿಶೀಲನೆ ಮಾಡಿ ಮೊದಲನೇ ಬಹುಮಾನವನ್ನು ಈ ಸಂಸ್ಥಾನಕ್ಕೇ ಕೊಟ್ಟಿದ್ದಾರೆ. ಈ ರೀತಿಯಾಗಿ ಸಂಸ್ಥಾನದಲ್ಲಿರತಕ್ಕ ಸುಮಾರು ಶೇಕಡಾ 18 ರಷ್ಟು ಅರಣ್ಯದ ಭಾಗವನ್ನು ಹೆಚ್ಚಾಗಿ ಮಾಡಿದ್ದೇವೆ. ಅಲ್ಲದೆ ಸ್ವಲ್ಪ ಜಮೀನನ್ನು ರೆವೆನ್ಯೂ ಇಲಾಖೆಯಿಂದಲೂ ತೆಗೆದುಕೊಂಡಿದ್ದೇವೆ. ಅಲ್ಲದೆ ತೆಗೆದುಕೊಂಡು ಹೋಗಿರತಕ್ಕ ಜಮೀನನ್ನೂ ಕೂಡಿಸಿಕೊಳ್ಳುವುದಕ್ಕೂ ಅವಕಾಶವಿದೆ. ಅಲ್ಲದೆ ಕೆಲವಾರು ಕೈಗಾರಿಕೆಗಳಿಗಾಗಿ ಬೇಕಾಗುವ ಅರಣ್ಯದ ಮೃದು ಮರಗಳನ್ನು ಫ್ಯಾಕ್ಟರಿಗಳಿಗೆ ಬೇಕಾದ ಮರಗಳನ್ನು ಕೊಡುವುದಕ್ಕೂ ಪ್ರಯತ್ನ ಮಾಡಿದ್ದೇವೆ. ಪೇಪರು ಫ್ಯಾಕ್ಟರಿಗೆ ಬೇಕಾಗುವ ಬಿದಿರುಗಳನ್ನು ಕೊಡುತ್ತಿದ್ದೇವೆ. ಎಷ್ಟು ಇಂಡಸ್ಟ್ರಿಗಳಿವೆಯೋ ಅವಕ್ಕೆ ಬೇಕಾಗುವ ಮರಗಳನ್ನೆಲ್ಲಾ ಕೊಡಲು ಒಂದು ತತ್ವವನ್ನು ಅನುಸರಿಸಿ ಮುಂದೆ ಯಾವ ರೀತಿ ಪ್ಲಾಂಟೇಷನ್ನುಗಳನ್ನು ನಡೆಸಬೇಕು ಎನ್ನುವುದನ್ನೂ ನೋಡಿಕೊಂಡು ಕೊಡುತ್ತಿದ್ದೇವೆ. ಇವೆಲ್ಲಾ ಉದ್ದೇಶಗಳನ್ನು ಇಟ್ಟುಕೊಂಡು ಇಲಾಖೆಯ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದೇವೆ.

6-00 P.M.

ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅನೇಕ ಅಧಿಕಾರಿಗಳಿಗೆ ಅನೇಕ ಸಂದರ್ಭಗಳಲ್ಲಿ ಸಾಕಷ್ಟು ಪ್ರೋತ್ಸಾಹ ಮತ್ತು ಅವರಿಗೆ ಒಂದು ಬೆಂಬಲ ಸಿಗುತ್ತಾ ಇಲ್ಲವೆಂದು ಹೇಳಿದರು. ನಾನು ಹೇಳುವುದಾದರೆ, ಈಗ ಸರ್ಕಾರದವರು ಸ್ಕ್ವಾಡ್ ಎಂದು ಹಾಕಿದ್ದಾರೆ. ಅದರಿಂದ ಕಳ್ಳತನವನ್ನು ತಪ್ಪಿಸುವುದು ಸಾಧ್ಯವಾಗುತ್ತದೆ. ಅಂತಹ ಜನಗಳಿಗೆ ಎಕ್ಸ್‌ಟ್ರ ಅಲೋಯನ್ಸನ್ನೂ ಕೂಡ ಕೊಟ್ಟು ಯಾರು ಕಳ್ಳತನವನ್ನು ಹೆಚ್ಚಿನ ರೀತಿಯಲ್ಲಿ ಪತ್ತೆ ಹಚ್ಚಿ, ಸರ್ಕಾರಕ್ಕೆ ಹೆಚ್ಚು ಉತ್ಪತ್ತಿ ಮಾಡುತ್ತಾರೋ ಅರಣ್ಯ ಸಂಪತ್ತನ್ನು ಕಾಯುತ್ತಿದ್ದಾರೋ ಅಂತಹ ಅಧಿಕಾರಿಗಳಿಗೆ ಒಳ್ಳೆಯ ರೀತಿಯಲ್ಲಿ ಸಂಬಳ ಸಾರಿಗೆಗಳು ಹಾಗೂ ಬಹುಮಾನಗಳನ್ನು ಕೊಡುವುದು, ಆ ಒಂದು ನೀತಿಯನ್ನು ಸರ್ಕಾರದವರು ಒಪ್ಪತಕ್ಕದ್ದು ಸರಿ. ನನ್ನ ಒಪ್ಪಿಗೆ ಅದಕ್ಕೆ ಸಂಪೂರ್ಣವಾಗಿ ಕೊಟ್ಟು ಆ ವಿಷಯದಲ್ಲಿ ಮಾಡಬೇಕಾದ ಕರ್ತವ್ಯಗಳನ್ನು ಮಾಡುತ್ತೇನೆಂದು ಇಲ್ಲಿ ಹೇಳುತ್ತೇನೆ. ಕೆಲವು ಮಾನ್ಯ ಸದಸ್ಯರು ಯಾವುದೋ ಒಂದು ಕಾರಣದಿಂದ ಅವಕಾಶವಿಲ್ಲದೆ ಈ ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಲಿಲ್ಲ. ಭೂಕಂದಾಯದ ಬಗ್ಗೆ ಎಸ್ಟಿಮೇಟ್ಸ್ ಕಮಿಟಿಯವರು ಆಡಳಿತ ಮತ್ತು ಅಧಿಕಾರಿಗಳಲ್ಲಿರತಕ್ಕ ಅನೇಕ ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ಈ ಇಲಾಖೆ ಇನ್ನೂ ಹೆಚ್ಚಿನ ರೀತಿಯಲ್ಲಿ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡುವುದಕ್ಕೆ ಸರ್ವ ಪ್ರಯತ್ನಗಳನ್ನು ಮಾಡುತ್ತದೆಂದು ನಾನು ಹೇಳುತ್ತೇನೆ. ಶ್ರೀಮತಿ ರತ್ನಮ್ಮ ಮಾಧವರಾವ್ ಅವರು ಕೆಲವು ರೋಡುಗಳಿಗೆ ಸಾಕಷ್ಟು ಹಣವನ್ನು ಕೊಡಬೇಕೆಂದು ಕೇಳಿದರು. ಅದು ಮಂತ್ರಿಮಂಡಲ ತೀರ್ಮಾನ ತೆಗೆದುಕೊಳ್ಳುವ ಪ್ರಶ್ನೆಯಾಗಿದೆ. ಆದ್ದರಿಂದ ಅರಣ್ಯ ಇಲಾಖೆಯಿಂದ ಬರತಕ್ಕ 9 ಕೋಟಿ 40 ಲಕ್ಷ ರೂಪಾಯಿಗಳಲ್ಲಿ ಯಾವ ಇಲಾಖೆಗೆ ಏನು ಕೊಡಬೇಕೆಂಬುದನ್ನು ಆ ಹಣ ಸರ್ಕಾರದ ಬೊಕ್ಕಸಕ್ಕೆ ಬಂದಮೇಲೆ ವಹಿಸುವುದು ಈ ಮಾನ್ಯ ಸಭೆಯ ಸದಸ್ಯರಿಗೇ ಸೇರಿದೆ. ಅರಣ್ಯ ಇಲಾಖೆ ಮೇಂಟೇನ್ ಮಾಡತಕ್ಕ ರಸ್ತೆಗಳನ್ನು ನಾವೇ ಮಾಡುತ್ತೇವೆ. ಪಿ.ಡಬ್ಲ್ಯು.ಡಿ. ಇಲಾಖೆಯಿಂದ ಆಗತಕ್ಕ ಕಡೆ ಕೆಲವೊಂದು ತತ್ವಗಳನ್ನು ಒಪ್ಪಿಕೊಂಡಿದ್ದೇವೆ. ಶಿವಮೊಗ್ಗಾ ಭಾಗದಲ್ಲಿರತಕ್ಕ ಮಲೆನಾಡು ಪ್ರದೇಶವನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಕೇಂದ್ರದಲ್ಲಿ ಹೆಚ್ಚಿನ ಹಣಸಹಾಯ ಪಡೆದು ಮಲೆನಾಡು ಅಭಿವೃದ್ಧಿ ಕೆಲಸ ಕಾರ್ಯಗಳ ಬಗ್ಗೆ ಒಂದು ಬೃಹತ್ ಯೋಜನೆಯನ್ನು ತಯಾರು ಮಾಡಬೇಕೆಂದು ನಾವು ಈಗಾಗಲೇ ಒಪ್ಪಿಕೊಂಡಿದ್ದೇವೆ. ಅದಕ್ಕೋಸ್ಕರ ಏನೇನು ರಸ್ತೆಗಳ ಸೌಕರ್ಯ ಆಗಬೇಕಾಗಿದೆ

(ಶ್ರೀ ಬಿ. ರಾಚಯ್ಯ)

ಅವೆಲ್ಲದರ ಬಗ್ಗೆ ಹೆಚ್ಚಿನ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳದೆ ನಮ್ಮ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ರಸ್ತೆಗಳನ್ನು ಕೂಡಲೇ ಮಾಡಿಸುತ್ತೇನೆ. ಪಿ.ಡಬ್ಲ್ಯೂ.ಡಿ. ಇಲಾಖೆ ಏನು ಹೊಸ ರಸ್ತೆಗಳನ್ನು ಕೊಡಬೇಕೋ ಅದನ್ನು ಮಂತ್ರಿಮಂಡಲದವರು ಯೋಚನೆ ಮಾಡುತ್ತಾರೆ. ಅರಣ್ಯ ಮತ್ತು ಮೀನು ಇಲಾಖೆಗಳ ವಿಷಯದಲ್ಲಿ ಮಾತನಾಡಿ ಸಲಹೆಗಳನ್ನು ಕೊಟ್ಟಂಥ ಎಲ್ಲ ಮಾನ್ಯ ಸದಸ್ಯರಿಗೂ ಧನ್ಯವಾದಗಳನ್ನು ಅರ್ಪಿಸಿ ಇದನ್ನು ಎಲ್ಲರೂ ಅವಿರೋಧವಾಗಿ ಒಪ್ಪಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಅಧ್ಯಕ್ಷರೇ, ನನಗೆ ಸಂಬಂಧಪಟ್ಟ ಎರಡು ಖಾತೆಗಳ ವಿಚಾರದಲ್ಲಿ ಇಂದಿನ ಚರ್ಚೆ ಕಾಲದಲ್ಲಿ ಯಾವುದೇ ಟೀಕೆ ಬಾರದಿದ್ದರಿಂದ ನನ್ನ ಕೆಲಸ ಇನ್ನೂ ಬಹಳ ಸುಲಭವಾಗಿದೆ. ಮಾನ್ಯ ಸದಸ್ಯರು ಸಮಯವಿರಲಿಲ್ಲ, ಹೇಳುವುದು ಬಹಳ ವಿಚಾರಗಳು ಇತ್ತೆಂದು ಹೇಳಿದರು. ಆದರೂ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆದರೆ ನನ್ನ ಇಲಾಖೆಗಳ ಬಗ್ಗೆ ಅತಿ ತೀಕ್ಷ್ಣವಾದ ಟೀಕೆಗಳ ಬಾಣ ಬಾರದೇ ಇದ್ದುದರಿಂದ ಸ್ವಲ್ಪಮಟ್ಟಿಗೆ ಆ ಎರಡು ಖಾತೆಗಳ ವಿಚಾರದಲ್ಲಿ ಸದಸ್ಯರಿಗೆ ಮೆಚ್ಚಿಗೆಯಾಗಿದೆಯೆಂದು ನಾನು ತಿಳಿದುಕೊಂಡರೆ ತಪ್ಪಾಗಲಿಕ್ಕಿಲ್ಲ. ಮಾನ್ಯ ಸದಸ್ಯರೊಬ್ಬರು ಸರ್ಕಾರ ಬೇರೆ ಬೇರೆ ಖಾತೆಗಳಿಗೆ ಬಡ್ಜೆಟ್ಟಿನಲ್ಲಿ ಒದಗಿಸಿದಂಥ ಹಣ ಲ್ಯಾಪ್ಸ್ ಆಗುತ್ತಿದೆ. ಅದನ್ನು ಸಂಪೂರ್ಣವಾಗಿ ಉಪಯೋಗಿಸುವುದಿಲ್ಲವೆಂದು ಹೇಳಿದರು. ನನಗೆ ಸಂಬಂಧಪಟ್ಟ ಎರಡು ಖಾತೆಗಳ ವಿಚಾರವಾಗಿ ನಾನು ಅಂಕಿ ಅಂಶಗಳನ್ನು ಕೊಡಲಿಕ್ಕೆ ಬಯಸುತ್ತೇನೆ. 1962-63 ರಲ್ಲಿ ಕಮ್ಯೂನಿಟಿ ಡೆವಲಪ್‌ಮೆಂಟ್ ಪ್ರೋಗ್ರಾಂಗಳಿಗೆ 253 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರಲ್ಲಿ 252.14 ಲಕ್ಷ ರೂಪಾಯಿಗಳು ಖರ್ಚಾಗಿದೆ. 63-64 ನೇ ಸಾಲಿನಲ್ಲಿ 265 ಲಕ್ಷ ರೂಪಾಯಿಗಳನ್ನು ಒದಗಿಸಿದ ರೆ 263.07 ಲಕ್ಷ ರೂಪಾಯಿಗಳು ಖರ್ಚಾಗಿದೆ, ಈ ವರ್ಷ ಅಂದರೆ 1964-65 ರಲ್ಲಿ 224 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ ಖರ್ಚಾಗಿರುವುದು ಕಳೆದ ಡಿಸೆಂಬರ್‌ವರೆಗೆ 131 ಲಕ್ಷ ರೂಪಾಯಿಗಳು ಕೇಂದ್ರ ಸರ್ಕಾರ ಎಷ್ಟು ಹಣವನ್ನು ಈ ಬಾಬಿಗೆ ಒದಗಿಸಿದ್ದಾರೋ ಅದಕ್ಕಿಂತ ಹೆಚ್ಚು ಖರ್ಚಾಗಬಹುದು. ಅದರಿಂದ ಈ ಖಾತೆಯಲ್ಲಿ ಹಣ ಲ್ಯಾಪ್ಸ್ ಆಗಲಿಲ್ಲವೆಂದು ಗೊತ್ತಾಗುತ್ತದೆ. ಅದೇ ರೀತಿ ಸಹಕಾರ ಇಲಾಖೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ 1963-64ನೇ ಸಾಲಿನಲ್ಲಿ 75ಲಕ್ಷ ರೂಪಾಯಿಗಳನ್ನು ಡೆವಲಪ್‌ಮೆಂಟ್ ಬಾಬುಗಳಿಗೆ ಹಾಗೂ ಸೆಮಿನಾರ್ ಮುಂತಾದುವುಗಳಿಗಾಗಿ ಒದಗಿಸಿದ್ದರೆ ಅದರಲ್ಲಿ 74.4 ಲಕ್ಷ ರೂಪಾಯಿಗಳು ಖರ್ಚಾಗಿದೆ. 1964-65ನೇ ಸಾಲಿನಲ್ಲಿ 71.55 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ ಖರ್ಚಾಗಿರುವುದು 69 ಲಕ್ಷ ರೂಪಾಯಿಗಳು. ಇನ್ನೂ ಈ ವರ್ಷದ ಕೊನೆಯೊಳಗೆ ಸಂಪೂರ್ಣವಾಗಿ ಹಣ ಖರ್ಚಾಗುತ್ತದೆ. ಇದರ ಹೊರತಾಗಿ ನನಗೆ ಒಂದು ವಿಷಯವನ್ನು ಈ ಸಭೆಯ ಮಾನ್ಯ ಸದಸ್ಯರಿಗೆ ತಿಳಿಸಲು ತುಂಬಾ ಸಂತೋಷವೆನಿಸುತ್ತದೆ. ಪ್ಲಾನಿಂಗ್ ಸೀಲಿಂಗ್ ಮೇಲೆ ನಮ್ಮ ಸಹಕಾರ ಇಲಾಖೆಗೆ ಸಂಬಂಧಪಟ್ಟಹಾಗೆ 1 ಕೋಟಿ 20 ಲಕ್ಷ ರೂಪಾಯಿಗಳು ಕೇಂದ್ರ ಸಹಕಾರ ಅಭಿವೃದ್ಧಿ ಕಾರ್ಪೊರೇಷನ್ನಿನಿಂದ ನಮಗೆ ಮಂಜೂರು ಆಗಿದೆ. 41 ಹೊಸ ಗೋಡೌನುಗಳನ್ನು ಸ್ಥಾಪಿಸಬೇಕಾಗಿದೆ. ಇದಕ್ಕೂ ನಮ್ಮ ಪ್ಲಾನಿಗೂ ಯಾವ ಸಂಬಂಧವೂ ಇಲ್ಲ. ಅದರಂತೆ 45 ಲಕ್ಷ ರೂಪಾಯಿಗಳು ಈ ವರ್ಷ ಹೊಸದಾಗಿ ಗೋಡೌನುಗಳನ್ನು ಸ್ಥಪನೆ ಮಾಡುವುದಕ್ಕಾಗಿ ಮಂಜೂರಾಗಿದೆ.

ಇನ್ನು ಕುಡಿಯುವ ನೀರಿನ ಬಾವಿಗಳ ವಿಚಾರವಾಗಿ ನ್ಯಾಷನಲ್ ವಾಟರ್ ಸಪ್ಲೈ ಇಲಾಖೆಯವರ ಕೆಲಸದ ಬಗ್ಗೆ ಆಗಾಗ್ಗೆ ಈ ಮಾನ್ಯ ಸಭೆಯಲ್ಲಿ ಅನೇಕ ಸದಸ್ಯರಿಂದ ಪ್ರಶ್ನೆಗಳು ಬಂದಿವೆ. ಈ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸುತ್ತೇವೆಂಬ ವಿಚಾರವನ್ನು ಅವರು ಘೋಷಣೆ ಮಾಡಿದ್ದಾರೆ. ಅನೌನ್ಸ್ ಮಾಡಿದ್ದಾರೆ. ಅದರಿಂದ ನನಗೆ ಬಹಳ ಸಂತೋಷವೆನಿಸುತ್ತದೆ, ಮೊನ್ನೆ ತಾನೆ ಒಟ್ಟು 183 ಯೋಜನೆಗಳನ್ನು 1 ಕೋಟಿ 20 ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಮಾಡಬೇಕೆಂದು ಮಂಜೂರು ಮಾಡಿ ಕಳುಹಿಸಿದ್ದಾರೆ. ಈ ಮಾನ್ಯ ಸಭೆಗೆ ಮೊದಲೇ ನಾನು ಅರಿಕೆ ಮಾಡಿಕೊಂಡ ಹಾಗೆ ಒಟ್ಟು 8 ಕೋಟಿ ರೂಪಾಯಿಗಳ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರಲ್ಲ ಈಗಾಗಲೇ ಅದರಲ್ಲಿ ಒಂದು ಭಾಗ ನಮಗೆ ಬಂದಿದೆ. ಇನ್ನುಳಿದ ಯೋಜನೆಗಳನ್ನು ಕೇಂದ್ರ ಸರ್ಕಾರದವರು ಆದಷ್ಟು ಬೇಗ ಮಂಜೂರುಮಾಡಿ ಕಳುಹಿಸುತ್ತಾರೆಂಬ ಭರವಸೆ ನನಗಿದೆ. ಮತ್ತೊಂದು ಮುಖ್ಯವಾದ ಅನೌನ್ಸ್‌ಮೆಂಟ್ ಈ ಮಾನ್ಯ ಸಭೆಯಲ್ಲಿ ಹರಿಜನ ಗಿರಿಜನರ ವಸತಿ ಸೌಕರ್ಯಕ್ಕಾಗಿ ಸಹಕಾರೀ ಸಂಸ್ಥೆಗಳನ್ನು ಸ್ಥಾಪಿಸಿ ಅವರಿಗೆ ಸಾಲ ಕೊಡುವ ಹೊಸ ಕಾರ್ಯಗಳನ್ನು ನಾವು ಹಾಕಿಕೊಂಡಿದ್ದೇವೆ. ಕಳೆದ ಎರಡುಮೂರು ವರ್ಷಗಳ ಅವಧಿಯಲ್ಲಿ ನಮ್ಮ ಬಡ್ಜೆಟ್ಟಿನಲ್ಲಿ ಈ ಕೆಲಸಕ್ಕಾಗಿ ಬಹಳ ಕಡಿಮೆಯಾಗಿ ಹಣವನ್ನು ಒದಗಿಸಿದ್ದರೂ ಕೂಡ ಒಟ್ಟು 30 ಲಕ್ಷ ರೂಪಾಯಿ

ಗಳಷ್ಟು ಹಣವನ್ನು ಮಾತ್ರ ಮಂಜೂರು ಮಾಡಿದ್ದಾರೆ. ಆದರೆ ಹಣದ ಅನಾನುಕೂಲತೆಯಿಂದ ಇನ್ನೂ ಅನೇಕ ಅರ್ಜಿಗಳು ಬಂದರೂ ಅವನ್ನು ಮಂಜೂರು ಮಾಡಲು ಸಾಧ್ಯವಾಗಲಿಲ್ಲ. ಎರಡನೆ ಇನ್‌ಸ್ಟಾಲ್‌ಮೆಂಟನ್ನು ಕೊಡುವುದಕ್ಕೂ ಸಾಧ್ಯವಾಗಿಲ್ಲ.

ಮಾನ್ಯ ಸದಸ್ಯರಿಗೆ ಬಹುಶಃ ಗೊತ್ತಿರುವ ಹಾಗೆ ಯೋಜನೆಯ ಪ್ರಕಾರ ಸುಮಾರು 1½ ಸಾವಿರ ರೂಪಾಯಿಗಳಿಂದ 3 ಸಾವಿರ ರೂಪಾಯಿಗಳವರೆಗೆ ಮನೆಯಿಲ್ಲದೆ ಇರುವ ಒಂದು ಕುಟುಂಬಕ್ಕೆ ಸಿಕ್ಕುತ್ತದೆ. ಆ ಹಣವನ್ನು ಮನೆ ಕಟ್ಟುವುದಕ್ಕೋಸ್ಕರ ಶೇಕಡ 2 ರೂಪಾಯಿಗಳ ಬಡ್ಡಿಯಂತೆ ಅವರಿಗೆ ಕೊಡಬೇಕೆಂದು ಈ ಯೋಜನೆಯನ್ನು ಮಾಡಿದ್ದೇವೆ. ಮತ್ತು ಇಂಥಾ ಒಂದು ಕುಟುಂಬಕ್ಕೆ 200 ರೂಪಾಯಿಗಳ ಕಿಮ್ಮತ್ತಿನ ಮರವನ್ನೂ ಸಹ ಅವರಿಗೆ ಉಚಿತವಾಗಿ ಒದಗಿಸುತ್ತೇವೆ. ಮತ್ತು ಅವರಿಗೆ ಷೇರ್‌ಹಣವನ್ನು ಸಾಕಷ್ಟು ಪ್ರಮಾಣದಲ್ಲಿ ಕೊಡುತ್ತೇವೆ. ಒಬ್ಬ ಸದಸ್ಯರು 10 ರೂಪಾಯಿ ಷೇರ್‌ಹಣವನ್ನು ಕೊಟ್ಟರೆ 90 ರೂಪಾಯಿಗಳವರೆಗೆ ಸರ್ಕಾರದವರು ಸಾಲದ ರೂಪವಾಗಿ ಕೊಡಬೇಕು, ಒಟ್ಟು ಅವರ ಷೇರು ಹಣ 100 ರೂಪಾಯಿಗಳಾಗಬೇಕು ಎಂದು ಆ ಯೋಜನೆಯಲ್ಲಿ ಹೇಳಿದೆ. ಮತ್ತು ಈ ಸಹಕಾರ ಸಂಘಗಳು ಬಾರೋಯಿಂಗ್ ಕ್ಯಪಾಸಿಟಿಯನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿಲ್ಲವೆಂಬ ಉದ್ದೇಶದಿಂದ ಈ ಸಹಕಾರ ಸಂಘಗಳ ಮಟ್ಟಿಗೆ ವಿಶೇಷವಾಗಿ ನಾವು 10ರಿಂದ 30ರವರೆಗೆ ಬಾರೋಯಿಂಗ್ ಕ್ಯಪಾಸಿಟಿಯನ್ನು ಏರಿಸಿದ್ದೇವೆ. ಹೀಗೆ ಈ ಯೋಜನೆಗಳನ್ನ ತಯಾರು ಮಾಡಿದ್ದೇವೆ. ನಮ್ಮಲ್ಲಿ ಸಾಕಷ್ಟು ಹಣ ಇಲ್ಲದೆ ಯಾವರೀತಿಯಿಂದಲೂ ಈ ಯೋಜನೆ ಕುಂಠಿತವಾಗಬಾರದು ಎನ್ನುವ ದೃಷ್ಟಿಯಿಂದ ಲೈಫ್ ಇನ್ಷ್ಯೂರೆನ್ಸ್ ಆಫ್ ಕಾರ್ಪೊರೇಷನ್ನಿಗೆ ಈ ಉದ್ದೇಶಕ್ಕಾಗಿ ಸಾಲವನ್ನು ಕೊಡಬೇಕೆಂದು ನಾವು ಪತ್ರವ್ಯವಹಾರ ಮಾಡುದ್ದೆವು. ಅದು ಕೆಲವೊಂದು ಕಾರಣದಿಂದ ಸ್ವಲ್ಪಮಟ್ಟಿಗೆ ನಿಧಾನವಾಗಿತ್ತು. ಇಂದು ನಾನು ಬಹಳ ಸಂತೋಷದಿಂದ ಈ ವಿಚಾರವನ್ನು ಮಾನ್ಯ ಸದಸ್ಯರಿಗೆ ಅರಿಕೆ ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ, ಲೈಫ್ ಇನ್ಷ್ಯೂರೆನ್ಸ್ ಕಾರ್ಪೊರೇಷನ್ನಿನವರು ಈ ಯೋಜನೆಗೆ ಒಂದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಈ ಹಣವನ್ನು ನಾವು ಬರುವ ಏಪ್ರಿಲ್ ಒಂದನೆಯ ತಾರೀಖಿನಿಂದ ಯಾವ ಯಾವ ತಾಲ್ಲೂಕಿನಲ್ಲಿ ಎ ಷ್ಟು ಮಟ್ಟಿಗೆ ಅವಶ್ಯಕತೆ ಇದೆಯೆಂಬದನ್ನು ನೋಡಿಕೊಂಡು ಆದಷ್ಟು ಶೀಘ್ರವಾಗಿ ಹರಿಜನರಿಗೆ, ಗಿರಿಜನರಿಗೆ ಸಹಕಾರ ಸಂಘಗಳ ಮುಖಾಂತರ ಹಣವನ್ನು ಹಂಚುವುದಕ್ಕೆ ನಾವು ವ್ಯವಸ್ಥೆಯನ್ನು ಮಾಡುತ್ತೇವೆ.

ಅಧ್ಯಕ್ಷರೇ, ಸಮಯ ಬಹಳ ಕಡಿಮೆ ಇರುವುದರಿಂದ ನಾನು ಉದ್ದವಾದ ಭಾಷಣವನ್ನ ಮಾಡುವುದಕ್ಕೆ ಬಯಸುವುದಿಲ್ಲ. ಈಗ ಎರಡು ವಿಚಾರಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡದಿದ್ದರೆ ಸಮಂಜಸವಾಗುವುದಿಲ್ಲ. ರಾಷ್ಟ್ರೀಯ ವಿಸ್ತರಣಾ ಅಭಿವೃದ್ಧಿ ಯೋಜನೆಯ ವ್ಯವಸ್ಥೆಯ ಕಾರ್ಯಕ್ರಮದ ವಿಷಯದಲ್ಲಿ ಇಲಾಖೆಗಳಲ್ಲಿ ಹೊಂದಾಣಿಕೆ ಸಾಕಷ್ಟು ಇಲ್ಲ, ಮತ್ತು ಬ್ಲಾಕ್ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ರಾಜ್ಯದ ಮಟ್ಟದಲ್ಲಿ ಎರಡು ಖಾತೆಯ ಅಧಿಕಾರಿಗಳಲ್ಲಿ ಅಷ್ಟೊಂದು ಸಾಮರಸ್ಯ ಇಲ್ಲ ಎಂದು ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯದಲ್ಲಿ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಕಳೆದ 8—10 ವರ್ಷಗಳಿಂದ ಗ್ರಾಮಾಂತರ ಪ್ರದೇಶಕ್ಕೆ ಸಂಬಂಧಪಟ್ಟ ಯಾವುದೋ ಅಭಿವೃದ್ಧಿ ಕೆಲಸಗಳನ್ನಾದರೂ ಕೂಡ ಅದನ್ನು ಒಬ್ಬ ಆಫೀಸರ ನೇತೃತ್ವದಲ್ಲಿ, ಕಂಟ್ರೋಲಿನಲ್ಲಿ ಮಾಡದೆ ಎಲ್ಲಾ ಖಾತೆಯ ಅಧಿಕಾರಿಗಳೂ ಸೇರಿ ಅದನ್ನು ಮಾಡಬೇಕು ಎಂದು ಹೇಳುವಂಥಾ ತತ್ವವನ್ನು ಒಪ್ಪಿ ಆ ಕೆಲಸಗಳನ್ನ ಕಾರ್ಯಗತ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ತಾಲ್ಲೂಕುಮಟ್ಟದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಯು ಹಾಕಿಕೊಟ್ಟ ಕಾರ್ಯಕ್ರಮಕ್ಕನುಸಾರವಾಗಿ ಚೀಫ್ ಎಗ್ಸಿಕ್ಯುಟೀವ್ ಆಫೀಸರು ಆ ಕೆಲಸಗಳನ್ನು ಮಾಡಿಸುವುದಕ್ಕೆ ಜವಾಬ್ದಾರರಾಗುತ್ತಾರೆ. ಆ ಕೆಲಸಗಳನ್ನು ವ್ಯವಸಾಯ ಖಾತೆಗೆ ಸಂಬಂಧಪಟ್ಟ ಅಧಿಕಾರಿಗಳು, ಸಹಕಾರ ಖಾತೆಗೆ ಸಂಬಂಧಪಟ್ಟ ಅಧಿಕಾರಿಗಳು, ಮಾಡುತ್ತಾರೆ. ಇದು ನಿಜವಾಗಿಯೂ ಒಂದು ಹೊಸ ಪ್ರಯೋಗ. ಈಗಾಗಲೇ ನಾನಾ ಕ್ಷೇತ್ರಗಳಲ್ಲಿ ಬಹಳ ಪ್ರಗತಿಯನ್ನು ನಾವು ಸಾಧಿಸಿದ್ದೇವೆ. ಹಿಂದೆ ಒಂದೇ ಕೆಲಸವನ್ನ ಎರಡು ಖಾತೆಗಳು ಮಾಡತಕ್ಕದ್ದು ಮತ್ತು ಇನ್ನೂ ಬೇರೆ ಬೇರೆ ಖಾತೆಗಳು ಮಾಡತಕ್ಕದ್ದು ಅಪರೂಪವಾಗಿರಲಿಲ್ಲ. ಒಂದು ಖಾತೆ ಮೇಲೆ ಇರಬೇಕು ಒಂದು ಖಾತೆ ಕೆಳಗೆ ಇರಬೇಕು ಅವುಗಳಿಗೆ ಅಧಿಕಾರ ಎಷ್ಟಿರಬೇಕು, ಅದನ್ನ ಹೇಗೆ ಚಲಾಯಿಸಬೇಕು ಎನ್ನತಕ್ಕ ವಿಷಯದಲ್ಲಿ ಘರ್ಷಣೆ ನಡೆದು, ಈಗ ಆ ಘರ್ಷಣೆ ಕಡಿಮೆಯಾಗಿದೆ. ಈ ಇಲಾಖೆಗಳಲ್ಲಿ ಇನ್ನೂ ಹೆಚ್ಚಿನ ಸಾಮರಸ್ಯ ಉಂಟಾಗತಕ್ಕದ್ದು ಇದೆ, ಈ ಉದ್ದೇಶಕ್ಕೋಸ್ಕರ ಇಂದು ರಾಜ್ಯದ ಮಟ್ಟದಲ್ಲಿ ಒಂದು ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿದೆ. ಇದರಲ್ಲಿ ಯಾವುದೇ ರೀತಿಯ ಘರ್ಷಣೆ ಬಂದರೆ, ತೊಂದರೆ ಉಂಟಾದರೆ ಅದನ್ನು ಅವರು ತೀರ್ಮಾನ ಮಾಡುತ್ತಾರೆ. ಮತ್ತು ಡೆವಲಪ್‌ಮೆಂಟ್ ಕಮೀಷನರು ಅದಕ್ಕೆ ಸಂಬಂಧಪಟ್ಟ ಎಲ್ಲಾ ಖಾತೆಗಳ ಮೇಲೂ ಮೇಲ್ವಿಚಾರಣೆಯನ್ನ

(ಶ್ರೀ ಬಿ. ರಾಚಯ್ಯ)

ಮಾಡತಕ್ಕ ಸೂಪರ್‌ವೈಜ್ ಮಾಡತಕ್ಕ ಅಧಿಕಾರವನ್ನು ಹೊಂದಿದ್ದಾರೆ. ಇದರಿಂದ ಹಿಂದೆ ಎದುರಿಸಿರತಕ್ಕ ಅನೇಕ ತೊಡಕುಗಳು ನಿವಾರಣೆಯಾಗುತ್ತವೆ ಎಂದು ಹೇಳಿದರೆ ತಪ್ಪಾಗಲಾರದು.

ಇನ್ನು ಕೊನೆಯದಾಗಿ, ಸಹಕಾರ ಖಾತೆಯು ಬಹಳವಾಗಿ ಬೆಳೆಯುತ್ತಿದೆ ಎಂದು ಶ್ರೀಮಾನ್ ವಿ.ಎಸ್. ಪಾಟೀಲ್ ಅವರು ಹೇಳಿದರು. ಈ ರೀತಿ ಬೆಳೆಯುತ್ತಾ ಇರತಕ್ಕ ಸಹಕಾರ ಖಾತೆಯ ಹೊಣೆಗಾರಿಕೆಯನ್ನು ಯತಸ್ವಿಯಾಗಿ ನಿರ್ವಹಿಸುವುದಕ್ಕೆ ತರಪೇತಿಯನ್ನು ಕೊಡತಕ್ಕ ವ್ಯವಸ್ಥೆಯನ್ನು ಸಾಕಷ್ಟು ಪ್ರಮಾಣದಲ್ಲಿ ಮಾಡಬೇಕು. ಅದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ಸಹಕಾರ ಸಂಘಗಳಲ್ಲಿ ಕೆಲಸ ಮಾಡತಕ್ಕವರಿಗೆ ತರಪೇತಿಯನ್ನು ಕೊಡುವುದಕ್ಕೋಸ್ಕರ ತರಪೇತಿ ಕೇಂದ್ರವನ್ನು ಪ್ರತಿ ಜಿಲ್ಲೆಯಲ್ಲಿ ಅಲ್ಲದಿದ್ದರೂ ಎರಡೆರಡು ಜಿಲ್ಲೆಗೆ ಒಂದು ತರಪೇತಿ ಕೇಂದ್ರವನ್ನಾದರೂ ತೆರೆಯುವುದಕ್ಕೆ ಪ್ರಯತ್ನ ಮಾಡಬೇಕು. ಅದು ಅಗತ್ಯ ಇದೆ.

ಇನ್ನು ಸಹಕಾರ ಸಂಘಗಳಲ್ಲಿ ಏನಾದರೂ ಸ್ವಲ್ಪ ಮಟ್ಟಿಗೆ ಅಲ್ಲಲ್ಲೇ ವ್ಯತ್ಯಾಸಗಳಾಗುತ್ತಿದ್ದರೆ ಅದಕ್ಕೆ ಕೆಲವು ಗುಂಪು ರಾಜಕೀಯ, ಈ ತರಹದ ಯಾವುದಾದರೂ ರೋಗ ಇರುವುದೇ ಇದಕ್ಕೆ ಮುಖ್ಯ ಕಾರಣ, ಮತ್ತು ಸಹಕಾರ ಸಂಘಗಳಲ್ಲಿ ಕೆಲಸ ಮಾಡತಕ್ಕ ಕಾರ್ಯಕರ್ತರಿಗೆ ಸಾಕಷ್ಟು ತರಪೇತಿ ಮತ್ತು ಅನುಭವ ಇಲ್ಲದೇ ಇರುವುದು ಕಾರಣ ಎನ್ನುವ ವಿಚಾರವನ್ನು ಯಾರೂ ಮರೆಯಬಾರದು. ಸರ್ಕಾರದ ಮೇಲೆ ಮತ್ತು ಸಹಕಾರಿ ಖಾತೆಯ ಮೇಲೆ ಪುನಃಪುನಃ ಆಕ್ಷೇಪಣೆಗಳು ಬರುತ್ತವೆ. ಸಹಕಾರ ಸಂಸ್ಥೆಗಳ ಆಡಳಿತದ ವಿಚಾರದಲ್ಲಿ ಪಕ್ಷಪಾತಗಳು ಆಗುತ್ತವೆ ಅಥವಾ ಲೆಕ್ಕಪತ್ರಗಳು ಸರಿಯಾಗಿಲ್ಲ ಎನ್ನುವ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಕಳೆದ ಸಲ ಪ್ರಸ್ತಾಪ ಮಾಡಿದ್ದರು. ಅದಕ್ಕಾಗಿ ಪ್ರತ್ಯೇಕವಾಗಿ ಒಂದು ಸಿಬ್ಬಂದಿಯನ್ನು ಏರ್ಪಡಿಸಿದ್ದೇವೆ. ಯಾವುದೇ ಸಹಕಾರ ಸಂಸ್ಥೆಯ ಮೇಲೆ ಆಕ್ಷೇಪಣೆ ಬಂದರೆ ಅದನ್ನು ತೀವ್ರವಾಗಿ ಪರಿಶೀಲಿಸಲು ಅಲ್ಲಿಗೆ ವಿಶೇಷ ಸಿಬ್ಬಂದಿಯನ್ನು ಕಳುಹಿಸಿ ಅದನ್ನು ತನಿಖೆಮಾಡಿ ಸಂಬಂಧಪಟ್ಟ ತಪ್ಪಿತಸ್ಥರ ಮೇಲೆ ಮುಂದಿನಕ್ರಮವನ್ನು ಕೈಗೊಳ್ಳುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆ ಎಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ.

ಇನ್ನು ಕಳೆದ ಮೂರು ವರ್ಷಗಳಲ್ಲಿ ಸಹಕಾರ ಸಂಘಗಳಲ್ಲಿ ಆಡಿಟ್ ಎಷ್ಟರಮಟ್ಟಿಗೆ ಆಗಿಲ್ಲ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ನಾನು ಬಯಸುತ್ತೇನೆ. 1962ನೇ ಇಸವಿಯಲ್ಲಿ 93·7 ಪರ್ಸೆಂಟು 1963ನೇ ಇಸವಿಯಲ್ಲಿ 97·4 ಪರ್ಸೆಂಟ್ ಮತ್ತು 1864ನೇ 99.1 ಪರ್ಸೆಂಟ್ ಸಹಕಾರ ಸಂಘಗಳಲ್ಲಿ ಆಡಿಟ್ ಆಗಿದೆ. ಇದರ ಅರ್ಥ ಸಂಪೂರ್ಣವಾಗಿ ಇದರಲ್ಲಿಯ ಯಾವುದೇ ದೋಷ ಇಲ್ಲ ಎಂದು ನಾನು ಹೇಳ ಬಯಸುವುದಿಲ್ಲ. ದೋಷ ಇರಬಹುದು. ಇದರಲ್ಲಿ ಒಂದು ಮಾತನ್ನು ಎಲ್ಲರೂ ಲಕ್ಷ್ಯದಲ್ಲಿಡಬೇಕು. ಅದೇನೆಂದರೆ ಸಹಕಾರ ಸಂಘಗಳಿಗೆ ತಮ್ಮದೇ ಆದ ಕಾಯಿದೆ ಮತ್ತು ಬೈಲಾಗಳು ಇವೆ. ಈ ಸಂಸ್ಥೆಗಳು ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಿರ್ಮಾಣವಾದಂತಹ ಸಂಸ್ಥೆಗಳು. ಆದ್ದರಿಂದ ನಾವು ಪ್ರತಿಯೊಂದು ಸಹಕಾರ ಸಂಘದಲ್ಲೂ ಪುನಃ ಕೈಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಸಂಘಗಳಲ್ಲಿರತಕ್ಕ ದೋಷಗಳನ್ನು ಪರಿಹರಿಸುವುದಕ್ಕೆ ಎಷ್ಟರಮಟ್ಟಿಗೆ ಪ್ರಯತ್ನ ಮಾಡಬಹುದೋ ಅಷ್ಟನ್ನುಮಾಡಿದ್ದೇವೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಕನ್‌ಸೂಮರ್ಸ್ ಸಹಕಾರ ಸಂಘಗಳು ಕಳೆದ ಎರಡು ಮೂರು ವರ್ಷಗಳಿಂದ ಉತ್ತಮವಾದ ಕೆಲಸವನ್ನು ಮಾಡಿದೆ. ಅವರಿಗೆ ನಾವು ಕಾಂಪ್ಲಿಮೆಂಟ್ಸ್ ಕೊಡದೆ ಇದ್ದರೆ ನನ್ನ ಕರ್ತವ್ಯ ಲೋಪವಾಗುತ್ತದೆ ಎಂದು ನಾನು ತಿಳಿಯುತ್ತೇನೆ. ನಮ್ಮ ರಾಜ್ಯದಲ್ಲಿ ತಲೆದೋರಿದಂತಹ ಆಹಾರದ ವಿಷಮ ಪರಿಸ್ಥಿತಿಯಲ್ಲಿ ಆ ಸಹಕಾರ ಸಂಘಗಳು ಮುಂದೆ ಬಂದು ತಮ್ಮ ಶಕ್ತಿಮೀರಿ ಕೆಲಸಗಳನ್ನು ಮಾಡದೆ ಇದ್ದರೆ ಇದಕ್ಕೂ ಹೆಚ್ಚಿನ ಬಿಕ್ಕಟ್ಟನ್ನು ನಾವು ಎದುರಿಸಬೇಕಾಗಿತ್ತು. ಅಲ್ಲಿ ಕೊಟ್ಯಾಂತರ ರೂಪಾಯಿ ಜವಾಬ್ದಾರಿಯನ್ನು ತೆಗೆದುಕೊಂಡು ಕೆಲಸ ಮಾಡಿದ್ದಾರೆ. ಅಂಕಿ ಅಂಶಗಳನ್ನು ಮಾನ್ಯ ಸಭೆಯ ಮುಂದೆ ಇಟ್ಟಿದ್ದರಿ ಬಹುತಃ ಬಹಳ ಚೆನ್ನಾಗಿತ್ತು. ಆದರೆ ಅದಕ್ಕೆ ಸಮಯವಿಲ್ಲ. ಆ ವ್ಯವಹಾರಕ್ಕೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ಪುನಃ ಇಂದಿನ ಚರ್ಚೆಯಲ್ಲಿ ಕೆಲವೊಂದು ಸದಸ್ಯರು ಈ ಎರಡೂ ಖಾತೆಗೆ ಸಂಬಂಧಪಟ್ಟ ಉಪಯುಕ್ತವಾದ ಸೂಚನೆ ಕೊಟ್ಟದ್ದಕ್ಕಾಗಿ ನನ್ನ ಕೃತಜ್ಞತೆಯನ್ನು ಅರ್ಪಿಸಿ ಈ ನಾಲ್ಕು ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಕೆ. ಕಂಬ್ಳಿ.—ವ್ಯವಸಾಯಗಾರರಿಗೆ, ಸವಿದರದಿಂದ ಕಂಟಿ, ರಂಟಿ, ಮುಂತಾದ ಉಪಕರಣಗಳನ್ನು ಒದಗಿಸಲು ಎಲ್ಲಿಯಾದರೂ ಈ ರಾಜ್ಯದೊಳಗೆ ಏರ್ಪಾಡು ಮಾಡಿದ್ದೀರಾ?

ಶ್ರೀ ಜಿ. ನಾರಯಣ ಗೌಡ.—ಇಂಪ್ಲಿಮೆಂಟ್ ಫ್ಯಾಕ್ಟರಿಗಳನ್ನು ಕೆಲವು ಜಿಲ್ಲಾಮಟ್ಟದಲ್ಲಿ ಮಾಡಬೇಕೆಂತ ಒಂದು ಸ್ಕೀಮು ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸಿದ್ದೇವೆ. ಬಹುಶಃ ಅವರ ಒಪ್ಪಿಗೆ ಪಡೆದ ಮೇಲೆ ಇಂಪ್ಲಿಮೆಂಟ್ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಜೊತೆಗೆ ಅರಣ್ಯ ಇಲಾಖೆಯಲ್ಲಿ ಗೂಡಿ ಸಾಮಾನುಗಳನ್ನು ಮಾಡಿಸಿಕೊಡುತ್ತಿದ್ದೇವೆ.

ಶ್ರೀ ಎ. ಎಸ್. ಪಾಟೀಲ್.—ಜಯಂತಿ ಮತ್ತು ಲಕ್ಷ್ಮಿ ಮುಂತಾದ ಹತ್ತಿ ಬೀಜಗಳಿವೆ. ಪುನಃಪುನಃ ಹೊಸದನ್ನು ಎವಾಲ್ವ್ ಮಾಡಲಿಕ್ಕೆ ಯಾವ ಕ್ರಮವನ್ನು ನಿಮ್ಮ ಖಾತೆ ತೆಗೆದುಕೊಂಡಿದೆ?

ಶ್ರೀ ಜಿ. ನಾರಾಯಣ ಗೌಡ.—ಯಾವುದಾದರೂ ಹೊಸ ಬೀಜ ಕಂಡುಹಿಡಿಯಬೇಕಾದರೆ 10 ವರ್ಷವಾಗುತ್ತೆ, ಎವಾಲ್ವ್ ಮಾಡಬೇಕು. ಆಮೇಲೆ ಡಿಸ್ಟ್ರಿಕ್ಟ್‌ಗಳಿಗೆ ಕೊಡಬೇಕು. ಈ ರೀತಿ ಕೆಲವು ಮಾಡಿ ಪ್ರಯತ್ನ ನಡೆಯುತ್ತಾ ಇದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಸಹಕಾರ ಸಂಸ್ಥೆಗಳಿಗೆ ಸಚಿವರು ಇದ್ದುದರಲ್ಲಿ ಒಳ್ಳೆಯ ಕೆಲಸವನ್ನು ಮಾಡಿಕೊಂಡು ಹೋಗಿದ್ದಾರೆ, ತುಂಬಾ ಸಂತೋಷ. ಅವರ ಖಾತೆಗೆ ಹೊಂದಿಕೊಂಡಿರುವಂತೆ, ರೂರಲ್ ವಾಟರ್ ಸ್ಕೀಮು ಮತ್ತು ಕುಡಿಯುವ ನೀರಿನ ಬಾವಿ ಸ್ಕೀಮು, ಎರಡೂ ಅತಿ ಮುಖ್ಯವಾದುವು. ಅವುಗಳಲ್ಲಿ ನಿರೀಕ್ಷಣೆ ಮಾಡುತ್ತಾ ಆಗುತ್ತಾ ಇಲ್ಲ. ಅದರ ಬಗ್ಗೆ ಒಂದು ಭರವಸೆ ನೀಡಬೇಕೆಂದು ಅಪೇಕ್ಷೆ ಮಾಡುತ್ತೇವೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಹಿಂದಿನ 5 ವರ್ಷಗಳಲ್ಲಿ ಇದರ ಕಾರ್ಯ ಆಗಿಲ್ಲ. ಮೊನ್ನೆತಾನೆ 1 ಕೋಟಿ 20 ಲಕ್ಷ ರೂಪಾಯಿ ಮಂಜೂರಾಗಿ ಬಂದಿದೆ. ಏಳು ಕೋಟಿ ರೂಪಾಯಿ ಕೇಳಿದ್ದೆವು. ಕೇಂದ್ರ ಸರ್ಕಾರಕ್ಕೆ ಈ ವಿಚಾರದಲ್ಲಿ ಕಳುಹಿಸಿದ ಸ್ಕೀಮು ಮಾನ್ಯ ಸದಸ್ಯರಿಗೆ ಬಹುಶಃ ಗೊತ್ತಿರಬಹುದು. ಲೋಕಲ್ ಡೆವಲಪ್‌ಮೆಂಟ್ ವರ್ಕುಗಳಲ್ಲಿ 50 ಪರ್ಸೆಂಟ್ ಜನರು ಕೊಡಬೇಕು ಅಂತ ಇತ್ತು. ಈಗ 10 ರಷ್ಟು ಕೊಟ್ಟರೆ ಸಾಕು—ಅದರಲ್ಲಿ 5 ರಷ್ಟು ಜನರು, ಬಾಕಿ 5 ರಷ್ಟು ಸಂಸ್ಥೆಗಳು ಕೊಡಬೇಕು. ಡಿಫಿಕಲ್ಟ್ ಏರಿಯಾ ಇದ್ದರೆ ಅದನ್ನು 5ಕ್ಕೆ ಇಳಿಸಬೇಕು ಅಂತ ಮಾಡಿಕೊಂಡಿದ್ದೇವೆ. ಎರಡನೆಯದಾಗಿ, ನ್ಯಾಶನಲ್ ವಾಟರ್ ಸಪ್ಲೈನಲ್ಲಿ ಕೇಂದ್ರ ಸಕಾರದವರು 50 ಪರ್ಸೆಂಟ್ ಕೊಡುತ್ತಾರೆ. ಬಾಕಿದನ್ನು ನಾವು ಕೊಡುತ್ತೇವೆ. ಆದರೆ ಸಂಬಂಧಪಟ್ಟ ಪಂಚಾಯಿತಿಯವರು ಒಟ್ಟು ಎಸ್ಟಿಮೇಟೆಡ್ ಕಾಸ್ಟಿನಲ್ಲಿ 25 ಪರ್ಸೆಂಟ್ ಕೊಡಬೇಕಾಗಿತ್ತು. ಕಳೆದ 5-6 ತಿಂಗಳ ಹಿಂದೆ ಒಂದು ನಿರ್ಣಯ ಮಾಡಿದ್ದೇವೆ. ಈ ನಿರ್ಣಯದ ಪ್ರಕಾರ ಗ್ರಾಮ ಪಂಚಾಯಿತಿಯವರು 25 ಪರ್ಸೆಂಟ್ ಕೊಡುವುದು ಅಗತ್ಯವಿಲ್ಲ. 10 ಪರ್ಸೆಂಟ್ ಕೊಟ್ಟರೆ ಸಾಕು. ಇನ್ನು ಬರಗಾಲ ಪರಿಸ್ಥಿತಿ ಇರತಕ್ಕಂಥ ಪ್ರದೇಶದಲ್ಲಿ, ಕಠಿಣ ಪರಿಸ್ಥಿತಿ ಇರತಕ್ಕಂಥ ಪ್ರದೇಶದಲ್ಲಿ, ಇದನ್ನು ಕೂಡ ಕಡಿಮೆ ಮಾಡಲಿಕ್ಕೆ ಅವಕಾಶವಿದೆ. ಬಹುಶಃ ಇನ್ನು 2 ವರ್ಷದಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ಕುಡಿಯುವ ನೀರಿನ ಭವಣೆ ಇರತಕ್ಕಂಥ ಹಳ್ಳಿ ಯಾವುದೂ ಇಲ್ಲದಾಗಲಿ ಎಂದು ಆಸೆ ಮಾಡಿದ್ದೇವೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಧಾರವಾಡ ಅಗ್ರಿಕಲ್ಚರ್ ಕಾಲೇಜಿನಲ್ಲಿ ಮತ್ತಿತರ ಅಗ್ರಿಕಲ್ಚರ್ ಫಾರಮುಗಳಲ್ಲಿ 15 ವರ್ಷಗಳಿಂದ ಪ್ರತಿಯೊಂದೂ ಕೆಲಸ ಮಾಡಿದಂಥ ಕಂಟಿಂಜನ್ಸಿ ಸ್ಟಾಫು ಬಗ್ಗೆ ಯಾವ ಧೋರಣೆ ವಹಿಸುವಿರಿ ? ಅವರು 20 ವರ್ಷ ಕಾಲ ಒಂದೇಸಮನೆ ದುಡಿದಿರುವುದರಿಂದ, ಅವರ ಜೀವಮಾನದ ಬಗ್ಗೆ ಸಂರಕ್ಷಣೆ ಕೊಡಬೇಕು ಎಂದು ವಿನಂತಿ ಮಾಡಿಕೊಂಡಿದ್ದೆ.

ಎರಡನೆಯದು, ಕೇಂದ್ರ ಸರಕಾರದ ಉಪಮಂತ್ರಿಗಳು ಹಿಂದುಸ್ತಾನದ 4 ಸಾವಿರ ಟ್ರಾಕ್ಟರುಗಳಲ್ಲಿ ಇವತ್ತು 2 ಸಾವಿರ ಟ್ರಾಕ್ಟರುಗಳು ನಾದುರಸ್ತಿನಲ್ಲಿವೆ ಎಂದು ಹೇಳಿದ್ದಾರೆ. ಈ ಎರಡು ಸಾವಿರ ನಾದುರಸ್ತು ಟ್ರಾಕ್ಟರುಗಳಲ್ಲಿ, ನಮ್ಮ ಸಂಸ್ಥಾನದ ನಾದುರಸ್ತು ಟ್ರಾಕ್ಟರುಗಳೆಷ್ಟು ?

ಶ್ರೀ ಜಿ. ನಾರಾಯಣಗೌಡ.—ಈ ಕಂಟಿಂಜನ್ಸಿ ಫಂಡಿನಿಂದ ಮೆಂಟೇನ್ ಆಗುತ್ತಿರುವ ಕೆಲವರು, ತಮ್ಮನ್ನು ಪರ್ಮನೆಂಟ್ ಮಾಡಬೇಕೆಂದು ಮನವಿ ಮಾಡಿದ್ದರು. ಅದು ಸರಕಾರದ ಪರಿಶೀಲನೆಯಲ್ಲಿದೆ.

ಎರಡನೆಯದು, ನಮ್ಮ ಟ್ರಾಕ್ಟರುಗಳು ಸಾಧಾರಣವಾಗಿ 15 ವರ್ಷಗಳಿಂದ ಕೆಲಸ ಮಾಡಿರುವುವು, ಅವುಗಳಲ್ಲಿ 20 ವರ್ಕಿಂಗ್ ಆರ್ಡರಿನಲ್ಲಿವೆ ; 7 ಸಿಕ್ ಲಿಸ್ಟಿನಲ್ಲಿವೆ.

ಶ್ರೀಮತಿ ಸುಶೀಲಾಬಾಯಿ ಹಿರಾಚಂದಶಾ.—ರೋಗ ಬಂದಮೇಲೆ ಔಷಧ ಕೊಡುವುದು ಎಲ್ಲಾ ಜಿಲ್ಲೆಯಲ್ಲಿಯೂ ಇಟ್ಟಿದ್ದೀರಿ. ಈಗ ಇದಕ್ಕೆ ಸೆಂಟರಿನವರು ಸಬ್ಸಿಡಿ ಕೊಡುತ್ತಾರೆಯೆ, ಕೊಟ್ಟರೆ ಎಷ್ಟು ಕೊಡುತ್ತಾರೆ? ಬೆಳೆ ಹೆಚ್ಚಾಗಿ ಆಗಬೇಕಾದರೆ ಸಂಶೋಧನೆ ಬಹಳ ಅಗತ್ಯ. ಅದನ್ನು ಮಾಡಿ ಅದರ ಫಲಿತಾಂಶವನ್ನು ಬಡ ರೈತರಿಗೆ ಒದಗಿಸುವುದು ಅಗತ್ಯ. ಬಿಜಾಪುರ ಜಿಲ್ಲೆಯೊಳಗೆ ಸಸಿ ಇರುವಾಗಲೆ ಗಿಡಗಳು ಹಾಳಾಗಿ ಹೋದುವು. ತಾಲ್ಲೂಕು ಬೋರ್ಡಿಗೆ ಗೊತ್ತಿದೆ. ಇದನ್ನು ವಿಚಾರ ಮಾಡುತ್ತೀರ ?

ಶ್ರೀ ಜಿ. ನಾರಾಯಣ ಗೌಡ.—ಪೆಸ್ಟಿಸೈಡುಗಳಿಗೆ ಸಬ್ಸಿಡಿ ಕೊಡುತ್ತಾರೆಯೆ ಎಂದು ಅವರು ಕೇಳುತ್ತಿದ್ದಾರೆ. ಸಬ್ಸಿಡಿಯನ್ನು ಕೊಡುತ್ತಾರೆ. ಹೋದ ವರ್ಷ ಒಂದು ಸಾವಿರ ಟನ್ ಕೇಂದ್ರ ಸರಕಾರದಿಂದ ಫ್ರೀಯಾಗಿ ತರಿಸಿದ್ದೇವೆ. ಅನೇಕ ಜಿಲ್ಲೆಗಳಿಗೆ ಅದನ್ನು ಕೊಟ್ಟಿದ್ದೇವೆ.

ಶ್ರೀ ಕುಂದೂರು ರುದ್ರಪ್ಪ.—ನಾನು ಈಗತಾನೆ ಹೇಳಿದೆ: ಜನ ಹಿಗ್ಗಿದರೆ ಜಮೀನೂ ಹಿಗ್ಗುತ್ತದೆಂದು. ರೈತರು ಹೆಚ್ಚಿಗೆ ಆಹಾರ ಬೆಳೆಯಬೇಕಾದರೆ ತಾವು ಅವರಿಗೆ ಜಪಾನಿನಂತೆ ಹೆಚ್ಚಿನ ಬೆಲೆ ಸಿಗುವಂತೆ ಮಾಡಬೇಕು. ಜಪಾನಿನಲ್ಲಿ ಆರು ತಿಂಗಳಿಗೆ ಮುಂಚೆಯೆ ಇಂಥಿಂಥ ರೇಟಿಗೆ ಇಂಥಿಂಥ ಫಸಲು ತಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಡುತ್ತಾರೆ. ಇದು ಹೆಚ್ಚಿಗೆ ಬೆಳೆಯಲು ಪ್ರೋತ್ಸಾಹ ಕೊಡುತ್ತದೆ. ಅದರಂತೆ ನಮ್ಮ ಸರಕಾರವೂ ಯೋಚನೆ ಮಾಡುತ್ತದೆಯೇ?

ಶ್ರೀ ಜಿ. ನಾರಾಯಣಗೌಡ.—ಈ ಉದ್ದೇಶದ ಮೇಲೆ ಈ ಸಾರಿ ಆಹಾರದ ದರಗಳನ್ನು ಸರಕಾರದವರು ಹೆಚ್ಚು ಮಾಡಿರುವುದು.

ಶ್ರೀ ಎಸ್. ಸುಬ್ಬಯ್ಯನಾಯಕ್ (ಸೂಳ್ಯ).—ಅಗ್ರಿಕಲ್ಚರ್ ಕೋ-ಅಪರೇಟೀವ್ ಫಾರ್ಮಿಂಗ್ ಸೊಸೈಟಿಗಳು ಇನ್ನೂ ಜಯಪ್ರದವಾಗಿ ಕೆಲಸ ಮಾಡಲಿಕ್ಕೆ ನಿಮ್ಮ ನೀತಿರೂಪಗಳ ದೃಷ್ಟಿ ಹೆಚ್ಚುಮಾಡಬೇಕಾಗಿದೆ. ಅದರಂತೆ, ಈ ಹೊಸ ಅಗ್ರಿಕಲ್ಚರ್ ಕಾಲೋನಿಗಳನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬುಗಳಿಗೆ ಕೊಡುವುದರಿಂದ ನಿಮ್ಮ ನೀತಿ ರೂಪಗಳನ್ನು ಹೆಚ್ಚು ಜಯಪ್ರದ ಮಾಡುವುದಕ್ಕೆ ಸಾಧ್ಯತೆ ಉಂಟು ಎಂದು ತಾವು ಹೇಳುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮ್ಮ ಮೈಸೂರು ರಾಜ್ಯದಲ್ಲಿ ಅಗ್ರಿಕಲ್ಚರ್ ಫಾರ್ಮಿಂಗ್ ಸೊಸೈಟಿ ನಮ್ಮ ಇಡೀ ದೇಶಕ್ಕೆ ಎರಡನೆ ನಂಬರ್ ಇದೆ. ಇದರಲ್ಲಿ ಯಾವ ಒಂದು ಸ್ಕೀಮನ್ನು ನಾವು ಹಾಕಿಕೊಂಡಿದ್ದೆವು, ಅದನ್ನು ಅನುಸರಿಸಲು ಸಾಕಷ್ಟು ದುಡ್ಡು ಇರುವುದಿಲ್ಲ. 12 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಷೇರು ಕ್ಯಾಪಿಟಲ್ ಇನ್ನಿತರ ಕೆಲಸಗಳಿಗಾಗಿ ಹಾಗೂ ಟ್ರೇನಿಂಗಿಗಾಗಿ ಕೊಡಲು ಅನುಕೂಲವಾಗುವುದಿಲ್ಲ. ಇದಕ್ಕಾಗಿ ಸರಕಾರದವರು ಒಂದು ಪ್ರೋಗ್ರಾಂ ಮಾಡಿದ್ದಾರೆ. ಯಾವ ಯಾವ ಅನುಕೂಲತೆಗಳನ್ನು ವೈಯಕ್ತಿಕವಾಗಿ ನಾವು ವ್ಯವಸಾಯಗಾರರಿಗೆ ಕೊಡಬೇಕಾಗಿವೆಯೋ ಅವನ್ನು ಪ್ರಯಾರಿಟಿ ಬೇಸಿಸ್ ಮೇಲೆ ಅಂತಹ ಸೊಸೈಟಿಗಳಿಗೆ ಕೊಡಬೇಕು ಎನ್ನುವ ವಿಚಾರ ಇದೆ. ಎರಡನೇದು ಎಲ್ಲೆಲ್ಲಿ ಅಗ್ರಿಕಲ್‌ಚರು ಕಾಲೋನಿಗಳಿವೆಯೋ ಅವುಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ಟ್ರೈಬ್ಸ್‌ಗಳಿಗಾಗಿ ಕೋ-ಅಪರೇಟೀವ್ ಫಾರ್ಮಿಂಗ್ ಕೋ-ಅಪರೇಟೀವ್ ಸೊಸೈಟಿಗಳನ್ನು ಮಾಡಿ ಆದಷ್ಟು ಪೂರ್ತಿ ಮಾಡಬೇಕೆಂದು ಈಗ ಯೋಚನೆ ಮಾಡಿದ್ದೇವೆ. ಆ ಮಾಡಿದರೆ ಈಗಿನ ಪ್ಯಾಟರ್ನ್ ಪ್ರಕಾರ ಗವರ್ನಮೆಂಟ್ ಆಫ್ ಇಂಡಿಯಾ ಸ್ಕೀಮು ಪ್ರಕಾರ ಸಹಾಯಗಳೂ ಸಿಗುತ್ತವೆ ಮತ್ತು ಬೇರೆ ಬೇರೆ ಡಿಪಾರ್ಟುಮೆಂಟುಗಳ ಮೂಲಕ ಎಷ್ಟೆಷ್ಟು ಹಣಗಳು ಬೇಕೋ ಅವನ್ನು ಬೇರೆ ಬೇರೆಯಾಗಿ ಪಡೆಯುವುದಕ್ಕೆ ಸಾಧ್ಯವಾಗುತ್ತದೆ.

6-30 P.M.

ಶ್ರೀ ಟಿ. ಮಾದಯ್ಯಗೌಡ (ರಾಮನಗರಂ).—ಸರಕಾರದವರು ಕೊಡುತ್ತಿರುವ ಬೀಜಗಳನ್ನುಪಯೋಗಿಸತಕ್ಕ ರೈತರು ಯಾರೂ ಸರಿಯಾಗಿ ಉಪಯೋಗಿಸದೇ ಇರುವುದರಿಂದ ಅದರ ಉಪಯೋಗ ಜನರಿಗೆ ಸರಿಯಾಗಿ ಆಗಿಲ್ಲ. ಶೇಕಡಾ 5 ಅಥವಾ ಹತ್ತರಷ್ಟು ರೈತರುಗಳು ಸುಧಾರಿಸಿದ ಬೀಜಗಳನ್ನು ಉಪಯೋಗಿಸುತ್ತಿಲ್ಲ ಎಂದು ತಿಳಿಯುತ್ತದೆ. ಸುಧಾರಿತ ಬೀಜಗಳನ್ನು ಉಪಯೋಗಿಸಲು ಸರಕಾರ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದೆ?

ಶ್ರೀ ಜಿ. ನಾರಾಯಣಗೌಡ.—ಶೇಕಡಾ ಐದರಷ್ಟು ಎಂದು ಹೇಳುವುದು ಸರಿಯಲ್ಲ. ಏಕೆಂದರೆ ನಮ್ಮಲ್ಲಿ ಸ್ಟ್ಯಾಟಿಸ್‌ಟಿಕ್ಸ್ ಇದೆ. ಡಿಪಾರ್ಟ್‌ಮೆಂಟಿನವರು ಒಂದು ಸರ್ವೆ ಮಾಡಿದ್ದಾರೆ. ಅದರ ಪ್ರಕಾರವಾಗಿ ಈಗ ಉತ್ತಮವಾದ ಬೀಜಗಳನ್ನು ಉಪಯೋಗಿಸಿರುವವರು ಭತ್ತದ ಬೀಜಗಳನ್ನು 60-61ರಲ್ಲಿ 18.5ರಷ್ಟು ರೈತರು ಉಪಯೋಗಿಸಿದ್ದಾರೆ. 61-62ರಲ್ಲಿ 64.1ರಷ್ಟು ಜನರು 62-63ರಲ್ಲಿ 70.35ರಷ್ಟು ಜನರು, ಉಪಯೋಗಿಸಿದ್ದಾರೆ. ಇದೂ ಅಲ್ಲದೆ ರಾಗಿ ಬೀಜಗಳನ್ನು 60-61ರಲ್ಲಿ 12.28ರಷ್ಟು ಜನರು, 61-62ರಲ್ಲಿ 44.1ರಷ್ಟು ಜನರು 62-63ರಲ್ಲಿ 60.16ರಷ್ಟು ಜನರು ಉಪಯೋಗಿಸಿದ್ದಾರೆ. ಜೋಳ 60-61ರಲ್ಲಿ 17.89ರಷ್ಟು ಜನರು, 61-62ರಲ್ಲಿ 42.00, 62-63ರಲ್ಲಿ 42.97ರಷ್ಟು ಜನರು ಇದನ್ನು ಹೆಚ್ಚಾಗಿ ಉಪಯೋಗಿಸಿದ್ದಾರೆ.

ಶ್ರೀ ಮಧ್ವರಾಜ್.—ಮಂಗಳೂರು ಬಂದರು ಮಾಡುವಾಗ ಅಲ್ಲಿರುವ ಜನರು ಮನೆ ಕಳೆದುಕೊಳ್ಳುವುದರಿಂದ ಅವರಿಗೆ ಬೇರೆ ವಸತಿಗಳನ್ನು ಮಾಡಲು ಈಗಲೇ ಅವರನ್ನು ಬಿಡಿಸಿದರೆ ತೊಂದರೆಯಾಗುತ್ತೆ. ಏಕೆಂದರೆ ಈಗ ಮಾನ್‌ಸೂನ್ ಬರುತ್ತಿರುವುದರಿಂದ ಇವರನ್ನು ಸೆಪ್ಟೆಂಬರು ತಿಂಗಳವರೆಗೆ ಅಲ್ಲೇ ಇರಲು ಅವಕಾಶ ಮಾಡಿಕೊಡಬೇಕು ಮತ್ತು ಇಲ್ಲಿನ ಜನಕ್ಕೆ ಡ್ರೆಡ್‌ಜರ್ ಮೆಷಿನರಿಯನ್ನು ಕೊಡುವುದರ ಬಗ್ಗೆ ಉತ್ತರ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಪುನರ್ವಸತಿ ಬಗ್ಗೆ ಆಗಲೇ ಉತ್ತರ ಹೇಳಿದೇನೆ. ಅಲ್ಲದೆ ಡ್ರೆಡ್‌ಜರು ಮಷಿನ್ನು ತೆಗೆಯಬೇಕಾದರೆ ಅದಕ್ಕೆ ಸುಮಾರು ಏಳೂವರೆ ಲಕ್ಷ ರೂಪಾಯಿಗಳಷ್ಟು ಬೇಕಾಗುತ್ತದೆ ಮತ್ತು ಇದಕ್ಕೆ ಫಾರಿನ್ ಎಕ್ಸ್‌ಚೇಂಜು ಕೂಡ ಬೇಕಾಗುತ್ತದೆ. ಕೇಂದ್ರ ಸರಕಾರದವರು ಇದಕ್ಕೆ ಸಹಾಯ ಮಾಡಬೇಕೆಂದು ಕೇಳಿದ್ದೇವೆ. ಅವರು ಕೊಟ್ಟರೆ ಅದಷ್ಟು ಬೇಗ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಜಿ. ಲಿಂಗೇಗೌಡ (ಚನ್ನಪಟ್ಟಣ).—ಎಸ್ಟಿಮೇಟ್ಸು ಕಮಿಟಿಯ ಅಧ್ಯಕ್ಷರು ಹಾಗೂ ಇತರ ಎಲ್ಲ ಸದಸ್ಯರುಗಳೂ ದೇಶದ ಅನೇಕ ಭಾಗಗಳಲ್ಲಿ ಪ್ರವಾಸ ಮಾಡಿ ಆಯಾ ತಾಲ್ಲೂಕುಗಳಲ್ಲಿರ ತಕ್ಕ ಅವ್ಯವಸ್ಥೆಗಳು, ನ್ಯೂನತೆಗಳನ್ನು ತೋರಿಸಿ ಹಾಗೂ ಅನೇಕ ಉಪಯುಕ್ತವಾದ ಸಲಹೆಗಳನ್ನೂ ಕೊಟ್ಟಿದ್ದಾರೆ. ಈ ಸಲಹೆಗಳನ್ನೆಲ್ಲಾ ಇನ್ನು ಎಷ್ಟು ಕಾಲದಲ್ಲಿ ಕಾರ್ಯಗತ ಮಾಡಲು ತಾವು ಪ್ರಯತ್ನ ಮಾಡುತ್ತೀರಿ ?

ಶ್ರೀ ಜಿ. ನಾರಾಯಣ ಗೌಡ.—ಪರಿಶೀಲನೆ ಮಾಡಿ ಆದಷ್ಟು ಬೇಗ ತರಲು ಪ್ರಯತ್ನಿಸುತ್ತೇವೆ.

ಶ್ರೀ ಎಂ. ಎಸ್. ಕೃಷ್ಣಸಿಂಗ್ (ಜಗಳೂರು).—ಗ್ರಾಮಗಳಲ್ಲಿ ಸರ್ವಿಸ್ಸು ಕೋ-ಆಪರೇಟೀವ್ಸ್ ಗಳೆಂದು ಮಾಡಿದ್ದೀರಿ. ಇದರಲ್ಲಿ ಕೆಲವು ಪಂಚಾಯತಿಗಳವರು ಒಂದು ಸೊಸೈಟಿ ಇರುವುದರ ಜೊತೆಗೆ ಇನ್ನೂ ಒಂದು ಸೊಸೈಟಿ ಬೇಕೆಂದು ಕೇಳಿದರೆ ಮಾಡಿಸಿಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಗ್ರೂಪ್ ಪಂಚಾಯತಿಗಳಲ್ಲಿ ನಾಲ್ಕೈದು ಗ್ರಾಮಗಳನ್ನು ಸೇರಿಸಿ ಒಂದು ಸೊಸೈಟಿ ಮಾಡಿರುತ್ತಾರೆ. ಅವರಿಗೆ ಮತ್ತೊಂದು ಸೊಸೈಟಿ ಕೊಟ್ಟರೆ ಅದರಲ್ಲಿ ಕೆಲಸ ಗಳು ನಡೆಯುವುದಾದರೂ ಹೇಗೆ ? ನಾವು ಪ್ರಯೋಗ ಮಾಡಿ ನೋಡುತ್ತಿರುವುದು ಶಕ್ತಿ ಇದ್ದು ದೃಢವಾಗಿದ್ದು ಕೆಲಸ ಮಾಡುವ ಪಂಚಾಯತಿಗಳಿಗಾಗಿ ಒಂದು ಮಧ್ಯಮವರ್ಗದ ಸೊಸೈಟಿಗಳನ್ನು ಕೊಡುತ್ತಿದ್ದೇವೆ. ಒಂದು ಸಂಸ್ಥೆಗೆ ಒಂದು ಸೊಸೈಟಿ ಇರಬೇಕು. ಎರಡು ಸೊಸೈಟಿಗಳನ್ನು ಅಲ್ಲೇ ಮಾಡಿದರೆ ಒಂದಕ್ಕೊಂದು ಹೊಂದಿಕೊಂಡು ಕೆಲಸ ಮಾಡುವುದರಲ್ಲಿ ತೊಂದರೆ ಬರುತ್ತದೆ. ಇದು ಸಮರ್ಪಕವಾಗಿ ಆಗುವುದಿಲ್ಲ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ತಾಲ್ಲೂಕು ಪ್ರಾಜೆಕ್ಟು ಆಫೀಸರ ಮುಖಾಂತರ ಡೈರಿ ಫಾರ್ಮಿಂಗ್, ಕೋ ಆಪರೇಟೀವ್ ಫಾರ್ಮಿಂಗ್ ಹಾಗೂ ಇಂಡಸ್ಟ್ರಿಯಲ್ ಕೋ ಆಪರೇಟೀವ್ಸ್‌ಗಳ ಕೆಲಸಕ್ಕಾಗಿ ಸರಕಾರದ ಕಡೆಗೆ ಬಂದಾಗ ಕೆಲವು ವೇಳೆ ಅವರನ್ನು ಇಂಡಸ್ಟ್ರಿ ಇಲಾಖೆಗೆ ಹೋಗಿ ಎನ್ನುತ್ತಾರೆ, ಕೆಲವು ವೇಳೆ ಸಹಕಾರ ಶಾಖೆಗೆ ಹೋಗಿ ಎನ್ನುತ್ತಾರೆ, ಇದರ ಬಗ್ಗೆ ಸರಕಾರದ ಧೋರಣೆ ಏನು ?

ಶ್ರೀ ರಾಮಕೃಷ್ಣ ಹೆಗಡೆ.—ಸ್ವಲ್ಪ ಇದರೊಳಗೆ ಇಲ್ಲಿಯವರೆಗೂ ಒಂದು ಕನ್‌ಫ್ಯೂಷನ್ನು ಇತ್ತು. ಇಂಡಸ್ಟ್ರಿಯಲ್ ಕೋಆಪರೇಟೀವ್ಸ್‌ಗಳು ಕೋಆಪರೇಷನ್ನು ಇಲಾಖೆಯ ವ್ಯಾಪ್ತಿಯ ಒಳಗೇ ಉಳಿದಿತ್ತು. ಇಂಡಸ್ಟ್ರೀಸ್ ಇಲಾಖೆಯವರು ಇವರೊಡನೆ ಸಲಹೆ ಕೇಳಬೇಕಾಗಿತ್ತು. ಕಳೆದ ಒಂದೂವರೆ ವರ್ಷಗಳಿಂದ ಇದು ಕೋಆಪರೇಟೀವ್ ಇಲಾಖೆಯಲ್ಲಿಯೇ ಇರಬೇಕೆಂದು ರಾಜ್ಯ ಸರಕಾರ ತೀರ್ಮಾನ ತೆಗೆದುಕೊಂಡಿದೆ. ಕೆಲವು ವಿಚಾರಗಳಲ್ಲಿ ಇಂಡಸ್ಟ್ರಿಗೆ ಸಂಬಂಧಪಟ್ಟಂತ ರಾ ಮೆಟೀರಿಯಲ್ಸ್‌ಗಳ ಬಗ್ಗೆ ಅವರೊಡನೆ ವಿಚಾರ ಮಾಡಬೇಕಾಗುತ್ತೆ ಮತ್ತು ಅವರ ಮಾರ್ಗ ದರ್ಶನ ಪಡೆಯಬೇಕಾಗುತ್ತದೆ.

Sri S. S. KOLKE BAIL (Coondapoor).—I have received a telegram from Thanneerbhavi saying that the fishermen have been asked to go out of the lands within 24 hours. It is difficult for them to go out and settle somewhere else. Will the Government be pleased to consider their case and give them at least 3 months' time ?

ಶ್ರೀ ಬಿ. ರಾಚಯ್ಯ.—ತಣ್ಣೀರು ಬಾವಿಯಲ್ಲಿರುವ ಜನಗಳ ವಸತಿ ಬಗ್ಗೆ ನಾಳೆ ಇಲ್ಲಿಂದ ಮರಾ ಮತ್ತು ಇಲಾಖೆಯ ಮಂತ್ರಿಗಳು ಮಂಗಳೂರಿಗೆ ಹೋಗುತ್ತಾರೆ. ಅವರಲ್ಲಿ ಮನವಿ ಮಾಡಿಕೊಂಡಿದ್ದೇನೆ. ಅವರಿಗೆ ಬೇರೆ ಸ್ಥಳವನ್ನು ಕೊಡುವುದಕ್ಕೆ ಮುಂಚೆ ಇವರನ್ನು ಇರುವ ಸ್ಥಳದಿಂದ ತೆಗೆಯಬಾರದು ಎಂದು ತಿಳಿಸಿದ್ದೇನೆ. ಅರಣ್ಯ ಇಲಾಖೆಯಿಂದ ಇವರಿಗೆ ಭೂಮಿ ಬೇಕಾದರೂ ಕೊಡುತ್ತೇವೆ. ಇವರಿಗೆ ತೊಂದರೆಯಾಗದ ಹಾಗೆ ನೋಡುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ರೈತರುಗಳಿಗೆ ನೇಗಿಲು ಹಾಗೂ ಇನ್ನಿತರ ವ್ಯವಸಾಯದ ಉಪಕರಣಗಳನ್ನು ಕೊಡಲು ಎಷ್ಟು ಪ್ರಮಾಣದಲ್ಲಿ ಜಾಸ್ತಿ ಮಾಡಿದ್ದೀರಿ ? ರೈತನಿಗೆ ಮನೆ ಇಲ್ಲದಿದ್ದರೆ, ಅವರಿಗೆ ಎಂ. ಆರ್. ಪಿ. ಲೈಸನ್ಸ್ ಕೊಟ್ಟಿಲ್ಲ ಎಂದು ಅವರ ಕೆಲಸವನ್ನು ನಿಲ್ಲಿಸುತ್ತೀರಿ. ನಾನು ತಿಳಿದಿರುವ ಪ್ರಕಾರ ಡಿಪೋಗಳನ್ನು ಅಲ್ಲಲ್ಲಿ. ವ್ಯವಸ್ಥೆ ಮಾಡಿ ಎಲ್ಲ ರೈತರಿಗೂ ವ್ಯವಸಾಯ ಉಪಕರಣಗಳನ್ನು ಹಂಚಲು ವ್ಯವಸ್ಥೆ ಮಾಡಿದ್ದಾರೆ. ಅರಣ್ಯ ಇಲಾಖೆಯ ಸಚಿವರು ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ವ್ಯವಸಾಯದ ಉಪಕರಣಗಳನ್ನು ಹಂಚಲು ಜಾಸ್ತಿ ಮಾಡಿದ್ದಾರೆ ಮತ್ತು ಮನೆ ಕಟ್ಟಿಕೊಳ್ಳಲು ಯಾವ ಯಾವ ಕ್ರಮ ಮಾಡಿದ್ದಾರೆ !

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಭದ್ರಾವತಿಯಲ್ಲಿ ಇರುತ್ತಾರೆ. ಶಿವಮೊಗ್ಗ ಸಾ-ಮಿಲ್ಲಿನಲ್ಲಿ ರೈತರಿಗೆ ಎಷ್ಟು ಬೇಕೋ ಅಷ್ಟು ಮರ ಮುಟ್ಟು ಮಾರಾಟ ಮಾಡುತ್ತಾ ಇದ್ದೇವೆ. ಅಲ್ಲಿ ನೋಡಿದರೆ ನಾವು ಎಷ್ಟು ತೀವ್ರವಾಗಿ ಕೆಲಸ ಮಾಡುತ್ತಾ ಇದ್ದೇವೆ ಎನ್ನುವುದು ಅರ್ಥವಾಗುತ್ತದೆ. ನಂದಿ, ಹೊನ್ನೆ, ಟೀಕ್ ರಿಜರ್ವ್ ಫಾರೆಸ್ಟಿನಿಂದ ತೆಗೆದುಕೊಳ್ಳ ಬಾರದು ಎಂದು ಆಜ್ಞೆ ಮಾಡಿದ್ದೇವೆ. ರೈತರಿಗೆ ಬೇಕಾಗಿರತಕ್ಕಂಥ ತೇಗಿನ ಮರ ಹಾಗೂ ಇತರ ಮರಮುಟ್ಟುಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಈಗ ಶಿವಮೊಗ್ಗ ಡಿಸ್ಟ್ರಿಕ್ಟಿನವರು ಮರಮುಟ್ಟು ಬೇಕಾದರೆ ಶಿವಮೊಗ್ಗ ಸಾ-ಮಿಲ್ಲಗೆ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಾದೇಗೌಡ.—ಸ್ವಾಮಿ, ಪ್ರತಿಯೊಂದು ಜಿಲ್ಲೆಯಲ್ಲಿ ಸಹಕಾರ ಸಂಘಗಳು ಸುಮಾರು 500 ರಿಂದ 1000 ವರೆಗೆ ಇವೆ. ಅವುಗಳ ಮೇಲ್ವಿಚಾರಣೆ ನೋಡುವುದಕ್ಕೆ ಜಿಲ್ಲೆಗೆ ಒಬ್ಬ ಅಸಿಸ್ಟಂಟ ರಜಿಸ್ಟ್ರಾರ್ ಇದ್ದಾರೆ. ಸರಿಯಾಗಿ ಮೇಲ್ವಿಚಾರಣೆ ನಡೆಯುತ್ತಿಲ್ಲ. ಸಹಕಾರ ಸಂಘಗಳು ದಕ್ಷತೆಯಿಂದ ಕೆಲಸ ನಡೆಸುವುದಕ್ಕೆ ಏರ್ಪಾಡು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಸಮಸ್ಯೆ ಬಗ್ಗೆ ಯೊಚನೆ ಮಾಡಿದ್ದೇವೆ. ಈಗಾಗಲೇ ದೊಡ್ಡ ಜಿಲ್ಲೆಯಲ್ಲಿ ಇಬ್ಬರು ಅಸಿಸ್ಟಂಟ ರಜಿಸ್ಟ್ರಾರ್ಸ್ ಇದ್ದಾರೆ. ಅಸಿಸ್ಟಂಟ ರಜಿಸ್ಟ್ರಾರ್ಸ್ ಸಂಖ್ಯೆ ಹೆಚ್ಚು ಮಾಡುವುದರಿಂದ ಕೆಲಸ ಮುಗಿಯುವುದಿಲ್ಲ. ಡಿಪಾರ್ಟಮೆಂಟ್ ರೀ-ಅರ್ಗನೈಜ್ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಅದರಲ್ಲಿ ಸ್ವಲ್ಪ ಮಟ್ಟಿಗೆ ತೊಂದರೆ ಬಂದಿರುವುದರಿಂದ ಇನ್ನೂ ಕಾರ್ಯಗತ ಮಾಡಲು ಆಗಲಿಲ್ಲ. ಈ ಯೋಜನೆಯ ಪ್ರಕಾರ ಒಂದು ಡಿವಿಜನ್ನಿಗೆ ಒಬ್ಬ ಜಾಯಿಂಟ ರಜಿಸ್ಟ್ರಾರ್ ಇರಬೇಕು ಸಂಬಂಧಪಟ್ಟ ಎಲ್ಲ ಆಡಳಿತ ವಹಿಸಿಕೊಂಡು ಅವರಿಗೆ ಜವಾಬ್ದಾರಿ ಕೊಡಬೇಕೆಂದು ಇದೆ. ಎರಡು ಜಿಲ್ಲೆಗಳಿಗೆ ಸರಾಸರಿ ಒಂದು ಡೆಪ್ಯುಟಿ ರಜಿಸ್ಟ್ರಾರ್ ಇರಬೇಕು ಮತ್ತು ದೊಡ್ಡ ಜಿಲ್ಲೆಗೆ ಇಬ್ಬರು ಅಸಿಸ್ಟಂಟ ರಜಿಸ್ಟ್ರಾರ್ ಹಾಕಬೇಕು, ಅಲ್ಲದೆ ಕೇಂದ್ರ ಆಫೀಸಿನಲ್ಲಿ ಜಾಯಿಂಟ ರಜಿಸ್ಟ್ರಾರ್ ಇದ್ದು ಅವರ ಎಕ್ಸಪರ್ಟಆಗಿ ಸ್ಪೆಷಲೈಜ್ ಆಗಬೇಕು ಎಂದು ಯೋಜನೆ ಇದೆ. ಇದನ್ನು ಕಾರ್ಯಗತ ಮಾಡಲು ಕೆಲವು ಕಾಲ ಬೇಕಾಗುವುದು.

ಶ್ರೀ ಎಸ್. ವಿ, ಅಗ್ನಿಹೋತ್ರಿ.—ನಮ್ಮ ಬಾಗದಲ್ಲಿ ಬುರುಡು ಸಮಾಜದವರು ತಮ್ಮ ಉದ್ಯೋಗಕ್ಕೆ ಬೇಕಾಗುವ ಗಳ ತಂದು ತಟ್ಟೆಬುಟ್ಟಿ ಮಾಡಿ ಜೀವನ ಮಾಡುತ್ತಾರೆ. ಇತ್ತೀಚೆಗೆ ನಮ್ಮ ಭಾಗದಲ್ಲಿ ಪೇಪರ್ ಮಿಲ್ ಪ್ರಾರಂಭವಾಗಿರುವುದರಿಂದ ಕಾಗದ ತಯಾರಿಕೆಗೆ ಬಾಂಬೂ ಮೀಸಲಾಗಿ ಇಟ್ಟುಕೊಂಡಿದ್ದಾರೆ. ಇದರ ಪರಿಣಾಮವಾಗಿ ಬಡವರಿಗೆ ಬಂಬೂ ದೊರೆಯುತ್ತಿಲ್ಲ. ಹಾಗೂ ಅವರ ಕಸುಬು ಬಂದಾಗುವುದಕ್ಕೆ ಬಂದಿದೆ. ಆದುದರಿಂದ ಸ್ವಲ್ಪ ಕ್ಷೇತ್ರವನ್ನು ಬುರುಡರ ಉದ್ಯೋಗಕ್ಕಾಗಿ ಬೇಕಾಗುವ ಬೊಂಬೂ ಸಲುವಾಗಿ ರಿಜರ್ವ ಮಾಡಿ ಇಡಬೇಕು ಎಂದು ವಿನಂತಿ ಮಾಡುತ್ತೇನೆ.

ಶ್ರೀ ಬಿ. ರಾಚಯ್ಯ.—ಇಪ್ಪತ್ತು ಸಾವಿರ ಟನ್ನು ಬೊಂಬನ್ನು ಸ್ಥಳೀಯ ಕಸುಬು ಅವಲಂಬಿಸಿರುವವರಿಗೆ ಕೊಡಬೇಕೆಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ರಿಜರ್ವ ಮಾಡಿದ್ದೇವೆ. ಮಳೆಗಾಲದಲ್ಲಿ ಮೂರು ತಿಂಗಳು ಕಾಡಿನಲ್ಲಿ ಬೊಂಬನ್ನು ಕಡಿಯುವುದಕ್ಕೆ ಅವಕಾಶ ಕೊಡುವುದಿಲ್ಲ. ಮಿಕ್ಕ ಕಾಲದಲ್ಲಿ ಅವರಿಗೆ ಕಾಡಿನಿಂದ ಬೊಂಬು ಕಡಿದು ತರುವುದಕ್ಕೆ ಅವಕಾಶ ಇದೆ. ಮೂರು ತಿಂಗಳು ಬಿಟ್ಟು ಮಿಕ್ಕ ಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕೊಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಜಿಲ್ಲೆಗೆ ಒಂದು ಡಿಪೋ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದಿರಿ. ಜಿಲ್ಲಾ ಡಿಪೋಕ್ಕೆ ಹೋಗಿ ತರಲು ದೂರವಾಗುತ್ತದೆ. ಆದುದರಿಂದ ರೈತನಿಗೆ ಬೇಕಾಗುವ ನೇಗಲು ಕುಂಟೆಗಳಿಗಾಗಿ ಮರಮುಟ್ಟು ಒದಗಿಸಲು ಪಂಚಾಯತಿ ಮೂಲಕ ಸಿಗುವಂತೆ ವ್ಯವಸ್ಥೆ ಮಾಡುತ್ತೀರಾ ?

ಅಧ್ಯಕ್ಷರು.—ನಿನ್ನೆಯಿಂದ ಇದು ಹತ್ತನೇ ಸಲ ಈ ಪ್ರಶ್ನೆಯನ್ನು ನೀವು ಕೇಳುತ್ತೀದ್ದಿರಿ. ಏನಾದರೂ ಕ್ಲಾರಿಫಿಕೇಶನ್ ಬೇಕಾಗಿದ್ದರೆ ಈಗ ಕೇಳಬಹುದು.

ಶ್ರೀ ಬಿ. ರಾಚಯ್ಯ.—ಮಾರ್ಕೆಟ್ ಸೊಸೈಟಿಗಳ ಮೂಲಕ ಕೊಡುವುದಕ್ಕೆ ವ್ಯವಸ್ಥೆ ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ವ್ಯವಸಾಯ ಇಲಾಖೆಯಲ್ಲಿ ರಿಸರ್ಚ ಪ್ರಾಮುಖ್ಯವಾದುದು. ಏನಾದರೂ ಹೊಸ ವಿಷಯ ಕಂಡು ಹಿಡಿದರೆ ಅದು ಜನಗಳಲ್ಲಿ ಹರಡುವಂತೆ ಪ್ರಸಾರ ಮಾಡುವುದು ಅವಶ್ಯಕವಾಗಿದೆ. ವ್ಯವಸಾಯ ಇಲಾಖೆಯಲ್ಲಿ ಇದಕ್ಕೆ ವ್ಯವಧಾನ ಕಂಡು ಬರುವುದಿಲ್ಲ. ರಿಸರ್ಚ ವರ್ಕ್ ಫಲಕಾರಿಯಾಗಬೇಕೆಂದು ಅದು ಹರಡುವುದಕ್ಕೆ ಏನಾದರೂ ಸೂಕ್ತ ಕಾರ್ಯಕ್ರಮ ಇಲಾಖೆಯವರು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಜಿ. ನಾರಾಯಣಗೌಡ.—ಇದು ಒಳ್ಳೇ ಸಲಹೆ. ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಎಸ್. ಪಾಟೀಲ್.—ಹೊಸದಾಗಿ ಕಂಡುಹಿಡಿದ ಗೋಧಿ ಬೀಜದ ಯೀಲ್ಡ್ ಬಹಳ ಕಡಿಮೆ ಬರುತ್ತದೆ. ಇದರ ಬಗ್ಗೆ ರೈತರ ತಕರಾರು ಇದೆ. ಇದರ ಬಗ್ಗೆ ಸಂಶೋಧನೆ ಮಾಡಿ ಹೊಸ ಗೋಧಿ ಬೀಜ ಕಂಡು ಹಿಡಿಯುವುದಕ್ಕೆ ಯೋಚನೆ ಮಾಡಿದ್ದೀರೇನು ?

ಶ್ರೀ ಜಿ. ನಾರಾಯಣಗೌಡ.—ಅದರ ಕಡೆ ಗಮನ ಕೊಡುತ್ತೇವೆ.

Mr. SPEAKER.—I will now put the demands to the Vote of the House.

The question is: "that the respective sums not exceeding the amounts shown in the list of demands circulated to the members be granted to defray the charges which will come in course of payment during the financial year ending with 31st day of March 1966 in respect of demands numbers 20, 21, 23, 25, 38, 39, and 51.

The motion was adopted.

As directed by the Speaker the motion for demands for grants which were adopted by the House are reproduced below :—

DEMAND NO. 20.—AGRICULTURE, HORTICULTURE AND FISHERIES.

31. Agriculture.

"That a sum not exceeding Rs. 4,86,08,000 be granted to the Government to defray the charges which will come in course of payment during the financial year for the period ending 31st day of March 1966, in respect of 'Agriculture'."

DEMANDS NO. 21.—RURAL DEVELOPMENT.

32. Rural Development.

"That a sum not exceeding Rs. 44.72,0 0 be granted to the Government to defray the charges which will come in course of payment during the financial year for the period ending 31st day of March 1966, in respect of 'Rural Development'."

DEMAND NO. 23.—CO-OPERATION

34. Co-operation.

"That a sum not exceeding Rs. 1,18,78,700 be granted to the Government to defray the charges which will come in course of payment during the financial year for the period ending 31st day of March 1966, in respect of 'Co-operation'."

DEMAND NO. 25.—COMMUNITY DEVELOPMENT, ETC.,

37. Community Development Projects, National Extension Service and Local Development works.

"That a sum not exceeding Rs. 4,32,23,200 be granted to the Government to defray the charges which will come in course of payment during the financial year for the period ending 31st day of March 1966, in respect of 'Community Development Projects, National Extension Service and local development works'."

DEMAND NO. 38.—FOREST.

70. Forest.

"That a sum not exceeding Rs. 5,64,78,200 be granted to the Government to defray the charges which will come in course of payment during the financial year for the period ending 31st day of March 1966, in respect of 'Forest'."

DEMAND NO. 39.—MISCELLANEOUS.

71. Miscellaneous.

"That a sum not exceeding Rs. 3,87,17,000 be granted to the Government to defray the charges which will come in course of payment during the financial year for the period ending 31st day of March 1966, in respect of 'Miscellaneous'."

DEMAND NO. 51.—CAPITAL OUTLAY ON FOREST ACCOUNT.

119. Capital Outlay on Forests.

"That a sum not exceeding Rs. 11,50,000 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Forest'."

Mr. SPEAKER.—Copies of the List of Business for tomorrow have been put in the respective pigeon-holes:

The House will now stand adjourned to re-assemble tomorrow at 8-30 A. M.

The House adjourned at Forty-seven Minutes past Six of the Clock to meet again at Thirty Minutes Past Eight of Clock on Saturday, the 27th March 1965.

WD 4916—GPB—500—19-6-1965

V,31 N65
N65-91-7
(B) 4832

MYSORE LEGISLATIVE ASSEMBLY

Saturday, 27th March 1965

The House met in the Assembly Chamber, Vidhana Soudha, Bangalore, at Thirty Minutes Past Eight of the Clock.

MR. DEPUTY SPEAKER (SRI A. R. PANCHAGAVI, B.A., LL.B.) in the Chair.

STARRED QUESTIONS

(to which oral answers were given.)

Weavers Co-operative Societies in Dharwar and Bijapur Districts.

*Q—732. SRI A. J. DODDAMETI (Ron).—

Will the Government be pleased to state :—

(*a*) the number of Weavers' Co-opereative Societies in Dharwar and Bijapur Districts ;

(*b*) the rebate amount due to these Societies from the Government from 1st April 1964 (details of amount due to each Society may be furnished) ;

(*c*) the reasons for the delay in paying the said amount ;

(*d*) the time required by them to pay the said rebate amount ?

A.—SRI KONDAJJI BASAPPA (Deputy Minister for Co-operation).—

(*a*) 183 as under :—

Dharwar District	...	66
Bijapur District	...	117

(*b*) *Vide* statement placed on the Table of the House. Copy placed in the Mysore Legislature Library *vide* No. 17 dated 27th March 1965.

(*c*) For want of funds.

(*d*) 50 per cent by the end of March 1965. Balance after verifying the accounts.

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ, ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಲ್ಲಿರುವ ನೇಕಾರ ಸಂಘಗಳಿಗೆ ರಿಬೇಟನ್ನು ಪಾವತಿ ಮಾಡುವುದರಲ್ಲಿ ವಿಳಂಬವಾಗಿರುವುದಕ್ಕೆ ಕಾರಣ ಹಣದ ಕೊರತೆ ಎಂದು ಹೇಳಿದ್ದೀರಿ, ಈ ಸಂಘಗಳಿಗೆ ರಿಬೇಟ್ ಕೊಡುವ ಹಣ ಕೇಂದ್ರ ಸರ್ಕಾರದಿಂದ ಸಪರೇಟ್ ಫಂಡಾಗಿ ಬರುತ್ತದೆ, ಆದ್ದರಿಂದ ಹಣದ ಕೊರತೆಯ ಪ್ರಶ್ನೆ ಎಲ್ಲಿ ಉದ್ಭವವಾಗುತ್ತದೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಅದಕ್ಕೆ ಕೊಡತಕ್ಕ ಹಣ ಪೂರ್ತಿ ಕೇಂದ್ರ ಸರ್ಕಾರದಿಂದ ಬರುತ್ತದೆ. ಇಂಥಹ ಯೋಜನೆಗಳಿಗೆ ಇಷ್ಟಿಷ್ಟು ಹಣ ಎಂದು ಬರುತ್ತದೆ. ಅದಕ್ಕೆ ಸಾಕಾಗುವಷ್ಟು ಹಣ ಇರಲಿಲ್ಲ. ಕ್ಲೈಮ್ಸ್ ವಿಪರೀತವಾಗಿತ್ತು. ಇತ್ತೀಚಿಗೆ ಅದಕ್ಕೆ ಸರ್ಕಾರದವರು 7 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಈ ವರ್ಷದ ಅಂತ್ಯದಲ್ಲಿ ಎಂದರೆ 31ನೇ ತಾರೀಖು ಅದರಲ್ಲಿ ಅರ್ಧ ಭಾಗ ಹಣವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇನ್ನು ಉಳಿದ ಹಣವನ್ನು ಕೊಡುವ ವಿಷಯದಲ್ಲಿ ಮುಂದಿನ ವರ್ಷ ಆಲೋಚನೆ ಮಾಡೋಣ ಎಂದುಕೊಂಡಿದ್ದೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಸಹಕಾರ ಸಂಘಗಳಿಗೆ ಸರ್ಕಾರದವರು ಕೊಡಬೇಕಾಗಿರುವ ರಿಬೇಟ್ ಹಣ ಒಂದು ಲಕ್ಷ 48 ಸಾವಿರ ಚಿಲ್ಲರೆ ರೂಪಾಯಿಗಳು ಎಂದು ಹೇಳಿದ್ದೀರಿ, ಈಗ ಅದರ ಬಗ್ಗೆ 7 ಲಕ್ಷ ರೂಪಾಯಿಗಳು ಸ್ಯಾಂಕ್ಷನ್ ಆಗಿದೆ ಎಂದು ಹೇಳಿದಿರಿ, ಅವರಿಗೆ ಕೊಡಬೇಕಾಗಿರತಕ್ಕ ಮೊತ್ತವನ್ನು ನೋಡಿದರೆ ಬಹಳ ಕಡಿಮೆ ಇದೆ, ಇದರಲ್ಲಿ ಏನೋ ಸ್ವಲ್ಪ ವ್ಯತ್ಯಾಸ ಕಾಣುತ್ತಿದೆ ಅಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ನಾನು ಹೇಳಿದ ಮೊತ್ತ ಪೂರ್ತಿ ರಾಜ್ಯಕ್ಕೆ ಸಂಬಂಧಪಟ್ಟದ್ದು. ಮಾನ್ಯ ಸದಸ್ಯರು ಕೇಳಿದ್ದು ಎರಡು ಡಿಸ್ಟ್ರಿಕ್ಟುಗಳಿಗೆ ಸಂಬಂಧಪಟ್ಟದ್ದು.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಸಹಕಾರ ಸಂಘಗಳಿಗೆ ರಿಬೇಟ್ ಕೊಡುವ ಸಂಬಂಧದಲ್ಲಿ ಕೇಂದ್ರ ಸರ್ಕಾರದವರು ಕೆಲವು ಫಂಡು ಕೊಡುತ್ತಾರೆ, ರಾಜ್ಯ ಸರ್ಕಾರದವರು ಕೆಲವು ಫಂಡ್ ಕೊಡುತ್ತಾರೆ. ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದವರು ಎಷ್ಟು ಪರ್ಸೆಂಟ್ ಹಣವನ್ನು ಕೊಡುತ್ತಾರೆ, ಮತ್ತು ರಾಜ್ಯ ಸರ್ಕಾರದವರು ಎಷ್ಟು ಪರ್ಸೆಂಟ್ ಕೊಡುತ್ತಾರೆ ?

ಶ್ರೀ ರಾಮಕೃಷ್ಣ ಹೆಗ್ಗಡೆ (ಅಭಿವೃದ್ಧಿ ಪಂಚಾಯಿತಿ ರಾಜ್ ಮತ್ತು ಸಹಕಾರ ಶಾಖೆಗಳ ಮಂತ್ರಿಗಳು).—ಈ ಸಂಘಗಳಿಗೆ ಕೊಡತಕ್ಕ ರಿಬೇಟ್ ಹಣ ಏನಿದೆ ಇದು ನಮಗೆ ಕೇಂದ್ರ ಸರ್ಕಾರದಿಂದ ಸೆಂಟ್‌ಪರ್ಸೆಂಟ್ ಸಿಕ್ಕುತ್ತದೆ. ಇದಕ್ಕೇನೂ ರಾಜ್ಯ ಸರ್ಕಾರದವರು ಹಾಕಬೇಕಾದಿಲ್ಲ. ಸೆಂಟ್ರಲ್ ಗೌರ್ನಮೆಂಟಿನವರು ಏನು ಹಣವನ್ನು ಕೊಡುತ್ತಾರೆಯೋ ಅದು ಪ್ಲಾನಿನ ಸೀಲಿಂಗಿಗೆ ಒಳಪಟ್ಟಿರುತ್ತದೆ. ಈಗ 56 ಕೋಟಿ ರೂಪಾಯಿಗಳನ್ನು ಯೋಜನೆಗೋಸ್ಕರ ಎಂದು ಒದಗಿಸಿದ್ದರೆ ಅದರಲ್ಲಿ ರಿಬೇಟಿಗೋಸ್ಕರ ಇಷ್ಟು ಹಣ ಎಂದು ಒದಗಿಸಿರುತ್ತಾರೆ. ರಿಬೇಟ್ ಕೊಡುವುದಕ್ಕೆ ರಾಜ್ಯ ಸರ್ಕಾರದವರು 10 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಕೇಂದ್ರ ಸರ್ಕಾರದವರೂ ಸಹ 10 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಅವರು ಒಂದು ಸೀಲಿಂಗ್‌ಫಿಕ್ಸ್ ಮಾಡಿರುತ್ತಾರೆ. ನಾವು ಬೇರೆ ಬೇರೆ ಬಾಬುಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡತಕ್ಕ ಅಗತ್ಯವಿದ್ದುದರಿಂದ, ಆ ಬಾಬುಗಳಿಗೆ ಹೆಚ್ಚು ಹಣವನ್ನು ಒದಗಿಸಿ, ಒಂದು ಲಕ್ಷ ರೂಪಾಯಿಗಳನ್ನು ಮಾತ್ರ ಈ ರಿಬೇಟ್ ಕೊಡುವುದಕ್ಕೋಸ್ಕರ ನಾವು ಒದಗಿಸಿದ್ದೆವು. ಆ ಬಗ್ಗೆ ಈಗ ನಾವು ಕೊಡಬೇಕಾಗಿರತಕ್ಕ ಅರಿಯರ್ಸ್ 9 ಲಕ್ಷ ರೂಪಾಯಿಗಳಾಗುತ್ತದೆ. ಆದ್ದರಿಂದ ಈಗ ನಾವು ಮೊದಲು ಅದರಲ್ಲಿ ಅರ್ಧ ಹಣವನ್ನು ಎಂದರೆ 4 ಲಕ್ಷ ರೂಪಾಯಿ ಚಿಲ್ಲರೆ ಹಣವನ್ನು ಮಾರ್ಚಿ ತಿಂಗಳ ಕೊನೆಯಲ್ಲಿ ಕೊಡುತ್ತೇವೆ.

ಶ್ರೀ ಸಿದ್ದಯ್ಯ ಕಾಶಿಮಠ್.—ಉಪ್ಪಿನ ಬೆಟಗೇರಿ ಎಂಬ ಊರಿನಲ್ಲಿ 360 ಮಗ್ಗಗಳು ನಡೆಯುತ್ತಾ ಇವೆ ಎಂದು ಅವರು ಸುಳ್ಳು ಲೆಕ್ಕವನ್ನು ತೋರಿಸಿ ರಿಬೇಟನ್ನು ತೆಗೆದುಕೊಳ್ಳುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ತರಹ ನೂರಾರು ಆಪಾದನೆಗಳು ನಮಗೆ ಈಗಾಗಲೇ ಬಂದಿವೆ. ಆ ಬಗ್ಗೆ ಇಲಾಖೆಯವರು ತನಿಖೆ ನಡೆಸುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ರೀತಿ ರಿಬೇಟನ್ನು ಪ್ರೈಮರಿ ಸೊಸೈಟಿಗಳಿಗೆ ಕೊಡತಕ್ಕ ಕಾಲದಲ್ಲಿ ಕೇಂದ್ರದ ಸೊಸೈಟಿಗಳಿಗೂ ಮತ್ತು ಪ್ರೈಮರಿ ಸೊಸೈಟಿಗಳಿಗೂ ಆಫೀಸ್ ಬೇರರ್ಸ್ ಲಿಂಕ್ಸ್ ಇಟ್ಟುಕೊಂಡು ಹಣವನ್ನು ಕೊಡುವಾಗ ದುರುಪಯೋಗ ನಡೆಯುತ್ತಿದೆ. ಈ ವಿಚಾರವನ್ನು ಸರ್ಕಾರದವರ ಗಮನಕ್ಕೆ ತಂದು ಅದನ್ನು ವಿಚಾರಣೆ ಮಾಡಬೇಕೆಂದು ತಿಳಿಸಿ ಇಷ್ಟು ದಿವಸಗಳಾದರೂ ಕೂಡ ಅದನ್ನು ವಿಚಾರಣೆ ಮಾಡದೆ ನಿಧಾನ ದ್ರೋಹ ಮಾಡುತ್ತಾ ಇರುವುದಕ್ಕೆ ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ಅಂಥಾ ಕೇಸುಗಳು ಸರ್ಕಾರದ ಗಮನಕ್ಕೆ ಬಂದಿದ್ದರಿಂದ ಆರ್ಡಿನರಿ ರಿಬೇಟನ್ನು ಕೊಟ್ಟಿಲ್ಲ. ಸ್ಪೆಷಲ್ ರಿಬೇಟನ್ನು ಮಾತ್ರ ಕೊಡುತ್ತಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಸರ್ಕಾರದವರು ರಿಬೇಟನ್ನು ಕೊಡುವಾಗ ಯಾವ ನಿಯಮವನ್ನು ಅನುಸರಿಸುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಾಮಾನ್ಯವಾಗಿ ಎಲ್ಲಾ ರಾಜ್ಯಗಳಲ್ಲಿಯೂ ಏನು ನಿಯಮವನ್ನು ಅನುಸರಿಸುತ್ತಾರೆಯೋ ಅದನ್ನೇ ನಾವು ಅನುಸರಿಸುತ್ತಿದ್ದೇವೆ. ಕಳೆದ ವರ್ಷ ರಿಬೇಟ್ ತೆಗೆದುಕೊಳ್ಳುವುದರಲ್ಲಿ ಎಲ್ಲಾ ಸೊಸೈಟಿಗಳಲ್ಲಿಯೂ ಪ್ರಾಮಾಣಿಕತೆ ಕಂಡುಬರುವುದಿಲ್ಲ. ಈ ದೃಷ್ಟಿ

ಯಿಂದ ನಾವು ಅದನ್ನು ನಿಲ್ಲಿಸಿ ನೂಲನ್ನು ಎಷ್ಟು ತೆಗೆದುಕೊಂಡು ಹೋಗುತ್ತಾರೆಯೋ ಅದರ ಆಧಾರದ ಮೇಲೆ ರಿಬೇಟನ್ನು ಕೊಡಬೇಕು ಎಂದು ಒಂದು ಹೊಸ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಆದರೂ ಕೂಡ ಎಲ್ಲರೂ ಅಪ್ರಾಮಾಣಿಕತೆಯಿಂದ ಕೆಲಸಮಾಡುತ್ತಾರೆ ಎಂದು ನಾನು ಹೇಳುವುದಿಲ್ಲ. ಅದಕ್ಕಾಗಿ ಈಗ ನಾವು ಏನು ಯೋಚನೆ ಮಾಡುತ್ತಿದ್ದೇವೆ ಎಂದರೆ, ಯಾವ ಸೊಸೈಟಿಗಳು ಕೇಂದ್ರದ ಸೊಸೈಟಿಯಿಂದ ಎಷ್ಟು ನೂಲನ್ನು ಖರೀದಿ ಮಾಡುತ್ತಾರೆ. ಎಷ್ಟರಮಟ್ಟಿಗೆ ಬಟ್ಟೆ ಸೀರೆ ಇತ್ಯಾದಿಗಳನ್ನು ಉತ್ಪಾದನೆ ಮಾಡುತ್ತವೆ, ಟೆಕ್ಸ್‌ಟೈಲ್ ಮಿಲ್ಲುಗಳು ಎಷ್ಟು ಉತ್ಪಾದನೆ ಮಾಡುತ್ತವೆ ಎಂಬುದನ್ನೆಲ್ಲಾ ನೋಡಿಕೊಂಡು ಅದರಮೇಲೆ ರಿಬೇಟನ್ನು ಕೊಡಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ.

Sri H. R. KESHAVAMURTHY.—Since misapropriations and mis-applications of public funds are ever on the increase in the Co-operative societies, do Government propose to establish rasearch branch in the Co-operative Department to go into these evils in detail and find out remedies to put them down immediately ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದಕ್ಕೆ ಯಾವ ರಿಸರ್ಚ್ ಬ್ರಾಂಚೂ ಬೇಕಾಗಿಲ್ಲ. ಸಾಮಾನ್ಯವಾಗಿ ಅತಿ ಆಶೆ ಹೆಚ್ಚಾದಂತೆಲ್ಲಾ ಅಪ್ರಾಮಾಣಿಕತನ ಆಗತಕ್ಕದ್ದು ಸ್ವಾಭಾವಿಕವಾದದ್ದು. ಎಲ್ಲಿ ದೋಷ ಇದೆ, ಏತಕ್ಕೆ ಆ ರೀತಿ ಆಗುತ್ತಿದೆ ಎಂಬುದನ್ನು ಕೇಳತಕ್ಕದ್ದು ಸ್ವಾಭಾವಿಕ. ಆದರೆ ರಿಸರ್ಚ್ ಬ್ರಾಂಚ್ ಮಾಡಿ ಯಾವ ಕಾರಣದಿಂದ ಆ ರೀತಿ ಆಗುತ್ತಿದೆ ಎಂಬುದನ್ನು ಕಂಡುಹಿಡಿಯತಕ್ಕ ಅಗತ್ಯವಿಲ್ಲ. ಲಕ್ಷಾಂತರ ರೂಪಾಯಿಗಳ ಬಂಡವಾಳವನ್ನು ಹಾಕಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸೊಸೈಟಿಗಳನ್ನು ನಡೆಸುತ್ತಾ ಇರುವಾಗ ಎಲ್ಲೋ ಅಲ್ಲೊಂದು, ಇಲ್ಲೊಂದು ದೋಷ ಕಂಡುಬಂದರೆ ಅದು ಅತ್ಯಂತ ಖಂಡನೀಯ, ಶೋಚನೀಯ ಏನೂ ಅಲ್ಲ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್‌ಷಾ.—ಅನೇಕ ಜನರು ತಮ್ಮ ಮಕ್ಕಳ ಹೆಸರು, ಮತ್ತು ತಮ್ಮ ಸಂಬಂಧೀಕರ ಹೆಸರಿನಲ್ಲಿ ಸೊಸೈಟಿಯನ್ನು ಮಾಡುತ್ತಿದ್ದೇವೆ, ಸಾವಿರಾರು ರೂಪಾಯಿಗಳ ಮಾಲನ್ನು ಮಾರಾಟ ಮಾಡಿದ್ದೇವೆ ಎಂದು ಬೇರೆ ಬೇರೆ ಹೆಸರುಗಳನ್ನು ಹೇಳಿ ಸಾವಿರಾರು ರೂಪಾಯಿಗಳ ರಿಬೇಟನ್ನು ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಮತ್ತು ಅಂಥವರ ಮೇಲೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ತರಹ ಆಪಾದನೆಗಳನ್ನು ಮಾನ್ಯ ಸದಸ್ಯರು ಹೇಳಿದ್ದಕ್ಕಾಗಿ ನಾನು ಅವರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ನೇಕಾರರ ಸಹಕಾರ ಸಂಘಗಳ ಸಮಸ್ಯೆಯ ವಿಷಯದಲ್ಲಿ ಆಗತಕ್ಕಂಥ ವ್ಯವಹಾರ, ಅವ್ಯವಹಾರ ಇವುಗಳನ್ನು ಯಾವ ರೀತಿ ಉತ್ತಮಪಡಿಸಬೇಕು, ಎಂಬುದನ್ನು ಅವಲೋಕಿಸಿ ಅವುಗಳಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳಬೇಕು ಎಂಬುದನ್ನು ಶಿಫಾರಸ್ಸು ಮಾಡಲಿಕ್ಕೆ ಸದ್ಯದಲ್ಲಿಯೇ ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡುತ್ತಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈಗ ಈ ತಃಖ್ತೆಯಲ್ಲಿ ತೋರಿಸಲಾದ 1 ಲಕ್ಷ 87 ಸಾವಿರ ರೂಪಾಯಿಗಳು ಕೊಡತಕ್ಕಂಥ ಬಾಕಿ ಇದೆ. ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಿಗೂ 1,87,000 ಬಾಕಿ ಇದೆ. ಈ ವಿವಿಧ ಸೊಸೈಟಿಗಳಿದ್ದು ಚೌಕಾಶಿ ಮಾಡಿ, ಅವು ಅಪ್ರಮಾಣಿಕತೆಯಿಂದ ದೂರವಿದೆಯೆಂದು ಪರಿಶೀಲನೆ ಮಾಡಿದೆಯೋ ಅಥವ ಇನ್ನೂ ಪರಿಶೀಲನೆ ಮಾಡುತ್ತಾ ಇದ್ದೀರೋ ?

ಶ್ರೀ ಕೊಂಡಜ್ಜಿ ಬಸಪ್ಪ.—ಇದು ಪರಿಶೀಲನೆ ಮಾಡಿರತಕ್ಕಂಥಾದ್ದು.

ಶ್ರೀ ಬಿ. ಬೈರಪ್ಪಾಜಿ.—ಸಹಕಾರ ಕ್ಷೇತ್ರದಲ್ಲಿ ದಿನೇ ದಿನೇ ಅಪ್ರಮಾಣಿಕತೆ ಹಾಗೂ ಉದ್ಧಟತನ ಬೆಳೆಯುತ್ತಾ ಇದೆ. ಇದನ್ನು ತಪ್ಪಿಸಬೇಕಾದರೆ ನಿಮ್ಮ ಸರ್ಕಾರದಿಂದ ಸಾಧ್ಯವಿಲ್ಲವೆಂದು ಕಾಣುತ್ತದೆ. ಈ ಸಭೆಯಲ್ಲಿ ಪ್ರಶ್ನೆಗಳ ಮೂಲಕ ಇದನ್ನು ಪ್ರತಿ ನಿತ್ಯ ಕೇಳುತ್ತಾ ಇರುತ್ತೇವೆ.

ಉಪಾಧ್ಯಕ್ಷರು.—ಪ್ರಶ್ನೆ ಕೇಳಿ.

ಶ್ರೀ ಬಿ. ಬೈರಪ್ಪಾಜಿ.—ಈ ರೀತಿ ಅಪ್ರಮಾಣಿಕತೆಯಿಂದ ನಡೆದಂಥ ಕಾರ್ಯಕರ್ತರನ್ನು ಈ ಸಹಕಾರ ಕ್ಷೇತ್ರದಿಂದ ನಿರ್ಗಮಿಸುವ ರೀತ್ಯ ಕೆಲವು ದಿವಸ ಬ್ಲ್ಯಾಕ್‌ಲಿಸ್ಟಿನಲ್ಲಿ ಸೇರಿಸುವ ಏರ್ಪಾಡು ಮಾಡುವುದಕ್ಕೆ ಸಾಧ್ಯವೆ ? ಅವರಮೇಲೆ ಈ ರೀತಿ ನಡೆಯುತ್ತಾ ಇರತಕ್ಕಂಥ ಮಿಸ್ ಅಪ್ರೋಪ್ರಿಯೇಶನ್ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೆ? ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳೊಳಗೆ ಈ ಸಲಹೆಯನ್ನು ಕಾರ್ಯಗತ ಮಾಡಲು ಶುರು ಮಾಡುತ್ತೀರ ?

ಶ್ರೀ ಕೊಂಡಜ್ಜಿ ಬಸಪ್ಪ.—ಮಾನ್ಯ ಸದಸ್ಯರು ಆಗಾಗ್ಗೆ ಈ ಸಭೆಯಲ್ಲಿ ಹೇಳುತ್ತಿರುತ್ತಾರೆ. ನಮ್ಮ ಸಾರ್ವಜನಿಕ ಸಂಸ್ಥೆಗಳು ಒಳ್ಳೆಯ ಪ್ರಜಾಪ್ರಭುತ್ವದ ತಳಹದಿಮೇಲೆ ಕಟ್ಟಿರತಕ್ಕಂಥ ಸಂಸ್ಥೆಗಳು. ಮ್ಯಾನೇಜ್‌ಮೆಂಟಿನವರು ಸ್ವಲ್ಪ ಯೋಗ್ಯವಾದ ಕಾರ್ಯಕ್ರಮ ತೆಗೆದುಕೊಂಡರೆ ಇಂಥ

(ಶ್ರೀ ಕೊಂಡಜ್ಜಿ ಬಸಪ್ಪ)

ದುರುಪಯೋಗ ಪೂರ್ತಿ ಹೋಗುತ್ತದೆ. ಅಂಥ ಸನ್ನಿವೇಶ ಅವರೇ ಕಲ್ಪನೆ ಮಾಡಿಕೊಳ್ಳುತ್ತಾರೆ. ಅಧಿಕಾರಿ ವರ್ಗದವರು, ಇಲಾಖೆಯರು, guidance, inspection ಅಥವ inquiry, ಇಂಥ ಒಂದು supervison ಮಟ್ಟದಲ್ಲಿ ಮಾತ್ರ ಇರುತ್ತಾರೆ. ಮೇನೇಜ್‌ಮೆಂಟಿನವರು ಹೆಚ್ಚು ಆಸಕ್ತಿ ವಹಿಸಿದರೆ ಇದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವೆಂದು ನನಗನಿಸುತ್ತದೆ.

ಶ್ರೀ ಕೆ. ಲಕ್ಕಪ್ಪ.—ಈ ರಾಜ್ಯದೊಳಗೆ ಸಹಕಾರ ತತ್ವ ಒಂದು ಅಧಃಪತನಕ್ಕೆ ಹೋಗಿರುವಂಥ ವಿಚಾರದಿಂದ, ಉಗ್ರ ಕ್ರಮ ತೆಗೆದುಕೊಳ್ಳುವುದಕ್ಕೆ, ಮದರಾಸಿನಲ್ಲಿರುವಂತೆ ಒಂದು ಚಲಿಸುವ ನ್ಯಾಯಾಲಯವನ್ನು (Mobile Court), ಆಲೋಚನೆ ಮಾಡಿ, ಅತಿ ಜಾಗ್ರತೆ ಏರ್ಪಾಡು ಮಾಡುತ್ತೀರಾ ?

Mr. DEPUTY SPEAKER.—Let the Hon'ble Member read the question first.

Sri KONDAJJI BASAPPA.—It is a hypothetical case.

ಶ್ರೀ ಬಿ. ಎಸ್. ಸೌದಾಗ್ಗರ್.—ಉತ್ಪಾದನೆಯನ್ನು ಮಾಡುತ್ತಿರುವ ಸಹಕಾರಿ ಸಂಘಗಳಿಗೆ ರಿಬೇಟ್ ಇಲ್ಲ. ಈ ಸೇಲ್ಸ್ ಟ್ಯಾಕ್ಸ್ ಅವರ ಬಗ್ಗೆ ತೆಗೆದುಹಾಕುವ ವಿಚಾರ ಮಾಡುತ್ತೀರ ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ವರ್ಷ ಆರ್ಡಿನರಿ ರಿಬೇಟ್ ಕೊಟ್ಟಿಲ್ಲ. ದೀಪಾವಳಿ ಕಾಲದಲ್ಲಿ ಮಾತ್ರ 5 nP. per rupee ಕೊಟ್ಟಿದ್ದೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಮೂಲತಃ ಈ ಪ್ರಶ್ನೆಯಲ್ಲಿ ಒಂದು ದೊಡ್ಡ ಉದ್ದೇಶವಿದೆ. ನಾನು ಕೇಳಿದ್ದು 1964ನೆ ಇಸವಿ ಏಪ್ರಿಲ್ ಒಂದನೆ ದಿನಾಂಕದವರೆಗೆ. ಲಿಸ್ಟ್ ಬಂದಿರುವುದಾಗಲಿ ಏಪ್ರಿಲ್ ಒಂದನೆ ದಿನಾಂಕದಿಂದ ಈ ಪ್ರಶ್ನೆ ಮಹತ್ತರವಾದುದು. ಉತ್ತರದಲ್ಲಿ Statement of rebates due to weavers' Co-operative Societies in Dhawar and Bijapur Districts from 1-4-64 ಅಂತ ಇದೆ. ಕೇವಲ ದೀಪಾವಳಿ ರಿಬೇಟ್ ಕಾಣುತ್ತಿದೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಹೌದು.

ಶ್ರೀ ಎ. ಜೆ. ದೊಡ್ಡಮೇಟಿ.—ನಾನು ಕಳುಹಿಸಿದ ಪ್ರಶ್ನೆ ತರಿಸಿ ನೋಡಿ First April ನಿಂದ ಇತ್ತೀಚೆಗೆ, due ಇದ್ದುದು ಎಂಬ ಅರ್ಥವಿದೆ ಉತ್ತರದಲ್ಲಿ. Original Question ತೆಗೆಸಿ ನೋಡಿ. 1-4-64ನೆ ಇಸವಿವರೆಗೆ ನಾನು ಕೇಳಿದ್ದು. ಇಲ್ಲಿ ಕೇವಲ ದೀಪಾವಳಿಯದು ಮಾತ್ರವಿದೆ. ದೀಪಾವಳಿ ರಿಬೇಟಿನಲ್ಲಿ ನನಗೆ ಇಂಟರೆಸ್ಟ್ ಇಲ್ಲ, Original Kannada Question ತೆಗೆದುನೋಡಿ.

Mr. DEPUTY SPEAKER.—The original question is (a) ಇವುಗಳಿಗೆ 1964 ಏಪ್ರಿಲ್ ಒಂದರವರೆಗೆ ಸರ್ಕಾರದಿಂದ ಸಲ್ಲಬೇಕಾದ ರಿಬೇಟ್ ಹಣ ಎಷ್ಟು ಬಾಕಿ ಉಳಿದಿದೆ ? The translation is a bit wrong.

ಶ್ರೀ ಎ. ಜೆ. ದೊಡ್ಡಮೇಟಿ.—ಹಾಗಾದರೆ ಈ ಪ್ರಶ್ನೆ ಹಣೆಬರಹ ಏನು ಆಯಿತು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಪ್ರಶ್ನೆಗೆ ಉತ್ತರ ಸಿಗುವಹಾಗಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—1964ನೆ ಇಸವಿ ಏಪ್ರಿಲ್ ಒಂದರವರೆಗೆ !

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ವಿವರ ಪ್ರತ್ಯೇಕವಾಗಿ ಕೊಡುತ್ತೇನೆ.

Mr. DEPUTY SPEAKER.—The Government is not at fault. There is some mistake in translation. ಭಾಷಾಂತರ ಮಾಡುವಾಗ ತಪ್ಪಾಗಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಅರ್ಥ ತಪ್ಪು ಇದೆ.

Mr. DEPUTY SPEAKER.—ಪ್ರಶ್ನೆ ಮುಂದಕ್ಕೆ ಹಾಕುತ್ತೇನೆ. It will be held over and further information will be called for, now I come to passed over question. Question No. 549. Hon'ble Member Sri Devendrappa is not here and I put it.

ಶ್ರೀ ಎ. ಜೆ. ದೊಡ್ಡಮೇಟಿ.—ತಾವು ಪ್ರಶ್ನೆ ಓದಿದರೆ ವಿರುದ್ಧವಾಗಿ ಅರ್ಥವಾಗುವುದು. ಬಹಳ ಸಣ್ಣ ವಿಷಯ ಇದು. ಹೀಗಾಗಲಾರದಂತೆ ಸಭಾಧ್ಯಕ್ಷರು ಇನ್ನುಮೇಲಾದರೂ ನೋಡಬೇಕು.

Sri K. LAKKAPPA.—In view of the fact that there is failure of the Co-operative movement in the state, will the Government consider.

Mr. DEPUTY SPEAKER.—That question is held over. ಈಗ ಇರುವ ಪ್ರಶ್ನೆ 549 ಇದರ ಬಗ್ಗೆ ಕೇಳಬೇಕಾಗಿದ್ದರೆ ಕೇಳಿ.

Formation of Colony for Banjaris in Bhadravathi Taluk.

*Q.—549. Sri T. D. DEVENDRAPPA (Bhadravathi).—

Will the Government be pleased to state :—

(a) whether it is a fact that Banjaris of Arlikuppa, Bhadravati Taluk, have requested Government for the formation of a colony for them ;

(b) the amount required for this scheme ;

(c) the reasons for not sanctioning the same so far ?

A.—Smt. YASHODHARA DASAPPA (Minister for Social Welfare).—

(a) Yes.

(b) Rs. 43,500.

(c) Non-availability of adequate land for colonisation.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಭದ್ರಾವತಿ ತಾಲ್ಲೂಕಿನಲ್ಲಿಯೇ ಸ್ಥಳ ಕೇಳಿಲ್ಲ. ಭದ್ರಾವತಿಯಲ್ಲಿ ಸ್ಥಳವಿಲ್ಲದಿದ್ದರೆ ಅವರು ಇನ್ನೆಲ್ಲಿಯಾದರೂ ಇರಬಹುದು. ಆದ್ದರಿಂದ ಅವರಿಗೆ ಭದ್ರಾವತಿ ತಾಲ್ಲೂಕಿನಲ್ಲಿ ಅಲ್ಲದೆ ಇದ್ದರೂ ಕೂಡ, ಅವರಿಗೆ ಬೇರೆ ಕಡೆ ಅಂಥ ಸ್ಥಳವನ್ನು ಕೊಟ್ಟು ಅವರಿಗೆ ಕಾಲೋನಿ ಒದಗಿಸಿಕೊಡಬಹುದಲ್ಲಾ ?

†ಶ್ರೀಮತಿ ಯಶೋಧರ ದಾಸಪ್ಪ.—ಅರಳಿಕೊಪ್ಪದಲ್ಲಿ 49 ಜನ ಬಂಜಾರಿಗಳು, 14 ಜನ ಹರಿಜನರೂ ಇದ್ದಾರೆ. ಒಂದೆರಡು ಎಕರೆ ಜಮೀನೂ ಇದೆ ಅವರಿಗೆ. ಗುಡಿಸಲುಗಳನ್ನು ಕಟ್ಟಿಕೊಂಡು ಅಲ್ಲಿಯೇ ಇದ್ದಾರೆ. ಆ ಜಾಗದಲ್ಲಿ ಅಗ್ರಿಕಲ್ಚರ್ ಕಾಲೋನಿ ಮಾಡುವುದಕ್ಕೆ ಸಾಧ್ಯವಿಲ್ಲ, ಏಕೆಂದರೆ ಸುತ್ತಮುತ್ತಲೂ ಜಾಗವಿಲ್ಲ. ಡಿ.ಸಿ., ಬಿ.ಡಿ.ಓ, ತಹಸೀಲ್‌ದಾರ್ ಮಾಹಿತಿ ಕೊಟ್ಟಿದ್ದಾರೆ. ಅವರು ಬೇರೆ ಕಡೆಗೆ ಹೋಗುವುದಕ್ಕೆ ಸಿದ್ಧರಾಗಿದ್ದರೆ ಕಾಲೋನೀ ಮಾಡಬಹುದೆ ವಿನಃ ಇಲ್ಲದಿದ್ದರೆ ಇಲ್ಲ. ಅವರು ಇರತಕ್ಕ ಜಾಗದಲ್ಲಿ ಒಂದೆರಡು ಎಕರೆ ಇಟ್ಟುಕೊಂಡಿದ್ದಾರೆ. ಅವರು ಕೇವಲ ಎತ್ತು, ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ಕೇಳುತ್ತಾ ಇದ್ದಾರೆ. ಜಾಗ ಇಲ್ಲದೆ ಇರುವುದರಿಂದ ಅಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ. ಮಾದಯ್ಯಗೌಡ.—ಕಾಲೋನಿಗಳನ್ನು ಮಾಡಬೇಕಾದರೆ ಸಾಧಾರಣವಾಗಿ ಎಷ್ಟು ಎಕರೆಗಳಿದ್ದರೆ ಅದನ್ನು ಮಾಡಿಕೊಡಲು ಸಾಧ್ಯ ? ಕಾಲೋನಿಗಳಲ್ಲಿ ಇಷ್ಟು ಜನರು ಇರಬೇಕೆಂದೇನಾದರೂ ಸರಕಾರದವರು ನಿಗದಿ ಮಾಡಿದ್ದಾರೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಇಷ್ಟು ಫ್ಯಾಮಿಲಿಗಳಿರಬೇಕು ಮತ್ತು ಒಂದು ಮನೆಗೆ ನಾಲ್ಕು ಅಥವಾ ಆರು ಎಕರೆಗಳಷ್ಟು ಜಮೀನೂ ಇರಬೇಕು ಎಂದಿದೆ.

Sri C. J. MUCKANNAPPA.—I am raising an objection. The Chair has observed sometime back that a question or supplementary cannot be put unless it is of general interest.

Sri N. HUCHMASTHY GOWDA.—The question is already put. He cannot raise objection now.

Sri C. J. MUCKANNAPPA.—The Chair has specifically and precisely given a comprehensive ruling that unless it is of general importance, the Chair is not inclined to put the question. I am not questioning the ruling of the Hon'ble Chair. He has given some momentum and rejuvenation now.

Mr. DEPUTY SPEAKER.—Some Hon'ble members desire that it should be put.

---

†Indicates that the remarks or speeches have not been revised by the member concerned.

Sri C. J. MUCKANNAPPA.—The same concession must be shown to members of this Section also.

Mr. DEPUTY SPEAKER.—There cannot be any rule like that.

Sri G. V. GOWDA.—The established convention is when a member is absent and if his question is importance or general interest, then only the Chair would make up its mind to put the question. That convention still stands. But here this particular case pertains to a Community, so......

Mr. DEPUTY SPEAKER.—The Hon'ble Member cannot ignore this.

ಶ್ರೀ ಡಿ. ಎಂ. ಸಿದ್ದಯ್ಯ.—43,500 ರೂಪಾಯಿಗಳಷ್ಟು ಖರ್ಚು ಮಾಡಬೇಕು ಎಂದು ಇದರಲ್ಲಿದೆ. ಇದರಲ್ಲಿ ಎಷ್ಟು ಫ್ಯಾಮಿಲಿಗಳವರು ಇದ್ದಾರೆ ?

ಶ್ರೀಮತಿ ಯಶೋಧರ ದಾಸಪ್ಪ.—41 ಜನ ಬಂಜಾರಾ ಫ್ಯಾಮಿಲಿಗಳು ಹಾಗೂ 14 ಜನ ಹರಿಜನರು.

ಶ್ರೀ ಡಿ. ಎಂ. ಸಿದ್ದಯ್ಯ.—ಕಾಲೋನಿಗಳನ್ನು ಮಾಡಬೇಕಾದರೆ ಸರಿಯಾದ ಸ್ಥಳವಿಲ್ಲ ಎಂದು ಉತ್ತರ ಕೊಟ್ಟಿರಿ. ತಮ್ಮ ಅಧಿಕಾರಿಗಳು ಇಲ್ಲಿಗೆ ಹೋಗಿ ನೋಡಿ ಸ್ಥಳವಿದೆಯೇ ಇಲ್ಲವೇ ಎನ್ನುವುದನ್ನು ತಿಳಿದು ವರದಿ ಮಾಡಿದ್ದಾರೆಯೇ ಇಲ್ಲವೇ ಈ ಯೋಜನೆ ಮಾಡುವಾಗಲೇ ಇದಕ್ಕೆ ಸ್ಥಳವಿರತಕ್ಕದ್ದು ಎಂದು ಯೋಚನೆ ಮಾಡಿರಲಿಲ್ಲವೇ.

ಶ್ರೀಮತಿ ಯಶೋಧರಾ ದಾಸಪ್ಪ.—ಯೋಚನೆ ಮಾಡುವುದಲ್ಲ. ಇವರು ಹರಳಗುಪ್ಪೆ ಎನ್ನುವ ಹಳ್ಳಿಯಲ್ಲಿ ಇದ್ದಾರೆ. ಭಧ್ರಾವತಿಯಲ್ಲಿ ಎಲ್ಲೆಲ್ಲಿಯೂ ಜಮೀನು ಇದೆ. ಇವರಿರತಕ್ಕ ಹಳ್ಳಿಯಲ್ಲಿ 55 ಸಂಸಾರಗಳಿವೆ. ಇವರಲ್ಲಿ ಪ್ರತಿಯೊಬ್ಬರಿಗೂ ಒಂದು ಎಕರೆ, ಎರಡು ಎಕರೆಗಳಷ್ಟು ಭೂಮಿ ಇದೆ. ಸರಕಾರಕ್ಕೆ ಇಲ್ಲಿರುವ ಬಿ. ಡಿ. ಓ. ಗಳು ತಹಶೀಲುದಾರರು ಡೆಪ್ಯುಟೀ ಕಮಿಷನರವರು ನೋಡಿಯೇ ಸ್ಥಳವಿಲ್ಲ ಎಂದು ವರದಿ ಕಳುಹಿಸಿದ್ದಾರೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಇಲ್ಲಿರುವ 14 ಕುಟುಂಬಗಳವರಿಗೆ ಒಂದೊಂದು ಕುಟುಂಬದವರಿಗೂ ಎರಡು ಎಕರೆಗಳಷ್ಟು ಕೊಡಲು ಜಮೀನುಗಳಿರುವುದಿಲ್ಲ ಎಂದು ಹೇಳಿದಿರಿ. ಇಂತಹ ಕುಟುಂಬಗಳಿಗೋಸ್ಕರ ವ್ಯವಸಾಯಕ್ಕೆ ಪ್ರಯೋಜನವಾಗುವಂತಹ ಇತರ ಎಲ್ಲ ಸವಲತ್ತುಗಳನ್ನೂ ಕೊಡುವಂತೇಕೆ ಮಾಡಬಾರದು ?

ಶ್ರೀಮತಿ ಯಶೋಧರಾ ದಾಸಪ್ಪ.—ಇವರ ಬಗ್ಗೆ ಡೆಪ್ಯೂಟೀ ಕಮಿಷನರವರು ಶಿಫಾರಸು ಮಾಡಿದ್ದಾರೆ. ಎತ್ತು ಹಾಗೂ ವ್ಯವಸಾಯಕ್ಕಾಗಿ ಏನೇನು ಇಂಪ್ಲಿಮೆಂಟುಗಳು ಬೇಕೋ ಅದನ್ನು ಕೊಡಬೇಕೆಂದು ಹೇಳಿದ್ದಾರೆ. ಅದನ್ನು ಮುಂದಿನ ವರ್ಷ ಕೊಡಲಾಗುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಇವರಿಗೇ ಬೇಕಾಗುವ ಸ್ಥಳವನ್ನು ಎಷ್ಟು ಬೇಕೋ ಅಷ್ಟನ್ನು ಈ ಸ್ಕೀಮುಗಳನ್ನು ಹಾಕುವುದಕ್ಕೋಸ್ಕರ ಕೊಡಿಸಿಕೊಟ್ಟರೆ ಈ ವರ್ಷದಲ್ಲೇ ಅಲ್ಲಿ ಕೆಲಸಗಳನ್ನು ಶುರು ಮಾಡುತ್ತೀರಾ ?

ಶ್ರೀಮತಿ ಯಶೋಧರಾ ದಾಸಪ್ಪ.—ಅವರಿಗೆ ಸ್ಥಳ ಒದಗಿಸಿ ಕೊಟ್ಟು 55 ಫ್ಯಾಮಿಲಿಗಳವರೂ ನೀವು ಕೊಟ್ಟ ಜಾಗಕ್ಕೆ ಹೋಗಲು ಸಿದ್ಧವಾಗಿದ್ದರೆ ಬರುವ ವರ್ಷವೇ ಕಾಲೊನಿಯನ್ನು ಮಾಡಿ ಕೊಡುತ್ತೇವೆ.

ಶ್ರೀ ಗೋಪಾಲಸಾಲೆನ್ನ.—ಸಾಧಾರಣವಾಗಿ ಕಾಲೊನಿಗಳನ್ನು ಮಾಡುವಾಗ ಅದಕ್ಕೆ ಸಂಬಂಧಪಟ್ಟ ಡೆಪ್ಯೂಟೀಕಮಿಷನರವರು ಸ್ಥಳ ತೋರಿಸಿದರೆ ಅದು ಕೃಷಿಗೆ ಯೋಗ್ಯವಾದ ಸ್ಥಳವಾಗಿರುವುದಿಲ್ಲ ಮತ್ತು ಸಿಗುವುದೂ ಕಷ್ಟ. ಇನ್ನು ಮುಂದೆ ಡೆಪ್ಯೂಟಿ ಕಮಿಷನರವರು ಕೃಷಿಗೆ ಯೋಗ್ಯವಾದ ಸ್ಥಳವನ್ನು ಕೊಡಲು ಮಿನಿಮಂ ರಿಕ್ವೈರುಮೆಂಟು ಎಂದು ಕೊಡಲು ಕೆಲವು ಜಮೀನುಗಳನ್ನು ಸರಕಾರವೇ ಅಕ್ವೈರು ಮಾಡಿಕೊಂಡು ಏಕೆ ಕೊಡುವಂತೆ ಮಾಡಬಾರದು !

ಶ್ರೀಮತಿ ಯಶೋಧರಾ ದಾಸಪ್ಪ.—ಬೇರೆ ಜನಗಳು ಜಮಿನು ಮಾಡುತ್ತಿರುವುದನ್ನು ಸರಕಾರ ಅಕ್ವೈರು ಮಾಡಿಕೊಳುವುದಕ್ಕೆ ಸಾಧ್ಯವಾಗುವುದಿಲ್ಲ. ಕೇವಲ ಮನೆಗಳನ್ನು ಕಟ್ಟಿಕೊಳ್ಳಲು ಜಾಗ ಕೊಡಲು ಅಕ್ವಿಸಿಷನ್ನು ಪ್ರೊಸೀಡಿಂಗ್ಸ್ ನಡೆಯುತ್ತಿರುತ್ತದೆ. ಸರಕಾರವೇ ನೇರವಾಗಿ ಅಕ್ವಿಸಿಷನ್ನು ಮಾಡಿಕೊಂಡು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

Stopping of Financial aid to Industrialists.

*Q.—644. Sri G. T. RANGAPPA (Hosadurga).—

Will the Government be pleased to state :—

(a) whether it has come to their notice that the Mysore State Rural Industrial Bank have stopped giving financial aid to Industrialists which was hitherto given through Taluk Rural Industrial Co-operative Societies ;

(b) whether it has also come to their notice that inconvenience has been caused to Industrialists thereby ?

A.—Sri RAMAKRISHNA HEGDE (Minister for Development, Panchayati Raj and Co-operation).—

(a) Yes.

(b) Yes.

Sri G. V. GOWDA.—The Government has admitted that the inconveniences have been caused to industrialists. May I know the steps that have been taken to remove that inconveniences.

Sri RAMAKRISHNA HEGDE.—The inconveniences caused are mainly due to paucity of funds at the disposal of the State Industrial Co-operative Bank. The State Industrial Co-operative Bank has resolved that the Government may stand guarantee for a loan to be borrowed by the public in the State Co-operative Bank. This is under the consideration of the Government.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾಲ್ಲೂಕಾ ರೂರಲ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಗಳಿಗೆ ಸಾಲವನ್ನು ಇನ್ನು ಮುಂದೆ ಸರಕಾರದವರು ಕೊಡಬಾರದು ಎಂದು ಏನಾದರೂ ತೀರ್ಮಾನ ತೆಗೆದುಕೊಂಡಿದ್ದೀರಾ ?

ಶ್ರೀ. ರಾಮಕೃಷ್ಣ ಹೆಗ್ಗಡೆ.—ಈಗ ಎಲ್ಲ ಇಂಡಸ್ಟ್ರಿಯಲ್ ಫೈನಾನ್ಸ್ ಕೋ-ಆಪರೇಟೀವ್ ಸೊಸೈಟಿಗಳಲ್ಲಿಯೂ ಕೂಡ ತ್ರೀ ಟೈರ್ ಸಿಸ್ಟಂ ಮಾಡಬೇಕೆಂದು ತೀರ್ಮಾನವನ್ನು ಮಾಡಿದ್ದೇವೆ. ಎಂದರೆ ತಾಲ್ಲೂಕಾ ಲೆವಲ್‌ನಲ್ಲಿ ತಾಲ್ಲೂಕಾ ರೂರಲ್ ಇಂಡಸ್ಟ್ರಿಯಲ್ ಕೋ-ಆಪರೇಟೀವ್ಸ್‌ಗಳ ಮೂಲಕ, ಜಿಲ್ಲ ಮಟ್ಟದಲ್ಲಿ ಆಯಾ ಜಿಲ್ಲೆಗಳಲ್ಲಿರುವ ಇಂಡಸ್ಟ್ರಿಯಲ್ ಕೋ-ಆಪರೇಟೀವ್ಸ್‌ಗಳ ಮೂಲಕ ಹಾಗೂ ರಾಜ್ಯದ ಮಟ್ಟದಲ್ಲಿ ಮೈಸೂರು ರಾಜ್ಯದಲ್ಲಿರುವ ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನ್ನು ಮೂಲಕ ಕೊಡಬೇಕೆಂದು ಮಾಡಲಾಗಿದೆ. ಹಿಂದೆ ಪ್ರತಿಯೊಂದು ಹೋಬಳಿಯಲ್ಲಿಯೂ ಒಂದೊಂದು ಸೊಸೈಟಿಗಳಿದ್ದವು. ಆಮೇಲೆ ತಾಲ್ಲೂಕಾ ರೂರಲ್ ಇಂಡಸ್ಟ್ರಿಯಲ್ ಸೊಸೈಟಿಯನ್ನು ಮಾಡಲಾಯಿತು. ಮೇಲೆ ಕಳೆದ ಆಕೆಲವು ಕಾಲದಿಂದ ತಾಲ್ಲೂಕಾ ಕೋ-ಆಪರೇಟೀವ್ ಸೊಸೈಟಿಗಳ ಮೂಲಕ ಹಾಗೂ ಬೇರೆ ಕಡೆಗಳಿಂದ ಸಹಾಯಗಳನ್ನು ಕೊಡಬೇಕೆಂದು ಎರಡು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಒಂದು ತಾಲ್ಲೂಕಾ ಸೊಸೈಟಿಗಳ ಮೂಲಕ ಮತ್ತು ಬೇರೆ ಕಡೆ ಎಂದರೆ ಎಲ್. ಐ. ಸಿ. ಮುಖಾಂತರ ಸಹಾಯಗಳನ್ನು ನಮ್ಮ ಸ್ಟೇಟು ಇಂಡಸ್ಟ್ರಿಯಲ್ ಕೋ-ಆಪರೇಟೀವ್‌ಗಳ ಮೂಲಕ ಕೊಡಿಸಿದ್ದಾಯಿತು. ಮತ್ತೆ ಬೇರೆ ಕೆಲವು ಸಂಸ್ಥೆಗಳಿಂದಲೂ ಸಹಾಯಗಳನ್ನು ಕೊಡಲಾಯಿತು. ಎರಡನೇದು ಖಾದಿ ಬೋರ್ಡುಗಳಿಂದ ಬೇರೆ ಬೇರೆ ಇಂಡಸ್ಟ್ರಿಗಳಿಗಾಗಿ ಸಾಲ ಕೊಡುತ್ತಾರೆ. ಇದರಿಂದ ಅನೇಕ ಸಂಸ್ಥೆಗಳು ಸಾಲವನ್ನು ಪಡೆಯುತ್ತಿವೆ. ಅದಕ್ಕಾಗಿ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಕೋ-ಆಪರೇಟೀವ್ ಬ್ಯಾಂಕು ಎಂದು ಪ್ರಾರಂಭ ಮಾಡಬೇಕೆಂದು ಅವರು ಈಗ ಸೂಚನೆ ಮಾಡಿದ್ದಾರೆ. ಇದನ್ನು ಖಾದಿ ಕಮಿಷನಿನವರಿಗೆ ಖಾದಿ ಬೋರ್ಡಿನವರು ಕೇಳಿದ್ದಾರೆ. ಬಹುಶಃ ಅವರೂ ಒಪ್ಪಬಹುದು.

ಶ್ರೀ ಬೈರಪ್ಪಾಜಿ.—ಸರಕಾರದ ಅನಿರ್ದಿಷ್ಟ ಧೋರಣೆಯಿಂದ ತಾಲ್ಲೂಕ ಕೈಗಾರಿಕಾ ಸಹಕಾರ ಸಂಘಗಳಿಗೆ ಸುಮಾರು ಮೂರು ನಾಲ್ಕು ವರ್ಷಗಳಿಂದ ಕೆಲಸವಿಲ್ಲದೆ ಅಲ್ಲಿಯ ಸಿಬ್ಬಂದಿಗೆ ಷೇರ್ ಬಂಡವಾಳದಿಂದ ಖರ್ಚು ಹಾಕಿ ಸಂಬಳ ಕೊಡತಕ್ಕಂಥ ಸಂದರ್ಭ ಬಂದಿದೆ. ಲಕ್ಷಾನುಗಟ್ಟಲೆ ಹಣ ಸಹಕಾರ ಸಂಘಗಳ ವ್ಯವಹಾರದಲ್ಲಿ ಲುಕ್ಸಾನು ಆಗಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೇ ? ಲುಕ್ಸಾನು ಆಗುತ್ತಾ ಇರುವುದನ್ನು ಮನಗಂಡು ಈ ನೀತಿ ಬದಲಿಸದೆ ಮುಂದುವರಿಸಿಕೊಂಡು ಹೋಗುವುದು ಪ್ರಮೇಯ ಸರಕಾರಕ್ಕೆ ಏನು ಇದೆ ಎಂದು ನಾನು ಕೇಳುತ್ತೇನೆ ?

9-00 A.M.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸರಕಾರದ ಅನಿರ್ದಿಷ್ಟ ಧೋರಣೆ ಯಾವುದು ನನಗೆ ಗೊತ್ತಿಲ್ಲ.

ಶ್ರೀ ಬೈರಪ್ಪಾಜಿ.—ಸಾಲ ಕೊಡದೇ ಇರುವುದು.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸರಕಾರದ ಹತ್ತಿರ ಹಣ ಇಲ್ಲ, ತೊಂದರೆ ಇದೆ. ಹಣ ಸಂಗ್ರಹಿಸಬೇಕೆಂದು ಮಾಡಿದರೆ ಅದನ್ನು ವಿರೋಧಿಸುತ್ತೀರಿ.

ಶ್ರೀ ಬೈರಪ್ಪಾಜಿ.—ಗ್ರಾಮಾಂತರ ಪ್ರದೇಶದಲ್ಲಿ ಸಣ್ಣಪುಟ್ಟ ಕೈಗಾರಿಕೆಗಳಿಗೆ ಸಾಲ ಕೊಟ್ಟು ಉತ್ತೇಜನ ಕೊಡುವುದಕ್ಕೆ ನಾವು ಬೇಡ ಎಂದು ಹೇಳಲಿಲ್ಲ. ಹೋಬಳಿ ಸಹಕಾರ ಸಂಘ ಪ್ರಾರಂಭ ಮಾಡುವುದು ಆದರೆ ಲೋಪದೋಷಗಳಿವೆ. ಎಲ್ಲ ಸೊಸೈಟಿಗಳನ್ನು ಸೇರಿಸಿ ತಾಲ್ಲೂಕ ಮಟ್ಟದಲ್ಲಿ ಮಾಡಿದ್ದೀರಿ. ಮತ್ತೆ ಇದನ್ನು ಬಿಟ್ಟು ಜಿಲ್ಲಾ ಮಟ್ಟದಲ್ಲಿ ಬ್ಯಾಂಕ ಮಾಡಿದಿರಿ ಎರಡು ಮೂರು ವರ್ಷ ಆಯಿತು. ರಾಜಕೀಯ ಧಾಂದಲೆ ಮೂಲಕ ಬ್ಯಾಂಕು ಸರಿಯಾಗಿ ಕೆಲಸ ಮಾಡಲು ಅವಕಾಶವಾಗಲಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಸಣ್ಣಪುಟ್ಟ ಕೈಗಾರಿಕೆಗಳನ್ನು ನಡೆಸತಕ್ಕಂಥ ಜನಗಳಿಗೆ ಇನ್ನು ಮುಂದೆಯಾದರೂ ಸಾಲದ ಸೌಲಭ್ಯ ಒದಗಿಸಿ ಕೈಗಾರಿಕೆಗಳ ಕೆಲಸಗಾರರಿಗೆ ನೆರವು ಕೊಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ಏರ್ಪಾಡು ಮಾಡಬೇಕೆಂಬುದು ನಮ್ಮ ಉದ್ದೇಶ. ಈ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡಬೇಕು ? ಪ್ರತಿಯೊಂದು ಜಿಲ್ಲೆಯಲ್ಲಿ ಇಂಡಸ್ಟ್ರಿಯಲ್ ಕೋ-ಆಪರೇಟಿವ ಬ್ಯಾಂಕ ಸ್ಥಾಪನೆ ಮಾಡಬೇಕೇ ಬೇಡವೇ ಎಂಬುದಕ್ಕೆ ನಾನೂ ಸಹ ಬಹುಮಟ್ಟಿಗೆ ಸಂದೇಹಕ್ಕೊಳಗಾಗಿದ್ದೇನೆ. ದುಡ್ಡು ತನ್ನಿಂದ ತಾನೇ ಬರುವುದಿಲ್ಲ. ದುಡ್ಡು ಒದಗಿಸಿದರೆ ಸಾಲ ಕೊಡುತ್ತಾರೆ. ಆದುದರಿಂದ ದುಡ್ಡು ಹೇಗೆ ಎಲ್ಲಿಂದ ಒದಗಿಸಬೇಕು ಎನ್ನುವುದಕ್ಕೆ ಮಾನ್ಯ ಸದಸ್ಯರು ಸೂಚನೆ ಮಾಡಿದರೆ ನಾನು ತುಂಬಾ ಕೃತಜ್ಞನಾಗುತ್ತೇನೆ.

ಶ್ರೀ ಚನ್ನಬೈರೇಗೌಡ.—ಸರಕಾರದ ತತ್ವಕ್ಕೆ ಅನುಸಾರವಾಗಿ ಕೈಗಾರಿಕೆಗಳ ಅಭಿವೃದ್ಧಿ ಮಾಡಬೇಕೆಂಬ ಪಾಲಿಸಿ ಇರುವಾಗ ಹಣದ ತೊಂದರೆಯಾಗುತ್ತದೆ ಎಂದು ಹೇಳುವುದರ ಔಚಿತ್ಯ ಏನು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಔಚಿತ್ಯ ಅಂದರೆ ಇದ್ದ ಸಂಗತಿ ಇದ್ದ ಹಾಗೆ ಹೇಳುವುದು ಸರಕಾರದ ಧರ್ಮ. ಇರುವ ತೊಂದರೆ ತಮ್ಮ ಮುಂದೆ ಇಟ್ಟಿದ್ದೇನೆ. ದುಡ್ಡು ಕೊಡದೆ ದುಡ್ಡು ಇದೆ ಎಂದು ಹೇಳಲು ನನಗೆ ಸಾಧ್ಯವಿಲ್ಲ. ದುಡ್ಡು ಎಲ್ಲಿಂದ ತರಬೇಕು, ಯಾವ ಬ್ಯಾಂಕಿನಿಂದ ತರಬೇಕು ? ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕೆಂಬುದನ್ನು ಒಪ್ಪುತ್ತೇನೆ. ಹೆಚ್ಚಿನ ಉತ್ತೇಜನ ಪ್ರೋತ್ಸಾಹ ಸಹಾಯ ಮಾಡಬೇಕು ಎನ್ನುವುದಕ್ಕೆ ಭಿನ್ನಾಭಿಪ್ರಾಯವಿಲ್ಲ. ದುಡ್ಡು ಎಲ್ಲಿಂದ ತರಬೇಕು ಇದಕ್ಕೆ ಸೂಚನೆ ಮಾಡಲಿ.

Sri SANJEEVANATH AIKALA.—Will the Government approach the Life Insurance Corporation of India or the State Bank of India or Ford Foundation, who have got certain specific plans to aid and assist small industries in rural parts and who have specially earmarked certain amount for the promotion of rural industries ? May I know whether the Hon'ble Minister is willing to approach them ?

Sri RAMAKRISHNA HEGDE.—I am willing to approach anybody or any institution that is in a position to advance money without strings for rural industries, and which is not against the policy of the Government. I am thankful to the Hon'ble Member for the suggestion. May I inform him that we have already approached the L.I.C. and the State Bank of India in this connection ? But, there also we have got

certain difficulties with regard to the rate of interest. They advance money at a certain rate of interest and ultimately when the borrower gets the money, he cannot afford to pay the high rate of interest. We are not in a position to subsidise the rate of interest.

ಶ್ರೀ ಎಚ್. ನಂಜೇಗೌಡ.—ರೂರಲ್ ಇಂಡಸ್ಟ್ರೀಸ್‌ನಲ್ಲಿ ಶೇಕಡ 90 ಭಾಗ ಹಣ ದುರುಪಯೋಗವಾಗುತ್ತಿದೆ. ಕಾನೂನು ಬದಲಾವಣೆ ಮಾಡಿ ಸರಿಯಾದ ಏರ್ಪಾಡು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರು ಹೇಳುವುದು ಅದು ಎಷ್ಟರಮಟ್ಟಿಗೆ ಆಗುತ್ತದೆ ನನಗೆ ಗೊತ್ತಿಲ್ಲ. ಕೊಟ್ಟಿರುವ ಹಣ ಒಳ್ಳೇ ಉದ್ದೇಶದಿಂದ ಖರ್ಚಾಗುತ್ತಿದೆ ಎಂದು ನನ್ನ ಭಾವನೆ.

ಶ್ರೀ ಜಿ. ರಾಮೇಗೌಡ.—ಲಕ್ಷಾಂತರ ರೂಪಾಯಿ ಸಾಲದ ಕಂತುಗಳು ವಸೂಲಾಗಿಲ್ಲ. ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಾಮಾನ್ಯವಾಗಿ ವಸೂಲು ಆಗುತ್ತಾ ಇದೆ.

ಶ್ರೀ ಕೆ. ಲಕ್ಕಪ್ಪ.—ಕೈಗಾರಿಕೆ ಅಭಿವೃದ್ಧಿಯಾಗದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ !

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರು ಹೇಳುವುದು ವಿಚಿತ್ರವಾಗಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈಗ ಎಲ್ಲಿಂದ ಹಣ ಒದಗಿಸಬೇಕು ಎಂದು ಸಚಿವರು ನಮ್ಮನು ಕೇಳಿದರು. ಹಣ ಇಲ್ಲದಿದ್ದರೆ ಇದನ್ನು ಏತಕ್ಕೆ ರಚನೆ ಮಾಡಬೇಕಾಗಿತ್ತು ? ಹಣ ಒದಗಿಸಲು ಸಾಧ್ಯವಿಲ್ಲದಿದ್ದರೆ ಇದನ್ನು ತೆಗೆದುಹಾಕಬಿಡಿ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಆದನ್ನು ಹೇಳಿದೆ. ಇದನ್ನು ರಚನೆ ಮಾಡುವಾಗ್ಗೆ ನಾನು ಹಿಂದು ಮುಂದೆ ನೋಡಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇದರಲ್ಲಿ ಯಾವ ತರಹದ ರಾಜಕೀಯವಿಲ್ಲ. ಈ ಸಮಸ್ಯೆ ಬಗೆಹರಿಸುವುದಕ್ಕೆ ಮೇನೆಜ್‌ಮೆಂಟಿಗೆ ಬೋರ್ಡ್ ಆಫ್ ಡೈರೆಕ್ಟರ್ಸ್ ನೇಮಕ ಮಾಡಿದ್ದೇವೆ. ನಾಮಿನೇಷನ್ ಮಾಡುವುದನ್ನು ಬಿಟ್ಟು ಬಿಟ್ಟಿದ್ದೇವೆ. ಆದರೆ ಫಸ್ಟ್ ಬೋರ್ಡ್ ಆಫ್ ಡೈರೆಕ್ಟರ್ಸ್ ಒಂದು ತೀರ್ಮಾನ ಮಾಡಿದರು. ಕಾನೂನು ಪ್ರಕಾರ ರೂಲ್ಸ್ ಪ್ರಕಾರ ನಮ್ಮ ಪಾಲಿಸಿ ಪ್ರಕಾರ ನಾಮಿನೇಷನ್ ಮಾಡುವುದಿಲ್ಲ. ಆದರೆ ಬೋರ್ಡು ತೀರ್ಮಾನ ಮಾಡಿದರೆ ಅದನ್ನು ಮಾಡಬೇಕಾಗುತ್ತದೆ. ಬೇರೆ ಎಲ್ಲಿಯೂ ನಾಮಿನೇಷನ್ ಮಾಡುವುದಿಲ್ಲ.

Sri G. A. THIMMAPPA GOWDA.—What is the total amount advanced by the rural Industrial Co-operative Societies and what are the overdues uptill now ?

Sri RAMAKRISHNA HEGDE.—I have already said that I have not got that information here.

ಶ್ರೀ ಸಿದ್ದಯ್ಯ ಕಾಶೀಮಠ.—ಈಗ ತಾಲ್ಲೂಕ್ ರೂರಲ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಗಳಿಗೆ, ಸ್ಟೇಟ್ ರೂರಲ್ ಇಂಡಸ್ಟ್ರಿಯಲ್ ಬ್ಯಾಂಕಿನವರು ಸಾಲಕೊಡತಕ್ಕದ್ದನ್ನು ನಿಲ್ಲಿಸಿರುವುದರಿಂದ ಅವುಗಳಿಗೆ ಬಹಳ ತೊಂದರೆಯಾಗಿದೆ. ಅದನ್ನು ನಿವಾರಣೆ ಮಾಡಲು ಸರ್ಕಾರದವರೇನು ಪ್ರಯತ್ನ ಮಾಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈಗ ನಾವು ಈ ತಾಲ್ಲೂಕ್ ರೂರಲ್ ಇಂಡಸ್ಟ್ರಿಯಲ್ ಕೋ-ಆಪರೇಟೀವ್ ಸೊಸೈಟಿಗಳನ್ನು ಅಭಿವೃದ್ಧಿಪಡಿಸಲು ಎರಡು ರೀತಿಯಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಮೊದಲನೆಯದು ಇನ್ನು ಮುಂದೆ ಜಿಲ್ಲಾ ಬ್ಯಾಂಕುಗಳು ಎಲ್ಲೆಲ್ಲಿ ತಾಲ್ಲೂಕ್ ಕೋ-ಆಪರೇಟೀವ್ ಸೊಸೈಟಿಗಳಿವೆಯೋ ಅಲ್ಲಿ ಇವು ನೇರವಾಗಿ ಇಂಡಿವಿಜುಯಲ್ಸಗೆ ಸಾಲ ಕೊಡಬಾರದು, ಅದನ್ನು ತಾಲ್ಲೂಕ್ ರೂರಲ್ ಕೋ-ಆಪರೇಟೀವ್ ಸೊಸೈಟಿಗಳ ಮೂಲಕವೇ ಕೊಡಬೇಕು ಅಂತ ಮಾಡಿದ್ದೇವೆ. ಇನ್ನು ಎರಡನೆಯದಾಗಿ ತಾಲ್ಲೂಕ್ ಕೋ-ಆಪರೇಟೀವ್ ಇಂಡಸ್ಟ್ರಿಯಲ್ ಸೊಸೈಟಿಗಳನ್ನು ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಗಳನ್ನಾಗಿ ಮಾರ್ಪಾಡು ಮಾಡಬೇಕೆಂದು ಮಾಡಿದ್ದೇವೆ. ಹೀಗೆ ಮಾಡದಿದ್ದರೆ ಅವುಗಳು ತಯಾರು ಮಾಡತಕ್ಕ ಸಾಮಾನುಗಳು ಮಾರಾಟವಾಗದೆ ಅವುಗಳಗೆ ಕೊಟ್ಟ ಸಾಲದಿಂದ ಅವುಗಳಿಗೇನೂ ಪ್ರಯೋಜನ ಆಗುವುದಿಲ್ಲ. ಆದ್ದರಿಂದ ತಾಲ್ಲೂಕ್ ರೂರಲ್ ಕೋ-ಆಪರೇಟೀವ್ ಸೊಸೈಟಿಗಳನ್ನೂ ಕೂಡ ಮಾರ್ಕೆಟಿಂಗ್ ಸೊಸೈಟಿಗಳನ್ನಾಗಿ ಮಾರ್ಪಾಡು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನಮ್ಮ ದೇಶದಲ್ಲಿ ಶೇಕಡ 75 ರಷ್ಟು ಜನಸಂಖ್ಯೆಯನ್ನು ಕವರ್ ಮಾಡತಕ್ಕ ರೂರಲ್ ಇಂಡಸ್ಟ್ರಿಯಲ್‌ಗಳಿಗೆ ನಿಮ್ಮ ಒಂದು ಪಾಲಸಿಯಲ್ಲಿ ಸರಿಯಾದ ಅಪಾಯ ವಿಲ್ಲದಿರುವುದರಿಂದ ಅವು ಕುಸಿದುಬೀಳುವುದರಿಂದ, ಇದಕ್ಕಾಗಿ ಒಂದು ತಜ್ಞರ ಹೈಪವರ್ ಸಮಿತಿ ಯನ್ನು ನೇಮಕ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಧ್ಯಕ್ಕೆ ಅಂಥ ಕಮಿಟಿಯನ್ನು ನೇಮಕ ಮಾಡತಕ್ಕ ಅಗತ್ಯವಿಲ್ಲ ಎಂದು ಹೇಳುತ್ತೇನೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಡೇಟುಡೆ ಅಡ್ಮಿನಿಸ್ಟ್ರೇಷನ್ನಿನಲ್ಲಿ ಸರ್ಕಾರ ಕೈಹಾಕುತ್ತಿರುವುದ ರಿಂದ ಮತ್ತು ಸರ್ಕಾರ ಜನರನ್ನು ನಾಮಕರಣ ಮಾಡುತ್ತಿರುವುದರಿಂದ ಈ ಸಂಘಗಳು ವಿಫಲ ವಾಗುವುದಕ್ಕೆ ಕಾರಣವಾಗಿಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆದಷ್ಟೂ ಯಾವುದರಲ್ಲೂ ನಮ್ಮ ಕೈ ಹೋಗದಿರಲೀ ಎಂಬುದೇ ನಮ್ಮ ಉದ್ದೇಶ. ನಾನೀಗಾಗಲೇ ನಾಮಿನೇಷನ್ ವಿಚಾರದಲ್ಲಿ ಹೇಳಿದ್ದೇನೆ, ನಮಗೆ ಕೇಂದ್ರ ಸಂಸ್ಥೆಯಲ್ಲಿ 3 ಸ್ಥಾನಗಳು ಮಾತ್ರ ಇವೆ. ನಾವು ಅಲ್ಲಿಗೆ ಆಫೀಸಿಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಮಾತ್ರ ನಾಮಿನೇಟ್ ಮಾಡುತ್ತೇವೆ. ಇನ್ನು ಜಿಲ್ಲಾ ಮಟ್ಟದಲ್ಲಿ ಕೇವಲ ಇಬ್ಬರನ್ನು ಮಾತ್ರವೇ ನಾಮಿನೇಟ್ ಮಾಡುವುದು. ಅವರು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು. ಅದರ ಉದ್ದೇಶ ಅಲ್ಲಿ ಮೀಟಿಂಗುಗಳು ನಡೆದಾಗ ಅಲ್ಲಿಯ ಕಾನೂನುಕಟ್ಟಲೆ ರೂಲ್ಸ್ ರೆಗ್ಯುಲೇಷನುಗಳ ಬಗ್ಗೆ ಸಲಹೆ ಕೊಡಲು ಅವರನ್ನು ನಾಮಿನೇಟ್ ಮಾಡಲಾಗುತ್ತಿದೆ.

Sri C. J. MUCKANNAPPA.—Will the Government consider seriously when they are not in a position to find funds for these rural industries to advance finance, they stop their tall talk proclaiming to the coun'ry that they are helping rural folk ?

Sri RAMAKRISHNA HEGDE.—The Government never indulged in tall talk. But it is the idea of every one that rural industries should be encouraged. I may also bring to the notice of the Hon'ble Member also to the effect that these industrial Banks do not entirely depend upon the Government for funds. They are also trying to build up their own deposits, etc.

ಶ್ರೀ ಕೆ. ಲಕ್ಕಪ್ಪ.—ಈ ಸಹಕಾರ ತತ್ವದ ಆಡಳಿತ ತಮ್ಮ ಕೈಗೆ ಬಂದನಂತರ ಕೈಗಾರಿಕಾ ನೀತಿ ವಿಫಲವಾಗಿರತಕ್ಕದ್ದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಾನಾಗಲೇ ಅದಕ್ಕೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಎಚ್. ಆರ್ ಕೇಶವಮೂರ್ತಿ.—ರೂರಲ್ ಕೈಗಾರಿಕೆಗಳಿಗೆ ಇಲ್ಲಿಯವರೆಗೂ ಕೊಟ್ಟಿರ ತಕ್ಕ ಸಾಲದಲ್ಲಿ ನೂರಕ್ಕೆ 99 ಭಾಗ ಮಿಸಪ್ಲಿಕೇಷನ್ ಆಗಿ, ನಿಮ್ಮ ರೂರಲ್ ಕೈಗಾರಿಕಾ ನೀತಿ ತಲೆಕೆಳಕಾಗಿ ನಿಂತಿದೆ, ವಿಫಲವಾಗಿದೆ, ಅದನ್ನು ಸರಿಪಡಿಸುವುದಕ್ಕೇನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರು ಇದನ್ನು ಊಹೆಯ ಮೇಲೆ ಕೇಳುತ್ತಿರುವುದ ರಿಂದ ಇದಕ್ಕೆ ಉತ್ತರ ಅಗತ್ಯವಿಲ್ಲ.

ಶ್ರೀ ಗೋಪಾಲ ಸಾಲಿನ್.—61–62 ಮತ್ತು 62-63 ರಲ್ಲಿ ಕೆಲವು ಕೈಗಾರಿಕಾ ಸಹಕಾರ ಸಂಘಗಳಿಗೆ ಸಾಲವನ್ನು ಮಂಜೂರು ಮಾಡಿ ಮೊದಲನೆಯ ಕಂತಿನ ಹಣವನ್ನು ಕೊಟ್ಟು ಬಾಂಡನ್ನು ಜಿಲ್ಲಾಧಿಕಾರಿಗಳ ವಶದಲ್ಲಿ ಇಟ್ಟಿದ್ದಾರೆ. ಅವರು 2-3 ವರ್ಷಗಳ ಹಿಂದೆಯೇ ಹಣವನ್ನು ಹಾಕಿ ಮೆಷಿನರಿಗಳನ್ನು ಕೊಂಡಿದ್ದಾರೆ. ಅಂಥವರಿಗೆ ಎರಡನೇ ಇನ್‌ಸ್ಟಾಲುಮೆಂಟನ್ನು ಕೊಡದಿರತಕ್ಕ ನಿದರ್ಶನಗಳಿವೆ. ಹಣ ವಾಪಸ್ಸು ಕೊಡುವುದಕ್ಕೆ ತೊಂದರೆಯಾಗಿದೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರು ಆ ನಿದರ್ಶನ ಯಾವುದು ಎಂಬುದನ್ನು ನನ್ನ ಗಮನಕ್ಕೆ ತಂದರೆ ಯಾವುದಾದರೊಂದು ರೀತಿಯಿಂದ ಸಮಸ್ಯೆಯನ್ನು ಬಗೆಹರಿಸುತ್ತೇನೆ.

ಶ್ರೀ ಬಿ. ಚನ್ನಬೈರೇಗೌಡ.—ಹಣವಿಲ್ಲ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಆದ್ದರಿಂದ ಪಾನ ನಿರೋಧವನ್ನು ರದ್ದುಗೊಳಿಸಿ ಅದರಿಂದ ಬರತಕ್ಕ ಹಣವನ್ನು ವ್ಯವಸಾಯಾಭಿವೃದ್ಧಿಗೂ ಕೈಗಾರಿಕಾಭಿವೃದ್ಧಿಗೂ ಉಪಯೋಗಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದಕ್ಕೂ ಅದಕ್ಕೂ ಸಂಬಂಧವಿಲ್ಲ.

Sri C. J. MUCKANNAPPA:—The Government wanted to know the resources. Let them say whether they are going to scrap prohibition and utilise the money for the development of agriculture and rural industries. It is a definite question.

ಶ್ರೀ ಸಿದ್ದಯ್ಯ ಕಾಶೀಮಠ.—ಖಾದಿ ಬೋರ್ಡಿನ ಮೂಲಕ ಸಾಲ ಒದಗಿಸಲಾಗುವುದೆಂದು ಅಪ್ಪಣೆ ಕೊಡಿಸಿದರು. ಆದರೆ ಅಲ್ಲಿನ ಲೆಕ್ಕ ಪತ್ರಗಳೇ ಸರಿಯಾಗಿಲ್ಲದಿರುವಾಗ ಅದರ ಮುಖಾಂತರ ಸೊಸೈಟಿಗಳಿಗೆ ಸಾಲ ಒದಗಿಸಲು ಹೇಗೆ ಸಾಧ್ಯವಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಖಾದೀ ಬೋರ್ಡಿನ ಲೆಕ್ಕಪತ್ರಕ್ಕೂ ಇದಕ್ಕೂ ಸಂಬಂಧವಿಲ್ಲ. ಖಾದೀ ಬೋರ್ಡು ನೇರವಾಗಿ ಎಲ್ಲಿಯೋ ದೂರದಲ್ಲಿರತಕ್ಕ ಸಂಸ್ಥೆಗಳಿಗೆ ಸಾಲಕೊಟ್ಟು ಅದರಿಂದ ಅನುಕೂಲವಾಗದೇ ಇರತಕ್ಕ ಪರಿಸ್ಥಿತಿಯಾಗಬಹುದು. ಆದ್ದರಿಂದ ಜಿಲ್ಲಾ ಹಾಗೂ ಕೇಂದ್ರದ ಮಟ್ಟದಲ್ಲಿ ಬ್ಯಾಂಕುಗಳಿಗೆ ಸಾಲ ಕೊಟ್ಟರೆ ಆ ಬ್ಯಾಂಕುಗಳು ಅಲ್ಲಿ ಸ್ಥಳೀಯ ಸಂಸ್ಥೆಗಳಾಗಿರುವುದರಿಂದ ಹೆಚ್ಚು ನಿಗಾ ವಹಿಸಿ ಸೂಪರ್‌ವೈಜ್ ಮಾಡಿ ಸಾಲ ವಸೂಲು ಮಾಡತಕ್ಕದನ್ನು ಸರಿಯಾಗಿ ಮಾಡಬಹುದು.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಕಳ್ಳಭಟ್ಟಿ ತಯಾರಿಕೆಯಲ್ಲಿ ಅಂದರೆ ಈ ಕೈಗಾರಿಕೆ ಬಹಳ ಉತ್ತಮವಾಗಿ ನಡೆಯುತ್ತಿದೆ. ಇದರಲ್ಲಿ ತಮ್ಮ ಕೈವಾಡವೇನು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರ ಕೈವಾಡ ಇದರಲ್ಲಿ ಎಷ್ಟರಮಟ್ಟಿಗಿದೆಯೋ ಗೊತ್ತಿಲ್ಲ. ಆದರೆ ನಮ್ಮ ಕೈವಾಡ ಇದರಲ್ಲಿರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನೀರಾ ಸೆಂಟರ್ ಮತ್ತು ಪಾಣಿಬೆಲ್ಲ ಇವು ಯಾವ ಆರ್ಥಿಕ ಸಹಾಯವೂ ಇಲ್ಲದೆ ಮುಂದಕ್ಕೆ ಬರುತ್ತಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ರಾಜಕೀಯ ಕೈವಾಡವಿದೆ ಎಂದು ಹೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಇಲ್ಲ ಎಂತ ಹೇಳಿದರು. ಆದರೆ ನಮ್ಮ ತುಮಕೂರು ಜಿಲ್ಲೆಯಲ್ಲಿ ಎಂದು ಸಹಕಾರ ಬ್ಯಾಂಕಿನ ಬೋರ್ಡ್ ಆಫ್ ಡೈರೆಕ್ಟರನ್ನು ನಾಮಿನೇಟ್ ಮಾಡಿದ್ದಾರೆ. ಇದನ್ನು ಯಾವ ಆಧಾರವಿಟ್ಟು ಕೊಂಡು ನಾಮಿನೇಟ್ ಮಾಡಲಾಗಿದೆ ಎಂಬುದನ್ನು ಹೇಳುತ್ತೀರಾ ?

ಉಪಾಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

Sri C. J. MUCKANNAPPA.—Is it not a fact that it is due to non-co-ordination of these two wings-one the Khadi Board, another, the rural Industries Board, and because one port-folio lies with the co-operation Minister and the other with the Industries Minister—is it not due to lack of co-ordination that the Rural Industries are hard hit?

Sri RAMAKRISHNA HEGDE.—It is not a fact that there is lack of co-ordination between these two Departments. I refuse it.

Sri SANJEEVANATH AIKALA.—Is it a fact that the first Board of Directors in the Rural Industries Co-operative Bank, South Kanara District, the Directors were nominated who were neither share-holders nor industrialisits and their only qualification is four-anna Congress Membership ?

Sri RAMAKRISHNA HEGDE.—I do not know on what basis this information is being collected by the Hon'ble Member. Being a Member of the Congress, though it is not a crime, it is never taken into consideration as a qualification for being nominated as a Director. Directors are nominated by the concerned authorities, in some cases by the Registrar and in some cases by the Government, on the basis of two factors :

1. Whether they are one of the promoters and share-holders ;
2. Whether they have got any experience in the line.

Sri G. A. THIMMAPPA GOWDA.—Government have appointed an officer to the State Rural Industrial Bank. Government have appointed non-official Presidents to the District Bank. Why this distinction Sir?

Sri RAMAKRISHNA HEGDE.—There is that difference. But it is under active consideration of the Government whether a non-official should be appointed as Chairman of the State Industrial Co-operative Bank.

ಶ್ರೀ ಎಚ್ ಆರ್. ಕೇಶವಮೂರ್ತಿ.—ಇವತ್ತಿನ ದಿವಸ ಆಧುನಿಕ ರೀತಿಯಲ್ಲಿ ಬೆಳೆಯುತ್ತಾ ಇರತಕ್ಕ ಬೃಹತ್ ಪ್ರಮಾಣದ ಇಂಡಸ್ಟ್ರೀಸ್ ಇರುವುದರಿಂದ ಹಳ್ಳಿಗಳಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅಥವಾ ರೂರಲ್ ಇಂಡಸ್ಟ್ರೀಸ್ ಬೆಳೆಯುವುದಕ್ಕೆ ಬಹಳ ಕಷ್ಟ ಇದೆ. ಈ ರೀತಿಯಲ್ಲಿ ಸರ್ಕಾರದವರು ಲಘುವಾದ ನೀತಿಯನ್ನು ಅನುಸರಿಸುವುದರಿಂದ ಅವುಗಳನ್ನು ಬೆಳೆಸುವುದು ಉಳಿಸುವುದಕ್ಕೆ ಅಸಾಧ್ಯ. ಆದ್ದರಿಂದ ಈಗಲಾದರೂ ತೀವ್ರವಾಗಿ ಆಲೋಚನೆ ಮಾಡಿ ಅವುಗಳನ್ನು ಯಾವ ರೀತಿ ಉಳಿಸಿಕೊಳ್ಳಬಹುದು, ಬೆಳೆಸಬಹುದು ಎಂಬುದನ್ನು ಪರಿಶೀಲನೆ ಮಾಡಲು ಒಂದು ತಜ್ಞರ ಕಮಿಟಿಯನ್ನು ನೇಮಕ ಮಾಡಿ ಮುಂದೆ ಕಾರ್ಯ ಕ್ರಮವನ್ನು ತೆಗೆದುಕೊಳ್ಳುತ್ತಿರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಸಣ್ಣ ಕೈಗಾರಿಕೆಗಳನ್ನು ಉಳಿಸಿಕೊಳ್ಳುವುದು ಬೆಳೆಸುವುದು ಅಸಾಧ್ಯ ಎಂದು ಮಾನ್ಯ ಸದಸ್ಯರು ತೀರ್ಮಾನ ಕೊಟ್ಟಮೇಲೆ ಇನ್ನು ಯಾವ ಕಮಿಟಿಯ ನೇಮಕ ಮಾಡಿ ಅವರ ಶಿಫಾರಸು ಪಡೆದುಕೊಂಡು ಮಾಡುವುದಾದರೂ ಏನು? ಅದೂ ಕೂಡ ಸರಿಯಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಈ ವಿಚಾರದಲ್ಲಿ ಅನೇಕ ಅಧ್ಯಯನ ತಂಡಗಳು ಆಗಿವೆ, ಬೇಕಾದಷ್ಟು ಮೆಟೀರಿಯಲ್ ಇದೆ ಅದಕ್ಕೇನೂ ಕೊರತೆ ಇಲ್ಲ. ಆದ್ದರಿಂದ ಹೊಸ ಕಮಿಷನ್ ನೇಮಕಮಾಡುವ ಅಗತ್ಯ ಇಲ್ಲ.

ಶ್ರೀ ಜಿ. ಎ. ಗೌಡ.—ಸ್ಟೇಟ್ ಇಂಡಸ್ಟ್ರಿಯಲ್ ಬ್ಯಾಂಕ್‌ನ ಅಧಿಕೃತ ಬಂಡವಾಳ ಎಷ್ಟು? ಅವರು ಕೊಟ್ಟಿರುವ ಸಾಲ ವಾಪಸು ಆಗಿದ್ದರೆ ಅದನ್ನು ಮತ್ತೆ ಸಾಲ ಕೊಡಲಿಕ್ಕೆ ಏಕೆ ಉಪಯೋಗಿಸಿಕೊಳ್ಳಬಾರದು?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದಕ್ಕೆ ಸಂಬಂಧಪಟ್ಟ ಅಂಕಿಅಂಶಗಳನ್ನು ಆಗಲೇ ಹೇಳಿದೆ. ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡಲಿಕ್ಕೆ ತಯಾರಾಗಿದ್ದೇನೆ.

ಶ್ರೀ ಜಿ. ಎ. ಗೌಡ.—ಮಾನ್ಯ ಮಂತ್ರಿಗಳು ಸಾಲ ವಸೂಲಾಗುತ್ತಾ ಇದೆ ಎಂದು ಹೇಳಿದರು. ಎಷ್ಟು ಸಾಲ ವಸೂಲಾಗಿದೆಯೋ ಅದನ್ನು ಮತ್ತೆ ಸಾಲ ಕೊಡಲಿಕ್ಕೆ ಉಪಯೋಗಿಸಿಕೊಳ್ಳಲು ಸಾಧ್ಯವಿದೆ ಆದರೆ ಆ ರೀತಿ ಸಾಲ ಕೊಡುವುದನ್ನು ಬ್ಯಾಂಕ್ ನಿಲ್ಲಿಸಿಯೇ ಬಿಟ್ಟಿದೆ ಅದಕ್ಕೋಸ್ಕರ ಈ ವಿವರಗಳನ್ನು ಕೇಳಿದೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಾಮಾನ್ಯವಾಗಿ ವಸೂಲಾಗುತ್ತಾ ಇದೆ ಎಂದು ಹೇಳಿದೆ. ಕೇಂದ್ರ ಬ್ಯಾಂಕಿನವರು ಸರ್ಕಾರದವರಿಗೆ ಹಿಂದಿನ ಸಾಲವನ್ನು ವಾಪಸು ಕೊಡಬೇಕಾಗಿತ್ತು. ಕೇಂದ್ರ ಬ್ಯಾಂಕಿನವರನ್ನು ಕೇಳಿದ್ದಕ್ಕೆ ಅದನ್ನು ಷೇರ್ ಕ್ಯಾಪಿಟಲ್ ಆಗಿ ಮಾರ್ಪಾಡು ಮಾಡಿ ಕೊಡುತ್ತೇವೆ ಎಂದು ಹೇಳಿದರು ಅದು ಸರ್ಕಾರದವರ ಗಮನದಲ್ಲಿ ಇದೆ.

ಶ್ರೀ ಎಸ್. ಗೋಪಾಲ ಸಾಲೆನ್ನ.—ಅರ್ಧ ಅರ್ಧವಾಗಿ ಸಾಲವನ್ನು ಕೊಟ್ಟು, ಮೆಷಿನರಿ ಮೇಲೆ ಅದನ್ನು ಹಾಕಿ ಡಿಪ್ರೀಸಿಯೇಷನ್ ಮತ್ತು ಕ್ಯುಮ್ಯುಲೇಟೀವ್ ಇಂಟರೆಸ್ಟ್ ಇದರಿಂದಾಗಿ ನಷ್ಟ ವರ್ಷೇ ವರ್ಷೇ ಜಾಸ್ತಿಯಾಗುತ್ತಾ ಇರುವುದರಿಂದ ಇಂತಹ ಯೋಜನೆಗಳಿಗೆ ಪ್ರಥಮ ಸ್ಥಾನವನ್ನು ಕೊಟ್ಟು ಕ್ರಮವಾಗಿ ನಡೆಸುವಂತೆ ಏರ್ಪಾಡು ಮಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾಡುತ್ತೇವೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ರೂರಲ್ ಇಂಡಸ್ಟ್ರಿಸ್ ಬಗ್ಗೆ ಈಗಿರತಕ್ಕ ಪದ್ಧತಿಯನ್ನು ಮಾರ್ಪಾಡು ಮಾಡಿ ಬೃಹತ್ ಪ್ರಮಾಣದ ಇಂಡಸ್ಟ್ರೀಸ್‌ನ್ನು ಟೌನ್ ಅಥವಾ ಸಿಟಿಗಳಲ್ಲಿ ಪ್ರಾರಂಭ ಮಾಡಿದ್ದೀರಿ ಅದಕ್ಕೆ ಹೊಂದಿಕೊಂಡು ಹೋಗುವಂತೆ ಬಿಡಿ ಭಾಗಗಳು ಎಂದರೆ ಆನ್‌ಸಿಲಿಯರಿ ಪಾರ್ಟನ್ನು ತಯಾರು ಮಾಡುವುದಕ್ಕೆ ಬೇಕಾಗತಕ್ಕ ಇಂಡಸ್ಟ್ರೀಸ್‌ನ್ನು ಪ್ರಾರಂಭಮಾಡಿ ಒಂದಕ್ಕೊಂದಕ್ಕೆ ಹೊಂದಾಣಿಕೆಯಾಗುವಂತೆ ಮಾಡುತ್ತೀರಾ? ಈ ಬಗ್ಗೆ ನಿರ್ದಿಷ್ಟವಾದ ಹೇಳಿಕೆ ಕೊಡುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದರ ಬಗ್ಗೆ ಯೋಜನೆಗಳು ಇದ್ದೇ ಇವೆ. ಪಂಚವಾರ್ಷಿಕ ಯೋಜನೆಗಳನ್ನು ತಯಾರು ಮಾಡಬೇಕಾದರೆ ಇದನ್ನೆಲ್ಲಾ ಗಮನದಲ್ಲಿ ಇಟ್ಟುಕೊಂಡೇ ಮಾಡಿದ್ದಾರೆ. ರೂರಲ್ ಏರಿಯಾದಲ್ಲಿ ಕಾಟೇಜ್ ಇಂಡಸ್ಟ್ರೀಸ್ ಮಾಡಬಹುದು ಅದಕ್ಕೆ ಹೊಸ ರಿಸರ್ಚ್ ಮಾಡಬೇಕಾದ ಅಗತ್ಯ ಇಲ್ಲ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಜಿ. ರಾಮೇಗೌಡ.—ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳಿಗೆ ಸಾಕಾದಷ್ಟು ಅಧಿಕಾರ ಇಲ್ಲ ಎಂದು ಹೇಳುತ್ತಾ ಇದ್ದಾರೆ ಆದ್ದರಿಂದ ಅವರಿಗೆ ಈ ವಿಷಯದಲ್ಲಿ ಹೆಚ್ಚಿನ ಅಧಿಕಾರ ವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮಗೆ ಗೊತ್ತಿರುವ ಹಾಗೆ ಅಂತಹ ತೊಂದರೆ ಇದ್ದಹಾಗೆ ಕಂಡು ಬರಲಿಲ್ಲ.

Mr. DEPUTY SPEAKER.—Questions are over.

Member's Representations.

ಶ್ರೀ ಸಿದ್ದಯ್ಯ ಕಾಶೀಮಠ್.—(ಸಿರಹಟ್ಟಿ) ಕೇವಲ 3 ಪ್ರಶ್ನೆಗಳನ್ನು ಮಾತ್ರ ಇವತ್ತಿನ ದಿವಸದ ಕಾರ್ಯಕ್ರಮ ಪಟ್ಟಿಯಲ್ಲಿ ಹಾಕಿದ್ದಾರೆ, ಬೇಕಾದಷ್ಟು ಪ್ರಶ್ನೆಗಳು ಇದ್ದರೂ ಕೂಡ ಸರ್ಕಾರದವ ರಿಂದ ಸರಿಯಾದ ಉತ್ತರ ಬರಲಿಲ್ಲ. ತೀವ್ರಗತಿಯಿಂದ ಉತ್ತರಗಳನ್ನು ತರಿಸಬೇಕೆಂದು ಕೇಳಿಕೊಳ್ಳು ತ್ತೇನೆ.

Sri SANJEEVANATH AIKALA (Suratkal)—Sir, I understand 900 questions are pending with the Government. We are having only three questions today. The way in which this Government is functioning is rather unsatisfactory.

Sri S. SIVAPPA (Sravanabelgola).—Sir, regarding the questions and answers supplied, this is not the first time, we are bringing to the notice of the House through you. Several times, we have raised this question, and we have expressed our concern that answers to many questions are not forthcoming as promptly as we expect. Today it is reduced to three. At this rate, I do not know where we are going. I do not know what the Government is doing in spite of the warnings and directions given by the Speaker. It is becoming more and more leathergic Probably, at this rate, a time may come when this House may go without the question-hour and probably that may be their intention also. So, I request you sir, either to direct the Government to supply the answers for the questions which we have sent or the Government must come out with the truth and admit that they are incapable of supplying answers. They must come out. At least then we will be able to understand them. This manner of treating the House rather lightly is very dangerous. Government is becoming more and more leatheargic. Some solution must be found. I request the Speaker to ascertain from the Government why they are leathergic.

Sri G. V. GOWDA (Palya).—Questions to which answers are available at the Secretariat are also not furnished. That is my grievance. Out of 25 questions, 24 questions refer to matters for which answers are available at the Secretariat level. Since four or five months, these answers are not forthcoming.

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ಈ ಮಾನ್ಯ ಸಭೆಯು ಸಾಧಾರಣ ಎರಡೂವರೆ ಕೋಟಿ ಜನತೆಗೆ ಸಂಬಂಧಪಟ್ಟಂತೆ ಇಲ್ಲಿ ದಿನ ನಿತ್ಯ ಕುಳಿತು ವ್ಯವಹಾರಗಳನ್ನು ನಡೆಸುತ್ತಾ ಇರುವಾಗ ನಮ್ಮ ಈ ರಾಜ್ಯದ ಅಧಿಕಾರದ ಲಗಾಮನ್ನು ಹಿಡಿದಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳು ಈ ಸಬೆಯನ್ನು ನಿರ್ಲಕ್ಷಿಸಿ ಇವತ್ತು ಕೊಯಮತ್ತೂರಿನಲ್ಲಿ ಕರ್ನಾಟಕ ಸಂಘದ ಅಧ್ಯಕ್ಷತೆಯನ್ನು ವಹಿಸಲಿಕೆ ಹೋಗಿದ್ದಾರೆ. ಕೊಯಮತ್ತೂರಿನ ಕರ್ನಾಟಕ ಸಂಘದ ಅಧ್ಯಕ್ಷತೆ ಮುಖ್ಯವೇ ಅಥವಾ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಇಲ್ಲಿ ಸಭೆಯ ವ್ಯವಹಾರ ಮುಖ್ಯವೇ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ ಮಾತ್ರವಲ್ಲದೆ ತಾವು ಅವರಮೇಲೆ ಸೂಕ್ತವಾದ ಕ್ರಮ ಕೈಕೊಳ್ಳಬೇಕು. ಈ ದೇಶದಲ್ಲಿ ಗಂಡಾಂತರ ಪರಿಸ್ಥಿತಿ ಬಂದು, ಪೋಲೀಸ್ ರಾಜ್ಯದ ಆಡಳಿತೆಯಲ್ಲಿ ಜನತೆ ಪ್ರಾಣ ಹೋಗುತ್ತಾ ಇದೆ.

Sri C. J. MUCKANNAPPA (Sira).—May I just put it to the Government—Government is wasting their time and they have no time to furnish answers. That is the sanctity they attach to the work of this House. They are spending all their time in thinking 'whom shall I penalise' : That is the point raised. There are so many *sarvagnas* on the other side. They do not apply their mind to the business of this House. This is the tenth time that I have brought to your notice and through you to the notice of the Government. What can the Hon'ble Finance Minister do about this ? Can he with a whip-hand ask the Ministers to do it ? It is only the Chief Minister who can do it. My friend Sri Bhaskar Setty has pointed out that the person who is in charge as Chief Minister, he must be in a position to answer these matters in this August House. In the absence of the Chief Ministers, even if the Finance Minister says, 'we will be able to get them'—I do not know how many Ministers will take his word and regard him or respect the views of this House and respect the Chair. I request the Hon'ble Chair to view this matter very seriously and see that a direction is given. If answers are not given, the course of action is left to the Chair. It is a matter with which the Hon'ble Speaker has to deal. I appeal to the Chair to see that answers are got as quickly as possible.

9-30 A.M.

ಶ್ರೀ ಬಿ. ಭಾಸ್ಕರಶೆಟ್ಟಿ.—ನಿನ್ನೆ ಕಾಂಗ್ರೆಸ್ ಅಧಿವೇಶನದ ಪ್ರಾರಂಭೋತ್ಸವವನ್ನು ನೆರವೇರಿಸುವುದಕ್ಕೆ ವಿಧಾನಸಭೆ ನಡೆಯುತ್ತಿದ್ದುದರಿಂದ ಮುಖ್ಯಮಂತ್ರಿಗಳು ಬರಲಿಲ್ಲ. ಅದೇ ಇಂದು ಅವರು ಕೊಯಮತ್ತೂರಿನಲ್ಲಿ ಕರ್ಣಾಟಕ ಸಂಘದ ಅಧ್ಯಕ್ಷತೆ ವಹಿಸಲು ಹೋಗಿದ್ದಾರೆ. ಇದು ಸರಿಯೇ ?

Sri B. D. JATTI (Minister for Finance).—Sir, the responsibility of the Ministers is joint and several. This is not the first time we have to get advice from my esteemed Hon'ble friend Sri Muckannappa.

Sri C. J. MUCKANNAPPA.—I request my friend the Hon'ble Minister for Finance to let me know to what extent he is going to fulfil his promise if he makes a promise to this House.

Sri K. PUTTASWAMY (Minister for Municipal Administration).—There is a way of representing...

Sri C. J. MUCKANNAPPA.—My friend the Minister for Municipal Administration is becoming a *Sarvagna* Sir.

Sri B. D. JATTI.—On the floor of the House, it is the right of every legislator to place his difficulties and it is the responsibility of the Government to satisfy him. That, I accept. Whether I reply on behalf of the other Ministers or any other Minister, it is all the same. The Chief Minister has gone out for an important work...

Sri C. J. MUCKANNAPPA.—What important work ?

SRI B. D. JATTI.—Let me finish. It is not correct on the part of the Hon'ble Minister to interfere when I am on my legs. According to the Hon'ble Chief Minister, the work is very important and he has got a right to go.

(Sri Bhaskara Shetty stood up to interrupt)

Unless it is a point of order, I am not yielding. When I am talking it is not right on the part of the Hon'ble Member to interfere. I do not interrupt when others are speaking. The other Ministers who are present here will take the entire responsibility. I will explain the latest position with regard to questions. The number of questions admitted and sent to Government are 775. The number of questions for which replies have been received are 426. The number of questions answered on the floor of the House are 397, including today's list. The number of replies that are ready are 29. Among these, 12 replies pertain to members who are under detention, and suspension, and the replies kept back on the request of Ministers and members pertain to 10 questions due to similar questions having been answered. The number of questions for which replies are ripe, but still due is 244. The number of questions for which the replies are not ripe is 105. Extension of time has been asked for and got in the case of 73 questions. The only point which needs explanation is with regard to the number of questions for which replies are ripe but still due, *i.e.*, 244 questions. Whatever replies can be given at the Secretariat level in consultation with the Heads of Department within 15 days, we are giving. But where answers have to be got from districts and taluks—in such cases, if detailed replies are nesessary Hon'ble Members will have to wait. Otherwise replies will not be satisfactory to the legislators as these will be cursory replies only. In order to satisfy the members, we are taking more time. There also, we take the permission of the Chair and furnish answers.

SRI S. SIVAPPA.—The Hon'ble Finance Minister was pleased to state that extension of time has been asked for with regard to 70 or 80 questions. May I know when this extension of time was asked for and under what rules of procedure. I know that this extension has been asked after the expiry of time permitted in the rules. The second point is, the Hon'ble Finance Minister said that the Chief Minister has gone out of the State to fulfil an important engagement. I want to know which is that important engagement which permitted the Chief Minister to leave this House, when we are discussing financial matters of the State. Is that programme or the work which he is going to attend more important than the Assembly work ? This House has a right to demand the Government to say how it is important and where is it and where did he go. That is a very important issue. The Chief Minister cannot go unless it is very emergent or if it is in the defence of the country or some such thing. If it is an ordinary social function of opening the Karnataka Sangha, I would like to know whether it is more important than the Assembly work. I want to know how the Finance Minister said that it is important. I want him to justify how it is more important than the Assembly work.

Sri B. D. JATTI.—Sir, Defence is not a subject of the State. There is no question of the Chief Minister or any other Minister of the State thinking of Defence. Secondly whether the work for which he has gone is important or not is a matter to be decided by the Chief Minister and not by other members.

Sri S. SIVAPPA.—Sir, it is an evasive answer. As the Hon'ble Finance Minister put it right, it is the Chief Minister who has to answer. I am requesting the Hon'ble Speaker to let me know whether the Chief Minister is in order to leave this House at this important juncture and attend this holiday function, a social gathering.

Mr. DEPUTY SPEAKER.—Today, the Chief Minister is not concerned with any of the Demands.

Sri S. SIVAPPA.—Sir, I am raising another point and a most important point. I have already given notice of an adjournment motion, regarding the incident which happened, regarding the affair of Nuggehalli. It is an urgent issue. Due to the incapacity of the Government—when I made a statement, you were pleased to state.........

Sri C. J. MUCKANNAPPA.—After taking up the Call Attention motion, this matter may be taken up. I am not speaking on any other subject. There is a calling attention notice. After it is disposed of, the Chair may allow other things. I want to point out that only.

Mr. DEPUTY SPEAKER.—Sri Sivappa wanted to know about the adjournment motion. I may inform him that it has been disallowed.

CALLING ATTENTION TO A MATTER OF URGENT PUBLIC IMPORTANCE *Re:* CHOLERA EPEDAMIC IN ARSIKERE TALUK, GANGAVATHI TOWN, HOSPET AND ROUND ABOUT.

Calling Attention

Sri H. R. KESHAVAMURTHY (Gandasi).—I wish to call the attention of the Hon'ble Health Minister regarding the spread of cholera at Arsikere Taluk and other places of the State.

Sri SANJEEVANATH AIKALA (Suratkal).—I call attention of the Health Minister to the prevalence of cholera in Hospet, Bellary District and Gangavathi Panchayat area in Raichur District and the failure of the Government in the prevention of the spread of this epidemic.

ಶ್ರೀ ಕೆ. ಪಿ. ರೇವಣಸಿದ್ಧಪ್ಪ (ತಿಪಟೂರು).—ಅರಸೀಕೆರೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ, ಗಂಗಾವತಿ, ಹೊಸಪೇಟೆ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಾಲರ ಅಂಟು ಜಾಡ್ಯದ ಪ್ರಯುಕ್ತ ಉದ್ಭವಿಸಿರುವ ಪರಿಸ್ಥಿತಿಯ ಕಡೆಗೆ ಆರೋಗ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

† Sri K. NAGAPPA ALVA (Minister for Public Health).—Sir, there is prevalance of cholera in the following places :

Arasikere and three villages in Hassan district; Hospet taluk in Bellery district and seven villages; Bangarpet—one village—in Kolar district and Gangavati in Raichur district.

The latest position in respect of these affected places is as follows

Place	Population	No. of Attack	Death	No. Inoculated
Arasikere town	20,000	19	10	19,591
no fresh cases have been reported from the 20th onwards.				
Henjegowdana Halli ...	135	1	1	114
Oddara Hatti ...	360	1	1	over 300
Haranahalli ..	3,856	1	1	2,979
Basavanadurga in Hospet ...	1,050	26	2	788
Kondanayakanahalli ...	1,075	7	2	678
Ananthashayana Gudi ...	2,981	3	Nil	1,220
Nagenahalli ...	1,609	5	1	728
Hosur, Hospet Taluk ...	302	2	Nil	193
Bukkasagar ...	1,652	1	Nil	346
Hampi Camp ...		1	1	over 120
Hospet Town ...	60,000	26	4	over 10,000
Kodihalli in Bangarpet Taluk ...	369	6	3	356
4 Villages in Gangavathi Taluk :				
Ayodhya Camp ...	650	7	3	647
Chik Juntakal ...	1,700	1	1	822
Hosalli ...	1,060	2	1	556
Dhanpura Camp ...	30	1	Nil	22
Jangamarkalli Gudi and Dhanpura and neighbouring villages	1,066			

People have been covered though there has not been infection, but as a precautionary measure we have covered these places. People in the contiguous and neighbouring villages are being protected against cholera by innoculations. The concerned Health Officers have visited the villages and the towns immediately after the receipt of the information regarding infection and very prompt curative and preventive measures have been taken. Additional staff have been posted with the necessary equipment and medicines. Patients have been treated both at the hospitals and dispensaries as well as in their villages. The District Health Officers have taken prompt and effective measures to control the spread of infection. Adequate stock of anti-cholera vaccine, disinfections and medicians are maintained in all the areas. The position is well under control.

MEMBERS' REPRESENTATION

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ಈ ಸಭೆಯಲ್ಲಿ ಒಂದು ಪ್ರಾಮುಖ್ಯವಾದ ವಿಚಾರವನ್ನು ತಮ್ಮ ಗಮನಕ್ಕೆ ತರಬೇಕು ಎಂದು ಇದ್ದೇನೆ. ಆ ವಿಚಾರವಿಷ್ಟೆ...

Mr. DEPUTY SPEAKER.—I want to know under what rule the member wants to raise this matter? Is it that he wants to raise discussion on his adjournment motion?

ಶ್ರೀ ಎಸ್. ಶಿವಪ್ಪ.—ಚನ್ನರಾಯಪಟ್ಟಣ ತಾಲ್ಲೂಕು ನುಗ್ಗೆನಹಳ್ಳಿಯ ಒರ್ವಯುವಕರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಮುಂಚೆ ಈ ದೇಶದ ಮುಖ್ಯ ಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಇದು ಬಹಳ ಗಹನವಾದ ವಿಚಾರ, ಮಹತ್ತರವಾದ ವಿಚಾರ......

Mr. DEPUTY SPEAKER.—There are ways of doing it; and the member knows them. Adjournment Motion has been disallowed and he has been intimated about it by the Speaker.

ಶ್ರೀ ಎಸ್. ಶಿವಪ್ಪ.—ದಯವಿಟ್ಟು ತಮ್ಮ ಸಹನೆಯ ಔದಾರ್ಯವನ್ನು ತೋರಿಸಬೇಕು ಅಜರ್ನ್‌ಮೆಂಟ್ ಮೋಷನ್ ವಿಚಾರ ಬೇರೆ ಒಂದು. ನಾನು ಈಗ ಮಾತನಾಡುತ್ತಿರುವುದು ಮೊನ್ನೆಯ ದಿನ ನಾನು ಮಾತನಾಡುತ್ತ ಒಂದು ವಿಚಾರವನ್ನು ಸಭೆಯ ಗಮನಕ್ಕೆ ತಂದು ಅದಕ್ಕೆ ಸರ್ಕಾರದ ವತಿಯಿಂದ ಉತ್ತರವನ್ನು ಅಪೇಕ್ಷಿಸಿದೆ. ಅದಕ್ಕೆ ಸರ್ಕಾರದವತಿಯಿಂದ ಉತ್ತರ ಬರಲಿಲ್ಲ. ಅದರ ಮೇಲೆ ಅವಸರದ ಠರಾವನ್ನು ಕೊಟ್ಟಿದ್ದೇನೆ. ಅದರ ಗತಿ ಏನಾಗುತ್ತದೆ ಎನ್ನುವುದು ಗೊತ್ತಿದೆ. ಇದು ಬಹಳ ಮುಖ್ಯವಾದ, ತುರ್ತಾದ ವಿಚಾರ. ಇದರ ಬಗ್ಗೆ ಚರ್ಚೆ ಆಗುವುದಕ್ಕೆ ಅವಕಾಶ ಕೊಡಬೇಕು......

ಉಪಾಧ್ಯಕ್ಷರು.—ನೀವು ಕೊಟ್ಟಿದ್ದ ಸೂಚನೆಯನ್ನು ಅಧ್ಯಕ್ಷರು ತಳ್ಳಿ ಹಾಕಿದ್ದಾರೆ.

ಶ್ರೀ ಎಸ್. ಶಿವಪ್ಪ.—ಅಡ್ಜರ್ನ್‌ಮೆಂಟ್ ಮೋಷನ್ ತಳ್ಳಿ ಹಾಕಿದ್ದಾರೆ. ಆದಾಯಿತು. ಈಗ ಬೇರೆ ರೂಪದಲ್ಲಿ ನಾನು ಅದನ್ನು ಕೇಳುತ್ತಿದ್ದೇನೆ......

ಉಪಾಧ್ಯಕ್ಷರು.—ಆ ರೂಪದಲ್ಲಿ ಬರಲಿ, ನೋಡೋಣ, ಈಗ ಬೇಡ.

ಶ್ರೀ ಎಸ್. ಶಿವಪ್ಪ.—ಅದನ್ನೇ ನಾನು ಈಗ ಹೇಳುತ್ತಿರುವುದು. ಪರಿಸ್ಥಿತಿ ಹೀಗಿರುವಾಗ ಇಂಥ ವಿಷಯವನ್ನು ಬಿಟ್ಟು ಬೇರೆ ವಿಷಯವನ್ನು ಹೇಗೆ ಚರ್ಚೆ ಮಾಡುತ್ತೀರಿ ಎಂದು ಕೇಳುತ್ತೇನೆ. ಇದಕ್ಕಿಂತಲೂ ತುರ್ತಾದ ವಿಷಯ ದೇಶದಲ್ಲಿ ಮತ್ತೆ ಯಾವುದು ಇದೆ? ದೇಶದಲ್ಲಿ ಒಬ್ಬ ಮನುಷ್ಯ ತನ್ನ ಪ್ರಾಣವನ್ನೇ ಅರ್ಪಣೆ ಮಾಡಿದ್ದಾನೆ, ಅಧಿಕಾರಿಗಳ ಗೂಂಡಾಗಿರಿಯಿಂದ ಅದನ್ನು ಈ ಸಭೆಯಲ್ಲಿ ಹೇಳಬೇಕಾಗಿದೆ.

Mr. DEPUTY SPEAKER.—Order, order.

Sri S. SIVAPPA.—Where is democracy then? Where else can I go and seek shelter?

Mr. DEPUTY SPEAKER.—Since it is a serious matter, the Hon'ble Memer wants to know the ways of discussing it. The House has framed Rules and under the Rules provision is made to bring this for discussion. If one Motion is disallowed, there are other ways of doing it and he can do it.

† **Sri C. J. MUCKANNAPPA.**—Sir, two days back the Hon'ble the Speaker permitted the Leader of the Opposition to intervene in the Miscellaneous Demand and raise this issue though it was not a proper occasion. I requested the Hon'ble Chair then to find out the reactions of the Government, to find out whether they will come forward with a reply. I am not questioning your decision not to permit the adjournment motion to be moved. What are the other occasions open to us to raise this issue; there is no occasion to discuss it on the Police Demand or the General Administration. Then, what is the occasion you are going to provide us to ventilate our grievances or express our opinions on this issue? If you can tell us, I will be satisfied.

Sri R. M. PATIL (Minister for Home).—With your permission, Sir, I may submit that there is a calling attention motion. It has to be answered on the 31st. I have intimated this fact to the Legislature Secretariat.

Sri C. J. MUCKANNAPPA.—There are several conventions and precedents that this Hon'ble House is adopting and following.

Mr. DEPUTY SPEAKER.—The Hon'ble Member wanted to know how it should be brought. The answer there is the calling attention motion and the matter will be brought here.

Sri C. J. MUCKANNAPPA.—Even the Speaker is threatened by the Government. When that is so, what is the security the Hon'ble Chair is going to give me ?

Sri G. V. GOWDA.—When the answer is given, whether it is convincing or not, we have to keep quiet. There is no other scope further clarifications.

Mr. DEPUTY SPEAKER.—As a lawyer, the Hon'ble Member knows there are so many ways of doing it. The next item on the agenda.

——————.

PAPERS LAID ON THE TABLE.

Sri K. PUTTASWAMY.—Sir, I beg to lay—

Notification No. PLM 11 MLR 64, dated 5th March, 1965. The Mysore Municipalities (Election of Councillors) Rules, 1965, as required under Section 323 (6) of the Mysore Municipalities Act, 1964.

(Continuous interruptions by Opposition Members)

Mr. DEPUTY SPEAKER.—Order, order. Hon'ble Members cannot insist on raising it now only ; that is not right.

ಶ್ರೀ ಎಸ್. ಶಿವಪ್ಪ.—ನಾನು ಹೇಳುತ್ತಿರುವುದು ಬಹಳ ಪ್ರಾಮುಖ್ಯವಾದ ವಿಚಾರ. ಈ ವಿಚಾರದಲ್ಲಿ ಸರ್ಕಾರದಿಂದ ಇದುವರೆಗೂ ಉತ್ತರ ಬರಲಿಲ್ಲ.

Mr. DEPUTY SPEAKER.—We are all bound by the rules ; I do not think the Leader of the Opposition is above the rules. Let him refer the rule under which it can be taken up now itself ?

ಶ್ರೀ ಎಸ್. ಶಿವಪ್ಪ.—ನಿನ್ನೆಯ ದಿನ ನಮ್ಮ ಸಭೆಯ ಕಾರ್ಯಕಲಾಪಗಳ ನಡೆವಳಿಕೆಗಳಲ್ಲಿ ಇಲ್ಲದೇ ಇರತಕ್ಕ ಒಂದು ಕಮಿಟಿಯನ್ನು ಮಾಡಿದ್ದಾರೆ. ಇದನ್ನು ಯಾವ ರೂಲ್ಸ್ ಪ್ರಕಾರ ಮಾಡಿದ್ದಾರೋ ಗೊತ್ತಿಲ್ಲ.

Mr. DEPUTY SPEAKER.—Is the Leader of the Opposition challenging the Chair ? He cannot do it ; it is not proper.

ಶ್ರೀ ಎಸ್. ಶಿವಪ್ಪ.—ಈ ಸರ್ಕಾರದವರು ವಿರೋಧ ಪಕ್ಷದ ಹಿತಕ್ಕೆ ಧಕ್ಕೆ ತರುವಂತಹ ರೀತಿಯಲ್ಲಿ ರೂಲ್ಸ್‌ಗಳನ್ನು ಮಾಡಿ ಬೇರೊಂದು ಕಮಿಟಿಯನ್ನು ಮಾಡಿದ್ದಾರೆ. ವಿರೋಧ ಪಕ್ಷ ಸ್ಥಾಪನೆಗೆ ಅವಕಾಶ ನಮ್ಮ ಸಭೆಯ ಕಾರ್ಯಕಲಾಪಗಳ ನಡೆವಳಿಕೆಗಳಲ್ಲಿ ಇರಕೂಡದೆಂದು ಅಲ್ಲ ಒಂದು ಕಮಿಟಿಯನ್ನು ಮಾಡಿದ್ದಾರೆ. ಈ ವಿಚಾರ ಅದಕ್ಕಿಂತಲೂ ಗುರುತರವಾದುದು. ಇಂತಹ ಸಂದರ್ಭದಲ್ಲಿ ತಮ್ಮ ವಿಶೇಷ ಅಧಿಕಾರವನ್ನು ದಯುವಿಟ್ಟು ಚಲಾಯಿಸಿ.

Mr. DEPUTY SPEAKER.—It is not the Chair but it is the House that has done it. If the Hon'ble Member speaks against the dignity of he House, I will have to take action.

Sri S. SIVAPPA.—If we want to maintain the dignity of the House, then that matter must be discussed. Otherwise, where is the dignity and decorum of the House? Is that not a more important matter? It involves the Law and order position of the State.

Mr. DEPUTY SPEAKER.—Order, order.

Sri K. PUTTASWAMY.—I raise a point of order, Sir.

Sri S. SIVAPPA.—We want to maintain the decorum of the House and uphold democracy. If you do not allow me to raise this very vital question, democracy and law and order are at stake. If you do not permit me to raise this question and if the Government does not want to give us a proper answer, as a protest we stage a walk out.

(The entire Opposition walked-out)

(Sri Muckannappa rose to speak.)

Sri K. PUTTASWAMY.—I rise to a point of order, Sir.

Mr. DEPUTY SPEAKER.—The Hon'ble Minister wants to raise a point of order.

Sri C. J MUCKANNAPPA.—Let wisdom dawn on the Ministers.

(He then walked-out)

Sri K. PUTTASWAMY.—Now that the Hon'ble Members who are interested in maintaining the dignity of this House more than the Members on this side are not here, I do not press my point of order.

Mr. DEPUTY SPEAKER.—The Hon'ble Minister may lay the notifications on the Table of the House.

Sri K. PUTTASWAMY.—I have already laid one notification. I shall lay the other.

Sir, I beg to lay Notification No. PLM 12 MLR 64, dated 5th March, 1965. [The Mysore Municipalities (President and Vice-President) Election Rules, 1965] as required under sub-section (6) of Section 323 of the Mysore Municipalities Act, 1964.

MOTION TO ELECT MEMBERS TO THE SENATE OF BANGALORE UNIVERSITY

Elections

Sri B. D. JATTI (Minister for Finance).—Sir, I beg to move:

"That this Assembly do proceed to elect six members to the Senate of the Bangalore University, according to the principle of proportional representation by means of the single transferable vote as required under item (i), clause II, of sub-section (1) of Section 18 of the Bangalore Univesity Act."

Mr. DEPUTY SPEAKER.—The question is:

"That this Assembly do proceed to elect six members to the Senate of the Bangalore University, according to the principle of proportional representation by means of the single transferable vote as required under item (i), clause II of sub-section (1) of Section 18 of the Bangalore University Act."

The Motion was adopted

Mr. SPEAKER.—Calendar of Events will be circulated separetely.

MOTION TO ELECT MEMBERS TO THE COMMITTEE OF PRIVILEGES

Sri B. D. JATTI.—Sir, I beg to move—

"That this Assembly do proceed to elect seven members to the Committee of Privileges in accordance with sub-rule (1) of Rule 257 of the Rules of Procedure and Conduct of Business in the Mysore Legislative Assembly."

Mr. DEPUTY SPEAKER.—The question is:

"That this Assembly do proceed to elect seven members to the Committee of Privileges in accordance with sub-rule (1) of Rule 257 of the Rules of Procedure and Conduct of Business in the Mysore Legislative Assembly."

The motion was adopted.

BUDGET ESTIMATES FOR 1965-66—DEMANDS FOR GRANTS

Demand No. 2—Land Revenue.

Sri M. V. KRISHNAPPA (Minister for Revenue).—Sir, on the recommendation of the Governor of Mysore, I beg to move:

"That a sum not exceeding Rs. 2,11,73,000 be granted to the Government to defray the charges which will come in course of payment during the financial year for the period ending 31st day of March 1966, in respect of 'Land Revenue'."

Mr. DEPUTY SPEAKER.—Motion moved:

"That a sum not exceeding Rs. 2,11,73,000 be granted to the Government to defray the charges which will come in course of payment during the financial year for the period ending 31st day of March 1966, in respect of 'Land Revenue'."

(MR. DEPUTY SPEAKER)

The Demand—Demand Nos. 7,8,15,22,33,42 and 53 are before the House. The House will now rise for tea.

The House adjourned for Recess at Ten of the Clock and reassembled at Thirty Minutes past Ten of the Clock.

[MR. DEPUTY CHAIRMAN in the Chair]

† ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯಮುಂದಿರುವ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ, ಈ ಬೇಡಿಕೆಗಳಿಗೆ ಸಂಬಂಧಪಟ್ಟ ಇಲಾಖೆಗಳು ಏನು ಒಳ್ಳೆಯ ಕೆಲಸಗಳನ್ನು ಮಾಡಿವೆ ಎನ್ನತಕ್ಕಂಥಾದ್ದನ್ನು ಕೃತಜ್ಞತಾ ಪೂರ್ವಕವಾಗಿ ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ನಾನು ಹೇಳುವುದಕ್ಕೆ ಅಪೇಕ್ಷಿಸುತ್ತೇನೆ.

10-00 A.M.

ಇದರಲ್ಲಿ ಮೊಟ್ಟ ಮೊದಲನೆಯದಾಗಿ ಭೂಕಂದಾಯದ ವಿಚಾರದಲ್ಲಿ ಸರ್ಕಾರದವರು ಬಹಳ ಹಿಂದಿನಿಂದಲೂ ಇದ್ದಂತಹ ಲ್ಯಾಂಡ್‌ರೆವಿನ್ಯೂ ಕೋಡನ್ನು ಬದಲಾವಣೆ ಮಾಡಿ ಅದರಲ್ಲಿ ಅನಾವಶ್ಯಕವಾದ ಭಾಗವನ್ನು ತೆಗೆದು ಹಾಕಿ ಇಡೀ ಕರ್ನಾಟಕಕ್ಕೆ ಅನ್ವಯಿಸುವಂತಹ ಒಂದು ಲ್ಯಾಂಡ್ ರೆವಿನ್ಯೂ ಕೋಡನ್ನು ನಮಗೆ ಒದಗಿಸಿಕೊಟ್ಟರು. ಆ ಮೇಲೆ ಬೆಂಗಳೂರಿನಲ್ಲಿ ಹಾಲು ಸರಬರಾಜು ಮಾಡುವುದಕ್ಕೋಸ್ಕರ ಬೆಂಗಳೂರು ಮತ್ತು ಸುತ್ತ ಮುತ್ತ ಇರುವ 50 ಮೈಲಿಗಳ ಪ್ರದೇಶದಿಂದಲೂ ಹಾಲನ್ನು ತೆಗೆದುಕೊಂಡುಬಂದು ಬೆಂಗಳೂರಿನಲ್ಲಿ ಹಾಲನ್ನು ವಿತರಣೆ ಮಾಡತಕ್ಕಂಥ ಒಂದು ಕಾರ್ಯವನ್ನು ಸರ್ಕಾರದವರು ಕೈಗೊಂಡಿದ್ದಾರೆ. ಸರ್ಕಾರದವರು ಇಂಥ ಒಂದು ಬೃಹತ್ ಯೋಜನೆಯನ್ನು ನಡೆಸಿಕೊಂಡು ಬರತಕ್ಕಂಥ ಕಾರ್ಯವನ್ನು ಕೈಗೊಂಡಿರುವುದು ಸ್ತುತ್ಯಾರ್ಹವಾದದ್ದು. ನಮ್ಮ ಸರ್ಕಾರದವರು ಜಾನುವಾರುಗಳ ಸಂರಕ್ಷಣೆಯನ್ನು ಕೂಡ ಬಹಳ ಚೆನ್ನಾಗಿ ಮಾಡಿದ್ದಾರೆ. ಈಗ್ಗೆ ಕೆಲವು ತಿಂಗಳ ಹಿಂದೆ ಬೆಂಗಳೂರಿನಲ್ಲಿ ಉಂಟಾಗಿದ್ದಂತಹ ಜಾನುವಾರುಗಳ ಜಾಡ್ಯವನ್ನು ಬಹಳ ಮಟ್ಟಿಗೆ ಸರ್ಕಾರದವರು ತಡೆ ಹಿಡಿದಿದ್ದಾರೆ. ಹಾಗೆ ಒಂದು ವೇಳೆ ಸರ್ಕಾರದವರು ಮಾಡದೇ ಇದ್ದರೆ ಅಲ್ಪಸ್ವಲ್ಪ ಉಳಿದಿರತಕ್ಕ ಜಾನುವಾರುಗಳೂ ಇಲ್ಲದೆ ತೀರಾ ಕುಗ್ರಾಮ ಬರುತ್ತಿತ್ತು. ಈಗ ನಾವು ಸರ್ಕಾರದವರು ಮಾಡಿರತಕ್ಕ ಕಾರ್ಯವನ್ನು ಸ್ಮರಿಸಬೇಕಾಗಿದೆ.

ಇನ್ನು ಸರ್ವೆ ಇಲಾಖೆಯ ವಿಷಯದಲ್ಲಿ ನಾನು ಕೆಲವು ಸೂಚನೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಇಲಾಖೆ ಜನತೆಗೆ ಒಂದು ತೃಪ್ತಿಯನ್ನು ಉಂಟುಮಾಡಿದೆ. ಸರ್ವೆ ಇಲಾಖೆಯ ಕೆಲಸಕಾರ್ಯಗಳು ತೃಪ್ತಿಕರವಾಗಿ ನಡೆಯುವಂತೆ ಮಾಡಿದ್ದಾರೆ. ಹಾಗೆಯೇ ಆಹಾರದ ವಿಚಾರದಲ್ಲಿ ಜನಗಳು ಅನೇಕ ಕಷ್ಟಗಳನ್ನು ಅನುಭವಿಸುತ್ತಿರುವಾಗ ಬಹಳ ಸೂಕ್ಷ್ಮವಾದ ರೀತಿಯಲ್ಲಿ ಸರ್ಕಾರದವರು ಆಹಾರ ವಿತರಣೆಯ ಕೆಲಸವನ್ನು ಮಾಡಿದ್ದಾರೆ. ಅದನ್ನೂ ಕೂಡ. ನಾವು ಸ್ಮರಿಸಬೇಕಾಗಿದೆ. ಹಾಗೆಯೇ ದೇವಸ್ಥಾನಗಳ ವಿಚಾರದಲ್ಲಿಯೂ ಸಹ ದೇಶಕ್ಕೆ ಕೀರ್ತಿ ಬರತಕ್ಕ ರೀತಿಯಲ್ಲಿ ದೊಡ್ಡ ದೊಡ್ಡ ದೇವಸ್ಥಾನಗಳನ್ನು ಬಹಳ ಆಕರ್ಷಣೀಯವಾದವುಗಳನ್ನಾಗಿ ಮಾಡಿ ಅವುಗಳಿಗೆ ಬೇಕಾದಂತಹ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಸಣ್ಣ ಪುಟ್ಟ ದೇವಸ್ಥಾನಗಳನ್ನೂ ಸಹ ಜೀರ್ಣೋದ್ಧಾರ ಮಾಡಿಸಿದ್ದಾರೆ. ಅವರು ಈ ಏರ್ಪಾಡುಗಳನ್ನು ಮಾಡಿರತಕ್ಕಂಥಾದ್ದು ಬಹಳ ಸ್ತುತ್ಯಾರ್ಹವಾದ ವಿಚಾರ. ಹಾಲಿನ ವಿತರಣೆ, ಹಾಲಿನ ಸರಬರಾಜು ಯೋಜನೆಯನ್ನು ಮಾಡಿರುವುದರಿಂದ ಬೆಂಗಳೂರಿನ ಸುತ್ತಮುತ್ತ ಇರತಕ್ಕ ಪ್ರಾಂತಗಳಲ್ಲಿನ ಜನಗಳಿಗೂ ಅನುಕೂಲವಾಗಿ ಅವರ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಳ್ಳುವುದಕ್ಕೆ ಅವಕಾಶವಾಗಿದೆ; ಮತ್ತು ಬೆಂಗಳೂರು ಪಟ್ಟಣದ ಜನಗಳಿಗೂ ಸಹ ಯಥೇಚ್ಛವಾಗಿ ಹಾಲು ಸಿಕ್ಕುತ್ತಿದೆ. ನಮ್ಮ ಸರ್ಕಾರದವರು ಪಾಶ್ಚಾತ್ಯ ದೇಶಗಳಿಗೆ ಹೋಗಿ ಅಲ್ಲಿ ಯಾವರೀತಿ ಪಶುಪಾಲನೆಯನ್ನು ಮಾಡುತ್ತಾರೆ,

ಹೇಗೆ ಅಲ್ಲಿ ಜನಗಳಿಗೆ ಯಥೇಚ್ಛವಾಗಿ ಹಾಲು ಸಿಕ್ಕುವಂತೆ ಮಾಡಿದ್ದಾರೆ ಎಂಬುದನ್ನೆಲ್ಲಾ ನೋಡಿಕೊಂಡು ಬಂದು ಅದೇ ರೀತಿ ನಮ್ಮ ದೇಶದಲ್ಲಿಯೂ ಸರ್ಕಾರದವರು ಮಾಡಿರತಕ್ಕಂಥಾದ್ದು ಸ್ತುತ್ಯಾರ್ಹವಾದುದು. ಒಟ್ಟಿನಲ್ಲಿ ಸರ್ಕಾರದವರು ಮೈಸೂರು ದೇಶದಲ್ಲಿ ಹಾಲಿನ ಅಭಾವವನ್ನು ಬಹಳ ಮಟ್ಟಿಗೆ ನಿವಾರಣೆ ಮಾಡಿ ದೇಶದಲ್ಲಿ ಸಂಪತ್‌ಸಮೃದ್ಧಿ ಉಂಟಾಗುವಂತೆಯೂ, ಜನಗಳು ಆರೋಗ್ಯವಂತಾಗಿರುವಂತೆಯೂ ಸರ್ಕಾರದವರು ಏರ್ಪಾಡು ಮಾಡಿದ್ದಾರೆಂದು ಹೇಳುವುದಕ್ಕೆ ಅವಕಾಶವಿದೆ.

ಇನ್ನು ಆಹಾರದ ವಿಚಾರದಲ್ಲಿ ಈ ಇಲಾಖೆಯವರು ಕಾಲಕ್ರಮವಾಗಿ ತೆಗೆದುಕೊಂಡು ಅದರ ಆಡಳಿತ ಕ್ರಮ ಬಹಳ ಸಮರ್ಪಕವಾಗಿ ಆಯಿತು ಎಂದು ನಾನಾದರೂ ಹೇಳಬಯಸುತ್ತೇನೆ. ಅದೂ ಅಲ್ಲದೆ ಈ ದೇಶದಲ್ಲಿ 5 ಮಹಾಕ್ಷೇತ್ರಗಳನ್ನು ಪುನರ್‌ವಿಂಗಡಣೆ ಮಾಡಿ ಅಲ್ಲಿ ಬರುತ್ತಾ ಇದ್ದಂತಹ ವರಮಾನವನ್ನು ದ್ವಿಗುಣವಾಗಿ ಬರುವಂತೆ ಮಾಡಿದ್ದಾರೆ. ಅನೇಕ ರೂಪಗಳಲ್ಲಿ ಅವು ಹೆಚ್ಚಿಗೆ ಬೆಳೆಯುವಂತೆ ಮಾಡಿರತಕ್ಕದ್ದೂ ಅಲ್ಲದೆ ಹಣ ಸರಿಯಾದ ರೀತಿಯಲ್ಲಿ ವಿತರಣೆಯಾಗುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ತಿರುಪತಿಯಲ್ಲಿ ಬರತಕ್ಕ ಹಣವನ್ನು ಯಾವ ರೀತಿ ವಿದ್ಯಾಭ್ಯಾಸ ಮತ್ತು ಇತರ ಸಮಾಜ ಕಲ್ಯಾಣಕ್ಕಾಗಿ ಉಪಯೋಗಿಸುತ್ತಿದ್ದಾರೆಯೋ ಹಾಗೆಯೇ ನಮ್ಮ ದೇಶದಲ್ಲಿರತಕ್ಕ ದೇವಸ್ಥಾನಗಳ ವರಮಾನವನ್ನು ಒಂದು ಉತ್ತಮವಾದ ರೀತಿಯಲ್ಲಿ ಉಪಯೋಗಿಸುವುದಕ್ಕೆ ಸರ್ಕಾರದವರು ಹೆಚ್ಚಿನ ನಿಗಾ ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಮಹದೇಶ್ವರ ಬೆಟ್ಟದಲ್ಲಿ ಮಾಡಿರತಕ್ಕ ಸುಧಾರಣೆಯನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಅಲ್ಲಿಗೆ ಜನಗಳು ಹೋಗಿ ದೇವಸ್ಥಾನದಲ್ಲಿ ದೇವರ ದರ್ಶನವನ್ನು ಮಾಡಿಕೊಂಡು ಬರಬೇಕಾಗಿದ್ದರೆ ಬಹಳ ಕಷ್ಟವಾಗುತ್ತಿತ್ತು. ಈಗ ಆ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕೋಸ್ಕರ ಸರ್ಕಾರದವರು ಬಹಳ ಪ್ರಯತ್ನ ಮಾಡಿದ್ದಾರೆ. ಅಲ್ಲಿ ರಸ್ತೆ, ದೀಪ, ನಲ್ಲಿ ಮುಖಾಂತರ ನೀರನ್ನು ಒದಗಿಸುವುದು ಮುಂತಾದ ವ್ಯವಸ್ಥೆಯನ್ನು ಮಾಡಿರತಕ್ಕದ್ದಲ್ಲದೆ ಅಂಥಾ ಒಂದು ಕಾಡು ಪ್ರದೇಶದಲ್ಲಿಯೂ ಒಂದು ಪ್ರೌಢ ಶಾಲೆಯನ್ನು ಸ್ಥಾಪಿಸಿರತಕ್ಕದ್ದು ಅತ್ಯಂತ ಸ್ತುತ್ಯಾರ್ಹವಾದದ್ದು. ಈಗ 10 ವರ್ಷಗಳಿಂದೀಚೆಗೆ ಸರ್ಕಾರದವರು ಎಷ್ಟರಮಟ್ಟಿಗೆ ಕೆಲಸವನ್ನು ಮಾಡಿದ್ದಾರೆ ಎಂಬುದನ್ನು ಯೋಚನೆ ಮಾಡುವುದಾದರೆ ನಿಜವಾಗಿಯೂ ಕೂಡ ದೇಶಕ್ಕೆ ಒಂದು ಕೀರ್ತಿಯನ್ನು ತರತಕ್ಕ ಕೆಲಸ ಕಾರ್ಯಗಳನ್ನು ಸರ್ಕಾರದವರು ಮಾಡಿದ್ದಾರೆ. ಇನ್ನೂ ನಮ್ಮ ದೇಶದಲ್ಲಿರತಕ್ಕ ಅನೇಕ ಯಾತ್ರಾಸ್ಥಳಗಳನ್ನು ಅದೇ ರೀತಿ ಸರ್ಕಾರದವರು ಮಾಡುತ್ತಾರೆಂದು ನಾನು ನಂಬಿದ್ದೇನೆ. ಅದರಿಂದ ಇನ್ನೂ ಹೆಚ್ಚಿಗೆ ಬರತಕ್ಕ ವರಮಾನವನ್ನು ವಿದ್ಯಾಭ್ಯಾಸಕ್ಕಾಗಿ ಮತ್ತು ಸಮಾಜ ಕಲ್ಯಾಣ ಕಾರ್ಯಗಳಿಗಾಗಿ ಉಪಯೋಗವಾಗತಕ್ಕ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡುತ್ತಾರೆಂದು ನಾನಾದರೂ ಭಾವಿಸುತ್ತೇನೆ.

ಇನ್ನು ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ನಾನು ಆಪೇಕ್ಷಿಸುತ್ತೇವೆ. ತಾಲ್ಲೂಕು ಕಛೇರಿಗಳಲ್ಲಿ, ಸಬ್‌ಡಿವಿಜನ್ ಆಫೀಸುಗಳಲ್ಲಿ ಜನಗಳಿಂದ ಹೋಗತಕ್ಕ ಕಾಗದ ಪತ್ರಗಳು ನಾವು ನಿರೀಕ್ಷಿಸಿದಷ್ಟು ಮಟ್ಟದಲ್ಲಿ ವಿಲೇವಾರಿ ಆಗುತ್ತಿಲ್ಲ. ಅಲ್ಲಿ ಕಾಗದಪತ್ರಗಳ ವಿಲೇವಾರಿ ನಿಧಾನವಾಗುತ್ತಾ ಇದೆ. ಆದ್ದರಿಂದ ಸರ್ಕಾರದವರು ಅದನ್ನು ಜಾಗ್ರತೆಯಾಗಿ ಮನವರಿಕೆ ಮಾಡಿಕೊಂಡು ಕಾಗದ ಪತ್ರಗಳ ವಿಲೇವಾರಿಯಲ್ಲಿ ಆಗತಕ್ಕ ನಿಧಾನವನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕು. ನನಗೆ ಅನೇಕ ವೇಳೆ ಅನಿಸುತ್ತದೆ ತಾಲ್ಲೂಕು ಆಫೀಸುಗಳಲ್ಲಿ ಮತ್ತು ಸಬ್‌ಡಿವಿಜನ್ ಆಫೀಸುಗಳಲ್ಲಿ ಅಲ್ಲಿರತಕ್ಕ ಅಧಿಕಾರಿಗಳಿಗೆ ಬರಗತಕ್ಕ ಪೇಪರುಗಳನ್ನು ನೋಡುವುದಕ್ಕೆ ಅವಕಾಶವಿಲ್ಲವೋ ಏನೋ ಎಂದು. ಸಾಧಾರಣವಾಗಿ ಅಲ್ಲಿ ಕಾಗದಗಳನ್ನು ಗುಮಾಸ್ತರು ಮೇಲಕ್ಕೂ ಕೆಳಕ್ಕೂ ಓಡಾಡಿಸುತ್ತಿರುತ್ತಾರೆ. ಅದು ತಪ್ಪಬೇಕು. ಗುಮಾಸ್ತರು ಇಷ್ಟು ದಿವಸಗಳಿಗೆ ಮೇಲ್ಪಟ್ಟು ಒಂದು ಪೇಪರನ್ನು ಇಟ್ಟುಕೊಳ್ಳಕೂಡದು ಎಂದು ನಿಗದಿ ಮಾಡಬೇಕು. ಗುಮಾಸ್ತರು ಆದಷ್ಟು ಜಾಗ್ರತೆಯಾಗಿ ಅಧಿಕಾರಿಗಳಿಗೆ ಹೋಗತಕ್ಕ ಕಾಗದಗಳಿಗೆ ಮತ್ತು ಫೈಲುಗಳಿಗೆ ನೋಟನ್ನು ತಯಾರು ಮಾಡಬೇಕು. ಗುಮಾಸ್ತರು ಸುಮ್ಮನೆ ಪೇಪರುಗಳಿಗೆ ಕ್ವೈರಿ ಹಾಕಿ ಅವುಗಳನ್ನು ಮೇಲಕ್ಕೂ ಕೆಳಕ್ಕೂ ಓಡಾಡುವುದು ತಪ್ಪಬೇಕು. ಅನೇಕ ಜನಗಳು ಸುಮ್ಮನೆ ಅನೇಕ ಸಾರಿ ಕಚೇರಿಗಳಿಗೆ ಓಡಾಡುತ್ತಿರುತ್ತಾರೆ. ಆದರೆ ಅವರಿಗೆ ಯಾವ ಸೌಕರ್ಯವೂ ದೊರೆಯುತ್ತಾ ಇಲ್ಲ. ತಾಲ್ಲೂಕು ಆಫೀಸಿಗಾಗಲೀ ಸಬ್ ಡಿವಿಜನ್ ಆಫೀಸಿಗಾಗಲೀ ಅಥವಾ ಡಿಸ್ಟ್ರಿಕ್ಟ್ ಆಫೀಸಿಗಾಗಲೀ ಯಾವುದಾದರೂ ಒಂದು ಕಾಗದ ಹೋದರೆ ಅದನ್ನು ಇಷ್ಟು ದಿವಸಗಳೊಳಗಾಗಿ work-up ಮಾಡಬೇಕೆಂದು ಅದಕ್ಕೆ ಒಂದು ಕಾಲವನ್ನು ನಿಗದಿ ಮಾಡಬೇಕು. ಅಷ್ಟು ದಿವಸಗಳಲ್ಲಿ ಅದನ್ನು work-up ಮಾಡದೇ ಇದ್ದರೆ ಏತಕ್ಕೋಸ್ಕರ ಆ ಪೇಪರನ್ನು work-up ಮಾಡಲಿಲ್ಲ ಎಂದು ಅಧಿಕಾರಿಗಳು ಅದಕ್ಕೆ ಸಂಬಂಧಪಟ್ಟವರನ್ನು ವಿಚಾರಣೆ ಮಾಡಬೇಕು. ಯಾವ ದುರುದ್ದೇಶವನ್ನು

(ಶ್ರೀ ಟಿ. ಮಾದಯ್ಯಗೌಡ)

ಇಟ್ಟುಕೊಂಡು ಗುಮಾಸ್ತರು ಆ ಪೇಪರನ್ನು work-up ಮಾಡದೆ ಹಾಗೆಯೇ ಇಟ್ಟುಕೊಂಡಿದ್ದಾರೆ ಎನ್ನತಕ್ಕದ್ದನ್ನು ವಿಚಾರಣೆ ಮಾಡಿದರೆ ಬಹಳ ಮಟ್ಟಿಗೆ ಜನಗಳಿಗೆ ಇರತಕ್ಕ ತೊಂದರೆ ನೀಗುತ್ತದೆ ಎಂದು ನಾನು ಹೇಳಬಯಸುತ್ತೇನೆ. ಅಲ್ಲದೆ ಅನೇಕ ವೇಳೆ ನಾವು ಅಭಿಪ್ರಾಯ ಪಟ್ಟಿದ್ದೇವೆ. ಮೇಲಿನ ಅಧಿಕಾರಿಗಳು, ಮಂತ್ರಿಗಳೂ ಸಹ, ಅನಿರೀಕ್ಷಿತವಾದಂಥ ಭೇಟಿಗಳನ್ನು ಆಫೀಸುಗಳಿಗೆ ಕೊಟ್ಟರೆ ಬಹುಮಟ್ಟಿಗೆ ಕಾಗದಗಳು ಜಾಗ್ರತೆ ವಿಲೆ ಆಗುವುದಕ್ಕೆ ಅವಕಾಶವಾಗುತ್ತದೆ. ಇದನ್ನು ನಾನು ಕಳಕಳಿಯಿಂದ ಮಂತ್ರಿಗಳಿಗೂ ತಿಳಿಸುವುದಲ್ಲದೆ, ಮಂತ್ರಿಗಳು ಮೇಲ್ಪಟ್ಟ ಅಧಿಕಾರಿಗಳು ವಿಚಕ್ಷಣೆಯಿಂದ ಅನಿರೀಕ್ಷಿತ ಭೇಟಿ ಕೊಡುವ ವಿಚಾರದಲ್ಲಿ ಒಂದು 'ನಿಗದಿ ಮಾಡಬೇಕು ಎಂದು ತಿಳಿಸಲು ಅಪೇಕ್ಷೆ ಪಡುತ್ತೇನೆ.

ತಾಲ್ಲೂಕು ಆಫೀಸುಗಳಲ್ಲಿ ರೆಕಾರ್ಡ್ ಆಫ್ ರೈಟ್ಸ್ ಕೆಲಸ ಸಾಂಗವಾಗಿ ನಡೆಯುತ್ತಾ ಇಲ್ಲ. ಇದರಿಂದ ಜನಗಳಿಗೆ ಆಗುತ್ತಾ ಇರತಕ್ಕಂಥ ಒಂದು ದೊಡ್ಡ ತೊಂದರೆಯನ್ನು ಸರ್ಕಾರದವರು ಮನಗಾಣಬೇಕು. ಸಬ್ ರಿಜಿಸ್ಟ್ರಾರ್ ಆಫೀಸಿನಿಂದ ಬರತಕ್ಕಂಥ ಸ್ಲಿಪ್ಪುಗಳನ್ನು ಅಥವ ಶಾನುಭೋಗರು ಕೊಡತಕ್ಕಂಥ ಬದಲಾವಣೆ ಪಟ್ಟಿಯನ್ನು ನೋಡಿ, ಆದಷ್ಟು ಜಾಗ್ರತೆ ಮ್ಯುಟೇಷನ್ ರಿಜಿಸ್ಟರಿನಲ್ಲಿ ಬದಲಾವಣೆ ಮಾಡದೆ ಹೋದರೆ, ಜನರು ಸಾಲ ಮುಂತಾದ ಸೌಕರ್ಯಗಳನ್ನು ಪಡೆಯುವುದಕ್ಕೆ ಅನಾನುಕೂಲವಾಗುತ್ತದೆ. ಅಲ್ಲದೆ ಕೋರ್ಟುಗಳಲ್ಲಿ ದಾವಾ ಹಾಕಬೇಕಾದರೆ ಕಾಪಿಗಳನ್ನು ಹಾಜರು ಮಾಡಬೇಕು; ಅದನ್ನು ಹಾಜರು ಮಾಡುವುದಕ್ಕೆ ಅವಕಾಶವಿಲ್ಲದೆ ಅನೇಕ ಸಂದರ್ಭಗಳಲ್ಲಿ ಕಕ್ಷಿದಾರರಿಗೆ ತೊಂದರೆಯಾಗುತ್ತದೆ. ಅದನ್ನು ನಿವಾರಣೆ ಮಾಡಬೇಕು, ಒಂದೊಂದು ತಾಲ್ಲೂಕಿನಲ್ಲಿ 1—2—3 ಸಾವಿರ ಕೇಸುಗಳು, ವರ್ಷಾನುಗಟ್ಲೆ ಮ್ಯುಟೇಶನ್ ಆಗಿಲ್ಲ, ಆಗುತ್ತಾ ಇಲ್ಲವೆಂದರೆ, ನಿಜವಾಗಿಯೂ ನಿಮಗೆ ಗೌರವ ತರತಕ್ಕಂಥ ವಿಚಾರವಲ್ಲ. ಅದರಲ್ಲಿ ತೊಂದರೆಗಳು ಏನು? ಗುಮಾಸ್ತರು ಸಾಲದೆ ಅಥವ ಇನ್ನು ಬೇರೆ ಏನಾದರೂ ತೊಂದರೆ ಇದೆಯೇ ಅನ್ನುವುದನ್ನು ಸರ್ಕಾರದವರು ಆಲೋಚನೆ ಮಾಡಬೇಕು. ಎಲ್ಲಾ ತಾಲ್ಲೂಕುಗಳಲ್ಲಿಯೂ ಹೀಗಿದೆಯೋ ಇಲ್ಲವೋ ಗೊತ್ತಿಲ್ಲ. ಕೆಲವು ತಾಲ್ಲೂಕುಗಳಲ್ಲಿ ಜನಕ್ಕೆ ಕೊಟ್ಟಿರತಕ್ಕಂಥ ಜಮೀನುಗಳ ಪೋಡು ಎಷ್ಟು ವರ್ಷಗಳಾದರೂ ಕೂಡ ಆಗಿಲ್ಲ. 20—30 ವರ್ಷದಿಂದ ಏನೊಂದು ಕಚ್ಚಾಪ್ಲಾನ್ ಮೇಲೆ ಜನಗಳಿಗೆ ಜಮೀನು ಕೊಟ್ಟಿದ್ದಾರೆ, ಆ ಕಚ್ಚಾ ಪ್ಲಾನುಗಳ ಮೇಲೆಯೇ ಎಷ್ಟು ಜನ ಅನುಭವಿಸುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಒಂದಕ್ಕೆ, ಎರಡರಷ್ಟು, ಮೂರರಷ್ಟು ಜಮೀನುಗಳನ್ನು ಒತ್ತುವರಿ ಮಾಡಿಕೊಂಡು ಅನುಭವಿಸುತ್ತಾ ಇರುತ್ತಾರೆ. ಅವೇ ಜಮೀನನ್ನು ಸರಿಯಾದ, ಪಕ್ಕಾ ಪೋಡು ಇಲ್ಲದೆ, ರೆವಿನ್ಯು ಇಲಾಖೆಯವರು ಬೇರೆಯವರಿಗೆ ವಿಲೆ ಮಾಡಿದರೆ, ಬೇರೆಯವರು ತೆಗೆದುಕೊಂಡಿರತಕ್ಕ ಜಮೀನು, ಅದು ನಿಮ್ಮ ಜಮೀನು ಅಲ್ಲ ಎಂದು ಹೇಳಿ ಅನೇಕ ವಿಧವಾದ ವ್ಯಾಜ್ಯ ಸಾಜ್ಯಗಳಿಗೆ ಅವಕಾಶ ಮಾಡಿಕೊಡುತ್ತದೆ. ಇದು ನಿವಾರಣೆಯಾಗಬೇಕಾದರೆ, ಏನು ಜಮೀನು ನೀವು ವಿಲೆ ಮಾಡಿ ಕೊಟ್ಟ ಹಾಗೂ, ಅದನ್ನು ಆದಷ್ಟು ಜಾಗ್ರತೆ ಪಕ್ಕಾ ಪೋಡ್ ಮಾಡಿ, ಕೂಡಲೆ ಕಲ್ಲುಬಂದುಗಳನ್ನು ಹಾಕಿ ಗೊತ್ತುಮಾಡಿ ಕೊಡುವುದು ಸೂಕ್ತವೆಂದು ಹೇಳುತ್ತೇವೆ. ಹಿಂದಿನಿಂದಲೂ 20-30 ವರ್ಷಗಳಿಂದ ಏನು ಜಮೀನುಗಳ ಪಕ್ಕಾ ಪೋಡು ಆಗಿಲ್ಲವೋ ಅದನ್ನು ಮಾಡಿಸಿಕೊಡಲು ಸರ್ಕಾರದವರು ಪ್ರಯತ್ನ ಮಾಡಬೇಕು. ರೆವಿನ್ಯೂ ಇಲಾಖೆಯವರು ಜಮಾಬಂದಿ ಮಾಡತಕ್ಕಂಥ ರೀತಿ ಸಮರ್ಪಕವಾಗಿಲ್ಲ. ಪೂರ್ವದಲ್ಲಿ ನಾವು ನೋಡುತ್ತಾ ಇದ್ದೆವು. ಜಮಾಬಂದಿಗೆ ಅಧಿಕಾರಿಗಳು ಹೋದರು ಅಂದರೆ, ಯಾವ ಗ್ರಾಮದ ಜಮಾಬಂದಿ ಯಾವ ದಿವಸ ಮಾಡುತ್ತಾರೋ ಆ ಗ್ರಾಮದ ವಿಶಿಷ್ಟ ವಿಚಾರಗಳನ್ನು ಅವರು ತಿಳಿದುಕೊಳ್ಳುತ್ತಿದ್ದರು. ಕೆರೆನಾದುರಸ್ತಿಯಾಗಿದೆಯೆ, ಕುಡಿಯುವ ನೀರಿನ ಬಾವಿ ಇದೆಯೆ, ಸ್ಕೂಲು ಇದೆಯೆ, ಜನಗಳಿಗೆ ಸೌಲಭ್ಯವಿದೆಯೆ, ಏನು ಬೆಳೆ ಜನ ಇಟ್ಟಿದ್ದಾರೆ, ಏನು ಕಷ್ಟ ಏನು ಸುಖ ಎಂದು ವಿಚಾರ ಮಾಡುತ್ತಾ ಇದ್ದರು. ಈಗಿನ ಜಮಾಬಂದಿ ಸರ್ವಸಾಧಾರಣವಾಗಿ ಶಾನುಭೋಗರು ಬರೆದಿರತಕ್ಕಂಥ ಲೆಕ್ಕಗಳಿಗೆ ರುಜು ಮಾಡಿಬಿಟ್ಟರೆ ಆ ಊರಿನ ಜಮಾಬಂದಿ ತೀರಿಹೋಯಿತು ಎಂಬ ಒಂದು ಭಾವನೆ ಇದ್ದಹಾಗೆ ಇದೆ. ಹಿಂದೆ ಜಮಾಬಂದಿ ದಿವಸ ಗ್ರಾಮಸ್ಥರು ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳುವುದಕ್ಕೆ, ಅರ್ಜಿಗಳನ್ನು ಕೊಡುವುದಕ್ಕೆ ಒಂದು ಸೌಕರ್ಯವಿತ್ತು. ಜಮಾಬಂದಿ ಸಮಯದಲ್ಲಿ ಕೊಡುವ ಅರ್ಜಿಗಳಿಗೆ ಸ್ಟಾಂಪ್ ಇರುತ್ತಾ ಇರಲಿಲ್ಲ. ಈಗ ನಡೆಯುತ್ತಿರುವ ಜಮಾಬಂದಿಯಿಂದ, ಪೂರ್ವ ಜಮಾಬಂದಿ ರೀತಿಯಲ್ಲಿ ಜನಗಳಿಗೆ ಸುಖವಿಲ್ಲ. ಲೆಕ್ಕಪತ್ರಗಳಿಗೆ ರುಜು ಮಾಡಬೇಕಾಗಿದ್ದರೆ, ಜಮಾಬಂದಿ ಎಂದು ದೊಡ್ಡ ಹೆಸರು ಇಟ್ಟುಕೊಂಡು ಮಾಡಬೇಕಾದ ಅಗತ್ಯವಿಲ್ಲ. ಹೆಸರು ಜಮಾಬಂದಿ, ಆಗತಕ್ಕಂಥಾದ್ದು ಅನೇಕ ಸಂದರ್ಭಗಳಲ್ಲಿ, 2 ದಿವಸ 3 ದಿವಸ ಒಂದು ತಾಲ್ಲೂಕಿಗೆ ಆಗುತ್ತಾ ಇರತಕ್ಕಂಥಾದ್ದು,

ಒಂದು ಗಂಟೆ, ಎರಡು ಗಂಟೆ ಒಳಗೆ ಪೂರೈಸಿಬಿಟ್ಟು, ಲೆಕ್ಕಪತ್ರಗಳಿಗೆ ರುಜುಮಾಡಿ ಬರತಕ್ಕಂಥಾದ್ದು ಇದು ಜಮಾಬಂದಿ ಅನ್ನಿಸಿಕೊಳ್ಳಲಾರದು. ಅದನ್ನು ಪೂರ್ವದ ರೀತಿಯಲ್ಲಿ ಜನಗಳ ಹಿತದೃಷ್ಟಿಯಿಂದ ಸರಿಯಾಗಿ ವ್ಯವಸ್ಥೆ ಮಾಡುವುದು ಒಳ್ಳೆಯದೆಂದು ನಾನು ಭಾವಿಸುತ್ತೇನೆ.

Sri M. V. KRISHNAPPA.—Point of order. An Hon'ble Member is sitting in the Press Gallery. ಶ್ರೀ ರೇವಣಸಿದ್ದಪ್ಪನವರು ಪ್ರೆಸ್ ಗ್ಯಾಲರಿಯಲ್ಲಿ ಬಂದು ಕುಳಿತಿದ್ದರು.

ಶ್ರೀ ಟಿ. ಮಾದಯ್ಯಗೌಡ.—ರೆವಿನ್ಯೂ ಅಧಿಕಾರಿಗಳು ಮೊಕದ್ದಮೆಗಳನ್ನು ಇತ್ಯರ್ಥ ಮಾಡತಕ್ಕಂಥ ರೀತಿಯೊಳಗೆ ಆದಷ್ಟು ಬದಲಾವಣೆಯಾಗತಕ್ಕದ್ದು ಅಗತ್ಯ. ಒಂದೊಂದು ರೆವಿನ್ಯೂ ಕೇಸನ್ನು ವರ್ಷಾನುಗಟ್ಟಲೆ ಇಟ್ಟುಕೊಂಡು ನಡೆಸತಕ್ಕಂಥಾದ್ದು ಸೂಕ್ತವಾಗುವುದಿಲ್ಲ. ಅದರಲ್ಲಿಯೂ ಕೂಡ ಪಾರ್ಟಿಗಳನ್ನು ಬರಮಾಡಿಕೊಂಡು, ಅಡ್‌ಜರ್ನ್ ಮಾಡಿಕೊಂಡು ಹೋಗತಕ್ಕಂಥಾದ್ದು ಸುತರಾಂ ನ್ಯಾಯವಲ್ಲ. ಅಲ್ಲದೆ ಸಬ್‌ಡಿವಿಜನ್ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಆಯಾ ಸ್ಥಳಕ್ಕೆ ಹೋಗಿ ಒಂದೊಂದು ತಾಲ್ಲೂಕಿನಲ್ಲಿ ಕೂಡ ಕೇಸು ಇತ್ಯರ್ಥ ಮಾಡತಕ್ಕಂಥ ಒಂದು ಪದ್ಧತಿಯನ್ನು ತಾವು ಜಾರಿಗೆ ತಂದರೆ ಪಾರ್ಟಿಗಳಿಗೆ ಕ್ಷೇಮವಾಗುತ್ತದೆ. ಕೇಸುಗಳುಕೂಡ ಬಹಳ ಜಾಗ್ರತೆ ಇತ್ಯರ್ಥವಾಗುತ್ತವೆಂದು ನಾನು ಅಭಿಪ್ರಾಯ ಪಡುತ್ತೇನೆ. ಸ್ವಲ್ಪ ವಿವರಗಳನ್ನಿಲ್ಲಿ ಹೇಳಬೇಕಾದರೆ, ಚನ್ನಪಟ್ಟಣ, ರಾಂನಗರ ಕೇಸುಗಳನ್ನು ಅಲ್ಲಿಯೇ ಒಂದು ಡೇಟ್ ಕೊಟ್ಟು, ಜಿಲ್ಲಾಧಿಕಾರಿಗಳು ಅಥವ ಸಬ್‌ಡಿವಿಜನ್ ಅಧಿಕಾರಿಗಳು, ಇಂಥ ದಿವಸ ಇಂಥ ಕೇಸುಗಳನ್ನು ವಿಚಾರ ಮಾಡುವುದಕ್ಕೆ ಇಂಥ ತಾಲ್ಲೂಕು ಹೆಡ್‌ಕ್ವಾರ್ಟರಿಗೆ ಬರುತ್ತೇವೆಂದು ಎಲ್ಲಾ ಪಾರ್ಟಿಗಳಿಗೂ ನೋಟೀಸು ಕೊಟ್ಟರೆ, ಅವರು ಅಲ್ಲಿಗೇ ಬರುತ್ತಾರೆ. ಬೆಂಗಳೂರು ಅಥವಾ ದೊಡ್ಡ ದೊಡ್ಡ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಿಗೆ ಬಂದು, ಲಾಯರುಗಳ ಮನೆ ಬಾಗಿಲು ಕಾಯುವುದು ತಪ್ಪುತ್ತದೆ. ಪಾರ್ಟಿಗಳಿಗೆ ಮತ್ತು ಸಾಕ್ಷಿಗಳಿಗೆ ಬಹಳ ಅನುಕೂಲವಾಗುತ್ತದೆಂದು ಹೇಳಿ ತಿಳಿಸಲು ಅಪೇಕ್ಷಿಸುತ್ತೇನೆ ಇದನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ವಿಚಾರ ಮಾಡಬಹುದೆಂದು ನನಗಾದರೂ ಅನ್ನಿಸುತ್ತದೆ.

Registration of Societies ವಿಚಾರದಲ್ಲಿ ಒಂದು ಮಾತು ಹೇಳಬೇಕೆಂದು ಅಪೇಕ್ಷಿಸುತ್ತೇನೆ. ಅನೇಕ ಸಂಬಂಧವಾದ ಸೊಸೈಟಿಗಳನ್ನು ರಿಜಿಸ್ಟರ್ ಮಾಡತಕ್ಕ ಅಧಿಕಾರ ಈ ರೆವಿನ್ಯೂ ಇಲಾಖೆಗೆ ಒಳಪಟ್ಟಿದೆ, ಎಂದರೆ ಸಹಕಾರ ಸಂಘಗಳ ರಿಜಿಸ್ಟ್ರೇಷನ್ ಅಲ್ಲ, ಬಾಕಿ ಧಾರ್ಮಿಕಕ್ಕೆ ಸಂಬಂಧವಾದಂಥದು ಮತ್ತು ಸಮಾಜ ಕಲ್ಯಾಣಕ್ಕೆ ಸಂಬಂಧಿಸಿದಂಥ ಸೊಸೈಟಿಗಳನ್ನು ರಿಜಿಸ್ಟರ್ ಮಾಡತಕ್ಕಂಥ ಅಧಿಕಾರ ಬಹಳ ಪುರಾತನವಾದುದು. ಅವನ್ನು ಕಾಲಕ್ಕೆ ತಕ್ಕಹಾಗೆ ಬದಲಾವಣೆ ಮಾಡತಕ್ಕಂಥ ಕೆಲಸ ಬಹಳ ತೀವ್ರವಾಗಿ, ಅಗತ್ಯವಾಗಿ ಆಗಬೇಕು. ಹಾಗಾಗದೆ ಇರುವುದರಿಂದ ಸಾವಿರಾರು ಸೊಸೈಟಿಗಳು ಏನು ಈ ದೇಶದಲ್ಲಿವೆ, ಆ ಸೊಸೈಟಿಗಳು ದಕ್ಷತೆಯಿಂದ ಕೂಡ ನಡೆಯುವುದಕ್ಕಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ನಡೆಯುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಇವುಗಳಲ್ಲಿರತಕ್ಕ ಹಣ ಮತ್ತು ಆಸ್ತಿಮೇಲೆ ಸರಿಯಾದ ಮೇಲ್ವಿಚಾರಣೆ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಈ ಕಾನೂನನ್ನು ಬದಲಾವಣೆ ಮಾಡಬೇಕು. ಈ ಸೊಸೈಟಿಗಳಮೇಲೆ ಸರಿಯಾದ ರೀತಿಯಲ್ಲಿ ಒಂದು ಹತೋಟಿ ಇರಬೇಕಾದುದು ಅಗತ್ಯ. ಹಾಗೆ ಆಗದೆಇದ್ದ ಪಕ್ಷದಲ್ಲಿ ಈ ಸೊಸೈಟಿಗಳು ಸರಿಯಾಗಿ, ದಕ್ಷತೆಯಿಂದ ನಡೆಯುವುದಕ್ಕೆ ತೊಂದರೆಯಾಗುತ್ತದೆ ಅನ್ನತಕ್ಕಂಥಾದನ್ನು ನಾನು ಈ ಸಂದರ್ಭದಲ್ಲಿ ಸೂಚಿಸಲು ಅಪೇಕ್ಷಿಸುತ್ತೇನೆ.

ಹಾಗೆಯೇ Weights and Measures ಬಗ್ಗೆ ಹೇಳಬೇಕಾಗಿದೆ. ಈ ಅಳತೆ, ತೂಕ ಈಗ ಹೊಸದಾಗಿ ಬಂದಿರತಕ್ಕಂಥ ಪದ್ಧತಿ, ಅದು ಇನ್ನೂ ಗ್ರಾಮಾಂತರ ಪ್ರದೇಶಗಳಲ್ಲಿ ಜನಗಳಲ್ಲಿ ಬಳಕೆಗೆ ಬಂದಿಲ್ಲ. ಹಳೆಯದನ್ನೇ ಉಪಯೋಗಿಸುತ್ತಿದ್ದಾರೆ, ಸೇರು, ಕೊಳಗ ಇತ್ಯಾದಿಗಳನ್ನೇ ಉಪಯೋಗಿಸುತ್ತಾರೆ. ತೂಕ, ಇತ್ಯಾದಿ ಕಾನೂನುಗಳ ರೀತಿಯಲ್ಲಿ ಬಳಕೆಗೆ ಬಂದಿಲ್ಲ. ಅದು ಬಳಕೆಗೆ ಬರದೆ ಇರುವುದನ್ನು ಒಂದು ರೀತಿಯಲ್ಲಿ ಸ್ಥಳೀಯ ಅಧಿಕಾರಿಗಳು ದುರುಪಯೋಗ ಪಡಿಸಿಕೊಂಡು, ಜನಗಳಿಗೆ ಕಿರುಕುಳ, ತೊಂದರೆಗಳನ್ನು ಕೊಡತಕ್ಕ ರೀತಿ, ವಿಷಾದಕರವಾದ ರೀತಿ ಉಂಟು. ಈ ವಿಚಾರದಲ್ಲಿ ಸರಕಾರದವರು ವೇಟ್ಸ್ ಅಂಡ್ ಮೆಷರುಗಳ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಜನಗಳಿಗೆ ಸಹಾಯಮಾಡುವಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಯಾರು ಉದ್ದೇಶಪೂರ್ವಕವಾಗಿ ಬಳಸುವುದಿಲ್ಲವೋ ಅವರ ಮೇಲೆ ತಕ್ಕ ಕ್ರಮ ಕೈಗೊಳ್ಳಬೇಕು. ತಿಳಿಯದೇ ಇರತಕ್ಕ ಗ್ರಾಮಸ್ಥರುಗಳಿಗೆ ಇಲ್ಲದ ತೊಂದರೆಗಳನ್ನು ಕೊಡದೇ ಅವರಿಗೆ ಒಂದು ರೀತಿಯಾದ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕೆಂದು ಏರ್ಪಾಡು ಮಾಡುವುದು ಸೂಕ್ತ ಎಂದು ನಾನು ಹೇಳುತ್ತೇನೆ.

ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳು ಸ್ವಾಗತಾರ್ಹವಾದವು ಮತ್ತು ನಾನು ಅವನ್ನು ಹೃತ್ಪೂರ್ವಕವಾಗಿ ಅನುಮೋದಿಸುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಪೂಜ್ಯ ಸಭಾಪತಿಯವರೆ ಸ್ವಾಮೀ, ನಮ್ಮ ಮುಂದೆ ರೆವಿನ್ಯೂ ಸಚಿವರು ಮಂಡಿಸಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಮೂಲಕ ಇಲ್ಲಿ ತರುವುದಕ್ಕೆ ಇಚ್ಛೆಪಡುತ್ತೇನೆ.

ಈಗಾಗಲೇ ಮಾತನಾಡಿದ ಸದಸ್ಯರಾದ ಶ್ರೀಮಾನ್ ಮಾದಯ್ಯಗೌಡರು ರೆವಿನ್ಯೂ ಇಲಾಖೆಯಲ್ಲಿ ಮಾಡಿರುವ ಸುತ್ಕಾರ್ಯಗಳನ್ನು ಹೇಳಿದರು. ಅದು ಒಳ್ಳೆಯದೇ. ಹಾಗೆ ಒಳ್ಳೆಯ ಕಾರ್ಯಗಳು ದೇಶದ ಎಲ್ಲ ಕಡೆಗಳಲ್ಲಿಯೂ ನಡೆಯುತ್ತಿವೆಯೋ ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಆದರೆ ದೇಶದ ಎಲ್ಲ ಭಾಗಗಳಲ್ಲಿ ಏನಾಗಿದೆ ಎನ್ನುವುದನ್ನು ಹೇಳುವುದು ಬಿಟ್ಟು ನನ್ನ ತಾಲ್ಲೂಕಿನಲ್ಲಿ ಆಗಿರುವ ಕೆಲವು ನಡವಳಿಕೆಗಳನ್ನು ಮಾತ್ರ ರೆವಿನ್ಯೂ ಮಂತ್ರಿಗಳ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಆದರೆ ಮಾನ್ಯ ಅರ್ಥ ಸಚಿವರು ಸ್ವಾರ್ಥಕ್ಕಾಗಿ ತನ್ನ ತಾಲ್ಲೂಕಿನ ವಿಷಯವನ್ನೇ ಕೇಳಿಕೊಳ್ಳುತ್ತಾರೆ ಎಂದು ನಾನು ಹೇಳುವುದನ್ನು ತಪ್ಪಾಗಿ ತಿಳಿದುಕೊಳ್ಳಬಾರದು ಎಂದು ನಾನು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಸ್ವಾಮಿ, ಮಾಗಡಿ ತಾಲ್ಲೂಕಿನಲ್ಲಿ ರೆವಿನ್ಯೂ ಇಲಾಖೆ ಇವೆ. ಅದರಿಂದ ಜನತೆಗೆ ಎಷ್ಟು ಅನುಕೂಲವಾಗುತ್ತಿದೆ ಎನ್ನುವುದನ್ನು ಇಲ್ಲಿ ಪ್ರಶ್ನಿಸಬೇಕಾಗಿದೆ. ನಾವು ಪ್ರಜಾಸರಕಾರ ಬರುತ್ತದೆ. ನಮ್ಮ ಸರಕಾರದವರು ರಚನೆ ಮಾಡಿದ ಸರಕಾರದಲ್ಲಿ ಯಾವ ಅಧಿಕಾರಿಯಿಂದಲೇ ಆಗಲೀ ಅವರು ಪ್ರಜೆಗಳಿಗೆ ಒಳ್ಳೆಯದನ್ನುಂಟುಮಾಡಬೇಕು ಎನ್ನುವ ಭಾವನೆ ಬರಬೇಕು ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗೆ ಆಗುತ್ತಿದೆಯೋ ಇಲ್ಲವೇ ಎನ್ನುವುದು ನಮ್ಮ ತಾಲ್ಲೂಕಿನಲ್ಲಿರುವ ಅಧಿಕಾರಿಯಿಂದಲೇ ಗೊತ್ತಾಗುತ್ತದೆ. ನಮ್ಮ ಹಳ್ಳಿಗಾಡುಗಳಲ್ಲಿರುವ ಜನ ಕಳ್ಳ ಕಾಕರ ಭೀತಿಗಾಗಿ ಮನೆಯ ಮುಂದೆ ಕಾವಲಗಾಗಿ ಒಂದು ಪ್ರಾಣಿಯನ್ನು ಇಟ್ಟುಕೊಂಡಿರುತ್ತಾರೆ. ಅಂತಹ ಒಂದು ಪ್ರಾಣಿಯನ್ನು ನಮ್ಮ ತಾಲ್ಲೂಕಿನಲ್ಲಿ ಇಟ್ಟಿದ್ದಾರೆ. ಅವರ ಹತ್ತಿರ ಯಾರೊಬ್ಬರೂ ಹೋಗಿ ಅವರ ಕಷ್ಟಸುಖಗಳನ್ನು ಹೇಳಿಕೊಳ್ಳುವಂತಿಲ್ಲ. ಇದು ಹೇಗಿದೆ ಎಂದರೆ ನಿನ್ನೆದಿನ ನಮ್ಮ ಈ ವಿಧಾನ ಸೌಧದ ಪಶ್ಚಿಮ ಭಾಗದಲ್ಲಿ ಒಂದು ಜೇನುಗೂಡು ಇದ್ದುದು ಎದ್ದು ಅದರಿಂದ ಅವು ಕೆಲವರನ್ನು ಒಂದು ಸಾರಿ ಕಚ್ಚಿ ಕೆಲವರನ್ನು ತೊಂದರೆಗೆ ಸಿಕ್ಕುವಂತೆ ಮಾಡಿತು. ಆದರೆ ಈ ನಮ್ಮ ತಾಲ್ಲೂಕಿನಲ್ಲಿರುವ ಅಧಿಕಾರಿಗಳು ತಾಲ್ಲೂಕಿನಲ್ಲಿರುವ ಎಲ್ಲ ಜನರನ್ನೂ ಕಡಿದು ಹೊರಕ್ಕೆ ಕಳುಹಿಸುತ್ತಿದ್ದಾರೆ. ಇಂತಹ ಒಂದು ದುಸ್ಥಿತಿ ನಮ್ಮ ತಾಲ್ಲೂಕಿನಲ್ಲಿ ಉಂಟಾಗಿದೆ. ನಾನು ಕಳೆದ ಅಧಿವೇಶನದಲ್ಲೂ ಜನರಲ್ ಆಡ್ಮಿನಿಸ್ಟ್ರೇಷನ್ನು ಬಗ್ಗೆ ಮಾತನಾಡಿದಾಗ ಇದೇ ತಹಶೀಲುದಾರರ ಬಗ್ಗೆ ಮಾತನಾಡಿ ಹೇಳಿದ್ದೆ. ಅದೇನು ಕಾರಣವೋ ಇದು ಸರಕಾರದ ಗಮನಕ್ಕೆ ಬಾರದೆ ಹೋಯಿತು. ಇವರನ್ನು ಅಲ್ಲಿಂದ ಮೂರು ಸಾರಿ ಟ್ರಾನ್ಸ್‌ಫರು ಮಾಡಿದರೂ ಅದನ್ನು ಮಂತ್ರಿಗಳು ಕ್ಯಾನ್ಸಲ್ಲು ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಇದಕ್ಕೆ ಕಾರಣರಾರು ಎಂದರೆ ನಮ್ಮ ಸಣ್ಣ ನೀರಾವರಿ ಶಾಖೆಯ ಉಪಮಂತ್ರಿಗಳು ಎಂದು ಹೇಳಲಾಗಿದೆ. ಆದರೆ ನಾನು ಇದನ್ನು ಒಪ್ಪುವುದಿಲ್ಲ. ಇವರ ನಡವಳಿಕೆಗಳಿಂದ ನಮ್ಮ ತಾಲ್ಲೂಕಿನ ಜನಕ್ಕೆ ಎಷ್ಟು ಭಾಗ ನ್ಯಾಯ ದೊರೆಯಬೇಕೋ ಅಷ್ಟೂ ದೊರೆಯದೇ ಬಹಳ ಅನ್ಯಾಯಗಳಾಗುತ್ತಿವೆ. ನಾನು ಹೇಳುವುದರಲ್ಲಿ ಏನಾದರೂ ಲೋಪ ದೋಷಗಳಿವೆ ಎನ್ನುವುದನ್ನು ತಾವು ಇಲ್ಲಿ ಹೇಳಿ ಅದು ಸರಿಯೇ ಅಲ್ಲ ಎನ್ನುವುದಾಗಿದ್ದರೆ ನಾನು ಅದನ್ನು ತಿದ್ದಿ ಸರಿಪಡಿಸಿಕೊಳ್ಳಬಹುದು. ನಾನು ಸರಕಾರಕ್ಕೆ ಮನವಿ ಮಾಡುವುದು—ಇವೆಲ್ಲಾ ಏತಕ್ಕಾಗಿ ಅವರ ಕಣ್ಣಿಗೆ ಕಂಡರೂ ಕಾಣದಿದ್ದಂತೆ ಮಾಡುತ್ತಿದ್ದಾರೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಇಂತಹ ಅಧಿಕಾರಿಗಳು ಜನಕ್ಕೆ ಅನುಕೂಲವಾಗದೆ ಇರುವುದು ಅನಾವಶ್ಯಕ. ಇವರ ಮೇಲೆ ಇಲ್ಲದ ಸಲ್ಲದ ದೂರುಗಳನ್ನು ಹೇಳಬೇಕೆಂದು ಹೇಳುತ್ತಿಲ್ಲ. ಜವಾಬುದಾರಿಯಿಂದ ಅಲ್ಲಿನ ವಿಧಾನಸಭಾ ಸದಸ್ಯನಾಗಿ ಇಲ್ಲಿ ಬಂದು ಹೇಳಿದರೂ ಸರಕಾರ ಈ ರೀತಿ ಮಾಡುವುದು ಸರಿಯಲ್ಲ.

ಟೆನೆನ್ಸಿ ಕೇಸುಗಳು ಇಲ್ಲಿ ನಡೆಯುತ್ತಿವೆ. ಈ ಕೇಸುಗಳನ್ನು ಹೇಗೆ ಡೀಲು ಮಾಡಬೇಕು ಎನ್ನುವುದೇ ಗೊತ್ತಿಲ್ಲ. ಅವರು ಅಲ್ಲಿನ ಕೇಸನ್ನು ಬೆಂಗಳೂರಿಗೆ ತಂದು ಇಲ್ಲಿ ಒಬ್ಬರು ಲಾಯರ ಮುಖೇನ ಅದರ ಆರ್ಡರನ್ನು ಬರಿಸಿಕೊಂಡುಬಂದು ಅಲ್ಲಿ ಕೋರ್ಟಿನಲ್ಲಿ ಓದುತ್ತಿದ್ದಾರೆ. ಇಂತಹ ಪರಿಸ್ಥಿತಿ ಬಂದಿದೆ. ಇವರ ತೀರ್ಮಾನಗಳಿಂದ ಜನಕ್ಕೆ ಬಹಳ ಅನ್ಯಾಯಗಳಾಗುತ್ತಿವೆ. ಕೇಸಾಗಿ ಆರ್ಗ್ಯುಮೆಂಟಾಗುತ್ತದೆ. ಆಮೇಲೆ ಜಡ್ಜ್‌ಮೆಂಟು ಬರಬೇಕಾದರೆ ವರ್ಷಗಟ್ಟಲೆಯಾಗುತ್ತದೆ. ಇಂತಹ ಒಂದು ದುಸ್ಥಿತಿ ನಮ್ಮ ರೆವಿನ್ಯೂ ಇಲಾಖೆಯಲ್ಲಿ ಬಂದಿದೆ. ಇದನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ಪರಿಶೀಲಿಸಬೇಕು. ಇಂತಹ ಅಧಿಕಾರಿಗಳನ್ನು ತಾಲ್ಲೂಕಾ ಮಟ್ಟದಲ್ಲಿಡಬಾರದು. ಇವರು ನಿಮಗೆ ಬೇಕಾಗಿದ್ದರೆ ವಿಧಾನಸೌಧದಲ್ಲಿ ಏನಾದರೂ ಒಂದು ಒಳ್ಳೆಯ ಸ್ಥಾನವನ್ನು ಕೊಡಬಹುದು. ಏಕೆಂದರೆ ಇವರುಗಳು ಮಂತ್ರಿಗಳ ಹತ್ತಿರ ಇದ್ದು ವಿಶಾಲ ಮೈಸೂರಿನಲ್ಲಿ ಕೆಲಸ ಮಾಡಿದವರಾದುದರಿಂದ ನಮ್ಮ ಸಣ್ಣ ತಾಲ್ಲೂಕಿನಲ್ಲಿ ಕೆಲಸ ಮಾಡಬೇಕೆಂದು ಮಾಡಿದರೆ ಇವರ ಕೆಲಸಗಳು ಬಹಳ ಸಂಕುಚಿತವಾಗುತ್ತವೆ. ಇವರನ್ನು ಬೇಕಾದರೆ ಚೀಫ್ ಸೆಕ್ರೆಟರಿಗಿಂತ ಮೇಲ್ಪಟ್ಟು ಒಂದು ಪೋಸ್ಟು

ಎಂದರೆ ಸರಕಾರದ ಅಡ್ವೈಸರು ಎಂದು ಇವರನ್ನು ತೆಗೆದುಕೊಂಡು ಮಾಡಬಹುದು. ಇವರು ನಮ್ಮ ತಾಲ್ಲೂಕಿನಲ್ಲಿರಲು ನಾಲಾಯಕ್ಕಾದ ಅಧಿಕಾರಿಗಳು ಎಂದು ಸರಕಾರದ ಗಮನಕ್ಕೆ ತರುತ್ತಿದ್ದೇನೆ.

ಸ್ವಾಮೀ, ನಮ್ಮ ತಾಲ್ಲೂಕು ಆಫಿಸಿನೊಳಗೆ ಗ್ರಾಮಸ್ಥರುಗಳಿಗೆ ಬೇಕಾದ ಮ್ಯಾಪುಗಳು ಹಾಗೂ ಟಿಪ್ಪಣಿ ಕಾಪಿಗಳನ್ನು ಕೇಳಿದರೆ ಅವು ಸಿಗುವುದಿಲ್ಲ. ಕಳೆದ ಅಧಿವೇಶನದಲ್ಲೂ ಕೂಡ ಇದನ್ನು ಸಲಹೆ ಮಾಡಿದ್ದೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಅಯಾ ಗ್ರಾಮದ ಮ್ಯಾಪುಗಳು, ಟಿಪ್ಪಣಿ ಕಾಪಿಗಳು ಸಿಗುವಂತೆ ಮಾಡಬೇಕೆಂದು ಹೇಳುತ್ತೇನೆ. ಈಗ ಮ್ಯಾಪುಗಳಿಗಾಗಿ ಅರ್ಜಿಕೊಟ್ಟರೆ ಅದು ರೆವಿನ್ಯೂ ಇನ್ಸ್‌ಪೆಕ್ಟರವರಿಗೆ ಹೋಗಿ ಅವರಿಂದ ವರದಿ ಬಂದ ಮೇಲೆ ಅದಕ್ಕಾಗಿ ಹತ್ತಾರು ರೂಪಾಯಿಗಳನ್ನು ಕೊಟ್ಟುಕೊಂಡು ಸರ್ವೆ ಇಲಾಖೆಯ ಮೂಲಕ ಕಾಪಿಗಳನ್ನು ತರಿಸಿಕೊಳ್ಳಬೇಕಾಗಿವೆ, ಇದು ಬಹಳ ಕಷ್ಟವಾಗುತ್ತದೆ. ತಾಲ್ಲೂಕು ಆಫೀಸುಗಳಲ್ಲೇ ಪ್ರತಿಯೊಂದು ಜಮೀನಿನ ಮ್ಯಾಪುಗಳು ಹಾಗೂ ಟಿಪ್ಪಣಿ ಕಾಪಿಗಳು ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಮತ್ತು ಇದು ರೈತರಿಗೆ ಸುಲಭವಾಗಿ ಸಿಗುವಂತೆ ಮಾಡಬೇಕು. ಇಲ್ಲದೆ ಸರ್ವೆ ಇಲಾಖೆಯವರ ಕಡೆಗೆ ಹೋಗಿ ರೈತರು ಕಾಪಿಗಳನ್ನು ತರಬೇಕಾದರೆ ಇಲ್ಲದ ತೊಂದರೆಗಳಾಗುತ್ತವೆ. ಉದಾಹರಣೆಯಾಗಿ ನನ್ನ ಸ್ವಂತ ಜಮೀನಿನ ಬಗ್ಗೆ ಮ್ಯಾಪುಗಳಿಗಾಗಿ ಅರ್ಜಿ ಹಾಕಿದಾಗ ಅದನ್ನು ಅಳತೆ ಮಾಡುವಾಗ ಏನೋ ಒಂದು ಡಿಸ್‌ಪ್ಯೂಟು ಬಂತು. ಅದರಿಂದ ಇಬ್ಬರೂ ಸೇರಿ ಒಂದು ಸೂಕ್ತವಾದ ಅಳತೆಯನ್ನು ಮಾಡಿ ತೆಗೆದುಕೊಂಡು ಸರ್ವೆ ಇಲಾಖೆಗೆ ಬಂದಾಗ ಅದನ್ನು ಸರಿಯಾಗಿ ಮಾಡದೆ ನನಗೆ ಬಹಳ ಅನ್ಯಾಯವಾಯಿತು. ನಾವು ಮೊದಲು ಏನೊಂದು ಅನುಕೂಲಗಳು ನ್ಯಾಯವಾಗಿ ಸಿಗಬೇಕೆಂದು ಅಳತೆ ಮಾಡಿಸಿದ್ದೆವೋ ಅದಕ್ಕೆ ತದ್ವಿರುದ್ಧವಾಗಿ ಆಗಿ ಈಗ ಪುನಃ ದುಡ್ಡು ಕಟ್ಟಿ ತೊಂದರೆ ಪಡಬೇಕಾಯಿತು. ಈ ರೀತಿ ಶಾಸನಸಭಾ ಸದಸ್ಯರಾದ ನನಗೇ ಇಲ್ಲದ ಸಲ್ಲದ ತೊಂದರೆ ಸರ್ವೇ ಇಲಾಖೆಯಲ್ಲಿ ಆಗಿರುವುದರಿಂದ ಇನ್ನು ಸಾಮಾನ್ಯ ರೈತರು ಎಷ್ಟು ಕಷ್ಟಪಡಬೇಕೆನ್ನುವುದನ್ನು ಸರಕಾರದವರು ಗಮನಿಸಬೇಕು. ರೆವಿನ್ಯೂ ಸರ್ವೆ ಇಲಾಖೆ ಯಾವ ರೀತಿಯಾಗಿ ಕೆಲಸ ಮಾಡುತ್ತಿದೆ ಎನ್ನುವುದನ್ನು ಸರಕಾರ ಪರಿಶೀಲನೆ ಮಾಡಬೇಕು.

ಗ್ರಾಮಾಂತರ ಅಧಿಕಾರಿಗಳಿಗೆ ಗ್ರಾಮಗಳಲ್ಲಿ ಕಂದಾಯವನ್ನು ವಸೂಲಿ ಮಾಡುವುದರ ಜೊತೆಗೆ ತಾಲ್ಲೂಕು ಆಫೀಸಿನಲ್ಲಿರುವ ರೆವಿನ್ಯೂ ಗುಮಾಸ್ತರುಗಳನ್ನೂ ವಸೂಲಿಗಾಗಿ ಕಳುಹಿಸುತ್ತಿದ್ದಾರೆ. ಅವರಿಗೆ ಟಿ. ಎ., ಡಿ. ಎ. ಕೊಡುತ್ತಾರೆ. ಆದರೆ ಗ್ರಾಮದಲ್ಲಿನ ಅಧಿಕಾರಿಗಳು ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಬೇಕಾದರೆ ಸುಮಾರು 10-20 ಮೈಲಿಗಳ ದೂರ ನಡೆಯಬೇಕಾಗಿ ಬರುತ್ತದೆ. ಹಾಗೆ ನಡೆದುಕೊಂಡು ಬಂದು ತಾಲ್ಲೂಕು ಆಫೀಸಿಗೆ ಇರಸಾಲನ್ನು ಟ್ರೆಜರಿಗೆ ಕೊಟ್ಟರೆ ಅವರು ಕೊಟ್ಟ ಸಾವಿರವೋ ಅಥವಾ 1,500 ರೂಪಾಯಿಗಳನ್ನೋ ಟ್ರೆಜರಿಗೆ ತೆಗೆದುಕೊಳ್ಳದೆ ಇನ್ನೂ ಪೂರ್ತಿ ವಸೂಲಾಗಿಲ್ಲ ಎಂದು ಹಿಂದಕ್ಕೆ ಕಳುಹಿಸಿದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಅವರುಗಳನ್ನು ಸಂಜೆ ಆರು ಗಂಟೆವರೆಗೆ ಕಾಯಿಸಿದರೆ ಯಾವ ಬಸ್ಸುಗಳೂ ಅವರ ಊರಿಗೆ ಹೋಗಲು ಸಿಗುವುದಿಲ್ಲ. ಅಲ್ಲೇ ತಂಗಬೇಕಾಗುತ್ತದೆ. ಅಂತಹ ಕಾಲದಲ್ಲಿ ಅವರು ದುಡ್ಡನ್ನು ಹೇಗೆ ಕಾದುಕೊಳ್ಳಬೇಕು. ಇದು ಪೋಲಾಗುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಟ್ರೆಜರಿಗೆ ಎಷ್ಟು ಹಣ ಇರಸಾಲಿಗಾಗಿ ತಂದಿರುತ್ತಾರೋ ಅದನ್ನು ಮೊದಲು ಸರಕಾರಕ್ಕೆ ಕಟ್ಟಿಸಿಕೊಂಡು ಬಾಕಿ ಹಣವನ್ನು ಬೇಗನೆ ವಸೂಲು ಮಾಡುವ ಪದ್ಧತಿ ಜಾರಿಗೆ ತರುವುದು ಒಳ್ಳೆಯದು. ಕೆಲವು ವೇಳೆ 15-20 ಮೈಲಿಗಳಿಂದ ಬಂದಿದ್ದರೂ ಅವರಿಗೆ ಯಾವ ಟಿ. ಎ., ಡಿ. ಎ. ಯನ್ನೂ ಕೊಡುವುದಿಲ್ಲ.

ತಾಲ್ಲೂಕು ಆಫೀಸುಗಳಲ್ಲಿ ರೈತರಿಗೆ ಪಹಣಿ ಕಾಪಿಗಳನ್ನು ಕೊಡುವುದರಲ್ಲಿ ವಿಳಂಬವಾಗುತ್ತದೆ. ಹಿಂದೆ ಮಾನ್ಯ ಕಡಿದಾಳ್ ಮಂಜಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಒಂದು ಆರ್ಡರನ್ನು ಮಾಡಿದ್ದರು. ಅದು ಆರ್. ಆರ್. ಮತ್ತು ಐ. ಎಲ್‌ಗಳನ್ನು ವಿಲೇಜು ಆಫೀಸರುಗಳಿಗೆ ಕೊಡಬೇಕೆಂದು ಮಾಡಿದ್ದರು. ಆದರಿಂದ ಒರಿಜಿನಲ್ ರಿಕಾರ್ಡು ತಾಲ್ಲೂಕು ಆಫೀಸಿನಲ್ಲಿ ಉಳಿಯುತ್ತಿಲ್ಲ. ಪಹಣಿಗೆ ಅರ್ಜಿಕೊಟ್ಟರೆ ಅದು ಮೊದಲು ರೆವಿನ್ಯೂ ಇನ್ಸ್‌ಪೆಕ್ಟರವರ ಬಳಿಗೆ ಹೋಗಿ ಅಲ್ಲಿಂದ ಶ್ಯಾನುಬೋಗರಿಗೆ ತಿರುಗಿ ವಾಪಸು ಹೋಗಿ ಆ ನಂತರ ತಾಲ್ಲೂಕು ಆಫೀಸಿಗೆ ಬಂದು ಕಾಪಿಗಳನ್ನು ತೆಗೆದುಕೊಳ್ಳಬೇಕಾಗಿದೆ. ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ಇದಕ್ಕಾಗಿ ಹಣವನ್ನೂ ಖರ್ಚು ಮಾಡಬೇಕಾಗಿ ಬರುತ್ತದೆ. ಒರಿಜನಲ್ ರಿಕಾರ್ಡ್ ಆಫ್ ರೈಟನ್ನು ತಾಲ್ಲೂಕು ಆಫೀಸಿನಲ್ಲಿರಬೇಕು ಅಂತೆಯೇ ಇಂಡೆಕ್ಸ್ ಆಫ್ ಲ್ಯಾಂಡ್ ಕಾಪಿ ಸಹ ತಾಲ್ಲೂಕು ಆಫೀಸಿನಲ್ಲಿರಬೇಕು. ಹೀಗೆ ಮಾಡುವುದರಿಂದ ಈ ಪಹಣಿ ಕಾಪಿಗಳು ಸರಿಯಾಗಿ ಸಿಗುವುದಕ್ಕೆ ಅವಕಾಶವಾಗಿ ಜನಕ್ಕೆ ಬಹಳ ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರ ಯೋಚನೆ ಮಾಡಬೇಕು.

(ಶ್ರೀ ಸಿ. ಆರ್. ರಂಗೇಗೌಡ)

ನಮ್ಮ ಮಾಗಡಿ ತಾಲ್ಲೂಕಿನಲ್ಲಿ ಕೊಂಡಹಳ್ಳಿ ಗ್ರಾಮದಲ್ಲಿ ಒಂದು ಗೋಮಾಳದ ಜಮೀನು ಇದೆ. ಇದು ಅರಣ್ಯ ಇಲಾಖೆಗೆ ಸೇರಿದ್ದೋ ಇಲ್ಲ ರೆವೆನ್ಯೂ ಇಲಾಖೆಗೆ ಸೇರಿದ್ದೋ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿದೆ. ಇದರಲ್ಲಿ ಹರಿಜನರೂ ಇತರರೂ ಉಳುಮೆ ಮಾಡುತ್ತಿದ್ದಾರೆ. ಆದರೆ ಇತರರು ಉಳುಮೆ ಮಾಡುವುದನ್ನು ಬಿಟ್ಟು ಬಿಟ್ಟಿದ್ದಾರೆ. ಹರಿಜನರು ಇದ್ದವರಿಗೆ 15-20 ವರ್ಷಗಳ ಟಿ. ಟಿ. ಕೊಟ್ಟಿದ್ದರೂ ಅವರು ಬಡವರಾಗಿ ಸದರಿ ಜಮೀನನ್ನೆ ನಂಬಿಕೊಂಡಿದ್ದರೂ ಅವರ ಮೇಲೆ ಜಬರ್ದಸ್ತು ಮಾಡಿ ಅವರ ಮೇಲೆ ಕೇಸನ್ನು ಹಾಕಿ ಈಗ ಅದು ರಾಮನಗರದ ಮ್ಯಾಜಿಸ್ಟ್ರೇಟರ ಕೋರ್ಟಿನ ಮುಂದೆ ಅಲೆಯಬೇಕಾಗಿದೆ. ಈ ಬಗ್ಗೆ ನಾನು ರೆವೆನ್ಯೂ ಮಂತ್ರಿಗಳಿಗೆ ಒಂದು ಕಾಗದ ಬರೆದಿದ್ದೆ. ಆದರೆ ಇದುವರೆಗೂ ಯಾವ ಕಾರ್ಯಕ್ರಮವನ್ನೂ ಕೈಗೊಂಡ ಹಾಗೆ ನನಗೆ ಗೊತ್ತಾಗಿಲ್ಲ. ಈ ಜಮೀನಿನ ಬಗ್ಗೆ ಹಿಂದೆ ಅರಣ್ಯ ಮಂತ್ರಿಗಳು ಸ್ಟೇ ಆರ್ಡರ್ ಕೊಟ್ಟಿದ್ದರು. ಈಗ ಅವರನ್ನು ಕೇಳಿದರೆ ರೆವೆನ್ಯೂ ಮಂತ್ರಿಗಳನ್ನು ಕೇಳಿ ಎಂದು ಹೇಳುತ್ತಿದ್ದಾರೆ. ರೆವಿನ್ಯೂ ಮಂತ್ರಿಗಳನ್ನು ಕೇಳಿದರೆ ಅರಣ್ಯ ಮಂತ್ರಿಗಳ ಕಡೆ ತೋರಿಸುತ್ತಾರೆ. ಹೀಗೆ ಒಬ್ಬರ ಮೇಲೊಬ್ಬರು ತೋರಿಸಿ, ಹರಿಜನರಿಗೆ ಕಿರುಕುಳವಾಗಿ ಬಡವರಾದ ಅವರು ಇಂದು ಕೋರ್ಟು ಅಲೆಯಬೇಕಾಗಿದೆ.
ರೈತನು ಸರಕಾರಕ್ಕೆ ಒಂದು ಅರ್ಜಿ ಕೊಟ್ಟರೆ ಜವಾಬ್ದಾರಿ ಇರತಕ್ಕಂಥವರು ಅದನ್ನು ಇತ್ಯರ್ಥ ಮಾಡುವುದು ಅವರ ಜವಾಬ್ದಾರಿ ಇದೆ. ಜಮೀನು ವಿಚಾರದಲ್ಲಿ ಫಾರೆಸ್ಟ್ ಇಲಾಖೆಯವರನ್ನು ಕೇಳಿದರೆ ರೆವೆನ್ಯೂ ಇಲಾಖೆಯಲ್ಲಿ ಇದೆ ಎಂದು ಹೇಳುತ್ತಾರೆ. ರೆವೆನ್ಯೂ ಇಲಾಖೆಯಲ್ಲಿ ಕೇಳಿದರೆ ಅವರಿಗೆ ಏನೂ ಗೊತ್ತು ಇರುವುದಿಲ್ಲ. ಎರಡು ಮೂರು ವರ್ಷ ಟಿ. ಟಿ. ಕೊಟ್ಟಿದ್ದರೆ ಜಮೀನು ಇಲ್ಲದೆ ಇರತಕ್ಕಂಥ ರೈತರಿಗೆ ಅದನ್ನು ಖಾಯಂ ಮಾಡಬೇಕು. ನಮ್ಮ ಮಾಗಡಿ ತಾಲ್ಲೂಕಿನಲ್ಲಿ ಇದು ಕಾರ್ಯರೂಪಕ್ಕೆ ಬರಲಿಲ್ಲ. 1944 ನೇ ಇಸವಿಯಲ್ಲಿ ಬೇಕಾದಷ್ಟು ಜಮೀನು ಸಾಗುವಳಿಗೆಗೆ ಕೊಟ್ಟರು. ಈ ವಿಚಾರದಲ್ಲಿ ನಾನು ಅನೇಕ ಪ್ರಶ್ನೆಗಳನ್ನು ಈ ಮಾನ್ಯ ಸಭೆಯಲ್ಲಿ ಕೇಳಿದ್ದೇನೆ. ಒಂದು ಪ್ರಶ್ನೆಗೆ ಉತ್ತರವಾಗಿ 10-12 ಕೇಸುಗಳು ಪೆಂಡಿಂಗ್ ಇವೆ ಎಂದು ಉತ್ತರ ಹೇಳಿದರು. ಆದರೆ ನಮ್ಮ ತಾಲ್ಲೂಕಿನಲ್ಲಿ ನಾನು ಪ್ರವಾಸ ಮಾಡಿದಾಗ್ಗೆ ನನಗೆ ಕಂಡು ಬಂದುದು ಏನೆಂದರೆ 50-60 ಸಂದರ್ಭಗಳಲ್ಲಿ ಸರಕಾರ ಕನ್‌ಫರ್ಮ್ ಮಾಡದೆ ಟಿ. ಟಿ. ಹಾಕಿ ಕಿರುಕುಳ ಕೊಟ್ಟ ನಿದರ್ಶನ ಇದೆ ಎಂಬುದು ನನಗೆ ಗೊತ್ತಾಗಿದೆ. ಯಾವ ರೈತನು ನಿರ್ಗತಿಕನಾಗಿದ್ದಾನೆಯೋ ಯಾವನು ಜಮೀನನ್ನೇ ನಂಬಿಕೊಂಡಿದ್ದಾನೆಯೋ ಅಂಥವರಿಗೆ ಸಾಗು ಚೀಟಿ ಕೊಡಬೇಕು. 20-30 ವರ್ಷದ ಮೇಲೆ ಆಯಿತು. ನಮ್ಮ ತಾಲ್ಲೂಕಿನಲ್ಲಿ ಪೋಡಿ ಮಾಡಿಲ್ಲ. ಹಿಂದಕ್ಕೆ ಯಾವಾಗಲೋ ರೆವೆನ್ಯೂ ಇನ್‌ಸ್ಪೆಕ್ಟರ್ ಮನೆಯಲ್ಲಿಯೇ ಕುಳಿತು ತಯಾರು ಮಾಡಿದ ಸ್ಕೆಚ್ ಆಧಾರದ ಮೇಲೆ ಜಮೀನುಗಳನ್ನು ಮಂಜೂರು ಮಾಡಲಾಗಿದೆ. ಇವುಗಳ ಬಗ್ಗೆ ಬೇಕಾದಷ್ಟು ಡಿಸ್ಪ್ಯೂಟ್ಸ್ ಇವೆ. ಜಮೀನು ಮಂಜೂರು ಆಗುತ್ತಾ ಇರುತ್ತದೆ. ಆದರೆ ಸಾಗುವಳಿ ಚೀಟಿ ತೆಗೆದುಕೊಂಡು ಹೋದರೆ ಅಲ್ಲಿ ಜಮೀನು ಇರುವುದಿಲ್ಲ. ಆದುದರಿಂದ ಬಹಳ ಅವ್ಯವಸೆ ಇದು ತೊಂದರೆಯಾಗುತ್ತಿದೆ. ಸರಕಾರದವರು ಈ ವಿಷಯದ ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ.

11-00 A. M.

ಇನ್ನು ಮಾಗಡಿ ತಾಲ್ಲೂಕಿನಲ್ಲಿ ಮ್ಯುಟೇಷನ್ ಸ್ಲಿಪ್ಸ್ ದಾಖಲಾತಿಯ ಸಂಬಂಧದಲ್ಲಿ ಗ್ರಾಮಾಧಿಕಾರಿಗಳಿಗೆ ಪೋಟಿಗೆಯನ್ನು ಪಾವತಿ ಮಾಡುವುದರಲ್ಲಿ ವಿಳಂಬವಾಗಿದೆ. ಶ್ಯಾನುಭೋಗರಿಗೆ ಆರು ಪೈಸಾ ಪಟೇಲರಿಗೆ ಮೂರು ಪೈಸಾ ಕೊಡುತ್ತಿದ್ದರು. ಈ ಹಣ ಮಂಜೂರಾತಿಗಾಗಿ ಸ್ಥಳೀಯ ಅಧಿಕಾರಿಗಳು ಬಿಲ್ ಮಾಡಿ ಮೇಲೆ ಕಳುಹಿಸಿದರು. ಅದು ಮುಂದೆ ಅಕೌಂಟೆಂಟು ಜನರಲ್ ಅವರ ಆಫೀಸಿಗೆ ಸ್ಕ್ರುಟಿನಿ ಮಾಡುವುದಕ್ಕೆ ಹೋದಾಗ್ಗೆ ಇದಕ್ಕಾಗಿ ಅಲಾಟ್‌ಮೆಂಟ್ ಇಲ್ಲ ಎಂದು ಹೇಳಿ ಅದನ್ನು ವಾಪಸ್ಸು ಮಾಡಿದರು. ಅವರು ಮಾಡಿದ ಕೆಲಸಕ್ಕೆ ಅಲಾಟ್‌ಮೆಂಟ್ ಸೇರಿಸಬೇಕಾಗುತ್ತದೆ. ಕೆಲಸ ತೆಗೆದುಕೊಂಡ ಸರ್ಕಾರ ಇದಕ್ಕೆ ಜವಾಬ್ದಾರಿಯಾಗಿಲ್ಲವೇ ! ಇದನ್ನು ಆದಷ್ಟು ಜಾಗ್ರತೆ ಯೋಚನೆ ಮಾಡಿ ನಿಂತುಹೋಗಿರುವ ಹಣ ಅವರಿಗೆ ಕೊಡಿಸಬೇಕು ಎಂದು ಪ್ರಾರ್ಥಿಸುತ್ತೇನೆ.

ಇನ್ನು ನಮ್ಮ ಮಾಗಡಿ ತಾಲ್ಲೂಕಿನಲ್ಲಿ ರೆಸ್ಟೋರೇಷನ್ ಮಾಡದೇ ಕಂದಾಯ ಕೊಡದೇ ಇರತಕ್ಕಂಥ ಫಡ ಜಮೀನು ಬೇಕಾದಷ್ಟು ಇದೆ. ಇಂಥ ಜಮೀನು ಇಟ್ಟುಕೊಂಡಿರತಕ್ಕಂಥ ರೈತನಿಂದ ಟಿ. ಟಿ. ವಸೂಲ್ಮಾಡುತ್ತಾರೆ. ರೈತರು ಟಿ. ಟಿ. ಕೊಡುತ್ತಾ ಬಂದಿದ್ದಾರೆ. ಇಂಥ ಜಮೀನನ್ನು ರೈತರಿಗೆ ರೆಸ್ಟೋರ್ ಮಾಡಬೇಕೆಂದು ಹೇಳುತ್ತೇನೆ. ಇದಕ್ಕೆ ತೀವ್ರ ಗಮನ ಹರಿಸಬೇಕಾಗಿದೆ.

ಯಾಕೆಂದರೆ ಫಡ ಜಮೀನು ಇರತಕ್ಕಂಥ ರೈತನಿಗೆ ನೀರಾವರಿ ಭಾವಿಯ ಬಗ್ಗೆ ಲೋನ್ ದೊರೆಯುವುದಿಲ್ಲ. ಸರಕಾರ ಒದಗಿಸುವ ಸೌಲಭ್ಯ ಪಡೆಯಲು ಅವಕಾಶವಿಲ್ಲದಾಗಿದೆ. ಆದುದ ರಿಂದ ಇದರ ಬಗ್ಗೆ ತೀವ್ರ ಗಮನ ಕೊಡಬೇಕು ರೆಸ್ಟೋರೇಷನ್ ಮಾಡಿ ಫಡ ಜಮೀನು ಕೊಡು ವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾಗಡಿ ತಾಲ್ಲೂಕು ಮಡಬಾಳ್ ಹೋಬಳಿ, ಹೆಲಿಗೆ ಹಳ್ಳಿಯ 33 ನೇಯ ಸರ್ವೇ ನಂಬರಿನಲ್ಲಿ ಮತ್ತು ಮತ್ತಿಕೆರೆಯ 19 ನೇಯ ಸರ್ವೇ ನಂಬರಿನಲ್ಲಿ ಹರಿಜನರಿಗೆ ಜಮೀನುಗಳನ್ನು ಹಂಚಿದ್ದಾರೆ. 1952 ನೇಯ ಇಸವಿಯಲ್ಲಿ ಸರಕಾರದವರು ಫಾರೆಸ್ಟ್ ಇಲಾಖೆಯಿಂದ 400 ಎಕರೆ ಜಮೀನು ರಿಲೀಜ್ ಮಾಡಿ ಈ ಜಮೀನನ್ನು ಹರಿಜನರಿಗೆ ಸಾಗುವಳಿಗೆ ಕೊಡಬೇಕೆಂದು ಉದ್ದೇಶಿಸಲಾಗಿತ್ತು. ಈ ವಿಚಾರದಲ್ಲಿ ನಾನು ಮೂರು ನಾಲ್ಕು ಪ್ರಶ್ನೆಗಳನ್ನು ಹಾಕಿದ್ದೆ. ಒಂದೊಂದು ಪ್ರಶ್ನೆಗೆ ಒಂದೊಂದು ತರಹ ಉತ್ತರ ಕೊಟ್ಟಿದ್ದಾರೆ. ಒಂದು ಉತ್ತರದಲ್ಲಿ ಲ್ಯಾಂಡ್ ರಿಲೀಜ್ ಮಾಡಿ ಜಮೀನು ಹಂಚುತ್ತೇವೆ ಎಂದು ಹೇಳುತ್ತಾರೆ. ಇನ್ನೊಂದು ಉತ್ತರದಲ್ಲಿ ಜಮೀನು ಹಂಚುವುದಿಲ್ಲ ಎಂದು ಹೇಳುತ್ತಾರೆ. ಅಲ್ಲಿ ಜಮೀನು ಕೊಡದೆ ಜನರಿಂದ ಸರ್‌ಚಾರ್ಜು ವಸೂಲ್ಮಾಡಿದ್ದಾರೆ. ಅಲ್ಲಿಗೆ ಹೋಗಿ ನೋಡಿದರೆ ಹರಿಜನರಿಗೆ ಕೊಟ್ಟಂಥ ಜಮೀನನ್ನು ಯಾರೋ ಇನ್ನೊಬ್ಬರು ಅನುಭವಿಸುತ್ತಿದ್ದಾರೆ. ಯಾವ ಒಂದು ಉದ್ದೇಶದಿಂದ ಜಮೀನು ರಿಲೀಜ್ ಮಾಡಿದರೋ ಆ ಉದ್ದೇಶ ಫಲಕಾರಿಯಾಗಿಲ್ಲ. ಜಮೀನು ಪಡೆದವರು ಜಮೀನು ಇಟ್ಟುಕೊಂಡಿಲ್ಲ. ಬೇರೆಯವರು ಆಕ್ರಮಿಸಿದ್ದಾರೆ. ಒಂದೇ ಕುಟುಂಬದವರು ಬೇರೆ ಬೇರೆಯವರ ಹೆಸರಿನಲ್ಲಿ ಜಮೀನು ತೆಗೆದುಕೊಂಡಿ ದ್ದಾರೆ. ಅವರ ಹೆಸರು ಹರಿಜನರ ಹೆಸರು ಒಂದೇ ಇರುತ್ತವೆ. ಇದು ಗೊತ್ತಾಗುವುದಿಲ್ಲ. ಆದುದರಿಂದ ಇದನ್ನು ಪರಿಶೀಲನೆ ಮಾಡಬೇಕು. ಸ್ಥಳೀಯ ಪಂಚಾಯಿತಿ ಚೇರ್‌ಮನ್ ಅವರು ಹರಿಜನರಿಗೆ ತೊಂದರೆಯಾಗಿದೆ ಎಂದು ತಿಳಿಸುವುದಕ್ಕಾಗಿ ಡೆಪ್ಯೂಟಿ ಕಮಿಷನರ್ ಅವರನ್ನು ಕಾಣು ವುದಕ್ಕೆ ಹೋದರು ಆದರೆ ಅವರಿಗೆ ತಹಶೀಲ್ದಾರ್‌ರವರು ನೋಟೀಸ್ ಜಾರಿ ಮಾಡಿ ಎಕ್ಸ್‌ಪ್ಲನೇಷನ್ ಕೇಳಿದ್ದಾರೆ. ಇದು ಯಾವ ನ್ಯಾಯ ? ಒಟ್ಟಿನಲ್ಲಿ ಮತ್ತಿಕೆರೆ ಹರಿಜನರಿಗೆ ಬಹಳ ಅನ್ಯಾಯವಾಗಿದೆ. ಹರಿಜನರ ಉದ್ಧಾರ ಮಾಡಬೇಕೆಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಹರಿಜನರಿಗೆ ಆಗುವಷ್ಟು ಕಿರುಕಳ ಬೇರೆ ಎಲ್ಲಿಯೂ ಇಲ್ಲ ಎಂದು ಹೇಳಬಹುದು. ನನಗೆ ಬೇರೆ ತಾಲ್ಲೂಕಿನ ವಿಚಾರ ಅಷ್ಟು ಹೆಚ್ಚಾಗಿ ಗೊತ್ತಿಲ್ಲ. ನಮ್ಮ ಕನ್ನಡ ಭಾಷೆಯಲ್ಲಿ ಒಂದು ಗಾದೆ ಮಾತು ಇದೆ. ನನ್ನ ತಟ್ಟೆಯೊಳಗೆ ಆನೆ ಸತ್ತು ಬಿದ್ದಿರುವಾಗ್ಗೆ ಇನ್ನೊಬ್ಬರ ತಟ್ಟೆಯೊಳಗಿನ ನೊಣ ತೆಗೆದು ಹಾಕುವುದಕ್ಕೆ ಹೋದ ಹಾಗೆ ಎಂದು ಹೇಳುತ್ತಾರೆ. ನನಗೆ ಇನ್ನೊಬ್ಬರ ತಟ್ಟೆಯೊಳಗಿನ ನೊಣ ತೆಗೆಯುವುದು ಬೇಡ. ನನ್ನ ತಟ್ಟೆಯೊಳಗಿನ ಆನೆ ತೆಗೆದು ಹಾಕಿದರೆ ಸಾಕು. ನಮ್ಮ ತಾಲ್ಲೂಕು ಉದ್ಧಾರವಾದರೆ ಸಾಕು. ಇಂಥ ಪರಿಸ್ಥಿತಿ ಬಂದಿದೆ. ಆದುದರಿಂದ ಇದನ್ನು ರೆವಿನ್ಯೂ ಸಚಿವರು ಕೂಲಂಕುಷವಾಗಿ ಪರಿಶೀಲನೆ ಮಾಡ ಬೇಕು ಎಂದು ಒತ್ತಾಯ ಪೂರ್ವಕ ಹೇಳುತ್ತೇನೆ. ಅಧಿಕಾರಿಗಳಿಂದ ಹರಿಜನರಿಗೆ ಆಗುವ ಕಿರುಕಳದ ಬಗ್ಗೆ ಸೋಷಿಯಲ್ ವೆಲ್‌ಫೇರ್ ಸಚಿವರಿಗೆ ಕಾಗದ ಬರೆದೆನು. ಇದರ ನಿವಾರಣೆಗೆ ಅವರು ತಮ್ಮ ಅಸಹಾಯಕತೆಯನ್ನು ವ್ಯಕ್ತಮಾಡುತ್ತಾರೆ.

ಇನ್ನು ಇನಾಂ ಗ್ರಾಮಗಳ ಬಗ್ಗೆ ಹೇಳುವುದಾದರೆ ನಮ್ಮ ಮಾಗಡಿ ತಾಲ್ಲೂಕಿನಲ್ಲಿ 86 ಇನಾಮು ಗ್ರಾಮಗಳಿವೆ. ಈ ಪ್ರದೇಶದಲ್ಲಿ ಸರ್ವೆ ಸೆಟಲ್‌ಮೆಂಟ್ ಆಗಿದೆ. ಆದರೆ ಸರ್ವೆ ಇಲಾಖೆ ಯವರು ಅಳತೆಮಾಡಿ ನೆಟ್ಟಿರುವ ಕಲ್ಲು ಅದು ಕಲ್ಲು ಅಲ್ಲ. ಅದೊಂದು ಗ್ರಹ ಎಂದು ಭಾವಿಸ ಬೇಕಾಗಿದೆ. ಯಾತಕ್ಕಂದರೆ ಸರ್ವೆ ಮಾಡಿ ಇಟ್ಟಿರುವ ಕಲ್ಲು ರೈತನ ಗೋರಿಯ ಮೇಲೆ ಇಟ್ಟ ಕಲ್ಲು ಆಗಿದೆ. ಈ ರೀತಿ ಒಂದು ಸಲ ಒಬ್ಬರು ಇದನ್ನು ಹೇಳಿದ್ದಾರೆ. ಈ ಡಿಸ್ಪ್ಯೂಟ್ಸ್ ಬಗೆಹರಿಸಲು 20–30 ವರ್ಷ ಕೋರ್ಟಿಗೆ ಅಲೆದರೂ ಅದು ಸಾಧ್ಯವಿಲ್ಲ. ನಮ್ಮ ಮಾಗಡಿ ತಾಲ್ಲೂಕಿನಲ್ಲಿ ಗೆಜ್ಜಗಾರ ಗುಪ್ಪೆ ಎಂಬ ಒಂದು ಗ್ರಾಮ ಇದೆ. ಅಲ್ಲಿ ಅಳತೆ ಮಾಡಿದಾಗ್ಗೆ ಸರ್ವೆಯರು ದುಡ್ಡು ಕೇಳಿದರು. ಗ್ರಾಮಸ್ಥರು ದುಡ್ಡು ಕೊಡಲಿಲ್ಲ. ಅವರು ಅಂಥ ಮನುಷ್ಯರಲ್ಲ. ಅಳತೆ ಮಾಡಲಿಕ್ಕೆ ಬಂದವರು ಕೊನೆಗೆ ಹೇಳಿದರು ಇವು ಕಲ್ಲುಗಳಲ್ಲ. ಇವು ಪ್ರಾಣ ತೆಗೆಯುವುದಕ್ಕೋಸ್ಕರ ಗ್ರಹ ಎಂದು ಹೇಳಿ ದರು. ಮ್ಯಾಪ್ ನೋಡಿದರೆ ಒಂದು ತರಹ ಇರುತ್ತದೆ. ಅನುಭವವೇ ಬೇರೆ ಇದೆ. ಆದರೆ ನಿಜವಾಗಿ ಮ್ಯಾಪಿನಲ್ಲಿರುವಹಾಗೆ ಜಮೀನು ಅಲ್ಲಿ ಇರುವುದಿಲ್ಲ. ನನ್ನ ಒಬ್ಬ ಸ್ನೇಹಿತರು ಜಮೀನು ಕೊಂಡುಕೊಂಡರು ಮತ್ತು ಅಲ್ಲಿ ಮನೆ ಕಟ್ಟಿದರು. ಕೊಂಡ ಪ್ರದೇಶಕ್ಕೂ ನಕಾಶೆಯಲ್ಲಿ ಕಂಡು ಬರುವ ಪ್ರದೇಶಕ್ಕೂ ಅಜಗಜಾಂತರವಿದೆ. 400 ಮನೆಗಳಿಗೂ 400 ತರಹ ಆಗಿದೆ. ಇದನ್ನು ಬಗೆಹರಿಸಲು 400 ವರ್ಷಗಳಾದರೂ ಬೇಕು ಎಂದು ಅನಿಸುತ್ತದೆ. ಇದು ನಮ್ಮ ಕಾಲದಲ್ಲಿ ಬಗೆಹರಿಸುವುದು ಆಗಲಾರದು ಎಂದು ಅನಿಸುತ್ತದೆ. ಒಟ್ಟಿನಲ್ಲಿ ಸರ್ವೇ ಇಲಾಖೆಯವರು ಮಾಡಿರುವ ಹೀನ ಸ್ಥಿತಿ, ಕೆಡಕು ಅಷ್ಟಿಷ್ಟು ಎಂದು ಹೇಳುವುದಕ್ಕಾಗುವುದಿಲ್ಲ. ಇನ್ನೊಂದು ವಿಷಯ ನನಗೆ ಜ್ಞಾಪಕಕ್ಕೆ ಬರುತ್ತದೆ. ರೆವಿನ್ಯೂ ಇಲಾಖೆಯಲ್ಲಿ ನಮ್ಮ ವಂಶದ ಹೆಸರು ವಾಲ್ಮೀಕರ ಎಂದು

(ಶ್ರೀ ಸಿ. ಆರ್. ರಂಗೇಗೌಡ)

ಬರೆದದ್ದು ನೋಡಿದೆ. ಇದು ತಪ್ಪು, ನಾನು ಚಿಕ್ಕ ವಯಸ್ಸಿನಲ್ಲಿ ಓದಿದ್ದೇನೆ. ಅದು ಓರೇಕಾರ ಎಂದು ಇರಬೇಕು. ಓರೇಕಾರ ಎಂದು ಬದಲಾವಣೆ ಮಾಡಲು ಹೇಳಿದೆ ಆದರೆ ಹಾಗೆ ಮಾಡಲಿಲ್ಲ. ನನಗೆ ಒಂದು ಪದ್ಯ ಜ್ಞಾಪಕಕ್ಕೆ ಬರುತ್ತಿದೆ. ಅದು ಹೀಗೆ ಇದೆ :

"ಮನೆತನಕೆ ಸಂದ ಬಿರುದನು
ಮನೆಯತನಕಾ ಎಂದು ತಿದ್ದುವರು
ಕ್ಲಾರ್ಕುಗಳ ಕೈಬಿಸಿ ಮಾಡಿದರೆ ಸರ್ವಜ್ಞ"

ಹೀಗೆ ಇಲ್ಲಿಯವರೆಗೂ ಸರ್ವೇ ಇಲಾಖೆಯವರು ಮಾಡಿರತಕ್ಕ ಅಕೃತ್ಯಗಳಿಂದ ರೈತರಿಗೆ ಬಹಳ ತೊಂದರೆಗಳಾಗಿವೆ. ಇವುಗಳನ್ನೆಲ್ಲಾ ಸರಿಪಡಿಸಬೇಕಾಗಿದ್ದರೆ ಈಗಿರತಕ್ಕ ಮಾನ್ಯ ಮಂತ್ರಿಗಳೇ ಇದೇ ಸ್ಥಾನದಲ್ಲಿ ಇನ್ನೂ ಹತ್ತುಹದಿನೈದು ವರ್ಷಗಳಿದ್ದರೂ ಸಾಧ್ಯವಾಗುತ್ತದೆಯೋ ಇಲ್ಲವೋ ಅದನ್ನು ಹೇಳುವುದಕ್ಕಾಗುವುದಿಲ್ಲ.

ಇನ್ನು ಇನಾಂದಾರರಿದ್ದ ಕಾಲಕ್ಕೆ ಅಲ್ಲಿ ರೈತರಾಗಿದ್ದ ಜನರು ದನಗಳನ್ನು ಮೇಯಿಸುವುದಕ್ಕಾಗಿ ಅವರ ಅಗತ್ಯಕ್ಕೆ ತಕ್ಕಂತೆ ಅರ್ಧ ಎಕರೆ, ಒಂದು ಎಕರೆ, ಎರಡು ಎಕರೆ ಹೀಗೆಲ್ಲಾ ಜಮೀನುಗಳನ್ನು ಹುಲ್ಲು ಬೆಳೆಸುವುದಕ್ಕಾಗಿ ಬಿಟ್ಟುಕೊಂಡಿದ್ದರು. ಅಂಥ ಜಮೀನುಗಳನ್ನು ಈಗ ಸರ್ವೇ ಇಲಾಖೆಯವರು ಗೋಮಾಳದ ಜಮೀನುಗಳೆಂದು ಹೇಳಿ ಯಾರು ಲಂಚ ಕೊಡುತ್ತಾರೋ ಅಂಥವರಿಗೆ ಆ ಜಮೀನುಗಳು ಖಾತೆಯಾಗಿ ಇಂದು ದಕ್ಕುತ್ತಿವೆ. ಹಣ ಕೊಡದಿದ್ದವರ ಜಮೀನನ್ನು ಗೋಮಾಳ ಎಂದು ನಮೂದಿಸಲಾಗಿದೆ. ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಮಾತೆತ್ತಿದರೆ ಮಾಗಡೀ ತಾಲ್ಲೂಕ್ ದನಗಳಲ್ಲಿ ಉತ್ತಮ ಜಾತಿಯಾದ ಹಳ್ಳಿಕಾರ್ ಜಾತಿಗೆ ಬಹಳ ಪ್ರಾಶಸ್ತ್ಯಗಳಿರುತ್ತೆಂದು ಹೇಳುತ್ತಿದ್ದರು. ಇನ್ನು ಮುಂದೆ ಅದಕ್ಕೂ ಇಲ್ಲಿ ಅವಕಾಶ ಇಲ್ಲದಂತಾಗುವುದು. ಆದುದರಿಂದ ಆ ಜಮೀನುಗಳನ್ನೆಲ್ಲಾ ಆಯಾಯ ರೈತರಿಗೇ ಬಿಡಿಸಿಕೊಟ್ಟು ಅವುಗಳನ್ನು ಅವರವರಿಗೆ ಖಾಯಂ ಮಾಡುವಂತೆ ಆಜ್ಞೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸರ್ಕಾರದವರು ಯಾವುದೋ ಒಂದು ಘನೋದ್ದೇಶವನ್ನಿಟ್ಟುಕೊಂಡು ಇನಾಮು ಬಾಲಷನನ್ನು ದೇಶದಲ್ಲಿ ಜಾರಿಗೆ ತಂದರು. ಅವರ ಉದ್ದೇಶವಾದರೂ ರೈತನಿಗೂ ಮತ್ತು ಸರ್ಕಾರಕ್ಕೂ ನೇರವಾದ ಒಂದು ಹಾಗೂ ಹತ್ತಿರವಾದ ಸಂಪರ್ಕವಿರಲಿ ಎಂತ ಅದನ್ನು ಮಾಡಿದರು. ಆದರೆ ಅದು ಈಗ ತಿರುವು ಮುರುವಾಗಿದೆ. ಹೀಗೇ ಇನ್ನು ಆ ಜೋಡೀದಾರರುಗಳಿಗೆ ಕೊಡತಕ್ಕ ಪರಿಹಾರ ದ್ರವ್ಯದ ಬಗ್ಗೆ ಬಹಳ ತಾತ್ಸಾರಭಾವನೆಯನ್ನು ಸರ್ಕಾರ ತಾಳಿದೆ. ಅವರಾದರೂ ಇಲ್ಲಿಯವರೆಗೂ ಜಮೀನನ್ನೇ ನಂಬಿಕೊಂಡಿದ್ದವರು. ಸರ್ಕಾರದವರು ಈ ದಿವಸ ಅವರಿಗೆ ಬಹಿರಂಗವಾಗಿ ಗೇಣಿ ಇತ್ಯಾದಿಗಳನ್ನು ಕೊಡಕೂಡದೆಂದು ಟಾಂ ಟಾಂ ಮೂಲಕ ತಿಳಿಸಿದ್ದಾರೆ. ಹೀಗಾಗಿ ಯಾರು ಅವರಿಗೆ ಸರಿಯಾಗಿ ಗುತ್ತಿಗೆಯನ್ನೂ ಕೊಡುತ್ತಿಲ್ಲ. ಹಿಂದೆ ಜೋಡೀದಾರರು ಎಷ್ಟು ಉತ್ತಮ ಸ್ಥಿತಿಯಲ್ಲಿದ್ದರೋ, ಬಡವರಾದ ಹತ್ತಾರು ಜನರಿಗೆ ಸಹಾಯ ಮಾಡತಕ್ಕ ಸ್ಥಿತಿಯಲ್ಲಿದ್ದರೋ ಅಂಥವರು ಈ ದಿವಸ ಬಡವರಾಗಿ ನಿರ್ಗತಿಕರಾಗಿದ್ದಾರೆ. ಹಿಂದೆ ಹತ್ತಾರು ಜನರನ್ನು ಸಾಕುತ್ತಿದ್ದ ಜನ ಈ ದಿವಸ ಬಹಳ ಬಡವರಾಗಿ ನಿರ್ಗತಿಕರಾಗಿದ್ದಾರೆ. ಹಿಂದೆ ಹತ್ತಾರು ಜನರನ್ನು ಸಾಕುತ್ತಿದ್ದ ಜನ ಈ ದಿವಸ ಶೋಚನೀಯವಾದ ಸ್ಥಿತಿಯಲ್ಲಿದ್ದಾರೆ. ಹಿಂದೆ ಇನಾಂದಾರರಾಗಿದ್ದವರೊಬ್ಬರನ್ನು ಶ್ರೀಮತಿ ಭಾಗೀರತಮ್ಮನವರು ನನ್ನ ಹತ್ತಿರ ಕಳುಹಿಸಿದ್ದರು. ಅದೇ ವ್ಯಕ್ತಿಯಬಳಿಗೆ ಹಿಂದೊಮ್ಮೆ ನಾನು ಯಾರೋ ಒಬ್ಬ ಇರುಳಿಗ ಜಾತಿಯ ಗರೀಬನಿಗೆ ಸಹಾಯ ಮಾಡಬೇಕೆಂದು ಕೇಳಲು ಹೋಗಿದ್ದಾಗ ಅವರು ಉಚಿತವಾಗಿ ಆ ಮನುಷ್ಯನಿಗೆ 4 ಎಕರೆ ಜಮೀನನ್ನು ಕೊಟ್ಟರು ಅಂಥ ಧಾರಾಳಸ್ಥರು ಈ ದಿವಸ ಹೊಟ್ಟೆಗೆ ಅನ್ನವಿಲ್ಲದೆ, ಮೈಗೆ ಬಟ್ಟೆಯಿಲ್ಲದೆ ಅಲೆದಾಡತಕ್ಕ ಸ್ಥಿತಿಗೆ ಬಂದಿದ್ದಾರೆ. ಸರ್ಕಾರದವರು ಇವರ ವಿಚಾರದಲ್ಲಿ ಇಷ್ಟು ತಾತ್ಸಾರಮನೋಭಾವನೆಯಿಂದ ವರ್ತಿಸುತ್ತಿರುವುದು ಬಹಳ ಶೋಚನೀಯ. ಮಾನ್ಯ ಮಂತ್ರಿಗಳಿಗೆ ಇದರ ಬಗ್ಗೆ ಸಾಕಷ್ಟು ಸಾಹಿತ್ಯಗಳಿದ್ದರೆ ಈಗಲೇ ಇದನ್ನು ಪರಿಹರಿಸತಕ್ಕ ಬಗ್ಗೆ ಉತ್ತರವನ್ನು ದಯಪಾಲಿಸಲಿ, ಇಲ್ಲವೇ ನಿಧಾನವಾಗುವುದಾಗಿದ್ದರೆ, ಈ ಬಗ್ಗೆ ಆದಷ್ಟು ಬೇಗ ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕ್ ಮಟ್ಟದಲ್ಲಿರತಕ್ಕ ಅಧಿಕಾರಿಗಳಿಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುವಂತೆ ತಿಳಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಮಾಗಡೀ ತಾಲ್ಲೂಕಿನಲ್ಲಿರತಕ್ಕ ಕೆಲವು ರೆವಿನ್ಯೂ ಅಧಿಕಾರಿಗಳನ್ನು ಮಾನ್ಯ ಸಚಿವರು ಇಲ್ಲಿಗೆ ವಿಧಾನಸೌಧಕ್ಕೆ ತೆಗೆದುಕೊಂಡು ಅವರಿಗೆ ಇನ್ನೂ ಉನ್ನತ ಸ್ಥಾನ ಕೊಡಲಿ ಅದಕ್ಕೆ ನನ್ನ ಅಭ್ಯಂತರವಿಲ್ಲ, ಅಥವಾ ಅವರಿಗೆ ಇನ್ನೂ ಹೆಚ್ಚಿನ ಸಂಬಳ ಕೊಡಲಿ ಬೇಡವೆನ್ನುವುದಿಲ್ಲ. ಆದರೆ ನಮ್ಮ ಮಾಗಡಿ ತಾಲ್ಲೂಕಿಗೆ ದಕ್ಷರೂ ಮತ್ತು ಯುವಕರೂ ಆಗಿರತಕ್ಕಂಥ, ಅಂದರೆ ಅವರ ಕೈ ಚುರುಕಾಗಿ

ರದೆ, ಬುದ್ಧಿ ಚುರುಕಾಗಿರುವಂಥ ಅಧಿಕಾರಿಗಳನ್ನು ಹಾಕಬೇಕೆಂದು ಪ್ರಾರ್ಥಿಸಿಕೊಂಡು, ನನಗಿಷ್ಟು ಮಾತನಾಡುವುದಕ್ಕೆ ಅವಕಾಶಮಾಡಿಕೊಟ್ಟ ಪೂಜ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri R. S. HEGDE (Honnavar).—Mr. Speaker, Sir, while welcoming to-day's demands for unanimous and wholehearted acceptance of this House, I submit that the system of revenue obtaining in the State is one of British heritage and one of the good legacies left behind in India by the Britishers. Revenue District, Sub-Divisional Office and the Office of the Mamlatdar and now Tahsildar enjoyed the unique status in the revenue administration of the State and by and large the same status continues. The rural areas look upon the revenue authorities to solve every problem of theirs and the Revenue Department in my opinion have to a certain extent justified the confidence that the people have placed in them. While the Finance Minister in his Budget speech stated that there is 30 per cent excess staff in the General Administration of the State, I submit that in the mofussil taluk offices the same pattern of staff is maintained as it was in vogue in the pre-independence days though the work has increased hundred-fold so much so, one finds delay in the disposal of cases. Besides jurisdiction vested in the revenue officials under the Land Revenue Act, jurisdiction has been vested in the revenue officials under some other Acts without the corresponding increase in the staff, jurisdiction under the Bombay Tenancy Act, Fragmentation and Consolidation of Holdings Act, etc., has been vested, number of certificates are to be granted by the Tahsildars for fee concessions, etc., which is a matter involving laborious enquiry, and there are land grant cases and so on and so forth. Exercise of jurisdiction under the Criminal Procedure Code involves considerable time. The Tahsildar has to wait almost on every Minister and also the dignitory of the State, being the head of the Taluk. It also involves considerable time. He has to look after food in the days of scarcity. So, in view of these multifarious responsibilities placed on the revenue officials, it is worth while examining the possibility of increasing the staff in the taluk offices commensurate with the increase of work. To speak of North Kanara, I submit that Bhatkal Petha and Mundgod Petha were converted into taluks in the year 1959 but we find the same pattern of staff in those offices when they were pethas. So, serious consideration has to be given to increase the staff as these pethas have been converted into taluks. Secondly, Sir, the problem of food has been agitating the mind of the Government and the people. I am conscious of the fact that the Revenue Minister has been trying his best to avert that tragedy. The policy of Government has been working satisfactorily though there is a degree of success in stopping infiltration of foodgrains to the neighbouring States, much has to be done in that behalf. The Government have two responsibilities in my opinion. One is to supply food to the people; second is to supply food within the rate fixed by the Government. From these points of view, the bars in the District have been working well. If there were no bars, all traders, all types of merchants would have swarmed like bees in the surplus areas

(SRI R. S. HEGDE)

by which the price would have shot up in the surplus area and also in deficit areas when the consumer has to pay more price. But I would suggest certain definite persons in deficit area should be authorised to purchase surplus grains so that the Deputy Commissioner of the District will get an account of the export of paddy from surplus to the deficit area. I am sure the Minister has already taken steps in this matter. Further, paddy purchased should be allowed to be milled in places like Honnavar and Bhatkal where the cry of the people is for boiled rice. If paddy is kept indefinitely, I am sure it will decay and in this sphere also the Revenue Minister has already taken action in issuing directions to the Deputy Commissioners for converting paddy into boiled rice. I may here invite the kind attention of the Government to the necessity of creating a buffer stock even in deficit areas.

Sometimes, Government supply is uncertain and when a buffer stock is created in the deficit area, people can fall back upon the buffer stock stored in the deficit area.

Then Sir, regarding the distribution of sugar, I have to submit that in the villages only ¼ kilo is given and in the towns ½ kilo. Especially in the North Kanara District, a more charitable treatment will be necessary and the sugar quota may kindly be increased to ½ kilo in the rural areas also.

Thirdly Sir, I submit a word about the Ugranis in the North Kanara District. In the Bombay Government they were considered as the least Government servants and they have been getting a paltry sum of Rs. 26 per month. They are 400—500 strong. In these days of high cost of living, I feel there must be a more charitable approach by the Government as far as the Urganis are concerned. Sir, these Urganis are termed as part-time servants in my own experience, I submit Sir, that they are more than full time servants. They have to accompany the Tahasildars and all the revenue officers when they are on tour ; they have to accompany the revenue officers at the time of pahani—crop inspection. They have to accompany the revenue officials of the Department to assist in the collection of land revenue. On account of these multi-farious activities which the ugranis have to shoulder, I am sure the Government will have a more human approach towards the position of the ugranis.

Then Sir, the Animal husbandry has to be bestowed greater attention specially in the Malnad area. In the present pattern, there is one veterinary dispensary for every 25,000 heads of cattle. But in the malnad area, the policy of granting human dispensaries has been changed. Before 1962 there used to be one human dispensary for a population of 15,000. In view of the peculiar circumstances obtaining in the Malnad area, on account of lack of communication, on account of rivers, on account of hills, hillocks and rivulets, the Government has been pleased to consider to locate one dispensary for a population of 7000—8000. The same citeria may be considered to locate one veterinary dispensary for a cattle population of 7000—8000 especially in the

Malnad area where communicational difficulties and other difficulties are there. At least for the present, the stockmen centres may be increased for a cattle of 8,000. Sir, I need hardly say that the entire development in the agricultural sector will depend upon the cattle wealth.

Finally, I want to submit a word about land revenue. As far as revenue is concerned, North Kanara deserves a special treatment. North Kanara finds itself only poverty in the midst of plenty. 83 per cent of the area is under forest and only 17 per cent of arable land is there in North Kanara. The district has been giving more than three crores of rupees by way of forest revenue—nearly half of the State revenue as far as forest is concerned. Therefore, in reducing land revenue-no question of increase at all. Government should seriously consider the following reasons which I am submitting for consideration which justify a special treatment that should be given to North Kanara.

1. Survey settlement report which has been placed on the table of this House says Sir, in 1878, it was thought to connect North Kanara by railway. We are in 1965 and we find a railway line from Londa to Goa and the attempt to bring railway to North Kanara was given up and the same position continues after nearly a century and as far as communications are concerned, we find that the same position continues. Under the Revenue Code, one important consideration that will have to be taken into account for increasing or decreasing land revenue, is communication. There is absolutely no communicational facilities in North Kanara—neither roads nor railways. Absence of communication does not justify any increase of land revenue. On the other hand, it justifies a decrease or a total exemption.

Then Sir, we have to see that North Kanara has been subjected to two revenue settlements one in 1900 and another in 1933 and the revenue settlement report submitted by no less a person than Lord Maxwell and Mr. Anderson. Brilliant reports have been given by these people and they have unanimously agreed that North Kanara deserves a special treatment in the matter of land revenue on account of the absence of communicational facilities.

Secondly, Sir, North Kanara, is always subjected to ravages by flood. The August House knows that in 1959-1961 there were floods and all the houses on the banks of Sharavathi were completely ruined and wiped out. Subsequently Government had to spend nearly 8 lakhs for rehabilitating these flood victims. It will be admitted that this area is subjected to flood ravages and I am sure the Government will adopt a more human attitude and more charitable attitude as far as revenue settlement is concerned, as far as the increase of land revenue is concerned.

Thirdly Sir, in North Kanara, crops are destroyed by wild animals. The cultivable area abuts the huge forest area and/in the forest we have got wild animals—elephants, tigers, bears etc. and invariably crops are damaged by these wild animals.

Fourthly, the cost of cultivation in North Kanara is more than anywhere in the State.

(SRI R. S. HEGDE)

Fifthly, it is said that the price of the commercial crops and the price of certain commodities grown by the agriculturists have gone up. At the same time, it is important to note that the consumer articles required by the agriculturists have shot up and therefore, what is given by way of a little increase in the cost price to the agricultural produce is more than off-set by the price of other consumer articles required by the agriculturist.

Sixthly, there are no major irrigation works in this district. Minor irrigation works are still to be concentrated upon.

Sevently, we have got the sweet Sharavathi. 18 miles of the river flows in Honnavar taluka and the water has become sweet. And it is very strange sometimes that we have got floods during summer. Sharavathi water is stored in the Dam at Linganamakki and water is released and some times we find floods in summer. Unfortunately, we have got all the bad effects of the Sharavathi Project and the good effects are going to other places elsewhere.

Eighthly, there are no agro-industries in the district except the paper industry at Dandeli—No private enterprise, no public enterprise and no co-operative adventure is there in North Kanara.

Ninthly khar lands which is a peculiar type of lands which are subject to effects of salt water. Of course Government has been concentrating on some of these works but it has not even touched the fringe of 1/4 of the area. Nearly $\frac{3}{4}$ of the area is subjected to the ravages of salt water.

These are the important circumstances that have to be taken into consideration in justifying land revenue in the State.

Finally I submit that all of us know that Karwar is being wooed actually by Maharashtra and Maharashtra has been trying to do all the things necessary to take Karwar away from the map of Mysore. Unless North Kanara is socially, economically, culturally and educationally, developed, I am quite sure, they may fall a victim to the wooings of Maharashtra.

Thank you Sir.

11-30 A. M.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ (ಸಾಗರ).—ಮಾನ್ಯ ಸಭಾಪತಿಯವರೇ, ಸಭೆಯ ಮುಂದಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಈ ಒಂದು ಸನ್ನಿವೇಶದಲ್ಲಿ ಕೆಲವು ಸಲಹೆಗಳನ್ನು ಕೊಡಲು ಆಶಿಸುತ್ತೇನೆ. ಈಗ ನಮ್ಮ ದೇಶದಲ್ಲಿ ವ್ಯವಸಾಯವೇ ಮುಖ್ಯ ಕಸಬಾಗಿರುವುದರಿಂದ ಅದನ್ನು ಅಭಿವೃದ್ಧಿಪಡಿಸುವುದಕ್ಕೆ ಪಶುಸಂಪತ್ತಿನ ಬಗ್ಗೆ ಹೆಚ್ಚು ಗಮನಕೊಡಬೇಕಾಗಿದೆ. ಇವತ್ತು ಇದಕ್ಕೆ ಸಂಬಂಧಪಟ್ಟ ಖಾತೆಯ ಮಂತ್ರಿಗಳು ಇದರ ವಿಚಾರದಲ್ಲಿ ಬಹಳ ಅನುಭವಿಗಳು. ಪಶು ಸಂಗೋಪನೆಯ ವಿಚಾರದಲ್ಲಿ ನಮ್ಮ ರಾಜ್ಯದ ವೈದ್ಯಕೀಯ ಸೌಲಭ್ಯ ಪಶುಗಳಿಗೆ ಸರಿಯಾಗಿ ಸಿಕ್ಕದೆ ಎಷ್ಟೋ ತೊಂದರೆಯಾಗಿದೆ ಎಂಬುದನ್ನು ಅನೇಕ ಸಾರಿ ಸರಕಾರದ ಗಮನಕ್ಕೆ ತಂದಿದ್ದಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ ಅಲ್ಲಲ್ಲಿ ಪಶುವೈದ್ಯ ಆಸ್ಪತ್ರೆಗಳನ್ನು ತೆರೆದಿದ್ದಾರೆ. ಆದರೆ ಅಲ್ಲಿಯ ಪರಿಸ್ಥಿತಿ ನೋಡಿದರೆ ಅಲ್ಲ ಡಾಕ್ಟರುಗಳು ಮತ್ತು ಸಿಬ್ಬಂದಿ ವರ್ಗ ಇರುವುದಿಲ್ಲ, ಇದರ ಜೊತೆಗೆ ಔಷಧಿ ಇರುವ ಸನ್ನಿವೇಶ ಸಹ ಕಾಣುತ್ತಿಲ್ಲ. ಆಸ್ಪತ್ರೆಯವರೇ ತಾವೇ ಪಶುಗಳಿಗೆ ಔಷಧಿ ತಯಾರುಮಾಡಿ ಕೊಡುತ್ತೇವೆಂದು ಹೇಳುವ ಸನ್ನಿವೇಶವಿದೆ. ಅದರಲ್ಲೂ ನನ್ನ ಕ್ಷೇತ್ರದಲ್ಲಿ ಹೆಚ್ಚು

ಭಾಗದಲ್ಲಿ ಆ ಪರಿಸ್ಥಿತಿ ಇದೆ, ಸಾಗರ, ಸೊರಬಗಳಲ್ಲಿ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಇರುವ ಪಶು ವೈದ್ಯ ಆಸ್ಪತ್ರೆಗಳಲ್ಲಿ ಸೌಲಭ್ಯ ಶೋಚನೀಯ ಸ್ಥಿತಿಯಲ್ಲಿದೆ; ಸಾಕಾದಷ್ಟು ಔಷಧಿಗಳಿಲ್ಲ, ಈ ಆಸ್ಪತ್ರೆಗಳಿಗೆ ಪಶುಗಳನ್ನು ಚಿಕಿತ್ಸೆಗಾಗಿ ತರುವವರು ನಿರಾಶರಾಗಿ ಹೋಗಬೇಕಾದ ಸ್ಥಿತಿ ಇದೆ. ನಮ್ಮ ದೇಶದಲ್ಲಿ ಜನರು ಖಾಯಿಲೆ ಬಿದ್ದರೆ ಆಸ್ಪತ್ರೆಗಳಿಗೆ ಹೋಗದಿರುವ ಮನೋಭಾವ ಅವರಲ್ಲಿ ಬೆಳೆದಿದೆ. ಈ ನಿರಾಶಾದಾಯಕ ಮನೋಭಾವ ಆಸ್ಪತ್ರೆಗಳಲ್ಲಿ ದೊರಕುವ ಸೌಲಭ್ಯದಿಂದ ಹುಟ್ಟಬಹುದು; ಅಂಥ ಸನ್ನಿವೇಶವಿದೆ. ಈ ದಿವಸ ವ್ಯವಸಾಯ ಅಭಿವೃದ್ಧಿಯಾಗಬೇಕಾದರೆ ಪಶುಸಂಪತ್ತು ಬಹಳ ಮುಖ್ಯವಾದುದು. ಅದರ ರಕ್ಷಣೆಮಾಡಲು ಸಕಾಲದಲ್ಲಿ ವೈದ್ಯಕೀಯ ಸೌಕರ್ಯಸಿಕ್ಕುವಂತೆ ಆಸ್ಪತ್ರೆಗಳ ವ್ಯವಸ್ಥೆಯಾಗಬೇಕು. ಇವತ್ತು 25 ಸಾವಿರ ಪಶುಗಳಿರುವ ಕಡೆ ಒಂದು ಪಶುವೈದ್ಯ ಶಾಲೆಯನ್ನು ಕೊಡುವ ನೀತಿ ಸರಕಾರವಲ್ಲಿದ್ದರೂ ಕೂಡ ಆ ಆಸ್ಪತ್ರೆಗಳಲ್ಲಿ ಸರಿಯಾಗಿ ಔಷಧಿ, ಸಾಕಷ್ಟು ಸಿಬ್ಬಂದಿ ಇರುವುದಿಲ್ಲ. ಆದುದರಿಂದ ಎಲ್ಲಿ ಎಷ್ಟು ಸಿಬ್ಬಂದಿ ಬೇಕೋ ಅಷ್ಟನ್ನು ಕೊಟ್ಟು ಬೇಕಾದ ಔಷಧಿಗಳನ್ನು ಸಕಾಲದಲ್ಲಿ ಸರಬರಾಯಿ ಮಾಡಿ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕೆಂದು ಹೇಳಬಿಚ್ಛಿಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಒಂದೊಂದು ಕಡೆ 25 ಸಾವಿರಕ್ಕೆ ಮೇಲ್ಪಟ್ಟು ಪಶುಗಳಿದ್ದರೂ ಅಲ್ಲಿಗೆ ಆಸ್ಪತ್ರೆ ಕೊಟ್ಟಿಲ್ಲ. ಉದಾಹರಣೆಗೆ ಚಂದ್ರಗುತ್ತಿ ಮತ್ತು ಜಡೆ ಹೋಬಳಿಗಳಲ್ಲ ಈ ಸೌಕರ್ಯವಿಲ್ಲದೆ ಬಹಳ ತೊಂದರೆಯಾಗಿದೆ. ತಾಲ್ಲೂಕುಬೋರ್ಡಿನವರೂ ಸಹ ಕೇಳಿದರೂ ಸರಕಾರ ಮಂಜೂರುಮಾಡಿರುವುದಿಲ್ಲ. ಹೀಗಿರುವುದನ್ನು ಗಮನಿಸಿ ಹೆಚ್ಚು ಸೌಕರ್ಯ ನೀಡಬೇಕು. ಹೆಚ್ಚು ಆಹಾರ ಬೆಳೆಯಬೇಕು ಎಂದು ಹೇಳುವಾಗ ಈ ಕಡೆ ಮಂತ್ರಿಗಳು ಹೆಚ್ಚು ಗಮನಕೊಟ್ಟು ಬೇಕಾದ ಸೌಲಭ್ಯಗಳನ್ನು ಒದಗಿಸಬೇಕು, ಚಂದ್ರಗುತ್ತಿ ಮತ್ತು ಜಡೆ ಭಾಗಗಳಿಗೆ ಆಸ್ಪತ್ರೆ ಕೊಡಬೇಕು. ಹಾಗೆಯೇ ಅನೇಕ ವರ್ಷಗಳಿಂದ ಆನವಟ್ಟಿ ಪಶು ವೈದ್ಯದ ಆಸ್ಪತ್ರೆಯನ್ನು ತಾಲ್ಲೂಕುಮಟ್ಟಕ್ಕೆ ಏರಿಸಬೇಕೆಂದು ಹೇಳಿರುವುದನ್ನು ಗಮನಿಸಿ ಆ ಕೆಲಸಮಾಡಬೇಕು. 40 ಸಾವಿರ ಪಶುಗಳಿರುವ ಕಡೆ ಸ್ಟಾಕ್‌ಮನ್‌ನಿಂದ ಸಾಕಷ್ಟು ಪ್ರಯೋಜನವಾಗುವುದಿಲ್ಲ, ಔಷಧಿ ಸಹ ಸರಬರಾಯಿ ಆಗುತ್ತಿಲ್ಲ, ಆ ಆಸ್ಪತ್ರೆ ಸ್ಥಿತಿ ಹೀಗಿದೆ. ಈ ಪಶುವೈದ್ಯಶಾಲೆಗೆ ಕೃತಕ ಗರ್ಭಧಾರಣ ಕೇಂದ್ರವಿದೆ ಅದರ ಜೊತೆಗೆ ರೂರಲ್ ಆಸ್ಪತ್ರೆಯ ಸೌಲಭ್ಯ ಒದಗಿಸಿರುವುದನ್ನು ಹೆಚ್ಚಿನ ಮಟ್ಟಕ್ಕೆ ಏರಿಸಿ ಡಾಕ್ಟರನ್ನು ಸಹ ಹಾಕಿದರೆ ಅನುಕೂಲವಾಗುತ್ತದೆ, ಹಾಗೆ ಮಾಡಬೇಕು ಎಂದು ಹೇಳ ಬಯಸುತ್ತೇನೆ.

ಇನ್ನು ಭೂಕಂದಾಯದ ವಿಚಾರದಲ್ಲಿ ಇದಕ್ಕೆ ಸಂಬಂಧಪಟ್ಟ ಇಲಾಖೆ ವಿಚಾರದಲ್ಲಿ ಮಾನ್ಯ ಸ್ನೇಹಿತರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಸಾಮಾನ್ಯವಾಗಿ ಜನರು ರೆವೆನ್ಯೂ ಇಲಾಖೆಯಲ್ಲಿ ಹೆಚ್ಚಿನ ಸಂಪರ್ಕವಿಟ್ಟುಕೊಂಡಿರುವುದು ತಾಲ್ಲೂಕು ಮಟ್ಟದಲ್ಲಿ. ಅದರ ಉಪಯೋಗ ಸರಿಯಾಗಿ ಜನರಿಗೆ ದೊರೆಯದಿದ್ದರೆ ಬೇಸರ ಬರುತ್ತದೆ. ರೆವೆನ್ಯೂ ಇಲಾಖೆಯಲ್ಲಿ ಎಲ್ಲ ವಿಚಾರಗಳಿಗೂ ಸಾಮಾನ್ಯವಾಗಿ ಜನರು ತಾಲ್ಲೂಕಾಫೀಸಿಗೆ ಹೋಗುವ ಸನ್ನಿವೇಶವಿದೆ. ಈಗಿನ ಆಹಾರ ಪರಿಸ್ಥಿತಿ ಮತ್ತು ಸಿವಿಲ್ ಸರಬರಾಯಿ ಮುಂತಾದುವುಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಈ ಇಲಾಖೆಯ ಅಧಿಕಾರಿಗಳು ಇದ್ದಾರೆ. ಈಗ ಅಭಿವೃದ್ಧಿ ಇಲಾಖೆ ಬೇರೆ ಇರುವುದರಿಂದ ಅದನ್ನು ಬಿಟ್ಟು ಉಳಿದ ಇಲಾಖೆಗಳ ಅಧಿಕಾರಿಗಳೇನಿದ್ದಾರೆ ಅವರು ಜನರಿಗೆ ಸಮಾಧಾನವಾಗುವಂತೆ ನೋಡಿಕೊಂಡು ಸಕಾಲದಲ್ಲಿ ಜನರಿಗೆ ಸಹಾಯದೊರೆತು ಸಮಾಧಾನವಾಗುವಂತೆ ಮಾಡಬೇಕು. ಈಗೇನು ಜನರಲ್ಲಿ ಅಸಮಾಧಾನ ಮೂಡಿದೆ ಅದು ಹೋಗುವಂತೆ ಅಧಿಕಾರಿಗಳು ಚೆನ್ನಾಗಿ ಕೆಲಸಮಾಡಿ ಆಸಕ್ತಿ ವಹಿಸಿ ಜನರಿಗೆ ಬೇಕಾದ ಸೌಕರ್ಯ ಕಲ್ಪಿಸಬೇಕು. ಹಾಗೆಯೇ ತರಬೇತಿಯನ್ನು ಪಡೆದ ಸಿಬ್ಬಂದಿಯನ್ನು ಕೊಡುವುದೂ ಸರಕಾರದ ಕರ್ತವ್ಯ. ಈಗ ನೋಡುವ ಹಾಗೆ ತಾಲ್ಲೂಕುಮಟ್ಟದಲ್ಲಿರುವ ಆಫೀಸುಗಳಲ್ಲಿ ಇರುವ ಗುಮಾಸ್ತರು, ತಾಸಿಲ್ದಾರರು ಮತ್ತು ಅಧಿಕಾರ ವರ್ಗದವರು ಅನುಭವ ಸಾಲದೆ ಜನರಿಗೆ ಬೇಕಾದ ಕಾರ್ಯಗಳನ್ನು ಸಕಾಲದಲ್ಲಿ ಮಾಡಲು ಸಾಧ್ಯವಾಗದೆ ಜನರು ಕಷ್ಟಕ್ಕೆ ಗುರಿಯಾಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ನಮ್ಮ ತಾಲ್ಲೂಕಿನಲ್ಲಿ ಮತ್ತು ಪಕ್ಕದ ತಾಲ್ಲೂಕಿನಲ್ಲಿ ನೋಡಿ ಅನುಭವದಿಂದ ಇದನ್ನು ಹೇಳುತ್ತಿದ್ದೇನೆ. ಇವತ್ತು ತಾಲ್ಲೂಕುಗಳಲ್ಲಿ ತಾಸಿಲ್ದಾರರು ಅನೇಕ ಕಡೆ ಟೆನೆನ್ಸಿ ಕೇಸನ್ನು ಸಹ ನಡೆಸಲು ಅಧಿಕಾರ ಪಡೆದಿದ್ದಾರೆ. ಆದರೆ ಅವರಿಗೆ ಸಾಕಷ್ಟು ಅನುಭವವಿರುವುದಿಲ್ಲ. ಆದರೂ ಕೇಸು ಅವರು ನಡೆಸಬೇಕಾಗಿರುವುದರಿಂದ ಸರಿಯಾಗಿ ನಡೆಸದೆ ಬಹಳ ಕಾಲ ಕೇಸುಗಳನ್ನು ಹಾಗೆಯೇ ಇಡುವುದರಿಂದ ರೈತರಿಗೂ ಭೂಮಾಲೀಕರಿಗೂ ಇರುವ ಭಿನ್ನಾಭಿಪ್ರಾಯ ಹೆಚ್ಚಿ ಗ್ರಾಮಾಂತರಗಳಲ್ಲಿ ಅಶಾಂತಿಯುಂಟಾಗಲು ಕಾರಣವಾಗಿದೆ. ಆದಕ್ಕಾಗಿ ಈಗ ತರಬೇತು ಪಡೆದ ಅಧಿಕಾರವರ್ಗವನ್ನು ಹಾಕಲು ಅವಕಾಶಮಾಡಿದರೆ ತೊಂದರೆಗೆ ಅವಕಾಶವಿರುವುದಿಲ್ಲ. ಇದರ ಜೊತೆಗೆ ರೆವೆನ್ಯೂ ಇಲಾಖೆಯಲ್ಲಿ ಬೇಕಾದಷ್ಟು ಜವಾಬ್ದಾರಿ ಇದೆ. ದೇವಸ್ಥಾನದ ವಿಚಾರ, ಖಾತೆ ಬದಲಾವಣೆ ವಿಚಾರ, ಸಿಮೆಂಟ್ ಕೊಡುವ ಅಧಿಕಾರ, ಆಹಾರ

(ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ)

ಸರಬರಾಯಿ ಮಾಡುವ ಅಧಿಕಾರ ಇಂಥ ಎಲ್ಲ ವಿಚಾರಗಳೂ ಅಧಿಕಾರಗಳೂ ಹೊಂದಿರುವ ಇಲಾಖೆ ಯಲ್ಲಿ ಸರಿಯಾಗಿ ತರಬೇತಾದ ಸಿಬ್ಬಂದಿ ಮತ್ತು ಬೇಕಾದಷ್ಟು ಸಿಬ್ಬಂದಿ ಇರುವಂತೆ ಏರ್ಪಾಡು ಮಾಡಬೇಕಾದ್ದು ಅವಶ್ಯಕ.
ಸೊರಬ ತಾಲ್ಲೂಕು ಹಾಗೂ ಶಿವಮೊಗ್ಗ ಜಿಲ್ಲೆ ಎಂದರೂ ತಪ್ಪಾಗಲಾರದು—ಅಲ್ಲಿರುವ ಎಲ್ಲ ಅಧಿಕಾರಿ ವರ್ಗದವರನ್ನೂ ಬತ್ತದ ಕರೀದಿಗಾಗಿ ನೇಮಿಸಿಕೊಂಡಿರುವುದರಿಂದ ಕಚೇರಿಗಳಲ್ಲಿ ಕೆಲಸ ಆಗುವುದಕ್ಕೆ ಅವಕಾಶವಿಲ್ಲ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ಕೂಡಲೇ ಸಿಬ್ಬಂದಿಯನ್ನು ಇಲ್ಲಿನ ಕಛೇರಿಗಳಿಗೆ ಹಾಕಿ ಅವರಿಗೆ ಸರಿಯಾದ ತರಪೇತಿಯನ್ನು ಕೊಡ ಬೇಕೆಂದು ಈ ಸನ್ನಿವೇಶದಲ್ಲಿ ಹೇಳುತ್ತೇನೆ.

ನಮ್ಮ ರಾಜ್ಯದಲ್ಲಿ ಸರ್ವೆ ಸೆಟಲ್‌ಮೆಂಟ್ ಮಾಡಿ ಕಂದಾಯವನ್ನು ಪುನರ್ವಿಮರ್ಶೆ ಮಾಡಿ ಹೆಚ್ಚು ಮಾಡುವ ಸನ್ನಿವೇಶ ಇದೆ. ಕಂದಾಯವನ್ನು ಹೆಚ್ಚು ಮಾಡುವಾಗ ಆಯಾ ಭಾಗಗಳಲ್ಲಿರುವ ಸಾರಿಗೆ ಸಂಪರ್ಕ, ವ್ಯಾಪಾರ, ಉದ್ಯಮ, ಕೈಗಾರಿಕೆ, ಅಲ್ಲಿನ ವಿದ್ಯಾಭ್ಯಾಸ ಆರೋಗ್ಯ ಇಂಥ ಎಲ್ಲ ವಿಚಾರಗಳನ್ನೂ ನೋಡಿ ಕಂದಾಯವನ್ನು ಪುನರ್ವಿಮರ್ಶೆ ಮಾಡಬೇಕು ಎನ್ನುವ ನಿಯಮ ವನ್ನು ಹಾಕಿಕೊಂಡಿದೆ. ನಮ್ಮ ಭಾಗದಲ್ಲಿ 1902ನೇ ಇಸವಿಯಲ್ಲಿ ರೆವೆನ್ಯೂ ಸೆಟಲ್‌ಮೆಂಟನ್ನು ಮಾಡಿದ್ದು. ಈಗ 62 ವರ್ಷಗಳ ನಂತರ ಪುನರ್ವಿಮರ್ಶೆ ಮಾಡುವುದಕ್ಕೆ ಹೊರಟಿದ್ದಾರೆ. ಈ ವರ್ಷ ಕಂದಾಯವನ್ನು ಪುನರ್ವಿಮರ್ಶೆ ಮಾಡಿದರೆ ಆ ದರಗಳು 30 ವರ್ಷವಾದರೂ ಇರಬೇಕು. ಈಗ ಆಗುವ ಪುನರ್ವಿಮರ್ಶೆ 30 ವರ್ಷಗಳ ಹಿಂದೆ ಆಗಿದ್ದರೆ ಆಗಿನ ಪರಿಸ್ಥಿತಿಯಲ್ಲಿ ಆಗಿನ ದರದಲ್ಲಿ ಇನ್ನೂ ಕಡಮೆ ಕಂದಾಯವನ್ನು ಹಾಕಬೇಕಾಗಿತ್ತು ಮತ್ತು ಆ ಭಾಗದಲ್ಲಿ ಕಡಮೆ ಕಂದಾಯವನ್ನು ಕೊಟ್ಟು ಅದರ ಸೌಲಭ್ಯವನ್ನು ಆ ಜನರು ಅನುಭವಿಸುವುದಕ್ಕೆ ಅವಕಾಶವಾಗುತ್ತಿತ್ತು. 30 ವರ್ಷಗಳಿಗೆ ಕಂದಾಯವನ್ನು ಪುನರ್ವಿಮರ್ಶೆ ಮಾಡದೆ 62 ವರ್ಷಗಳ ನಂತರ ಈಗ ಮಾಡುತ್ತಿ ದ್ದಾರೆ. ಈಗಿನ ಸನ್ನಿವೇಶದಲ್ಲಿ ಈಗಿನ ಬೆಲೆಗಳಲ್ಲಿ ರೈತನು ಬೆಳೆದಿರತಕ್ಕದ್ದು ಎಷ್ಟು ಇದೆ ಹಾಗೂ ಅವನು ಕೊಂಡುಕೊಳ್ಳತಕ್ಕ ವಸ್ತುಗಳು ಮತ್ತು ಉಪಯೋಗ ಮಾಡತಕ್ಕ ಪದಾರ್ಥಗಳಿಗೆ ಎಷ್ಟು ಕೊಡಬೇಕಾಗುತ್ತದೆ ಎನ್ನುವುದನ್ನು ಗಣನೆಗೆ ತೆಗೆದುಕೊಂಡರೆ, 1902ನೇ ಇಸವಿಯಲ್ಲಿ ಅಂದಿನ ಪರಿಸ್ಥಿತಿಯಲ್ಲಿ ಅವನು ಬೆಳೆದದ್ದು ಎಷ್ಟು, ಅದಕ್ಕೆ ಎಷ್ಟು ಹಣ ಪಡೆಯುತ್ತಿದ್ದ ಎನ್ನುವುದನ್ನೂ ಗಣನೆಗೆ ತೆಗೆದುಕೊಂಡರೆ ಒಂದಕ್ಕೊಂದನ್ನು ಹೋಲಿಸಿದರೆ ಅವನು ಹೆಚ್ಚಿನ ಮಟ್ಟವನ್ನು ಹೊಂದಿಲ್ಲ ಎನ್ನುವುದು ಗೊತ್ತಾಗುತ್ತದೆ. ಇಂಥ ಸನ್ನಿವೇಶದಲ್ಲಿ ಕಂದಾಯವನ್ನು ಹೆಚ್ಚು ಮಾಡತಕ್ಕದ್ದು ನ್ಯಾಯವಾದುದೂ ಅಲ್ಲ ಹಾಗೂ ಸಾಧುವಾದುದೂ ಅಲ್ಲ. ಹೀಗಿರುವುದರಿಂದ ಕಂದಾಯವನ್ನು ಹೆಚ್ಚು ಮಾಡದೆ ರೈತರಿಂದ ಏನಾದರೂ ಸರ್ಕಾರಕ್ಕೆ ತೆಗೆದುಕೊಳ್ಳಬೇಕು ಎನ್ನುವ ಪಕ್ಷಕ್ಕೆ ಯಾವುದಾದರೂ ಒಂದು ಸೆಸ್‌ರೂಪದಲ್ಲಿ ಹಾಕಿ ತೆಗೆದುಕೊಳ್ಳಬೇಕೇ ವಿನಾ 30 ವರ್ಷದವರೆಗೆ ಹೆಚ್ಚು ಕಂದಾಯವನ್ನು ಕೊಡುವುದನ್ನು ಅನುಭವಿಸುವುದಕ್ಕೆ ಬಹಳ ತೊಂದರೆಯಾಗುತ್ತದೆ. ಅದ ರಲ್ಲಿಯೂ ಮಲೆನಾಡು ಭಾಗದಲ್ಲಿ ಬಹಳ ಅನಾನುಕೂಲವಾಗುತ್ತದೆ. ಅಲ್ಲಿ ಯಾವ ಸುಧಾರಣೆ ಗಳೂ ಆಗಿಲ್ಲ, ನೀರಾವರಿ ಯೋಜನೆಗಳಾಗಿಲ್ಲ, ರಸ್ತೆ ಆಗಿಲ್ಲ, ಯಾವ ಉದ್ಯಮಗಳೂ ಆಗಿಲ್ಲ. ರೈತನ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲ. ಆರೋಗ್ಯ ಪರಿಸ್ಥಿತಿ ನೆಟ್ಟಗಿಲ್ಲ. ಅಲ್ಲಿ ಆಸ್ಪತ್ರೆಗಳ ಸಂಖ್ಯೆಯನ್ನು ನೋಡಬಹುದೇ ವಿನ ಅಲ್ಲಿ ಡಾಕ್ಟರುಗಳಿಲ್ಲದೆ ತೊಂದರೆಯಾಗಿದೆ. ಮಲೆನಾಡು ಭಾಗದಲ್ಲಿ ಯಾವ ರೀತಿಯ ಸುಧಾರಣೆಯೂ ಆಗಿಲ್ಲ. ಪಶು ವೈದ್ಯಶಾಲೆಗಳಿಲ್ಲ, ಔಷಧಿಗಳಿಲ್ಲ. ಆದುದರಿಂದ ಕಂದಾಯವನ್ನು ಹೆಚ್ಚು ಮಾಡದೆ ಯಾವುದಾದರೂ ಒಂದು ಸೆಸ್ ಹಾಕಿ ಸರ್ಕಾರಕ್ಕೆ ಸ್ವಲ್ಪ ಹಣವನ್ನು ತೆಗೆದುಕೊಳ್ಳಬಹುದು ಎಂದು ಈ ಸಂದರ್ಭದಲ್ಲಿ ಮಾನ್ಯ ಸರ್ಕಾರವನ್ನು ಒತ್ತಾಯಪಡಿಸುತ್ತಿದ್ದೇನೆ.

ನನ್ನ ಕ್ಷೇತ್ರದಲ್ಲಿ ಜಮೀನು ಇಲ್ಲದವರು ತುಂಬ ಇದ್ದು ಜೀವನಕ್ಕಾಗಿ ಅನಿವಾರ್ಯ ಪ್ರಸಂಗ ದಲ್ಲಿ ಜಮೀನು ಸಾಗು ಮಾಡಿಕೊಂಡು ಬಂದಿದ್ದಾರೆ. ಅವರ ಬಗ್ಗೆ ಹೆಚ್ಚಿನ ಸಹಾನುಭೂತಿ ತೋರಿಸಿ ಕೂಡಲೇ ಬಗರ್ ಹುಕುಂ ಸಾಗುವಳಿ ಮಾಡಿರುವುದನ್ನು ಕ್ರಮಪಡಿಸಬೇಕು ಮತ್ತು ಅವರ ಹಕ್ಕನ್ನು ಸ್ಥಾಪನೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಇದರಿಂದ ಆ ಜನರಿಗೆ ತಮ್ಮ ಜೀವನ ಮಾಡಿಕೊಳ್ಳುವುದಕ್ಕೆ ಅವಕಾಶವಾಗುವುದಲ್ಲದೆ ಹೆಚ್ಚು ಆಹಾರವನ್ನೂ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಅವರು ಈಗ ಕದ್ದು, ಅಧಿಕಾರಿಗಳ ಕಾಟವನ್ನು ತಪ್ಪಿಸಿಕೊಂಡು, ಆಹಾರ ಪದಾರ್ಥಗಳನ್ನು ಬೆಳೆಯುವುದು ಕಷ್ಟವಾಗಿದೆ. ಅಂಥ ಸನ್ನಿವೇಶವನ್ನು ತಪ್ಪಿಸಿ ಸರಿಯಾದ ರೀತಿ ಯಲ್ಲಿ ಅವರೂ ಜೀವನವನ್ನು ನಡೆಸಿಕೊಂಡು ಹೋಗಲು ಅನುಕೂಲವಾಗುವಂತೆ ಬಗರ್ ಹುಕುಂ ಸಾಗುವಳಿ ಮಾಡಿರುವುದನ್ನು ಕ್ರಮಪಡಿಸುವುದಕ್ಕೆ ಮಾನ್ಯಮಂತ್ರಿಗಳು ಗಮನಕೊಡಬೇಕೆಂದು

ಹೇಳುತ್ತೇನೆ. ಇದಕ್ಕೆ ಅನೇಕ ಸಾರಿ ಅನೇಕ ಅಂತಹ ತಂಡದವರು ಬಂದು ಮಂತ್ರಿಗಳನ್ನು ಭೇಟಿ ಯಾಗಿದ್ದಾರೆ. ಅವರ ಬಗ್ಗೆ ಮಾನ್ಯಮಂತ್ರಿಗಳಿಗೂ ಸಹಾನುಭೂತಿ ಇದೆ. ಅವರು ಸ್ವಲ್ಪ ವಿರಾಮ ಮಾಡಿಕೊಂಡು ನಮ್ಮ ಕಡೆ ಬಂದು ಅಲ್ಲಿನ ಪರಿಸ್ಥಿತಿಯನ್ನು ನೋಡಿ ಜಮೀನು ಇಲ್ಲದೆ ಇರುವವರಿಗೆ, ಅವರು ಸಾಗುವಳಿ ಮಾಡುತ್ತಿರುವ ಜಮೀನನ್ನೇ ಖಾಯಂ ಮಾಡಿಕೊಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಕೆಂಚಪ್ಪ (ಪಾವಗಡ).—ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಸರ್ಕಾರದವರು ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಅನುಮೋದಿಸುತ್ತ ಕ್ಷಾಮ ಪರಿಹಾರದ ಬೇಡಿಕೆ ವಿಚಾರದಲ್ಲಿ ನನ್ನ ಸಲಹೆಗಳನ್ನು ಕೊಡಬಯಸುತ್ತೇನೆ.

ಸ್ವಾಮಿ, ಕ್ಷಾಮ ಪರಿಹಾರದ ವಿಷಯದಲ್ಲಿ ಸರ್ಕಾರದವರು ಬಹಳ ಕಾಲದಿಂದಲೂ ಯೋಚನೆ ಮಾಡುತ್ತ ಬಂದಿದ್ದಾರೆ. ಹಿಂದೆ ಕ್ಷಾಮ ತಲೆದೋರಿದಾಗ ಕೇವಲ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳುವುದರ ಮೂಲಕ ಜನಸಾಮಾನ್ಯರಿಗೆ ಆ ದಿನಕ್ಕೆ ಆಗುವಷ್ಟು ಆಹಾರ ಧಾನ್ಯಗಳನ್ನು ಒದಗಿಸುವ ಕ್ರಮಗಳನ್ನು ಸರ್ಕಾರದವರು ಕೈಗೊಳ್ಳುತ್ತಿದ್ದರು. ಆದರೆ ಎಷ್ಟೇ ಈ ರಸ್ತೆ ಕಾಮಗಾರಿಗಳನ್ನು ಕೈಗೊಂಡರೂ ಕೂಡ ಜನರಿಗೆ ಶಾಶ್ವತವಾದ ಪರಿಹಾರವನ್ನು ಕಲ್ಪಿಸುವುದು ಸಾಧ್ಯವಿಲ್ಲದೆ ಇರುವುದರಿಂದ, ಶಾಶ್ವತವಾದ ಪರಿಹಾರವನ್ನು ಜನರಿಗೆ ಕಲ್ಪಿಸಬೇಕಾದರೆ ಅಭಾವ ಪ್ರದೇಶಗಳಲ್ಲಿ ನೀರಾವರಿ ಯೋಜನೆಗಳನ್ನು ಮಾಡುವುದು ಬಹಳ ಮುಖ್ಯವಾದುದು. ದೇಶದಲ್ಲಿ ಕೆಲವು ಭಾಗಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚಮಾಡಿ ದೊಡ್ಡ ದೊಡ್ಡ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದ್ದರೂ ಕೂಡ ಅವುಗಳಿಂದ ನಾವು ನಿರೀಕ್ಷೆ ಮಾಡುವಷ್ಟು ಕಾಲದಲ್ಲಿ ಪ್ರತಿಫಲವನ್ನು ಪಡೆಯುವುದು ಅಸಾಧ್ಯ. ಅಭಾವ ಪ್ರದೇಶಗಳಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಕೊಳ್ಳುವುದು ಬಹು ಪ್ರಾಮುಖ್ಯ ಮತ್ತು ಅನಿವಾರ್ಯವಾಗಿರುತ್ತದೆ. ಸರ್ಕಾರದವರು ಇದಕ್ಕಾಗಿ 280 ಕೋಟಿ ರೂಪಾಯಿಗಳ ವೆಚ್ಚದಲ್ಲಿ 15 ವರ್ಷಗಳ ಒಂದು ದೀರ್ಘಾವಧಿ ಯೋಜನೆಯನ್ನು ಕೈಕೊಂಡಿರುತ್ತಾರೆ. ಈ ಯೋಜನೆಯ ಅಂಗವಾಗಿ ಮೂರನೆಯ ಯೋಜನೆಯಲ್ಲಿ 20-25 ಕೋಟಿ ರೂಪಾಯಿಗಳ ವೆಚ್ಚವನ್ನು ಮಾಡಿರುವುದಲ್ಲದೆ ಬಹು ಬೇಗ ಪ್ರತಿಫಲವನ್ನು ಪಡೆಯುವುದಕ್ಕೋಸ್ಕರ 40 ಕೋಟಿ ರೂಪಾಯಿಗಳ ಒಂದು ತಾತ್ಕಾಲಿಕ ಯೋಜನೆಯನ್ನು ಕೂಡ ಸರ್ಕಾರದವರು ರೂಪಿಸಿಕೊಂಡಿದ್ದಾರೆ. ಆದರೆ ಈ ಕಾರ್ಯಕ್ರಮಗಳು ಅಭಾವ ಪ್ರದೇಶದಲ್ಲಿ ಸರ್ಕಾರದ ನೀತಿಗೆ ಅನುಗುಣವಾಗಿ ನಡೆಯುತ್ತಿವೆಯೋ ಇಲ್ಲವೇ ಎಂದು ಯೋಚನೆ ಮಾಡಿದರೆ ಅವೆಲ್ಲ ಎಲ್ಲಿ ಮಳೆ ಹೆಚ್ಚಾಗಿ ಬೀಳುತ್ತದೆ ಮತ್ತು ಎಲ್ಲಿ ನೀರಿನ ಸೌಕರ್ಯ ಹೆಚ್ಚಾಗಿರುತ್ತದೆ ಅಂಥ ಕಡೆಗಳಲ್ಲಿ ಹೇರಳವಾಗಿ ಹಣವನ್ನು ಸುರಿಯುತ್ತಿದ್ದಾರೆ. ಅಭಾವ ಪ್ರದೇಶಗಳಲ್ಲಿರತಕ್ಕ ಸಣ್ಣ ಸಣ್ಣ ಕೆರೆಗಳು ಮತ್ತು ಬಾವಿಗಳು ಇಂಥ ಕೆಲಸಗಳಿಗೆ ಸರ್ಕಾರದವರು ಇಡೀ ಸಂಸ್ಥಾನಕ್ಕೆ ಏನೊಂದು ಕಾರ್ಯನೀತಿಯನ್ನು ಅನುಸರಿಸುತ್ತಾರೆ ಅದೇ ನೀತಿಯನ್ನು ಅನುಸರಿಸುತ್ತಿದ್ದಾರೆ. ಕಳೆದ ಒಂದು ವರ್ಷದಿಂದ ಬಾವಿಗಳು ಮತ್ತು ಕೆರೆ ಕಾಮಗಾರಿಗಳ ಕೆಲಸವನ್ನು ಸರ್ಕಾರದವರು ನಿಲ್ಲಿಸಿರುತ್ತಾರೆ. ಹೀಗಾದರೆ ಅಭಾವ ಪ್ರದೇಶದ ಅಭಿವೃದ್ಧಿ ಎನ್ನುವುದು ಹೇಗೆ ? ಇದರ ಅರ್ಥವಾದರೂ ಏನು ಎನ್ನುವುದು ನನಗೆ ತಿಳಿಯುತ್ತಿಲ್ಲ. ಸರ್ಕಾರದವರು ಈಗಲಾದರೂ ಅಭಾವ ಪ್ರದೇಶಗಳಿಗೆ ಹೆಚ್ಚಿನ ನೆರವನ್ನು ಕೊಟ್ಟು ಶಾಶ್ವತವಾದ ಕಾಮಗಾರಿ ಕೆಲಸಗಳನ್ನು ಕೈಕೊಳ್ಳಬೇಕು. ಅಲ್ಲಿ ತೆಗೆದುಕೊಳ್ಳಬಹುದಾದ ಕಾಮಗಾರಿಗಳು ಎಂದರೆ ಸಣ್ಣ ಸಣ್ಣ ಕೆರೆಗಳು ಮತ್ತು ಗೋಕಟ್ಟೆಗಳು ಹಾಗೂ ನೀರಾವರಿ ಬಾವಿಗಳನ್ನು ಒದಗಿಸುವುದು, ಆ ಬಾವಿಗಳಿಗೆ ಪಂಪ್ ಸೆಟ್‌ಗಳನ್ನು ಒದಗಿಸುವುದು. ಇದಲ್ಲದೆ ಮಣ್ಣಿನ ಸಂರಕ್ಷಣೆ, ಹೆಚ್ಚಾಗಿ ಕಾಡನ್ನು ಬೆಳೆಸುವುದು ಇವು ಮುಖ್ಯವಾದ ಕೆಲಸಗಳಾಗಿವೆ. ಸರ್ಕಾರ ಒಂದು ಸ್ಪೆಷಲ್ ಪ್ರೋಗ್ರಾಂ ಹಾಕಿಕೊಂಡು 40 ಕೋಟಿ ರೂಪಾಯಿಗಳನ್ನು ಯಾವ ಉದ್ದೇಶದಿಂದ ಮೀಸಲಾಗಿಟ್ಟಿದೆಯೋ ಅದನ್ನು ಅಭಾವ ಪ್ರದೇಶಗಳಲ್ಲಿ ಪೂರ್ಣವಾಗಿ ವಿನಿಯೋಗ ಮಾಡುವುದಕ್ಕೆ ಸರ್ಕಾರ ಪ್ರಯತ್ನಪಡಬೇಕು ಮತ್ತು ಅಲ್ಲಿ ಕೈಕೊಳ್ಳಬೇಕಾಗಿರತಕ್ಕ ಜಲಾಶಯಗಳು ಅಥವಾ ನದಿಗಳೇನಾದರೂ ಇದ್ದರೆ ಅಲ್ಲಿ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಹಾಕುವುದರ ಮೂಲಕ, ಹೊಸದಾಗಿ ಅಲ್ಲಲ್ಲಿ ಕೆರೆಗಳನ್ನು ನಿರ್ಮಿಸುವುದಕ್ಕೆ ಅವಕಾಶವನ್ನು ಕಲ್ಪಿಸುವುದರ ಮೂಲಕ, ಗೋಕಟ್ಟೆಗಳನ್ನು ನಿರ್ಮಿಸುವುದರ ಮೂಲಕ ಜನಸಾಮಾನ್ಯರಿಗೆ ನೆರವನ್ನು ಅಭಾವ ಪ್ರದೇಶದಲ್ಲಿ ಕೊಡಬಹುದು. ಮತ್ತು ಅವರಿಗೆ ಶಾಶ್ವತವಾಗಿ ಕ್ಷಾಮ ಪರಿಹಾರಕ್ಕೆ ಮೂಲ ಸಾಧನಗಳನ್ನು ಕಲ್ಪಿಸಿಕೊಟ್ಟಂತಾಗುತ್ತದೆ.

ಈಗ ನಮ್ಮ ಭಾಗವನ್ನು ತೆಗೆದುಕೊಂಡರೆ ಸಿರಾ, ಮಧುಗಿರಿ, ಪಾವಗಡ ಈ ಮೂರು ತಾಲ್ಲೂಕುಗಳಲ್ಲಿ ಬಹಳ ಹಿಂದಿನಿಂದಲೂ ತಲಪರಿಗೆಗಳು ಜಾಸ್ತಿ ಇವೆ. ಇವು ನಾದುರಸ್ತಾಗಿವೆಯಾದ್ದರಿಂದ ನೀರನ್ನು ಒದಗಿಸುವುದಕ್ಕೆ ಅನುಕೂಲವಾಗಿಲ್ಲ.

(ಶ್ರೀ ಆರ್. ಕೆಂಚಪ್ಪ)

ರೈತರು ತಮ್ಮ ಸ್ವಂತ ಖರ್ಚಿನಿಂದ ತಲಪರಿಗೆಗಳನ್ನು ತೆಗೆದು ದುರಸ್ತು ಮಾಡುತ್ತಿದ್ದಾರೆ. 10-20-30 ಎಕರೆಗಳವರೆಗೆ ನೀರನ್ನು ಹಾಯಿಸಿಕೊಳ್ಳುತ್ತಿದ್ದಾರೆ. ಕಳೆದ 4-5 ವರ್ಷಗಳ ಹಿಂದೆ ತಲಪರಿಗೆ ಕಲ್ಯಾಣಿಗಳನ್ನು ಬೇಕಾದಷ್ಟು ಕಟ್ಟಿಸಿದ್ದಾರೆ. ಕಾರಣಾಂತರಗಳಿಂದ ಅದನ್ನು ಈಗ ನಿಲ್ಲಿಸಿದ್ದಾರೆ. ಅನೇಕ ಸಂದರ್ಭಗಳಲ್ಲಿ ಈ ತಲಪರಿಗೆಗಳ ವಿಷಯವಾಗಿ ಸಣ್ಣ ನೀರಾವರಿ ಯೋಜನಾ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ನಮ್ಮ ತಾಲ್ಲೂಕಿಗೆ ಬಂದಾಗ್ಗೆ ತಲಪರಿಗೆಗಳ ಅಂದಾಜನ್ನು ತಯಾರು ಮಾಡಿ ಇನ್ನೂ ಕಾರ್ಯಕ್ರಮವನ್ನು ಕೈಗೊಳ್ಳಬೇಕು ಎಂಬುದಾಗಿ ಹೇಳಿದರು. ಆದರೆ ಆ ರೀತಿ ಅವರು ಆಶ್ವಾಸನೆ ಕೊಟ್ಟು ಈಗ್ಗೆ 1½ ವರ್ಷಗಳಾದರೂ ಆ ಬಗ್ಗೆ ಇದುವರೆಗೆ ಇಲಾಖೆಯವರು ಗಮನಕ್ಕೆ ತೆಗೆದುಕೊಂಡಿಲ್ಲ. ಒಂದು ತಲಪರಿಗೆ ಕೂಡ ಮಾಡಿಲ್ಲ. ಅದಷ್ಟು ಜಾಗ್ರತೆಯಾಗಿ ನಮ್ಮ ತಾಲ್ಲೂಕಿನಲ್ಲಿ, ಪಾವಗಡ, ಮಧುಗಿರಿ ಮುಂತಾದ ತಾಲ್ಲೂಕುಗಳಲ್ಲಿಯೂ ಈ ತಲಪರಿಗೆಗಳಿಗೆ ಕಲ್ಯಾಣಿಗಳನ್ನು ಮಾಡಿಸಿ ಕೊಟ್ಟರೆ ರೈತರಿಗೆ ಹೆಚ್ಚು ನೀರನ್ನು ವ್ಯವಸಾಯಕ್ಕಾಗಿ ಒದಗಿಸಿದಂತಾಗುತ್ತದೆ. ಅಲ್ಲದೆ ಹೆಚ್ಚು ಆಹಾರವನ್ನು ಬೆಳೆಯಲಿಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ನಮ್ಮ ತಾಲ್ಲೂಕಿನ ಉತ್ತರ ಪೆನ್ನಾರ್ ನದಿಯ ದಡದಲ್ಲಿ ಲಿಫ್ಟ್ ಇರ್ರಿಗೇಷನ್ ಸ್ಕೀಂ ಐದಾರು ವರ್ಷಗಳಿಂದ ಪರಿಶೀಲನೆಯಲ್ಲಿದೆ. ಅದನ್ನು ಸರ್ಕಾರದವರು ಇನ್ನೂ ಮಂಜೂರು ಮಾಡದೇ ಇರುವುದು ಬಹಳ ಶೋಚನೀಯವಾಗಿದೆ. ಆದರೆ ಅಭಾವ ಪ್ರದೇಶಗಳಲ್ಲಿ ಮಾತನಾಡುವ ಅಭಾವ ಇದ್ದರೆ ಅಲ್ಲಿ ಕೆಲಸಗಳು ಆಗುವುದಿಲ್ಲ. ಎಲ್ಲಿ ಬಾಯಿ ಗಲಾಟೆ ಮಾಡುತ್ತಾರೋ ಅಲ್ಲಿ ಮಂತ್ರಿಗಳ ಗಮನ ಹರಿಯುವುದು ಸ್ವಾಭಾವಿಕವಾಗಿದೆ. ನಮ್ಮ ಕಂದಾಯ ಸಚಿವರಿಗೂ ಕೂಡ ನಮ್ಮ ತಾಲ್ಲೂಕಿಗೂ ಪಾವಗಡ, ಮಧುಗಿರಿ ತಾಲ್ಲೂಕುಗಳಿಗೂ ಬಾವಿಗಳಿಗಾಗಿ ಹೆಚ್ಚು ಹಣವನ್ನು ಕೊಡಬೇಕು ಎಂಬುದಾಗಿ ಹೇಳಿದ್ದೇನೆ. ಆ ಮೂಲಕ ಹೆಚ್ಚಿಗೆ ಆಹಾರ ಬೆಳೆಯಲಿಕ್ಕೆ ಅನುಕೂಲವಾಗುತ್ತದೆ. ಆದರೆ ಇವರೂ ಸಹ ಬಾಯಿ ಮಾತಿನಲ್ಲಿ ಆಶ್ವಾಸನೆಗಳನ್ನು ಕೊಡುತ್ತಾರೆ. ಒಟ್ಟಿನಲ್ಲಿ ನಮ್ಮ ಪ್ರದೇಶಗಳಿಗೆ ಈ ಬಗ್ಗೆ ಬೇಕಾದಷ್ಟು ಹಣ ಒದಗಿಸುತ್ತಾ ಇಲ್ಲ. ನಮ್ಮ ಜಿಲ್ಲೆಗೆ ಒಟ್ಟಾಗಿ ಈ ಬಾಬಿಗೆ ಕೊಟ್ಟಿರುವುದು ಕೇವಲ 2 ಲಕ್ಷ ರೂಪಾಯಿಗಳು. ಅದರಲ್ಲಿ ನಮ್ಮ ತಾಲ್ಲೂಕಿಗೆ 26 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದೇನೂ ಸಾಕಾಗುವುದಿಲ್ಲ. ಆದ್ದರಿಂದ ಈ ಮಾರ್ಚ್ ತಿಂಗಳೊಳಗೆ ಇನ್ನು 20 ಸಾವಿರ ರೂಪಾಯಿಗಳನ್ನು ಒದಗಿಸಿಕೊಟ್ಟು ಅಲ್ಲಿ ಹೆಚ್ಚು ಹೆಚ್ಚಾಗಿ ಬಾವಿಗಳನ್ನು ತೆಗೆಯುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಇನ್ನು ಜಮೀನುಗಳ ಆಬಾದು ಮಾಡಬೇಕಾಗಿದ್ದರೆ ಹೆಚ್ಚಿಗೆ ಹಣವನ್ನು ಕೊಡುತ್ತಾ ಇಲ್ಲ. ತಕಾವಿ ಸಾಲಗಳ ವಿಚಾರದಲ್ಲಿ ಹೆಚ್ಚಿಗೆ ಹಣವನ್ನು ಒದಗಿಸಿ ರೈತರಿಗೆ ಜಮೀನು ಆಬಾದು ಮಾಡಿಕೊಳ್ಳುವುದಕ್ಕೆ ಮತ್ತು ಹೆಚ್ಚು ಆಹಾರ ಬೆಳೆಯಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು. ನಮ್ಮ ತಾಲ್ಲೂಕಿನಲ್ಲಿ ಬಾವಿಗಳಿಂದ ನೀರನ್ನು ತೆಗೆದುಕೊಳ್ಳುವುದಕ್ಕೋಸ್ಕರ ಐ.ಪಿ. ಸೆಟ್ಟಿಗಾಗಿ ತಿಮ್ಮಮ್ಮನ ಹಳ್ಳಿಯ ರೈತರು 1952ನೇ ಇಸವಿಯಲ್ಲಿ ಠೇವಣಿ ಮಾಡಿದ್ದರೂ ಅವರಿಗೆ ಇದುವರೆಗೂ ಐ.ಪಿ. ಸೆಟ್‌ಗಳು ಮಂಜೂರಾಗಿಲ್ಲ. ಸರ್ವೆ ಆಗಿಲ್ಲ, ಲೈನ್ ಎಳೆದಿಲ್ಲವೆಂಬುದಾಗಿ ಹೇಳುತ್ತಿದ್ದಾರೆ. ಆದ್ದರಿಂದ ಇಂತಹ ಅಭಾವ ಪ್ರದೇಶಗಳಲ್ಲಿ ಯಾವ ರೀತಿ ಅನುಕೂಲ ಮಾಡುತ್ತಾರೋ ಎನ್ನುವುದಕ್ಕೆ ಇದೇ ನಿದರ್ಶನ. ಸರ್ಕಾರದವರು ಈ ವಿಚಾರದಲ್ಲಿ ನಮ್ಮ ತಾಲ್ಲೂಕನ್ನು ಸಂಪೂರ್ಣವಾಗಿ ಹೆಚ್ಚಿನ ನಿರ್ಲಕ್ಷ್ಯ ಭಾವನೆಯಿಂದ ನೋಡುತ್ತಿದ್ದಾರೆಂದು ನನ್ನ ಭಾವನೆ. ನಮ್ಮಲ್ಲಿ ನಾಗಲಮಡಿಕೆ ಹೋಬಳಿ ಎಂದು ಇದೆ. ಅದು ಆಂಧ್ರಪ್ರದೇಶದ ರಾಯಲಸೀಮೆಯಿಂದ ಆವರಿಸಿರುವ ಪ್ರದೇಶ. ಅಲ್ಲಿನ ಅಂದರೆ ಆಂಧ್ರದಲ್ಲಿ ರೈತರಿಗೆ ಕೊಟ್ಟಿರುವ ಸೌಲಭ್ಯಗಳನ್ನು ಇಲ್ಲಿಯೂ ಕೊಡಬೇಕೆಂದು ನಾನು ಹೇಳುತ್ತೇನೆ. ಈ ವಿಚಾರದಲ್ಲಿ ಕಂದಾಯ ಮಂತ್ರಿಗಳು ಗಮನ ಕೊಡಬೇಕು. ಐ.ಪಿ. ಸೆಟ್ಟಿಗಾಗಿ ಠೇವಣಿ ಕೊಟ್ಟೇ ಐದಾರು ವರ್ಷಗಳಾದರೂ ತಂತಿ ಅಭಾವ ಇನ್ನೂ ಇದೆಯೆಂದು ಹೇಳುತ್ತಿದ್ದಾರೆ. ಅಲ್ಲಿ ಸರ್ವೆ ಮಾಡಿದ್ದರೂ ಕಂಬಗಳನ್ನು ಹಾಕಿಲ್ಲ. ಸರ್ವಿಸ್ ಕೊಡುವುದಕ್ಕೆ ಸರ್ಕಾರದವರು ಹೆಚ್ಚಿಗೆ ಗಮನ ಕೊಟ್ಟಿಲ್ಲ. ಆದ್ದರಿಂದ ಈ ಅಭಾವ ಪ್ರದೇಶಗಳಿಗೆ ಸಣ್ಣ ನೀರಾವರಿ ಯೋಜನೆಗಳ ಉಪಮಂತ್ರಿ ಹಾಗೂ ಕಂದಾಯ ಮಂತ್ರಿಗಳು ಪೂರ್ಣ ಗಮನ ಕೊಟ್ಟು ಈ ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳಿಗೆ ಮತ್ತು ಬಾವಿಗಳಿಗೆ ಹೆಚ್ಚಿಗೆ ಹಣವನ್ನು ಸರ್ಕಾರದಿಂದ ಕೊಡಿಸಬೇಕು. ನಮ್ಮ ಪ್ರದೇಶ ಆಂಧ್ರದ ಸರಹದ್ದಿನಲ್ಲಿರುವುದರಿಂದ ನಮ್ಮ ಪ್ರದೇಶದಿಂದ ಹೆಚ್ಚು ಉಪಯೋಗವನ್ನು ಪಡೆಯಲು ಪ್ರಯತ್ನ ಮಾಡುತ್ತಿರುತ್ತಾರೆ. ನಮ್ಮವರು ಇಲ್ಲಿ ಪಿಕಪ್ ನಾಲೆ ಕಟ್ಟಿ ಎಂದರೆ ಅಗ್ರಿಮೆಂಟಲ್ ಜೋನಿನಲ್ಲಿ ಬರುವುದರಿಂದ ಆಗುವುದಿಲ್ಲ ಎನ್ನುತ್ತಾರೆ. ಆಂಧ್ರದವರು ಕೇಂದ್ರದಲ್ಲಿ ಆಗಾಗ್ಗೆ ತಕರಾರು ಮಾಡುತ್ತಾರೆ. ಅವರು ನಮ್ಮ ಬೌಂಡರಿಯೊಳಗೂ ಕೆರೆ ಕುಂಟೆಗಳನ್ನು ನಿರ್ಮಿಸುತ್ತಾರೆ. ಆದರೆ ನಮ್ಮ ಸರ್ಕಾರಕ್ಕೆ ಆ ಧೈರ್ಯ ಏತಕ್ಕೆ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಈಗಲಾದರೂ ಎಲ್ಲೆಲ್ಲಿ ಪಿಕಪ್ ಸಣ್ಣ ಸಣ್ಣ ಕೆರೆಕುಂಟೆಗಳನ್ನು

ಕಟ್ಟಲಿಕ್ಕೆ ಸಾಧ್ಯವೋ ಅಂತಹ ಕಡೆಗಳಲ್ಲಿ ನಮ್ಮ ತಾಲ್ಲೂಕಿನಲ್ಲಿ ಜಾಗ್ರತೆಯಾಗಿ ಮಾಡಿಸಲು ತೀವ್ರ ಗಮನವನ್ನು ಸರ್ಕಾರದವರು ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳ ಬಗ್ಗೆ ನಾನು ಮಾತನಾಡುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತಾ ಇದ್ದೇನೆ. ನನಗಂತೂ ಡಿವಿಜನಲ್ ಕಮಿಷನರ್ ಬಗ್ಗೆ ಮೊನ್ನೆ ಕಾರ್ಮಿಕ ಮಂತ್ರಿಗಳು ಒಂದು ಮಾತನ್ನು ಹೇಳಿದರು. ಸ್ಟೇಟ್ ಲೆವಲ್ ರಿಕ್ರೂಟ್‌ಮೆಂಟ್ ಮತ್ತು ಡಿವಿಜನಲ್ ಲೆವಲ್ ರಿಕ್ರೂಟ್‌ಮೆಂಟನ್ನು ಇನ್ನುಮುಂದೆ ಪಿ.ಎಸ್.ಸಿ.ಗೆ. ವಹಿಸುತ್ತೇವೆಂದೂ ಅವರನ್ನು ಆ ಒಂದು ತಾಪತ್ರಯದಿಂದ ಬಿಡುಗಡೆ ಮಾಡುತ್ತೇವೆಂದೂ ತಿಳಿಸಿದರು. ಇದನ್ನು ಕೇಳಿ ನನಗೆ ಮಹದಾನಂದವಾಯಿತು. ಯಾವಾಗ ಕೇಳಿದರೂ ಅವರು ಶಿವಮೊಗ್ಗಾಕ್ಕೆ ಹೋಗಿದ್ದಾರೆ, ಅಲ್ಲಿ ರಿಕ್ರೂಟ್‌ಮೆಂಟ್, ಇಲ್ಲಿ ರಿಕ್ರೂಟ್‌ಮೆಂಟ್‌ಗೆ ಹೋಗಿದ್ದಾರೆ ಹೀಗೆ ಹೇಳುತ್ತಿದ್ದರು. ನಮ್ಮ ಡಿವಿಜನಲ್ ಕಮಿಷನರಿಗೆ ಸ್ವಲ್ಪವೂ ಕಾಲಾವಕಾಶ ಸಿಕ್ಕುತ್ತಾ ಇರಲಿಲ್ಲ. ಅವರಿಗೆ ಡೆವಲಪ್‌ಮೆಂಟ್ ಕೇಸುಗಳನ್ನು ವಿಚಾರಣೆ ಮಾಡುವುದಕ್ಕಂತೂ ಕಾಲಾವಕಾಶ ಸಿಗುತ್ತಿರಲಿಲ್ಲ. ಆ ಒಂದು ಕೆಲಸದಿಂದ ಅವರನ್ನು ಬಿಡುಗಡೆ ಮಾಡಿದ್ದರಿಂದ ಅವರು ಈಗ ಡೆವಲಪ್‌ಮೆಂಟ್ ಕೆಲಸಕಾರ್ಯಗಳಿಗೆ ಹೆಚ್ಚಿನ ಗಮನವನ್ನು ಕೊಡಲು ಹೆಚ್ಚು ಕಾಲಾವಕಾಶ ದೊರೆಯುತ್ತಿದೆ. ಸರ್ಕಾರದವರು ಕಣ್ಣುಬಿಟ್ಟು ಈ ಕೆಲಸವನ್ನು ಮಾಡಿದ್ದರಿಂದ ಅವರನ್ನು ಕಂಗ್ರಾಚುಲೇಟ್ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮೈಸೂರಿನ ಡಿಸ್ಟ್ರಿಕ್ಟ್ ಆಫೀಸುಗಳಲ್ಲಿರತಕ್ಕ ಸಿಬ್ಬಂದಿ ವಿಚಾರವಾಗಿ ಈಗಾಗಲೇ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅಲ್ಲಿನ ಸಿಬ್ಬಂದಿ ವಿಚಾರವಾಗಿ ಹೇಳುವುದಾದರೆ, ನನಗೆ ಬಹಳ ದುಃಖವಾಗುತ್ತದೆ. ಅಲ್ಲಿನ ರೆವಿನ್ಯೂ ಇಲಾಖೆಗೆ, ಡಿಸ್ಟ್ರಿಕ್ಟ್ ಆಫೀಸಿಗೆ ಬರುವವರು ಸಾಧಾರಣವಾಗಿ ರೈತಾಪಿ ಜನರೇ ಹೆಚ್ಚು. ಅಲ್ಲಿಯೇ ಅವರ ಕಷ್ಟಗಳನ್ನು ಹೇಳಿಕೊಳ್ಳಬೇಕು. ಅಲ್ಲಿಂದಲೇ ಅವರ ಕಷ್ಟಗಳ ನಿವಾರಣೆಯಾಗಬೇಕು. ಒಂದೊಂದು ಕಂಬಕ್ಕೂ ಹಣವನ್ನು ಮುಡುಪಾಗಿ ಕಟ್ಟಿ ಇನ್ನೊಂದು ಕಂಬಕ್ಕೆ ಹೋಗಬೇಕು. ರೈತರಿಗೆ ಸ್ವಲ್ಪವೂ ಪರಿಹಾರ ಸಿಗುತ್ತಾ ಇಲ್ಲ. ಉದಾಹರಣೆಗೆ ಹೇಳುವುದಾದರೆ, ಮೊನ್ನೆ ತಾನೇ ಸರ್ಕಾರೀ ಲೆವಲ್ಲಿನಲ್ಲಿ ಕೆಲವು ಹಾಸ್ಟಲುಗಳಿಗೆ ಜಮೀನು ಹಂಚಿಕೆಯಾಯಿತು. ಮಂತ್ರಿಗಳು ಅದನ್ನು ಮಂಜೂರು ಮಾಡಿದ್ದಾರೆ. ಸೆಕ್ರೆಟರಿಯವರ ಮತ್ತು ಡೆಪ್ಯುಟಿ ಕಮಿಷನರ ರುಜು ಅದರ ಬಗ್ಗೆ ಆಗಿದ್ದರೂ ಅದಕ್ಕೆ ಸಂಬಂಧಪಟ್ಟ ಕಾಗದ ಅಲ್ಲಿಯ ಜಾಗಬಿಟ್ಟು ಕದಲದೆ ಇದ್ದುದರಿಂದ ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡಿದ ಮೇಲೆ ಈ ವಿಚಾರ ಹೈಕೋರ್ಟಿಗೆ ಹೋಗಿ ಅಲ್ಲಿಂದ ಒಂದು ಕಡೆ ಆಜ್ಞೆ ಬಂತು. ಆದ್ದರಿಂದ ಅಲ್ಲಿನ ನೌಕರರಿಗೆ ಸರ್ಕಾರೀ ಕೆಲಸದಲ್ಲಿ ಮಾನ, ಮರ್ಯಾದೆ, ಗೌರವ ಏನೂ ಇಲ್ಲ. ಇದರಿಂದ ರೈತರಿಗೆ ರಕ್ಷಣೆ ಇಲ್ಲ. ಅಲ್ಲಿ ಹೋಗಿ ಅಲ್ಲಿನ ಅಧಿಕಾರಿಗಳನ್ನು ವಿಚಾರಿಸಿ ನಿಮಗೆ ಗೌರವವಾದರೂ ಇಲ್ಲವೇ ಎಂದು ಕೇಳಿದರೆ ಅವರು ನಮಗೆ ಏನೋ ಒಂದು ವಾರ್ನಿಂಗ್ ಕೊಟ್ಟರು ಅಷ್ಟೇ ಎಂದು ಹೇಳುತ್ತಾರೆ. ಅಲ್ಲಿ ಯಾರೇ ಎಡವಿ ಬಿದ್ದರೂ ಅವರವರೇ ಒಟ್ಟಿಗೆ ಸೇರಿಕೊಂಡು ಬಿಡುತ್ತಾರೆ. ಯಾವ ರೀತಿಯಾದರೂ ಒಂದು ವಾರ್ನಿಂಗ್‌ನಿಂದ ಉಪಾಯದಲ್ಲಿ ಅಲ್ಲಿನ ನೌಕರರು ಪಾರಾಗುತ್ತಿದ್ದಾರೆ. ಹೀಗೆ ಅಲ್ಲೊಂದು ಗ್ಯಾಂಗ್ ಸೇರಿ ಒಂದು ಕ್ಲಿಕ್ ಫಾರಂ ಆಗಿರುವುದಾಗಿದೆ. ಮೈಸೂರು ಜಿಲ್ಲೆ ಈ ಅನ್ಯಾಯದಿಂದ ಎಂದಿಗೆ ಪಾರಾಗುತ್ತದೋ ಗೊತ್ತಿಲ್ಲ. ಹಿಂದೆ ರೆವಿನ್ಯೂ ಸೆಕ್ರೆಟರಿಯವರು ಡಿ. ಸಿ. ಆಗಿದ್ದ ಕಾಲದಲ್ಲಿ ಸ್ವಲ್ಪ ಮಟ್ಟಿಗೆ ಅಲ್ಲಿನ ಆಡಳಿತ ಚೆನ್ನಾಗಿತ್ತು. ಅವರ ಆಡಳಿತವಾದ ಮೇಲೆ ಮೈಸೂರು ಜಿಲ್ಲೆಗೆ ಬರುತ್ತಾ ಇರತಕ್ಕ ಡಿ. ಸಿ. ಗಳು ಯಾವ ಪೂರ್ವ ಕಾಲದಲ್ಲಿದ್ದಂತಹವರೋ ಗೊತ್ತಿಲ್ಲ. ಈಗ ಅಲ್ಲಿ ಘೋರ ನರಕವಾಗಿದೆ. ಸರ್ಕಾರದವರು ಈ ವಿಚಾರದಲ್ಲಿ ಪೂರ್ಣ ನಿಗಾ ಕೊಡಬೇಕೆಂದು ಕೋರುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ಬಹಳ ಚುರುಕಾದ ತಹಸೀಲ್‌ದಾರನಿದ್ದಾನೆ. ಆತ ಎಲ್ಲಾ ಪಟೇಲರ ಹತ್ತಿರ ಕಿರ್ದಿ ಹಣ ಕಂದಾಯ ಹಣವನ್ನು ವಸೂಲು ಮಾಡುತ್ತಿದ್ದ ಸುಮಾರು 400 - 500 - 600 ರೂಪಾಯಿಗಳನ್ನಾದರೂ ಪಟೇಲರು ಯಾವ ರೀತಿಯಾದರೂ ಎಲ್ಲಿಂದಾದರೂ ತಂದು ಕೊಡಬೇಕೆಂದು ಹೇಳುತ್ತಿದ್ದ. ಒಂದು ವೇಳೆ ವಸೂಲಾಗದೇ ಇದ್ದರೆ ಈ ತರಹ ಬರೆಸಿಬಿಡಿ, ಆ ತರಹ ಬರೆಸಿ ಬಿಡಿ ಎಂದು ಹೇಳಿ ಎಷ್ಟು ವಸೂಲಾಗುತ್ತದೋ ಅಷ್ಟನ್ನು ತೆಗೆದುಕೊಂಡು ಬರಬೇಕೆಂದು ಹೇಳುತ್ತಿದ್ದ. ಆದರೆ ಕಡಿಮೆಯಾಗಿ ತೆಗೆದುಕೊಂಡು ಹೋದರೆ ಒಂದೊಂದು ಸಾರಿ ತೆಗೆದುಕೊಳ್ಳುವುದಿಲ್ಲವೆಂದು ಗಲಾಟೆ ಮಾಡುತ್ತಿದ್ದ. ಆದರೆ ವಸೂಲಾದ ಹಣವನ್ನು ಪಟೇಲರು ಇಟ್ಟುಕೊಂಡಿರುವುದಕ್ಕೆ ಸ್ಥಳವಿಲ್ಲ. ಅಂದ ಮೇಲೆ ಆ ಹಣಕ್ಕೆ ಜವಾಬ್ದಾರಿ ಯಾರು? ಇದರಿಂದ ಸರ್ಕಾರದವರು ಕೂಡಲೆ ಆ ತಹಸೀಲ್ದಾರರಿಗೆ ಪಟೇಲರಿಂದ ವಸೂಲಾದ ಹಣವನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಕೊಡಬೇಕು, ಪಟೇಲರಿಗೆ ಆ ಮೂಲಕ ರಕ್ಷಣೆ ಕೊಡಬೇಕೆಂದು ನಾನು

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಹೇಳುತ್ತೇನೆ. ಅವರಿಗೆ ಆತನು ಕೊಡುತ್ತಿರುವ ಈ ಕಿರುಕುಳ ಮೊದಲು ತಪ್ಪಬೇಕು. ಪಟೇಲರಾಗಲೀ ಶ್ಯಾನುಭೋಗರುಗಳಾಗಲೀ ಅವರೂ ಸಹ ನಮ್ಮಂತೆಯೇ ಮನುಷ್ಯರಾಗಿರುತ್ತಾರೆ. ಅವರು ಯಾವಾಗಲೂ ರೈತರ ಹತ್ತಿರ ವಹಿವಾಟು ಮಾಡುವವರು. ಅಂದ ಮೇಲೆ ಪಟೇಲರಿಗೂ, ಶ್ಯಾನುಭೋಗರಿಗೂ ಈ ರೀತಿ ಜವಾಬ್ದಾರಿಯನ್ನು ಹಾಕವುದು ಶುದ್ಧ ತಪ್ಪು.

ಅದಕ್ಕೆ ಸರ್ಕಾರದವರು ನಿಗಾ ಕೊಡಬೇಕೆಂದು ನಾನು ಬಹಳ ಕಟುವಾಗಿ ಹೇಳುತ್ತೇನೆ. ರೈತರಿಗಾಗಲೀ ಪಟೇಲರಿಗಾಗಲೀ ಆ ತರಹ ಕಿರುಕುಳವನ್ನು ಕೊಡಬಾರದು ಎಂದು ನಾನು ಹೇಳುತ್ತೇನೆ.

12-00 NOON

ಇನ್ನು ಆಹಾರದ ವಿಚಾರಕ್ಕೆ ಬಂದರೆ ಇದರಲ್ಲಿ ನಮ್ಮ ಸರ್ಕಾರಕ್ಕೂ ಮುಖ್ಯ ಮಂತ್ರಿಗಳಿಗೂ ಮತ್ತು ರೆವಿನ್ಯೂ ಮಂತ್ರಿಗಳಿಗೂ ಎಲ್ಲರಿಗೂ ಕೂಡ ನಮ್ಮ ತಾಲ್ಲೂಕಿನವರು ಕೃತಜ್ಞರಾಗಿದ್ದಾರೆ. ಹಿಂದೆ ನಮ್ಮ ತಾಲ್ಲೂಕಿಗೆ ಬಂದಂತಹ ಆಪತ್ಕಾಲದಲ್ಲಿ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ನಮಗೆ ಸಹಾಯ ಮಾಡಿದ್ದಾರೆ. ಹೋದ ವರ್ಷ ಅಷ್ಟು ಕಠಿಣವಾದ ಪರಿಸ್ಥಿತಿಯಲ್ಲಿಯೂ ಕೂಡ ಸರ್ಕಾರದವರು ನಮಗೆ ಸಹಾಯ ಮಾಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿರತಕ್ಕ ಜನಗಳು ಜೋಳವನ್ನು ಊಟಮಾಡತಕ್ಕ ಜನಗಳು. ಈಗ ಅವರಲ್ಲಿ ಒಂದು ತಿಂಗಳು ಅಥವಾ 15 ದಿವಸಗಳಿಗಾಗುವಷ್ಟು ಮಾತ್ರ ಜೋಳದ ದಾಸ್ತಾನು ಇದೆಯೆಂದು ಕಾಣುತ್ತದೆ. ಈಗ ಸರ್ಕಾರದವರು ಬೇಕಾದಷ್ಟು ಜೋಳವನ್ನೂ ದಾಸ್ತಾನು ಮಾಡಿದ್ದಾರೆ.

ಅದರಲ್ಲಿ ನಮಗೆ ಜೋಳವನ್ನು ಒದಗಿಸಿ ಕೊಡಬೇಕು. ಮತ್ತು ನಮಗೇನಾದರೂ ಮುಂದೆ ಕಷ್ಟ ಬಂದರೆ ಆಗ ಸರ್ಕಾರದವರು ನಮಗೆ ಸಹಾಯ ಮಾಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ.

ಇನ್ನು ಎರಡನೆಯದು ಏನೆಂದರೆ, ಈಗ ಕೂಲಿಗಾರರಿಗೆ ಬಹಳ ಕಷ್ಟ ಬಂದಿದೆ. ಈಗ ಕೂಲಿಗಾರರು ನಮ್ಮ ತಾಲ್ಲೂಕಿನಲ್ಲಿ ಎಲ್ಲೋ 40-50-60 ಸೇರು ಬತ್ತವನ್ನು ತಲೆಯಮೇಲೆ ಹೊತ್ತುಕೊಂಡು ಮಿಲ್ಲಿಗೆ ತೆಗೆದುಕೊಂಡು ಹೋಗಿ ಮಿಲ್ ಮಾಡಿಸುವುದಕ್ಕೆ ಹೋದರೆ ಅದರಲ್ಲಿ ಅರ್ಧ ಬತ್ತವನ್ನು ವಾಪಸ್ಸು ಸರ್ಕಾರಕ್ಕೆ ಕೊಡಬೇಕೆಂದು ಹೇಳಿದರೆ, ಕೂಲಿಗಾರರ ಗತಿ ಏನಾಗಬೇಕೆಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಇದರಿಂದ ಕೂಲಿಗಾರರಿಗೆ ಬಹಳ ಹಿಂಸೆಯಾಗುತ್ತಿದೆ. ಅದನ್ನು ತಪ್ಪಿಸಬೇಕು. ಈಗ ಮಿಲ್ಲಿನವರೂ ಕೂಡ ಬತ್ತವನ್ನು ಮಿಲ್ ಮಾಡುವುದಕ್ಕೆ ರೇಟನ್ನು ಜಾಸ್ತಿ ಮಾಡಿದ್ದಾರೆ. ಅವರನ್ನು ಏತಕ್ಕೆ ರೇಟನ್ನು ಜಾಸ್ತಿ ಮಾಡಿದ್ದೀರೆಂದು ಕೇಳಿದರೆ ಮಿಲ್ಲನ್ನು ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಬರತಕ್ಕ ಇನ್‌ಸ್ಪೆಕ್ಟರಿಗೆ ಬೇರೆ ದುಡ್ಡು ಕೊಡಬೇಕು ಅದಕ್ಕೋಸ್ಕರ ರೇಟನ್ನು ಜಾಸ್ತಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಆದ್ದರಿಂದ ಮಿಲ್ಲುಗಳನ್ನೆಲ್ಲಾ ಇನ್‌ಸ್ಪೆಕ್ಟ್ ಮಾಡಿ ಒಂದು ಪಲ್ಲ ಬತ್ತ ಮಿಲ್ ಮಾಡಿಸಲು ಇಷ್ಟು ರೇಟು ಕೊಡಬೇಕೆಂದು ಸರ್ಕಾರ ನಿಗದಿಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಇನ್ನು ನಾನು ಹಿಂದೆ ಒಂದು ಸಾರಿ ಹೇಳಿದ ಹಾಗೆ ಪುರಿಬತ್ತಕ್ಕೆ ಉಪ್ಪು. ಬೆಳಗಾರ, ಮತ್ತು ಮಜ್ಜಿಗೆ ಇವುಗಳನ್ನೆಲ್ಲಾ ಮಿಕ್ಸ್ ಮಾಡಿ ಅದರಲ್ಲಿ ಬತ್ತವನ್ನ ನೆನೆಸಿರುತ್ತಾರೆ. ಅಂಥಾ ಬತ್ತವನ್ನ ಜನಗಳು ಮಿಲ್ಲಿಗೆ ತಂದರೆ ಅದರಲ್ಲೂ ಅರ್ಧ ಬತ್ತವನ್ನ ಕೊಡಬೇಕೆಂದರೆ ಹೇಗೆ? ಆ ಬತ್ತದ ಅಕ್ಕಿಯನ್ನು ದನ ತಿನ್ನಬೇಕೋ ಅಥವಾ ಜನ ತಿನ್ನಬೇಕೋ ಅದು ನನಗೆ ಗೊತ್ತಿಲ್ಲ. ಆ ಕೊಳೆತು ನಾರುವ ಅಕ್ಕಿಯನ್ನು ಯಾರು ತಿನ್ನುತ್ತಾರೋ ನನಗೆ ಗೊತ್ತಿಲ್ಲ. ಸುಮ್ಮನೆ ಅಂಥಾದ್ದಕ್ಕೆಲ್ಲ ಜನಗಳಿಗೆ ತೊಂದರೆ ಕೊಡಬಾರದೆಂದು ಸಂಬಂಧಪಟ್ಟವರಿಗೆ ಸೂಚನೆ ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ವ್ಯಾಪಾರಸ್ಥರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಲಾರಿಯಲ್ಲಿ ಸಾಮಾನುಗಳನ್ನು ತೆಗೆದುಕೊಂಡು ಹೋಗಬೇಕಾದರೆ ಲೈಸೆನ್ಸ್ ತೆಗೆದುಕೊಂಡಿರಬೇಕೆಂದು ಇದೆ. ಲೈಸೆನ್ಸ್ ಇಲ್ಲದೆ ರಾತ್ರಿ ಕಾಲದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಲಾರಿಯಲ್ಲಿ ಸಾಮಾನುಗಳನ್ನ ತೆಗೆದುಕೊಂಡು ಹೋಗಕೂಡದು ಎಂದೂ ಇದೆ. ರಾತ್ರಿ ಕಾಲದಲ್ಲಿ ಲಾರಿಯನ್ನ ತೆಗೆದುಕೊಂಡು ಹೋಗದೆ ಹೋದರೆ ಸಮಯದಲ್ಲಿ ಲಾರಿಗಳು ಸಿಕ್ಕುವುದಿಲ್ಲ. ನಮ್ಮ ತಾಲ್ಲೂಕಿಗೆ ಹೋಗಬೇಕಾದರೆ ಮೈಸೂರಿನ ಬಾರ್ಡರ್‌ನಲ್ಲಿ ನಂಜನಗೂಡು ಮತ್ತು ಗುಂಡ್ಲುಪೇಟೆ ಬಾರ್ಡರ್‌ನಲ್ಲಿ ಲಾರಿಯನ್ನು ಚೆಕ್ ಮಾಡುತ್ತಾರೆ. ಆಗ ಅವರನ್ನು ಸಮಾಧಾನಪಡಿಸಬೇಕಾದರೆ ಅವರಿಗೆಲ್ಲಾ ಹಣ ಕೊಡಬೇಕು. ಆಮೇಲೆ ಡೆಪ್ಯುಟಿ ಕಮೀಷನರ ಆಫೀಸಿನಲ್ಲಿ ಒಂದು ಲೈಸೆನ್ಸ್ ತರಬೇಕಾದರೆ ಆ ಆಫೀಸಿಗೆ ತಿರಗ

ಬೇಕಾದಲೆ ಪ್ರಾಣ ಹೋಗುತ್ತದೆ. ಈಗ ಉದಾಹರಣೆಗೆ ನಾನು ಹೇಳಬೇಕಾಗಿದ್ದರೆ ಒಬ್ಬರು ಲೈಸೆನ್ಸ್ ಹೋಲ್ಡರು ತಮ್ಮ ಲೈಸೆನ್ಸ್‌ಅನ್ನು ರಿನ್ಯೂ ಮಾಡಿಸುವುದಕ್ಕೆ ಡೆಪ್ಯುಟಿ ಕಮೀಷನರ ಹತ್ತಿರ ಕೊಟ್ಟಿದ್ದರು ಅವರು ಟಂಡೀಪುರದ ಹತ್ತಿರ ಲಾರಿಯನ್ನು ತೆಗೆದುಕೊಂಡು ಹೋಗುವಾಗ ಅವರು ಡೆಪ್ಯುಟಿ ಕಮೀಷನರ ದೃಷ್ಟಿಗೆ ಬಿದ್ದರು. ಆಗ ಅವರು ಲೈಸೆನ್ಸ್ ಹೋಲ್ಡರನ್ನು ನಿಮ್ಮ ಲೈಸೆನ್ಸ್ ಎಲ್ಲಿ ಎಂದು ಕೇಳಿದರು. ಆಗ ಅವರು ಅದನ್ನು ರಿನ್ಯೂ ಮಾಡಿಸುವುದಕ್ಕೆ ತಮಗೆ ಕೊಟ್ಟಿದ್ದೇನೆ ಎಂದು ಅದರ ನಂಬರನ್ನು ಅವರಿಗೆ ತೋರಿಸಿದರು. ಅದಕ್ಕೆ ಡೆಪ್ಯುಟಿ ಕಮೀಷನರು ನನ್ನ ಹತ್ತಿರ ಆ ಪೇಪರು ಬಂದಿಲ್ಲ ಎಂದು ಹೇಳಿದರು. ಡೆಪ್ಯುಟಿ ಕಮೀಷನರ ಹತ್ತಿರ ಒಂದು ಪೇಪರ್ ಹೋಗ ಬೇಕಾದರೆ ಅವರ ಸುತ್ತಲೂ 50-60 ರೂಪಾಯಿಗಳನ್ನು ಕೊಡಬೇಕು. ಹೀಗೆ ವ್ಯಾಪಾರಸ್ಥರು ಲೈಸೆನ್ಸ್ ಇಲ್ಲ ಎಂದು ಸುಮ್ಮನೆ ಕುಳಿತುಕೊಂಡರೆ ವ್ಯಾಪಾರ ನಿಂತು ಹೋಗುತ್ತದೆ, ಲೈಸೆನ್ಸ್ ತರಬೇಕಾದರೆ ಅಲ್ಲಿ ಅಷ್ಟೊಂದು ಕಷ್ಟ ಇದೆ. ಈ ಮಧ್ಯೆ ಬೇರೆ ಕಡೆ ಸಾಮಾನು ಮತ್ತು ಅಕ್ಕಿ ತರಬೇಕೆಂದರೆ ಸಿಕ್ಕಾಪಟ್ಟೆ ರೇಟುಗಳನ್ನ ಕೊಡಬೇಕಾಗುತ್ತದೆ. ಇದನ್ನು ಸರ್ಕಾರದವರು ಸ್ವಲ್ಪ ವಿಚಾರ ಮಾಡಬೇಕು. ಸುಲಭವಾಗಿ ಜನಗಳಿಗೆ ಅಕ್ಕಿ ಸಿಕ್ಕುವ ಕಡೆ ವ್ಯಾಪಾರಸ್ಥರಿಗೆ ಏನಾದರೂ ತೊಂದರೆ ಆಯಿತು ಎಂದರೆ ಸಾಧಾರಣವಾಗಿ ಬಾಕಿ ಜನಗಳಿಗೆ ಅಕ್ಕಿಯನ್ನ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರದವರು ಕೊಡುವ ಅಕ್ಕಿಯನ್ನ ಎಲ್ಲರೂ ಕೋ-ಅಪರೇಟಿವ್ ಸ್ಟೋರ್ಸ್‌ಗಳಲ್ಲಿಯೇ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಬೇರೆ ಅಂಗಡಿಗಳ ಮುಖಾಂತರವೂ ತೆಗೆದುಕೊಳ್ಳ ಬೇಕಾಗುತ್ತದೆ. ಈ ದೃಷ್ಟಿಯಿಂದ ವ್ಯಾಪಾರಸ್ಥರಿಗೆ ತೊಂದರೆಯನ್ನು ಮಾಡಬಾರದು ಅವರಿಗೆ ಸಹಾಯ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಬಾವಿಗಳ ವಿಷಯದಲ್ಲಿ ಹೇಳುವುದಾದರೆ, ಈಗ ಬಾವಿಗಳನ್ನು ತೆಗೆಯುವುದಕ್ಕೆ ರೈತರಿಗೆ ಸರ್ಕಾರದವರು ಒಂದು ಬಾವಿಗೆ 3 ಸಾವಿರ ರೂಪಾಯಿಗಳನ್ನು ಸಾಲವಾಗಿ ಕೊಡುತ್ತಿದ್ದಾರೆ. ಇದು ಸಾಕಾಗುವುದಿಲ್ಲ. ಅದನ್ನು 3 ಸಾವಿರ ರೂಪಾಯಿಗಳಿಂದ 5 ಸಾವಿರ ರೂಪಾಯಿಗಳಿಗೆ ಹೆಚ್ಚಿಸಬೇಕು. ಬಾವಿಯನ್ನು ತೆಗೆಯುವಾಗ ಅದರಲ್ಲಿ ಏನಾದರೂ ಬಂಡೆ ಸಿಕ್ಕಿತು ಎಂದರೆ 5 ಸಾವಿರ ರೂಪಾಯಿಗಳಲ್ಲ 10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೂ ಬಾವಿ ಪೂರ್ತಿ ಆಗುವುದಿಲ್ಲ. ಆದ್ದರಿಂದ ರೈತ ಬಾವಿಯನ್ನು ತೆಗೆಯುವಾಗ ಬಾವಿಯಲ್ಲಿ ಏನಾದರೂ ಬಂಡೆ ಬಿತ್ತು ಎಂದರೆ ಆ ಬಂಡೆ ರೈತನ ತಲೆಯ ಮೇಲೆ ಬಿದ್ದಂತಾಗುತ್ತದೆ. ಆದ್ದರಿಂದ ಈಗ ರೈತನಿಗೆ ಬಾವಿ ತಗೆಯುವುದಕ್ಕೆ 3 ಸಾವಿರ ರೂಪಾಯಿಗಳ ಸಾಲ ಕೊಡುವುದನ್ನು 5 ಸಾವಿರ ರೂಪಾಯಿಗಳಿಗೆ ಜಾಸ್ತಿ ಮಾಡಬೇಕು. ಮತ್ತು ಈಗ ಬಾವಿಗಳಿಗೆ ಸಬ್ಸಿಡಿ ಕೊಡುವುದಕ್ಕೆ ಟೈಮ್ ಲಿಮಿಟ್ ಹಾಕಿದ್ದಾರೆ. ಆ ಕೆಲಸವನ್ನು ಮಾಡಬೇಕಾದರೆ ಒಂದು ವರ್ಷ ಎರಡು ವರ್ಷ ಹೀಗೆಲ್ಲಾ ಬೇಕಾಗುತ್ತದೆ ಅದಕ್ಕೋಸ್ಕರ ಸಬ್ಸಿಡಿ ಕೊಡುವುದಕ್ಕೆ ಟೈಮ್ ಲಿಮಿಟ್ ಹಾಕಬಾರದು ಎಂದು ನಾನು ಹೇಳುತ್ತೇನೆ.

ಇನ್ನು ಕೊನೆಯದಾಗಿ, ಅನಿಮಲ್ ಹಸ್ಬೆಂಡ್ರಿ ವಿಚಾರಕ್ಕೆ ಬಂದರೆ ನಮ್ಮ ತಾಲ್ಲೂಕಿನಲ್ಲಿರತಕ್ಕ ವೆಟರ್ನರಿ ಆಸ್ಪತ್ರೆಗಳಲ್ಲಿ ಬೇವಿನ ಎಣ್ಣೆ ಕೂಡ ಸಿಕ್ಕುವುದಿಲ್ಲ. ಆ ಆಸ್ಪತ್ರೆಗಳಲ್ಲಿ ಸರಿಯಾಗಿ ಔಷಧಿ ಸಪ್ಲೈ ಆಗುತ್ತಿಲ್ಲ. ಆದ್ದರಿಂದ ಅಲ್ಲಿರತಕ್ಕ ವೆಟರ್ನರಿ ಆಸ್ಪತ್ರೆಗಳಿಗೆ ಬೇಕಾಗುವಷ್ಟು ಔಷಧಿಗಳನ್ನು ಆದಷ್ಟು ಜಾಗ್ರತೆ ಒದಗಿಸುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಬೇಕು. ಈಗ ಗುಂಡ್ಲುಪೇಟೆಯಲ್ಲಿರತಕ್ಕ ವೆಟರ್ನರಿ ಆಸ್ಪತ್ರೆಯಲ್ಲಿರತಕ್ಕ ಡಾಕ್ಟರ ಹುದ್ದೆಯನ್ನ ಬ್ಲಾಕ್ ಡೆವಲಪ್‌ಮೆಂಟ್ ಇಲಾಖೆಗೆ ಸೇರಿಸಿರುವುದರಿಂದ ಅವರಿಗೆ ಬರೀ ಅಡ್ಮಿನಿಸ್ಟ್ರೇಷನ್ ಕೆಲಸವನ್ನ ಮಾತ್ರ ಮಾಡಬೇಕೆಂದು ಡೈರೆಕ್ಷನ್ ಕೊಟ್ಟಿದ್ದಾರೆ. ಆದ್ದರಿಂದ ಆ ಪ್ರದೇಶದಲ್ಲಿರತಕ್ಕ ವೆಟರ್ನರಿ ಆಸ್ಪತ್ರೆಗಳಿಗೆ ಹೋಗಿ ಟೂರ್ ಮಾಡಿಕೊಂಡು ಬರುವುದು ಅಡ್ಮಿನಿಸ್ಟ್ರೇಷನ್ ಕೆಲಸಗಳನ್ನು ನೋಡುವುದು ಇದರಲ್ಲಿಯೇ ಅವರಿಗೆ ಹೆಚ್ಚು ಕಾಲ ಬೇಕಾಗುತ್ತದೆ. ಈಗ ನಮ್ಮ ತಾಲ್ಲೂಕಿನಲ್ಲಿ ಫೌಲ್ಟ್ರಿ ಫಾರಮ್ ಇದೆ, ಆಸ್ಪತ್ರೆಗಳಿಗೆ ಬೇಕಾದಷ್ಟು ರಾಸುಗಳು ಬರುತ್ತವೆ. ಮತ್ತು ಅಲ್ಲಿ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ ಬೇರೆ ಇದೆ. ಈ ಕೆಲಸಗಳನ್ನೆಲ್ಲಾ ನೋಡಿಕೊಳ್ಳಬೇಕಾದರೆ ಅಲ್ಲಿಗೆ ಇನ್ನೊಬ್ಬರು ಡಾಕ್ಟರು ಬೇಕಾಗುತ್ತದೆ. ಆದ್ದರಿಂದ ಅಲ್ಲಿಗೆ ಇನ್ನೊಬ್ಬರು ಡಾಕ್ಟರನ್ನು ನೇಮಕ ಮಾಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ಈಗ ಈ ಸಭೆಯಮುಂದಿರುವ ಕಂದಾಯ ಶಾಖೆಯ ಬೇಡಿಕೆಗಳಿಗೆ ನಾನು ಒಪ್ಪಿಗೆಯನ್ನು ಕೊಡುತ್ತಾ ಈ ಇಲಾಖೆಯ ಸಲುವಾಗಿ ಕೆಲವು ಸೂಚನೆಗಳನ್ನು ಕೊಡಲಿಕ್ಕೆ ನಾನು ಅಪೇಕ್ಷೆ ಮಾಡುತ್ತೇನೆ. ಕಂದಾಯ ಶಾಖೆ ಎನ್ನುವುದು ಪೂರ್ವದಲ್ಲಿ ಬಹಳ ಮಹತ್ವದ ಶಾಖೆಯಾಗಿತ್ತು. ಒಂದು ರೀತಿಯಲ್ಲಿ ಹೇಳುವುದಾದರೆ, ಕಂದಾಯ ಶಾಖೆ ಎಂದರೆ ಸರ್ಕಾರ, ಸರ್ಕಾರ ಎಂದರೆ ಕಂದಾಯ ಶಾಖೆ ಎನ್ನುವ ಹಾಗಿತ್ತು.

(ಶ್ರೀ ಎ. ಜೆ. ದೊಡ್ಡಮೇಟಿ)

ತಹಶೀಲ್ದಾರರು ಮತ್ತು ಡೆಪ್ಯುಟಿ ಕಮೀಷನರುಗಳು ಸರ್ಕಾರದ ಒಂದು ಸ್ವರೂಪರಾಗಿದ್ದರು. ಈ ರೀತಿಯಾಗಿ ಕಂದಾಯ ಶಾಖೆ ಒಂದು ಮಹತ್ವವಾದ ಶಾಖೆಯಾಗಿತ್ತು. ಒಮ್ಮೆ ಕಂದಾಯ ಮಂತ್ರಿಗಳು ಹೇಳಿದಂತೆ ಡೆವಲಪ್‌ಮೆಂಟ್ ಶಾಖೆ ಬಂದನಂತರ ಈ ಕಂದಾಯ ಶಾಖೆ ವೈವಿಧ್ಯತೆಯಿಂದ ಕೂಡಿದಂತಹ ಶಾಖೆಯಾಗಿದೆ ಎಂದು ಹೇಳಿದ್ದು ಸ್ವಲ್ಪಮಟ್ಟಿಗೆ ನಿಜ ಎಂದು ಕಾಣುತ್ತದೆ. ನಿಜವಾಗಿ ಕಂದಾಯ ಶಾಖೆ ಮತ್ತು ವ್ಯವಸಾಯ ಶಾಖೆ ಇವುಗಳು ಪರಸ್ಪರ ಅವಿಭಾಜ್ಯ ಹಿತ ಸಂಬಂಧವನ್ನು ಹೊಂದಿದವುಗಳಾಗಿರಬೇಕು. ಸಾಧಾರಣವಾಗಿ ವ್ಯವಸಾಯ ಮತ್ತು ಕಂದಾಯ ಶಾಖೆ ಇವೆರಡಕ್ಕೂ ಒಬ್ಬರೇ ಮಂತ್ರಿಗಳಿರುವುದು ಒಳ್ಳೆಯದೆಂದು ಕಾಣುತ್ತದೆ. ಇದು ಸ್ವಲ್ಪ ಆಲೋಚನೆ ಮಾಡಬೇಕಾದ ಪ್ರಶ್ನೆ. ಈ ಎರಡು ಖಾತೆಗಳೂ ಕೂಡ ಹೆಚ್ಚಿಗೆ ವ್ಯವಸಾಯಗಾರರಿಗೆ ಸಂಬಂಧಪಟ್ಟದ್ದು ಆಗಿರುವುದರಿಂದ ಈ ಎರಡು ಖಾತೆಗಳನ್ನು ಒಬ್ಬರೇ ಮಂತ್ರಿಗಳು ವಹಿಸಿಕೊಂಡರೆ ಹೆಚ್ಚು ಪರಿಣಾಮಕಾರಿಯಾಗಿ, ಪ್ರಗತಿದಾಯಕವಾಗಿ, ಉತ್ತಮವಾದ ಪ್ರಗತಿಯನ್ನು ಸಾಧಿಸೀತು ಎಂದು ನಾನು ಹೇಳುತ್ತೇನೆ. ಬೇಕಾದರೆ ಈ ಇಲಾಖೆಗಳಿಗೆ ಸಂಬಧಪಟ್ಟ ಹಾಗೆ ಒಬ್ಬರು ಉಪಮಂತ್ರಿಗಳನ್ನು ನೇಮಿಸಿಕೊಳ್ಳಬಹುದು. ಈ ರೀತಿಯಿಂದ ಇದನ್ನು ವಿಚಾರಮಾಡತಕ್ಕದ್ದು ಸೂಕ್ತ. ಈಗ ಮುಖ್ಯವಾಗಿ ಈ ಇಲಾಖೆ ಎದುರಿಸಬೇಕಾದ ಗಡಿಸಿನ ಪ್ರಶ್ನೆ ಎಂದರೆ ರಿವಿಜನ್ ಆಫ್ ಸೆಟ್ಲ್‌ಮೆಂಟ್ ಪ್ರಕಾರ ಕಂದಾಯವನ್ನು ಹಾಕುವುದು. ಈ ವಿಚಾರದಲ್ಲಿ ಬಹಳ ಮಟ್ಟಿಗೆ ಭಿನ್ನಾಭಿಪ್ರಾಯ ಇದೆ. ಈ ವಿಚಾರದಲ್ಲಿ ಈ ನಮ್ಮ ಸಭೆಯಲ್ಲಿರತಕ್ಕ ಪ್ರತಿಯೊಬ್ಬ ಸದಸ್ಯರದೂ ಒಂದೊಂದು ವಿಚಾರ ಇದೆ. ಭೂಕಂದಾಯದ ಸಮಸ್ಯೆ, ರಿವಿಜನ್ ಆಫ್ ಸೆಟ್ಲ್‌ಮೆಂಟ್ ಸಮಸ್ಯೆ ಪಕ್ಷದ ಸಮಸ್ಯೆ ಅಲ್ಲ. ಇದು ಎಲ್ಲಾ ರೈತರಿಗೂ ಒಂದಲ್ಲ ಒಂದು ರೀತಿಯಲ್ಲಿ ಒಂದು ಪರಿಣಾಮವನ್ನುಂಟು ಮಾಡತಕ್ಕ ಸಮಸ್ಯೆ. ಈಗಾಗಲೇ ಒಂದು ನಿರ್ಣಯವನ್ನು ಈ ಸಭೆಯ ಮುಂದೆ ತರಲಿಕ್ಕೆ ಸರ್ಕಾರದವರು ಪ್ರಯತ್ನ ಮಾಡಿದ್ದಾರೆ. ತುರ್ತು ಪರಿಸ್ಥಿತಿಯ ದೆಶೆಯಿಂದ ಹೆಚ್ಚು ಅವಸರವಾಗಿ ಈ ನಿರ್ಣಯವನ್ನು ಈ ಸಭೆಯಮುಂದೆ ತಂದಿದ್ದಾರೆ. ಆ ನಿರ್ಣಯವನ್ನು ಬಹಳ ಸಾವಧಾನದಿಂದ ಈ ಸಭೆಯಲ್ಲಿ ವಿಚಾರ ಮಾಡಬೇಕು. ಅದು ಎಲ್ಲಾ ರೈತರಮೇಲೆಯೂ ಒಂದು ಪರಿಣಾಮವನ್ನುಂಟುಮಾಡುವುದರಿಂದ ಅದನ್ನು ಹೆಚ್ಚು ವಿಚಾರಪೂರಿತವಾದ ರೀತಿಯಲ್ಲಿ ಸ್ವಲ್ಪ ಸಾವಕಾಶವಾಗಿ ವಿಚಾರ ಮಾಡಬೇಕು. ಮತ್ತು ಉತ್ಪಾದನಾ ಪ್ರಶ್ನೆಯನ್ನೂ ಸ್ವಲ್ಪ ಗಮನದಲ್ಲಿಟ್ಟು ಇದನ್ನು ಮಾಡಬೇಕಾಗುತ್ತದೆ. ರಿವಿಜನ್ ಸೆಟ್ಲ್‌ಮೆಂಟ್ ಕಂದಾಯವನ್ನು ಆಕರಣೆ ಮಾಡಿರುವುದನ್ನು ಒಮ್ಮೆ ನೋಡಿದರೆ ಹಿಂದೆ ಸರ್‌ಚಾರ್ಜ್ ಏನು ಹಾಕಿದ್ದರೋ ಅದನ್ನೇ ಮುಂದುವರಿಸಿದ್ದರೆ ಚೆನ್ನಾಗಿತ್ತೋ ಏನೋ ಎನ್ನುವ ಭಾವನೆ ರೈತರಲ್ಲಿ ಬಂದಿದೆ. ಈ ಕಾರಣಕ್ಕಾಗಿ ಪ್ರಶ್ನೆ ಮುಂದುವರಿದಿರುವ ಮಟ್ಟಿಗೆ ಸರ್ಚಾರ್ಜ್ ತಾವು ಆಲೋಚನೆ ಮಾಡಿ, ರೆವಿನ್ಯು ಸೆಟಲ್‌ಮೆಂಟ್ ಬಗ್ಗೆ ಸ್ವಲ್ಪ ಶಾಸ್ತ್ರೀಯವಾಗಿ ಕೂಲಂಕಷವಾಗಿ, ಸಾವಕಾಶವಾಗಿ ವಿಚಾರ ಮಾಡುವುದು ಅನುಕೂಲವೆಂದು ನನ್ನ ಅಭಿಪ್ರಾಯ. ಅದನ್ನು ವಿಚಾರ ಮಾಡಬೇಕು.

ಇನ್ನು ಒಂದು ಅತಿಶಯದ, ಮಹತ್ವದ ಮಾತು. ಈ ಇನಾಂಗಳು ಕಂದಾಯಶಾಖೆಗೆ ಸೇರಿವೆ. ಈ ಇನಾಂ ಸೆಕ್ಷನ್ ಇಲ್ಲದಂತೆ ಆಗಬೇಕಾದರೆ, ಇನಾಂಗಳೆಲ್ಲಾ ರದ್ದಾಗಬೇಕು. ಇನಾಂ ಸೆಕ್ಷನ್ ಹೋಗುವಂತೆ ಮಾಡಲು ಇಷ್ಟು ಕಾಲದಲ್ಲಿ ಇದು ಹೋಗಬೇಕು ಎಂದು ಒಂದು ಕ್ರಮ ಹಾಕಿಕೊಳ್ಳಬೇಕು. ಅಷ್ಟರಲ್ಲಿ ಇನಾಂಗಳೆಲ್ಲಾ ಕಣ್ಮರೆಯಾಗಬೇಕು. ಇಂತಿಷ್ಟು ದಿವಸದಲ್ಲಿ ಇನಾಂಗಳೆಲ್ಲಾ ರದ್ದಾಗಿ, ಇನಾಂ ಎಂಬ ಶಬ್ದ ಕಂದಾಯಶಾಖೆ ಡಿಕ್ಷನೆರಿಯಲ್ಲಿ ಇರಬಾರದು. ಈ ಇನಾಂಗಳೆಲ್ಲಾ ಪೂರ್ತಿ ಹೋಗಿಬಿಡಬೇಕು. ಈ ಇನಾಂದಾರರೆಲ್ಲಾ ಕಷ್ಟಪಡದ ಆಬ್ಸೆಂಟಿ ಲ್ಯಾಂಡ್ ಲಾರ್ಡುಗಳು. ಯಾರೋ ರೈತರು ಕಷ್ಟಪಟ್ಟು ಬೀಜ ಬಿತ್ತಿ ಬೆಳೆದ ಬೆಳೆಯನ್ನು ಸುಖವಾಗಿ ಕುಳಿತುಕೊಂಡು ಊಟ ಮಾಡುವ ಇನಾಂದಾರರು. ಅದು ಇವತ್ತು ಸಮಾಜಕ್ಕೆ ಉಪಯುಕ್ತವಾದೀತೇ ? ತಾವು ಪ್ರತಿಜ್ಞೆ ಮಾಡಿದ್ದೀರಿ ಸಮಾಜವಾದಿ ಸಮಾಜವನ್ನು ಮಾಡುತ್ತೇವೆಂದು. ಸಮಾಜವಾದಿ ಸಮಾಜ ಹಳ್ಳಿಗಳಲ್ಲಿ ಪರಿಣಾಮಕಾರಿಯಾಗಬೇಕಾದರೆ, ಯಾವನು ಉಳುಮೆ ಮಾಡುತ್ತಾನೋ ಅವನು ಆ ಭೂಮಿಯ ಮಾಲೀಕನಾಗಬೇಕು, ಒಡೆಯನಾಗಬೇಕು.

ಮೊನ್ನೆ ಕಂದಾಯಶಾಖೆಯ ಸಚಿವರು, ಜುಲೈ 1ನೇ ತಾರೀಖಿನಿಂದ ಭೂಸುಧಾರಣೆ ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಆದರೆ ದುರ್ದೈವದಿಂದ ಹಾಗೆ ಜಾರಿಗೆ ತರದ ಅನೇಕ ನಿದರ್ಶನಗಳಿವೆ. ನೀವು ಜನರ ಮನಸ್ಸನ್ನು ನಿಜವಾಗಿ ಗೆಲ್ಲಬೇಕಾದರೆ ನಿಮ್ಮ ಕಾನೂನುಗಳನ್ನು ಖಂಡತುಂಡಾಗಿ ಜಾರಿಗೆ ತರಬೇಕು. ಜುಲೈ 1ನೇ ತಾರೀಖಿನಿಂದ ಭೂಸುಧಾರಣೆಯಾಗುತ್ತದೆಂದು ಹೇಳಿದ್ದಾರೆ. ಭೂಸುಧಾರಣೆ ಕಾನೂನನ್ನು ಜಾರಿಗೆ ಕೊಡಬೇಕಾದರೆ, ಈ ಭೂಸುಧಾರಣೆ ಸಂಬಂಧದ ಕಾನೂನಿಗೆ ತಿದ್ದುಪಡಿಗಳನ್ನು ಇದೇ ಅಧಿವೇಶನದಲ್ಲಿ ಮಾಡಿಕೊಂಡರೆ, ಅದು ಜಾರಿಗೆ ಬಂದೀತು.

ಯಾವ ಕಾರಣದಿಂದಲೋ ಈ ಅಧಿವೇಶನದಲ್ಲಿ ತಿದ್ದುಪಡಿಯನ್ನು ಪಾಸ್‌ಮಾಡಿಕೊಳ್ಳಲಿಲ್ಲವೆಂದರೆ ಜುಲೈ 1ನೇ ತಾರೀಖಿಗೆ ಈ ಭೂಸುಧಾರಣೆ ಜಾರಿಯಾಗಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ನಾನು ನಮ್ರಪೂರ್ವಕವಾಗಿ ಹೇಳುತ್ತೇನೆ. ಇದೇ ಅಧಿವೇಶನದೊಳಗೆ, ಒಂದೇ ದಿವಸದೊಳಗೆ ಆ ಕೆಲಸ ಆದೀತು. ಈ ಭೂಸುಧಾರಣೆ ತಿದ್ದುಪಡಿಯನ್ನು ಇದೇ ಅಧಿವೇಶನದೊಳಗೆ ಸ್ವೀಕಾರ ಮಾಡಬೇಕು. ಈಗ ಸ್ವಲ್ಪ ದಿವಸದ ಕೆಳಗೆ ತಾವು ಸರ್ಕಾರದವರು ಜುಲೈ 1ನೇ ತಾರೀಖಿನಿಂದ ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಹೇಳಿದಂಥ ಕಾನೂನು ಯಾವ ಕ್ರಮದೊಳಗೆ, ಯಾವ ಹಂತದೊಳಗೆ ಇದೆಯೆಂದು ಹೇಳಬೇಕು. ತಾವು ನಿಶ್ಚಿತವಾಗಿ ಇಂಥ ತಾರೀಖಿನೊಳಗೆ ಕಾಯಿದೆ ಪಾಸ್ ಮಾಡುತ್ತೇವೆ, ಇಂಥ ತಾರೀಖಿನೊಳಗೆ ನೋಟಿಫಿಕೇಶನ್ ಹೊರಡಿಸುತ್ತೇವೆ. ಇಂಥ ತಾರೀಖಿನೊಳಗೆ ರೂಲ್ಸ್ ಮಾಡುತ್ತೇವೆಂದು ಒಂದು ಕಾಲಪಟ್ಟಿ ಇಟ್ಟುಕೊಳ್ಳಬೇಕು. ಜುಲೈ 1ನೇ ತಾರೀಖಿನಿಂದ ಜಾರಿಗೆ ಕೊಡುತ್ತೇವೆಂದು ಹೇಳಿ, ಜೂನ್ 31ನೇ ತಾರೀಖಿನತನಕ ಸುಮ್ಮನೆ ಕುಳಿತುಕೊಂಡು ಜುಲೈ ಒಂದರಂದು ಫಕ್ಕನೆ ಡಿಕ್ಲೇರ್ ಮಾಡುವುದು ಶಕ್ಯವಿಲ್ಲ. ಇದನ್ನು ಯಾವ ಕ್ರಮದೊಳಗೆ, ಯಾವ ಹಂತದಲ್ಲಿ ತೆಗೆದುಕೊಳ್ಳುತ್ತೀರಿ, ಯಾವ ಯಾವ ದಿನಾಂಕ ಏನೇನು ಮಾಡುತ್ತೀರಿ ಎಂದು ಪೂರ್ವಭಾವಿಯಾಗಿ ವಿಚಾರಮಾಡಿ, ಮಾಡುವ ಕೆಲಸ ಇದು.

ಇನಾಂಗಳ ವಿಷಯದಲ್ಲಿ ಇನ್ನೂ ಸ್ವಲ್ಪ ಹೇಳಬೇಕಾಗಿದೆ. ಈ ಇನಾಂಗಳನ್ನು ನಿರ್ದಿಷ್ಟವಾಗಿ ಯಾವ ದಿನಾಂಕ ರದ್ದು ಮಾಡುತ್ತೀರಿ, ಈ ಇನಾಂ ಸೆಕ್ಷನ್ ಇಲ್ಲದಂತೆ ಎಂದಿಗೆ ಮಾಡುತ್ತೀರಿ ಎಂದು ಹಿಂದೆ ಈ ಶಾಸನ ಸಭೆಯೊಳಗೆ ನಾನು ಒಮ್ಮೆ ಪ್ರಶ್ನೆ ಕೇಳಿದ ಹೊತ್ತಿಗೆ, ಆವತ್ತಿನ ಸರ್ಕಾರದವರು, ಹಿಂದಿನ ಸರ್ಕಾರದವರು ಹೇಳಿದ್ದಾರೆ; ಪ್ರಶ್ನೆ ಏನೆಂದರೆ ದೇವಸ್ಥಾನದ ಇನಾಂಗಳೂ, ದೇವದಾಸಿ ಇನಾಂಗಳೂ ಉತ್ತರ ಕರ್ಣಾಟಕದೊಳಗೆ ಬಹಳ ಉಂಟು, ಆ ಇನಾಂಗಳನ್ನು 6 ವರ್ಷದೊಳಗೆ ರದ್ದು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಈ ತನಕ ಬಿಲ್ ಡ್ರಾಫ್ಟ್ ಆಗಿದೆಯೋ ಇಲ್ಲವೋ ? ಉತ್ತರ ಕರ್ನಾಟಕದೊಳಗೆ ದೇವಸ್ಥಾನಗಳಿಗೆಂದು ಕೊಟ್ಟ ಜಮೀನಿನ ಅನೇಕ ಇನಾಂದಾರರು ಅಬ್ಸೆಂಟ್‌ಆಗಿ ದುರುಪಯೋಗವಾಗುತ್ತಿವೆ.

ಅದೇರೀತಿಯಾಗಿ ಈ ಸರ್ವೆ ಸೆಟಲ್‌ಮೆಂಟ್ ಇಲಾಖೆಯಿಂದ ಬಹಳ ಅಧ್ವಾನವಾಗಿದೆ. ಸರ್ವೆ ಸೆಟಲ್‌ಮೆಂಟ್ ಶಾಖೆಯವರಿಂದಲೇ ಬಹುಶಃ ಹಳ್ಳಿಗಳ ಸ್ಥಿತಿ ಅಧ್ವಾನವಾಗಿರುವುದು, ಅವರು ಹಳ್ಳಿಗೆ ಬಂದರೆಂದರೆ ಜಮೀನಿನಲ್ಲಿರುವ ಕಲ್ಲನ್ನು ಕಿತ್ತು ಈಚೆಕಡೆ ಹಾಕುವುದು, ಈಚೆಕಡೆ ಇರುವುದನ್ನು ಆಚೆಕಡೆ ಹಾಕುವುದು, ಹೀಗೆ ಏನೇನೋ ಮಾಡುತ್ತಾರೆ. ಇದರ ಸಲುವಾಗಿ ಬಹಳ ಅಧ್ವಾನವಾಗಿದೆ. ಸರ್ಕಾರದವರು ಇದರ ಬಗ್ಗೆ ಏನು ನಿಶ್ಚಿತವಾದಂಥ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು, ಪರಿಣಾಮಕಾರಿಯಾಗಿ ತಾವು ಉತ್ತರದಲ್ಲಿ ಹೇಳಬೇಕು ಎಂದು ಕೇಳುತ್ತೇನೆ.

ಅನೇಕ ಭೂಮಿಗಳನ್ನು ಪ್ರತ್ಯೇಕವಾಗಿ ಕೊಟ್ಟಿದ್ದಾರೆ. ಹರಿಜನರಿಗೆ, ಅಬ್ಸೆಂಟಿ ಲ್ಯಾಂಡ್ ಲಾರ್ಡುಗಳಿಗೆ ರಾಜಕೀಯ ಸಂತ್ರಸ್ತರಿಗೆ ಕೊಟ್ಟಿದ್ದಾರೆ. ಅನೇಕ ಕಾರಣಗಳಿಂದ ಅವರು ಉಪಭೋಗಿಗಳಲ್ಲ. ಅವರಿಗೆ ಬರಿ ಭೂಮಿ ಹಂಚಿಕೊಟ್ಟರೆ ಆಗುವುದಿಲ್ಲ. ರಾಯಚೂರು ಜಿಲ್ಲೆಯಲ್ಲಿ, ಗದಗ್, ಬೆಟಗೇರಿ, ಗಜೇಂದ್ರಗಡದಲ್ಲಿ ರೈತರಿಗೆ ಭೂಮಿ ಕೊಟ್ಟಿದ್ದಾರೆ. 2-3 ವರ್ಷದ ಲಾಗಾಯಿತು ಪ್ರಯತ್ನ ಮಾಡಿದರೂ ಅವರಿಗೆ ಧನ ಸಹಾಯ ಸಿಗಲಿಲ್ಲ. ಬರೀ ಭೂಮಿ ಕೊಟ್ಟರೆ ಆಗುವುದಿಲ್ಲ. ತಕಾವಿ ಸಾಲ, ಎತ್ತು, ವಗೈರೆ ಕೊಟ್ಟು ತಾವು ಏನಾದರೂ ಸಹಾಯ ಮಾಡಬೇಕು. ಅತ್ಯವಶ್ಯಕವಾದ ಸಹಾಯವನ್ನು ಅವರಿಗೆ 2-3 ವರ್ಷದ ಲಾಗಾಯಿತು ಏಕೆ ಮಾಡಲಿಲ್ಲ. ನಾನು ಈ ಬಗ್ಗೆ ರಾಯಚೂರ್ ಡೆಪ್ಯುಟಿ ಕಮೀಷನರಿಗೆ ಆಗಿಂದಾಗ್ಗೆ ಬರೆದಿದ್ದೇನೆ. ಅವರು ಇನ್ನೂ ಈತನಕ ಉತ್ತರ ಕೊಟ್ಟಿಲ್ಲ; ಉತ್ತರ ಕೊಡುವ ಸ್ವಭಾವವೇ ಇಲ್ಲ. ಸರ್ಕಾರದವರಿಗೆ ಬರೆದರೆ ಒಂದು ಉತ್ತರ ಬರುತ್ತದೆ. ಡೆಪ್ಯುಟಿ ಕಮಿಷನರಿಗೆ ಕೊಟ್ಟ ಅರ್ಜಿಗೆ ಉತ್ತರ ಬರುವುದು ಬಹಳ ಕಷ್ಟ. ಹೀಗಾಗದಿರಲಿಕ್ಕೆ ಡೆಪ್ಯುಟಿ ಕಮಿಷನರು ಬಲಯುತರಾಗಿರಬೇಕು, ಯೋಗ್ಯರಾಗಿರಬೇಕು, ಪ್ರಾಮಾಣಿಕರಾಗಿರಬೇಕು. ಒಬ್ಬ ಜಿಲ್ಲೆಯ ಡೆಪ್ಯುಟಿ ಕಮಿಷನರ ಕೆಲಸವನ್ನು ನೋಡಿದರೆ, ಅವರಿಗೆ ಏನೇನೋ ಬಾಬುಗಳನ್ನು ಕೊಟ್ಟಿದ್ದಾರೆ. ಇವತ್ತಿನ ದಿವಸ ಆಡಳಿತ ದೃಷ್ಟಿಯಿಂದ ಡೆವಲಪ್‌ಮೆಂಟ್ ವರ್ಕ್, ಮತ್ತು ಇನ್ನೂ ಅನೇಕ ಕಾರ್ಯಗಳನ್ನು ಅವರಿಗೆ ವಹಿಸಿದ್ದಾರೆ. ಅವರು ಯಾವುದಕ್ಕೂ ಸರಿಯಾಗಿ ನಿಗಾ ಕೊಡುವುದಕ್ಕಾಗುವುದಿಲ್ಲ. ಅವರಿಗೆ ಡೆವಲಪ್‌ಮೆಂಟ್ ಕಮಿಟಿ ಚೇರ್ಮನ್‌ಗಿರಿ ಬೇರೆ. ಅವರಿಗೆ ವಿವಿಧಶಾಖೆಗಳ ಕೆಲಸವಿರುತ್ತದೆ, ಹೀಗಾಗಿ ಅನೇಕ ಕಾರ್ಯಗಳು ಕೇಂದ್ರವಾಗಿರುತ್ತಾರೆ. ಒಬ್ಬ ಡೆಪ್ಯುಟಿ ಕಮಿಷನರು ಕೆಲವು ಜಿಲ್ಲೆಗಳಿಗೆ ಬಹಳ ಬುದ್ಧಿವಂತರೂ, ಅನುಭವಸ್ಥರೂ, ದಕ್ಷರೂ ಆದವರನ್ನು ಡೆಪ್ಯುಟಿ ಕಮಿಷನರಾಗಿ ವರ್ಗ ಮಾಡಬೇಕು, ಏಕೆಂದರೆ ಅಲ್ಲಿ ಪುಡಾರಿಗಳ ಕೈವಾಡ ಬಹಳವಿರುತ್ತದೆ. ಅಂಥ ಕಡೆಗೆ ಚತುರರಾದವರು ಕಲೆಕ್ಟರಾಗಿರಬೇಕು ಇಂಥ ಜಿಲ್ಲೆಗಳು ಅಂದರೆ ಧಾರವಾಡ, ಬಿಜಾಪುರ, ಚಿತ್ರದುರ್ಗವನ್ನೂ ಸೇರಿಸಿಕೊಳ್ಳಿ ಈ ಪಟ್ಟಿಗೆ. ಬಹಳ ಬುದ್ಧಿವಂತರೂ, ರಾಜಕಾರಣಿಗಳೂ ಆದ ಜನ ಎಲ್ಲೆಲ್ಲಿರುತ್ತಾರೆ, ಅಲ್ಲಲ್ಲಿಗೆ ಬಹಳ ಬಲವಾದ, ಜಾಣರಾದ ಡೆಪ್ಯುಟಿ ಕಮಿಷನರನ್ನು

(ಶ್ರೀ ಎ. ಜೆ. ದೊಡ್ಡಮೇಟಿ)

ಹಾಕಬೇಕು. ಬಲವಾದ, ವಿಶೇಷ ಅನುಭವವುಳ್ಳ ಡೆಪ್ಯುಟಿ ಕಮಿಷನರು ಬಂದಕೂಡಲೆ ಕೆಲವರಿಗೆ ತಲೆನೋವು ಬರುತ್ತದೆ. ಅವರ ಮೇಲೆ ಸಾವಿರಾರು ದೂರುಗಳನ್ನು ಮಂತ್ರಿಗಳಲ್ಲಿ ಹೇಳಿ ಅವರನ್ನು ಬೇಗ ಅಲ್ಲಿಂದ ವರ್ಗ ಮಾಡುವುದಕ್ಕೆ ಹತ್ತುತ್ತಾರೆ. ಅಂಥ ರಾಜಕಾರಣಿಗಳ ಮಾತಿಗೆ ಬೆಲೆ ಕೊಟ್ಟು, ಅವರಿಗೆ ಬೇಕಾದ ಆಫೀಸರುಗಳನ್ನು ಇಟ್ಟು ನೀವು ರಾಜ್ಯ ಆಳಬೇಡಿ. ದೇವರು ನಿಮ್ಮನ್ನು ಆಳುವು ದಕ್ಕೇ ಕಳುಹಿಸಿಲ್ಲ. ಶುದ್ಧವಾದ ಆಡಳಿತ ಮಾಡುವುದಕ್ಕಾಗದಿದ್ದರೆ, ನೀವು ಅಧಿಕಾರದಲ್ಲಿರುವುದು ಬೇಡ. ಬೇಕಾದವರು ಆಳಲಿ. ಆಫೀಸರುಗಳ ಮೂಲಕ ನೀವು ರಾಜ್ಯಭಾರ ಮಾಡಿಕೊಂಡು ಹೋಗುವುದು ಬೇಡ. ನಮ್ಮ ಪಾಲಿಗೆ ರಾಜ್ಯ ಬಂದಿದೆ ಎಂದು ಅಶುದ್ಧ ರೀತಿಯಲ್ಲಿ ರಾಜ್ಯಾಡಳಿತ ನಡೆಸುವುದು ಸರಿಯಾದ ಹಾದಿಯಲ್ಲ, ಅದು ಈ ರಾಷ್ಟ್ರಕ್ಕೆ ಸರಿಯಾದ ಹಾದಿಯಲ್ಲ. ಈ ರೀತಿ ವಿಚಾರ ಮಾಡಿ ಎಲ್ಲೆಲ್ಲಿ ಆಡಳಿತ ಸರಿಯಾಗಿಲ್ಲವೊ, ಅಲ್ಲಿಗೆ ಸಮರ್ಥರೂ, ನ್ಯಾಯವರ್ತಿಗಳೂ ಪಕ್ಷಪಾತವಿಲ್ಲದ ಆಫೀಸರುಗಳನ್ನು ಹಾಕಿ ಕೆಲಸ ಮಾಡೋಣ.

ವಶೀಲಬಾಜಿ ಮುಂತಾದುವನ್ನು ಕಡಿಮೆ ಮಾಡಬೇಕಾಗಿದೆ. ಆ ಆಫೀಸರನ್ನು ವರ್ಗ ಮಾಡಿ ಈ ಕಲೆಕ್ಟರನ್ನು ಅಲ್ಲಿಗೆ ಹಾಕಿ, ಆ ಡೆಪ್ಯುಟಿ ಕಮಿಷನರನ್ನು ಇಲ್ಲಿಗೆ ಹಾಕಿ, ಈ ಪ್ರಾಂತ್ಯ ಆಫೀಸರನ್ನು ಬದಲಾಯಿಸಿ, ಯಾರೋ ಒಬ್ಬ ವ್ಯಕ್ತಿಯನ್ನು ತಮ್ಮಲ್ಲಿಗೆ ತಹಸೀಲ್‌ದಾರನಾಗಿ ವರ್ಗ ಮಾಡಿಕೊಡಿ ಎಂದು ಕೇಳುವ ಎಂ.ಎಲ್.ಎ.ಗಳ ಲಿಸ್ಟನ್ನು ಒಮ್ಮೆಗೇ ಮಾಡಿ, ಈ ಹರಕೆ ಪುಡಾರಿಗಳ ಲಿಸ್ಟ್ ಇಡಿ, ಈ ಎಂ.ಎಲ್.ಎ.ಗಳಲ್ಲಿ, ಯಾರ್‍ಯಾರು ಎಷ್ಟೆಷ್ಟು ಸಲ ಆಫೀಸರುಗಳ ವರ್ಗಾವರ್ಗಿಗೆ ಬಂದಿದ್ದಾರೆ ಅಂತ. who is who ತಯಾರಿಸಿ, ಯಾರು ಯಾರು ಎಂದು ಪರಿಜ್ಞಾನ ಇಟ್ಟುಕೊಂಡು. ಆಯಾ ಮನುಷ್ಯನ ಯೋಗ್ಯತೆ ತಿಳಿದುಕೊಂಡು, ಅವನ ಮಾತಿಗೆ ಎಷ್ಟು ಬೆಲೆ ಕೊಡಬಹುದೆಂದು ನಿರ್ಧರಿಸಿ ಕೊಳ್ಳಿ. ಅದರ ತಿಳವಳಿಕೆ ಇಲ್ಲದೆ, ಒಬ್ಬರ ಒತ್ತಾಯಕ್ಕೆ ಬಾಗಬಾರದು. ನೀವು ಸ್ವಲ್ಪ ಕಟುವಾಗಿರ ಬೇಕು. ಡೆಪ್ಯುಟಿ ಕಮಿಷನರು ಬಲವಾಗಿರಬೇಕು ; ಕಾರಣವಿದೆ ; ಉದಾಹರಣೆಗೆ ಹೇಳುತ್ತೇನೆ. ಗಜೇಂದ್ರಘಡ ಏರಿಯಾದೊಳಗೆ, ರೋಣ ತಾಲ್ಲೂಕಿನೊಳಗೆ ಕುಂಟಜಿ ಮತ್ತು ನಗಸಿಕೊಪ್ಪ ಎಂಬ ಕಡೆ ಎರಡು ಚಿಕ್ಕ ನೀರಾವರಿಗಳನ್ನು ಕೈಗೊಳ್ಳಲಾಗಿದೆ. ಯಾರೋ ಒಬ್ಬರು ಆ ವ್ಯವಹಾರಕ್ಕೆ ಹರಿಕತ್ತು ಮಾಡಿದ್ದಾರೆ ; ಮಣ್ಣು ತೆಗೆದುಕೊಳ್ಳುವುದಕ್ಕೆ ಹರಕತ್ತು ಮಾಡಿದರು ; ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಬಲಪ್ರಯೋಗ ಮಾಡಬೇಕಾಗಿತ್ತು ; ಗಾಬರಿ ಬೀಳುತ್ತಾರೆ. ವಿಚಾರ ಮಾಡಿದ್ದರಲ್ಲಿ ತಾವು ಅಂಥ ನಿಶ್ಯಕ್ತ ಡೆಪ್ಯೂಟಿ ಕಮಿಶನರನ್ನು ಅಲ್ಲಿಗೆ ಹಾಕಿದ್ದೀರಿ. ಸರ್ಕಾರದ ಭೂಮಿ ಇನ್ನೂ ತನಕ ರೈತರಿಗೆ ಗ್ರ್ಯಾಂಟ್ ಆಗಿಲ್ಲ. ಸರ್ಕಾರದ ಭೂಮಿ ಇದ್ದರೂ ಸಹಿತ, ಕಿರುಕುಳ ಕೊಟ್ಟು, ಆಗತಕ್ಕಂಥ ಸರ್ಕಾರಿ ಕೆಲಸಕ್ಕೆ ತೊಂದರೆ ಮಾಡುತ್ತಾರೆ. ಮತ್ತೆ ನಮ್ಮ ಗಜೇಂದ್ರಗಡದ ಸುತ್ತಮುತ್ತ ಸುಮಾರು 27 ಹಳ್ಳಿಗಳಿವೆ. ಇಲ್ಲಿರುವ ರೈತರಿಂದ ಆರುಪಟ್ಟು ಕಂದಾಯದಷ್ಟು ತೆಗೆದುಕೊಂಡು ಇವರಿಗೆ ರೀ ಗ್ರ್ಯಾಂಟು ಮಾಡಬೇಕು. ಇದಕ್ಕೆ ಹಿಂದೆ 1960 ನೇ ಇಸವಿಯಲ್ಲಿ ಒಂದು ಸರ್ಕ್ಯುಲರನ್ನು ತೆಗೆದ್ದರು. ಆದಾಗಿ ಆರು ತಿಂಗಳುಗಳ ಕಾಲ ಅಸೆಂಬ್ಲಿ ಅಧಿವೇಶನ ನಡೆದಾಗ ಇನ್ನೂ ಮೂರು ತಿಂಗಳುಗಳಲ್ಲಿ ಇದರ ಕೆಲಸಗಳನ್ನು ತೆಗೆದು ಕೊಳ್ಳುತ್ತೇವೆ ಎಂದು ಹೇಳಿದವರು ಇಲ್ಲಿಯತನಕ ಯಾವ ಕೆಲಸಗಳೂ ಅಲ್ಲಿ ನಡೆದಿಲ್ಲ. ಇದು ಏಕೆ ಆಗಲಿಲ್ಲ? ಮತ್ತು ಕಾನೂನಿನಂತೆ ಏಕೆ ಜಾರಿಗೆ ಕೊಡಲಿಲ್ಲ? ಇದರಲ್ಲಿ ತಮಗೆ ಅನೇಕ ತೊಡಕು ಗಳು ಬಂದುದರಿಂದ ಕಷ್ಟವಾಗಿದೆ ಎನ್ನುವುದನ್ನು ಒಪ್ಪುತ್ತೇವೆ. ಇದರಲ್ಲಿ ಕಂದಾಯ 12 ಪಟ್ಟು ಕೊಡಬೇಕೆಂದು ಇದೆ. ಇನ್ನೂ ಅನೇಕ ರೀತಿಯಾದ ತೊಂದರೆಗಳು ಆಗಿವೆ. ಆದರೆ ಇದರಲ್ಲಿರುವ ನಿಮ್ಮ ಸ್ಪಿರಿಟ್ಟು ತಮ್ಮ ಉದ್ದೇಶಕ್ಕೆ ಅನುಗುಣವಾಗಿ ರೈತರಿಗೆ ಜಮೀನು ಹೋಗುತ್ತಿದೆಯೇ ಎನ್ನುವುದನ್ನು ನೋಡಬೇಕು. ತಮ್ಮ ಜಿ. ಆರ್. ಬಗ್ಗೆ ಏನಾದರೂ ತೊಂದರೆ ಇದ್ದರೆ ಪುನಃ ಮತ್ತೆ ಇನ್ನೊಂದು ಜಿ. ಆರ್. ನ್ನು ಹೊರಡಿಸಿ ಇದರ ತಪ್ಪುಗಳನ್ನು ಸರಿಮಾಡಲು ವಿಚಾರ ಮಾಡಿ. ಆದುದರಿಂದ ತಾವು ಆದಷ್ಟು ಮಟ್ಟಿಗೆ ಇದಕ್ಕೆ ಏನು ಸುಧಾರಣೆಗಳನ್ನು ಮಾಡಬೇಕೋ ಅದನ್ನು ಮಾಡಬೇಕು. ಮತ್ತು ಭೂಸುಧಾರಣೆಯನ್ನು ಇದೇ ಅಧಿವೇಶನದಲ್ಲಿಯೇ ತರಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯಿ ಬೊಗಲೆ (ಸಂಕೇಶ್ವರ).—ಸ್ವಾಮೀ, ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ಸಲಹೆಗಳನ್ನು ಹೇಳಬಚ್ಛಿಸುತ್ತೇನೆ.

ನಮ್ಮ ಸರಕಾರ ರೈತರ ಸಲುವಾಗಿ ನೂರಾರು ಕಡೆಗಳಲ್ಲಿರುವ ಜನರಿಗೆ ಆಗುತ್ತಿರುವ ಕಷ್ಟ ಗಳನ್ನು ಆದಷ್ಟೂ ಕಡಿಮೆ ಮಾಡಬೇಕೆಂದು ನಾನು ಕಳಕಳಿಯಿಂದ ಅವರನ್ನು ಕೇಳಿಕೊಳ್ಳುತ್ತೇನೆ. ರೈತರಿಗೆ ಇತ್ತೀಚೆಗೆ ಸರಿಯಾಗಿ ತಗಾಯಿ ಸಾಲಗಳು ಸರಿಯಾಗಿ ಸಿಗುವುದಿಲ್ಲ. ಇದರ ಸಲುವಾಗಿ

ತಾವು ಪರಿಸ್ಥಿತಿಗಳನ್ನು ನೋಡಿಕೊಂಡು ಆಹಾರ ಪರಿಸ್ಥಿತಿ ಸುಧಾರಿಸಲು ತಗಾಯಿ ಸಾಲದ ಹಣಗಳನ್ನು ರೈತರಿಗೆ ಸಕಾಲದಲ್ಲಿ ಕೊಡಿಸಿಕೊಡಬೇಕು. ತಗಾಯಿ ಸಾಲಕ್ಕಾಗಿ ಬೇಡಿದರೆ ಎರಡು ತಿಂಗಳು ಮುಂದಾಗಿಯೇ ಅರ್ಜಿ ಕೊಟ್ಟರೂ ಅದು ಮುಂದಿನ ವರ್ಷದ ವೇಳೆಗೆ ಬರುತ್ತೆ. ಹೀಗಾದರೆ ಬೆಳೆ ಹೇಗಾಬೇಕು ! ಆಹಾರದ ಪರಿಸ್ಥಿತಿ ಹೇಗೆ ಸುಧಾರಿಸಬೇಕು ? ಅಹಾರದ ಸಮಸ್ಯೆ ಬಹಳ ಜಟಿಲವಾದ ಸಮಸ್ಯೆ. ಇಡೀ ಸಂಸ್ಥಾನಕ್ಕೇ ಇದು ಒಂದು ಕಳಂಕ ತರುವಂತಹ ಒಂದು ಸಮಸ್ಯೆಯಾಗಿದೆ. ಈ ದೇಶದಲ್ಲಿರುವ ಕೋಟ್ಯಾಂತರ ಜನಗಳಿಗೆ ಬದುಕುವಂತೆ ಕೊಡುವ ದವಸ ಬೆಳೆಯುವ ರೈತರಿಗೆ ಕಾಲಕ್ಕೆ ಸರಿಯಾಗಿ ಬೀಜಗಳನ್ನು ಕೊಡದೆ ವೇಳೆಗೆ ಸರಿಯಾಗಿ ತಗಾಯಿ ಸಾಲಗಳನ್ನು ಕೊಡದೇ ಹೋದರೆ ಸರ್ಕಾರ ಇದಕ್ಕಾಗಿ ಇಷ್ಟು ದುಡ್ಡು ಖರ್ಚು ಮಾಡಿದರೂ ಅದರಿಂದ ಜನಕ್ಕೆ ಸರಿಯಾದ ಪ್ರಯೋಜನಗಳು ಸಿಗುತ್ತಿಲ್ಲ. ಇಲ್ಲಿ ಮಾನ್ಯ ಸದಸ್ಯರಿಗೆ ತೋರಿಸುವುಧಕ್ಕಾಗಿ ಒಂದು ಅಕ್ಕಿ ಮಾದರಿಯನ್ನು ತಂದಿದ್ದೆ. ಅದು ಬಿದ್ದು ಹೋಯಿತು. ತಾವು ಈಗ ಹಂಚುತ್ತಿರುವ ಒಂದು ಅಕಳ್ಳ ಅಕ್ಕಿಯಲ್ಲಿ ಒಂದು ಚೀಲಕ್ಕೆ ಕಲ್ಲುಮಣ್ಣುಗಳಿಂದ ಕೂಡಿದ ಉಸಬನ್ನು ಬೆರಿಸಿರುತ್ತಾರೆ. ಒಂದು ಕೆ.ಜಿ. ಅಕ್ಕಿಯಲ್ಲಿ ಕಾಲುಭಾಗ ಅದೇ ಇರುತ್ತೆ. ಇದನ್ನು ಮಂತ್ರಿಗಳು ಸರಿಯಾಗಿ ನೋಡಿ ಸರಿಪಡಿಸಬೇಕು. ರೈತರಿಗೆ ಸರಿಯಾದ ವೇಳೆಗೆ ತಗಾಯಿ ಸಿಗುವ ವ್ಯವಸ್ಥೆ ಮಾಡಬೇಕು. ಅಲ್ಲದೆ ಬಡ ರೈತರಿಗೆ ಬೇಕಾಗುವ ಎತ್ತು ಮತ್ತು ಇತರ ಯಂತ್ರದ ಉಪಕರಣಗಳು ವ್ಯವಸಾಯಕ್ಕೆ ಸಿಗುತ್ತಿಲ್ಲ. ತಗಾಯಿ ಸಿಗದೇ ಹೋದರೆ ರೈತರು ಇವನ್ನೆಲ್ಲಾ ಹೇಗೆ ತೆಗೆಯಬೇಕು ! ಇದಕ್ಕಾಗಿ ತಾವು ಒಬ್ಬರು ಸ್ಪೆಷಲ್ ಆಫೀಸರನ್ನು ನೇಮಿಸಿ ತಾಲ್ಲೂಕ್ ಮಟ್ಟದಲ್ಲಿನಿಂದ ಸಕಾಲದಲ್ಲಿ ಆಯಾ ಪಂಚಾಯತಿಗಳಿಗೆ ಹಣ ಬರುವ ವ್ಯವಸ್ಥೆ ಮಾಡಿ ಅದು ರೈತರಿಗೆ ತಲುಪುವಂತೆ ಮಾಡಬೇಕು ಎಂದು ಇಲ್ಲಿ ಕಳಕಳಿಯಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕೋ-ಅಪರೇಷನ್ನು ಬೇಸಿಸ್ಸು ಮೇಲೆ ಎಷ್ಟೋ ಭೂಮಿಗಳನ್ನು ಕೊಟ್ಟಿದ್ದೀರಿ. ಆದರೆ ಇಲ್ಲಿರತಕ್ಕ ಡಿಸ್ಟ್ರಿಕ್ಟು ಆಫೀಸರು ತಗಾಯಿ ಸಾಲವನ್ನು ಸಕಾಲದಲ್ಲಿ ಕೊಡುವುದಿಲ್ಲ. ಹೀಗಾದರೆ ರೈತರು ಹೇಗೆ ಮುಂದೆ ಬರಬೇಕು ? ಆಹಾರ ಸಮಸ್ಯೆಯನ್ನು ಹೇಗೆ ಬಿಡಿಸಬೇಕು ? ತಾವೇ ತಿಳಿಸಬೇಕಾಗಿ ಕೋರುತ್ತೇನೆ. ಈಗಾಗಲೇ ಇದರ ಬಗ್ಗೆ ಅರ್ಜಿ ಕೊಟ್ಟರೆ ಅಗ್ರಿಕಲ್ಚರು ಇಲಾಖೆಯವರು ಏನೂ ಮಾಡಿಲ್ಲ. ಈಗ ಆಹಾರದ ಪರಿಸ್ಥಿತಿ ಸುಧಾರಿಸಬೇಕಾದರೆ ಎಲ್ಲೆಲ್ಲಿ ನೀರಿನ ಸೌಕರ್ಯಗಳು ಇವೆಯೋ ಬಾವಿಗಳಿವೆಯೋ ಅಲ್ಲಿ ಪಂಪುಸೆಟ್ಟುಗಳನ್ನು ಕೊಡಬೇಕು. ಜನಗಳ ಸಂಖ್ಯೆ ನೋಡಿಕೊಂಡು ಉತ್ಪತ್ತಿ ಜಾಸ್ತಿ ಮಾಡುವುದರ ಸಲುವಾಗಿ ಸರಕಾರ ಯಾವ ಯಾವ ಕಾನೂನುಗಳನ್ನು ಮಾಡುತ್ತಿದ್ದರೂ ಕೂಡ ಅದರಂತೆ ತಗಾಯಿ ಸಾಲಗಳು ಕಾಲ ಕಾಲಕ್ಕೆ ಸಿಗುತ್ತಿಲ್ಲ. ಹೀಗಾದರೆ ರೆವೆನ್ಯೂ ಡಿಪಾರ್ಟುಮೆಂಟಿನವರ ಕೆಲಸ ಚೆನ್ನಾಗಿ ಹೇಗೆ ನಡೆಯಬೇಕು ? ನಾವು ತಮ್ಮಲ್ಲಿ ಬಂದು ಎಷ್ಟು ವಿನಂತಿ ಮಾಡಿಕೊಂಡರೂ ಕೆಲಸಗಳು ಸರಿಯಾಗಿ ಆಗುತ್ತಿಲ್ಲ. ಇನ್ನು ಮುಳುಗಡೆಯಾಗುವ ಪ್ರದೇಶದ ಜನರ ಸಲುವಾಗಿ ಅವರುಗಳಿಗೆ ಮನೆಗಳನ್ನು ಕಟ್ಟಿಕೊಳ್ಳಲು ಭೂಮಿ ಕೊಡುವುದು, ಬಾವಿಗಳನ್ನು ತೋಡಿಸಿಕೊಡುವುದು ಅದಕ್ಕಾಗಿ ಪಂಪುಸೆಟ್ಟುಗಳನ್ನು ಕೊಡಿಸಿ ಕೊಡುವುದು. ಇವೆಲ್ಲ ಸರಕಾರ ಕೊಡಿಸುವುದು ಅವರ ಕರ್ತವ್ಯ. ನಮ್ಮ ಭಾಗದಲ್ಲಿ 21 ಹಳ್ಳಿಗಳು ಮುಳುಗಡೆಯಾಗುವ ರೈತರಿಗೆ ಬೇರೇ ಸ್ಥಳಗಳನ್ನು ಕೊಡಿಸಬೇಕೆಂದು ನಾನು ಆ ಏರಿಯಾ ಹಿಡಕಲ್ ಡ್ಯಾಮ್ 21 ಹಳ್ಳಿಗಳ ಕಡೆಯಿಂದ ಬಂದ ಹೆಣ್ಣು ಮಗಳಾದುದರಿಂದ ಇಲ್ಲಿ ಸರಕಾರಕ್ಕೆ ಮೂರು ಸಲ ಹೇಳಿಕೊಂಡರೂ ಆ ಜನಕ್ಕೆ ಏನೂ ಅನುಕೂಲವಾಗಿಲ್ಲ. ತಕ್ಷಣ ಈಗಲಾದರೂ ಅವರ ಬಗ್ಗೆ ಎಲ್ಲ ಕೆಲಸಗಳನ್ನೂ ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಸರಕಾರದ ಗಮನಕ್ಕೆ ತರಬೇಕೆಂದು ಒಂದು ಅರ್ಜಿ ಹಾಕಿಕೊಂಡರೆ ಅದು ತಾಲ್ಲೂಕ್ ಮಟ್ಟದಿಂದ ಇಲ್ಲಿಯವರೆಗೆ ಬರಬೇಕಾದರೆ ವರ್ಷಗಟ್ಟಲೆಯಾಗುತ್ತದೆ, ಹೀಗಾದರೆ ನಮ್ಮ ರೈತ ಜನರ ಪಾಡೇನು ? ರೆವೆನ್ಯೂ ಡಿಪಾರ್ಟುಮೆಂಟಿಗೆ ಬಂದ ಅರ್ಜಿ ಮೂರು ವರ್ಷಗಳಾದರೂ ಅದಕ್ಕೆ ಸರಿಯಾದ ಉತ್ತರ ಬರದೇ ಹೋದರೆ ಜನಕ್ಕೆ ಅನುಕೂಲ ಹೇಗೆ ಸಿಗಬೇಕು ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಇದನ್ನು ಸ್ವಲ್ಪ ನೋಟು ಮಾಡಿಕೊಳ್ಳಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಕೆಲವು ಊರುಗಳಲ್ಲಿ ಗೈರಾನ್ ಭೂಮಿ ಇರುತ್ತದೆ. ಇದನ್ನು ಹರಿಜನರಿಗೆ ಕೊಟ್ಟರೆ ಬೆಳೆ ಮಾಡುತ್ತಾರೆ ಎಂದು ಅದಕ್ಕಾಗಿ ಸರ್ಕಾರ ಕಾನೂನು ಮಾಡಿದ್ದಾರೆ. ಕಾನೂನು ಪ್ರಕಾರ 1957ನೇ ಇಸವಿಯಲ್ಲಿ ಗೈರಾನು ಭೂಮಿ ಇದ್ದುದ್ದು ಗೋಮಾಳವಾಗಿತ್ತು. ಅಲ್ಲಿ ಹುಲ್ಲು ಬರುತ್ತಿರಲಿಲ್ಲ. ಅಂತಹ ಭೂಮಿಯನ್ನು ಹರಿಜನರಿಗೆ ಈಗಲಾದರೂ ಕೊಡಿಸಿದರೆ ಆಹಾರ ಸಮಸ್ಯೆ ಬಿಡಿಸುವುದಕ್ಕೆ ಸಹಾಯವಾಗುತ್ತದೆ. ಇದೂ ಅಲ್ಲದೆ ಸಣ್ಣ ಸಣ್ಣ ವತನಿ ಭೂಮಿಗಳು ಸುಮಾರು 20-40 ಎಕರೆಗಳಷ್ಟು ಇವೆ. ಇವುಗಳಲ್ಲಿ ಕೆಲವು ಗೈರಾನ್ ಭೂಮಿಗಳೂ ಇವೆ. ಇವುಗಳನ್ನು ಹರಿಜನರಿಗೆ

(ಶ್ರೀಮತಿ ಚಂಪಾಬಾಯಿ ಭೊಗಲೆ)

ಕೊಟ್ಟು ಆಹಾರದ ಉತ್ಪತ್ತಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ಕಂದಾಯ ಮಂತ್ರಿಗಳು ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ. ಪ್ರತಿಯೊಂದು ಊರಿನಲ್ಲೂ ಬೆಳೆಗಳು ಆಗದೇ ಎಷ್ಟೋ ಪಡ ಭೂಮಿ ಬಿದ್ದಿದೆ.

ದೇವಸ್ಥಾನಗಳಿಗೆ ಭೂಮಿಗಳನ್ನು ಕೊಟ್ಟಿರುತ್ತಾರೆ ಅದನ್ನು ಅಲ್ಲಿರುವ ಪೂಜಾರಿಗಳು ಒಬ್ಬರೇ ಉಪಯೋಗಿಸಿಕೊಂಡು ಇರುವುದಕ್ಕಿಂತ ಅದನ್ನು ಇತರರಿಗೂ ಕೊಡಿಸಿಕೊಡಬಹುದು. ಪೂಜಾರಿಗಳಿಗಾಗಿ ಬೇಕಾದಷ್ಟು ಗದ್ದೆ ಹೊಲಗಳನ್ನು ಬಿಟ್ಟಿದ್ದಾರೆ. ಒಬ್ಬರು ಪೂಜಾರಿಗಳಿಗಾಗಿ ಇಷ್ಟು ಹೆಚ್ಚು ಭೂಮಿ ಕೊಡುವುದಕ್ಕಿಂತ ಇದರಲ್ಲಿ ಕೆಲವು ಭಾಗದಲ್ಲಿ ತೋಟಗಳನ್ನು ಮಾಡಬಹುದು. ದೇವಸ್ಥಾನಗಳಲ್ಲಿ ಎಲ್ಲಿ ಭೂಮಿಗಳು ಹೆಚ್ಚಾಗಿವೆಯೋ ಅಲ್ಲಿ ಕೆಲವು ಭಾಗದಷ್ಟು ಭೂಮಿಯನ್ನು ಹರಿಜನರಿಗೆ ವ್ಯವಸಾಯ ಮಾಡಲು ಕೊಡಿಸಬಹುದು. ದೇವಸ್ಥಾನದ ಹೆಸರಿನಲ್ಲಿ ಒಬ್ಬರೇ ತಿನ್ನಬೇಕೆಂದು ಮಾಡುವುದು ಸರಿ ಕಾಣುವುದಿಲ್ಲ. ಅಲ್ಲದೆ ಇಲ್ಲಿ ಸಾವಿರಗಟ್ಟಲೆ ದುಡ್ಡು ಕೂಡ ಬರುತ್ತದೆ. ಇದರಿಂದ ರೈತರಿಗೆ ಅನುಕೂಲವಾಗುವಂತಹ ಕ್ರಮಗಳನ್ನು ಸರಕಾರ ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಚಿಕ್ಕೋಡಿ ತಾಲ್ಲೂಕಿನಲ್ಲಿ ವತನಿ ಭೂಮಿಗಳು ಒಬ್ಬರಿಗೆ ಎರಡು ಗುಂಟೆ, ಮೂರು ಗುಂಟೆಗಳಷ್ಟು ಇವೆ. ಇದನ್ನು ಜಾಯಿಂಟು ಕೊ-ಆಪರೇಟೀವ್ ಫಾರ್ಮಿಂಗು ಸೊಸೈಟಿ ಮಾಡಬೇಕೆಂದು ಇಲ್ಲಿ ಆಗಲೇ ಸೊಸೈಟಿ ಮಾಡಿದ್ದಾರೆ. 60 ಎಕರೆ ಈ ಸೊಸೈಟಿಯ ಮೂಲಕ ಉತ್ಪನ್ನ ಮಾಡಬೇಕೆಂದು ಸುಮಾರು 15 ಎಕರೆಯಷ್ಟು ಭೂಮಿಯಲ್ಲಿ ಕಬ್ಬನ್ನು ಬೆಳೆದಿದ್ದಾರೆ. ಇದಕ್ಕೆ ಬೇಕಾದ ತಗಾವಿ ಸಾಲದ ಸಹಾಯಗಳನ್ನು ಡೆಪ್ಯೂಟಿ ಕಮಿಷನರ ಕಡೆಗೆ ಕೊಡಬೇಕೆಂದು ವಿನಂತಿ ಮಾಡಿಕೊಂಡರೂ ಕೊಡದೇ ಇಲ್ಲಿನ ಬೆಳೆ ಒಣಗುವ ಸ್ಥಿತಿಗೆ ಬಂದಿದೆ. ಜನಕ್ಕೆ ಬೇಕಾಗುವ ಗೊಬ್ಬರ ಇತ್ಯಾದಿ ಸಹಾಯಗಳನ್ನು ತಾಲ್ಲೂಕು ಮಟ್ಟದಲ್ಲಿ ಸರಿಯಾಗಿ ಒದಗಿಸಬೇಕು. ಅಲ್ಲದೆ ಎಲ್ಲೆಲ್ಲಿ ವತನಿ ಭೂಮಿಗಳಿವೆಯೋ ಅವನ್ನು ಸ್ವಂತವಾಗಿ ಮಾಡಲಿಕ್ಕೆ ಅವಕಾಶವನ್ನೇಕೆ ಕೊಡಬಾರದು! ಇದರ ಕಿಮ್ಮತ್ತು ಸುಮಾರು ಒಂದೂವರೆ ಲಕ್ಷದಷ್ಟು ಆಗಬಹುದು. ಇಂತಹ ಕಡೆಗಳಲ್ಲಿ ರೈತನನ್ನು ಮುಂದಕ್ಕೆ ತರುವಂತೆ ಸರಕಾರ ಸಹಾಯ ಮಾಡಿದರೆ ಇಲ್ಲಿ ಬೆಳೆಯೂ ಚೆನ್ನಾಗಿ ಆಗುತ್ತದೆ ಮತ್ತು ಇದನ್ನೇಕೆ ಮಾಡುತ್ತಿಲ್ಲವೋ ನನಗೆ ಅರ್ಥವಾಗುವುದಿಲ್ಲ. ಅದರಿಂದ ತಗಾವಿ ಸಾಲವನ್ನು ಕೋ-ಆಪರೇಟಿವ್ ಸೊಸೈಟಿಗೆ ಕೊಡಿಸಿ ಹರಿಜನ ರೈತರಿಗೆ ಅನುಕೂಲ ಮಾಡಿಸಿಕೊಡುವಿರೆಂದು ಮತ್ತು ತಗಾವಿಯ ಸಾಲದ ಕಾನೂನನ್ನು ಬದಲಿಸಿ ಸಹಕಾರ ಸಂಘಗಳಿಗೆ ಅನುಕೂಲ ಮಾಡಿಸಿ ಕೊಡಬೇಕಾಗಿ ತಮ್ಮನ್ನು ಕೇಳಿಕೊಳ್ಳುವೆನು. ತಕ್ಷಣ ಬಡ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಡೇರಿ ಫಾರ್ಮ ಮಾಡಿಕೊಟ್ಟು ಸಹಾಯ ಮಾಡಬೇಕೆಂದು ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿ ದನದ ದವಾಖಾನೆಗಳು ಅಲ್ಲಲ್ಲಿ ಇವೆ. ಆದರೆ ಈ ದವಾಖಾನೆಗಳಿಗೆ ದನಗಳನ್ನು ಔಷಧ ಕೊಡಿಸುವುದಕ್ಕೆ ತೆಗೆದುಕೊಂಡು ಹೋದರೆ ದವಾಖಾನೆಯಲ್ಲಿ ಔಷಧ ಇರುವುದಿಲ್ಲ. ಹುಕ್ಕೇರಿ ಸಂಕೇಶ್ವರ ಪಟ್ಟಣಗಳಲ್ಲಿ ಸಹ ಔಷಧ ಸಿಕ್ಕುವುದಿಲ್ಲ. ಸರಕಾರ ಇದನ್ನು ಯೋಚನೆ ಮಾಡಿದ್ದಾರೆಯೇ? ಪ್ರತಿಯೊಂದು ದವಾಖಾನೆಗೆ ಸಾಕಷ್ಟು ಔಷಧ ಕೊಡುತ್ತಾರೆ ಅಲ್ಲವೇ? ರೊಕ್ಕ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಆದರೆ ಅದರ ಉಪಯೋಗ ಬಡವರಿಗೆ ಆಗುತ್ತಿಲ್ಲ. ಆದುದರಿಂದ ದಯವಿಟ್ಟು ರೈತರಿಗೆ ಉಪಯೋಗವಾಗುವ ಹಾಗೆ ಶೀಘ್ರವಾಗಿ ದನಗಳಿಗೆ ಔಷಧ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕಾಗಿ ಮಾನ್ಯ ಕಂದಾಯ ಸಚಿವರಾದ ಕೃಷ್ಣಪ್ಪನವರಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

12-30 P.M.

ಇನ್ನು ತಗಾವಿ ಸಾಲದ ಬಗ್ಗೆ ಹೇಳುವುದಾದರೆ ಏಪ್ರಿಲ್, ಮೇ ಜೂನ್ ತಿಂಗಳಿನಲ್ಲಿ ತಗಾವಿ ಸಾಲ ಕೊಟ್ಟು ಬಾವಿ ತೆಗೆಯುವುದಕ್ಕೆ ಅನುಕೂಲ ಮಾಡಿಕೊಡಬೇಕು. ಗೊಬ್ಬರ ಬೀಜ ಇವುಗಳಿಗಾಗಿ ತಗಾವಿ ಸಾಲ ರೈತರಿಗೆ ಸಕಾಲದಲ್ಲಿ ಒದಗಿಸಿ ಕೊಡಬೇಕು. ಈಗ ಇರತಕ್ಕ ಪರಿಸ್ಥಿತಿಯಲ್ಲಿ ರೈತನಿಗೆ ಜೀವನ ಮಾಡುವುದು ಬಹಳ ಕಠಿಣವಾಗಿದೆ. ಇಂಥ ಮಹತ್ವದ ಕೆಲಸಗಳಿಗೆ ಸರಕಾರ ಗಮನ ಕೊಟ್ಟು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ಕೊನೆಯದಾಗಿ ಹೇಳುತ್ತೇನೆ. ಹರಿಜನರಿಗೆ ಗೋಮಾಳ ಕೊಟ್ಟು ಎಲ್ಲ ರೀತಿಯ ಅನುಕೂಲತೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿರುವ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯ ನಾಯಕ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆಗೆ ಸಂಬಂಧಪಟ್ಟದ್ದು ಅಂದರೆ ಪಟೇಲ ಶ್ಯಾನುಭೋಗರು ಹಾಗು ಭೂಸುಧಾರಣೆ ಇವು ಮುಖ್ಯ. ಭೂ ಸುಧಾರಣೆ ಜಾರಿಗೆ ಬರುವುದು ವಿಳಂಬವಾಗುತ್ತಿದೆ ಇದು ವಿಳಂಬವಾಗುವುರಿಂದ ತೊಂದರೆ ಉಂಟಾಗಿದೆ. ಭೂ ಮಾಲೀಕರು ಮತ್ತು ರೈತರು ಒಂದು ನಿರ್ದಿಷ್ಟವಾದ ಸ್ಥಿತಿಗೆ ಬರಬೇಕಾದರೆ, ಸರಕಾರಕ್ಕೂ ಜನತೆಗೂ ಅನುಕೂಲವಾಗ ಬೇಕಾದರೆ ಈ ಭೂ ಸುಧಾರಣೆ ಸಮಸ್ಯೆ ಬಗೆಹರಿಯ ಬೇಕು. ಕೆಲವು ಪಟ್ಟಭದ್ರ ಹಿತಾಸಕ್ತಿ ಉಳ್ಳವರು ತೊಡಕು ಉಂಟು ಮಾಡಿದ್ದಾರೆ. ಆದುದರಿಂದ ಭೂ ಸುಧಾರಣೆ ಜಾರಿಗೆ ತಂದು ಈ ಸಮಸ್ಯೆ ಬಗೆಹರಿಸ ಬೇಕೆಂದು ಹೇಳುತ್ತೇನೆ.

ಇನ್ನು ಶ್ಯಾನುಭೋಗರು ಅನಿರ್ದಿಷ್ಟವಸ್ಥೆಯಲ್ಲಿ ಇರುವುದರಿಂದ ಬಡವರಿಗೆ ಭೂಮಿ ಸಿಕ್ಕುವುದಿಲ್ಲ ಅವರ ಸಹಾಯವಿಲ್ಲದೆ ಯಾವ ಕೆಲಸ ಮಾಡುವುದಕ್ಕಾಗುವುದಿಲ್ಲ. ಭೂ ರೈತರಿಗೆ ಹರಿಜನರಿಗೆ ಹಿಂದುಳಿದ ಇತರ ವರ್ಗದವರಿಗೆ ಭೂಮಿ ಹಂಚಬೇಕಾಗಿದೆ. ಅದಕ್ಕಾಗಿ ಮಲೆನಾಡಿನಲ್ಲಿ ಒಂದು ಸ್ಪೆಷಲ್ ಸ್ಕೀಂ ಮಾಡಿ ಬಡವರಿಗೆ ಕನಿಷ್ಠ 5 ಎಕರೆ ಜಮೀನು ಒದಗಿಸಿ ಕೊಡಬೇಕು. ಸ್ಥಳದಲ್ಲಿಯೇ ರೆವಿನ್ಯೂ ಇನ್‌ಸ್ಪೆಕರ್, ಶ್ಯಾನುಭೋಗರು ಅಸಿಸ್ಟೆಂಟ್ ಕಮೀಷನರ್ ಅವರು ತೀರ್ಮಾನ ಮಾಡಿ ಒಡನೆ ಭೂಮಿ ಕೊಡುವ ಏರ್ಪಾಡು ಮಾಡಬೇಕು.

ಬಡಜನರಿಗೆ ದರಕಾಸ್ತು ಕೊಡುವುದರಲ್ಲಿ ಇನ್ನೊಬ್ಬರು ಅಡ್ಡಿ ಬರುತ್ತಾರೆ ಮತ್ತು ಬಡವರಿಗೆ ಭೂಮಿ ಸಿಕ್ಕುವುದಿಲ್ಲ. ಪ್ರತಿಯೊಬ್ಬರಿಗೆ ನಾಲ್ಕೈದು ಎಕರೆ ಕೊಟ್ಟರೆ ಒಟ್ಟಿನಲ್ಲಿ ಸಹಾಯವಾಗಿ ಅವರಿಗೆ ಅನುಕೂಲವಾಗಲು ಸಾಧ್ಯವಿದೆ. ನಮ್ಮ ಕರಾವಳಿ ಪ್ರದೇಶದಲ್ಲಿ ಫಿಶರ್‌ಮೆನ್ ಅಂದರೆ ಬೆಸ್ತರಿಗೆ ಭೂಮಿಯನ್ನು ವ್ಯವಸಾಯ ಮಾಡುವುದಕ್ಕೆ ವಾಯಿದ ಗೇಣಿ ಮೇಲೆ ಕೊಡುತ್ತಾರೆ. ಹಂಗಾಮಿಯಾಗಿ ಕೊಡುತ್ತಾರೆ. ಪರ್ಮನೆಂಟಾಗಿ ಕೊಡುವುದಿಲ್ಲ. ಕಾಯಂ ಆಗಿ ಕೊಡಬೇಕು ಹರಿಜನರಿಗೂ ಗಿರಿಜನರಿಗೂ ಅನುಕೂಲವಾಗುವಂತೆ ಮಾಡಬೇಕು. ನಮ್ಮ ಪ್ರದೇಶ ಮದ್ರಾಸ್ ರಾಜ್ಯದಲ್ಲಿದ್ದಾಗ್ಗೆ ವಾಯಿದೇ ಗೇಣಿ ಮೂಲ ಗೇಣಿ ಪದ್ಧತಿ ಜಾರಿಯಲ್ಲಿತ್ತು. ಹರಿಜನ-ಗಿರಿಜನರ ಭೂಮಿ ಪರಭಾರೆ ಮಾಡಬಾರದೆಂಬ ಕಾನೂನು ಇದೆ. ಇದನ್ನು ಇನ್ನೂ ಜಾರಿಯಲ್ಲಿಡಬೇಕು ಮತ್ತು ಇದೇ ರಾಜ್ಯಕ್ಕೆ ಅನ್ವಯಿಸಬೇಕು. ಇದಕ್ಕೆ ಸೂಕ್ತ ಕಾನೂನು ಜಾರಿ ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಚಾರ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಂಕಿ ಕಾನಬಾಣೆ ಸಮಸ್ಯೆ ಬಗೆ ಹರಿಸಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಲು ಒಡನೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಲ್ಯಾಂಡ್ ರಿಕಾರ್ಡ್ಸ್ ವಿಚಾರದಲ್ಲಿ ಒಂದು ವಿಷಯ ಏನೆಂದರೆ, ಸಬ್ ರಜಿಸ್ಟ್ರರ್ ಆಫೀಸಿನಲ್ಲಿ ರಿಕಾರ್ಡ ಸರಿಯಾಗಿ ಇಟ್ಟಿರುವುದಿಲ್ಲ. ಅನ್ ರೂಲ್ಡ್ ಪುಸ್ತಕದಲ್ಲಿ ಬರೆಯುತ್ತಾರೆ. ಇದಕ್ಕೆ ಸಣ್ಣ ಪುಸ್ತಕ ಇರಕೂಡದು. ಇದು ಪರ್ಮನೆಂಟ್ ರಿಕಾರ್ಡು ಆಗಿರುವುದರಿಂದ ಚನ್ನಾಗಿ ಬೈಂಡ್ ಆಗಿರುವ ದೊಡ್ಡ ಪುಸ್ತಕದಲ್ಲಿ ಬರೆಯಿಸಬೇಕು. ಚಿಕ್ಕ ಪುಸ್ತಕವಾದರೆ ಸಂಬಂಧಪಟ್ಟ ಅಧಿಕಾರಿಗಳು ಅವ್ಯವಸ್ಥೆ ಮಾಡಲು ಸಾಧ್ಯವಿದೆ. ಆದುದರಿಂದ ದೊಡ್ಡ ಪುಸ್ತಕ ಮಾಡಬೇಕು. ಇದನ್ನು ಸುಧಾರಣೆ ಮಾಡಬೇಕು ಎಂದು ಸೂಚಿಸುತ್ತೇನೆ.

ಇನ್ನು ನಮ್ಮ ಭಾಗದಲ್ಲಿ 1934ನೇ ಇಸವಿಯಲ್ಲಿ ಸರ್ವೆ ರೀಸೆಟಲ್‌ಮೆಂಟ್ ಆಗಿದೆ. ರೀಸೆಟಲ್‌ಮೆಂಟ್ ಆಗಿ 30 ವರ್ಷ ಆಗಿಹೋಯಿತು. ಈ ರಿಸೆಟಲ್‌ಮೆಂಟ್‌ನಲ್ಲಿ ಬಹಳ ಅನ್ಯಾಯವಾಗಿದೆ. ನಮ್ಮಲ್ಲಿ ಒಂದು ಎಕರೆಗೆ 9 ರೂಪಾಯಿ ಅಡಕೆ ತೋಟಕ್ಕೆ ಇದ್ದುದು 121 ರೂಪಾಯಿ ರೀಸೆಟಲ್‌ಮೆಂಟಿನಲ್ಲಿ ಮಾಡಿದ್ದಾರೆ. ಇದನ್ನು ಸರಿಪಡಿಸದಿದ್ದರೆ ಬಹಳ ಅನ್ಯಾಯವಾಗುತ್ತದೆ. ಅಡಿಕೆ ತೋಟಕ್ಕೆ ಬಹಳ ಅಪಾಯ ಇದೆ. ಕೊಳೆ ರೋಗ ಬಂದು ಅಡಿಕೆ ಬೆಳೆ ನಾಶವಾಗುತ್ತದೆ. ಇದನ್ನು ಗಮನಿಸ ಬೇಕಾಗುತ್ತದೆ.

ಒಂದು ವರ್ಷ ಗೊಬ್ಬರ ಹಾಕದಿದ್ದರೂ ತೊಂದರೆಯೇ, ಗೊಬ್ಬರ ಹಾಕಿದರೆ ಅಡಿಕೆಯ ಗೊನೆ ಆಗ ತುಂಬಾ ದೊಡ್ಡದಾಗಿ ಭಾರಕ್ಕೆ ಗಾಳಿಬೀಸಿದಾಗ ಮರಗಳು ಮುರಿದು ಬೀಳುವುದೂ ಉಂಟು ಅಡಕೆಯ ಬೆಳೆಗೆ ಮತ್ತು ಅದರ ಕೃಷಿಗೆ ಇಷ್ಟೆಲ್ಲಾ ತೊಂದರೆಗಳಿವೆ ; ಎಡರು ತೊಡರುಗಳಿವೆ. ಇದನೆಲ್ಲಾ ಸರ್ಕಾರದವರು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಆಹಾರ ಸರಬರಾಯಿಯ ವಿಚಾರದಲ್ಲಿ, ನನಗೆ ಈ ದಿವಸವೇ ಒಂದು ಪತ್ರ ಬಂದಿದೆ. ನಮ್ಮಲ್ಲಿ ಚೆಕ್‌ಪೋಸ್ಟ್‌ಗಳು ಎಂತ ಮಾಡಿದ್ದಾರೆ. ನನ್ನ ಕ್ಷೇತ್ರ ಕೇರಳ ಗಡೀ ಸರಹದ್ದಿನಲ್ಲಿ ಇದೆ. ಅಲ್ಲಿ 3—4 ಗ್ರಾಮಗಳಿವೆ. ಆ ಗ್ರಾಮದ ಜನರು ನನಗೆ ತಮ್ಮ ಕಷ್ಟ ಕುರಿತು ಪತ್ರ ಬರೆದಿದ್ದಾರೆ. ಅವರು ಇರತಕ್ಕ ಸ್ಥಳ ಕೇರಳದ ಬೌಂಡ್ರಿಗೆ ಸಮೀಪವಾಗುತ್ತದೆ. ಆ ಗ್ರಾಮಗಳಲ್ಲಿರತಕ್ಕ ಜನರು ಸರ್ಕಾರಕ್ಕೂ ನನಗೂ ಬಹಳ ತೀವ್ರವಾಗಿ ಕಾಗದವನ್ನು ಬರೆದಿದ್ದಾರೆ. ಅವರು ಆ ಗಡೀ ಸರಹದ್ದಿನಿಂದ ಸುಮಾರು 5 ಮೈಲಿಯ ದೂರದಲ್ಲಿರುತ್ತಾರೆ. ಅಲ್ಲಿ ಅವರಿಗೆ ಮನೆಯಲ್ಲಿ ಎಷ್ಟೇ ಜನರಿರಲಿ

(ಶ್ರೀ ಎಸ್. ಸುಬ್ಬಯ್ಯ ನಾಯಕ)

ಒಂದು ಕಿಲೋಕ್ಕಿಂತ ಹೆಚ್ಚು ಅಕ್ಕಿಯನ್ನು ಅವರು ತೆಗೆದುಕೊಂಡು ಹೋಗುವ ಹಾಗಿಲ್ಲ, ಯಾರೂ ಮಾರುವ ಹಾಗೂ ಇಲ್ಲ. ಅವರಿಗೆ 20 ಕಿಲೋ ಅಕ್ಕಿ ಬೇಕಾದರೆ ಅವರು ಅದಕ್ಕೆ ಪರ್ಮಿಟ್ಟನ್ನು ಪಡೆಯ ಬೇಕೆಂದು ಅಧಿಕಾರಿಗಳು ಅವರನ್ನು ಪೀಡಿಸುತ್ತಿದ್ದಾರೆಂದು ಅವರು ಬರೆಯುತ್ತಿದ್ದಾರೆ. ನಮ್ಮ ಗಡಿಯಲ್ಲಿ ಆ ಚೆಕ್‌ಪೋಸ್ಟ್‌ಗಳನ್ನು ಹಾಕಬೇಕು. ಆಗ ಎರಡು ಚೆಕ್‌ಪೋಸ್ಟುಗಳನ್ನು ಮಾಡ ಬೇಕಾಗುತ್ತದೆ. ಈ ನಾಲ್ಕು ಗ್ರಾಮಗಳ ಜನರಿಗೆ ಸರ್ಕಾರದವರು ಸೂಕ್ತ ಆಜ್ಞೆಯನ್ನು ಹೊರಡಿಸು ವುದರ ಮೂಲಕ ಅನುಕೂಲ ಮಾಡಿಕೊಡಬೇಕಾಗಿದೆ. ಹೀಗೆ ಏನಾದರೂ ಒಂದು ಪರಿಹಾರೋಪಾಯ ವನ್ನು ಅವರ ಬಗ್ಗೆ ಕಂಡುಹಿಡಿಯದಿದ್ದಲ್ಲಿ ಅವರು ಅಲ್ಲಿ ಅನ್ನವಿಲ್ಲದೆ ಕಂಗಾಲಾಗತಕ್ಕ ಪರಿಸ್ಥಿತಿ ಉಂಟಾಗಬಹುದು. ಆದುದರಿಂದ ಈ ವಿಚಾರಕ್ಕೆ ಸರ್ಕಾರದವರು ಹೆಚ್ಚಿನ ನಿಗಾಕೊಟ್ಟು ಅವರ ತೊಂದರೆಯನ್ನು ಪರಿಹರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತಗಳನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲಮಾಲ).—ಸ್ವಾಮಿ, ನಾನು ಈಗ ನಮ್ಮ ರೆವಿನ್ಯೂ ಡಿಮಾಂಡ್‌ಗಳ ಬಗ್ಗೆ ಒಂದೆರಡು ಮಾತನಾಡಬೇಕೆಂದು ತಮ್ಮ ಮುಂದೆ ನಿಂತಿದ್ದೇನೆ. ನಮ್ಮ ಮೈಸೂರು ರಾಜ್ಯ ಬಹಳ ಹಿಂದುಳಿದ ರಾಜ್ಯ. ಆದಾಗ್ಯೂ ನಮ್ಮ ಮಂತ್ರಿಗಳವರು ಇದರ ಬಗ್ಗೆ ಹೆಚ್ಚಿನ ಗಮನ ಕೊಡು ತ್ತಿಲ್ಲ. ನಮ್ಮ ರಾಜ್ಯ ಬಡತನದ ರಾಜ್ಯ ಎಂಬುದನ್ನು ನಾವು ಎಷ್ಟು ಹೇಳಿದರೂ ತೀರದಾಗಿದೆ. ಈ ರಾಜ್ಯದಲ್ಲಿ ಒಂದು ಬಾವಿಯ ಸೌಲತ್ತಾಗಲೀ ಅಥವಾ ಒಂದು ಗೊಬ್ಬರ ಇತ್ಯಾದಿ ಯಾವ ಸೌಲತ್ತುಗಳು ಇಲ್ಲ. ಇನ್ನು ರೈತರಿಗೆ ಬಿತ್ತನೆ ಬೀಜಗಳನ್ನು ಒದಗಿಸುವುದರಲ್ಲಿ ರೈತರಿಗೆ ಅವು ಸಕಾಲಕ್ಕೆ ಸರಿಯಾಗಿ ಒದಗುತ್ತಿಲ್ಲ. ಅವುಗಳನ್ನು ಸಕಾಲಕ್ಕೆ ಒದಗಿಸಿ ರೈತರಿಗೆ ತಕ್ಕ ವಿವೇಕ ಹೇಳ ತಕ್ಕ ಅಧಿಕಾರಿಗಳಿಲ್ಲ. ನಮ್ಮಲ್ಲಿರತಕ್ಕ ಅಧಿಕಾರಿಗಳಿಗೆ ಸರಿಯಾದ ಟ್ರೈನಿಂಗಿಲ್ಲ. ಆದುದರಿಂದ ನಮ್ಮ ಶಿಬ್ಬಂದಿ ವರ್ಗಕ್ಕೆ ಒಳ್ಳೆಯ ಟ್ರೈನಿಂಗನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ಸರ್ಕಾರೀ ಇಲಾಖೆಗಳಲ್ಲಿ ಈ ರೆವಿನ್ಯೂ ಇಲಾಖೆ ಬಹಳ ದೊಡ್ಡದು. ಈ ಇಲಾಖೆ ದೇಶದಲ್ಲಿರತಕ್ಕ ಜನರನ್ನು ಪಾವನ ಮಾಡಿ ಉದ್ಧಾರ ಮಾಡತಕ್ಕಂಥ ಒಂದು ಇಲಾಖೆಯಾಗಿದೆ. ನಮ್ಮ ಮಂತ್ರಿಗಳಾ ದರೋ ರೈತನ ಮನೆತನಕ್ಕೇ ಸೇರಿದವರಾಗಿದ್ದಾರೆ. ಅವರಿಗೆ ಈ ಇಲಾಖೆ ವಿಚಾರಗಳೆಲ್ಲಾ ಬಹಳ ಚೆನ್ನಾಗಿ ಗೊತ್ತಿದೆ. ಈ ದಿವಸ ನಮ್ಮ ದೇಶದಲ್ಲಿ ಬಹು ಭಾಗದಲ್ಲಿ ಬಾವಿಗಳಾಗಲೀ ಕೆರೆಗಳಾಗಲೀ ಒಂದೂ ಇರುವುದಿಲ್ಲ. ಅಂಥಕಡೆಗಳಲ್ಲಿ ಮಾನ್ಯ ಮಂತ್ರಿಗಳು ಹೆಚ್ಚಿನ ಗಮನ ಕೊಟ್ಟು ರೈತರಿಗೆ ಅನುಕೂಲ ಮಾಡಿ ಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಇಲ್ಲಿಯವರೆಗಾದರೂ ಇನ್ನೂ ನಮ್ಮ ರಾಜ್ಯ ಉದ್ಧಾರವಾಗಲ. ನಮ್ಮ ದೇಶದಲ್ಲಿ ಇನಾಂ ರದ್ದಿಯಾತಿ ಕಾನೂನು ಜಾರಿಗೆ ಬಂದಾಗ್ಯೂ ಬಡಬಗ್ಗರಿಗೆ ಜಮೀನು ಮಾತ್ರ ಇನ್ನೂ ಸಿಕ್ಕಿಲ್ಲ. ಅಲ್ಲಿ ದೊರೆಯತಕ್ಕ ಜಮೀನು ಈ ದಿವಸ ಯಾರಿಗೋ ಹೋಗಿ ಸೇರುತ್ತಿದೆ. ಆದರೆ ನಮ್ಮ ರಾಜ್ಯದಲ್ಲಿ ಭೂಮಿ ಇಲ್ಲದವರಿಗೆ ಭೂಮಿಯನ್ನು ಹಂಚಲಾಗುವುದೆಂದು ಬಹಳ ಜನರು ಹೇಳುತ್ತಿದ್ದಾರೆ. ಆದರೆ ಅದಿನ್ನೂ ಯಾವಾಗ ಸಿಕ್ಕುತ್ತದೆಯೋ ಗೊತ್ತಿಲ್ಲ. ಆದಷ್ಟು ಬೇಗ ಬಡಬಗ್ಗರಿಗೆ ಜಮೀನು ಸಿಗು ವಂತೆ ಮಾಡಬೇಕು. ಆದರೆ ನಾನೀಗ ಈ ಜಮೀನನ್ನು ಕೇವಲ ಹರಿಜನ ಗಿರಿಜನರಿಗೆ ಮಾತ್ರವೇ ಕೊಡಬೇಕೆಂದು ವಾದ ಮಾಡುತ್ತಿಲ್ಲ. ಯಾರು ಬಡವರಾಗಿದ್ದಾರೆ, ಯಾರಿಗೆ ಜಮೀನಿಲ್ಲ, ಯಾರು ಬೇಸಾಯದಿಂದಲೇ ಜೀವನ ಮಾಡಿ ಕೊಂಡಿದ್ದಾರೋ ಅಂಥವರೆಲ್ಲರಿಗೂ ಜಮೀನು ಸಿಗಬೇಕೆಂದು ನನ್ನ ವಾದ.

ನಾನು ಈ ಜಮೀನನ್ನು ಹಂಚತಕ್ಕ ವಿಚಾರದಲ್ಲಿ ಜನರ ಜಾತಿ ಗೋತ್ರಗಳನ್ನು ನೋಡಬಾರ ದೆಂದು ಹೇಳುತ್ತೇನೆ. ವ್ಯವಸಾಯ ಮಾಡತಕ್ಕವನಾಗಿದ್ದು ಜಮೀನಿಲ್ಲದವನಿಗೆ ಜಮೀನು ಸಿಕ್ಕ ಬೇಕಾದ್ದು ನ್ಯಾಯ. ಅವರು ಯಾರಾದರೇನು ? ಈ ದಿವಸ ಜಮೀನು ಬೆಲೆಯಾದರೂ ಎಕರೆಗೆ 11 ನೂರು ಖರ್ಚುಮಾಡಿದರೂ ಜಮೀನು ಸಿಗುತ್ತಿಲ್ಲ. ಆದರೆ ಸರ್ಕಾರದವರು ಕೊಡತಕ್ಕ ಜಮೀನಾ ದರೂ ಅದು ಬಹುಮಟ್ಟಿಗೆ ಹಣವಂತರಿಗೇ ಸೇರುತ್ತಿದೆ. ಬಡ ರೈತರಿಗೆ ಏನೂ ಯಾವ ಅನುಕೂಲ ವಾಗಿಲ್ಲ, ಅವರ ಸ್ಥಾನ ಯಥಾಪ್ರಕಾರವಾಗಿ ಇದ್ದಂತೆಯೇ ಇದೆ. ಅವರು ಹಿಂದೆ ಯಾವ ಸ್ಥಾನದಲ್ಲಿದ್ದರೋ ಈಗಲೂ ಅಲ್ಲೇ ಇದ್ದಾರೆ. ಅವರನ್ನು ಹಣವಂತರು ಬರಾಬರಿ ಮಾಡಿಟ್ಟಿದ್ದಾರೆ. ಈ ವಿಚಾರ ಇಲ್ಲಿರತಕ್ಕ ಮಾನ್ಯ ಮಂತ್ರಿಗಳಿಗೂ, ಈ ಮಾನ್ಯ ಸಭೆಯ ಎಲ್ಲಾ ಸದಸ್ಯರುಗಳಿಗೂ ಗೊತ್ತಿರತಕ್ಕಂಥಾದ್ದೇ ಆಗಿದೆ. ಆದುದರಿಂದ ನಾನೀಗ ಮಾನ್ಯ ಮಂತ್ರಿ ಗಳಲ್ಲಿ ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ : ಮಾನ್ಯ ಮಂತ್ರಿಗಳೇ ಖುದ್ದಾಗಿ ನಿಂತು ಅಲ್ಲಲ್ಲೇ ಈ ಜಮೀನುಗಳ ಹಂಚಿಕೆಯನ್ನು ನಡೆಸಿದರೆ ಒಳ್ಳೆಯದು ಎಂದು ಕೇಳಿ ಕೊಳ್ಳುತ್ತೇನೆ. ಆದರೆ ನಮ್ಮ ಜಿಲ್ಲೆಗೆ ಇಲ್ಲಿಯ ತನಕ ಮಾನ್ಯ ಮಂತ್ರಿಗಳು ಒಂದಾವರ್ತಿಯಾದರೂ

ಬರಲಿಲ್ಲ. ಮಂತ್ರಿಗಳು ಎದುರಿಗೆ ನಿಂತು ವಿಲೇವಾರಿ ಮಾಡಿಸಿದರೇನೇ ಬಡಬಗ್ಗರಿಗೆ ಅಷ್ಟಿಷ್ಟು ಜಮೀನು ಸಿಕ್ಕೀತು. ಇದು ರೈತರಿಗೇ ನೇರವಾಗಿ ಸಿಗುವಂತಾಗಬೇಕು. ಅವರು ತಿರುಗಾಡುವುದಕ್ಕೆ ಹತ್ತಿದರೆ ಅವರಿಗೆ ಜಮೀನೂ ಸಿಕ್ಕುವುದಿಲ್ಲ; ಸಾಲದ್ದಕ್ಕೆ ಸಾವಿರಾರು ರೂಪಾಯಿಗಳನ್ನು ಅವರು ವೃಥಾ ಖರ್ಚುಮಾಡಿ ತೊಂದರೆಗೀಡಾಗುತ್ತಾರೆ. ಈ ದಿವಸ ಭೂಮಿ ಇದ್ದವರಿಗೆ ಭೂಮಿ ಸಿಗುತ್ತದೆಯೇ ವಿನಾ ಇಲ್ಲದವರಿಗೆ ಭೂಮಿ ಸಿಗುತ್ತಿಲ್ಲ. ಸರ್ಕಾರದವರು ಈ ವಿಚಾರದ ಕಡೆಗೆ ಹೆಚ್ಚಿನ ಗಮನ ಕೊಡಬೇಕು ನಮ್ಮ ಸರ್ಕಾರದವರು ಇಲ್ಲಿಯವರೆಗಾದರೂ ದೇಶದಲ್ಲಿ ಭೂಮಿಯಿಲ್ಲದ ಜನರೆಷ್ಟಿದ್ದಾರೆಂಬ ಬಗ್ಗೆ ಸರ್ವೆ ನಡೆಸಿಲ್ಲ. ನಾನು ಇದನ್ನು ತೋರಿಸಿ ಕೊಡುತೇನೆ. ಇಲ್ಲಿಯ ತನಕ ಯಾವ ಹರಿಜನ ಗಿರಿಜನರಿಗಾಗಲೀ ಯಾರೊಬ್ಬರಿಗಾಗಲೀ ಭೂಮಿ ಇಲ್ಲದವರಿಗೆ ಭೂಮಿ ಸಿಕ್ಕಿಲ್ಲ. ಆದ್ದರಿಂದ ನಾನು ಬಹಳ ಕಳಕಳಿಯಿಂದ, ಪರಿಪರಿಯಿಂದ ಕೇಳಿಕೊಳ್ಳುತ್ತೇನೆ: ಜಮೀನಿಲ್ಲದವರೆಲ್ಲರಿಗೂ ಜಮೀನು ಸಿಗುವಂತೆ ಸರ್ಕಾರದವರು ಪ್ರಯತ್ನ ಮಾಡಬೇಕು. ಆದರೆ ಜನರೆಲ್ಲಾ ನಮ್ಮ ಮೈಸೂರು ರಾಜ್ಯದಲ್ಲಿರತಕ್ಕ ಜನರೆಲ್ಲಾ ಕುರಿಗಳೆಂದು ಭಾವಿಸಿದ್ದಾರೆ. ಸಾಲದ್ದಕ್ಕೆ ನಮ್ಮಲ್ಲಿರತಕ್ಕ ಅಧಿಕಾರಿಗಳೂ ಸಹಾ ಇವರ ವಿಚಾರದಲ್ಲಿ ಕನಿಕರವನ್ನು ತೋರಿಸುತ್ತಿಲ್ಲ. ಫೈಲುಗಳು ಅವರವರ ಮೇಜಿನ ಮೇಲೆ ಅಲ್ಲೇ ಬಿದ್ದಿವೆ. ಅಧಿಕಾರಿಗಳು ಹಳ್ಳಿಯ ಜನರನ್ನು ಮಾತನಾಡಿಸುವುದಿಲ್ಲ: ಅವರನ್ನು ಮಾತನಾಡಿಸುವುದರಿಂದ ಅವರ ಗೌರವಕ್ಕೆ ಅದು ಕಡಿಮೆ ಎಂಬುದಾಗಿ ಅವರು ಭಾವಿಸಿದ್ದಾರೆ. ಸರ್ಕಾರದವರು ಇದನ್ನು ಒತ್ತಾಯದಿಂದ ಸರಿಪಡಿಸಬೇಕು. ನಮ್ಮಲ್ಲಿ ಇರತಕ್ಕ 19 ಜಿಲ್ಲೆಗಳಲ್ಲಿ ಅನೇಕ ಕೆಲಸ ಕಾರ್ಯಗಳು ಆಗದೆ ಹಾಗೇ ನಿಂತಿವೆ. ಅದರಲ್ಲೂ ನನ್ನ ಜಿಲ್ಲೆಯಲ್ಲಿ ಬಹಳ ಕೆಲಸಗಳು ಹಾಗೇ ಉಳಿದಿವೆ. ಇದನ್ನೆಲ್ಲಾ ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಹರಿಜನರಿಗೆ ಇಲ್ಲಿಯವರೆಗಾದರೂ ಜಮೀನು ಸಿಕ್ಕಿಲ್ಲ. ಅವರ ಹೆಸರಿನಲ್ಲಿ ಭೂಮಿ ದುರುಪಯೋಗವಾಗುತ್ತಿದೆ. ಇದನ್ನು ಸರಿಪಡಿಸಬೇಕು.

ನಿಮ್ಮ ಇಲಾಖೆಯಲ್ಲಿರುವ ಜನರು ಯಾರೇ ಆಗಲಿ ಜನರಿಗೆ ಮೆಚ್ಚಿಗೆಯಾಗುವಂತೆ ಕೆಲಸ ಮಾಡಬೇಕು. ಡಿಲ ಮಾಡಬಾರದು, ಎಲ್ಲ ಭಾಗಗಳಿಗೂ ಹೆಚ್ಚು ಗಮನಕೊಟ್ಟು ಕೆಲಸ ಮಾಡಬೇಕು. ರೆವಿನ್ಯೂ ಶಾಖೆಯ ಮಂತ್ರಿಗಳು ವ್ಯವಸಾಯಗಾರರ ಮನೆತನದಲ್ಲಿ ಹುಟ್ಟಿ ಬೆಳೆದವರು, ಅವರಿಗೆ ವ್ಯವಸಾಯದ ವಿಚಾರ ಚೆನ್ನಾಗಿ ಗೊತ್ತಿದೆ. ನಾವೂ ಸಹಾ ವ್ಯವಸಾಯಗಾರರ ಮನೆಯವರೇ ಆದುದರಿಂದ ನಮಗೂ ವ್ಯವಸಾಯಗಾರರ ಕಷ್ಟಸುಖಗಳು ಚೆನ್ನಾಗಿ ಗೊತ್ತಿದೆ. ನಮ್ಮದು ಬಡತನದ ದೇಶವಾದ್ದರಿಂದ ಕಂದಾಯ ಹೆಚ್ಚು ಮಾಡಬಾರದು. ಕಂದಾಯ ಹಾಕಬೇಕಾದರೆ ಭೂಮಿಯನ್ನು ಸರ್ವೆ ಮಾಡಿ ಹಾಕಿ, ಒಪ್ಪಿಕೊಳ್ಳುತ್ತೇನೆ. ರೈತರಿಗೆ ಬಡತನ ಬಹಳವಾಗಿದೆ. ಆದುದರಿಂದ ಭೂ-ಕಂದಾಯ ಕಡಮೆ ಮಾಡಬೇಕು. ರೈತರಿಂದಲೇ ನಾವು ಉದ್ಧಾರವಾಗುವುದು, ರೈತರು ಕಷ್ಟಪಟ್ಟು ಭೂಮಿಯಲ್ಲಿ ಕೆಲಸ ಮಾಡುವಾಗ ನಾವು ಇಲ್ಲಿ ಕುಳಿತು ಮಾತನಾಡುತ್ತಿದ್ದೇವೆ. ರೈತನು ಬೆಳೆಯುವ ಬೆಳೆಯಿಂದ ಅನೇಕರು ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಾರೆ. ಆದರೆ ರೈತರು ಮಾತ್ರ ಕೆಳಮಟ್ಟದಲ್ಲಿ ಇದ್ದಾರೆ. ಅದುದರಿಂದ ಕಂದಾಯ ಹಾಕಬಾರದೆಂದು ಪರಿಪರಿಯಿಂದ ವಿನಂತಿ ಮಾಡುತ್ತೇನೆ. ರೈತ ಕಷ್ಟಪಟ್ಟು ಗೊಬ್ಬರ ಹೊಡೆದು ಉತ್ತಿಬಿತ್ತಿ ಬಹಳವಾಗಿ ದುಡಿದರೂ ಕೂಡ ಅವನಿಗೆ ಮೈಮೇಲೆ ಅರಿವೆಯೇ ಇಲ್ಲ. ಅದೇ ವ್ಯಾಪಾರ ಮಾಡುವವರು ಲಕ್ಷಾಂತರ ರೂಪಾಯಿಗಳನ್ನು ಗಳಿಸಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಸಿಕೊಂಡು ಸುಖವಾಗಿದ್ದಾರೆ. ಮಂತ್ರಿಗಳು ಇದನ್ನೆಲ್ಲಾ ವಿಚಾರಮಾಡಿ ಒಂದು ರೀತಿಯಲ್ಲಿ ಸಹಾಯ ಮಾಡುತ್ತಾರೆಂದು ಇದನ್ನೆಲ್ಲಾ ಹೇಳುವುದು. ಇದುವರೆಗೆ ಬೇಕಾದಷ್ಟು ಹೇಳಿದ್ದಾಗಿದೆ. ಈಗಲಾದರೂ ಸಚಿವರು ಹೆಚ್ಚಿನ ಗಮನಕೊಟ್ಟು ಎಲ್ಲಾ ರೀತಿಯಿಂದ ರೈತರಿಗೆ ನೆರವು ನೀಡಬೇಕು. ರೈತರ ಮೇಲೆ ಕಂದಾಯ, ತೆರಿಗೆ ಹೆಚ್ಚಾಗಿ ಹಾಕಬಾರದು. ಹೆಚ್ಚು ಸಂಪಾದನೆ ಮಾಡುವವರಿಗೆ ಹೆಚ್ಚು ತೆರಿಗೆ ಹಾಕಿ ರೈತರಿಂದಲೇ ದೇಶೋದ್ಧಾರವಾಗುವುದು. ರೆವಿನ್ಯೂ ಇಲಾಖೆಯೇ ಇಡೀ ದೇಶಕ್ಕೆ ಹೆಚ್ಚು ಉಪಕಾರ ಮಾಡತಕ್ಕದ್ದಾದ್ದರಿಂದ ಮಂತ್ರಿಗಳು ಚೆನ್ನಾಗಿ ನೋಡಿ ಕೊಳ್ಳುವರೆಂದು ನಂಬಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ನಮಸ್ಕರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಶರಣಪ್ಪ (ದೇವದುರ್ಗ).—ಮಾನ್ಯ ಸಭಾ ಪತಿಯವರೆ, ಈಗ ಮಾನ್ಯ ಸಭೆಯ ಮುಂದಿರುವ ಎಲ್ಲ ಬೇಡಿಕೆಗಳನೂ ಅನುಮೋದಿಸುತ್ತಾ ಈ ಮಾನ್ಯ ಸಭೆಯ ಹೆಚ್ಚು ವೇಳೆಯನ್ನು ತೆಗೆದುಕೊಳ್ಳದೆ ಮುಖ್ಯ ಮುಖ್ಯವಾದ ಕೆಲವೊಂದು ಅಂಶಗಳ ಬಗ್ಗೆ ಮಾತ್ರ ಕೆಲವು ವಿಚಾರಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಕಾಲ ಸ್ವಲ್ಪವಿದೆ, ಆದರೆ ವಿಷಯ ದೊಡ್ಡದಿದೆ. ಆದರೂ ಕೂಡ ಆದಷ್ಟು ಮಟ್ಟಿಗೆ ಎಲ್ಲ ವಿಷಯಗಳನ್ನೂ ಸಂಕ್ಷೇಪವಾಗಿ ಹೇಳಬಿಚ್ಛಿಸುತ್ತೇನೆ. ಈಗ ಮುಖ್ಯವಾಗಿ ಈ ಒಂದು ಬೇಡಿಕೆ ಮೇಲೆ ಮಾತನಾಡುವಾಗ್ಗೆ ಸರ್ವೆ ಸೆಟ್ಲ್‌ಮೆಂಟ್ ಮತ್ತು ರಿವಿಜನ್ ಬಗ್ಗೆ ಹೆಚ್ಚು ಮಾತನಾಡಬೇಕಾಗಿದೆ. ಆ ವಿಷಯಕ್ಕೆ ಬರುವುದಕ್ಕೆ ಮುಂಚೆ ಒಂದೇ ಒಂದು ಪ್ರಾರ್ಥನೆ ಮಾಡುವುದು ಆದಷ್ಟು ಮಟ್ಟಿಗೆ ಇಡೀ ಮೈಸೂರು ಸಂಸ್ಥಾನದಲ್ಲಿ ಭೂಮಿ ತರಗತಿಯ ವಿಚಾರವನ್ನು

(ಶ್ರೀ ಶರಣಪ್ಪ)

ನೋಡಿಕೊಂಡು ಈಗಿರುವ ಜಮೀನು ಕಂದಾಯದ ದುಪ್ಪಟ್ಟು ಹಾಕಿದರೂ ಕೂಡ ವಕ್ಕಲುತನಕ್ಕೆ ಅಷ್ಟೇನೂ ಅಭ್ಯಂತರವಿಲ್ಲ. ದೇಶವನ್ನು 3-4 ಭಾಗಗಳಾಗಿ ಮಾಡಿ ಡಿಸ್ಟ್ರಿಕ್ಟ್‌ವಾರು ಒಂದು ಸೆಟ್ಲ್‌ಮೆಂಟ್ ಅಥವ ರಿವಿಜನ್ ಮಾಡಿದರೆ ಅದರಿಂದ ನ್ಯಾಯ ಸಿಕ್ಕುವುದಿಲ್ಲವೆಂಬ ಸಂದೇಹವಿದೆ. ಆ ಕಾರಣ ಮಾನ್ಯ ಮಂತ್ರಿಗಳು ಈ ಬಗ್ಗೆ ಕೂಲಂಕಷವಾಗಿ ವಿಚಾರ ವಿನಿಮಯ ಮಾಡಿ ಒಂದು ಸೆಟ್ಲ್‌ಮೆಂಟ್ ಅಥವಾ ರಿವಿಜನ್ ಮಾಡಿದರೆ ಒಂದು ಒಳ್ಳೆಯ ಅಭಿಪ್ರಾಯ ಬರಬಹುದು ಎಂದು ಹೇಳಬಯಸುತ್ತೇನೆ.

ಎರಡನೆಯದಾಗಿ ಭೂಕಂದಾಯ ಹಾಕಿ ತೆರಿಗೆ ಹಾಕಿ ಅದನ್ನು ತೆಗೆದುಕೊಳ್ಳುವುದು ಹೆಚ್ಚಿನ ಕೆಲಸವಲ್ಲ. ಭೂಮಿಯನ್ನು ಉಳಿಸಿಕೊಳ್ಳುವುದಕ್ಕೆ ಭೂಮಿಯಲ್ಲಿರುವ ಗುಣ, ರಜ್ಜು ಯಾವರೀತಿ ಕಾಪಾಡಬೇಕು, ಯಾವ ಯಾವ ಇಲಾಖೆಯಿಂದ ಈ ಕೆಲಸ ಮಾಡಿಸುವುದು ಉತ್ತಮ ಎಂಬುದನ್ನೂ ಕೂಡ ಗಮನಿಸಿ ಅದಕ್ಕೆ ವ್ಯವಸ್ಥೆಮಾಡಬೇಕಾದ್ದು ರೆವಿನ್ಯೂ ಖಾತೆಯ ಕರ್ತವ್ಯ. ಅದನ್ನು ಭೂಮಿ ಉಳುವವನೇ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಸರಕಾರ ತೆರಿಗೆ ವಸೂಲು ಮಾಡುತ್ತದೆ. ಹಾಗೆ ಮಾಡುವಾಗ ಭೂಮಿಯ ಒಳ್ಳೆಯ ಗುಣವನ್ನು ಕಾಪಾಡಲು ಒಕ್ಕಲುತನದ ಖಾತೆ ಮತ್ತು ಪಬ್ಲಿಕ್‌ವರ್ಕ್ಸ್ ಇಲಾಖೆ ಪ್ರತಿಯೊಂದು ಜಿಲ್ಲೆಯಲ್ಲೂ ನೇರವಾಗಿ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಸೂಲಿ ವಿಚಾರ. ಕೆಲವೊಂದು ಪ್ರಸಂಗಗಳಲ್ಲಿ ರಿಯಾಯಿತಿ, ಸಸ್‌ಪೆನ್‌ಷನ್ ಅಥವಾ ರಿಮಿಷನ್ ಕೊಡುವ ಪದ್ಧತಿ ಸರಕಾರದಲ್ಲಿದೆ. ಅದೇ ಪ್ರಕಾರ ಮೈಸೂರು ರಾಜ್ಯದ ಕೆಲವೊಂದು ಭಾಗಗಳಲ್ಲಿ ಮಳೆ ಬಾರದೆ ಅಥವಾ ಅತಿವೃಷ್ಟಿಯಿಂದ ಕಂದಾಯವನ್ನು ನಿಲ್ಲಿಸಿದ್ದಾರೆ; ಕೆಲವು ಕಡೆ ರಿಮಿಷನ್ ಕೊಟ್ಟಿದ್ದಾರೆ. ನಿಲ್ಲಿಸಿದ ಕಂದಾಯವನ್ನು ವಸೂಲು ಮಾಡುವಾಗ ಮಾತ್ರ ಕೆಲವೊಂದು ಕಡೆ ಅನೇಕ ಕಾರಣಗಳಿಂದ ನಾಲ್ಕಾರು ವರ್ಷಗಳಿಂದ ವಸೂಲು ಮಾಡಿರುವುದಿಲ್ಲ. ಒಂದು ವರ್ಷ ಬೆಳೆ ಸರಿಯಾಗಿ ಬರಬಹುದು, ಆಗ ಸಸ್ಪೆನ್‌ಷನ್ನಿನಲ್ಲಿಟ್ಟಿರುವುದನ್ನು ಒಂದೇ ವರ್ಷದಲ್ಲಿ ವಸೂಲು ಮಾಡಬೇಕೆಂದು ಆರ್ಡರು ಮಾಡಿರುವುದು ನ್ಯಾಯವಲ್ಲ. ಏಕೆಂದರೆ ಸರ್ಕಾರ ಎಷ್ಟೋ ಕಂಪೆನಿಗಳಿಗೆ, ವರ್ತಕರಿಗೆ, ನೌಕರರಿಗೆ ಸಾಲ ಕೊಟ್ಟು ಎಷ್ಟೋ ಕಂತುಗಳ ಮೇಲೆ ತೆಗೆದುಕೊಳ್ಳುವಾಗ ಭೂಮಿಯಿಟ್ಟುಕೊಂಡು ಕೆಲಸಮಾಡಲು ಅವಕಾಶ ಇರುವವನ ಮೇಲೆ ಕೇವಲ ಸಸ್ಪೆನ್‌ಷನ್ ಮಾಡಿರುವುದನ್ನು ಒಂದೇ ವರ್ಷದಲ್ಲಿ ವಸೂಲು ಮಾಡುವುದು, ಒಂದೇ ಸಲ ಕೊಡಬೇಕೆಂದು ಒತ್ತಾಯಮಾಡುವುದು ಸರಿಯಲ್ಲ, ಅಂಥ ರೈತರಿಗೂ ಸಹ ಕೆಲವು ಕಂತುಗಳ ಅನುಕೂಲ ಕೊಟ್ಟು ಇರುವ ಬಾಕಿಯನ್ನು ವರ್ಷಕ್ಕಿಷ್ಟು ಎಂದು ವಸೂಲು ಮಾಡುವುದು ಒಳ್ಳೆಯದು. ಎರಡನೆಯದಾಗಿ 10 ಎಕರೆಯಲ್ಲಿ ತರಿ ಬೆಳೆ ತೆಗೆದರೆ 20 ಎಕರೆ ಬೆಳೆದಿದ್ದಾನೆಂದು ಲೆಕ್ಕ ಬರೆಯುತ್ತಾರೆ, ಅದನ್ನು ಯಾರೂ ಸರಿಯಾಗಿ ತನಿಖೆಮಾಡಿ ನೋಡುತ್ತಿಲ್ಲ. ಜಮಾಬಂದಿ ಆಗುವುದಕ್ಕೆ ಮುಂಚೆ ಹಾಗೆ ಬರೆದಿರುವುದನ್ನು ನೋಡದಿರುವುದರಿಂದ 10 ರೂಪಾಯಿ ಕೊಡುವವನು 50 ರೂಪಾಯಿ ಕೊಡಬೇಕಾಗಿ ಬರುತ್ತದೆ. ಆ ಕಾರಣ ಜಮಾಬಂದಿ ಆಗುವುದಕ್ಕೆ ಮುಂಚೆ ಬಡ ರೈತರಿಗೆ ಅನ್ಯಾಯವಾಗದಂತೆ ಎಲ್ಲಿ ಎಷ್ಟು ಬೆಳೆಯಾಗಿದೆ ಎಂದು ಸರಿಯಾಗಿ ನೋಡಿ ಕಾಯಿದೆ ಪ್ರಕಾರ ಬರೆಯುವಂತೆ ವ್ಯವಸ್ಥೆಮಾಡಿ ಅದರ ಆಧಾರದ ಮೇಲೆ ಜಮೀನು ಕಂದಾಯ ಹಾಕಲು ಏರ್ಪಾಡುಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಭೂಕಂದಾಯದ ವಿಷಯಕ್ಕೆ ಬಂದರೆ, ಭೂಮಾಲೀಕ ಅಥವಾ ರೈತ ಕಂದಾಯವನ್ನು ಕೊಟ್ಟು ಪಾವತಿ ಬೇಡುತ್ತಿದ್ದರು. ಆ ಪಾವತಿಯಲ್ಲಿ ಸರ್ವೆ ನಂಬರ್, ಅದರ ಕ್ಷೇತ್ರ, ಅದರ ಆಕಾರ ಎಲ್ಲವನ್ನೂ ಸರಿಯಾಗಿ ನಮೂದು ಮಾಡುತ್ತಿದ್ದರು. ಈಗ ಕೊಡುವ ರಸೀತಿಯನ್ನು ನೋಡಿದರೆ ಅದರಲ್ಲಿ ಸರ್ವೆ ನಂಬರ್ ಇರುವುದಿಲ್ಲ, ಎಕರೆ ಕುಂಟೆ ಇರುವುದಿಲ್ಲ. ಅನೇಕ ರೈತರು ಅಕ್ಷರ ಬಲ್ಲವರಿರುವುದಿಲ್ಲ. ಹಳ್ಳಿಯಲ್ಲಿರುವ ಜನರು ಒಂದು ವೇಳೆ ಅಂಥ ಕಾಗದದ ಆಧಾರದ ಮೇಲೆ ಕೋರ್ಟು ಕಚೇರಿಗಳಿಗೆ ಹೋದರೆ, ಏನಾದರೂ ಲಿಟಿಗೇಷನ್ ಆದರೆ ಅವರ ಮೇಲೆ, ಅವರ ಹಣಕಾಸಿನ ಪರಿಸ್ಥಿತಿಯ ಮೇಲೆ ಪ್ರತಿಕೂಲ ಪರಿಣಾಮವಾಗುತ್ತದೆ. ಆ ಕಾರಣ ಭೂಕಂದಾಯದ ರಸೀತಿಯಲ್ಲಿ ಸರ್ವೆ ನಂಬರ್ ಮತ್ತು ಖಾತೆ ನಂಬರ್, ಎಕರೆ ಕುಂಟೆ ಈ ಎಲ್ಲ ವಿವರಗಳನ್ನೂ ನಮೂದಿಸುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಬೇಡಿಕೊಳ್ಳುತ್ತೇನೆ.

ಈ ಕಾಲದಲ್ಲಿ ಎಷ್ಟೋ ಒಕ್ಕಲಿಗರಿಗೆ ಜಿಂಕ್‌ಷೀಟ್ ಬೇಕಾಗುತ್ತದೆ, ತಗಾವಿ ಸಾಲ ಮತ್ತು ಇನ್ನು ಏನಾದರೂ ಸಹಾಯಬೇಕಾಗುತ್ತದೆ. ಇಂಥವಕ್ಕೆ ಸೌಕರ್ಯ, ಸೌಲಭ್ಯಗಳು ಪಟ್ಟಣದಲ್ಲಿರುವವರಿಗೆ ಇರುತ್ತವೆ, ಆದರೆ ಹಳ್ಳಿಗರಿಗೆ ಇರುವುದಿಲ್ಲ. ಆ ಕಾರಣ ಇಂಥ ಸೌಲಭ್ಯಗಳು ಹಳ್ಳಿಯ ಜನರಿಗೆ ಮುಟ್ಟುವಂತೆ ಮಾಡಬೇಕೆಂದು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

1.00 P.M.

ಸ್ವಲ್ಪ ದಿವಸಗಳ ಹಿಂದೆ ನಮ್ಮ ರಾಜ್ಯದಲ್ಲಿ ಆಹಾರ ಪರಿಸ್ಥಿತಿಯು ಅಭಾವದಿಂದ ಹಾಹಾಕಾರ ಎದ್ದಿತು. ಆ ಕಾಲಕ್ಕೆ ನಮ್ಮ ಸರ್ಕಾರದವರು ಮುಖ್ಯವಾಗಿ ಆಹಾರ ಇಲಾಖೆಯನ್ನು ಹೊಂದಿರುವ ನಮ್ಮ ಮಾನ್ಯಮಂತ್ರಿಗಳು ಸರಿಯಾಗಿ, ಕೊಂದಾಣಿಕೆಯಾಗಿ ಯೋಗ್ಯ ಕ್ರಮವನ್ನು ತೆಗೆದುಕೊಂಡಿದ್ದಾರೆ. ನಮ್ಮಲ್ಲಿ ಇದ್ದಂಥ ಭಯಾನಕ ಪರಿಸ್ಥಿತಿಯನ್ನು ಹತೋಟಿಗೆ ತರತಕ್ಕ ಕಾರ್ಯವನ್ನು ಅವರು ಮಾಡಿದ್ದಾರೆ. ಅದರಲ್ಲಿ ಸಾಕಷ್ಟು ಒಕ್ಕಲಗರು ಮತ್ತು ಈ ಸಭೆಯ ಸದಸ್ಯರೂ ಭಾಗವಹಿಸಿ ಆಹಾರ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ನೆರವು ನೀಡಿದ್ದಾಗಿದೆ. ಇದೇ ಒಂದು ವರ್ಷದಲ್ಲಿ ನಮ್ಮ ಆಹಾರ ಪರಿಸ್ಥಿತಿ ಉತ್ತಮವಾಗುತ್ತದೆಯೋ, ಈಗಿನ ಪರಿಸ್ಥಿತಿ ದೂರವಾಗುತ್ತದೆಯೋ, ಮುಂದೆ ಒಳ್ಳೆಯ ಪರಿಸ್ಥಿತಿ ಬರುತ್ತದೆಯೋ ಎನ್ನುವ ವಿಚಾರ ಕೂಡ ಈಗಿನಿಂದಲೇ ತಿಳಿದುಕೊಳ್ಳಬೇಕಾದ್ದು ಮುಖ್ಯ. ಒಂದೇ ವರ್ಷದ ಬೆಳೆಯಿಂದ, ಒಂದೇ ವರ್ಷ ಆಹಾರ ಧಾನ್ಯ ಸರಬರಾಜಿನಿಂದ, ನಮ್ಮ ಇಂದಿನ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಸಾಧ್ಯವಿಲ್ಲ. ಆ ಕಾರಣ ಸರ್ಕಾರದವರು ಪ್ರೊಕ್ಯೂರಮೆಂಟ್ ಬೇಸಿಸ್ ಮೇಲೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಾಳಿನ ಸಂಗ್ರಹವನ್ನು ಸರಿಯಾಗಿ ಮಾಡುತ್ತಿದ್ದಾರೆ. ಅದಕ್ಕೆ ನಮ್ಮ ಸಹಾನುಭೂತಿ ಮತ್ತು ಸಹಕಾರವಿದೆ. ಮುಂದಾದರೂ ಕಾಳಿನ ಸಂಗ್ರಹ ಆದಮೇಲೆ ನ್ಯಾಯ ರೀತಿಯಿಂದ ಎಲ್ಲಿ, ಯಾವ ಸ್ಥಳದಲ್ಲಿ, ಯಾವ ಗ್ರಾಮದಲ್ಲಿ ಜೋಳ ಬೇಕಾದಂಥ ಪರಿಸ್ಥಿತಿ ಬರುತ್ತದೆ ಅಲ್ಲಿಗೆ ಕಾಳಿನ ಸಂಗ್ರಹದಿಂದ ಸರಿಯಾಗಿ ಸರಬರಾಜು ಮಾಡುವುದರಲ್ಲಿ ಮುನ್ನೆಚ್ಚರಿಕೆಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗ ಅಂತರ ಜಿಲ್ಲಾ ಆಹಾರ ಧಾನ್ಯಗಳ ಸಾಗಣೆಯ ಮೇಲೆ ಇರುವ ನಿರ್ಬಂಧ ಏನಿದೆ ಅದನ್ನು ಆಹಾರ ಧಾನ್ಯಗಳನ್ನು ಸಂಗ್ರಹ ಮಾಡಿದ ನಂತರ ತೆಗೆದುಹಾಕಿ ಮಾರುಕಟ್ಟೆಯಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಒಳ್ಳೆಯ ದರದಲ್ಲಿ ಆಹಾರ ಧಾನ್ಯಗಳು ಸಿಕ್ಕತಕ್ಕ ವ್ಯವಸ್ಥೆಯನ್ನು ಕೂಡ ಮಾಡುವುದರಲ್ಲಿ ಹಿಂಜರಿಯಬಾರದೆಂದು ಕೇಳಿಕೊಳ್ಳುತ್ತೇನೆ.

ಮುಂದೆ ಬರತಕ್ಕ ಸೆಟಲ್‌ಮೆಂಟ್ ಬಗ್ಗೆ ಮಾನ್ಯಮಂತ್ರಿಗಳು ಇನ್ನೂ ಅನೇಕ ರೀತಿಯಿಂದ ಕೂಲಂಕಷವಾಗಿ ವಿಚಾರಿಸಿ ರೈತನಿಗೆ ಅನ್ಯಾಯವಾಗದಂತೆ, ಯಾವ ಭಾಗದ ಜನರಿಗೂ ಅನ್ಯಾಯವಾಗದಂತೆ, ಭೂಮಿಯ ಉತ್ಪನ್ನ ಹೆಚ್ಚಾಗುವಂಥ ದೃಷ್ಟಿಯನ್ನಿಟ್ಟುಕೊಂಡು, ರೈತನಿಗೆ ಭಾರ ಆಗದಂತೆ ನೋಡಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಂಡು, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಗೋಪಾಲರಾವ್ ಮುಡಬಿ (ಹುಮ್ನಾಬಾದ್).—ಮಾನ್ಯ ಸಭಾಪತಿಗಳೇ, ರೆವೆನ್ಯೂ ಡಿಮಾಂಡಿಗೆ ಸಂಪೂರ್ಣವಾಗಿ ಬೆಂಬಲಕೊಡುತ್ತ, ಬಿದರೆ ಜಿಲ್ಲೆಗೆ ಸಂಬಂಧಪಟ್ಟಂತೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ.

ಭೂಕಂದಾಯದ ಮೇಲೆ ಮೂರು ನಾಲ್ಕು ವರ್ಷದಲ್ಲಿ ರೂಪಾಯಿಗೆ 35 ಪೈಸೆ ಸರ್‌ಚಾರ್ಜ್ ವಸೂಲು ಮಾಡಿದಾಗ ಕೆಲವರಿಗೆ ವಿನಾಯಿತಿ ಕೊಟ್ಟರು. ಹೋದ ಎರಡು ವರ್ಷ ರೂಪಾಯಿಗೆ ಹನ್ನೆರಡಾಣೆ ಪ್ರಕಾರ ಸರ್‌ಚಾರ್ಜ್ ವಸೂಲು ಮಾಡಿದರು. ಆಗ ಐದು ಎಕರೆಗಿಂತ ಕಡಮೆ ಇದ್ದವರಿಗೆ ಸರ್‌ಚಾರ್ಜಿನಿಂದ ವಿನಾಯಿತಿ ಕೊಡಲಾಯಿತು. ಆದರೆ ಬಿದರೆ ಜಿಲ್ಲೆಯಲ್ಲಿ ಯಾವ ತಾಲ್ಲೂಕಿನಲ್ಲೂ ಒಬ್ಬ ರೈತನಿಗೂ ವಿನಾಯಿತಿ ಸಿಕ್ಕಲಿಲ್ಲ. ಅದಕ್ಕೆ ಮೂಲ ಕಾರಣವೆಂದರೆ ರೈತ ಡಿಕ್ಲರೇಷನ್ ಫಾರಂ ಭರ್ತಿಮಾಡಿ ತಹಸೀಲ್ದಾರ್ ಕಡೆ ಕೊಡಬೇಕು ಎನ್ನುವ ಕಂಡಿಷನ್ ಇದೆ. ಅದು ಜಾರಿಗೆ ಬಂದಮೇಲೆ ಒಂದು ವರ್ಷದವರೆಗೂ ಡಿಕ್ಲರೇಷನ್ ಫಾರಂಗಳು ತಹಸೀಲ್ದಾರರ ಕಡೆ ಆಗಲೀ, ಬೇರೆ ಕಡೆ ಆಗಲೀ ಸಿಕ್ಕಲಿಲ್ಲ. ನಾವು ಹೇಳಿದ ಮೇಲೆ ಆ ಫಾರಂಗಳನ್ನು ಪಟೇಲರ ಮತ್ತು ಶ್ಯಾನುಭೋಗರ ಕಡೆಗೆ ಕಳಿಸಿಕೊಟ್ಟರು. ಆದರೆ ಅದನ್ನು ಭರ್ತಿಮಾಡಿ ಕೊಡುವ ಬಗ್ಗೆ ಯಾರೂ ಹಳ್ಳಿಗಳಲ್ಲಿ ಡಂಗುರ ಹೊಡೆಸಲಿಲ್ಲ. ಅಥವಾ ರೈತರನ್ನು ಕರೆಸಿ ಆ ಫಾರಂಗಳಿಗೆ ಯಾರೂ ರೈತರಿಂದ ರುಜು ಪಡೆಯಲಿಲ್ಲ. ಇದರಿಂದ ಯಾರಿಗೂ ವಿನಾಯಿತಿ ಕೊಟ್ಟಿಲ್ಲ. ಅದಕ್ಕೆ ಮುಂದೆ ಬರುವ ಭೂಕಂದಾಯದ ವಸೂಲ ಕಾಲಕ್ಕಾದರೂ ರೈತರಿಗೆ ವಿನಾಯಿತಿ ಕೊಡಿಸಬೇಕೆಂದೂ ಎಲ್ಲ ಪಟೇಲ್, ಶ್ಯಾನುಭೋಗರು ಅಥವಾ ಅಮಲ್ದಾರರಿಗೆ ರೈತರಿಂದ ಡಿಕ್ಲರೇಷನ್ ಫಾರಂ ತರಿಸತಕ್ಕ ವ್ಯವಸ್ಥೆಮಾಡಿ ಮುಂದೆ ಕೊಡಬೇಕಾದ ಕಂದಾಯದಲ್ಲಿ ಅವರಿಗೆ ವಿನಾಯಿತಿ ಕೊಡಬೇಕಾಗಿರುವುನ್ನು ಕಡಮೆಮಾಡಿ ತೆಗೆದುಕೊಳ್ಳುವಂತೆ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನಾಲ್ಕು ವರ್ಷಗಳಿಂದ ಬಿದರೆ ಜಿಲ್ಲೆಯಲ್ಲಿ ಅನ್ನದ ಪರಿಸ್ಥಿತಿ ಬಹಳ ಕೆಟ್ಟಿತ್ತು. ಅದಕ್ಕೆ ಹೋದ ವರ್ಷ ನಮ್ಮಲ್ಲೆಲ್ಲ ಡೆಪ್ಯುಟಿ ಕಮಿಷನರು ಮತ್ತು ತಹಶೀಲ್ದಾರರು ಆಹಾರ ಪರಿಸ್ಥಿತಿಯನ್ನು ನಿವಾರಿಸಲು ಕೆಲಸ ಮಾಡಿದರು. ಈ ವರ್ಷ ನಮ್ಮಲ್ಲಿ ಅದರಲ್ಲಿಯೂ ಹುಮ್ನಾನಬಾದ್

(ಶ್ರೀ ಗೋಪಾಲರಾವ್ ಮುಡಬಿ)

ತಾಲ್ಲೂಕಿನಲ್ಲಿ ಖಾರಿಫ್ ಬೆಳೆ ಸಂಪೂರ್ಣವಾಗಿ ನಾಶಹೊಂದಿದೆ. ನಾಲ್ಕಾಣಿಗೂ ಕಡಮೆ ಬೆಳೆ ಬಂದಿದೆ. ಈಗ ಬಂದಿರುವ ಕಾಳು ಎರಡು ಮೂರು ತಿಂಗಳಿಗೆ ಮಾತ್ರ ಆಗುತ್ತದೆ. ನೂರಕ್ಕೆ 40ಕ್ಕಿಂತ ಹೆಚ್ಚಿನ ಜನರು ತೊಂದರೆಗೆ ಒಳಗಾಗುತ್ತಾರೆ. ನಮ್ಮ ಭಾಗದಲ್ಲಿ ಮುಂದೆ ಬರತಕ್ಕ ಮಳೆಗಾಲದೊಳಗೆ ಭೀಕರ ಪರಿಸ್ಥಿತಿ ಬರಬಹುದು ಎಂದು ಎಲ್ಲರೂ ನಿರೀಕ್ಷೆ ಮಾಡುತ್ತಿದ್ದಾರೆ. ಅನ್ನದ ಪರಿಸ್ಥಿತಿ ಕಠಿಣವಾಗುವುದಿದೆ. ಆಗ್ರಾದಿಂದ ಅಕ್ಕಿಯನ್ನೂ, ಗುಲ್ಬರ್ಗ ಮತ್ತು ಮಹಾರಾಷ್ಟ್ರದಿಂದ ಜೋಳ ತರುತ್ತಿದ್ದರು. ಈಗ ಪ್ರತಿಬಂಧಕ ಹಾಕಿದ್ದರಿಂದ, ಅಂತರ ಜಿಲ್ಲಾ ಸಾಗಾಣಿಕೆಯ ನಿರ್ಬಂಧವಿರುವುದರಿಂದ ಬೇರೆ ಕಡೆಯಿಂದ ಕಾಳನ್ನು ತರುವುದಕ್ಕೆ ಬಹಳ ತೊಂದರೆಯಾಗಿದೆ. ಅದಕ್ಕೆ ಗುಲ್ಬರ್ಗದಿಂದ ನಮ್ಮ ಕಡೆಗೆ ಜೋಳವನ್ನು ತರಿಸಿಕೊಳ್ಳುವುದಕ್ಕೆ ಫ್ರೀ ಮೂವ್‌ಮೆಂಟಿಗೆ ಪರವಾನಗಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಬರಗಾಲದ ಸಲುವಾಗಿ ಹೋದ ವರ್ಷ ಇಡೀ ಜಿಲ್ಲೆಯೊಳಗೆ 400 ಮೈಲಿ ಉದ್ದದ ರಸ್ತೆಯನ್ನು ತೆಗೆದುಕೊಂಡದ್ದು ಉಂಟು. ಅದರಿಂದ ಎರಡು ಮೂರು ತಿಂಗಳು ಅಲ್ಲಿಯ ಜನರಿಗೆ ಒಂದು ಅನುಕೂಲವನ್ನು ಒದಗಿಸಿದ್ದುಂಟು. ಈ ವರ್ಷವೂ ಅಲ್ಲಿ ಏನಾದರೂ ಕೆಲಸಗಳನ್ನು ತೆಗೆದುಕೊಳ್ಳದೆ ಇದ್ದರೆ ಭೀಕರ ಪರಿಸ್ಥಿತಿ ಬಂದೀತು. ಆದುದರಿಂದ ಹೆಚ್ಚು ಕೆಲಸ ತೆಗೆದುಕೊಳ್ಳುವುದಕ್ಕೆ ಅನುಕೂಲವನ್ನು ಒದಗಿಸಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯಶಾಖಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮೊಟ್ಟ ಮೊದಲನೆಯದಾಗಿ ಇವತ್ತು ಉಪಯುಕ್ತವಾದ ಸಲಹೆಗಳನ್ನು ಕೊಟ್ಟ ಮಾನ್ಯ ಮಿತ್ರರೆಲ್ಲರಿಗೂ ವಂದನೆಗಳನ್ನು ಅರ್ಪಿಸುತ್ತೇನೆ. ಇವತ್ತು ಬಹಳಮಟ್ಟಿಗೆ ನನ್ನ ಕೆಲಸವನ್ನು ಕಡಿಮೆ ಮಾಡಿ ಕೊಟ್ಟಿದ್ದಾರೆ. ನನ್ನ ಮಿತ್ರರಾದ ವಿರೋಧ ಪಕ್ಷದವರು ಇಲ್ಲಿ ಇಲ್ಲದೇ ಇರುವುದರಿಂದ ಬಹಳ ಬೇಗ ಈ ಬೇಡಿಕೆಗಳು ಮುಗಿಯುತ್ತಾ ಇವೆ. ಅಷ್ಟೊಂದು ಟೀಕೆಗಳಿಲ್ಲದಿದ್ದರೂಕೂಡ ಮಾತನಾಡಿದ ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ಮಿತ್ರರು ತಮ್ಮ ಅನುಭವಗಳನ್ನೂ, ಸಲಹೆಗಳನ್ನೂ ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೊಟ್ಟಿದ್ದಾರೆ. ಕೆಲವು ತಿದ್ದುಪಡಿಗಳನ್ನು ಸಹ ಮಾಡಬೇಕೆಂದು ಹೇಳಿದ್ದಾರೆ. ಅವುಗಳ ಬಗ್ಗೆ ಸರ್ವ ಪ್ರಯತ್ನಗಳನ್ನು ಮಾಡಬೇಕೆಂದು ನಾನು ಕುತೂಹಲವುಳ್ಳವನಾಗಿದ್ದೇನೆಂದು ಭರವಸೆ ಕೊಡುತ್ತೇನೆ. ಶ್ರೀಮಾನ್ ದೊಡ್ಡಮೇಟಿಯವರು ಹೇಳಿದಹಾಗೆ ಈ ಇಲಾಖೆ ಬಹಳ ಪುರಾತನವಾದ ಎಲ್ಲರಿಗೂ ಪ್ರಿಯವಾದ ಇಲಾಖೆಯಾಗಿದೆ. ಆದರೆ ಈ ರೆವಿನ್ಯೂ ಇಲಾಖೆ ಮಾಡುವ ಅಪ್ರಿಯವಾದ ಕೆಲಸಗಳು ಇಲ್ಲಿಯೇ ಉಳಿದುಕೊಂಡು ಪ್ರಿಯವಾದ ಕೆಲಸಗಳು ಇನ್ನೊಂದು ಇಲಾಖೆಗೆ ಹೋಗಿದೆ. ಡೆವಲಪ್‌ಮೆಂಟ್ ಇಲಾಖೆಗಳಲ್ಲಿ ಸಾಲ ಕೊಡುವುದು, ಮನೆ ಕಟ್ಟಿಕೊಳ್ಳುವುದಕ್ಕೆ ಸಾಲ ಕೊಡುವುದು—ಹೀಗೆ ಪ್ರಿಯವಾದ ಕೆಲಸಗಳನ್ನು ಪ್ರಜೆಗಳಿಗೆ ಮಾಡಿಕೊಡುವುದು ಇವೆಲ್ಲಾ ಡೆವಲಪ್‌ಮೆಂಟ್ ಇಲಾಖೆಗೆ ಹೋಗಿದೆ. ಆದರೆ ಕಂದಾಯ ವಸೂಲು ಮಾಡುವುದು ಬಹಳ ಅಪ್ರಿಯವಾದುದು—ಈ ಕೆಲಸ ರೆವಿನ್ಯೂ ಇಲಾಖೆಗೆ ಉಳಿದುಕೊಂಡಿದೆ. ಅಂತಹ ಕೆಲಸ ಮಾಡಬೇಕಾದರೆ ಅದರಲ್ಲಿ ಅಷ್ಟೊಂದು ಜನಗಳ ಮನ್ನಣೆ ಪಡೆಯುವುದು ಕಷ್ಟವಾಗಿದೆ. ಆದರೂ ಕೂಡ ಈ ಇಲಾಖೆ ಈಗಲೂ ಕೂಡ ಮಾನ್ಯ ಮಿತ್ರರು ಹೇಳಿದಹಾಗೆ ಇದು ಭೂಮಿಗೆ ಸಂಬಂಧಪಟ್ಟ ಇಲಾಖೆಯಾಗಿ ಬಹಳ ಮುಖ್ಯವಾದ ಇಲಾಖೆಯಾಗಿದೆ. ಶ್ರೀಮಾನ್ ರಂಗೇಗೌಡರು ರೈತರ ನಿತ್ಯ ಜೀವನಕ್ಕೆ ಬೇಕಾದ ಅನೇಕ ಸಮಸ್ಯೆಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು ಪ್ರಶ್ನೆಗಳನ್ನು ಹಾಕುತ್ತಾ ಮಾತನಾಡಿದ್ದಾರೆ. ರೈತನಿಗೆ ತಾಲ್ಲೂಕ್ ಆಫೀಸಿನಲ್ಲಿ ಕಿರುಕುಳವಿಲ್ಲವಿದ್ದರೆ ಸಾಕು. ತಾಲ್ಲೂಕ್ ಮಟ್ಟದಲ್ಲಿ ರೈತರಿಗೆ ಕಿರುಕುಳ ಅದಷ್ಟು ಕಡಿಮೆಯಾದರೆ ನನಗೆ ಬಹಳ ಸಂತೋಷ ಹಾಗೂ ತೃಪ್ತಿಯಾಗುತ್ತದೆಂದು ಹೇಳಿದರು. ಈ ದೃಷ್ಟಿಯಿಂದ ನಮ್ಮ ರೆವಿನ್ಯೂ ಇಲಾಖೆಯಲ್ಲಿ ಇನ್ನಷ್ಟು ಬಹಳ ಕೆಲಸಗಳನ್ನು ಮಾಡಿ ಜನಗಳಿಗೆ ತೃಪ್ತಿಯುಂಟಾಗುವ ರೀತಿಯಲ್ಲಿ ಅಲ್ಲಿನ ಕಾರ್ಯನಿರ್ವಹಣೆ ಮಾಡಬೇಕಾಗಿದೆ ಎಂಬುದಾಗಿ ಹೇಳಿದರು. ನಾನು ಈ ಖಾತೆಯನ್ನು ವಹಿಸಿ 3 ವರ್ಷಗಳಾದುವು. ಅದರ ಆಡಳಿತವನ್ನು ನೋಡಿದ್ದೇನೆ. 10 ವರ್ಷಗಳ ನನ್ನ ಅನುಭವ ದೃಷ್ಟಿಯಿಂದ ಹೇಳುವುದಾದರೆ ನಮ್ಮ ಇಲಾಖೆ ಮಾಡತಕ್ಕ ಕೆಲಸದಲ್ಲಿ ನಿಜವಾಗಿ ಪೂರ್ತಿ ತೃಪ್ತಿ ಇಲ್ಲವೆಂಬುದಕ್ಕೆ ಕೆಲವು ಮೂಲಭೂತವಾದ ಕಾರಣಗಳಿವೆ. ರೆವಿನ್ಯೂ ಇಲಾಖೆ ಸರಿಯಾಗಿ ಕೆಲಸ ಮಾಡಬೇಕಾದರೆ ಕೆಲವು ತೊಡಕುಗಳು ಬಂದಿವೆ. ಮುಖ್ಯವಾಗಿರುವ ಕಾರಣ ಅದರ ಒಂದು ರಚನೆ. ಕನ್ನಡ ದೇಶ ಐದಾರು ಪ್ರಾಂತಗಳಿಂದ ಬಂದರೂ ಏಕರೂಪವಾದ ಕಾನೂನು ಇರಲಿಲ್ಲ. ರೆವೆನ್ಯೂ ರೂಲ್ಸ್‌ನಲ್ಲಿ ಏಕರೂಪತೆಯೇ ಇರಲಿಲ್ಲ ಆದ್ದರಿಂದ ಅನೇಕ ತೊಂದರೆಗಳಿದ್ದುವು. ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಇತ್ಯರ್ಥವಾಗದೆ ಅಧಿಕಾರಿಗಳಲ್ಲಿ ಬಹಳ ಅತೃಪ್ತಿ ಇತ್ತು. ಇದಾದಮೇಲೂ ಅತೃಪ್ತಿ ಕೆಲವರಿಗೆ ಇದ್ದೇ ಇದೆ. ಇದೂ ಅಲ್ಲದೆ ಈ ಇಲಾಖೆಗೆ ಅಡಿಪಾಯದಂತಿರುವ ಶ್ಯಾನು

ಭೋಗರ ಹಾಗೂ ಪಟೇಲರ ಪ್ರಶ್ನೆ ಇನ್ನೂ ಇತ್ಯರ್ಥವಾಗಿಲ್ಲ. ಉತ್ತರ ಕರ್ಣಾಟಕದಲ್ಲಿ ತಲಾಟಿ ಪದ್ಧತಿ ಇದೆ. ಹಳೆಯ ಮೈಸೂರಿನಲ್ಲಿ ಇದರ ರಚನೆ ಇನ್ನೂ ಇತ್ಯರ್ಥವಾಗಿಲ್ಲ. ಆದರೆ ಅವರ ಸ್ಥಿತಿ ತ್ರಿಶಂಕು ಸ್ವರ್ಗದಲ್ಲಿದ್ದ ಹಾಗೆ ಆಗಿದೆ. ಅವರಿಗೆ ಈಗ ಬಹಳ ತೊಂದರೆಗಳಿವೆ. ಹೊಸ ಕಾಯಿದೆಗಳನ್ನು ಮತ್ತು ಹಿಂದಿನ ಕಾಯಿದೆಗಳನ್ನು ಸೇರಿಸಿ ಒಂದು ದೊಡ್ಡ ಕಾಯಿದೆಯನ್ನು ಈಗ ಕಡ್ಡಾಯವಾಗಿ ಮಾಡಬೇಕಾಗಿದೆ. ಈ ಆಹಾರ ಸಮಸ್ಯೆಯ ಬಗ್ಗೆ ಸುಮಾರು 6-7 ತಿಂಗಳುಗಳಿಂದ ಅಭಾವ ಬಂದಮೇಲೆ ಕ್ಯಾಬಿನೆಟ್‌ನಲ್ಲಿ ಮೀಟಿಂಗ್ ಆದುದನ್ನು ಲೆಕ್ಕ ಹಾಕಿನೋಡಿದರೆ ಸಂಸ್ಥಾನಮಟ್ಟದಲ್ಲಿ ನಮ್ಮ ಕಾಲದಲ್ಲಿ ಅರ್ಧಭಾಗ ಕಾಲವನ್ನು ಈ ಆಹಾರ ವಿಷಯದ ಚರ್ಚೆಯಲ್ಲಿಯೇ ಕಳೆದಿದ್ದೇವೆ. ಕೆಲವು ಕಡೆಗಳಲ್ಲಿ ನಮ್ಮ ಇಲಾಖೆಯವರು, ಡೆಪ್ಯುಟಿ ಸೆಕ್ರೆಟರಿಯವರು, ಅಂಡರ್ ಸೆಕ್ರೆಟರಿಯವರು, ಈ ಆಹಾರ ವಿಷಯದಲ್ಲಿಯೇ ಬಹಳ ಕಾಲ ಕಳೆಯಬೇಕಾಗಿದೆ. ಜಿಲ್ಲಾಧಿಕಾರಿಗಳೂ ಸಹ ಬಹಳ ಮಟ್ಟಿಗೆ ಆಹಾರ ವಿಚಾರದಲ್ಲಿಯೇ ಕಾಲ ಕಳೆಯಬೇಕಾಯಿತು. ತಹಸೀಲ್‌ದಾರರು ಕೆಲವು ಕಡೆಗಳಲ್ಲಿ ಹೋದಾಗ ಅಲ್ಲಿ ಜನಗಳಿಗೆ ತೊಂದರೆ ಇದೆ. ಇಲ್ಲಿ ರೈತರಿಗೆ ಕಷ್ಟವಿದೆಯೆಂದು ಹೇಳಿ ವರದಿಯನ್ನು ನನಗೆ ತಿಳಿಸುತ್ತಿದ್ದುದರಿಂದ ಜನಗಳಿಗೆ ಯಾವೊಂದು ರೀತಿಯಲ್ಲಿ ಕಿರುಕುಳವನ್ನು ತಂದೊಡ್ಡದೆ ಸಹಾಯ ಮಾಡಬೇಕೆಂದು ಹೇಳುತ್ತಿದ್ದೇನೆ. ಇದರಿಂದ ನನಗಂತೂ ಬೇಜಾರು ಆಗುತ್ತಿದೆ. ಇದಲ್ಲದೆ ಅಸೆಂಬ್ಲಿ ಸದಸ್ಯರು ಬಂದು ಜೋಳ ತಿನ್ನುವವರಿಗೆ ಜೋಳವೇ ಸಿಗುವುದಿಲ್ಲ. ನಂನಮ್ಮ ಊರಿನಿಂದ ತರುತ್ತೇವೆ. ಪರ್ಮಿಟ್ಟುಗಳನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಆದಕ್ಕೆ ಎಷ್ಟೋ ನಿರ್ಬಂಧಗಳಿವೆಯೆಂದು ಹೇಳಿದರೂ ಎಷ್ಟೋ ಜನ ಸದಸ್ಯರು ಪರ್ಮಿಟ್ಟುಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಆಹಾರ ಪರಿಸ್ಥಿತಿ ಅಸೆಂಬ್ಲಿ ಸದಸ್ಯರಿಗೇ ಈ ರೀತಿಯಾದರೆ ಇನ್ನು ಸಾಮಾನ್ಯ ಜನಗಳಿಗೆ ಇನ್ನೆಷ್ಟು ತೊಂದರೆ ಇದೆಯೆಂಬುದನ್ನು ನಾವು ಊಹಿಸಬೇಕು. ಈಗಿನ ಆಹಾರಾಭಾವದಿಂದ ಅನೇಕ ಕಿರುಕುಳಗಳು ಬಂದಿವೆ. ಒಟ್ಟಿನಲ್ಲಿ ನಾನು ಇಷ್ಟು ಭರವಸೆ ಕೊಡುತ್ತೇನೆ. ಈ ಇಲಾಖೆಗಳಲ್ಲಿರತಕ್ಕ ತೊಡಕುಗಳು ನಿವಾರಣೆಯಾಗುವುದು ಮುಖ್ಯ. ಈಗಾಗಲೇ ಏಕರೂಪವಾದ ಒಂದು ರೆವಿನ್ಯೂ ಕೋಡ್ ಆಗುತ್ತಾ ಇರುವುದರಿಂದ ಈ ಇಲಾಖೆಯಲ್ಲಿದ್ದಂಥ ತೊಂದರೆಗಳು ಇತ್ತೀಚೆಗೆ ಬಹಳವಾಗಿ ನಿವಾರಣೆಯಾಗುತ್ತಾ ಇವೆ. ಈ ಇಲಾಖೆಯಲ್ಲಿನ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಇತ್ಯರ್ಥವಾಗುವುದರಿಂದ ಅದರಲ್ಲಿ ಎಷ್ಟೋ ಅಸಮಾಧಾನಗಳಿದ್ದರೂ ಅವನ್ನು ನೌಕರರು ಮರೆತುಹೋಗುತ್ತಾರೆ. ಇದರಿಂದ ಮುಂದೆ ಸರಿಹೋಗುತ್ತದೆ. ಆಹಾರ ಪರಿಸ್ಥಿತಿ ಬಗ್ಗೆ ಪ್ರಾರಂಭದಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲದೇ, ಹಣವಿಲ್ಲದೆ ತೊಂದರೆ ಇತ್ತು. ಅದು ಈಗ ಸ್ವಲ್ಪಮಟ್ಟಿಗೆ ಸರಿಹೋಗುತ್ತಾ ಇದೆ. ಮುಂದಿನ ಎರಡು ವರ್ಷಗಳಲ್ಲಿ ಈ ಇಲಾಖೆಯಿಂದ ರೈತರಿಗೆ ನೌಕರರು ಎಷ್ಟು ಸೇವೆ ಮಾಡುವುದಕ್ಕೆ ಸಾಧ್ಯವೋ ಅಷ್ಟೊಂದೂ ಮಾಡುವುದಕ್ಕೆ ಅವಕಾಶವಾಗತಕ್ಕ ಶುಭಸೂಚನೆಗಳು ಕಾಣುತ್ತಾ ಇವೆ. ನಾವು ಈಗ ಮಾಡುತ್ತಿರುವ ಕಾರ್ಯವನ್ನು ನೋಡಿದರೆ ಈ ರೆವಿನ್ಯೂ ಇಲಾಖೆಗೆ ಇಷ್ಟೊಂದು ಕೆಲಸ ಯಾವತ್ತೂ ಬಂದಿರಲಿಲ್ಲ. ಒಂದು ಕಡೆ ಲ್ಯಾಂಡ್ ರಿಫಾರಮ್ಸ್ ಇನ್ನೂ ಜಾರಿಗೆ ತರಬೇಕು. ಇನಾಂ ಅಬಾಲಿಷನ್ ಅದೊಂದು ಕಡೆ ಹಾಗೆಯೇ ಇದೆ. ಮಾನ್ಯ ಶ್ರೀಮಾನ್ ದೊಡ್ಡಮೇಟಿಯವರು ಇನಾಂ ಅಬಾಲಿಷನ್ ಇಲಾಖೆಯ ಕೆಲಸ ಸಮರ್ಪಕವಾಗಿಲ್ಲ ಅದನ್ನು ಬೇಗ ಮುಗಿಸಿ ಎಂದು ಹೇಳಿದ್ದಾರೆ. ಅದಕ್ಕೋಸ್ಕರವಾಗಿ ಸರ್ವ ಪ್ರಯತ್ನಗಳು ಈಗಾಗಲೇ ನಡೆಯುತ್ತಿವೆ. ಲ್ಯಾಂಡ್ ರಿಫಾರಮ್ಸ್‌ನಿಂದ ರೈತರಿಗೆ ಆಗಬೇಕಾದ ಅನುಕೂಲಗಳು ತಕ್ಷಣ ದೊರಕಲಿ ಎಂಬ ಉದ್ದೇಶದಿಂದ ಅದನ್ನು ಕೂಡಲೇ ಜಾರಿಗೆ ತರಬೇಕಾಗಿದೆ. ಎಷ್ಟೆಷ್ಟು ಕೆಲಸಗಳು ಈ ಬಾಬಿನಲ್ಲಿ ಆಗಿವೆಯೆಂಬುದನ್ನು ಇದಕ್ಕೆ ಸಂಬಂಧಪಟ್ಟ ವರದಿಗಳನ್ನು ಓದಿದವರಿಗೆ ಮತ್ತು ಮಾನ್ಯ ಸದಸ್ಯರಿಗೆ ಅರ್ಥವಾಗುತ್ತದೆ. ಆಮೇಲೆ ಈ ವಿಲೇಜ್ ಅಫಿಷಿಯಲ್ಸ್ ಬದಲಾವಣೆ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಮಾನ ಆಗುತ್ತಲೇ ಇದೆ. ಆಗ ವಿಲೇಜ್ ಅಫಿಷಿಯಲ್ಸ್ ಬದಲಾವಣೆಯಾಗುತ್ತಾರೆ. ಆದ್ದರಿಂದ ಈ ಇಲಾಖೆಯಲ್ಲಿ ಇಷ್ಟು ಏರ್ಪಾಡುಗಳು ಆಗಬೇಕಾಗಿರುವುದರಿಂದ ನಮಗೆ ಸ್ವಲ್ಪಮಟ್ಟಿಗೆ ಕಷ್ಟಕಾಲವಾಗಿದೆ. ಮುಂದೆಯಾದರೂ ಕೂಡ ಕೆಲವು ನ್ಯೂನತೆಗಳನ್ನು ನಿವಾರಣೆ ಮಾಡಿ ಒಳ್ಳೆಯ ಸುಭಿಕ್ಷಕಾಲ ಬರಲೆಂದು ನಾನು ಆಶಿಸುತ್ತೇನೆ. ಇಂತಹ ಕಷ್ಟಕರವಾದ ಪರಿಸ್ಥಿತಿಯಲ್ಲಿ ಆಹಾರ ಪರಿಸ್ಥಿತಿಯ ಬಗ್ಗೆ ಚರ್ಚೆ ಬಂದಾಗ ರಾತ್ರಿ ಹಗಲು ಅಧಿಕಾರಿಗಳು ಕೆಲಸ ಮಾಡಿದ್ದಾರೆ. ರಾತ್ರಿಯ ಹೊತ್ತು ರೈಲ್ವೆಸ್ಟೇಷನ್‌ಗೆ ಹೋಗಿ ಆಹಾರ ಧಾನ್ಯಗಳನ್ನು ಸಂಗ್ರಹಿಸುವ ಕೆಲಸದಲ್ಲಿದ್ದುಕೊಂಡು ತಿಂಗಳಾನುಗಟ್ಟಲೆ ಕೆಲಸ ಮಾಡಿದ್ದಾರೆ. ಎಷ್ಟು ಹೊತ್ತಿಗೆ ಫೋನ್ ಮಾಡಿದರೂ ರಾತ್ರಿಯೆಲ್ಲಾ ಕೆಲಸ ಮಾಡುತ್ತಿದ್ದಾರೆಂಬುದು ತಿಳಿಯುತ್ತಿತ್ತು. ಹೀಗೆ ಕೆಲಸ ಮಾಡಿದರೂ ಜನಗಳಿಗೆ ತೃಪ್ತಿ ಮಾಡಲಿಕ್ಕಾಗಲಿಲ್ಲವಲ್ಲಾ ಎಂದೆನಿಸಿತು. ಇಂತಹ ಸನ್ನಿವೇಶದಲ್ಲಿ ಮಾನ್ಯ ಸದಸ್ಯರಲ್ಲಿ ಒಂದು ಪ್ರಾರ್ಥನೆ ಏನೆಂದರೆ, ಆಹಾರದ ವಿಷಯದಲ್ಲಿ ಒಂದು ಸುವ್ಯವಸ್ಥೆ ಈಗ ಬಂದಿದೆ. ಒಳ್ಳೆಯ ಕಾಲ ಇನ್ನು ಸಿಗುತ್ತದೋ ಇಲ್ಲವೋ, ಬೆಂಗಳೂರಿನ ಜನಗಳಿಗೆ ಸರಿಯಾದ ಅಕ್ಕಿ ಸಿಗುತ್ತಾ ಇಲ್ಲವೇ ಎಂದು ಕೆಲವರು ಹೇಳಿದರು. ಆಂಧ್ರದಿಂದ ಈಗ ಅಕ್ಕಿ ಮಾತ್ರ ಬರುತ್ತಿದೆ. ಅಕ್ಕಿಯಷ್ಟೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಕೆಲವು ಪ್ರಾಂತಗಳಿಂದ ಬರುತ್ತದೆ. ಕೆಲವರು ಬಿ.ಟಿ. ರೈಸ್ ಕಳುಹಿಸುತ್ತಿದ್ದಾರೆ. ಎಷ್ಟೋ ಪರ್ಲಾ ಅಕ್ಕಿಯನ್ನು ಒಂದೊಂದು ಬೆಳೆಯಲ್ಲಿಯೇ ಬೆಳೆಯುತ್ತಾರೆ. ಇನ್ನು ಮುಂದೆ ಒಳ್ಳೆಯ ಉತ್ತಮವಾದ ಅಕ್ಕಿಯನ್ನು ಸರಬರಾಜು ಮಾಡುವ ಪರಿಸ್ಥಿತಿ ಇನ್ನೆರಡು ಮೂರು ತಿಂಗಳೊಳಗೆ ಬರುತ್ತದೆ. ನಮ್ಮ ಒಕ್ಕಲಿಗರೂ ಸಹ ಶ್ರೀಮಾನ್ ಶರಣಪ್ಪನವರು ಹೇಳಿದ ಹಾಗೆ ಇಲಾಖೆಯ ನೀತಿಯನ್ನು ಪ್ರೊಕ್ಯೂರ್ ಮೆಂಟ್ ಆರ್ಡರ್ ಪ್ರಕಾರ ಸ್ವಲ್ಪಮಟ್ಟಿಗೆ ಬದಲಾಯಿಸುವುದರಿಂದ ಒಕ್ಕಲುತನ ಮಾಡುವವರು ಒಳ್ಳೆಯ ಸಹಕಾರ ಕೊಡುತ್ತಾರೆ. ಈಗ ನಾವು 2 ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ವಸೂಲು ಮಾಡಬೇಕೆಂಬುದಾಗಿ ಒಂದು ಟಾರ್ಜೆಟ್ಟನ್ನು ಹಾಕಿಕೊಂಡಿದ್ದೇವೆ. ಈಗಾಗಲೇ $1\frac{1}{4}$ ಲಕ್ಷ ಟನ್ನು ಗಳಷ್ಟು ಅಕ್ಕಿ ಶೇಖರವಾಗಿದೆ. ಇನ್ನೂ ಮುಂದೆ ವಸೂಲಾಗುತ್ತದೆ. ನಮ್ಮಲ್ಲಿ ಸರಿಯಾದ ವ್ಯವಸ್ಥೆಯಿಂದ ಗೋಡೌನ್ ಇಲ್ಲದಿದೆ. ಅದರಿಂದ ಸ್ವಲ್ಪಮಟ್ಟಿಗೆ ನಿಧಾನವಾಗಿದೆ. ಬಹುಶಃ ಎಷ್ಟು ಟಾರ್ಜೆಟ್ಟನ್ನು ನಾವು ಹಾಕಿಕೊಂಡಿದ್ದೇವೋ ಅದಕ್ಕಿಂತ ಹೆಚ್ಚು ವಸೂಲಾಗುವುದಿದೆ. ಬಿಜಾಪುರ, ಗುಲ್ಬರ್ಗಾಗಳಿಂದ ಜೋಳ ಸರಬರಾಜು ಮಾಡಲು ರೈತರು ಬಹಳವಾಗಿ ಸಹಕಾರ ಕೊಡುತ್ತಿದ್ದಾರೆ. ಇದನ್ನು ನೋಡಿದರೆ ದೇವರು ಮಳೆ ಬೆಳೆ ಚೆನ್ನಾಗಿ ಕೊಟ್ಟರೆ ಏನು ನಾವು ಪ್ಲಾನು ಹಾಕಿಕೊಂಡಿದ್ದೇವೋ ಅದು ಜಯಪ್ರದವಾಗಿ ಆಗುತ್ತದೆ. ಮುಂದೆ ಅಂತಹ ಒಳ್ಳೆಯ ಅಧಿಕಾರಿಗಳು ಬರುತ್ತಾರೆಂದು ನಾನು ಭರವಸೆ ಕೊಡುತ್ತೇನೆ. ಈಗ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀ ರಂಗೇಗೌಡರು ಅವರ ತಾಲ್ಲೂಕಿನ ಸಮಸ್ಯೆ ಆಹಾರ ಪರಿಸ್ಥಿತಿಯಲ್ಲಿ ಕೆಟ್ಟಿದೆ, ಏನೊಂದು ಜಮಾಬಂದಿ ಅಲ್ಲಿ ಇತ್ತು, ಅದು ಬಹಳ ಚೆನ್ನಾಗಿತ್ತೆಂದು ಹೇಳಿದ್ದಾರೆ. ಶ್ರೀಮಾನ್ ಮಾದಯ್ಯಗೌಡರು ಮಾಗಡಿ ತಾಲ್ಲೂಕಿನಲ್ಲಿಯೂ ಜಮಾಬಂದಿ ಸರಿಯಾಗಿ ಮಾಡಬೇಕೆಂದು ಹೇಳಿದ್ದಾರೆ. ನಾನೂ ಸಹ ಚಿಕ್ಕವಯಸ್ಸಿನಲ್ಲಿ ಜಮಾಬಂದಿ ಕೆಲಸ ಮಾಡುತ್ತಿದ್ದೆ. ಈಗ ಅದರ ನೆನಪು ನನಗೆ ಬರುತ್ತಿದೆ. ನನ್ನ ತಂದೆ ಜಮಾ ಬಂದಿ ಕೆಲಸ ಮಾಡಿಸುವುದರಲ್ಲಿ ಒಬ್ಬ ಮುಖಂಡರಾದ ಗೌಡರು ಆಗಿದ್ದರು.

ಸಾಮಾನ್ಯವಾಗಿ ನಮ್ಮ ಊರಿನಲ್ಲಿಯೂ ಜಮಾ ಬಂದಿ ನಡೆಯುತ್ತಿತ್ತು. ಜಮಾ ಬಂದಿ ನಡೆಯುತ್ತದೆ ಎಂದರೆ ತಾಲ್ಲೂಕು ಆಫೀಸಿನಿಂದ ಕೆಲವು ಜವಾನರು ಊರಿಗೆ ಬಂದು ಹುಣಸೆ ಮರದ ಕೊಂಬೆಯನ್ನು ಕಡಿದು ಅದರಿಂದ ಗೂಟಗಳನ್ನು ಮಾಡಿ ಆ ಗೂಟಗಳನ್ನ ಟೆಂಟ್ ಹಾಕುವುದಕ್ಕೋಸ್ಕರ ಭೂಮಿಯಲ್ಲಿ ಹೊಡೆಯುತ್ತಿದ್ದರು. ಆಮೇಲೆ ಇವರು ಟೆಂಟುಗಳನ್ನೆಲ್ಲಾ ಕಟ್ಟಿ ಎಲ್ಲವನ್ನೂ ಸಿದ್ಧಪಡಿಸಿದಮೇಲೆ ಡೆಪ್ಯುಟಿ ಕಮೀಷನರು ಜಮಾ ಬಂದಿಗೆ ಕುದುರೆಯಮೇಲೆ ಕುಳಿತುಕೊಂಡು ಒಳ್ಳೆ ಚೆನ್ನಾಗಿ ಬರುತ್ತಿದ್ದರು. ಅವರ ಜೊತೆಯಲ್ಲಿ ಶೇಕದಾರರು ಮತ್ತು ಅಮಲ್ದಾರರೂ ಬರುತ್ತಿದ್ದರು. ಅವರು ಮಾಂಸಾಹಾರಿಗಳಾಗಿದ್ದರೆ ಕುರಿ, ಕೋಳಿ ಮುಂತಾದ ಸಾರು ವಗೈರೆಗಳನ್ನು ಮಾಡಿಸುತ್ತಿದ್ದರು. ಅವರು ಸಸ್ಯಾಹಾರಿಗಳಾಗಿದ್ದರೆ ವಬ್ಬಟ್ಟು ಮುಂತಾದ ಅಡಿಗೆಗಳನ್ನು ಮಾಡಿಸುತ್ತಿದ್ದರು. ಈ ರೀತಿ ಹಿಂದೆ ಬಹಳ ವೈಭವದಿಂದ ಜಮಾಬಂದಿ ನಡೆಯುತ್ತಿತ್ತು. ಅಂತೂ ಜಮಾಬಂದಿಯನ್ನು ಒಂದು ಹಬ್ಬದೋಪಾದಿಯಲ್ಲಿ ಆಚರಿಸುತ್ತಿದ್ದರು. ಡೆಪ್ಯುಟಿ ಕಮೀಷನರು ಒಂದು ಕುದುರೆಯಮೇಲೆ ಅಮಲ್ದಾರರು ಒಂದು ಕುದುರೆಯಮೇಲೆ ಕುಳಿತುಕೊಂಡು ಬರುತ್ತಿದ್ದರು. ಅವರ ಪಕ್ಕದಲ್ಲಿ ತೋಟಿ ತಳವಾರರು ದೊಣ್ಣೆಯನ್ನು ಹಿಡಿದುಕೊಂಡು ಬರುತ್ತಿದ್ದರು. ಡೆಪ್ಯುಟಿ ಕಮೀಷನರು ಮತ್ತು ಅಮಲ್ದಾರರ ಮುಂದೆ ಪಟೇಲರು ಮತ್ತು ಶ್ಯಾನಭೋಗರುಗಳು ಬರುತ್ತಿದ್ದರು. ಆ ರೀತಿ ಅವರು ಬರುವುದನ್ನ ನೋಡುವುದಕ್ಕೆ ಬಹಳ ಸಂತೋಷವಾಗುತ್ತಿತ್ತು. ಅಂಥಾ ಜಮಾಬಂದಿಯನ್ನು ಈಗ ಮಾಡುವುದಕ್ಕೆ ಸಾಧ್ಯವಿಲ್ಲ. ಹಿಂದೆ ಸಿಟಿಗಳಲ್ಲಿ, ತಾಲ್ಲೂಕುಗಳಲ್ಲಿ, ಮತ್ತು ಹಳ್ಳಿಗಳಲ್ಲಿ ಇರತಕ್ಕ ಕೆಲವು ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರುಗಳು ಪರಿಶೀಲನೆ ಮಾಡಿ ಅಲ್ಲಿಲ್ಲೇ ತೀರ್ಮಾನ ಮಾಡಿ ಅವುಗಳನ್ನ ಬಗೆಹರಿಸುತ್ತಿದ್ದರು. ಅಂಥಾ ಏರ್ಪಾಡುಗಳು ಈಗ ನಡೆಯುತ್ತಾ ಇಲ್ಲ. ಹಿಂದೆ ನಡೆಯುತ್ತಿದ್ದಂತಹ ಜಮಾ ಬಂದಿ ಈಗ ನಡೆಯುತ್ತಾ ಇಲ್ಲ. ಇಷ್ಟರಲ್ಲಿಯೇ ನಾನೇ ಖುದ್ದು ಹೋಗಿ ಮಾಗಡಿಯಲ್ಲಿ ಒಂದು ಜಮಾಬಂದಿಯನ್ನು ಮಾಡಿಸುತ್ತೇನೆ. ಏನೇನು ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿದೆಯೋ ಅವುಗಳನ್ನೆಲ್ಲಾ ಮಾಡೋಣ. ತಾಲ್ಲೂಕು ಆಫೀಸುಗಳಲ್ಲಿ ಕಾಗದಪತ್ರಗಳ ವಿಲೇವಾರಿಯಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸುವುದಕ್ಕೋಸ್ಕರ ಇನ್ನು ಮುಂದೆ ತಾಲ್ಲೂಕು ಆಫೀಸುಗಳಿಗೆ ಸರ್‌ಪ್ರೈಜ್ ವಿಜಿಟ್ ಕೊಡಬೇಕೆಂದಿದ್ದೇನೆ ಈಗ 3 ವರ್ಷಗಳಿಂದಲೂ ತಾಲ್ಲೂಕು ಆಫೀಸುಗಳಿಗೆ ನಾನು ಸರ್‌ಪ್ರೈಜ್‌ವಿಜಿಟ್ ಕೊಡುವುದಕ್ಕೆ ಪ್ರಯತ್ನ ಮಾಡಲಿಲ್ಲ. ಡಿವಿಜನಲ್ ಕಮಿಷನರಿಗೇ ಸರ್‌ಪ್ರೈಜ್ ವಿಸಿಟ್ ಕೊಟ್ಟು ವರದಿಯನ್ನ ಕಳುಹಿಸಿ ಎಂದು ನಾನು ಹೇಳಿದ್ದೆ ನಮ್ಮ ಇಲಾಖೆಯಲ್ಲಿ ಏನೇನು ನ್ಯೂನತೆಗಳು ತೊಂದರೆಗಳು ಇವೆಯೋ ಅವುಗಳನ್ನೆಲ್ಲಾ ಸರಿಮಾಡಿಕೊಂಡು ಆ ನಂತರ ಆಕೆಲಸವನ್ನು ಮಾಡೋಣ ಎಂದು ಅದನ್ನು ಪೋಸ್ಟ್‌ಪೋನ್ ಮಾಡಿಕೊಂಡು ಬಂದೆ. ಬರುವ ತಿಂಗಳಿನಲ್ಲಿ ತಾಲ್ಲೂಕು ಆಫೀಸುಗಳಿಗೆ ಅನಿರೀಕ್ಷಿತ ಭೇಟಿ

ಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಒಂದು ತಿಂಗಳಿಗೆ ಎರಡು ಮೂರು ಸಲ ಯಾವುದಾದರೂ ತಾಲ್ಲೂಕು ಆಫೀಸುಗಳಿಗೆ ಅನಿರೀಕ್ಷಿತ ಭೇಟಿಯನ್ನು ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎಂದು ನಾನು ಮಾನ್ಯ ಸಭೆಗೆ ಭರವಸೆಯನ್ನ ಕೊಡುತ್ತೇನೆ. ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆಯೋ ಅವುಗಳ ಬಗ್ಗೆ ಪ್ರತಿಯೊಂದಕ್ಕೂ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗದೇ ಇದ್ದರೂ ಈ ಇಲಾಖೆಯಲ್ಲಿ ನೂರಾರು ಕಷ್ಟಕರವಾದ ಕೆಲಸಗಳನ್ನು ಮಾಡಬೇಕಾದ ಪರಿಸ್ಥಿತಿಯಲ್ಲಿ ಸಾಧ್ಯವಾದಮಟ್ಟಿಗೆ ಅವುಗಳನ್ನೆಲ್ಲಾ ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇವೆ. ಅಧಿಕಾರಿಗಳೂ ಸಹ ಆ ಕೆಲಸಗಳನ್ನ ಮಾಡಲು ಕಷ್ಟಪಡು ತ್ತಿದ್ದಾರೆ. ಅಂತೂ ಈ ಇಲಾಖೆಯಲ್ಲಿ ಬಹಳ ತೊಂದರೆಗಳಿವೆ, ಮತ್ತು ಬಹಳ ಕೆಲಸಗಳಿವೆ. ಕೆಳಮಟ್ಟದಲ್ಲಿರತಕ್ಕ ನೌಕರರಿಗೆ ಕೆಲವು ಸಂದರ್ಭದಲ್ಲಿ ಏನಾಗುತ್ತದೆ ಎಂದರೆ ಕೆಲಸ ಜಾಸ್ತಿ ಯಾದಾಗ ಸ್ವಲ್ಪ ಜಡತ್ವ ಬರುತ್ತದೆ. ಇದಕ್ಕೆ ಒಂದು ನಾನು ಉದಾಹರಣೆಯನ್ನ ಹೇಳುತ್ತೇನೆ. ಅದೇನೆಂದರೆ ಈಗ ಒಬ್ಬ ಮನುಷ್ಯನಿಗೆ 300-400 ರೂಪಾಯಿಗಳ ಸಂಪಾದನೆ ಬರುತ್ತದೆ. ಆದರ ಖರ್ಚು ದಿನೇ ದಿನೇ ಜಾಸ್ತಿಯಾಗುತ್ತಾ ಹೋಗುತ್ತದೆ. ಆಗ ಅವನು ಸಾಲ ಮಾಡುತ್ತಾನೆ. ಒಂದು ಸಾವಿರ ಎರಡು ಸಾವಿರ ರೂಪಾಯಿಗಳ ಸಾಲ ಮಾಡಿದಾಗ ಅವನಿಗೆ ಅದನ್ನು ಹೇಗೆ ತೀರಿಸುವುದು ಎಂದು ಯೋಚನೆ ಬರುತ್ತದೆ, ಆಮೇಲೆ ಸಾಲ ಹೀಗೆ ಏರುತ್ತಾ 7-8-10 ಸಾವಿರ ರೂಪಾಯಿಗಳ ಸಾಲ ಆದರೆ ಆ ಮೇಲೆ ಅವನಿಗೆ ಅದರ ಯೋಚನೆಯೇ ಬರುವುದಿಲ್ಲ. ಹೀಗೆ ನಮ್ಮ ಇಲಾಖೆಯಲ್ಲಿ ವಿಪರೀತ ಕೆಲಸಗಳಾಗಿ ಯಾವುದಕ್ಕೂ ಗಮನಕೊಡುವುದಕ್ಕೆ ಸಾಧ್ಯವಿಲ್ಲ ದಂತಾಗಿದೆ ಎಂಬ ಭಾವನೆ ಬರುತ್ತದೆ. ಈಗ ಈ ಇಲಾಖೆಯಲ್ಲಿ ಏನೇನು ನ್ಯೂನತೆಗಳು ಇವೆಯೋ ಅವುಗಳನ್ನೆಲ್ಲಾ ಸರಿಪಡಿಸಿದರೆ ಆಗ ಅಲ್ಲಿ ಬಹಳಮಟ್ಟಿನ ತೊಂದರೆಗಳು ನಿವಾರಣೆಯಾಗುತ್ತವೆ. ನಮ್ಮ ಮೈಸೂರು ರಾಜ್ಯಕ್ಕೆ 5-6 ಸಂಸ್ಥಾನಗಳ ಭಾಗಗಳು ಬಂದು ಸೇರಿದ್ದರಿಂದ ಅಲ್ಲಿದ್ದ ಕಾನೂನುಗಳನ್ನೆಲ್ಲಾ ಒಂದುಗೂಡಿಸಿ ಏಕರೂಪವಾದ ಕಾನೂನು, ಸರ್ವೀಸು ಇವುಗಳನ್ನು ಮಾಡಿ ಕೊಳ್ಳುವುದರಲ್ಲಿ ಅನೇಕ ತೊಂದರೆಗಳಾದುವು. ಈಗ ಒಂದೊಂದಾಗಿ ಎಲ್ಲವನ್ನೂ ಸರಿಪಡಿಸು ತ್ತಿದ್ದೇವೆ. ಈ ಇಲಾಖೆಯಲ್ಲಿ ಸ್ವಾರಸ್ಯವಾದ ಒಂದೆರಡು ವಿಷಯಗಳನ್ನ ನಾನು ಹೇಳುತ್ತೇನೆ. ಕೆಲವರಿಗೆ ಏನಾಗಿದೆ ಎಂದರೆ ನಮ್ಮನ್ನ ಸ್ವಲ್ಪ ಕೀಳು ದೃಷ್ಟಿಯಿಂದ ನೋಡುತ್ತಾರೆ ಎನ್ನುವ ಭಾವನೆ ಹುಟ್ಟಿದೆ ಅಧಿಕಾರಿಗಳು ಅಷ್ಟೇ ಅಲ್ಲ ಕೆಲವು ಶಾಸನ ಸಭಾ ಸದಸ್ಯರಿಗೂ ಕೂಡ ಆ ಭಾವನೆ ಬಂದಿದೆ. ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಕುಬಸದ್ ಎನ್ನುವ ಹೆಸರಿನ ಮಾನ್ಯ ಸದಸ್ಯ ರೊಬ್ಬರಿದ್ದಾರೆ. ಅವರು ಒಂದು ಸಾರಿ ನಮ್ಮ ಅಫೀಸಿಗೆ ಫೋನ್ ಮಾಡಿ ಮಂತ್ರಿಗಳಿದ್ದಾರೆಯೇ ಎಂದು ಕೇಳಿದ್ದಾರೆ. ನಮ್ಮ ಆಫೀಸಿನಲ್ಲಿ ಫೋನ್ ರಿಸೀವ್ ಮಾಡಿದವರು ಮಂತ್ರಿಗಳು ಆಫೀಸಿನಲ್ಲಿ ಇಲ್ಲ ಎಲ್ಲೋ ಹೊರಗಡೆ ಹೋಗಿದ್ದಾರೆ ತಮ್ಮ ಹೆಸರೇನು ಎಂದು ಕೇಳಿದ್ದಾರೆ. ಅವರು ಅದಕ್ಕೆ ನನ್ನ ಹೆಸರು ಕುಬಸದ್, ಎಂದು ಹೇಳಿ ಫೋನ್ ರಿಸೀವ್ ಮಾಡಿದವರನ್ನ ನಿಮ್ಮ ಹೆಸರೇನು ಎಂದು ಕೇಳಿದ್ದಾರೆ. ಅದಕ್ಕೆ ಅವರು ನನ್ನ ಹೆಸರು ಶಿರೆ ಎಂದು ಹೇಳಿದ್ದಾರೆ. ಆಗ ಶ್ರೀಮಾನ್ ಕುಬಸದ್ ಅವರಿಗೆ ಕೋಪ ಬಂದು ನನ್ನನ್ನು ಹಾಸ್ಯ ಮಾಡುತ್ತಾರೆ ಎಂದು ಜಗಳ ಮಾಡುತ್ತಾ ನನ್ನ ಹತ್ತಿರ ಬಂದರು. ನಮ್ಮ ಆಫೀಸಿನಲ್ಲಿ ಫೋನ್ ರಿಸೀವ್ ಮಾಡಿದವರು ಉತ್ತರ ಕರ್ನಾಟಕ ದವರು ಅವರ ಹೆಸರು ನಿಜವಾಗಿಯೂ ಶಿರೆ. ಅವರು ನಮ್ಮ ಆಫೀಸಿನಲ್ಲಿಯೇ ಕೆಲಸ ಮಾಡಿ ಕೊಂಡಿದ್ದಾರೆ. ಆ ಮೇಲೆ ಶ್ರೀಮಾನ್ ಕುಬಸದ್ ಅವರಿಗೆ ನಾನು ಈ ವಿಷಯವನ್ನ ತಿಳಿಸಿದೆ. ಆ ಮೇಲೆ ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಡಾ|| ನಾಗಪ್ಪಾ ಆಳ್ವ ಅವರ ಆಫೀಸಿಗೆ ಮಂಗಳೂರಿ ನವರು ಪೂಜಾರಿ ಎನ್ನುವವರು ಫೋನ್ ಮಾಡಿದ್ದಾರೆ. ಆಗ ಅವರಿಗೆ ಮಂತ್ರಿಗಳು ಸಿಕ್ಕಲಿಲ್ಲ. ಮಂತ್ರಿಗಳು ಪರ್ಸನಲ್ ಅಸಿಸ್ಟೆಂಟ್ ದೇವರು ಎನ್ನುವವರು ಫೋನ್ ರಿಸೀವ್ ಮಾಡಿದ್ದಾರೆ. ಆಗ ಅವರು ನಿಮ್ಮ ಹೆಸರೇನು ಎಂದು ಕೇಳಿದ್ದಾರೆ. ಅದಕ್ಕೆ ಅವರು ನನ್ನ ಹೆಸರು ಪೂಜಾರಿ ಎಂದು ಹೇಳಿದ್ದಾರೆ. ಫೋನ್ ರಿಸೀವ್ ಮಾಡಿದ ಪರ್ಸನಲ್ ಅಸಿಸ್ಟೆಂಟನ್ನು ಅವರು ನಿಮ್ಮ ಹೆಸರೇನು ಎಂದು ಕೇಳಿದ್ದಾರೆ ಅದಕ್ಕೆ ಅವರು ನನ್ನ ಹೆಸರು ದೇವರು ಎಂದು ಹೇಳಿದ್ದಾರೆ. ಆಗ ಮಂಗಳೂರಿನ ಶ್ರೀಮಾನ್ ಪೂಜಾರಿ ಎಂಬುವರು ನನ್ನನ್ನ ಹಾಸ್ಯ ಮಾಡಿದ್ದಾರೆ ಎಂದು ಅವರು ಮಂತ್ರಿಗಳ ಹತ್ತಿರ ಬಂದು ಹೇಳಿದರು. ಆಗ ಮಂತ್ರಿಗಳು ಆ ಜಗಳವನ್ನ ಇತ್ಯರ್ಥ ಮಾಡ ಬೇಕಾಯಿತು. ಈ ರೀತಿ ಎಷ್ಟೋ ತೊಡಕುಗಳು ನಮಗೆ ಬರುತ್ತವೆ. ಈ ರೀತಿ ನಮ್ಮ ಇಲಾಖೆ ಯಲ್ಲಿ ಇದ್ದಂತಹ ಅನೇಕ ತೊಂದರೆಗಳು ಈಗ ಎಲ್ಲಾ ನಿವಾರಣೆಯಾಗುತ್ತಿವೆ. ಇಷ್ಟನ್ನ ಹೇಳಿ ಮಾನ್ಯ ಸದಸ್ಯರೆಲ್ಲರಿಗೂ ನನ್ನ ಧನ್ಯವಾದಗಳನ್ನ ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ.—ಭೂ ಸುಧಾರಣಾ ಕಾಯಿದೆಗೆ ಸಂಬಂಧಪಟ್ಟ ತಿದ್ದುಪಡಿಗಳನ್ನ ಈ ಅಧಿವೇಶನದಲ್ಲಿಯೇ ಈ ಸಭೆಯ ಮುಂದೆ ತರುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಿದ್ದುಪಡಿಗಳೆಲ್ಲವೂ ರೆಡಿಯಾಗಿವೆ. ಇದೇ ಅಧಿವೇಶನದಲ್ಲಿ ಸಾಧ್ಯವಾದರೆ ಅವುಗಳನ್ನು ಸೋಮವಾರ ಅಥವಾ ಮಂಗಳವಾರ ಈ ಸಭೆಯ ಮುಂದೆ ತರಬೇಕೆಂದಿದ್ದೇವೆ. ಅವು ಬಹಳ ಚಿಕ್ಕ ತಿದ್ದುಪಡಿಗಳು. ಈಗ ಅವು ಈ ಸಭೆಯ ಪಾಸಾದರೆ ಜುಲೈ ಒಂದನೇ ತಾರೀಖಿನಿಂದ ಭೂ ಸುಧಾರಣಾ ಕಾನೂನನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಟಿ. ಮಾದಯ್ಯ ಗೌಡ.—ಆಹಾರದ ಸಮಸ್ಯೆ ಈಗಿನ ಕಾಲದಲ್ಲಿ ಬಹಳ ಗುರುತರವಾದ ಸಮಸ್ಯೆ, ಆದ್ದರಿಂದ ಆ ವಿಚಾರದಲ್ಲಿ ಚರ್ಚೆ ಮಾಡಿ ಆಹಾರದ ಪರಿಸ್ಥಿತಿಯನ್ನು ಸುಧಾರಿಸಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುವದಕ್ಕೋಸ್ಕರ ನಮ್ಮ ರಾಜ್ಯದಲ್ಲಿ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ಡಿವಿಜನ್ ಮಟ್ಟದಲ್ಲಿ ಆಯಾ ಪ್ರದೇಶದ ಮುಖ್ಯ ಅಧಿಕಾರಿಗಳು ಮತ್ತು ಜನತೆಯ ಪ್ರತಿನಿಧಿಗಳನ್ನೊಳಗೊಂಡ ಒಂದು ಕಮಿಟಿಯನ್ನು ನೇಮಕ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ವಿಷಯವನ್ನು ನಾವು ಜಿಲ್ಲಾಧಿಕಾರಿಗಳಿಗೆ ಬರೆದಿದ್ದೇವೆ. ಆಯಾ ಜಿಲ್ಲೆಯಲ್ಲಿರುವ ಅಸೆಂಬ್ಲಿ, ಕೌನ್ಸಿಲ್ ಮತ್ತು ಪಾರ್ಲಿಮೆಂಟ್ ಸದಸ್ಯರುಗಳನ್ನು ಸೇರಿಸಿ ಒಂದು ಫುಡ್ ಕೌನ್ಸಿಲ್ ಎಂದು ಮಾಡಿ ಎಂದು ಬರೆದಿದ್ದೇವೆ. ಅವರು ಮೀಟಿಂಗ್ ಅಟೆಂಡ್ ಮಾಡಿದಾಗ ಅವರಿಗೆ ಕೊಡಬೇಕಾದ, ಟಿ.ಎ., ಡಿ.ಎ. ವಿಷಯದಲ್ಲಿ ಸ್ವಲ್ಪ ಪರಿಶೀಲನೆ ಮಾಡಬೇಕಾಗಿತ್ತು ಅದಕ್ಕೋಸ್ಕರ ಅದು ಸ್ವಲ್ಪ ತಡವಾಯಿತು. ಇನ್ನು 7—8 ದಿವಸಗಳಲ್ಲಿ ಅದಕ್ಕೆ ಸಂಬಂಧಪಟ್ಟ ಆರ್ಡರು ಆಗಬಹುದು.

ಶ್ರೀಮತಿ ಚಂಪಾಬಾಯಿ ಭೋಗಲೆ.—ರೈತರಿಗೆ ಸಹಕಾರಿ ಸಂಘಗಳ ಮೂಲಕ ತಗಾಯಿ ಸಾಲವನ್ನು ಕೊಡುವ ವಿಷಯದಲ್ಲಿ ಸರ್ಕಾರದವರು ವಿಚಾರ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಸಹಕಾರ ಇಲಾಖೆಗೆ ಸಂಬಂಧಪಟ್ಟದ್ದು. ಈ ವಿಷಯದಲ್ಲಿ ನಾವು ಸಂಬಂಧಪಟ್ಟ ಮಂತ್ರಿಗಳಿಗೆ ಬರೆದಿದ್ದೇವೆ. ಇದನ್ನು ವ್ಯವಸಾಯ ಶಾಖೆಯ ಮಂತ್ರಿಗಳು, ಸಹಕಾರ ಶಾಖೆಯ ಮಂತ್ರಿಗಳು ಮತ್ತು ನಾವು ಕುಳಿತುಕೊಂಡು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಇನಾಮ್ ಅಬಾಲಿಷನ್ ಸಂಬಂಧದಲ್ಲಿರತಕ್ಕ ಕೆಲಸಗಳನ್ನು ಮಾಡುವುದಕ್ಕೋಸ್ಕರ ಈಗ ಇಬ್ಬರು ಡೆಪ್ಯುಟೀ ಕಮೀಷನರು ಇದ್ದಾರೆ. ಆದರೆ ಇನಾಮ್ ಅಬಾಲಿಷ್ ಆಕ್ಟನ್ನು ಜಾರಿಗೆ ತರಬೇಕಾಗಿರತಕ್ಕ ಹಳ್ಳಿಗಳು ಕೇವಲ 28 ಮಾತ್ರ ಉಳಿದಿವೆ. ಆ 28 ಹಳ್ಳಿಗಳಿಗೆ ಇಬ್ಬರು ಡೆಪ್ಯುಟೀ ಕಮೀಷನರುಗಳು ಬೇಕಾಗಿಲ್ಲ, ಅವರನ್ನು ತೆಗೆಯುವುದು ಸೂಕ್ತವಲ್ಲವೇ ? ಮತ್ತು ಈಗ ತಹಶೀಲ್ದಾರರಿಗೆ ತಾಲ್ಲೂಕು ಆಫೀಸುಗಳಲ್ಲಿ ಕೆಲಸ ಜಾಸ್ತಿ ಇದೆ. ಆದ್ದರಿಂದ ಪ್ರತಿಯೊಬ್ಬ ತಹಶೀಲ್ದಾರರಿಗೂ ಒಂದೊಂದು ಜೀಪು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳುವುದನ್ನು ನಾನು ಸ್ವಾಗತಿಸುತ್ತೇನೆ. ಈಗ ಹಣದ ಅಭಾವ ಇರುವುದರಿಂದ ಮಾನ್ಯ ಸದಸ್ಯರು ಹೇಳಿದ್ದನ್ನು ನಿಧಾನವಾಗಿ ಮಾಡುತ್ತೇವೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಈಗ ಸೌತ್ ಕೆನರಾ ಡಿಸ್ಟ್ರಿಕ್ಟ್‌ನಲ್ಲಿ ಖಾನು, ಬೇಣೆ ಕುಂಕಿ ಮುಂತಾದ ಸಣ್ಣ ಪುಟ್ಟ ವಿಸ್ತೀರ್ಣಗಳು ಇವೆ. ಇವುಗಳ ವಿಷಯದಲ್ಲಿ ಒಂದು ನಿರ್ದಿಷ್ಟವಾದ ನೀತಿಯನ್ನು ಕೈಗೊಂಡು ಅವುಗಳನ್ನು ತೀರ್ಮಾನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೆವಿನ್ಯೂ ಆಕ್ಟನ್ನು ಮಾಡುವಾಗ ಈ ಪ್ರಶ್ನೆ ಬಂತು. ಇಂಥಾ ಪ್ರದೇಶಗಳು ಸೌತ್ ಕೆನರಾ ಮತ್ತು ಕೂರ್ಗ್‌ನಲ್ಲಿ ಇವೆ. ಇವು ಹಿಂದಿನಿಂದ ಇದ್ದಂತಹ ಹಕ್ಕುಗಳು. ಅದಕ್ಕೆ ರೂಲ್ಸ್‌ಫ್ರೇಮ್ ಆಗುವುದು ಸ್ವಲ್ಪ ನಿಧಾನವಾಯಿತು. ಆದ್ದರಿಂದ ಈಗ ಹಿಂದಿನ ಹಕ್ಕುಗಳು ಏನಿವೆಯೋ ಅವೇ ಮುಂದುವರಿಯುತ್ತವೆ.

Mr. DEPUTY SPEAKER.—I will put the Demands to the Vote of the House :

The question is :

That the respective sums not exceeding the amounts shown in the list of demands circulated to the members be granted to defray the charges which will come in course of payment during the financial year ending with 31st day of March 1966 in respect of Demands Nos, 2, 7, 8, 15, 22, 33, 42 and 53.

The motion was adopted.

As directed by the Speaker the motion for Demands for grants which were adopted by the House are reproduced below :—

DEMAND NO. 2.—LAND REVENUE.

9. Land Revenue.

"That a sum not exceeding Rs. 2,11,73,000 be granted to the Government to defray the charges which will come in course of payment during the financial year for the period ending 31st day of March 1966, in respect of 'Land Revenue'."

DEMAND NO. 7.—STAMPS.

14. Stamps.

"That a sum not exceeding Rs. 9,00,000 be granted to the Government to defray the charges which will come in course of payment during the financial year for the period ending 31st day of March 1966, in respect of 'Stamps'."

DEMAND NO. 8.—REGISTRATION.

15. Registration Fees.

"That a sum not exceeding Rs. 20,69,000 be granted to the Government to defray the charges which will come in course of payment during the financial year for the period ending 31st day of March 1966, in respect of 'Registration Fees'."

DEMAND NO. 15.—MISCELLANEOUS DEPARTMENTS.

26. Miscellaneous Departments.

"That a sum not exceeding Rs. 1,08,32,000 be granted to the Government to defray the charges which will come in course of payment during the financial year for the period ending 31st day of March 1966, in respect of 'Miscellaneous Departments'."

DEMAND NO. 22.—ANIMAL HUSBANDRY.

33. Animal Husbandry.

"That a sum not exceeding Rs. 2,87,21,000 be granted to the Government to defray the charges which will come in course of payment during the financial year for the period ending 31st day of March 1966, in respect of 'Animal Husbandry'."

DEMAND NO 33.—FAMINE.

64. Famine Relief.

"That a sum not exceeding Rs. 40 29,000 be granted to the Government to defray the charges which will come in course of payment during the financial year for the period ending 31st day of March 1966, in respect of 'Famine Relief'."

DEMAND NO. 42—COMPENSATION TO ZAMINDARS.

92. Payment of Compensation to Land-holders, etc., on the abolition of Zamindari System.

"That a sum not exceeding Rs. 46,17,000 be granted to the Government to defray the charges which will come in course of payment during the financial year for the period ending 31st day of March 1966, in respect of 'Payment of Compensation to Land-holders, etc., on the Abolition of Zamindari System'."

DEMAND NO. 53.—CAPITAL OUTLAY ON SCHEMES OF GOVERNMENT TRADING.

124. Capital Outlay on Schemes of Government Trading.

"That a sum not exceeding Rs. 7,96,81,000 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Schemes of Government Trading'."

Mr. DEPUTY SPEAKER.—The House will now adjourn and meet on Monday, 29th March 1965 at 1 P.M.

The House adjourned at Thirty Minutes past One of the Clock to meet again at One of the Clock on Monday, 29th March 1965.

WD 4930—GPB—500—13-8-1965

MYSORE LEGISLATIVE ASSEMBLY

Monday, 29th March 1965.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given).

Students admitted to Pre-Medical Class of each of the Medical Colleges in the State.

*Q.—72. Sri S. KARIAPPA (Kanakapura).—

Will the Government be pleased to state :—

(a) the number of students admitted to the Pre-Medical Class of each of the Medical Colleges in the State during the past 3 years including this year (year-wise and college-wise figures to be furnished) ;

(b) the proportion of seats for each of the combinations such as P. C. M. and P. C. B. (information to be furnished year-wise for the past 3 years including the current year) ?

A.—Sri K. NAGAPPA ALVA (Minister for Health).—

(a) *Vide* statement 'A' appended.

(b) *Vide* statement 'B' appended.

STATEMENT 'A'.

Name of the College		1962-63	1963-64	1964-65
Medical College, Mysore	...	157	201	203
Medical College, Bangalore	...	210	213	204
Medical College, Bellary	...	122	149	153
Karnatak Medical College, Hubli	...	207	202	201

(SRI K. NAGAPPA ALVA)

STATEMENT 'B'

Combination of Subjects	1962-63 No. of Seats allotted	1962-63 Percentage	1963-64 No. of Seats allotted	1963-64 Percentage	1964-65 No. of Seats allotted	1964-65 Percentage
P. C. M. ...	59	12	37	7	64	8.4
P. C. B. ...	251	51.4	388	69	603	79.1
C. B. Z. ...	176	36.0	132	23	94	12.5
Others ...	3	0.6	6	1	...	...

Note.—The students who passed qualifying examinations in the above combinations, were admitted to the Medical Colleges affiliated to the Mysore University, *viz.*, Medical Colleges at Mysore, Bangalore and Bellary. In the Karnatak Medical College, Hubli, only those students who passed qualfying examination with P. C. B. combination were admitted.

ಶ್ರೀ ಎಸ್. ಕರಿಯಪ್ಪ.—ಈ ಸೀಟುಗಳನ್ನು ಕೊಡುವ ಮುನ್ನ, ಸ್ಟೂಡೆಂಟ್ಸನ್ನು ಯಾವ ಬೇಸಿಸ್ ಮೇಲೆ ಸೆಲೆಕ್ಟ್ ಮಾಡುತ್ತೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ಅದಕ್ಕೆ ಸೆಲೆಕ್ಷನ್ ಕಮಿಟಿ ಇದೆ. ಸೆಲೆಕ್ಷನ್ ಕಮಿಟಿ ಯಾವ ರೀತಿ ಸೆಲೆಕ್ಟ್ ಮಾಡಬೇಕು ಅಂತ ರೂಲ್ಸ್ ಇದೆ.

ಶ್ರೀ ಎಸ್. ಕರಿಯಪ್ಪ.—ಆ ರೂಲ್ಸ್ ಏನು ಎಂದು ಸಂಕ್ಷಿಪ್ತವಾಗಿ ಹೇಳುತ್ತೀರ ?

ಶ್ರೀ ಕೆ. ನಾಗಪ್ಪ ಆಳ್ವ.—ಈ ರೂಲ್ಸ್‌ಗಳನ್ನು ಅಷ್ಟು ಸಂಕ್ಷಿಪ್ತವಾಗಿ ಹೇಳಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಸಾಧಾರಣವಾಗಿ ಅವು 20 ಪುಟಗಳಷ್ಟು ಇವೆ. ಬೇಕಾದರೆ ಟೇಬಲ್ ಮೇಲೆ ಇಡಬಹುದು.

Mr. SPEAKER.—Is it the desire of the members that rules should be placed on the Table of the House ?

MEMBERS.—Yes.

Mr. SPEAKER.—Is there any objection to it ?

Sri K. NAGAPPA ALVA.—No objection.

Mr. SPEAKER.—If there is no objection the rules may be placed on the Table of the House.

ಶ್ರೀ ಎಸ್. ಎಂ. ಕೃಷ್ಣ.—ಈ 20 ಪುಟಗಳ ರೂಲ್ಸನ್ನು ಏನು ತಾವು ಮಾಡಿದ್ದೀರಿ, ಸೆಲೆಕ್ಷನ್ ನಡೆಯತಕ್ಕಂಥ ಸಂದರ್ಭದಲ್ಲಿ, ಅವುಗಳಲ್ಲಿರತಕ್ಕಂಥ ಪ್ರತಿಯೊಂದು ಅಕ್ಷರಕ್ಕೂ ತಿಲಾಂಜಲಿ ಕೊಟ್ಟಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ನಾಗಪ್ಪ ಆಳ್ವ.—ಅದು ಮಾನ್ಯ ಸದಸ್ಯರ ಅಭಿಪ್ರಾಯ. ಸಮಿತಿಯವರು ಸರಿಯಾದ ರೀತಿಯಲ್ಲಿ ನೋಡಿ ಸೆಲೆಕ್ಷನ್ ಮಾಡಿದ್ದಾರೆ.

ಶ್ರೀ ಎಸ್. ಎಂ. ಕೃಷ್ಣ.—ಮೈಸೂರು ಹೈಕೋರ್ಟಿನಲ್ಲಿ ಮೆಡಿಕಲ್ ಕಾಲೇಜುಗಳ ಅಡ್ಮಿಷನ್ ಬಗ್ಗೆ ಎಷ್ಟು ರಿಟ್ ಅರ್ಜಿಗಳು ಬಂದುವು, ದಾಖಲು ಮಾಡಿದ್ದವರಲ್ಲಿ ಹೈಕೋರ್ಟು ಎಷ್ಟರಲ್ಲಿ ಸರಕಾರಕ್ಕೆ ನಿರ್ದೇಶನ ಕೊಟ್ಟಿದೆ ?

Mr. SPEAKER.—For which year ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಸಂಖ್ಯೆಗಳನ್ನು ಕೊಡುವುದಕ್ಕೆ ಈಗ ಸಾಧ್ಯವಿಲ್ಲ. ಮಾನ್ಯ ಸದಸ್ಯರು ಪ್ರತ್ಯೇಕವಾದ ಪ್ರಶ್ನೆ ಹಾಕಿದರೆ ಕೊಡಬಹುದು. ಆದರೆ ಹೈಕೋರ್ಟಿನ ಜಡ್ಜ್‌ಮೆಂಟನ್ನು ಮಾನ್ಯ ಮಾಡಿದ್ದೇವೆ. ಸೆಲೆಕ್ಷನ್ ಮಾಡುವಾಗ ಹೈಕೋರ್ಟು ಜಡ್ಜ್‌ಮೆಂಟು ಅಥವ ಅವರು ಹೇಳುವಂಥ ಅಬ್ಸರ್ವೇಷನ್ಸ್-ಎಲ್ಲಾ ಗಮನಕ್ಕೆ ತೆಗೆದುಕೊಂಡು, ಪ್ರತಿವರ್ಷ ಅವಕ್ಕೆ ಸರಿಯಾಗಿ ಸೆಲೆಕ್ಷನ್ ಮಾಡುತ್ತಾ ಇದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಪ್ರಶ್ನೆಯಲ್ಲಿ ಸರಕಾರ ನಡೆಸತಕ್ಕಂಥ ಕಾಲೇಜುಗಳ ಬಗ್ಗೆ ಮಾತ್ರ ವಿವರಗಳನ್ನು ಕೊಟ್ಟಿದ್ದೀರಿ. ಪ್ರೈವೇಟ್ ಆಗಿ ನಡೆಸತಕ್ಕಂಥ ಗುಲ್ಬರ್ಗ ಮತ್ತು ಬೆಳಗಾಂ ಕಾಲೇಜುಗಳ ಅಡ್ಮಿಷನ್ ಸಂಖ್ಯೆ ಎಷ್ಟು ?

ಶ್ರೀ ಕೆ. ನಾಗಪ್ಪ ಆಳ್ವ.—ಗವರ್ನ್‌ಮೆಂಟ್ ಕಾಲೇಜುಗಳಿದ್ದರೆ, ಸೆಲೆಕ್ಷನ್ ಗವರ್ನ್‌ಮೆಂಟ್ ಮಾಡುವಂಥಾದ್ದು. ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರ ಕೊಟ್ಟಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಪ್ರಶ್ನೆಯಲ್ಲಿ ರಾಜ್ಯದಲ್ಲಿರುವ ಪ್ರತಿಯೊಂದು ಮೆಡಿಕಲ್ ಕಾಲೇಜು, ಎಂದು ಇರುತ್ತದೆ. ಆದ್ದರಿಂದ ಪ್ರೈವೇಟ್ ಕಾಲೇಜುಗಳೂ ಈ ಪ್ರಶ್ನೆಯಲ್ಲಿ ಸೇರುತ್ತವೆ. ಅವುಗಳಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಸ್ಥಾನ ಕೊಟ್ಟಿದ್ದೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ಅದು ಇದರಲ್ಲಿ ಸೇರಲಿಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಲಕ್ಕಪ್ಪ.—ತಾವು ಅನೇಕ ನೀತಿಗಳನ್ನು ಅನುಸರಿಸಿ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುತ್ತೇವೆಂದು ಹೇಳಿದಿರಿ. ಆದರೆ ಬಹುಭಾಗ ಶಿಫಾರಸಿಗೆ ಒಳಗಾಗುವುದು ಮತ್ತು ಹಣವನ್ನು ತೆಗೆದುಕೊಂಡು ಮೆಡಿಕಲ್ ಕಾಲೇಜಿಗೆ............

Mr. SPEAKER.—It is a serious charge that the member is making ! I may tell the Hon'ble Member that while making serious charges, he should be equipped with full facts. I ask the Hon'ble Member whether he is aware.

ಶ್ರೀ ಕೆ. ಲಕ್ಕಪ್ಪ.—ಹೌದು, ಸೀರಿಯಸ್ ಚಾರ್ಜ್ ಮಾಡುತ್ತಿದ್ದೇನೆ; ವಿದ್ಯಾರ್ಥಿಗಳು ನನಗೆ ಹೇಳಿದ್ದಾರೆ.

Mr. SPEAKER.—If the member is aware let him please mention it otherwise let him not do it.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಗೆ ಕಾಲೇಜಿಗೆ ಪ್ರವೇಶ ಕೊಡತಕ್ಕಂಥ ಕಾಲದಲ್ಲಿ, ಅತಿಮುಖ್ಯವಾದ ತತ್ವಗಳನ್ನೂ, ನೀತಿಗಳನ್ನೂ ಯಾವುದನ್ನೂ ಅನುಸರಿಸದೆ, ಬರೀ ರಾಜಕೀಯ ಅಥವ ವಶೀಲಬಾಜಿ ತತ್ವದ ಆಧಾರದ ಮೇಲೆ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶ ಸಿಕ್ಕಿ, ಬಹಳ ಜನಕ್ಕೆ ಅನ್ಯಾಯವಾಗಿ, ಅವರು ಕೋರ್ಟು ಕಚೇರಿಗಳಿಗೆ ತಿರುಗತಕ್ಕಂಥಾದ್ದು ರೂಢಿಯಲ್ಲಿ ಬಂದಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ಕೆ. ನಾಗಪ್ಪ ಆಳ್ವ.—ನೀತಿಗೆ ಸರಿಯಾಗಿ ಸೆಲೆಕ್ಷನ್ನುಗಳು ಆಗಿವೆ. ಆ ತರಹ ಅಭಿಪ್ರಾಯ ಮಾನ್ಯ ಸದಸ್ಯರದೇ ಅಭಿಪ್ರಾಯ. ಅದಕ್ಕೆ ಸರಕಾರ ಒಪ್ಪಲಿಕ್ಕೆ ಸಾಧ್ಯವಿಲ್ಲ. That only shows the mental make up of the member who is questioning that.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಮಂತ್ರಿಗಳು ಈಗ ಹೇಳಿದರು, ಮೆಂಟಲ್ ಹಾಸ್ಪಿಟಲಿಗೆ ಹೋಗಿ ಅಂತ. ಈಗ ಆಗತಕ್ಕಂಥಾದ್ದು ಈ ರೀತಿ ನೀತಿಯಲ್ಲಿಯೇ ಕಾಣುತ್ತಾ ಇದೆ.

Mr. SPEAKER.—Order, order. Let me know his idea. Where does mental hospital come in ?

ಶ್ರೀ ಕೆ. ಲಕ್ಕಪ್ಪ.—ಬಹಳ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ಅವರು ಹೇಳತಕ್ಕಂಥ ರೀತಿ ನೋಡಿದರೆ ಮೆಂಟಲ್ ಹಾಸ್ಪಿಟಲ್ಲಿಗೆ ಹೋಗತಕ್ಕಂಥ ರೀತಿ ಕಾಣುತ್ತದೆ.

Mr. SPEAKER.—Mental make up has nothing to do with Mental Hospital.

ಶ್ರೀ ಕೆ. ಲಕ್ಕಪ್ಪ.—ಮೆಂಟಲ್ ಆಸ್ಪತ್ರೆಗೆ ಹೋಗಬೇಕಾದರೆ ಶಿಫಾರಸು ಬೇಕಾಗುತ್ತದೆ. ಅದು ಬೇರೆ ವಿಷಯ. ಇದು ನನ್ನ ಅಭಿಪ್ರಾಯವಲ್ಲ. ರಾಜ್ಯದಲ್ಲಿರುವ ವಿದ್ಯಾರ್ಥಿಗಳ ಅಭಿಪ್ರಾಯ; ಅವರ ಪೋಷಕರ ಅಭಿಪ್ರಾಯ ; ಇದು ದೇಶದಲ್ಲಿ ಜನಜನಿತವಾಗಿದೆ. ಈ ಅಡ್ಮಿಷನ್ ಕಾಲದಲ್ಲಿ ಈ ರೀತಿ ವಶೀಲಿಬಾಜಿ ನಡೆಯುತಕ್ಕಂಥಾದ್ದನ್ನು ನಿಲ್ಲಿಸಲು ಶೀಘ್ರವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೀರಾ ? ಮಾನ್ಯ ಮುಖ್ಯಮಂತ್ರಿಗಳಲ್ಲಿಯೂ ಎರಡು ಸಾರಿ ಹೋಗಿ ಹೇಳಿದ್ದೇನೆ. ತಾವು ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಇದು ಸದಸ್ಯರ ಸ್ವಂತ ಅಭಿಪ್ರಾಯ. ಬೇರೆಯವರ ಅಭಿಪ್ರಾಯ ಹಾಗಿಲ್ಲ. ಎಲ್ಲೆಲ್ಲಿ ಇದಕ್ಕೆ ಬೇಕಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೊ ಅದನ್ನು ತೆಗೆದು ಕೊಂಡು, ನ್ಯಾಯನೀತಿಯಿಂದ ನಡೆದುಕೊಂಡು ಸೆಲೆಕ್ಷನ್ ಮಾಡಿದ್ದೇವೆ. ಈ ರೀತಿ ಕಮಿಟಿ ಮಾಡಿದ್ದೇವೆ; ಈ ರೀತಿ ಸೆಲೆಕ್ಷನ್ ಆಗಿದೆ.

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಮುಖ್ಯಮಂತ್ರಿಗಳಲ್ಲ ಹೇಳಿದ್ದೇನೆಂದು ಹೇಳಿದರು. ಈ ವರ್ಷ ಆಗಿರತಕ್ಕಂಥ ಕಮಿಟಿಯಲ್ಲಿ ನಾನು ವಿಚಾರ ಮಾಡಿದ್ದೇನೆ. There is not a whisper of doubt about this committee.

ಶ್ರೀ ಸಿ. ಎಸ್. ಹುಲ್ಕೋಟಿ.—ಖಾಸಗಿ ಕಾಲೇಜುಗಳಿಗೆ ಪ್ರವೇಶ ಕೊಡುವ ಕಾಲಕ್ಕೆ ಕಾಲೇಜು ವ್ಯವಸ್ಥಾಪಕರು ಸೇರಿಸಿಕೊಳ್ಳುವರೊ, ಸರಕಾರ ನೇಮಿಸಿದ ಕಮಿಟಿಯವರು ಸೇರಿಸಿ ಕೊಳ್ಳುವರೊ ?

ಶ್ರೀ ಕೆ. ನಾಗಪ್ಪ ಆಳ್ವ.—ಖಾಸಗಿ ಕಾಲೇಜುಗಳ ವಿಷಯಕ್ಕೆ ಒಂದು ಗವರ್ನಿಂಗ್ ಬಾಡಿ ಇದೆ, ಅದು ಸೆಲೆಕ್ಟ್ ಮಾಡುವಂಥಾದ್ದು. ಪ್ರೈವೇಟು ಕಾಲೇಜಿನಲ್ಲಿ ಸೊಸೈಟಿಯವರು ಅದಕ್ಕೆ ಬೇಕಾದ ಏರ್ಪಾಡು ಮಾಡುತ್ತಾರೆ, ಅವರೇ ಸೆಲೆಕ್ಟ್ ಮಾಡುತ್ತಾರೆ.

ಶ್ರೀ ಎಸ್. ಹುಚ್ಚಮಾಸ್ತಿ ಗೌಡ.—ಕಳೆದ ವರ್ಷ ಇದ್ದಹಾಗೆ, ಮುಂದಿನ ವರ್ಷವೂ ಕೂಡ ಖಾಸಗಿ ಮಾನ್ಯ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ಅಡ್ಮಿಷನ್ನಿಗೋಸ್ಕರ ರಚನೆ ಮಾಡಿ, ಅವರ ಮೂಲಕ ವಿದ್ಯಾರ್ಥಿಗಳನ್ನು ಆರಿಸುತ್ತೀರೊ ?

ಶ್ರೀ ಕೆ. ನಾಗಪ್ಪ ಆಳ್ವ.—ಕಳೆದ ವರ್ಷ 3 ಸದಸ್ಯರ ಒಂದು ಸಮಿತಿ ಆಗಿದೆ. ಅದರಲ್ಲಿ ಒಬ್ಬರು ಗವರ್ನಮೆಂಟ್ ಆಫೀಸರು, ಮತ್ತೊಬ್ಬರು ರಿಟೈರ್ಡ್ ಪ್ರಿನ್ಸಿಪಾಲ್ ಆಫ್ ಕಾಲೇಜ್, ಮತ್ತೊಬ್ಬರು ಸರ್ವಸದಸ್ಯರು. ಅದೇ ತರಹದಲ್ಲಿ ಈ ವರ್ಷವೂ ಮಾಡಬೇಕು ಅಂತ ಇದ್ದೇವೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಪರದೇಶಕ್ಕೆ ಹೋಗಿರುವ ಡಾಕ್ಟರುಗಳು ಟ್ರೈನಿಂಗು ಪಡೆದು ಹಿಂದಿರುಗಿ ಬಂದ ಮೇಲೆ ಇಲ್ಲಿಂದ ಸರಕಾರದ ಆಸ್ಪತ್ರೆಗಳಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಬಿಟ್ಟು ಬೇರೆ ಕಡೆಗಳಿಗೆ ಹೋಗುತ್ತಿರುತ್ತಾರೆ. ಇದನ್ನು ನಿವಾರಣೆ ಮಾಡುವುದಕ್ಕೋಸ್ಕರ ಸರಕಾರದ ಮೂಲಕ ಟ್ರೈನಿಂಗನ್ನು ಪಡೆದ ಡಾಕ್ಟರುಗಳು ಸರಕಾರದಲ್ಲಿಯೇ ಕೆಲಸದಲ್ಲಿರುವಂತೆ ಮಾಡಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ನಾಗಪ್ಪ ಆಳ್ವ.—ಇದಕ್ಕೆ ಕೆಲವು ನಿಯಮಗಳಿವೆ. ಅದನ್ನು ನೋಡಿಕೊಂಡು ಎಷ್ಟು ಸಾಧ್ಯವೋ ಅಷ್ಟನ್ನು ಜಾಸ್ತಿ ಮಾಡಿದ್ದಾರೆ. ಇದಲ್ಲದೆ ಈಗಿರುವ ನಾಲ್ಕು ಕಾಲೇಜುಗಳಲ್ಲಿ ಸುಮಾರು 750 ವಿದ್ಯಾರ್ಥಿಗಳು ಸೇರಿಕೊಂಡು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ.

ಶ್ರೀ ಬಿ. ಎಂ. ಪಾಟೀಲ್.—ಸರಕಾರದ ವತಿಯಿಂದ ಎಷ್ಟು ಸೀಟುಗಳನ್ನು ನಿಯಮದ ಪ್ರಕಾರ ಕೊಡಬೇಕೆಂದು ಹಾಕಿದ್ದೀರಿ ? ಹಾಕಿದ್ದರೆ ಎಷ್ಟು ಸೀಟುಗಳನ್ನು ಕೊಟ್ಟಿದ್ದೀರೆನ್ನುವ ಅಂಕೆ ಸಂಖ್ಯೆಗಳನ್ನು ಕೊಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಇದಕ್ಕೆ ಪ್ರತ್ಯೇಕವಾದ ಪ್ರಶ್ನೆ ಹಾಕಿದರೆ ಕೊಡಬಹುದು. ಇದು ಖಾಸಗಿ ಕಾಲೇಜುಗಳಿಗೆ ಸಂಬಂಧಪಟ್ಟ ಪ್ರಶ್ನೆಯಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೈಸೂರು, ಬೆಂಗಳೂರು, ಬಳ್ಳಾರಿ, ಹುಬ್ಬಳ್ಳಿ ಬಗ್ಗೆ ಇದರಲ್ಲಿ ಹೇಳಿದ್ದೀರಿ. ಗುಲ್ಬರ್ಗಾ ಮತ್ತು ಬೆಳಗಾಂ ಮತ್ತು ಮಣಿಪಾಲ್ ಕಾಲೇಜುಗಳು ಇದರಲ್ಲಿ ಬರುವುದಿಲ್ಲವೋ ?

ಶ್ರೀ ಕೆ. ನಾಗಪ್ಪ ಆಳ್ವ.—ಬರುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದಕ್ಕೆ ಕಾರಣವೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಸರಕಾರದ ಕಾಲೇಜುಗಳ ಸೆಲೆಕ್ಷನ್ನು ಕಮಿಟಿಗಳು ಪ್ರೈವೇಟು ಕಾಲೇಜುಗಳ ಅಡ್ಮಿಷನ್ನನ್ನು ಮಾಡುವ ಹಾಗಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಳೆದ ವರ್ಷ ಖಾಸಗೀ ಜನರನ್ನು ಒಳಗೊಂಡ ಸಮಿತಿ ಯವರು ಮಾಡಿದ ಸೆಲೆಕ್ಷನ್ನುಗಳು ಏನೂ ಆಕ್ಷೇಪಣೆಗಳು ಬಂದಿಲ್ಲ ಎಂದು ಈಗತಾನೇ ಮುಖ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದರು. ಅದೇ ರೀತಿ ಖಾಸಗೀ ಜನರನ್ನೊಳಗೊಂಡ ಸಮಿತಿಗಳನ್ನು ಎಲ್ಲ ಕಾಲೇಜುಗಳಲ್ಲಿ ಎಂದರೆ ಇಂಜನೀಯರಿಂಗೂ—ಇತ್ಯಾದಿಗಳಲ್ಲಿ ಮಾಡುತ್ತೀರಾ ?

Sri S. NIJALINGAPPA.—It is a suggestion for action. The Government will consider.

ಶ್ರೀ ಗೋಪಾಲ ಸಾರೆನ್ನ.—ಮೆಡಿಕಲ್ ಕಾಲೇಜುಗಳ ವಿದ್ಯಾಭ್ಯಾಸದಲ್ಲಿ ಒಂದು ಯೂನಿಫಾರ್ಮಿಟಿ ಬರುವ ಹಾಗೆ ನಮ್ಮ ರಾಜ್ಯದಲ್ಲಿರುವ ಖಾಸಗಿ ಅಥವಾ ಸರಕಾರದ ಕಾಲೇಜುಗಳ ವಿದ್ಯಾರ್ಥಿಗಳ ಸೆಲೆಕ್ಷನ್ ಕಮಿಟಿಯಲ್ಲೂ ಯುನಿಫಾರ್ಮ್ ಆಗಿ ಸೆಲೆಕ್ಷನ್ ಕಮಿಟಿಯನ್ನು ಸರಕಾರ ಏಕೆ ಮಾಡಬಾರದು ?

ಶ್ರೀ ಕೆ. ನಾಗಪ್ಪ ಆಳ್ವ.—ಯೂನಿಫಾರಂ ಸೆಲೆಕ್ಟು ಕಮಿಟಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಹಿಂದೆ ಕೆಲವು ಕಡೆ ಎಲ್.ಸಿ.ಪಿ.ಎಸ್. ಎಂಬ ಕೋರ್ಸನ್ನು ಮಾಡುತ್ತಿದ್ದರು. ಅದರಂತೆ ಮಹಾರಾಷ್ಟ್ರದಲ್ಲೂ ಎಲ್.ಸಿ.ಪಿ.ಎಸ್. ಕೋರ್ಸನ್ನು ಚಾಲೂ ಮಾಡಿದ್ದಾರು. ಅದರಂತೆ ಮೈಸೂರು ರಾಜ್ಯದಲ್ಲೂ ಚಾಲೂ ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಮಹಾರಾಷ್ಟ್ರ ಸರಕಾರವೂ ಮಾಡುವುದಿಲ್ಲ ಮತ್ತು ಯಾವ ರಾಜ್ಯ ಸರಕಾರವೂ ಮಾಡುವುದಿಲ್ಲ. ಆಲ್ ಇಂಡಿಯಾ ಪಾಲಿಸಿಯಂತೆ ಮಾಡುವಾಗ ಒಂದೇ ಸ್ಟ್ಯಾಂಡರ್ಡ್ ಇರಬೇಕೆಂದು ಮಾಡಿರುವುದು ಎಂ.ಬಿ.ಬಿ.ಎಸ್. ಕೋರ್ಸು ಮಾತ್ರ.

ಶ್ರೀ ಸಿದಯ್ಯ ಕಾಶೀಮಠ್.—ಸರಕಾರದ ವತಿಯಿಂದ ಖಾಸಗಿ ಕಾಲೇಜುಗಳಲ್ಲಿ ಎಷ್ಟು ಸೀಟುಗಳನ್ನು ಇಡಬೇಕೆಂದು ಸರಕಾರ ಆದೇಶ ಕಳುಹಿಸುತ್ತಿದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಇದು ಪ್ರೈವೇಟು ಕಾಲೇಜುಗಳಿಗೆ ಸಂಬಂಧಪಟ್ಟ ಪ್ರಶ್ನೆಯಲ್ಲ.

ಶ್ರೀ ಇ. ನಾರಾಯಣಗೌಡ.—ಕೆಲವು ಖಾಸಗಿ ಕಾಲೇಜುಗಳಲ್ಲಿ ಸೀಟುಗಳನ್ನು ಹಂಚುವಾಗ ಸುಮಾರು 5—10 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಸೀಟು ಕೊಡುತ್ತಾರೆ. ಹೀಗೆ ವ್ಯಾಪಾರದಂತೆ ಮಾರುತ್ತಿರುವ ಸೀಟುಗಳ ಬಗ್ಗೆ ಸರಕಾರ ಕಂಟ್ರೋಲು ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಏರ್ಪಾಡು ಮಾಡುತ್ತೀರಾ ?

(ಉತ್ತರವಿಲ್ಲ)

ಶ್ರೀ ಗೋಪಾಲರಾವ್ ಮುಡಬಿ.—ಸೆಲೆಕ್ಷನ್ ಕಮಿಟಿ ವಿರುದ್ಧ ಎಷ್ಟು ರಿಟ್ಟು ಪಿಟಿಷನ್ನುಗಳನ್ನು ಹಾಕಲಾಗಿತ್ತು ? ಯಾವ ಯಾವ ಕಾರಣಗಳಿಗಾಗಿ ಹಾಕಲಾಗಿತ್ತು ?

ಶ್ರೀ ಕೆ. ನಾಗಪ್ಪ ಆಳ್ವ.—ಇದಕ್ಕೆ ಪ್ರತ್ಯೇಕ ಪ್ರಶ್ನೆ ಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರೈವೇಟು ಕಾಲೇಜುಗಳ ಬಗ್ಗೆ ಸರಕಾರದ ವಿವರಗಳಿಲ್ಲ ಎಂದು ಹೇಳಿದರು. ಗುಲ್ಬರ್ಗಾದಲ್ಲಿ ಮೆಡಿಕಲ್ ಕಾಲೇಜನ್ನು ಮಾಡುವಾಗ ಅಲ್ಲಿದ್ದ ಆಸ್ಪತ್ರೆಯನ್ನು ಅಪ್ ಗ್ರೇಡು ಮಾಡಿ ಅದಕ್ಕೆ ಲಕ್ಷಾಂತರ ರೂಪಾಯಿಗಳಷ್ಟು ಖರ್ಚುಮಾಡಿ ಅಲ್ಲಿನ ಡಾಕ್ಟರರುಗಳಿಗೆ, ಇತರರಿಗೆ ವಸತಿಗಳನ್ನೆಲ್ಲಾ ಮಾಡಿದ್ದಾರೆ. ಇಲ್ಲಿಗಾಗಿ ಸರಕಾರ ಒಂದು ಸೆಲೆಕ್ಷನ್ನು ಕಮಿಟಿಯನ್ನು ಕಾನ್‌ಸ್ಟಿಟ್ಯೂಟು ಮಾಡುವುದಕ್ಕೆ ಆಗುವುದಿಲ್ಲವೇ ? Why I am putting this question is, the Hon'ble Health Minister has replied that we are really thinking of taking over these Colleges or going to appoint such Committees. The Gulbarga Hospital has been upgraded and all facilities have been created. Having that in view I am just putting that question.

MR. SPEAKER.—The Hon'ble Member is perfectly correct in his views. He is more interested to know about the private Colleges. It is better to hold over this Question.

Is it the desire of the House to hold over this Question ? Has the Minister got any objection for holding it over ? It is necessary to hold it over because, the question does not make any distinction between Government Colleges and non-Government Colleges. The question relates to all Medical Colleges.

SRI K. NAGAPPA ALVA.—I would like to explain the position Sir. We are responsible regarding admissions to the Government Medical Colleges only. Those admissions have been taking place during the last so many years. When we have no arrangements to select the students

(SRI K. NAGAPPA ALVA)

for the other Colleges, I think the other questions are irrelevant. The question and the supplementaries relate only to admission of the students to the Government Medical Colleges. So far as non Government Colleges are concerned, the question of admission of students to those Colleges does not arise at all here.

Mr. SPEAKER.—Is there any harm in holding it over ? Why should we spend time like ?

Sri K. NAGAPPA ALVA.—If you so desire, I have no objection Sir.

Sri S. M. KRISHNA.—The Hon'ble Minister for Health may be requested Sir, to come prepared with all information about Writ Petitions and all that. He should come prepared with all information regarding the number of Writ Petitions, etc.

Mr. SPEAKER.—The number of Writ Petitions does not directly come under this.

Sri S. M. KRISHNA.—It directly relates to this, Sir.

Mr. SPEAKER.—No. Writ Petitions do not come under this. So, the Question is held over.

Transfer of Civil cases from the K. G. F. Court to the Kolar Civil Court

*Q.—136. Sri S. V. RAME GOWDA (Malur).—

Will the Government be pleased to state :—

(a) whether they are aware that Criminal cases pertaining to Malur Taluk are being tried in Kolar Court and Civil cases in K. G. F. Court ;

(b) whether they are also aware that due to lack of adequate conveyance facilities the people of the above Taluk are experiencing difficulties in attending the K. G. F. Court ;

(c) if so, whether they would take action to transfer the Civil cases also from the K. G. F. Court to the Kolar Civil Court early in view of the availability of adequate conveyance facilities there ?

A.—Sri M. V. RAMA RAO (Minister for Law).—

(a) Yes.

(b) There have been representations from the public of Malur for transfer of Civil jurisdiction to Kolar Munsiff's Court on the ground of lack of adequate conveyance facilities from Malur to K. G. F.

(c) The question of transferring the Civil jurisdiction in respect of Malur is under consideration of Government.

ಶ್ರೀ ಎಸ್. ವಿ. ರಾಮೇಗೌಡ.—ಸಾರ್ವಜನಿಕರಿಂದ ಮನವಿಗಳು ಬಂದಿವೆ ಎಂದು ಉತ್ತರದಲ್ಲಿ ಹೇಳಿದೆ. ಹಾಗಾದರೆ ಈ ಬದಲಾವಣೆ ಮಾಡುವುದಕ್ಕೆ ಇನ್ನೂ ಎಷ್ಟು ಕಾಲ ಬೇಕು ?

† ಶ್ರೀ ಎಂ. ವಿ. ರಾಮರಾವ್.—ಶೀಘ್ರದಲ್ಲಿ ಮಾಡುತ್ತೇವೆ. ಎಷ್ಟು ಕಾಲ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ವಿ. ರಾಮೇಗೌಡ.—ಇದು 30 ವರ್ಷಗಳಿಂದ ಇರುವ ಪ್ರಶ್ನೆಯಾಗಿದೆ. ಕೋಲಾರಕ್ಕೆ ಬದಲಾವಣೆ ಮಾಡುವ ಕೆಲಸವನ್ನು ಏಪ್ರಿಲ್ ತಿಂಗಳಿನಲ್ಲಿಯಾದರೂ ಖಂಡಿತವಾಗಿ ಬದಲಾವಣೆ ಮಾಡುವುದಕ್ಕೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಂ. ವಿ. ರಾಮರಾವ್.—ಅಂಥ ಆಶ್ವಾಸನೆ ಕೊಡುವುದಕ್ಕೆ ಸಾಧ್ಯವಿಲ್ಲ. ಈ ಮೊದಲು ಶ್ರೀ ರಾಮೇಗೌಡರು ಒಂದು ಪತ್ರ ಬರೆದು ಈ ವಿಷಯವನ್ನು ಸರಕಾರದ ಗಮನಕ್ಕೆ ತಂದಿದ್ದಾರೆ. ಇದನ್ನು ವಿಚಾರ ಮಾಡಿದ ಕಾಲದಲ್ಲಿ ಕ್ರಿಮಿನಲ್ ಮತ್ತು ಸಿವಿಲ್ ವರ್ಕ್ ಎರಡನ್ನೂ ಸರಿ ತೂಕವಾಗಿ ಬೇರೆ ಬೇರೆ ಕೋರ್ಟುಗಳಲ್ಲಿ ಹಂಚುವುದಕ್ಕೋಸ್ಕರ ಈ ರೀತಿ ಹೈಕೋರ್ಟ್ ಅಭಿಪ್ರಾಯ ಇದೆ. ಈ ವಿಷಯ ಪುನಃ ಆಲೋಚನೆ ಮಾಡುತ್ತೇವೆ ಎಂದು ಉತ್ತರದಲ್ಲಿ ತಿಳಿಸಿದೆ. ಸಾಕಷ್ಟು ಆಲೋಚನೆ ಮಾಡಿ, ತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜಿ. ಚನ್ನಬೈರೇಗೌಡ.—ಕಳೆದ 30 ವರ್ಷಗಳಿಂದ ಇದು ಪರಿಶೀಲನೆಯಲ್ಲಿದೆ. ಕ್ರಿಮಿನಲ್ ಮತ್ತು ಸಿವಿಲ್ ಕೋರ್ಟ್ ಬದಲಾವಣೆ ಮಾಡಬೇಕೆಂದು ಜನರು ಮನವಿ ಮಾಡಿಕೊಂಡಿದ್ದಾರಲ್ಲವೇ?

ಶ್ರೀ ಎಂ. ವಿ. ರಾಮರಾವ್.—ಜನರು ಮನವಿ ಮಾಡಿಕೊಂಡಿದ್ದಾರೆ. The answer given to (*b*) is :

> "There have been representations from the public of Malur for transfer of Civil jurisdiction to Kolar Munsiff's Court on the ground of lack of adequate conveyance facilities from Malur to K. G. F.

ಮನವಿ ಮಾಡಿಕೊಂಡಿರುವುದಕ್ಕೂ 30 ವರ್ಷಕ್ಕೂ ಏನೂ ಸಂಬಂಧವಿಲ್ಲ.

Flood damage works and flood protection works taken up in Tumkur Taluk.

**Q*.—394. Sri K. LAKKAPPA (Hebbur).—

Will the Government be pleased to state :—

(*a*) the number of flood damage works and flood protection works taken up in Tumkur Taluk since 1962 up to date by the P. W. D. ;

(*b*) whether they have received any representations from the people to take up the flood damage works in Tumkur Taluk ;

(*c*) if so, the reasons for not taking any action in spite of several representations ;

(*d*) if so, whether they would take immediate steps to sanction the estimates prepared by the P. W. D. in Tumkur Taluk ?

A.—Sri ALUR HANUMANTHAPPA (Deputy Minister for Minor Irrigation).—

(*a*) The total number of flood damage works are 17 since 1962. Out of 17 works sanctioned, 14 works were taken up long back and the remaining 3 works were taken up recently for execution.

† Indicates that the remarks or speeches have not been revised by the member concerned.

(SRI ALUR HANUMANTHAPPA)

(*b*) The representations are from :—

(i) Sri K. Lakkappa (M. L. A.),

(ii) Smt. G. C. Bhageerathamma (M. L. A.), for taking up flood protective and flood damage works.

(*c*) Action is being taken to take up all such works.

(*d*) Action is being taken to sanction the estimates and to take up works in respect of flood protective works and in respect of flood damage works.

ಶ್ರೀ ಕೆ. ಲಕ್ಕಪ್ಪ.—ತುಮಕೂರು ತಾಲ್ಲೂಕಿನಲ್ಲಿ ಪ್ರವಾಹದಿಂದ ಹಾನಿಯುಂಟಾದ ಕಾಮಗಾರಿಗಳ ಅಂದಾಜು ಎಷ್ಟು ಮಾಡಲಾಗಿದೆ ?

† ಶ್ರೀ ಆಲೂರು ಹನುಮಂತಪ್ಪ.—17 ಕೆಲಸಗಳು ಸ್ಯಾಂಕ್ಷನ್ ಆಗಿವೆ. ಅದರಲ್ಲಿ 14 ರ ಕೆಲಸಗಳು ನಡೆಯುತ್ತಾ ಇದೆ. ಇನ್ನು ಉಳಿದ 3 ಕೆಲಸಗಳನ್ನು ಪ್ರಾರಂಭಮಾಡುತ್ತೇವೆ. I have got the entire list. If the Hon'ble Speaker permits, I will read it.

Mr. SPEAKER.—I suppose the Hon'ble Member wants the aggregate amount. If it is a long list, it can be placed on the Table of the House.

Sri K. LAKKAPPA.—Let the Hon'ble Deputy Minister give the details, Sir.

Mr. SPEAKER.—Members should not dictate what answers are to be given. If the member wants a copy, I will have it given to him or have it placed on the Table of the House, if it is a long list.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ತುಮಕೂರು ತಾಲ್ಲೂಕಿನಲ್ಲಿ ಪ್ರವಾಹದಿಂದ ಹಾನಿಯುಂಟಾದ ಕಾಮಗಾರಿಗಳ ಬಗ್ಗೆ ಸ್ಯಾಂಕ್ಷನ್ ಮಾಡಿರತಕ್ಕಂಥ ಹಣ ಎಷ್ಟು ? ಎಷ್ಟು ದಿವಸಗಳಲ್ಲಿ ಹಣ ಖರ್ಚು ಮಾಡಿ ನಷ್ಟ ಭರ್ತಿ ಮಾಡುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—17 ಕೆಲಸಗಳನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಫ್ಲಡ್ ಡ್ಯಾಮೇಜ್ ವರ್ಕ್ಸ್ ಮತ್ತು ಫ್ಲಡ್ ಪ್ರೊಟೆಕ್ಟಿವ್ ವರ್ಕ್ಸ್ ಇದಕ್ಕಾಗಿ 12 ಲಕ್ಷ ಹಣ ಎಕ್ಸೀಡ್ ಆಗಿದೆ. ಇಂಥ ಕೆಲಸಕ್ಕೆ ಒಟ್ಟು 14 ಕೋಟಿ ರೂಪಾಯಿ ಬೇಕಾಗಿದೆ. 4 ನೇ ಯೋಜನೆಯಲ್ಲಿ ಈ ಹಣ ಕೇಳಿದ್ದೇವೆ. We have programmed and we have sent it to the central Flood Contral Board to have them included in the Forth Plan.

ಶ್ರೀ ಕೆ. ಲಕ್ಕಪ್ಪ.—ಸೆಂಟ್ರಲ್ ಗವರ್ನಮೆಂಟಿನ ಫ್ಲಡ್ ಕಂಟ್ರೋಲ್ ಬೋರ್ಡಿನಲ್ಲಿ ಬೇಕಾದಷ್ಟು ಹಣ ಇದ್ದರೂ ಕೂಡ ಮೈಸೂರು ಸರಕಾರ ಯಾವ ಕಾರ್ಯಕ್ರಮವನ್ನೂ ಯೋಜನೆಯಲ್ಲಿ ಸೇರಿಸದೇ ಇದ್ದುದರಿಂದ ಹಣ ಒದಗಿಸುವುದು ನಿಧಾನವಾಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

Sri ALUR HANUMANTHAPPA.—It is not so, Sir. We have the schemes under preparation and we have drawn up 152 schemes at an estimated cost of Rs. 20 crores out of which we have prepared estimates for Rs. 14 crores for Flood Control Works, and the schemes will be ncluded in the Fourth Plan.

ಶ್ರೀ ಎಚ್. ಆರ್. ಕೇಶವಮೂರ್ತಿ.—ಫ್ಲಡ್ ಡ್ಯಾಮೇಜ್ ಕೆಲಸಗಳನ್ನು ತಕ್ಷಣ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ನೀವು ಅನುಸರಿಸುವ ನೀತಿಯಿಂದ ವಿಳಂಬವಾಗುತ್ತದೆ. ಸೆಂಟ್ರಲ್ ಗವರ್ನಮೆಂಟಿನಿಂದ ದುಡ್ಡನ್ನು ತೆಗೆದುಕೊಳ್ಳುವ ಶಕ್ತಿ ಇದ್ದರೂ ಕೂಡ ಸರಕಾರ ಉಪೇಕ್ಷೆ ಮಾಡಿ ಜನರಿಗೆ ತೊಂದರೆ ಕೊಡುತ್ತಿದ್ದೀರಿ ಇದಕ್ಕೆ ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ನಾನು ಅವರ ವಾದ ಒಪ್ಪುವುದಿಲ್ಲ. ಕೇಂದ್ರ ಸರಕಾರ ಇದಕ್ಕಾಗಿ 11,43,000 ರೂಪಾಯಿ ಮಂಜೂರು ಮಾಡಿದ್ದಾರೆ, 48,000 ಎಕರೆ ಭೂಮಿಗೆ ಇದ ರಿಂದ ಅನುಕೂಲವಾಗುವಂತೆ ಯೋಜನೆ ಮಾಡಿ ಕಳಿಸಿಕೊಟ್ಟಿದ್ದೇವೆ. ಪ್ರೊಟೆಕ್ಟಿವ್ ವರ್ಕ್ಸ್ ಸಹ ಕಳಿಸಿ ಕೊಟ್ಟಿದ್ದೇವೆ. ಅವುಗಳನ್ನು ಅವರು ಯೋಜನೆಯಲ್ಲಿ ಸೇರಿಸುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ನಾನು ಮುಖ್ಯ ಮಂತ್ರಿಗಳಿಗೆ ಮನವಿ ಮಾಡಿಕೊಂಡಿದ್ದೇನೆ. ತುಮ ಕೂರು ತಾಲ್ಲೂಕಿನಲ್ಲಿ ಪ್ರವಾಹದಿಂದ ಹಾನಿಯುಂಟಾದ ಕಾಮಗಾರಿಗಳನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡಿಕೊಡುತ್ತೇವೆಂದು ಅವರು ಹೇಳಿದ್ದಾರೆ. ಆದರೆ ಕಾರ್ಯಗತ ಮಾಡದೇ ಇರು ವುದಕ್ಕೆ ಕಾರಣ ಏನು ? ಈ ವರ್ಷ ಕಾರ್ಯಗತ ಮಾಡಿ, ತುಮಕೂರು ತಾಲ್ಲೂಕಿನಲ್ಲಿರುವ ಅಭಾವ ಪರಿಸ್ಥಿತಿಯನ್ನು ನೀಗುವುದಕ್ಕೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಉದ್ದವಾದ ಪ್ರಶ್ನೆ ಕೇಳಿದ್ದಾರೆ. ಈ ಕೆಲಸ ಗಳು ತಕ್ಷಣ ಆಗತಕ್ಕ ಕೆಲಸಗಳಲ್ಲ. ಫ್ಲಡ್ ಕೆಲಸ ಅಂದರೆ ನದಿ ಹೇಗೆ ಎಲ್ಲಿ ಯಾವ ರೀತಿ ಹರಿಯು ತ್ತದೆ ಎಲ್ಲಿ ಹುಟ್ಟುತ್ತದೆ ಇದನ್ನು ಯೋಚನೆ ಮಾಡಬೇಕಾಗುತ್ತದೆ. ಈ ವರ್ಷ ಇದಕ್ಕೆ ದುಡ್ಡು ಇಲ್ಲ. ದುಡ್ಡು ಒದಗಿಸಲು ಕೆಲವು ಕಾಲ ಬೇಕಾಗುತ್ತದೆ. ಈ ವರ್ಷ ಆಗುವುದಿಲ್ಲ ಮುಂದಿನ ವರ್ಷ ಕೂಡ ಆಗುವುದಿಲ್ಲ. 4ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸಬಹುದು.

ಶ್ರೀ ಸುಬ್ಬಯ್ಯ ನಾಯಕ.—ಮಲೆನಾಡು ಪ್ರದೇಶದಲ್ಲಿ ಹೆಚ್ಚು ಮಳೆಯಾಗುವುದರಿಂದ ಮಳೆ ನೀರಿನಿಂದ ಹಾವಳಿ ಉಂಟಾಗುತ್ತದೆ. ಈ ಹಾನಿ ಬಗೆ ಹರಿಸಲು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಆಲೂರು ಹನುಮಂತಪ್ಪ.—ಮಳೆ ಹೆಚ್ಚಾಗಿ ಬಂದಾಗ್ಗೆ ಪ್ರವಾಹದಿಂದ ಹಾನಿಯಾಗು ತ್ತದೆ. ಇದನ್ನು ಕೇಂದ್ರ ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಹೆಚ್ಚು ಹಣ ಕೊಡಿ ಎಂದು ಅವರನ್ನು ಕೇಳಿದ್ದೇವೆ.

1-30 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ—ಸ್ವಾಮಿ, ಪ್ರವಾಹದ ಹಾವಳಿಯನ್ನು ಹತೋಟಿಗೆ ತರಲು ಮೈಸೂರು ಸರ್ಕಾರದವರೇನಾದರೂ ಒಂದು ಬೋರ್ಡನ್ನು ರಚನೆ ಮಾಡಿ ಒಂದು ಕಾಂಪ್ರಹೆನ್ಸೀವ್ ಸ್ಕೀಮನ್ನು ಜಾರಿಗೆ ತರಲು ಆಲೋಚನೆ ಮಾಡಿದ್ದಾರಯೇ ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ನಮ್ಮ ರಾಜ್ಯದಲ್ಲಿ ಸ್ಟೇಟ್ ಫ್ಲಡ್ ಕಂಟ್ರೋಲ್ ಬೋರ್ಡ್ ಎಂತ ಒಂದು ಬೋರ್ಡ್ ಇದೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳೇ ಛೇರ್ಮನ್ ಮತ್ತು ಸಣ್ಣ ನೀರಾವರೀ ಯೋಜನೆಗಳ ಉಪಮಂತ್ರಿಗಳೇ ಅದಕ್ಕೆ ವೈಸ್ ಛೇರ್ಮನ್ನರು. ಅದರ ಸದಸ್ಯರು ಯಾರು ಯಾರೆಂದರೆ: Secretary to Government, Finance Department, Secretary to Government P.W.D., Secretary to Government, Revenue Department, Secretary to Government, Agriculture and Forest Department, Chief Engineer, Irrigation Projects, Chief Engineer, Communications and Buildings, Director of Agriculture and Chief Engineer General, Member Secretary. There is a Technical Advisory Committee on Floods; Chief Engineer General is Chairman; Chief Engineer, Irrigation Projects, Vice-Chairman; Chief Engineer Communication and Buildings, Member; Superintending Engineer, Bangalore Circle, Shimoga and Mysore Circles, Special West Coast Circle; Superintending Engineer, Darwar Circle; Superintending Engineer, Raichur Circle; Superintending Engineer, Belganm Circle are Committee Members.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಇನ್ನು 2 ವರ್ಷಗಳ ಕಾಲ ನಮ್ಮಲ್ಲಿ ಹಣವಿಲ್ಲ, ಈ ಬಾಬಿಗೆ ನಮಗೆ ಹಣ ಕೇಂದ್ರದಿಂದ ಬರಬೇಕಾಗಿದೆ, ಅಲ್ಲಿಯ ತನಕ ಸರ್ಕಾರ ದವರು ಈ ಬಗ್ಗೆ ಯಾವ ಕಾರ್ಯಕ್ರಮಗಳನ್ನೂ ಕೈಗೊಳ್ಳಲು ಆಗುವುದಿಲ್ಲ ಎಂದು ಅವರು ಹೇಳು ತ್ತಿದ್ದಾರೆ. ನಮ್ಮ ಸಣ್ಣ ನೀರಾವರಿ ಕಾಮಗಾರಿಗಳ ಉಪಮಂತ್ರಿಗಳು ಹೇಳುತ್ತಿದ್ದಾರೆ ಈ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ ಎಂದು. ಹೀಗೆ ಇವರಿಬ್ಬರ ಹೇಳಿಕೆಯಲ್ಲೂ ಭಿನ್ನಾ ಭಿಪ್ರಾಯಗಳಿರುತ್ತವೆ. ಇದರಿಂದ ದೇಶಕ್ಕೇನೂ ಒಳ್ಳೆಯದಾಗುವುದಿಲ್ಲ ಎಂಬ ಅನುಮಾನ ನಮಗೆ ಬಂದಿದೆ. ಆದರೆ ಕೇಂದ್ರದಿಂದ ಇದಕ್ಕೆ ಹಣ ಬರುವುದಕ್ಕೆ ಮುಂಚಿತವಾಗಿಯೇ ಸಣ್ಣ ಪುಟ್ಟ ಪ್ರವಾಹ ಗಳ ನಷ್ಟವನ್ನು ಮೈನರ್ ಇರಿಗೇಷನ್ ಬಾಬಿಗಿಟ್ಟಿರತಕ್ಕ ಹಣದಲ್ಲೇ ಏಕೆ ಉಪಯೋಗಿಸಿ ಅದನ್ನು ದುರಸ್ತಿ ಮಾಡಬಾರದು ?

ಶ್ರೀ ಎಸ್. ನಿಜಲಿಂಗಪ್ಪ.—ಸೂಚನೆಯನ್ನು ಕೊಡತಕ್ಕ ಸಂದರ್ಭದಲ್ಲಿ ಆಕ್ಷೇಪಣೆಯನ್ನೂ ಮಾಡಿದ್ದಾರೆ. ಬಹುಶಃ ಮಾನ್ಯ ಸದಸ್ಯರಿಗೆ ಗೊತ್ತಿಲ್ಲ ಅಂತ ಕಾಣುತ್ತದೆ. ಈಗ 2 ವರ್ಷಗಳಲ್ಲಿ ಮಾಡಿರತಕ್ಕ ಕೆಲಸ ಹಿಂದೆ 10 ವರ್ಷಗಳಲ್ಲಿ ಕೂಡ ಮಾಡಿರಲಾರರು. ಮೈನರ್ ಇರಿಗೇಷನ್ ಬಾಬಿಗಿಟ್ಟಿರತಕ್ಕ ಹಣವನ್ನು ಫ್ಲಡ್ ಕಂಟ್ರೋಲ್ ಬಾಬಿಗೆ ಉಪಯೋಗಿಸುವುದಕ್ಕೆ ಸಾಧ್ಯವಿಲ್ಲ. ಅದೇ ಬೇರೆ, ಇದೇ ಬೇರೆ. ಹಣ ಒದಗಿದಂತೆಲ್ಲಾ ಕೆಲಸ ಮಾಡುತ್ತೇವೆ. ಮಾನ್ಯ ಉಪಸಚಿವರು ಅದಷ್ಟು ಬೇಗ ಫ್ಲಡ್ ಕಂಟ್ರೋಲ್ ಕೆಲಸಗಳನ್ನು ಮಾಡುತ್ತೇವೆಂದು ಹೇಳಿದ್ದಾರೆಯೇ ವಿನಾ ಈ ದಿನವೇ ಮಾಡುತ್ತೇವೆಂದು ಎಲ್ಲಿಯೂ ಹೇಳಿಲ್ಲ.

ಅಧ್ಯಕ್ಷರು.—ಫ್ಲಡ್ ಕಂಟ್ರೋಲಿಗೆ ಬೇಕಾದ ಹಣವನ್ನು ಬಹಿರಂಗವಾಗಿ ಮೈನರ್ ಇರಿಗೇಷನ್ ಬಾಬಿನ ಹಣದಲ್ಲಿ ಕೊಡಿ ಎಂದು ಒತ್ತಾಯ ಮಾಡಬಾರದು. ಆಗುವುದು ಆಗುತ್ತೆ, ಮಾಡುವುದನ್ನು ಮಾಡುತ್ತಿದ್ದಾರೆ, ಮಾನ್ಯ ಸದಸ್ಯರು ಬಹಿರಂಗವಾಗಿ ಅದನ್ನು ಹೇಳುವುದು ಬೇಡ.

ಶ್ರೀಮತಿ ಭಾಗೀರಥಮ್ಮ.—ಫ್ಲಡ್ ಕಂಟ್ರೋಲ್ ಕೆಲಸಗಳನ್ನು ಕೈಗೊಳ್ಳುವಾಗ ಆ ಖರ್ಚಿನಲ್ಲಿ ನಾಲ್ಕನೇ ಒಂದು ಭಾಗದ ಹಣವನ್ನು ರೈತರಿಂದ ವಸೂಲ್ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Sri ALUR HANUMANTHAPPA.—We are not collecting any contribution for the works taken up by way of protective works or flood control works.

ಶ್ರೀಮತಿ ಭಾಗೀರಥಮ್ಮ.—ಗಮನಕ್ಕೆ ತಂದರೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ತಂದರೆ ಮಾಡೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ಬೋರ್ಡನ್ನು ಮಾಡಿದ್ದಲ್ಲಿ ಅದೇನಾದರೂ ಒಂದು ಕಾಂಪ್ರಹೆನ್ಸಿವ್ ಸ್ಕೀಮನ್ನು ಈ ಫ್ಲಡ್ ಕಂಟ್ರೋಲಿನ ಬಗ್ಗೆ ಮಾಡಿ, ತತ್ಸಂಬಂಧವಲ್ಲಿ ಒಂದು ಫೇಸ್ಡ್ ಪ್ರೋಗ್ರಾಮನ್ನು ಹಾಕಿಕೊಂಡಿದ್ದರೆ—ಸರ್ಕಾರದವರು ಸದ್ಯಕ್ಕೆಷ್ಟು ಹಣವನ್ನು ಒದಗಿಸಿದ್ದಾರೆ ?

ಶ್ರೀ ಆಲೂರು ಹನುಮಂತಪ್ಪ.—ಫ್ಲಡ್ ಕಂಟ್ರೋಲ್ ಸ್ಕೀಮಿಗೆಂತಲೇ ಕೇಂದ್ರದವರು ಹಣವನ್ನು ಕೊಡುವತನಕ, ನಾವಿಲ್ಲಿ ಸುಮ್ಮನೆ ಕುಳಿತಿರುವುದಿಲ್ಲ. ಆಯಾ ಸಂದರ್ಭಗಳನ್ನು ನೋಡಿಕೊಂಡು, ಸ್ಟೇಟ್ ಬೋರ್ಡಿನವರೇ ಆ ಕೆಲಸಗಳನ್ನೂ ನಡೆಸುತ್ತಿದ್ದಾರೆ. ಹಾಗೆ ಇದುವರೆಗಾಗಲೇ ದೇಶಾವಳಿ ಈ ಬೋರ್ಡಿನವರು 23 ಲಕ್ಷ ರೂಪಾಯಿಗಳ ಫ್ಲಡ್‌ಕಂಟ್ರೋಲ್ ಕೆಲಸಗಳನ್ನು ಕೈಗೊಂಡಿರುತ್ತಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸ್ವಾಮಿ, ಈ ದಿವಸ ಫ್ಲಡ್‌ನಿಂದ ಎಷ್ಟೋ ಕಡೆಗಳಲ್ಲಿ ಕೆರೆಗಳೂ, ಕಟ್ಟೆಗಳೂ, ರಸ್ತೆಗಳೂ ಹಾಳಾಗಿರುತ್ತವೆ. ಫ್ಲಡ್ ಕಂಟ್ರೋಲ್ ಸ್ಕೀಮಿನಲ್ಲಿ ಹಣವಿಲ್ಲದಿದ್ದಾಗ ಮೈನರ್ ಇರಿಗೇಷನ್ ಬಾಬಿನಲ್ಲಿರತಕ್ಕ ಹಣದಿಂದ ಕೆರೆ, ಕಟ್ಟೆಗಳನ್ನು ದುರಸ್ತಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಇವರು ಹೇಳುತ್ತಾರೆ. ರಸ್ತೆ ಹಾಳಾಗಿದ್ದಾಗ ಅದನ್ನು ದುರಸಿ ಮಾಡಲು ರಸ್ತೆ ಬಾಬಿನವರು ಆಗುವುದಿಲ್ಲ ಎಂದು ಹೇಳುತ್ತಾರೆ. ಹೀಗಾದರೆ ತುಂಬಾ ತೊಂದರೆಯಾಗುತ್ತದೆ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ವಿಚಾರದಲ್ಲಿ ಒಂದು ಸರಿಯಾದ ಆದೇಶವನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಕೆರೆ, ಕಟ್ಟೆ, ಮೋರಿ ಇವುಗಳೆಲ್ಲಾ ಸರ್ಕಾರದ ಆಸ್ತಿಗಳೇ. ಅವುಗಳು ಡ್ಯಾಮೇಜಾಗಿದ್ದರೆ ಅವುಗಳನ್ನು ಪ್ರೊಟೆಕ್ಟಿವ್ ವರ್ಕುಗಳೆಂದು ಭಾವಿಸಿ ಆಯಾಯ ಇಲಾಖೆಯವರು ಆಯಾಯ ಕೆಲಸಗಳನ್ನು ದುರಸ್ತಿ ಮಾಡಿಸುತ್ತಾರೆ. ಇದುವರೆಗೆ ಆ ರೀತಿ ಬೇಕಾದಷ್ಟು ಕೆಲಸಗಳನ್ನು ಮಾಡಿಸಿದ್ದೇವೆ.

ಶ್ರೀ ಎಸ್. ಸುಬ್ರಯ್ಯ ನಾಯಕ್.—ತಾವು 17 ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿರತಕ್ಕದ್ದರಲ್ಲಿ ಹಾನಿಗೊಳಗಾಗಿರತಕ್ಕ ಸಂದರ್ಭಗಳೆಷ್ಟು ?

ಶ್ರೀ ಆಲೂರು ಹನುಮಂತಪ್ಪ.—ತುಮಕೂರು ಜಿಲ್ಲೆಯಲ್ಲಿ ಉರ್ಡಿಗೆರೆ ಹೋಬಳಿ, ಅನುಪನಹಳ್ಳಿ ಒಂದು, ಅದಾದನಂತರ ಅಗರದ ಹತ್ತಿರ ಮಾವಗೊಂಡನಹಳ್ಳಿಯಲ್ಲಿ 9 ಸಾವಿರದ ವರ್ಕು, ಅನಂತರ ಡಿ. ದುರ್ಗದ ಹತ್ತಿರ ಅರೆಗುಂಟನಹಳ್ಳಿ, ಅಲ್ಲೆಲ್ಲಾ ಪ್ರವಾಹದ ಹಾವಳಿಯಿಂದ ಮರಳು ಮುಚ್ಚಿದ್ದ ಜಮೀನುಗಳನ್ನು ದುರಸ್ತಿ ಮಾಡಿಸಿ, ಅಲ್ಲಿ ಏರಿಗಳನ್ನು ಹಾಕಿಸಲಾಗಿದೆ.

Stand of the State Government regarding the Official Language of India

*Q.—666. Sri G. V. GOWDA (Palya).—

Will the Government be pleased to state :—

(a) the stand of the State Government in regard to the official language of India ;

(b) whether the teaching of Hindi in High Schools has been made compulsory ; and if so, since when ?

A.—Sri S. NIJALINGAPPA (Chief Minister).—

(a) The stand of the State Government is that Hindi will be the official language of India, subject to the assurances of the late Prime Minister being respected ; necessary steps should be taken to see that these assurances are statutorily implemented.

(b) Yes. Since 1962–63.

ಶ್ರೀ ಎ. ಪಿ. ಅಪ್ಪಣ್ಣ.—1962-63ರಲ್ಲಿ ಹಿಂದಿಯನ್ನು ಕಡ್ಡಾಯವಾಗಿ ಕಲಿಯತಕ್ಕ ಒಂದು ಸಬ್ಜೆಕ್ಟನ್ನಾಗಿ ಮಾಡಿದ್ದಾಗ್ಯೂ ಕೆಲವು ಸಂದರ್ಭಗಳಲ್ಲಿ ಅದಕ್ಕೆ ವಿನಾಯಿತಿಯನ್ನು ಕೊಟ್ಟಿದ್ದುಂಟೋ ?

ಶ್ರೀ ಎಸ್. ನಿಜಲಿಂಗಪ್ಪ.—ಉಂಟು. ಅಂದರೆ ಪರೀಕ್ಷೆಗೆ ವಿನಾಯಿತಿ ಕೊಟ್ಟಿದ್ದುಂಟು. ಈಗ ಆರನೆಯ ಸ್ಟಾಂಡರ್ಡಿನಿಂದ ಹತ್ತನೆಯ ಸ್ಟಾಂಡರ್ಡ್‌ವರೆಗೆ ಅಭ್ಯಾಸವನ್ನು ಮುಂದುವರಿಸ ಬೇಕಾದರೆ 5 ವರ್ಷಗಳ ಅವಕಾಶ ಬೇಕಾಗುವುದು. ಆ 5 ವರ್ಷಗಳು ಕಳೆಯುವತನಕ ಸ್ವಲ್ಪ ಮಟ್ಟಿಗೆ ಆ ರಿಯಾಯಿತಿಯನ್ನು ಕೊಟ್ಟಿದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ಸರ್ಕಾರದವರು 1962–63ರಿಂದಲೇ ಹಿಂದಿಯನ್ನು ಕಡ್ಡಾಯ ಮಾಡಿದ್ದರೂ, ಎಲ್ಲಾ ಶಾಲೆಯಲ್ಲೂ ಜಾರಿಗೆ ತಂದಿದ್ದರೂ ಆ ಶಾಲೆಗಳಲ್ಲಿ ಟ್ರೈನ್ಡ್ ಟೀಚರುಗಳ ಅಭಾವವಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಕೆಲವು ಕಡೆ ಆ ಅಭಾವ ಇರುವುದರಿಂದಲೇ ಹುಡುಗರಿಗೆ ಆ ರಿಯಾಯಿತಿಯನ್ನು ಕೊಟ್ಟಿದ್ದೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಅನಾದಿಕಾಲದಿಂದಲೂ ನಮ್ಮ ರಾಷ್ಟ್ರದಲ್ಲಿ ರಾಷ್ಟ್ರೀಯ ಭಾಷೆಯಾಗಿದ್ದಂಥ ಸಂಸ್ಕೃತವನ್ನು ಈ ದಿವಸ ಕೈಬಿಟ್ಟು ಆ ಹಿಂದೀ ಭಾಷೆಯನ್ನು ಏಕೆ ಒತ್ತಾಯ ಮಾಡುತ್ತಿದ್ದೀರಿ. ಎಲ್ಲಾ ಭಾಷೆಗಳಿಗೂ ಸಂಸ್ಕೃತವೇ ಮೂಲಾಧಾರವಾಗಿರುವುದರಿಂದ ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡಿ, ಸಂಸ್ಕೃತವನ್ನೇ ಏಕೆ ದೇಶಾದ್ಯಂತವೂ ಜಾರಿಗೆ ತರುವಂತೆ ಒತ್ತಾಯ ಮಾಡಬಾರದು ?

ಶ್ರೀ ಎಸ್. ನಿಜಲಿಂಗಪ್ಪ.—ಸಂಸ್ಕೃತ ಹಿಂದೆ ಒಂದು ರಾಷ್ಟ್ರಭಾಷೆಯಾಗಿತ್ತು ಎಂದು ನಾನು ಯಾವ ಚರಿತ್ರೆಯಲ್ಲೂ ಓದಿಲ್ಲ, ಕೇಳಿಯೂ ಇಲ್ಲ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಪರೀಕ್ಷೆಯಮಟ್ಟಿಗೆ ರಿಯಾಯಿತಿಯನ್ನು ತೋರಿಸಲಾಗಿದೆ ಎಂದು ಹೇಳೋಣವಾಯಿತು, ಇಂಥ ರಿಯಾಯಿತಿ ಬೇಕೆಂದು ಹುಡುಗರಿಂದ ಮನವಿ ಬಂದಿತ್ತೆ ಅಥವಾ ಅವರ ರಕ್ಷಕರಿಂದ ಮನವಿ ಬಂದಿತ್ತೇ, ಇಲ್ಲವೇ ಉಪಾಧ್ಯಾಯರಿಂದ ಆ ಮನವಿ ಬಂದಿತ್ತೆ ಈ ಮೂವರಲ್ಲಿ ಯಾರಿಂದ ಬಂದಿತ್ತು ?

ಶ್ರೀ ಎಸ್. ನಿಜಲಿಂಗಪ್ಪ.—ಒಂದೆರಡು ವರ್ಷಕಾಲ ಪರೀಕ್ಷೆಗೆ ರಿಯಾಯಿತಿ ಬೇಕೆಂದು ಒತ್ತಾಯ ಬಂತು, ಅದನ್ನು ಇಂಥವರಿಂದಲೇ ಎಂದು ಹೇಳುವುದಕಾಗುವುದಿಲ್ಲ. ಅದಕ್ಕಾಗಿ ರಿಯಾಯಿತಿಯನ್ನು ಕೊಡಲಾಯಿತು, ಆದರೆ ಇತ್ತೀಚೆಗೆ ಬಹಳ ಹುಡುಗರು ಪರೀಕ್ಷೆಗೆ ಹಾಜರಾಗುತ್ತಿದ್ದಾರೆ. ಪರೀಕ್ಷೆಗೆ 1963ರಲ್ಲಿ ಕುಳಿತಿದ್ದ ಹುಡುಗರಲ್ಲಿ ಶೇ. 65 ಹುಡುಗರು ಹಿಂದೀ ಪರೀಕ್ಷೆಗೆ ಕುಳಿತಿದ್ದರು, ಅನಂತರ 1964ರಲ್ಲಿ ಪರೀಕ್ಷೆಗೆ ಕುಳಿತಿದ್ದ ಹುಡುಗರಲ್ಲಿ ಶೇ 70 ಜನ ಹಿಂದೀ ಪರೀಕ್ಷೆಗೆ ಕುಳಿತಿದ್ದರು.

Sri S. M. KRISHNA.—What is the attitude of the State Government with reference to the quota system in so far as the recruitment to Central Services are concerned ?

Sri S. NIJALINGAPPA.—I think there is a lot of force in the demand for quota system. That is the opinion of the State Government.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಹಿಂದಿಯ ಬಗ್ಗೆ ಸರ್ಕಾರದ ದೃಢ ಧೋರಣೆ ಸರಿಯಾಗಿ ಕಂಡುಬರದೆ ಇದ್ದ ಕಾರಣ ಹುಡುಗರು ಕಡ್ಡಾಯವಾಗಿ ಪರೀಕ್ಷೆಗೆ ಕುಳಿತುಕೊಳ್ಳದೇ ವಿನಾಯಿತಿ ಬೇಕೆಂದು ಕೇಳಿಕೊಳ್ಳುತ್ತಾ ಇದ್ದುದು ಸರಿಯಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಕೆಲವು ಕಡೆ ಕೇಳಿದ್ದಾರೆ, ಎಲ್ಲಾ ಕಡೆಯಲ್ಲೂ ಕೇಳಿಲ್ಲ.

Sri G. V. GOWDA.—Sir, you have been pleased to say that necessary steps would be taken to see that the assurances of the late Prime Minister would be respected statutorily : what is the proposal before the Government to have these assurances statutorily implemented either by seeking an amendment of the Constitution or by seeking an amendment of the Official Languages Act ?

Sri S. NIJALINGAPPA.—This Government cannot do anything in the matter. This Government can only recommend to the Government of India to introduce a Bill to amend the Official Languages Act.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಉಪಾಧ್ಯಾಯರಿಗೆ ಶಿಕ್ಷಣ ಕೊಡುವುದಕ್ಕೆ ಈಗ ಕೇಂದ್ರ ಸರ್ಕಾರದವರು ಏನಾದರೂ ಹಣ ಸಹಾಯ ಮಾಡುತ್ತಾ ಇದ್ದಾರೆಯೇ ? ಅಥವಾ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಉಪಾಧ್ಯಾಯರಿಗೆ ಶಿಕ್ಷಣ ಕೊಡುವುದು ಅವಶ್ಯಕ ಎಂದು ಹೇಳಿ ಹೆಚ್ಚು ಹಣ ಬೇಕೆಂದು ಕೇಂದ್ರಸರ್ಕಾರವನ್ನು ಕೇಳಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಸುಮಾರು ಒಂದು ವರ್ಷದಿಂದ ಒತ್ತಾಯ ಮಾಡುತ್ತಾ ಇದ್ದೇವೆ. ಈಗ ಕೊಡುತ್ತಾ ಇರತಕ್ಕ ಹಣ ಸಾಲದು, ಸ್ವಲ್ಪ ಕೊಡುತ್ತಾ ಇದ್ದೀರಿ ಇನ್ನೂ ಹೆಚ್ಚು ಕೊಡ ಬೇಕೆಂದು ಹೇಳಿ ಕೇಳುತ್ತಾ ಇದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಭಾರತದ ಅಧಿಕೃತ ಭಾಷೆಯ ವಿಚಾರದಲ್ಲಿ ದಕ್ಷಿಣ ಭಾರತದಲ್ಲಿ ಅನೇಕ ಕಡೆ ಗಲಭೆಗಳಾದ ಮೇಲೆ ದಕ್ಷಿಣ ಭಾರತದ ಮುಖ್ಯ ಮಂತ್ರಿಗಳು ಸಮ್ಮೇಳನದಲ್ಲಿ ಅಧಿಕೃತವಾಗಿ ತೆಗೆದುಕೊಂಡಂಥ ನಿಲುವು ಏನು ? ಮತ್ತು ಇದನ್ನು ಹೇಗೆ ಪರಿಹರಿಸಬೇಕು ಎಂದು ಅಲ್ಲಿ ಆಲೋಚನೆ ಮಾಡಲಾಯಿತು ?

ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆ ಈಗ ಬಂದಿರುವುದರಿಂದ ಆ ವಿಷಯವನ್ನು ಈಗಲೇ ಹೇಳಿಬಿಡುತ್ತೇನೆ. ಅನೇಕ ಕಡೆಗಳಲ್ಲಿ ಅನುಮಾನ ಬಂದಿದೆ. ಹಿಂದಿ ಅಫಿಷಿಯಲ್ ಲ್ಯಾಂಗ್ವೇಜ್ ಆದರೆ ಬಹಳ ಕಷ್ಟಕ್ಕೆ ಬರುತ್ತದೆ, ಇಂಗ್ಲೀಷು ಬಹಳ ದಿವಸದಿಂದ ಇದೆ. ಆದ್ದರಿಂದ ಹಿಂದಿಯನ್ನು ಅಫಿಷಿಯಲ್ ಲ್ಯಾಂಗ್ವೇಜ್ ಆಗಿ ಮಾಡಕೂಡದು ಎಂಬುದು ಒಂದು. ವಿದ್ಯಾರ್ಥಿಗಳು ಉತ್ತರ ಹಿಂದೂಸ್ಥಾನದಲ್ಲಿ ಯಾರ ಮಾತೃಭಾಷೆ ಹಿಂದಿಯೋ ಅವರು ತಮ್ಮ ಪ್ರಶ್ನೋತ್ತರಗಳನ್ನು ಅವರ ಭಾಷೆಯಲ್ಲೇ ಬರೆಯುತ್ತಾರೆ ಆದ್ದರಿಂದ ಇಂಗ್ಲೀಷಿನಲ್ಲಿ ನಾವು ಬರೆಯುತ್ತೇವೆ. ನಮಗೆ ಕಷ್ಟವಾಗುತ್ತದೆ ಅದ್ದರಿಂದ ಇಂಗ್ಲೀಷನ್ನು ತೆಗೆದು ಹಾಕಬೇಡಿ. ಎಲ್ಲರೂ ಒಂದೇ ಭಾಷೆಯಲ್ಲೇ ಬರೆಯಲಿ ಎಂದು ಹೇಳುವುದು ಮತ್ತೊಂದು. ಅದೂ ಅಲ್ಲದೆ ನಾನ್ ಹಿಂದಿ ಏರಿಯಾದಲ್ಲಿ ನಮಗೂ ಕೇಂದ್ರ ಸರ್ಕಾರಕ್ಕೂ ಆಗತಕ್ಕ ಪತ್ರವ್ಯವಹಾರಗಳಲ್ಲಿ ಬಹಳ ತೊಂದರೆ ಬರುತ್ತದೆ ಎಂದು ಹೇಳುತ್ತಾರೆ. ಈ ಪ್ರಶ್ನೆಗಳೆಲ್ಲಾ ಹಿಂದೆ ಬಂದಿತ್ತು. ಈ ವಿಷಯದಲ್ಲಿ ಹಿಂದೆ ಪಂಡಿತ ಜವಹಾರಲಾಲ್ ನೆಹರು ಅವರು ಯಾವ ಆಶ್ವಾಸನೆಯನ್ನು ಕೊಟ್ಟಿದ್ದರೋ ಅದನ್ನು ಕಾರ್ಯಗತ ಮಾಡುವುದು ಬಹಳ ಅವಶ್ಯಕ. ಈ ಬಗ್ಗೆ ಅಫಿಷಿಯಲ್ ಲ್ಯಾಂಗ್ವೇಜಸ್ ಆಕ್ಟ್‌ನಲ್ಲಿ ಸೂಕ್ತವಾದ ತಿದ್ದುಪಡಿಗಳನ್ನು ಮಾಡುವುದು ಅವಶ್ಯಕ ಎಂಬುದು ನಮ್ಮೆಲ್ಲರ ತೀರ್ಮಾನ ಅದನ್ನು ಒಪ್ಪಿಕೊಂಡಿದ್ದೇವೆ. ಈ ಸರ್ಕಾರದ ತೀರ್ಮಾನವೂ ಕೂಡ ಅಷ್ಟೆ, ಅದನ್ನು ಒತ್ತಾಯ ಮಾಡುತ್ತಾ ಇದ್ದೇವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಸರ್ಕಾರಿ ನೌಕರಿಯಲ್ಲಿರತಕ್ಕವರಿಗೆ ಹಿಂದಿ ಬರದೇ ಇದ್ದವರಿಗೆ ಹಿಂದಿಯನ್ನು ಕಲಿಸುವುದಕ್ಕೆ ಏನು ಏರ್ಪಾಡು ಮಾಡಿದ್ದೀರಿ ? ಮತ್ತು ಹಿಂದಿ ಭಾಷೆಯನ್ನು ಕಲಿಸುವ ಬಗ್ಗೆ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದವರು ಹಣ ಸಹಾಯವನ್ನೇನಾದರೂ ಮಾಡಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಸಾಧಾರಣವಾಗಿ ಎಲ್ಲಾ ಜನರು ಹಿಂದಿಯನ್ನು ಕಲಿಯಬೇಕೆಂಬ ಉದ್ದೇಶದಿಂದ ಮಹಾತ್ಮಾ ಗಾಂಧೀಜಿಯವರು ಸುಮಾರು 35 ವರ್ಷಗಳ ಕೆಳಗೆ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆ ಎಂಬುದನ್ನು ಮಾಡಿದರು. ಅವರ ಪ್ರೋತ್ಸಾಹದಿಂದ ಬೇಕಾದಷ್ಟು ಕೆಲಸ ನಡೆದಿದೆ ಬಹಳ ಜನ ಹಿಂದಿ ಕಲಿತಿದ್ದಾರೆ. ಆದರೆ ಅದು ಖಾಸಗಿ ಕ್ಷೇತ್ರದಲ್ಲಿ ನಡೆಯುತ್ತಾ ಇದೆ. ಸರ್ಕಾರಿ ಕ್ಷೇತ್ರದಲ್ಲಿ ನಡೆಯುವುದಕ್ಕೆ ಅವಶ್ಯಕವಾಗಿ ಬೇಕಾಗಿರುವುದು ಉಪಾಧ್ಯಾಯರುಗಳು ಆದ್ದರಿಂದ ಹೆಚ್ಚಿನ ಹಣ ಸಹಾಯ ಬೇಕೆಂದು ಕೇಳಿದ್ದೇವೆ, ಅದನ್ನು ತೆಗೆದುಕೊಳ್ಳಲಿಕ್ಕೆ ವ್ಯವಸ್ಥೆಯನ್ನೂ ಮಾಡಿದ್ದೇವೆ.

ಶ್ರೀ ಎಸ್. ಎಂ. ಕೃಷ್ಣ.—ಇಂಡಿಯನ್ ಅಡ್ಮಿನಿಸ್ಟ್ರೇಟೀವ್ ಸರ್ವೀಸ್‌ನಲ್ಲಿ ಮೈಸೂರಿಗೆ ಲಗತ್ತು ಮಾಡಿರುವ ಅಧಿಕಾರಿಗಳು ಯಾರಿದ್ದಾರೆ ಅವರು ಕಡ್ಡಾಯವಾಗಿ ಕನ್ನಡವನ್ನು ಕಲಿಯಬೇಕೆಂಬ ಒತ್ತಾಯವನ್ನು ಕೇಂದ್ರ ಸರ್ಕಾರದ ಮೇಲೆ ಹಾಕುತ್ತೀರೇನು?

ಶ್ರೀ ಎಸ್. ನಿಜಲಿಂಗಪ್ಪ.—ಆ ಒಂದು ಸೂಚನೆಯನ್ನು ಕೊಟ್ಟಿದ್ದೇವೆ. ಸಾಮಾನ್ಯವಾಗಿ ಹಿಂದಿ ಮಾತೃಭಾಷೆ ಇರತಕ್ಕ ಜನ ದಕ್ಷಿಣ ಅಥವಾ ಪೂರ್ವದ ಯಾವುದಾದರೂ ಒಂದು ಭಾಷೆಯನ್ನು ಕಲಿಯುವುದು ಅವಶ್ಯಕ ಎಂದು ಸೂಚನೆ ಮಾಡಿದ್ದೇವೆ.

Sri A. P. APPANNA.—Is there any difference between the stand taken by this Government and the Government of the other Southern States like Madras, Andhra on this issue?

Sri S. NIJALINGAPPA.—No difference, Sir.

ಶ್ರೀ ಸಿ. ಜೆ. ಮುಕಣ್ಣಪ್ಪ.—ಈ ಗೊಂದಲ ಬಗೆಹರಿಸಬೇಕಾದರೆ ಎಷ್ಟು ವರ್ಷಗಳ ಕಾಲ ಈ ಪ್ರಶ್ನೆಯನ್ನು ಮುಂದೆ ಹಾಕಬೇಕೆಂದು ಸರ್ಕಾರ ಒಂದು ಖಚಿತವಾದ ಅಭಿಪ್ರಾಯವನ್ನು ಹೊಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇಷ್ಟು ವರ್ಷಗಳ ಕಾಲ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ, ಬಹುಶಃ 5 ವರ್ಷ ಎಂದು ಕೆಲವರ ಅಭಿಪ್ರಾಯ, 10 ವರ್ಷ ಎಂದು ಕೆಲವರ ಅಭಿಪ್ರಾಯ, 15 ವರ್ಷ ಆಗಬಹುದು ಎಂದು ಇನ್ನು ಕೆಲವರ ಅಭಿಪ್ರಾಯ. 15 ವರ್ಷದಲ್ಲಿ ಬಗೆಹರಿಯಬಹುದು ಎಂದು ಅಂದುಕೊಂಡಿದ್ದೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ಹಿಂದಿ ಮಾತೃಭಾಷೆಯಾಗಿರತಕ್ಕವರು ದಕ್ಷಿಣ ಹಿಂದುಸ್ಥಾನದ ಯಾವುದಾದರೂ ಒಂದು ಭಾಷೆ ಕಲಿಯಬೇಕೆಂದು ಸೂಚನೆ ಮಾಡಿರುವುದಾಗಿ ಹೇಳಿದಿರಿ. ಯಾವುದು ಕಲಿಯಬೇಕೆಂದು ಹೇಳಿದ್ದೀರಿ ? ತಮಿಳು, ಕನ್ನಡ ಅಥವಾ ಮಲೆಯಾಳಿ ಯಾವುದು ಕಲಿಯಬೇಕೆಂದು ಹೇಳಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಅವರಿಗೆ ಇಷ್ಟ ಬಂದದ್ದು ಕಲಿಯಬಹುದು. ನಿನ್ನೆ ಒಂದು ಕಾಗದ ಬಂದಿದೆ ಕನ್ನಡ ಉಪಾಧ್ಯಾಯರನ್ನು ಕಳುಹಿಸುವುದಕ್ಕೆ ಏರ್ಪಾಡು ಮಾಡಿ ಎಂದು, ಹೀಗೆ ಬಾಕಿ ಕಡೆಯೂ ಬಂದಿರಬಹುದು.

ಶ್ರೀ ಜಿ. ವಿ. ಗೌಡ.—ಇನ್ನು 50 ವರ್ಷವಾದರೂ ಕೂಡ ಹಿಂದಿ ಮಾತೃಭಾಷೆ ಉಳ್ಳಂಥ ಜನರ ಸಾಹಿತ್ಯದ ಮಟ್ಟಕ್ಕೆ ದಕ್ಷಿಣ ಭಾರತದ ಜನ ಬರುವುದಕ್ಕೆ ಸಾಧ್ಯವಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—15 ವರ್ಷದೊಳಗೆ ನಮ್ಮ ಹುಡುಗರು ಆ ಹುಡುಗರಿಗಿಂತ ಚೆನ್ನಾಗಿ ಪರೀಕ್ಷೆಯಲ್ಲಿ ಪಾಸ್ ಆಗುತ್ತಾರೆ ಅದರಲ್ಲಿ ಏನೂ ಅನುಮಾನ ಇಲ್ಲ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಶಾಲೆಗಳಲ್ಲಿ ಹಿಂದಿಯನ್ನು ಕಲಿಸಲಿಕ್ಕೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ. ಸಾರ್ವಜನಿಕರಿಗೆ ಹಿಂದಿ ಕಲಿಯಲು ಅವರಲ್ಲಿ ಹಿಂದಿ ಪ್ರಚಾರ ಮಾಡಲಿಕ್ಕೆ ರಾಜ್ಯ ಸರ್ಕಾರದವರು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ರಾಜ್ಯ ಸರ್ಕಾರದವರು ಜನಸಾಮಾನ್ಯರಿಗೆ ಹಿಂದಿ ಕಲಿಸಲು ಹೋಗುವುದಿಲ್ಲ ಅದಕ್ಕೆ ಖಾಸಗಿ ಸಂಸ್ಥೆಗಳು ಇದೆ, ಅವುಗಳಿಗೆ ಸರ್ಕಾರದವರು ಸಹಾಯ ಮಾಡುತ್ತಾ ಇದ್ದಾರೆ.

ಶ್ರೀಮತಿ ಸುಶೀಲಾಬಾಯ್ ಹೀರಾಚಂದ್ ಷಾ.—15 ವರ್ಷದೊಳಗೆ ಹಿಂದಿ ಜಾರಿಗೆ ಬರುತ್ತದೆ ಎಂದು ಹೇಳಿದಿರಿ, ಅದರ ದೆಸೆಯಿಂದ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಹಿಂದಿ ಒತ್ತಾಯ ಶಿಕ್ಷಣವನ್ನು ಜಾರಿಗೆ ತರುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—15 ವರ್ಷದಲ್ಲಿ ಜಾರಿಗೆ ಬರುತ್ತದೆ ಎಂದು ಅಲ್ಲಿ ಅಷ್ಟರೊಳಗೆ ಸಾಧ್ಯವಾಗಬಹುದು ಎಂದು ಹೇಳಿವೆ. ಒತ್ತಾಯ ಶಿಕ್ಷಣ ಕೊಡಬೇಕೆಂದು ಈಗಾಗಲೇ ಕಾನೂನು ಪ್ರಕಾರ 6ನೇ ಸ್ಟ್ಯಾಂಡರ್ಡ್‌ನಿಂದ 10ನೇ ಸ್ಟ್ಯಾಂಡರ್ಡ್‌ವರೆಗೂ ಹಿಂದಿ ಶಿಕ್ಷಣವನ್ನು ಕೊಡಲಾಗುತ್ತಿದೆ.

ಶ್ರೀ ಗೋಪಾಲರಾವ್ ಮುಡಬಿ.—ನಮ್ಮ ರಾಜ್ಯದಲ್ಲಿರತಕ್ಕ ವಿಶ್ವವಿದ್ಯಾನಿಲಯಗಳಲ್ಲಿ ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್ ಯಾವುದು ಇರಬೇಕೆಂಬ ವಿಷಯದಲ್ಲಿ ಯಾವುದಾದರೂ ಒಂದು ಖಚಿತವಾದ ಅಭಿಪ್ರಾಯ ಬಂದಿದೆಯೇ ಹೇಗೆ?

ಶ್ರೀ ಎಸ್. ನಿಜಲಿಂಗಪ್ಪ.—ಖಚಿತವಾದ ಅಭಿಪ್ರಾಯ ಬಂದಿಲ್ಲ. ಕನ್ನಡವೇ ಆಗಬೇಕೆಂದು ಕೆಲವರು ಒತ್ತಾಯ ಮಾಡುತ್ತಾ ಇದ್ದಾರೆ, ಅದು ಇನ್ನೂ ತೀರ್ಮಾನವಾಗಿಲ್ಲ.

ಶ್ರೀ ಸಿ ಜೆ. ಮುಕ್ಕಣ್ಣಪ್ಪ.—ಅಫಿಷಿಯಲ್ ಲ್ಯಾಂಗ್ವೇಜ್ ಆಕ್ಟನ್ನು ತಿದ್ದುಪಡಿ ಮಾಡುವುದರಿಂದ ಹಿಂದೀಯೇತರ ರಾಜ್ಯಗಳಿಗೆ ಸಮಾಧಾನವಾಗುತ್ತದೆ ಎಂದು ಹೇಳಿದಿರಿ. ರಾಜ್ಯಾಂಗವನ್ನು ತಿದ್ದುಪಡಿ ಮಾಡುವುದರಿಂದ ಆಗತಕ್ಕ ತೊಂದರೆ ಏನು?

ಶ್ರೀ ಎಸ್ ನಿಜಲಿಂಗಪ್ಪ.—ನಮ್ಮ ಅಭಿಪ್ರಾಯದಲ್ಲಿ ರಾಜ್ಯಾಂಗವನ್ನು ತಿದ್ದುಪಡಿ ಮಾಡುವುದು ಅನಾವಶ್ಯಕ, ಅಫಿಷಿಯಲ್ ಲ್ಯಾಂಗ್ವೇಜ್ ಆಕ್ಟನ್ನು ತಿದ್ದುಪಡಿ ಮಾಡಿದರೆ ಸಾಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದರಿಂದ ಆಗತಕ್ಕ ತೊಂದರೆ ಏನು?

ಶ್ರೀ ಎಸ್. ನಿಜಲಿಂಗಪ್ಪ.—ರಾಜ್ಯಾಂಗವನ್ನು ಸಾಧಾರಣವಾಗಿ ಬದಲಾವಣೆ ಮಾಡುವುದು ಸರಿಯಲ್ಲ ಮತ್ತು ಅದರ ಅವಶ್ಯಕತೆಯೂ ಕಾಣುವುದಿಲ್ಲ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಅಫಿಷಿಯಲ್ ಲ್ಯಾಂಗ್ವೇಜ್ ಇಂಗ್ಲೀಷ್ ಈಗ ಇರುವುದರಿಂದ ಅದೇ ಇರಬೇಕು, ಕನ್ನಡ ಆಗುವುದಕ್ಕೆ ಸಾಧ್ಯವಿಲ್ಲ ಎಂದು ಕೆಲವರು ಮತ್ತು ಕನ್ನಡದ ಜೊತೆಗೆ ಹಿಂದಿಯನ್ನು ಅಫೀಷಿಯಲ್ ಲ್ಯಾಂಗ್ವೇಜ್ ಆಗ ಮಾಡಿದರೆ ನಮ್ಮ ರಾಜ್ಯಕ್ಕೆ ಹೆಚ್ಚು ಲಾಭದಾಯವಾಗುತ್ತದೆ ಎಂದು ಕೆಲವರು ಹೇಳುತ್ತಾರೆ ಅಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಎರಡು ಅಭಿಪ್ರಾಯಗಳೂ ಉಂಟು. ಸ್ವಲ್ಪ ವಯಸ್ಸಾಗಿ ರಿಟೈರ್ ಆಗಿರತಕ್ಕವರು ಇಂಗ್ಲೀಷೇ ಆಫಿಷಿಯಲ್ ಲ್ಯಾಂಗ್ವೇಜ್ ಆಗಿರಬೇಕೆಂದು ಹೇಳುತ್ತಾರೆ. ಮಧ್ಯಮ ವಯಸ್ಕರು ಎರಡೂ ಇರಬೇಕು ಎಂದು ಹೇಳುತ್ತಾರೆ. ಈಗಿನ ಹುಡುಗರು ಹಿಂದಿ ಅಲ್ಲದೆ ಕನ್ನಡ, ಇಂಗ್ಲೀಷ್ ಎರಡೂ ಇರಬೇಕೆಂದು ಹೇಳುತ್ತಾರೆ.

ಶ್ರೀ ಬಿ. ಚನ್ನಬೈರೇಗೌಡ —ಇತ್ತೀಚೆಗೆ ದಕ್ಷಿಣ ಭಾರತದಲ್ಲಿ ನಡೆದ ಹಿಂದೀ ವಿರುದ್ಧ ಚಳುವಳಿಯನ್ನು ಗಮನದಲ್ಲಿ ಇಟ್ಟುಕೊಂಡು ನಮ್ಮ ಮೇಲೆ ಹಿಂದಿಯನ್ನು ಹೊರಿಸುವುದಿಲ್ಲ ಎಂಬ ಭರವಸೆಯನ್ನು ಕೊಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ನಮ್ಮಲ್ಲಿ ಹಿಂದಿಗೆ ವಿರೋಧವೇ ಕಾಣಲಿಲ್ಲ. ಎಲ್ಲೋ ಅಲ್ಪ ಸ್ವಲ್ಪ ವಿರೋಧ ಇದ್ದರೂ ಇರಬಹುದು. ಅದಕ್ಕಾಗಿ ಆಶ್ವಾಸನೆ ಕೊಡಬೇಕಾಗಿಲ್ಲ. ಎಷ್ಟೋ ವರ್ಷಗಳಿಂದ ಅದನ್ನು ಒಪ್ಪಿಕೊಂಡು ಬಂದಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರಾಜ್ಯಾಂಗವನ್ನು ತಿದ್ದುಪಡಿ ಮಾಡಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳಿದಿರಿ, ಹಿಂದಿ ಮತ್ತು ಹಿಂದಿಯೇತರ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಸೇರಿ ಈ ವಿಷಯದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಲ್ಲಾ ಆ ವಿಷಯದಲ್ಲಿ ಏನು ಮಾಡಿದ್ದೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಏನು ಬದಲಾವಣೆ ಮಾಡಿದರೂ ಕೂಡ ನಮ್ಮನ್ನು ಕೇಳಿಯೇ ಮಾಡುತ್ತಾರೆ. ಯಾವುದನ್ನೂ ನಮ್ಮ ಅಭಿಪ್ರಾಯ ಕೇಳದೇ ಮಾಡಲಾರರು ಎಂಬುದೇ ನಮ್ಮ ನಂಬಿಕೆ, ವಿಶ್ವಾಸ.

ಶ್ರೀ ಎಸ್. ಎಂ. ಕೃಷ್ಣ.—ಸುಮಾರು 103 ಜನ ಸದಸ್ಯರು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಅಧಿಕೃತಭಾಷಾ ಮಸೂದೆಗೆ ಯಾವ ತಿದ್ದುಪಡಿಯನ್ನೂ ತರಬಾರದೆಂದು ಮನವಿ ಮಾಡಿದ ಮೇಲೆ ತಿದ್ದುಪಡಿ ಮಾಡುವ ವಿಚಾರವನ್ನು ಅವರು ತಳ್ಳಿಹಾಕುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಮನವಿ ಸಲ್ಲಿಸಿದ ಮಾತ್ರಕ್ಕೇ ತಳ್ಳಿಹಾಕುವ ಉದ್ದೇಶ ಅವರಿಗೆ ಇದೆಯೆಂದು ನನಗನ್ನಿಸುವುದಿಲ್ಲ.

Mr. SPEAKER.—Questions 520, 521, 680 and 681 are allied Questions I will put all the questions. All the four questions are open for supplementaries.

Ghataprabha Left Bank Canal.

*Q.—520. Sri R. M. DESAI (Bilgi).—

Will the Government be pleased to state :—

(a) when the Ghataprabha Left Bank Canal was started ;

(b) how many stages does the Ghataprabha Valley Development Project consist ;

(c) when the I stage was started ;

(d) whether it is a fact that the then Government of Bombay started the Ghataprabha Left Bank Canal in the I stage as a protection Irrigation Scheme ?

A.—Sri S. NIJALINGAPPA (Chief Minister).—

(a) 24th June 1949.

(b) 3 stages.

(c) *Vide* reply to clause (a) above.

(d) Yes.

Ghataprabha Left Bank Canal.

*Q.—521. Sri R. M. DESAI (Bilgi).—

Will the Government be pleased to state :—

(a) whether the Ghataprabha Left Bank Canal as it now stands is a Kharif Canal ;

(b) on what dates the water is made available in the Ghataprabha Left Bank Canal area ;

(c) whether the water in the Ghataprabha Left Bank Canal is to be used for the crops already swon on rain-fed areas ;

(d) whether they are awre that the Kharif seasonal sowing in the Ghataprabha Project area starts from 15th of May to 1st of June ?

A.—Sri S. NIJALINGAPPA (Chief Minister).—

(a) Yes.

(b) Normally water is allowed from 15th June every year subject to the availability of water in the Dhupdal Weir. However, if sufficient quantity of water is available in the Dhupdal lake water is allowed even before 15th June.

(c) Yes. If the crops have been sown prior to letting out water and if rains are favourable. In other cases sowing is done on canal water.

(d) If rains are favourable sowing is done from 15th May to 7th June. Otherwise sowing has to be done by using canal water.

Notification regarding benefited area of Ghataprabha Left Bank Canal area.

*Q.—680. Sri N. K. NAIK (Mudhol).—

Will the Government be pleased to state :—

(a) whether it is a fact that the notification issued by the concerned officer in Ghataprabha Left Bank Canal area regarding the benefited area is on the topographical estimates and not on actuals of the irrigable area ;

(b) whether they are aware that the lands which are submersible by floods of the Ghataprabha river and the lands that are in the higher notified nallas and the lands in the higher ridge than the distributing canal are also declared as benefited by the said officer ;

(c) if so, whether they would withdraw the said notification and appoint a Special Survey Officer or survey party to assess the actual area that may benefited area ?

A.—Sri S. NIJALINGAPPA (Chief Minister).—

(a) No. The notification is based on the actual irrigable areas.

(b) No.

(c) Does not arise in view reply to clause (b) above.

Gross Command Area of the Ghataprabha Left Bank Canal.

*Q.—681. Sri N. K. NAIK (Mudhol).—

Will the Government be pleased to state :—

(a) what is the gross command area in Stage No. I and Stage No. II of the Ghataprabha Left Bank Canal ;

(b) whether it is a fact that the Government estimated the actual irrigable area as 48 per cent of the gross command ;

(c) how much of the irrigable land is Khariff and how much is Rabi ;

(d) the total acreage in the irrigable command declared as alkaline and unsuitable for irrigation ;

(e) whether it is a fact that the area coming under Khariff, Rabi and also lands unsuitable for irrigation are also levied the betterment levy even though the lands are not likely to be irrigated by Khariff canals like the Ghataprabha Left Bank Canal ?

A.—Sri S. NIJALINGAPPA (Chief Minister).—

(*a*) 1st Stage 2·58 lakh acres.
2nd Stage 1·88 lakh acres.

(*b*) No.

(*c*)

Khariff	45·3%
Rabi	41·8%
Paddy (Khariff)	5.1%
Perennials	2.7%
Hot wearther	5.1%
	100.00

(*d*) Nil. As the development of irrigation under the Ghataprabha Left Bank Canal is in the initial stages and salinity and water logging has not yet been a problem.

(*e*) Areas coming under Khariff and Rabi are notified under the Betterment Levy Act. Lands unsuitable for irrigation have been excluded. Even though a part of the command in deep soil areas is not likely to be irrigated by the Khariff canals like Ghataprabha Left Bank Canal till the storage is available, it is possible to provide such lands with one or two waterings in the early Rabi period.

Sri R. M. DESAI.—It has been stated that the work has been taken up in three stage. If even the first stage is not completed, is it to be admitted that the whole project is not completed ?

Sri S. NIJALINGAPPA.—The project is going to be taken up and worked very vigorously.

Sri R. M. DESAI.—Does it mean it is not yet complete ?

Sri S. NIJALINGAPPA.—Of course it is not complete.

Sri R. M. DESAI.—It has been stated in clause (d) that it is a protection irrigation scheme. That means it is a matter of relief work to scarcity areas and which does not give permanent benefit to the cultivators.

Sri S. NIJALINGAPPA.—With out relief, how can they get the benefit. It is for the purposes of giving permanent relief that the entire work has been undertaken.

ಶ್ರೀ ಎಸ್. ಎಂ. ಗುರೆಡ್ಡಿ.—49ನೆಯ ಇಸವಿಯಲ್ಲಿ ಪ್ರಾರಂಭವಾದ ಈ ಕೆಲಸ 16 ವರ್ಷಗಳಾದರೂ ಇನ್ನೂ ಮುಗಿಸಿಲ್ಲದಿರುವುದಕ್ಕೆ ಇರುವ ತೊಂದರೆಯೇನು ?

ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆಯನ್ನು ಬೊಂಬಾಯಿ ಸರಕಾರದಲ್ಲಿ ಕೇಳಬೇಕು. ನಾವು ಇದಕ್ಕೆ ಉತ್ತರ ಹೇಳುವುದಕ್ಕಾಗುವುದಿಲ್ಲ. ನಮ್ಮ ಸರಕಾರ ಬಂದಮೇಲೆ ಸೂಕ್ತ ಕ್ರಮ ತೆಗೆದುಕೊಂಡಿದೆ. ಹಿಂದೆ ಮಹಾರಾಷ್ಟ್ರಕ್ಕೇ ಈ ಕೆಲಸ ಸೇರಿದ್ದಾಗ 2 ಕೆರೆ ಕಟ್ಟಬೇಕೆಂದಿದ್ದರು. ಅವನ್ನು ಕಟ್ಟಿದರೆ ಮಹಾರಾಷ್ಟ್ರದ ಪ್ರದೇಶ ಮುಳುಗಡೆಯಾಗುವುದೆಂದು ಆ ಕೆಲಸ ಕೈಬಿಟ್ಟರು. ನಂತರ ಬೇರೆ ಪ್ರದೇಶದಲ್ಲಿ ಕಟ್ಟಬೇಕೆಂದು ತೀರ್ಮಾನಮಾಡಿದರು. ಅದಕ್ಕಾಗಿ ಸ್ವಲ್ಪ ನಿಧಾನವಾಯಿತು.

Sri R. M. DESAI.—Has it come to the notice of the Government that even in the first stage work, much of the land cannot be irrigated on account of the incomplete canals on the part of the Government and the Department ?

Sri S. NIJALINGAPPA.—It is true that something still remains to be done, but quite a large area has been brought under irrigation.

ಶ್ರೀ ಎಸ್ ಎಂ. ಗುರೆಡ್ಡಿ.—ಇನ್ನೂ ನೀರು ಕೆಲವರಿಗೆ ಕೊಡದಿರುವುದರಿಂದ ಬೆಟರ್‌ಮೆಂಟ್ ಲೆವಿ, ಸೆಸ್ಸು ಮುಂತಾದ್ದನ್ನು ಹಾಕುವುದರಿಂದ ರೈತರಿಗೆ ತೊಂದರೆಯಾಗಿದೆಯೆಂದು ಜನರು ತಿಳಿಸಿದ್ದಾರೇ ?

ಶ್ರೀ ಎಸ್. ನಿಜಲಿಂಗಪ್ಪ.—ಬೆಟರ್‌ಮೆಂಟ್ ಲೆವಿ, ಕಂದಾಯ ಮುಂತಾದನ್ನು ಜಾಸ್ತಿ ಕೊಡಬೇಕೆಂದು ಹೇಳುವಾಗ ಯೋಜನೆಯಿಂದ ಲಾಭ ಪಡೆದವರೂ ಸಹ ತಮಗೆ ತೊಂದರೆಯಾಗಿದೆ ಎಂದು ಹೇಳುವುದು ವಾಡಿಕೆ. ಎಲ್ಲಿ ನೀರು ಬರುವುದಿಲ್ಲವೋ ಅಂಥ ಸ್ಥಳಗಳವರಿಂದ ವಸೂಲು ಮಾಡಬೇಕೆಂಬ ಕಡ್ಡಾಯವಿಲ್ಲ. ನೀರು ಬರುವ ಕಡೆ ಮಾತ್ರ ಕೊಡಬೇಕಾಗುತ್ತದೆ. ನೀರು ಕೊಡುವುದು ತಡವಾಗ ಅನೇಕರು ತಾವು ಹೆಚ್ಚು ಕಂದಾಯ ವಗೈರೆ ಕೊಡಲು ತಾವು ಸಿದ್ಧವಾಗಿರುವುದಾಗಿ ಹೇಳಿದ್ದಾರೆ.

Sri R. M. DESAI.—In question 521, for the first clause, Government have been kind enough to say that it is the Kharif irrigation project for the present. Will the Government exclude the remainig area and the Rabi area where the Government is not in a position to give timely water within the season ?

Sri S. NIJALINGAPPA.—It cannot be excluded except that we are trying to give them water in time. If there is sufficient impounding of water, we are willing to give water. It depends on the rainfall.

Sri R. M. DESAI. Till the head works are completed, will Government eliminate all rabi area ?

Sri S. NIJALINGAPPA.—There is no question of elimination. I will have it examined.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಿರುವ ಶಾಸನದ ಪ್ರಕಾರ ಅಚ್ಚುಕಟ್ಟುದಾರರ ಪೈಕಿ ಖಾಸಗಿ ಸದಸ್ಯರ ಒಂದು ಸಮಿತಿಮಾಡಿ ಯಾವ ಕಾಲದಲ್ಲಿ ಯಾವ ಬೆಳೆ ಇಡಬೇಕು, ನೀರು ಯಾವಾಗ ಕೊಡಬೇಕು ಎಂದು ತೀರ್ಮಾನಿಸಿ ಅದರಂತೆ ಮಾಡಲು ಪ್ರಯತ್ನಮಾಡಲು ಸಾಧ್ಯವೇ ?

ಶ್ರೀ ಎಸ್. ನಿಜಲಿಂಗಪ್ಪ.—ತಾವು ಕೇಳುವುದು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ. ಆದರೂ ಒಂದು ಬೋರ್ಡ್ ಈಗಿದೆ, ಅದನ್ನು ಕೇಳಿಯೇ ಎಲ್ಲವನ್ನು ಮಾಡುತ್ತಿದ್ದಾರೆ.

Mr. SPEAKER.—Question No. 445 Sri Vidyadhar Guruji is not here. I will put it also. Hon'ble Minister for Social Welfare will reply.

Sanction of increments to the Organisers of the Women Welfare Centres of Gulbarga District.

*Q.—445. Sri VIDYADHAR GURUJI (Gurumitkal).—

Will the Government be pleased to state :—

(a) whether increments are being sanctioned regularly to all the Organisers of the Women Welfare Centres in Gulbarga District ;

(b) if not, the reasons for the same ?

A.—Smt. YASHODARA DASAPPA (Minister for Social Welfare).—

(a) Yes, with the exception of few cases.

(b) Increments to certain officials could not be sanctioned due to the following reasons:

(a) Non-fixation of pay in the revised scales of pay;
(b) Non-discharge of duties properly;
(c) Availment of leave without competent sanction;
(d) Maternity leave;
(e) Being under suspension from service;
(f) Incomplete Service Registers.

(Nobody stood up to put supplementaries.)

MR. SPEAKER.—No supplementaries? Whoever wanted me to put the Question if there are no supplementaries? Question hour is over.

OBSERVATIONS OF THE SPEAKER *Re*: THE WALKOUT BY SOME MEMBERS AGAINST THE DECISION OF THE CHAIR AND ALSO *Re*: THE SCOPE OF THE APPROPRIATION BILL.

MR. SPEAKER.—Before I proceed with the other work, I wish to deal with one or two matters. On the 27th, when I was away from here, certain things happened. I perused the proceedings. There appears to be a colossal confusion, I cannot put a better word, with regard to the resolution moved by the Hon'ble Minister for Home, and accepted by the House and referred to the committee. And there is also a slight confusion with regard to the motion for adjournment for discussion of certain urgent public affairs, which had been disallowed. When once the motion is disallowed, how far it could be a subject matter of protest, discussion and all sorts of things that happend on the 27th instant, has to be considered I will first deal with the grievances mentioned about the committee that has been constituted. I find Sri Sivappa mentioning that under what rule this committee was constituted and if that can be done under no rule, why should not his Adjournment Motion, disallowed by the Speaker, be permitted to be raised before the House. I find a series of members trying to support it. I find one particular member Mr. C. J. Muckannappa referring to the Adjournment Motion saying—"Sir, two days back the Hon'ble Speaker permited the Leader of the Opposition to intervene in the Debate on Miscellaneous Demands, and raise this issue, though it was not a proper occasion". I do not know why the member feels that it was not a proper occasion.

SRI C. J. MUCKANNAPPA (Sira).—That was the objection raised by the other members and that was why I repeated it.

MR. SPEAKER.—It looks as if the member has said this as his opinion. Why does he commit such mistakes? When I read it, I could not make out and I wanted to clarify his mind. Now it is allright. In the course of the Debate on the Budget, every latitude is given as far as possible. On the particular day, one of the Demands was 'Miscellaneous'. Government's conduct on any subject could be

(MR. SPEAKER)

brought under the head 'Miscellaneous'. And, when the Leader of the Opposition met me mentioning that he was going to move an Adjournment Motion, I told him: "I do not know how far it can be brought under the head of Adjournment Motion; anyhow, this Debate is going on and it is not for me to suggest. I am only throwing out an idea; Members need not take it as a request from me. But, I am mentioning this because I have to guide them as far as possible." So, he did introduce an Adjournment Motion and it was disallowed. Even if he had not asked me, the Adjournment Motion would have been disallowed. What is the subject matter covering it? It is of supreme importance, no doubt. But, how is it to be brought out before the House? There are certain principles to bring the Adjournment Motion before the House.

Speaker Mavlankar has laid down the test of urgency in the following words:

2-00 P.M.

"The test of urgency visualised in respect of adjournment motions is being expressed in the old dictum of Mr. Speaker Peel in the House of Commons. He said: 'What I think was contemplated was the occurrence of some sudden emergency, either in home or foreign affairs.' The crucial test always is as to whether the question proposed to be raised has arisen suddenly and created an emergent situation of such a character that there is a *prima facie* case of urgency and the House must therefore leave aside all other business and take up the consideration of the urgent matter at the appointed hour. The urgency must be of such a character that the matter really brooks no delay and should be discussed on the same day that notice has been given."

If some citizen of the State has commited suicide under most distressing circumstances, can it be that the debate on Budget should be suspended and Budget can be done after the 31st of March and this matter could not wait till the Budget is over or is it of such general importance that the Speaker is not right in not admitting it? I will refer to one or two matters. In the following rulings the matter on which adjournment motions were based were not held to be of public importance:

Motion to discuss the Delhi Tongawalas Strike to protest against the alleged failure of the Government to supply gram to them was disallowed as the matter was not 'of such importance as to warrant an adjournment of the House'.

Motion to discuss the prohibition of cane-crushing by the use of kolhus in certain of the Uttar Pradesh. Consent was refused as the matter was 'not of an all India importance or even urgency.'

Two motions to discuss the situation arising out of rioting near Civil Court and the tension in City of Delhi respectively were disallowed

on the ground 'the subject of the motion is not an abnormal one but a normal incident in the life of the country which is so vast and so wide.'

There are various other motions which have been disallowed. Mavlankar has explained how importance is judged.

"The only question, to my mind, is as to whether such rioting or tension as is stated to have taken place is a fit subject, looking at the background and the nature of the business before the House, to take notice of in the form of an adjournment motion. I am not therefore inclined to treat this as a matter of public importance from that point of view. Of course the matter of importance is always a relative question and we have to look at the importance of an incident like that in the background of the entire administration of the country. I am not inclined to give my consent to this motion on this sole ground.
I am making the position very clear. Whatever that is said here is not only said here but is carried to other places. It looks as if that a suicide due to recalcitrant conduct of one of the servants of the Government was not permitted to be discussed in the house is a thing which a lay man may not primarily understand. Members must be aware of the intricacies of the rules and they do know and if they do not know, they must aquaint themselves with the rules. Therefore, suicide however grave, however tragic it may be, it cannot be allowed in the form of an adjournment motion.

Now, the question is as to whether the tragic incident is one which would have compelled the Speaker to say: 'let all other business be pushed aside'. Suppose, the Speaker disallows; what will happen? Is it what happened on the 27th? I have read the whole thing and all the remarks of Hon'ble Members. Are they to make these remarks at a time when I am not here? Of course, it is not the fault of Member if I am not here. I have suggested that there was the Demand "Miscellaneous" and Sri Sivappa took that occasion and I am aware that the Government has not replied.

ಶ್ರೀ ಜಿ. ಮರುಳಪ್ಪ (ಕಡೂರು).—ಏನು ತೀರ್ಮಾನ ಕೊಡುತ್ತೀರೋ ಎನ್ನುವ ಭಯ ಸ್ವಾಮಿ.

ಅಧ್ಯಕ್ಷರು.—ಆ ತರಹ ಭಯಕ್ಕೆ ಕಾರಣವಿಲ್ಲ. ಕಾಡಿನಲ್ಲಿ ಹುಲಿ ಇದೆ ಎಂದು ಇಲ್ಲಿ ಗುಡುಗಿದರೆ ಏನು ಮಾಡುವುದು ! ನಿಮಗೂ ಹುಲಿಗೂ ಬಹಳ ದೂರವಿದೆ.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು).—26 ನೇ ತಾರೀಖಿಗೆ ಮುಂಚೆ ಆ ಭಯವಿರಲಿಲ್ಲ.

ಅಧ್ಯಕ್ಷರು.—ಅವರವರ ಮನೋಭಾವದ ಪ್ರಕಾರ ಇರುತ್ತದೆ. ಅದಕ್ಕೆ ಏನು ಮಾಡಲಿಕ್ಕೆ ಬರುತ್ತದೆ? ಆ ಮನೋಭಾವಕ್ಕೆ ಬೇಕಾದ ಮದ್ದು ಅವರವರೇ ತೆಗೆದುಕೊಳ್ಳಬೇಕು. ನಿಮಗೆ ಏನಾದರೂ ಸಂಶಯ ಇದ್ದರೆ ಸಮಾಧಾನ ಹೇಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ಸಮಾಧಾನ ವಾದರೆ ಸಮಾಧಾನಪಟ್ಟುಕೊಳ್ಳಿ, ಇಲ್ಲದೆ ಹೋದರೆ ನಾನು ಏನು ಮಾಡಲಿಕ್ಕೆ ಆಗುತ್ತದೆ. ?

Then, remarks have been made here that the previous resolution was allowed and under what rules are they to bring this and how they should bring it should be told. Is that argument? It only shows that the Members have not seen the necessary Rules, Procedures and Rulings. They raised all this when the Deputy Speaker was presiding as if he had come prepared to answer all these questions.

(Mr. Speaker)

Now, I will deal with the other question, *i. e.*, the introduction of a Reslution moved by the Home Minister. It was mentioned on that day itself, under what rule it was brought? I have dealt with it. The minds still persist to think that there are no rules and something wrong has been done. Are the public to entertain that idea? And to what purpose? I will refer Hon'ble Members to Rule 135 "Form of the Resolution". What is a resolution or a motion? 'Motion' means any matter which is to be brought before the House for deliberation and discussion. This is May's Parliamentary Practice, latest Edition on page 393.

> "The term 'motion' which in its wide sense means any proposal made for the purpose of eliciting a decision of the House, covers several disctinct forms of proceeding."

Can anybody say that this is not a matter which is not to be considered by the House or not on the ground of jurisdiction. The rules for admissibility are enunciated in the Rules of Procedure. These rules do not preclude me from allowing it. Even then it was said "where are the rules? Please read rule 325 :

> "All matters not specifically provided for in these rules and all questions relating to the detailed working of these rules shall be regulated in such manner as the Speaker may from time to time direct."

Still Members say that there are no rules!

Sri C. J. MUCKANNAPPA.—Sir, he has to make a request to the Speaker to suspend the rules and the Speaker has to permit him to raise the issue.

Mr. SPEAKER.—Which is the rule? If a rule is to be suspended on a request, there must be a positive rule. If there are no rules, where is the scope suspension?

Sri C. J. MUCKANNAPPA.—That is what I wanted to know from the Hon'ble Speaker. You were pleased to observe that it was absurd and that is why we kept quiet. We thought that absurdity might be on our part and we thought it better to think it over. When such a contingency arises what is the procedure to be followed? Either the Speaker has to take the law into his own hands or there must be some rule.

Mr. SPEAKER.—I suppose the Hon'ble Member is satisfied that the Resolution is one which is within the purview of the House to debate. Then, comes the question whether there is any rule? Confusion was made by saying that it is a privilege motion and therefore it should have been brought under a particular rule. To some extent, perhaps, that argument was supported by the nothing on the agenda paper, but I made the position clear much earlier than that. Whether it is contempt, gross disorderly conduct on the part of a member — all these things are to be

considered. All these things may not come within the purview of a Privilege Committee and therefore they cannot go to a Privilege Committee. Therefore, a special committee was suggested to be constituted. Therefore, there is nothing that is wrong. If there is a positive rule, follow it; it is binding on the House and on me till it is changed. The Hon'ble Member says that I am invoking the power under the residuary rule.

Sri G. V. GOWDA (Palya).—We did not know under what rule the Home Minister moved the motion.

Mr. SPEAKER.—It is no fault of his. Please refer to rule 135.

Sri G. V. GOWDA.—Rule 135 applies to the acts of commission and omission by Government.

Mr. SPEAKER.—If the member continues to think like that, he is at liberty to do so. The Hon'ble Member is thinking that only the conduct of Government can be brought under Resolutions.

Sri G. V. GOWDA.—That is specifically mentioned in rule 135. It is not the act or policy of Government which is now sought to be condemned.

Mr. SPEAKER.—Chapters XV and XVI deal with Resolutions and Motions and I request the Member to kindly read them and then come to me and I am prepared to give one day for discussion on any day that suits the Members. I do not want the Members to say that it has been done in a most high-handed manner.

Sri C. J. MUCKANNAPPA.—Regarding the adjournment motion, your predecessor has permitted this House...... ...

Mr. SPEAKER.—I counsel patience. I am doing this so that Members may exercise their rights to the fullest extent possible. To-day the Appropriation Bill will come up before the House and it may be possible to bring that matter under the Appropriation Bill. I am prepared to allow some time because there was no reply to that from the Government.

Sri G. V. GOWDA.—It may be possibly to bring it under the Appropriation Bill, but what was canvassed was something different. You rightly pointed out, Sir, that all kinds of suicides cannot warrant a discussion here, but the circumstances under which a particular suicide was committed is a matter of importance.

Sri C. J. MUCKANNAPPA.—Your predecessor was pleased to allow one full day for the discussion of Muniamma's case. At that time, a point was raised by the then Member Sri K. Hanumanthiah that it would amount to *sub judice*. Then, the Advocate General was summoned to ascertain whether it would amount to *sub judice*. The circumstances under which this suicide was committe has forced Sri S. Sivappa to table an adjournment motion. You yourself who was then the Law Minister took about an hour on that matter.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಈ ರೂಲಿಗೆ ತಿದ್ದುಪಡಿಯನ್ನು ತರಬೇಕೆಂದು ನಾವು ಪ್ರಯತ್ನಪಟ್ಟೆವು. ಆದರೆ ಎಲ್ಲಾ ಪವರ್ಸ್ ತಮ್ಮ ಕೈಲೇ ಇದೆ. ಈಗ ಆಗಿರತಕ್ಕ ಅನ್ಯಾಯವನ್ನು ಮನಸ್ಸಿಗೆ ತಂದುಕೊಂಡರೆ ಬಹಳ ನೋವಾಗುತ್ತದೆ. ಮುಖ್ಯವಾಗಿ ದೇಶಕ್ಕೆ ಒಳ್ಳೆಯದಾಗಲಿ ಎಂಬುದೇ ನಮ್ಮ ಉದ್ದೇಶ.

Mr. SPEAKER.—Order, order. I am not allowing.

ಶ್ರೀ ಕೆ. ಲಕ್ಕಪ್ಪ.—ವಿವರಣೆಯನ್ನು ಸರ್ಕಾರದವರು ಕೊಡುತ್ತಾರೆಂದು ತಾವು ಹೇಳಿದ್ದೀರಿ: ತಮಗೂ ಶ್ರೀಮಾನ್ ಚನ್ನಯ್ಯನವರು ಒಂದು ಕಾಗದವನ್ನು ಬರೆದಿದ್ದಾರೆ. ಅದಕ್ಕೋಸ್ಕರ ನನಗೆ ತಾವು ಮಾತನಾಡಲು ಅಪ್ಪಣೆ ಕೊಡಬೇಕು.

Mr. SPEAKER.—I am not giving permission.

ಶ್ರೀ ಕೆ. ಲಕ್ಕಪ್ಪ.- ನನಗೆ ಆ ವಿಷಯದಲ್ಲಿ ಸ್ವಲ್ಪ ವಿವರಣೆ ಕೊಡಲು ತಾವು ದಯವಿಟ್ಟು ಅಪ್ಪಣೆ ಕೊಡಬೇಕು.

Mr. SPEAKER.—Order, order. I really do not understand. When I say 'Order, order' thrice, still the member go on talking, thinking that I will keep quiet. This is a very bad habet. I won't tole. Rate it on the part of anybody. You want to say that the copy of a communication said to have been addressed to others... ..but is that the way to do so ?

ಶ್ರೀ ಕೆ. ಲಕ್ಕಪ್ಪ.—ನಾನು ಕೇಳುತ್ತಿರುವುದು ಅಪ್ಪಣೆ ಕೊಡಿ ಎಂದು,,......

Mr. SPEAKER.—I am not giving this Hon'ble Member permission. The Hon'ble Member Sri Muckannappa says that there is a precedent and that this is not a new thing. Before considering the precedent, each set of fact has to be judged.

Sri C. J. MUCKANNAPPA.—I tried my best to bring it to your notice before you concluded.

Mr. SPEAKER.—Now, the member has got a chance to say what he want. I do not know whether at that time the circumstances were similar and whether there was the Budget Debate going on and whether it could have been brought under that Debate and so on.

Sri C. J. MUCKANNAPPA.—Budget debate was not going on at that time.

Mr. SPEAKER.—That makes all the difference in allowing the motion. Whether there was chance to debate or not and whether there was a possibility of raising the matter or not, was one of the primary considerations.

Sri S. M. KRISHNA (Maddur).—You want the Appropriation Bill to be passed in 10 or 20 minutes and you say that it can be discussed in the debate on the Appropriation Bill. How is it possible to discuss this in 15 or 20 minutes ?

Mr. SPEAKER.—If members do not want this opportunity, I am not particular. I go to the next item on the agenda. I have got the recommendation of the Governor with regard to the Appropriation Bill. Let no member think that there is no recommendation from the Governor.

MYSORE APPROPRIATION (No. 4) BILL, 1965—INTRODUCTION.

Motion to introduce.

Sri B. D. JATTI (Minister for Finance).—I beg to introduce the Mysore Appropriation (No. 4) Bill, 1965.

Mr. SPEAKER.—The Mysore Appropriation (No. 4) Bill, 1965, is introduced.

Motion to consider.

Sri B. D. JATTI.—I beg to move :

"That the Mysore Appropriation (No. 4) Bill, 1965, be taken into consideration."

Mr. SPEAKER.—Motion moved :

"That the Mysore Appropriation (No. 4) Bill, 1965, be taken into consideration."

Sri B. D. JATTI.—Sir, there was general discussion and reply and all the demands have been discussed and passed and so I do not wish to offer any remarks now.

(Several members rose to speak).

Mr. SPEAKER.—If every one wants to speak, how is it possible ? I will give half an hour and they can distribute amongst themselves as they like.

ಶ್ರೀ ಕೆ. ಲಕ್ಕಪ್ಪ.—ಅರ್ಧಗಂಟೆ ಕೊಟ್ಟರೆ ಆಗುವುದಿಲ್ಲ ಸ್ವಾಮಿ.

Mr. SPEAKER.—The Hon'ble member is entitled to entertain any opinion he likes, but he cannot say in the House. "ಆಗುವುದಿಲ್ಲ".

ಶ್ರೀ ಕೆ. ಲಕ್ಕಪ್ಪ.—ಈ ಅಪ್ರೋಪ್ರಿಯೇಷನ್ ಬಿಲ್ಲಿನ ಮೇಲೆ ಮಾತನಾಡುವುದಕ್ಕೆ ಅರ್ಧಗಂಟೆ ಮಾತ್ರ ಕಾಲಾವಕಾಶವನ್ನು ಕೊಟ್ಟು ಅಷ್ಟರೊಳಗೆ ಈ ಚರ್ಚೆಯನ್ನು ಮುಗಿಸಬೇಕು ಎಂದರೆ ಹೇಗೆ ? ನಾಗ್ಗೇಹಳ್ಳಿಯ ಪ್ರಕರಣದ ವಿಷಯದಲ್ಲಿಯೇ ಒಂದು ಗಂಟೆ ಹೇಳುವುದು ಇದೆ.

Sri C. J. Muckannappa rose to speak.

Mr. SPEAKER.—Order, order.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಈ ಬಿಲ್ಲಿನ ಮೇಲೆ ಮಾತನಾಡುವವರು ಬಹಳ ಜನ ಇದ್ದಾರೆ. ಈಗ ತಾವು ಕೊಟ್ಟಿರತಕ್ಕ ಕಾಲಾವಕಾಶ ಸಾಕಾಗುವುದಿಲ್ಲ.

Mr. SPEAKER.—Order, order.

(Sri K. LAKKAPPA.—then resumed his seat).

Mr. SPEAKER.—When I say, "Order, order," it is for everybody and everybody must observe it.

Now the debate will go on.

Sri K. LAKKAPPA.—Let us know the time that will be allotted for this.

Mr. SPEAKER.—Instead of taking advantage of the opportunity if members spend the time in putting forward demands which are not possible of acceptance, how can I help it ?

I have said several times that if members have to say anything they should come and tell me in my chambers at least 5 minutes in advance. Nobody came to me. In fact, I sent for some members myself.

Sri C. J. MUCKANNAPPA.—I waited outside.

Mr. SPEAKER.— Who prevented the Hon'ble Member Sri C. J. Muckannappa from meeting me ? In fact, they should have

(MR. SPEAKER)

come and settled the matter with me beforehand. Instead of that, the Whips and the Leaders of Groups straightaway come to the Hall here and say that they want this and that, which cannot be accepted. Normally, the time allowed for Appropriation Bill is only 15 to 20 minutes.

Sri SIDDAIAH KASHIMATH Shirahatti).—This is an abnormal situation. The entire Opposition did not participate in some of the Demands.

Mr. SPEAKER.—Who prevented them ?

Sri SIDDAIAH KASHIMATH.—Unfortunately, a situation arose in which we could not participate in the debate.

ಶ್ರೀ ಕೆ. ಲಕ್ಕಪ್ಪ.—ಈ ಸಭೆಯಲ್ಲಿ ಸದಸ್ಯರುಗಳಾದ ನಾವು ಸರ್ಕಾರದ ನೀತಿಯನ್ನು ಪ್ರತಿಭಟಿಸಬೇಕಾಗಿ ಬಂದಾಗ ಅದನ್ನು ಪ್ರತಿಭಟಿಸಲೇಬೇಕು. ಅದು ನಮ್ಮ ಹಕ್ಕುಬಾಧ್ಯತೆ. ಈ ನಮ್ಮ ಹಕ್ಕುಬಾಧ್ಯತೆಗೆ ಒಂದು ಚಿಕ್ಕಟ್ಟನ್ನುಂಟುಮಾಡಲು ಸರ್ಕಾರದವರು ಒಂದು ಪ್ರಿವಿಲೇಜ್ ಮೋಷನ್ನನ್ನು ಸಭೆಯ ಮುಂದೆ ತಂದರು. ಅದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡಿದೆವು ಆಗ ನಾವು ಇಲ್ಲಿ ನಡೆದ ಕಾರ್ಯ ಕಲಾಪಗಳಲ್ಲಿ ಭಾಗವಹಿಸಲು ಅವಕಾಶವಾಗಲಿಲ್ಲ. ಅದಕ್ಕೋಸ್ಕರವಾಗಿ ಈಗ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಅಪ್ರೋಪ್ರಿಯೇಷನ್ ಮಸೂದೆಯ ಮೇಲೆ ನಮಗೆ ಮಾತನಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ಈ ಸಂದರ್ಭದಲ್ಲಿ ತಾವು ನಮಗೆ ಈ ಅಪ್ರೋಪ್ರಿಯೇಷನ್ ಮಸೂದೆಯಮೇಲೆ ಮಾತನಾಡುವುದಕ್ಕೆ ಅರ್ಧಗಂಟೆಯ ಕಾಲಾವಕಾಶವನ್ನು ಕೊಟ್ಟಿರುವುದು ಸಾಕಾಗುವುದಿಲ್ಲ. ಇದನ್ನ ಚರ್ಚೆ ಮಾಡುವುದಕ್ಕೆ ಇಡೀ ದಿವಸವನ್ನೇ ಪೂರ್ತಿಯಾಗಿ ಕೊಡಬೇಕು. ಈ ದೇಶದಲ್ಲಿ ಒಂದು ಗಮನಾರ್ಹವಾದ ಪ್ರಕರಣ ನಡೆದಿರುವ ಬಗ್ಗೆ ನಾವು ಇಲ್ಲಿ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಆ ವಿಷಯದಲ್ಲಿ ತಮಗೂ ಒಂದು ಕಾಗದ ಬಂದಿದೆ. ಆ ಕಾಗದದ ವಿವರಣೆಯನ್ನು ನಾನು ಇಲ್ಲಿ ಕೊಡಬೇಕಾಗಿದೆ ಮತ್ತು ಆ ವಿಷಯದಲ್ಲಿ ಮುಖ್ಯಮಂತ್ರಿಗಳಿಗೂ ಸಹ ಒಂದು ಕಾಗದ ಬಂದಿದೆ. ಮೊನ್ನೆಯ ದಿವಸ ನಾವು ಈ ಸಭೆಯಲ್ಲಿ ಒಂದು ಅಡ್ಜರ್ನ್‌ಮೆಂಟ್ ಮೋಷನ್ ತಂದು ಅದರ ಬಗ್ಗೆ ಚರ್ಚೆಮಾಡುವುದಕ್ಕೆ ಕಾಲಾವಕಾಶವನ್ನು ಕೊಡಬೇಕೆಂದು ಕೇಳಿದಾಗ ಅದಕ್ಕೆ ಅಧ್ಯಕ್ಷರು ಅವಕಾಶವನ್ನು ಕೊಡದೆ ಇದ್ದುದರಿಂದ ವಿರೋಧಪಕ್ಷದ ಸದಸ್ಯರೆಲ್ಲರೂ ಆಗ ಸಭಾತ್ಯಾಗವನ್ನು ಮಾಡಿದೆವು. ಆ ದಿವಸವೇ ಸರ್ಕಾರದವರು ಕೆಲವು ಬೇಡಿಕೆಗಳನ್ನು ವೋಟಿಗೆ ಹಾಕಿ ಈ ಸಭೆಯಲ್ಲಿ ಅವುಗಳನ್ನು ಪಾಸು ಮಾಡಿದ್ದಾರೆ. ಇಂಗ್ಲೆಂಡಿನ ಪಾರ್ಲಿಯಮೆಂಟಿನಲ್ಲಿ ಕೂಡ ಕೆಲವು ಬೇಡಿಕೆಗಳನ್ನು ಸಭೆಯಲ್ಲಿ ವೋಟಿಗೆ ಹಾಕಿ ಅವುಗಳನ್ನು ಪಾಸು ಮಾಡಿದ ಮೇಲೂ ಮತ್ತೆ ಆ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಅವಕಾಶವಿದೆ.

Mr. SPEAKER —Let him not make all that statement. Let him point out the authority, chapter and verse in support of his statement.

ಶ್ರೀ ಕೆ. ಲಕ್ಕಪ್ಪ.—ಆ ಬಗ್ಗೆ ನಾನು ಹೇಳುತ್ತೇನೆ. ಈಗ ಸರ್ಕಾರದವರು ಮಾಡತಕ್ಕ ಅನೇಕ ದುರಾಚಾರಗಳು ಮತ್ತು ಘಟನೆಗಳ ಬಗ್ಗೆ ಕೆಲವು ವಿಚಾರಗಳನ್ನು ಈಗ ನಾವು ಈ ಸಭೆಯಲ್ಲಿ ಹೇಳಬೇಕಾಗಿದೆ. ಆದ್ದರಿಂದ ಇಡೀ ದಿವಸವನ್ನೇ ನಾವು ಆ ಬಗ್ಗೆ ಚರ್ಚೆ ಮಾಡಲು ಅವಕಾಶವನ್ನು ಕೊಡಬೇಕು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

Mr. SPEAKER.—Order, order.

Sri. C. J. MUCKANNAPPA.—May I request the Chair to permit members to take part in the debate for the time that the Chair would like to permit ?

Mr. SPEAKER.—The Hon'ble Member Sri Lakkappa thinks otherwise. What can I do ?

Sri SIDDAIAH KASHIMATH.—We may be allowed to speak up to 4 or 4-30 as this is the only day when we can express our views.

Mr. SPEAKER.—That request should come from every member of the Opposition. On the contrary, every member tries to get up and say what he likes.

Sri K. Lakkappa seems to think that members have got a right to discuss the Demands which have been adopted in their absence and that if members are dissatisfied on account of the recalcitrant and most objectionable attitude of the Government, they have got a right to protest and that protest can be translated into walk-out. They can lodge their protest and walk-out provided every rule is observed. Then the Hon'ble Member said that they have a right to discuss the things which were adopted in their absence. That is a proposition which I cannot possibly concede to unless there is proper authority for it.

Sri H. R. KESHAVAMURTHY (Gandasi).—How is it possible to distribute half an hour amongst so many members?

Mr. SPEAKER.—That is why I said some representative members only should speak. But instead of that some members behave in an unruly manner violating all the rules without realising that they are sacrificing the interests of others who want to follow the rules.

Now it is 2.30 P.M. We will be getting up for Tea for half an hour and reassemble at 3.30 p.m. I will allow one more hour after that. There will be 1½ hours time for this Bill. There will be reply for half an hour. Members will please adjust timings amongst themselves and tell me.

2-30 P.M.

Sri SIDDAIAH KASHIMATH.—Sir, let it be 1½ hours for members and half an hour for the Government.

Sri C. J. MUCKANNAPPA.—Please give me two hours.

Mr. SPEAKER.—There will be half an hour for reply. And 1½ hours for the Debate. Now Sri Siddaiah Kashimat will speak.

(MR. DEPUTY SPEAKER in the Chair)

† ಶ್ರೀ ಸಿದ್ದಯ್ಯ ಕಾಶೀಮಠ್.—ಅಧ್ಯಕ್ಷರೆ, ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ವ್ಯವಸಾಯ ಖಾತೆ ಅಷ್ಟೊಂದು ತೃಪ್ತಿಕರವಾಗಿ ಕೆಲಸ ಮಾಡದೇನೆ, ಇವತ್ತು ಹೆಚ್ಚಿನದಾದ ಆಹಾರ ಬೆಳೆಯುವುದಕ್ಕೆ ಅಷ್ಟು ಆಸ್ಪದ ಸಿಗದಿರುವುದು ಒಂದು ದುಃಖವಾದ ಸಂಗತಿ. ಇದಕ್ಕೆ ಕೆಲವು ಕಾರಣಗಳಿವೆ. ಈ ಡಿಪಾರ್ಟ್‍ಮೆಂಟಿನಲ್ಲಿ ನೀವು ತಿಳಿದ ಹಾಗೆ 200 ಗೆಜೆಟೆಡ್ ಆಫೀಸರು, 500 ನಾನ್ ಗೆಜೆಟೆಡ್ ಆಫೀಸರ ಸ್ಥಾನಗಳನ್ನು 3 ವರ್ಷದಿಂದ ತುಂಬದೆ ಇದ್ದಾರೆಂದು ನನಗೆ ತಿಳಿದು ಬಂದಿದೆ. ಈ ವಿಷಯದಲ್ಲಿ ಹೇಳಬೇಕೆಂದರೆ, ಗೆಜೆಟೆಡ್ ಆಫೀಸರುಗಳ ಜಾಗ ಖಾಲಿ ಬಿದ್ದಾಗೆಲ್ಲಾ ಆ ಜಾಗಕ್ಕೆ ಖಾಯಂ ನೇಮಕ ಮಾಡದೆ, ಸಬ್‍ಸ್ಟಿಟ್ಯೂಟುಗಳು ಅವರ ಜಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಪರಿಣಾಮವೇನೆಂದರೆ, ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿದ ಹಣವನ್ನು ಸಕಾಲದಲ್ಲಿ ಇಲಾಖೆ ವಿನಿಯೋಗಿಸಿಲ್ಲ. ಒದಗಿಸಿದ ಹಣ ಖರ್ಚುಮಾಡದೆ ಇದ್ದುದಕ್ಕೆ ಆಹಾರ ಹೆಚ್ಚು ಉತ್ಪಾದನೆ ಮಾಡುವುದರಲ್ಲಿ ಖಾತೆ ನಿಷ್ಫಲತೆ ಪಡೆದಿದೆ.

ಈಗಾಗಲೇ ವ್ಯವಸಾಯ ಖಾತೆಯಲ್ಲಿ ಸಾಕಷ್ಟು ತಜ್ಞರು ಪರದೇಶಗಳಿಗೆ ಹೋಗಿ ಅವರವರ ಶಾಖೆಯಲ್ಲಿ ತರಪೇತಿ ಹೊಂದಿ, ಪರಿಣತರಾಗಿ ಬಂದಿದ್ದಾರೆ. ಆದರೆ ಅವರು ಯಾವ ಕಾರ್ಯಕ್ಕಾಗಿ ಪರದೇಶಕ್ಕೆ ಹೋಗಿ ಸ್ಟಡಿ ಮಾಡಿಕೊಂಡು ತರಪೇತಿ ಪಡೆದು ಇಲ್ಲಿಗೆ ಬಂದರೊ, ಅದರ ಉಪಯೋಗ ದೇಶಕ್ಕೆ ಸಿಗುತ್ತಿಲ್ಲ, ಏಕೆಂದರೆ ಅವರಿಗೆ ಸರಿಯಾದ ಹುದ್ದೆಯನ್ನು ಅವರಿಗೆ ಕೊಟ್ಟಿಲ್ಲ. ಆದ್ದರಿಂದ ನೌಕರುಬಾರರಲ್ಲಿ ಕಚ್ಚಾಟ, ಸೀನಿಯಾರಿಟಿಗಾಗಿ ಗೊಂದಲ ಇದೆ. ಸಕಾಲದಲ್ಲಿ ಜಾಗಗಳನ್ನು ಭರ್ತಿ ಮಾಡದಿರುವುದಕ್ಕೆ ಇದೊಂದು ದೊಡ್ಡ ಕಾರಣ. ನಾನಾದರೂ ಇವತ್ತು ಸರಕಾರದವರಿಗೆ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಬೇಸಾಯ ಮುಖ್ಯವಾಗಿರುವುದರಿಂದ, ವ್ಯವಸಾಯ ಖಾತೆಗೆ

(ಶ್ರೀ ಸಿದ್ದಯ್ಯ ಕಾಶೀಮಠ್)

ಎಷ್ಟು ಅನ್ವದ ಕೊಡಬೇಕೋ ಅಷ್ಟು ಕೊಡದೇನೆ, ಸರಿಯಾದ ರೀತಿಯಲ್ಲಿ ನೌಕರದಾರರನ್ನು ಹುದ್ದೆಗಳಲ್ಲಿ ನೇಮಿಸದೇನೆ, ಇನ್ನೂ ಹದಗೆಡುವ ಪರಿಸ್ಥಿತಿ ಬಂದಿದೆ. ಮೈಸೂರು ರಾಜ್ಯದಲ್ಲಿ ಯೋಜನೆಗೆ ಅಳವಡಿಸಿದಂಥ ಹಣ ನಿಷ್ಫಲವಾಗುತ್ತಿದೆ. ಈಗಾಗಲೇ ವ್ಯವಸಾಯ ಖಾತೆಯಲ್ಲಿ ಪರದೇಶದಿಂದ ಹಿಂದಿರುಗಿದ ಎಕ್ಸ್‌ಪರ್ಟ್ ಜನರಿದ್ದಾರೆ; ಅವರ ಸೇವೆಯನ್ನು ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೊ, ಅವರಿಗೆ ತರಪೇತಿಗೆ ತಕ್ಕಂತೆ ಯಾವ ಯಾವ ಕೆಲಸಗಳನ್ನು ಒದಗಿಸಬೇಕು ಎಂಬ ಬಗ್ಗೆ ಮನಸ್ಸು ಮಾಡಿ, ಆ ಖಾತೆಗೆ ಅವರನ್ನು ವಹಿಸಿಕೊಟ್ಟರೆ ಅದು ಸರಿಹೋಗುತ್ತದೆ. ಮೊನ್ನೆ ತಾನೆ ಹೈಕೋರ್ಟಿನವರು ಕೂಡ ಈ ಖಾತೆಯ ಬಗ್ಗೆ ತೀಕ್ಷ್ಣವಾದ ಸ್ಟ್ರಿಕ್ಚರ್ ಪಾಸ್ ಮಾಡಿದ್ದಾರೆ. ಈ ಖಾತೆಯ ನೌಕರದಾರರ ಸೀನಿಯಾರಿಟಿಯನ್ನು ಆದಷ್ಟು ಕ್ಷಿಪ್ರದಲ್ಲಿ ಇತ್ಯರ್ಥ ಮಾಡಬೇಕು, ಏಕೆಂದರೆ ಅವರ ಕೆಲಸ ಅದನ್ನು ಬಹುಮಟ್ಟಿಗೆ ಅವಲಂಬಿಸಿರುತ್ತದೆ.

ತಾಲ್ಲೂಕಿಗೆ ಒಂದು ಸೀಡ್‌ಫಾರಂ ಏರ್ಪಾಡುಮಾಡಬೇಕೆಂದು ತಾವು ಒಂದು ನಿಲುಮೆ ಕೈಗೊಂಡಿದ್ದೀರಿ. ಹೊಸದಾಗಿ ತಾವು ಎಷ್ಟು ಫಾರಮ್ಮುಗಳನ್ನು ಸ್ಥಾಪನೆ ಮಾಡಿ, ಅವುಗಳ ಮುಖಾಂತರವಾಗಿ ಉತ್ತಮ ಬೀಜವನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡಿದ್ದೀರಾ ಎಂದು ನಾನು ಕೇಳುತ್ತೇನೆ. ಅಷ್ಟೇ ಅಲ್ಲ. ನಾನು ನೋಡಿದ ಹಾಗೆ ಅಣ್ಣಿಗೆರೆಯಲ್ಲಿ ಒಂದು ಫಾರಂ ಇದೆ ; ಅದರಿಂದ ಯಾವ ತರಹ ಬೀಜವನ್ನು ಒದಗಿಸಲಾಗಿದೆ ಎಂದು ನಾನು ಬಹಿರಂಗವಾಗಿ ಕೇಳಬಯಸುತ್ತೇನೆ. ಸರಿಯಾದ ಸ್ಟಾಫ್ ನೇಮಿಸಿದ್ದೀರಾ, ಅಲ್ಲಿಗೆ ಒದಿಗಿಸಿದಂಥ ಹಣವನ್ನು ಸಕಾಲದಲ್ಲಿ ಕೊಟ್ಟಿದ್ದೀರಾ ಅನ್ನತಕ್ಕಂಥ ವಿಚಾರ ಹೇಳಬೇಕಾಗಿದೆ.

ಇನ್ನೊಂದು ಮುಖ್ಯ ವಿಷಯವೇನೆಂದರೆ, ಈಗಾಗಲೇ ತಾವು ತಾಲ್ಲೂಕಿನಲ್ಲಿ ಒಬ್ಬ ಎಕ್ಸ್‌ಟೆನ್‌ಷನ್ ಆಫೀಸರು, ಒಬ್ಬ ಅಗ್ರಿಕಲ್ಚರಲ್ ಆಫೀಸರು, ಅಗ್ರಿಕಲ್ಚರಲ್ ಪ್ರೊಡಕ್ಷನ್ ಸ್ಕೀಂ ಪ್ರಕಾರ ಇಟ್ಟಿದ್ದಾರೆ, ಹಾಗೆಯೇ ಪ್ರತಿಯೊಂದು ಪಂಚಾಯಿತಿಗೆ ಗ್ರಾಮ ಸೇವಕರನ್ನು ಇಟ್ಟಿದ್ದಾರೆ. ಇವರ ಮೇಲೆ ಕಂಟ್ರೋಲಿಂಗ್ ಅಥಾರಿಟಿ ಯಾರು ? ಅಗ್ರಿಕಲ್ಚರಲ್ ಡೆವೆಲಪ್‌ಮೆಂಟ್ ಆಫೀಸರು ಅಗ್ರಿಕಲ್ಚರ್ ಡಿಪಾರ್ಟಮೆಂಟಿಗೆ ಸಂಬಂಧಪಟ್ಟವರು. ಗ್ರಾಮಸೇವಕರ ಮೇಲೆ ತನಿಖೆ ಮಾಡತಕ್ಕ ಅಧಿಕಾರ ಅವರಿಗಿಲ್ಲ. ಅವರು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಷನರ್ ಕೆಳಗಿರುತ್ತಾರೆ. ಅದ್ದರಿಂದ ಡೈರೆಕ್ಟರ್ ಅಫ್ ಅಗ್ರಿಕಲ್ಚರನ್ನು ಅಡಿಶನಲ್ ಡೆವಲಪ್‌ಮೆಂಟ್ ಕಮೀಶನರಾಗಿ ನೇಮಿಸಿದರೆ, ಅವರ ಮೇಲೂ ತನಿಖೆ ಮಾಡತಕ್ಕ ಅಧಿಕಾರ ಬರುತ್ತದೆ. ಈ ಯೋಜನೆಯ ಯಶಸ್ಸು ಎಕ್ಸ್‌ಟೆನ್‌ಷನ್ ಆಫೀಸರು ಮತ್ತು ಗ್ರಾಮಸೇವಕರನ್ನು ಅವಲಂಬಿಸಿರುತ್ತದೆ. ಆದ್ದರಿಂದ ಡೈರೆಕ್ಟರ್ ಆಫ್ ಅಗ್ರಿಕಲ್ಚರನ್ನು ಅಡಿಷನಲ್ ಡೆವಲಪ್‌ಮೆಂಟ್ ಕಮಿಶನರಾಗಿ ನೇಮಿಸಿದರೆ ಎಲ್ಲಾ ಡಿಸ್ಟ್ರಿಕ್ಟಿನಲ್ಲಿರ ತಕ್ಕಂಥ ಅಗ್ರಿಕಲ್ಚರ್ ಆಫೀಸರು, ಎಕ್ಸ್‌ಟೆನ್‌ಷನ್ ಆಫೀಸರು, ಗ್ರಾಮ ಸೇವಕರು, ಪ್ರೊಡಕ್ಷನ್ ಸ್ಕೀಮಿಗೆ ಸಂಬಂಧಪಟ್ಟಹಾಗೆ ಪಂಚಾಯಿತಿ ಚೆಕ್ ಮಾಡಿ, ಬಂದ ಸಮಸ್ಯೆಯನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಅಧಿಕಾರ ಸಿಗುತ್ತದೆ.

ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ರೈತರಿಗೆ ಯಾವತರಹ ಸಲಕರಣೆಗಳೂ ಸಿಗುತ್ತಿಲ್ಲ. ಮುಖ್ಯವಾಗಿ ಇಂಪ್ಲಿಮೆಂಟ್ಸ್, ಟ್ರಾಕ್ಟರುಗಳು ಬೇಕಾಗಿದೆ. ಆಂಧ್ರ ಸರ್ಕಾರದವರು ಪಂಪುಸೆಟ್ಟುಗಳನ್ನು ಅಗ್ರಿಕಲ್ಚರ್ ಇಂಪ್ಲಿಮೆಂಟುಗಳನ್ನು ಹಂಚುವುದಕ್ಕಾಗಿ ಆಗ್ರೋ ಇಂಪ್ಲಿಮೆಂಟ್ಸ್ ಕಾರ್ಪೊರೇಷನ್ ಅಂತ ಹೇಳಿ ಮಾಡಿದ್ದಾರೆ. ಅದೇ ರೀತಿಯಾಗಿ ನಮ್ಮ ಸರಕಾರದವರೂ ಕೂಡ ಒಂದು ಕಾರ್ಪೊರೇಶನ್ ಮಾಡಿ ಅದರ ಮುಖಾಂತರ ಒಕ್ಕಲುತನಕ್ಕೆ ಬೇಕಾದ ಸುಧಾರಿಸಿದ ಸಲಕರಣೆಗಳನ್ನು ಹಾಗೂ ಟ್ರಾಕ್ಟರುಗಳನ್ನೂ, ಪಂಪುಸೆಟ್ಟುಗಳನ್ನೂ ಹಂಚಬೇಕು ಎಂದು ಈ ಸಮಯದಲ್ಲಿ ಹೇಳುತ್ತೇನೆ. ಏಕೆಂದರೆ ನಮ್ಮ ರಾಜ್ಯದಲ್ಲಾಗಲೀ, ನಮ್ಮ ಸರ್ಕಾರದಲ್ಲಾಗಲಿ, ಆದಷ್ಟುಮಟ್ಟಿಗೆ ಇಂಪ್ಲಿಮೆಂಟ್ಸ್ ಮತ್ತು ಟ್ರಾಕ್ಟರುಗಳನ್ನು ಮಾಡಲು ಸೌಲಭ್ಯವಿಲ್ಲ.

ಪಶುಪಾಲನೆ ಹೆಚ್ಚು ಮಾಡುವುದಕ್ಕೆ ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟಿನವರು ಯಾವ ತೆರನಾದ ಬದಲಾವಣೆಗಳನ್ನು ಮಾಡುತ್ತಾ ಬಂದಿದ್ದಾರೆ ? ಹೆಸರಗಟ್ಟ ಮತ್ತು ಉಳಿದ ಫಾರಮ್‌ಗಳಲ್ಲಿ ದನಗಳ ಮತ್ತು ಇತರ ಪಶುಗಳ ಅಭಿವೃದ್ಧಿ ಆದಷ್ಟು ಕಡಿಮೆಯಾಗುತ್ತ ಬಂದಿದೆ—ಹಿಂದಿನದಕ್ಕಿಂತ ಕಡಿಮೆ ಮಾಡುತ್ತಾ ಬಂದಿದ್ದಾರೆ. ಈಗ ಬಂಕಾಪುರದಲ್ಲಿರತಕ್ಕಂಥ ಒಂದು ಫಾರಮ್ಮಿನಲ್ಲಿ ಸಾಕಷ್ಟು ರೀತಿಯಲ್ಲಿ ದನಗಳ ಉತ್ಪತ್ತಿಯನ್ನು ಮಾಡಿಲ್ಲ. ನಾನಾದರೂ ಇದಕ್ಕೆ ಕಾರಣವನ್ನು ಕೇಳುತ್ತೇನೆ—ಅಲ್ಲಿ ಕಡಿಮೆ ಸ್ಟಾಫು ಇರುವುದರಿಂದಲೇ ಅಥವ ರಿಂಡರ್‌ಪೆಸ್ಟಿಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳದ್ದರಿಂದಲೆ ಸರಿಯಾದ ಉತ್ಪತ್ತಿಯಾಗದಿರುವುದು ? ಇದರ ಜೊತೆಗೆ ಪಶುಗಳು ಸಿಗದಂಥ ಪರಿಸ್ಥಿತಿ ಬಂದಿದೆ. ನಮ್ಮ ರಾಜ್ಯದಲ್ಲಿ ಬೇಸಾಯದ ಮೇಲೆ ಅವಲಂಬನೆ ಇರುತ್ತದೆ. ಎತ್ತುಗಳಿಲ್ಲದೆ ಭೂಮಿ ಉಳುವುದಕ್ಕೆ ಸಾಧ್ಯವಿಲ್ಲ, ನಮ್ಮ ರಾಜ್ಯದ ಬೇಸಾಯ 100ಕ್ಕೆ 98ರಷ್ಟು

ಎತ್ತುಗಳ ಮೇಲೆ ಅವಲಂಬಿಸಿರುತ್ತದೆ. ಇವುಗಳ ಅಭಿವೃದ್ಧಿ ಬಗೆಗೆ ಇನ್ನೂ ಹೆಚ್ಚಿನದಾದ ಕ್ರಮ ಕೈಗೊಳ್ಳದೆ ಹೋದರೆ, ವ್ಯವಸಾಯವೆ ನಿಲ್ಲುವುದರಲ್ಲಿ ಸಂಶಯವಿಲ್ಲ. ಯಂತ್ರದ ಮುಖಾಂತರವಾಗಿ ಬೇಸಾಯ ಮಾಡುವುದಕ್ಕೆ 50 ವರ್ಷಗಳು ಬೇಕು. ಏಕೆ ನೂರು ವರ್ಷಗಳಿಗೇ ಹೋಗಬಹುದು. ನಮ್ಮ ಪಶುಗಳ ಅಭಿವೃದ್ಧಿಯಾಗದ ಹೊರತು ನಮ್ಮ ವ್ಯವಸಾಯ ಅಭಿವೃದ್ಧಿ ಆಗಲಿಕ್ಕಿಲ್ಲ. ಈಗಾಗಲೇ ನಾವು ನೋಡಿದ ಹಾಗೆ ಹೋದ ವರ್ಷ ರಿಂಡರ್‌ಪೆಸ್ಟ್ ಡಿಸೀಸ್ ಬಂದು ಸಾಕಷ್ಟು ದನಗಳು ಸತ್ತುಹೋದುವು. ಇದಕ್ಕೆ ಸರಿಯಾದ ನಿವಾರಣೋಪಾಯ ತೆಗೆದುಕೊಳ್ಳದ್ದಕ್ಕೆ ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟಿನಲ್ಲಿ ಯಾರು ಜವಾಬ್ದಾರರು ಅನ್ನುವುದು ನಮಗೆ ತಿಳಿಯದ ಸಂಗತಿ. ರಿಂಡರ್‌ಪೆಸ್ಟ್ ದನಗಳಿಗೆ ಬಹಳ ಉಗ್ರವಾದ ರೋಗ. ಆ ರೋಗ ನಿವಾರಣೆ ಸಕಾಲದಲ್ಲಿ ಯೋಗ್ಯ ಕ್ರಮ ತೆಗೆದುಕೊಳ್ಳದೆ ಹೋದರೆ ಈ ಒಂದು ಇಲಾಖೆ ಇದ್ದೂ ಏನು ಪ್ರಯೋಜನ? ಸಿರಂ ಇನ್‌ಸ್ಟಿಟ್ಯೂಟ್ ಮಾಡತಕ್ಕಂಥ ಚರ್ಯೆಯಿಂದಾಗಲಿ ಅದನ್ನು ಹರಡದಂತೆ ಮಾಡುವುದಕ್ಕಾಗಿಲ್ಲ; ಇನ್ನಾವುದಾದರೂ ಪ್ರಿವೆಂಟೀವ್ ಮೆಷರ್ಸ್ ತೆಗೆದುಕೊಳ್ಳದೆಹೋದರೆ ಇದ್ದಂಥ ದನಗಳನ್ನೂ ಕೊಲ್ಲತಕ್ಕ ಪರಿಸ್ಥಿತಿ ಬಂದಿದೆ. ಲಕ್ಷಗಟ್ಟಲೆ ದನಗಳು ರಿಂಡರ್‌ಪೆಸ್ಟಿನಿಂದ ಬೆಂಗಳೂರು ಮತ್ತು ಸುತ್ತಮುತ್ತಲಿನಲ್ಲಿ ಸತ್ತಿರುವ ಸಂಗತಿಯನ್ನು ಪೇಪರಿನಲ್ಲಿ ಓದಿರಬೇಕು. ಈ ರೋಗ ಬಂದತಕ್ಷಣ, ರಿಂಡರ್‌ಪೆಸ್ಟ್ ಡಿಸೀಸ್ ಎರಾಡಿಕೇಷನ್ ಸ್ಕೀಮು ತೆಗೆದುಕೊಂಡು ಅದು ಹರಡದಂತೆ ಕಾರ್ಯಕ್ರಮವನ್ನು ಕೈಗೊಳ್ಳಬೇಕು.

ವೆಟರ್ನರಿ ಆಸ್ಪತ್ರೆಯನ್ನು ತಾಲ್ಲೂಕಿಗೆ ಒಂದೊಂದು ಮಾಡಬೇಕು. ಇದನ್ನು ಆಷ್ಟು ಜಾಗ್ರತೆ ಮಾಡಬೇಕು. ಸೇರ್ಸ್‌ಮನ್ ಸೆಂಟರುಗಳಲ್ಲಿ ಸಾಕಷ್ಟು ಸಲಕರಣೆಗಳು ಇಲ್ಲ. ರಿಂಡರ್ ಪೆಸ್ಟ್ ಡಿಸೀಜ್ ಅಥವ ಯಾವ ರೋಗಗಳು ದನಗಳಿಗೆ ಬಂದರೂ, ಸಕಾಲದಲ್ಲಿ ನಿವಾರಣೋಪಾಯ ಮಾಡುವುದಕ್ಕೆ ನಿಮ್ಮ ವೆಟರ್ನರಿ ಆಸ್ಪತ್ರೆಗಳಲ್ಲಿ ಔಷದ ಇಲ್ಲದೆ ಇರತಕ್ಕಂಥ ಸಂಗತಿಗಳು ನಮಗೆ ಕಂಡುಬರುತ್ತಿವೆ. ಅದಷ್ಟು ಮಟ್ಟಿಗಾದರೂ ತಾವು ಸೇರ್ಸ್‌ಮನ್ ಸೆಂಟರುಗಳಲ್ಲಿ ಔಷದ ಮತ್ತು ಇಂಜೆಕ್ಷನ್ ಟ್ಯೂಬುಗಳನ್ನಿಟ್ಟು ಪುಕ್ಕಟೆಯಾಗಿ ಕೊಟ್ಟು ನಿವಾರಣೋಪಾಯ ಕೈಗೊಳ್ಳುವುದಕ್ಕೆ ಸಹಾಯ ಮಾಡಬೇಕೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ರೈತನಿಗೆ ವರ್ಷಪೂರ್ತಿಯಾಗಿ 12 ತಿಂಗಳುಗಳ ಕಾಲ ಕೆಲಸ ಮಾಡಲು ಕೆಲಸ ಇರುವುದಿಲ್ಲ, ಕೇವಲ ಆರು ತಿಂಗಳ ಕೆಲಸ ಮಾತ್ರ ಅವನಿಗಿರುತ್ತವೆ. ಉಳಿದ ಆರು ತಿಂಗಳ ಕಾಲದಲ್ಲಿ ಅತ ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆ. ಇದಕ್ಕೆ ಅವನಿಗೇನಾದರೂ ಉಪಜೀವನವನ್ನು ಕಲ್ಪಿಸಿಕೊಡಬೇಕಾಗಿದೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಯೋಜನೆ ಮೂಲಕ ಈಗ ಏನಾದರೂ ಕೆಲಸಗಳನ್ನು ತೆಗೆದುಕೊಳ್ಳುವಾಗ ಇವರಿಗೂ ಕೆಲಸಗಳನ್ನು ಒದಗಿಸಲಿಕ್ಕೆ ಬರುತ್ತದೆ. ಇದರ ಬಗ್ಗೆ ಶ್ರೀಮಾನ್ ತ್ರಿಲೋಕಿ ಸಿಂಗ್‌ರವರು ಇಂತಹ ಕೆಲಸಗಳನ್ನು ಮಾಡಲು ಮೂರನೆ ಯೋಜನೆಯ ಕೊನೆಯ ವರ್ಷದಲ್ಲಿ ಇಲ್ಲದೇ ಇದ್ದರೆ ನಾಲ್ಕನೇ ಯೋಜನೆಯಲ್ಲಿ ಇವನ್ನು ಮಾಡಲಿಕ್ಕೆ ಬರುತ್ತದೆ ಎಂದು ಒಂದು ಕಡೆ ಭಾಷಣ ಮಾಡುತ್ತಾ ಹೇಳಿದ್ದಾರೆ. ಆದರೆ ಮೂರನೇ ಯೋಜನೆಯಲ್ಲೇ ರೈತರ ಬಗ್ಗೆ ಯೋಚನೆ ಮಾಡಿ ಆದಷ್ಟುಮಟ್ಟಿಗೆ ಅವನಿಗೆ ವ್ಯವಸಾಯ ಇಲ್ಲದ ವೇಳೆಯಲ್ಲಿ ಏನಾದರೂ ಕೈಗಾರಿಕೆಯ ಉದ್ಯಮಗಳನ್ನು ಒದಗಿಸುವುದಕ್ಕೆ ಹಣವಿಟ್ಟು ಇನ್ನು ಮುಂದಾದರೂ ಮಾಡಲು ಪ್ರಯತ್ನ ಮಾಡುತ್ತಾರೆಂದು ಈ ಸಮಯದಲ್ಲಿ ಕೇಳುತ್ತೇನೆ.

ಈ ಶಾಸನ ಸಭೆಯಲ್ಲಿ ಆಗಲೇ ಹೇಳಿದ ಹಾಗೆ ದೇಶದ ಆಹಾರ ಪರಿಸ್ಥಿತಿಯು ಬಹಳವಾಗಿ ಕೆಟ್ಟು ಹೋಗಿದೆ. ಬೇರೆ ರಾಜ್ಯಗಳ ಮೇಲೆ ಹಾಗೂ ಪರದೇಶಗಳಿಂದ ಆಹಾರದ ದವಸಗಳನ್ನು ತರಿಸಿಕೊಂಡು ಬದುಕಬೇಕಾಗಿರುವ ಪರಿಸ್ಥಿತಿ ಇವೊತ್ತು ಬಂದಿದೆ. ನಮಗೆ ಪಿ. ಎಲ್. 480 ಗೋಧಿ ಹಾಗೂ ಹಿಟ್ಟುಗಳನ್ನು ಹೊರಗಡೆಯಿಂದ ತರಿಸಿಕೊಂಡು ಹಂಚುವ ಸ್ಥಿತಿ ಈಗ ಬಂದಿದೆ. ನಮ್ಮಲ್ಲಿರುವ ಹಳ್ಳಗಳು, ಪ್ರಾಜೆಕ್ಟುಗಳು ಇವುಗಳನ್ನು ನೋಡಿಕೊಂಡು ಆದರ ಪ್ರಕಾರವಾಗಿ ಯಾವ ಯೋಜನೆಗಳನ್ನೂ ಮಾಡಿ ಆಹಾರ ಧಾನ್ಯಗಳನ್ನು ಹೆಚ್ಚುವಂತೆ ಮಾಡಲಿಲ್ಲ. ನಮ್ಮ ಕೇಂದ್ರ ಸರಕಾರದ ಡೈರೆಕ್ಟರ್ ಜನರಲ್ ಆಫ್ ಫುಡ್ ಶ್ರೀ ಬಿ. ಆರ್. ಸೇನ್ ಈಚೆಗೆ ಒಂದು ಸಂದರ್ಭದಲ್ಲಿ ಮಾತನಾಡುತ್ತ ದೇಶದ ಪರಿಸ್ಥಿತಿ ಇದೇ ರೀತಿಯಾಗಿ ಮುಂದುವರಿಯುತ್ತಾ ಪಾಪ್ಯುಲೇಷನ್ನು ಬೆಳೆಯುತ್ತಾ ಹೋದರೆ 1980 ನೇ ಇಸವಿ ವೇಳೆಗೆ ನಮ್ಮಲ್ಲಿ ಬರಗಾಲದ ಪರಿಸ್ಥಿತಿ ಬರುತ್ತದೆ ಎಂದು ಅವರು ಮೊನ್ನೆ ಮೊನ್ನೆ ತಾನೇ ಹೇಳಿದ್ದಾರೆ. ಇವೊತ್ತಿನ ಪರಿಸ್ಥಿತಿಯನ್ನು ನಾವು ಇಲ್ಲಿ ನೋಡುವಾಗ ನಮ್ಮಲ್ಲಿ ವ್ಯವಸಾಯ ಖಾತೆಯಲ್ಲಿರತಕ್ಕ ಅವ್ಯವಹಾರಗಳಿಂದಾಗಿ ನಿಜವಾಗಿಯೂ ನಾವು ಅಂತಹ ಬರಗಾಲದ ಪರಿಸ್ಥಿತಿಗೆ ಬರುತ್ತೇವೆ ಎನ್ನುವುದನ್ನು ವಿಚಾರ ಮಾಡಿ ಮನದಟ್ಟುಮಾಡಿಕೊಳ್ಳಬೇಕು. ಅಲ್ಲದೆ ಇಲ್ಲಿ ಇನ್ನೂ ಖಾಲಿಇರುವ ಜಾಗಗಳನ್ನು ತುಂಬಲು ತೀವ್ರ ಪ್ರಯತ್ನ ಮಾಡದೇ ಇದ್ದರೆ ರೇತಾಪಿ ಜನಕ್ಕೆ ಕಷ್ಟಗಳುಂಟಾಗುತ್ತವೆ. ಅದಕ್ಕಾಗಿ ಎಲ್ಲ ಭಾಗಗಳಿಗೂ ಗೊಬ್ಬರ ಹಾಗೂ

(ಶ್ರೀ ಸಿದ್ದಯ್ಯ ಕಾಶೀಮಠ್)

ಇನ್ನಿತರ ಸಲಕರಣೆಗಳನ್ನು ಸಕಾಲದಲ್ಲಿ ಒದಗಿಸುವುದಿಲ್ಲ. ಸರಿಯಾದ ರೀತಿಯಲ್ಲಿ ರೀಸರ್ಚು ಗಳನ್ನು ಮಾಡುತ್ತಿಲ್ಲ. ಈ ಗಲಾದರೂ ಇವನ್ನೆಲ್ಲಾ ತೀವ್ರತೆಯಿಂದ ಮಾಡಬೇಕು ಎಂದು ಈ ಸಮಯದಲ್ಲಿ ಒತ್ತಿ ಹೇಳುತ್ತೇನೆ.

ಇನ್ನು ಕೋಅಪರೇಟೀವ್ ಡಿಪಾರ್ಟುಮೆಂಟು ಬಗ್ಗೆ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಮೇಲಿಂದ ಮೇಲೆ ಇಲಾಖೆಯ ಬಗ್ಗೆ ಸರಕಾರದ ಗಮನವನ್ನು ಸಾಕಷ್ಟು ಸೆಳೆಯುತ್ತಾ ಬಂದಿದ್ದೇವೆ. ಇಲ್ಲಿ ದುರುಪಯೋಗವಾಗುತ್ತಿರುವುದರ ಬಗ್ಗೆ ನಾನಾ ಕೇಸುಗಳ ಬಗ್ಗೆ ಕೂಡ ಹೇಳಿದ್ದೇವೆ. ಯಾವುದಾದರೂ ಒಂದು ಕೇಸು ಬಂದರೆ ಅದನ್ನು ಆರ್‌ಬಿಟ್ರೇಷನ್ನಿಗೆ ಎಂದು ಹಾಕಬೇಕಾಗುತ್ತದೆ. ಈ ಆರ್‌ಬಿಟ್ರೇಷನ್ನಿನಲ್ಲಿ ಒಂದೊಂದು ಕೇಸು ವಿಕಾಲಯಾಗಬೇಕಾದರೆ ಸರಕಾರದ ಎಷ್ಟೋ ವರ್ಷ ಗಳಷ್ಟು ಕಾಲ ತೆಗೆದುಕೊಳ್ಳುತ್ತಾರೆ. 1951 ನೇ ಇಸವಿಯಲ್ಲಿ ಕಳುಹಿಸಿದ ಕೇಸು ಒಂದು ಇವೊತ್ತು ಎಂದರೆ 1965 ಆದರೂ ಇನ್ನೂ ವಿಕಾಲಿ ಆಗಿಲ್ಲ. ಹೀಗೆ ಆರ್‌ಬಿಟ್ರೇಷನ್ನು ಎಂದು ನೇಮಿಸಿದರೆ ಏನು ಸಾಫಲ್ಯವಾಗುತ್ತದೆ ಎಂದು ನಾನು ಇಲ್ಲಿ ತಮ್ಮನ್ನು ಕೇಳುತ್ತೇನೆ. ಹಣವನ್ನು ದುರುಪಯೋಗ ಮಾಡಿದವರ ಮೇಲೆ ಅದನ್ನು ವಿಚಾರಮಾಡಿ ಅವರಿಗೆ ಉಗ್ರ ಶಿಕ್ಷೆ ವಿಧಿಸದೇ ಹೋದರೆ ಮತ್ತು ತಕ್ಕ ಶಿಕ್ಷೆ ಕೊಡದೇ ಹೋದರೆ ಅದರಿಂದ ಏನು ಪ್ರಯೋಜನವಾಗುತ್ತದೆ? ಇಂತಹ ಅಪವ್ಯಯವಾಗುವ ಸೊಸೈಟಿಗಳ ಮೇಲೆ ದೂರುಗಳು ಬಂದರೆ ಆರ್‌ಬಿಟ್ರೇಷನ್ನು ಎಂದು ಮಾಡದೇ ಅದಕ್ಕೆ ಪ್ರತ್ಯೇಕವಾದ ಒಂದು ಟ್ರಿಬ್ಯುನಲ್ಲನ್ನು ಮಾಡಿ ಅವರಲ್ಲಿ ಎಲ್ಲ ಕೇಸುಗಳೂ ಬಂದಾಗ ಅದು ಬಂದ ಎರಡು ಮೂರು ತಿಂಗಳುಗಳಲ್ಲಿಯೇ ಅವೆಲ್ಲಾ ನಿಕಾಲಿಯಾಗುವಂತಹ ಯಾವುದಾದರೂ ಒಂದು ಯೋಜನೆಯನ್ನು ಕೋಅಪರೇಟಿವ್ ಡಿಪಾರ್ಟುಮೆಂಟಿನಲ್ಲಿ ಮಾಡಬೇಕು. ಅಲ್ಲದೆ ಈಗಿರುವಂತೆ ಮಾಡಿದರೆ ಕೋ ಆಪರೇಟಿವ್ ಸೊಸೈಟಿಗಳಿಗೆ ಹೆಚ್ಚು ಸಹಾಯ ಸಿಗುವುದಿಲ್ಲ. ಇದನ್ನು ಸರಕಾರ ಗಮನಕ್ಕೆ ತೆಗೆದುಕೊಳ್ಳಬೇಕು.

SRI A. P. APPANNA (Virajpet);—What do you say if the methods and procedure of Sales Tax Department are adopted in this Department?

SRI SIDDAIAH KASHIMATH.—Yes. The same thing is to be adopted. I am telling the same thing.

ಇನ್ನು ವೀವರ್ಸ್ ಕೋಆಪರೇಟಿವ್ಸ್‌ಗಳ ಬಗ್ಗೆ ಹೇಳುತ್ತೇನೆ. ಸರಕಾರದವರು ನೇಕಾರರಿಗೆ ಅನುಕೂಲ ಮಾಡಿಕೊಡಬೇಕು, ಅವರಿಗೆ ಸಾಕಷ್ಟು ಕೂಲಿಸಿಗಬೇಕು ಎಂದು ಸಹಾಯ ಗಳನ್ನು ಕೊಡುತ್ತಾ ಬಂದಿದ್ದಾರೆ. ಉದಾಹರಣೆಯಾಗಿ ನಮ್ಮ ಧಾರವಾಡ ಜಿಲ್ಲೆಯಲ್ಲಿರುವ ತಾಲ್ಲೂಕಾ ಸೊಸೈಟಿ ಯಲ್ಲಿ 380 ಕೈಮಗ್ಗಗಳಿವೆ. ಒಂದು ಕಡೆ ಮಗ್ಗವನ್ನು ಇಟ್ಟು ಕೊಂಡಿರುವವರಿಗೆ ಸಬ್‌ಸಿಡಿಗಳನ್ನು ಕೊಡುತ್ತಾರೆ. ಆದರೆ ಕೆಲವರು ಮಗ್ಗಗಳನ್ನು ಇಡದೇ ಬೇರೆಯವರ ಕಡೆಯಿಂದ ಸೀರೆ ಇತ್ಯಾದಿ ಬಟ್ಟೆಗಳನ್ನು ತಂದು ಅದರ ಮೂಲಕ ಸರಕಾರದಿಂದ ಬರುವ ಸಹಾಯಗಳು ಸಬ್‌ಸಿಡಿ ಗಳನ್ನು ಪಡೆಯುತ್ತ ಬರುತ್ತಿದ್ದಾರೆ. ಇವರ ಬಗ್ಗೆ ಸರಕಾರಕ್ಕೆ ರೆಪ್ರಸೆಂಟುಮಾಡಿ ಹೇಳಿದರೂ ಇನ್ನೂ ಈ ಜನಕ್ಕೆ ಅನುಕೂಲವಾಗಲಿಲ್ಲ. ಇಲ್ಲಿರುವ ಹಳ್ಳಿಯ ಜನರ ಸ್ಥಿತಿ ಬಹಳ ವ್ಯಸನಕರವಾದ ಸಂಗತಿ. ಸರಕಾರದವರು ಸಾಕಷ್ಟು ಹಣವನ್ನೂ ಕೊಡುವುದಿಲ್ಲ. ಇದನ್ನು ಯಾವ ರೀತಿ ಮಂಜೂರು ಮಾಡುತ್ತಿದ್ದಾರೆ ಎನ್ನುವುದನ್ನು ಇಲ್ಲಿ ಎತ್ತಿ ತೋರಿಸಬೇಕಾಗಿದೆ. ಕೋಆಪರೇಟಿವ್ ಸೊಸೈಟಿಗಳನ್ನು ಇದೇ ರೀತಿಯಾಗಿ ಬಿಡುತ್ತಾ ಹೋದರೆ ಇನ್ನು ಒಂದೆರಡು ವರ್ಷಗಳಲ್ಲಿ ಒಂದು ಕಡೆ ಕೆಲಸಮಾಡಲು ತಕ್ಕ ಹಣವನ್ನು ಅಥವಾ ಲೋನು ಗಳನ್ನು ಮಂಜೂರು ಮಾಡದೇ ಇರುವಂತಹ ಪರಿಸ್ಥಿತಿ ಬರುತ್ತದೆ ಎಂದು ತಿಳಿಯುತ್ತದೆ. ನಾವು ಮೇಲಿಂದ ಮೇಲೆ ಕೋಆಪರೇಟಿವ್ ಸೊಸೈಟಿಗಳ ಬಗ್ಗೆ ಪ್ರಶ್ನೆ ಹಾಕಿದಾಗ ಸರಕಾರದ ಕಡೆಯಿಂದ ಸರಿಯಾದ ಉತ್ತರಗಳು ಬರುತ್ತಿಲ್ಲ. ರಾಯಚೂರು ಹಾಗು ಕೊಪ್ಪಳ ಇಲ್ಲಿ ಇದ್ದ ಅನೇಕ ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆ ಎಂದು ಸರಕಾರಕ್ಕೆ ತಿಳಿದಿದ್ದರೂ ಅದರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಬೇಕಾಗಿದೆ? ಹಾಗೇ ನಮ್ಮ ಭಾಗದಲ್ಲಿರುವ ಸಿಗ್ಗೆ ಸೊಸೈಟಿಯೊಳಗೆ ಸುಮಾರು 36 ಸಾವಿರ ರೂಪಾಯಿಗಳಷ್ಟು ಅಪವ್ಯಯ ನಡೆದಿದೆ ಎಂದು ಇದರ ಬಗ್ಗೆ ಸರಕಾರಕ್ಕೆ ರಿಪೋರ್ಟು ಕೂಡ ಬಂದಿದೆ. ಇವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇದರಲ್ಲಿರುವವರು ತಾಲ್ಲೂಕಾ ಕಾಂಗ್ರೆಸ್ಸು ಕಮಿಟಿ ಪ್ರೆಸಿಡೆಂಟ ರಾಗಿರುವುದರಿಂದಲೋ ಏನೋ ಇವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಂತೆ ಕಾಣುತ್ತಿಲ್ಲ ಮತ್ತು ಇಂತಹ ಒಂದು ಭಯ ಬರುತ್ತಿದೆ. ಕೋಆಪರೇಷನ್ನು ಇಲಾಖೆಯಲ್ಲಿ ಕೆಲಸ ಮಾಡುವಾಗ ಯಾವ ಪಾರ್ಟಿ ಪಂಗಡಗಳಿಗೂ ಅವಕಾಶ ಕೊಡದೇ ಎಲ್ಲಿ ಹಣ ದುರುಪಯೋಗ ನಡೆಯುತ್ತದೆಯೋ

ಅವರ ಮೇಲೆ ಉಗ್ರವಾದ ಶಿಕ್ಷೆಯನ್ನು ವಿಧಿಸುವಂತೆ ಮಾಡಿದರೆ ಆಗ ಈ ಸೊಸೈಟಿಗಳು ಬದುಕಿ ಕೊಳ್ಳುತ್ತವೆ.

ರಾಜ್ಯದಲ್ಲಿ ರೈತರಿಗಾಗಿ ಸಾಕಷ್ಟು ಹಣ ಮತ್ತು ಇತರ ಸಹಾಯ ಸಲಕರಣೆಗಳನ್ನು ಸರಿಯಾಗಿ ಒದಗಿಸುತ್ತಾ ಕೊಡುತ್ತಿದ್ದೇವೆಂದು ಸರಕಾರ ಘೋಷಣೆ ಮಾಡುತ್ತಾ ಬಂದಿದ್ದಾರೆ. ಆದರೆ ಆ ರೀತಿಯಾದ ಸಹಾಯಗಳು ಸರಿಯಾಗಿ ಇವರಿಗೆ ಸಿಗುತ್ತಿಲ್ಲ. ವೀವರ್ಸ್ ಕೋಆಪರೇಟೀವ್ ಸೊಸೈಟಿಗಳ ಬಗ್ಗೆ ಸರಿಯಾದ ನಿಗಾ ವಹಿಸಲು ತಾಲ್ಲೂಕು ಡೆವಲಪ್‌ಮೆಂಟು ಆಫೀಸರು ಎಕ್ಸ್‌ಟೆನ್‌ಷನ್ ಆಫೀಸರು ಇವರುಗಳೆಲ್ಲ ಇದ್ದು ಇವರ ಮೇಲೆ ಜಿಲ್ಲಾ ಮಟ್ಟದಲ್ಲಿ ಒಬ್ಬರು ಇನ್ಸ್‌ಪೆಕ್ಟರುಗಳನ್ನು ಪ್ರತಿ ಜಿಲ್ಲೆಗೂ ಹೆಚ್ಚಾಗಿರುವಂತೆ ಮಾಡಿ ಅವರಿಂದ ಸರಿಯಾದ ರೀತಿಯಲ್ಲಿ ನಿಗಾ ತೆಗೆದುಕೊಂಡು ಕೆಲಸ ಮಾಡಿದರೆ ಅನುಕೂಲವಾಗುತ್ತದೆ. ಆದಷ್ಟು ಬೇಗ ಸರಕಾರ ಇದರ ಕಡೆಗೆ ಗಮನ ಕೊಟ್ಟು ತಕ್ಕ ಕ್ರಮಗಳನ್ನು ತೆಗೆದುಕೊಂಡರೆ ಸಹಕಾರ ಸಂಘಗಳನ್ನು ಪ್ರಾರಂಭ ಮಾಡಿದುದು ಸಾಫಲ್ಯ ದೊರಕುತ್ತದೆ. ಆರೀತಿ ಮಾಡಿದರೆ ಜನತೆಗೂ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಕೊನೆಯದಾಗಿ ವಿದ್ಯಾ ಇಲಾಖೆಯ ಬಗ್ಗೆ ಒಂದು ವಿಚಾರ ಹೇಳಬೇಕಾಗಿದೆ. ಇಲ್ಲಿ ಆರ್ಟ್ ಇನ್ಸ್‌ಟಿಟ್ಯೂಟುಗಳೆಂದು ಮಾಡಿದ್ದಾರೆ. ದಾವಣಗೆರೆಯಲ್ಲಿ ಒಂದು ಆರ್ಟ್ ಇನ್ಸ್‌ಟಿಟ್ಯೂಟು ತೆರೆದಿದ್ದಾರೆ. ಇದರಲ್ಲಿ ಎಷ್ಟು ಸ್ಟ್ಯಾಫ್ ಇದ್ದಾರೆ ಅದರ ವಿವರಗಳೇನು ಎನ್ನುವುದನ್ನು ಇಲ್ಲಿ ತಿಳಿಸಬೇಕು. ಈಗಾಗಲೇ ಇರುವ ಲಲಿತ ಕಲಾ ಅಕ್ಯಾಡಮಿ ದೆಹಲಿಯಿಂದ ಅಪ್ರೂವ್ ಆಗಿ ಬಂದಿರತಕ್ಕ ಡಿ. ಟಿ. ಸಿ. ಆಫೀಸರನ್ನು ಇಲ್ಲಿ ಶಿಕ್ಷಣಕೊಡಲು ಇಟ್ಟಿದ್ದರೂ ಅದಕ್ಕೆ ಸಾಕಷ್ಟು ಪ್ರೋತ್ಸಾಹ ಕೊಡದೇ ಇರುವುದು ಕಂಡು ಬರುತ್ತಿದೆ. ನಮ್ಮ ಭಾಗದಲ್ಲಿದ್ದ ಆರ್ಟ್ ಇನ್ಸ್‌ಟಿಟ್ಯೂಟು ಬಹಳ ಚೆನ್ನಾಗಿ ಕೆಲಸ ಮಾಡುತ್ತ ಬಂದಿದೆ. ದೆಹಲಿಯಲ್ಲಿರುವ ಲಲಿತಕಲಾ ಅಕ್ಯಾಡಮಿಯವರು ಮಂಜೂರು ಮಾಡಿದ ಆರ್ಟ್ ಇನ್ಸ್‌ಟಿಟ್ಯೂಟಿಗೆ ಧಾರವಾರ, ಹುಬ್ಬಳ್ಳಿ ಹಾಗೂ ಬಿಜಾಪುರ ಈ ಭಾಗಗಳಿಂದ ಬರುವ ಹುಡುಗರಿಗೆ ಶಿಕ್ಷಣ ಕೊಡುವುದಕ್ಕಾಗಿ ಒಂದು ಆರ್ಟ್‌ಸೆಂಟರನ್ನು ಬೆಂಗಳೂರಿಗೆ ತಂದು ಮಾಡಿದ್ದಾರೆ. ಇದಕ್ಕಾಗಿ ಡಿ. ಟಿ. ಸಿ. ಟ್ರೇನಿಂಗು ಪಡೆದಿದ್ದ ಒಬ್ಬರು ಉಪಾಧ್ಯಾಯರನ್ನು ಇಲ್ಲಿಗೆ ಕರೆಸುವ ಪ್ರಮೇಯವಾದರೂ ಏನು ಬಂದಿತ್ತು ? ಬೆಂಗಳೂರು ನಗರಕ್ಕೆ ಹೊರಗಿನಿಂದ ಬಂದವರಿಗೆ ಯಾವರೀತಿಯಾದ ಪ್ರೋತ್ಸಾಹಗಳೂ ಸಿಗುವುದಿಲ್ಲ. ವಾಸಕ್ಕೆ ಸರಿಯಾದ ಮನೆಗಳು ಸಿಗುವುದಿಲ್ಲ ಮತ್ತು ಹೋಟಲುಗಳಿಗೆ ಹೋದರೆ ಸರಿಯಾದ ಊಟ ಸಿಗುವುದಿಲ್ಲ. ಹೀಗಿರುವಾಗ ನಮ್ಮ ಗದಗನಲ್ಲಿರುವ ಇನ್ಸ್‌ಟಿಟ್ಯೂಟು ಟೀಚರುಗಳನ್ನು ಇಲ್ಲಿಗೆ ಕಳುಹಿಸಿದರೆ ಅದರಿಂದೇನು ಪ್ರಯೋಜನವಾಗುತ್ತದೆ. ಆರ್ಟ್ ಇನ್ಸ್‌ಟಿಟ್ಯೂಟುಗಳಿಗಾಗಿ ಗ್ರಾಂಟುಗಳನ್ನೇನೋ ಕೊಡುತ್ತಾರೆ. ಆ ಗ್ರಾಂಟು ಸದುಪಯೋಗವಾಗಬೇಕಾದರೆ ಇಲ್ಲಿರುವ ಟೀಚರುಗಳನ್ನು ಆದಷ್ಟು ಮಟ್ಟಿಗೆ ನಮ್ಮ ಭಾಗದಲ್ಲಿರುವ ಇನ್ಸ್‌ಟಿಟ್ಯೂಟಿಗೆ ಕಳುಹಿಸಿ ಕೊಟ್ಟರೆ ಅನುಕೂಲವಾಗುತ್ತದೆ. ಆರೀತಿ ಕಳುಹಿಸಬೇಕೆಂದು ಈ ಸಮಯದಲ್ಲಿ ಒತ್ತಾಯ ಮಾಡುತ್ತೇನೆ. ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಅಧ್ಯಕ್ಷರೆ, 65—66 ನೇ ಸಾಲಿನ ಅಪ್ರೋಪ್ರಿಯೇಷನ್ನು ಬಿಲ್ಲಿನಲ್ಲಿ ಸರಕಾರ ಕೇಳುವ ಹಣ ಅವರು ಮಾಡುವ ಕೆಲಸಗಳ ಅವ್ಯವಸ್ಥೆಗಳನ್ನು ನೋಡಿದೆ. ಈ ಹಿಂದೆ ಹೈದರಾಬಾದು ರಾಜ್ಯದಲ್ಲಿದ್ದ ರಾಜ ಹಾಗೂ ಅವರ ಕೈಕೆಳಗೆ ಇದ್ದ ದಿವಾನರುಗಳು ಇವರಿದ್ದ ಚಾಂದೂಲಾಲ್ ರಾಜ್ ಕಾ ಜಮಾನಾದಂತೆ ಇಲ್ಲಿಯೂ ಆಗುತ್ತಿರುವುದನ್ನು ನೋಡುತ್ತಿದ್ದೇವೆ.

ಶ್ರೀ ಜಿ. ವಿ. ಗೌಡ.—ಆ ರಾಜರು ಯಾರು ಸ್ವಾಮಿ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಗಿನ ವೈಸ್‌ರಾಯರವರು ರೆಸಿಡೆಂಟರವರಿಗೆ ಮತ್ತು ದಿವಾನರುಗಳು ಮತ್ತು ಅವರ ಸಹೋದ್ಯೋಗಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದರು ಎನ್ನುವುದಕ್ಕೆ ಗವರ್ನಮೆಂಟ್ ಆಫ್ ಇಂಡಿಯಾದವರು ಒಂದು ರಿಪೋರ್ಟಿನಲ್ಲಿ ಹೇಳಿರುವ ಪುಸ್ತಕದಲ್ಲಿದೆ. ಬೇಕಾದರೆ ಮಾನ್ಯ ಸದಸ್ಯರಿಗೆ ಅದನ್ನು ತರಿಸಿಕೊಡುತ್ತೇನೆ. ತಮ್ಮ ಮೂಲಕ ಕೇಂದ್ರ ಸರಕಾರವನ್ನು ಕೇಳಿಕೊಳ್ಳಬೇಕಾಗಿದೆ. ಕುಲಗೆಟ್ಟು ಹೋಗಿರುವ ಈ ಆಡಳಿತವನ್ನು ಚನ್ನಾಗಿ ಮಾಡಲು ಕ್ರಮ ತೆಗೆದುಕೊಳ್ಳಬೇಕಾಗಿದೆ. ಈ ಆಡಳಿತದಲ್ಲಿ ನೀತಿ ಪತನವಾಗಿದೆ. ಆ ರಿಪೋರ್ಟಿನಲ್ಲಿ ಒಂದು ಪ್ಯಾರಾಗ್ರಾಫಿನಲ್ಲಿ ಈ ರೀತಿ ಹೇಳಿದ್ದಾರೆ :—

> " He is naturally humane and benevolent, but allows great injustice and severity to be practised under the sanction of his authority. His virtues belong to his private and his fall to his private character."

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇದೇ ರೀತಿ ನಮ್ಮ ಮುಖ್ಯ ಮಂತ್ರಿಗಳ ಇಂದಿನ ದರಬಾರ ಇದೆ. ಏನಾದರೂ ಪ್ರಶ್ನೆ ಕೇಳಿದರೆ ಉದಾಸೀನ ಮಾಡುತ್ತಾರೆ. ಒಂದು ಆರ್ಡರ್ ಹೋದರೆ ಅದರ ಹಿಂದಿನಿಂದ ಮತ್ತೊಂದು ಆರ್ಡರ್ ಕಳುಹಿಸಿ ಅದನ್ನು ಹಿಂದಕ್ಕೆ ತಿರುಗಿಸುತ್ತಾರೆ. ಒಂದು ಆರ್ಡರ್ ಬಂದಕೂಡಲೆ ಇನ್ನೊಂದು ಆರ್ಡರ್ ಬಂದೇ ಬರುತ್ತದೆ ಎಂದು ತಿಳಿದುಕೊಂಡಿದ್ದಾರೆ. ನಿಜಲಿಂಗಪ್ಪನವರ ಆಡಳಿತ ವೈಖರಿ ಈ ರೀತಿ ಇದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ಆರ್ಡರ್ ಹೋದಕೂಡಲೆ ಅದರ ಹಿಂದೆ ಟೆಲಿಫೋನ್ ಮೆಸೇಜ್ ಹೋಗುತ್ತದೆ. ಈ ಆಡಳಿತ ರೀತಿ ನೀತಿಗಳು ಚಂದೂಲಾಲ ಕಾ ಜಮಾನಾ ಆಗಿವೆ. ಇದು ಕೊನೆಗಾಣಬೇಕು. ತಮ್ಮ ಮುಖಾಂತರ ಕೇಂದ್ರ ಸರಕಾರಕ್ಕೆ ಕೇಳಿಕೊಳ್ಳುತ್ತೇನೆ. ಏನು ಅತ್ಯಾಚಾರ ನಡೆದಿದೆ ಅದನ್ನು ನೋಡಬೇಕು. ಶಾಸನ ಸಭಾ ಸದಸ್ಯರಿಗೆ ರಾಜ್ಯಾಂಗದತ್ತವಾದ ಕೆಲಸ ಕಾರ್ಯಗಳನ್ನು ಮಾಡುವುದಕೆ ಇಕ್ಕಟ್ಟು ಬಂದೊದಗಿದೆ ಎಂದು ಹೇಳುತ್ತೇನೆ. ಒಂದು ಉದಾಹರಣೆ ಹೇಳುತ್ತೇನೆ. ಶಿಕಾರಿಪುರದಲ್ಲಿ ರೆವೆನ್ಯೂ ಮಿನಿಸ್ಟರ್ ಅವರು ಮುಖ್ಯ ಮಂತ್ರಿಗಳವರು ಒಬ್ಬ ತಹಶೀಲದಾರನನ್ನು ಕಳಿಸಿದ್ದಾರೆ. ಶಿಕಾರಿಪುರಕ್ಕೆ ಹೊಸದಾಗಿ ಬಂದ ತಹಶೀಲದಾರರು ಚಾರ್ಜ್ ತೆಗೆದುಕೊಂಡು ಒಂದು ತಿಂಗಳಾದರೂ ಕೂಡ ಮೊದಲಿನ ತಹಶೀಲದಾರರೂ ಇದ್ದಾರೆ. ಅವರೂ ಅಧಿಕಾರ ನಡೆಸುತ್ತಿದ್ದಾರೆ. ಒಂದು ತಿಂಗಳಾಗಿ ಹೋಗಿದ್ದರೂ ಕೂಡ ಅವರು ರಿಲೀವ್ ಆಗಿ ಹೋಗುವುದಿಲ್ಲ. ಪರ್ಮನೆಂಟ ತಹಶೀಲದಾರರು ಸ್ಟೇ ಆರ್ಡರ್ ಕೊಟ್ಟರೆ ಇನ್ನೊಬ್ಬರು ತಾಲ್ಲೂಕ ಆಫೀಸನಲ್ಲಿ ಕುಳಿತು ಇನ್ನೊಂದು ಆರ್ಡರ್ ಕೊಡುತ್ತಾರೆ. ಇದು ಚಂದೂಲಾಲ ಕಾ ಜಮಾನಾ ಆಗಿದೆ. ಹುಚ್ಚರ ರಾಜ್ಯ ನಡೆದು ನೀತಿ ಪತನವಾಗಿದೆ. ಇವತ್ತು ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳುವುದಾದರೆ ಸರಕಾರ ನಡೆಸುವ ಅಧಿಕಾರದಲ್ಲಿರಲು ಲಾಯಖ್ ಆಗಿದ್ದಾರೆಯೇ ಎಂದು ಕೇಳುತ್ತೇನೆ. ಈ ಸಭೆಯ ಸದಸ್ಯನಾದಮೇಲೆ ನಾನು ಮುಖ್ಯ ಮಂತ್ರಿಗಳನ್ನು ಚನ್ನಾಗಿ ಅರಿತುಕೊಂಡಿದ್ದೇನೆ. ಈ ರಾಜ್ಯದಲ್ಲಿ ಐದು ಜನ ಮುಖ್ಯ ಮಂತ್ರಿಗಳನ್ನು ನಾನು ನೋಡಿದ್ದೇನೆ. ಮುಖ್ಯ ಮಂತ್ರಿಗಳಾಗಿದ್ದ ಕೆ. ಸಿ. ರೆಡ್ಡಿ, ಹನುಮಂತಯ್ಯ, ಕಡಿದಾಳ್ ಮಂಜಪ್ಪ, ನಿಜಲಿಂಗಪ್ಪ, ಜತ್ತಿ ಇವರ ಆಡಳಿತ ನೋಡಿದ್ದೇನೆ. ***ಅವರು ಉನ್ನತ ಸ್ಥಾನದಲ್ಲಿದ್ದುಕೊಂಡು ಅವರ ಕಣ್ಣಿಗೆ ಯಾರೂ ಕಾಣುವುದಿಲ್ಲ. ನಾನು ಸರಕಾರಕ್ಕೆ ಹೇಳುತ್ತೇನೆ ನಮ್ಮ ಸಂಕಟ ಪರಿಹಾರ ಮಾಡಿ ಎಂದು. ಶಾಸನ ಸಭಾ ಸದಸ್ಯರು ಯಾವ ಪಕ್ಷದವರೇ ಇರಲಿ ತಮಗೆ ರಾಜ್ಯಾಂಗದತ್ತವಾದ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಅವಕಾಶವಿರಬೇಕು.***

Mr. DEPUTY SPEAKER.—I direct that the words used by the Hon'ble Member shall be expunged.

ಶ್ರೀ ಸಿ. ಜೆ. ಮುಕ್ಕಣಪ್ಪ.—ಇದನ್ನು ಏತಕ್ಕೆ ಹೇಳುತ್ತೇನೆಂದರೆ, ರಾಜ್ಯದಾಡಳಿತ ಸುವ್ಯವಸ್ಥಿತವಾಗಿ ನಡೆಯಬೇಕು. ಯಾಕಂದರೆ ಎಲ್ಲ ಮಂತ್ರಿಗಳು ಕೈ ಹಾಕುತ್ತಿರುವುದರಿಂದ ಆರ್ಡರ್ಸ್ ಜಾರಿ ಆಗುವುದಕ್ಕೆ ಅವಕಾಶಸಿಕ್ಕುತ್ತಿಲ್ಲ. ರೆವೆನ್ಯೂ ಅಧಿಕಾರಿಗಳು ಒಂದು ಕೆಲಸ ಕೂತುಕೊಂಡು ಮಾಡಿದರೆ ಪೋಲಿಸಿನವರು ಗುಂಡು ಹಾಕಿ ಲಾಟಿ ಚಾರ್ಜ್ ಮಾಡುತ್ತಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದು 17 ವರ್ಷ ವಾಯಿತು. ಜವಾಬ್ದಾರಿ ಸರಕಾರ ಬಂದಮೇಲೆ ಜನರ ಕಲ್ಯಾಣವಾಗುತ್ತದೆ ಎಂದು ಭಾವನೆ ಮಾಡಿಕೊಂಡಿದ್ದೆವು. ಆದರೆ ಜನರ ಕಲ್ಯಾಣವಾಗದೆ ದುರ್ಯೋಧನನ ಆಡಳಿತ ಮುಂದೆ ಮುಂದೆ ಹೋಗುತ್ತಿದೆ. ದುರ್ಯೋಧನನು ಪಾಂಡವರಿಗೆ ಒಂದು ಅಂಗುಲ ಭೂಮಿ ಕೊಡುವುದಿಲ್ಲ ಎಂದು ಹೇಳಿದ ರೀತಿಯಲ್ಲಿ ಇವರೂ ಸಹ ಮಾತನಾಡುತ್ತಿದ್ದಾರೆ. ಇದನ್ನು ನಿಜಲಿಂಗಪ್ಪನವರು ಅರ್ಥ ಮಾಡಿಕೊಳ್ಳದೇ ಹೋದರೆ ರಾಜ್ಯದ ಜನತೆಯು ಮಂತ್ರಿಮಂಡಳಕ್ಕೆ ಅವರ ಸ್ಥಾನ ಮಾನದ ಬಗ್ಗೆ ಸರಿಯಾಗಿ ಬುದ್ಧಿ ಹೇಳುತ್ತಾರೆ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ಉಣ್ಣೆ ನೇಕಾರರ ಸಹಕಾರ ಸಂಘದಲ್ಲಿ 18 ಲಕ್ಷ ರೂಪಾಯಿ ಹಣ ತಲೆಕೆಳಕಾಗಿದೆ. ಇನ್‌ಕ್ವಾಯರಿ ಮಾಡಬೇಕು, ಆಂಟಿಕರಪ್ಷನ್‌ವರಿಗೆ ಕೇಸ್ ರೆಫರ್ ಮಾಡಬೇಕು ಎಂದು ಹೇಳಿದರೂ ಕೂಡ ಮಾಡುತ್ತಿಲ್ಲ. ಆಡಿಟ್ ರಿಪೋರ್ಟನಲ್ಲಿ ಎಷ್ಟು ಹಣ ದುರುಪಯೋಗವಾಗಿದೆ ಎಂದು ತೋರಿಸಿದ್ದಾರೆಯೋ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ? ಇದರಲ್ಲಿ ಕಾಂಗ್ರೆಸ್ ಪಕ್ಷದ ಉಪಾಧ್ಯಕ್ಷರು ಸೇರಿಕೊಂಡಿದ್ದಾರೆ. ಅವರೊಂದಿಗೆ ಹಣಕಾಸಿನ ಸಚಿವರು, ಮುಖ್ಯ ಮಂತ್ರಿಗಳು ಸಂಬಂಧಪಟ್ಟ ಸಹಕಾರ ಸಂಘಗಳ ಮಂತ್ರಿಗಳು ಈ ನಾಲ್ಕು ಜನ ಒಂದಾಗಿ ಮೈಸೂರು ಸಂಸ್ಥಾನದ ಕೇಂದ್ರ ಉಣ್ಣೆಯ ಸಂಸ್ಥೆಯಲ್ಲಿ ನೀತಿಗೆ ವಿರೋಧವಾಗಿ ಕಾರ್ಯ ಮಾಡಿಬಿಟ್ಟಿದ್ದಾರೆ. ಅವರು ಮಾಡಿರು

***Expunged as ordered by the Chair.

ವುದಕ್ಕೆ ಎಷ್ಟೋ ದಾಖಲೆಗಳಿವೆ. ಸರಕಾರದ ಹಣ ಹೆಚ್ಚು ಕಡಿಮೆಯಾದರೆ ಎಕ್ಸ್‌ಪ್ಲನೇಷನ್ ಕೊಡಬೇಕಾಗುತ್ತದೆ. 18 ಲಕ್ಷ ರೂಪಾಯಿಗಳಿಗೆ ದಾಖಲೆ ಇಲ್ಲ. ಮೈಸೂರು ಸಂಸ್ಥಾನದ ಕಾಂಗ್ರೆಸ್ ಪಕ್ಷದ ಉಪಾಧ್ಯಕ್ಷರು ಒಟ್ಟಾಗಿ ಈ ರೀತಿ ಮಾಡಿದ್ದಾರೆ. ದೇಶದ ಹಣ ಹೀಗೆ ದುರುಪಯೋಗ ಪಡಿಸಿಕೊಳ್ಳಬಹುದೇ ? ಒಂದು ಲಾರಿ ಲೋಡ್ ಕಂಬಳಿ ಕೊಂಡುಕೊಂಡು ಅದನ್ನು ಬೇರೆ ಕಡೆ ಮಾರಿ 6,000 ರೂಪಾಯಿ ಲಾಭ ಪಡೆದಿದ್ದಾರೆ. ಆ ಲಾರಿ ಇನ್ನೂ ಈ ಊರಿಗೆ ಬಂದಿಲ್ಲ. ಇಲ್ಲಿಂದ 150 ಮೈಲ ದೂರದಲ್ಲಿದೆ. 6,000 ರೂಪಾಯಿ ಹೆಚ್ಚಿಗೆ ಬರುತ್ತದೆ ಎಂದು ಹೀಗೆ ಆಡಳಿತ ನಡೆಸಬಹುದೇ ? ಹಣ ಜೋಬಿಗೆ ಹಾಕಿಕೊಂಡು ಸುಳ್ಳು ಲೆಕ್ಕ ತೋರಿಸುತ್ತಿದ್ದಾರೆ. ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್ ಬಗ್ಗೆ ಏನಾದರೂ ಕೇಳಿದರೆ ಲೆಕ್ಕ ಪತ್ರ ಸರಿಯಾಗಿ ಇವೆ ಎಂದು ಉತ್ತರ ಹೇಳುತ್ತಾರೆ. ಇದು ಎಂಥ ಸರಕಾರ ? ಎಂದು ನಾನು ಕೇಳುತ್ತೇನೆ. ಸರಕಾರದ ಆಡಳಿತದಲ್ಲಿ ಬಿಗಿ ಇದೆಯೇ ? If they cannot administer, if they cannot hold the reins of this administration, it is rather too late, they must quit the place. I request them not to stay here any longer.

ಇದು ಹೃದಯವಿದ್ರಾವಕವಾದುದು ಎಂದು ಹೇಳುತ್ತೇನೆ. ಖಾದಿ ಕಮಿಷನ್ ಅವರು ಹಣ ಕೊಟ್ಟಿದ್ದಾರೆ. ಆದರೆ ಅವರು ಹಣ ಕೊಟ್ಟಿರುವ ಉದ್ದೇಶಕ್ಕೆ ವಿರೋಧವಾಗಿ ಕೆಲಸ ಕಾರ್ಯಗಳು ನಡೆಯುತ್ತಿವೆ. ಜಾತಿಯ ಹೆಸರಿನಲ್ಲಿ ಏನೇನೋ ನಡೆಯುತ್ತಿದೆ. ಕುರುಬರಿಗೆ ಕೆಲಸ ಒದಗಿಸುತ್ತೇವೆಂದು ಹೇಳಿ ಕಂಬಳಿ ತಯಾರಿಸಿ ಮಿಲಿಟರಿಗೆ ಸಪ್ಲೈ ಮಾಡುತ್ತೇವೆಂದು ಹೇಳುತ್ತಾರೆ. ಇದರಲ್ಲಿ ಯಾವ ನೀತಿ ಇಲ್ಲ. ಧೋರಣೆ ಇಲ್ಲ. ಎಲ್ಲಾ ತಲೆಕೆಳಕಾಗಿದೆ. ನಿರೀಕ್ಷಿಸಿದ ಫಲ ದೊರೆಯುತ್ತಿಲ್ಲ. ಈ ವಿಚಾರದಲ್ಲಿ ಲಾಲ್‌ಬಹಾದ್ದೂರ್ ಶಾಸ್ತ್ರಿಯವರಿಗೆ ಲೇಟ್ ಪ್ರೈಮ್ ಮಿನಿಸ್ಟರ್ ಅವರಿಗೆ ಲೇಬರ್ ಕಮಿಷನರ್ ಅವರಿಗೆ, ಖಾದಿ ಕಮಿಷನ್ ಅವರಿಗೆ ದೇಭರ್ ಅವರಿಗೆ ಅರ್ಜಿ ಕೊಟ್ಟಿದ್ದೇವೆ. ಇದನ್ನು ಅವರು ನೋಡಿಬಿಟ್ಟು ರಿಬೇಟ್ ಕೊಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ.

Mr. DEPUTY SPEAKER.—The House will now rise and meet again after half-an-hour.

The House adjourned for Recess at Three of the Clock and reassembled at Thirty Minutes past Three of the Clock.

[MR. SPEAKER in the Chair.]

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಾನು ಈಗ ಈ ಉಲ್ಲನ್ ಸೆಂಟ್ರಲ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಹಣ ಹೇಗೆ ದುರ್ವ್ಯಯವಾಗಿದೆ, ಅಲ್ಲಿ ಅದರ ಅಧ್ಯಕ್ಷರು ಹೇಗೆ ಹಣವನ್ನು ತಮ್ಮ ಸ್ವಂತ ಹಣದಂತೆ ಉಪಯೋಗ ಮಾಡಿಕೊಂಡಿದ್ದಾರೆಂಬುದನ್ನು ನಾನು ತಮ್ಮ ಮುಂದೆ ಇಡುತ್ತಿದ್ದೇನೆ. ಇನ್ನೂ ಮೊನ್ನೆತಾನೇ ಇದೇ ಬೆಂಗಳೂರಿನಿಂದ ಒಂದು ಪ್ಲಾಂಟನ್ನು ತೆಗೆದುಕೊಂಡು ಹೋಗಿ ರಾಯಚೂರಿನಲ್ಲಿ ಹಾಕಿದ್ದಾರೆ. ಅದರ ಒಂದು ವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕಾಗಿ ಅವರು ತಮ್ಮ ಹತ್ತಿರದ ಸಂಬಂಧೀಕರೊಬ್ಬರನ್ನು ಇಟ್ಟಿದ್ದಾರೆ. ಆದರೆ ಅವರಿಗೆ ಓದುವುದಕ್ಕಾಗಲೀ ಅಥವಾ ಬರೆಯುವುದಕ್ಕಾಗಲೀ ಬರುವುದಿಲ್ಲ. ಖಾದೀಬೋರ್ಡ್ ಕಮಿಷನರ ಕೈವಾಡ ಇದರಲ್ಲಿ ಬಹಳವಾಗಿದೆ. ಹೀಗೆ ದೇಶದಲ್ಲಿ ಇಂದು ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಹಣ ಬಹಳ ದುರುಪಯೋಗವಾಗುತ್ತಿದೆ. ತಕ್ಷಣ ಸರ್ಕಾರದವರ ಗಮನ ಇದರ ಕಡೆಗೆ ಹೋಗಬೇಕೆಂದು ಹೇಳುತ್ತೇನೆ. ಸರ್ಕಾರದವರು ಕೂಡಲೇ ಇದನ್ನೆಲ್ಲಾ ವಿಚಾರ ಮಾಡಬೇಕು. ಇನ್ನು ಈ ಬೆಂಗಳೂರು ಕೇಂದ್ರ ಉಲ್ಲನ್ ಕೋ-ಆಪರೇಟಿವ್ ಸೊಸೈಟಿಯ ಲೆಕ್ಕಪತ್ರಗಳೊಂದೂ ಸರಿಯಾಗಿಲ್ಲ. ಅಲ್ಲಿ ದುರುಪಯೋಗವಾಗಿರತಕ್ಕ 2 ಲಕ್ಷದ 16 ಸಾವಿರ ರೂಪಾಯಿಗಳನ್ನು ಲೆಕ್ಕದಲ್ಲಿ ಅಮಾನತ್ತು ಎಂದು ತೋರಿಸಿದ್ದಾರೆ. ಅದನ್ನು ಆಡಿಟ್ ಮಾಡುವಾಗ ಆಡಿಟರು ಬಹಳ ಗಂಭೀರವಾದ ಭಾಷೆಯಲ್ಲಿ ಆ ಹಣ ವಾಪಸ್ಸು ಬರುವುದು ಬಹಳ ಕಷ್ಟ, ಅಲ್ಲಿ ಆಡಳಿತಗಳೆಲ್ಲಾ ಹತೋಟಿ ಮೀರಿ ನಡೆದಿರುತ್ತವೆ ಎಂದು ಹೇಳಿದ್ದಾರೆ ಇದೇ ರೀತಿ ಇನ್ನೂ ಈ ಸೊಸೈಟಿಗಳಲ್ಲಿ ಎಲ್ಲೆಲ್ಲಿ ಹಣ ದುರುಪಯೋಗವಾಗಿದೆ ಎಂಬುದನ್ನು ನಾನು ತಿಳಿಸಬೇಕಾಗಿದೆ. ಇನ್ನು ರೋಣ ತಾಲ್ಲೂಕ್ ನರೇಗಲ್ಲು ಎಂಬಲ್ಲಿ ಒಂದು ಸೊಸೈಟಿಯಲ್ಲಿ 50 ಸಾವಿರ ರೂಪಾಯಿಗಳ ದುರುಪಯೋಗ ನಡೆದಿದೆ. ಇದನ್ನು ಕೂಡಲೇ ವಿಚಾರ ಮಾಡಬೇಕೆಂದು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಅನೇಕರು ಮನವಿಗಳನ್ನು ಕೊಟ್ಟಿದ್ದರೂ ಇಲ್ಲಿಯವರೆಗೂ ಅದರ ವಿಚಾರಣೆ ಇನ್ನೂ ನಡೆದಿಲ್ಲ. ಈ ಇಲಾಖೆಗಾದರೋ ಒಬ್ಬ ರಿಜಿಸ್ಟ್ರಾರರೂ, ಒಬ್ಬ ಜಾಯಿಂಟ್ ರಿಜಿಸ್ಟ್ರಾರರೂ, ಒಂದು ದೊಡ್ಡ ಹನುಮಂತನ ಬಾಲ ಬೆಳೆದಷ್ಟುದ್ದದ ನೌಕರರ ಸಿಬ್ಬಂದಿಯನ್ನು ಒಳಗೊಂಡಿದೆ. ಇಷ್ಟೆಲ್ಲಾ ಹಣ ದುರುಪಯೋಗವಾಗುತ್ತಿರುವಾಗ ಇಂಥ ಒಂದು ಖಾತೆ ಇಲ್ಲಿ ಇರಬೇಕೋ ಇರಬಾರದೋ ಅದು ಗೊತ್ತಾಗುತ್ತಿಲ್ಲ. ಇನ್ನು ರಾಮದುರ್ಗ ತಾಲ್ಲೂಕಿನಲ್ಲಿ ಒಂದು ಲ್ಯಾಂಡ್ ಮಾರ್ಟಗೇಜ್ ಬ್ಯಾಂಕನ್ನು ಮಾಡಿದ್ದಾರೆ. ಅಲ್ಲಿ ಕಳೆದ ಮೂರು ವರ್ಷಗಳಿಂದಲೂ ಒಂದೇ ಪಾರ್ಟಿಯನ್ನು ಹಾಕುತ್ತಾ ಅದರ ಹಿಡಿತವನ್ನು ಒಂದೇ ಒಂದು ಪಾರ್ಟಿಯ ಕೈಗೆ ಕೊಟ್ಟಿದ್ದಾರೆ. ಆದರೆ ಇಲ್ಲಿಯವರೆಗೂ ಸರ್ಕಾರದವರು ಈ ಸಹಕಾರ ಸಂಘಗಳಲ್ಲಿ ಮಾತ್ರ ಯಾವ ರಾಜಕೀಯವೂ ಬೇಡ ಎಂದು ಹೇಳುತ್ತಿದ್ದವರೇ ಈ ದಿವಸ ತಾವೇ ಆ ರಾಜಕೀಯಕ್ಕಿಳಿದಿದ್ದಾರೆ. ಇದರಿಂದ ಅವರು ಹೇಳುತ್ತಿರುವ ಆ ಇಮೋಷನಲ್ ಇಂಟಿಗ್ರೇಷನ್ನಿಗೇ ಇವರೇ ಅಡ್ಡಿಯಾಗಿದ್ದಾರೆ. ಅವರು ಹೀಗೆ ಅಲ್ಲದ ಸಲ್ಲದ ಕೆಲಸಗಳನ್ನು ಮಾಡುತ್ತಿದ್ದರೂ ವಿರೋಧಪಕ್ಷದವರು ಈ ಭಾವೈಕ್ಯತೆಗೆ ಅಡ್ಡಿಯನ್ನೊಡ್ಡುತ್ತಿದ್ದಾರೆಂದು ಹೇಳುತ್ತಿರುವುದು ತೀರಾ ಅನ್ಯಾಯ. ಈ ಬ್ಯಾಂಕಿನ ವಿಚಾರದಲ್ಲಿ ಸರ್ಕಾರದವರೇನು ಮಾಡಿದ್ದಾರೆಂಬುದನ್ನು ಹೇಳುತ್ತೇನೆ : ಆ ಬ್ಯಾಂಕಿಗೆ ಒಟ್ಟು 20 ಜನ ಡೈರೆಕ್ಟರುಗಳಿದ್ದಾರೆ. ಅವರಲ್ಲಿ 12 ಜನರು ಒಂದು ಕಡೆ, ಇನ್ನುಳಿದ 8 ಜನರು ಹಳೇ ಮೈಸೂರು ಮತ್ತು ಮಂಗಳೂರಿನವರು ಇನ್ನೊಂದು ಕಡೆ. ಈ ಎರಡು ಪಾರ್ಟಿಯವರೂ ಮಾತೆತ್ತಿದರೆ ನೀವು ಆ ಕಡೆಯವರು, ನೀವು ಈ ಕಡೆಯವರು, ನೀವು ಆ ಭಾಗದವರು, ನಾವು ಈ ಭಾಗದವರು ಎಂದು ವಾದ ಮಾಡುವುದಕ್ಕೆ ಹೊರಟಿದ್ದಾರೆ. ಹೀಗಾದರೆ ಇನ್ನೆಲ್ಲಿಯ ಭಾವೈಕ್ಯ ಸಾಧನೆ ? ನಾನು ಹೇಳುತ್ತೇನೆ : ಇದು ನ್ಯಾಯವಾಗಿ ಆಗದೆ ಇದ್ದರೆ ಮುಂದೆ ಇದರಿಂದ ಆಗಬಾರದ್ದಾಗಿ, ನಡೆಯಬಾರದ್ದು ನಡೆಯುತ್ತದೆ ಎಂದು. ಈ ಕೂಗೆಲ್ಲಾ ನಾಳೆ ಜನರ ಕಿವಿಗೆ ಬಿದ್ದು ಮುಂದೆ ಇದರಿಂದ ಬಹಳ ದುಷ್ಪರಿಣಾಮಗಳಾಗುತ್ತವೆ. ಅದನ್ನು ನಾವೂ ನೀವು ಎದುರಿಸುವುದಕ್ಕಾಗುವುದಿಲ್ಲ. ಹೊರಗಡೆಯಲ್ಲಿ ಮಾತೆತ್ತಿದರೆ ನಮ್ಮದು ಕನ್ನಡ ನಾಡು, ನಮ್ಮದು ಕನ್ನಡ ನುಡಿ, ನಮ್ಮದು ಕನ್ನಡ ಜಲ ಎಂದು ಏನೇನೋ ಹೇಳುತ್ತಾರೆ. ನಮ್ಮ ವಿದ್ಯಾ ಮಂತ್ರಿಗಳು. ಆದರೆ ಒಂದು ಕಡೆಯಲ್ಲಿ ಕನ್ನಡ ಮಾಧ್ಯಮಕ್ಕೆ ಅವಕಾಶ ಮಾಡಿಕೊಡಿ ಎಂದು ಜನರು ಒತ್ತಾಯ ಮಾಡುತ್ತಿದ್ದರೆ ಅಲ್ಲಿ ಇವರು ಎಂಥ ಹೃದಯವಿದ್ರಾವಕವಾದ ಸಂಗತಿಯೊಂದನ್ನು ಮಾಡಿದ್ದಾರೆಂಬುದನ್ನು ಹೇಳುತ್ತೇನೆ.

ಮಂಡ್ಯಾ ಜಿಲ್ಲೆಯಲ್ಲಿರತಕ್ಕ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಕನ್ನಡ ಮಾಧ್ಯಮವನ್ನು ಇಟ್ಟುಕೊಡಿ, ಅಲ್ಲಿಯ ಹುಡುಗರು ಕನ್ನಡದಲ್ಲಿ ಪಂಡಿತರಾಗಬೇಕೆಂಬ ಕುತೂಹಲ ಇದೆ, ಎಂಬುದಾಗಿ ಅಲ್ಲಿನ ಪುರಪ್ರಮುಖರೂ, ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟೆರಿಗಳೂ, ಆ ಜಿಲ್ಲೆಯ ಎಲ್ಲಾ ಶಾಸನ ಸಭಾ ಸದಸ್ಯರೂ ಮತ್ತು ಆ ಕಾಲೇಜಿನ ವಿದ್ಯಾರ್ಥಿಗಳೂ ಕೇಳಿಕೊಂಡಿದ್ದರೆ— ಅಲ್ಲಿರತಕ್ಕ 488 ಜನರಲ್ಲಿ 17 ಹೆಣ್ಣು ಹುಡುಗಿಯರಿದ್ದಾರೆ, ಅವರು ಕನ್ನಡದಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆಯಬೇಕೆಂಬ ಆಶೆ ಇದೆ ಎಂತ ಕೇಳಿಕೊಂಡಿದ್ದರೆ — ವಿದ್ಯಾ ಇಲಾಖೆಯ ಡೈರೆಕ್ಟರವರು ತಾ : 9-2-1965ರಲ್ಲಿ ಒಂದು ಪತ್ರವನ್ನು ಬರೆದು ಈಗ ಸರ್ಕಾರದವರೇನೂ ಮಾಡುವುದಕ್ಕಾಗುವುದಿಲ್ಲ ನೀವು ಕನ್ನಡ, ಇಂಗ್ಲೀಷು ಮತ್ತು ಹಿಂದೀ ಎಲ್ಲವನ್ನೂ ಅಭ್ಯಾಸ ಮಾಡಲೇಬೇಕು ಎಂಬುದಾಗಿ ತಿಳಿಸಿದ್ದಾರೆ. ಅಲ್ಲಿ ಪಿ.ಯು.ಸಿ. ಯಲ್ಲಿ ಬೇರೆ 114 ಜನ ವಿದ್ಯಾರ್ಥಿಗಳಿದ್ದಾರೆ. ಅವರೆಲ್ಲರೂ ಕೂಡ ಕನ್ನಡ ಮಾಧ್ಯಮವೇ ಬೇಕೆಂದು ಕೇಳಿದ್ದಾರೆ. ಆದರೆ ಈ ಸಂದರ್ಭದಲ್ಲಿ ಸರ್ಕಾರದವರು ಕೈಗೊಂಡಿರತಕ್ಕ ಧೋರಣೆ ಜನರು ಮೆಚ್ಚತಕ್ಕದ್ದಲ್ಲ ಎಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಚೆನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ಮೊನ್ನೆತಾನೆ ನಡೆದಂಥ ಒಂದು ವಿಚಾರ ಈಗಾಗಲೇ ಎಲ್ಲರಿಗೂ ಗೊತ್ತಾಗಿದೆ. ಆ ವಿಚಾರದಲ್ಲಿ ಸರ್ಕಾರದ ಅಧಿಕಾರಿಗಳು ಯಾವ ರೀತಿ ವರ್ತನೆ ಮಾಡುತ್ತಿದ್ದಾರೆ......

ಗೃಹ ಸಚಿವರು ಅಲ್ಲಿ ಇದ್ದಂತಹ ಒಬ್ಬ ದೌರ್ಜನ್ಯ ಕೃತ್ಯವನ್ನು ಎಸಗಿದಂತಹ ಪೋಲೀಸ್ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಿದರೆ, ಮುಖ್ಯ ಮಂತ್ರಿಗಳು ಆತನನ್ನು ರಿಲೀವ್ ಮಾಡಬೇಡಿ ಆತ ದಕ್ಷ ಅಧಿಕಾರಿ, ಅವರು ಇರಲೇ ಬೇಕು ಎಂದು ಹೇಳಿ ಆತನನ್ನು ಉಳಿಸಿಕೊಂಡಿರುವಾಗ ಅಂತಹವರಿಂದ ನಮ್ಮ ರಾಜ್ಯದಲ್ಲಿ ಪುಂಡು ಪೋಕರಿಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೋ ಎಂದು ಕೇಳುತ್ತೇನೆ. ಅವರು ಒಬ್ಬರ ಕೊಲೆಗೆ ಕಾರಣರಾದರು ಅಂತಹವರನ್ನು ಉಳಿಸಿಕೊಂಡಿರತಕ್ಕ ಸರ್ಕಾರ ಇವತ್ತು ಏನಿದೆ ಇದು ನಾಗರಿಕ ಸರ್ಕಾರ ಅಲ್ಲ. ಈ ರಾಜ್ಯದಲ್ಲಿ ಒಳ್ಳೆಯ ನಾಗರಿಕರು ವಾಸ ಮಾಡುವುದಕ್ಕೆ ಎಲ್ಲೂ ಕೂಡ ಸ್ಥಳ ಇಲ್ಲ, ದೌರ್ಜನ್ಯ ಕೃತ್ಯ ಮಾಡುವವರಿಗೇ ಇಲ್ಲಿ ಸ್ಥಳ ಇರುವುದು ಎಂದು ಹೇಳಿ ಅಲ್ಲಿಗೆ ಬಿಡುತ್ತೇನೆ.

ಇದೇ ಸಭೆಯ ಮಾನ್ಯ ಸದಸ್ಯರಾದ ಶ್ರೀಮಾನ್ ಕುಂದೂರು ರುದ್ರಪ್ಪನವರನ್ನು ಶಿವಮೊಗ್ಗಾ ಜಿಲ್ಲೆಯ ಒಬ್ಬ ಪೋಲೀಸ್ ಇನ್‌ಸ್ಪೆಕ್ಟರು ಶಿವಮೊಗ್ಗಾದಲ್ಲಿ ಹ್ಯಾಂಡ್ ಕಫ್ ಮಾಡಿ ಬೀದಿಯಲ್ಲಿ ಮೆರವಣಿಗೆ ಮಾಡಿಸಿಕೊಂಡು ಹೋದರು, ಅದನ್ನು ಕೇಳಿದಾಗ ಆವತ್ತು ಮಾನ್ಯ ಮುಖ್ಯ ಮಂತ್ರಿಗಳು ಅವರ ಮೇಲೆ ಯಾವ ಅನುಕಂಪವನ್ನು ತೋರಿಸಿದರೋ ಆ ಅನುಕಂಪವನ್ನು ಈ ಸಂದರ್ಭದಲ್ಲಿ ಏಕೆ ತೋರಿಸಲಿಲ್ಲ? * * * ಇಷ್ಟನ್ನು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Curses should not be hurled on the Floor of the House. Let this be expunged.

Sri C. J. MUCKANNAPPA.—Sri K. Hanumanthiah the other day said that the ghost of Muniamma will hunt after the Ministry.

Sri V. S. PATIL (Belgaum-I).—We have very little to speak when we discuss these Appropriation Bills. Sir, our House has already passed the Demands for Grants to the tune of Rs. 97,53,20,500 and by this Bill we are now authorising the Government to spend Rs. 2,87,17,97,800 for the coming year. This is really a very huge amount which is to be spent or appropriated by the Government during the coming twelve months. Out of this huge amount Rs. 74,86,20,000 has been shown as public debt repayment and inter-State settlement. This amount is charged amount. Besides, this, there is another amount for the debts incurred by this Government that is given Rs. 18,74,22,000. That also is charged amount. These two amounts practically come to nearly fifty per cent of the budget amount for the next year. Sir, from the beginning, from 1957 when the State was re-organised, from that time, I am pressing before the House that the Government is running into heavy debts. They are spending much more than their resources could permit, by various means, ways and means method, by raising loans from private persons as well as from the Central Government and other Government and these debt heads will certainly land us in a very difficult position. I am pressing this point for the last so many years and every year Sir, we find that the debt charges are increasing by leaps and bounds. I do not know, a time may come, if we proceed as we are doing at present that, when we will say that all these debts should be deemed as wiped out by the Central Government or somebody else. That means we may declare ourselves to be bankrupt. That position is likely to come in the near future if we proceed in the same way of spending money on schemes wherein we do not get any adequate returns. Sir, it is an admitted fact on the floor of this House that we have spent more than 100 crores on irrigation where we are unable to take back even the initial or interest charges to be paid to our creditors. How long is this condition to proceed or continue ? We are still raising loans from others and the Hon'ble Minister for Finance has said on the floor of this House on several occasions to meet this sort of criticism, that because we are creditworthy, because our assets or the State's assets are huge and unlimited, the people and the Central Government are giving us loans.

* * Expunged as ordered by the Chair

(SRI V. S. PATIL)

Certainly, if the entire State is taken into consideration, then assets may be greater. But that does not mean that we should spend money on such items which are not creative, which will not give any return for the repayment of these debts. This will be a spend-thrift policy and we are sure that this policy of the Government is creating inflation, is creating cheap-money and has been a source for raising the prices of essential goods including food. I do not know when our Government is going to come to its senses and bring down and stop this policy of spend-thriftness. Especially Sir, I should like to refer to the grant or amount to be spent by the Public Works Department this year. It is Rs. 22,84,32,000. This amount will be mostly spent on buildings. Sir, during the last 8 or 9 years, I feel that this Government has spent huge amounts on unnecessary buildings in various places. In my own place, they have constructed so many big buildings where some small additions could have sufficed. They have constructed even compound walls to so many buildings and grounds. I do not understand the mentality of this Government. By raising loans what is it that this Government is going to get by constructing huge massive buildings when immediately before re-organisation, the Government was efficiently running in old buildings. Where was the necessity for spending on such huge buildings ? But I discussed this matter with some of my friends.

I am not an expert. But, according to them, forty per cent of the expenditure is merely a waste. And out of that forty per cent, divisions are made from the labourer, contractor, engineer and higher-ups. If this is a fact, I do not understand where we are proceeding. So, I submit that effective check must be made about the wastage that is being committed by this Public Works Department, which was known and is still known to be a department of public waste. Something must be done to have an effective check on these estimates and to stop these building activities at least so long as we can pull on with the existing buildings.

Then, Sir, there is a provision in this Budget for the Police. The amount sanctioned or approved is 5,46,06,000. Sir, it is better that we say much less about this particular department. We are tired of criticising the Police Department every year and in every meeting. Sir, there are such glaring instances of corruption in this department, that it is very difficult to say or very difficult to find out words to criticise properly the working of this particular department. If that department is meant only for pressing down the Opposition, all right, they can do so. But let them see that the department uses all its powers for the protection of the people. The money of the tax-payer must be first saved. They must be honoured first. But our department of Police has become such a thing that it is very difficult to find adequate words to describe it. In my taluka, two murders were committed in a village and the Police Sub-Inspector was about half a mile from that place of

murders. He did not take cognisance of it immediately. He waited for a considerable time and after three days, he arrested a few persons—not all the persons. Immediately after that, within 15 or 20 days or a month, another murder in the neighbouring village took place. Our allegation was that this particulars police officer was at the bottom or he was the instigator of these crimes for taking bribes. In spite of this, when we complain to the concerned higher-ups here, the man was transferred. For how many days ? Only for ten or 12 days. Immediately after ten or fifteen days, he again came there.

(*Interruption*)

Is this the way in which we can expect justice and protection from these officers ? Sir, two days back another matter of police revenge was brought before this House and on that, we had to stage a walk out. What a horrible thing that story revealed. An ex-M.L.A.'s brother was harassed by the Police. He was prosecuted in about 17 cases and in all those cases, he was acquitted. He appealed to all the Hon'ble Minister and the officers. What was the result ? The result was nobody cared for his plea.

An HON'BLE MEMBER.—The Police Inspector got a certificate for honesty.

Sri V. S. PATIL.—That is nothing. He ought to have been awarded the President's Police Medal. That is the way in which the administration of the Police Department is going on. If Police are to be given such a free hand for corruption, for nepotism and for doing such illegal things, then where can the people go ? What will people think of us ? Is this a democracy ? Is there no grain or shade of democratic principle ? My submission through you to them is—you are running the country. You are spoiling the good name of our nation. You are spoiling the name of parliamentary democracy. You are forcing the people to resort to violence. Because, when a man finds that all legal means are useless and when they become ineffective, he becomes desperate. There is no other alternative for him but to take the law into his own hands and take his revenge. Shall we be party to these things ? Is it reasonable for us to force the people to take the law into their own hands just to see that justice is done to them ? Is this the way of democracy ? If our Government is not going to remedy these matters, then, Sir, will it be unreasonable to say that these Ministers are sharers of the spoils which the Police collect. That is why I should like to submit, even though the Demands have been passed by this House, it is not reasonable to allow these persons to spend these huge amounts of the tax payers' money.

Sir, one thing I should like to say and that is about the Medical and Public Health Departments. We are spending huge amounts. But what about doctors, nurses and other staff in these hospitals ? Sir, in Belgaum, they have spent five or six lakhs of rupees for constructing a hospital building. But there is no water at all. There are no servants at all. There is a building. I have explained to you why a building is.

(SRI V. S. PATIL)

constructed. Even the water is not sufficient. Even though Belgaum City is now supplied with protected water supply, the hospital has no water. This is really wonderful. So, I submit, Sir, that instead of spending huge amounts on buildings, see that the amenities required for these are supplied.

Sir, this Bangalore City was once a heaven on the face of Bharata because of its beautiful climate, etc. What is now...

Mr. SPEAKER.—Why does he want to go away from heaven ?

(*Laughter*)

Sri V. S. PATIL.—But what is it now ? That heaven has been turned into a hell by the actions of these people. There is no water. There are no facilities. There is no protection. Then, by this open drainage, these people have created such a havoc by facilitating increase of mosquitoes it is impossible for anyone to work even in some of the streets. This beautiful city has been turned into practically a hell by the actions of these people. They want to protect some interests for the open drainage and that is why all this has been done.

Sir, I should like to submit one small matter regarding our Ministers.

Hon'ble Minister Sri B.D.Jatti has several times sassured this House that the toning up of the administration has been made and he said that whenever any paper comes to any office, it must be disposed of within a short time. Sir, the Taluk Development officer from my place has sent a requisition on 7-1-1965 with a request for supply of cement of a particular quantity and the number is also given. But, we are searching these papers in the office here and there is no trace of it yet. So, I would like to point out to the Hon'ble Minister to do something to see that the officers do careful work and prompt work.

4-00 P. M.

Sri K. S. SURYANARAYANA RAO (Mysore City).—Mr. Speaker, Sir, I would like to take this opportunity to say a few words. By passing this appropriation of accounts we are handing over hundred of crores of rupees to the Finance Minister for expenditure during the current year and the next year. Sir, many times he has mentioned about economy, saving and words like that. If he really means that, quite a lot of money could be saved. I am only interested in pointing a few things by which we can show that however piously he may say them he is not able to stem the tide of extravagance. I hope, if not in the past, at least in the current year and in the year to come, they will be attended to.

Sir, at the outset, I must say that though we have planning and planned way of expenditure, our borrowings and the ways and means

position are too heavy and the interest that we are paying is very much. If we keep ourselves strictly to the planned schemes, we would have saved a lot of money. Another point is, here is a Government which advances money to the Electricity Board and that Electricity Board does not spend that money but invests that money at very cheap rate in Commercial Banks. These are all matters that have been referred to in the Public Accounts Committee Report. This is a very valuable Report I should say, because they have made such searching enquiries about certain aspects of administration which should be looked into carefully by Government.

Sir, no doubt the report is for the year 1961-62. I wish the Finance Minister contradicts me on the floor of this House that these things have not happened in the year past. The other things is, we are investing on industries and he said that the industries are doing very well I will give one instance. Take the old Electric Factory; the return is 1.4 or 1.5 per cent. Sir, if that money had been in the hands of a private person, would he ever invest his money on such industries? Even if we invest money in a Bank, we get 6 per cent. Here, we get 1.5 per cent. I would like to refer to P. W. D. Our friends have referred to it and I do not want to go to details. I would only say that even the stores have not been checked. Several lakhs worth of machinery are idling in the yard of the P. W. D. Stores. More than that, the most important thing is, even with regard to the allegations made on the floor of this House about the Sharavathi Project proper heed is not paid. In the year 1961-62 the Committee have referred to a transaction. I wish, Sir, these are matters which should be properly dealt with, handled enquired and if found fault with, they should be severely dealt with.

Sir, in the P.W.D. what happens is this. If the Finance Minister instead of asking us to tighten our belts effects all these savings; he will be able to give more liberal concessions. That is why, I am mentioning this. Take any project; we are providing staff to the optimum level but the progress is very poor. The Estimates Committee has said about Ghataprabha project. These things show that many times things are done for which we cannot assign reasons to-day. But, things have happened. If the Finance Minister could withhold consent to such projects and such works, I think, he will come out with concessions in taxes.

Sir, there is also another point. So far as administration is concerned, I should say the machinery is out-dated and out-moded. When the revision of pay scales came up, the Finance Minister was pleased to say that there is a surplus of 25 per cent. I very much wish that he adjusts that 25 per cent within the frame work of the administration. A time has come when we have to recast the whole administrative machinery and the system. We can save money, and energy and it would result in quick turn-over and greater return. If we do so, we can affect a lot of savings. If we could save in these ways, the Finance Minister will have to give some tax concessions, and tax relief to so many people.

(SRI K. S. SURYANARAYANA RAO)

Sir, this is a State Budget that we are discussing and this budget should not be treated as if it is a municipal budget or a local-body's budget. Whatever we do, whatever plan we may have, it should have its minimum effect on the public. Our budgets absolutely have no impact on the people. They made no perceptible change in the attitude of the people. For example, take the Central budget. The first information would be known to the whole country by the evening and by that time the whole country would have adjusted itself to the new taxation proposal. The change occurs either with an imposition or with a relief. Supposing the Finance Minister says, we reduce the sales tax on commodities because the rate of food articles have gone up so much. There will be a lot of relief.

Mr. SPEAKER.—Please conclude.

Sri K. S. SURYANARAYANA RAO.—With these few suggestions, I close my speech.

†ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಈ ಸಲದ ಹಣವನ್ನು ಹಣಕಾಸಿನ ಸಚಿವರ ಕೈಗೆ ಕೊಡುವಾಗ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಸ್ವಾಮಿ, ಈ ದೇಶ ಏನಾದರೂ ಉದ್ಧಾರವಾಗಬೇಕಾದರೆ ಈ ಹಳೇ ನೀತಿಗಳು ಇವೆಯಲ್ಲಾ ಅವನ್ನು ಬಿಡಬೇಕೆಂದು ಹೇಳುತ್ತೇನೆ. ಈ ಸಭೆ ನಡೆಯುವುದು, ಯಾವುದಾದರೂ ಒಂದು ವಿಷಯ ಚರ್ಚೆಗೆ ತರುವುದು ಏನು ಉದ್ದೇಶ ಎಂದರೆ ಸರ್ಕಾರದಲ್ಲಿರತಕ್ಕ ಲೋಪದೋಷಗಳನ್ನು ತಿದ್ದಿಕೊಂಡು ಪ್ರಜೆಗಳಿಗೆ ನ್ಯಾಯವಾದ ಒಂದು ವ್ಯವಸ್ಥೆ ಆಗಲಿ ಎಂಬ ಅಭಿಪ್ರಾಯದಿಂದ ಈ ಸಭೆಯಲ್ಲಿ ಅವು ಚರ್ಚೆಗೆ ಬರುತ್ತವೆ. ಸ್ವಾಮಿ ಪ್ರಮಾಣ ವಚನ ಸ್ವೀಕಾರ ಮಾಡಿ ಮೆಂಬರುಗಳಾದ ತಕ್ಷಣ ನಾವು ಸುಳ್ಳು ಹೇಳುವುದಿಲ್ಲ ಎಂದು ಹೇಳುತ್ತೇವೆ. ನಾವು ಕಂಡಹಾಗೆ ಪ್ರತಿಯೊಂದು ಪ್ರಶ್ನೆಗೂ ನೂರಕ್ಕೆ ತೊಂಭತ್ತು ಭಾಗ ಸುಳ್ಳು ಹೇಳಿದರೆ—

ಅಧ್ಯಕ್ಷರು.—''ಸುಳ್ಳು'' ಎಂಬ ಪದವನ್ನು ತಾವು ವಾಪಸು ತೆಗೆದುಕೊಳ್ಳಬೇಕು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಆಗಲಿ ಸ್ವಾಮಿ, ತಪ್ಪು ಉತ್ತರ ಹೇಳಿದರೆ ಜನ ಏನು ಮಾಡಬೇಕು ? ನೂರಕ್ಕೆ ತೊಂಭತ್ತು ಅಲ್ಲದೇ ಇದ್ದರೂ ಐವತ್ತರಷ್ಟು ಅಸತ್ಯ ನುಡಿದರೆ ಹೇಗೆ ? ಈ ಸಭೆಯಲ್ಲಿ ವಲ್ಲಭಾಯ್ ಪಟೇಲರ ಫೋಟೋ ಇವೆ, ಮೇಲೆ ತಕ್ಕಡಿ ಇದೆ, ತಾವು ಅಧ್ಯಕ್ಷರು ಕುಳಿತಿದ್ದೀರಿ ಸತ್ಯಕ್ಕೆ ದೂರವಾದ ವಿಷಯಗಳನ್ನು ಪ್ರತಿಯೊಂದು ಪ್ರಶ್ನೆಗೂ ಹೇಳುವುದಾದರೆ ಈ ಶಾಸನ ಸಭೆಯಿಂದ ಏನು ಪ್ರಯೋಜನ ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಯಾವುದಾದರೂ ವಿಷಯ ಕೇಳಿದರೆ ನಮ್ಮ ದೇಶದಲ್ಲಿ ಹಣ ಇಲ್ಲ ಎಂದು ಹೇಳುತ್ತೀರಿ, ಈ ಹಣದ ಮೇಲೆ ಹತೋಟಿ ಎಷ್ಟುಮಟ್ಟಿಗೆ ಇದೆ ಎಂದರೆ ಪಿ. ಡಬ್ಲ್ಯು. ಡಿ. ಮಿನಿಸ್ಟರು ಖರ್ಚು ಮಾಡುತ್ತಾರೆ ಎಂದು ಹೇಳಿ ಮತ್ತೊಬ್ಬ ಮಿನಿಸ್ಟರು ನಾನೇಕೆ ಖರ್ಚು ಮಾಡಬಾರದು ಎಂದು ಅವರೂ ಮಾಡುತ್ತಾರೆ. ಹೀಗಾಗಬಾರದು. ಫೈನಾನ್ಸ್ ಮಿನಿಸ್ಟರಿಗೆ ಇದರ ಮೇಲೆ ಸಂಪೂರ್ಣ ಹತೋಟಿ ಇರಬೇಕು. ಕೊಟ್ಟ ಹಣ ಸದ್ವಿನಿಯೋಗವಾಯಿತೇ ಇಲ್ಲವೇ ಎಂಬುದನ್ನು ಅವರು ನೋಡಬೇಕು. ಇನ್ನೊಂದು ವಿಷಯ ಹೇಳಿದೆ ಅದಕ್ಕೆ ಯಾವ ನಿಗಾ ಕೂಡ ತೆಗೆದುಕೊಳ್ಳಲಿಲ್ಲ ಅದನ್ನು ತೆಗೆದುಹಾಕುವುದಕ್ಕೆ ವ್ಯವಸ್ಥೆ ಮಾಡಲಿಲ್ಲ. ಒಂದೊಂದು ದಿವಸ ಒಂದೊಂದು ಸ್ಟೇಟ್‌ಮೆಂಟ್ ಕೊಡುತ್ತೀರಿ. ಮೊನ್ನೆ ದಿವಸ ಮಾನ್ಯಮಂತ್ರಿಗಳ ಜೊತೆಯಲ್ಲಿ ಚನ್ನರಾಯ ಪಟ್ಟಣಕ್ಕೆ ಟೂರ್ ಹೋಗಿದ್ದೆ ಎಷ್ಟು ಕಡೆ ಮರಗಳಿಗೆ ಸೇಂದೀ ಗಡಿಗೆ ಕಟ್ಟಿದ್ದರು ಎಂಬುದನ್ನು ತೋರಿಸಿಕೊಂಡು ಬಂದೆ. ನಾನು ಹೇಳುವುದು ಅಸತ್ಯ ಅಥವಾ ಸತ್ಯಕ್ಕೆ ದೂರವಾದದ್ದು ಎಂದರೆ ಅದೇನೋ ಜ್ಯೂಡೀಷಿಯಲ್ ಎನ್‌ಕ್ವೈರಿ ಎಂದು ಹೇಳುತ್ತಾರಲ್ಲಾ ಅದನ್ನು ಮಾಡಿ, ಅದನ್ನು ಒಪ್ಪಿಕೊಳ್ಳುವುದಕ್ಕೆ ನಾನು ಸಿದ್ಧವಾಗಿದ್ದೇನೆ. ಯಾವತ್ತು ಬೇಕಾದರೂ ಮಾಡಬಹುದು ನಾನು ಅದಕ್ಕೆ ಸಿದ್ಧವಾಗಿದ್ದೇನೆ. ವ್ಯವಸಾಯದ ಇಲಾಖೆಯಲ್ಲಿ ಹಣ ಖರ್ಚು ಮಾಡಿದ್ದೀರಿ, ಬೀಜ ಎಷ್ಟುಮಟ್ಟಿಗೆ ರೈತನಿಗೆ ಸಿಕ್ಕಿದೆ ಎಂಬುದನ್ನು ಯೋಚನೆ ಮಾಡಿ.

ಇನ್ನು ನುಗ್ಗೇಹಳ್ಳಿ ವಿಷಯ ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ. ಹೋದ ಸಾರಿ ಜನರಲ್ ಎಲೆಕ್ಷನ್ ಆದಾಗ ನಮ್ಮ ಪಾರ್ಟಿಯ ಇಬ್ಬರ ಅರ್ಜಿಗಳು ಬಂದವು. ಅದರಲ್ಲಿ ಒಬ್ಬರಿಗೆ ಟಿಕೆಟ್ ಕೊಟ್ಟೆವು—ಈಗ ಅವರು ನಮ್ಮ ಪಕ್ಷದ ಲೀಡರ್ ಆಗಿದ್ದಾರೆ. ನಿಮ್ಮ ಪಕ್ಷದ ಜನರಲ್ ಸೆಕ್ರೆಟರಿಯವರು ಅವರಿಗೆ ಎದುರಾಗಿ ನಿಂತು ಸೋತರು. ಆಮೇಲೆ ಏನು ಆಯಿತು ? ಅವರ ಮೇಲೆ ಇಲ್ಲದ ಸಲ್ಲದ ಸಣ್ಣಪುಟ್ಟ ದರೋಡೆಕೋರರನ್ನು ಎತ್ತಿಕಟ್ಟಿ, ನಮ್ಮ ಪಾರ್ಟಿಗೆ ಸಹಾಯ ಮಾಡಿದಂತಹ ಎಕ್ಸ್. ಎಂ. ಎಲ್. ಎ. ಮೇಲೆ ಎರಡು ಮೂರು ಕೇಸುಗಳಾದ ಮೇಲೆ ಅವರು ನಿಮ್ಮ ಹತ್ತಿರ ಬಂದು ನಿಮ್ಮ ಅಧಿಕಾರಿಗಳನ್ನು ಕಂಡು ಅಲ್ಲಿದ್ದ ಒಬ್ಬ ಪೋಲೀಸ್ ಅಧಿಕಾರಿಯನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡಬೇಕೆಂದು ಮನವಿಮಾಡಿಕೊಂಡರು. ಅದರ ಮೇಲೆ ಆ ಅಧಿಕಾರಿಯನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡಿದರು. ತಕ್ಷಣ ನಿಮ್ಮ ಜನರಲ್ ಸೆಕ್ರೆಟರಿಯವರು ಮಾನ್ಯ ಮುಖ್ಯಮಂತ್ರಿಗಳನ್ನೂ ಮತ್ತು ಹೋಂ ಮಿನಿಸ್ಟರ್ ಅವರನ್ನೂ ನೋಡಿ ಆ ಟ್ರಾನ್ಸ್‌ಫರ್‌ನ್ನು ಕ್ಯಾನ್ಸಲ್ ಮಾಡಿಸಿದರು. ಇದೆಲ್ಲಾ ಅಲ್ಲಿ ಇದ್ದಂಥ ಆ ಒಬ್ಬ ಸಬ್ ಇನ್‌ಸ್ಪೆಕ್ಟರ್‌ಗೆ ಹುಮ್ಮಸ್ಸು ಕೊಟ್ಟ ಹಾಗೆ ಆಯಿತು. ಪ್ರತಿ ಬಡ್ಜೆಟ್ ಸೆಷನ್‌ನಲ್ಲೂ ಕೂಡ ಈ ವಿಷಯ ಬಂದಿದೆ. ಕಳೆದ ವರ್ಷ ಎಕ್ಸ್. ಎಂ. ಎಲ್. ಎ. ಅವರನ್ನು ಚಾಕುನಿಂದ ತಿವಿಯಲಾಯಿತು ಅವರನ್ನು 18 ದಿವಸ ಆಸ್ಪತ್ರೆಯಲ್ಲಿ ದಾಖಲ್ ಮಾಡಲಾಗಿತ್ತು ಆ ಟೈಂನಲ್ಲಿ ಸೆಷನ್ ನಡೆಯುತ್ತಾ ಇತ್ತು. ಆ ಸೆಷನ್‌ನಲ್ಲೂ ಕೂಡ ಈ ವಿಷಯ ಬಂದಾಗ ಫೋನ್ ಮಾಡಿ ಕೇಳಿದ್ದೇನೆ ಅವನು ಬಹಳ ಒಳ್ಳೆಯ ಮನುಷ್ಯ, ಅವನು ಅಲ್ಲೇ ಇರಬೇಕು, ಲಾ ಅಂಡ್ ಆರ್ಡರ್ ಮೇನ್‌ಟೇನ್ ಮಾಡುವುದಕ್ಕೆ ಎಂದು ಹೇಳಿ ಉತ್ತರ ಕೊಟ್ಟಿರಿ. ಪುನಃ ನಾವು ನೀವು ಅಡ್ಮಿನಿಸ್ಟ್ರೇಷನ್‌ನಲ್ಲಿ ಕೈಹಾಕುತ್ತಾ ಇದ್ದೀರಿ, ಆದ್ದರಿಂದ ಆಡಳಿತ ವ್ಯವಸ್ಥೆ ಕೆಟ್ಟುಹೋಗುತ್ತಾ ಇದೆ ಆ ಮನುಷ್ಯ ಯಾರು ಏನು ಎಂಬುದನ್ನು ತಿಳಿದುಕೊಳ್ಳದೆ ಕೈಹಾಕುತ್ತಾ ಇದ್ದೀರಿ ಎಂದು ಹೇಳಿದ್ದಕ್ಕೆ ಅವರು ಏನು ಹೇಳಿದರು ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ ಅದು ಪ್ರೊಸೀಡಿಂಗ್ಸ್‌ನಲ್ಲಿ ಇವೆ, ಇಂಗ್ಲೀಷ್‌ನಲ್ಲಿರುವುದರಿಂದ ಯಾರ ಕೈಯಲ್ಲಾದರೂ ಇದನ್ನು ಓದಿಸಬಹುದು.

ಅಧ್ಯಕ್ಷರು.—ಅದನ್ನು ಇಲ್ಲಿಗೆ ಕಳುಹಿಸಿ ನೋಡೋಣ—'ಮುಂದೆ ಹೇಳಿ'.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ನುಗ್ಗೇಹಳ್ಳಿ ವಿಚಾರ ತಾವು ಕೈಬಿಡಬೇಕೆಂದು ಹೇಳಿದರೆ ಅವನು ಒಳ್ಳೆಯ ಸತ್ಯವಂತ, ಲಾ ಅಂಡ್ ಆರ್ಡರ್ ಮೇನ್‌ಟೇನ್ ಮಾಡುವುದಕ್ಕೆ ಅಂತಹ ಅಧಿಕಾರಿ ಅಲ್ಲಿ ಬೇಕೇಬೇಕು ಎಂದು ಹೇಳಿದ್ದಾರೆ. 17 ಕೇಸುಗಳನ್ನು ಹಾಕಿದ್ದರಲ್ಲಿ 16 ಸ್ಟೇ ಆಗಿದೆ. ಒಂದೇ ಒಂದು ಕೇಸು ಅದೂ ಸ್ಟೇ ಆಗಿದೆಯೋ ಏನೋ ಗೊತ್ತಿಲ್ಲ. ಅಂತಹ ಸಂದರ್ಭದಲ್ಲಿ ಅವನು ಸತ್ಯವಂತ, ಲಾ ಅಂಡ್ ಆರ್ಡರ್ ಮೇನ್‌ಟೇನ್ ಮಾಡುವುದಕ್ಕೆ ಆತ ಇದ್ದೇ ಇರಬೇಕೆಂದು ಹೇಳಿದ್ದನ್ನು ಪೇಪರ್‌ನಲ್ಲಿ ಓದಿದ ಮೇಲೆ ಈ ದೇಶದಲ್ಲಿ ಉನ್ನತ ನ್ಯಾಯಾಸ್ಥಾನ ಇದ್ದೂ ಸಾರ್ಥಕವಿಲ್ಲ ಎಂದು ಹೇಳಿ ಮುಖ್ಯಮಂತ್ರಿಗಳಿಗೆ, ಮುಖ್ಯ ಅಧಿಕಾರಿಗಳಿಗೆ, ವಿರೋಧ ಪಕ್ಷದ ನಾಯಕರಿಗೆ, ಎಸ್. ಎಂ. ಕೃಷ್ಣ ಅವರಿಗೆ ಮತ್ತು ಇನ್ನೂ ಅನೇಕ ಜನರಿಗೆ ಒಂದು ಪತ್ರ ಬರೆದು ಚನ್ನಯ್ಯ ಫಾಲಡಾಲ್ ತೆಗೆದುಕೊಂಡು ಪ್ರಾಣಬಿಟ್ಟ. ಇತ್ತೀಚಿನ ಡೆವಲಪ್‌ಮೆಂಟ್ ಏನಾಗಿದೆ ಎಂದರೆ ಈ ಶಾಸನ ಸಭೆಯಲ್ಲಿ ಈ ವಿಷಯ ಬಂದ ಮೇಲೆ ಆತ ಒಂದು ಕೋ-ಆಪರೇಟೀವ್ ಸೊಸೈಟಿಯ ಪ್ರೆಸಿಡೆಂಟು. ಆ ಸೊಸೈಟಿಯ ಮೂರು ವರ್ಷದ ಆಡಿಟ್ ಪುಸ್ತಕ ಇದೆ, ಅಲ್ಲಿ ಬಹಳ ಉತ್ತಮವಾಗಿ ಕೆಲಸ ನಡೆದಿದೆ ಎಂದು ಹೇಳಿ ಆಡಿಟ್ ರಿಪೋರ್ಟ್ ಇದೆ. ಆ ಪುಸ್ತಕಗಳನ್ನೆಲ್ಲಾ ಮರೆ ಮಾಡಿ ತಿದ್ದಿಸಬೇಕೆಂದು ಪೋಲೀಸ್‌ನವರನ್ನು ಕರೆದುಕೊಂಡು ಹೋಗಿ ಅಲ್ಲಿಗೆ ಬೀಗ ಹಾಕಿಸಿದ್ದಾರೆ. ಇಡೀ ಮೈಸೂರು ರಾಜ್ಯದ ಇತಿಹಾಸದಲ್ಲೇ ಯಾವುದಾದರೂ ಸೊಸೈಟಿಯ ಮೇಲೆ ದೂರು ಬರದೇ ಪೋಲೀಸ್‌ನವರು ಹೋಗಿ ಬೀಗ ಹಾಕಿರುವುದು ಇದೇ ಪ್ರಪ್ರಥಮ. ಇದರ ಉದ್ದೇಶ ಏನಾಗಿದೆ ಎಂದರೆ ಪುಸ್ತಕಗಳನ್ನು ಫೋರ್ಜರಿ ಮಾಡಿಸಿ ಹಣ ತಿಂದುಹಾಕಿದ್ದ ಅದಕ್ಕೇ ಹೆದರಿಕೊಂಡು ಸತ್ತು ಹೋದ ಎಂದು ಜನಗಳ ಮುಂದೆ ಇಡಬೇಕೆಂಬುದೇ ಆಗಿದೆ. ಶಾಸನ ಸಭೆಯ ಸದಸ್ಯರು ಅಲ್ಲದೇ ಇನ್ನೂ 15-20 ಜನ ಖಾಸಗಿಯವರು ಈ ರೀತಿ ಒಬ್ಬ ಅಧಿಕಾರಿಯಿಂದ ಅನ್ಯಾಯ ನಡೆಯುತ್ತಾ ಇದೆ ಎಂದು ಹೇಳಿದರೆ ಅವನು ಏನು ಮಾಡಿದ್ದಾನೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನಿಮಗೆ ಶಕ್ತಿ ಇಲ್ಲದೇ ಹೋದಮೇಲೆ ನಿಮ್ಮಿಂದ ಆಡಳಿತ ನಡೆಸುವುದಕ್ಕೆ ಸಾಧ್ಯವಿದೆಯೇ ಎಂದು ಕೇಳುತ್ತೇನೆ. ಹೇಗೋ ಇರುವ ಲೆಕ್ಕಪುಸ್ತಕಗಳನ್ನು ಮೊಗಚು ಹಾಕಿ ಈ ರೀತಿಯಾಗಿ ಪ್ರತಿ ಸಲವೂ ಏನೋ ಹೇಳಿಕೊಂಡು ಹೇಗೋ ಕಥೆ ಹಾಕೋಣವೆಂದು ಇವರು ಆಡಳಿತ ನಡೆಸುತ್ತಿದ್ದಾರೆ. ಇದನ್ನು ನೋಡಿದರೆ ಇಲ್ಲಿರುವುದು ಸರ್ಕಾರವಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇವರು ಅಧಿಕಾರವನ್ನು ಬಿಟ್ಟು ಈ ರಾಜ್ಯಾಡಳಿತವನ್ನು ರಾಷ್ಟ್ರಪತಿಯವರಿಗೆ ಒಪ್ಪಿಸುವುದು ಒಳ್ಳೆಯದು. ಏಕೆಂದರೆ ಇವರು ಈ ರಾಜ್ಯಾಡಳಿತದಲ್ಲಿರುವುದರಿಂದ ಏನೂ ಪ್ರಯೋಜನವಿಲ್ಲ. ಒಳ್ಳೆಯದನ್ನೇನಾದರೂ

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ಇವರು ಮಾಡಿದ್ದರೆ ಖಂಡಿತವಾಗಿ ಇಲ್ಲಿ ಹೇಳಬಹುದು. ನಾವು ಇವರಿಗೆ ಕೊಟ್ಟಿರತಕ್ಕ ಸಲಹೆಗಳನ್ನು ಮತ್ತು ಇಲ್ಲಿ ತಂದಿರತಕ್ಕಂಥ ನಿಲುವಳಿ ಸೂಚನೆಗಳನ್ನೇನಾದರೂ ಪರಿಶೀಲಿಸಿ ಅವುಗಳಲ್ಲಿ ಯಾವದೊಂದನ್ನಾದರೂ ಅನುಷ್ಠಾನಕ್ಕೆ ತಂದಿದ್ದಾರೆಯೇ ಎಂದರೆ ಏನೂ ಇಲ್ಲ. ನುಗ್ಗೇಹಳ್ಳಿಯಲ್ಲಿ ಆತ್ಮಹತ್ಯೆಮಾಡಿಕೊಂಡಂಥ ಶ್ರೀಮಾನ್ ಚನ್ನಯ್ಯನವರಿಗೆ 4 ಚಿಕ್ಕಮಕ್ಕಳಿವೆ. ಆ ಮಕ್ಕಳು ಬೀಳುವ ಕಷ್ಟದ ಪಾಪವನ್ನು ಇವರು ಮುಂದೆ ತೀರಿಸಬೇಕಾಗಿದೆ.

ಅಧ್ಯಕ್ಷರು.—''ಪಾಪ'' ಎಂದರೇ ?

Sri S. M. KRISHNA.—'Papa' means 'sin' and it is not objectionable.

Mr. SPEAKER.—Order, order. Abuse should be avoided.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಆ ವಿಚಾರವನ್ನು ಇವರು ಸ್ವಲ್ಪ ಮನಸ್ಸಿಗೆ ತಂದುಕೊಂಡ ಯೋಚಿಸಲಿ. ಯಾವುದೋ ಹಿಂದಿನ ಜನ್ಮದಿಂದ ಇವರಿಗೆ ಈ ಅಧಿಕಾರ ಬಂದಿದೆಯಷ್ಟೆ. ಇವತ್ತು ಇವರು ಮಾಡುತ್ತಿರುವ ಪಾಪದಿಂದ ಮುಂದೆ ಇವರು ಯಾವ್ಯಾವ ಪ್ರಾಣಿಗಳಾಗಿ ಹುಟ್ಟಬೇಕೋ ಎಂಬುದನ್ನು ಅವರು ಯೋಚನೆ ಮಾಡುತ್ತಿದ್ದಾರೆಂದು ನನಗೆ ಕಾಣುತ್ತದೆ. ಆದ್ದರಿಂದ ಇವರು ಇಂತಹ ಅಧಿಕಾರದಲ್ಲಿರುವುದು ಇವರಿಗೆ ಒಳ್ಳೆಯದಲ್ಲ. ಇವರು ಬಾಹುಕರಂತೆ......

ಅಧ್ಯಕ್ಷರು.—ಬಾಹುಕ ಎಂದರೆ......

Sri V. M. DEO (Gubbi).—He has his own ideas about sin and other things.

Mr. SPEAKER.—Original but it does not come under this debate.

Sri V. M. DEO.—He is entitled to voice his philosophy unless you give some other philosphy.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಇವತ್ತು ಸರ್ಕಾರದವರು ಆ ಪೋಲೀಸ್ ಸ್ಟೇಷನ್ನಿನಲ್ಲಿ ವಿಚಾರಣೆ ಮಾಡಿದರೆ ಸೇಂದಿ ಮತ್ತು ಗಾಂಜಾ ಮಾರುತ್ತಿದ್ದವರಿಂದ ಸುಮಾರು 500 ಸಾವಿರ ರೂಪಾಯಿಗಳಷ್ಟು ಸಂಪಾದನೆ ಮಾಡಿ ಅವನು ಅದನ್ನು ಪೋಲೀಸ್ ಸ್ಟೇಷನ್ನಿನಲ್ಲಿ ಹಾಕಿಕೊಂಡು ಮಜಾ ಮಾಡುತ್ತಿರುವುದನ್ನು ಕಾಣಬಹುದು. ಹೀಗೆ ಲಕ್ಷಾಂತರ ರೂಪಾಯಿಗಳನ್ನು ಅವನು ಮಾಡಿಕೊಂಡಿದ್ದಾನೆ.

Mr. SPEAKER.—The hon'ble member is the best man who can expound what the other Hon'ble member has in his mind.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಇವರಿಗೂ ಅವನಿಗೂ ಸಮವೇ ? ಈ ರೀತಿಯಾದ ಆಡಳಿತವನ್ನು ಮುಂದುವರಿಸುವುದಾದರೆ ಇವರನ್ನು ದೇವರೇ ನೋಡಿಕೊಳ್ಳಲಿ.

Mr. SPEAKER.—Bad in taste.

† ಶ್ರೀ ಜಿ. ಮರುಳಪ್ಪ.—ಅಧ್ಯಕ್ಷರೇ, ಈ ಅಪ್ರೋಪ್ರಿಯೇಷನ್ ಬಿಲ್ ಬಗ್ಗೆ ಮಾತನಾಡುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದು ನಾನು ನಿಂತಿದ್ದೇನೆ. ಈ ಸಂದರ್ಭದಲ್ಲಿ ನಾನು ಹೇಳುವ ಮಾತು ಸರ್ಕಾರಕ್ಕೆ ಕಹಿಯಾಗಲೀ ವ್ಯಥೆಯಾಗಲೀ ಅಥವಾ ಬೇಜಾರು ಆಗಲೀ ಆಗಬಹುದು, ಆದರೆ ನಾನು ವ್ಯಥೆಪಡುವುದಿಲ್ಲ. ಅಧ್ಯಕ್ಷರ ಮನಸ್ಸು ನೋಯಬಾರದೆಂಬುದೇ ನನ್ನ ಇಚ್ಛೆ.

Mr. SPEAKER.—The Member will therefore close at 4-30 P.M.

ಶ್ರೀ ಜಿ. ಮರುಳಪ್ಪ.—ಅಧ್ಯಕ್ಷರೇ, ಫೈನಾನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಶ್ರೀಮಾನ್ ಜತ್ತಿಯವರ ಆಡಳಿತ ಹೇಗಿದೆಯೆಂದರೆ, ನನಗೊಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ನನ್ನ ಸ್ನೇಹಿತರು ಇಲ್ಲಿ ಅಲ್ಲಿ ಎಷ್ಟೋ ಲಕ್ಷ ಹೋಯಿತು. ಅಲ್ಲೊಂದು ಕಡೆ ಇಷ್ಟು ಕೋಟಿ ಹೋಯಿತು, ಇಕಾನಮಿ ಇಲ್ಲ, ಇಫಿಲ್ಲ, ಅದಿಲ್ಲ ಎಂದು ಹೇಳುತ್ತಿದ್ದಾರೆ. ಇದಕ್ಕೊಂದು ಕಥೆ ಹೇಳಬೇಕಾಗಿದೆ. ಹಿಂದೆ ಒಂದು ಶ್ರೀಮಂತ ಸಂಸಾರ ಇತ್ತಂತೆ. ಆ ಸಂಸಾರದಲ್ಲಿ ಗಂಡ ಮತ್ತು ಹೆಂಡತಿ ಇದ್ದರು. ಗಂಡ ಬಹಳ ಜೂಜುಗಾರ. ಪ್ರತಿದಿವಸ ರಾತ್ರಿ ಎರಡುಸಾವಿರ ರೂಪಾಯಿಗಳಷ್ಟು ಇಸ್ಪೀಟ್ ಆಟವಾಡಿ ಕಳೆದು ಕೊಳ್ಳುತ್ತಿದ್ದ. ಆದರೆ ಹೆಂಡತಿಯಾದವಳು ಒಬ್ಬ ತರಕಾರಿ ಮಾರುತ್ತಿದ್ದವನ ಹತ್ತಿರ ಒಂದ

ನಯಾಪೈಸಾಗೆ ಒಂದು ಗಂಟೆ ಕಾಲ ಚರ್ಚೆಮಾಡುತ್ತಿದ್ದಳು. ಆಗ ಅವನು ಅವಳನ್ನು ಕುರಿತು ಏನು ಹುಚ್ಚಿ ನಾನು ಪ್ರತಿ ದಿವಸ ಸಾವಿರ ಎರಡು ಸಾವಿರ ರೂಪಾಯಿಗಳಷ್ಟು ಜೂಜಾಡುತ್ತೇನೆ. ನೀನು ಒಂದು ನಯಾಪೈಸಾಗೆ ಚೌಕಾಸಿ ಮಾಡುತ್ತಿದ್ದೀಯೇ ಎಂಬುದಾಗಿ ಕೇಳಿದನಂತೆ. ಹಾಗೆ ಇವರು ಹೇಳಿದುದನ್ನೆಲ್ಲಾ ಕೇಳಿದರೆ ನನಗೇನು ಗೊತ್ತಾಗುತ್ತದೆ ಅಂದರೆ, ಕೇವಲ ಸಣ್ಣ ಸಣ್ಣ ಕೆಲಸಕಾರ್ಯಗಳಿಗೆ ಲಕ್ಷೋಪಲಕ್ಷ ಹಣವನ್ನು ನೀರಿನಂತೆ ಖರ್ಚುಮಾಡುತ್ತಿದ್ದಾರೆ. ಇಂತಹವರ ಗುಂಪಿನಲ್ಲಿ ಇರತಕ್ಕ ಆರ್ಥಿಕ ಮಂತ್ರಿಗಳು 2 ರೂಪಾಯಿ, 4 ರೂಪಾಯಿ ಅಥವಾ 8 ರೂಪಾಯಿ ಸೇವಿಂಗ್ಸ್ ಮಾಡುತ್ತೇನೆಂದು ಹೇಳುತ್ತಾರೆ. ಇದರಿಂದ ರಾಜ್ಯಕ್ಕೆ ಎಷ್ಟು ಕ್ಷೇಮವಾಗುತ್ತದೋ ನನಗಂತೂ ಅರ್ಥವಾಗಲಲ್ಲ.

ಮತ್ತೊಂದು ವಿಷಯ. ಈ ಸಭೆಯಲ್ಲಿ ಒಂದು ಪಕ್ಷ ನಾವೇನಾದರೂ ಕಾನೂನುಗಳನು ಮೀರಿದ್ದೇ ಆದರೆ, ನಮ್ಮ ವ್ಯವಹಾರದಲ್ಲಿ ಏನಾದರೂ ವ್ಯತ್ಯಾಸವಾಯಿತು ಎಂದರೆ, ಅಥವಾ ಈಗಿನ ಪ್ರೊಸೀಜರ್‌ನಲ್ಲಿ ನಮ್ಮದೇನಾದರೂ ತಪ್ಪು ಆಯಿತೆಂದರೆ ಅಧ್ಯಕ್ಷರಾದ ತಾವು ನಮಗೆ ಉದಾಹರಣೆಯನ್ನು ಕೊಡಬೇಕು. ಹೌಸ್ ಆಫ್ ಕಾಮನ್ಸ್‌ನಲ್ಲಿ ಪಾರ್ಲಿಮೆಂಟರಿ ಪ್ರೊಸೀಜರ್ ಹೇಗಿದೆ, ದೆಹಲಿ ಲೋಕಸಭಾದಲ್ಲಿ ಪ್ರೊಸೀಜರ್ ಹೇಗಿದೆ, ಈ ಅಧ್ಯಕ್ಷ ಪೀಠದಲ್ಲಿ ಹಿಂದೆ ಇದ್ದಂತಹವರು ಎಂತೆಂಥ ತೀರ್ಮಾನಗಳನ್ನು ಕೊಟ್ಟಿದ್ದಾರೆ—ಇವನ್ನೆಲ್ಲಾ ಅನುಸರಿಸಿ ನಾವು ಇಲ್ಲಿ ನಡೆಯುವುದು ಒಳ್ಳೆಯದು. ಈ ದೇಶದಲ್ಲಿ ಅನಾಯಕತ್ವ ತಾಂಡವವಾಡುತ್ತಿರುವಾಗ, ನೀತಿಯೇ ಇಲ್ಲದಿರುವಾಗ, ಸತ್ಯವೆಂಬುದು ಕಾಣದಯೇ ಇರುವಾಗ ಮಾಡಬಾರದ ಅನ್ಯಾಯಗಳನ್ನು ಮಾಡಿ ಬಡ ಜನತೆಗೆ ಅನೇಕ ರೀತಿಯಲ್ಲಿ ಕಷ್ಟಗಳು ಉಂಟಾಗುತ್ತಿರುವಾಗ ಈ ಲಾ ಅಂಡ್ ಆರ್ಡರ್‌ಗಳಿಂದ ಯಾವ ಸತ್ಪ್ರಜೆಗೂ ರಕ್ಷಣೆ ದೊರೆಯದೆ ಇದ್ದಾಗ್ಗೆ ಇವರ ಪಾರ್ಲಿಮೆಂಟರಿ ಪ್ರೊಸಿಜರ್‌ನಿಂದ ಏನು ಉಪಯೋಗ? ಈ ಅಸೆಂಬ್ಲಿಯಿಂದಾಗಲೀ ಅಥವಾ ನಮ್ಮ ಈ ಮೆಂಬರುಗಿರಿಯಿಂದ ಏನು ಪ್ರಯೋಜನ? ಇಂತಹ ಸರ್ಕಾರವನ್ನು ಕಟ್ಟಿಕೊಂಡು ಆಡಳಿತ ಮಾಡುವುದೆಂದರೆ ಏನು? ಇವರ ಪ್ರೊಟೆಕ್ಷನ್ನಿನಲ್ಲಿ ಸರ್ಕಾರವೇ ಇಲ್ಲವೆಂದು ಹೇಳತಕ್ಕಂಥ ಈ ನಮ್ಮ ದೇಶದಲ್ಲಿ ಈ ಪ್ರೊಸೀಜರುಗಳು ಏನು ಮಾಡಬಲ್ಲವು? ಜನಕ್ಕೆ ಅನ್ನವಿಲ್ಲ, ಬಟ್ಟೆ ಇಲ್ಲ. ಆಗಬಾರದ ದರೋಡೆಗಳು, ಕೊಲೆಗಳು, ಅನ್ಯಾಯಗಳು ದೇಶದಲ್ಲಿ ನಡೆಯುತ್ತಿರುವಾಗ ಒಬ್ಬರಿಗೂ ಸೇಫ್ಟಿ ಇಲ್ಲ. ಇಂತಹ ಕಾಲದಲ್ಲಿ ಈ ಪ್ರೊಸೀಜರುಗಳು ಏನೂ ಉಪಯೋಗಕ್ಕೆ ಬಾರದೇ ಇದ್ದಾಗ ಜನತೆ ಯಾವ ಆಯುಧವನ್ನು ಅವರ ರಕ್ಷಣೆಗೆ ತೆಗೆದುಕೊಳ್ಳಬೇಕು? ಅಧ್ಯಕ್ಷರೇ, ಈ ಸರ್ಕಾರದಿಂದ ರಕ್ಷಣೆ ಜನಗಳಿಗೆ ದೊರೆಯದೆ ಇದ್ದಾಗ್ಗೆ ಅವರ ರಕ್ಷಣೆ ಮಾಡಿಕೊಳ್ಳುವುದು ಅವರ ಕರ್ತವ್ಯವಲ್ಲವೇನು? ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ. ಸುಗ್ಗೇಹಳ್ಳಿ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ದಕ್ಷ ಆಡಳಿತಗಾರ, ನಿಷ್ಠಾವಂತ ಬಲಿಷ್ಠ, ಪುಂಡುಪೋಕರಿಗಳನ್ನು ಬಲಿ ಹಾಕುವುದಕ್ಕೆ ಅವನೇ ಲಾಯಕ್ಕಾದವನು ಎಂದು. ಒಂದು ವಿಚಾರವನ್ನು ಹೇಳುತ್ತೇನೆ. ಮೈಸೂರು ದೇಶದಲ್ಲಿರತಕ್ಕ ಜನಗಳೆಲ್ಲರೂ ಕೂಡ ತುಂಟರು, ಪುಂಡರು ಆಗದೇ ಇರುವುದರಿಂದಲೇ ಈ ಸರ್ಕಾರ ಇಲ್ಲಿಯವರೆಗೂ ಉಳಿದಿದೆ. ಇಲ್ಲಿ ಆಗದೇ ಇರತಕ್ಕ ಅನ್ಯಾಯಗಳನ್ನು ಮಾಡಿ ಜನಗಳ ಒಳ್ಳೆಯ ಸ್ವಭಾವವನ್ನು ಈ ಸರ್ಕಾರ ದುರುಪಯೋಗಪಡಿಸಿಕೊಂಡು ಜನಗಳು ತುಂಟರು, ಪುಂಡರಾಗಿರುವುದಕ್ಕೆ ಇನ್ನೂ ಪ್ರೋತ್ಸಾಹ ಕೊಡುತ್ತಿದೆ. ***

Mr. SPEAKER.—Abuse is not good debate.

ಶ್ರೀ ಎಸ್. ಆರ್. ಕಂಠಿ (ವಿದ್ಯಾಶಾಖೆಯ ಮಂತ್ರಿಗಳು).—ನಮ್ಮನ್ನು ಸದಸ್ಯರು *** ಹೇಳಿದಾಗ I rise to a point of order. Can the member say that the Chief Minister is *** and all that?

* * *

Mr. SPEAKER.—I cannot allow abuses. If the member wants he may put forward any kind of argument, but abuse is not good and he can never convince anybody in Debate by abuse.

Sri S. R. KANTHI.—I rise to another point of order. What ha been said by the Hon'ble Member against the Chief Minister by way of abuse may be taken away from the record.

Expunged as ordered by the Chair.

4-30 P.M.

Mr. SPEAKER.—According to the Parliamentary procedure the member can be called upon to repeat what he has spoken. Otherwise I can ask it to be put down in writing. What is all this? Are we sitting in a private house having private discussion?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಈವಾಗ ಏನು ಅಪ್ಪಣೆ ಕೊಡಿಸಿದಿರಿ—ನಾಗರಿಕರಾಗಿ, ನಾಗರಿಕಜನಗಳಾಗಿ ಒಂದು ಕಠಿಣ ಭಾಷೆ ಉಪಯೋಗಿಸುತ್ತೇವೆಂದರೆ ಸರಿಹೋಗುವುದಿಲ್ಲವೆಂದು. ತಾವು ಹೇಳಿದಿರಿ ಭಾಷೆ ಎಷ್ಟು ಮೃದುವಾಗಿರಬೇಕು, ಎಷ್ಟು ಮರ್ಯಾದೆಯಿಂದ ಕೂಡಿರಬೇಕೆಂದು. ಅದಕ್ಕೆ ನಾವು ತಯಾರಾಗಿದ್ದೇವೆ. ತಮ್ಮ ಆಶೋತ್ತರಗಳು ಬಹಳ ದೊಡ್ಡವು. ನಾವು ತಮ್ಮ ಜೊತೆಯಲ್ಲಿ ಸಹಕಾರ ಮಾಡಿದ್ದೇವೆ. ಅದೇರೀತಿಯಾಗಿ, ನಮ್ಮ ಎದರುಪಕ್ಷದವರೂ ಇರಬೇಕು. ಯಾವ ಭಾಷೆಯಲ್ಲಿ ಎಷ್ಟು ಮೃದುವಾಗಿ ಡಿಗ್ನಿಫೈಡ್ ರ್‍ಯಾಂಗ್ವೇಜಿನಲ್ಲಿ ಮಾತನಾಡಬೇಕೆಂದು ಹೇಳಿದಿರಿ. ಅದಕ್ಕಿಂತಲೂ ಮೃದುವಾಗಿ ಮಾತನಾಡುವುದಕ್ಕೆ ನಾವು ತಯಾರಿದ್ದೇವೆ. ಈ ಸಭೆಯ ಕಾರ್ಯಕಲಾಪಗಳನ್ನು ಎರಡು ವರ್ಷದಿಂದ ಹಾಗೆ ನಡೆಸುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ. ಆದರೆ ತಾವು ಹೇಳಿದುದು ಎರಡೂ ಕಡೆಗೆ ಅಪ್ಲೈ ಆಗಬೇಕು; ಎಂದು ತಮ್ಮಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ಏನು ಇದುವರೆಗೆ ಕಷ್ಟಪಟ್ಟು, ಈ ಸಭೆಯಲ್ಲಿ ಸರಿಯಾದ ರೀತಿ ನೀತಿ ಇರಬೇಕು, ಬಹಳ ಮೃದುವಾದ ವಾತಾವರಣವಿರಬೇಕು, ಒಳ್ಳೆಯ ಭಾಷೆ ಉಪಯೋಗಿಸಬೇಕು, ಸುಮಧುರವಾದ ಸ್ಟೈಲ್ ಉಪಯೋಗಿಸುವ ಭಾಷೆಯಲ್ಲಿರಬೇಕು ಎಂದು ಹೇಳಿದರೋ, ಅದಕ್ಕೆ ನಾನು ಶಿರ ಬಾಗುತ್ತೇನೆ. ಎಲ್ಲರೂ, ಎರಡೂ ಕಡೆಯವರು ಹಾಗೆ ಮಾಡದೆ ಹೋದರೆ ತಾವು ಏನು ಮಾಡಬೇಕು? ತಮ್ಮ ಮನಸ್ಸಿನಲ್ಲಿ ಏನಿದೆಯೊ, ತಾವು ಏನು ಹೇಳಿದಿರೊ, ಅದನ್ನು ನಾನಂತೂ ಪರಿಪಾಲನೆ ಮಾಡುತ್ತೇನೆ.

ಅಧ್ಯಕ್ಷರು.—ಬಹಳ ಸಂತೋಷ. ಮಾನ್ಯ ಮುಕ್ಕಣಪ್ಪನವರು ನನ್ನ ಮಾತಿಗೆ ಇಷ್ಟು ಬೆಲೆ ಕೊಡುತ್ತಾರಲ್ಲಾ, ಇಷ್ಟು ಗೌರವ ಕೊಡುತ್ತಾರಲ್ಲಾ ಎಂದು ನನಗೆ ಬಹಳ ಸಂತೋಷ.

ಶ್ರೀ ಸಿ. ಜೆ. ಮುಕ್ಕಣಪ್ಪ.—ಇದುವರೆಗೂ ಕೊಟ್ಟಿಲ್ಲವೊ ?

ಅಧ್ಯಕ್ಷರು.—ಕೊಟ್ಟಿಲ್ಲವೆಂತ ನಾನು ಹೇಳಲಿಲ್ಲ. ನಿಮ್ಮ ಮನಸ್ಸಿಗೇ ಅನುಮಾನವಿದೆ. ನನ್ನ ಮನಸ್ಸಿನಲ್ಲಿ ಅನುಮಾನವಿಲ್ಲ. ಖಚಿತವಿದೆ.

ಶ್ರೀ ಜಿ. ಮರುಳಪ್ಪ.—ನನಗೆ ಒಂದೆರಡು ನಿಮಿಷ ಕೊಡಿರಿ.

Sri C. J. MUCKANNAPPA.—Sir, when you were not here some member spoke. You kindly look into the proceedings and see how Sri T. D. Devendrappa has used words against the Agriculture Minister—a language which cannot be exressed by a member of the ruling party.

ಅದನ್ನು ಎಕ್ಸ್‌ಪಂಜ್ ಮಾಡಿ ಎಂದು ನಾನು ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—We are getting a little excited. The Hon'ble member has referred to only one thing that happened when I was not present. I will examine. He has no other instances to give.

Sri G. Marulappa may close now and his time is over.

ಶ್ರೀ ಕೆ. ಲಕ್ಕಪ್ಪ.—ಶ್ರೀ ಕಂಠಿಯವರು ಕೂಡ ಈ ಸಭೆಯಲ್ಲಿ ಭಾಷಣ.........

Mr. SPEAKER.—Order, order.

ಶ್ರೀ ಕೆ. ಲಕ್ಕಪ್ಪ.—ನಾನು ಎದ್ದಾಗ ಆರ್ಡರ್ ಅಂತ ಹೇಳುತ್ತೀರಿ.

Mr. SPEAKER.—Will the member kindly repeat what he has said?

Bad habit, absolutely bad habit.

(The Hon'ble Speaker read the following extract from the speech of Shri G. Marulappa):

* * *

ಶ್ರೀ ಜಿ ಮರುಳಪ್ಪ.—ಹಾಗಲ್ಲ ನಾನು ಹೇಳಿದ್ದು I am sorry. ಅದು ನನ್ನ ಉದ್ದೇಶವಲ್ಲ ......ನಾನು ಹೇಳುತ್ತೇನೆ. ತಾವು ಏಕೆ ಆತುರ ಪಡುತ್ತೀರಿ. ಯಾರಾದರೂ ಪುಂಡರಿಗಾಗಲಿ, ಪೋಕರಿಗಳಿಗಾಗಲೀ ಪ್ರೋತ್ಸಾಹ ಕೊಡುತ್ತಿದ್ದರೆ, ಅದಕ್ಕೆ ಕಾರಣಕರ್ತರು ನಮ್ಮ ದೇಶದ ಮುಖ್ಯ ಮಂತ್ರಿಗಳು ಅಂತಹೇಳಿದೆ.

ಅಧ್ಯಕ್ಷರು.—ಅದು ನಿಮ್ಮ ಮನಸ್ಸಿನೊಳಗಿರಬಹುದು. ಅದು ಬಾಕಿಯವರಿಗೆ ತಿಳಿಯುವುದಕ್ಕೆ ಹೇಗೆ ಆಗುತ್ತದೆ? ನೀವು ಆಡಿದ ಮಾತು ಎಲ್ಲರ ಕಿವಿಗೂ ಬಿದ್ದಿದೆ; ಬರೆದುಕೊಳ್ಳುತ್ತಾರೆ; ರಿಕಾರ್ಡಿಗೆ ಹೋಗುತ್ತದೆ. ಪರಾಕ್ರಮದಿಂದ ಹೇಳಿದ್ದು ಉಂಟು. ಅದು ನಿಮ್ಮ ಮನಸ್ಸಿನಲ್ಲಿರಲಿಲ್ಲ, ನಿಮ್ಮ ಭಾವನೆ ಬೇರೆ ಇತ್ತು ಎಂದು ಕೇಳಿ ಬಹಳ ಸಂತೋಷವಾಯಿತು. That will be expunged.

Sri S. R. KANTHI.—Sir, may I know whether you have expunged the the latter portion also ?

Mr. SPEAKER.—He has expressed regret.

Sri S. R. KANTHI.—Sir, there is another sentence.

Mr. SPEAKER.—He says he did not mean it. If it has gone into the records, he admits it is wrong. It will be expunged.

Sri S. R. KANTHI.—Sir, there is another sentence in English.

Mr. SPEAKER.—That reads as follows :

* * *

That also will be expunged.

ಶ್ರೀ ವಿ. ಎಂ. ದೇವ್. —ಚೀಫ್ ಮಿನಿಸ್ಟರು ಇಲ್ಲದ್ದಿದ್ದರೆ ಚೆನ್ನಾಗಿರುತ್ತಿತ್ತು.

Mr. SPEAKER.—I find this Hon. Member getting up too often and intervening without asking the other Member who is on his legs.

Sri V. M. DEO.—Sir, subject to your displeasure I am prepared to go out.

Mr. SPEAKER.—The member is at liberty-subject to the displeasure of the Chair, he will enjoy to walk out. That is a deliberate insult to the Chair. The Member may retire if he so desires.

Sri M. V. DEO.—Sir do you think that I meant deliberate insult to the Chair ?

ಶ್ರೀ ಜಿ. ಮರುಳಪ್ಪ.—ಇದರಿಂದ ದಕ್ಷತೆ ಎಷ್ಟರಮಟ್ಟಿಗಿದೆ, ಅಧಿಕಾರ ಮದ ಏಷ್ಟರಮಟ್ಟಿಗೆ ಇದೆ ಅನ್ನುವುದು ಗೊತ್ತಾಗುತ್ತದೆ. ಆ ಮನುಷ್ಯನ ಮೇಲೆ ಯಾವ ತರಹ ಕ್ರಿಮಿನಲ್ ಅಪರಾಧವೂ ಇಲ್ಲದೆ ಇರುವಾಗ, ಇದು ಎಲ್ಲಾ ನೀವು ಒಂದುವರ್ಷದೊಳಗೆ 17 ಕ್ರಿಮಿನಲ್ ಕೇಸುಗಳನ್ನು ಹಾಕಿ, ಅವುಗಳಲ್ಲಿ 16 ರಲ್ಲಿ ತಪ್ಪಿತಸ್ಥನಲ್ಲವೆಂದು ಈಗಾಗಲೇ ಹೇಳಿರುವಾಗ, ಅದು ಆ ಮನುಷ್ಯನ ದಕ್ಷತೆಯನ್ನು ಹೇಳುತ್ತದೆಯೇ ಅಥವಾ ಇದತಕ್ಕಂಥ ಬ್ಯಾಡ್ ಮೋಟೀವ್ ಹೇಳುತ್ತದೆಯೇ ಎಂದು ಅಧ್ಯಕ್ಷರು ಗಮನಿಸಬೇಕು. ಶಕ್ತಿ ಅತನಿಗೆ ಎಲ್ಲಿಂದ ಬರುತ್ತದೆ? ಸರಕಾರದ

**Expunged as ordered by the Chair.

(ಶ್ರೀ ಜಿ. ಮರುಳಪ್ಪ)

ಪ್ರೋತ್ಸಾಹದಿಂದ ಅಕ್ರಮಗಳು ನಡೆಯುತ್ತಿರತಕ್ಕಂಥವೇ ಹೊರತು, ತನ್ನ ಸ್ವಶಕ್ತಿಯಿಂದಾಗಲಿ ಅಥವಾ ತನ್ನ ಖ್ಯಾತಿಯಿಂದಾಗಲಿ ಮಾಡುತ್ತಿರುವವಲ್ಲ. ಇಂಥದಕ್ಕೆ ಪ್ರೋತ್ಸಾಹ ಕೊಟ್ಟು, ಸರಕಾರ ಈ ದೇಶದಲ್ಲಿ ಪುಂಡಾತನ, ಪೋಕರಿತನಕ್ಕೆ ಪ್ರೋತ್ಸಾಹ ಕೊಡುತ್ತಿದೆಯೆಂದು ಹೇಳಿದರೆ ತಪ್ಪಾಗಲಾರದು ಎನ್ನತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸ್ವಾಮಿ, ಈ ಸಭೆಯಲ್ಲಿ ಗವರ್ನರ್ ಭಾಷಣ ಮಾಡುವಾಗ ವಾಕ್—ಔಟ್ ಮಾಡಿದೆವು. ಅದು ತಪ್ಪು, ಹಕ್ಕುಬಾಧ್ಯತೆಗಳಿಗೆ ಲೋಪ ಬಂದಿದೆ ಅನ್ನತಕ್ಕಂಥಾ ರೆಸಲ್ಯೂಷನ್ನನ್ನು ತಂದಿದ್ದಾರೆ, ಅದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಿದ್ದಾರೆ. ಸ್ವಾಮಿ, ಎಲ್ಲಿಯವರಿಗೂ ಈ ಆಡಳಿತ ಪಕ್ಷವು ಮಹಾತ್ಮ ಗಾಂಧಿಯವರ ಹೆಸರನ್ನು ಹೇಳುತ್ತಾ ದುರಾಡಳಿತ ನಡೆಸುವುದನ್ನು ನಿಲ್ಲಿಸುವುದಿಲ್ಲವೋ, ಅಲ್ಲಿಯವರೆಗೂ ಕೂಡ ಎಲ್ಲ ಹಂತದಲ್ಲಿಯೂ ಪ್ರತಿಭಟಿಸುವುದು ನಮ್ಮ ನ್ಯಾಯಬದ್ಧವಾದ ಮತ್ತು ಅಜನ್ಮಸಿದ್ಧವಾದ ಹಕ್ಕು. ಅದು ಏನೇ ಆಗಿರಲಿ...

Mr. SPEAKER.—The Hon'ble Minister will reply.

ಶ್ರೀ ಜಿ. ಮರುಳಪ್ಪ.—ಮುಗಿಸುವುದಕ್ಕೆ ಬಿಡಿ. ಅರ್ಧಂಬರ್ಧದಲ್ಲಿ ಬಿಟ್ಟರೆ ಪತ್ರಿಕೆಯವರಿಗೆ ಬರೆಯುವುದಕ್ಕೆ ಸರಿಹೋಗುವುದಿಲ್ಲ; ಅವರಿಗೆ ಅಕ್ಷರ ಕೂಡಿಸುವುದು ಆಗುವುದಿಲ್ಲ.

Mr. SPEAKER.—You must convince the House.

ಶ್ರೀ ಜಿ. ಮರುಳಪ್ಪ.—ಇದನ್ನು ಎಲ್ಲಿಯವರಿಗೆ ಅವರು ಬಿಡುವುದಿಲ್ಲವೋ, ಅಲ್ಲಿಯವರೆಗೂ ನ್ಯಾಯಬದ್ಧವಾಗಿ ಪ್ರತಿಭಟಿಸುವುದು ನಮ್ಮ ಅಜನ್ಮಸಿದ್ಧವಾದ ಹಕ್ಕು. ಈ ಪ್ರತಿಭಟನೆಯಲ್ಲಿ ನಮ್ಮ ಮೆಂಬರುಗಳು ಹೋಗುವುದು ಒಂದು ಕಡೆಯಿಂದ ಇರಲಿ, ಇನ್ನು ಏನೇನು ಕಾನ್‌ಸಿಕ್ವೆನ್ಸಸ್ ಆಗುತ್ತವೋ ಅದನ್ನು ಪ್ರತಿಭಟಿಸುತ್ತೇವೆ. ದೇಶದ ಜನತೆಯ ಮುಂದೆ ನೀವು ಎಲ್ಲಿಯವರಿಗೆ ನ್ಯಾಯವಾಗಿ ಇರುವುದಕ್ಕೆ ಸಾಧ್ಯವಿಲ್ಲವೋ ಅವರಿಗೆ ಆಗುವ ಪ್ರತಿಫಲ ಮತ್ತು ತೋರುತ್ತಿರುವ ನೀತಿಗಾಗಿ ನಾವೆಲ್ಲರೂ ಪ್ರತಿಭಟಿಸಲೇ ಬೇಕಾಗುತ್ತದೆ ಮತ್ತು ಸರಕಾರ ಎಚ್ಚೆತ್ತುಕೊಳ್ಳಬೇಕಾದರೆ ಈ ರೀತಿಯಾದ ಪ್ರತಿಭಟನೆಯನ್ನು ಮಾಡದೇ ಇದ್ದರೆ ದೇಶದಲ್ಲಿ ಅಲ್ಲಕಲ್ಲೋಲ ಪರಿಸ್ಥಿತಿ ಉಂಟಾಗುತ್ತದೆ ಎಂದು ನಾನು ಇಲ್ಲಿ ಮತ್ತೆ ವ್ಯಕ್ತ ಮಾಡುತ್ತೇನೆ.

Mr. SPEAKER.—This is the kind of argument which is advanced against the Budget. I am not able to understand this. I have heard speeches made with certain amount of curse, illwill and threats. The Hon'ble Minister will reply.

ಶ್ರೀ ಕೆ. ಲಕ್ಕಪ್ಪ.—ಸ್ವಾಮೀ, ಈ ಸಭೆಯ ಮುಂದೆ ಇಟ್ಟಿರತಕ್ಕ ಅಪ್ರೊಪ್ರಿಯೇಷನ್ ಬಿಲ್ಲನ್ನು ಮಿಸ್ ಅಪ್ರೊಪ್ರಿಯೇಷನ್ ಬಿಲ್ ಎಂದು ಕರೆಯಬೇಕಾಗಿದೆ. ಏಕೆಂದರೆ,......

Mr. SPEAKER.—I am not allowing further debate.

ಶ್ರೀ ಕೆ. ಲಕ್ಕಪ್ಪ.—ಏಕೆಂದರೆ, ಇದರಲ್ಲಿ......

Mr. SPEAKER.—Order, order.

Sri B. D. JATTI.—Sir.

Sri K. LAKKAPPA.—Sir, if the Hon'ble Minister will kindly yield, I will speak on a few points.

Mr. SPEAKER.—The Hon'ble Minister will reply.

Sri B. D. JATTI.—Mr. Speaker, Sir......

(Sri K. Lakkappa again stood up to speaker.)

Mr. SPEAKER.—Order, order. If there are any new points then only I will allow. If it is going to be threats, abuse and anything else, I am not allowing. If the Hon'ble Member speaks whatever has already been said I will pull him up.

(Sri K. Lakkappa again stood up to speak.)

Sri C. J. MUCKANNAPPA.—Yes, Sir.

Mr. SPEAKER.—Only new points should be mentioned.

ಶ್ರೀ ಕೆ. ಲಕ್ಕಪ್ಪ.—ಏಕೆಂದರೆ, ಇದರಲ್ಲಿ....

Mr. SPEAKER.—" Misappropriation ". Is that a debate ?

(*Laughter*)

ಶ್ರೀ ಕೆ. ಲಕ್ಕಪ್ಪ.—ಸ್ವಾಮೀ, ಸರಕಾರ ನೈತಿಕವಾಗಿಯಾಗಲೀ ಯಾವ ಹೊಂದಾಣಿಕೆಯಾಗಲೀ ಇಲ್ಲದೆ, ನ್ಯಾಯ, ನಿಷ್ಠೆ, ಸತ್ಯ, ಧರ್ಮ ಯಾವುದೂ ಈ ಸರಕಾರದಲ್ಲಿ ಇಲ್ಲ ಎಂದು ನಾನು ಹೇಳುತ್ತೇನೆ. ಈ ದೃಷ್ಟಿಯಿಂದ ಇಲ್ಲಿ ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ.

Mr. SPEAKER.—Just because the time is extended it enables him to say these things—Is it ?

There must be some limit. Does he not think that this reflects upon us collectively ? Sitting here and hearing such things do not credit.

ಶ್ರೀ ಕೆ. ಲಕ್ಕಪ್ಪ.—ಮೊನ್ನೆ ತಾನೇ ಅರಿಕೆಮಾಡಿಕೊಂಡ ಹಾಗೆ ನುಗ್ಗೆಹಳ್ಳಿ ಪ್ರಕರಣದ ಬಗ್ಗೆ ಈ ಸಭೆಯ ಮಾಜಿ ಶಾಸನ ಸಭೆಯ ಒಬ್ಬ ಸದಸ್ಯರ ತಮ್ಮಂದಿರು ಘೋರವಾದ ಪೋಲೀಸು ಅಧಿಕಾರಿಗಳ ದೌರ್ಜನ್ಯಕ್ಕೆ ಸಿಕ್ಕಿ ಅವರ ಮಾನವನ್ನು ಗೌರವವನ್ನು ಕಳೆದುಕೊಂಡು ಇರತಕ್ಕ ಸ್ಥಿತಿಯಲ್ಲಿ ತನ್ನ ಒಂದು ಅಸುವನ್ನು ನೀಗಿರತಕ್ಕ ದಾರುಣ ಪರಿಸ್ಥಿತಿಯನ್ನು ನಾನು ಇಲ್ಲಿ ಹೇಳಬೇಕಾಗಿದೆ. ಇದನ್ನು ಹೇಳಬೇಕಾದರೆ ನಮಗೆಲ್ಲರಿಗೂ ಕಣ್ಣಿನಲ್ಲಿ ನೀರು ಬರುತ್ತದೆ ಎನ್ನುವುದನ್ನು ಯಾರೂ ಮರೆಯಬಾರದು. ಈ ಬಗ್ಗೆ ಈ ಸಭೆಯ ಅಧ್ಯಕ್ಷರ ಗಮನಕ್ಕೆ ಒಂದು ಕಾಗದವನ್ನೂ ಬರೆದುದನ್ನೂ ತಂದಿದ್ದೆ. ಆ ಕಾಗದವನ್ನು ಬರೆದ ಮನುಷ್ಯ ಪೋಲೀಸು ದೌರ್ಜನ್ಯಕ್ಕೆ ಸಿಕ್ಕಿ ಅಸುವನ್ನು ನೀಗಿದೆ ಎಂಬುದನ್ನು ತಮಗೆ ಕಾಗದ ತಲಪಿದ ಮೇಲೆ ಅದೇ ರಾತ್ರಿ ಅವನು ಅಸುವನ್ನು ನೀಗಿದ ಎನ್ನುವುದನ್ನು ಇಲ್ಲಿ ಹೇಳುವುದು ಅತ್ಯಾವಶ್ಯಕ ಎಂದು ಹೇಳಬಯಸುತ್ತೇನೆ. ಅವನು ಬರೆದಂತೆ ಸುಮಾರು ಎರಡು ವರ್ಷಗಳಿಂದಲೂ ನಮ್ಮ ದೇಶದಲ್ಲಿ ಎಲ್ಲಿಯೂ ಆಗದಂತಹ ಒಂದು ಪರಿಸ್ಥಿತಿಯನ್ನುಂಟು ಮಾಡಿ, ಜನತೆಯ ಮೇಲೆ ಕಾಂಗ್ರೆಸ್ಸಿನವರನ್ನು ಎತ್ತಿ ಕಟ್ಟಿ ಕಾಂಗ್ರೆಸ್ಸನ್ನು ಇಲ್ಲಿ ಬೆಳಸಬೇಕು ಎನ್ನುವ ಒಂದೇ ಧೋರಣೆಯನ್ನು ಇಟ್ಟುಕೊಂಡು ಈ ಪೋಲೀಸು ಅಧಿಕಾರಿಯನ್ನು ನೇಮಕ ಮಾಡಿಕೊಂಡಂತೆ ಇದೆ. ಅತನು ಬರೆದಿರುವ ಕಾಗದದಲ್ಲಿ ಕೆಲವು ವಿಷಯಗಳನ್ನು ಹೇಳಿದ್ದಾನೆ. ಆ ಕಾಗದದಲ್ಲಿ ಬರೆದಿರುವ ಒಂದೇ ಒಂದು ವಾಕ್ಯವನ್ನು ಅಧ್ಯಕ್ಷರ ಅಪ್ಪಣೆ ಪಡೆದು ಇಲ್ಲಿ ಓದುತ್ತೇನೆ :

ಅಧ್ಯಕ್ಷರು.—ಯಾರು ಇಲ್ಲಿಲ್ಲವೋ ಅಂತಹವರು ಬರೆದಿರುವ ಕಾಗದವನ್ನು ಇಲ್ಲಿ ತಾವು ಹೇಳಲಿಕೆ ಹೇಗೆ ಸಾಧ್ಯ ?

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಮುಖ್ಯ ಮಂತ್ರಿಗಳಿಗೂ ಇದೇ ಕಾಗದವನ್ನು ಅವರು ಬರೆದಿದ್ದಾರೆ. ಅಲ್ಲದೆ ನಮ್ಮ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರಿಗೂ ಇತರ ಸದಸ್ಯರುಗಳಿಗೂ ಪೋಲೀಸು ಇಲಾಖೆಯವರು ಮಾಡಿರುವ ದೌರ್ಜನ್ಯಗಳ ಬಗ್ಗೆ ಅನೇಕ ಸಾರಿ ಪದೇ ಪದೇ ಅದನ್ನು ತೀವ್ರವಾಗಿ ಅವರ ಗಮನಕ್ಕೆ ಅರಿಕೆ ಮಾಡಿಕೊಂಡಾಗ್ಯೂ ಅದರಿಂದೇನೂ ಪ್ರಯೋಜನವಾಗಲಿಲ್ಲ. ಇಂತಹ ಒಬ್ಬರು ಅಧಿಕಾರಿಗಳು ಬಂದು ನಮ್ಮ ದೇಶದಲ್ಲಿ ಯದ್ವಾ ತದ್ವಾ ಕಾನೂನನ್ನು ಪಯೋಗಿಸಿ ಮಾಡುತ್ತಿದ್ದಾರೆಂದು ಪತ್ರಿಕೆಗಳಲ್ಲಿ ಬರುತ್ತಿರುವುದನ್ನೂ ಓದಿ ನೋಡುತ್ತಿದ್ದೇವೆ. ಅಲ್ಲದೆ ದೇಶದ ಜವಾಬುದಾರಿಯನ್ನು ಹೊತ್ತಿರುವ ಮುಖ್ಯ ಮಂತ್ರಿಗಳು ಈ ಒಬ್ಬ ಪೋಲೀಸು ಅಧಿಕಾರಿಯನ್ನು ರಕ್ಷಣೆ ಮಾಡುತ್ತಿರುವುದೇ ಅಲ್ಲದೆ ಅವನಿಗೆ ಉತ್ತಮವಾದ ಒಂದು ಸರ್ಟಿಫಿಕೇಟನ್ನು ಕೊಡತಕ್ಕ ಹವ್ಯಾಸವನ್ನು ಇಟ್ಟುಕೊಂಡುದರಿಂದ ಈತನ ದೌರ್ಜನ್ಯಗಳು ವಿಪರೀತವಾಗಿ ಹೆಚ್ಚಿ ಇಲ್ಲಿ ಒಬ್ಬ ಮನುಷ್ಯ ತನ್ನ ಪ್ರಾಣವನ್ನು ನೀಗಿದ ಶೋಚನೀಯವಾದ ದುರಂತವನ್ನು ಈ ಸಂದರ್ಭದಲ್ಲಿ ವಿವರಣೆ ಮಾಡಬೇಕಾಗಿದೆ. ಅವನು ಬರೆದಿರುವ ಕಾಗದದಲ್ಲಿ ನನ್ನ ಸಾವಿಗೆ ಯಾರೂ ಕಾರಣರಲ್ಲ, ನೇರವಾಗಿ ಈ ದೇಶದ ಮುಖ್ಯ ಮಂತ್ರಿಗಳೇ ಕಾರಣರು ಎಂದು ಬರೆದಿದ್ದಾರೆ. ಕಾಂಗ್ರೆಸ್ಸಿನವರು ವಿರೋಧ ಪಕ್ಷ ಎಲ್ಲಿ ಬೆಳೆಯುತ್ತಿದೆಯೋ ಅಲ್ಲಿ ಅದನ್ನು ಹತ್ತಿಕ್ಕುವುದಕ್ಕೋಸ್ಕರ ಮತ್ತು ಕಾಂಗ್ರೆಸ್ಸನ್ನು ಬಲಪಡಿಸುವುದಕ್ಕೋಸ್ಕರ ಅಂತಹ ಒಂದು ಉದ್ದೇಶವನ್ನು ಇಟ್ಟುಕೊಂಡು ಕಾನೂನನ್ನು ರಕ್ಷಣೆ ಮಾಡುತ್ತೇವೆ ಎಂದು ದೇಶದಲ್ಲಿ ಪೋಲಿಸು ರಾಜ್ಯವನ್ನು ಕಾಂಗ್ರೆಸ್ಸು ಅಭಿವೃದ್ಧಿ ಮಾಡಿಕೊಂಡು ಬರುವುದನ್ನು ನೋಡುತ್ತಿದ್ದೇವೆ. ಈ ದಿವಸ ದೇಶದ ಮುಖ್ಯ ಮಂತ್ರಿಗಳು ಮತ್ತು ಹಣಕಾಸಿನ ಸಚಿವರು ಮಾಡತಕ್ಕ ಕಾರ್ಯಗಳನ್ನು ಕಾಂಗ್ರೆಸ್ಸಿನವರು ಅನುಸರಿಸತಕ್ಕ ನೀತಿಯನ್ನು ನೋಡಿದರೆ ಪೋಲೀಸು ರಾಜ್ಯ

(ಶ್ರೀ ಕೆ. ಲಕ್ಕಪ್ಪ)

ದಿಂದ ಯಾವ ರೀತಿಯಿಂದಲೂ ವಿರೋಧಪಕ್ಷದ ಶಕ್ತಿಯನ್ನು ಕುಗ್ಗಿಸುವುದಕ್ಕೆ ಸಾಧ್ಯವಿಲ್ಲ ಮತ್ತು ಕಾಂಗ್ರೆಸ್ಸಿನ ಶಕ್ತಿಯನ್ನೂ ಬೆಳೆಸುವುಕ್ಕೆ ಸಾಧ್ಯವಿಲ್ಲ. ಏಕೆಂದರೆ, ದೇಶದ ಆಡಳಿತ ಇಷ್ಟು ಅವನತಿಗೆ ಇಳಿದು ಹಿಂದುಳಿಯುತ್ತಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಈ ದುರಂತದಲ್ಲಿ ಪ್ರಾಣ ಬಿಟ್ಟವರು ಈ ಸಭೆಯ ವಿರೋಧಪಕ್ಷದ ನಾಯಕರಿಗೆ, ಸದಸ್ಯರಾದ ಶ್ರೀಮಾನ್ ಎಸ್. ಎಂ. ಕೃಷ್ಣರವರಿಗೆ, ಈ ಸಭೆಯ ಅಧ್ಯಕ್ಷರಾದ ಶ್ರೀಮಾನ್ ಬಾಳಿಗಾರವರಿಗೆ, ನಮ್ಮ ದೇಶದ ಪೋಲೀಸು ಮಂತ್ರಿಗಳಾದ ಶ್ರೀಮಾನ್ ಆರ್. ಎಂ. ಪಾಟೀಲ್‌ರವರಿಗೆ ಬರೆದ ಕಾಗದದಲ್ಲಿ ಅವರು ' ನನ್ನ ಪ್ರಾಣ ಹೋಗುವುದಕ್ಕೆ ಮುಖ್ಯವಾಗಿ ನಮ್ಮ ದೇಶದ ಮುಖ್ಯ ಮಂತ್ರಿಗಳೇ ಕಾರಣರು : ಎಂದು ಬರೆದಿದ್ದಾರೆ. ಹಿಂದೆ ಸಭೆಯಲ್ಲಿ ಮುನಿಯಮ್ಮನ ಮರಣದ ಬಗ್ಗೆ ನಡೆದ ನಡವಳಿಕೆಗಳನ್ನೆಲ್ಲ ನೋಡಿದ್ದೇವೆ. ಆಗ ಅವಳು ಪೋಲೀಸು ಸ್ಟೇಷನ್ನಿನಲ್ಲಿ ಇದ್ದಾಗ ಅವಳಿಗೆ ಕೊಟ್ಟ ಕಿರುಕುಳಗಳಿಂದ ಅವಳು ಅಸು ನೀಗಿದ ದಾರುಣ ಕತೆಯನ್ನು ಚರ್ಚೆ ಮಾಡಿ ಈ ಸಭೆಯಲ್ಲಿ ವಿಚಾರ ಮಾಡಬೇಕೆಂದು ಹೇಳಲಾಗಿತ್ತು.

Mr. SPEAKER.—How does that come here? The member must express his views on this subject only. He brings that episode hereafter extending time for this subject. That should not be so.

ಶ್ರೀ ಕೆ. ಲಕ್ಕಪ್ಪ.—ವಿಚಾರಣೆ ಮಾಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಎಸ್. ಶಿವಪ್ಪನವರೂ ಈ ಸಭೆಯಲ್ಲಿ ಹೇಳಿದ್ದರು ಮತ್ತು ಸರಕಾರದ ಗಮನವನ್ನು ಸೆಳೆದಿದ್ದರೂ ಕೂಡ ಸರಕಾರ ಇದುವರೆಗೆ ಜವಾಬ್ದಾರಿಯುತವಾದ ಸಮಾಧಾನಗಳನ್ನು ಕೊಡದೇ ಇರುವದಕ್ಕೆ ಕಾರಣಗಳಾದರೂ ಏನು ? ಇದಕ್ಕೆ ಸರಿಯಾದ ಜವಾಬನ್ನು ಆ ಕಡೆಯಲ್ಲಿರುವ ಮಂತ್ರಿಗಳು ಕೊಟ್ಟಿಲ್ಲ ಎಂದು ಸಂಕಟದಿಂದ ಇಲ್ಲಿ ಹೇಳಬೇಕಾಗಿದೆ. ಯಾರಾದರೂ ಈ ದೇಶದಲ್ಲಿ ಸಾಮಾನ್ಯ ಜನರ ಕೊಲೆಗಳಲ್ಲಿ ನೇರವಾಗಿ ಭಾಗ ವಹಿಸಿದ್ದಿದ್ದರೆ ಅವರಿಗೆ ಯಾವ ರೀತಿಯಾದ ಶಿಕ್ಷೆಯನ್ನು ವಿಧಿಸುತ್ತಿದ್ದರೋ ಅದರಂತೆ ಮುಖ್ಯ ಮಂತ್ರಿಗಳೂ ಇದರಲ್ಲಿ ಐ. ಪಿ. ಸಿ. 302ನೇ ಸೆಕ್ಷನ್ನು ಪ್ರಕಾರ ತಪ್ಪಿತಸ್ಥರಾಗಿದ್ದಾರೆ ಮತ್ತು ಇದಕ್ಕೆ ನೇರವಾಗಿ ಜವಾಬುದಾರರಾಗಿದ್ದಾರೆ.

Mr. SPEAKER.—He must bring only new points but not the points already expressed. But he is repeating what others have already expressed, in some form or other. If he goes on like this I am not allowing him to continue. I will have to request the Minister to begin his reply.

ಶ್ರೀ ಕೆ. ಲಕ್ಕಪ್ಪ.—ಸ್ವಾಮೀ, ಸಹಕಾರ ಸಂಘಗಳ ಬಗ್ಗೆ ಹೇಳುವಾಗ ನನ್ನ ಬಳಿ ಒಂದು ದೊಡ್ಡ ಪಟ್ಟಿ ಇದೆ. ಅದರಲ್ಲಿ ಯಾವ ಪ್ರಮಾಣದಲ್ಲಿ ಸಹಾಯ ಸೌಕರ್ಯಗಳನ್ನು ಕೊಟ್ಟಿದ್ದಾರೆ ಎಂದರೆ, ಇದರಲ್ಲಿ ಒಂದು ಸೊಸೈಟಿಯ ಗೋಪಾಲಸ್ವಾಮಿ ಎನ್ನುವವರಿಗೆ ಆರೇಳು ವರ್ಷಗಳವರೆಗೆ...

ಅಧ್ಯಕ್ಷರು.—ಇಲ್ಲಿ ಯಾವ ಹೆಸರನ್ನೂ ಎತ್ತಬೇಡಿ. ಅವರು ಇಲ್ಲಿಲ್ಲ.

ಶ್ರೀ ಕೆ. ಲಕ್ಕಪ್ಪ.—ಅವರು ಸತ್ತು ಹೋಗಿದ್ದಾರೆ. ಸೊಸೈಟಿಯಲ್ಲಿದ್ದವರು ಯಾವ ರೀತಿ ಜವಾಬುದಾರಿಯಿಂದ ಕೆಲಸ ಮಾಡಿದವರು ಸತ್ತ ಮೇಲೆ ಕೇಸು ಹಾಕಿ ಸುಮಾರು 12 ಸಾವಿರ ರೂಪಾಯಿಗಳಷ್ಟು ಹಣವನ್ನು ದುರುಪಯೋಗ ಮಾಡಿದ್ದಾರೆ, ಎಂದು ಯಾರಾದರೂ ಹಿಂದೆ ಯಾವ ಜವಾಬುದಾರಿಯನ್ನಾದರೂ ಅವರ ಮೇಲೆ ನಿಗದಿ ಮಾಡಿದ್ದಾರೆಯೇ? ಸತ್ತು ಹೋದವರ ಮೇಲೆ 12 ಸಾವಿರದಷ್ಟು ಹಣ ದುರುಪಯೋಗವಾಗಿದೆ ಎಂದು ಹೇಳುವಾಗ ಯಾರ ಮೇಲೆ ಈ ಜವಾಬುದಾರಿಯನ್ನು ಹೊರಿಸುತ್ತಿದ್ದೀರಿ ? ಸಹಕಾರ ಸಂಘಗಳ ಇಲಾಖೆ ಯಾವ ರೀತಿಯಾಗಿ ಕೆಲಸ ಮಾಡುತ್ತಿದೆ ಎನ್ನುವುದನ್ನು ಇಲ್ಲಿ ನಾನು ಸರಕಾರದ ಗಮನಕ್ಕೆ ತರುತ್ತಿದ್ದೇನೆ.

ಆಡಳಿತ ನಡೆಸತಕ್ಕಂಥ ಎಲ್ಲ ಜನರ ಮೇಲೆ ಜವಾಬ್ದಾರಿ ಇದೆ ಎಂದು ಆಡಿಟ್ ರಿಪೋರ್ಟಿನಲ್ಲಿ ವರದಿ ಮಾಡಿದ್ದಾರೆ. ಅವರ ಮೇಲೆ ಜವಾಬ್ದಾರಿ ಹಾಕಿದ್ದರೂ ಕೂಡ ಅಂಥವರನ್ನು ಪ್ರಾಸ್‌ಕ್ಯೂಷನ್ ಮಾಡದೇ ಇರುವುದಕ್ಕೆ ಪ್ರಬಲ ಕಾರಣವೇನು ? ತುಮಕೂರು ಕ್ಷೇತ್ರದಿಂದ ಚುನಾಯಿತರಾಗಿ ಬಂದಿರತಕ್ಕಂಥ ಮಂತ್ರಿಗಳು ಇದರಲ್ಲಿ ನೇರವಾದ ಕೈವಾಡ ತೋರಿಸಿದ್ದಾರೆ. ತಮಗೆ ಬೇಕಾಗಿರತಕ್ಕಂಥವರ ಮೇಲೆ ಮೊಕದ್ದಮೆ ಹಾಕುವುದಿಲ್ಲ. ಬೇಡಾದವರ ಮೇಲೆ ಮೊಕದ್ದಮೆ ಹಾಕುತ್ತಾರೆ. ಇದನ್ನು ಸಹಕಾರ ಸಂಘಗಳ ಮಂತ್ರಿಗಳು ಒಪ್ಪುತ್ತಾರೆಯೇ ? ಇದಕ್ಕೆ

ಪ್ರಬಲ ಕಾರಣ ಏನು ಇದೆ ? ಇದು ಸಹಕಾರ ಸಂಘಗಳ ನೀತಿಯೇ ? ನನಗೆ ಅನಿಸುತ್ತದೆ ಬಹುಶಃ ಈ ದೇಶದಲ್ಲಿ ಎಲ್ಲ ಜನಗಳೂ ಕೂಡ ವಿಷ ತೆಗೆದುಕೊಂಡು ಪ್ರಾಣ ಬಿಡುವ ಪರಿಸ್ಥಿತಿಗೆ ಇದನ್ನು ತರುತ್ತಿದ್ದಾರೆ. ಇಂಥಾದ್ದನ್ನು ಮಾಡಬಾರದು ಎಂದು ನಾನು ಹೇಳುತ್ತೇನೆ.

ಇನ್ನು ವಿದ್ಯಾಖಾತೆಯ ಬಗ್ಗೆ ಒಂದು ಮಾತು ಹೇಳಲು ಬಯಸುತ್ತೇನೆ. ಈ ಸಂಬಂಧದಲ್ಲಿ ಲಾ ಕಾಲೇಜ ಬಗ್ಗೆ ಇರುವ ಒಂದು ಸಂಗತಿ ನನಗೆ ಈಗ ಜ್ಞಾಪಕಕ್ಕೆ ಬರುತ್ತಾ ಇದೆ. ಈ ವಿಚಾರ ವನ್ನು ಸಂಕ್ಷಿಪ್ತವಾಗಿ ಹೇಳಲು ಬಯಸುತ್ತೇನೆ. ಅದು ಏನಿದೆ ಅಂದರೆ--

> "The Principal, Law College, referred to Mental Hospital records of 1958. He was placed in the Mental Hospital."

I do not know ; but it is a matter that has been revealed here.

Mr. SPEAKER.—If the Member does not know, he should not take the responsibility of mentioning it on the Floor of the House.

ಶ್ರೀ ಕೆ. ಲಕ್ಕಪ್ಪ.—ನನ್ನ ಗಮನಕ್ಕೆ ಬಂದಂಥ ವಿಚಾರವನ್ನು ತಿಳಿಸಿದರೂ ಕೂಡ ಅದನ್ನು ತನಿಖೆ ಮಾಡಿ ಅವರು ಹೇಳಲಿಲ್ಲ.

Mr. SPEAKER.—The member should not suggest anything about which he has not satisfied himself.

Sri K. LAKKAPPA.—I am satisfied as the information has been supplied to me. I have not gone there to see the records.

Mr. SPEAKER.—The very point that the information has been supplied to you......

Sri K. LAKKAPPA.—It is in the interest of public institutions that I am mentioning.

Mr. SPEAKER.—I feel distressed. The Hon'ble Member is deemed to have closed his speech.

(Sri G. V. Gowda stood up)

Mr. SPEAKER.—I am sorry, I am not allowing anybody. If others have taken away the time, they are responsible and Sri G. V. Gowda is also responsible. When both these members were there, he yielded to them. There are only six minutes.

Sri G. V. GOWDA.—How could you expect me to finish my speech in only six minutes on an Appropriation Bill ?

Mr. SPEAKER.—Therefore, the Hon'ble Member should note that there is no time for him.

Sri G. V. GOWDA.—I am not prepared to bargain. If you permit me, I will speak ; otherwise I do not want to speak.

Mr. SPEAKER.—There is no question of bargaining. Let not the Members feel that they are bargaining with me. They have got the right to say what should be done. The Hon'ble Finance Minister will begin his reply.

† Sri B. D. JATTI.—Mr. Speaker, Sir, Most of the Hon'ble Members who participated today have mentioned the same points which they mentioned either when they were participating in the general discussion on the Budget or when they were discussing the Demands. There are

(Sri B. D. Jatti)

very few points which are to be categorised as new points. So, it may not be necessary for me to repeat the replies which I have already given previously. I will try to reply to some of the new points which have been raised by some of the Hon'ble Members.

Hon'ble Member Sri Siddaiah Kasimath referred to the number of posts in the Agriculture Department which have not been filled up.

It is true that as far as gazetted officers are concerned the list of the gazetted officers have been finalised and now most of the posts have been filled up. There cannot be any grievances now as far as filling up of the posts are concerned. As far as non-gazetted officers in the Agricultural Department are concerned, the list is not yet finalised and it is likely that, that list also will be finalised very soon. There cannot be any complaint as regards the filling up of posts in the Agricultural Department. While I was replying to the general debate, I said there was an improvement in the Agricultural Department. If any Hon'ble Member wants to find out, he is free to do so; if any individual member requires more information, I am prepared to supply that. There were some difficulties in the Agricultural Department and now these difficulties are disappearing.

5-00 P. M.

Regarding seed farm, a mention was made by Mr. Siddaih Kasimath. I will request him to refer to the Estimates Committee Report, part 2, where all the details regarding seed farms are given. Then he referred to Davangere Arts School which was started some time back. Necessary number of teachers have been appointed but since that Institution is to devolop, more teachers are required and as and when teachere are found who are suitable for taking up the job, they will be recruited and oppointed.

Then, Sir, some of the Hon'ble Members referred to the rebate that is given to the weavers. Sir, for the current financial year, whatever rebate is to be given, that will be given to all the weavers who are legally entitled to. There are certain Weaver's Co-operative Societies who have not kept their accounts properly and even if some of them, have kept their accounts properly, wherever there are defects or mistakes, we are scrutinising all those accounts and after scrutiny is over, rebate will be given to all the co-operative societies which will come out as good co-operative societies. From next year, we will see whether it is necessary to give rebate or whether rebate can be given in any other form to the weavers just to help them to improve their profession. As far as the current financial year is concerned, whatever is legally due will be given to all the weavers co-operative societies or weavers individually.

Sir, then Hon'ble Member Sri C. J. Muckannappa referred to Chandulal ka Zamana. I do not know anything about Chandulal ka Zamana and he has never supplied any information to me. I will go through if he has got any report or any book about that Zamana so that I will also be enlightened. That does not form part of the budget and so it is not necessary for me to reply that point. The Hon'ble Member made a reference even in his previous speeches regarding the accounting system of woollen co-operative societies. On that the Hon'ble Minister for Commerce and Industries replied here on the floor of the House and explained the system in which the accounts are kept by that Woollen Co-operative Society. However, I will see whether the remarks that have been made by the Hon'ble Member are correct or not. He himself agreed to pass on certain information through the Chair to the Government and that report and all the presentations that may be sent to me will be examined by the Government and if there are any mistakes or defects, they will be rectified. That much I can assure on behalf of the Government.

Then, the Hon'ble Member Sri K. S. Suryanarayana Rao also referred to one or two points, which are to be found in the Public Accounts Committee Report. When that report is discussed here, Members will be given ample opportunities to criticise the Government and if there are any defects, if they are acceptable to the Government, we will accept them and see that we will not repeat the same mistakes.

SRI K. S. SURYANARAYANA RAO.—Just now, you have no explanation for that.

SRI B. D. JATTI.—When the Report will be discussed here, The Members have a right to criticise and we have also the responsibility to reply to any points raised by the Members. While speaking the same Hon'ble member referred to old Government Electric Factory and said that the factory is not earning a profit of even 2 per cent for the investment which the Government have made. I want to clarify one point Sir. In all the Government owned factories, they pay interest on the investment at the rate of 6 per cent, Secondly the factories also pay interest on the share capital that is invested in the factories. That will have to be taken into consideration. In addition to that, they also make necessary provision for depreciation and after deducting all these items if the Government Electric Factory has earned a profit of about 2 per cent, it does not mean that it is less than 2 per cent as compared to private concerns. That is the only explanation which I wanted to give to the Hon'ble Member. He has also suggested that the Government should have surprise checks on the P.W.D. stores. It is possible that there may be some mistakes here and there and if surprise visits or checks are made by the highest officers in the State, it is possible to find out some mistakes. The same method was followed and in one or two cases we found out serious cases of mistakes and the persons concerned have been properly dealt with.

(SRI B. D. JATTI)

One point which attracted the attention of three or four Hon'ble Members was about the reported letter from Sri G. Channiah of Nuggehalli, Channarayapatna Taluk, Hassan District complaining about the harassment of Sub Inspector and threat to commit suicide. Sir, I have tried to get as much information as is possible for me today to reply to some of the points raised here. The information which I am giving is not a detailed one. From the information which is made available to me, I have come to know that there were two parties in that village and a number of criminal cases were launched against both the parties ; whether it was due to instigation of one party against the other or *vice versa*, I am not in a position to say, but from the records, it appears that a number of cases were there against both the parties and most of the cases were under Section 107 of the Criminal Procedure Code, and against the person who is said to have committed suicide, there was a case under Section 379 of the Indian Penal Code. That case perhaps is referred to. That is not yet completely investigated. But regarding the suicide of Sri Channaiah, it said that he has written a letter and it is also said that some more letters were found on his person when he died. Those letters are to be compared with each other and all the documents have been sent to experts to tally whether the letter which has been sent to the Government or to the Chief Minister, whatever it is, tallies with his other letters. If they tally, then the experts who are there to examine and give the report will have to submit reports and after those reports are sent to the Goverment, we will come to conclusion. That is one matter. Secondly, Sir, the vomitting found on the body and the viscera have been sent for chemical analysis and the chemical analyser has promised to give the report before the end of this month. The moment we get that report we will be in a better position to know what exactly was the reason for his death. These are the facts which have to be investigated by the Police Department. They are making special efforts to investigate in detail and all the facts will be placed before this Hon'ble House when the report is submitted to the Government. These are all the information which I have got because it was referred to today.

SRI K. P. REVANNA SIDDAPPA.—What about the-Sub Inspector ?

SRI B. D. JATTI.—Regarding the Sub-Inspector, I am not the proper authority or proper person to reply. I think Sir, he is still there. I am not the proper person to say anything about transfers etc. because I do not know all the details.

SRI S. M. KRISHNA.—Then where is joint responsibility ? You were trying to answer on behalf of the Government. Now you say you were not the proper person to answer criticisms on behalf of the Police Department. How admirable is your performance ?

SRI B. D. JATTI.—It is left to you to have your own opinion. But I have never said that my performance is to be admired.

Sri C. J. MUCKANNAPPA.—Yesterday you were pleased to observe that whether it is Chief Minister or Education Minister or any other Minister you take responsibility and it is a joint responsibility. May I just know from the Hon'ble Finance Minister what action the Government have taken already against the Sub-Inspector, whether he is continued there or what action they propose to take against him? That is what I want to know from him.

Sri B. D. JATTI.—I was mentioning that I do not have details, Regarding the transfer of the person and cancellation of the transfer, it is a fact that he was transferred and it is fact that the transfer was cancelled. There is no doubt about it. I am not trying to hide any thing. Why he was transferred and why that transfer was concelled I am not in a position to give the details.

Sri S. M. KRISHNA.—The Chief Minister has explained it adequately on the floor of the House as to why his transfer was cancelled.

Sri B. D. JATTI.—If the Hon'ble Chief Minister has explained and if the explanation is satisfactory, I have nothing to add to it.

Sri S. M. KRISHNA.—The damage was done only after the explanation was given by the Chief Minister.

Sri B. D. JATTI.—Investigation is being made by the Police Department and as soon as that report is received by the Government, it will be made available to the House. These are the facts which I have come to know today. I never expected that this subject will be discussed today but all of a sudden on the Appropriation Bill, some Hon'ble Members took interest and they wanted to say something.

Mr. SPEAKER.—Normally, it would not have come. I said I want to give the members a chance. If the reply is not ready, to that extent my conduct has been responsible.

Sri B. D. JATTI.—I am not questioning the conduct of the Chair. I never thought that this question may be raised today because when Appropriation Bill is discussed the general convention which is followed here is that many Hon'ble Members do not participate in the debate and even if they participate, they participate only for five or ten minutes and the Appropriation Bill is passed within 15 minutes or half an hour.

Sri C. J. MUCKANNAPPA.—There is a doubt whether it amounts to *sub judice* or not.

Mr. SPEAKER.—Only when I call upon the Hon'ble Member he can put that question and get clarification. The speech is not yet over and I have not called upon anybody.

Sri C. J. MUCKANNAPPA.—If he gives a reply it goes into record.

Mr SPEAKER.—After the Hon'ble Minister finishes his speech, there is anything I will give chance to members.

Sri B. D. JATTI.—Investigation is going on and investigation is not yet complete. When a Report is submitted to the Government by the police authorities, then we will be in a position to give more facts to this Hon'ble House.

Mr. SPEAKER.—Before I call upon anybody I wish to say one thing, I was mentioning about the language. Here is something which is written not for the purpose of this debate or for this occasion. This is about courteous language. Dignity of the House can be maitained only if the views are clothed in courteous language.

(Extract from "Practice and Procedure of Indian Parliament")—S. S. More) pp. 316-317

"But the dignity of the House can be maintained only if the views are clothed in courteous language. Hence Lord Dalhousie advised the Members of the Council (1854-61).

'They will doubtless require further the observance of measured and courteous language at all times in debate.'

The Chair has always insisted that members use 'restrained and guarded language', 'dignified language', and deprecated the use of strong language.

Strong language when it becomes positively offensive becomes punishable. In the United Kingdom both the Houses have repeatedly used their powers to punish members for offensive words spoken before the House. Some members have been admonished, others imprisoned and in the House of Commons, some have been expelled.

The Indian Legislatures have framed detailed rules for prohibiting the use of offensive language regarding many matters. They are given under separate headings in what follows:"

Sri S. M. KRISHNA,—In the same United Kingdom, in the same House of Commons, in the very first debate, Herald Wilson called a member as PARLIAMENTARY leper Strong language is bound to be used when there is slight provocation. That should not be taken seriously.

Mr. SPEAKER.—It is exactly there the Speaker has to do his duty to prevent such things, if possible. Once, twice thrice is it to be permitted? I do not think he will subscribe to the view that that language should be permitted.

Sri C. J. MUCKANNAPPA.—The Hon'ble Minister for Finance observed that there is a case against him under section 379 of the IPC. I want to know whether there is any more accused. Is he the only person involved or are there some more persons. I want to know whether it will not amount to *sub-judice* whether Government has got information to that effect?

Mr. SPEAKER.—If the Members had mentioned this idea of *subjudice* I would have shut out the whole thing.

Sri H. R KESHAVA MURTHY,—Sir, the back-benchers in every Assembly are given due consideraion to express their views, though they may not be advanced views. I beseach you to give the back-benchers some consideration. At least some minimum time may be set apart to back-benchers to voice forth their views. That is all my submission.

Mr. SPEAKER.—Is it submission or is it an admonition to the Chair ? If the Member belongs to a Party, let the Party take note of it. I am not going to call Members as back-benchers.and front benchers If the whip of the Party sends the list, I will have no option. Where is the Whip ? Let the Whip come and explain the conduct of the the Member of his Party. His name is not given to me and therefore I have not called his name. Please explain why the Wip has not given his name and tender an apology to him and give me an apology. It does not rebound to the credit of the Party if two Members are quarreling among themselves. The Hon'ble Membrs Sri H. R. Keshava Murthy wants me to make out that there is a distinction between back-benchers and front-benchers. He may substantiate it or withdraw it.

Sri H. R. KESHAVA MURTHY.—I did not make any charge that you are showing any such distinction Sir. I only appealed to you to show some consideration to the back-benchers.

Mr. SPEAKER.—Here is a distinct insinuation. A distinction is drawn as back-benchers and front benchers and an impression is sought to be made that back-benchers are neglected and front-benchers are encouraged. Is that the impression of the House ? I would like to know.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಂಡ್ಯದ ಫಸ್ಟ್‌ಗ್ರೇಡ್ ಕಾಲೇಜಿನ 114 ಜನ ವಿದ್ಯಾರ್ಥಿಗಳು ಕನ್ನಡ ತೆಗೆದುಕೊಂಡು ಕನ್ನಡದಲ್ಲೇ ಅಭ್ಯಾಸ ಮಾಡುತ್ತೇನೆ ಕನ್ನಡವನ್ನು ಇನಟ್ರೊಡ್ಯೂಸ್ ಮಾಡಿ ಎಂದು ಕೇಳಿದ್ದರೂ ಕೂಡ ಆ ರೀತಿ ಮಾಡಿಲ್ಲ. ಕನ್ನಡದ ವಿಷಯದಲ್ಲಿ ಏಕೆ ಇಷ್ಟು ತಾತ್ಸಾರ ಭಾವನೆ ?

ಶ್ರೀ ಎಸ್. ಆರ್. ಕಂಠಿ.—ಈ ವಿಚಾರದಲ್ಲಿ ನಮ್ಮ ಡೈರೆಕ್ಟರ್ ಅವರು ಯಾವ ರೀತಿಯ ಉತ್ತರ ಕೊಟ್ಟಿದ್ದಾರೋ ಗೊತ್ತಿರಲಿಲ್ಲ. ಆದ್ದರಿಂದ ಈಗಾಗಲೇ ಕಾಗದ ಬರೆದಿದ್ದೇನೆ, ಏಕೆ ಹೀಗೆ ಆಗಿದೆ ಎಂದು ವಿಚಾರಿಸುತ್ತೇನೆ. ಕನ್ನಡ ಯಾರಿಗೆ ಬೇಕು ಎಂದು ಇಚ್ಛಿಸುತ್ತಾರೋ ಅವರಿಗೆ ಕೊಡಬೇಕೆಂದು ಮಹಾರಾಣಿ ಕಾಲೇಜಿನಲ್ಲಿ 1962 ರಿಂದ ನಾನೇ ಮಾಡಿಸಿದ್ದೇನೆ. ಆದ್ದರಿಂದ ಯಾರಾದರೂ ಕನ್ನಡ ಬೇಕೆಂದು ಕೇಳಿದರೆ ಕೊಡಬಾರದು ಎಂಬುದು ಸರ್ಕಾರದ ನೀತಿ ಅಲ್ಲ, ತಾವು ಹೇಳಿರುವುದನ್ನು ವಿಚಾರ ಮಾಡುತ್ತೇನೆ.

Mr. SPEAKER.—The question is :

"That the Mysore Appropriation (No. 4) Bill, 1965, be taken into consideration."

Those that are in favour will say "AYE".

HON'BLE MEMBERS.—AYE.

Mr. SPEAKER.—Those that are against will say "NO".

HON'BLE MEMBERS.—NO.

Mr. SPEAKER.—I think the " AYES " have it......

Sri K. LAKKAPPA.—I press for a division.

(*The Division Bell rang for two minuts.*)

Mr. SPEAKER. —The question is :

" That the Mysore Appropriation (No. 4) Bill, 1965, be taken into consideration."

(*The division was taken by requesting the Members for and against the Motion to stand in their seats*).

Mr. SPEAKER.—The result of the division is as follows:— Ayes = 47 ; Noes = 27.

The motion was adopted

CLAUSES.

Mr. SPEAKER.—The question is :

" That clauses 2 and 3 stand part of the Bill ".

The motion was aaopted

Clauses 2 and 3 were added to the Bill.

Mr. SPEAKER.—The question is :

" That the Schedule stand part of the Bill ".

The motion was adopted.

The Schedule was added to the Bill.

Mr. SPEAKER.—The question is :

" That Clause 1, the Title and the Preamble stand part of the Bill. "

The motion was adopted.

Clause 1, the Title and the Preamble were added to the Bill.

Motion to pass

Sri B. D. JATTI.—Sir, I beg to move :

" That the Mysore Appropriation (No. 4) Bill, 1965, be passed ".

Mr. SPEAKER,—The question is :

" That the Mysore Appropriation (No. 4) Bill, 1965, be passed ".

The motion was adopted.

Business of the House.

Mr. SPEAKER.—We started the work on the footing that this is a non-official day. But circumstances have altered the situation. My idea in giving scope for Debate on the Appropriation Bill was to see that members do not nourish a grievance that they did not participate in the Demands. More important was the remark that I made—in as much as there was no reply to the particular point that was raised by Sri Sivappa, I said under this Bill, some little Debate would be permitted. But 'little' has become big and bigger. Still I find I have not been able to satisfy all the members and my efforts have been fruitless. I will not endeavour hereafter to do so. I will simply draw the line and see that no member's rights are denied. But I will certainly protect every right of every member and in so doing, I seek the co-operation of Hon'ble Members. I do not think that to day can be treated as a non-official day and it will be highly wrong on my part at this hour to say that we are doing non-official business. Therefore, all the work listed for today will be taken up on the 31st.

TENTH REPORT OF THE COMMITTEE ON PRIVATE MEMBERS' BILLS AND RESOLUTIONS.

Sri A. R. PANCHAGAVI (Deputy Speaker).—Sir, I beg to present the Tenth Report of the Committee on Private Members' Bills and Resolutions.

Mr. SPEAKER.— The Tenth report of the Committee on Private Members' Bills and Resolutions is presented.

Sri A. R. PANCHAGAVI.—Sir, I beg to move :

"That this Assembly agrees with the Tenth Report of the Committee on Private Members' Bills and Resolutions".

Mr. SPEAKER.—The question is :

"That this Assembly aggrees with the Tenth Report of the Committee on Private Members' Bills and Resolutions".

The motion was adopted.

ಶ್ರೀ ಸಿದ್ದಯ್ಯ ಕಾಶೀಮಠ್.—ಏಪ್ರಿಲ್ ಒಂದನೆಯ ತಾರೀಖು ಶುಭ ದಿವಸವಲ್ಲದಿರುವುದರಿಂದ ಆ ದಿನ ಸಭೆಗೆ ಬಿಡುವು ಕೊಟ್ಟು 5 ದಿವಸಗಳಾದರೂ ವಿರಾಮವಿರುವಂತೆ ಅವಕಾಶ ಮಾಡಿಕೊಡ ಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಂಪ).—ಬೆಳಿಗ್ಗೆ ಸಭೆ ನಡೆಸಿದರೆ ದೂರ ಹೋಗುವವರಿಗೆ ಸ್ವಲ್ಪ ಅನುಕೂಲ.

ಅಧ್ಯಕ್ಷರು.—ಅದಕ್ಕೆ ನನ್ನ ಆಕ್ಷೇಪಣೆಯೇನೂ ಇಲ್ಲ.

5-30 P.M.

Mr. SPEAKER.—I am agreeable for anything. I am prepared to allow five minutes and you may come to some conclusion.

Sri C. J. MUCKANNAPPA.—Sir, even if it is 1st morning, Members cannot reach their places on the 2nd. So we shall meet in the morning of 31st and adjourn Sir.

Sri B. D. JATTI.—Yes sir. We can again meet on the 5th April at 1 p.m. We agree to meet on 31st at 8-30 a.m. and discuss non-official business.

Mr. SPEAKER.—So, non-official business may be taken up on 31st when we meet at 8-30 a.m. The House will adjourn now to meet on 31st at Thirty Minutes past eight of the Clock.

The House adjourned at Thirty-five Minutes past Five of the Clock to meet again at Thirty Minutes past Eight of the Clock on Wednesday, the 31st March 1965.

WD 4937—GPB—500—16-8-65

MYSORE LEGISLATIVE ASSEMBLY.

Wednesday, 31st March 1965.

The House met in the Assembly Chamber, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Supply of Cement to Co-operative Societies and Private Agencies in Bijapur District.

*Q.—485. Smt. SUSHILABAI SHAH (Bagewadi).—

Will the Government be pleased to state :—

(a) the quantity of cement supplied to the Co-operative Societies and Private Agencies in Bijapur District since two years ;

(b) the number of these Societies and agencies existing in the same district ;

(c) whether it has come to the notice of the Government that private agencies are not distributing the cement to the public properly ;

(d) if so, the action they propose to take in the matter ?

A.—Sri K. MALLAPPA (Minister for Industries and Commerce).—

(a) 7,700 Metric Tonnes.

(b) Two Co-operative Societies and 21 private agencies.

(c) No

(d) Does not arise in view of the reply to the question (c).

ಶ್ರೀಮತಿ. ಸುಶೀಲಾಬಾಯಿ ಷಾ.—ತಾವು 21 ಖಾಸಗೀ ಏಜನ್ಸಿಗಳವರಿಗಾಗಿ ಸಿಮೆಂಟನ್ನು ಹಂಚುವುದಕ್ಕೆ ಬದಲಿಗೆ ಸಹಕಾರ ಸಂಘಗಳ ಮೂಲಕವೇ ಕೊಡುವುದಕ್ಕಾಗಿ ಏಕೆ ಏರ್ಪಾಡು ಮಾಡಬಾರದು ?

ಶ್ರೀ ಕೆ. ಮಲ್ಲಪ್ಪ.—ಏಜೆಂಟುಗಳನ್ನು ಸರಕಾರದವರು ನೇಮಕ ಮಾಡುತ್ತಿಲ್ಲ. ಇದನ್ನು ಸ್ಟೇಟು ಟ್ರೇಡಿಂಗು ಕಾರ್ಪೋರೇಷನ್ನಿನವರು ಒಪ್ಪಿಗೆ ಕೊಟ್ಟ ಮೇಲೆ ಸರಕಾರ ಇವರಿಗೆ ಲೈಸನ್ಸುಗಳನ್ನು ಕೊಡುತ್ತದೆ.

ಶ್ರೀಮತಿ ಸುಶೀಲಾಬಾಯಿ ಷಾ.—ಸಿಮೆಂಟಿಗಾಗಿ ಪರ್ಮಿಟ್ಟುಗಳನ್ನು ತೆಗೆದುಕೊಂಡು ಹೋದರೂ ಅವರಿಗೆ ಸರಿಯಾಗಿ ಸಿಮೆಂಟು ಸಿಗುತ್ತಿಲ್ಲ. ಇದರ ಬಗ್ಗೆ ಸರಕಾರ ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ಕೆ. ಮಲ್ಲಪ್ಪ.—ಸಿಮೆಂಟು ಎಷ್ಟು ಬಂದಿದೆಯೋ ಅದನ್ನು ನೋಡಿಕೊಂಡು ಆಯಾ ಡೆಪ್ಯುಟೀ ಕಮೀಷನರವರು, ಅಸಿಸ್ಟೆಂಟು ಕಮೀಷನರವರು ಹಾಗೂ ತಹಶೀಲುದಾರರು ಇಷ್ಟು ಸಿಮೆಂಟು ಕೊಡಬಹುದು ಎಂದು ಪರ್ಮಿಟ್ಟನ್ನು ಕೊಡುತ್ತಾರೆ. ಆ ಪ್ರಕಾರ ಸಿಮೆಂಟು ಹಂಚಿಕೆ ಯಾಗುತ್ತದೆ.

ಶ್ರೀಮತಿ ಸುಶೀಲಾಬಾಯಿ ಷಾ.—50 ಮೂಟೆಗೆ ಸಿಮೆಂಟು ಪರ್ಮಿಟ್ಟು ಎಂದು ಕೊಟ್ಟಿದ್ದರೆ ಈ ಕಂಪೆನಿಗಳವರು 25 ಮೂಟೆ ಮಾತ್ರ ಕೊಡುತ್ತೇವೆ ಪೂರ್ತಿ 50 ಮೂಟೆಗಳೂ ಬಂದಿವೆ ಎಂದು ಬರೆದು ಕೊಡಿ ಎಂದು ಕೇಳುತ್ತಾರೆ. ಇದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಇಲ್ಲ ಸಿಮೆಂಟನ್ನು ಹಂಚುವುದಕ್ಕೆ ಖಾಸಗಿ ಏಜಂಟರುಗಳಿಗೆ ಕೊಡುವುದಕ್ಕೆ ಬದಲಾಗಿ ಕಟ್ಟುನಿಟ್ಟಾಗಿ ಸಹಕಾರ ಸಂಘಗಳ ಮೂಲಕವೇ ಸಿಮೆಂಟನ್ನು ಕೊಡು ವುದಕ್ಕೆ ಏಕೆ ಏರ್ಪಾಡು ಮಾಡಬಾರದು.

ಶ್ರೀ ಕೆ. ಮಲ್ಲಪ್ಪ.—ಇದರ ಬಗ್ಗೆ ನಾನಾಗಲೇ ಹೇಳಿದೆ. ಸಾಮಾನ್ಯ ಟ್ರೇಡು ಚಾನಲ್ಲು, ಖಾಸಗಿಯವರಲ್ಲಿ ನಡೆಯುತ್ತಿರುವುದನ್ನು ಡಿಸ್‌ಟರ್ಬ್ ಮಾಡಬಾರದು ಎಂದು ಸ್ಟೇಟು ಟ್ರೇಡಿಂಗು ಕಾರ್ಪೊರೇಷನ್ನಿನವರು ಸಿಮೆಂಟು ತಯಾರು ಮಾಡುವ ಕಂಪೆನಿಯವರ ಸಲಹೆ ಮೇರೆಗೆ ಎಷ್ಟು ಏಜೆಂಟರುಗಳು ಬೇಕು ಎನ್ನುವುದನ್ನು ನೋಡಿ ನೇಮಕ ಮಾಡುತ್ತಾರೆ. ಸರಕಾರದವರು ಏಜಂಟರು ಗಳನ್ನು ನೇಮಕ ಮಾಡುತ್ತಿಲ್ಲ. ಸರಕಾರದವರು ಏನಿದ್ದರೂ ಬರೀ ಲೈಸನ್ಸುಗಳನ್ನು ಮಾತ್ರ ಕೊಡುತ್ತಾರೆ. ಇದಕ್ಕೆ ಕಂಟ್ರೋಲರು ಒಬ್ಬರು ಇರುತ್ತಾರೆ.

ಶ್ರೀ ಟಿ. ಮಾದಯ್ಯ ಗೌಡ.—ಖಾಸಗಿ ಏಜಂಟರುಗಳು ಸಿಮೆಂಟನ್ನು ತೆಗೆದುಕೊಂಡು ಮಾರು ವಾಗ ಅವರ ಮೇಲೆ ಸರಿಯಾದ ಒಂದು ಹತೋಟಿಯನ್ನು ಇಟ್ಟುಕೊಳ್ಳುವವರು ಯಾರು ? ಈ ಸಂದರ್ಭದಲ್ಲಿ ಅವರ ಮೇಲೆ ಯಾರು ಹತೋಟಿ ಇಟ್ಟು ನೋಡಿಕೊಳ್ಳುತ್ತಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಇದನ್ನು ನೋಡಿಕೊಳ್ಳಲು ಕಂಟ್ರೋಲರ್ ಆಫ್ ಸಿವಿಲ್ ಸಪ್ಲೈಸ್ ನೋಡಿಕೊಳ್ಳುತ್ತಾರೆ. ಇದಲ್ಲದೆ ಡೆಪ್ಯುಟಿ ಕಮೀಷನರು, ಅಸಿಸ್ಟೆಂಟು ಕಮೀಷನರು ಹಾಗೂ ತಹಶೀಲುದಾರರುಗಳೂ ನೋಡಿಕೊಂಡು ಪರ್ಮಿಟ್ಟುಗಳನ್ನು ಕೊಡುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸಿಮೆಂಟು ಸಿಕ್ಕದೇ ಇರುವ ಈ ಕಾಲದಲ್ಲಿ ಕೊಡುವ ಸಿಮೆಂಟು ಚೀಲಗಳನ್ನು ಅಲ್ಲಿಂದ ಇಲ್ಲಿಗೆ ಎತ್ತಿ ಹಾಕುವುದರಿಂದಾಗಿ ತೆಗೆದುಕೊಳ್ಳುವಾಗ ಒಂದು ಮೂಟೆ ಸಿಮೆಂಟಿನಲ್ಲಿ ಅರ್ಧ ಭಾಗದಷ್ಟು ಆಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಸಾಗಿಸುವಾಗ ಸ್ವಲ್ಪ ಚೆಲ್ಲಿ ಹೋಗಬಹುದು. ಆದರೆ ಚೀಲದಲ್ಲಿ ಅರ್ಧ ಭಾಗದಷ್ಟು ಹೋಗುತ್ತಿದೆ ಎನ್ನುವುದು ಸರಿಯಲ್ಲ. ಸ್ವಲ್ಪ ನಷ್ಟವಾಗಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇನ್ನು ಮುಂದಾದರೂ ತೂಕ ಮಾಡಿ ಸರಿಯಾದ ಚೀಲ ಗಳಲ್ಲಿ ಸಿಮೆಂಟನ್ನು ಹಂಚುವ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಸಿಮೆಂಟು ಕಂಪೆನಿಯವರು ಸರಿಯಾಗಿ ನೇಯ್ಗೆಯಾಗಿರುವ ಚೀಲದಲ್ಲೇ ಸಿಮೆಂಟನ್ನು ತೂಕ ಮಾಡಿಯೇ ತುಂಬಿ ಕಳುಹಿಸುತ್ತಾರೆ. ಆದರೆ ಎಲ್ಲೋ ಕೆಲವು ವೇಳೆಗಳಲ್ಲಿ ಸ್ವಲ್ಪ ಚೆಲ್ಲಬಹುದು. ಅಲ್ಲದೆ ಇವನ್ನು ಸೀಲು ಮಾಡಿ ಕಳುಹಿಸುತ್ತಾರೆ. ಅವರೂ ತೂಕದಲ್ಲಿ ಕಡಿಮೆ ಮಾಡುವುದಕ್ಕಾಗುವುದಿಲ್ಲ. ಎಲ್ಲೋ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತದೆ.

Sri K. P. GADAG.—May I know whether the Agencies distribute cement to consumers direct or on the authority of the permit issued by Deputy Commissioner or any other Authority ?

Sri K. MALLAPPA.—Permits will be issued to the Consumers and the cement will be distributed by the stockists.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತೂಕ ಮಾಡಿ ಸಿಮೆಂಟು ಚೀಲಗಳನ್ನು ಕಳುಹಿಸುವುದ ರಿಂದ ನಷ್ಟವಾಗುವುದಿಲ್ಲ. ಇದರ ಬಗ್ಗೆ ಸರಕಾರ ತೂಕ ಮಾಡಲು ಏರ್ಪಾಡು ಮಾಡುತ್ತಾರೆಯೇ ?

Sri K. MALLAPPA.—It will take quite a lot of time for doing all that. The loss will be very little. The bag is closely woven. So the cement lost is comparatively very little.

ಶ್ರೀಮತಿ ರತ್ನಮ್ಮ ಮಾಧವರಾವ್.—ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳಿವೆ ?

ಶ್ರೀ ಕೆ. ಮಲ್ಲಪ್ಪ.—12 ತಾಲ್ಲೂಕುಗಳಿವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸೀಲು ಹಾಕಿಯೇ ಸಿಮೆಂಟು ಮೂಟೆಗಳನ್ನು ಕಳುಹಿಸುತ್ತಾರೆ ಎಂದು ಹೇಳಿದಿರಿ. ಆದರೆ ಸೀಲು ಇದ್ದ ಹಾಗೇ ಇರುತ್ತದೆ. ಸಕ್ಕರೆಗುತ್ತಿ ಹಾಕಿ ಸಿಮೆಂಟನ್ನು

ಹೊರಕ್ಕೆ ತೆಗೆದು ತೆಗೆದು ಬೇರೆ ಇಡುತ್ತಾರೆ. ಅಲ್ಲದೆ 50 ಮೂಟೆಗಳು ಬರುವ ಕಡೆ 25 ಮೂಟೆಗಳನ್ನು ಪರ್ಮಿಟ್ಟಿನಲ್ಲಿ ಕೊಟ್ಟು 50 ಮೂಟೆಯೂ ಕೊಟ್ಟಿದ್ದಾರೆಂದು ಬರೆಯಿರಿ ಎಂದು ಹೇಳುತ್ತಾರೆ. ಇದನ್ನೆಲ್ಲಾ ಚೆಕ್ಕು ಮಾಡಲು ಸರಿಯಾದ ಲೆಕ್ಕಪತ್ರಗಳನ್ನಿಡಬೇಡವೇ ಮತ್ತು ಯಾರು ಸರಿಯಾಗಿ ಚೆಕ್ಕು ಮಾಡುತ್ತಿರುತ್ತಾರೆ ?

ಶ್ರೀ ಕೆ. ಮಲ್ಲಪ್ಪ.—ಲೆಕ್ಕಪತ್ರಗಳನ್ನು ಇಡಬೇಕೆಂದು ಮಾಡಲಾಗಿದೆ. ಆದರೆ ಸಕ್ಕರಗುತ್ತಿಯಿಂದ ಸಿಮೆಂಟು ತೆಗೆಯುತ್ತಾರೆ ಎನ್ನುವುದು ನನ್ನ ಗಮನಕ್ಕೆ ಬಂದಿಲ್ಲ. ಒಂದು ವೇಳೆ ಈ ರೀತಿ ಯಾರಾದರೂ ಡೀಲರುಗಳು ಸಿಮೆಂಟನ್ನು ಕದಿಯುತ್ತಿದ್ದಾರೆಂದು ನನ್ನ ಗಮನಕ್ಕೆ ತಂದರೆ ಅವರ ಲೈಸನ್ಸುಗಳನ್ನು ರದ್ದು ಮಾಡುವ ಅವಕಾಶವಿದೆ. ಅದರ ಬಗ್ಗೆ ಯಾವತರದ ಕಂಪ್ಲೇಂಟುಗಳೂ ನನಗೆ ಇದುವರೆಗೆ ಬಂದಿಲ್ಲ.

ಶ್ರೀ ಮಹಂತಸ್ವಾಮಿ.—ಸಿಮೆಂಟಿನ ಡಿಸ್ಟ್ರಿಕ್ಟು ಕೋಟಾವನ್ನು ಡೆಪ್ಯೂಟೀ ಕಮೀಷನರವರು ಕೊಡುವಾಗ ಆಯಾ ಅಸಿಸ್ಟೆಂಟು ಕಮೀಷನರು ತಹಶೀಲುದಾರರ ಮೂಲಕ ಕೊಡುವಾಗ ಅವು ಸಾಮಾನ್ಯ ರೈತರಿಗೆ ಸರಿಯಾಗಿ ಸಿಮೆಂಟು ಸಿಕ್ಕುತ್ತಿಲ್ಲ. ಇದರ ಬಗ್ಗೆ ಸರಕಾರ ತಕ್ಕ ಏರ್ಪಾಡು ಮಾಡುತ್ತದೆಯೇ ?

ಶ್ರೀ ಕೆ. ಮಲ್ಲಪ್ಪ.—ರೈತರಿಗೆ ಅನುಕೂಲ ಮಾಡುವ ದೃಷ್ಟಿಯಿಂದಲೇ ಡೆಪ್ಯುಟೀಕಮೀಷನರವರು ಮತ್ತು ಅಲ್ಲಿನ ತಹಶೀಲುದಾರರಿಗೆ ಸಿಮೆಂಟು ಕೊಡುವ ಅಧಿಕಾರ ಕೊಟ್ಟಿದೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಸಿಮೆಂಟು ಚೀಲಗಳಲ್ಲಿ ಆಗುತ್ತಿರುವ ನಷ್ಟವನ್ನು ತಪ್ಪಿಸಲಿಕ್ಕೆ ಸರಕಾರ ಸಿಮೆಂಟು ಚೀಲಗಳೊಳಗೆ ಯಾವುದೇ ತರಹದ ಒಂದು ಕೋಟಿಂಗ್‌ನ್ನು ಹಾಕಿ ಚೀಲಗಳನ್ನು ಕೊಟ್ಟರೆ ಅದರಿಂದ ಸೋರುವುದನ್ನು ತಪ್ಪಿಸುವುದಕ್ಕಾಗುತ್ತದೆಯಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಇಲ್ಲಿ ಎಲ್ಲ ಚೀಲಗಳೂ ಹಾಗಿರುವುದಿಲ್ಲ. ಇವೆಲ್ಲಾ ಚನ್ನಾಗಿ ಸಣ್ಣಗೆ ನೇಯ್ಗೆಯಾಗಿರುವ ಚೀಲಗಳು. ಸಿಮೆಂಟು ಚೀಲಗಳಿಂದ ಇಷ್ಟು ನಷ್ಟವಾಗಿದೆ ಎಂದು ಎಲ್ಲೂ ದೂರುಗಳು ನಮಗೆ ಬಂದಿಲ್ಲ. ಎರ್ಲ್ಲೋ ಕೊಂಚ ಅಲ್ಲಿಂದ ಇಲ್ಲಿಗೆ ಸಾಗಿಸುವಾಗ ಸ್ವಲ್ಪ ಮಟ್ಟಿಗೆ ಚೆಲ್ಲಿಹೋಗಿರಬಹುದು. ಇದಕ್ಕಾಗಿ ಸ್ಪೆಷಲ್ಲಾಗಿ ಹೊಲದಿರುವ ಸಿಮೆಂಟು ಚೀಲಗಳನ್ನು ಮಾಡಿರುತ್ತಾರೆ, ಅದೂ ಕೂಡ ಬಹಳ ಹತ್ತಿರ ಹತ್ತಿರದಲ್ಲಿ ನೆಯ್ಗೆಯಾದವು. ಆದುದರಿಂದ ಇದರಿಂದ ಬರತಕ್ಕ ನಷ್ಟಗಳು ಅಲ್ಪಸ್ವಲ್ಪವಾಗುತ್ತದೆ ಅಷ್ಟೇ.

ಶ್ರೀ ಆರ್. ಎಲ್. ಲಕ್ಷ್ಮೀಪತಿ.—ಸಿಮೆಂಟು ಅಭಾವ ಜಾಸ್ತಿ ಇದೆ. ಅದಕ್ಕೆ ಯಾರಿಗೆ ಬೇಕೋ ಅವರಿಗೆ ನ್ಯಾಯವಾಗಿ ಸಿಗುತ್ತಿಲ್ಲ. ಸಿಮೆಂಟನ್ನು ಕಂಟ್ರೋಲು ಮಾಡುವುದಕ್ಕಿಂತ ಇದನ್ನು ಡೀ ಕಂಟ್ರೋಲು ಮಾಡಿದರೆ ಆಗ ಧಾರಾಳವಾಗಿ ಯಾರಿಗೆ ಬೇಕೋ ಅವರಿಗೆ ಸಿಮೆಂಟು ಸಿಗಲು ಅವಕಾಶವಾಗುತ್ತದೆ. ಆ ರೀತಿ ಡೀ ಕಂಟ್ರೋಲು ಮಾಡಲು ಪ್ರಯತ್ನ ಪಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಆ ಉದ್ದೇಶವಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಸೊಸೈಟಿಗಳಿಗೆ ಹೆಚ್ಚು ಕೋಟಾ ಕೊಡಬೇಕಾದ ಆವಶ್ಯಕತೆ ಇರುವುದರಿಂದ ನಮ್ಮ ಸ್ಟೇಟ್ ಸೀಮೆಂಟ್ ಕೋಟಾ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಈಗಾಗಲೇ ಸುಮಾರು 62,500 ಟನ್ ಬರುತ್ತಾ ಇದೆ. ದೇಶದಲ್ಲಿ ಸೀಮೆಂಟ್ ಉತ್ಪತ್ತಿ ಹೆಚ್ಚಾಗುವ ತನಕ ಸ್ಟೇಟ್ ಕೋಟಾ ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ಸೀಮೆಂಟ್ ಫ್ಯಾಕ್ಟರೀಜ ಹೆಚ್ಚು ಮಾಡಿದ್ದಾರೆ. ಹೆಚ್ಚು ಸೀಮೆಂಟ್ ದೊರೆಯಬೇಕೆಂದು ಕೇಂದ್ರ ಸರಕಾರದವರು ಸೀಮೆಂಟ್ ಕಾರ್ಪೋರೇಶನ್ ಸ್ಥಾಪನೆ ಮಾಡಿದ್ದಾರೆ. ಸೀಮೆಂಟ್ ಉತ್ಪತ್ತಿ ಪ್ರಮಾಣ ಜಾಸ್ತಿ ಮಾಡಬೇಕೆಂಬ ಉದ್ದೇಶ ಇದೆ.

Amount allotted to Belgaum District for Rural Housing and Housing for Denotified Tribes.

*Q.—559. Sri R. S. PATIL (Ramdurg).—

Will the Government be pleased to state :—

(a) the amount allotted to Belgaum District for Rural Housing and Housing for Denotified Tribes, Nomadic and Semi-Nomadic Tribes for the year 1964-65 ;

(b) the amount withdrawn by the Government ?

A.—Smt. YASHODHARA DASAPPA (Minister for Social Welfare).—

(a) Rural Housing—Rs. 8,000.
Denotified Tribes—Rs. 10,000.
Nomadic and Semi-Nomadic Tribes-Rs. 8,000.

(b) A sum of Rs. 4,000 was withdrawn under Rural Housing Scheme.

No amount has been withdrawn out of the amount allotted for Denotified Tribes and Nomadic and Semi-Nomadic Tribes.

ಶ್ರೀ ಆರ್. ಎಸ್. ಪಾಟೀಲ್.—ಗ್ರಾಮಾಂತರ ಗೃಹ ನಿರ್ಮಾಣ ಸಂಬಂಧದಲ್ಲಿ ಎಷ್ಟು ಹಣ ವಿತರಣೆ ಮಾಡಬೇಕೆಂದು ಸಂಬಂಧಪಟ್ಟ ಯಾವ ಅಧಿಕಾರಿಗೆ ತಿಳಿಸಲಾಗಿತ್ತು ?

† ಶ್ರೀಮತಿ ಯಶೋಧರ ದಾಸಪ್ಪ.—4,000 ರೂಪಾಯಿ ಬಿ.ಡಿ.ಒ. ಅವರು ವಾಪಸ್ ಕೊಟ್ಟಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಗೃಹ ನಿರ್ಮಾಣ ಯೋಜನೆಯಲ್ಲಿ ನೆಲಮಂಗಲ ತಾಲ್ಲೂಕಿನಲ್ಲಿ ಕಟ್ಟಿಸಿದ ಮನೆಗಳು ನಾಲ್ಕು ವರ್ಷದಲ್ಲಿ ಬಿದ್ದು ಹೋಗಿವೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ಕಾರಣವೇನು ?

ಶ್ರೀಮತಿ ಯಶೋಧರ ದಾಸಪ್ಪ.—ಬೇರೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಹೇಳುವುದಕ್ಕೆ ಆಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನೋಮ್ಯಾಡಿಕ್ ಟ್ರೈಬ್ಸ್ ಅವರ ಮನೆ ಕಟ್ಟುವುದಕ್ಕೋಸ್ಕರ 8,000ರೂಪಾಯಿ ಕೊಟ್ಟಿರುವುದು ಕಡಿಮೆಯಾಗಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಈ ಹಣ ವಾಪಸ್ಸು ತೆಗೆದುಕೊಂಡಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಒಂದು ಮನೆ ಕಟ್ಟುವುದಕ್ಕೆ ಸಾವಿರ ರೂಪಾಯಿ ಕೊಡುತ್ತಾ ಇದ್ದಿರಿ. ಹಾಗಾದರೆ ಅದಕ್ಕಿಂತ ಕಡಿಮೆ ಕೊಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಈ ಹಣ ಸಾಲದು ಎಂದು ಗೊತ್ತಿದೆ. 780 ರೂಪಾಯಿ ಮೇಲೆ ಒಂದು ಮನೆಗೆ ಕೊಡುತ್ತೇವೆ.

ಶ್ರೀ ಎಸ್. ಸುಬ್ಬಯ್ಯ ನಾಯಕ.—ಹಣವನ್ನು ವರ್ಷದ ಆಖೈರಿಗೆ ಒದಗಿಸುವುದರಿಂದ ಹಣವನ್ನು ಉಪಯೋಗಿಸಿಕೊಳ್ಳದೆ ಸರೆಂಡರ್ ಮಾಡುವ ಪರಿಸ್ಥಿತಿ ಬರುತ್ತದೆ ಎಂಬುದು ಗೊತ್ತಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಅದು ಕಂಡು ಬಂದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಅಲೆದಾಡುವ ಪಂಗಡದಲ್ಲಿ ಲಂಬಾಣಿಗಳು ಸೇರುತ್ತಾರೆ. ಈ ಲಂಬಾಣಿ ಪಂಗಡದವರಿಗೆ ವಸತಿ ಒದಗಿಸುವುದಕ್ಕೆ ಸರಕಾರ ಏನಾದರೂ ಖಚಿತವಾದ ಕಾರ್ಯಕ್ರಮ ತೆಗೆದು ಕೊಂಡಿದ್ದಾರೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಡೀ—ನೋಟೀಫೈಡ್ ಟ್ರೈಬ್ಸಿನಲ್ಲಿ ಲಂಬಾಣಿಗಳು ಸೇರುವುದರಿಂದ ಅವರ ಯೋಗಕ್ಷೇಮಕ್ಕಾಗಿ ಗೃಹ ನಿರ್ಮಾಣಕ್ಕೋಸ್ಕರ ಹಣ ಖರ್ಚುಮಾಡಿದೆ.

---

†Indicates that the remarks or speeches have not been revised by the member concerned.

ಶ್ರೀ ಕೆ. ಲಕ್ಕಪ್ಪ.—ಲಂಬಾಣಿ ಜನಗಳು ಕೂಡ ಅಲೆದಾಡುವ ಸ್ವಭಾವವುಳ್ಳವರಾಗಿದ್ದಾರೆ. ಆದುದರಿಂದ ಲಂಬಾಣಿ ಜನಗಳಿಗೆ ವಸತಿ ಒದಗಿಸುವುದಕ್ಕೆ ಗೃಹ ನಿರ್ಮಾಣ ಕಾರ್ಯವನ್ನು ಅತಿ ಜಾಗ್ರತೆ ಮಾಡಿಸಿಕೊಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿ ಈ ಲಂಬಾಣಿ ಜನರು ಡೀ—ನೋಟೀಫೈಡ್ ಟ್ರೈಬ್ಸ್‌ನಲ್ಲಿ ಸೇರುತ್ತಾರೆ. ಆದುದರಿಂದ ಅವರಿಗೆ ಹಣ ಕೊಟ್ಟಿದ್ದೇವೆ. ಖರ್ಚು ಮಾಡುತ್ತಿದ್ದಾರೆ. ಆದರೆ ಹಳೇ ಮೈಸೂರು ಪ್ರದೇಶದಲ್ಲಿ ಈ ಲಂಬಾಣಿ ಜನಗಳು ಷೆಡ್ಯೂಲ್ಡ್ ಕ್ಯಾಸ್ಟ್ಸ್‌ನಲ್ಲಿ ಬರುವುದರಿಂದ ಅವರ ಬಗ್ಗೆ ಇರುವ ಯೋಜನೆಯ ಮುಖೇನ ಅವರು ಹಣ ಪಡೆಯಬಹುದು.

ಶ್ರೀ ಎಸ್. ಸುಬ್ಬಯ್ಯ ನಾಯಕ.—ಬರುವ ವರ್ಷ ಅವರಿಗೆ ಹಣ ಕೊಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಅರ್ಜಿಗಳು ಬಂದರೆ ಖಂಡಿತವಾಗಿ ಕೊಡುತ್ತೇವೆ.

Inspectors of Schools in Bangalore District

* *Q.*—586. SRI T. MADIAH GOWDA (Ramanagaram) [on behalf of SRI C. R. RANGE GOWDA (Magadi)].—

Will the Government be pleased to state :—

(*a*) the number of Inspectors of Schools who have put in more than three years of service in each taluk of Bangolore District ;

(*b*) whether there are any complaints against them ;

(*c*) if so, nature of the complaints ;

(*d*) the action they have taken in that respect ?

A.—SRI S. R. KANTHI (Minister for Education).—

(*a*) Four.

(*b*) Yes, in respect of two.

(*c*) Allegations of missappropriation of funds, corruption and administrative delays.

(*d*) Allegations against one Inspector were enquired into and found to be baseles.

In respect of the other Inspectors an enquiry has been instituted.

ಶ್ರೀ ಟಿ. ಮಾದಯ್ಯ ಗೌಡ.—ದೂರು ಬಂದಿರುವ ಈ ಇಬ್ಬರು ಇನ್‌ಸ್ಪೆಕ್ಟರರು ಯಾವ ತಾಲ್ಲೂಕಿಗೆ ಸೇರಿದವರು ?

ಶ್ರೀ ಎಸ್. ಆರ್. ಕಂಠಿ.—ಒಬ್ಬರು ದೇವನಹಳ್ಳಿ ತಾಲ್ಲೂಕಿನವರು. ಇನ್ನೊಬ್ಬರು ಮಾಗಡಿ ತಾಲ್ಲೂಕಿನವರು.

ಶ್ರೀ ಟಿ. ಮಾದಯ್ಯ ಗೌಡ.—ಮತ್ತೊಬ್ಬ ಇನ್‌ಸ್ಪೆಕ್ಟರರ ಸಂಬಂಧದಲ್ಲಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಅಪ್ಪಣೆ ಕೊಡಿಸಿದ್ದೀರಿ. ಹಾಗಾದರೆ ವಿಚಾರಣೆಯ ಕಾಲದಲ್ಲಿ ಅವರನ್ನು ಸಸ್ಪೆಂಡ್ ಮಾಡಿ ಇಲ್ಲವೆ ಬೇರೆ ಕಡೆ ವರ್ಗಾವಣೆ ಮಾಡಿದರೆ ವಿಚಾರಣೆಗೆ ಅನುಕೂಲವಾಗುತ್ತದೆ, ಎಂದು ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಸಾಮಾನ್ಯವಾಗಿ ಇನ್‌ಕ್ವಾಯರಿ ಯಾರ ಮೇಲೆ ಇರುತ್ತದೆಯೋ ಅವರನ್ನು ಬೇರೆ ಕಡೆ ಟ್ರಾನ್ಸ್‌ಫರ್ ಮಾಡುತ್ತಾರೆ. ಆದರೆ ಈ ಕೇಸ್‌ನಲ್ಲಿ ಟ್ರಾನ್ಸ್‌ಫರ್ ಮಾಡಿಲ್ಲ. ಟ್ರಾನ್ಸ್‌ಫರ್ ಮಾಡುವ ವಿಚಾರ ಇದೆ.

ಶ್ರೀ ಟಿ. ಮಾದಯ್ಯಗೌಡ.—ಸರಕಾರದ ಗಮನಕ್ಕೆ ಅಥವಾ ಇಲಾಖೆಯ ಗಮನಕ್ಕೆ ಬಂದು ಎಷ್ಟು ದಿವಸವಾಯಿತು ?

ಶ್ರೀ ಎಸ್. ಆರ್. ಕಂಠಿ.—ತಾರೀಖು ನನ್ನ ಹತ್ತಿರ ಈಗ ಇಲ್ಲ. ಆ ಇನ್‌ಫರ್‌ಮೇಶನ್ ಇಲ್ಲ.

ಶ್ರೀ ಕೆ. ಲಕ್ಕಪ್ಪ.—ಹಣ ದುರುಪಯೋಗವಾದದ್ದು ಭ್ರಷ್ಟಾಚಾರದ ವಿಚಾರಣೆ ಅಂಟೀಕರಪ್ಷನ್ ಇಲಾಖೆಯವರು ವಿಚಾರಣೆ ಮಾಡುತ್ತಿದ್ದಾರೆಯೇ ಅಥವಾ ಇಲಾಖೆಯ ಮೇಲಾಧಿಕಾರಿಗಳು ವಿಚಾರಣೆ ಮಾಡುತ್ತಿದ್ದಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಅಂಟೀಕರಪ್ಷನ್ ಡಿಪಾರ್ಟ್‌ಮೆಂಟಿನವರು ವಿಚಾರಣೆ ಮಾಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ.—ಒಂದು ವಿಚಾರಣೆ ನಡೆಸುವಾಗ್ಗೆ ಆ ಸ್ಥಳದಿಂದ ಟ್ರಾನ್ಸ್‌ಫರ್ ಮಾಡಿ ವಿಚಾರಣೆ ನಡೆಸಬೇಕು, ಸಸ್ಪೆಂಡ್ ಮಾಡಬೇಕು ಎಂದು ಹೇಳಿದಿರಿ. ಹಾಗಾದರೆ ಪೋಲೀಸ್ ಇನ್‌ಸ್ಪೆಕ್ಟರ್, ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ವಿಚಾರಣೆ ನಡೆಸುವಾಗ್ಗೆ ಇದೇ ರೀತಿಯನ್ನು ಅನುಸರಿಸುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ವಿಚಾರಣೆ ಮಾಡತಕ್ಕ ಕಾಲದಲ್ಲಿ ಈ ಇನ್‌ಸ್ಪೆಕ್ಟರನ್ನು ಸಸ್ಪೆನ್‌ಷನ್ ಮೇಲೆ ಇಟ್ಟದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಇಲ್ಲ.

Exhibition of more Kannada Pictures in the State.

* *Q.*—727 Sri A. J. DODDAMETI (Ron).—

Will the Government be pleased to state:—

(*a*) the steps taken by them to see that more and more Kannada pictures are exhibited in the State ;

(*b*) whether they would issue an order to the managements of the cinema theatres in big cities in the State to show Kannada pictures at least for a period of four months in a year ?

A.—Sri R. M. PATIL (Minister for Home).—

(*a*) & (*b*) The tempo of accommodating Kannada films in good theatres has now begun. There is no need to give any direactions in this behalf.

ಶ್ರೀ ಎ. ಜೆ. ದೊಡ್ಡಮೇಟಿ.—ಈಗ ಒಳ್ಳೆಯ ಚಿತ್ರ ಮಂದಿರಗಳಲ್ಲಿ ಕನ್ನಡ ಚಿತ್ರಗಳನ್ನು ಹೆಚ್ಚು ಹೆಚ್ಚಾಗಿ ಪ್ರದರ್ಶಿಸುವ ರೂಢಿ ಪ್ರಾರಂಭವಾಗಿದೆ. ಈ ಬಗ್ಗೆ ಯಾವ ಸೂಚನೆಗಳನ್ನಾಗಲೀ ಕೊಡುವ ಅವಶ್ಯಕತೆಯಿರುವುದಿಲ್ಲ ಎಂದು ಉತ್ತರ ಹೇಳಿದೆ. ಹಾಗಾದರೆ 1957 ನೇ ಇಸವಿಯಿಂದ ಎಷ್ಟು ಕನ್ನಡ ಚಿತ್ರಗಳು ಪ್ರದರ್ಶನವಾಗಿವೆ ಈಗ ಎಷ್ಟು ಆಗುತ್ತವೆ ಎನ್ನುವುದಕ್ಕೆ ಅಂಕಿ ಅಂಶಗಳ ಆಧಾರ ಇದೆಯೇ ?

† ಶ್ರೀ ಆರ್. ಎಂ. ಪಾಟೀಲ್.—ಅಂಕಿ ಅಂಶಗಳು ಈಗ ಇಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ರೂಢಿ ಪ್ರಾರಂಭವಾಗಿದೆ ಎಂದು ಹೇಳುವುದನ್ನು ಅಂಕಿ ಅಂಶಗಳ ಆಧಾರದ ಮೇಲೆ ಇದ್ದರೆ ನಂಬುತ್ತೇವೆ. ಇಲ್ಲವಿದ್ದರೆ ಅದನ್ನು ಹೇಗೆ ನಂಬುವುದು ?

ಶ್ರೀ ಆರ್. ಎಂ. ಪಾಟೀಲ್.—ಈ ವಿಷಯದಲ್ಲಿ ಯಾವ ತಕರಾರೂ ಬಂದಿಲ್ಲ. ಕನ್ನಡ ಚಲನ ಚಿತ್ರಗಳ ಪ್ರಗತಿಗೆ ಅನುಸಾರವಾಗಿ ಥಿಯೇಟರಿನ ಮಾಲೀಕರು ಹೊಂದಿಕೊಂಡು ಹೋಗುತ್ತಿರುವುದರಿಂದ ಜನಗಳಿಂದ ತಕರಾರು ಬಂದಿಲ್ಲ. ಜನಗಳ ಅಭಿಮತವನ್ನು ತಿಳಿದುಕೊಂಡು ಥಿಯೇಟರಿನವರು ಕನ್ನಡ ಚಲನ ಚಿತ್ರಗಳನ್ನು ಪ್ರದರ್ಶಿಸುವ ವಿಷಯವಾಗಿ ವಿಶೇಷವಾಗಿ ಆಸಕ್ತಿ ವಹಿಸುತ್ತಿರುವುದರಿಂದ ಕಳೆದ ಒಂದೆರಡು ವರ್ಷಗಳಿಂದ ಯಾವ ತಕರಾರೂ ಬಂದಿಲ್ಲ ಎಂದು ಹೇಳಬಹುದು.

ಶ್ರೀ ಸಿದ್ಧಯ್ಯ ಕಾಶೀಮಠ್.—ಈ ದಿವಸ ಬೆಂಗಳೂರು ನಗರದಲ್ಲಿ ಶೇಕಡ 60 ರಷ್ಟು ತಮಿಳು ಮತ್ತು ತೆಲಗು ಚಲನ ಚಿತ್ರಗಳು ಪ್ರದರ್ಶನವಾಗುತ್ತಿದ್ದು, ಕನ್ನಡ ಚಲನ ಚಿತ್ರಗಳ ಪ್ರದರ್ಶನ

ಶೇಕಡ 5 ಕೂಡ ಇಲ್ಲ. ಆದುದರಿಂದ ಕನ್ನಡ ಚಲನ ಚಿತ್ರಗಳನ್ನು ಹೆಚ್ಚಿಸುವುದಕ್ಕಾಗಿ ಏನು ಪ್ರಯತ್ನ ಕೈಗೊಂಡಿದ್ದೀರಾ ?

ಶ್ರೀ ಆರ್. ಎಂ. ಪಾಟೀಲ್.—ಹಿಂದೆ ಇದರ ಪ್ರದರ್ಶನ ಕಡಮೆ ಇತ್ತು. ಆದರೆ ಕಳೆದ 3 ವರ್ಷಗಳಿಂದ ಇದರ ಪ್ರದರ್ಶನ ಹೆಚ್ಚಾಗುತ್ತಿದೆ. ಆದರೆ ಇದಕ್ಕೆ ಬಹಳ ಸಲಕರಣೆಗಳೂ ಮತ್ತು ಸೌಕರ್ಯಗಳೂ ಬೇಕಾಗಿರುತ್ತದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಮಾನ್ಯ ಮಂತ್ರಿಗಳು ತಕರಾರೇನೂ ಬಂದಿಲ್ಲ ಎಂದು ಹೇಳಿದರು. ಯಾವ ಭಾಗದಲ್ಲಿ ಎಂಬುದು ನನಗೆ ಅರ್ಥವಾಗಲಿಲ್ಲ. ಅದನ್ನು ವಿಮರ್ಶೆ ಮಾಡುವರೇ ?

ಶ್ರೀ ಆರ್. ಎಂ. ಪಾಟೀಲ್.—ಅದನ್ನು ಸ್ಪಷ್ಟವಾಗೇ ಹೇಳುತ್ತೇನೆ : ಯಾರಾದರೂ ಒಂದು ಕನ್ನಡ ಚಲನ ಚಿತ್ರವನ್ನು ತಯಾರಿಸತಕ್ಕವರು ಅವರಿಗೆ ಅದನ್ನು ಪ್ರದರ್ಶಿಸಲು ಥಿಯೇಟರು ತಮಗೆ ಸಿಕ್ಕಲಿಲ್ಲ ಎಂಬುದಾಗಿ ನಮಗೆ ಇಲ್ಲಿಯವರೆಗೂ ಯಾರಿಂದಲೂ ತಕರಾರು ಬಂದಿಲ್ಲ ಎಂದು ಹೇಳಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಮಹಾತ್ಮ ಗಾಂಧಿಯ ರಸ್ತೆಯಲ್ಲಿರತಕ್ಕ ಯಾವ ಒಂದು ಚಿತ್ರಮಂದಿರದಲ್ಲೂ ಕನ್ನಡ ಚಲನಚಿತ್ರಗಳನ್ನು ಪ್ರದರ್ಶನ ಮಾಡುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಅಲ್ಲಿ ಕನ್ನಡ ಚಲನಚಿತ್ರ ನೋಡತಕ್ಕ ಜನರು ಕಡಿಮೆ ಇರುವುದರಿಂದ ಅಲ್ಲಿ ಪ್ರದರ್ಶನ ಮಾಡುವುವಕ್ಕೆ ಆಗಿಲ್ಲವೆಂದು ಕಾಣುತ್ತದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಆ ಏರಿಯಾದಲ್ಲಿ ಪ್ರದರ್ಶನ ಮಾಡತಕ್ಕ ಚಲನ ಚಿತ್ರಗಳು ಅಮೇರಿಕಾ ಮತ್ತು ಟೋಕಿಯೋ ಬೈ ನೈಟ್ ಚಲನ ಚಿತ್ರಗಳ ಮಟ್ಟದಲ್ಲಿರಬೇಕೇ ಅಥವಾ ಅವು ಯಾವ ರೀತಿ ಇರಬೇಕು ?

ಶ್ರೀ ಆರ್. ಎಂ. ಪಾಟೀಲ್.—ಅದು ಇಲ್ಲಿ ಅಸಂಬದ್ಧ ಪ್ರಶ್ನೆ.

ಶ್ರೀ ಎಸ್. ಎಂ. ಗುರೆಡ್ಡಿ.—ಕನ್ನಡ ಸ್ಟುಡಿಯೋಗಳಿಗೆ ಬಹಳ ಕೊರತೆ ಇರುವುದರಿಂದ ಜನರಿಗೆ ಹಿಡಿಸತಕ್ಕಂಥ ಚಲನ ಚಿತ್ರಗಳನ್ನು ತಯಾರಿಸಲಿಕ್ಕಾಗದೆ ಇರುವುದರಿಂದ ಬೆಂಗಳೂರಿನಲ್ಲಿ ಈ ಪ್ರದರ್ಶನಕ್ಕೆ ಬಹಳ ಕಠಿಣವಾಗಿದೆ. ಇದಕ್ಕೆ ಸರ್ಕಾರದವರೇನು ಹೇಳುತ್ತಾರೆ ?

ಶ್ರೀ ಆರ್. ಎಂ. ಪಾಟೀಲ್.—ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಈ ಸ್ಟುಡಿಯೋಗಳ ಅಗತ್ಯ ಬಹಳವಾಗಿದೆ ಎಂಬುದು ಸರ್ಕಾರದವರಿಗೂ ಗೊತ್ತಿದೆ. ಯಾರಾದರೂ ಚಲನ ಚಿತ್ರಗಾರರು ಬಂದಲ್ಲಿ ಅವರಿಗೆ ಸರ್ಕಾರ ಸೂಕ್ತ ಸಹಾಯ ನೀಡುವುದಕ್ಕೆ ಸಿದ್ಧವಾಗಿದೆ.

Sri S. RAJAGOPAL.—In the name of encouraging Kannada films, some of the people in Bangalore City are going on protesting against Tamil picture screening. Are the Government aware of this fact ?

Mr. SPEAKER.—How does it arise ? The Hon'ble Member may kindly put a fresh question.

ಶ್ರೀ ಪಾಲಿ ಚೆನ್ನಪ್ಪ.—ಗಾಂಧೀನಗರದಲ್ಲಿ ಕನ್ನಡ ಚಲನ ಚಿತ್ರ ನೋಡತಕ್ಕ ಜನರು ಬಹಳ ಕಡಮೆ ಇದ್ದಾರೆಂದು ಹೇಳಿದರು. ಆದರೆ ಹೊರಗಡೆಯಿಂದ ಬಂದ ಜನರೇನೂ ನೋಡುವುದಿಲ್ಲವೋ ?

ಶ್ರೀ ಆರ್. ಎಂ. ಪಾಟೀಲ್.—ಇಲ್ಲಿ ಬಂದದ್ದು ಗಾಂಧೀನಗರದ ಪ್ರಶ್ನೆಯಲ್ಲ, ಮಹಾತ್ಮ ಗಾಂಧೀ ರೋಡು ವಿಚಾರ ಕೇಳಿದ್ದು.

ಶ್ರೀ ಬಿ. ಬೈರಪ್ಪಾಜಿ.—ಟೋಕಿಯೋ ಬೈ ನೈಟ್ ಮತ್ತು ಅಮೇರಿಕಾ ಬೈ ನೈಟ್ ಎಂಬ ನಗ್ನ ಚಿತ್ರಗಳನ್ನು ಪ್ರದರ್ಶಿಸಲು ಥಿಯೇಟರುಗಳ ಮಾಲೀಕರು ಅವಕಾಶ ಕೊಡುತ್ತಿರುವುದರಿಂದ ಜನರು ಅಂಥ ಚಿತ್ರಗಳನ್ನೇ ನೋಡುತ್ತಿರುವುದರಿಂದ ಅವರಲ್ಲಿ ನೈತಿಕ ಮತ್ತು ಮಾನಸಿಕ ಮಟ್ಟ ಇಳಿಯುತ್ತಿದೆ. ಇದರಿಂದ ಕನ್ನಡ ಚಲನ ಚಿತ್ರಕ್ಕೆ ಅವಕಾಶ ಕಡಮೆಯಾಗಿದೆ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರದವರೇನು ಕಾರ್ಯಕ್ರಮ ಕೈಗೊಂಡಿದ್ದಾರೆ ?

ಶ್ರೀ ಆರ್. ಎಂ. ಪಾಟೀಲ್.—ಇಂಡಿಯಾ ಸರ್ಕಾರದವರು ಅದಕ್ಕಾಗಿ ಒಂದು ಸೆನ್ಸಾರ್ ಬೋರ್ಡನ್ನು ಮಾಡಿದ್ದಾರೆ. ಅವರು ಅದನ್ನೆಲ್ಲಾ ಪರಿಶೀಲಿಸುತ್ತಾರೆ. ರಾಜ್ಯ ಸರ್ಕಾರಕ್ಕೂ ಅದಕ್ಕೂ ಯಾವ ಸಂಬಂಧವೂ ಇಲ್ಲ.

ಶ್ರೀ ಜಿ. ವಿ. ಗೌಡ.—ನಮ್ಮಲ್ಲಿ ಕನ್ನಡ ಸ್ಟುಡಿಯೋಗಳ ಅವಶ್ಯಕತೆ ಹೆಚ್ಚಾಗಿರುದದರಿಂದ ಅವುಗಳನ್ನು ಹೆಚ್ಚಿಸಲು ಸರ್ಕಾರದವರೇನು ಪ್ರಯತ್ನಮಾಡಿದ್ದಾರೆ ?

ಶ್ರೀ ಆರ್. ಎಂ. ಪಾಟೀಲ್.—ನಾನಾಗಲೇ ಹೇಳಿದೆ. ಸರ್ಕಾರದವರೇ ನೇರವಾಗಿ ಇವುಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಯಾರಾದರೂ ಖಾಸಗೀ ಕಂಪೆನಿಯವರು ಇಲ್ಲವೇ ಫರ್ಮಿನವರು ಮುಂದೆ ಬಂದರೆ ಸಾಧ್ಯವಾದ ಎಲ್ಲಾ ಸಹಾಯಗಳನ್ನೂ ಮಾಡುವುದಾಗಿ ಸರ್ಕಾರದವರು ಹಿಂದೆಯೂ ಆಶ್ವಾಸನವನ್ನು ಕೊಟ್ಟಿದ್ದಾರೆ, ಈಗಲೂ ಕೊಡುತ್ತಿದ್ದೇನೆ.

ಶ್ರೀ ಎಚ್. ಆರ್ ಕೇಶವಮೂರ್ತಿ.—ಸರ್ಕಾರದವರು ನಮ್ಮ ಕರ್ಣಾಟಕದ ಗತವೈಭವ ವನ್ನು ಸೂಚಿಸತಕ್ಕ ಚಲನ ಚಿತ್ರಗಳನ್ನು ತಾವೇ ತಯಾರಿಸಿ ಅವುಗಳನ್ನು ಅಕ್ಕಪಕ್ಕದ ರಾಜ್ಯಗಳಲ್ಲಿ ಪ್ರದರ್ಶನ ಮಾಡಬಾರದೇಕೆ? ಅಲ್ಲದ್ದಕ್ಕೆ ಸಲ್ಲದ್ದಕ್ಕೆ ಸರ್ಕಾರ ಬೇಕಾದಂತೆ ಹಣವನ್ನು ಖರ್ಚು ಮಾಡುತ್ತಿರುವಾಗ, ಇದನ್ನೇಕೆ ಮಾಡಬಾರದು ?

ಶ್ರೀ ಆರ್. ಎಂ. ಪಾಟೀಲ್.—ಆ ರೀತಿ ಹೇಳಬೇಕೆಂಬುದು ಸ್ವಲ್ಪಮಟ್ಟಿಗೆ ಅವರ ಒಂದು ಚಟ. ಈಗಾಗಲೇ ಸರ್ಕಾರದವರು ರಾಜ್ಯದಲ್ಲಿ ಅಲ್ಲಲ್ಲೇ ಇರತಕ್ಕ ಶಿಲ್ಪಕಲಾವಿದ್ಯೆ ಮತ್ತು ಇನ್ನಿತರ ಮಹತ್ವದ ವಿಷಯಗಳನ್ನೊಳಗೊಂಡ ಕಟ್ಟಡಗಳ ಪ್ರದರ್ಶನವನ್ನು ಮಾಡುತ್ತಿದ್ದೇವೆ. ಇತಿಹಾಸ ಪ್ರಸಿದ್ಧಿಯಾಗಿರತಕ್ಕ ಹಳೇಬೀಡು ಶ್ರವಣಬೆಳಗೊಳ ಮತ್ತು ಬೇಲೂರು ದೇವಾಲಯಗಳ ಚಿತ್ರ ಪ್ರದರ್ಶನಗಳು ನಡೆಯುತ್ತಿವೆ.

ಶ್ರೀಮತಿ ಸುಶೀಲಾಬಾಯಿ ಷಾ.—ಚಿತ್ರಮಂದಿರಗಳಿಗೆ ಹೆಣ್ಣುಮಕ್ಕಳು ಹೋದಾಗ ಟಿಕೆಟ್ಟು ಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಅಲ್ಲಿ ಅವರಿಗೆ ಕೂಡ್ರಲಿಕ್ಕೆ ರೂಮುಗಳಿಲ್ಲ. ಇದನ್ನು ನಿವಾರಿಸಲು ಏನು ಮಾಡಿದ್ದೀರಾ ?

ಶ್ರೀ ಆರ್. ಎಂ. ಪಾಟೀಲ್.—ಬಹುಶಃ ಮಾನ್ಯ ಸದಸ್ಯರಲ್ಲೋ ಬಹಳ ಹಳೆಯ ಥಿಯೇಟರಿಗೆ ಹೋಗಿದ್ದಾರೆಂದು ಕಾಣುತ್ತಿದೆ. ಹೊಸ ಸಿನಿಮಾ ಮಂದಿರಗಳಲ್ಲಿ ಈ ಅನುಕೂಲಗಳೆಲ್ಲಾ ಇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಚಲನ ಚಿತ್ರಗಳ ಒಂದು ಸೆನ್ಸಾರ್ ಬೋರ್ಡ್ ಇದೆ ಎಂದು ಸಚಿವರು ಹೇಳಿದರು. ಆದರೆ ಈ ದಿವಸ ಗೋಡೆಗಳ ಮೇಲೆ ಅಂಟಿಸತಕ್ಕ ನಗ್ನ ಚಿತ್ರಗಳಿಂದ ಸಹಸ್ರಾರು ಯುವಕರು ಹಾಳಾಗುತ್ತಿದ್ದಾರೆ. ಈ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಬಂದಿದೆ. ಅದರ ಬಗ್ಗೆ ಕಾರ್ಯಕ್ರಮವನ್ನು ಕೈಗೊಂಡಿ ದ್ದೇವೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಒಂದು ಸ್ಟೂಡಿಯೋ ಕಟ್ಟಿಸುವುದಕ್ಕೆ ಬಹಳ ಖರ್ಚು ಬರುತ್ತೆ, ಅನೇಕ ಸೂಕ್ಷ್ಮ ಸಾಮಾನುಗಳನ್ನು ತಯಾರಿಸಬೇಕಾಗುವುದೆಂದು ಹೇಳಿದರು, ಅವು ಯಾವುವು, ಖರ್ಚೆಷ್ಟು ಬರುತ್ತೆ ?

ಶ್ರೀ ಆರ್. ಎಂ. ಪಾಟೀಲ್.—ಇದು ಬಹಳ ದೊಡ್ಡ ವಿಚಾರ. ಇದನ್ನು ಅನೇಕ ರೀತಿಯಿಂದ ವಿಚಾರಮಾಡಬೇಕಾಗಿದೆ. ಬರಿಯ ಕಟ್ಟಡ ಒಂದರ ವಿಚಾರವೇ ಅಲ್ಲ. ಅನೇಕ ಸೂಕ್ಷ್ಮ ಸಾಮಾನು ಗಳನ್ನು ತಯಾರಿಸಬೇಕಾಗುವುದು. ಅದಕ್ಕೆ ಒಂದು ಫ್ಯಾಕ್ಟರಿಯೇ ಬೇಕಾಗಬಹುದು. ಅದು ಬಹಳ ಕಠಿಣವಾದ ಕೆಲಸ. ಆದ್ದರಿಂದ ಸರ್ಕಾರದವರೇ ಇದನ್ನು ನೇರವಾಗಿ ನಡೆಸಲು ಸಾಧ್ಯ ವಿಲ್ಲ.

ಶ್ರೀ ಜಿ. ನಾರಾಯಣಗೌಡ.—ಕನ್ನಡ ಚಲನ ಚಿತ್ರಗಳನ್ನು ತಯಾರಿಸತಕ್ಕವರು ಮುಂದೆ ಬಂದರೆ ಸರ್ಕಾರದವರು ಅವರಿಗೆ ಸಹಾಯ ಮಾಡುತ್ತಾರೆಯೇ ?

ಶ್ರೀ ಆರ್. ಎಂ. ಪಾಟೀಲ್.—ಮಾಡುತ್ತೇವೆಂದು ಅನೇಕ ಸಾರಿ ಅನೇಕ ರೀತಿಯಲ್ಲಿ ಹೇಳಿದ್ದುಂಟು.

ಶ್ರೀ ಎ. ಜೆ. ದೊಡ್ಡಮೇಟಿ.—ಸರ್ಕಾರದವರು ಕೇವಲ ಅಲ್ಪದೃಷ್ಟಿಗೊಳಗಾಗದೆ 1952 ನೇ ಇಸವಿಯಿಂದಲೂ ಕನ್ನಡ ಚಲನ ಚಿತ್ರಗಳು ವರ್ಷದಲ್ಲಿ ಎಷ್ಟೆಷ್ಟು ತಿಂಗಳು ಕಾಲ ಪ್ರದರ್ಶನ ಮಾಡ ಲ್ಪಟ್ಟಿವೆ ಎಂಬುದನ್ನು ಒಂದು ಸರ್ವೆ ನಡೆಸಿ, ಅದು ಅಷ್ಟು ಸಮಾಧಾನಕರವಾಗಿಲ್ಲದಿದ್ದರೆ, ಆಗ ಸರ್ಕಾರದವರು ಇನ್ನು ಮುಂದಕ್ಕೆ ಪ್ರತಿವರ್ಷವೂ ವರ್ಷದಲ್ಲಿ ಕನಿಷ್ಟಪಕ್ಷ 4 ತಿಂಗಳಾದರೂ ಕನ್ನಡ ಚಲನ ಚಿತ್ರಗಳನ್ನು ಪ್ರದರ್ಶನ ಮಾಡುವಂತೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಅದಕ್ಕೆ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯೊಂದನ್ನು ತಂದರೆ ಅದಕ್ಕೆ ಸರ್ಕಾರದವರು ಉತ್ತರವನ್ನು ಒದಗಿಸಬಹುದು.

ಶ್ರೀ ವಿ. ಎಂ. ದೇವ್.—ಅಮೆರಿಕಾ ಬ್ಲೈ ನೈಟ್ ಅಂತ ಹೇಳಿ ಒಂದು ಚಿತ್ರ ಇದೆ. ಅದರೊಳಗೆ ಸೆಕ್ಸ್ ಎಂದರೇ ರಿವಲ್ಷನ್ ಬರುವಂತಹ ರೀತಿಯಲ್ಲಿ ವೆಜೈನಲ್ ಲಿಪ್ಸ್‌ನ್ನು ಪೇಂಟ್ ಮಾಡಿದ್ದಾರೆ—

"The vaginal lips are painted red so as to cause revulsion of sex." I am bringing this point particularly to the notice of the Home Minister......

9-00 A.M.

Mr. SPEAKER.—No commentary. The Hon. Member may put a supplementary.

ಶ್ರೀ ವಿ. ಎಂ. ದೇವ್.—ನನ್ನ ಅಭಿಪ್ರಾಯ ತಾವು ಬಹಳ ಬೇಗ ಅರ್ಥಮಾಡಿಕೊಳ್ಳುತ್ತೀರಿ, ನೀವೇ ಹೇಳಿಬಿಟ್ಟರೆ ಆಯಿತು. ಮುಖ್ಯವಾಗಿ ನನ್ನ ಉದ್ದೇಶ ನೆರವೇರಬೇಕು. ಸಿನಿಮಾ ಮಂದಿರದಲ್ಲಿ ವರ್ಷಕ್ಕೆ ಇಷ್ಟು ತಿಂಗಳು ಹಿಸ್ಟಾರಿಕಲ್ ಮತ್ತು ಇತರ ಕನ್ನಡ ಚಿತ್ರಗಳನ್ನೇ ಹಾಕಬೇಕೆಂದು ಆದೇಶ ಕೊಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಈ ಪ್ರಶ್ನೆಗೆ ಉತ್ತರ ಹೇಳಿದ್ದೇನೆ.

ಶ್ರೀ ಜಿ. ವಿ. ಗೌಡ.—ಉತ್ತಮ ಚಿತ್ರ ತಯಾರಾಗಬೇಕೆಂಬ ದೃಷ್ಟಿಯಿಂದ ಈ ಚಿತ್ರಗಳನ್ನು ತಯಾರು ಮಾಡತಕ್ಕವರಿಗೆ ಸಬ್ಸಿಡಿ ಕೊಡತಕ್ಕ ನೀತಿಯನ್ನು ಅನುಸರಿಸುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಇನ್ನೂವರೆಗೂ ಆ ವಿಷಯ ಚರ್ಚೆಗೆ ಬಂದಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಈಗ್ಗೆ ಸುಮಾರು ಎರಡು ಮೂರು ತಿಂಗಳಿನಿಂದ ಒಂದು ಪಾಶ್ಚಾತ್ಯ ಕಂಪನಿ ಮೈಸೂರಿನಲ್ಲಿ ಫಿಲಂ ಪ್ರೊಡಕ್ಷನ್ ಮಾಡುತ್ತಾ ಇದ್ದಾರೆ. ಅವರು ಮೈಸೂರಿನಲ್ಲಿರತಕ್ಕ ಸೌಲಭ್ಯ ಚೆನ್ನಾಗಿದೆ ಫಿಲಂ ತಯಾರು ಮಾಡಲಿಕ್ಕೆ ಇನ್ನೂ ಸೌಲಭ್ಯಗಳನ್ನು ಕೊಟ್ಟರೆ ಇನ್ನೂ ಅನೇಕ ಕಂಪೆನಿಗಳು ಬರಲಿಕ್ಕೆ ಅವಕಾಶವಿದೆ ಎಂದು ಹೇಳುತ್ತಾ ಇರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Mr. SPEAKER.—How does it arise ?

ಶ್ರೀ ಎಚ್. ಆರ್. ಕೇಶವಮೂರ್ತಿ.—ಉತ್ತಮ ಸ್ಟೂಡಿಯೋ ನಮ್ಮ ದೇಶದಲ್ಲಿ ಇಲ್ಲದೇ ಇರುವುದೆ ಉತ್ತಮ ಕನ್ನಡ ಚಿತ್ರ ಹೆಚ್ಚಾಗಿ ಬರದೇ ಇರುವುದಕ್ಕೆ ಕಾರಣ, ಆದ್ದರಿಂದ ಸಬ್ಸಿಡಿ ಕೊಟ್ಟು ಸ್ಥಾಪನೆ ಮಾಡುವುದಕ್ಕೆ ಏನು ಹೇಳುತ್ತೀರಿ ?

ಶ್ರೀ ಆರ್. ಎಂ. ಪಾಟೀಲ್.—ಬಹಳ ತಪ್ಪು ತಿಳುವಳಿಕೆಯ ಮೇಲೆ ಮಾತನಾಡುತ್ತಾ ಇದ್ದೀರಿ. ಉತ್ತಮವಾದ ಕನ್ನಡ ಚಿತ್ರ ಇಲ್ಲ ಎಂದು ಹೇಳುವಾಗ—ಕನ್ನಡ ಚಿತ್ರಕ್ಕೆ ವಿಶೇಷವಾದ ಕೊರತೆ ಇದೆ ಎಂದು ಹೇಳಿದರೆ ಅದಕ್ಕೆ ಉತ್ತಮವಾದ ಸ್ಟೂಡಿಯೋ ಇಲ್ಲ ಎಂದು ಹೇಳುವಂತಹದು ಕಾರಣವಲ್ಲ. ಕನ್ನಡ ಸಾಹಿತ್ಯ, ಕನ್ನಡ ಸಂಸ್ಕೃತಿ ಮತ್ತು ಕನ್ನಡ ಕಲೆ ಅಧಿಕವಾಗಬೇಕಾದರೆ ಅದಕ್ಕೆ ಒಂದು ವಿಶೇಷವಾದ ಆಸ್ಥೆ ಬೇಕು. ಕನ್ನಡ ಚಲನಚಿತ್ರಕಾರರು ಈಗೀಗ ಆಸ್ಥೆ ವಹಿಸುತ್ತಾ ಇದ್ದಾರೆ. ಅವರಲ್ಲಿ ಆಸ್ಥೆ ವಿಶೇಷವಾಗಿ ಬೆಳೆಯಬೇಕು, ಅದು ಬೆಳೆಯುವವರೆಗೂ ಕನ್ನಡದಲ್ಲಿ ಉತ್ತಮವಾದಂತಹ ಚಿತ್ರಗಳು ಮತ್ತು ಉಳಿದ ಭಾಷೆಯ ಚಿತ್ರಗಳ ಜೊತೆಗೆ ಸ್ಪರ್ಧೆ ಮಾಡುವಂತಹದು ಇದಕ್ಕೆ ಅವಕಾಶವಾಗಲಿಕ್ಕೆ ಇಲ್ಲ ಎನ್ನುವುದು ನಿರ್ವಿವಾದವಾದ ಮಾತು, ಇದರ ಬಗ್ಗೆ ಸಹಾಯ ಮಾಡುವುದು ಏನಿದೆ ಸರ್ಕಾರ ಯಾವ ರೀತಿಯಿಂದ ಮಾಡಬೇಕು ಆ ರೀತಿಯಿಂದ ಮಾಡುತ್ತೇವೆ ಎಂದು ಅನೇಕ ರೀತಿಯಿಂದ ಹೇಳುತ್ತಾ ಇದ್ದೇವೆ.

ಶ್ರೀ ವಿ. ಎಂ. ದೇವ್.—ನನ್ನ ಪಾಯಿಂಟ್ ಇದು, ನಾನು ಅಶ್ಲೀಲದ ಪ್ರಶ್ನೆಯನ್ನು ಎತ್ತುತ್ತಾ ಇಲ್ಲ ; ಹೆಲ್ದಿ ಆಟಿಟ್ಯೂಡ್‌ಗೆ ಬದಲಾಗಿ ಅನ್‌ಹೆಲ್ದೀ ಆಟಿಟ್ಯೂಡ್ ಜನಕ್ಕೆ ಬರುತ್ತದೆ. ಇದು ಮುಖ್ಯವಾದ ಪ್ರಶ್ನೆ ಆದ್ದರಿಂದ ತಮಗೆ ಒಂದು ಪ್ರಶ್ನೆ ಕೇಳುತ್ತೇನೆ, ಗೃಹಶಾಖೆಯ ಮಂತ್ರಿಗಳು, ಸಂಸ್ಕೃತಿ ಶಾಖಾ ಇಲಾಖೆಯ ಮಾನ್ಯ ಮಂತ್ರಿಗಳಾದ ಕಂಠಿಯವರು ಮತ್ತು ಸ್ಪೀಕರ್ ಆದ ತಾವು ಮೂರು ಜನರೂ ಅಮೆರಿಕಾ ಬೈ ನೈಟ್ ಸಿನಿಮಾ ನಡೆಯುತ್ತಿರುವ ಜಾಗಕ್ಕೆ ಹೋಗಿ ನೋಡಿ ಆಗ ತಾವೇ ಈ ಒಂದು ನಿರ್ಧಾರಕ್ಕೆ ಬರುತ್ತೀರಿ. ಇದನ್ನು ಬಹಳ ಸೀರಿಯಸ್ ಆಗಿ ಕೇಳುತ್ತಾ ಇದ್ದೇನೆ ಸ್ವಾಮಿ.

Mr SPEAKER.—Is the Hon. Member keen that the Speaker also should go and see it ?

Sri V. M. DEO.—definitely, Sir. I feel I have not made my question intelligible to the Home Minister.

ಶ್ರೀ ಆರ್. ಎಂ. ಪಾಟೀಲ್.—ಇದು ಅಮೆರಿಕಾ ಪಿಕ್ಚರ್ ಇರುವುದರಿಂದ ದೊಡ್ಡ ಮೇಟಿ ಅವರು ಕಳುಹಿಸಿರುವ ಪ್ರಶ್ನೆಯ ಕ್ಷೇತ್ರದಲ್ಲಿ ಬರುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರೂ ಪುನಃ ಪುನಃ ಕೇಳುವುದರಲ್ಲಿ ಅರ್ಥವಿಲ್ಲ ಎಂದು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ತಾವೇನೋ ಕನ್ನಡ ಚಿತ್ರೋದ್ಯಮಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಯೋಚನೆ ಮಾಡಿದ್ದೀರಿ, ಅಂತಹ ಯೋಚನೆಯಲ್ಲಿ ಸಣ್ಣ ಸಣ್ಣ ಶಾಲಾ ಕಾಲೇಜುಗಳಲ್ಲಿ ಓದತಕ್ಕ ಹೆಣ್ಣುಮಕ್ಕಳು ಯಾರಿದ್ದಾರೆ ಅವರಿಗೆ ಕಾಂತಾಪುರ ಅಂತ ಹೇಳಿ ಒಂದು ನಾಂಡೀಟೇಲ್ ಇಟ್ಟಿದ್ದಾರೆ, ಕಥೆ ಓದುವುದಕ್ಕೆ. ಅದನ್ನು ಚಿತ್ರಣ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಾ ?

ಶ್ರೀ ಆರ್. ಎಂ. ಪಾಟೀಲ್.—ಅದು ನನಗೆ ಗೊತ್ತಿಲ್ಲ.

Sri V. S. PATIL.—May I know as to whether the Government will be pleased to waive the collection of the entertainment tax on Kannada films?

Sri R. M. PATIL.—It cannot be done. It will be invidions distinction and it will offend the provisions of the Constitution.

ಶ್ರೀ ಎನ್. ನಂಜೇಗೌಡ.—ಸಿನಿಮಾ ಮಂದಿರಗಳ ಹತ್ತಿರ ಕೆಲವು ಜನ ಬ್ಲಾಕ್ ಮಾರ್ಕೆಟ್ ಮಾಡುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಎಂ. ಪಾಟೀಲ್.—ಉತ್ತಮವಾದ ಸಿನಿಮಾ ಬಂದಾಗ ಯಾವಾಗಲಾದರೂ ಒಂದೊಂದು ಸಾರಿ ಆಗುತ್ತದೆ, ಯಾವಾಗಲೂ ಆಗುತ್ತದೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಅಂತಹ ವಿಷಯಗಳು ಸರ್ಕಾರದವರ ಗಮನಕ್ಕೆ ಬಂದಾಗ ಆ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡುತ್ತಾ ಇದ್ದೇವೆ. ಆದ್ದರಿಂದ ಈ ವಿಷಯದಲ್ಲಿ ಯಾವ ತಕರಾರೂ ಇಲ್ಲ.

ಶ್ರೀ ಎಸ್. ಶಿವಪ್ಪ.—ಆಂಧ್ರ ಮತ್ತು ಮಹಾರಾಷ್ಟ್ರ ಸರ್ಕಾರದವರು ಕೆಲವು ಪಿಕ್ಚರ್‌ಗಳನ್ನು ಅವರವರ ಭಾಷೆಯಲ್ಲಿ ತಯಾರು ಮಾಡುವುದಕ್ಕೆ ಸಬ್ಸಿಡಿ ಕೊಡತಕ್ಕ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಅದೇ ರೀತಿ ತಾವೂ ಕೂಡ ಬೆಂಗಳೂರು ನಗರದಲ್ಲಿ ಶ್ರೇಷ್ಠವಾದ ಮತ್ತು ನೀತಿಯುತವಾದ ಕನ್ನಡ ಪಿಕ್ಚರ್‌ಗಳನ್ನು ತಯಾರು ಮಾಡುವವರಿಗೆ ಸಬ್ಸಿಡಿ ಕೊಡತಕ್ಕ ಪ್ರಶ್ನೆಯನ್ನು ಪರ್ಯಾಲೋಚನೆ ಮಾಡುತ್ತೀರಾ?

ಶ್ರೀ ಆರ್. ಎಂ. ಪಾಟೀಲ್.—ಮಹಾರಾಷ್ಟ್ರ ಸರ್ಕಾರದವರು ಅವರಿಗೆ ಪ್ರತ್ಯೇಕವಾಗಿ ಸಹಾಯ ಮಾಡುತ್ತಾ ಇದ್ದಾರೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಏಕೆಂದರೆ ಮೊದಲಿನಿಂದಲೂ ಅಲ್ಲಿ ಉತ್ತಮವಾದಂತಹ ಸ್ಟುಡಿಯೋ ಸ್ಥಾಪನೆಯಾಗಿದೆ ಮತ್ತು ಉತ್ತಮವಾದ ಚಲನಚಿತ್ರಗಳು ತಯಾರಾಗುತ್ತಾ ಇವೆ. ಒಂದುವೇಳೆ ಮಾಡಿದರೂ ಆ ಸಹಾಯ ಎಷ್ಟುಮಟ್ಟಿಗೆ ಈಗಿರತಕ್ಕ ಅಲ್ಲಿಯ ಸ್ಟುಡಿಯೋದವರಿಗೆ ಅನುಕೂಲವಾಗುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆಂಧ್ರದವರು ಈ ಬಗ್ಗೆ ಪ್ರಯತ್ನ ಮಾಡಿದರು ಆದರೆ ಅದು ಫಲವಾಗಲಿಲ್ಲ ಎಂದು ಕೇಳಿದ್ದುಂಟು.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಒಳ್ಳೆಯ ಕನ್ನಡ ಚಿತ್ರ ಪ್ರದರ್ಶನ ಮಾಡಲಿಕ್ಕೆ ಅಥವಾ ಬರಲಿಕ್ಕೆ ಸ್ಟುಡಿಯೋದ ಅವಶ್ಯಕತೆ ಅಷ್ಟಾಗಿ ಕಾಣುವುದಿಲ್ಲ ಎಂದು ಹೇಳಿದಿರಿ. ಕನ್ನಡ ಚಿತ್ರಗಳ ಬೆಳವಣಿಗೆಗೆ ಮುಖ್ಯವಾದಂತಹ ಆತಂಕ ಇರುವುದು ಕಾಸ್ಟ್ ಆಫ್ ಪ್ರೊಡಕ್ಷನ್, ಅದು ನಮ್ಮ ದೇಶದಲ್ಲಿ, ನಮ್ಮ ಊರಿನಲ್ಲಿ ಆಗತಕ್ಕ ಒಂದು ಚಿತ್ರವಾದರೆ 'ಕಡಿಮೆ ಖರ್ಚಿನಲ್ಲಿ ತಯಾರು ಮಾಡಲಿಕ್ಕೆ ಸಾಧ್ಯವಾಗುತ್ತದೆ ಮತ್ತು ಹೆಚ್ಚಿನ ಲಾಭದಾಯಕವಾಗಿ ಮಾಡಲಿಕ್ಕೆ ಆಗುತ್ತದೆ ಮತ್ತು ಆ ಮೂಲಕ ಹೆಚ್ಚು ಕನ್ನಡ ಚಿತ್ರಗಳು ಬರಲಿಕ್ಕೆ ಸಹಾಯವಾಗುತ್ತದೆ ಎಂಬುದನ್ನು ಸರ್ಕಾರದವರು ಒಪ್ಪುತ್ತಾರೆಯೇ?

ಶ್ರೀ ಆರ್. ಎಂ. ಪಾಟೀಲ್.—ಬೆಂಗಳೂರಿನಲ್ಲಿ ಸ್ಟುಡಿಯೋ ಮಾಡಿದರೆ ಅಗ್ಗದ ದರದಲ್ಲಿ ಅಥವಾ ಕಡಿಮೆ ದರದಲ್ಲಿ ಪಿಕ್ಚರ್ ತಯಾರಾಗುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಲಿಕ್ಕೆ ಬರುವುದಿಲ್ಲ. ವಿಶೇಷವಾಗಿ ಕನ್ನಡ ಕಲೆಗಾರರು ಅಥವಾ ಚಿತ್ರಕಾರರು ಯಾರಿದ್ದಾರೆ ಅವರು ಸಧ್ಯದಲ್ಲಿ ಮದರಾಸಿನಲ್ಲಿ ಇರುವುದರಿಂದ ಮತ್ತು ಅವರು ಮದರಾಸಿನಲ್ಲೇ ಖಾಯಂ ಆಗಿ ವಾಸ ಮಾಡುತ್ತಾ ಇರುವುದರಿಂದ ಬೆಂಗಳೂರಿನಲ್ಲಿ ಸ್ಟುಡಿಯೋ ತೆಗೆದರೆ ಅವರು ಇಲ್ಲಿ ಬಂದು ಕೆಲಸ ಮಾಡುತ್ತಾರೆ ಎಂದು ಹೇಳುವುದು ಕಷ್ಟ. ಇದಕ್ಕೆ ಬೇಕಾಗುವಂತಹ ಅನೇಕ ಸೌಕರ್ಯಗಳು ಅಲ್ಲಿ ಇದೆ. ಅಲ್ಲೇ ಜಾಸ್ತಿಯಾಗಿ ಕನ್ನಡ ಚಲನಚಿತ್ರ ತಯಾರುಮಾಡುತ್ತಾ ಇರುವುದೂ ಅಲ್ಲದೆ ತೆಲುಗಿನಲ್ಲಿ ಮತ್ತು ತಮಿಳಿನಲ್ಲಿ ಕೂಡ ತಯಾರು ಮಾಡುತ್ತಾ ಇರುವುದರಿಂದ ಅವರಿಗೆ ವಿಶೇಷ ಲಾಭ ಮದರಾಸಿನಲ್ಲೇ ಇದೆ ಆದ್ದರಿಂದ ಅವರು ಬೆಂಗಳೂರಿಗೆ ಬರಲಿಕ್ಕೆ ಒಪ್ಪುತ್ತಾರೆಯೋ ಇಲ್ಲವೋ ಹೇಳಲಿಕ್ಕೆ ಆಗುವುದಿಲ್ಲ. ಮತ್ತು ಸ್ಟುಡಿಯೋ ಆಗಬೇಕಾಗಿದ್ದರೆ ಒಳ್ಳೆಯ ಶ್ರೇಷ್ಠವಾದಂತಹ ಆಧುನಿಕ ಸ್ಟುಡಿಯೋ ಆಗಬೇಕಾಗುತ್ತದೆ ಅದಕ್ಕೆ ಮದರಾಸ್‌ದೊಳಗೆ ಆಗಲಿ, ಕಲ್ಕತ್ತದೊಳಗೆ ಆಗಲಿ ಬೊಂಬಾಯಿದೊಳಗೆ ಆಗಲಿ ಇದ್ದ ಯಾವತ್ತೂ ಸ್ಟುಡಿಯೋದಕ್ಕಿಂತಲೂ ಶ್ರೇಷ್ಠವಾದಂತಹ ಸ್ಟುಡಿಯೋ ಆಗಬೇಕು, ಇದು ಮೊದಲನೆಯದು.

Mr. SPEAKER.—Sri T. Madiah Gowda, though authorised to put Question No. 557, is not here. next Question.

Running of an Express bus from Bangalore to Hosadurga.

*Q.—643. Sri G. T. RANGAPPA (Hosadurga).—

Will the Government be pleased to state :—

whether any representation has been received by the State Road Transport Corporation to run an Express Bus from Bangalore to Hosadurga *via* Chikkanayakanahalli ?

A.—Sri D. DEVARAJ URS (Minister for Labour, Housing and Transport).—

Mysore State Road Transport Corporation is already operating a service from Bangalore to Hosadurga *via* Chikkanayakanahalli and no representation has been received to run an additional or Express service from Bangalore to Hosadurga, but the President, Town Municipal Council, Hosadurga, has requested for sanction of a Government Express, Bus from Bangalore to Holalkere *via* Gubbi, Chikkanayakanahallis, Huliyur, Sriramapura and Hosadurga. As the earning of the existing service between Bangalore and Hosadurga has not been encouraging, augmentation of the route or additional service on the common portion of the route was not considered.

ಶ್ರೀ ಜಿ. ಟಿ. ರಂಗಪ್ಪ.—ಈಗ ಬಸ್ಸುಗಳಲ್ಲಿ ಪ್ರಯಾಣಮಾಡಲು ಜನರಿಗೆ ಬೇಜಾರಾಗಿದೆ, ಆದಕ್ಕೆ ಕಾರಣ ಊರು ಸೇರಲು ನಿಧಾನವಾಗುತ್ತದೆ ಎಂಬುದು ಗಮನಕ್ಕೆ ಬಂದಿದೆಯೇ ?

†ಶ್ರೀ ಡಿ. ದೇವರಾಜ ಅರಸ್.—ಬಂದಿಲ್ಲ.

ಶ್ರೀ ಬಿ. ಎಲ್. ಗೌಡ.—ಈಗ ಬೆಂಗಳೂರು—ಹೊಸದುರ್ಗಗಳ ಮಧ್ಯೆ ಓಡಾಡುತ್ತಿರುವ ಸರ್ವಿಸ್ಸನ್ನು ಹೊಳಲ್ಕೆರೆವರೆಗೆ ಓಡಾಡುವಂತೆ ಮಾಡುವುದಾದರೆ ಹೆಚ್ಚು ಆದಾಯ ಬರುವುದರಿಂದ ಹಾಗೆ ಮುಂದುವರೆಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅದನ್ನು ಬೇಕಾದರೆ ಯೋಚನೆಮಾಡಬಹುದು. ಆದರೆ ಹಾಗೆ ಮುಂದುವರೆಸಲು ಸ್ವಲ್ಪ ಆಡಚಣೆ ಇದೆ, ಪ್ರೈವೇಟ್ ಅಪರೇಟರ್ಸ್ ಕೇಳಿ ಅಬ್‌ಜೆಕ್‌ಷನ್ಸ್ ಕರೆಯ ಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಪಶ್ನೆ ಬರುವುದಕ್ಕೆ ಮುಂದೆ ಮಾನ್ಯ ಸದಸ್ಯರು ಈ ವಿಷಯ ವನ್ನು ಗಮನಕ್ಕೆ ತಂದರೇ ? ತಂದಿದ್ದರೆ ಈವರೆಗೆ ಏನು ಕ್ರಮ ಕೈಕೊಳ್ಳಲಾಗಿದೆ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಯಾರ ಪರವಾಗಿ ಕೇಳುತ್ತಿದ್ದಾರೋ ಗೋತ್ತಾಗಲಿಲ್ಲ, ರಂಗಪ್ಪನವರ ಪರವಾಗಿ ಕೇಳುತ್ತಿದ್ದರೆ ಅವರು ನನ್ನ ಗಮನಕ್ಕೆ ಇದನ್ನು ತಂದಿರ ಲಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಬಸ್ಸಿನಲ್ಲಿ ಪ್ರಯಾಣಮಾಡುವವರ ಸಂಖ್ಯೆ ಹೆಚ್ಚಬೇಕಾದರೆ ಎಕ್ಸ್‌ಪ್ರೆಸ್ ಬಸ್ ಹಾಕಿದರೆ ಅನುಕೂಲವಾಗುವುದರಿಂದ ಅದನ್ನು ವಿಚಾರ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಇದು ಮನಾಪಲ ರೂಟ್ ಅಲ್ಲ, ಈಗ ಈ ರೂಟ್‌ನಲ್ಲಿ 20 ಬಸ್ಸುಗಳಿವೆ. ಆದುದರಿಂದ ಜನರು ಹೆಚ್ಚಾಗಿ ಬರುವರೆಂದು ಹೇಗೆ ಹೇಳುವುದಕ್ಕೆ ಸಾಧ್ಯ ? ಪೀಕ್ ಸೀಜನ್‌ನಲ್ಲಿ ಕೂಡ ಈಗ 25-30 ಜನರಮೇಲೆ ಪ್ರಯಾಣಮಾಡುತ್ತಿಲ್ಲ. ಹೀಗಿರುವಾಗ ಬೇರೆ ಬಸ್ ಹಾಕಬೇಕೆಂದರೆ ಕಷ್ಟ.

Sri C. J. MUCKANNAPPA.—Instead of putting another express service between Bangalore and Hosadurga, will Government consider to make this an express service between Bangolore and Kibbanhalli and then onwards convert it into an ordinary service ?

Sri D. DEVARAJ URS.—I cannot definitely give a promise, because, it may be worse. The result mav be otherwise. Because, if it is a shuttle service, there are chances of getting more passengers. But if it is an express service, I do not know. Then only passengers to Hosaduga, and Kibbanahalli will have to get in. However we will consider that aspect.

Sri K. S. SURYANARAYANA RAO.—Dose not Government consider that in a competitive line, better facilities and quicker transport would attract more passengers to the Road Transport Service rather than to the private operator?

Sri D. DEVARAJ URS.—I am not able to understand the question. I request the Hon'ble Member to be more explicit.

Mr. SPEAKER.—Before I allow it, what is the Question?

Sri K. S. SURYANARAYANA RAO.—To a supplementary, the Hon'ble Minister said, since it is a monopoly route, it has been very difficult for the Government Transport to get passengers, and to that I am putting a supplementary.

Mr. SPEAKER.—A supplementary to a supplementary does not arise. We are allowing supplementaries to the main question and not supplementaries to a supplementary. It may arise or it may not arise. If the nember wants, he may frame his Question in a different manner.

Sri K. S. SURYANARAYANA RAO.—In case it is a competitive line, does Government realise, that by giving the passengers facilities and quicker transport, they would attract more traffic and therefore make the line more profitable than what it is today?

Sri D. DEVARAJ URS.—Sir, the Hon'ble Member is drawing certain conclusions on imaginary hypothesis, for which I cannot give an answer. How can quicker transport facilities attract these Passengers in spite of a number of buses being there? So far as the State Transport Undertaking is concerned, we have got only one route and nothing more and nothing less.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ದಿವಸ ಹೊಸದುರ್ಗದ ಬಸ್‌ಲೈನನ್ನು ಪ್ರಭಾವಶಾಲಿಗಳು ಮತ್ತು ಖಾಸಗಿ ಆಪರೇಟರುಗಳ ಸಲಹೆಯ ಮೇರೆ ನಡೆಸುತ್ತಿರುವರೆ?

Mr. SPEAKER.—The question is whether any representation has been received by the State Road Transport Corporation to run an Express Bus from Bangalore to Hosadurga *via* Chikkanayakanahalli. But what is the scope of the Question that is now being put?

Sri H. R. KESHAVAMURTHY.—But the heading says "Running of an express but from Banglore to Hosadurga". My question is relevant to the heading.

Mr. SPEAKER.—Heading is not the guide.

Sri H. R. KESHAVAMURTHY.—Is not heading the guide, Sir?

Mr. SPEAKER.—Heading is always general.

Sri H. R. KESHAVAMURTHY.—I thought that we are directed by the heading. If you rule like that, I will modify my question, Sir. ಬಸ್ಸುಗಳನ್ನು ಪ್ರಭಾವಶಾಲಿಗಳ ಮತ್ತು ಖಾಸಗಿ ಆಪರೇಟರುಗಳ ಸಲಹೆಗನುಗುಣವಾಗಿ ಹಾಕುತ್ತಿದ್ದೀರಿ, ದೇಶದ ಹಿತದೃಷ್ಟಿಯಿಂದ ಹಾಕುತ್ತಿಲ್ಲ. ಮುಂದಾದರೂ ದೇಶದ ಹಿತದೃಷ್ಟಿಯಿಂದ ಜನರ ಬೇಡಿಕೆಯನ್ನು ಗಮನಿಸಿ ಹಾಕುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಅವರು ಹೇಳುವುದು ಅರ್ಥವಾಗುತ್ತಿಲ್ಲ, ಆ ರೀತಿ ಯಾವುದನ್ನು ಕೂಡ ಮಾಡುತ್ತಿಲ್ಲ. 1958-59ರಲ್ಲಿ ಈ ರೂಟನ್ನು ತೆಗೆದುಕೊಂಡು ಮುಂದುವರೆಸಲಾಗುತ್ತಿದೆ. ಯಾರ ಪ್ರಭಾವಕ್ಕೂ ಒಳಗಾಗಿರುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.— ಬೆಂಗಳೂರು-ಹೊಸದುರ್ಗ ಮಾರ್ಗ ಪ್ರೋತ್ಸಾಹದಾಯಕವಾಗಿಲ್ಲ ಎಂದು ಹೇಳಿದರು. ಹಾಗೆ ಆಗಿರುವುದಕ್ಕೆ ಕಾರಣವೇನು ?

ಶ್ರೀ ಡಿ. ದೇವರಾಜ ಅರಸ್.—ಹಾಕಿದಾಗಿನಿಂದ ಸಾಕಷ್ಟು ಪ್ರಯಾಣಕರು ಬಾರದಿರುವುದರಿಂದ ಪ್ರೋತ್ಸಾಹದಾಯಕವಾಗಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಖಾಸಗಿ ಬಸ್‌ಗಳಲ್ಲಿ ಅನುಕೂಲ ಜಾಸ್ತಿ ಇದೆ ಎಂದು ಒಪ್ಪಿಕೊಳ್ಳುತ್ತಾರೆಯೇ ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಹೊಸದುರ್ಗಕ್ಕೆ ನಾನು ಖಾಸಗಿ ಬಸ್‌ನಲ್ಲಿ ಪ್ರಯಾಣಮಾಡಿಲ್ಲ. ಆದ್ದರಿಂದ ಅದರಲ್ಲಿ ಜಾಸ್ತಿ ಅನುಕೂಲವಿದೆಯೋ ಕಡಮೆ ಅನುಕೂಲ ಇದೆಯೋ ಎನ್ನುವುದು ನನಗೆ ಗೊತ್ತಿಲ್ಲ. 20 ಬಸ್ಸುಗಳಿವೆ. 21ನೆಯ ಬಸ್ ಆಗಿ ನಮ್ಮದು ಒಂದೇ ಒಂದು ಬಸ್ ಆ ಮಾರ್ಗದಲ್ಲಿ ಓಡುತ್ತಿದೆ.

ಶ್ರೀ ಜಿ. ವಿ. ಗೌಡ.—20 ಬಸ್‌ಗಳು ಓಡುತ್ತಿರಬೇಕಾದರೆ, ಸರ್ಕಾರಿ ಬಸ್ಸಿಗೆ ಪ್ರೋತ್ಸಾಹ ಇಲ್ಲದೆ ಇದ್ದ ಮೇಲೆ ಅದನ್ನು ಏಕೆ ನಿಲ್ಲಿಸಬಾರದು ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ನಮ್ಮದು ಅಬ್ಲಿಗೇಟರಿ ಬಸ್ ಸರ್ವಿಸ್ ಎಂದು ಆಗಿರುವುದರಿಂದ ಬಸ್ಸನ್ನು ಓಡಿಸುತ್ತಿದ್ದೇವೆ. ಇಲ್ಲವೆ ಇದ್ದರೆ ಮಾನ್ಯ ಸದಸ್ಯರು ಹೇಳುವುದಕ್ಕೆ ಮೊದಲೇ ನಿಲ್ಲಿಸಿಬಿಡುತ್ತಿದ್ದೆವು.

Sri G. V. GOWDA.—I want to know how it is obligatory.

Sri D. DEVARAJ URS.—Sir, when once we took up this route for running the service, it was monopolised subsequently and since that particular route has been monoplised, we have got to run the service.

Sri G. V. GOWDA.—Then, how can the private buses be allowed to run ?

Sri D. DEVARAJ URS.—If there are 20 buses, they are called 20 routes. Out of this 20 or 18 routes, we have monopolised only one route.

Mr. SPEAKER.—Now, passed over questions.

Amount spent by Public Works Department on Government Buildings in Belgaum District.

*Q.—495. Sri V. S. PATIL (Belgaum).—

Will the Government be pleased to state :—

(a) the total amount spent by the Public Works Department on Government buildings, original or extensions since 1st November 1960 till today in Belgaum District ;

(b) whether there was any pressing necessity for that expenditure ;

(c) what Departments required those buildings ;

(d) what is the percentage of expenditure on these building for the various Depatments ?

A.—Sri G. B. SHANKAR RAO (Parliamentary Secretary to the Minister for Public Works).—

(*a*) Rs. 97·33 lakhs.

(*b*) Yes.

(*c*) The following Departments required these buildings :—

(1) Revenue
(2) Forest
(3) Registration
(4) General Administration
(5) Adminitration of Justice
(6) Jails
(7) Police
(8) Education
(9) Medical
(10) Public Health
(11) Agriculture
(12) Animal Husbandry
(13) Industiies
(14) P. W. D. and
(15) Misc. Departments.

(*d*) The percentage of expenditure is as follows :—

		Per cent
(1) Land Revenue	...	0.35
(2) Forest	...	0.40
(3) Registration	...	0.10
(4) General Administration	...	4.60
(5) Aministration of Justice	...	3.10
(6) Jails	...	2.20
(7) Police	...	22.55
(8) Education	...	6.00
(9) Medical	...	22.00
(10) Public Health	...	12.30
(11) Agriculture	...	8.00
(12) Animal Husbandry	...	0.60
(13) Industries	...	0.60
(14) Civil (P. W. D.)	...	12.20
(15) Misc. Departments.	...	5.00

Sri V. S. PATIL.—May I know whether it was quite essential for constructing all these buildings for all these departments ?

Sri G. B. SHANKAR RAO.—Sir, it is in the answer itself that it was necessary for the construction of these buildings,

Sri V. S. PATIL.—May I know as to whether this department has constructed one building for the location of the Polytechnic Institute and now it is being diverted for other use ?

Sri S. R. KANTHI (Minister for Education).—Sir, I will answer that because Polytechnic comes under my department. The building

was constructed for housing the Polytechnic Institute. In that area, there is also a building for Technical High School. Thers was a demand from the Health Department as this came under the devolopment of the hospital and they wanted for this two buildings to be handed over to them. The Government have agreed and they are constructing another building for the Polytechnic. This is quite essential because it is coming in between the hospital and the road and for the sake of the hospital this is done. Sri Patil knows it much better than myself.

Sri V. S. PATIL.—I thank the Eduction Minister for intervening. This Polytechnic Institute was constructed with a view to develop it into an Engineering College; that was the original scheme. So, by depriving the Technical Department of that building, is not education of this particular subject going to suffer?

Mr. SPEAKER.—When the rules are very clear, if I once create a precedent, it becomes bad. I cannot take back what I say here and later on refuse another. However, I will allow two or three clarifications. And then the Minister has given a hint as to how you can bring in the subject.

ಶ್ರೀ ಕೆ. ಲಕ್ಕಪ್ಪ.—ಚನ್ನಯ್ಯನವರು ಗ್ಯಾಂಬ್ಲರ್ ಎಂದು ಹೇಳಿದ್ದು ಯಾವ ಕೋರ್ಟ್ ನಲ್ಲಾದರೂ ರುಜುವಾತಾಗಿದೆಯೇ ? ಈ ಬಗ್ಗೆ ಏನಾದರೂ ದಾಖಲೆ, ಅಂಕಿ ಅಂಶ ತಮ್ಮಲ್ಲಿದೆಯೇ ?

Sri R. M. PATIL.—There is sufficient evidence to prove that he was a gambler.

Sri K. LAKKAPPA.—Has he been convicted by any Court?

Mr. SPEAKER.—As I said, this clarification will go on if necessary till 11-30 a.m. Members should rigidly adhere to the rules and should not unnecessarily complicate the situation.

[MR. DEPUTY SPEAKER in the Chair]

Sri G. V. GOWDA.—I would like to know whether the fact that he was a gambler has been proved and there is a finding in any Court of Law. It is criminal jurisprudence that all persons are innocent unless they are proved otherwise.

Sri R. M. PATIL.—In the past it is not proved. But there is evidence to prove.

Sri G. V. GOWDA.—Unless it is proved beyond doubt, how can the Hon'ble Minister say that he was a gambler ?

Mr. DEPUTY SPEAKER.—It has been replied already.

Sri S. SIVAPPA.—Sir, a most uncharitable comment has been made by the Home Minister that the deceased person, though he sacrificed his life, was a gambler...

Mr. DEPUTY SPEAKER.—What is the clarification the Hon'ble Member requires ?

Sri S. SIVAPPA.—Suppose I call the Home Minister a gambler, will he accept ?

Mr. DEPUTY SPEAKER.—Hon'ble Members must not and cannot make an allegation and defame another.

Sri S. SIVAPPA.—I said "suppose"

Sri S. M. KRISHNA.—Sir, we know that the Home Minister is not a gambler. Supposing it is said...

Sri S. SIVAPPA.—I know that he is a good person. I know he is a very good man.

Sri G. V. GOWDA.—If the Home Minister is not able to substantiate the allegation he has made, it has to be withdrawn.

Mr. DEPUTY SPEAKER.—The Minister said that he has got evidence to prove that he was a gambler. If the Member wants a clarification, he my ask.

Sri S. SIVAPPA.I want to know if any judicial pronouncement has been made to the effect that he was a gambler. If it is not there, on what grounds does the Hon'ble Minister call him a gambler ?

Sri R. M. PATIL.—During the course of investigation in this matter there is material to establish that fact.

Sri G. V. GOWDA.—Unless and until it has been proved in a Court of Law...

Mr. DEPUTY SPEAKER.—Is the Hon'ble Member going to debate on the point whether there is sufficient evidence or not ?

Sri S. M. KRISHNA.—He says that the deceased person was a gambler.

Mr. DEPUTY SPEAKER.—He said that there is evidence.

Sri S. SIVAPPA.—Evidence collected by whom? By a Sub Inspector of Police?

Sri G. V. GOWDA.—Investigation cannot be taken as proof. The Hon'ble Minister is aware of it. Evidence in the course of investigation cannot take the place of proof unless it is proved beyond doubt. Until and unless that is done, how can the Home Minister hold that he is a gambler?

Sri R. M. PATIL.—It requires no clarification. It is only a matter of presumption.

Sri S. M. KRISHNA.—Has the Hon'ble Minister withdrawn it?

Mr. DEPUTY SPEAKER.—There is no question of withdrawing.

Sri S. M. KRISHNA.—Then here on the floor of the House, can we say that any person is a gambler just as the Home Minister has stated, that Channiah is a gambler?

Sri S. SIVAPPA.—Here there is a case of selfimmolation of Mr. Channiah and on the basis of evidence supplied by the Sub Inspector, the Minister says that he has come to the conclusion that he is a gambler. Is it correct?

Mr. DEPUTY SPEAKER.—He has not stated like that. He has said that he has some evidence to show that he is a gambler.

(*Interruption*)

Mr. DEPUTY SPEAKER.—No incriminating remark is allowed on the Floor of the House.

Sri S. M. KRISHNA.—Suppose I say that the Home Minister is gambling with the lives of the people?

Mr. DEPUTY SPEAKER.—The Minister has stated about the evidence he has.

Sri V. M. DEO.—I want a clarification on three counts. Is it not a very unhappy thing that these things are going on, when the person involved, *i.e.*, the Chief Minister of the State......

Mr. DEPUTY SPEAKER.—What is the clarification that the Hon'ble Member wants? Members are anxious to gather information. Please don't make a statement but ask for information.

Sri V. M. DEO.—By what has happened so far, have not the Chief Minister's Cabinet colleagues, which includes the Home Minister, left the Chief Minister's conscience in trouble, particularly in regard to this? When these things occurred, he was not in the State. Secondly, does not the statement made by the Home Minister imply that irrespective of justice, they have decided what to do with it and a departmental enquiry is held which is a white wash? They have already said that the man is nefarious and the man is guilty. Finally, has it not struck the Home Minister that whatever

(SRI V. M. DEO)

he has stated, without allowing the Chief Minister to face us, is irrelavent, taking away the time of this August House ? Whether he would at least take measures now so that the Chief Minister comes and faces us if his conscious is clear ! Otherwise, one important thing is clear. It only means that in this particular crisis of falling standards, we are also part of it. At least we will wake up now.

Sri R. M. PATIL.—Sir, I am extremely sorry to submit to this House that the points for clarification raised by the Hon'ble Member are confusing and he himself is not clear about them and therefore, I am not in a position to answer those points.

Sri V. M. DEO.—Confusion is not on my part; it is on the part of the Government.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ವಾಮಿ, ಈ ಸಮಸ್ಯೆಯಲ್ಲಿ ನೊಂದಿರತಕ್ಕ ಚನ್ನಯ್ಯನವರ ಆತ್ಮ ಈ ಚರ್ಚೆ ಆಗತಕ್ಕ ಕಾಲದಲ್ಲಿ ಇಲ್ಲಿಯೇ ಬಂದು ಇಲ್ಲಿ ನಡೆಯುವುದನ್ನೆಲ್ಲ ಪರಿಶೀಲಿಸುತ್ತಿದೆ ಎನ್ನುವ ಅರಿವನ್ನು ಮರೆತು, ಮಾನ್ಯ ಗೃಹಸಚಿವರು ಈಗ ಕೊಟ್ಟಿರುವ ಹೇಳಿಕೆ ಚನ್ನಯ್ಯನವರ ಪತ್ರದಲ್ಲಿ ಕಂಡಂತೆ ಅದಕ್ಕೆ ಸಂಬಂಧಪಟ್ಟ ವಾಕ್ಯಗಳ ವಿಷಯದಲ್ಲಿ ನಡೆದಿರತಕ್ಕ ವಿಚಾರಣೆ ಮತ್ತು ಸರ್ಕಾರದವರ ತೀರ್ಮಾನ ಇವೆಲ್ಲವನ್ನೂ ಒಳಗೊಂಡ ಒಂದು ಕಾಂಪ್ರೆಹೆನ್ಸಿವ್ ರಿಪೋರ್ಟ್ ಆಗಿಲ್ಲ. ಅಲ್ಲದೆ ಚನ್ನಯ್ಯನವರು ಗ್ಯಾಂಬ್ಲರ್ ಎಂದು ಹೇಳಿದರು. ಇದು ಏಕಪಕ್ಷೀಯ ವಾದವನ್ನು ಒಳಗೊಂಡಂತೆ ಇರುತ್ತದೆ. ಆ ಸಬ್ ಇನ್‌ಸ್ಪೆಕ್ಟರು ನಮ್ಮ ಚುನಾವಣಾ ಕ್ಷೇತ್ರದ ಕೆಲವು ಭಾಗಕ್ಕೆ ಸಬ್ ಇನ್‌ಸ್ಪೆಕ್ಟರಾಗಿಯೂ ಇದ್ದಾರೆ. ಅವರು ಮೂರು ವರ್ಷದ ಅವಧಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಮಾಡಬಾರದ ಕೃತ್ಯಗಳನ್ನು ಮಾಡಿದ್ದಾರೆ. ಜನಗಳ ಮನಸ್ಸನ್ನು ನೋಯಿಸಿದ್ದಾರೆ. ಈಗ ಕೊಟ್ಟಿರುವುದು ಅಸಮ್ಮತವಾದ ರಿಪೋರ್ಟ್ ಆಗಿರುವುದರಿಂದ ಖಂಡಿತವಾಗಿ ತಾವು ಇದಕ್ಕೆ ಮನ್ನಣೆ ಕೊಡಬಾರದು. ಇದಕ್ಕೆ ಬೇರೆ ಅವಕಾಶ ಕೊಡಬೇಕು. ಈ ಬಗ್ಗೆ ಸಂಪೂರ್ಣವಾಗಿ ವಿಚಾರಣೆ ಮಾಡಿ ಬೇರೆ ರಿಪೋರ್ಟ್ ಕೊಡುವಂತೆ ಆದೇಶ ನೀಡಬೇಕೆಂದು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ.

Mr. DEPUTY SPEAKER.—There is nothing requiring clarification.

Sri P. VENKATAGIRIYAPPA (Kolar).—Is it the information of the Government that the Sub-Inspector is at no fault so far as this incident is concerned and that he has discharged his duty impartially in this place ? Is that the opinion of the Government ?

Sri R. M. PATIL.—That question does not arise here Sir.

Sri K. H. RANGANATH (Mudigere).—The main point of allegation of Sri S. Sivappa and some other friends who spoke on the other day is that the statement made on the Floor of the House gave encouragement to the Sub-Inspector to harass Sri Channiah and that was the reason for Sri Channiah's ending his life. May I ask through you whether the Government has made any attempt to know the fact or otherwise of the allegations ? I want to know from the Minister for Home categorically whether the Minister has made any attempt to know the fact or otherwise and whether he has got any information with regard to this point ?

Sri R. M. PATIL.—Sir, I have made a statement in respect of complaints or allegations made against the Sub-Inspector. I caused enquiries to be made. The D.I.G. and the I.G. have enquired into this matter. So far as harassment is concerned, there is no harassment in this.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಈ ಕಾಗದದಲ್ಲಿ ಆತನ ಕೊಲೆಗೆ ಕಾರಣ ಹೊನ್ನಯ್ಯ ಎಂದು ಬರೆದಿದ್ದಾನೆ. ಆ ಕಾಗದವನ್ನು ಆತನ ಕೈಯಿಂದಲೇ ಬರೆದಿದ್ದಾನೆ ಎನ್ನುವುದನ್ನು ಕೂಡ ಒಪ್ಪಿಕೊಂಡಿದ್ದಾರೆ. ಆ ಕಾಗದ ತಲುಪಿದ ಮೇಲೆ ಸರ್ಕಾರ ಆತನನ್ನು ಅರೆಸ್ಟ್ ಮಾಡುವುದಕ್ಕಾಗಲೀ, ಆತನ ಮೇಲೆ ಯಾವುದೇ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಲೀ ತಕ್ಷಣ ಪ್ರಯತ್ನ ಮಾಡಿದ್ದಾರೆಯೇ? ಹಾಗೆ ಮಾಡದೆ ಇದ್ದರೆ ಏಕೆ ಮಾಡಲಿಲ್ಲ!

Sri R. M. PATIL.—Such complaints used to come before also. So, the enquiry was to be made and enquiry was made.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಬ್ಬ ಮನುಷ್ಯ ಸಾಯುವಾಗ ಪತ್ರವನ್ನು ಬರೆದರೆ ಅದಕ್ಕೆ ಕೋರ್ಟಿನಲ್ಲಿ ಕೂಡ ಮನ್ನಣೆ ಇದೆ ಎಂದು ಒಪ್ಪಿಕೊಳ್ಳುತ್ತಾರೆ. ಅಂಥ ಸಂದರ್ಭದಲ್ಲಿ ಸರ್ಕಾರ ಅದನ್ನು ಒಪ್ಪದೆ ಪೋಲೀಸ್ ಅಧಿಕಾರಿಯ ಬಗ್ಗೆ ವಿಚಾರಣೆ ಮಾಡುವುದಕ್ಕೆ ಇನ್ನೊಬ್ಬ ಪೋಲೀಸ್ ಅಧಿಕಾರಿಯನ್ನು ಕಳಿಸಿ, ಸುತ್ತ ಮುತ್ತಲ ಗ್ರಾಮಗಳವರ ಎವಿಡೆನ್ಸ್ ಏನಿದೆ ಎನ್ನುವುದನ್ನೂ ತಿಳಿದುಕೊಳ್ಳದೆ ಯಾವುದೋ ಒಂದು ಷ್ಯಾಬಿ ರಿಪೋರ್ಟ್ ತೆಗೆದುಕೊಂಡು ಬಂದು ಈ ಸಭೆಯಲ್ಲಿ ಇಟ್ಟು ದೇಶದ ಅನಾಹುತಕ್ಕೆ ಕಾರಣವಾಗುತ್ತಿದ್ದಾರೆ. ಇದಕ್ಕೆ ಸರ್ಕಾರವೇ ನೇರವಾಗಿ ಜವಾಬ್ದಾರರು. ಮಾನ್ಯ ಸಭಾಧ್ಯಕ್ಷರಿಗೆ ಮತ್ತು ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರಕ್ಕೆ ಉತ್ತರವನ್ನು ಅವರು ಏಕೆ ಹೇಳಲಿಲ್ಲ!

Sri R. M. PATIL.—Sir, the machinery is an established machinery. Simply because my Hon'ble friends are not satisfied with the machinery, we cannot establish a special machinery for such things.

ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಸ್ವಾಮಿ, ಮಾನ್ಯ ಗೃಹಸಚಿವರು ನಮ್ಮ ಮುಂದೆ ಸತ್ಯಕ್ಕೆ ದೂರವಾದ ಕೆಲವು ವಿಚಾರಗಳನ್ನು ಇಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ಆ ಒಂದು ಸ್ಥಳಕ್ಕೆ ಶುಕ್ರವಾರ ಹೋಗಿದ್ದೆ. ಕೇವಲ ವಿರೋಧ ಪಕ್ಷದವರು ಇದನ್ನು ಹೇಳುತ್ತಿದ್ದಾರೆ ಎಂದು ಭಾವಿಸಬಾರದು. ಹಾಸನ ಜಿಲ್ಲೆಯ ಟ್ರೆಜರಿ ಬೆಂಚಿಗೆ ಸೇರಿದ ಮಾನ್ಯ ಸದಸ್ಯರನೇಕರು ಇಲ್ಲಿದ್ದಾರೆ. ನನ್ನ ಜೊತೆಗೆ ಮಾನ್ಯ ಸದಸ್ಯರೂ ಬರುವುದಕ್ಕೆ ಇಷ್ಟಪಟ್ಟರೆ ಹೋಗೋಣ. ಆ ಸಬ್ ಇನ್‌ಸ್ಪೆಕ್ಟರ್‌ಗೆ ಸಂಬಂಧಪಟ್ಟಂತೆ 135 ಹಳ್ಳಿಗಳಿವೆ. ನಾವು ಆ ಹಳ್ಳಿಗಳ ಪೈಕಿ ಕೆಲವು ಹಳ್ಳಿಗಳಿಗಾದರೂ ಕೂಡ ಭೇಟಿ ಕೊಟ್ಟು ಆ ಜನತೆಯ ಕಷ್ಟ ಸುಖವೇನು, ಆ ಸಬ್ ಇನ್‌ಸ್ಪೆಕ್ಟರನಿಂದ ದೊರಕಿರುವ ಸುಖವೇನು ಎನ್ನುವುದನ್ನು ವಿಮರ್ಶೆ ಮಾಡುವುದಕ್ಕೆ ಸಾಧ್ಯವಿದೆ. ಈ ಒಂದು ಕೆಲಸದಲ್ಲಿ ಮಾನ್ಯ ಸಚಿವರು ಸಹಕಾರಿಗಳಾಗಲಿ. ಆ ಕಡೆ ಇರತಕ್ಕ ಹಾಸನ ಜಿಲ್ಲೆಯ ಮಾನ್ಯ ಸದಸ್ಯರ ಜೊತೆಗೆ ನಾವು ಕೆಲವರು ಹೋಗುವುದಕ್ಕೆ ಅವಕಾಶ ಮಾಡಿಕೊಡಲಿ. ಇದರಿಂದ ಸಬ್ ಇನ್‌ಸ್ಪೆಕ್ಟರ ನೀತಿ ನಿಯಮಗಳು, ಆತನ ನಡತೆ, ನಾಲ್ಕು ವರ್ಷಗಳಿಂದ ಆತನು ನಡೆದುಕೊಂಡಿರುವ ರೀತಿ ಇವುಗಳಿಂದ ದೇಶದ ಹಿತಕ್ಕೆ, ಜನತೆಯ ಹಿತಕ್ಕೆ, ಪ್ರಜಾಪ್ರಭುತ್ವದ ಉಳಿವಿಗೆ ತಕ್ಕಂತೆ ಇದೆಯೇ ಇಲ್ಲವೇ ಎನ್ನುವುದನ್ನು ವಿಮರ್ಶೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಮಾನ್ಯ ಸಚಿವರನ್ನು ನಮ್ರತೆಯಿಂದ ಕೇಳುತ್ತಿದ್ದೇನೆ. ಅವರು ಈ ಬಗ್ಗೆ ಏತಕ್ಕೆ ಲಘುವಾಗಿ ಕಾಣುತ್ತಿದ್ದಾರೋ ಅಥವಾ ಏನೋ ಒಬ್ಬ ಸತ್ತನೆಂದು ಲಘುವಾಗಿ ತೆಗೆದುಕೊಳ್ಳುತ್ತಿದ್ದಾರೋ ನನಗೆ ಗೊತ್ತಿಲ್ಲ. ನಾವು ಇಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡುತ್ತಿರುವಾಗ ಅದಕ್ಕೆ ಕೊಡಬೇಕಾದ ಗೌರವ ಕೊಡುತ್ತಿಲ್ಲವೆಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

11-30 A.M.

ಶ್ರೀ ಆರ್. ಎಂ. ಪಾಟೀಲ್.—ಅವರು ಹೇಳುವ ವಿಷಯವನ್ನು ನಾವು ಲಘುವಾಗಿ ಕಂಡಿರುವೆವು ಎಂಬುದಾಗಿ ಮಾನ್ಯ ಸದಸ್ಯರು ಭಾವಿಸಿರುವುದು ತಪ್ಪು. ಅವರಿಗೆ ಈ ವಿಚಾರದಲ್ಲಿ ಎಷ್ಟು ತೀಕ್ಷ್ಣವಿದೆಯೋ ಅದಕ್ಕಿಂತಲೂ ಹೆಚ್ಚಿಗೆ ನಮಗೆ ತೀಕ್ಷ್ಣವಿದೆ.

ಶ್ರೀ ಬಿ. ಬೈರಪ್ಪಾಜಿ.—ಆ ರೀತಿ ಇರಬೇಕಾದುದು ಸಹಜ.

ಉಪಾಧ್ಯಕ್ಷರು.—ಕ್ಲಾರಿಫಿಕೇಷನ್ ಏನಾದರೂ ಇದ್ದರೆ ಕೇಳಿ.

*ಶ್ರೀ ಬಿ. ಬೈರಪ್ಪಾಜಿ.—ಹಾಗಾದರೆ ಸರ್ಕಾರದವರಿಗೆ ಹೆಚ್ಚಿನ ಆಸಕ್ತಿ ಇದೆಯೆಂದು ನಾನು ಭಾವಿಸುತ್ತೇನೆ. ಆದರೆ ಈ ವಿಚಾರದಲ್ಲಿ ನಾನು ಹೇಳಿದ ಸಲಹೆಯನ್ನು ಕಾರ್ಯರೂಪಕ್ಕೆ ತಂದು ಈ ಪ್ರಕರಣದ ಬಗ್ಗೆ ಸತ್ಯಾಂಶವನ್ನು ದೇಶದ ಮುಂದೆ ಇಡುವುದಕ್ಕೆ ಸರ್ಕಾರ ಏರ್ಪಾಡು ಮಾಡುತ್ತದೆಯೇ?

ಶ್ರೀ ಆರ್. ಎಂ. ಪಾಟೀಲ್.—ಸತ್ಯಾಂಶ ಇಡಬೇಕೆಂಬುದೇ ಸರ್ಕಾರದ ಉದ್ದೇಶ. ಅದೇ ವಿಷಯವನ್ನು ಚರ್ಚೆಮಾಡುವ ಸಲುವಾಗಿ ಹೆಚ್ಚಿಗೆ ಮಾಹಿತಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧನೆ ಮಾಡುತ್ತಿರುವುದಾಗಿದೆ. ಅದಕ್ಕೆ ಬೇಕಾದ ಯಂತ್ರ ಬೇರೆ ಇದೆ. ಆ ಯಂತ್ರ ಚೆನ್ನಾಗಿ ಕೆಲಸ ಮಾಡುತ್ತಾ ಇದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ.ಈ ಆತ್ಮಹತ್ಯಕ್ಕೆ ಕಾರಣರಾದ ಈ ಸಬ್‌ಇನ್‌ಸ್ಪೆಕ್ಟರ್ ವಿಷಯದಲ್ಲಿ ಇದುವರೆಗೂ ಸಂಪೂರ್ಣವಾಗಿ ಪೋಲೀಸ್ ಇಲಾಖೆಯಿಂದ ಯಾವ ವಿಚಾರಣೆಯೂ ನಡೆದಿಲ್ಲ. ಇದಕ್ಕೆ ಕಾರಣ ಆ ಸಬ್‌ಇನ್‌ಸ್ಪೆಕ್ಟರು ನಡೆಸಿದ ದುರಾಡಳಿತ. ಆ ದುರಾಡಳಿತದ ಬಗ್ಗೆ ಪೂರ್ತಿಯಾಗಿ ತನಿಖೆ ನಡೆಸಿ ನ್ಯಾಯಾಂಗ ವಿಚಾರಣೆ ಯಾಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದಕ್ಕೆ ಬೇಕಾದವರನ್ನು ಕೂಡಲೇ ನೇಮಿಸಬೇಕು.

Sri S. V. AGNIHOTRI (Dharwar).—On a point of order, Sir.

Sri K. LAKKAPPA.—I rise to another point of order, Sir.

Mr. DEPUTY SPEAKER.—There cannot be a point of order to a point of order.

Sri K. LAKKAPPA.—My point of order is that the Hon'ble Member Agnihotri is not in his proper place.

(*The Hon'ble Member Sri S. V. Agnihotri came to his seat.*)

Sri S. V. AGNIHOTRI.—They say 'murder' whereas the report is that it is suicide. In view of that, is it in order to say that it is murder ?

Mr. DEPUTY SPEAKER.—That is their opinion.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸಬ್‌ಇನ್‌ಸ್ಪೆಕ್ಟರ್ ವಿಷಯದಲ್ಲಿ ಪೂರ್ಣ ತನಿಖೆ ನಡೆಸಿ ನ್ಯಾಯಾಂಗ ವಿಚಾರಣೆ ನಡೆಸಲು ಇವರು ತಯಾರಾಗಿದ್ದಾರೆಯೇ ?

ಶ್ರೀ ಆರ್. ಎಂ. ಪಾಟೀಲ್.—ಈ ಸಬ್‌ಇನ್‌ಸ್ಪೆಕ್ಟರ್ ಅವಧಿಯೊಳಗೆ ಏನೇನು ನಡೆದಿದೆ ಎಂಬುದನ್ನು ತನಿಖೆಮಾಡಿ ಅದರ ಬಗ್ಗೆ ಯೋಗ್ಯ ವಿಚಾರಮಾಡಿ ಯೋಗ್ಯ ಕ್ರಮಕೈಗೊಂಡಿದೆ. ಈ ಆತ್ಮಹತ್ಯದ ಬಗ್ಗೆ ಯೋಗ್ಯವಾದ ತನಿಖೆ ನಡೆದಿದೆ. ಈಗ ಇದ್ದ ಮಾಹಿತಿಯನ್ನು ಈ ಸಭೆಯ ಮುಂದೆ ವಿವರಿಸಲಾಗಿದೆ. ಇನ್ನು ಅದಕ್ಕಿಂತಲೂ ಹೆಚ್ಚಿನ ವಿಷಯ ಈಗ ಗೊತ್ತಾಗುದಿಲ್ಲ. ಹೆಚ್ಚಿಗೆ ವಿಷಯ ಗೊತ್ತಾದಲ್ಲಿ ತಿಳಿಸುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಈಗ ಸ್ಟೇಟ್‌ಮೆಂಟ್ ಕೊಡುವಾಗ ಒಂದು ಕಾಗದವನ್ನು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರಿಗೆ, ಇನ್ನೊಂದು ಕಾಗದವನ್ನು ಅವರ ಸಹೋದರ ಶ್ರೀ ಕೆಂಪೇ ಗೌಡರಿಗೆ ಬರೆದಿದ್ದಾರೆಂದು ಮಾನ್ಯಮಂತ್ರಿಗಳು ಹೇಳಿದರು. ಅದನ್ನು ಪರಿಶೀಲನೆ ಮಾಡಲು ಈ ಮಾನ್ಯ ಸಭೆಯಲ್ಲಿ ಆ ಕಾಗದ ಪತ್ರಗಳನ್ನು ಇಡಬೇಕು. ಅವನ್ನು ಯಾವ ತಾರೀಖಿನಲ್ಲಿ ಬರೆದಿದ್ದಾರೆ ಅದರ ಒರಿಜಿನಲ್ಲನ್ನು ಈ ಸಭೆಯ ಮುಂದೆ ಇಡಬೇಕು.

ಶ್ರೀ ಆರ್. ಎಂ. ಪಾಟೀಲ್.—ಶ್ರೀ ಕೆಂಪೇಗೌಡರಿಗೆ ಬರೆದ ತಾರೀಖು 20-3-65ರಲ್ಲಿ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರಿಗೆ ಬರೆದ ತಾರೀಖು ಕೂಡ 20-3-65ರಲ್ಲಿ.

Mr. DEPUTY SPEAKER.—If the Hon'ble Minister is quoting from the letters, he will have to place it on the Table; but if he is giving only the gist, it is not necessary.

Sri R. M. PATIL.—It is not necessary to place every document on the table of the House: I have given only the gist.

ಶ್ರೀ ಕೆ. ಲಕ್ಕಪ್ಪ.—ಅಧ್ಯಕ್ಷರೇ, ಈ ಸಬ್‌ಇನ್‌ಸ್ಪೆಕ್ಟರ್ ಪ್ರಾಮಾಣಿಕ, ದಕ್ಷ ಎನ್ನುವುದನ್ನು ಮುಖ್ಯಮಂತ್ರಿಗಳು ಇಲ್ಲಿ ಡಿಫೆಂಡ್ ಮಾಡಿಕೊಂಡರು. ಅದಾದ ಮೇಲೆ ಅವರು ಬರೆದ ಕಾಗದದಲ್ಲಿ ಏನಿದೆಯೆಂದರೆ, ಇನ್ನೂ ಉನ್ಮತ್ತದಿಂದ ಇವರು ಅವನಿಗೆ ಬೆಂಬಲವನ್ನು ಈ ಸಭೆಯಲ್ಲಿ ಕೊಟ್ಟುದ ರಿಂದ ಆತನು ಇನ್ನೂ ಘೋರ ಕೃತ್ಯಗಳನ್ನು ನಡೆಸುವ ಒಂದು ಕಾರ್ಯ ಜಾಸ್ತಿಯಾಯಿತು. ಆ ಬಗ್ಗೆ

ನನಗೆ ಯಾರಿಂದಲೂ ಕೂಡ ರಕ್ಷಣೆ ಸಿಗಲಿಲ್ಲವೆಂದು ಆ ಕಾಗದದಲ್ಲಿ ಆತ ಕಾಣಿಸಿದ್ದಾನೆ. ಆದ್ದರಿಂದ ಈ ಬಗ್ಗೆ ನ್ಯಾಯಾಂಗ ತನಿಖೆ ಮಾಡುವುದಕ್ಕೆ ಸರ್ಕಾರದವರಿಗೇನು ತೊಂದರೆ ಮತ್ತು ಅವರ ಅಭಿಪ್ರಾಯವೇನೆಂದು ನಾನು ಕೇಳುತ್ತೇನೆ.

ಶ್ರೀ ಆರ್. ಎಂ. ಪಾಟೀಲ್.—ಈಗ ಕಳೆದ ಎರಡು ವರ್ಷಗಳ ಹಿಂದೆ 1963-64ನೇ ಇಸವಿಯಲ್ಲಿ ನಡೆದಂಥ ಪ್ರಕರಣಗಳನ್ನು ವಿಚಾರ ಮಾಡಿದರೆ ಒಂದು ವರ್ಷ ಎರಡು, ಇನ್ನೊಂದು ವರ್ಷ ಎರಡು—ಹೀಗೆ 4 ಕೇಸುಗಳನ್ನು ಅವರು ಹಾಕಿದ್ದಾರೆ. ಅವರು ಆಗ ಎರಡು ಪಕ್ಷಗಳ ಮೇಲೆ ಇನ್‌ವೆಸ್ಟಿಗೇಷನ್ ಮಾಡಿ ಕೇಸು ಹಾಕಿರುವುದರಿಂದ ಅವರನ್ನು ಪ್ರಾಮಾಣಿಕರೆಂದು ಭಾವಿಸುವುದು ಸ್ವಾಭಾವಿಕ. ಅವರು ಯಾವ ಪಕ್ಷವನ್ನೂ ಅವಲಂಬಿಸಿಲ್ಲ. ಆದ್ದರಿಂದ ಶ್ರೀ ಚನ್ನಯ್ಯನವರು ಬರೆದ ಕಾಗದ ಸತ್ಯವೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ಪೂರ್ಣ ವಿಚಾರಣೆ ಮಾಡುವುದು ಅವಶ್ಯಕವೆಂದೇ ಪೂರ್ಣ ಎನ್‌ಕ್ವೈರಿ ನಡೆದಿದೆ.

Mr. DEPUTY SPEAKER.—Since the Government say that the matter is under enquiry, it is better not to press further.

[MR. SPEAKER in the Chair]

†ಶ್ರೀ ಎಚ್. ಆರ್. ಕೇಶವಮೂರ್ತಿ.—ಗತಿಸಿದ ಶ್ರೀಮಾನ್ ಚನ್ನಯ್ಯನವರು ಎರಡು ಮೂರು ವಾಕ್ಯಗಳನ್ನು ಬರೆದಿದ್ದಾರೆ. ಅದನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಅವರು ನಡೆದಿರತಕ್ಕ ವಿಚಾರವನ್ನು ಪೂರ್ತಿಯಾಗಿ ಬರೆದು ಇಟ್ಟಿದ್ದಾರೆ. ಅದನ್ನು ಇಲ್ಲಿ ಓದುವುದಕ್ಕೆ ಅಧ್ಯಕ್ಷರಾದ ತಾವು ನನಗೆ ಅಪ್ಪಣೆ ಕೊಡಬೇಕು.

ಅಧ್ಯಕ್ಷರು.—ಓದಿ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಅದು ಈ ರೀತಿ ಇದೆ: "ಸ್ವಾಮಿ, ಶ್ರೀಮಾನ್ ಎಸ್. ನಿಜಲಿಂಗಪ್ಪನವರೇ, ನಿಮ್ಮ ಅಧಿಕಾರ ವರ್ಗದಿಂದ ದೇಶದಲ್ಲಿ ಎಷ್ಟೆಷ್ಟು ಸಂಸಾರಗಳು ನಾಶವಾಗುತ್ತಾ ಇವೆ ಎಂಬುದು ನಿಮಗೆ ತಿಳಿಯದಾಗಿದೆ. ನುಗ್ಗೇಹಳ್ಳಿ ಸಬ್‌ಇನ್‌ಸ್ಪೆಕ್ಟರ್ ಎಸ್. ಹೊನ್ನಯ್ಯನು ಬಂದು ಮೂರು ವರ್ಷಗಳಾಯಿತು. ಈತನು ಜನಗಳಿಗೆ ಕೊಡುತ್ತಿರುವ ತೊಂದರೆ, ಜನಗಳಿಂದ ಸುಲಿಯುತ್ತಿರುವ ಹಣ ಹೇಳತೀರವಾಗಿದೆ. ಈತನು ಈ ರೇಂಜಿಗೆ ಬಂದ ಮೇಲೆ ಜನಗಳಿಂದ ಹದಿನೈದು ಲಕ್ಷ ರೂಪಾಯಿ ಅನ್ಯಥಾ ಖರ್ಚಾಗಿದೆ. ಕೋರ್ಟಿನ ರೂಪದಲ್ಲಿ, ಲಂಚದ ರೂಪದಲ್ಲಿ, ಇದುವರೆವಿಗೂ ಈತನು ಇಲ್ಲದ ಸಲ್ಲದ ಕೇಸುಗಳನ್ನು ಅಂದರೆ ಸುಮಾರು 200 ಕೇಸುಗಳನ್ನು ಹಾಕಿ ಒಂದೂ ಸಹ ರುಜುವಾತು ಕೊಡಲಿಕ್ಕೆ ಆಗಲಿಲ್ಲ. ಇಂತಹವರನ್ನು ದಕ್ಷ, ಪ್ರಾಮಾಣಿಕರೆಂದು ಯಾವ ಬಾಯಿಯಿಂದ ಹೇಳಿದಿರಿ ? ಇದನ್ನು ನೋಡಿದರೆ ನೀವೇ ಕಾರಣರು. ಕಾಂಗ್ರೆಸ್ ಸಂಸ್ಥೆಯನ್ನು ಉದ್ಧಾರ ಮಾಡಲಿಕ್ಕೆ ಹಾಗೂ ಇತರ ಪಾರ್ಟಿಯನ್ನು ತುಳಿಯುವುದೇ ನಿಮ್ಮ ಉದ್ದೇಶವಾಗಿದೆ. ಇವರಿಂದ ಗೂಂಡಾಗಿರಿಯಿಂದ, ಅಧಿಕಾರ ದರ್ಪದಿಂದ, ಪುಡಾರಿಗಳ ಕಾಟದಿಂದ, ಮೋಸದಿಂದ, ಲಂಚದಿಂದ, ಇತರರನ್ನು ತುಳಿಯುವುದರಿಂದ ಕಾಂಗ್ರೆಸ್ಸನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲ. ಇದರಿಂದ ಕಾಂಗ್ರೆಸ್ ಸರ್ಕಾರ ನಾಶವೇ ವಿನಹ ಉದ್ಧಾರವಾಗಲಾರದು. ಈ ಸಬ್‌ಇನ್‌ಸ್ಪೆಕ್ಟರ್ ಈ ರೇಂಜಿಗೆ ಬಂದ ಮೇಲೆ ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಮಾಡಿಕೊಂಡಿದ್ದಾನೆ. ಈತನು ಪುಂಡರಿಗೆ, ಗೂಂಡಾಗಳಿಗೆ ಪ್ರೋತ್ಸಾಹ ಕೊಟ್ಟು ಅದರಿಂದ ಗೌರವಸ್ಥರಿಗೆ, ಮರ್ಯಾದಸ್ಥರಿಗೆ ತೊಂದರೆ ಕೊಡಿಸುವುದು, ಪುಂಡರಿಂದ ಕೇಸನ್ನು ಹಾಕಿಸುವುದು, ಜೈಲಿಗೆ ಹಾಕುತ್ತೇನೆಂದು ಹೆದರಿಸುವುದು, ಮರ್ಯಾದೆಗೆ ಅಂಜಿ ದುಡ್ಡನ್ನು ಕೊಡುವುದನ್ನು ತೆಗೆದುಕೊಳ್ಳುವುದು......" ಇವರು ಜನಗಳಿಗೆ ಕೊಡುತ್ತಿರುವ ತೊಂದರೆ ಬಹಳವಾಗಿರುವುದರಿಂದ ದಯವಿಟ್ಟು ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕು. ಅವರು ಪ್ರಾಣ ತೆಗೆದುಕೊಳ್ಳುವುದಕ್ಕೆ ಸಬ್‌ಇನ್‌ಸ್ಪೆಕ್ಟರೇ ಕಾರಣರಾಗಿರುವುದರಿಂದ ಅವರ ಮೇಲೆ ನ್ಯಾಯಾಂಗ ವಿಚಾರಣೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಂ. ಪಾಟೀಲ್.—ಇದರ ಬಗ್ಗೆ ಚರ್ಚೆ ನಡೆದಿದೆ. ಆ ಕೇಸಿನ ವಿಷಯದಲ್ಲಿ ಇನ್‌ವೆಸ್ಟಿಗೇಷನ್ ನಡೆದಿದೆ. ಈ ವಿಚಾರದಲ್ಲಿ ನಾನು ಹೇಳುವಂಥಾದ್ದನ್ನು ಈಗಾಗಲೇ ನಾನು ಹೇಳಿದ್ದೇನೆ.

ಶ್ರೀ ಕೆ. ಲಕ್ಕಪ್ಪ.—ಒಂದು ಕೇಸ್ ರೆಫರ್ ಮಾಡಿದರು, ಆ ಬಗ್ಗೆ ನಾನು ಒಂದು ಕ್ಲಾರಿಫಿಕೇಷನ್ ಕೇಳಬೇಕಾಗಿದೆ.

Mr. SPEAKER.—Order. It was agreed that the Debate should close at 11-30 A.M. Now it is 11-40 A.M. and still the hon'ble members want more time. I am very sorry.

Sri K. LAKKAPPA.—It is only some clarification.

Mr. SPEAKER.—The matter does not end there. I am not allowing any clarifications.

Sri K. LAKKAPPA.—Only one clarification, Sir. With respect to the pending cases between the Government and the parties, the Minister was pleased to state that the cases have been discharged as against Channaiah and other parties. Is it not a fact that the Court has passed strictures that the Sub-Inspector is incompetent and has taken a partisan attitude ? This has been stated in a judgement in a case that has been disposed of against Mr. Channaiah.

Sri R. M. PATIL.—If my friend produces that judgement, we shall examine.

Mr. SPEAKER.—The next item is the Resolution of Sri V. S. Patil. It has been agreed that it will stand postponed to some other day. The next resolution is by Sri Srinivas Naik he may move it.

NON-OFFICIAL RESOLUTION

Re: Merger of Kannada areas of Kasargod taluk in Kerala State with Mysore State.

Sri M. SRINIVASA NAYAK (Mangalore-I).—I beg to move :

"That this Assembly recommends to the State Government to urge the Government of India to take immediate steps for the merger of the Kannada areas of Kasargod taluk in Kerala State with Mysore State."

Mr. SPEAKER.—Resolution moved :

"That this Assembly recommends to the State Government to urge the Government of India to take immediate steps for the merger of the Kannada areas of Kasargod taluk in Kerala State with Mysore State."

ಶ್ರೀ ಎಂ. ಶ್ರೀನಿವಾಸನಾಯಕ್.—ಮಾನ್ಯ ಸಭಾಪತಿಗಳವರೇ, ಕಾಸರಗೋಡನ್ನು ಮೈಸೂರು ರಾಜ್ಯದಲ್ಲಿ ಸೇರ್ಪಡಿಸುವ ಬಗ್ಗೆ ಹಲವು ಭಾರಿ ಈ ಘನವಾದ ಸಭೆಯಲ್ಲಿ ಇಕ್ಕಡೆಯ ಸದಸ್ಯರುಗಳೂ ತಮ್ಮ ಪೂರ್ಣ ಬೆಂಬಲವ್ಯಕ್ತಪಡಿಸಿ ಕೇಳಿಕೆಗಳನ್ನೂ ಈ ಸಭೆಯ ಮುಂದೆ ಇಟ್ಟಿದ್ದಾರೆ. ಅದೂ ಅಲ್ಲದೆ ಈಗ್ಗೆ ಕೆಲವು ಸಮಯದ ಹಿಂದೆ ಕನ್ನಡನಾಡಿಗೆ ಸ್ಪರ್ಧೆಯ ಬಗ್ಗೆ ಕಾಸರಗೋಡಿನಲ್ಲಿ ನಡೆದ ಸರ್ವಪಕ್ಷ ಸಮ್ಮೇಳನ ನಡೆದಾಗ ಪ್ರತಿ ಪಕ್ಷದ ಮುಂಖಡರೂ ಕೂಡ ಭಾಗವಹಿಸಿ ಈ ಕೇಳಿಕೆಗೆ ತಮ್ಮ ಬೆಂಬಲವನ್ನು ಕೊಟ್ಟಿದ್ದಾರೆ. ಈ ಬಗ್ಗೆ ಠರಾವುಗಳನ್ನು ಕೂಡ ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಕಳುಹಿಸಿಕೊಟ್ಟಿದ್ದಾರೆ. ಇವೊತ್ತಿನ ದಿವಸ ಕೇರಳದಲ್ಲಿರುವ ಕಾಸರಗೋಡನ್ನು ಮೈಸೂರು ರಾಜ್ಯಕ್ಕೆ ಸೇರಿಸತಕ್ಕ ವಿಷಯದಲ್ಲಿ ಒಂದು ಒಳ್ಳೆಯ ವಾತಾವರಣ ಉಂಟಾಗಿ ಅದಕ್ಕೆ ಅನುಕೂಲವಾಗುವಂತಹ ಒಂದು ಸನ್ನಿವೇಶ ಬಂದಿದೆ. ಈ ಒಂದು ಠರಾವನ್ನು ಈ ಘನವಾದ ಸಭೆಯಲ್ಲಿ ಚರ್ಚೆಮಾಡಿ ಇದರ ಬಗ್ಗೆ ಇತ್ಯರ್ಥಮಾಡಿ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಈ ಬಗ್ಗೆ ಒಂದು ಒಮ್ಮತವಾದ ತೀರ್ಮಾನಕ್ಕೆ ಬರುವುದಕ್ಕೆ ಅನುಕೂಲವಾಗುವಂತೆ ಈ ಠರಾವನ್ನು ಸರ್ವ ಸಮ್ಮತವಾದ ರೀತಿಯಲ್ಲಿ ಈ ಮಾನ್ಯ ಸಭೆಯವರು

ಅಂಗೀಕರಿಸಬೇಕೆಂದು ನಾನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಹಿಂದೆ 1929ರಲ್ಲಿ ಪಂಡಿತ ಮೋತಿಲಾಲ್ ನೆಹರೂ ಅವರ ಮುಖಂಡತ್ವದಲ್ಲಿ ಎ.ಐ.ಸಿ.ಸಿ. ಯವರು ಒಂದು ಸಮಿತಿಯನ್ನು ರಚಿಸಿ, ನಮ್ಮ ದೇಶವನ್ನು ಭಾಷಾವಾರು ಪ್ರಾಂತಗಳಾಗಿ ವಿಂಗಡಿಸುವ ಬಗ್ಗೆ ಅದರ ಅಭಿಪ್ರಾಯವನ್ನು ತಿಳಿಸುವಂತೆ ಆದೇಶವಿತ್ತರು. ಅವರು ಈ ನಮ್ಮ ದೇಶವನ್ನು ಭಾಷಾವಾರು ಪ್ರಾಂತಗಳಾಗಿ ವಿಂಗಡಿಸುವ ಬಗ್ಗೆ ಅವರು ಕೊಟ್ಟಂತಹ ಶಿಫಾರಸ್ಸುಗಳನ್ನು ಎ.ಐ.ಸಿ.ಸಿ. ಯವರು ಅಂಗೀಕರಿಸಿದರು. ಆಮೇಲೆ 1949ನೇ ಇಸವಿಯಲ್ಲಿ ಜೆ. ವಿ. ಪಿ. ಸಮಿತಿಯನ್ನು ಪಂಡಿತ ನೆಹರುರವರ ಮುಖಂಡತ್ವದಲ್ಲಿ ರಚಿಸಿ ಆಗ ಮೋತಿಲಾಲ್ ನೆಹರು ಸಮಿತಿಯ ವರದಿಯ ಪುನರ್ ಪರಿಶೀಲನೆ ಮಾಡಿ ಭಾಷಾವಾರು ಪ್ರಾಂತಗಳನ್ನು ರಚನೆ ಮಾಡತಕ್ಕ ನೀತಿಯಲ್ಲಿ ಬದಲಾವಣೆಯಾಗಬೇಕೆ ಎಂಬುದನ್ನು ಪರಿಶೀಲಿಸುವ ಬಗ್ಗೆ ಅದೇಶವಿತ್ತರು. ಈ ಸಮಿತಿಯು ಆಗ ಇರುವ ಪರಿಸ್ಥಿತಿಗೆ ಅನುಗುಣವಾಗಿ ಭಾಷಾವಾರ ಪ್ರಾಂತ ರಚನೆಗೆ ಇದು ತಕ್ಕ ಸಮಯವಲ್ಲಾ ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿತು. 1954ನೇ ಇಸವಿಯಲ್ಲಿ ಆಂಧ್ರ ಭಾಷಾವಾರು ಪ್ರಾಂತ ಆಗಲೇಬೇಕೆಂದು ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡಿ ಅವರು ಭಾಷಾವಾರು ಪ್ರಾಂತವನ್ನ ರಚನೆ ಮಾಡಿಸಿದರು. ಅನಂತರ 1954ನೇ ಇಸವಿಯಲ್ಲಿ ಕೇಂದ್ರ ಸರ್ಕಾರದವರು ಎಸ್. ಆರ್. ಸಿ. ಸಮಿತಿಯನ್ನು ನೇಮಕ ಮಾಡಿದರು. ಆಮೇಲೆ ಆ ಸಮಿತಿಯವರಿಗೆ ದೇಶಾದ್ಯಂತ ಹೋಗಿ ಭಾಷಾವಾರು ಪ್ರಾಂತವನ್ನು ಯಾವರೀತಿ ಅನುಷ್ಠಾನಕ್ಕೆ ತರಬಹುದೆಂದು ಸೂಚಿಸುವಂತೆ ಆದೇಶ ಇತ್ತರು. ಆ ಸಮಿತಿಯವರು ಭಾಷಾವಾರು ಪ್ರಾಂತದ ಬಗ್ಗೆ ಜನತೆಯ ಅಭಿಪ್ರಾಯ ಸಂಗ್ರಹಿಸುವಾಗ ದಕ್ಷಿಣ ಕನ್ನಡ ಜಿಲ್ಲೆಗೂ ಒಂದು ಜನತೆಯ ಅಭಿಪ್ರಾಯವನ್ನು ಪಡಕೊಂಡರು. ಆ ಕಾಲದಲ್ಲಿ ಈಗ ಈ ಸಭೆಯ ಮಾನ್ಯ ಅಧ್ಯಕ್ಷರಾಗಿರುವ ಶ್ರೀಮಾನ್ ಬಿ. ವೈಕುಂಠ ಬಾಳಿಗಾ ಅವರೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯ ಮುಖಂಡರಾಗಿದ್ದರು. ಅವರು ಮತ್ತು ಇನ್ನೂ ಕೆಲವು ಮಂದಿ ಕೂಡ ಕಾಸರಗೋಡು ಮೈಸೂರಿಗೆ ಬರಬೇಕೆಂದೂ-ತಾಂಘನಗೌಡ ನಿಂದತ್ರಿತರಪುರದವರೆಗೆ ಕೇರಳಕ್ಕೆ ವರ್ಗಾಯಿಸಬಹುದೆಂದೂ ಅಭಿಪ್ರಾಯ ಎಸ್. ಆರ್. ಸಿ. ಕಮಿಟಿಯವರ ಮುಂದೆ ಅವರು ನಮ್ಮ ಅಭಿಪ್ರಾಯನ್ನು ಇಟ್ಟರು ಆಗ ಎಸ್.ಆರ್.ಸಿ. ಕಮಿಟಿಯವರು ನಮ್ಮ ಕೇಳಿಕೆಯನ್ನು ನ್ಯಾಯವಾದದ್ದು ಎಂದು ಒಪ್ಪಿಕೊಂಡಿದ್ದಾರೆ. ಕಂಜನಗೂಡು, ನೀಲೇಶ್ವರ ಮುಂತಾದ ಪ್ರದೇಶಗಳು ಕೇರಳಕ್ಕೆ ಹೋಗಬಹುದು ಎಂದು ನಾವು ಅಭಿಪ್ರಾಯ ನೊಡುವುದು ವಿನಹಾ ಆ ಪ್ರದೇಶದ ಜನತೆ ಕೇರಳ ಸೇರ್ಪಡೆ ಬಗ್ಗೆ ಆತುರವಾಗಿ ಇರಲಿಲ್ಲ. ಕೇರಳದ ಮುಂಖಡರಾದ ಶ್ರೀ ಕೇಳಪ್ಪನ್‌ಅವರು ಗೋಕರ್ಣದವರೆಗೂ ಕೇರಳಕ್ಕೆ ಬರಬೇಕೆಂದು ತಮ್ಮ ವಾದವನ್ನು ಎಸ್.ಆರ್.ಸಿ. ಕಮಿಟಿಯವರ ಮುಂದೆ ಇಟ್ಟಿದ್ದಾರೆ. ನಾವು ಯಾವ ಕಾಲಕ್ಕೂ ಕೂಡ ಇಂಥಾ ಒಂದು ವಾದವನ್ನು ಎಸ್.ಆರ್.ಸಿ. ಕಮಿಟಿಯವರ ಮುಂದೆ ಇಡಲಿಲ್ಲ. ನಾವು ವಾಸ್ತವವಾಗಿ ಇದ್ದಂತಹ ಸಮಸ್ಯೆಗಳನ್ನು ಅವರ ಮುಂದೆ ಇಟ್ಟಿದೇವೆ. ಸರ್‌ದಾರ್ ಫಣಿಕರ್ ಅವರೂ ಕೂಡ ನಮ್ಮ ಕೇಳಿಕೆಯ ವಿಷಯದಲ್ಲಿ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರೆ, ಅಲ್ಲದೆ ಚಂದ್ರಗಿರಿ ನದಿಯನ್ನು ನಾಯರ ಮತದವರು ದಾಟಿದರೆ ಅವರ ಜಾತಿಯನ್ನು ಅವರು ಕಳಕೊಳ್ಳುತ್ತಾರೆ ಎಂಬ ವಿಷಯವನ್ನು ನಮ್ಮ ಮಾನ್ಯ ಅಧ್ಯಕ್ಷರಿಗೂ ನೆನಪು ಇರಬೇಕು. ಹಿಂದೆ ವಿಜಯನಗರ ಇಕ್ಕೇರಿ ರಾಜರುಗಳ ಕಾಲದಲ್ಲಿ ಪ್ರದೇಶಗಳು-ತ್ರಿಕರಪುರವರೆಗೆ ಮೈಸೂರಿನ ವಿಭಾಗಗಳಾಗಿದ್ದುವು ಹಿಂದೆ ಟಿಪ್ಪೂಸುಲ್ತಾನನ ಕಾಲದಲ್ಲಿ ಬೇಕಾಲಿನಲ್ಲಿ ಕೋಟೆಯನ್ನು ರಚಿಸಿದ್ದು ಈಗಲೂ ಕಾಣುವುದು ಅಲ್ಲದೆ ಇಕ್ಕೇರಿ ರಾಜರುಗಳ ಕಾಲದಲ್ಲಿ ಕಾಂಜ್ಞನ ಕಾಲದಲ್ಲಿ ರಚಿಸಿದ್ದ ಕೋಟೆ ಇಗಲೂ ಇದೆ. ಹೀಗಿದ್ದರೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮುಖಂಡರು ಚಂದ್ರಗಿರಿ ನದಿಯ ಉತ್ತರಕ್ಕಿರುವ ಕಾಸರಗೋಡಿನ ಕನ್ನಡ ಪ್ರದೇಶಗಳು ಮಾತ್ರ ನ್ಯಾಯವಾಗಿ ಕನ್ನಡ ರಾಜ್ಯಕ್ಕೆ ಸೇರಬೇಕು ಎಂಬ ಕೇಳಿಕೆಯನ್ನು ಎಸ್.ಆರ್.ಸಿ. ಸಮಿತಿಯವರ ಮುಂದೆ ಇಟ್ಟಿದ್ದರು. ಆ ಸಮಿತಿಯವರು ನಮ್ಮ ಕೇಳಿಕೆಯನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಖಂಡಿತವಾಗಿ ಈ ವಿಷಯವನ್ನು ಶಿಫಾರಸ್ಸು ಮಾಡುತ್ತೇವೆ ಎನ್ನುವ ಭರವಸೆಯನ್ನು ಅವರು ಆ ಕಾಲಕ್ಕೆ ಕೊಟ್ಟಿದ್ದರು. ಆಮೇಲೆ 1956ನೇ ಇಸವಿಯಲ್ಲಿ ಎಸ್.ಆರ್.ಸಿ. ಸಮಿತಿಯವರ ರಿಪೋರ್ಟು ಬಂತು. ಆಗ ಕಾಸರಗೋಡು ಕೇರಳಕ್ಕೆ ಹೋಗುತ್ತದೆ ಎನ್ನುವ ವಿಷಯ ಗೊತ್ತಾಯಿತು. ಆಗ ದಕ್ಷಿಣ ಕನ್ನಡ ಜಿಲ್ಲೆಯ ಸದಸ್ಯರು ಮದ್ರಾಸ್ ಅಸೆಂಬ್ಲಿಯಲ್ಲಿ ಮತ್ತು ಕೌನ್ಸಿಲ್‌ನಲ್ಲಿ ಠರಾವುಗಳನ್ನು ತಂದು ಕಾಸರಗೋಡುಮೈಸೂರು ಸಂಸ್ಥಾನಕ್ಕೆ ಸೇರಬೇಕೆಂದು ಒತ್ತಾಯ ಪಡಿಸುವ ನಿರ್ಣಯಗಳನ್ನು ಪಾಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟರು. ಅದೇ ರೀತಿ Calicut ಡಿಸ್ಟ್ರಿಕ್ಟ್ ಬೋರ್ಡಿನವರೂ ಸಹ ನಿರ್ಣಯವನ್ನು ಪಾಸುಮಾಡಿ ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ಈ ಪ್ರದೇಶಗಳು ಮೈಸೂರಿಗೇ ಸೇರಬೇಕು ಎಂದು ನಿರ್ಣಯವನ್ನು ಪಾಸುಮಾಡಿದ್ದರು. ಕಾಸರಗೋಡಿನ 32 ಪಂಚಾಯಿತಿಗಳಲ್ಲಿ 30 ಪಂಚಾಯಿತಿಗಳು ಇದೇ ರೀತಿಯ ಠರಾವನ್ನು ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ

(ಶ್ರೀ ಎಂ. ಶ್ರೀನಿವಾಸ ನಾಯಕ್)

ಕೊಟ್ಟಿದ್ದಾರೆ. ಆಮೇಲೆ 1957ನೇ ಇಸವಿಯಲ್ಲಿ ಕೇರಳ ರಾಜ್ಯದ ಮುಖಂಡರು, ದಕ್ಷಿಣ ಕನ್ನಡದ ಮುಖಂಡರು ಮತ್ತು ಮೈಸೂರು ರಾಜ್ಯದ ಮುಖಂಡರೂ ಸೇರಿ ಮಾತನಾಡಿ ಮಂಜೇಶ್ವರ ಫಿರ್ಕಾವನ್ನು ಮೈಸೂರಿಗೆ ಬಿಟ್ಟುಕೊಡುವುದರಲ್ಲಿ ಅತಂಕವಿಲ್ಲವೆಂದು. ಕಾಸರಗೋಡ ಪ್ರದೇಶದ ಬಗ್ಗೆ ಮುಂದಕ್ಕೆ ಏಕಬರಿಸ ಬಹುದೆಂದು ನಿರ್ಣಯವನ್ನು ಕೈಕೊಂಡರು. ಆನಂತರ ಕೇಂದ್ರ ಸರ್ಕಾರದ ಶ್ರೀಮಾನ್ ಎ. ಕೆ. ಗೋಪಾಲನ್ ಮತ್ತು ನಂಬೂದ್ರಿಪಾಡ್ ಅವರೂ ಕೂಡ ಕಾಸರಗೋಡು ಮೈಸೂರಿಗೆ ಸೇರುವುದರಲ್ಲಿ ಯಾವ ಆತಂಕವೂ ಇಲ್ಲ ಎಂದು ಹೇಳಿದ್ದಾರೆ. ಹೀಗೆ ಆಗಿಂದಾಗ್ಯೆ ಅನೇಕ ಮುಖಂಡರು ಹೇಳುತ್ತಾ ಇರುವುದು ನಮಗೆ ಕೇಳಿ ಬರುತ್ತಿದೆ.

Mr. SPEAKER.—I suppose the President of the Kerala Pradesh Coagress Committee also wrote a letter, a copy of which was produced in Parliament.

Sri M. SRINIVAS NAYAK.—Yes, Sir, this fact is known to all to act.

1965ನೇ ಇಸವಿಯ ಮಧ್ಯಮಕಾಲದ ಚುನಾವಣೆಗೆ, ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯವರು, ಕಾಸರಗೋಡು ಮತ್ತು ಮಂಜೇಶ್ವರ ಎರಡೂ ಕನ್ನಡ ಪ್ರದೇಶಗಳಾಗಿರುವುದರಿಂದ ಈ ಎರಡೂ ಕಾನ್‌ಸ್ಟಿಟ್ಯುಯನ್ಸಿಗಳಲ್ಲಿ ಕನ್ನಡ ಅಭ್ಯರ್ಥಿಗಳನ್ನು ನಿಲ್ಲಿಸಬೇಕೆಂದು ಹೈಕಮ್ಯಾಂಡಿಗೆ, ಅಂದರೆ, ಆಲ್—ಇಂಡಿಯಾ ಕಾಂಗ್ರೆಸ್ ಪ್ರೆಸಿಡೆಂಟರಿಗೆ ಒಂದು ಕೇಳಿಕೆಯನ್ನು ಇಟ್ಟಿದ್ದರು. ಒಂದು ಹೆಜ್ಜೆ ಮುಂದೆ ಹೋಗಿ, ಆವಾಗ ಕೇರಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಸಿ. ಕೆ. ಗೋವಿಂದನ್ ನಾಯರ್‌ರವರು ಒಂದು ಕಾಗದವನ್ನೂ ಬರೆದಿದ್ದಾರೆ: ಆ ಕಾಗದದಲ್ಲಿ ಆ ಪ್ರದೇಶವನ್ನು ಮೈಸೂರು ಸಂಸ್ಥಾನಕ್ಕೆ ಸೇರ್ಪಡಿಸವ ಬಗ್ಗೆ ತಮ್ಮ ಆತಂಕ ಯಾವುದೂ ಇಲ್ಲ ಎಂದು ಹೇಳಿದ್ದಾರೆ. ಈ ವಿಚಾರವನ್ನು ಕೇಂದ್ರಸರಕಾರದ ಮುಂದೆಯೂ ಇಟ್ಟಿದ್ದಾರೆ. ಅದೇ ರೀತಿಯಿಂದ ಕಾಸರಗೋಡು ಮತ್ತು ಮಂಜೇಶ್ವರದಲ್ಲಿ ಕನ್ನಡ ಅಭ್ಯರ್ಥಿಗಳನ್ನು ನಿಲ್ಲಿಸಿದ್ದರು. ಮಂಜೇಶ್ವರದ ಅಭ್ಯರ್ಥಿಯು ಪ್ರಚಂಡ ಬಹುಮತದಿಂದ ಆರಿಸಿ ಬಂದಿದ್ದಾರೆ. ಕಾಸರುಗೋಡಿನಲ್ಲಿ ಕನ್ನಡ ಕಾಂಗ್ರೆಸ್ಸಿನ ಅಭ್ಯರ್ಥಿಯು 20 ಸಾವಿರ ಮತಗಳನ್ನು ಪಡೆದಿದ್ದಾರೆ. ಅಲ್ಲಿ ಮುಸ್ಲಿಮ್‌ಲೀಗ್ ಮತ್ತು ಎಡ ಕಮ್ಯೂನಿಸ್ಟರ ಬೆಂಬಲವನ್ನು ಪಡೆದ ಅಭ್ಯರ್ಥಿಯು 22 ಸಾವಿರ ಮತ ಪಡೆದಿದ್ದಾರೆ. ಜನಸಂಘ: 2,100, ರೈಟ್‌ಕಮ್ಯೂನಿಸ್ಟ: 2,000, ಜನಸಂಘದವರು ಕಾಸರ್‌ಗೋಡು ಮೈಸೂರು ಸಂಸ್ಥಾನಕ್ಕೆ ಸೇರ್ಪಡಿಸುವುದರ ಬಗ್ಗೆ ಅನುಕೂಲ ಅಭಿಪ್ರಾಯ ಇದ್ದವರು. ಆದರೆ ಅವರಿಗೆ ಒಂದು ಪರಿಸ್ಥಿತಿಯಿಂದಾಗಿ, ಆ ಪಕ್ಷ ಸ್ಪರ್ಧಿಸಬೇಕಾಯಿತಂತೆ. ಅದೇನೆಂದರೆ, ಕೇರಳದಲ್ಲಿ ಅವರ ಪಕ್ಷಕ್ಕೆ ಮಂಜೂರಾತಿ ದೊರೆಯಲಿಲ್ಲ. ಈ ಚುನಾವಣೆಯಲ್ಲಿ ಫಲತಾಂಶದಮೇಲೆ ಮಂಜೂರಾತಿ ಪಡೆಯಲಿಲ್ಲವಾದ ಕಾರಣ, ಪ್ರತ್ಯೇಕವಾಗಿ ಅಭ್ಯರ್ಥಿಯನ್ನು ನಿಲ್ಲಿಸಿದ್ದರು. ಬೇಕಾದಷ್ಟು ಮತಸಂಗ್ರಹವಾಗದ್ದರಿಂದ ಆ ಮಂಜೂರಾತಿ ದೊರೆಯಲಿಲ್ಲ. ಅವರಿಗೆ ದೊರಕಿದ ಮತಗಳಿಂದ ಕಾಸರಗೋಡು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಮೈಸೂರಿನೊಳಗೆ ಸೇರ್ಪಡೆಯಾಗುವುದಕ್ಕೆ ವಿರೋಧವಾಗಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ನಾವು ರಾಜಕೀಯವಾಗಿ ಸೋತಿದ್ದರೂ, ಭಾಷಾವಾರು ಪ್ರಾಂತ್ಯ ರಚನೆ ಧ್ಯೇಯದಲ್ಲ ನಾವು ಸೋಲಲಿಲ್ಲ; ಸೋಲುವ ಸ್ಥಿತಿಯಲ್ಲಿ ಇಲ್ಲ. ಅದರ ಬಗ್ಗೆ ಜನಾಭಿಪ್ರಾಯ ಪಡೆದು ನಾವು ಗೆದ್ದಿದ್ದೇವೆ ಎಂದು ನಾನು ಹೇಳಬಯಸುತ್ತೇನೆ. ಕಾಸರಗೋಡು ಪ್ರದೇಶದಲ್ಲಿ ಕನ್ನಡಿಗರೇ ಹೆಚ್ಚಾಗಿ ಇರುವವರು. ಅಲ್ಲಿಯ ಮುಸ್ಲಿಮರು ಮಾತನಾಡುವುದು ಮಲಯಾಳಂ ಭಾಷೆ ಅಲ್ಲ; ಅದಕ್ಕೆ ಮಲೆಯಾಳಿಲಿಪಿ ಇಲ್ಲ ಅವರ ವ್ಯಾಪಾರವೆಲ್ಲವನ್ನೂ ಕೂಡ ಮೈಸೂರಿನಲ್ಲಿ ಮಾಡುತ್ತಾ ಇದ್ದಾರೆ: ಅವರ ಸಂಬಂಧಿಗಳು ಮೈಸೂರು ರಾಜ್ಯದಲ್ಲಿ ವಿಶೇಷವಾಗಿದ್ದಾರೆ: ತುಂಕೂರು, ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕಾಸರಗೋಡು ಮುಸ್ಲಿಮರು ನೆಲಸಿದ್ದಾರೆ; ಅವರ ಎಲ್ಲ ವ್ಯಾಪಾರ ವಹಿವಾಟುಗಳೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡಿಗರೊಂದಿಗೆ ಜಾಸ್ತಿ ಇದೆಯೆ ವಿನಹ, ಯಾವ ಕಾಲಕ್ಕೂ ಕೂಡ ಮಲಬಾರ್ ಮತ್ತು ಕೇರಳದಲ್ಲಿರಲಿಲ್ಲ. ಅವರು ಮಲೆಯಾಲಂ ಭಾಷೆಯನ್ನು ಮಾತನಾಡುತ್ತಾರೆ ವಿನಹ, ಅವರು ಮಾತನಾಡುವುದು ಮಲಯಾಳಂ ಅಲ್ಲ; ಅವರಿಗೆ ಕೇರಳದ ಇತರ ಕಡೆಯವರು ಮಾತನಾಡುವ ಮಲಯಾಳಂ ಅರ್ಥವಾಗುವುದಿಲ್ಲ. ಇದು ಗೋವದಂತಿದೆ. ನಾವು ಗೋವನ್ನರು ಮಾತನಾಡುವುದು ಕೊಂಕಣಿ ಅಂತ ಹೇಳಿದರೆ, ಮಹಾರಾಷ್ಟ್ರದವರು ಮರಾಠಿ ಮಾತನಾಡುತ್ತಾರೆಂದು ಹೇಳುತ್ತಾರೆ. ಅವರು ಮರಾಠಿ ಅಂತ ಹೇಳಿದರೆ, ಮರಾಠಿಗೆ ಪ್ರತ್ಯೇಕ ಲಿಪಿ ಇಲ್ಲ. ಮರಾಠಿ ಲಿಪಿ ದೇವನಾಗರಿ. ಆದ್ದರಿಂದ ಮರಾಠಿಗೆ ಕೂಡ ಸ್ವಂತ ಲಿಪಿ ಇಲ್ಲ. ಹಿಂದಿ ಭಾಷೆಗೆ

ಕೂಡ ಸ್ವಂತ ಲಿಪಿ ಇಲ್ಲ; ಅದಕ್ಕೂ ಲಿಪಿ ದೇವನಾಗರಿ. ಕಾಸರಗೋಡಿನಲ್ಲಿ ಮಾತನಾಡುವ ಮಲಯಾಳಿಮ್ಮಿಗೆ ಇರುವ ಲಿಪಿ ಉರ್ದು; ಮಲಯಾಳಂ ಅಲ್ಲ. ಕಾಸರಗೋಡು ಮೈಸೂರಿಗೆ ಸೇರ್ಪಡೆಯಾಗಬೇಕೆಂದು ನಾವು ಮಾತ್ರ ಕೇಳುತ್ತಿಲ್ಲ; ಅಲ್ಲಿಯ ಜನತೆ ಕೇಳುತ್ತಾ ಇದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆ ಪ್ರದೇಶಕ್ಕೆ ಬಂದ ಕಾಲದಲ್ಲಿ ಎಲ್ಲ ಜನರೂ ಅವರನ್ನೂ ಸ್ವಾಗತಿಸಿದರು; ಅವರು ಅಲ್ಲಿಗೆ ಬಂದದ್ದು ಜನಗಳಿಗೆ ಬಹಳ ಸಂತೋಷವಾಯಿತು. ಅವರು ಹೋಗುವ ಇಡೀ ರೂಟನ್ನು ತಳಿರುತೋರಣಗಳಿಂದ ಜನರು ಅಲಂಕರಿಸಿದುದೆ ಅಲ್ಲದೆ; ಎಲ್ಲ ಕಡೆಗಳಿಂದ ಜನಗಳು ಬಂದು ನಮ್ಮ ಮುಖ್ಯಮಂತ್ರಿಯವರನ್ನು ಸಂದರ್ಶಿಸಿ, ಆ ಪ್ರದೇಶವನ್ನು ಮೈಸೂರಿನೊಂದಿಗೆ ಸೇರಿಸಲು ಸಹಕರಿಸಬೇಕು, ಅವರು ನಮ್ಮ ಆಡಳಿತದಲ್ಲಿ ಬೆರೆತು ಹೋಗಲು ಸಹಾಯಕರಾಗಬೇಕು ಎಂದು ಮಾತನಾಡಿ ಹೇಳಿದ್ದು ನನ್ನ ಜ್ಞಾಪಕಕ್ಕೆ ಬರುತ್ತಿದೆ. ಯಾವ ಜಾತಿ, ಪಂಗಡ, ಮತ ಭೇಧವಿಲ್ಲದೆ, ಕ್ರಿಶ್ಚಿಯನ್ನರು, ಮುಸ್ಲಿಮರು, ಮಲಯಾಳಿಗಳು, ಹಿಂದುಗಳು, ಎಲ್ಲರೂ ವಿವಿಧ ಭಾಗಗಳಿಂದ ಬಂದುಕೊಂಡು ನಮ್ಮ ಮುಖ್ಯಮಂತ್ರಿಗಳನ್ನು ಸಂದರ್ಶಿಸಿ, ನಮ್ಮ ಮುಖ್ಯಮಂತ್ರಿಯವರು ಆ ಪ್ರದೇಶವನ್ನು ಮೈಸೂರಿಗೆ ಸೇರಿಸಿಕೊಳ್ಳುವಂತೆ ಆದಷ್ಟು ಜಾಗ್ರತೆ ಕಾರ್ಯಕ್ರಮವನ್ನು ತೆಗೆದುಕೊಂಡು ವಹಿಸಿಕೊಳ್ಳಬೇಕು ಎಂದು ಕೇಳಿಕೆಯನ್ನು ಮುಂದಿಟ್ಟಿದ್ದಾರೆ. ಮಂಜೇಶ್ವರಕ್ಕೆ ಹೋದಾಗ ಆ ಪ್ರದೇಶಕ್ಕೆ ಜೋಗಿನಿಂದ ವಿದ್ಯುಚ್ಛಕ್ತಿಯನ್ನು ಕೊಟ್ಟು ಅಲ್ಲಿಯ ಕೈಗಾರಿಕೆ ಬೆಳೆಯಲು ಸಹಾಯಕರಾಗಬೇಕು ಎಂಬುದರ ಬಗ್ಗೆಯೂ ಮನವಿಯನ್ನು ಇತ್ತಿದ್ದಾರೆ. ಕೇರಳದಲ್ಲಿ ಆ ಪ್ರದೇಶ 15 ವರ್ಷಗಳಿಂದ ಇದ್ದರೂ ಕೂಡ, ಆ ಪ್ರದೇಶಕ್ಕೆ ವಿದ್ಯುಚ್ಛಕ್ತಿ ಬರದೆ ಅಲ್ಲಿಯ ವ್ಯವಸಾಯ ಬಹಳ ರೀತಿಯಿಂದ ಕಂಗಾಲಾಗಿದೆ, ಅದನ್ನು ಮೈಸೂರು ಸರಕಾರ ಪರಿಹರಿಸಬೇಕು ಎಂಬುದರ ಬಗ್ಗೆಯೂ ಕೇಳಿಕೆಯನ್ನು ನಮ್ಮ ಸರಕಾರದ ಮುಂದೆ ಇಟ್ಟಿದ್ದಾರೆ. ಹೀಗಿರುವಾಗ, ಕಾಸರಗೋಡಿನ ಜನತೆಯಲ್ಲಿ ಪ್ರತಿಯೊಬ್ಬರೂ ಕೂಡ, ಜಾತಿ ಮತ ಪಂಗಡ ಭೇಧವಿಲ್ಲದೆ ಆ ಪ್ರದೇಶವನ್ನು ನಾವು ಮೈಸೂರಿಗೆ ಸೇರಿಸಿಕೊಳ್ಳಬೇಕೆಂದು ಕೇಳಿಕೆಯನ್ನಿಟ್ಟಿರುವಾಗ ಅದನ್ನು ನೆರವೇರಿಸಿ ಕೊಡುವುದು ನಮ್ಮ ಮೈಸೂರು ಸರಕಾರದ ಕರ್ತವ್ಯ. ನಾವು, ಈ ಘನ ಸಭೆಯ ಸದಸ್ಯರು ಕೂಡ ಯಾವ ಭಿನ್ನಾಭಿಪ್ರಾಯವಿಲ್ಲದೆ ಒಮ್ಮತದ ಅಭಿಪ್ರಾಯವಿರುವ ಕಾಲದಲ್ಲಿ ಈ ಠರಾವನ್ನು ಅಂಗೀಕರಿಸಿ, ಅದನ್ನು ಕೇಂದ್ರ ಸರ್ಕಾರದ ಮೂಲಕ ಒತ್ತಾಯಮಾಡಿ, ಕಾಸರಗೋಡು ಪ್ರದೇಶವನ್ನು ಮೈಸೂರಿಗೆ ಸೇರುವಂತೆ ಮಾಡುವುದು ಅಗತ್ಯ. ಯಕ್ಷಗಾನ ಕಲೆಗೆ ಖ್ಯಾತಿಯಾದ ಶ್ರೀ ಪಾರ್ತಿಸುಬ್ಬರಿಗೆ ಜನ್ಮವಿತ್ತ ಪ್ರದೇಶ ಕುಂಬಳೆ ಈಗ ಕೇರಳದಲ್ಲಿದೆ. ಇಡೀ ಕನ್ನಡ ರಾಜ್ಯಕ್ಕೆ ಕೀರ್ತಿ ತಂದ ನಮ್ಮ ರಾಷ್ಟ್ರಕವಿ ಜನಿಸಿದ ಊರು ಮಂಜೇಶ್ವರ. ಹೀಗಿರುವಾಗ ಆ ಕನ್ನಡ ಪ್ರದೇಶಗಳು ಮೈಸೂರು ರಾಜ್ಯಕ್ಕೆ ಸೇರಬೇಕೆಂದು ಹೇಳುವುದಕ್ಕೆ ಯಾವ ಸಂದೇಹವೂ ಇರುವುದಿಲ್ಲ. ಆ ಕಾಲದಲ್ಲಿ ಕೇಂದ್ರ ಪಾರ್ಲಿಮೆಂಟಿನಲ್ಲಿ ನಮ್ಮ ಪ್ರತಿನಿಧಿಗಳಾಗಿದ್ದ ಶ್ರೀ ಬಿ. ಶಿವರಾಯರು ಮತ್ತು ಶ್ರೀ ಶ್ರೀನಿವಾಸ ಮಲ್ಯರವರು ಹೇಳುತ್ತಿದ್ದರು: ಕಾಸರಗೋಡು ಪ್ರದೇಶ ದಕ್ಷಿಣ ಕನ್ನಡ ಜಿಲ್ಲೆಗೆ ಬರತಕ್ಕಂಥಾದ್ದು ಖಂಡಿತ ಎಂತ. ಅದೆ ಸಮಯದಲ್ಲಿ ಗುಡ್ಲೂರನ್ನು ಮದ್ರಾಸಿಗೆ ಕೊಡುವ ಸಂದರ್ಭ ಬಂದು, ಕಾಸರಗೋಡು ಪ್ರದೇಶವನ್ನು ಕೇರಳಕ್ಕೆ ಕೊಡುವ ಪ್ರಶ್ನೆ ಬಂದಿತಂತೆ. ಅದು ಎಷ್ಟರಮಟ್ಟಿಗೆ ಸತ್ಯ ಮತ್ತು ಪರಿಣಾಮಕಾರಿ ಎಂದು ನನಗೆ ಹೇಳುವುದಕ್ಕೆ ಬರುವುದಿಲ್ಲ. ಅಂಥ ಒಂದು ಪ್ರಶ್ನೆ ಬರುವ ಕಾಲಕ್ಕೆ ಈ ಪ್ರದೇಶ ನಮ್ಮಿಂದ ಕೇರಳಕ್ಕೆ ಹೋಗುವ ಸಂದರ್ಭ ಬರುವುದಿಲ್ಲವೆಂದು ನಾನು ಈ ಸಮಯದಲ್ಲಿ ಭಾವಿಸುತ್ತೇನೆ. ಅದು ಯಾವ ಕಾಲಕ್ಕೂ ಸರಿಬೀಳಲಾರದು. ಜನತೆ ಕೇಳಿದರೆ ಸ್ಪಷ್ಟ ಉತ್ತರ ಬರುತ್ತದೆ. ಮುಸ್ಲಿಮರ ಮಾಧ್ಯಮ ಕನ್ನಡ. ಪ್ರತಿಯೊಬ್ಬ ಮುಸ್ಲಿಮನೂ ಕೇರಳದಲ್ಲಿ ಇಡುವ ಲೆಕ್ಕಪತ್ರಗಳು ಕನ್ನಡದಲ್ಲಿ ಆಗಿವೆ; ಕೋರ್ಟು ಭಾಷೆ ಕನ್ನಡದಲ್ಲಿದೆ; ರಿಜಿಸ್ಟ್ರೇಶನ್ ಆಫೀಸು ವ್ಯವಹಾರ ಕನ್ನಡದಲ್ಲಿದೆ. ಅದು ಎಲ್ಲ ರೀತಿಯಿಂದಲೂ ಕನ್ನಡ ಪ್ರದೇಶವಾಗಿದೆ. ಅಲ್ಲಿ ಕನ್ನಡಿಗರೇ ವಿಶೇಷವಾಗಿರುವುದರಿಂದ, ಮಲಯಾಳಿ ಪ್ರದೇಶದಲ್ಲಿ ಇರುವುದಕ್ಕೆ ಬಯಸುವುದಿಲ್ಲ. ಅಲ್ಲಿ ಕನ್ನಡ ಪಾಠಶಾಲೆಗಳಲ್ಲಿ ಕಲಿತು ಉತ್ತೀರ್ಣರಾದ ಮಕ್ಕಳಿಗೆ, ಸರಕಾರದಲ್ಲಿ ಉದ್ಯೋಗಕ್ಕೆ ಅಷ್ಟು ತರಹ ಸದವಕಾಶವಿಲ್ಲ, ಅವರಿಗೆ ಹೈಯರ್ ಎಜುಕೇಶನ್ನಿಗೆ ಕೂಡ ತುಂಬ ಕಷ್ಟವಿದೆಯೆಂದು ಮೈಸೂರು ಸರ್ಕಾರದ ಕಡೆಗೆ ಮನವಿ ಬಂದು, ಅಲ್ಲಿಯವರುಗಳನ್ನು ಇಲ್ಲಿ ಕಾಲೇಜುಗಳಿಗೆ ಸೇರಿಸಿಕೊಳ್ಳುವ ಬಗ್ಗೆ ಅಗತ್ಯವಿದೆ ಎಂದು ಕಂಡು ಬಂದು. ಇಲ್ಲಿಯ ರೂಲ್ಸನ್ನು ರಿಲ್ಯಾಕ್ಸ್ ಮಾಡುವಂಥ ಅಗತ್ಯ ಬಿದ್ದಿತು. ಹೀಗಿರುವಾಗ, ಈ ಠರಾವು ಯಾವ ಕಾಲಕ್ಕೂ ಕೂಡ ಕನ್ನಡದವರದಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಜನಗಳು ಸತ್ಯ ಸಂಧತೆಯ ಮೇಲೆ ಹೋದದ್ದರಿಂದ ಇಷ್ಟು ಕಷ್ಟವನ್ನು ಆ ಜನತೆ ಹೊರಬೇಕಾಯಿತು ಎಂದು ವಿಷಾದಪಡಬೇಕಾಗಿದೆ.

ಮೈಸೂರಿನಲ್ಲಿ 22 ಸಾವಿರ ಸ್ಕೈಯರ್ ಮೈಲಿಗಳಲ್ಲಿ 22 ಮಿಲಿಯನ್ ಜನರಿದ್ದಾರೆ; ಒಂದು ಸ್ಕೈಯರ್ ಮೈಲಿಗೆ 250 ಜನ ಅಂತ ಲೆಕ್ಕ ಹಾಕಿಕೊಂಡಿದ್ದಾರೆ. ಅದೇ ರೀತಿಯಿಂದ, ಕೇರಳದಲ್ಲಿ 13 ಸಾವಿರ ಸ್ಕೈಯರ್ ಮೈಲಿಗೆ 13 ಮಿಲಿಯನ್ ಜನರಿದ್ದಾರೆ. ಒಂದು ಚದುರ ಮೈಲಿಗೆ

(ಶ್ರೀ ಎಂ. ಶ್ರೀನಿವಾಸ ನಾಯಕ್)

1 ಸಾವಿರ ಜನ ಅಂತ ಲೆಕ್ಕ ಇಟ್ಟುಕೊಂಡಿದ್ದಾರೆ ಹೀಗಿರುವಾಗ ಕಾಸರಗೋಡು ದಕ್ಷಿಣ ಕನ್ನಡ ಜಿಲ್ಲೆಯಮೇಲೆ ಆಹಾರಕ್ಕೆ ಅವಲಂಬಿಯಾಗಿದೆ ಇಂದು ಹೇಳಿದರೆ ತಪ್ಪಾಗಲಾರದು. ಹೀಗಿರತಕ್ಕ ಕಾಲದಲ್ಲಿ ಅದರ ಆಹಾರದ ಪರಿಸ್ಥಿತಿಯು ವ್ಯವಸ್ಥೆ ದಕ್ಷಿಣ ಕನ್ನಡ ಜಿಲ್ಲೆಯ ಜವಾಬ್ದಾರಿಯಾಗಿದೆ. ಆದರೆ ಈಗ ಸ್ಟೇಟ್-ಟು-ಸ್ಟೇಟ್ ಮೂವ್‌ಮೆಂಟ್ ಕಂಟ್ರೋಲ್ ಇರುವುದರಿಂದ ನಮ್ಮ ಬಂಧು ಬಾಂಧವರಾದ, ಕೇರಳದಲ್ಲಿ ಕಾಸರಗೋಡು ಮತ್ತು ಮಂಜೇಶ್ವರದಲ್ಲಿರುವ ಜನತೆಗೆ, ನಮ್ಮ ಜಿಲ್ಲೆಯಿಂದ ಆಹಾರ ಒದಗಿಸಿಕೊಡಲಿಕ್ಕೆ ಸಾಧ್ಯವಾಗದ ಪರಿಸ್ಥಿತಿ ಇದೆ.

12-00 NOON.

ಅವರು ಬಹಳ ಕಷ್ಟಪಡುತ್ತಿದ್ದಾರೆ. ನಾನಾಗಲೇ ಹೇಳಿದಂತೆ ಸುಮಾರು 13 ಸಾವಿರ ಚದರ ಮೈಲಿಗಳಷ್ಟು ಇರುವ ಪ್ರದೇಶದಲ್ಲಿ ಸುಮಾರು 13 ಮಿಲಿಯನ್ನಷ್ಟು ಜನತೆ ಇರುವುದರಿಂದ ಇವರೆಲ್ಲಾ ಹೆಚ್ಚಾಗಿ ಕೃಷಿ ಅಭಿವೃದ್ಧಿ ಇತ್ಯಾದಿಗಳ ಸಹಾಯಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಯಸಂಪರ್ಕವನ್ನೇ ಬಳಸುತ್ತಿದ್ದಾರೆ. ಇಲ್ಲಿರುವ ಜನತೆಯೆಲ್ಲಾ ಕನ್ನಡದಲ್ಲಿಯೇ ಮಾತನಾಡುತ್ತಿದ್ದಾರೆ ಅವರ ಬಂಧು ಬಾಂಧವ್ಯಗಳೆಲ್ಲಾ ಕನ್ನಡಿಗರೊಡನೆಯೇ ಆಗುತ್ತದೆ. ಅವರನ್ನೆಲ್ಲಾ ದಕ್ಷಿಣ ಕನ್ನಡ ಜಿಲ್ಲೆಗೇ ಸೇರಿಸಬೇಕೆಂದು ನನ್ನ ಅಭಿಪ್ರಾಯ. ಅಲ್ಲದೇ ಅಲ್ಲಿರುವ ಜನರೂ ಕೂಡ ಯಾವಾಗ ಅವರ ಅಭಿಪ್ರಾಯಗಳನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯೊಳಗೆ ಸೇರಬೇಕೆಂದು ಹೇಳುತ್ತಾರೋ ಅವರು ಹೇಳುವ ಅಭಿಪ್ರಾಯಗಳಿಗೆ ಮನ್ನಣೆ ಕೊಟ್ಟು ಅವರನ್ನೂ ನಮ್ಮ ಪ್ರಾಂತಕ್ಕೆ ಸೇರಿಸಿಕೊಳ್ಳಬೇಕಾದುದು ನಮ್ಮ ಕರ್ತವ್ಯವಾಗಿದೆ. ಹೀಗಿರುವಾಗ ನಾವು ಇಂತಹ ಒಂದು ಪ್ರಶ್ನೆಯನ್ನು ಯಾವ ಬೇರೆ ಒಂದು ಪ್ರಶ್ನೆಗೂ ಹೊಂದಾಣಿಕೆ ಮಾಡುವುದಕ್ಕೆ ಬರುವುದಿಲ್ಲ. ಈ ಕಾಸರಗೋಡು ವಿಂಗಡಣೆ ಪ್ರಶ್ನೆಯನ್ನೂ ಪರಿಶೀಲಿಸಬೇಕು ಎಂದು ಒತ್ತಾಯಪಡಿಸುವುದರಲ್ಲಿ ನಾನೂ ಒಬ್ಬನಾಗಿದ್ದೇನೆ. ಇತರ ಪ್ರಶ್ನೆಗಳು ಇದ್ದರೂ ಆ ಪ್ರಸಂಗಗಳನ್ನು ಸಣ್ಣ ಪುಟ್ಟ ಹೊಂದಾಣಿಕೆಗಳಾಗಿದ್ದರೆ ಅವನ್ನು ಬಗೆಹರಿಸುವುದಕ್ಕೆ ಬರುತ್ತದೆ ಎಂದು ಮುಖ್ಯ ಮಂತ್ರಿಗಳು ಈಗಾಗಲೇ ವಿವರಣೆಯನ್ನು ಕೊಟ್ಟಿದ್ದಾರೆ. ಯಾವ ಕಾಲಕ್ಕೇ ಆಗಲೀ ಬೌಂಡರಿಗಳಲ್ಲಿರುವ ಜನಗಳ ಮಾತುಕತೆಗಳೊಳಗೆ ಸೇರಿಸುವಂತೆ ಈ ಕಾಸರಗೋಡಿನ ಪ್ರಶ್ನೆಯನ್ನು ಸೇರಿಸಲಿಕ್ಕೆ ಯಾವ ಹೊಂದಾಣಿಕೆಯೂ ಬರುವುದಿಲ್ಲ. ಕಾಸರುಗೋಡು ಪ್ರಶೆಯನ್ನು ಬಗೆಹರಿಸಲಿಕ್ಕೆ ಮೊದಲು ಏರ್ಪಾಡು ಮಾಡಬೇಕು. ಈ ಪ್ರಶ್ನೆ ಬಹಳ ಮುಖ್ಯವಾದದ್ದು ಮತ್ತು ಖಂಡಿತವಾಗಿ ಬಗೆಹರಿಸುವುದು ಅಗತ್ಯ ಎಂದು ಹೇಳಬಲ್ಲೆ. ಇಲ್ಲಿರುವ ಜನಕ್ಕೆ ವ್ಯಾಪಾರದ ಸೌಕರ್ಯಗಳನ್ನು ಇತರ ಸಹಾಯಗಳನ್ನು ಪಡೆಯಬೇಕಾದರೆ ಇವರು ದಕ್ಷಿಣ ಕನ್ನಡ ಜನತೆಯ ಮೇಲೆ ಅವಲಂಬಿಸಿದ್ದಾರೆ. ಇಲ್ಲಿ ಬೆಳೆಯುವ ಅಡಕೆ ಮತ್ತು ಅದರ ಮಾರಾಟಕ್ಕೆ ದಕ್ಷಿಣ ಕನ್ನಡ ಜಿಲ್ಲೆಗೆ ಹೊಗಬೇಕು ಮತ್ತು ಮಂಗಳೂರಿಗೆ ಹೋಗಿ ಅಲ್ಲಿಂದ ರಫ್ತು ಮಾಡಬೇಕು. ಈ ಜಿಲ್ಲೆಯಿಂದ ಆಹಾರ ಧಾನ್ಯಗಳು ಬರಬೇಕಾದರೂ ದಕ್ಷಿಣ ಕನ್ನಡ ಜಿಲ್ಲೆಯಿಂದಲೇ ಬರಬೇಕು. ಪ್ರತಿಯೊಂದಕ್ಕೂ ಇಲ್ಲಿರುವ ಜನರ ದಕ್ಷಿಣಕನ್ನಡ ಜಿಲ್ಲೆಯವರೊಡನೆ ಸೇರಿಕೊಂಡು ಸ್ವಾಲಂಬನೆಮಾಡಿಕೊಳ್ಳುತ್ತಿದ್ದಾರೆ. ಇವರೆಡು ಪ್ರದೇಶಗಳ ಅಭಿವೃದ್ಧಿಯ ದೃಷ್ಟಿಯಿಂದ ಕಾಂಟಿಗ್ಯೂಯಿಟಿದ ದೃಷ್ಟಿಯಿಂದ ಇಲ್ಲ ಎಲ್ಲ ರೀತಿಯಾದ ಅಡ್ಮಿನಿಸ್ಟ್ರೇಟೀವ್ ಡಿಫಿಕಲ್ಟ್‌ಸ್‌ಗಳು ಬರುತ್ತದೆ ಎಂದು ಇಲ್ಲಿ ಹೇಳಬಯಸುತ್ತೇನೆ. ಗೋವಾದಲ್ಲಿ ಕೂಡ ಕನ್ನಡಿಗರು ಸಾಕಷ್ಟು ಕನ್ನಡ ಮಾತನಾಡುವವರು ಇದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತನಾಡುವ ಜನರಂತೆ ಕೊಂಕಣಿ ಭಾಷೆ ಮಾತನಾಡುವ ಜನರು ಇಲ್ಲಿಯೂ ಇದ್ದಾರೆ. ನಾನು ಆಗಲೇ ಹೇಳಿದ ಹಾಗೆ ಗೋವಾದವರಿಗೂ ಇಲ್ಲಿಯವರಿಗೂ ಉತ್ತಮ ಸಂಬಂಧ ಬೆಳೆದುಕೊಂಡು ಬಂದಿದೆ. ಈ ಪ್ರಸಂಗಗಳನ್ನು ಅತಿತ್ವರಿತದಿಂದ ಬಗೆಹರಿಸುವುದು ನಮ್ಮ ಕರ್ತವ್ಯ. ಬರುವ ಚುನಾವಣೆಯಲ್ಲಿ ಇದಕ್ಕೆ ಅಪಕಾರವಾಗಬಹುದು ಮತ್ತು ಮಹಾರಾಷ್ಟ್ರಕ್ಕೆ ಸೇರದೇ ಹೋಗಬಹುದು ಎಂದು ಈಗಲೇ ಆ ಗೋವಾವನ್ನು ಮಹಾರಾಷ್ಟ್ರಕ್ಕೇ ಸೇರಿಸಬೇಕು ಮತ್ತು ಇದೇ ಬರುವ ವರ್ಷದ ಅಸೆಂಬ್ಲಿಯಲ್ಲೇ ಒಂದು ನಿರ್ಣಯದ ಮೂಲಕ ಮಹರಾಷ್ಟ್ರಕ್ಕೇ ಸೇರಿಸಬೇಕು ಎಂದು ವಾದ ಮಾಡುವುದು ಸರಿಯಲ್ಲ. ಜನತೆಗೆ ಅವರ ಅಭಿಪ್ರಾಯ ವ್ಯಕ್ತಪಡಿಸುವುದಕ್ಕಾಗಿ ಒಂದು ಸಂದರ್ಭವನ್ನು ಒದಗಿಸಿಕೊಡುವುದು ಸರಕಾರದ ಕರ್ತವ್ಯ. ಹಾಗಾಗುವುದಕ್ಕೆ ಎಲ್ಲ ವಿಷಯಗಳನ್ನೂ ಚರ್ಚಿಸಿ ಗೋವಾ ಪ್ರಾಂತವನ್ನು ಎಲ್ಲಿಗೆ ಸೇರಿಸಬೇಕು ಅಥವಾ ಬೇಡವೇ ಎನ್ನುವುದಕ್ಕೆ ಪ್ರತಿಯೊಬ್ಬರೂ ಸೂಕ್ತವಾದ ಪರಿಹಾರಗಳನ್ನು ಕಂಡು ಹಿಡಿದು ಅದರ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಮಾಡುವುದು ನಮ್ಮ ಕರ್ತವ್ಯವಾಗಿದೆ. ಇದು ತುಂಬಾ ಎಡರು ತೊಡರುಗಳ ಪ್ರಶ್ನೆಯೇನಲ್ಲ. ನಮ್ಮ ಮುಂದೆ ಬಹಳ ಸಡಿಲವಾದ ಮತ್ತು ಸೊಗಸಾದ ಪ್ರಶ್ನೆ ಮತ್ತು ಬಿಡಿಸಬಹುದಾಗಿದೆ. ಇದಕ್ಕಾಗಿ ಈ ಸಭೆಯಲ್ಲಿ ನಿರ್ಣಯವನ್ನು ಮಂಡಿಸಿ ಚರ್ಚಿಸುವುದು ಸೂಕ್ತವಾದುದು ಎಂದು ತಮ್ಮ ಮುಂದೆ

ಇಟ್ಟಿದ್ದೇನೆ. ಇದನ್ನು ಈ ಸಭೆಯವರು ಸರ್ವಾನುಮತವಾಗಿ ಅಂಗೀಕರಿಸಿ ಅದರ ಬಗ್ಗೆ ಮುಂದಿನ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಸರಕಾರವನ್ನು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—That portion which the Hon. Member recommends for merger, is a part of Tulunad; is it so ?

Sri M. SRINIVASA NAIK.—This portion in question is a part of Tulunad. Tulu is a language speaken. Konkani is a spoken language. Malayalam is spoken and it has script. Malayalam is distinctly different from the Malayalam spoken in Kerala. Malayalam spoken in Kasargod is quite different and has Urdu script.

Mr. SPEAKER.—Kannada people are predominantily there towards north of Chandragiri River.

Sri M. SRINIVASA NAIK.—Sir, you know the full details, because you are one of the leaders who lead the delegation to meet Sardar Panickar. The Court language is Kannada in Kasargod. Even Muslims there are interested in using Kannada. Even medium of instruction in Kasargod is Kannada. But in higher education, the boys studied with Kannada as medium of instruction find it difficult to get admission to the Colleges there. This difficulty was solved and about 200 boys of P.U.C. have been admitted in the Mysore Colleges. Such difficulties are there even in regard to employment for these people. They are very much handicapped. That is why the people of Kasargod and the leaders of the South Kanara have urged the State Re-organisation Commission to merge the Kannada areas of Kasargod lying north of Chandragiri River. Kerala people wanted the areas upto Gokarna. Kannadigas have got industrial concerns even in Cochin. But our people are not avericious people. We never attempt to grab any more areas, but we will try to get what is legitimately due to Kannadigas.

Mr. SPEAKER.—Amendment of Sri Keshava Murthy.

Sri H. R. KESHAVA MURTHY.—I beg to move :

"That in line 4 after the words 'Kerala State' add the words 'Adoni and other Kannada areas of Andhra Pradesh'.".

Mr. SPEAKER.—Amendment moved :

"That in line 4 after the words 'Kerala State' add the words 'Adoni and other Kannada areas of Andhra Pradesh'.".

†ಶ್ರೀ ಹೆಚ್. ಆರ್. ಕೇಶವ ಮೂರ್ತಿ.—ಸ್ವಾಮಿ, ಈಗತಾನೇ ಶ್ರೀಮಾನ್ ಶ್ರೀನಿವಾಸ ನಾಯಕ್‌ರವರು ಕಾಸರಗೋಡಿನ ವಿಷಯದಲ್ಲಿ ಸಂಪೂರ್ಣವಾದ ವಿವರಣೆಗಳನ್ನು ಕೊಟ್ಟಿದ್ದಾರೆ. ನಾನು ಆ ವಿಷಯದಲ್ಲಿ ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ ಮತ್ತು ಅವರು ತಂದಿರುವ ನಿರ್ಣಯವನ್ನು ಸಂಪೂರ್ಣವಾಗಿ ಸಮರ್ಥಿಸುತ್ತಾ ಅದರ ಜೊತೆಯಲ್ಲಿ ಈಗ ಆಂಧ್ರ ಪ್ರದೇಶದಲ್ಲಿ ಸೇರಿರತಕ್ಕ ಅದೋನಿ, ಮಡಕಸಿರಾ ಮತ್ತು ಅದರ ಅಕ್ಕಪಕ್ಕದ ಪ್ರದೇಶಗಳು ಅದರಲ್ಲೂ ಹೆಚ್ಚು ಕನ್ನಡ ಮಾತನಾಡುವ ಭಾಗಗಳನ್ನು ನಮ್ಮ ದೇಶಕ್ಕೆ ಸೇರಿಸಬೇಕೆಂದು ಸಲಹೆ ಮಾಡುತ್ತೇನೆ. ನಾನೂ ಈಚೆಗೆ ಆ ಪ್ರದೇಶಗಳಲ್ಲಿ ಹೋಗುವ ಸನ್ನಿವೇಶ ಒದಗಿತ್ತು. ಅಲ್ಲಿ ನಾನು ನೋಡುವಾಗ ಕನ್ನಡ ಮಾತನಾಡುವವರಿಗೆ ಯಾವ ತರಹದ ರಕ್ಷಣೆ ಮತ್ತು ಶಾಲಾ ಸೌಕರ್ಯಗಳೂ ಇಲ್ಲದಂತೆ ಇವೆ. ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಕನ್ನಡ ಮಾತನಾಡತಕ್ಕ ಜನರು ಅಧಿಕವಾಗಿದ್ದರೆ ಅವರಿಗಾಗಿ ಒಂದು

(ಶ್ರೀ ಎಚ್. ಆರ್. ಕೇಶವಮೂರ್ತಿ)

ಪ್ರೈಮರಿ ಶಾಲೆಯೂ ಕೂಡ ಇರಲಿಲ್ಲ. ಮನೆಯೊಳಗೆಲ್ಲಾ ಅವರು ಕನ್ನಡ ಮಾತನಾಡುತ್ತಾರೆ. ಹೀಗಿರುವ ಕನ್ನಡಿಗರಿಗೆ ಇಲ್ಲಿ ಯಾವ ತರಹದ ಸಹಾಯಗಳೂ ಇಲ್ಲದಂತಾಗಿದೆ. ಅದೋನಿ ಬಹಳ ಮುಖ್ಯವಾದ ವ್ಯಾಪಾರ ಸ್ಥಳ. ಅದು ಒಂದು ಇಂಡಸ್ಟ್ರಿಯಲ್ ಸೆಂಟರ್. ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಎಲ್ಲ ಜನಗಳಿಗೂ ಕನ್ನಡ ಬರುತ್ತದೆ. ಆದರೆ ಇಲ್ಲಿ ಒಂದೇ ಒಂದು ಕನ್ನಡ ಹೈಸ್ಕೂಲೂ ಇಲ್ಲ. ಕನ್ನಡದಲ್ಲಿ ವಿದ್ಯಾಭ್ಯಾಸ ಪಡೆಯುವ ಈ ಜನಕ್ಕೆ ಯಾವ ವಿದ್ಯಾ ಸಂಸ್ಥೆಗಳೂ ಇಲ್ಲ ಎಂದು ಈ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಮಡಕಶಿರದಲ್ಲಿ ಕೂಡ ಅದೇ ರೀತಿ ಇದೆ. ಕನ್ನಡ ಮಾತನಾಡತಕ್ಕಂಥ ಜನ ಹಿತ ರಕ್ಷಣೆ ಇಲ್ಲದೇ ಇದ್ದರೆ ಇದು ಕನ್ನಡ ರಾಜ್ಯ ಎಂದು ಹೇಗೆ ಹೇಳಿಕೊಳ್ಳುವುದಕ್ಕೆ ಆಗುತ್ತದೆ? ಕನ್ನಡ ಮಾತನಾಡುವವರ ಹಿತ ರಕ್ಷಣೆಗಾಗಿ ಈ ರಾಜ್ಯ ರಚನೆಯಾಗಿದೆ ಅಲ್ಲವೇ? ಆದುದರಿಂದ ಈಗಲಾದರೂ ಸರಕಾರ ಈ ಕಡೆ ಗಮನ ಕೊಟ್ಟು ಸರ್ವ ಪ್ರಯತ್ನ ಮಾಡಿ ಕಾಸರಗೋಡು ಹೇಗೆ ಸೇರಬೇಕೋ ಅದೇ ರೀತಿ ಅದವಾನಿ ಮಡಕಶಿರ ಕೂಡ ನಮ್ಮ ರಾಜ್ಯಕ್ಕೆ ಸೇರಬೇಕು ಅದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಅಲ್ಲಿಯವರೆಗೆ ಅಲ್ಲಿರುವ ಕನ್ನಡ ಮಾತನಾಡತಕ್ಕಂಥ ಜನರಿಗೆ ಏನೇನು ಸೌಲಭ್ಯಗಳನ್ನು ಒದಗಿಸಬೇಕಾಗಿದೆಯೋ ಅವುಗಳನ್ನು ಆಂಧ್ರ ರಾಜ್ಯದವರು ಅವರಿಗೆ ಒದಗಿಸಿ ಕೊಡುವಂತೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕನ್ನಡ ಮಾತನಾಡತಕ್ಕಂಥ ಪ್ರದೇಶವು ನಮ್ಮ ರಾಜ್ಯಕ್ಕೆ ಸೇರುವಂತೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕು. ಕಾಸರಗೋಡು ಕರ್ನಾಟಕ ಪ್ರಾಂತಕ್ಕೆ ಸೇರಿಸಬೇಕು. ಅದೇ ರೀತಿ ಕನ್ನಡ ಮಾತನಾಡತಕ್ಕಂಥ ಬೇರೆ ಪ್ರದೇಶ ಇದ್ದರೆ ಅದನ್ನೂ ಕೂಡ ಸೇರಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

Mr. SPEAKER.—The resolution is on the ground of Kannada language being common in the areas put here. But, I believe this relates to Andhra Pradesh while the previous matter relates to Kerala State. It can be a very good matter for another Resolution. Is Sri H. R. Keshavamurthy keen on having an amendment here?

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಕರ್ನಾಟಕ ಪ್ರಾಂತ ಸ್ಥಾಪನೆ ಮಾಡಿರುವುದರ ಉದ್ದೇಶ ಏನು ಅಂದರೆ ಕನ್ನಡ ಮಾತನಾಡತಕ್ಕವರ ಏಕೀಕರಣವಾಗಬೇಕು ಎಂದಿದೆ. ಅದುದರಿಂದ ಕಾಸರಗೋಡು ನಮಗೆ ಸೇರಬೇಕು ಎಂದು ಹೇಳುತ್ತೇನೆ.

Mr. SPEAKER.—Are we going to put the Resolution to the Vote of the House to-day or do the Members want to take it on some other day?

Some HON'BLE MEMBERS.—Some other day, Sir.

Mr. SPEAKER.—What purpose will it serve? So many Members are there willing to participate and I am half inclined to think that it is better for you to have a separate Resolution as is done here. So far as this area is concerned, Madras or Central Government will have to deal with Kerala and Andhra. What is the harm in having them separately? It is open for being withdrawn.

Sri H. R. KESHAVA MURTHY.—The aspects of the case are similar. However, I leave it to the descretion of the Chair. Unanimously, Kerala and Mysore Congress Committees have agreed that this area may come to our State, and now if negotiations were to start it will take a long time.

Mr. SPEAKER.—I should not have allowed it at all.

Sri H. R. KESHAVA MURTHY.—I am prepared to withdraw my amendment, Sir.

The amendment was, by leave of the House, withdrawn.

† Sri B. P. KADAM (Karwar).—Sir, it gives me great pleasure to support this Resolution. For the last so many days earnestly desired that such a Resolution might come up and I respectfully feel that this Resolution has come up at an opportune hour. I, therefore, congratulate the Hon'ble Member, Sri M. Srinivasa Nayak, who has moved the Resolution. Some important points have been made out by the Hon'ble Member, the mover of the Resolution, *i.e.*, that this Kasargod area upto Chandragiri River is predominently a Kannada area. To that extent, there is absolutely no doubt. My Hon'ble friend, Mr. Srinivasa Nayak has made out another point that all the Local Bodies, Village Panchayats, have virtually supported this move that the area must be merged in Mysore State. He said that out of 32 Village Panchayats, 30 Village Panchayats have supproted the claim of this area to be merged in Mysore. This is a very important point. We believe in democracy, a fair policy of democracy. Village Panchayat is also a sovereign body. Therefore, the say of these Village Panchayats is very important and must be given full support. A statement was made that some Kerala leaders have stated that the area upto Gokarn is a part of Kerala State. I respectfully submit that it is a very silly Statement. Now a days, reasoning and sincerety is sometimes lagging in some quarters and they make certain fantastic, irresponsible and unrestrained statements to suit the purpose of the party to which they belong. We find claims made by various parties. We have to resort to one principle, and what is that principle? We must have certain good principle in taking a village as a unit, and above all the wishes of the people of the area concerned must be taken into consideration. These should be the principles which should guide in demarcating the borders. In fact, this ought to have been adhered to by the States Reorganisation Committee. Unfortunately, they did not do it; they flouted it. At least here and now we should do it. I fully share the sentiments of the Kasargod people where Kannada language is virtually throttled and Kannada education is denied to them. They are almost suffering a grave hardship and difficulty. I happened to travel with Poet Rai from Hubli to Bangalore. That gentleman had seen us in the Legislators' Home when he had come here to see the Chief Minister in connection with the merger issue, and I can only feel that in their evidence they were very keen that the area should be merged with Mysore. Sir, the educational institutions are virtually throttled in Kasargod area and it is almost at a point of jeopardy. All these things must be considered and this Government must come forward to solve that issue. This issue ought to have been solved long before, even during 1957 itself. On 24th December, in reply to some of our suggestions, the Hon'ble Chief Minister had stated that he is in touch with the Governments of the adjoining States to see that the Kannada areas are merged in Mysore. Those were good old days when there was Congress Government in Kerala and even recently there was Congress Government there. Unfortunately, now it is Governor's Rule; I do not want to go into those details. At the Govern-

(SRI B. P. KADAM)

ment of India level only recently, our great leader Mr. Kamaraj, the Congress President, just on the eve of the elections when he was in Kasargod, contacted some important leaders and gave an assurance that the High Command is taking early steps to see that the border troubles are settled.

He further stated that soon after the elections the predominently Kannada belt from Kasargod would be merged with Mysore. It has come to us from the Newspapers and we have reason to believe it. Sir, it is heartening to see that Lok Sabha Member Sri A. K. Gopalan has given a clear undertaking in the election itself that Kannada belt of Kasargod must be merged with Mysore. It is heartening to see even Mr. Nambudaripad former Chief Minister of Kerala has given a similar assurance. It is very good to see that Communist Party leaders are sticking to a principle. The difficulty arises with the Ruling Party. Whenever they feel that something should come to them, they wholeheartedly support; whenever they feel on some principle, some part here and there should go, they feel very much touchy but by and large, I should say that the stand taken by Sri S. Nijalingappa when he was in 1956 is very much encouraging and all the troubles could be solved or would have been solved even earlier had the Chief Minister stood by the assurance which he gave to the Legislative Assembly on the 24th of December 1956. Sir, may I urge upon the Hon'ble Chief Minister to regain that mood, that lofty state of mind, that lofty level and rise to the national level and see that all the border difficulties which the Mysore State is facing are solved so that Kasargod, Madakasira, South Solapur, Akkalkote may come here and on the same principle which he enunciated in December 1956, all Marathi areas should go to Maharashtra. My Hon'ble friend Sri Kolkebail is a very volatile friend.

MR. SPEAKER.—I do not think we should bring in personal character of Members.

SRI B. P. KADAM.—He is a vigorous member; he is a brave man; he said he would send some men to Goa. Rather than sending them to far-off places against the wishes of the people without knowing whether they would welcome them or not, may I appeal respectfully to Mr. Kolkebail to send a few thousands to Kasargod to get Kasargod merged with Mysore. So far, he has not done anything though Kasargod people are clamouring.

MR. SPEAKER.—We are not discussing his conduct.

SRI B. P. KADAM.—I have got great respect for him. I am not speaking against him. I am appreciating him. When the agitation in Kasargod was started, so many came in procession to Bangalore but nobody attended it and noboady did anything except a veiled assurance that it would be taken up at the appropriate time. I congratulate my

Hon'ble friend Sri Srinivas Nayak who has tabled the resolution and brought up the issue to discussion. May I equally assure the Kannada speaking people of Kasargod that if they feel panicky and difficult to carry on agitation, we will also help them as they wish that area should come to Mysore. With due deference to the wishes of the people, Maharastrians are very keen to help them so that justice may also be done to them. It is our desire that all the Kannada speaking areas adjoining Mysore should come to Mysore State. Mysore State and Maharashtra State have been like brothers and through several centuries of history, they helped each other. At a suitable occasion, I will prove it by historical facts. Therefore, it is equally the duty of Maharashtra to see that Mysore State is helped and it is equally the duty of Mysore people to see that Maharashtrians are helped because they have lived as brothers during the course of history and they would live to help each other during the centuries to come. One argument was advanced by my friend Mr. Srinivas Nayak about Muslim population who speak or write Urdu. With due respect to the people who speak Tulu, I must say that it is a dialect of Kannada. That is my stand. Of course, there may be difference but all the Tulu people must adjust within Mysore State and they cannot do anything beyond that, because the United Karnatak Publication says on page 29 that the people should not make a claim for a dialect, but they must have love for their language, and Tulu being a dialect and the language being Kannada, the people must have love and regard for Kannada language and Tulu people must get merged by and large in the Mysore State. Therefore, even in these things, differences may be there, but we must respond to the wishes of the people whether the people of that area concerned think that Tulu is a dialect of Kannada or not and Tulu people should get merged in Mysore. It is the same case with the Konkani speaking people of Karwar and Supa and the wishes of the people must be respected. Therefore, Tulu speaking areas must come to Mysore and Mysore alone. I fully support the resolution and I also pray that Hon'ble Chief Minister would try and try in a determined manner to get all the Kannada-speaking areas into Mysore State as early as possible and also settle the Maharashtra and Mysore Border on the same principle because unless he adheres to a principle, it cannot be solved. It is heartening to see that Mr. Nanda, Hon'ble Home Minister of the Union Government has stated that the issue between other States and Mysore State is not settled. Therefore he is going to take it up. It is a matter of pride to see that justice will be done to Mysore and also that justice will be done as early as possible. With these remarks, I thank the Hon'ble Member, Sri Srinivas Nayak once again and resume my seat.

†ಶ್ರೀ ವೈ. ಮಂಜಯ್ಯಶೆಟ್ಟಿ (ಬೈಂದೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಸ್ನೇಹಿತರಾದ ಶ್ರೀಮಾನ್ ಶ್ರೀನಿವಾಸನಾಯಕರು ಈ ದಿನ ಈ ಸಭೆಯಲ್ಲಿ ಕಾಸರಗೋಡ್ ತಾಲ್ಲೂಕು ಮೈಸೂರು ರಾಜ್ಯದಲ್ಲಿ ಸೇರಬೇಕೆಂದು ಮಂಡಿಸಿದ ಠರಾವನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಈ ಸಭೆಯಲ್ಲಿ ನಮ್ಮ ಮಿತ್ರರಾದ ಶ್ರೀಮಾನ್ ಕೇಶವಮೂರ್ತಿಯವರು ತಂದಿದ್ದ ಒಂದು ತಿದ್ದುಪಡಿಯನ್ನು ವಾಪಸು ತೆಗೆದುಕೊಂಡಿದ್ದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

(ಶ್ರೀ ವೈ. ಮಂಜಯ್ಯಶೆಟ್ಟಿ)

12-30 P.M.

ಶ್ರೀಮಾನ್ ಎಂ. ಶ್ರೀನಿವಾಸನಾಯಕರು ತಮ್ಮ ಭಾಷಣದಲ್ಲಿ ಎಲ್ಲಾ ವಿಷಯಗಳನ್ನೂ ಬಹಳ ಚೆನ್ನಾಗಿ ಮನಮೆಚ್ಚುವಂತೆ ಹೇಳಿದ್ದಾರೆ. ನಾವು ಎಲ್ಲಾ ವಿಚಾರವನ್ನೂ ಬಹಳ ಒಳ್ಳೆಯ ರೀತಿಯಿಂದ ಎಲ್ಲರೂ ಒಪ್ಪುವಂತೆ ತಿಳಿಸಿದ್ದಾರೆ. ಅದನ್ನು ಪ್ರತಿಪಕ್ಷದವರೂ ಸಹ ಸಮರ್ಥಿಸಿದ್ದಾರೆ. ಶ್ರೀಮಾನ್ ಕದಂ ಅವರು ಸಮರ್ಥಿಸಿ ಅವರ ಬೆಂಬಲವನ್ನು ಕೊಟ್ಟಿದ್ದಾರೆ ಅದಕ್ಕೆ ಅವರನ್ನೂ ಸಹ ಅಭಿನಂದಿಸಬೇಕಾಗಿದೆ. ಕಾಸರಗೋಡು ನಮ್ಮ ಮೈಸೂರು ರಾಜ್ಯದಲ್ಲಿ ಸೇರಬೇಕೆಂಬ ವಿಚಾರದಲ್ಲಿ ಯಾವ ಒಂದು ಭಿನ್ನಾಭಿಪ್ರಾಯವೂ ಇದ್ದಿಲ್ಲ. ಕೇಂದ್ರ ಸರ್ಕಾರವಾಗಲಿ, ಸಂಬಂಧಪಟ್ಟ ಕೇಂದ್ರ ಮಂತ್ರಿಗಳಾಗಲಿ ಅಥವಾ ನಮ್ಮ ರಾಜ್ಯ ಸರ್ಕಾರವಾಗಲಿ ಅಥವಾ ರಾಜ್ಯದ ಮಂತ್ರಿಗಳಾಗಲಿ ಕಾಸರಗೋಡು ದಕ್ಷಿಣ ಕನ್ನಡ ಜಿಲ್ಲೆಯಿಂದ ಹೋಗಿ ದಕ್ಷಿಣ ಕನ್ನಡ ಜಿಲ್ಲೆಗೆ ದೊಡ್ಡ ಅನ್ಯಾಯವಾಗಿದೆ ಮೈಸೂರುದೇಶಕ್ಕೆ ಬಹಳ ಅನ್ಯಾಯವಾಗಿದೆ ಎಂದು ಒಪ್ಪುತ್ತಾ ಇದ್ದಾರೆ. ಆದರೆ ನಮ್ಮ ದುರಾದೃಷ್ಟ ಕಳೆದ 8 ವರ್ಷಗಳಿಂದ ನಾವು ಪ್ರಯತ್ನ ಪಟ್ಟಾಗ್ಯೂ ಇದುವರಗೂ ಕಾಸರಗೋಡು ತಾಲ್ಲೂಕು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಭಾಗವಾಗಿ, ಮೈಸೂರು ಸಂಸ್ಥಾನದ ಒಂದು ಭಾಗವಾಗಿ ಸೇರದೇ ಇದ್ದುದ್ದು ಬಹಳ ವಿಷಾದಪಡುವಂತಹ ವಿಚಾರವಾಗಿದೆ. 1929ನೇ ಇಸವಿಯಲಾಗಾಯ್ತು ಭಾಷವಾರು ಪ್ರಾಂತ್ಯವಾಗಬೇಕೆಂದು ನಿರ್ಧರಾವಾದಾಗ್ಯೂ 1956ನೇ ಇಸವಿಯಲ್ಲಿ ಭಾಷಾವಾರು ಪ್ರಾಂತ್ಯವಾಗುವಂತಾಯಿತು. ಅದಕ್ಕೆ ಕಾರಣ ಆಂಧ್ರದೇಶದ ಮುಖಂಡರಾದ ಪೊಟ್ಟಿ ಶ್ರೀ ರಾಮುಲು ಅವರು ಅನ್ನ ಸತ್ಯಾಗ್ರಹದಿಂದ ಸತ್ತಿದ್ದೇ ಕಾರಣ ಎಂದು ಕೆಲವರು ಹೇಳಬಹುದು. ಅದೇಕಾರಣ ಎಂದು ನಾನು ಹೇಳಲು ಇಚ್ಛಿಸುವುದಿಲ್ಲ. ಒಟ್ಟಾರೆ ಅದೂ ಒಂದು ಕಾರಣೀಭೂತವಾಯಿತು. ಈ ಸತ್ಯಾಗ್ರಹದ ಪ್ರಾರಂಭ ಆಂಧ್ರ ಪ್ರದೇಶ, ಅದಾಗ್ಯೂ; ತಂದನಂತರ ಭಾಷವಾರು ಪ್ರಶ್ನೆಗೆ ಮನ್ನಣೆ ಕೊಟ್ಟು ಅನೇಕ ಭಾಷವಾರು ಪ್ರಾಂತಗಳು ನಮ್ಮ ದೇಶದಲ್ಲಿ ಅದವು, ಬಹುಶಃ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮುಖಂಡರು ಕಾಸರಗೋಡು ತಾಲ್ಲೂಕು ನಮ್ಮ ಜಿಲ್ಲೆಯಲ್ಲೇ ಉಳಿಸಿಕೊಳ್ಳಬೇಕಾಗಿದ್ದರೆ 1956ನೇ ಇಸವಿಯಲ್ಲೇ ಅನ್ನ ಸತ್ಯಾಗ್ರಹ ಮಾಡಿ ಒಬ್ಬಿಬ್ಬರು ಸತ್ತಿದ್ದರೆ ಅಂದೇ ಈ ಪ್ರಶ್ನೆ ತೀರ್ಮಾನವಾಗುತ್ತಿತ್ತು ಎಂದು ಅನ್ನುವಂತಹ ಅಭಿಪ್ರಾಯ ನನ್ನ ಮನಸ್ಸಿನಲ್ಲಿ ಮೂಡುತ್ತಾ ಇದೆ. ಆ ರೀತಿಯ ಅನ್ನ ಸತ್ಯಾಗ್ರಹ ಮಾಡಿ ಒತ್ತಾಯಪೂರ್ವಕವಾಗಿ ಸರ್ಕಾರವನ್ನು ಒಪ್ಪಿಸುವಂತಹದು ಒಂದು ನ್ಯಾಯವಾದ ಕಾರ್ಯವೇ ಅಥವಾ ಅದು ಒಂದು ಅನ್ಯಾಯವಾದ ಕಾರ್ಯವೇ ಎಂಬುದನ್ನು ಈ ಸಭೆಯಲ್ಲಿ ಚರ್ಚಿಸುವ ಅವಶ್ಯಕತೆ ಇಲ್ಲ, ಒಟ್ಟಾರೆ ಆಗ ಆ ಕಾಲಕ್ಕೆ ಒಂದು ಸತ್ಯಾಗ್ರಹ ಮಾಡಿ ಎಲ್ಲಾ ಪ್ರಶ್ನೆಗಳನ್ನೂ ಸಮಸ್ಯೆಗಳನ್ನೂ ಬಗೆಹರಿಸುವ ಒಂದು ವಿಧಾನ ಜನರಲ್ಲಿ ಮೂಡಿಬಂದದ್ದು ಕಂಡುಬರುತ್ತದೆ. ಆದರೆ ನಾವು ನ್ಯಾಯಸಮ್ಮತವಾದ ರೀತಿಯಿಂದ, ಘಟನಾತ್ಮಕವಾದ ರೀತಿಯಿಂದ ಪ್ರಶ್ನೆಗಳನ್ನು ಬಗೆಹರಿಸಕೊಳ್ಳ ಬೇಕೇ ವಿನಾ ಅನ್ನ ಸತ್ಯಾಗ್ರಹ ಅಥವಾ ಇನ್ನಿತರ ಸತ್ಯಾಗ್ರಹಗಳನ್ನು ಮಾಡಿ ಬಲಾತ್ಕಾರದಿಂದ ಇಂತಹ ಪ್ರಶ್ನೆಯನ್ನು ಬಗೆಹರಿಸುವುದು ನ್ಯಾಯಸಮ್ಮತವಾದದ್ದಲ್ಲ ಆದ್ದರಿಂದ ಇಂತಹ ಶಾಸನ ಸಭೆಯಲ್ಲೇ ಈ ರೀತಿಯ ಠರಾವನ್ನು ತಂದು ರಾಜ್ಯ ಸರ್ಕಾರವನ್ನೂ ಹಾಗೂ ಕೇಂದ್ರಸರ್ಕಾರವನ್ನೂ ಒಲಿಸಿಕೊಂಡು ಈ ಪ್ರಶ್ನೆಯನ್ನು ಬಗಹರಿಸುವುದು ಪ್ರಾಮುಖ್ಯ. ಹೀಗೆ ಈ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಶ್ರೀ ಮಾನ್ ಶ್ರೀನಿವಾಸನಾಯಕ್ ಅವರು ತಂದಿರುವ ಈ ಠರಾವನ್ನು ನಾವೆಲ್ಲರೂ ಸರ್ವಾನುಮತದಿಂದ ಒಪ್ಪಿಕೊಳ್ಳುವುದು ಅತಿ ಆವಶ್ಯಕ. ಅನೇಕ ವಿಚಾರಗಳು ಎಂದರೆ ಅಲ್ಲಿಯ ಜನರು ಆಡುವ ಭಾಷೆಯ ನೆರೆಯಿಂದ ಮತ್ತು ಅಲ್ಲಿಯ ಸಂಬಂಧಪಟ್ಟ ಸರ್ಕಾರಿ ರೆಕಾರ್ಡ್‌ಗಳು ಮತ್ತು ಇನ್ನಿತರ ರೆಕಾರ್ಡ್‌ಗಳು ಕನ್ನಡ ಭಾಷೆಯಲ್ಲಿಯೇ ಇರುತ್ತವೆ ಮತ್ತು ಅಲ್ಲಿಯ ಅಳಿಯ ಸಂತಾನ ಪದ್ಧತಿಯನ್ನು ಆ ಜನರು ಆಚರಿಸುವ ದೆಸೆಯಿಂದ ಮತ್ತು ಇನ್ನಿತರ ಅನೇಕ ಕಾರಣಗಳಿಂದ ಶ್ರೀಮಾನ್ ಶ್ರೀನಿವಾಸನಾಯಕ್ ಅವರು ಹೇಳಿದಂತೆ ಗೋವಿಂದಪೈ ಮುಂತಾದ ಅನೇಕಹೆಸರಾಂತ ಕನ್ನಡಿಗರು ಆ ಪ್ರದೇಶದಿಂದ ಬಂದವರು ಆದ್ದರಿಂದ ಆ ಪ್ರದೇಶ ನ್ಯಾಯವಾಗಿ ಮೈಸೂರು ಸಂಸ್ಥಾನದಲ್ಲೇ ಇರಬೇಕಾಗಿತ್ತು ದುರಾದೃಷ್ಟದಿಂದ ಅದು ತಪ್ಪಿ ಹೋದದ್ದು ಬಹಳವಾಗಿ ಪಶ್ಚಾತ್ತಾಪ ಪಡುವಂತಹ ವಿಚಾರವಾಗಿದೆ, ಇನ್ನಾದರೂ ಈ ಸಭೆಯು ಈ ಠರಾವನ್ನು ಸರ್ವಾನುಮತದಿಂದ ಅಂಗೀಕಾರಮಾಡಿ ನಂತರ ಕೇಂದ್ರ ಸರ್ಕಾರದವರು ಇದನ್ನು ಒಪ್ಪಿ ಈ ಅನ್ಯಾಯವನ್ನು ಹೋಗಲಾಡಿಸಿ ಆ ಪ್ರದೇಶದ ಎರಡೂವರೆ ಲಕ್ಷ ಜನರ ಸಂತೋಷಕ್ಕೆ ಪಾತ್ರರಾಗಿ ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಂಡು ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ಈ ಮಾನ್ಯ ಸಭೆಯ ಮುಂದೆ ಶ್ರೀ ಮಾನ್ ಎಂ. ಶ್ರೀನಿವಾಸ ನಾಯಕ್ ಅವರು ಕನ್ನಡ ಪ್ರದೇಶವಾದ ಮೈಸೂರು ರಾಜ್ಯದಲ್ಲಿ ಕಾಸರಗೋಡನ್ನು ವಿಲೀನಗೊಳಿಸಬೇಕೆಂದು ಹೇಳಿ ತಂದಿರುವ ಈ ನಿರ್ಣಯವನ್ನು ಈ ಸಭೆ ಸರ್ವಾನುಮತದಿಂದ ಮಂಜೂರು ಮಾಡುತ್ತವೆ. ಎಂದು ನಾನಾದರೂ ತಿಳಿಯುತ್ತೇನೆ. ಸ್ವಾಮಿ ಭಾಷಾವಾರು ಪ್ರಾಂತ 1956ನೇ ಇಸವಿಯಲ್ಲಿ ರಚನೆ ಆಯಿತು ಅಂದಿನಿಂದ ಇಂದಿನತನಕ ಕೇಂದ್ರ ಸರ್ಕಾರದಿಂದ ಹಿಡಿದು ರಾಜ್ಯ ಸರ್ಕಾರದವರೆಗೂ ಕಾಸರಗೋಡಿನ ವಿಷಯವಾಗಿ ಪ್ರಸ್ತಾಪ ಮಾಡುತ್ತಾ ಇದ್ದೇವೆ. ಎಲ್ಲಾ ಮಟ್ಟದಲ್ಲೂ ಕೂಡ ಕಾಸರಗೋಡಿನ ಮುಖಂಡರು ಮಾತ್ರವಲ್ಲದೆ ಜನತೆ ಅನೇಕಸಲ ಮಾನ್ಯ ಮುಖ್ಯಮಂತ್ರಿಗಳು ಮತ್ತು ಇನ್ನಿತರರನ್ನು ನೋಡಿ ತಮ್ಮ ನಿವೇದನೆಯನ್ನು ಮಾಡಿಕೊಂಡಿದ್ದಾರೆ. ತಮಗೆ ಯಾವ ಯಾವ ತರಹದ ಕಷ್ಟ ಇದೆ, ಯಾವ ಯಾವ ತರಹದ ತೊಂದರೆಯನ್ನು ಅನುಭವಿಸುತ್ತಾ ಇದ್ದಾರೆ ಎಂಬುದನ್ನು ಹೇಳಿಕೊಂಡಿದ್ದಾರೆ. ನಮ್ಮ ಸರ್ಕಾರದವರೂ ಕೂಡ ಅಂದಿನಿಂದ ಇಂದಿನತನಕ ಅಶ್ವಾಸನವನ್ನು ಕೊಡುತ್ತಾ ಬಂದಿದ್ದಾರೆ—ಮುಂದಿನವರ್ಷ ಈ ವಿಷಯವನ್ನು ತೆಗೆದುಕೊಳ್ಳುತ್ತೇವೆ, ಆದಷ್ಟು ಬೇಗ ಮೈಸೂರು ರಾಜ್ಯಕ್ಕೆ ಕಾಸರಗೋಡನ್ನು ಸೇರಿಸುತ್ತೇವೆ ಎಂದು ಹೇಳಿ 8 ವರ್ಷದಿಂದಲೂ ಹೇಳುತ್ತಾ ಇದ್ದಾರೆ. ಈಗ ಹೆಚ್ಚುಕಡಿಮೆ 9 ವರ್ಷವಾಗುತ್ತಾ ಬಂತು ಕಾಸರಗೋಡಿನ ಜನತೆಯ ರೋದನ ಅರಣ್ಯ ರೋದನವಾಗಿದೆ. ಎರಡು ವರ್ಷಗಳ ಹಿಂದೆ ವಿಧಾನ ಸಭೆಯ ಮುಂದೆ ಕಾಸರಗೋಡಿನ ಜನತೆ ಪ್ರದರ್ಶನವನ್ನು ಮಾಡಿ ಮುಖ್ಯ ಮಂತ್ರಿಗಳ ಗಮನವನ್ನು ಆಗ ಅವರು ಸೆಳೆದಾಗ ಈ ವಿಷಯವನ್ನು ಒಂದು ವರ್ಷಕಿಂತ ಹೆಚ್ಚು ಎಳೆಯಲ್ಲಿಕ್ಕೆ ಬಿಡುವುದಿಲ್ಲ, ಆದಷ್ಟು ಬೇಗ ಮೈಸೂರು ರಾಜ್ಯಕ್ಕೆ ಸೇರಿಸುವಂತೆ ಮಾಡುತ್ತೇವೆ ಎಂದು ವಾಗ್ದಾನ ಮಾಡಿದರು. ಆದರೆ ಇದುವರೆಗೂ ಏನೂ ಆಗಲಿಲ್ಲ. ಇದನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳಬಾರದು ಏಕೆಂದರೆ ಆಗಲೇ ಕಾಸರಗೋಡಿನಲ್ಲಿ ಕೇರಳೀಯರ ಅತಿಕ್ರಮಣ ಹೆಚ್ಚಾಗಿ ಅವರು ಕನ್ನಡ ಮಾತನಾಡುವುದನ್ನು ಬಿಟ್ಟು, ತುಳು ಮಾತನಾಡುವುದನ್ನು ಬಿಟ್ಟು, ಮಲೆಯಾಳಿ ಮಾತನಾಡಲು ಶುರು ಮಾಡಿದ್ದಾರೆ. ಕನ್ನಡ ಶಾಲೆಯಲ್ಲಿ ಕನ್ನಡ ಉಪಾಧ್ಯಾಯರನ್ನು ಕೊಡದೆಹೆಚ್ಚು ಹೆಚ್ಚಾಗಿ ಮಲೆಯಾಳಿಯನ್ನು ಕಲಿಯಬೇಕೆಂಬ ನಿರ್ಭಂಧವನ್ನು ಹಾಕಿ ಅದಕ್ಕೆ ಹೆಚ್ಚು ಪ್ರೋತ್ಸಾಹ ಕೊಡುತ್ತಾ ಇದ್ದಾರೆ.

ಇನ್ನು ಕಾಸರಗೋಡಿನಲ್ಲಿ ವಿಷಯದಲ್ಲಿ ಕೇಂದ್ರ ಸರಕಾರಕ್ಕೆ ಒತ್ತಾಯಮಾಡಲಾಗಿದೆ, ಇದು ಜಟಿಲ ಪ್ರಶ್ನೆಯಲ್ಲ. ಏಕೆಂದರೆ ಶ್ರೀಮಾನ್ ಎಂ. ಶ್ರೀನಿವಾಸನಾಯಕರು ಈಗಾಗಲೆ ಹೇಳಿದಹಾಗೆ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯು ಈ ವಿಷಯದಲ್ಲಿ ಒಪ್ಪಿಗೆ ಕೊಟ್ಟಿದೆ. ನಿಜವಾಗಿಯೂಕೂಡ ಚಂದ್ರಗಿರಿ ಹೊಳೆಯ ಉತ್ತರಭಾಗ ಮೈಸೂರುರಾಜ್ಯಕ್ಕೇ ಸೇರಬೇಕು, ಅದಕ್ಕೆ ಅಭ್ಯಂತರವಿಲ್ಲ ಎಂದು ಹೇಳುವಾಗ ಇಷ್ಟು ಸಮಯವಾದರೂ ನಮ್ಮ ಸರಕಾರ ಈ ವಿಚಾರದಲ್ಲಿ ಮುಂದುವರೆಯದೆ ಏಕೆ ಸುಮ್ಮನಿದೆಯೋ ತಿಳಿಯದು. ಎರಡು ರಾಜ್ಯಗಳು ಒಪ್ಪಿಕೊಂಡಿರುವಾಗ ಈ ವಿಷಯವನ್ನು ಆದಷ್ಟು ಬೇಗನೆ ತೀರ್ಮಾನಿಸಲು ಅವಕಾಶವಾಗುವಂತೆ ನಮ್ಮ ಮುಂದಿರುವ ಠರಾವನ್ನು ಈ ಸಭೆಯಲ್ಲಿ ಅಂಗೀಕಾರಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸಿ ಕೂಡಲೆ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ಈ ಸಭೆ ಒತಾಯಮಾಡಬೇಕು, ಮುಖ್ಯ ಮಂತ್ರಿಗಳು ಈ ವಿಷಯಕ್ಕೆ ಅದ್ಯ ಗಮನ ನೀಡಬೇಕು ಎಂದು ಹೇಳುತ್ತೇನೆ.

ಇನ್ನು ಕಾಸರಗೋಡಿನ ವಿಷಯವನ್ನು ಚೆನ್ನಾಗಿ ಬಿಡಿಸಿ ಹೇಳುತ್ತೇನೆ. ಕಾಸರಗೋಡಿನಲ್ಲಿ ಕನ್ನಡ ಮಾತನಾಡುವವರ ವಿಷಯ, ಕರ್ಣಾಟಕಕ್ಕೂ ಕಾಸರಗೋಡಿಗೂ ಇರುವ ವ್ಯವಹಾರಿಕ ಸಂಬಂಧ, ಸಾಮಾಜಿಕ ಮತ್ತು ಸಂಸ್ಕೃತಿಕ ಸಂಬಂಧ ಏನಿದೆ ಎಂಬುದನ್ನೆಲ್ಲಾ ಶ್ರೀಯುತರುಗಳಾದ ಮಂಜಯ್ಯಶೆಟ್ಟರೂ ಮತ್ತು ಶ್ರೀನಿವಾಸನಾಯಕರೂ ಬಹಳ ಚೆನ್ನಾಗಿ ಹೇಳಿರುವುದರಿಂದ ನಾನು ಆ ವಿಚಾರ ಹೆಚ್ಚಾಗಿ ಹೇಳುವುದಿಲ್ಲ. ಈಗ ಕಾಸರಗೋಡಿನ ಜನರು ಬಹಳ ಕಷ್ಟವನ್ನನುಭವಿಸುತ್ತಿದ್ದಾರೆ. ಅದಷ್ಟು ಬೇಗ ಈ ವಿಷಯಕ್ಕೆ ಹೆಚ್ಚು ಗಮನಕೊಟ್ಟು ಕಾಸರಗೋಡನ್ನು ಮೈಸೂರು ರಾಜ್ಯಕ್ಕೆ ಸೇರಿಸದಿದ್ದರೆ ಮುಂದಿನ ಪೀಳಿಗೆಯವರು ತಾವು ಮೈಸೂರಿಗೆ ಸೇರಬೇಕಾದವರು ಎಂಬುದನ್ನು ಮರೆಯುತ್ತಾರೆ. ಏಕೆಂದರೆ ಈಗಾಗಲೇ ಕೇರಳದಲ್ಲಿರುವ ಮಕ್ಕಳಿಗೆ ಅದೇ ತಮ್ಮ ರಾಜ್ಯವೆಂಬುದು ಮನವರಿಕೆಯಾಗಿದೆ. ಆದುದರಿಂದ ಬೇಗ ಕಾಸರಗೊಡನ್ನು ನಮ್ಮ ರಾಜ್ಯದಲ್ಲಿ ವಿಲೀನಗೊಳಿಸಲು ಕ್ರಮ ಕೈಗೊಳ್ಳದೇ ಹೋದರೆ ನಮ್ಮ ಸಾಮಾಜಿಕ ಪರಿಸ್ಥಿತಿಯೇನಿದೆ ಅದು ನಿಜವಾಗಿಯೂ ಕೂಡ ಅಳಿದುಹೋಗುತ್ತದೆ.

ಮುಂದಿನ ಮಕ್ಕಳು ತಾವು ಕರ್ಣಾಟಕದವರೆಂಬುದನ್ನು ಮರೆಯಲು ಅವಕಾಶಕೊಡಬಾರದು. ಆದುದರಿಂದ ಇರುವ ಪರಿಸ್ಥಿತಿ ನೋಡಿ ಆದಷ್ಟು ಬೇಗ ಕೇಂದ್ರ ಸರಕಾರಕ್ಕೆ ಮನವರಿಕೆ ಮಾಡಿ

(ಶ್ರೀ ಬಿ. ಭಾಸ್ಕರಶೆಟ್ಟಿ)

ಎರಡು ತಿಂಗಳೊಳಗಾಗಿ ಕಾಸರಗೋಡನ್ನು ಮೈಸೂರಿಗೆ ಸೇರಿಸುವಂತೆ ಮಾಡಬೇಕೆಂದು ಹೇಳಿ ಶ್ರೀಮಾನ್ ಎಂ. ಶ್ರೀನಿವಾಸನಾಯಕರು ಈ ದಿವಸ ತಂದಿರುವ ನಿರ್ಣಯಕ್ಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಶ್ರೀಮಾನ್ ವೈ. ಮಂಜಯ್ಯಶೆಟ್ಟರು ಸತ್ಯಾಗ್ರಹ ಬೇಡ ಎಂದು ಹೇಳಿದರು. ಮಂತ್ರಿಸಿದರೆ ಮಾವಿನಕಾಯಿ ಬೀಳುತ್ತದೆಯೇ ? ಇದು ಕುಂಭಕರ್ಣನ ಸರಕಾರದ ವಿಷಯ, ಕುಂಭಕರ್ಣ ಗಾಢನಿದ್ರೆಯಲ್ಲಿದ್ದಾಗ ಎರಡು ಮೂಟೆ ಸುಣ್ಣ ಸುರಿದರೂ ಕೂಡ ಅವನಿಗೆ ಎಚ್ಚರವಾಗಲಿಲ್ಲವಂತೆ. ಸರಕಾರಕ್ಕೆ ಬಹಳ ಕಷ್ಟ. ಕಾಸರಗೋಡಿನಲ್ಲಿರುವ ಜನರಿಗೆ ಅನೇಕ ತೊಂದರೆಗಳಿವೆ, ಅದರ ವಿಚಾರ ಹೇಳುವುದಕ್ಕಾಗುವುದಿಲ್ಲ. ಅಲ್ಲಿನವರಿಗೆ ತೀವ್ರತೆಯಿದ್ದರೂ ನಮ್ಮ ಅಣ್ಣತಮ್ಮಂದಿರಾದ ಅವರನ್ನು ಇನ್ನೂ ಏಕೆ ನಮ್ಮೊಡನೆ ಸೇರಿಸಿಕೊಂಡಿರುವುದಿಲ್ಲ ! ಕನ್ನಡವನ್ನು ಅವರು ಮರೆಯುವ ಸಂದರ್ಭ ಬಂದಿದೆ. ಆದುದರಿಂದ ಅದಷ್ಟು ಜಾಗ್ರತೆ ಈ ವಿಚಾರದಲ್ಲಿ ಗಮನ ವಹಿಸಿ ವರ್ಗ, ಪ್ರಮೋಷನ್ ಮುಂತಾದ ಸಣ್ಣಸಣ್ಣ ವಿಚಾರಗಳನ್ನು ಬಿಟ್ಟು ಮುಖ್ಯವಾದ ದೊಡ್ಡ ದೊಡ್ಡ ವಿಷಯಗಳಿಗೆ ಗಮನಕೊಟ್ಟು ಕಾಸರಗೋಡನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಳ್ಳಲು ಪ್ರಯತ್ನಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯನಾಯಕ್ (ಸೂಳ್ಯ).—ಸನ್ಮಾನ್ಯ ಅಧ್ಯಕ್ಷರೇ, ಕರ್ಣಾಟಕ ರಾಜ್ಯದ ಭಾಗವಾದ ಈಗ ಕೇರಳಾದಲ್ಲಿರುವ ಕಾಸರಗೊಡು ತಾಲ್ಲೂಕನ್ನು ನಮ್ಮ ಮೈಸೂರು ರಾಜ್ಯಕ್ಕೆ ಸೇರಿಸಬೇಕೆಂದು ಶ್ರೀಮಾನ್ ಶ್ರೀನಿವಾಸನಾಯಕರು ತಂದಿರುವ ನಿರ್ಣಯವನ್ನು ನಾನು ಹೃತ್ಪೂರ್ವಕ ವಾಗಿ ಸ್ವಾಗತಿಸಿ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಕಾಸರಗೊಡು ತಾಲ್ಲೂಕಿನಲ್ಲಿರುವ ಜನರಲ್ಲಿ ಸುಮಾರು ಎರಡೂವರೆ ಲಕ್ಷ ಮಂದಿ ಅಚ್ಚ ಕನ್ನಡಿಗರು, ಕನ್ನಡಿಗರು ಎಂದರೆ ತುಳು ಜನರು. ತುಳು ಜನರ ಅಸ್ತಿತ್ವ ಬಹಳ ಮುನ್ನ ತೌಳವ ಸಾಮ್ರಾಜ್ಯದಲ್ಲಿತ್ತು. ಹಿಂದೆ ದಕ್ಷಿಣ ಕನ್ನಡಾದಲ್ಲಿ ಭೂತಾಳ ಪಾಂಡ್ಯ ಅರಸನಾಗಿದ್ದಾಗ ತೌಳವ ಸಾಮ್ರಾಜ್ಯ ವೈಭವದಿಂದ ಮೆರೆಯುತ್ತಿತ್ತು. ತೌಳವ ಸಾಮ್ರಾಜ್ಯದಲ್ಲಿ ಕಾಸರಗೋಡು ಒಂದು ಭಾಗವಾಗಿತ್ತು. ತುಳುರಾಜ್ಯದ ರಾಜಧಾನಿ ಬಾರಕೂರು ಆಗಿತ್ತು. ಹಿಂದೆ ಸೆನ್ಸಸ್ ಮಾಡುವಾಗ ಕಾಸರಗೋಡಿನಲ್ಲಿ ಮಲೆಯಾಳಿಗಳಿರಲಿಲ್ಲ, ಆದರೆ ಅಲ್ಲಿದ್ದವರು ಮಲೆಯಾಳಿಯಲ್ಲಿ ಮಾತನಾಡುತ್ತಿದ್ದರು. ಅವರು ಮಹಮದೀಯರು. ಅವರನ್ನು ಮಾಪಿಳ್ಳೆಯವರು ಎಂದೂ ಹೇಳುತ್ತಾರೆ. ಸರಕಾರೀ ರಿಕಾರ್ಡು ಈ ರೀತಿ ಇದೆ. ಅವರು ಭಾಷೆ ಮಾಪಿಳ್ಳಾ ಮಲೆಯಾಳಿ ಶ್ರೀಮಾನ್ ಶ್ರೀನಿವಾಸನಾಯಕರು ಹೇಳಿದಹಾಗೆ ಅರೇಬಿಕ್ ಬರಹ. ಉರ್ದು ಬರಹವಲ್ಲ ಕೊರಾನ್ ಮಾತ್ರ ಅರೇಬಿಕ್ ಭಾಷೆಯಲ್ಲಿದೆ, ಮಾಪಿಳ್ಳೆಯವರು ಓದುವ ಬೇರೆ ಗ್ರಂಥಗಳು, ಸಾಹಿತ್ಯ ಮುಂತಾದ ವು ಕನ್ನಡದಲ್ಲಿವೆ. ಹಾಗಿರುವಾಗ ಅಲ್ಲಿರುವವರು ಕನ್ನಡ ಜನರು, ಎಂದು ಹೇಳಬಹುದು. ಅವರು ಯಾವ ಭಾಷೆ ಮಾತನಾಡುತ್ತಾರೆಂದರೆ ಮನೆಯಲ್ಲಿಯೂ ಹೊರಗೂ ಕನ್ನಡ ಮಾತನಾಡುತ್ತಾರೆ. ಅಲ್ಲಿರುವ ಗಾಣಿಗರು, ಬಿಲ್ಲವರು ಮುಂತಾದಬೇರೆಬೇರೆ ಜಾತಿಯವರು ಕನ್ನಡ ಅಥವಾ ತುಳು ಮಾಡನಾಡುತ್ತಾರೆ. ಹೊರಗೆ ಪರಸ್ಪರ ಕೂಡಿಕೊಂಡು ಮಲೆಯಾಳಿ ಮಾತನಾಡುವುದೂ ಇದೆ. ಅಲ್ಲಿರುವ ಕನ್ನಡ ಮಾತನಾಡುವವರು ನಮ್ಮ ರಾಜ್ಯಕ್ಕೆ ಬರುತ್ತೇವೆಂದರೆ ಅವರನ್ನು ಸ್ವಾಗತಿಸಬೇಕಾದ್ದು ನಮ್ಮ ಕರ್ತವ್ಯ. ಅವರಲ್ಲಿ ಸಾವಿರಾರು ಜನರು ಕಲ್ಲು ಕೆಲಸ, ಮರಗೆಲಸ ಮಾಡಲು ನಮ್ಮಲ್ಲಿಗೆ ಬರುತ್ತಾರೆ. ನಮ್ಮಲ್ಲಿ ಕೆಲಸಮಾಡುವಾಗ ಮಲೆಯಾಳಿಗಳೊಂದಿಗೆ ನಾವು ಮಲೆಯಾಳಿಯಲ್ಲೇ ಮಾತುನಾಡುತ್ತೇವೆ. ಬೇರೆಡೆಯಿಂದ ನಮ್ಮಲ್ಲಿಗೆ ಯಾರೇ ಬರಲಿ, ಯಾವ ಭಾಷೆಯವರೇ ಆಗಿರುವ ಅವರನ್ನು ಸತ್ಕಾರ ಮಾಡುವುದು, ಉಪಚರಿಸುವುದು ನಮ್ಮ ರೂಢಿಯಾಗಿದೆ. ಭಾಷೆಯ ಒಂದೇ ದೃಷ್ಟಿಯಿಂದ ಕಾಸರಗೋಡಿನವರು ನಮ್ಮ ರಾಜ್ಯದಲ್ಲಿ ಸೇರಬೇಕೆಂದು ಹೇಳುತ್ತಿಲ್ಲ. ಮಲೆಯಾಳದಲ್ಲಿ ಇರುವ ಹಬ್ಬ ಹರಿದಿನಗಳಿಗೂ ನಮ್ಮ ಕನ್ನಡ ರಾಜ್ಯದಲ್ಲಿರುವ ಹಬ್ಬಹರಿದಿನಗಳಿಗೂ ವ್ಯತ್ಯಾಸವಿದೆ. ದಸರಾ ನಾವು 10 ದಿವಸ ಆಚರಿಸಿದರೆ, ಕೇರಳಾದವರು ಅವನ್ನು ಆಚರಿಸುವುದಿಲ್ಲ, ಓಣಂ ಹಬ್ಬ ಆಚರಿಸುತ್ತಾರೆ. ಓಣಂ ಹಬ್ಬ ದಸರಾ ಕಾಲದಲ್ಲಿ ಬರುವುದಿಲ್ಲ. ಓಣಂ ಹಬ್ಬಕ್ಕೆ ಶಾಲೆಗಳಿಗೆ ರಜಾ ಇದೆ, ದಸರಾಕ್ಕೆ ಕೇರಳಾದಲ್ಲಿರುವ ಕಾಸರಗೋಡಿನ ಜನರಿಗೆ 10 ದಿವಸಗಳ ರಜಾ ಇಲ್ಲ. ಆದುದರಿಂದ ಸಾಂಸ್ಕೃತಿಕ ವಾಗಿ, ಸಾಮಾಜಿಕವಾಗಿ ದಿನನಿತ್ಯ ವ್ಯವಹಾರದಲ್ಲಿ ಕಾಸಗೋಡಿನವರು ಕನ್ನಡವನ್ನೇ ಉಪಯೋಗಿಸಿದರೂ ಕೂಡ ಬಲವಂತದಿಂದ ಅವರು ಓಣಂ ಹಬ್ಬವನ್ನು ಆಚರಿಸಬೇಕಾದ ಪರಿಸ್ಥಿತಿ ಬಂದಿದೆ, ದಸರಾಕ್ಕೆ ಅವರಿಗೆ ರಜಾ ಇಲ್ಲದೆ ಓಣಾಂ ಹಬ್ಬಕ್ಕೆ ರಜಾ ಇರುವುದು ಅವರ ದುರ್ದೈವ. ಆದಕಾರಣ ಕಾಸರಗೋಡಿನ ಕನ್ನಡಿಗರು ಮೈಸೂರಿಗೆ ಸೇರುವುದು ಅಗತ್ಯವಾಗಿದೆ.

ಇನ್ನು ಕನ್ನಡ ಕವಿಗಳ ವಿಚಾರವನ್ನು ಶ್ರೀಮಾನ್ ಶ್ರೀನಿವಾಸನಾಯಕರು ಹೇಳಿದ್ದಾರೆ. ಶ್ರೀಯುತರುಗಳಾದ ಗೋವಿಂದಪೈ, ಕಯ್ಯಾರ ಕಿಂಞಣ್ಣರೈ, ಪಾರ್ತಿಸುಬ್ಬ, ಬಲಿಪಭಾಗವತರು ಮುಂತಾದವರು ಕನ್ನಡ ಕವಿಗಳು. ಶ್ರೀ ಬಲಿಪಭಾಗವತರು ಯಕ್ಷಗಾನ 120 ಪದ್ಯಗಳನ್ನು ಪುಸ್ತಕ ನೋಡದೆ ಬಾಯಿನಲ್ಲೇ ಹೇಳುತ್ತಾರೆ, ಅವರು ಈಗಲೂ ಇದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವರು ಬಹಳ ಪ್ರಸಿದ್ಧರು, ಅವರು 120 ಪ್ರಸಂಗಗಳನ್ನು, (ಬೇರೆ ಬೇರೆ ಕಥಾಭಾಗಗಳನ್ನು) ಬಾಯಿಪಾಠ ಹೇಳುತ್ತಾರೆ. ಅಷ್ಟು ಮಾತ್ರವಲ್ಲ, ಚರಿತ್ರೆಯ ಪ್ರಕಾರವೂ ಕಾಸರಗೋಡಿನ ಕನ್ನಡ ಭಾಗಗಳು ಬೇಕಲದವರೆಗೆ ಕರ್ನಾಟಕಕ್ಕೆ ಸೇರಿತ್ತು. ಬೇಕಲದಲ್ಲಿ ಕೋಟೆ ಕಾಯಲು ಕನ್ನಡ ಪಾಳೆಯಗಾರರಿದ್ದರು. ವಾಸ್ತವವಾಗಿ ನಾವು ಇಡೀ ಕಾಸರಗೋಡು ತಾಲ್ಲೂಕನ್ನು ಕೇಳದೆ ಆ ತಾಲ್ಲೂಕಿನಲ್ಲಿರುವ ಹೊಸದುರ್ಗ ಸಬ್‌ತಾಲ್ಲೂಕನ್ನು ಬಿಟ್ಟು ಉಳಿದ ಭಾಗವನ್ನು ಕೇಳಿರುತ್ತೇವೆ. ಈಗಲೂ ಅಷ್ಟನ್ನೇ ಕೇಳುತ್ತೇವೆ.

ಕಾಸರಗೋಡು ತಾಲ್ಲೂಕಿನ ದಕ್ಷಿಣಕ್ಕೆ ಚಂದ್ರಗಿರಿ ನದಿಯು ಪ್ರಕೃತಿದತ್ತವಾದ ಗಡಿ, ಮೇರೆಯಾಗಿದೆ. ಚಂದ್ರಗಿರಿ ನದಿಯ ಉತ್ತರಕ್ಕೆ ಇರುವ ಭಾಗ ಮಾತ್ರ, ಶುದ್ಧ ಕನ್ನಡ ಅಥವಾ ಶುದ್ಧ ತುಳು ಭಾಷೆ ಆಡುವ ಭಾಗವನ್ನು, ಮಾತ್ರ ನಾವು ಕೇಳುವಂಥದ್ದು. ಇದನ್ನು ನಾವು ಕೇಳುವ ದೃಷ್ಟಿ ಏನೆಂದರೆ ರಾಜಕೀಯದಲ್ಲಿಯೂ ಸ್ವಲ್ಪ ವ್ಯಾಪಾರಿಕ ದೃಷ್ಟಿ ಬೇಕು ಎಂದು ಕಾಣುತ್ತದೆ. ನಾವು ಕಾಸರಗೋಡ್ ತಾಲ್ಲೂಕನ್ನು ಇಡೀ ಕೇಳಿದ್ದರೆ ಅರ್ಧ ಕೊಡುತ್ತಿದ್ದರೋ ಏನೋ. ವಾಸ್ತವವಾಗಿ ನಾವು ಸಹಜತೆಯಿಂದ ಎಷ್ಟು ಬೇಕೋ ಅಷ್ಟನ್ನು ಮಾತ್ರ ಕೇಳಿದರೆ ಕೊಡುವುದಿಲ್ಲ ಎನ್ನುವ ಪರಿಸ್ಥಿತಿ ಬಂದರೆ ಅದು ದುರದೃಷ್ಟಕರ ಎಂದು ಹೇಳಬೇಕು,

ಈಗ ಏಳೆಂಟು ವರ್ಷಗಳಿಂದ ಕೇರಳದಲ್ಲಿರತಕ್ಕ ಕನ್ನಡಿಗರು ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಶಾಲೆಗಳಲ್ಲಿ ಕನ್ನಡ ಉಪಾಧ್ಯಾಯರಿದ್ದರೂ ಅವರ ಸ್ಥಾನಕ್ಕೆ ಮಲೆಯಾಳಿ ಉಪಾಧ್ಯಾಯರನ್ನು ವರ್ಗ ಮಾಡುತ್ತಾರೆ. ಜವಾನ ಕೆಲಸಕ್ಕೆ ಸಹ ಮಲೆಯಾಳಿಗಳನ್ನು ಹಾಕುತ್ತಾರೆ. ರಿಜಿಸ್ಟ್ರೇಷನ್ ಆಫೀಸುಗಳಲ್ಲಿ, ನೂರಕ್ಕೆ ನೂರು ಭಾಗ ಕನ್ನಡ ಮಾತನಾಡುವವರು ಇರುವ ಪ್ರದೇಶದಲ್ಲಿ ಬರೀ ಮಲೆಯಾಳಿ ಅಧಿಕಾರಿಗಳನ್ನು ವರ್ಗಾಯಿಸುತ್ತಾರೆ. ಈ ಪರಿಸ್ಥಿತಿಯಿಂದ ತೊಂದರೆಯಾಗುತ್ತಿದೆ. ಇದೇ ತರಹ ಅನೇಕ ತೊಂದರೆಗಳಿವೆ. ನಮಗೆ ಇರುವ ತೊಂದರೆಗಳನ್ನು ಹೋಗಲಾಡಿಸಲು ಆ ಭಾಗವನ್ನು ಕನ್ನಡ ರಾಜ್ಯದಲ್ಲಿ ಸೇರಿಸುವಂಥದ್ದು ಬಹಳ ಅಗತ್ಯ.

ಮಂಜೇಶ್ವರ, ಕೊಡ್ಲಮೊಗ್ರು, ಮಂಗಲ್ಪಾಡಿ, ಪೈವಳಿಗೆ, ಮುಳಿಯಾರು, ಅಡೂರು ಕಾಸರಗೋಡಿನ ಮೂರು ಹೈಸ್ಕೂಲುಗಳು, ಕುಂಬಳೆ, ಪೆರ್ಲ, ಬದಿಯಡ್ಕ, ನೀರ್ಚಾಲು ಸಂಸ್ಕೃತ ಕಾಲೇಜು, ಅಗಲ್ಪಾಡಿ, ಕಾಸರಗೋಡು ಕಾಲೇಜು, ಹೀಗೆ ಇವು ಕನ್ನಡ ಹೈಸ್ಕೂಲುಗಳು, ಇನ್ನೂ ನೂರಾರು ಎಲಿಮೆಂಟರಿ ಶಾಲೆಗಳು, ಮಿಡಲ್‌ಸ್ಕೂಲುಗಳು, ನೂರಕ್ಕೆ ನೂರು ಭಾಗ ಕನ್ನಡ ಮಾತನಾಡುವ ಭಾಗದಲ್ಲಿವೆ. ಇವಕ್ಕೆ ಆಡಳಿತ ದೃಷ್ಟಿಯಿಂದ ಮತ್ತು ಭಾಷಾ ದೃಷ್ಟಿಯಿಂದ ಅನೇಕ ತೊಂದರೆಗಳಿವೆ. ಆದುದರಿಂದ ಕಾಸರಗೋಡು ತಾಲ್ಲೂಕಿನ ಚಂದ್ರಗಿರಿ ನದಿಯ ಉತ್ತರ ಭಾಗವನ್ನು ಕನ್ನಡ ರಾಜ್ಯದಲ್ಲಿ ಸೇರಿಸಬೇಕು ಎನ್ನುವ ಬಗ್ಗೆ ಏಕಾಭಿಪ್ರಾಯದಿಂದ ಈ ಸಭೆ ಸಮ್ಮತಿಸಬೇಕು ಎಂದು ಹೇಳಿ ನನ್ನ ಮಾತನ್ನು ನಿಲ್ಲಿಸುತ್ತೇನೆ.

Sri L. B. BIRJE (Khanapur).—(Marathi).

Mr. SPEAKER.—Now, I will put the Resolution to the vote of the House. The motion before the House is:

> "That this Assembly recommends to the State Government to urge the Government of India to take immediate steps for the merger of the Kannada areas of Kasargod taluk in Kerala State with Mysore State."

The motion was adopted.

Mr. SPEAKER.—I think it is unanimous because there is no dissenting voice. We are adjourning to-day to reassemble at 1 p.m. on the 7th April.

MYSORE LEGISLATIVE ASSEMBLY

Wednesday, 7th April 1965.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Construction of a Well in the premises of Shikaripur Taluk Agricultural Produce Marketing Co-operative Society.

* *Q.*—410. Smt. RATHNAMMA MADHAVA RAO (Shimoga).—

Will the Government be pleased to state :—

(*a*) whether it is a fact that a sum of Rs. 24,500 was spent towards the construction of a well in the premises of Shikaripur Taluk Agricultural Produce Marketing Co-operative Society as against an estimated cost of Rs. 11,700 ;

(*b*) if so, the reasons for spending more amount over the estimtaad cost ?

A.—Sri KONDAJJI BASAPPA (Deputy Minister for Co-operation).—

(*a*) The total revised estimated cost of the well was Rs. 25,760 and a sum of Rs. 24,418—24P has been spent.

(*b* Does not arise in view of reply to clause (*a*) above.

ಶ್ರೀಮತಿ ರತ್ನಮ್ಮ ಮಾಧವರಾವ್.—ಈ ಬಾವಿಯ ಒರಿಜನಲ್ ಎಸ್ಟಿಮೇಟು 13,760 ರೂ. ಎಂದು ಮಾಡಲಾಗಿತ್ತು. ಅನಂತರ ಆ ಎಸ್ಟಿಮೇಟು 11,700 ಎಂದು ಆಗಿತ್ತು. ಆದರೆ ಈ ಬಾವಿಗೆ 24,418 ರೂಪಾಯಿ ಖರ್ಚು ಮಾಡಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಇದು ಸರಿಯಾಗಿ ಇದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಮೊದಲಿನ ಎಸ್ಟಿಮೇಟು ಸರಿಯಾಗಿಯೇ ಇದ್ದಿತು. ಪುನಃ ಅದನ್ನು ರಿವೈಜ್ ಮಾಡಲಾಯಿತು. ಎಸ್ಟಿಮೇಟು ರಿವೈಜ್ ಆದನಂತರ ಒಟ್ಟು ಅಷ್ಟು ಖರ್ಚಾಗಿದೆ.

ಶ್ರೀ ಎಸ್. ಎಂ. ಕೃಷ್ಣ.—ಕೊ-ಆಪರೇಟಿವ್ ಇನ್‌ಸ್ಟಿಟ್ಯೂಷನ್ನಿನ ಕಟ್ಟಡ ಕಟ್ಟುವುದಕ್ಕೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ತಜ್ಞರ ಸಲಹೆ ತೆಗೆದುಕೊಳ್ಳುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಟೆಕ್ನಿಕಲ್ ನಾಲೆಡ್ಜ್ ಉಪಯೋಗಿಸುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬೆಂಗಳೂರಿನಲ್ಲಿ ಒಬ್ಬ ಎಂಜಿನಿಯರ್ ಇರುತ್ತಾನೆ. ಆರು ತಿಂಗಳಿಗೋ ಒಂದು ವರ್ಷಕ್ಕೋ ಅವರು ನೋಡುವುದಕ್ಕೆ ಬರುತ್ತಾರೆ. ಸ್ಥಳದಲ್ಲಿ ಇರತಕ್ಕವರೇ ಕೆಲಸ ಮಾಡುವುದರಿಂದ ಕೆಲಸ ನಿಧಾನವಾಗುತ್ತದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಕನ್ಸಲ್ಟಿಂಗ್ ಎಂಜಿನಿಯರ್ ನೇಮಿಸಿಕೊಂಡಿದೆ. ಅವರ ಅಭಿಪ್ರಾಯ ತೆಗೆದುಕೊಂಡು ಎಸ್ಟಿಮೇಟು ಮಾಡಿರುತ್ತದೆ.

ಶ್ರೀ ಎಸ್. ಎಂ. ಕೃಷ್ಣ—ರಿವೈಜ್ಡ್ ಎಸ್ಟಿಮೇಟು ಶೇಕಡ 100 ರಷ್ಟು ಜಾಸ್ತಿಯಾಗುವುದಕ್ಕೆ ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ಅದಕ್ಕೆ ಕಾರಣ ಏನು ಅಂದರೆ 42 ಅಡಿ ಆಳದ ವರೆಗೆ ಹೋದರೂ ನೀರು ಬೀಳಲಿಲ್ಲ. ಹೆಚ್ಚು ಆಳ ಬಾವಿ ತೆಗೆಯುವುದಕ್ಕೆ ಎಸ್ಟಿಮೇಟು ರಿವೈಜ್ ಮಾಡಬೇಕಾಯಿತು.

ಶ್ರೀಮತಿ ರತ್ನಮ್ಮ ಮಾಧವರಾವ್.—ಹಣ ಪಡೆದಿರತಕ್ಕಂಥ ಕಂಟ್ರಾಕ್ಟರ್ ಯಾರು ?

Sri KONDAJJI BASAPPA.—Shall I mention the name of the Contractor, Sir?

Mr. SPEAKER.—Does the Hon'ble Member want the name of the Contractor? What is the importance behind it? Name need not be given.

ಶ್ರೀಮತಿ ರತ್ನಮ್ಮ ಮಾಧವರಾವ್.—ಸರಿಯಾದ ರೀತಿಯಲ್ಲಿ ಹಣ ರಿವೈಜ್ಡ್ ಎಸ್ಟಿಮೇಟ ಪ್ರಕಾರ ಪಾವತಿ ಮಾಡಿದ್ದೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಬೋರ್ಡ್ ಅಧ್ಯಕ್ಷರು ಕೊಟೇಷನ್ಸ್ ಕರೆದು ಕೊಟ್ಟಿದ್ದರು. ಎಗ್ಸಿಕ್ಯೂಟೀವ್ ಕಮಿಟಿ ಅದನ್ನು ರ್‍ಯಾಟಿಫೈ ಮಾಡಿದ್ದಾರೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಲೆಕ್ಕದ ವಿವರ ಕೊಟ್ಟಿರುವುದು ಸರಿಯಾಗಿ ಇದೆ ಎನ್ನುವುದಕ್ಕೆ ಪರಿಶೀಲನೆ ಮಾಡಿದ್ದೀರಾ ?

Sri KONDAJJI BASAPPA.—In fact, there are certain irregularities also. Now the Department has appointed a Deputy Registrar to hold a statutory enquiry under Section 64 of the Act and he is holding an enquiry in the matter.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ಬಾವಿಯ ಸುತ್ತಳತೆ ಎಷ್ಟು ಇದೆ? ಎಷ್ಟು ಅಡಿ ಆಳ ತೆಗೆದಮೇಲೆ ಕಲ್ಲು ಬಿದ್ದಿದೆ?

ಶ್ರೀ ಕೊಂಡಜ್ಜಿ ಬಸಪ್ಪ.—16 ಅಡಿ ಡಯಾಮೀಟರ್ ಇದೆ. 40 ಅಡಿ ಆಳ ಹೋದರೂ ಕೂಡ ನೀರು ಸಿಕ್ಕಲಿಲ್ಲ. ಆದುದರಿಂದ ರಿವೈಜ್ಡ್ ಎಸ್ಟಿಮೇಟು ಮಾಡಬೇಕಾಯಿತು.

Sri S. M. KRISHNA.—Would the Government consider the possibility of having adequate supervision not only in the construction of some of these wells and other buildings under the Co-operative Societies, but also to have a firm hold even from the stage of having the designs and entrusting it to the contractors? Right now the situation prevailing in this behalf is that some of these Co-operativ Institutions are going astray in entrusting these works to contractors. Would the Government consider the possibility of having a firmer grip over the contractors?

Sri KONDAJJI BASAPPA.—Every Plan and estimate has to be approved by the Departmental officer, *i.e.*, the Registrar of Co-operative Societies. Some of the Societies are doing it, and if some Societies have done it without the permission we will have to take action.

Sri S M. KRISHNA.—Has he any technical assistance for perusing those plans and designs?

Sri KONDAJJI BASAPPA.—He has not got.

Sri S. M. KRISHNA.—Would it not be logical that the Registrar should be provided with adequate technical assistance to scrutinize the plans and designs?

Sri KONDAJJI BASAPPA.—It is a suggestion for consideration.

ಶ್ರೀಮತಿ ರತ್ನಮ್ಮ ಮಾಧವರಾವ್.—ಕಂಟ್ರಾಕ್ಟ್ ತೆಗೆದುಕೊಂಡವರು ಒಬ್ಬರು, ಹಣ ಕೊಟ್ಟಿರುವುದು ಬೇರೆಯವರಿಗೆ. ಇದಕ್ಕೆ ಕಾರಣವೇನು?

ಶ್ರೀ ಕೊಂಡಜ್ಜಿ ಬಸಪ್ಪ.—ಹಾಗೆ ಆಗಿಲ್ಲ. ಮೊದಲು ಒಬ್ಬ ಕಂಟ್ರಾಕ್ಟರ್ ಇದ್ದರು. ಆಮೇಲೆ ಬೇರೆ ಕಂಟ್ರಾಕ್ಟರ್ ಕೆಲಸ ವಹಿಸಿಕೊಂಡರು. ಲೆಕ್ಕ ಫೈನಲೈಜ್ ಮಾಡಿ ಸರಿಯಾದ ರೀತಿಯಲ್ಲಿ ದುಡ್ಡು ಕೊಟ್ಟಿದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಆ ಬ್ಯಾಂಕಿನ ಅಧ್ಯಕ್ಷರು ಯಾರು? ಅವರ ಹೆಸರು ಹೇಳುತ್ತೀರಾ?

Sri KONDAJJI BASAPPA.—I don't think I can disclose the name of the President.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಮ್ಮ ರಾಜ್ಯದಲ್ಲಿ ಎಷ್ಟೋ ಬಾವಿಗಳನ್ನು ಮಾಡಬೇಕಾಗಿದೆ. ಒಂದು ಬಾವಿಗೆ ಇಪ್ಪತ್ತೈದು ಸಾವಿರ ರೂಪಾಯಿ ಖರ್ಚು ಮಾಡುವುದಾದರೆ ನಮ್ಮ ಸ್ಥಿತಿ ಏನು ಎನ್ನುವುದನ್ನು ಯೋಚನೆ ಮಾಡಿದ್ದೀರಾ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗಲೂ ಆ ಬಾವಿಗೆ ನೀರು ಬಿದ್ದಿಲ್ಲ. ಹತ್ತಿರದಲ್ಲಿರುವ ಇರಿಗೇಷನ್ ಚಾನೆಲ್ ನೀರು ಬಿಟ್ಟು ಅಲ್ಲಿ ಒಂದು ಟ್ಯಾಂಕ್ ಮಾಡಿಕೊಂಡು ನೀರು ಉಪಯೋಗಿಸಬೇಕೆಂದು ಮಾಡಿದೆ.

ಶ್ರೀ ಬಿ. ಎಂ. ಪಾಟೀಲ್.—ಎಸ್ಟಿಮೇಟು ಮಾಡುವುದಕ್ಕೆ ಮುಂಚಿತವಾಗಿ ಬೋರಿಂಗ್ ಮೆಷಿನ್ ಹಚ್ಚಿ ನೀರು ದೊರೆಯಲು ಎಷ್ಟು ಆಳ ಹೋಗಬೇಕಾಗುತ್ತದೆ ಎನ್ನುವುದನ್ನು ತಿಳಿದುಕೊಂಡು ಅಂದಾಜು ಮಾಡಿದ್ದರು ಅಲ್ಲವೇ?

ಶ್ರೀ ಕೊಂಡಜ್ಜಿ ಬಸಪ್ಪ.—ಅದನ್ನು ಮಾಡಿದ ಹಾಗೆ ಕಾಣುತ್ತದೆ. ಅನುಮಾನ ಇಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನನಗೇನೋ ಇಷ್ಟು ಹಣ ಖರ್ಚು ಮಾಡಿರುವುದರಲ್ಲಿ ಅನುಮಾನವಾಗುತ್ತದೆ. 75 ಅಡಿ ಆಳ ಬಾವಿಗೆ 26 ಸಾವಿರ ರೂಪಾಯಿ ಖರ್ಚು ಆಗುವುದಿಲ್ಲ. ಇದರಲ್ಲಿ ಏನೋ ದುರುಪಯೋಗ ಮಾಡಿ ಹಣ ತೆಗೆದುಕೊಂಡಿದ್ದಾರೆ ಎಂದು ಅನುಮಾನವಾಗುತ್ತದೆ. ಇದರ ಬಗ್ಗೆ ವಿಚಾರ ಮಾಡುತ್ತೀರಾ?

ಶ್ರೀ ಕೊಂಡಜ್ಜಿ ಬಸಪ್ಪ.—ಹಾಗೇನೂ ಇಲ್ಲ. ಮೊದಲಿನ ಎಸ್ಟಿಮೇಟು ರಿವೈಜ್ ಮಾಡಬೇಕಾಯಿತು. ಇಬ್ಬರು ಕಂಟ್ರಾಕ್ಟರ್‌ರಿಗೆ ಕೆಲಸ ಕೊಟ್ಟಿದೆ. ಬಾವಿಯ ಆಳ ಹೆಚ್ಚು ಮಾಡಿದರೂ ಕೂಡ ನೀರು ಬೀಳಲಿಲ್ಲ. ಮ್ಯಾನೇಜಮೆಂಟಿನವರು ಇಷ್ಟಕ್ಕೆ ಸಾಕು ಇನ್ನು ಹೆಚ್ಚು ಆಳ ತೆಗೆಯುವುದು ಪ್ರಯೋಜನವಿಲ್ಲ ಎಂದು ಹೇಳಿದ್ದರಿಂದ ಕೆಲಸ ನಿಲ್ಲಿಸಿದ್ದಾರೆ. ಹಣ ದುರುಪಯೋಗವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀಮತಿ ರತ್ನಮ್ಮ ಮಾಧವರಾವ್.—ಇಷ್ಟೆಲ್ಲಾ ಕೇಳಿದ ಮೇಲೆ ಇದರಲ್ಲಿ ಏನೋ ನಡೆದಿದೆ ಎಂದು ಹೇಳಿ ಕಂಡುಬರುತ್ತದೆ ಆದ್ದರಿಂದ ಇದರ ಬಗ್ಗೆ ಏನಾದರೂ ಮಾಡುತ್ತೀರಾ?

Sri KONDAJJI BASAPPA.—Under Section 64 of the Act, th Deputy Registrar is already holding an enquiry into the working of the Institution.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ಕೋ-ಆಪರೇಟೀವ್ ಸೊಸೈಟಿ ಪ್ರಿಮಿಸಸ್‌ನಲ್ಲಿ ಬಾವಿಯನ್ನು ತೆಗೆಸುವ ಉದ್ದೇಶವಾದರೂ ಏನು?

ಶ್ರೀ ಕೊಂಡಜ್ಜಿ ಬಸಪ್ಪ.—ಪಾರ್ ಬಾಯಿಲ್ಡ್ ರೈಸ್ ಮಾಡಲು ಉಪಯೋಗಿಸಿಕೊಳ್ಳಬೇಕೆಂದು ಮಾಡಿದ್ದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರ ಹೆಸರು ಹೇಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದಿರಿ. ಆ ಮಾರ್ಕೆಟಿಂಗ್ ಸೊಸೈಟಿ ಅಧ್ಯಕ್ಷರು ನಮ್ಮವರೇ? ನಿಮ್ಮವರೇ?

ಶ್ರೀ ಕೊಂಡಜ್ಜಿ ಬಸಪ್ಪ.—ಅವರು ನಮ್ಮವರೂ ಅಲ್ಲ ನಿಮ್ಮವರೂ ಅಲ್ಲ, ಆ ಸೊಸೈಟಿಯ ಸದಸ್ಯರು.

Recognition to Medical Colleges in the State.

**Q.*—452. Smt. NAGARATHNAMMA HIREMATH (Gandhinagar).—*

Will the Government be pleased to state :—

(*a*) the names of Medical Colleges in the State to which the Indian Medical Council has accorded temporary or permanent recognition;

(*b*) the names of Medical Colleges in the State to which the British Medical Council has accorded temporary or permanent recognition.

(*c*) the action taken to obtain permanent recognition for the State Medical Colleges from both the Councils;

(*d*) whether they are aware of the hardships experienced by the students of the State Colleges in securing jobs in England due to non-recognition of the State Medical Colleges by the British Council?

A.—Sri K. NAGAPPA ALVA (Minister for Health).—

(*a*) The Medical Council of India recognises the Medical degrees awarded by the Universities and not the Medical Colleges. The Medical degrees granted by the University of Mysore and the Karnatak University, Dharwar, *i.e.*, the M. B. B. S. Course imparted in the Government Medical Colleges at Mysore, Bangalore and Karnatak Medical College, Hubli and Kasturba Medical College, Manipal are recognised by the Medical Council of India.

(*b*) Temporarily all the above mentioned Colleges.

(*c*) I. The M.B.B S. degrees of the University of Mysore and Karnatak University are recognised by the Medical Council of India as per Indian Medical Council Act, 1956.

II. The question of recognition of M. B. B. S. degrees granted by the University of Mysore and Karnatak University by the General Medical Council of U. K. is taken up by the Medical Council of India which is the authority to move the General Medical Council of U. K.

(*d*) No. The General Medical Council gives temporary registration to Medical students who go to U. K. in order to enable them to hold appointments as Medical Practitioners in approved Hospitals in the U.K.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಮೇಲ್ಕಂಡ ಕಾಲೇಜುಗಳೆಲ್ಲಕ್ಕೂ ತಾತ್ಕಾಲಿಕವಾಗಿ ಮಾನ್ಯತೆ ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಖಾಯಂ ಆಗಲಿಕ್ಕೆ ಇನ್ನೂ ಎಷ್ಟು ವರ್ಷಕಾಲ ಬೇಕು ?

ಶ್ರೀ ಕೆ. ನಾಗಪ್ಪ ಆಳ್ವ.—ವರ್ಷಗಳ ಕಾಲ ಬೇಕಾಗಿಲ್ಲ; ಕೆಲವು ತಿಂಗಳುಗಳ ಕಾಲ ಬೇಕಾಗುತ್ತದೆ. ಮೊನ್ನೆ ತಾನೆ ಜನರಲ್ ಮೆಡಿಕಲ್ ಕೌನ್ಸಿಲ್ ಯು. ಕೆ. ಅವರು ಬಂದು ವಿಸಿಟ್ ಮಾಡಿ ಹೋಗಿದ್ದಾರೆ. ಅವರು ರಿಪೋರ್ಟ್ ಕೂಡ ಸಲ್ಲಿಸಿದ್ದಾರೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಮೊನ್ನೆ ತಾನೆ ಗುಳಿಗೆ ತೆಗೆದುಕೊಂಡಿದ್ದೀರಿ, ತಾವು ಹೇಳುತ್ತಿರುವುದು ಸುಳ್ಳು ರಿಪೋರ್ಟೇ ಅಥವಾ ನಿಜವೇ ಅಂತ ?

ಶ್ರೀ ಕೆ. ನಾಗಪ್ಪ ಆಳ್ವ.—ಸುಳ್ಳು ಯಾವಾಗಲೂ ನಾನು ಹೇಳಲಿಲ್ಲ, ಇನ್ನೂ ಕೂಡ ಹೇಳುವುದಿಲ್ಲ.

ಶ್ರೀ ಕೆ. ವಿ. ಬೈರೇಗೌಡ.—ಯು.ಕೆ. ನಲ್ಲಿ ಡಿಗ್ರಿ ರೆಕಾಗ್ನಿಷನ್ ಟೆಂಪೂರರಿಯಾಗಿ ಮಾಡುತ್ತಾ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಕೆ. ನಾಗಪ್ಪ ಆಳ್ವ.—ವಿದ್ಯಾರ್ಥಿಗಳಿಗೆ ಯಾವ ತರಹದ ತೊಂದರೆಯೂ ಆಗಿಲ್ಲ. ಮೆಡಿಕಲ್ ಪ್ರಾಕ್ಟೀಸ್ ಮಾಡಲಿಕ್ಕೆ ಅಥವಾ ಕೆಲಸಕ್ಕೆ ತೆಗೆದುಕೊಳ್ಳಲಿಕ್ಕೆ ತೊಂದರೆ ಬಾದಿದೆ ಆ ವಾಟ್ಟಿಗೂ ಕೂಡ ಟೆಂಪೊರರಿಯಾಗಿ ಇಂಟರ್‌ವ್ಯೂ ಕರೆದು ಪರ್ಮಿಷನ್ ಕೊಡುತ್ತಾ ಇದ್ದಾರೆ.

ಶ್ರೀ ಎಸ್. ಶಿವಪ್ಪ.—ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿರತಕ್ಕ ಮೆಡಿಕಲ್ ಕಾಲೇಜು ಸ್ಥಾಪನೆಯಾಗಿ ಅನೇಕ ದಶಕಗಳಾದರೂ ಕೂಡ ಆ ಕಾಲೇಜಿಗೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಪರ್ಮನೆಂಟ್ ರೆಕಗ್ನಿಷನ್ ಕೊಡದೆ ಇರುವುದಕ್ಕೆ ಕಾರಣ ಎಕ್ವಿಪ್‌ಮೆಂಟ್ ಮತ್ತು ಸ್ಟಾಫ್ ರಿಕ್ವೈರ್‌ಮೆಂಟ್ ಅವರು ನಿರೀಕ್ಷಿಸಿದ ರೀತ್ಯಾ ಇಲ್ಲದೇ ಇರುವುದು ಕಾರಣವಲ್ಲವೆ ?

ಶ್ರೀ ಕೆ. ನಾಗಪ್ಪ ಆಳ್ವ.—ತಾವು ಅರ್ಥ ಮಾಡಿಕೊಳ್ಳಲಿಲ್ಲ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ರಿಕಗ್ನೈಸ್ ಮಾಡಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಒಂದು ವರ್ಷದ ಕೆಳಗೆ ಇನ್ನು ಒಂದೆರಡು ತಿಂಗಳಿನೊಳಗೆ ರೆಕಾಗ್ನಿಷನ್ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ, ಒಂದೆರಡು ತಿಂಗಳಿನೊಳಗೆ ಈ ಸಭೆಯ ಮುಂದೆ ಏನು ಕ್ರಮ ತೆಗೆದುಕೊಂಡಿದ್ದೇವೆ, ಏನು ಪ್ರತಿಫಲ ದೊರೆಯಿತು ಎಂಬುದನ್ನು ಹೇಳುತ್ತೇವೆ ಎಂದು ಹೇಳಿದಿರಿ ಮತ್ತು ಈಗ ಎರಡು ತಿಂಗಳು ಮುಂದಕ್ಕೆ ಹಾಕುತ್ತಾ ಇದ್ದೀರಿ. ಈ ವಿಷಯದಲ್ಲಿ ಸರ್ಕಾರದವರ ಖಚಿತವಾದ ನಿಲುವು ಏನು ?

ಶ್ರೀ ಕೆ. ನಾಗಪ್ಪ ಆಳ್ವ.—ನಮ್ಮ ನಿಲುವು ಸರಿಯಾದ ನಿಲುವೇ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ತಿಳಿಸಿದಂತೆ ಯು. ಕೆ. ಮೆಡಿಕಲ್ ಕೌನ್ಸಿಲ್ ಅವರು ಬಂದು ತಮ್ಮ ರಿಪೋರ್ಟ್ ಕೊಟ್ಟಿದ್ದಾರೆ.

Sri S. SIVAPPA.—May I know why the Medical Council of the United Kingdom has not given permanent recognition to the Medical College students who have passed out of Mysore and Karnatak Universities ?

Sri K. NAGAPPA ALVA.—For the permanent recognition, it is necessary that reports from the Indian Medical Council should be submitted to them and they have to convince themselves about that. That has been delayed. That is why the representatives of United Kingdom came here just two months back in January and February and they have submitted the report.

Sri S. M. KRISHNA.—Has it come to the notice of the Government that any degree that is awarded by the Madras Medical College is recognised by the All-India Medical Council as well as the Medical Council of U. K. ?

Sri K. NAGAPPA ALVA.—Madras Medical College has been recognised. Even there in Madras State, there are colleges which have not been recognised.

ಶ್ರೀ ಆರ್. ಎಸ್. ಪಾಟೀಲ್.—ಯುನೈಟೆಡ್ ಕಿಂಗ್‌ಡಂನಲ್ಲಿರುವ ಸಾರ್ವತ್ರಿಕ ವೈದ್ಯಕೀಯ ಪರಿಷತ್ತಿನವರೊಡನೆ ವ್ಯವಹರಿಸಿದ್ದಾರೆ ಎಂದು ತಿಳಿಸಿದ್ದೀರಿ. ಅವರಿಂದ ಉತ್ತರ ಬಂದಿರಬೇಕಲ್ಲಾ ಏನು ಉತ್ತರ ಬಂದಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಉತ್ತರ ಇಷ್ಟರವರೆಗೂ ಬಂದಿಲ್ಲ.

Sri C. J. MUCKANNAPPA.—May I know what is the difficulty the State Government are facing to get permanent recognition to the colleges that are mentioned in the reply ?

Sri K. NAGAPPA ALVA.—There is no difficulty at all. We have been developing these institutions according to the conditions that have been laid down and the representatives have visited and they have sent a report. I hope there would not be any difficulty in recognising them.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ಕಾಲೇಜುಗಳಿಗೆ ಮಾನ್ಯತೆ ಕೊಡುವಾಗ ಯಾವ ಯಾವ ವಿಷಯಗಳನ್ನು ಅವರು ಗಮನಕ್ಕೆ ತೆಗೆದುಕೊಳ್ಳುತ್ತಾರೆ ?

ಶ್ರೀ ಕೆ. ನಾಗಪ್ಪ ಆಳ್ವ.—ಇದರಲ್ಲಿ ಮುಖ್ಯವಾಗಿ ಗಮನಿಸತಕ್ಕ ವಿಚಾರ ಎಕ್ವಿಪ್‌ಮೆಂಟ್ ಮತ್ತು, ಸ್ಟ್ಯಾಫ್.

Sri C. J. MUCKANNAPPA.—May I know the conditions that the Medical Council have imposed on the State Government to recognise medical colleges in the State ?

Sri K. NAGAPPA ALVA.—I do not have the details. As I said, the main condition that has been laid down is the standard of education that is imparted for which building programme as well as equipment and staff pattern should be all-right.

Sri S. M. KRISHNA.—Even after sincere efforts for the past 10 years by the State Government to get the needed recognition from All-India Medical Council as well as British Medical Council, they have yet to get the recognition ; would not the Government take this as a serious reflection ?

Sri K. NAGAPPA ALVA.—There is no reflection at all. I have been explaining very very clearly that these institutions have been developed satisfying all these conditions and the Indian Medical Council have recognised. The question is recognition by the United Kingdom Medical Council.

Sri S. SIVAPPA.—The Government were pleased to say that certain medical colleges were recognised by the Medical Council of India. May I know what is the fate of other Medical Colleges in the State ?

Sri K. NAGAPPA ALVA.—The question of recognition of those colleges comes only when they become full-fledged colleges, that is, when the first batch of students come out of those colleges after they appear for final year examinations.

Copper sheets allotted to Mysore State.

*Q.—484. Smt. SUSHILABAI HIRACHAND SHAH (Bagewadi).—

Will the Government be pleased to state :—

(a) the quantity of copper sheets allotted to the Mysore State from Government of India during the year 1962–63 and up-to-date ;

(b) the principles adopted for distribution of the same throughout the State during the same year and up-to-date ;

(c) the names of the agencies which have been allotted more than ten tons each during the said period ;

(d) the number of agencies who have been supplied less than one ton ?

A.—**Sri K. MALLAPPA** (Minister for Industries and Commerce).—

(*a*) Copper in the form of ingot is only allotted to the State. The details of allotment from 1962-63 are furnished hereunder :—

1962—63	...	938	M. tons.
1963—64	...	1006	,,
1964—65	...	410	,,

(For April—September 1964—6 months only).

(*b*) Principles adopted for the distribution is that all copper consuming industries coming under the general engineering items have been inspected and classified into different categories based on the type of manufacture undertaken by them. They are further divided into sub-classes based on the installed capacity. Then the distribution to the various categories, *viz.*, wire drawing, sheet rolling and casting, etc., is made on a *pro rata* basis in proportion to their capacities.

(*c*) Copper ingots of more than 10 tonnes were allotted to the following :—

1. M/s. Mysore Wire and Metal Industries, Bangalore.
2. M/s. Vardhaman Metal Wire Works, Industrial Estate, Hubli.
3. M/s. Kabadi Venkusa and Sons, Bangalore.
4. M/s. Bharat Metal Industries, Bangalore.
5. M/s. Karnataka Casting and Rolling Units Bangalore.
6. M/s. Mysore Metal Rolling Mills, Bangalore.
7. M/s. Annapoorna Cooker Co., Bangalore.
8. M/s. S. Dhondusa Gold Thread Factory, Bangalore.

(*d*) 316 Units have been supplied less than one M. Ton of copper.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—8 ಮಂದಿ ಹೆಸರುಗಳನ್ನು ಕೊಟ್ಟಿದ್ದೀರಿ ಪ್ರತಿಯೊಬ್ಬರಿಗೂ ಎಷ್ಟೆಷ್ಟು ಟನ್ ಕೊಟ್ಟಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—10 ಟನ್‌ಗಳಿಗಿಂತಲೂ ಹೆಚ್ಚಿಗೆ ಕೊಟ್ಟಿರತಕ್ಕವರ ಹೆಸರನ್ನು ತಿಳಿಸಿದ್ದೇವೆ ಯಾರ್ಯಾರಿಗೆ ಎಷ್ಟೆಷ್ಟು ಕೊಡಲಾಗಿದೆ ಎಂಬ ವಿವರ ಇಲ್ಲ. ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಆ ವಿವರವನ್ನು ಕೊಡುತ್ತೇನೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಇಂಡಸ್ಟ್ರೀ ಮಾಡತಕ್ಕವರು ಒಂದು ಟನ್ ಕೇಳಿದರೆ ಅರ್ಧ ಟನ್ ಸಹ ಸಿಕ್ಕುವುದು ಕಷ್ಟವಾಗಿದೆ. ಹಾಗಿದ್ದಮೇಲೆ ಅವರು ತಾಮ್ರದ ಕೆಲಸ ಮಾಡುವುದಾದರೂ ಹೇಗೆ ?

ಶ್ರೀ ಕೆ. ಮಲ್ಲಪ್ಪ.—ಕೇಳಿದಷ್ಟು ತಾಮ್ರ ಸಿಕ್ಕುವುದಿಲ್ಲ. ಅವರು ಹಿಂದೆ ಎಷ್ಟು ಪ್ರಮಾಣದ ಪದಾರ್ಥಗಳನ್ನು ತಯಾರು ಮಾಡುತ್ತಾ ಇದ್ದರು, ಅಲ್ಲಿರತಕ್ಕ ಯಂತ್ರ, ಸಲಕರಣೆಗಳೇನು ಎಂಬುದನ್ನೆಲ್ಲಾ ನೋಡಿ ಯಾವ ಇಂಡಸ್ಟ್ರೀ ಇದೆ ಎಂಬುದನ್ನೂ ಕೂಡ ವಿಂಗಡಣೆ ಮಾಡಿ ಅದಕ್ಕೆ ತಕ್ಕ ಪ್ರಮಾಣದಲ್ಲಿ ಅದನ್ನು ಹಂಚುತ್ತಾ ಇದ್ದೇವೆ.

ಶ್ರೀ ಎಸ್. ಎಂ. ಕೃಷ್ಣ.—ಕಳೆದ 3 ವರ್ಷಗಳಿಂದ ತಾಮ್ರದ ಕೋಟಾ ದುರುಪಯೋಗ ಮಾಡಿರುವ ಬಗ್ಗೆ ಎಷ್ಟು ದೂರುಗಳು ಬಂದಿವೆ ? ಹಾಗೆ ಬಂದಿರುವ ಸಂದರ್ಭಗಳಲ್ಲಿ ದುರುಪಯೋಗ ಮಾಡಿರುವವರ ಮೇಲೆ 1962 ರಿಂದ ಎಷ್ಟು ಕೇಸುಗಳನ್ನು ಹಾಕಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಯಾರ ಮೇಲೆ ದೂರು ಬಂದಿದೆಯೋ ಅಂಥವರಿಗೆ ಕೊಡುತ್ತಿದ್ದ ಕೋಟಾ ಮನ್ನಾ ಮಾಡಲಾಗಿದೆ. ಪ್ರತ್ಯೇಕ ಪ್ರಶ್ನೆ ಕೊಟ್ಟರೆ ಮಾನ್ಯ ಸದಸ್ಯರು ಕೇಳುವ ವಿವರ ಕೊಡಬಹುದು.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಕೆಲವರಿಗೆ ಸಾಕಷ್ಟು ಕೋಟಾ ದೊರೆಯದೆ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿದೆಯೇ? ದುರುಪಯೋಗ ಮಾಡುವವರನ್ನು ಚೆಕ್‌ಮಾಡಿ ಕ್ರಮ ಕೈಕೊಳ್ಳುತ್ತಿರುವರೇ ?

ಶ್ರೀ ಕೆ. ಮಲ್ಲಪ್ಪ.—ಅವರವರು ಮಾಡುವ ಕೆಲಸಕ್ಕನುಗುಣವಾಗಿ ವೈರು, ಮೋಟಾರು, ಟ್ರಾನ್ಸ್‌ಫಾರ್ಮರು ಮುಂತಾದ್ದೇನು ತಯಾರುಮಾಡುತ್ತಾರೆ ಎಂಬುದನ್ನು ನೋಡಿ, ಯಾವ ರೀತಿ ಮಾರಾಟಮಾಡುತ್ತಾರೆಂಬುದನ್ನು ಪರಿಶೀಲಿಸಿ ತಕ್ಕಷ್ಟು ಕೋಟಾ ಕೊಡಲಾಗುತ್ತಿದೆ. ಕೊಟ್ಟಿರುವುದನ್ನು ಸರಿಯಾಗಿ ಉಪಯೋಗಮಾಡುತ್ತಿರುವರೇ ಎಂಬುದನ್ನು ರಸೀತಿ ಮುಂತಾದ್ದನ್ನು ನೋಡಿ ಚೆಕ್‌ಮಾಡಿ ಸೂಕ್ತ ಕ್ರಮ ಕೈಕೊಳ್ಳುತ್ತಾರೆ.

Sri K. P. GADAG.—May I know whether the Government have any agency to supervise or to check these industrialists as to whether they are using their copper allotments for *bona-fide* manufacturing purposes in their factories or sell their quota in black market ?

Sri K. MALLAPPA.—We have at the district level, Assistant Directors. Then we have a special investigation officer and inspection officer at the state level.

ಶ್ರೀ ಬಿ. ಭಾಸ್ಕರಶೆಟ್ಟಿ.—1964-65 ಕೇವಲ 410 ಮೆಟ್ರಿಕ್ ಟನ್ನುಗಳಷ್ಟು ಕಡಮೆ ಅಲಾಟ್‌ಮೆಂಟ್ ಬಂದಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಮಲ್ಲಪ್ಪ.—ಅದು 6 ತಿಂಗಳಿಗೆ ಮಾತ್ರ ದೊರೆತಿರುವುದು. ಅಲ್ಲದೆ ಈಗ ತಾಮ್ರಕ್ಕೆ ಕ್ರಯ ಜಾಸ್ತಿಯಾಗಿದೆ. ಹಣದ ಮಿತಿ ಅಷ್ಟೇ ಇದೆ, ಅದರ ಕ್ರಯ ಹೆಚ್ಚಿರುವುದರಿಂದ ಪ್ರಮಾಣ ಕಡಮೆ ಆಗಲೇಬೇಕು. ಇನ್ನೂ ಸಾಧಾರಣವಾಗಿ 400 ಟನ್ ಬರುತ್ತದೆ.

ಶ್ರೀ ಆರ್. ಎಸ್. ಪಾಟೀಲ್.—ಭಾರತ ಸರಕಾರ ರಾಜ್ಯ ಸರಕಾರಕ್ಕೆ ಯಾವ ಆಧಾರದ ಮೇಲೆ ಹಂಚುತ್ತದೆ ! ನಮಗೆ ಸರಿಯಾದ ಕೋಟಾ ಸಿಕ್ಕಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಹೊರಗಿನಿಂದ ಬರುವುದು ಮತ್ತು ದೇಶದಲ್ಲಿ ಖರ್ಚಾಗುವುದು ನೋಡಿ ಈ ಎರಡು ಆಧಾರಗಳ ಮೇಲೆ ಹಂಚುತ್ತಾರೆ. ನಮಗೆ ಬೇಕಾಗುವಷ್ಟು ಸಿಕ್ಕುತ್ತಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—(ಸಿ) ಪ್ರಶ್ನೆಗೆ ಉತ್ತರವಾಗಿ 8 ಹೆಸರುಗಳನ್ನು ಕೊಡಲಾಗಿದೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನಿಂದ ತಾಮ್ರವನ್ನು ಎಷ್ಟು ಜನ ಪಡೆದಿದ್ದಾರೆ ?

Sri K. MALLAPPA.—316 units have been supplied less than one metric tone of copper each.

Sri C. J. MUCKANNAPPA.—There is a list available in the Small Scale Industries Corporation as to how many people are entitled to copper : out of these 316, how many of them have actually drawn copper and sold it in the black market ?

Sri K. MALLAPPA.—We have a list and according to that list distribution has been made. It is presumed all the 316 have drawn.

ಶ್ರೀಮತಿ ಅನ್ನಪೂರ್ಣಬಾಯಿ ರಾಗಟೆ.—ಬೆಂಗಳೂರು, ಹುಬ್ಬಳ್ಳಿ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವವರಿಗೇ ಹೆಚ್ಚು ದೊರೆಯುತ್ತಿದ್ದು ಹಳ್ಳಿಯವರಿಗೆ ಹೆಚ್ಚು ದೊರೆಯುತ್ತಿಲ್ಲ ವೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ತೊಡಗಿರುವವರು ಪಟ್ಟಣಗಳಲ್ಲೇ ಇರುವುದರಿಂದ ಅವರಿಗೆ ಹೆಚ್ಚು ದೊರೆತಿದೆ, ಉಳಿದವರಿಗೂ ತಕ್ಕಷ್ಟು ದೊರೆಯುತ್ತಿದೆ.

ಶ್ರೀ ಸಿದ್ದಯ್ಯ ಕಾಶಿಮಠ್.—ಅಕ್ಕಪಕ್ಕದ ರಾಜ್ಯಗಳಾದ ಆಂಧ್ರ ಮತ್ತು ಮತ್ತು ಮಹಾರಾಷ್ಟ್ರ ಪ್ರಾಂತಗಳಿಗೆ ಹೆಚ್ಚು ದೊರೆತು ನಮಗೆ ಕಡಮೆ ಸರಬರಾಜು ಮಾಡುತ್ತಿರುವುದನ್ನು ಗಮನಿಸಿ ನಮಗೆ ಕೊಡಬೇಕಾದ ಕೋಟಾ ಹೆಚ್ಚಿಸಲು ಪ್ರಯತ್ನಪಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ನಮಗೆ ಸಾಕಾದಷ್ಟು ದೊರೆಯದೆ ಅನ್ಯಾಯವಾಗಿದೆಯೆಂಬುದು ಕೇಂದ್ರ ಸರ್ಕಾರಕ್ಕೆ ಗೊತ್ತಿದೆ. ಅದಕ್ಕಾಗಿ ಒಂದು ಸಮಿತಿ ನೇಮಕಮಾಡಲಾಗಿದೆ, ಅದರ ವರದಿ ಶೀಘ್ರದಲ್ಲೇ ಬರಲಿದೆ. ಅದು ಬಂದ ಮೇಲೆ ಪುನರ್ವಿಮರ್ಶೆಮಾಡುತ್ತಾರೆ.

ಶ್ರೀ ಕೆ. ವಿ. ಬೈರೇಗೌಡ.—ತಾಲ್ಲೂಕು ಲೆವಲ್ಲಿನಲ್ಲಿ ಕೋಟಾ ಸರಿಯಾಗಿ ಉಪಯೋಗವಾಗುತ್ತಿದೆಯೋ ಎಂಬುದನ್ನು ನೋಡುವವರು ಯಾರು ?

ಶ್ರೀ ಕೆ. ಮಲ್ಲಪ್ಪ.—ಎಕ್ಸ್‌ಟೆನ್‌ಷನ್ ಆಫೀಸರು, ಡಿಸ್ಟ್ರಿಕ್ಟ್ ಸೂಪರ್‌ವೈಜರು, ಜೂನಿಯರ್ ಸೂಪರ್‌ವೈಜರು, ಇಲಾಖೆಗೆ ಸಂಬಂಧಪಟ್ಟವರು, ಸ್ಪೆಷಲ್ ಇನ್‌ವೆಸ್ಟಿಗೇಷನ್ ಆಫೀಸರು ಮುಂತಾದವರು ತನಿಖೆಮಾಡುತ್ತಾರೆ. ಅದನ್ನು ಜಾಯಿಂಟ್ ಡೈರೆಕ್ಟರಿಗೆ ತಿಳಿಸುತ್ತಾರೆ.

ಶ್ರೀ ಎಸ್. ಶಿವಪ್ಪ.—(ಸಿ) ಪ್ರಶ್ನೆಗೆ ಉತ್ತರವಾಗಿ ನಮೂದಿಸಿರುವ ಏಜೆನ್ಸಿಗಳು ಕಾಳಸಂತೆ ವ್ಯಾಪಾರದಲ್ಲಿ ತೊಡಗಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಇಲ್ಲ. ಅವರ ಲೆಕ್ಕ ಪತ್ರಗಳ ಪರಿಶೀಲನೆ ಮಾಡಿದೆ, ಹಾಗೆ ಮಾಡಿ ಯಾರು ಯಾರಿಗೆ ಎಷ್ಟು ಕೊಡಬೇಕೆಂಬುದನ್ನು ನಿರ್ಣಯಮಾಡಿದೆ. ನಾವು ಎಚ್ಚರಿಕೆಯಿಂದ ಇದ್ದೇವೆ.

ಶ್ರೀ ಸಿ. ಎಸ್. ಹುಲ್ಕೋಟಿ.—ದುರುಪಯೋಗಮಾಡಿರುವುದು ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಮಲ್ಲಪ್ಪ.—ಕೆಲವು ಸಂದರ್ಭಗಳಲ್ಲಿ ಬಂದಿದೆ. ಅಂಥ ಸಂದರ್ಭಗಳಲ್ಲಿ ಖಂಡಿತವಾಗಿಯೂ ಮುಂದೆ ಕೋಟಾ ಕೊಡುವುದನ್ನು ನಿಲ್ಲಿಸಿದ್ದೇವೆ. ಪ್ರತ್ಯೇಕ ಪ್ರಶ್ನೆ ಕಳಿಸಿದರೆ ಬೇಕಾದ ವಿವರ ಶೇಖರಿಸಿ ತರಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಯಾವ ದರಕ್ಕೆ ತಯಾರಿಸಿದ ಪದಾರ್ಥಗಳನ್ನು ಮಾರಬೇಕೆಂಬುದನ್ನು ನಿಗದಿ ಮಾಡಿದೆಯೇ ? ಮಾಡದಿರುವುದೇ ದುರುಪಯೋಗವಾಗಲು ಕಾರಣವಾಗಿದೆಯಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಇಷ್ಟಕ್ಕೆ ಮಾರಬೇಕೆಂದು ಹೇಳುವುದಕ್ಕೆ ನಿಯಂತ್ರಣವಿಲ್ಲ. ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಮೂಲಕ ತರಿಸುವುದರಿಂದ ತರಿಸಿದ್ದಕ್ಕೆ ಆ ಸಂಸ್ಥೆ ಕ್ರಯ ನಿಗದಿಮಾಡುತ್ತದೆ. ತರಿಸಿದ್ದನ್ನು ತೆಗೆದುಕೊಂಡವರು ವೈರು, ಪಾತ್ರೆ ಮೊದಲಾದ ನಾನಾ ರೀತಿಯ ಸಾಮಾನುಗಳನ್ನು ತಯಾರಿಸುತ್ತಾರೆ, ಮಿಶ್ರಲೋಹದಿಂದಲೂ ತಯಾರಿಸುತ್ತಾರೆ. ಆದುದರಿಂದ ಇಂಥ ದರದಲ್ಲೇ ಮಾರಬೇಕೆಂದು ಹೇಳಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮುಂದಾದರೂ ಕಂಟ್ರೋಲ್ ದರದಲ್ಲಿ ಸರಬರಾಯಿ ಮಾಡಿದಾಗ ಕೂಲಿ, ಖರ್ಚು ಮುಂತಾದ್ದನ್ನು ಲೆಕ್ಕ ಹಾಕಿ ಇಷ್ಟಕ್ಕೇ ಮಾರಬೇಕೆಂದು ನಿಗದಿಮಾಡಿದರೆ ಕಾಳಸಂತೆ ಮಾರಾಟವನ್ನು ತಡೆಯಬಹುದಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಸದಸ್ಯರ ಸಲಹೆಯನ್ನು ವಿಚಾರಮಾಡಬೇಕು.

1-30 P.M.

ಶ್ರೀ ಎಸ್. ಸುಬ್ಬಯ್ಯನಾಯಕ್.—ಭಾರತ ಸರ್ಕಾರದವರು 8 ಮಂದಿಗೆ ಹಂಚಿಕೆ ಮಾಡಿದ್ದಾರೆಂದು ತಿಳಿಸಿದ್ದಾರೆ. ಅವರು ಆಯಾ ಜಿಲ್ಲಾ ಕೇಂದ್ರಗಳಿಗೆ ಅಥವಾ ತಾಲ್ಲೂಕು ಕೇಂದ್ರಗಳಿಗೆ ತಗಡು ಮಾಡಿ ಪಾತ್ರೆ ಮಾಡಲಿಕ್ಕೆ ಯಾವ ಆಧಾರದ ಮೇಲೆ ವಿತರಣೆ ಮಾಡುತ್ತಾರೆ ?

ಶ್ರೀ ಕೆ. ಮಲ್ಲಪ್ಪ.—ತಗಡು ಮಾಡುವುದಕ್ಕೆ ಇವರಿಗೆ ಕೊಟ್ಟಿಲ್ಲ. ತಂತಿ ಮತ್ತು ಯಂತ್ರ ಸಲಕರಣೆಗಳಿಗೆ ಬೇಕಾಗಿರತಕ್ಕ ವಸ್ತುಗಳನ್ನು ಮಾಡಲಿಕ್ಕೆ ಕೊಟ್ಟಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೋರ್ಡ್‌ಗಳಿರುತ್ತವೆ, ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಸಂಬಂಧಪಟ್ಟವರಿಗೆ ಈಗ ಆರು ತಿಂಗಳ ಹಿಂದೆ ನರಮಹಾಲಕ್ಷ್ಮಿ ಕಾಪರ್ ಇಂಡಸ್ಟ್ರೀಸ್ ಬಗ್ಗೆ ತಿಳಿಸಿ ಅವರಿಗೆ ಟನ್‌ಗಟ್ಟಲೆ ಕಾಪರ್ ಕೊಡುತ್ತಿರುವುದನ್ನು ಉಪಯೋಗಿಸುತ್ತಿಲ್ಲ ಅವರ ಹತ್ತಿರ ಟಿಂಕರ್ ಇಲ್ಲ, ಕೆಲಸಗಾರರಿಲ್ಲ ಎಂದು ಹೇಳಿದ್ದೆ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಅಥವಾ ಅವರಿಗೆ ಇನ್ನೂ ಪರ್ಮಿಟ್ ಮುಂದುವರಿಸುತ್ತಿದ್ದಾರೆಯೇ ಸ್ವಾಮಿ ?

ಶ್ರೀ ಕೆ. ಮಲ್ಲಪ್ಪ.—ಅರ್ಧ ಟನ್‌ಗಿಂತ ಕಡಮೆ ಕೊಡುವವರು ಈ 316 ಜನರಪಟ್ಟಿಯಲ್ಲಿದ್ದಾರೆ. ಅವರಿಗೆಲ್ಲ ದೊಡ್ಡ ಪ್ರಮಾಣದಲ್ಲಿ ಕೊಟ್ಟಿಲ್ಲ. ಮಾನ್ಯ ಸದಸ್ಯರು ಇನ್‌ಫರ್‌ಮೇಷನ್ ಕಳಿಸಿದರೆ ವಿಚಾರ ಮಾಡುತ್ತೇವೆ.

Sri C. J. MUCKANNAPPA.—Is it a fact that he is related to an Ex-Minister, that the Ex-Minister got him the licence, and that he is misusing the quota ? He is selling the ingots only in Bangalore, and not making anything at the place.

Mr. SPEAKER.—Next question.

Sri C. J. MUCKANNAPPA.—He has not given a proper reply to me: What action have the Government taken? I must congratulate the Hon'ble Minister for Industries about the action regarding stainless steel. I want to know what action he will take with regard to this copper in gots business.

Mr. SPEAKER.—We will wait and see.

Grant-in-aid to privately managed High Schools.

*Q.—491. Sri N. NANJE GOWDA (Krishnarajpet).—

Will the Government be pleased to state :—

(a) the date on which they issued orders asking the panchayats not to provide grant-in-aid to the privately managed high schools in the State;

(b) whether it has come to their notice that due to the above order it has become difficult to run the private high schools and that the villagers are greatly inconvenienced in the matter of education?

A.—Sri S. R. KANTHI (Minister for Education).—

(a) No such order was issued.

(b) Does not arise.

ಶ್ರೀ ಎನ್. ನಂಜೇಗೌಡ.— ಪ್ರೌಢಶಾಲೆಗಳಿಗೆ ಪಂಚಾಯಿತಿಯಿಂದ ಸಹಾಯ ಧನವನ್ನು ಕೊಡುವ ವಿಚಾರದಲ್ಲಿ ನಾನು ಕೇಳಿದ್ದೇನೆ. ಇದು ಮಾನ್ಯ ವಿದ್ಯಾಮಂತ್ರಿಗಳಿಗೆ ಸಂಬಂಧಪಟ್ಟ ಪ್ರಶ್ನೆಯೇ ಸ್ವಾಮಿ ?

† ಶ್ರೀ ಎಸ್. ಆರ್. ಕಂಠಿ.—ಪ್ರೌಢಶಾಲೆ ಎಂದರೆ ನನಗೆ ಸಂಬಂಧಪಟ್ಟದ್ದು. ಮಾನ್ಯ ಸದಸ್ಯರು ಉಪಪ್ರಶ್ನೆಗಳನ್ನು ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ಎನ್. ನಂಜೇಗೌಡ.— ಏನು ಆಜ್ಞೆಗಳು ಹೊರಟಿಲ್ಲ ಎಂದು ಹೇಳಿದ್ದಾರೆ. ಪಂಚಾಯಿತಿಗಳಿಂದ ಖರ್ಚು ಹಾಕಿ ಪ್ರೌಢಶಾಲೆಗಳಿಗೆ ಹಣ ಕೊಡಕೂಡದೆಂದು ಸರ್ಕಾರದವರು ಆಜ್ಞೆ ಹೊರಡಿಸಿರುವುದು ನಿಜವಲ್ಲವೇ ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—ಹಾಗೇನೂ ಆಜ್ಞೆ ಹೊರಟಿಲ್ಲ.

ಶ್ರೀ ಎನ್. ನಂಜೇಗೌಡ.— ಅಭಿವೃದ್ಧಿ ಶಾಖೆಯಿಂದ ಖಾಸಗಿ ಶಾಲೆಗಳಿಗೆ ಯಾವ ಸಹಾಯ ಧನವನ್ನೂ ಒದಗಿಸಕೂಡದು ಎಂದು ಸರ್ಕ್ಯುಲರ್ ಕಳಿಸಿದ್ದಾರೆ. ಅದನ್ನು ತಂದು ತೋರಿಸಿದರೆ ಅದನ್ನು ವಾಪಸು ತೆಗೆದುಕೊಳ್ಳುತ್ತಾರೆಯೇ ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—ಅಭಿವೃದ್ಧಿ ಶಾಖೆಯಿಂದ ನನ್ನ ಕಡೆಗೆ ಬಂದಿರುವ ಸಮಾಚಾರದಲ್ಲಿ ಅಂಥ ಆಜ್ಞೆ ಏನೂ ಹೊರಟಿಲ್ಲ ಎಂದು ತಿಳಿಸಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪ್ರಶ್ನೆ ಸ್ಥಳೀಯ ಸಂಸ್ಥೆ ಸಚಿವರಿಗೆ ಸಂಬಂಧಪಟ್ಟಿರುವುದರಿಂದ ಮಾನ್ಯ ವಿದ್ಯಾ ಮಂತ್ರಿಯವರು ಅವರಿಂದ ಬೇಕಾದ ಮಾಹಿತಿಯನ್ನು ತೆಗೆದುಕೊಂಡು ಉತ್ತರ ಕೊಡಬೇಕಲ್ಲವೇ ಸ್ವಾಮಿ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಮಂತ್ರಿಗಳು ಕೊಟ್ಟ ಉತ್ತರವನ್ನು ತಾವು ಸರಿಯಾಗಿ ಕೇಳಲಿಲ್ಲ ಎಂದು ಕಾಣುತ್ತದೆ.

ಶ್ರೀ ಎನ್. ನಂಜೇಗೌಡ —ಅಭಿವೃದ್ಧಿ ಶಾಖೆಯಿಂದ ಹೊರಟಿರುವ ಸರ್ಕ್ಯುಲರನ್ನು ಮಂತ್ರಿಗಳಿಗೆ ಕೊಟ್ಟರೆ ಅದನ್ನು ವಾಪಸು ತೆಗೆದುಕೊಳ್ಳುತ್ತಾರೆಯೇ ಸ್ವಾಮಿ ?

---

†I ndicates that the remarks or speeches have not been revised by the member concerned

Mr. SPEAKER.—It is hypothetical.

ಶ್ರೀ ಟಿ. ಮಾದಯ್ಯ ಗೌಡ.—ಖಾಸಗಿ ಪ್ರೌಢ ಶಾಲೆಗಳಿಗೆ ಪಂಚಾಯಿತಿಗಳವರು ಸಹಾಯ ದ್ರವ್ಯ ಕೊಡುವುದರಲ್ಲಿ ಸರ್ಕಾರದ ಅಭಿಮತ ಏನು ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—ಅಭಿಮತದ ಪ್ರಶ್ನೆಯಲ್ಲ. ಕಾನೂನಿನ ಪ್ರಶ್ನೆ ಇದೆ.

Sri SANJEEVANATH AIKALA.—Is it a fact that the high schools run by the taluk board are denied the grant-in-aid for furniture .....

Mr. SPEAKER.—How does it arise ? This question pertains to Panchayats.

Sri SANJEEVANATH AIKALA.—Taluk Boards is the next step. I am asking whether the same rules apply to taluk boards.

Mr. SPEAKER.—The Hon'ble Member may please put a separate question.

Manure collected in the Municipal Area of Tumkur Town.

*Q.—547. Smt. G. C. BHAGEERATHAMMA (Tumkur).—

Will the Government be pleased to state :—

(a) whether it has come to their notice that the health of the citizens of Tumkur is affected as the manure collected in the municipal area is being deposited in the heart of the town ;

(b) if so, the action taken by the Government ?

A.—Sri K. PUTTASWAMY (Minister for Municipal Administration).—

(a) No.

(b) Does not arise in view of the reply to clause (a).

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಬರವಣಿಗೆಯ ಮೂಲಕ ಮಾತ್ರವಲ್ಲ ಮೊಖ್ತಾ ಮಂತ್ರಿಗಳನ್ನು ಕಂಡು ಹೇಳುವುದರ ಮೂಲಕ ತಿಳಿಸಿದ್ದರೂ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಯಾವ ರೀತಿ ಸರ್ಕಾರದ ಗಮನಕ್ಕೆ ತರಬೇಕೆಂಬುದನ್ನು ಹೇಳುತ್ತಾರೆಯೇ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ಪ್ರಶ್ನೆಯಲ್ಲಿ ಎರಡು ಭಾಗವಿದೆ. ಆದ್ದರಿಂದ ಆ ತರಹ ಉತ್ತರವನ್ನು ಕೊಟ್ಟಿದೆ. ಊರಿನ ಮಧ್ಯೆ ಇದೆ ಎಂದು ಹೇಳುತ್ತಾರೆ. ಅದು ಊರಿನ ಮಧ್ಯೆ ಇಲ್ಲ. ಊರಿನ ಪಕ್ಕದಲ್ಲಿದೆ ಎಂದು ಬರೆದಿದ್ದಾರೆ. ಎರಡನೆಯದು ಆರೋಗ್ಯಕ್ಕೆ ಧಕ್ಕೆ ತಂದಿದೆ ಎಂದು ಹೇಳುತ್ತಾರೆ. ಆರೋಗ್ಯಕ್ಕೆ ಧಕ್ಕೆ ತಂದಿಲ್ಲ. ಮುನಿಸಿಪಾಲಿಟಿಯವರು ಊರಿನ ಪೂರ್ವ ಭಾಗವಲ್ಲದೆ, ಅದನ್ನು ಬೇರೆ ಕಡೆಗೆ ಬದಲಾಯಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಸರಿಯಾದ ಮತ್ತು ಸೂಕ್ತವಾದ ಜಾಗ ದೊರೆತಿಲ್ಲ. ಜಾಗ ದೊರೆತ ಕೂಡಲೇ ಬದಲಾಯಿಸುತ್ತೇವೆಂದು ಬರೆದಿದ್ದಾರೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರು, ತಿಪ್ಪೆಗುಂಡಿ ಅಲ್ಲಿರುವುದರಿಂದ ಆರೋಗ್ಯಕ್ಕೆ ಧಕ್ಕೆ ಬರುತ್ತದೆ ಎಂದು ಬರೆದು ಕಳಿಸಿಲ್ಲವೇ ಸ್ವಾಮಿ ? ಅದನ್ನು ಎಷ್ಟು ಕಾಲದೊಳಗೆ ಬದಲಾಯಿಸುತ್ತಾರೆ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರು ಬರೆದಿರುವ ವಿಚಾರ ನನಗೆ ತಿಳಿಯದು. ಅದನ್ನು ಬದಲಾಯಿಸಬೇಕೆಂದು ಸ್ಥಳೀಯ ಸಂಸ್ಥೆಯವರು ಇದ್ದಾರೆ. ಸ್ಥಳ ಹುಡುಕುತ್ತಿದ್ದೇವೆ, ಆದಷ್ಟು ಜಾಗ್ರತೆ ಬದಲಾಯಿಸುತ್ತೇವೆಂದು ಬರೆದಿದ್ದಾರೆ. ಆದುದರಿಂದ ಜಾಗ ಸಿಕ್ಕಿದ ಕೂಡಲೇ ಬದಲಾಯಿಸುತ್ತಾರೆ. ಯಾರಾದರೂ ನಾಗರಿಕರು ಸೂಕ್ತವಾದ ಜಾಗವನ್ನು ಆದಷ್ಟು ಜಾಗ್ರತೆ ಒದಗಿಸಿಕೊಟ್ಟರೆ ಬದಲಾಯಿಸುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ಯಾವಾಗ ಬದಲಾಯಿಸಬಹುದು ಎನ್ನುವುದಕ್ಕೆ ಸರ್ಕಾರದವರು ಭರವಸೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.— ಊರಿನ ಮಧ್ಯೆ ಇಲ್ಲದೇ ಹೋದರೆ ಜನರ ಆರೋಗ್ಯಕ್ಕೆ ಧಕ್ಕೆ ಬಾರದೆಇದ್ದರೆ ಅದನ್ನು ಬದಲಾಯಿಸುವುದಕ್ಕೆ ಕಾರಣವೇನಿದೆ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಊರಿನ ಪೂರ್ವಭಾಗದಲ್ಲಿದೆ. ರೆಸಿಡೆನ್ಷಿಯಲ್ ಕಾಲೋನಿ ಹತ್ತಿರವಿದೆ ಅದಕ್ಕಾಗಿ ಸೂಕ್ತ ಜಾಗ ಸಿಕ್ಕಿದ ಕೂಡಲೇ ಬೇರೆ ಕಡೆಗೆ ಬದಲಾಯಿಸುತ್ತೇವೆಂದು ಬರೆದಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಊರಿನ ಹತ್ತಿರ ಇಲ್ಲವೆ ಹೋದರೂ ಮಾನ್ಯ ಸದಸ್ಯರಾದ ಶ್ರೀಮತಿ ಭಾಗೀರಥಮ್ಮನವರ ಮನೆ ಹತ್ತಿರ ಇರುವುದರಿಂದ ಅದಷ್ಟು ಜಾಗ್ರತೆ, ಒಬ್ಬ ಸದಸ್ಯರ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಬೇರೆ ಕಡೆಗೆ ಬದಲಾಯಿಸುವುದಕ್ಕೆ ಏರ್ಪಾಡು ಮಾಡುತ್ತಾರೇಯೇ ಸ್ವಾಮಿ ?

Mr. SPEAKER.—It is disallowed.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಮಂತ್ರಿಗಳು ಹೇಳಿದರು. ಸ್ಥಳೀಯ ಸಂಸ್ಥೆಗಳು ಏನಾದರೂ ಕರ್ತವ್ಯ ಲೋಪ ಮಾಡಿದರೆ, ಜನತೆಯ ಆರೋಗ್ಯಕ್ಕೆ ಧಕ್ಕೆ ಬರತಕ್ಕ ರೀತಿಯಲ್ಲಿ ವರ್ತಿಸಿದರೆ ಆಗ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಸ್ವಾಮಿ ?

Mr. SPEAKER.—It is hypothetical.

Sri C. J. MUCKANNAPPA.—She has made a representation that the municipal council has refused...

Mr. SPEAKER.—Questions should not be put in a hypothetical manner.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಜನರಲ್ ಹಾಸ್ಪಿಟಲ್ ಕಟ್ಟಿಸಿದ್ದಾರೆ. ಅದರ ಸುತ್ತ ಕಸದ ಗುಂಡಿಗಳಿವೆ. ಮಾನ್ಯ ಮಂತ್ರಿಗಳು ಆ ಕಡೆ ಪ್ರಯಾಣ ಮಾಡುವಾಗ ಅವರ ದೃಷ್ಟಿಗೆ ಬಿದ್ದಿರಬಹುದು. ಈ ಕಸದ ಗುಂಡಿಗಳನ್ನು ತೆಗೆಸುವುದಕ್ಕೆ ಸ್ಥಳೀಯ ಸಂಸ್ಥೆಗೆ ಏನಾದರೂ ಡೈರೆಕ್ಷನ್ ಕೊಡುತ್ತಾರೆಯೇ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಅವರು ಪ್ರಿಸಂಪ್ಷನ್ ಮಾಡಿಕೊಂಡು ಹೇಳುತ್ತಿದ್ದಾರೆ. ಆಸ್ಪತ್ರೆ ಸುತ್ತಮುತ್ತ ಇರುವ ಕಸದ ಗುಂಡಿಗಳು ನನ್ನ ಕಣ್ಣಿಗೆ ಬಿದ್ದಿಲ್ಲ.

Mr. SPEAKER.—I thought that Sri Muckannappa was never presumptuous.

Sri C. J. MUCKANNAPPA.—It is on the main road.

Mr. SPEAKER.—I think it is sufficient. Somebody has said it. Even walls have significance. We can leave it at that.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈ ತಿಪ್ಪೆಗುಂಡಿಗಳ ಹತ್ತಿರ ಪಾಲಿಟೆಕ್ನಿಕ್, ಎಲೆಕ್ಟ್ರಿಕಲ್ ಕಾಲೋನಿ ಇವೆ. ಇವರಿಂದ ಸರ್ಕಾರಕ್ಕೆ ಮನವಿಪತ್ರಗಳು ಬಂದಿವೆ. ನಾಗರಿಕರು ಜಾಗ ಕೊಟ್ಟರೆ ಬದಲಾಯಿಸುತ್ತೇವೆಂದು ಹೇಳಿದರು. ನಾಗರಿಕರು ಜಾಗ ಕೊಡದೆ ಹೋದರೆ ಹಾಗೆಯೇ ಬಿಡುತ್ತಾರೆಯೇ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ನಾಗರಿಕರು ಜಾಗವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಿಲ್ಲದೆ ಹೋದರೆ ಮುನಿಸಿಪಾಲಿಟಿಯವರು ಜಾಗವನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಜಮೀನನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾದರೆ ಎಷ್ಟು ಕಾಲ ತೆಗೆದುಕೊಳ್ಳುತ್ತದೆ ಎನ್ನುವುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ,

---

Construction of a Bus Stand at Bailhongal.

**Q.*—561. Sri K. S. CHANNAPPA WALI (Sampagaon).—

Will the Government be pleased to state :—

(*a*) whether they are aware that sanction has already been accorded for the construction of a Bus Stand at Bailhongal and a suitable place has been acquired for the same ;

(b) if so, when they intend to construct the same ;

(c) whether it has come to their notice that there is no proper Bus Stand even though many buses are plying there ?

A.—Sri D. DEVARAJ URS (Minister for Labour, Housing and Transport).—

(a) A site has been acquired but sanction for construction of a Bus Stand has not yet been given.

(b) A temporary Bus Stand has been constructed on this site. Construction of a permanent Bus Stand will be considered while drawing up the programme of works for the year 1965-66.

(c) Yes.

ಶ್ರೀ ಕೆ. ಎಸ್. ಚನ್ನಪ್ಪ ವಾಲಿ.—ಬೈಲಹೊಂಗಲಕ್ಕೆ ಈಗಾಗಲೇ ಅನೇಕ ಸಾರಿ ಬಂದು ಮಾನ್ಯ ಮಂತ್ರಿಗಳು ನೋಡಿಕೊಂಡು ಹೋಗಿದ್ದಾಗ್ಯೂ ಇದುವರೆಗೆ ಏಕೆ ಇನ್ನೂ ಬಸ್ ನಿಲ್ದಾಣ ವೊಂದನ್ನು ಕಟ್ಟಿಲ್ಲ ? ಕಾರಣವೇನು ?

† ಶ್ರೀ ಡಿ. ದೇವರಾಜ ಅರಸ್.—ಈ ಸಾಲಿನಲ್ಲಿ ಕಟ್ಟಿಸುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಕೆ. ಎಸ್. ಚನ್ನಪ್ಪ ವಾಲಿ.—ಇಲ್ಲಿಂದ ನಾಲ್ಕು ಜಿಲ್ಲೆಗಳಿಗೆ ಬಸ್ಸುಗಳು ಓಡುತ್ತವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಅದು ಎಲ್ಲಾ ಗೊತ್ತಾಗಿಯೇ ಅದನ್ನು ಕಟ್ಟಿಸುತ್ತೇವೆಂದು ಹೇಳಿದ್ದೇನೆ.

ಶ್ರೀ ಆರ್. ಎಸ್. ಪಾಟೀಲ್.—ಸಾಮಾನ್ಯವಾಗಿ ಬಸ್ ನಿಲ್ದಾಣವನ್ನು ಕಟ್ಟುವುದಕ್ಕೆ ಯಾವ್ಯಾವ ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ, ಅದನ್ನು ಕಟ್ಟಬೇಕೆಂಬ ಅವಶ್ಯಕತೆ ಬಂದಾಗ ಎಷ್ಟು ದಿವಸಗಳಲ್ಲಿ ಅಂದಾಜು ತಯಾರು ಮಾಡಿ ಮಂಜೂರಾತಿಯನ್ನು ಕೊಡುತ್ತಾರೆ ?

ಶ್ರೀ ಡಿ. ದೇವರಾಜ ಅರಸ್.—ಅವಶ್ಯಕತೆಗಳೆಂದರೆ, ಹೆಚ್ಚು ಬಸ್ಸುಗಳು ತಿರುಗಾಡುವುದು, ಪ್ರಯಾಣಿಕರ ಓಡಾಟ, ವ್ಯಾಪಾರಸ್ಥರ ಸೌಕರ್ಯ, ಮತ್ತು ನಮ್ಮ ಸೌಕರ್ಯವನ್ನೂ ಸಹ ನೋಡ ಬೇಕಾಗಿದೆ ; ಏಕೆಂದರೆ ದುಡ್ಡು ಮುಖ್ಯ, ಅದು ಒದಗಿದಾಗ ಅದನ್ನು ಕಟ್ಟುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬಸ್ ನಿಲ್ದಾಣವನ್ನು ಕಟ್ಟಿಸುವುದು ಈ ಶಾಸನ ಸಭೆಯಲ್ಲಿ ಪ್ರಶ್ನೆಗಳನ್ನು ಕಳುಹಿಸಿದವರಿಗೆ ಮಾತ್ರವೋ ಅಥವಾ ಆ ರೀತಿ ಪ್ರಶ್ನೆ ಕಳುಹಿಸದೇ ಇರುವವರ ಕ್ಷೇತ್ರಕ್ಕೂ ಅದನ್ನು ಕಟ್ಟಿಸುತ್ತಾರೋ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಪ್ರಶ್ನೆ ಹಾಕಲಿ, ನೋಡೋಣ.

ಶ್ರೀ ಆರ್. ಎಸ್. ಪಾಟೀಲ್.—ಈಗಾಗಲೇ ಮಂಜೂರಾತಿ ಕೊಟ್ಟಿರುವ ಬಸ್ ನಿಲ್ದಾಣಗಳನ್ನು ಎಷ್ಟು ದಿವಸಗಳಲ್ಲಿ ಕಟ್ಟಿಸುತ್ತಾರೆ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಎಷ್ಟು ಜಾಗ್ರತೆಯಾಗಿ ಕಟ್ಟಿಸಬೇಕೆಂದು ಅಪೇಕ್ಷೆಪಡುತ್ತಾರೋ ಅಷ್ಟೇ ಜಾಗ್ರತೆಯಾಗಿ ಕಟ್ಟಿಸಬೇಕೆಂದಿದ್ದೇವೆ. ಒಂದು ವೇಳೆ ಸಿಮೆಂಟ್ ವಗೈರೆ ಸಿಗುವುದು ಕಷ್ಟವಿದ್ದರೆ ಸ್ವಲ್ಪ ನಿಧಾನವಾಗುತ್ತದೆ.

Sri C. J. MUCKANNAPPA.—The Minister was once pleased to tell us that they have a phased programme. May I know the cost of that phased programme ?

Sri D. DEVARAJ URS.—Government has not got a phased programme but the Corporation has.

Sri R. M. DESAI.—Is it a fact that the Government has already called for tenders for the schemes already sanctioned ?

Sri D. DEVARAJ URS.—Some are sanctioned and some stands would be taken up now.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಬಿಜಾಪುರ-ಬೆಳಗಾಂ ಜಿಲ್ಲೆ ಬಹಳ ದೊಡ್ಡ ಜಿಲ್ಲೆ. ಅಲ್ಲಿ 12 ತಾಲ್ಲೂಕುಗಳಿವೆ. ಅದಕ್ಕೋಸ್ಕರ ಅಲ್ಲಿ ಈಗ ಇರತಕ್ಕ ಬಸ್ ಸ್ಟ್ಯಾಂಡ್ ಸಾಲದು ಅಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಈಗ ಸಾಲದೇ ಇದ್ದರೆ ಮುಂದೆ ಕಟ್ಟಿಸುವ ವಿಚಾರ ಮಾಡೋಣ. ಈಗ ಕಟ್ಟಿಸಿರುವುದು ಕಡಿಮೆ ಸಂಖ್ಯೆಯಲ್ಲಿಲ್ಲ. ಅಲ್ಲಿ ಈಗಾಗಲೇ 36 ಬಸ್ ಸ್ಟ್ಯಾಂಡುಗಳಿವೆ.

Mr. SPEAKER.—Now, left over Questions. Question No. 351.

Adulterated "Atta" (powder) supplied for distribution to the public.

*Q.—351. Sri K. P. REVANNASIDDAPPA (Tiptur).—

Will the Government be pleased to state:—

(a) whether it is not a fact that a packet of adulterated "Atta" (powder) manufactured out of wheat bran supplied for distribution to the public was handed over to the Hon'ble Chief Minister when he visited Tiptur;

(b) which is the Mill that had supplied this variety of 'Atta';

(c) the steps they have taken in this behalf?

A.—Sri M. V. KRISHNAPPA (Minister for Revenue).—

(a) A sample of Atta was handed over to the Personal Clerk of the Chief Minister when he visited Tiptur on 19th October 1964.

(b) The source from which the sample was obtained was not disclosed.

(c) General instructious have been issued to the concerned officers to see that sub-standard products are not issued to consumers.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈ ಹಿಟ್ಟಿನ ಪೊಟ್ಟಣವನ್ನು ಮಾನ್ಯ ಮುಖ್ಯ ಮಂತ್ರಿಗಳ ಅಮೃತ ಹಸ್ತಕ್ಕೆ ಕೊಟ್ಟಾಗ ಅವರು ಅದನ್ನು ಅವರ ಆಪ್ತ ಗುಮಾಸ್ತರಿಗೆ ಕೊಡಿ ಎಂಬುದಾಗಿ ಹೇಳಿದರು. ನಾವು ಇಂತಹ ಕಡೆಯಿಂದ ಇಂತಹ ಮಿಲ್‌ನಿಂದ ಬಂದುದು ಎಂದು ಹೇಳಿದರೂ ಅದನ್ನು ಸರಿಯಾಗಿ ತನಿಖೆ ಮಾಡದೆ ಈಗ ಇಲ್ಲಿ ಸುಳ್ಳು ಉತ್ತರವನ್ನು ಕೊಟ್ಟಿರುವುದಕ್ಕೆ ಕಾರಣ ವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಸುಳ್ಳು ಉತ್ತರ ಸರ್ಕಾರ ಕೊಡುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಸರ್ಕಾರಿ ಕನ್‌ಸ್ಯೂಮರ್ಸ್ ಸೊಸೈಟಿಯಲ್ಲಿ ಕೊಟ್ಟಂತ ಪದಾರ್ಥವನ್ನು ನಾನು ತಂದುಕೊಟ್ಟರೆ, ಅದು ಎಲ್ಲಿಂದ ಬಂತು ಹೇಗೆ ತಂದಿರಿ ಎಂದು ಮುಖ್ಯ ಮಂತ್ರಿಗಳು ಕೇಳಿ ಅದನ್ನು ನನ್ನ ಗುಮಾಸ್ತನ ಕೈಲಿ ಕೊಡಿ ಎಂದು ಹೇಳಿದಮೇಲೆ ಅದನ್ನು ಸರ್ಕಾರದವರು ಈವರೆಗೆ ವಿಚಾರ ಮಾಡಿದ್ದಾರೆಯೇ ?

ಅಧ್ಯಕ್ಷರು.—ಸಿಟ್ಟು ಮಾಡಿದರೆ ಎಲ್ಲ ಕೆಲಸವೂ ಹಾಳಾಗಿ ಹೋಗುತ್ತದೆ. ನೀವು ಆ ಹಿಟ್ಟಿನ ಸ್ಯಾಂಪಲ್ ಮುಖ್ಯ ಮಂತ್ರಿಗಳಿಗೆ ಕೊಡುವ ಸಂದರ್ಭದಲ್ಲಿ ಬಾಯಿಂದಾಗಲೀ ಅಥವಾ ಬರಹದ ಮೂಲಕವಾಗಲೀ ಅದನ್ನು ಇಂತಹ ಜಾಗದಿಂದ ಪಡೆದುಕೊಂಡದ್ದು, ಇಂತಹವರಮೇಲೆ ತನಿಖೆ ನಡೆಸಬೇಕು, ಆ ಬಗ್ಗೆ ವಿಚಾರಣೆಯಾಗಬೇಕು ಎಂಬುದಾಗಿ ಏನಾದರೂ ಹೇಳಿದ್ದೀರಾ ?

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ನಾನು ಮುಖ್ಯ ಮಂತ್ರಿಗಳ ಕೈಗೆ ಆ ಪೊಟ್ಟಣವನ್ನು ಕೊಟ್ಟೆ. ಆ ಸೊಸೈಟಿಯಲ್ಲಿ ಬೂಸಾವನ್ನು ಪೌಡರ್ ಮಾಡಿ ಜನಗಳಿಗೆ ಮಾರುತ್ತಿದ್ದಾರೆ. ಅದನ್ನೇನಾದರೂ ಜನ ತಿಂದರೆ ಅವರ ಆರೋಗ್ಯ ಕೆಡುತ್ತದೆಂಬುದಾಗಿ ತಿಳಿಸಿದೆ. ಆದರೆ ಮುಖ್ಯ ಮಂತ್ರಿಗಳು ಅದನ್ನು ಅವರ ಗುಮಾಸ್ತನ ಕೈಗೆ ಕೊಟ್ಟಿದ್ದು ನಿಜವಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮುಖ್ಯ ಮಂತ್ರಿಗಳು ಅವರ ಪಿ. ಎ. ಕೈಗೆ ಕೊಟ್ಟ ವಿಷಯವನ್ನು ಮಾನ್ಯ ಸದಸ್ಯರೇ ಹೇಳಬೇಕು. ನಮಗೆ ಬಂದಂಥ ಮಾಹಿತಿಯಲ್ಲಿ ಅದು ಮಾನ್ಯ ಸದಸ್ಯರಿಂದ ಬಂದಿದೆಯೆಂದು ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಹಿಟ್ಟು ಸರ್ಕಾರದವರ ಕೈಗೆ ತಲುಪಿದಮೇಲೆ ಅಂತಹ ಹಿಟ್ಟನ್ನು ತಯಾರು ಮಾಡತಕ್ಕ ಗಿರಣಿಗಳು ಎಲ್ಲಿಯಾದರೂ ಮೈಸೂರು ರಾಜ್ಯದಲ್ಲಿವೆಯೇ, ತುಮಕೂರು ಜಿಲ್ಲೆಯಲ್ಲಿ ಅಂತಹ ಹಿಟ್ಟನ್ನು ಯಾವುದಾದರೂ ಸರ್ಕಾರಿ ಕನ್‌ಸ್ಯೂಮರ್ಸ್ ಸೊಸೈಟಿಗೆ ಸರಬರಾಜುಮಾಡಿದ್ದಾರೆಯೇ, ಮತ್ತು ಅದು ಅಡಲ್ಟರೇಟೆಡ್ ಎಂಬುದಾಗೇನಾದರೂ ಸರ್ಕಾರ ದವರು ವಿಚಾರಮಾಡಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ರಾಗಿ ಬೀಸುವ ಮಿಷನ್‌ಗಳಿಗೆ ಹಾಕಿದರೆ ಅದು ಹಿಟ್ಟು ಆಗುತ್ತದೆ. ಅಂಥಾದ್ದು ಸಾವಿರಾರು ಮಿಲ್ಲುಗಳಿವೆ. ಆದ್ದರಿಂದ ಮಾನ್ಯ ಸದಸ್ಯರು ಅದನ್ನು ತಂದಿರತಕ್ಕ ಸೋರ್ಸ್ ಆದರೂ ಹೇಳಬೇಕಾಗಿದೆ. ಆಗ ಆ ವಿಚಾರವನ್ನು ತೆಗೆದುಕೊಳ್ಳುತ್ತೇವೆ ಮತ್ತು ಒಪ್ಪಿಕೊಳ್ಳುತ್ತೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅದನ್ನು ಕನ್‌ಸ್ಯೂಮರ್ಸ್ ಸೊಸೈಟಿಯಿಂದ ತಂದಿದ್ದೇನೆಂದು ಹೇಳಿದ್ದಕ್ಕೆ ಎರಡು ಪೊಟ್ಟಣಗಳನ್ನು ಕೊಡಿ, ನಾನು ವಿಚಾರ ಮಾಡುತ್ತೇನೆಂದು ಮುಖ್ಯ ಮಂತ್ರಿ ಗಳು ಹೇಳಿ ಅದನ್ನು ಅವರ ಗುಮಾಸ್ತನಿಗೆ ನನ್ನಿಂದಲೇ ಕೊಡಿಸಿದ್ದಾರೆ. ಅಂಥಾದ್ದನ್ನು ವಿಚಾರ ಮಾಡಿದ್ದೀರಾ, ಆ ವಿಚಾರವಲ್ಲಿ ಉತ್ತರ ಕೊಟ್ಟಿದ್ದೀರಾ? ಸುಮಾರು 1,500 ಜನರು ಈ ಬಗ್ಗೆ ಮನವಿ ಮಾಡಿದ್ದರಿಂದುಂಟಾದ ಪ್ರಯೋಜನವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಏನು ಇಲ್ಲ. ಆ ಬಗ್ಗೆ ವಿಚಾರಣೆ ನಡೆದಿದೆ. ಅದನ್ನು ತಾಲ್ಲೂಕು ಸೊಸೈಟಿಯವರು ತಂದಿದ್ದಾರೆ. ಮಾರಿದ ಹಿಟ್ಟು ಕೀಳುದರ್ಜೆಯದಲ್ಲ, ಅದರಲ್ಲೇನೂ ತೊಂದರೆ ಇಲ್ಲ, ಅದು ಚೆನ್ನಾಗಿತ್ತೆಂದು ನಮಗೆ ವರದಿ ಬಂದಿದೆ. 18ನೇ ಅಕ್ಟೋಬರ್‌ನಲ್ಲಿ ಅಸಿಸ್ಟೆಂಟ್ ಕಮಿಷನರ್ ಅವರು ಮಾನ್ಯ ಸದಸ್ಯರು ಪೊಟ್ಟಣವನ್ನು ಕೊಟ್ಟ ಮಾರನೆಯ ದಿನವೇ ಸಿಗ್‌ನೇಚರ್ ಹಾಕಿ ಸೊಸೈಟಿಯಲ್ಲಿ ಚಕ್ ಮಾಡಿದ ದಾಖಲೆ ಇದೆ. ಎಲ್ಲಾ ಮಾಲುಗಳೂ ಸರಿಯಾಗಿವೆ ಯೆಂಬುದಾಗಿ ಬರೆದಿದ್ದಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈ ತರಹ ಎನ್‌ಕ್ವೈರಿಯಾಗುವುದರಿಂದ ದೇಶಕ್ಕೆ ಆಗತಕ್ಕ ಉಪಕಾರವಾದರೂ ಏನು ? ಆ ಕನ್‌ಸ್ಯೂಮರ್ಸ್ ಸೊಸೈಟಿ ಮತ್ತು ಕೋ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ ಅಧ್ಯಕ್ಷರಿಂದ ಆ ವಿಚಾರದಲ್ಲಿ ಸರ್ಟಿಫಿಕೇಟ್ ಒಂದನ್ನು ತರಿಸಿ ಕೊಡುತ್ತೇನೆ. ಆದ್ದರಿಂದ ಇದನ್ನು ಎನ್‌ಕ್ವೈರಿ ಮಾಡಿಸುವುದು ಸರ್ಕಾರದ ಕರ್ತವ್ಯವಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಕನ್‌ಸ್ಯೂಮರ್ಸ್ ಸೊಸೈಟಿಯವರೇ ಅಂಥಾದ್ದನ್ನು ಮಾರಿಲ್ಲ ವೆಂದು ಹೇಳುತ್ತಾರೆ. ಅಸಿಸ್ಟೆಂಟ್ ಕಮಿಷನರ್ ಅವರೇ ಇದನ್ನು ಚಕ್ ಮಾಡಿದ್ದಾರೆ. ಅಲ್ಲಿಂದ ವರದಿ ಸಹ ಬಂತು. ಬಹುಶಃ ಇದು ಎನ್‌ಕ್ವೈರಿ ಕಮಿಷನ್ ಏರ್ಪಾಡು ಮಾಡುವ ಸ್ಥಿತಿಗೆ ಬಂದಿದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಮಾನ್ಯ ಮುಖ್ಯ ಮಂತ್ರಿಗಳಿಗೆ ಕೊಟ್ಟ ಹಿಟ್ಟಿನ ಪೊಟ್ಟಣವನ್ನು......

ಅಧ್ಯಕ್ಷರು.—ಇಂಥಾದ್ದನ್ನೆಲ್ಲಾ ಕೊಡುವಾಗ ವಿವರವಾಗಿ ಬರಹ ಮೂಲಕ ಅವರಿಗೆ ಕೊಟ್ಟರೆ ಇಂತಹ ವಿವಾದಗಳೇ ಬರುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಯವರ ಕೈಗೆ ಕೊಟ್ಟಂಥ ಈ ಎರಡು ಪೊಟ್ಟಣಗಳ ಬಗ್ಗೆ ವಿಚಾರಣೆ ಮಾಡಿದಮೇಲೆ ಅವು ಸಬ್‌ಸ್ಟ್ಯಾನ್‌ಷಿಯಲ್ ಪ್ರಾಡಕ್ಟ್ಸ್ ಎಂಬುದಾಗಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ರಾಗಿ ಅಟ್ಟಾ ಇದ್ದ ಹಾಗೆ ಇರುತ್ತದೆ, ಬಡವರು ಅದನ್ನೇ ಕೊಂಡುಕೊಂಡು ಹೋಗುತ್ತಾರೆ. ಒಳ್ಳೆ ದಪ್ಪನಾಗಿ ಬ್ರ್ಯಾನ್ ಇದ್ದ ಹಾಗೆ ರಾಗಿ ಹಿಟ್ಟಿನ ಹಾಗೆ ಇರುವುದರಿಂದ ಸಾಮಾನ್ಯವಾಗಿ ಜನರು ಅದನ್ನೇ ಅಪೇಕ್ಷೆ ಮಾಡುತ್ತಾರೆಂದು ವರದಿ ಬಂದಿದೆ.

ಶ್ರೀ ಟಿ ಮಾದಯ್ಯ ಗೌಡ.—ಮಾನ್ಯ ಸದಸ್ಯರು ಮುಖ್ಯ ಮಂತ್ರಿಗಳು ಕೈಗೆ ಈ ಪೊಟ್ಟಣ ವನ್ನು ಕೊಡುವುದಕ್ಕೆ ಮೊದಲು ಸ್ಥಳೀಯ ಅಧಿಕಾರಿಗಳಿಗಾಗಲೀ ಅಥವಾ ಪೋಲೀಸಿನವರಿಗಾಗಲೀ ಈ ವಿಚಾರದಲ್ಲಿ ದೂರು ಕೊಟ್ಟಿದ್ದಾರೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿಷಯ ಗೊತ್ತಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅವರು ಟೂರ್ ಬಂದಾಗ ನಾನು ಈ ವಿಚಾರವನ್ನು ಪ್ರೂವ್ ಮಾಡಿಕೊಡುವುದಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಶಿವಮೊಗ್ಗಾಕ್ಕೆ ಹೋಗುವಾಗ ಆ ಕಡೆ ಬರುತ್ತೇನೆ. ಆಗ ಮಾನ್ಯ ಸದಸ್ಯರು ಎಲ್ಲ ಮಾಹಿತಿಗಳನ್ನು ಒದಗಿಸಬೇಕು.

ಶ್ರೀ ಎಸ್. ಶಿವಪ್ಪ.—ಆ ಹಿಟ್ಟು ರಫ್ ಆಗಿ ಇರುತ್ತದೆ, ಹಿಟ್ಟು ಮಾಡುವುದಕ್ಕೆ ಜನಗಳು ಅದನ್ನು ಅಪೇಕ್ಷೆ ಮಾಡುತ್ತಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಅಲ್ಲಿ ಯಾವ ಹಿಟ್ಟನ್ನು ಲೋಕಲ್ ಆಗಿ ಮಾರಾಟ ಮಾಡುತ್ತಿದ್ದಾರೆ ಎಂದೇನಾದರೂ ಸರ್ಕಾರದವರು ವಿಚಾರ ಮಾಡಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ 3-4 ತರಹ ಹಿಟ್ಟನ್ನು ತರಿಸುತ್ತಿದ್ದಾರೆ. ಅಲ್ಲ ಈಗ ಲೋಕಲ್ ಆಗಿ ಮಾರಾಟ ಮಾಡತಕ್ಕ ಹಿಟ್ಟನ್ನು ಬಡವರು ಅಪೇಕ್ಷೆ ಮಾಡುತ್ತಾರೆ. ರಾಗಿ ಹಿಟ್ಟು ಇದ್ದ ಹಾಗೆ ಅದು ರಫ್ ಆಗಿ ಇದೆಯೆಂದು ಅಲ್ಲಿಂದ ನಮಗೆ ವರದಿ ಬಂದಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಆ ತರಹ ಅಟ್ಟಾ (ಹಿಟ್ಟನ್ನು)ವನ್ನು ಜನಗಳು ತಿಂದು ಹಾಸನ ಡಿಸ್ಟ್ರಿಕ್ಟಿನಲ್ಲಿ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಜನಗಳಿಗೆ ಭೇದಿ ಹತ್ತಿಕೊಂಡು ಕಾಲರಾ ಆದ ಹಾಗೆ ಆಗಿ ಅಲ್ಲಿ ಜನಗಳು ಸಾಯುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ !

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಕಾಲರಾ ಸಂಸ್ಥಾನದಲ್ಲಿ ಅನೇಕ ಭಾಗಗಳಲ್ಲಿ ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ತಾನೆ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದರು ನಮ್ಮ ರಾಜ್ಯದಲ್ಲಿ ರಾಗಿ ಬೀಸತಕ್ಕ ಸಾವಿರಾರು ಮಿಲ್ಲುಗಳು ಇವೆ ಎಂದು, ಹಾಗಾದರೆ ಕನ್‌ಸ್ಯೂಮರ್ ಸೊಸೈಟಿಗಳಿಗೆ ರವೆ, ಹಿಟ್ಟು ಇವುಗಳನ್ನು ಸಪ್ಲೈ ಮಾಡತಕ್ಕ ಏಜೆನ್ಸಿ ಯಾವುದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಂಗಳೂರಿನಲ್ಲಿರುವ ಹೋಲ್‌ಸೇಲ್ ಕೋ-ಆಪರೇಟಿವ್ ಸ್ಟೋರ್ಸ್ ಮತ್ತು ಮಾರ್ಕೆಟಿಂಗ್ ಸೊಸೈಟಿಗಳು ಕೊಡುತ್ತವೆ.

Sri S. M. KRISHNA.—I would like to know the agency which gave the verdict that the samples were not of a sub-standard product ?

Sri M. V. KRISHNAPPA.—It happened on the 19th and on the 18th the Assistant Commissioner had inspected the society and satisfied himself that everything is O.K.

Sri S. M. KRISHNA.—What is his technical qualifiction to give this verdict ?

Sri M. V. KRISHNAPPA.—As a consumer, the Assistant Commissioner will judge the product.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಾನು ಈ ಪ್ರಶ್ನೆಯನ್ನು ಕಳುಹಿಸಿದ ಮೇಲೆ ಅಸಿಸ್ಟೆಂಟ್ ಕಮೀಷನರು ನನ ಹತ್ತಿರ ಬಂದು ಆ ಹಿಟ್ಟು ಎಲ್ಲಿಂದ ಬಂತು ಹೇಗೆ ಬಂತು ಅದರ ವಿಷಯವೇನು ಎಂದು ಅವರು ನನ್ನನ್ನು ಕೇಳಿಕೊಂಡು ಬಂದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಉತ್ತರವಿಲ್ಲ)

ಶ್ರೀ ಎಚ್. ಆರ್. ಕೇಶವಮೂರ್ತಿ.—ಆ ಹಿಟ್ಟನ್ನು ಅಸಿಸ್ಟೆಂಟ್ ಕಮೀಷನರು ಸೈನ್‌ಟಿಫಿಕ್ ಆಗಿ ಎಗ್ಸಾಮಿನ್ ಮಾಡಿ ಅವರು ತಮ್ಮ ಒಪೀನಿಯನ್ ಕೊಟ್ಟರೋ ಅಥವಾ ಅವರು ಅವರ ಮನಸ್ಸಿಗೆ ಹೇಗೆ ತೋರುತ್ತಿದೆಯೋ ಹಾಗೆ ಒಪೀನಿಯನ್ ಕೊಟ್ಟಿದ್ದಾರೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಅದನ್ನು ನೋಡಿ ಹೇಳಿದ್ದಾರೆ. ಆಫೀಸರುಗಳು ಪದಾರ್ಥಗಳನ್ನು ಲ್ಯಾಬೋರೇಟರಿಯಲ್ಲಿ ಎಗ್ಸಾಮಿನ್ ಮಾಡಿ ನೋಡಿ ಹೇಳುವುದಕ್ಕಾಗುವುದಿಲ್ಲ. ಈಗ ಬೆಂಗಳೂರಿನಲ್ಲಿ ಕೆಲವರು ನಮಗೆ ಅಕ್ಕಳ್ಳು ಅಕ್ಕಿಯನ್ನೇ ಕೊಡಬೇಕೆಂದು ನನಗೆ ಬರೆಯುತ್ತಿದ್ದಾರೆ. ಬಡವರಾದವರು ನಮಗೆ ಫೈನ್‌ರೈಸ್ ಬೇಡಿ ಅಕ್ಕಳ್ಳು ಅಕ್ಕಿಯನ್ನೇ ಕೊಡಿ ಎಂದು ನನಗೆ ಬರೆಯುತ್ತಿದ್ದಾರೆ. ಹೀಗೆ ಕೆಲವರು ಯಾವುದೋ ಬೇಡ ಎಂದರೆ, ಅದು ಎಲ್ಲರಿಗೂ ಬೇಡ ಎಂದು ಹೇಳುವುದು ಸರಿಯಲ್ಲ. ಕೆಲವರು ರಫ್ ಕ್ವಾಲಿಟಿ ಅಪೇಕ್ಷೆ ಮಾಡುತ್ತಾರೆ. ಕೆಲವರು ನೈಸ್ ಕ್ವಾಲಿಟಿ ಅಪೇಕ್ಷೆ ಮಾಡುತ್ತಾರೆ.

Medical Graduates working as local candidates

*Q.—211. Sri S. SUBBAYYA NAIK (Sullia).—

Will the Government be pleased to state:—

(a) whether it is a fact that a large number of Medical Graduates are working as local candidates for more than 5 to 6 years as Doctors and Lecturers in Government Medical Colleges and if so, how many as Doctors and how many as Lecturers;

(b) the number of them who had left service in the middle to join elsewhere;

(c) the reasons for not confirming them though there are number of Hospitals without Doctors;

(d) whether it is not a fact that Government had assured to confirm their services in view of their long service, seniority and pay;

(e) if not, whether they intend to confirm them at least now in the existing or available vacancies in the Department?

A.—Sri K. NAGAPPA ALVA (Minister for Health).—

(a) No.
(b) Does not arise.
(c) Do
(d) Do
(e) Do

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಅನೇಕ ವೈದ್ಯಕೀಯ ಪದವೀಧರರು, ವೈದ್ಯರು ಮತ್ತು ಉಪನ್ಯಾಸಕರುಗಳಾಗಿ, ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿರುವುದು ನಿಜವಲ್ಲ ಎಂದು ಹೇಳಿದ್ದೀರಿ. ತಾ. 30-10-1964 ರಲ್ಲಿ ನಾನು ಈ ಪ್ರಶ್ನೆಯನ್ನು ಕಳುಹಿಸಿಕೊಟ್ಟಾಗ್ಯೆ ಅವರು ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದುದು ನಿಜವಲ್ಲವೇ?

ಶ್ರೀ ಕೆ. ನಾಗಪ್ಪ ಅಳ್ವ.—5-6 ವರ್ಷಗಳಿಗಿಂತ ಮೇಲ್ಪಟ್ಟು ಅವರು ಅಲ್ಲಿ ಕೆಲಸ ಮಾಡುತ್ತಿಲ್ಲ. 4 ವರ್ಷಗಳಿಗಿಂತಲೂ ಕಡಿಮೆಯಾಗಿ ಅವರು ಅಲ್ಲಿ ಲೋಕಲ್ ಕ್ಯಾಂಡಿಡೇಟ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಆ ರೀತಿಯಾಗಿ ಉಪನ್ಯಾಸಕರುಗಳಾಗಿ ಕೆಲಸ ಮಾಡುತ್ತಿರುವ ಡಾಕ್ಟರುಗಳ ದೀರ್ಘಾವಧಿ ಸೇವೆ, ಸೀನಿಯಾರಿಟಿ ಮತ್ತು ಸಂಬಳಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರ ಸರ್ವೀಸುಗಳನ್ನು ಖಾಯಂಗೊಳಿಸುತ್ತೀರಾ?

ಶ್ರೀ ಕೆ. ನಾಗಪ್ಪ ಅಳ್ವ.—ಹೌದು ಮಾಡುತ್ತೇವೆ.

Inter-State Bus Routes sanctioned for the last three years.

*Q.—275. Sri P. VENKATAGIRIYAPPA (Kolar).—

Will the Government be pleased to state:—

(a) the number of Inter-State Bus routes sanctioned for the last three years with the name and address of the applicants;

(b) the date of these applications and the date of their sanction;

(SRI P. VENKATAGIRIYAPPA)

(c) the number of applications pending with names of applicants and date of their application ;

(d) what are the reasons for sanctioning Inter-State route by the concerned authorities when several prior applications were pending ?

A.—Sri R. M. PATIL (Minister for Home).—

(a) 107, Names and addresses of the applicants are furnished in the list "A" placed on the Table of the House.

(b) Furnished in the list "A" placed on the Table of the House.

(c) 835. Names and addresses of the applicants are furnished in the statement 'B' placed on the Table of the House.

(d) All applications that have been received as required under sub-section (3) of Section 57 of the Motor Vehicles Act, have been notified. The list of cases granted as compared with the list of cases pending, will disclose that different applications are preferred on different dates for different routes. The list of cases in which permits have been granted, would disclose that at the point of disposing of those cases, all applications for a specified route have been taken into consideration. For example, all applications pending on the date of disposal of the route point A to B have to be considered and have been considered together, although an application for route A C which is altogether for a different route might have been pending.

ಶ್ರೀ ಪಿ. ವೆಂಕಟಗಿರಿಯಪ್ಪ.—ಸ್ವಾಮಿ, ಅಂತರ ರಾಜ್ಯ ಬಸ್ಸು ಮಾರ್ಗದ ಪರವಾನೆಗಳನ್ನು ಕೊಡುವ ವಿಷಯದಲ್ಲಿ 3 ವರ್ಷಗಳ ಹಿಂದೆ ಅರ್ಜಿಗಳನ್ನು ಹಾಕಿಕೊಂಡಿರುವವರಿಗೆ ಇನ್ನೂ ಪರವಾನೆಗಳನ್ನು ಕೊಟ್ಟಿಲ್ಲ. ಆದರೆ ಈಗ 6 ತಿಂಗಳು 4 ತಿಂಗಳ ಹಿಂದೆ ಅರ್ಜಿಗಳನ್ನು ಹಾಕಿಕೊಂಡಿರುವವರಿಗೆ ಈಗಾಗಲೇ ಬಸ್ಸು ಮಾರ್ಗದ ಪರವಾನೆಗಳು ಸಿಕ್ಕಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

†ಶ್ರೀ ಆರ್. ಎಂ. ಪಾಟೀಲ್.—ಆ ಅರ್ಜಿಗಳಲ್ಲಿ ರೂಟುಗಳ ಪ್ರಕಾರ ನಿರ್ದಿಷ್ಟ ಮಾರ್ಗದ ಬಗ್ಗೆ ಬಂದಿದ್ದ ಅರ್ಜಿಗಳನ್ನು ನಿಕಾಲೆ ಮಾಡಿದ್ದೇವೆ. ಬಾಕಿ ಅರ್ಜಿಗಳು ಹಾಗೆಯೇ ಉಳಿದಿವೆ.

Sri C. J. MUCKANNAPPA.—Will it not go against the spirit of the nationalisation of bus transport in the State if the Governments allow the Inter-State Permits to be increased ?

Sri R. M. PATIL.—Not necessarily.

Sri C. J. MUCKANNAPPA.—Will Government consider the feasibility of nationalising the Inter-State permits ?

Sri R. M. PATIL.—It all depends upon the circumstances; the the other State shall also have to agree to it.

Sanction of Loans or Grants to the Municipalities in the State.

*Q.—281. SRI V. MASIYAPPA (Hiriyur).—

Will the Government be pleased to state :—

(a) whether they have sanctioned any loans or grants to the Municipalities in the State during the III Plan period for drinking water schemes, drainage schemes and House buildings schemes ;

(b) if so, the names of those Municipalities, the amount sanctioned and the year in which it was sanctioned (Scheme-war information may be furnished) ;

(c) whether these schemes were included in the III Five-Year Plan ?

A.—SRI K. PUTTASWAMY (Minister for Municipal Administration).—

(a) Yes.

(b) *Vide* Statement placed on the Table of the House. ‡

(c) Yes.

SRI V. MASIYAPPA.—How many of these projects were included in the Third Plan and how many were outside the Plan ?

SRI K. PUTTASWAMY.—It is not exactly included in the plan ; all these things were provided for in the Plan.

SRI V. MASIYAPPA.—Since how long has the Hiriyur Municipality been agitating for Town Water Supply Scheme and why was it not included in the Plan ?

SRI K. PUTTASWAMY.—So far as I know, the Hiriyur Municipality has been representing for the last two or three years.

SRI C. J. MUCKANNAPPA.—The Hon'ble Minister has inspected the Sira Town and seen the difficulties of the people there. Will Government consider the question of providing drinking water to Sira Town either by way of grant or by way of loan ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಸಿರಾ ಟೌನಿನಲ್ಲಿ ಕುಡಿಯುವ ನೀರಿನ ಅಭಾವ ತೀವ್ರವಾಗಿದೆ. ಹಿಂದೆ ಸಿರಾ ಮುನಿಸಿಪಾಲಿಟಿಗೆ ಸರ್ಕಾರದವರು ಒದಗಿಸಿಕೊಟ್ಟಂಥ ಹಣವನ್ನು ಅವರು ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಗೆ ಉಪಯೋಗ ಮಾಡಿಕೊಂಡಿಲ್ಲ ಎಂಬ ಅಂಶ ಕಂಡುಬಂದಿದೆ. ಈಗಿರತಕ್ಕ ಪರಿಸ್ಥಿತಿಯಲ್ಲಿ ಸಿರಾ ಮುನಿಸಿಪಾಲಿಟಿಯವರು ಸಾಲಪಡೆದು ನೀರು ಸರಬರಾಜು ಮಾಡತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳತಕ್ಕ ಶಕ್ತಿ ಅವರಿಗೆ ಇಲ್ಲ. ಅದಕ್ಕೋಸ್ಕರ ಸರ್ಕಾರದವರೇ ಈ ಕೆಲಸವನ್ನು ಏತಕ್ಕೆ ತೆಗೆದುಕೊಳ್ಳಬಾರದು ಎಂದು ಯೋಚನೆ ಮಾಡುತ್ತಿದ್ದೇವೆ. ಸರ್ಕಾರದವರು ಈ ಬಗ್ಗೆ ಒಂದು ಗ್ರಾಂಟನ್ನು ವ್ಯವಸ್ಥೆ ಮಾಡಿ ನೋ ಫ್ರಾಫಿಟ್ ನೋ ಲಾಸ್ ಬೇಸಿಸ್ ಮೇಲೆ ಅಲ್ಲಿಗೆ ಏತಕ್ಕೆ ನೀರನ್ನು ಒದಗಿಸಬಾರದು ಎಂಬ ಅಂಶವನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ.

---

‡ Copy placed in the Mysore Legislature Library No. 19 dated 7th April 1965.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಮುನಿಸಿಪಾಲಿಟಿಗಳಿಗೆ ಅಡ್‌ಹಾಕ್ ಬೇಸಿಸ್‌ಮೇಲೆ ಗ್ರ್ಯಾಂಟನ್ನು ಕೊಡುತ್ತಾ ಇದ್ದುದು ನಿಜವಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ನೀರು ಸರಬರಾಜಿಗೋಸ್ಕರ ಗ್ರ್ಯಾಂಟನ್ನು ಕೊಡುತ್ತಿಲ್ಲ. ಸಾಲವನ್ನು ಕೊಡುತ್ತೇವೆ. ನಾವು ಎರಡನೆಯ ಪಂಚವಾರ್ಷಿಕ ಯೋಜನೆಯಿಂದ ಮೂರನೆಯ ಪಂಚವಾರ್ಷಿಕ ಯೋಜನೆಗೆ ಬಂದ ಕಾಲದಲ್ಲಿ ಆ ಯೋಜನೆಯ ಕೆಲಸಗಳಿಗೆ 9 ಕೋಟಿ ರೂಪಾಯಿಗಳು ಬೇಕಾಗಿತ್ತು. ಆದರೆ ಆ ಯೋಜನೆಗೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿದ್ದ ಹಣ 5 ಕೋಟಿ ರೂಪಾಯಿಗಳು. ಹಿಂದೆ ಮಾಡಿದಂಥ ಕೆಲಸಗಳನ್ನೆ ಮುಗಿಸುವುದು ಕಷ್ಟವಾಗಿದೆ.

Sri V. MASIYAPPA.—The Minister was pleased to observe that Hiriyur Municipality has been agitating for the last 2 or 3 years. May I know at what stage the estimate is pending; whether it is sanctioned?

Sri K. PUTTASWAMY.—I do not know. They wanted some money and we have approved of it.

2·00 P.M.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಕಷ್ಟದಲ್ಲಿರತಕ್ಕಂಥ ಮುನಿಸಿಪಾಲಿಟಿಗಳಿಗೆ ಲೋನ್ ಕೊಟ್ಟರೆ ವಾಪಸು ಬರುವುದಿಲ್ಲ, ಉದಾಹರಣೆಗೆ ಸಿರಾಕ್ಕೆ ಲೋನ್ ಕೊಟ್ಟದ್ದು ವಾಪಸು ಬರದೆ, ಅದನ್ನು ನಾವೇ ತೆಗೆದುಕೊಂಡಿರುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಹಾಗೇನೆ ಅಭಾವ ಪ್ರದೇಶದಲ್ಲಿರತಕ್ಕಂಥ, ಪೀಕಲಾಟದಲ್ಲಿರತಕ್ಕಂಥ ಗುಂಡ್ಲುಪೇಟೆ ಮತ್ತಿತರ ತಾಲ್ಲೂಕು ಮುನಿಸಿಪಾಲಿಟಿಗಳಿಗೂ ಹೀಗೆ ಲೋನ್ ಕೊಡುವುದಕ್ಕೆ ಬದಲು ಗ್ರ್ಯಾಂಟು ಕೊಡುವುದಕ್ಕೆ ಸರಕಾರ ಪ್ರಯತ್ನ ಪಡುತ್ತದೆಯೆ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು 2-3 ಪ್ರಶ್ನೆ ಬೆರೆಸಿಬಿಟ್ಟು ಏನೇನೊ ಹೇಳಿಬಿಟ್ಟರು. ನಾನು ಅವರು ಹೇಳಿದಹಾಗೆ ಉತ್ತರ ಕೊಡಲಿಲ್ಲ. ನಾನು ಹೇಳಿದ್ದು, ಸಿರಾಕ್ಕೆ ಸರಕಾರವೆ ಏಕೆ ಒದಗಿಸಬಾರದು ಎಂದು ಪರಿಶೀಲಿಸುತ್ತಿದ್ದೇವೆ ಎಂದು, ಅದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆಂದು ಹೇಳಲಿಲ್ಲ. ಗುಂಡ್ಲುಪೇಟೆ ನೀರಿನ ವ್ಯವಸ್ಥೆಗೆ ಸಾಲ ಕೊಟ್ಟಿದ್ದೇವೆ, ವ್ಯವಸ್ಥೆ ಮಾಡಿಕೊಂಡಿದ್ದಾರೆ. ಸಾಲ ತೀರಿಸಿಲ್ಲ; ಮಾನ್ಯ ಸದಸ್ಯರು ಸಾಲ ತೀರಿಸುವ ಹಾಗೆ ಶಿಫಾರಸು ಮಾಡಿದರೆ I shall be very thankful.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ, ಕುಡಿಯುವ ನೀರಿನ ಯೋಜನೆ, ಚರಂಡಿ ಯೋಜನೆ ಮತ್ತು ಗೃಹ ನಿರ್ಮಾಣ ಯೋಜನೆಗಳಿಗೆ ಆಯಾ ಪೌರಸಭೆಗಳಿಗೆ ಹಣ ವಿಂಗಡಿಸಿ ಇಟ್ಟಿದೆಯೊ, ಅಥವಾ ಇಡೀ ರಾಜ್ಯ ಮಟ್ಟದಲ್ಲಿ ಇಟ್ಟಿದೆಯೊ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಮೂರು ಅಂಶಗಳನ್ನು ಕೇಳಿದ್ದಾರೆ. ಗೃಹ ನಿರ್ಮಾಣ ವಿಚಾರದಲ್ಲಿ ಉತ್ತರ ಹೇಳಲಾರೆ. ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗೆ ರಾಜ್ಯಮಟ್ಟದಲ್ಲಿ ಇಟ್ಟಿದೆ.

ಶ್ರೀಮತಿ ಅನ್ನಪೂರ್ಣಾಬಾಯಿ ರಾಗಟೆ.—ಬೀದರ್ ಡಿಸ್ಟ್ರಿಕ್ಟ್‌ನಲ್ಲಿ ಯಾವ ಮುನಿಸಿಪಾಲಿಟಿಯವರಾದರೂ ಸರಕಾರದಿಂದ ಸಾಲ ಕೇಳಿದ್ದಾರೆಯೇ?

ಶ್ರೀ ಕೆ. ಪುಟ್ಟಸ್ವಾಮಿ.—ಸಾಮಾನ್ಯವಾಗಿ ಎಲ್ಲಾ ಮುನಿಸಿಪಾಲಿಟಿಯವರೂ ಕೇಳುತ್ತಾರೆ. ಆದರೆ ಕೊಡುವ ಶಕ್ತಿ ಇಲ್ಲದೆ ಪೀಕಲಾಟವಾಗಿದೆ.

Mr. SPEAKER.—Question hour is over.

QUESTIONS FOR ANSWERS ON THE DAY
(but not taken up)

Land granted for Coffee cultivation in Chickmagalur Taluk.

*Q.—1. Smt. B. L. SUBBAMMA (Chickmagalur).—

Will the Government be pleased to state :—

(a) the extent of land granted for coffee cultivation in Chickmagalur Taluk from the year 1961 to 1964 ;

(b) the extent of land so granted in the above taluk for which saguvali chits have been issued;

(c) whether any complaints have been received by them regarding the non-receipt of saguvali chits ;

(d) if so, the reasons therefor ?

A.—Sri M. V. KRISHNAPPA (Minister for Revenue).—

(a) 2,828 acres 5 guntas.

(b) 1,245 acres 17 guntas.

(c) Yes.

(d) The malki on the land concerned has not been cleared yet.

Second Grade Clerks working temporarily in the M.S.E.B.

*Q.—398. Sri S. H. BASANNA (Molakalmuru).—

Will the Government be pleased to state :—

(a) the number of temporary II Grade Clerks who have put in more than 3 years of service and still working temporarily in the Mysore State Electricity Board;

(b) whether it is a fact that such clerks are facing retrenchment from service ;

(c) whether it is not possible to the M. S. E. B. to absorb them in their present appointment;

(d) whether they would interfere in the matter and ensure the security of the appointments of these temporary clerks who are on the verge of termination from service?

A.—Sri VEERENDRA PATIL (Minister for Public Works).—

(a) 51.

(b) Yes.

(c) Such of those who have applied for the posts when advertised by the Board and satisfy the condition of recruitment and are successful in interview will be selected. The rest will be retrenched.

(d) The question does not arise.

L. M. P. Doctors in the State.

**Q.*—332. Sri GANJI VEERAPPA (Harihar).—

Will the Government be pleased to state :—

(*a*) the total number of L.M.P, qualified doctors in the State who have completed more than 10 years of service in the Medical and Public Health Departments ;

(*b*) the present status of such doctors and their scales of pay ;

(*c*) whether they are aware that they had given an assurance on the floor of the Assembly that these L. M. P. Doctors be promoted to Class II (Gazetted ranks) ;

(*d*) if so, why no action has been taken so far to implement their assurances ?

A.—Sri K. NAGAPPA ALVA (Minister for Health).—

(*a*) 351.

(*b*) (i) *Medical Department :—*

Assistant Surgeons Grade III (Non-gazetted) in the scale of Rs. 175-10-225-15-300-20-400.

(ii) *Public Health Department :—*

Health Officers Class III-*cum*-Assistant Medical Officers of Health-*cum*-Assistant Surgeons, Grade III in the scale of Rs. 175-10-225-15-300-20-400.

(*c*) Yes.

(*d*) It is under active consideration.

Member's Represantation.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—38ನೇ ಪಟ್ಟಿಯೊಳಗೆ ನನ್ನದು ಎರಡು ಪ್ರಶ್ನೆ ಇತ್ತು. ಅದಕ್ಕೆ ಈ ದಿವಸ ಸರಕಾರ ಉತ್ತರ ಕೊಡಬೇಕೆಂದು ತಮ್ಮನ್ನು ಕೇಳಿಕೊಂಡಿದ್ದೆ. ತಾವು ಅದನ್ನು ಮುಂದಕ್ಕೆ ಹಾಕಿದ್ದೀರಿ.

Mr. SPEAKER.—Every held-over question does not necessarily come up on the very next day. It takes a little time. Today we have 13 questions.

ಅದರಲ್ಲಿ ಯಾವುದನ್ನು ಇವತ್ತು ಪಟ್ಟಿಗೆ ಹಾಕಬೇಕು, ಯಾವುದನ್ನು ಬಿಡಬೇಕೆಂದು ನೋಡಿ ಮಾಡಿರುತ್ತದೆ. ಮನಸ್ಸು ಬಂದಾಗ ಸುಮ್ಮನೆ ಎದ್ದು ಮಾತನಾಡುವುದೊ ?

ಶ್ರೀ ಟಿ. ಡಿ. ದೇವೇಂದ್ರಪ್ಪ.—31ನೇ ತಾರೀಖೇ ಇವತ್ತು ಉತ್ತರ ಬೇಕೆಂದು ಹೇಳಿದ್ದೆ.

ಅಧ್ಯಕ್ಷರು.—ನಿಮ್ಮ ಪ್ರಶ್ನೆ ಏನು ವಿಶೇಷ ಮಹತ್ವ ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಅವು ಅಗತ್ಯವಾದ ಪ್ರಶ್ನೆಗಳು.

ಅಧ್ಯಕ್ಷರು.—ಟಿ. ಡಿ. ದೇವೇಂದ್ರಪ್ಪನವರು ಸ್ವಲ್ಪ ನಾನು ಹೇಳುವುದನ್ನು ತಿಳಿದುಕೊಳ್ಳಬೇಕು. ಮನಸ್ಸಿಗೆ ತೋಚಿದಾಗ ಎದ್ದು ನಿಂತುಕೊಂಡು ಹೀಗೆ ಮಾತನಾಡುವುದು ಸರಿಹೋಗುವುದಿಲ್ಲ. ನಾನು ಹೇಳುತ್ತರೇ ಬಂದಿದ್ದೇನೆ : ನಾನು ಇಲ್ಲಿಗೆ ಬರುವುದಕ್ಕೆ ಐದು ನಿಮಿಷ ಮುಂಚೆ ಏನಿದ್ದರೂ ಬಂದು ನನಗೆ ಹೇಳಿರಬೇಕೆಂದು ಹಾಗೆ ಮುಂಚೆ ನನಗೆ ತಿಳಿಸಿದೆ, ಇದಕ್ಕಿದ್ದ ಹಾಗೆಯೆ ಎದ್ದು ನಿಂತುಕೊಂಡು ಕೇಳುವುದು ಸರಿಯಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮುಂದಕ್ಕೆ ಹಾಕಿದ್ದೇನೆ ಎಂದು ಹೇಳಿದ್ದೀರಿ.

ಅಧ್ಯಕ್ಷರು.—ಮುಂದಕ್ಕೆ ಹಾಕಿದ್ದರೆ, ಈ ಯುಗ ಮುಗಿಯುವವರೆಗೂ ಇರುತ್ತದೆ. ಅನ್ಯಾಯವಾಗಿ ಈ ಸಭೆಯ ಕಾಲವನ್ನು ವ್ಯರ್ಥ ಮಾಡಬಾರದು.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ಒಂದು ಪ್ರಾಮುಖ್ಯವಾದ......

Mr. SPEAKER.—Under what rule ?

Sri S. SIVAPPA.—It is a very important matter.

Sri S. M. KRISHNA (Maddur).—Under rule 312.

ಶ್ರೀ ಎಸ್. ಶಿವಪ್ಪ.—ಸರಕಾರಕ್ಕೆ ಇದು ಬಹಳ ಪ್ರಾಮುಖ್ಯವಾದ ವಿಚಾರ. ನಮ್ಮ ಕೆಲವು ಶಾಸನ ಸಭಾಸದಸ್ಯರುಗಳು ವಿಧಾನಸಭೆಯ ಮುಂದೆ ಹಸಿವಿನ ಸತ್ಯಾಗ್ರಹ ಮಾಡುತ್ತಾ ಇದ್ದಾರೆ. ಆ ವಿಚಾರದಲ್ಲಿ ಮೊದಲು ಹೇಳಿಬಿಡುತ್ತೇನೆ.

Mr. SPEAKER.—The Hon. Leader of the Opposition must talk it over with the Leader of the House.

Sri S. SIVAPPA.—He is not here. The trouble is we do not know who is the Deputy Leader in the absence of the Leader.

Mr. SPEAKER.—If the member does not know, let him not exhibit his colossal ignorance on the Floor of the House. A message has been sent to me that the Chief Minister is indisposed and therefore he is unable to come and so there is nothing wrong if he is not present. If he had not sent a message perhaps I would have been in a fix, but he has sent a message. If the Leader of the Opposition wanted to raise this matter in his absence, he should have talked it over with some Minister so that he would have been in a position to reply to it here. But without doing anything of that kind he wants to raise it on the Floor of the House.

ಶ್ರೀ ಎಸ್. ಶಿವಪ್ಪ.—ದೇಶದ ಎಲ್ಲಾ ಗಮನವನ್ನು ಸೆಳೆದಿರತಕ್ಕಂಥ ವಿಷಯದ ಬಗ್ಗೆ ಈ ಸಭೆಯ ಗಮನವನ್ನು ತಮ್ಮ ಮುಖಾಂತರ ಸೆಳೆಯಬೇಕೆಂದಿದ್ದೇನೆ. ಇದು ಪ್ರಾಮುಖ್ಯವಾದ ವಿಚಾರ.

ಅಧ್ಯಕ್ಷರು.—ಒಂದು ಮಾತು ನಾನು ಹೇಳುತ್ತೇನೆ: ನೀವು ಇದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಏನೇನು ನಿಮ್ಮ ಮನಸ್ಸಿನಲ್ಲಿ ಉಂಟೊ ಅದನ್ನೆಲ್ಲಾ ಹೇಳಿಬಿಡುತ್ತೀರೊ ? ನಾನು ಹೇಳಿದ್ದು ಕಿವಿಗೆ ಬೀಳಲಿಲ್ಲವೋ ? ಒಂದು ರೂಲ್ ಪ್ರಕಾರ ಮಿನಿಷ್ಟರ ಗಮನವನ್ನು ಸೆಳೆಯಬೇಕು. ಹಾಗಾದರೂ ಗಮನವನ್ನು ಸೆಳೆದ ಕೂಡಲೇ ಅವರು ಉತ್ತರ ಕೊಡುವುದು ಹೇಗೆ ?

ಶ್ರೀ ಎಸ್. ಶಿವಪ್ಪ.—ನಾನು ಈ ವಿಚಾರ ಹೇಳಿಬಿಡುತ್ತೇನೆ.

Mr. SPEAKER.—I will not allow it. If the Member does not have the courtesy to go and meet the Minister, I will not allow it here. This habit of refusing to see the Minister outside the House but trying to make use of the Floor of this House in this manner cannot be encouraged.

ಶ್ರೀ ಎಸ್. ಶಿವಪ್ಪ.—ತಮ್ಮ ಕಣ್ಣೆದುರಿನಲ್ಲಿಯೇ ನಡೆಯುತ್ತಿದೆ. ತಾವು ಸರ್ಕಾರಕ್ಕೆ ಡೈರೆಕ್ಟೀವ್ ಕೊಡಬೇಕು.

ಅಧ್ಯಕ್ಷರು.—ಇಲ್ಲದ ಹಕ್ಕುಗಳನ್ನು ಕೇಳುತ್ತಿದ್ದೀರಿ. ನಾನು ಏನು ಡೈರೆಕ್ಟೀವ್ ಕೊಡುವುದಕ್ಕೆ ಬರುತ್ತದೆ ?

ಶ್ರೀ ಎಸ್. ಶಿವಪ್ಪ.—ಚರ್ಚೆಗೆ ಬರುವ ವಿಚಾರ ಪ್ರಾಮುಖ್ಯವಾಗಿ ಸದಸ್ಯರಿಗೆ ಸಂಬಂಧಪಟ್ಟಿದ್ದಾಗಿದೆ; ಶಾಸನ ಸಭಾಸದಸ್ಯರುಗಳಿಂದ ಸತ್ಯಾಗ್ರಹ ವ್ಯವಸ್ಥೆಯಾಗಿದೆ. ನಾಳೆವರೆಗೆ ಇದನ್ನು ಮುಂದೆ ಹಾಕುವುದಾದರೆ, ಖಂಡಿತವಾಗಿಯೂ ಅಭ್ಯಂತರವಿಲ್ಲ.

Mr. SPEAKER.—Order, order. Members must observe some rules.

Sri C. J. MUCKANNAPPA (Sira).—Sir, I request your kind permission to make a representation.

Mr. SPEAKER.—Has the Hon'ble Member got the reference ready ?

Sri C. J. MUCKANNAPPA.—Yes, Sir.

Mr. SPEAKER.—Let him pass it on to me. The Hon'ble member wants to refer to an assurance given by the Hon'ble Minister for Education that a particular book which is going to be prescribed or likely to be prescribed, will be withdrawn.

Sri S. R. KANTHI (Minister for Education).—Sir, I will make matters clear. It is not the Government which is prescribing that book, but it is the University. I have made it quite clear. I conveyed to the University body the feelings of the hon'ble members of the House, but they say that it is a perfectly all-right book. So what can I do?

Mr. SPEAKER.—Perhaps Sri S. Sivappa is responsible for it!

Sri C. J. MUCKANNAPPA.—The Hon'ble Minister said the other day that he would see that the textbook which is prescribed is withdrawn. This is an assurance which he has given on the Floor of this House and how can he now say that he is helpless?

Sri S. R. KANTHI.—How can I withdraw a book prescribed by the University for the Colleges? I must make it clear that what I said was that if it was prescribed by Government for secondary schools I would withdraw it. But it is not prescribed by Government for secondary schools; it is prescribed by the University for colleges and the University says it is a perfectly all-right book.

Sri C. J. MUCKANNAPPA.—The other day while presiding over a function even the Chief Minister said that obscene books and obscene literature should not be allowed. If that is so, how can an obscene book be prescribed for our young children?

Mr. SPEAKER.—The member must take the word of the Hon'ble Education Minister when he says that he will look into it. After all, the University is an autonomous body which has prescribed the textbook. There are members of the Senate here who the hon'ble member can approach.

Sri C. J. MUCKANNAPPA.—The Education Minister is capable of controlling an autonomous body like the University. Is he not in a position to get this textbook, which contains obscene matters, withdrawn by the University?

Sri S. R. KANTHI.—For the information of the hon'ble member I should say that he is going too far; I cannot control the autonomous University at all. How can I control? I brought it to the notice of the House.

Sri S. SIVAPPA.—Even if he tries, we will not allow it.

Sri S. R. KANTHI.—Yes, you are right.

Sri C. J. MUCKANNAPPA.—Then, is it the intention of the hon'ble Minister to allow such kind of obscene books?

Mr. SPEAKER.—The hon'ble members Sri S. M. Krishna and Sri S. Sivappa would not allow the Minister to interfere. Therefore, the matter ends there so far as this House is concerned.

Sri C. J. MUCKANNAPPA.—I request the House to see that such things are controlled, and see that such obscene language books are not there and our children read good books.

Mr. SPEAKER.—I will think over.

SRI C. J. MUCKANNAPPA.—Sir, the Finance Minister held out a promise that the book would be withdrawn. I leave it to the Minister for Education, Minister for Finance and to the treasury benches to see that the book is withdrawn.

MR. SPEAKER.—Yes.

SRI S. M. KRISHNA.—They might have withdrawn from the library.

(*Laughter*)

MR. SPEAKER.—Last time there was one matter relating to the call attention motion. There was a slight confusion. So I have prepared a brief note and I would not like to take much time of the House in reading it. I hope the Hon'ble members have got a copy of it. I will read some portions; I hope the members have a copy of the note.

Statement by the Speaker on matters of urgent public importance.

MR. SPEAKER.—Often times it happens that a Member of the Legislature has got an important matter which he wishes to bring before the House during the period of the Sessions. There are various avenues open to him to do this. By far the best is to bring it into a debate where there is full scope for discussion in all its aspects. This can be done in a debate that takes place while considering bills, budget, resolutions, motions, etc. The next method is to put questions and elicit answers. If the matter is urgent it can be covered by a starred question. If it is still more important it can be done by short notice question. The short notice question is also often times called private notice question. If satisfaction is not derived when the procedure of questions is resorted, the matter can be debated by half an hour discussion. Yet another method is to bring in adjournment motions to discuss matters of public interest. Adjournment motion was associated with the idea to censure against the Government in olden times. The concept is slowly changing. Yet again a Member can raise a discussion on matters of urgent public importance for short duration. The time covered by this is not exceeding $2\frac{1}{2}$ hours. There is no voting. A Member also can resort to the method of calling attention of the Government under Rule 63 of the Rules of Procedure and Conduct of Business in Mysore Assembly.

The purpose of this note is to state briefly the ingredients and incidents on this subject covered by rule 63. In the House of Commons there is no procedure like calling attention of the Minister to a matter of urgent public importance and ask him to make a statement thereon. It is an innovation introduced by our country under the modern parliamentary procedure. It combines the asking of a question for answer with supplementaries and short comments and in which all points of view are expressed, concisely and precisely, and Government has adequate opportunity to state its case. Sometimes it gives members opportunities

(MR. SPEAKER)

to criticise Government directly and indirectly and bring to the surface failure or inadequate action of Government on an important matter. The main feature of the procedure is that it begins suddenly, lasts a short while and leaves in its trail consequences of varied character. At the inception, the rule was not so wide as it is to-day. On 7th September 1957, in the Lok Sabha Debates Col. 'C' 12509 it was stated thus: "New rule regarding calling attention to matters of general public importance: It was explained that there was considerable feeling that at present no precise procedure was available to private members to raise at short notice important matters. The procedure of bringing an adjournment motion which was in the nature of a censure motion was restricted in its scope in the present constitutional set-up. It was therefore, considered that some procedure must be devised whereby members shall have an opportunity of bringing important matters to the attention of the Government. It was considered necessary to make provision that a member might, with the previous permission of the Speaker, call the attention of a Minister to any matter of urgent public importance and the Minister might make a brief statement or ask for time to make statement at a later hour or date. The Committee accepted this new rule."

In the two years of the First Lok Sabha the idea of call attention did not attract much notice but during the Second Lok Sabha the procedure fell more and more into disuse. Further at the beginning of the Third Lok Sabha, the procedure received vitality and importance. It has been used systematically and with effect. There has been a fall in the number of motions for adjournment and increase in the number of calling attention notices. Three things have contributed to this:

(1) the decisions are taken instantly and urgent and important matters are brought before the House the same day;

(2) if there be unavoidable urgency, more than one such matter is brought on the same day; and

(3) the members who have tabled notice of the matter are each allowed to ask one question.

There is no limit for a number of notices that a member may table. There is no limit on the number of members who may use this procedure. As a rule the notice must be given on the same day on which a matter has arisen or becomes publicly known. If there is delay the notice may be rejected on that ground. The Speaker goes through these notices one by one and gives his decisions briefly. Speaker's mind and attention are concentrated on these notices. He listens, makes a brief comment and gives his decision, concise and clear. No one is required to record the reasons for his decision and no reasons are communicated to the members. The Speaker is not bound by any precedents strictly, although he has laid down for himself such obvious rules or conventions as for example, whether the matter falls within the cognizance of a Minister of the Central Government, whether the matter may have just started and no

significance may be attached to it. A few days later further development may take place and may become important and urgent and the Speaker may admit it.

When a member is called by the Speaker to call the attention of the Minister to a matter of public importance a member rises in his place and makes a formal request to the Minister to make a statement on the matter which he reads briefly. The Minister may make the statement there and then, if he has got all the facts of the case or he may give such information as is in his possession and request that he may be given time to give further information later. The Speaker usually grants this request. The Minister if he is not ready may straightaway ask for time to collect the information and give it to the House either later in the day or the next day or a few days later as the case may be. Such requests are sparingly made, but when they are made, they are granted. The Minister usually reads the statement to the House and then and there follow questions on that statement by the members who have tabled the notice and answers by the Minister. But if the statement is long the Speaker can ask the Minister to lay it on the Table of the House, then the usual practice is for the members to study the statement and then to ask the questions at a later hour, usually at the end of the day, if so fixed by the Speaker or on the next working day. If the questions are complicated or involve a high level policy of the Government the Prime Minister may intervence and give an authoritative opinion of the Government or promise further consideration of the matter.

Call attention notice based on a press report which is incorrect and in respect of which a contradiction has been issued is inadmissible. Notices of calling attention may be admitted in lieu of adjournment motions. If a call attention notice is received on the last day of a session and is admitted for the same day but the Minister concerned is unable to make a statement for want of adequate notice the Speaker may direct the Minister to furnish to the Legislature Secretariat at a later date a note giving the requisite information for onward transmission to the member who had tabled the notice. Where a calling attention notice is admitted in lieu of an adjournment motion, a separate notice is required to be given. If, however, a notice of calling attention on this subject has already been received from another member, the name of the other member is also clubbed together with the name of the member who has given already notice of call attention motion. Notices for calling attention regarding matters which are not primarily the concern of the Government are not admissible. A notice under this rule (Rule 197 of Manual of Business and Procedure in Lok Sabha) usually renders a notice of an adjournment motion unnecessary. There are some instances where questions on the statements made by a Minister in response to a calling attention notice are not permitted. In exceptional cases the Chair may however permit a member to seek clarification from the Minister on the statement made by him in response to a calling attention notice. Two statements under this Rule are not permissible on the same day. If a member in whose name the notice has been put down in the list of

(MR. SPEAKER)

business is absent from the House when the item is reached, the Minister is not called upon to make a statement. He may, however, lay a copy of the statement on the Table, if he so chooses. A statement so aid is not treated as having been laid in response to the notice but as one laid by the Minister *suo moto*. If however, another member has also tabled a Calling Attention Notice on the same subject on that day and he is present in the House, he may be allowed to call the attention of the Minister to the matter and the Minister may make a statement in response thereto. A statement may be made by the Minister where the matter is important although the member who tabled the notice under this rule is not present in the House. In case the statement to be made by the Minister is long, only a synopsis of the statement may be read out and the complete statement may be laid on the Table. The name of the member giving notice under this rule may be clubbed with other names against a question on similar subject, in case the notice under this rule has been disallowed. A single statement may be made in respect of two or more notices. A notice under this rule is normally disallowed if a statement on the subject is to be made or laid *suo moto* by the Minister. If a notice is disallowed in view of a statement to be made by the Minister *suo moto* the member is informed before the statement is made in the House. A notice may be admitted even if the Minister had informed that he would make a statement *suo moto*. Members should not refer on the floor of the House to notices given by them under this rule.

The position is as indicated above. It is brief and not exhaustive. Now members have often invoked a debate of short duration on subjects covered by the calling attention notice and the statement made thereon. There is an instance where a single matter was raised under the debate on demands in the budget for half hour and later on the same subject was covered by debate on the appropriation bill for nearly an hour, and the same subject again came up in a calling attention notice and questions or clarifications were allowed for about half an hour. Still notice under rule 59 suggesting a debate was made. It was also suggested in the course of replies to the questions that the member may cause a short notice question to be given and then raise half an hour debate. This aspect will come when new or fresh aspects of matter have evolved.

Thus where a matter has been exhausted or dealt with under a debate, normally Neither a Calling Attention Notice nor a short duration debate should be permitted. The rational behind all the scheme is that the members must have an opportunity to debate upon any important matter or elicit information from the Government on such matter. Therefore, it is not proper to ignore the various rules governing the matter and raise a single matter again on the floor of the House.

SRI S. M. KRISHNA.—Sir, I want to make one submission with reference to the note you have just read. We appreciate the efforts of yourself and the legislature staff. In the Lok Sabha whenever a call attention notice is admitted, the Minister would be called upon to reply or to make a statement within 48 hours. Very recently an appeal was

made to the Speaker of the Lok Sabha that 48 hours is too long and it should be brought down to 24 hours. Here also Sir, the moment you admit a call attention notice, the Minister concerned must be directed to furnish a statement or replies within 24 hours. If that cannot be done within 24 hours, the Minister concerned may make an appeal to the House for extension of time and the Speaker if he so chooses may extend the time.

MR. SPEAKER.—The note is clear on that point. I have made the position very clear. We shall see how it works hereafter.

SRI SIDDIAH KASHIMATH (Shirahatti).—Sir, I have sent a call attention notice regarding the death of 11 children in Gadag area.

MR. SPEAKER.—I have admitted it. It will come in due course.

PAPERS LAID ON THE TABLE.

SRI S. R. KANTHI.—Sir, I beg to lay on the Table a copy of Notification No. GAD 2 SSC 65, dated 18th February 1965 (Further amendment to the Mysore Public Service Commission (Consultation)Regulations 1958)as, required under Article 320 (5) of the Constitution of India.

SRI K. PUTTASWAMY (Minister for Municipal Administration).—Sir, I beg to lay on the Table a copy of the Notification No. PLM 13 MLR 64, dated 16th March 1965 (The Mysore Municipalities (Procedure and Conduct of Business Rules 1965) as required under sub-section (6) of section 323 of the Mysore Municipalities Act, 1964).

SRI VEERENDRA PATIL (Minister for Public Works).—Sir, I beg to lay on the Table the Annual Financial Statement of the Mysore State Electricity Board for the year 1965-66 as required under section 61 of the Electricity (Supply) Act, 1948.

OFFICIAL RESOLUTION

Re: Survey and Settlement Report.

(Debate continued)

MR. SPEAKER.—Further discussion on the Official Resolution. The hon'ble member Sri P. Venkatagiriappa has sent a request that he is suffering from fever and that he may be permitted to sit and speak. He has taken 25 minutes. He will conclude within another 10 minutes. This is a very important matter on which every member would like to participate, regardless of party affiliation. I cannot give more time. Two days are allotted for this.

SRI S. M. KRISHNA.—You were just pleased to say that further discussion on the Settlement Reports is allowed only for two days. Every member would like to participate on this very important matter. Kindly allow some more time.

MR. SPEAKER.—We have to act according to the decision taken in the Business Advisory Committee.

Sri H. R. KESHAVA MURTHY (Gandasi).—It is a big matter, Sir. Some more time may be given.

Mr. SPEAKER.—It is a matter of opinion. The Hon'ble members must all go to their representative of the Business Advisory Committee and request him to ask for more time in the Business Advisory Committee. But the members would not do it and they are wasting the time of the House. There is no co-ordination among themselves.

Sri H. R. KESHAVA MURTHY.—The members of the Business Advisory Committee have no idea of this.

Mr. SPEAKER.—That means we have to wind up the Business Advisory Committee.

Sri C. J. MUCKANNAPPA.—I raise a point of order, Sir. Under Article 265 of the Constitution no tax shall be levied or collected except by authority of law. But the Resolution is moved by the Revenue Minister. It is only a Resolution to be accepted by this House. It has no statutory force. The resolution cannot enable this Government to levy or collect the taxes. Collection of land revenue is only a customary law.

Mr. SPEAKER.—The member says that it is not under the law. And he means to say people are blindly paying the land revenue even after the Constitution comes into existence. This is not argument. I am not allowing the point of order. This statement leads to rejection of the point of order.

Sri C. J. MUCKANNAPPA.—There is no law authorising them to levy any further taxes. They have brought only a Resolution. Government have admitted that they have based on the land revenue. It is not correct. But for this......

Mr. SPEAKER.—I will deal with it. I have uuderstood the point. There are two points, *viz*., the land revenue has been collected under existing customary law and it should not be the case in this. What the member says is correct. For this reason, shall I shut out the discussion of the Resolution ?

Sri C. J. MUCKANNAPPA.—By passing this Resolution, will the Government take the authority or power to collect taxes ?

Mr. SPEAKER.—The member is spending time on this. There are many Hon'ble Members waiting for their turn to speak. Let the member resume his seat.

I will deal with the point. I was mentioning this point as a belated conception by this Hon'ble Member. Even if it is belated I have entertained it and I have entertained it for the purpose of dealing with it and to see whether there is any substance in it. He referred to Article 265 and in explaining the article he is drawing an inference that the State, the Centre and the entire world do not know that the taxes are collected under customary law. Now, the word law thereunder this Article 265 has not at all been limited to any particular branch of law.

Sri C. J. MUCKANNAPPA.—Collection of land revenue has no statutory force.

Mr. SPEAKER.—The member is trying to change the position. What he said was that till now the land revenue was being collected

under customary law. Let me take that it has been paid under mistaken notion and the Resolution moved unconstitutionally and not warranted by the constitution. As I have already stated, matters of this type are not decided by the House and they are judicially decided before the competent Tribunal. When the Resolution was moved, no amendment was moved. It was adopted. Now upholding it, is a serious matter. I am not going to do it. Further, if the Resolution is adopted as to how it should be implemented when it is taken to a Court of Law is a point beyond the scope. No purpose will be served on commenting on it now. If there is anything to say, let him tell me now. More time should not be consumed.

Sri C. J. MUCKANNAPPA.—You are at liberty Sir. What is the statutory power that this Resolution has adopted to make the Government or enabling it to collect the land revenue ?

Mr. SPEAKER.—Is the member encroaching upon the time of others ?

Sri C. J. MUCKANNAPPA.—This is the question of point of order Sir.

Mr. SPEAKER.—The point of order can be raised at any time and it can be rejected at any time if the Speaker is not satisfied.

Sri C. J. MUCKANNAPPA.—I cannot question the powers of the Chair.

Mr. SPEAKER.—Articles 265 and 267 definitely make it clear what is the law followed and what is the authority that these people have got to collect the land revenue.

Sri C. J. MUCKANNAPPA.—Sir, there is a Revenue Code. In the book that I have been supplied, my district has been divided into three zones. What is the pattern that you are going to follow is not stated. I request the Chair to enlighten me in the matter whether my Point of Order is alright or whether how are you going to reject it. I request you to take into consideration articles 265 and 267. If you give me another opportunity to place my views on the Point of Order, I will do so.

2-30 P.M.

Mr. SPEAKER.—Let the Hon'ble Member study it, and we shall see later on. There is nothing new which he has said. On the other hand there is Section 80 of the Mysore Land Revenue Act of 1964, which says:

> "All Land liable to pay Land Reveune, unless specially exempted—All land, whether applied to agricultural or other purposes and wherever suitable, is liable to the payment of land revenue to the State Government according to the provisions of this Act, except such as may be wholly exempted under the provisions of any special contract with the Government or any provision of this Act or any other law for the time being in force."

Sri P. Venkatagiriappa may continue for ten minutes.

ಶ್ರೀ ಪಿ. ವೆಂಕಟಗಿರಿಯಪ್ಪ.—ಸ್ವಾಮಿ, ಹಿಂದೆ ಮಾತನಾಡಿದಾಗ—11ನೇ ಜೋನ್‌ನಲ್ಲಿ ಬೆಳೆಗಳ ಇನ್‌ಕಂ ಬಗ್ಗೆ ಲ್ಯಾಂಡ್ ರೆವಿನ್ಯೂ ರಿವಿಜನ್ ಸೆಟ್ಲಮೆಂಟ್ ರಿಪೋರ್ಟಿನಲ್ಲಿ ಯಾವ ಅಂಕಿಅಂಶಗಳನ್ನು ಕೊಟ್ಟಿದ್ದಾರೆ ಅದು ಸರಿಯಿಲ್ಲ ಎಂದು ತಿಳಿಸುತ್ತಾ ಇದ್ದೆ. ರಾಗಿಯ ನೆಟ್ ಇನ್‌ಕಂ ಒಂದು ಎಕರೆಗೆ

(ಶ್ರೀ ಪಿ. ವೆಂಕಟಗಿರಿಯಪ್ಪ)

80 ರೂಪಾಯಿ, ಕಡಲೆ ಕಾಯಿ 190 ರೂಪಾಯಿ, ಬತ್ತದ ಇನ್‌ಕಂ 350 ರೂಪಾಯಿ, ಹುರುಳಿ 65 ರೂಪಾಯಿ, ಆಲೂಗಡ್ಡೆ 1,015 ರೂಪಾಯಿ, ಈರುಳ್ಳಿ 575 ರೂಪಾಯಿ, ಟೊಬ್ಯಾಕೋ 320 ರೂಪಾಯಿ, ಮೆಣಸಿನಕಾಯಿ 800 ರೂಪಾಯಿ, ಮೆಣಸಿನಕಾಯಿ 1,250 ರೂಪಾಯಿ, ಷುಗರ್‌ಕೇನ್ 1,040 ರೂಪಾಯಿ ಬರುತ್ತದೆ ಎಂದು ವರದಿಯಲ್ಲಿ ಕೊಟ್ಟಿದ್ದಾರೆ. ನಾನು ಈ ವಿಷಯವಾಗಿ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಿಜವಾಗಿಯೂ ಇಷ್ಟು ಇನ್‌ಕಂ ಕೋಲಾರ ಜಿಲ್ಲೆಯ ರೈತರಿಗೆ ಬರುವುದಾದರೆ ಒಂದೊಂದು ಊರಿನಲ್ಲಿ ಹತ್ತಾರು ಜನರು ಮೋಟಾರು ಕಾರುಗಳನ್ನು ಇಟ್ಟುಕೊಂಡಿರತಕ್ಕ ಜನರನ್ನು ನಾವು ಇವತ್ತಿನ ದಿವಸ ನೋಡಬೇಕಾಗಿತ್ತು ಮತ್ತು ರೆವಿನ್ಯೂ ಮಂತ್ರಿಗಳ ಸ್ನೇಹಿತರು ಇದ್ದಾರಲ್ಲಾ ಹಾಲೆಂಡ್ ಜಾನ್‌ಸನ್ ಅವರಂಥಹ ರೈತರು ನಮ್ಮ ಜಿಲ್ಲೆಯಲ್ಲಿ ಅಥವಾ ನಮ್ಮ ರಾಜ್ಯದಲ್ಲಿ ಸಾವಿರಾರು ಜನರು ಇರಬೇಕಾಗಿತ್ತು. ಲಕ್ಷಕ್ಕೆ ಒಬ್ಬರು ಅಂಥಹ ರೈತರು ಸಿಗುವುದಿಲ್ಲ. ಆದ್ದರಿಂದ ಈ ಬೆಳೆಗಳ ಬಗ್ಗೆ ಈ ವರದಿಯಲ್ಲಿ ಕೊಟ್ಟಿರುವುದರಲ್ಲಿ ಏನೇನೂ ನಿಜಾಂಶ ವಿಲ್ಲ. ಇದರಲ್ಲಿ ಮಳೆ ಬರದೇ ಬೆಳೆ ಹೋಗತಕ್ಕ ವಿಷಯವಾಗಲಿ, ರೋಗ ರುಜಿನಗಳ ವಿಷಯವಾಗಲಿ ಕಳ್ಳಕಾಕರ ದೆಸೆಯಿಂದ ಬೆಳೆ ನಾಶವಾಗತಕ್ಕ ವಿಷಯವಾಗಲಿ ಇಲ್ಲ. ಅವರು ಹೇಳಿರತಕ್ಕದ್ದು ಎಕ್ಸ್‌ಪೆಷನರ್ ಕೇಸಸ್ ಮಾತ್ರ. ಸಾಧಾರಣವಾಗಿ ನಮ್ಮ ಜಿಲ್ಲೆಯಲ್ಲಿ ಏನು ನೆಟ್ ಇನ್‌ಕಂ ಬರುತ್ತದೆ ಎಂದು ಅವರು ಹೇಳಿದ್ದಾರೆ ಅದು ಶುದ್ಧ ಸುಳ್ಳು ಅದನ್ನು ಒಪ್ಪಿಕೊಳ್ಳಬಾರದು ಎಂದು ತಿಳಿಸುತ್ತೇನೆ.

Mr. SPEAKER.—Am I to take it that there are no other members willing to participate ? I don't receive a single list. A co-ordinated list will be respected. Why don't the whips meet and decide ? If they do not discharge their duties, I will not recognise them as Whips.

ಶ್ರೀ ಪಿ. ವೆಂಕಟಗಿರಿಯಪ್ಪ.—ಮಾನ್ಯ ಮಂತ್ರಿಗಳು ಈ ವರದಿಯನ್ನು ಈ ಸಭೆಯ ಮುಂದೆ ಇಡುವಾಗ ಒಂದು ವಿಷಯವನ್ನು ತಿಳಿಸಿದರು ಅದು ಏನೆಂದರೆ, ಲ್ಯಾಂಡ್ ರೆವಿನ್ಯೂ ರಿವಿಜನ್ ಸೆಟ್ಲ್‌ಮೆಂಟ್ ಆದಾಗ ಕಂದಾಯವನ್ನು ಜಾಸ್ತಿ ಮಾಡಲೇ ಬೇಕಾಗುತ್ತದೆ, ಅದಕ್ಕೇ ಈಗ ಜಾಸ್ತಿ ಮಾಡುತ್ತಾ ಇದ್ದೇವೆ, ಇದರಲ್ಲಿ ಏನೂ ವಿಶೇಷವಿಲ್ಲ ಎಂದು ತಿಳಿಸಿದರು. ಹಿಂದೆ ಸೆಕೆಂಡ್ ಲ್ಯಾಂಡ್ ರೆವಿನ್ಯೂ ರಿವಿಜನ್ ಸೆಟ್ಲ್‌ಮೆಂಟ್ ಏನಾಗಿದೆ ಅದರ ವರದಿಯನ್ನು ನೋಡಿದರೆ ಈ ರೀತಿಯಾಗಿ 100ಕ್ಕೆ 100 ಭಾಗ ಹೆಚ್ಚು ಮಾಡಬೇಕು ಅಥವಾ 100ಕ್ಕೆ 50 ಭಾಗ ಹೆಚ್ಚು ಮಾಡಬೇಕೆನ್ನುವ ಅಭಿಪ್ರಾಯ ಹಿಂದೆ ಯಾವಾಗಲೂ ಇರಲಿಲ್ಲ. ಕೋಲಾರ ತಾಲ್ಲೂಕನ್ನು ತೆಗೆದುಕೊಂಡರೆ ಖುಷ್ಕಿಗೆ ಫಸ್ಟ್ ರಿವಿಜನ್ ಸೆಟ್ಲ್‌ಮೆಂಟ್‌ನಲ್ಲಿ ಎರಡ ರೂಪಾಯಿ ಇದ್ದದ್ದು ಎರಡನೇ ಸೆಟ್ಲ್‌ಮೆಂಟಿನಲ್ಲಿ ಎರಡು ರೂಪಾಯೇ ಇದೆ, ಎರಡು ರೂಪಾಯಿ ಇದ್ದದ್ದನ್ನು ಮೂರು ರೂಪಾಯಿ ಮಾಡಿದ್ದರು. ಕೋಲಾರ ಜಿಲ್ಲೆಯವರು ಚಳುವಳಿ ಮಾಡಿ ಪುನಃ ಎರಡು ರೂಪಾಯಿಗೆ ಇಳಿಸಿದ್ದಾರೆ. ಹಿಂದೆ ರಿವಿಜನ್ ಮಾಡಿದಾಗ ಕೂಡ ಕಡ್ಡಾಯ ವಾಗಿ ಜಾಸ್ತಿ ಮಾಡಬೇಕೆಂದು ಯಾವಾಗಲೂ ಮಾಡಿಲ್ಲ. ಆದರೆ ಈಗ ಮಾತ್ರ ರಿವಿಜನ್ ಮಾಡುವಾಗ ಜಾಸ್ತಿ ಮಾಡಲೇಬೇಕು, ಇದು ಒಂದು ದೈವಿಕ ನಿಯಮ ಎನ್ನುವ ರೀತಿಯಲ್ಲಿ ಮಾನ್ಯ ಮಂತ್ರಿಗಳು ಸಭೆಯ ಮುಂದೆ ವಾದ ಮಾಡುವುದು ಸರಿಯಿಲ್ಲ, ಅದರಲ್ಲಿ ಅರ್ಥವಿಲ್ಲ ಎಂದು ನಾನು ತಿಳಿಸಬಯಸುತ್ತೇನೆ.

ಭೂಕಂದಾಯದ ಸಮಸ್ಯೆ ಏನಿದೆ ಇದು ರೈತಾಪಿ ವರ್ಗದ ಒಂದು ಮೂಲಭೂತವಾದ ಸಮಸ್ಯೆ. ಇದರ ಬಗ್ಗೆ ಬಹಳ ವಿಷಾದದಿಂದ ತಿಳಿಸಬೇಕಾಗಿದೆ ನಮ್ಮ ಸರ್ಕಾರದವರು ಇನ್ನೂ ಬಹಳ ಆಳವಾಗಿ ಇದರ ಬಗ್ಗೆ ಪರಿಶೀಲನೆ ಮಾಡಬೇಕಾಗಿತ್ತು. ಕಂದಾಯವನ್ನು ಹೆಚ್ಚು ಮಾಡುವುದರಿಂದ ರೈತಾಪಿ ವರ್ಗದಲ್ಲಿರತಕ್ಕ ಬಡ ಜನರ ಮೇಲೆ ಇದರ ಪರಿಣಾಮವೇನಾಗುತ್ತದೆ, ಮಧ್ಯಮ ವರ್ಗದವರ ಮೇಲೆ ಮತ್ತು ಶ್ರೀಮಂತ ರೈತಾಪಿ ವರ್ಗದವರ ಮೇಲೆ ಯಾವ ಪರಿಣಾಮವಾಗುತ್ತದೆ ಎಂಬ ವಿಷಯದಲ್ಲಿ ಅವರು ಪೂರ್ಣವಾಗಿ ಅಭ್ಯಾಸ ಮಾಡಬೇಕಾಗಿತ್ತು. ಇದನ್ನು ಮಂಡಿಸಿರತಕ್ಕ ಮಾನ್ಯ ರೆವಿನ್ಯೂ ಮಂತ್ರಿಗಳು ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎಂದು ಬಹಳ ವಿಷಾದದಿಂದ ತಿಳಿಸಬೇಕಾಗಿದೆ. ಅವರು ಹಿಂದೆ ಇದೇ ಸಭೆಯಲ್ಲಿ ಮತ್ತು ಕೋಲಾರದಲ್ಲಿ ಬಹಿರಂಗ ಸಭೆಯಲ್ಲಿ ಸ್ಟ್ಯಾಂಡರ್ಡ್ ಎಕರ್ ಎಂದರೆ 16 ಆಣೆ ಬೆಳೆ, ನಾಲ್ಕು ಆಣೆ, ಮೂರು ಆಣೆ, ಆರು ಆಣೆ ಜಮೀನು ಕೋಲಾರದಲ್ಲಿ ಎಂದು ಹೇಳಿ ಸುಮ್ಮನೆ ವಿರೋಧ ಪಕ್ಷದ ಜನರು ಚೀಪ್ ಪಾಪ್ಯುಲಾರಿಟಿಗೆ ಹೇಳುತ್ತಾರೆ ಎಂದು ಹೇಳಿದರು. ಈಗ ಅವರೇ ಒಪ್ಪಿಕೊಂಡಿದ್ದಾರೆ, ಕೋಲಾರ ಜಿಲ್ಲೆಯಲ್ಲಿ 14 ಆಣೆಗಿಂತ ಕಡಿಮೆ ಯಾವುದೂ ಇಲ್ಲ. ಅವರಿಗೆ ನಾನು ಹಿಂದೆಯೇ ಕೇಳಿದ್ದೆ; 'ಮಹಾಸ್ವಾಮಿ ಸಾಯಿಲ್ ಕ್ಲಾಸಿಫಿಕೇಷನ್ ಪುನಃ ಮಾಡಿಸುತ್ತೀರಾ ಅಥವಾ 70 ವರ್ಷದ ಹಿಂದೆ ಮಾಡಿಸಿದ್ದೇ' ಎಂದು ಅದಕ್ಕೆ ಅವರು ನಾವೇನೂ ಮಾಡುವುದಿಲ್ಲ; ಹಿಂದೆ ಮಾಡಿದ್ದನ್ನೇ ಒಪ್ಪಿಕೊಳ್ಳುತ್ತೇವೆ ಎಂದು

ಅಪ್ಪಣೆ ಕೊಟ್ಟರು. ಇದರಿಂದ ಅರ್ಥವಾಗುವುದು ಏನೆಂದರೆ, ಕೆಳಮಟ್ಟದಲ್ಲಿ ಸರ್ವೆ ಸೆಟ್ಲಮೆಂಟ್ ಅಧಿಕಾರಿಗಳು ಯಾವ ರಿಪೋರ್ಟನ್ನು ಕೊಟ್ಟಿದ್ದಾರೋ ಅದನ್ನೆ ನಮ್ಮ ಮುಂದೆ ಇಟ್ಟಿದ್ದಾರೆ. ಇದೇ ಸರಿಯಾಗಿದೆ, ಸೈನ್‌ಟಿಫಿಕ್ ಆಗಿದೆ ಒಪ್ಪಿಕೊಳ್ಳಿ ಎಂದು ಹೇಳುತ್ತಾ ಇದ್ದಾರೆ. ದೇಶಧಲ್ಲಿ ಏನೇನೋ ಅಭಿವೃದ್ಧೀಕಾರ್ಯಗಳನ್ನು ಮಾಡುತ್ತಾ ಇದ್ದೇವೆ ಆದ್ದರಿಂದ ನೀವೆಲ್ಲಾ ಕಂದಾಯ ಜಾಸ್ತಿ ಕೊಡುವ ಹಾಗೆ ಜನಗಳಿಗೆಲ್ಲಾ ಹೇಳಿ ಎಂದು ಹೇಳುವುದನ್ನು ಬಿಟ್ಟರೆ ಮತ್ತೆಯಾವುದೂ ನಮಗೆ ಕಾಣುತ್ತಾ ಇಲ್ಲ. ಇಡೀ ದೇಶದಲ್ಲಿ ನೂರಕ್ಕೆ 80 ಜನ ವ್ಯವಸಾಯಗಾರರು ಇರತಕ್ಕ ಈ ದೇಶದಲ್ಲಿ ಇದರ ಪರಿಣಾಮ ಏನಾಗುತ್ತದೆ, ದೇಶದಲ್ಲಿರತಕ್ಕ ನಾನಾ ಭಾಗದ ಜನರ ಮೇಲೆ ಇದರ ಬಗ್ಗೆ ಯಾವ ಪರಿಣಾಮವಾಗುತ್ತದೆ ಎಂಬುದನ್ನು ಅವರು ಅಭ್ಯಾಸ ಮಾಡಿಲ್ಲ. ಸುಮ್ಮನೆ ಆತುರದಲ್ಲಿ ಈ ಒಂದು ವರದಿಯನ್ನು ಸಭೆಯ ಮುಂದೆ ತಂದು ಇದನ್ನು ಪಾಸ್ ಮಾಡಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ ಇದು ನ್ಯಾಯವಲ್ಲ ಎಂದು ನಾನಾದರೂ ಸಭೆಗೆ ತಿಳಿಸಬೇಕಗಿದೆ. ಇಷ್ಟೇ ಅಲ್ಲದೆ ಇನ್ನೊಂದು ವಿಷಯ ನಾನು ಹೇಳುವುದೇನೆಂದರೆ ನೂರಕ್ಕೆ 90 ಜನ ಹಳ್ಳಿಗಾಡಿನಿಂದ ಬಂದಿರುವವರೇ ಶಾಸನ ಸಭಾಸದಸ್ಯರಾಗಿದ್ದೇವೆ. ನಾವು ಚುನಾವಣೆಯ ಕಾಲದಲ್ಲಿ ಜನರಿಗೆ ಹೇಳಿರುವುದು ಏನು? ನೀವೆಲ್ಲಾ ನಮಗೆ ಓಟು ಕೊಡಿ ನಾವು ಶಾಸನ ಸಭೆಗೆ ಹೋಗಿ ಕುಳಿತುಕೊಳ್ಳುತ್ತೇವೆ, ಕುಳಿತು ಕೊಂಡು ನಿಮ್ಮ ಹಿತರಕ್ಷಣೆ ಮಾಡುತ್ತೇವೆ, ನಿಮಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ, ಪೋಲೀಸ್ ಮತ್ತು ಇತರರಿಂದ ದೌರ್ಜನ್ಯವಾಗದಂತೆ ನೋಡಿಕೊಳ್ಳುತ್ತೇವೆ, ಆಡಳಿತದಲ್ಲಿ ಲಂಚ ರುಷುವತ್ತು ಹೋಗುವ ಗಾಗೆ ಮಾಡುತ್ತೇವೆ, ಅಷ್ಟೇ ಅಲ್ಲದೆ ತೆರಿಗೆಗಳ ಭಾರ ಕಡಿಮೆ ಮಾಡುತ್ತೇವೆ ಎಂದು ಭರವಸೆ ಕೊಟ್ಟು ಈ ದಿವಸ ನೂರಕ್ಕೆ 90 ಜನ ಹಳ್ಳಿಗಾಡಿನಿಂದ ಬಂದು ಕುಳಿತುಕೊಂಡಿರ ತಕ್ಕ ಜನ ಇಲ್ಲಿ ಇದ್ದೇವೆ. ರೈತರ ಹಿತಕ್ಕೆ ವಿರೋಧವಾಗಿರತಕ್ಕ ಈ ವರದಿಯನ್ನು ನಾವು ಒಪ್ಪಿಕೊಳ್ಳು ವುದಾದರೆ ರೈತ ವರ್ಗದ ಅವಹೇಳನ ಮಾಡಿದಂತಾಗುತ್ತದೆ. ಇನ್ನೊಂದು ಮುಖ್ಯವಾದ ವಿಷಯ ಶ್ರೀ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಸಮಿತಿ ತನ್ನ ವರದಿಯಲ್ಲಿ ತಿಳಿಸಿದೆ. ಆ ವರದಿಯಲ್ಲಿರುವ ಮುಖ್ಯ ವಿಷಯಗಳನ್ನು ಹೇಳಲು ಹೆಚ್ಚು ಕಾಲಾವಕಾಶವಿಲ್ಲ, ಅದರಲ್ಲಿ ಬಹಳ ಮುಖ್ಯವಾದ ವಿಷಯಗಳಿವೆ. 69ನೆಯ ಪುಟದಲ್ಲಿ ಈ ರೀತಿ ಇದೆ:

"Indian National Congress recommended in December 1936 the following steps to grant immediate relief under all-India agrarian programme:

(1) rent and revenue should be readjusted having regard to present conditions and there should be substantial reduction in both.

(2) Uneconomic holdings should be exempted from rent and land tax.

(3) agricultural income should be assessed for income tax like all other incomes on progressive scale subject to the prescribed minimum."

ಹೀಗೆಯೇ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ 1936ರಲ್ಲಿ ನೇಮಿಸಿದ್ದ ಸಮಿತಿ ಸಹ ಸಲಹೆ ಮಾಡಿದೆ. ಇದೇ ರೀತಿ ಪ್ಲಾನಿಂಗ್ ಕಮಿಷನ್ ಹೇಳಿರುವುದು ಈ ರೀತಿ ಇದೆ:

"During the transition period, no tax, rent or revenue demand should be made in respect of any piece of land which is so small or the gross out-turn of which is so slight that the whole of it if left to the cultivator for his own use would not be sufficient even to give him a decent existence according to pre-determined standard."

ನಾನು ಮುಖ್ಯವಾಗಿ ಈ ಸಭೆಯಮುಂದೆ ನಮ್ಮ ಜಿಲ್ಲೆಯ ಒಂದು ಉದಾಹರಣೆಯನ್ನು ತಿಳಿಸಿ ಅಂಕಿ ಅಂಶವನ್ನು ಹೇಳುತ್ತೇನೆ. ಈ ದಿವಸ ಕೋಲಾರ ಜಿಲ್ಲೆಯಲ್ಲಿ ಒಟ್ಟು 1,22,596 ಹಿಡುವಳಿಗಳಿವೆ, ಅದರಲ್ಲಿ 85,979 ಹಿಡುವಳಿಗಳು 4 ಎಕರೆಗಿಂತ ಕಡಮೆ ಇವೆ. ಜತ್ತಿ ಕಮಿಟಿ ವರದಿ ಬೇರೆ ಇದೆ. ಅದರ ಪ್ರಕಾರ ಈ ರೀತಿ ಇದೆ. ಕೋಲಾರ ಜಿಲ್ಲೆಯಲ್ಲಿ 5 ಎಕರೆ ಕೆಳಗಿರುವ ಹಿಡುವಳಿ ಗಳ ಒಟ್ಟು ಜಮೀನು 1,96,291 ಎಕರೆ. ಕೋಲಾರದಲ್ಲಿರುವ ಸೇಕಡ 75 ಜನರಲ್ಲಿ 25 ಭಾಗದ ಜನರಿಗೆ ಮಾತ್ರ ಜಮೀನಿದೆ. ಅಲ್ಲದೆ ಕೆಲವರು ಸುಮಾರು ಎರಡೂಕಾಲು ಎಕರೆ ಜಮೀನನ್ನು

(ಶ್ರೀ ಪಿ. ವೆಂಕಟಗಿರಿಯಪ್ಪ)

ಹೊಂದಿದ್ದಾರೆ. ನಾನು ಕೇಳುವುದಿಷ್ಟೆ: ದೊಡ್ಡ ದೊಡ್ಡ ರೈತರಿರಲಿ, ಬೇಡವೆಂದು ಹೇಳುವುದಿಲ್ಲ, ಆದರೆ ಎರಡೂಕಾಲು ಎಕರೆ ಜಮೀನಿರುವ ಜನ, ಸೇಕಡ 75 ಜನ ಬಡ ರೈತರು ಈಗ 10 ರೂಪಾಯಿ ಕೊಡುತ್ತಿದ್ದರೆ, ಮಳೆ ಬೆಳೆ ಆಗದೆ ಅವರು ಒದ್ದಾಡುತ್ತಿರುವಾಗ ಅವರು 20 ರೂಪಾಯಿ ಕೊಡಬೇಕೆಂದು ಹೇಳಿ ಬಂದ ಹಣದಿಂದ ಬೆಂಗಳೂರು ಯೂನಿವರ್ಸಿಟಿ ಸ್ಥಾಪಿಸುವುದು, ಮಂತ್ರಿಗಳ ಸಂಖ್ಯೆ ಜಾಸ್ತಿಮಾಡುವುದು ಸರಿಯಲ್ಲ, ಅವಹೇಳನ ಎಂದು ತಿಳಿಸಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಅವರು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮಾಡಿದ ನಿರ್ಣಯವನ್ನು ಕೋಟ್ ಮಾಡಿ ಹೇಳುತ್ತಿದ್ದಾರೆ. ಅದನ್ನು ಅವರು ಒಪ್ಪುತ್ತಾರೆಯೇ? ಜಮೀನು ಕಂದಾಯವನ್ನು ತೆಗೆದು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕಬೇಕೆಂದು ಹೇಳುವ ವಾದವನ್ನು ಅವರು ಒಪ್ಪುವರೆ?

ಶ್ರೀ ಪಿ. ವೆಂಕಟಗಿರಿಯಪ್ಪ.—ಒಪ್ಪುತ್ತೇನೆ, ಸ್ವಾಮಿ. ತಮ್ಮ ಮೂಲಕ ಸರಕಾರವನ್ನು ನಾನು ಕೇಳುವುದು ಚುನಾವಣೆಯ ಕಾಲದಲ್ಲಿ ಸರಕಾರಿ ಪಕ್ಷದವರು ಮಾಡಿದ ವಾಗ್ದಾನಗಳನ್ನು ಪರಿಪಾಲಿಸಿದ್ದಾರೆಯೇ ಎಂದು. ಹಾಗೆ ಮಾಡದಿದ್ದರೆ ಅವರು ರಾಜೀನಾಮೆಕೊಡಬೇಕು.

ಶ್ರೀ ಆವಲರೆಡ್ಡಿ (ಶಿಡ್ಲಘಟ್ಟ).—ಸ್ವಾಮಿ, ಅಧ್ಯಕ್ಷರೇ, ನಮ್ಮ ಸಭೆಯ ಮುಂದೆ ಮಾನ್ಯ ರೆವೆನ್ಯೂ ಸಚಿವರು ಮಂಡಿಸಿರುವ ಲ್ಯಾಂಡ್ ರೆವೆನ್ಯೂ ರೀಸರ್ವೆ ಸೆಟ್ಲ್‌ಮೆಂಟ್ ವಿಷಯದಲ್ಲಿ ಕೆಲವಾರು ಮಾತುಗಳನ್ನು ಈ ಸಭೆಯಲ್ಲಿ ಹೇಳಲು ನಾನು ಇಚ್ಛಿಸುತ್ತೇನೆ. ಈ ಲ್ಯಾಂಡ್ ರೆವೆನ್ಯೂ ರೀಸೆಟ್ಲ್‌ಮೆಂಟ್ ಮೊಟ್ಟಮೊದಲು ಮಾಡಿದಾಗ ಆಗಿನ ಸರಕಾರದವರು ಪ್ರತಿಯೊಂದು ಜಮೀನನ್ನೂ ಪರೀಕ್ಷೆಮಾಡಿ ಅದರ ಗುಣ ಮತ್ತು ಸ್ಥಿತಿ, ಫಲವತ್ತಾಗಿರುವಿಕೆ ಮುಂತಾದುವುಗಳನ್ನು ಗಮನಿಸಿ ಆ ಒಂದು ಅಳತೆಗೋಲಿನಮೇಲೆ ಕಂದಾಯವನ್ನು ಹಾಕಿದ್ದರು. ನಂತರ ಮತ್ತೆ ಸೆಟ್ಲ್‌ಮೆಂಟ್ ಆದಾಗಲೂ ಕೂಡ ಅದೇ ಆಧಾರದಮೇಲೆ ಪರಿಶೀಲಿಸಿ ಕೆಲವು ಕಡೆ ಕಂದಾಯವನ್ನು ಹೆಚ್ಚಿಸಿ ಮತ್ತೆ ಕೆಲವು ಕಡೆ ಕಡಮೆಮಾಡಿದ್ದಾರೆ. ನನಗೂ ಕೂಡ ಜಮೀನು ಕಂದಾಯದ ವಿಷಯ ಬಹಳವಾಗಿ ತಿಳಿದಿದೆ. ಹಿರಿಯರು ಜಮೀನು ಕಂದಾಯವನ್ನು ರೀಸೆಟ್ಲ್‌ಮೆಂಟ್ ಆದಾಗ ರೈತನ ಶಕ್ತಿ ನೋಡಿ ಸ್ವಲ್ಪ ಹೆಚ್ಚುಕಡಮೆ ಅವನು ಹೊರಲು ಸಾಧ್ಯವಿರುವಷ್ಟನ್ನು ಹಾಕುತ್ತಿದ್ದರು ಎಂದು ಹೇಳುತ್ತಿದ್ದರು. ಸ್ವಾತಂತ್ರ್ಯ ಬಂದಮೇಲೆ ನಮ್ಮ ರಾಜ್ಯದಲ್ಲಿ ರೈತನ ಆರ್ಥಿಕಸ್ಥಿತಿಯ ಅಭಿವೃದ್ಧಿಗೆ ಏನು ಕಾರ್ಯಕ್ರಮ ಕೈಕೊಂಡಿದೆ, ಎಷ್ಟು ಕೆಲಸ ನಡೆದಿದೆ ಎಂದು ನೋಡಿದರೆ ರೈತನ ಆರ್ಥಿಕ ಸ್ಥಿತಿ ಉತ್ತಮವಾಗದೆ ಅದು ಕಡಮೆಯಾಗುತ್ತಿದೆ. ನನ್ನ ಅಭಿಪ್ರಾಯದಲ್ಲಿ ರೈತನ ಆರ್ಥಿಕ ಪರಿಸ್ಥಿತಿ ಅಭಿವೃದ್ಧಿಪಡಿಸಲು ನಮ್ಮ ಸರಕಾರ ಯಾವ ಯೋಜನೆಯನ್ನೂ ಮಾಡಿಲ್ಲ, ಅವನ ಅಭಿವೃದ್ಧಿಗಾಗಿ ಲೇಶಮಾತ್ರವೂ ಖರ್ಚುಮಾಡಿಲ್ಲ, ಇದನ್ನು ಅನೇಕರು ಹೇಳಿದ್ದಾರೆ. ನಾನು ಮತ್ತೆ ಅದನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾನೂ ಒಬ್ಬ ಪಟೇಲನಾಗಿರುವುದರಿಂದ ರೈತನ ಕಷ್ಟವೇನೆಂಬುದು ನನಗೆ ಗೊತ್ತಿದೆ. ಕೇವಲ 5 ರೂಪಾಯಿನಿಂದ 20 ರೂಪಾಯಿಗಳವರೆಗ ಕಂದಾಯ ಕೊಡುವರು ತಮ್ಮ ಬೆಳೆ ಕೆಟ್ಟುಹೋದರೆ ಅದನ್ನು ಕೂಡ ಕೊಡಲು ಅವರಿಗೆ ಶಕ್ತಿಯಿರುವುದಿಲ್ಲ. ಅವರ ವಾರ್ಷಿಕ ಆದಾಯಕ್ಕಿಂತ ಖರ್ಚು ಜಾಸ್ತಿಯಾಗಿ ಕಂದಾಯವನ್ನು ಕೂಡ ಕೊಡುವುದಕ್ಕೆ ಅವಕಾಶವಿಲ್ಲದೆ ಅನೇಕ ರೈತರ ಜಮೀನು ಒಂದೆರಡು ರೂಪಾಯಿಗಳ ಕಂದಾಯಕ್ಕಾಗಿ ಹರಾಜಾಗುತ್ತಿದೆ. ಬಹಳ ಹೊರೆ ಹೊತ್ತಿರುವ ರೈತನ ಸ್ಥಿತಿ ಹೀಗಾಗಿದೆ. ಈಗಲೂ ಕೂಡ ಹಾಗೆಯೇ ಇದೆ. ಹಾಗಿರುವಾಗ ಕೆಲವು ಅಧಿಕಾರಿಗಳು ಬೇರೆ ಬೇರೆ ರೀತಿಯಲ್ಲಿ ಕಂದಾಯದ ದರಗಳನ್ನು ವರದಿಮಾಡಿದ್ದಾರೆ. ಕೇಳಿದರೆ ಏನೋ ಒಂದು ರೀತಿ ಜವಾಬು ಹೇಳುತ್ತಾರೆ. ಕೋಲಾರ ಜಿಲ್ಲೆಯಲ್ಲಿ ರಾಗಿ ಎಕರೆಗೆ 5 ಪಲ್ಲ ಬರುತ್ತದೆಂದು ವರದಿಯಾಗಿದೆ. ಆದರೆ ಅಲ್ಲಿ ಸರಾಸರಿ ಅಷ್ಟು ಬೆಳೆಯಾಗಿದ್ದರೆ ಆಹಾರದ ಅಭಾವವೇ ಇರುತ್ತಿರಲಿಲ್ಲ. ಮೈಸೂರು ಜಿಲ್ಲೆ ನೋಡಿದರೆ ಎರಡರಿಂದ ಎರಡೂವರೆ ಪಲ್ಲ ಎಕರೆಗೆ ಬರುತ್ತದೆಂದು ತೋರಿಸಿದ್ದಾರೆ. ಅಲ್ಲಿ ಮಳೆ ಜಾಸ್ತಿ, ನಮ್ಮ ಜಿಲ್ಲೆಗಿಂತಲೂ ಬೆಳೆ ಚೆನ್ನಾಗಿ ಆಗುತ್ತೆ. ಹಾಗಿರು ವಾಗ ನಮ್ಮ ಜಿಲ್ಲೆಗೆ ಕಂದಾಯ ಮೊದಲಿಂದಲೂ ಜಾಸ್ತಿ ಹಾಕಿದ್ದಾರೆ. ಕೆಲವು ಕಡೆ ಕಂದಾಯ ಜಾಸ್ತಿ ಇದೆ, ದೇಶದಲ್ಲೆಲ್ಲಾ ಒಂದೇ ರೀತಿ ಇರುವಂತೆ ಮಾಡಲು ಕೆಲವು ಕಡೆ ಜಾಸ್ತಿ ಮಾಡಿದ್ದೇವೆ. ಅದಕ್ಕೆ ಕೆಲವರು ಒಂದಕ್ಕೆ ಎರಡರಷ್ಟು ಕೊಡಬೇಕು ಎಂದು ಹೇಳಿದರೆ ನಾವಂತೂ ಹಳ್ಳಿಗಳಿಗೆ ಹೋಗಬೇಕಾದ್ದು ಅನಾವಶ್ಯಕ. ಸರಕಾರ ನಡೆಸಬೇಕಾದರೆ ಹಣ ಬೇಕು, ಖರ್ಚುವೆಚ್ಚ ಜಾಸ್ತಿಯಾಗಿದೆ, ಕಂದಾಯ ಕೊಡದಿದ್ದರೆ ಹೇಗೆ ಎಂದು ಪ್ರಶ್ನೆ ಹಾಕಬಹುದು. ಅದು ನಿಜ, ಕಂದಾಯ ಮತ್ತು ತೆರಿಗೆ ರೂಪದಲ್ಲಿ ಸರಕಾರಕ್ಕೆ ಹಣ ಕೊಡಬೇಕು. ನಮ್ಮ ಸರಕಾರಕ್ಕೆ ಬಹಳವಾಗಿ

ಹಣದ ಅವಶ್ಯಕತೆ ಇವೆ, ಈ ಸಲ ಬಡ್ಜೆಟ್ ಖೋತಾ ಬಡ್ಜೆಟ್ಟಾಗಿದೆ. ಆದರೆ ಬೇರೆ ರೀತಿಯಲ್ಲಿ ಹಣ ಒದಗಿಸಿ ಕೊಳ್ಳಬೇಕು. ಬಡ ರೈತನಮೇಲೆ ಜಾಸ್ತಿ ಹೊರೆ ಹಾಕಬಾರದು. ರೈತ ದೇಶದ ಬೆನ್ನುಮೂಳೆ ಇದ್ದಹಾಗೆ ಎಂದು ಹೇಳುತ್ತಿದ್ದೇವೆ. ಹಾಗಿರುವಾಗ ಭಾರ ಅವನಮೇಲೆ ಜಾಸ್ತಿ ಹೇರಿದರೆ ಅವನಿಗೆ ಕಷ್ಟವಾಗುತ್ತದೆ.

ಕೋಲಾರ ಜಿಲ್ಲೆಯ ಬಗ್ಗೆ ಈ ರಿಪೋರ್ಟುಗಳಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳೊಂದೂ ಸರಿಯಾಗಿಲ್ಲ. ನಾನು ನೂರಾರು ರೂಪಾಯಿ ಕಂದಾಯವನ್ನು ಕೊಡುತ್ತೇನೆ. ಈ ಭಾಗದಲ್ಲಿ ಮಳೆ ಬೀಳುವುದಿಲ್ಲ. ಈ ರಿಪೋರ್ಟಿನಲ್ಲಿ ಒಂದು ಸ್ವಾರಸ್ಯವಾದ ವಿಚಾರವನ್ನು ಅಧಿಕಾರಿಗಳೇ ಬರೆದಿದ್ದಾರೆ. 17 ವರ್ಷಗಳ ಲೆಕ್ಕವನ್ನು ತೆಗೆದುಕೊಂಡರೆ ಅದರಲ್ಲಿ 13 ವರ್ಷ ಕ್ಷಾಮ ಬದ್ದಿದೆ, ಇನ್ನುಳಿದ ನಾಲ್ಕು ವರ್ಷ ಮಾತ್ರ ಬೆಳೆಯಾಗಿದೆ ಎಂದು ಬರೆದಿದ್ದಾರೆ. ಈ ನಾಲ್ಕು ವರ್ಷ ಬೆಳೆಯಾದರೆ ವ್ಯವಸಾಯ ಮಾಡಲು ತಗಲುವ ಖರ್ಚು ಏನು, ಆಳಿನ ಕೂಲಿ ಏನು, ಎತ್ತು ನೇಗಿಲು ಇವುಗಳ ಬಾಡಿಗೆ ಏನು ಇದೊಂದನ್ನೂ ಗಣನೆಗೆ ತೆಗೆದುಕೊಂಡಿಲ್ಲ. ಅಧಿಕಾರ ವರ್ಗದವರಿಗೆ ವ್ಯವಸಾಯದ ವಿಚಾರದಲ್ಲಿ ಅನುಭವವಿಲ್ಲ. It is a payman's report. ರೈತನಾದವನು ಹಗಲೂ ರಾತ್ರಿ ದುಡಿದು ಬೆಳೆಯನ್ನು ತೆಗೆಯಬೇಕು. ಇದರಲ್ಲಿ ಅವನ ಖರ್ಚು ವೆಚ್ಚಗಳನ್ನು ತೆಗೆದರೆ ಖುಷ್ಕಿ ಜಮೀನಿನಲ್ಲಿ ಕೇವಲ ಹತ್ತು ರೂಪಾಯಿಗಳು ಬರುತ್ತವೆ. ಕೇವಲ ಮಳೆ ಮೇಲೆ ಅವಲಂಬಿಸಿರುವುದರಿಂದ ಅದೂ ಬಾರದೆ ಅವನು ಹಾಕಿರುವ ಬಂಡವಾಳದಲ್ಲಿ ನಷ್ಟವಾಗುವ ಸಂಭವವೂ ಉಂಟು. ಆದುದರಿಂದ ಇಂಥ ಪ್ರದೇಶಗಳಲ್ಲಿ ಭೂಕಂದಾಯವನ್ನು ನಾವು ಬಹಳ ಹುಷಾರಾಗಿ ನೋಡಿಕೊಂಡು ಜಾಸ್ತಿ ಮಾಡಬೇಕು.

ಭೂಕಂದಾಯವನ್ನು ವಿಧಿಸುವುದರಲ್ಲಿ ತರಿ ಕಂದಾಯ, ಖುಷ್ಕಿ, ಕಂದಾಯ, ಬಾಗಾಯತು ಕಂದಾಯ ಎಂದು ಮೂರು ವಿಧ ಮಾಡಿದ್ದಾರೆ. ಒಂದು ಕೆರೆಯನ್ನು ಕಟ್ಟಬೇಕಾಗಿದ್ದರೆ ಅದಕ್ಕೆ ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ಲೆಕ್ಕ ಹಾಕಿ ಅಚ್ಚುಕಟ್ಟುದಾರರಿಂದ ರೂಪಾಯಿಗೆ ನಾಲ್ಕಾಣೆ ಪ್ರಕಾರ ಸೇರಿಸಿ ತೆಗೆದುಕೊಳ್ಳುತ್ತಿದ್ದರು. ಅದು 15—16 ರೂಪಾಯಿ ಆಗುತ್ತಿತ್ತು. ಈವಾಗ ಇರಿಗೇಷನ್ ಆಕ್ಟ್ ಬೇರೆ ಮಾಡಿದ್ದೇವೆ. ಒಬ್ಬ ರೈತ ಸರ್ಕಾರದ ನೀರನ್ನು ಉಪಯೋಗಿಸಿ ಕೊಂಡರೆ 20 ರೂಪಾಯಿ ಸ್ಪೆಷಲ್ ರೆವಿನ್ಯೂ, ನಾಲ್ಕು ರೂಪಾಯಿ ಬೆಟರ್‌ಮೆಂಟ್ ಫೀಸ್ ಕೊಡಬೇಕು. ಇದರ ಜೊತೆಗೆ ಡ್ರೈನ್ ಅಸೆಸ್‌ಮೆಂಟ್ ಮತ್ತು ಸೆಸ್ಸುಗಳನ್ನು ಕೊಡಬೇಕು. ಇದೆಲ್ಲ ಸೇರಿದರೆ ಒಂದು ಎಕರೆ ತರಿಗೆ 34—35 ರೂಪಾಯಿ ಕಂದಾಯ ಕೊಡಬೇಕಾಗುತ್ತದೆ. ಹಾಗೆಯೇ ಕಬ್ಬು ಬೆಳೆಯುವವರು 70 ರೂಪಾಯಿ ಸ್ಪೆಷಲ್ ರೆವಿನ್ಯೂ ಮತ್ತು ಇತರ ಬಾಬುಗಳೆಲ್ಲ ಸೇರಿ ಒಂದು ಎಕರೆಗೆ 100—105 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಆದುದರಿಂದ 20-30 ವರ್ಷಗಳ ಸರಾಸರಿ ಆದಾಯವನ್ನು ಗಣನೆಗೆ ತೆಗೆದುಕೊಂಡು ಕಂದಾಯವನ್ನು ಹಾಕಬೇಕು. ಹವಾಮಾನಕ್ಕೆ ಅನುಗುಣವಾಗಿ ಕಂದಾಯವನ್ನು ಹಾಕಬೇಕು. ಇಲ್ಲದೇ ಹೋದರೆ ಹಿಂದಿನ ಕಾಲದಲ್ಲಿ ಮಾಡಿದ ಹಾಗೆ ನಾಲ್ಕಾಣೆ ಅಥವಾ ಎಂಟಾಣೆ ಜಾಸ್ತಿ ಮಾಡುವುದು ಒಳ್ಳೆಯದು.

ಭೂಕಂದಾಯದ ವಿಷಯದಲ್ಲಿ ಒಂದು ಸಂಗತಿಯನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. Agriculture in India is a gambling in rain. ಜಿರಾಯ್ತಿದಾರ ಕಷ್ಟಪಟ್ಟು ಕೆಲಸ ಮಾಡಿ, ದುಡಿಮೆ ಮಾಡಿ ಬಿತ್ತನೆ ಹಾಕುತ್ತಾನೆ. ಮಳೆ ಸಕಾಲದಲ್ಲಿ ಬಾರದೆ ಇದ್ದರೆ ಅವನು ತನ್ನ ಕಷ್ಟ ಮತ್ತು ಬಿತ್ತನೆಯನ್ನೆಲ್ಲ ಕಳೆದುಕೊಳ್ಳಬೇಕಾಗುತ್ತದೆ. 20-30 ವರ್ಷ ಕೆಲಸ ಮಾಡುವಾಗ ಮಳೆ ಅನೇಕ ವೇಳೆ ಕಾಲಕ್ಕೆ ಸರಿಯಾಗಿ ಬಾರದೆ ಅವನು ನಷ್ಟಪಟ್ಟು ಚೇತರಿಸಿ ಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ಇದೆ. ಅದೇ ಒಬ್ಬ ವ್ಯಾಪಾರಸ್ಥನನ್ನು ತೆಗೆದುಕೊಂಡರೆ ಈ ವರ್ಷ ಹತ್ತು ಸಾವಿರ ರೂಪಾಯಿ ನಷ್ಟವಾದರೂ ಮುಂದಿನ ವರ್ಷ 30 ಸಾವಿರ ರೂಪಾಯಿ ಲಾಭ ಸಂಪಾದನೆ ಮಾಡಿ ಹಿಂದಿನ ವರ್ಷದ ನಷ್ಟವನ್ನು ಕಳೆದು ಲಾಭ ಸಂಪಾದನೆ ಮಾಡುತ್ತಾನೆ. Agriculture is a basic industry for the development of all industries. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಆದುದರಿಂದ ವ್ಯವಸಾಯಗಾರನ ಮೇಲೆ ಹೆಚ್ಚು ಹೊರೆಯನ್ನು ಹೊರಿಸದೆ, ಅವನ ಬೆನ್ನು ಮೂಳೆ ಮುರಿಯದೆ ಇತರ ಕೈಗಾರಿಕೆಗಳಿಗೂ ಹಾನಿಯಾಗದ ಹಾಗೆ ನೋಡಿಕೊಳ್ಳಬೇಕು. ಹಳ್ಳಿಗಾಡಿನಲ್ಲಿರುವ ರೈತ ಹುಲ್ಲಿನ ಜೋಪಡಿ ಹಾಕಿಕೊಂಡಿರುವವನು ಹೆಂಚಿನ ಮನೆಯನ್ನು ಕಟ್ಟಿಕೊಳ್ಳಬೇಕು ಎಂದರೆ ಸಾಧ್ಯವಾಗುವುದಿಲ್ಲ. ಉಗಾದಿ ಹಬ್ಬಕ್ಕೆ ತನ್ನ ಮನೆಗೆ ಸುಣ್ಣ ಬಳಿಯುವುದಕ್ಕೆ ಸಾಧ್ಯವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಇದ್ದಾನೆ. ಅವನು ಕೊಂಡುಕೊಳ್ಳತಕ್ಕ ಪದಾರ್ಥಗಳ ಬೆಲೆ ಎಲ್ಲ ಜಾಸ್ತಿಯಾಗಿದೆ. ಹಳ್ಳಿಯ ಒಬ್ಬ ರೈತ ತಾನು ಕೊಂಡುಕೊಳ್ಳಬೇಕಾದ ಬಟ್ಟೆ, ಕಬ್ಬಿಣ, ಸಿಮೆಂಟ್ ಹೀಗೆ ಎಲ್ಲ ಪದಾರ್ಥಗಳಿಗೂ ಹಾಕಿರುವ ತೆರಿಗೆಯನ್ನು ಕೊಡಬೇಕಾಗಿರುವಾಗ ಭೂಕಂದಾಯವನ್ನು ನೂರಕ್ಕೆ 200—300 ರಷ್ಟು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಲ್ಲ ಎಂದು ನನ್ನನು ಕೇಳಿದ. ನಾವು ನಿಮ್ಮನ್ನು ಇದಕ್ಕಾಗಿಯೇ

(ಶ್ರೀ ಆವಲರೆಡ್ಡಿ)

ಆರಿಸಿರುವುದು ? ಎಂದೂ ಕೇಳಿದ. ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆ ವಿಷಯವನ್ನು ಅವನು ತಿಳಿದು ಕೊಂಡು ನನ್ನ ಹತ್ತಿರ ವಾದ ಮಾಡಿದಾಗ ನಾನು ಬಾಯಿ ಮುಚ್ಚಿಕೊಂಡೆ. ರೈತನಾದವನು ಕಂದಾಯವನ್ನು ಕೊಡುವುದಕ್ಕೇ ಶಕ್ತಿ ಇಲ್ಲದೇ ಸಾಯುತ್ತಿದ್ದಾನೆ.

ಕಬ್ಬಿಗೆ ಹೋದ ವರ್ಷ ಸ್ವಲ್ಪ ಬೆಲೆ ಜಾಸ್ತಿ ಇತ್ತು ಎಂದು ಈ ಸಲ ಅನೇಕ ಜನ ಸಾವಿರಾರು ಎಕರೆ ಜಮೀನಿನಲ್ಲಿ ಕಬ್ಬನ್ನು ಹಾಕಿದ್ದಾರೆ. ಈ ದಿನ ಒಂದು ಮಣ ಬೆಲ್ಲಕ್ಕೆ ಮೂರು ರೂಪಾಯಿ ಆಗಿದೆ. ಒಂದು ಮಣ ಬೆಲ್ಲಕ್ಕೆ ಅವನಿಗೆ ಆಗುವ ಖರ್ಚನ್ನು ಲೆಕ್ಕ ಹಾಕಿದರೆ 8 ರೂಪಾಯಿಗೆ ಕಡಮೆ ಆಗುವುದಿಲ್ಲ. ಹೀಗೆ ನಷ್ಟವಾಗುವಾಗ ಸರ್ಕಾರದವರು ರೈತನಿಗೆ ಏನಾದರೂ ಪ್ರೊಟೆಕ್ಷನ್ ಕೊಟ್ಟಿದ್ದಾರೆಯೇ ? ಬೆಲೆ ಜಾಸ್ತಿ ಆದಾಗ ಹೆಚ್ಚು ಉತ್ಪತ್ತಿ ಬರುತ್ತದೆ ಎಂದು ಹೇಳುತ್ತಾರೆ. ಆದರೆ ಬೆಲೆ ಕಡಮೆ ಆಗಿ ನಷ್ಟವಾದಾಗ ಅವನ ಸಹಾಯಕ್ಕೆ ಸರ್ಕಾರ ಬರುವುದಿಲ್ಲ. ನಮ್ಮ ಸರ್ಕಾರ ದವರು ಇಂಡಿಯಾ ಸರ್ಕಾರದೊಡನೆ ವ್ಯವಹರಿಸಿ ಹೊರಗಡೆಗೆ ರಫ್ತು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿದರೆ ಆಗ ರೈತನಿಗೆ ಸ್ವಲ್ಪ ಹಣ ಸಿಕ್ಕುತ್ತದೆ. ಆಗ ಅವನ ಮೇಲೆ ತೆರಿಗೆಯನ್ನು ಹಾಕಿದರೆ ಕೊಡುತ್ತಾನೆ.

ಮಳೆ ಬರುವುದರ ಮೇಲೆ ರೈತ ಬಹುಮಟ್ಟಿಗೆ ಅವಲಂಬಿಸಿರುತ್ತಾನೆ. ಮಳೆ ತರಿಸುವುದು ಸರ್ಕಾರದ ಕೈಯಲಲ್ಲ. ಸರ್ಕಾರದವರು ಒಂದೆರಡು ವರ್ಷ ಇರಿಗೇಷನ್ ಬಾವಿಗಳು ಮತ್ತು ಪಂಪ್ ಸೆಟ್‌ಗಳನ್ನು ಕೊಟ್ಟರು. ಹೋದ ವರ್ಷ ಅದರ ಪ್ರಸ್ತಾವನೆಯನ್ನೇ ಮಾಡಿರುವುದಿಲ್ಲ. ಮಾರ್ಚಿ 31ನೇ ತಾರೀಖಿಗೆ ವರ್ಷ ಆಖೈರಾಗುವಾಗ 30ನೇ ತಾರೀಖಿಗೆ ಹಣವನ್ನು ಅಲಾಟ್ ಮಾಡಿದರೆ ಅದು ಖರ್ಚಾಗುವ ಬಗೆ ಹೇಗೆ ? ಆದುದರಿಂದ ನೀರಾವರಿ ಬಾವಿಗಳನ್ನು ತೆಗೆಯುವುದಕ್ಕೆ ಮತ್ತು ಈ ಸಂಬಂಧಪಟ್ಟ ಕೆಲಸಗಳಿಗೆ ಒಂದು ಖಾಯಂ ಯೋಜನೆಯನ್ನು ಮಾಡಿದರೆ ಅನುಕೂಲವಾಗುತ್ತದೆಂದು ನಾನು ಪದೇ ಪದೇ ಹೇಳುತ್ತಿದ್ದೇನೆ. ವ್ಯವಸಾಯಗಾರನು ತನ್ನ ಬೆಳೆಯನ್ನು ಕಳೆದು ಕೊಳ್ಳದಂತಾಗಲು ಯಾವಾಗಲೂ ನೀರು ದೊರೆಯುವಂತೆ ಆದರೆ ಅವನು ಖಾಯಂ ಆಗಿ ಬೆಳೆಯನ್ನು ತೆಗೆಯಲು ಅವಕಾಶವಾಗುತ್ತದೆ ಎಂದು ಹೇಳಿದ್ದೇನೆ. ಸರ್ಕಾರ ಈ ಬಗ್ಗೆ ಏನಾದರೂ ಕ್ರಮ ಕೈಕೊಂಡರೆ ಅಥವಾ ಅದನ್ನು ಕೈಬಿಟ್ಟರೆ ಎನ್ನುವುದು ಗೊತ್ತಾಗಿಲ್ಲ.

Land Revenue is no income at all to the Government to-day. There are several other items of taxation which can be collected by the Government to day on a remunerative basis. ಆದುದರಿಂದ ನನ್ನ ಅಭಿಪ್ರಾಯದಲ್ಲಿ, ಮಾನ್ಯ ಶ್ರೀ ಪಿ. ವೆಂಕಟಗಿರಿಯಪ್ಪನವರು ಸಲಹೆ ಮಾಡಿದ ಹಾಗೆ, ಹತ್ತು ಎಕರೆಗಿಂತ ಕಡಮೆ ಇರತಕ್ಕವರಿಗೆಲ್ಲ ಭೂಕಂದಾಯವನ್ನು ವಜಾ ಮಾಡಬೇಕು. If he grows more produce and gets more income you may levy agricultural income-tax. ಹತ್ತು ಎಕರೆಗಿಂತ ಹೆಚ್ಚು ಜಮೀನು ಇರತಕ್ಕವರಿಗೆ ಹವಾಮಾನಕ್ಕನುಗುಣವಾಗಿ, ಭೂಗುಣಕ್ಕೆ ಅನುಗುಣ ವಾಗಿ ಭೂಕಂದಾಯವನ್ನು ಜಾಸ್ತಿ ಮಾಡಬೇಕು. ಹಾಗೆ ಮಾಡಿದರೆ ಅದನ್ನು ನಾವು ಸ್ವಾಗತಿಸುತ್ತೇವೆ.

ನಮ್ಮ ಸರ್ಕಾರ ರೈತರಿಗೆ ಒದಗಿಸತಕ್ಕ ಗೊಬ್ಬರವನ್ನು ಹಂಚಲು ಸೊಸೈಟಿಗಳಿಗೆ ವಹಿಸಿದ್ದಾರೆ. ತಯಾರಿಕೆಗಾರರು ಗೊತ್ತು ಮಾಡುವ ಬೆಲೆಯ ಮೇಲೆ ನೂರಕ್ಕೆ 10—12ರಂತೆ ಸೊಸೈಟಿಯವರು ತೆಗೆದುಕೊಳ್ಳುತ್ತಾರೆ. ಇದರಿಂದಾಗಿ ಅಮೋನಿಯಂ ಸಲ್‌ಫೇಟ್ ಬೆಲೆ 40 ರೂಪಾಯಿ ಆಗಿದೆ. ಎಂದರೆ 20 ರೂಪಾಯಿವರೆಗೂ ದಂಡವನ್ನು ಕೊಡಬೇಕು. ಇಷ್ಟೆಲ್ಲ ಹಣವನ್ನು ಖರ್ಚು ಮಾಡಿ ವ್ಯವಸಾಯವನ್ನು ಮಾಡಿದರೂ ಕೂಡ ಬೆಳೆಗಳು ರೋಗ ರುಜನಗಳಿಗೆ ತುತ್ತಾಗುತ್ತಿದೆ. ಹೀಗಾಗಿ ಬೆಳೆ ಕೈಗೆ ಸರಿಯಾಗಿ ಬರದೆ ಇದ್ದರೆ ರೈತನಾದವನು ಎಲ್ಲಿಂದ ಕಂದಾಯವನ್ನು ಕೊಡುತ್ತಾನೆ ? ಅವನ ಮಗನ ವಿದ್ಯಾಭ್ಯಾಸಕ್ಕೆ ಎಲ್ಲಿಂದ ಹಣವನ್ನು ತರುತ್ತಾನೆ ? ಅವನ ಆರ್ಥಿಕ ಸ್ಥಿತಿ ಹೇಗೆ ಉತ್ತಮವಾಗೊಳ್ಳುತ್ತದೆ ? ಅವನ ಆರ್ಥಿಕ ಸ್ಥಿತಿ ಎಲ್ಲ ಅವನು ಜಮೀನಿನಲ್ಲಿ ಉತ್ಪತ್ತಿ ಮಾಡತಕ್ಕದ್ದರ ಮೇಲೆ ಅವಲಂಬಿಸಿರುತ್ತದೆ. ಒಂದು ಉದಾಹರಣೆಯನ್ನು ಹೇಳುವುದಾದರೆ ರೈತನಾದವನು ತಾನು ಡಿಸ್ಟ್ರಿಕ್ಟ್ ಬ್ಯಾಂಕ್‌ಗಳಲ್ಲಿ ತೆಗೆದುಕೊಂಡಿರುವ ಸಾಲದ ಕಂತುಗಳನ್ನು ಸರಿಯಾಗಿ ವಾಪಸು ಕೊಡುತ್ತಾನೆಯೇ ಎಂದು ನೋಡಬೇಕು. ಎಷ್ಟು ಸಂದರ್ಭಗಳಲ್ಲಿ ಕಂತುಗಳು ಸರಿಯಾಗಿ ಪಾವತಿಯಾಗಿಲ್ಲ ಎನ್ನುವುದನ್ನು ನೋಡಿದರೆ ಅದರಿಂದ ರೈತನ ಉತ್ಪತ್ತಿ ಸರಿಯಾಗಿ ಆಗುತ್ತಿಲ್ಲ ಎನ್ನುವುದು ಗೊತ್ತಾಗುತ್ತದೆ. ನಮ್ಮ ಕಡೆ ಕೋಸು ಗಡ್ಡೆಯನ್ನು ಹಾಕಿದ್ದಾರೆ. ಅದಕ್ಕೆ ರೋಗ ಬಂದು ಕ್ರಿಮಿನಾಶಕಗಳನ್ನು ಉಪಯೋಗಿಸಿದರು. ಇದರಿಂದ ಬಹಳ ಖರ್ಚು ಬಿದ್ದಿದೆ. ಬೆಂಗಳೂರಿಗೆ ಕೋಸು ಗಡ್ಡೆಯನ್ನು ತೆಗೆದುಕೊಂಡು ಬಂದರೆ ಒಂದು ಎಕರೆಗೆ ನೂರು

ರೂಪಾಯಿ ಕೂಡ ಸಿಕ್ಕುವುದಿಲ್ಲ. ಆದರೆ ರೈತನಾದವನು ಒಂದು ಎಕರೆಗೆ ಎರಡು ಸಾವಿರ ರೂಪಾಯಿವರೆಗೂ ಖರ್ಚು ಮಾಡಿರುತ್ತಾನೆ. ಇಂಥ ಸಂದರ್ಭ ಬಂದಾಗ ರೈತನಿಗೆ ಏನು ರಕ್ಷಣೆ ದೊರೆಯುತ್ತಿದೆ ಎಂದು ಕೇಳುತ್ತೇನೆ. Agriculturist should not go down at any time beyond a minimum point. ಆದುದರಿಂದ ನಾನು ಈ ಸಭೆಯಲ್ಲಿ ಕಳಕಳಿಯಿಂದ ಹೇಳತಕ್ಕದ್ದು ಏನೆಂದರೆ ಹಳ್ಳಿಯಲ್ಲಿರುವ ಬಡವನಿಗೆ, ನೂರಕ್ಕೆ ನೂರು ಜನ ಇರುವ ರೈತರಿಗೆ ಬೆನ್ನು ಮೂಳೆ ಮುರಿಯುವುದಕ್ಕೆ ಅವಕಾಶ ಕೊಡಬೇಡಿ, ಈಗ ಸೂಚಿಸಿರುವಂತೆ ಕಂದಾಯವನ್ನು ವಿಧಿಸಬೇಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now rise and re-assemble after half-an-hour.

The House adjourned for Recess at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair]

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ಈಗ ಈ ಸಭೆಯಲ್ಲಿ ಚರ್ಚೆಯಾಗುತ್ತಿರುವ ಭೂಕಂದಾಯ ದರಗಳ ಏರಿಕೆ ಹಾಗೂ ಭೂಕಂದಾಯ ಖಾತೆಯವರು ನಮಗೆ ಒದಗಿಸಿರತಕ್ಕಂಥ ಈ ವರದಿಗಳ ಮೇಲೆ ಈಗ ಚರ್ಚೆ ಮೂರನೆಯ ದಿನದಲ್ಲಿ ನಡೆಯುತ್ತಾ ಇದೆ. ಭೂಕಂದಾಯ ಬೇಡ ವೆಂದು ಮೊದಲಿನಿಂದಲೂ ಹೇಳುತ್ತಿದ್ದವರು, ಯಾರು ಇವತ್ತು ಅಧಿಕಾರದಲ್ಲಿದ್ದಾರೋ ಅವರೇ ಇವತ್ತು ಭೂಕಂದಾಯವನ್ನು ಜಾಸ್ತಿಮಾಡಬೇಕೆಂದು ಹೊರಟಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಾವು ಭೂಕಂದಾಯವನ್ನು ಜನತೆಯ ಮೇಲೆ ಹೇರುವುದಿಲ್ಲ, ಆ ಒಂದು ಭೂಕಂದಾಯ ತೆರಿಗೆಯಿಂದ ಜನತೆಯನ್ನು ವಿಮುಕ್ತರನ್ನಾಗಿ ಮಾಡುತ್ತೇವೆಂದು ಹೇಳಿದಂಥ ಈ ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದು 17 ವರ್ಷಗಳಾದಮೇಲೆ 30 ವರ್ಷಗಳಿಗೊಮ್ಮೆ ಈ ಕಂದಾಯದಲ್ಲಿ ಬದಲಾವಣೆ ಮಾಡ ಬೇಕೆಂಬ ನೀತಿಗೆ ಅನುಸಾರವಾಗಿ ಈ ರಾಜ್ಯವನ್ನು ಇವತ್ತು ಅನೇಕ ಜೋನುಗಳಾಗಿ ವಿಂಗಡಿಸಿ ಆ ಜೋನುಗಳಲ್ಲಿ ಯಾವುದು ತರಿ, ಯಾವುದು ಬಾಗಾಯಿತು, ಎಷ್ಟು ಕಾಲ ನೀರು ಕೊಟ್ಟರೆ ವಾಟರ್ ರೇಟ್ ಹಾಕಬೇಕು ಎಂಬುದನ್ನು ವಿಮರ್ಶೆಮಾಡುತ್ತಿದ್ದಾರೆ. ಬಾಗಾಯಿತು ಡಿಫೈನ್ ಮಾಡಬೇಕು, ಯಾವುದು ಸೆಮಿ ಡ್ರೈ ಲ್ಯಾಂಡ್, ಹೀಗೆ ಇವೆಲ್ಲವನ್ನೂ ವಿವರವಾಗಿ ಕೊಟ್ಟಿದ್ದಾರೆ. ನಾನಾದರೂ ತಿಳಿದುಕೊಂಡಿದ್ದೇನೆ, ಈ ಸಭೆಯಲ್ಲಿ ಕೇವಲ 17-20 ನಿಮಿಷಗಳ ಕಾಲ ದಂಕಟ್ಟಿ ಓಡಾಡುತ್ತಾ ನಾಲ್ಕೈದು ಪುಸ್ತಕಗಳಲ್ಲಿರುವುದನ್ನೆಲ್ಲಾ ಕ್ರೋಢೀಕರಿಸಿ ಈ ಸಭೆಯ ಮುಂದೆ ಇಡುವುದಕ್ಕೆ ನನಗೆ ಶಕ್ತಿ ಆಗಲಾರದು. ಆದರೆ ಕಾನೂನು ಪರಿಣತರೂ ಹಾಗೂ ಬಹಳ ಬುದ್ಧಿವಂತರೂ ಕೆಲವರು ಆ ರೀತಿ ಮಾತನಾಡಿದರೂ ಮಾತನಾಡಬಹುದು. ಸರ್ಕಾರದವರು ಈಗ ನಮಗೆ ಕೊಟ್ಟಿರತಕ್ಕ 40–50 ಸೆಟಲ್‌ಮೆಂಟ್ ವರದಿ ಪುಸ್ತಕಗಳನ್ನು ಓದಿನೋಡಿ ತಿಳಿದುಕೊಂಡು ಅದನ್ನೆಲ್ಲಾ ಡೈಜಸ್ಟ್ ಮಾಡಿಕೊಂಡು ಅವುಗಳು ಹೀಗೀಗೇ ಇವೆ ಎಂಬುದಾಗಿ ಈ ಸಭೆಯ ಮುಂದೆ ಇಡಬೇಕಾಗಿದ್ದರೆ ಸುಮಾರು ಒಂದು ತಿಂಗಳು ಅಥವಾ ಎರಡು ತಿಂಗಳುಗಳಾದರೂ ನನಗೆ ಹಿಡಿಯುತ್ತದೆ.

ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ರೆವಿನ್ಯೂ ಸೆಕ್ರೆಟೇರಿಯಟ್ ಅವರು ಆ ವರದಿ ಗಳಿಗೆಲ್ಲಾ ಜಿಸ್ಟ್ ಕೊಟ್ಟಿದ್ದಾರೆ. ಅವನ್ನು ಓದಿದರೆ ಸುಲಭವಾಗಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳ ಹಾಗೆ ಬರೀ ಅಂತಹ ನೋಟ್ಸನ್ನು ನೋಡಿ ಮಾತನಾಡುವುದಕ್ಕೆ ತಯಾರು ಇಲ್ಲ. ಅವರು ಒಂದು ತತ್ವಕ್ಕೆ ಒಂದು ನೀತಿಗೆ ಕಟ್ಟುಬಿದ್ದಿದ್ದಾರೆ. ಇವತ್ತು ಭೂಸುಧಾರಣೆ ಮಾಡುತ್ತೇವೆಂದು ಒಂದು ನೀತಿ ಯನ್ನು ಇವರು ಹಾಕಿಕೊಂಡಿದ್ದಾರೆ. ಭೂಕಂದಾಯವನ್ನು ಭೂಮಿಯ ಮೇಲೆ ಹಾಕುವುದಿಲ್ಲವೆಂದು ಅವರು ಜನತೆಗೆ ಮಾತುಕೊಟ್ಟಿದ್ದಾರೆ. ಯಾವ ತೆರಿಗೆಗಳನ್ನೂ, ಸುಂಕಗಳನ್ನೂ ಜನತೆಯ ಮೇಲೆ ವಿಧಿಸುವುದಿಲ್ಲವೆಂದು ಮಾತು ಕೊಟ್ಟಿದ್ದಾರೆ. ಆದರೆ ಇವರು ಈ ರೀತಿ ಜನತೆಗೆ ಆಶ್ವಾಸನೆಗಳನ್ನು ಕೊಡದೇ ಹೋಗಿದ್ದರೆ 17 ವರ್ಷಗಳ ಕಾಲ ಈ ಅಧಿಕಾರದಲ್ಲಿ ಇರುತ್ತಿರಲಿಲ್ಲ. ಈಗ ಇವರು ಇರತಕ್ಕ

(ಶ್ರೀ ಸಿ. ಜಿ. ಮುಕ್ಕಣ್ಣಪ್ಪ)

ಕೆಳಗೆ ನಮಗೆ ಸ್ವಾತಂತ್ರ್ಯ ಬೇಕು ಎಂದು ಹೋರಾಟ ಮಾಡಿದಂತಹ ಜನತೆಗೆ ನೀವು ಏನು ಅನುಕೂಲವನ್ನು ಮಾಡಿ ಕೊಟ್ಟಿದ್ದೀರಿ ಎಂದು ನಾನು ಕೇಳುತ್ತೇನೆ. ಈ ಹಿಂದೆ ಶ್ರೀಮಾನ್ ಕೃಷ್ಣಪ್ಪನವರು ಭಾಷಣ ಮಾಡುತ್ತಿದ್ದುದನ್ನು ನಾನು ಕೇಳಿದ್ದೇನೆ. ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದ ಮೇಲೆ ಸ್ವರ್ಗವನ್ನೇ ಭೂಮಿಯಮೇಲೆ ತಂದು ಇಳಿಸುತ್ತೇವೆ. ವೈಕುಂಠವನ್ನೇ ತಂದು ಇಳಿಸುತ್ತೇವೆ ಎಂದು ಹೇಳಿದ್ದರು. ಆದರೆ ಇವರು ಅಧಿಕಾರಕ್ಕೆ ಬಂದಮೇಲೆ ಆಗಿರುವುದನ್ನು ನೋಡಿದರೆ ಸ್ವರ್ಗವನ್ನು ವೈಕುಂಠವನ್ನು ಇಲ್ಲಿತಂದಿಳಿಸುವುದಕ್ಕೆ ಬದಲಾಗಿ ನರಕವನ್ನು ಜನತೆಯ ಬಾಗಿಲಿಗೆ ತಂದು ಇಳಿಸುತ್ತಿದ್ದಾರೆ ಎನ್ನುವಹಾಗೆ ಇದೆ. ಈ ರೀತಿ ಮಾಡಿದರೆ ರೈತ ನಿಮ್ಮಲ್ಲಿ ನಂಬಿಕೆಯನ್ನು ಇಡುತ್ತಾನೆಯೇ? ಈ ವಿಷಯವನ್ನು ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಒಬ್ಬರೇ, ಅಲ್ಲಇಡೀ ಮಂತ್ರಿಮಂಡಲದವರೆಲ್ಲರೂ ಈ ದೀರ್ಘವಾಗಿ ಯೋಚನೆ ಮಾಡಬೇಕು. ಬಿಜಾಪುರದಲ್ಲಿ ಒಂದು ರೀತಿಯ ಕಂದಾಯ, ಬೆಳಗಾಮ್‌ನಲ್ಲಿ ಒಂದು ರೀತಿಯ ಕಂದಾಯ, ಮೈಸೂರಿನಲ್ಲಿ ಒಂದು ರೀತಿಯ ಕಂದಾಯ. ಇದು ಒಂದು ತದ್ವಿರುದ್ಧವಾದ ಕಂದಾಯ. ಈ ರೀತಿ ಕಂದಾಯವನ್ನು ಹಾಕಿ ರೈತನ ತಲೆಯ ಮೇಲೆ ಹೊರೆಯನ್ನು ಹೊರಿಸಿ ಅವನಿಗೆ ಹಿಂಸೆಯನ್ನು ಮಾಡಬೇಡಿ. ರೈತ ಈಗ ಎಚ್ಚೆತ್ತಿದ್ದಾನೆ. ರೈತನಿಗೆ ಕಂದಾಯವನ್ನು ಜಾಸ್ತಿ ಮಾಡುವುದಕ್ಕೆ, ರೈತನಿಗೆ ನೀವು ಯಾವ ಬೀಜ, ಗೊಬ್ಬರಗಳು ಮುಂತಾದ ವ್ಯವಸಾಯ ಸಾಮಗ್ರಿಗಳನ್ನು ಒದಗಿಸಿ ಕೊಡುತ್ತಿದ್ದೀರಿ ? ಯಾವ ಆಧಾರದ ಮೇಲೆ ನೀವು ರೈತನಿಗೆ 4 ಕೋಟಿ ರೂಪಾಯಿಗಳ ಕಂದಾಯವನ್ನು ಹಾಕುತ್ತೇವೆಂದು ಹೊರಟಿದ್ದೀರೋ ಇದು ನಾಲ್ಕು ಕೋಟಿ ಅಲ್ಲ. ಇದು 10 ಕೋಟಿ ರೂಪಾಯಿಗಳಾಗುತ್ತದೆ. ಒಂದು ಎಕರೆಯಲ್ಲಿ ಕಡಲೇಕಾಯಿ ಬೆಳೆದರೆ 410 ರೂಪಾಯಿಗಳು ಬರುತ್ತದೆ ಎಂದು ಹೇಳಿದರು. ಒಂದು ಎಕರೆಯಲ್ಲಿ ಆಲೂಗಡ್ಡೆಯನ್ನು ಬೆಳೆದರೆ 1,500 ರೂಪಾಯಿಗಳು ಬರುತ್ತದೆ ಎಂದು ಹೇಳಿದರು. ನಾನು ಹೇಳುತ್ತೇನೆ ನಮ್ಮ ತುಮಕೂರು ಜಿಲ್ಲೆಯಲ್ಲಿರತಕ್ಕ ಜಮೀನಿನಲ್ಲಿ ಬೆಳೆಯತಕ್ಕದ್ದನ್ನು ನೋಡಿದರೆ ನಮಗೆ ಒಂದು ಎಕರೆಗೆ 50 ರೂಪಾಯಿಗಳನ್ನು ಕೊಟ್ಟರೆ ಸಾಕು. ತುಮಕೂರು, ಕೋಲಾರ, ಬಿಜಾಪುರ, ಬಳ್ಳಾರಿ ಈ ಜಿಲ್ಲೆಗಳು ಯಾವಾಗಲೂ ಕಡಿಮೆ ಮಳೆ ಬೀಳುವ ಪ್ರದೇಶಗಳು. ಮತ್ತು ಡ್ರಾಟ್ 'ಎಫೆಕ್ಟೆಡ' ಏರಿಯಾ, ಇಂಥಾ ಪ್ರದೇಶಗಳಲ್ಲಿ ಜಮೀನಿಗೆ ಕಂದಾಯವನ್ನು ಮನಸ್ಸಿಗೆ ಬಂದಹಾಗೆ ಏರಿಸುತ್ತಿದ್ದೀರಿ. ಈ ದುಡ್ಡನ್ನೆಲ್ಲಾ ಯಾವ ಕಡೆ ಒಯ್ಯಬೇಕೆಂದು ಮಾಡಿದ್ದೀರಿ ? ಅರ್ಥವಿಲ್ಲದ ರೀತಿಯಲ್ಲಿ ನೀವು ಭೂಕಂದಾಯವನ್ನು ಏರಿಸುತ್ತಿದ್ದೀರಿ, ರಾಜ್ಯಾಂಗ ಬಂದಮೇಲೆ ಭೂಕಂದಾಯವನ್ನು ಹಾಕಬಹುದೇ, ಕಾಂಗ್ರೆಸ್ ಸರ್ಕಾರದವರು ಇದನ್ನು ಸ್ವಲ್ಪ ಯೋಚನೆಮಾಡಬೇಕು ನಿಜವಾಗಿಯೂ ನಾನು ಹೇಳುತ್ತೇನೆ, ರೈತನಿಗೆ ಕಂದಾಯವನ್ನು ಏರಿಸುವುದನ್ನು ಕೈ ಬಿಡಬೇಕು. ಈಗ ಸರ್ಕಾರದವರು ಕೆರೆಗಳನ್ನು ಕಟ್ಟಿಸುತ್ತಾರೆ, ಪಿಕ್‌ಅಪ್‌ಗಳನ್ನು ಕಟ್ಟಿಸುತ್ತಾರೆ, ವ್ಯವಸಾಯಗಾರರಿಗೆ ಸೌಕರ್ಯವನ್ನು ಒದಗಿಸುತ್ತಾರೆ, ಸರ್ಕಾರದವರು ರೈತರಿಗೆ ಮಾಡತಕ್ಕ ಸರ್ವೀಸ್‌ಗೋಸ್ಕರ ರೈತ ಸೇವಾಶುಲ್ಕ ಎಂದು ಹಣವನ್ನು ಕೊಡುತ್ತಿದ್ದಾನೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರೂ ಸಹ ಒಂದು ಸಮಗ್ರವಾದ ರೀತಿಯಲ್ಲಿ ಕಂದಾಯವನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ಸ್ವಾಮಿ, ನಾನು ಇನ್ನೊಂದು ವಿಷಯವನ್ನು ಹೇಳುತ್ತೇನೆ. ಇವೊತ್ತಿನದಿವಸ ಭೂಮಿ ಯಾರದ್ದು. ಭೂಮಿ ಸರ್ಕಾರದ್ದೆ ? ಭೂಮಿ ಸರ್ಕಾರದ್ದಲ್ಲ. ಇದು ಪ್ರಜೆಗಳ ಭೂಮಿ. ಸರ್ಕಾರದವರು, ವ್ಯವಸಾಯಮಾಡತಕ್ಕ ಭೂಮಿಯ ಸಂಬಂಧದಲ್ಲಿ ರೈತನಿಗೆ ಒದಗಿಸತಕ್ಕ ಸರ್ವೀಸ್‌ಗೋಸ್ಕರ ಚಾರ್ಜ್‌ಮಾಡುತ್ತಾರೆ. ರೈತರು ಸರ್ಕಾರಕ್ಕೆ ಭೂಮಿಗೋಸ್ಕರ ದರ್ಕಾಸ್ತು ಅರ್ಜಿಯನ್ನು ಹಾಕಿದ್ದರು. ಅಪ್‌ಸೆಟ್ ಪ್ರೈಜಿಗೆ ರೈತರಿಗೆ ಸರ್ಕಾರದವರು ಭೂಮಿಯನ್ನು ಮಾರಿದ್ದಾರೆ. ಅದರ ಖರೀದಿಯನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಹೀಗಿರುವಾಗ ಕಂದಾಯವನ್ನು ನಿಮಗೆ ಏತಕ್ಕೆ ಕೊಡಬೇಕು ? ಕಂದಾಯವನ್ನು ವಸೂಲು ಮಾಡುವ ಹಕ್ಕು ಸರ್ಕಾರಕ್ಕೆ ಇದೆಯೇ ಎಂದು ನಾನು ಕೇಳುತ್ತೇನೆ. ಭೂಮಿಯನ್ನು ಮಾರಾಟ ಮಾಡಿದಮೇಲೆ ಆ ಭೂಮಿಗೆ ಕಂದಾಯವನ್ನು ಹಾಕುವುದಕ್ಕೆ ನಿಮಗೆ ಅಧಿಕಾರ ಇದೆಯೇ ? ಈಗ ಇಲ್ಲಿ ನಿಮಗೆ ಬಹುಮತ ಇದೆಯೆಂದು ಈ ನಿರ್ಣಯವನ್ನು ಪಾಸುಮಾಡಿಕೊಂಡು ಸರ್ಕಾರದವರು ಎಗ್ಸಿಕ್ಯುಟೀವ್ ಡಿವಿಷನ್ ತೆಗೆದುಕೊಂಡು ಕಂದಾಯವನ್ನು ಜಾಸ್ತಿ ಮಾಡಿದರೆ, ಇದು ಕೋರ್ಟಿಗೆ ಹೋಗುತ್ತದೆ. ಆಗ ಕೋರ್ಟಿನಲ್ಲಿ ನಿಮ್ಮ ಮಾತಿಗೆ ಒಂದು ಬೆಲೆ ಇರುವುದಿಲ್ಲ. ಇದನ್ನು ಏತಕ್ಕೆ ಹೇಳುತ್ತಾ ಇದ್ದೇನೆಂದರೆ, ನನ್ನ ಜಿಲ್ಲೆಯನ್ನು 3 ಜೋನುಗಳಾಗಿ ವಿಂಗಡಿಸಿದ್ದಾರೆ. ಆದರೆ ಕೆಲವು ತಾಲ್ಲೂಕುಗಳನ್ನು ಚಿತ್ರದುರ್ಗಕ್ಕೆ ಸೇರಿಸಿದ್ದಾರೆ. ಕೆಲವು ತಾಲ್ಲೂಕುಗಳನ್ನು ಹಾಸನಕ್ಕೆ ಸೇರಿಸಿದ್ದಾರೆ, ಕೆಲವು ತಾಲ್ಲೂಕುಗಳನ್ನು ಬೆಂಗಳೂರಿಗೆ ಸೇರಿಸಿದ್ದಾರೆ. ಹಾಗೆ ನಮ್ಮ

ರೂಪಾಯಿ ಕೂಡ ಸಿಕ್ಕುವುದಿಲ್ಲ. ಆದರೆ ರೈತನಾದವನು ಒಂದು ಎಕರೆಗೆ ಎರಡು ಸಾವಿರ ರೂಪಾಯಿವರೆಗೂ ಖರ್ಚು ಮಾಡಿರುತ್ತಾನೆ. ಇಂಥ ಸಂದರ್ಭ ಬಂದಾಗ ರೈತನಿಗೆ ಏನು ರಕ್ಷಣೆ ದೊರೆಯುತ್ತದೆ ಎಂದು ಕೇಳುತ್ತೇನೆ. Agriculturist should not go down at any time beyond a minimum point. ಆದುದರಿಂದ ನಾನು ಈ ಸಭೆಯಲ್ಲಿ ಕಳಕಳಿಯಿಂದ ಹೇಳತಕ್ಕದ್ದು ಏನೆಂದರೆ ಹಳ್ಳಿಯಲ್ಲಿರುವ ಬಡವನಿಗೆ, ನೂರಕ್ಕೆ ನೂರು ಜನ ಇರುವ ರೈತರಿಗೆ ಬೆನ್ನು ಮೂಳೆ ಮುರಿಯುವುದಕ್ಕೆ ಅವಕಾಶ ಕೊಡಬೇಡಿ, ಈಗ ಸೂಚಿಸಿರುವಂತೆ ಕಂದಾಯವನ್ನು ವಿಧಿಸಬೇಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now rise and re-assemble after half-an-hour.

The House adjourned for Recess at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair]

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ಈಗ ಈ ಸಭೆಯಲ್ಲಿ ಚರ್ಚೆಯಾಗುತ್ತಿರುವ ಭೂಕಂದಾಯ ದರಗಳ ಏರಿಕೆ ಹಾಗೂ ಭೂಕಂದಾಯ ಖಾತೆಯವರು ನಮಗೆ ಒದಗಿಸಿರತಕ್ಕಂಥ ಈ ವರದಿಗಳ ಮೇಲೆ ಈಗ ಚರ್ಚೆ ಮೂರನೆಯ ದಿನದಲ್ಲಿ ನಡೆಯುತ್ತಾ ಇದೆ. ಭೂಕಂದಾಯ ಬೇಡ ವೆಂದು ಮೊದಲನಿಂದಲೂ ಹೇಳುತ್ತಿದ್ದವರು, ಯಾರು ಇವತ್ತು ಅಧಿಕಾರದಲ್ಲಿದ್ದಾರೋ ಅವರೇ ಇವತ್ತು ಭೂಕಂದಾಯವನ್ನು ಜಾಸ್ತಿಮಾಡಬೇಕೆಂದು ಹೊರಟಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಾವು ಭೂಕಂದಾಯವನ್ನು ಜನತೆಯ ಮೇಲೆ ಹೇರುವುದಿಲ್ಲ, ಆ ಒಂದು ಭೂಕಂದಾಯ ತೆರಿಗೆಯಿಂದ ಜನತೆಯನ್ನು ವಿಮುಕ್ತರನ್ನಾಗಿ ಮಾಡುತ್ತೇವೆಂದು ಹೇಳಿದಂಥ ಈ ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದು 17 ವರ್ಷಗಳಾದಮೇಲೆ 30 ವರ್ಷಗಳಿಗೊಮ್ಮೆ ಈ ಕಂದಾಯದಲ್ಲಿ ಬದಲಾವಣೆ ಮಾಡ ಬೇಕೆಂಬ ನೀತಿಗೆ ಅನುಸಾರವಾಗಿ ಈ ರಾಜ್ಯವನ್ನು ಇವತ್ತು ಅನೇಕ ಜೋನುಗಳಾಗಿ ವಿಂಗಡಿಸಿ ಆ ಜೋನುಗಳಲ್ಲಿ ಯಾವುದು ತರಿ, ಯಾವುದು ಬಾಗಾಯಿತು, ಎಷ್ಟು ಕಾಲ ನೀರು ಕೊಟ್ಟರೆ ವಾಟರ್ ರೇಟ್ ಹಾಕಬೇಕು ಎಂಬುದನ್ನು ವಿಮರ್ಶೆಮಾಡುತ್ತಿದ್ದಾರೆ. ಬಾಗಾಯಿತು ಡಿಫೈನ್ ಮಾಡಬೇಕು, ಯಾವುದು ಸೆಮಿ ಡ್ರೈ ಲ್ಯಾಂಡ್, ಹೀಗೆ ಇವೆಲ್ಲವನ್ನೂ ವಿವರವಾಗಿ ಕೊಟ್ಟಿದ್ದಾರೆ. ನಾನಾದರೂ ತಿಳಿದುಕೊಂಡಿದ್ದೇನೆ, ಈ ಸಭೆಯಲ್ಲಿ ಕೇವಲ 17-20 ನಿಮಿಷಗಳ ಕಾಲ ದಂಕಟ್ಟಿ ಓಡಾಡುತ್ತಾ ನಾಲ್ಕೈದು ಪುಸ್ತಕಗಳಲ್ಲಿರುವುದನ್ನೆಲ್ಲಾ ಕ್ರೋಢೀಕರಿಸಿ ಈ ಸಭೆಯ ಮುಂದೆ ಇಡುವುದಕ್ಕೆ ನನಗೆ ಶಕ್ತಿ ಆಗಲಾರದು. ಆದರೆ ಕಾನೂನು ಪರಿಣತರೂ ಹಾಗೂ ಬಹಳ ಬುದ್ಧಿವಂತರೂ ಕೆಲವರು ಆ ರೀತಿ ಮಾತನಾಡಿದರೂ ಮಾತನಾಡಬಹುದು. ಸರ್ಕಾರದವರು ಈಗ ನಮಗೆ ಕೊಟ್ಟಿರತಕ್ಕ 40–50 ಸೆಟಲ್‌ಮೆಂಟ್ ವರದಿ ಪುಸ್ತಕಗಳನ್ನು ಓದಿನೋಡಿ ತಿಳಿದುಕೊಂಡು ಅದನ್ನೆಲ್ಲಾ ಡೈಜೆಸ್ಟ್ ಮಾಡಿಕೊಂಡು ಅವುಗಳು ಹೀಗೀಗೇ ಇವೆ ಎಂಬುದಾಗಿ ಈ ಸಭೆಯ ಮುಂದೆ ಇಡಬೇಕಾಗಿದ್ದರೆ ಸುಮಾರು ಒಂದು ತಿಂಗಳು ಅಥವಾ ಎರಡು ತಿಂಗಳುಗಳಾದರೂ ನನಗೆ ಹಿಡಿಯುತ್ತದೆ.

ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ರೆವಿನ್ಯೂ ಸೆಕ್ರೆಟೇರಿಯಟ್ ಅವರು ಆ ವರದಿ ಗಳಿಗೆಲ್ಲಾ ಜಿಸ್ಟ್ ಕೊಟ್ಟಿದ್ದಾರೆ. ಅವನ್ನು ಓದಿದರೆ ಸುಲಭವಾಗಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳ ಹಾಗೆ ಬರೀ ಅಂತಹ ನೋಟ್ಸನ್ನು ನೋಡಿ ಮಾತನಾಡುವುದಕ್ಕೆ ತಯಾರು ಇಲ್ಲ. ಅವರು ಒಂದು ತತ್ವಕ್ಕೆ ಒಂದು ನೀತಿಗೆ ಕಟ್ಟುಬಿದ್ದಿದ್ದಾರೆ. ಇವತ್ತು ಭೂಸುಧಾರಣೆ ಮಾಡುತ್ತೇವೆಂದು ಒಂದು ನೀತಿ ಯನ್ನು ಇವರು ಹಾಕಿಕೊಂಡಿದ್ದಾರೆ. ಭೂಕಂದಾಯವನ್ನು ಭೂಮಿಯ ಮೇಲೆ ಹಾಕುವುದಿಲ್ಲವೆಂದು ಅವರು ಜನತೆಗೆ ಮಾತುಕೊಟ್ಟಿದ್ದಾರೆ. ಯಾವ ತೆರಿಗೆಗಳನ್ನೂ, ಸುಂಕಗಳನ್ನೂ ಜನತೆಯ ಮೇಲೆ ವಿಧಿಸುವುದಿಲ್ಲವೆಂದು ಮಾತು ಕೊಟ್ಟಿದ್ದಾರೆ. ಆದರೆ ಇವರು ಈ ರೀತಿ ಜನತೆಗೆ ಆಶ್ವಾಸನೆಗಳನ್ನು ಕೊಡದೇ ಹೋಗಿದ್ದರೆ 17 ವರ್ಷಗಳ ಕಾಲ ಈ ಅಧಿಕಾರದಲ್ಲಿ ಇರುತ್ತಿರಲಿಲ್ಲ. ಈಗ ಇವರು ಇರತಕ್ಕ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಅಧಿಕಾರವನ್ನು ಬಿಡದೆ ಇಲ್ಲಿಯೇ ಕುಳಿತುಕೊಳ್ಳಬೇಕಾದರೆ ಮತ್ತೆ ಮತ್ತೆ ಪುನಃ ಈ ಅಧಿಕಾರದಲ್ಲಿಯೇ ಉಳಿಯಬೇಕಾಗಿದ್ದರೆ ಇವರು ಕೊಟ್ಟಿರತಕ್ಕ ಗಾಳಿಗೋಪುರ, ಆಶ್ವಾಸನೆಗಳೇ ಕಾರಣವೆಂದು ನಾನು ಹೇಳುತ್ತೇನೆ. ಕಂದಾಯವನ್ನು ಒಂದು ರೂಪಾಯಿನಿಂದ 2 ರೂಪಾಯಿಗಳಿಗೆ ಮಾಡಿ, ವಾಟರ್ ರೇಟ್ ಸೆಸ್ ಹಾಕಿ, ಮೇಂಟನೆನ್ಸ್ ಸೆಸ್ ಹಾಕಿ, ಕಂಟ್ರಿಬ್ಯೂಷನ್ ಹಾಕಿ, ಬೆಟರ್‌ಮೆಂಟ್ ಲೆವಿ ಎಂಬುದಾಗಿ ಬೇರೆ ಹಾಕಿ, ಜನತೆಯ ಮುಂದೆ ಲ್ಯಾಂಡ್ ರಿಫಾರಮ್ಸ್ ಕಮಿಟಿಯವರು ಏನೇನು ವಿಷಯಗಳನ್ನು ರೈತರ ಹಿತವನ್ನು ಕಾಪಾಡುವುದಕ್ಕೋಸ್ಕರವಾಗಿ ಮಾಡಿದ್ದಾರೋ ಅವನ್ನೆಲ್ಲಾ ಇವರು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ನಾನು ಹೇಳುತ್ತೇನೆ. ನಿಜವಾಗಿಯೂ ನಾನು ಅವರ ವರದಿಗೆ ಪೂರ್ಣ ಬೆಂಬಲವನ್ನು ಕೊಡುತ್ತೇನೆ. ಬೆಳೆ ಜಾಸ್ತಿಯಾಯಿತು ಎಂದರೆ ಅವುಗಳ ಬೆಲೆಯೂ ಜಾಸ್ತಿಯಾಗುತ್ತದೆ. ಅದರ ಬೆಳೆಗಳೆಲ್ಲಾ ಕುಸಿದುಬಿದ್ದಾಗ ಅದು ಇವರ ಕಣ್ಣಿಗೆ ನಿಕೃಷ್ಟ ಕಂಡಾಗ ರೈತ ಬೆಳೆದಂಥ ಮಾಲುಗಳಿಗೆ, ಪದಾರ್ಥಗಳಿಗೆ ಅಥವಾ ದವಸಗಳಿಗೆ ಯಾವ ರೀತಿ ಗ್ಯಾರಂಟಿ ಕೊಡುತ್ತಾರೋ ಗೊತ್ತಿಲ್ಲ. ಇದೇನು ರೈತನ ದೌರ್ಭಾಗ್ಯವೋ ಗೊತ್ತಿಲ್ಲ. ಅವನು ಒಬ್ಬ ಮೂಕಪ್ರಾಣಿಯಂತೆ ಇದ್ದಾನೆಂದು ಹೇಳಬಹುದು. ವರ್ತಕರಿಗೆ ಚೇಂಬರ್ ಆಫ್ ಕಾಮರ್ಸ್, ತೆಂಗಿನಕಾಯಿ, ವೀಳೆಯದೆಲೆ, ಮಾಂಸ ವ್ಯಾಪಾರಮಾಡತಕ್ಕವರಿಗೆ ಒಂದು ಸಂಸ್ಥೆ, ಪತ್ರಿಕೆಯವರಿಗೆ ಒಂದು ಸಂಘ, ಪಾಲಿಟಿಷಿಯನ್ಸ್‌ಗೆ ಒಂದು ಸಂಸ್ಥೆ, ಆ ಮೇಲೆ ಎನ್.ಜಿ.ಓ.ಗಳಿಗೆ ಒಂದು ಸಂಘ-ಹೀಗೆ ರಾಜ್ಯದಲ್ಲಿ ಎಲ್ಲರಿಗೂ ಒಂದೊಂದು ಸಂಘ ಸಂಸ್ಥೆಗಳಿವೆ. ಆದರೆ ರೈತನಾದವನಿಗೆ ಯಾವ ಒಂದು ಇಂತಹ ಸಂಸ್ಥೆ ಇದೆ? ಈ ರಾಜ್ಯದಲ್ಲಿ ಎಲ್ಲರಿಗಾಗಿ, ದುಡಿದು ಕೂಲಿ ಜೀವನ ಮಾಡತಕ್ಕವರಿಗೆ ಒಂದು ತುತ್ತು ಅನ್ನವನ್ನು ಕೊಡುವ ರೈತನಿಗೆ ಬೇಕಾದಷ್ಟು ಸೌಕರ್ಯವಿಲ್ಲ. ಅವನು ನಾಶವಾಗುತ್ತಿದ್ದಾನೆ. ಇವತ್ತು ಅವರಿಗೆ ಆಗತಕ್ಕ ಅನುಕೂಲಗಳು ಒದಗದಿದ್ದರೆ ಅನೇಕ ಸಂದರ್ಭಗಳಲ್ಲಿ ಅವರು ಹೈಕೋರ್ಟಿಗೆ ಹೋಗಬೇಕಾಗುತ್ತದೆ. ಅಲ್ಲದೆ ಇತ್ತೀಚೆಗೆ ರೈತರೇ ತಮ್ಮ ಮೇಲೆ ಸರ್ಕಾರದವರು ಕಂದಾಯವನ್ನು ಜಾಸ್ತಿಯಾಗಿ ಹಾಕುತ್ತಿದ್ದಾರೆ, ತಮ್ಮ ಮೇಲೆ ಹೊರಬಾರದಂಥ ಹೊರೆಯನ್ನು ಹೊರಿಸುತ್ತಿದ್ದಾರೆಂದು ಹೇಳುತ್ತಿದ್ದಾರೆ. ಎಲ್ಲಾ ಖಾತೆಗಳಲ್ಲಿರತಕ್ಕ ನೌಕರವರ್ಗದಲ್ಲಿ ಎಷ್ಟೋ ಜನ ರೈತರ ಸ್ಥಿತಿಯನ್ನು ಅರಿತಿರುವವರು ಇದ್ದರೂ, ಅವರು ರೈತರನ್ನು ಮೂಕಪ್ರಾಣಿಗಳಂತೆ ಕಾಣುವುದು ಸರಿಯಲ್ಲ. ಒಂದು ಮಾತು. ನಾವು ಇಲ್ಲಿ ಮಾಡತಕ್ಕಂಥ ನಿರ್ಣಯಗಳು ಕೊಡತಕ್ಕಂಥ ಸಲಹೆಗಳು ನಿಜವಾಗಿ ಈ ರಾಜ್ಯ ಸರ್ಕಾರದಲ್ಲಿ ಫಲಕಾರಿಯಾಗುತ್ತವೋ ಇಲ್ಲವೋ ಗೊತ್ತಿಲ್ಲ. ಇಲ್ಲಿ ನಮ್ಮ ಮುಂದೆ ಬಣ್ಣಬಣ್ಣವಾಗಿ ಮುದ್ರಿಸಿದಂತಹ ಪುಸ್ತಕಗಳು ಮಾತ್ರ ಇವೆ. ಮಾತೆತ್ತಿದರೆ ನಾನು ರೈತನ ಮಗ, ಸ್ವತಃ ರೈತನಾದವನು, ನಮ್ಮ ರಾಜ್ಯದಲ್ಲಿ ರೈತ ಸುಖವಾಗಿರಬೇಕು, ಎಂಬುದಾಗಿ ಹೇಳುತ್ತಾರೆ. ಆದರೆ ಅವನಿಗೆ ಕೊಡುತ್ತಿರುವ ಸೌಕರ್ಯಗಳನ್ನು ನೋಡಿದರೆ ಅವನು ಈ ದೇಶದಲ್ಲಿ ಯಾವ ರೀತಿ ಉಳಿಯಬೇಕೋ ಎಂಬುದೇ ತಿಳಿಯದಾಗಿದೆ. ರೈತನಾದವನ ಮೇಲೆ ಈ ರೀತಿಯಾಗಿ ತೆರಿಗೆಯ ಭಾರವನ್ನು ಹಾಕುವುದು ನ್ಯಾಯವಲ್ಲ. ಈಗ 30 ವರ್ಷಗಳಿಗೊಂದಾವರ್ತಿ ಭೂಕಂದಾಯವನ್ನು ಪುನರ್ವಿಮರ್ಶೆ ಮಾಡಬೇಕೆಂದು ತಂದಿದ್ದಾರೆ. ನಮಗೆ ರಾಜರು ಬೇಡ, ಬ್ರಿಟಿಷರು ಬೇಡವೆಂಬುದಾಗಿ ದೇಶಾದ್ಯಂತ ಹಿಂದೆ ಚಳುವಳಿಯನ್ನು ಮಾಡಿದವರು ಈಗ ಬಡ ರೈತರ ಮೇಲೆ ಹೊರಲಾರದಷ್ಟು ತೆರಿಗೆಯನ್ನು ಹಾಕಲಿಕ್ಕೆ ಹೊರಟಿದ್ದಾರೆ. 30 ವರ್ಷಗಳಿಗೊಂದು ಸಾರಿ ಭೂಮಿ ಅಳೆದು ಕಂದಾಯ ನಿರ್ಧಾರ ಮಾಡಬೇಕೆಂದು ಈಗ ಮನಸ್ಸುಮಾಡುತ್ತಿದ್ದಾರೆ. ಇವರು ಈ ಕಾನೂನನ್ನು ಬದಲಾವಣೆ ಮಾಡುವ ಶಕ್ತಿಯನ್ನು ಹೊಂದಿದ್ದಾರೆಯೇ ಇಲ್ಲವೇ ಎಂಬುದನ್ನು ಯೋಚನೆ ಮಾಡದೆಯೇ ಈ ಸಭೆಯಲ್ಲಿ ಈಗ ಹೊಸದಾಗಿ ಈ ಕಾನೂನನ್ನು ಪಾಸ್ ಮಾಡಬೇಕು, ರೈತರಮೇಲೆ ಈ ಕಾನೂನು ಪ್ರಕಾರ ಹೆಚ್ಚು ಕಂದಾಯವನ್ನು ವಿಧಿಸಬೇಕೆಂದು ತಂದಿರುವುದು ನನಗಂತೂ ಏನೂ ಅರ್ಥವಾಗಿಲ್ಲ. ಏತಕ್ಕೆ ಕಂದಾಯ ಹಾಕುತ್ತಾರೋ ಗೊತ್ತಿಲ್ಲ. ಇವರಿಗೆ ಅವರು ಕಂದಾಯ ಏಕೆ ಕೊಡಬೇಕು? ಇವರಿಗೆ ಅವರಿಂದ ಕಂದಾಯ ವಸೂಲುಮಾಡುವುದಕ್ಕೆ ಏನು ಅಧಿಕಾರವಿದೆ? ಲ್ಯಾಂಡ್ ರೆವಿನ್ಯೂ ಎಂಬುದು ಅದು ಒಂದು ಪ್ಯಾರಮೌಂಟ್ ಚಾರ್ಜ್. ವರಮಾನ ತೆರಿಗೆ, ಮತ್ತು ಇತರ ರೆವಿನ್ಯೂ ಬಾಕಿ ಎಷ್ಟಿದ್ದರೂ ವಸೂಲುಮಾಡಿಕೊಳ್ಳಿ. ಮಾರಾಟ ತೆರಿಗೆ ಮುಂತಾದ ಬಾಕಿಗಳನ್ನು ಇನ್ನೂ ಹೆಚ್ಚಿನ ಉತ್ಸಾಹದಿಂದ ವಸೂಲುಮಾಡಿ. ಆದರೆ ಲ್ಯಾಂಡ್ ರೆವಿನ್ಯೂ ಕಂದಾಯವನ್ನು ಹಿತ್ತಲಕಡೆ ಬಾಗಿಲನಲ್ಲಿ ಹೋಗಿ ವಸೂಲುಮಾಡಬೇಡಿ. ರಾಜ್ಯಾಂಗದ 265ನೆಯ ರೂಲಿನ ಪ್ರಕಾರ ಯಾವುದಾದರೂ ತೆರಿಗೆಯನ್ನಾಗಲೀ ಅಥವಾ ಸುಂಕವನ್ನಾಗಲೀ ನನ್ನ ಮೇಲೆ ವಿಧಿಸಬೇಕಾದರೆ ಇವರಿಗೆ ಯಾವ ಕಾನೂನಿನ ಬಲವಿದೆ ಎಂದು ನಾನು ಕೇಳಿದ್ದಕ್ಕೆ ಮಾನ್ಯ ಅಧ್ಯಕ್ಷರು ಒಂದು ರೂಲಿಂಗ್ ಕೊಟ್ಟರು. ಅದನ್ನು ನಾನು ಇಲ್ಲಿ ಪ್ರಶ್ನೆಮಾಡುವುದಿಲ್ಲ.

ನಾನು ಇಷ್ಟು ಹೇಳುತ್ತೇನೆ, ಈ ಸಭೆಯಲ್ಲಿ ಅಂಗೀಕಾರ ಮಾಡಿರತಕ್ಕ ರೆವಿನ್ಯೂ ಕೋಡಿನ ಮುಂಖಾತರ ಕಂದಾಯವನ್ನು ಹೆಚ್ಚು ಮಾಡದೆ ಈ ಒಂದು ನಿರ್ಣಯವನ್ನು ಈ ಸಭೆಯ ಮುಂದೆ ತಂದು ರೈತನ ಮೇಲೆ ತೆರಿಗೆಯನ್ನು ಹಾಕುವುದಾದರೆ, ಜನಗಳಿಂದ ಈ ತೆರಿಗೆಯನ್ನು ವಸೂಲು ಮಾಡಿದರೆ, ಈ ರೆಸುಲ್ಯೂಷನ್ ಮೇಲೆ ಸರ್ಕಾರ ತೆಗೆದು ಕೊಳ್ಳತಕ್ಕಂಥ ಎಗ್ಸಿಕ್ಯುಟೀವ್ ಡಿಸಿಷನ್ ಏನಿದೆ ಅದು ನಲ್ ಅಂಡ್ ವಾಯ್ಡ್ ಆಗುತ್ತದೆ. ಅವೊತ್ತಿನ ದಿವಸ ಕೋರ್ಟು ಕಚೇರಿಗಳಲ್ಲೂ ಕಂದಾಯವನ್ನು ಹೆಚ್ಚುಮಾಡತಕ್ಕದ್ದು ನ್ಯಾಯವಲ್ಲ ಎಂದು ಅದನ್ನು ವಿರೋಧ ಮಾಡುತ್ತಾರೆ. ಇವೊತ್ತಿನ ದಿವಸ ಈ ಕಂದಾಯ ಏರಿಕೆಯಿಂದ ಸರ್ಕಾರಕ್ಕೆ ಬರಬಹುದಾದ ನಾಲ್ಕು ಕೋಟಿ ರೂಪಾಯಿಗಳನ್ನು ಬೇರೆ ಮಾರ್ಗಗಳಿಂದ ಗಳಿಸುವುದಕ್ಕೆ ಸಾಧ್ಯವಿಲ್ಲವೇ ? ಕೆರೆ ಕಾಲುವೆಗಳನ್ನು ಕಟ್ಟಸಿದರೆ ಕಾಂಟ್ರಿಬ್ಯೂಷನ್ ವಸೂಲು ಮಾಡುತ್ತೀರಿ, ವಾಟರ್ ಚಾರ್ಜು, ಮೇಂಟೇನ್ಸ್ ಚಾರ್ಜು ಇವುಗಳನ್ನೆಲ್ಲಾ ವಸೂಲು ಮಾಡುತ್ತೀರಿ, ಈ ರೀತಿ ನಾನಾ ರೀತಿಯಲ್ಲಿ ರೈತನಿಂದ ತೆರಿಗೆಯನ್ನು ಈಗಾಗಲೇ ವಸೂಲು ಮಾಡುತ್ತಿದ್ದೀರಿ. ಇವೊತ್ತಿನ ದಿವಸ ಕುಣಿಗಲ್ ಕೆರೆಯ ಹಿಂದೆ 6 ರೂಪಾಯಿಗಳ ಕಂದಾಯವನ್ನು ಕೊಡುತ್ತಿದ್ದ ರೈತನಿಗೆ 119 ರೂಪಾಯಿ ಕಂದಾಯವನ್ನ ಕೊಡತಕ್ಕ ಕಾಲಒದಗಿದೆ ಒಂದು ಎಕರೆ ಗದ್ದೆಯಲ್ಲಿ 15 ಪಲ್ಲ ಭತ್ತವನ್ನು ಬೆಳೆದರೆ ಒಂದು ಪಲ್ಲ ಭತ್ತಕ್ಕೆ 40 ರೂಪಾಯಿಗಳಂತೆ 15 ಪಲ್ಲ ಭತ್ತಕ್ಕೆ 600 ರೂಪಾಯಿಗಳಾಗುತ್ತದೆ ಎಂದು ಹೇಳುತ್ತಾರೆ. ಕುಣಿಗಲ್ ಕೆರೆಯ ಹಿಂದೆ ಭತ್ತವನ್ನು ಬೆಳೆದರೆ ಎಷ್ಟು ಉಳಿಯುತ್ತದೆ ಎನ್ನುವುದಕ್ಕೆ ಶೆಟ್ಟರು ಒಂದು ಗಾದೆಯನ್ನು ಹೇಳುತ್ತಾರೆ ಅದೇನೆಂದರೆ ''ಜಿಗಣೆಯಕಾಸು ಗಂಟಿನಮೇಲೆ ಬಂತು'' ಎಂದು ಶ್ರೀಮಾನ್ ಆವಲ ರೆಡ್ಡಿಯವರು ಹೇಳಿದರು. ರೈತ ತಾನು ವ್ಯವಸಾಯ ಮಾಡಿ ಬೆಳೆದಂತಹ ಉತ್ಪತ್ತಿಯನ್ನು ಲೆಕ್ಕಹಾಕಿದರೆ ಎರಡು ರೂಪಾಯಿ ತಲೆಯ ಮೇಲೆ ಹೆಚ್ಚಿಗೆ ಬರುತ್ತದೆ ಎಂದು. ಅಹಾರದ ಉತ್ಪಾದನೆಯನ್ನು ಹೆಚ್ಚಿಸಬೇಕು ಭೂಮಿ ಇಲ್ಲದೆಇರುವವರಿಗೆ ಭೂಮಿಯನ್ನು ಕೊಡಬೇಕು ಎಂದು ಹೇಳಿದಂತಹವರು ಭೂಸುಧಾರಣೆಯ ಕಾನೂನನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟಿದ್ದಾರೆ. ಭೂಮಿಯನ್ನು ಹಂಚಿಕೆಮಾಡುವುದರಲ್ಲಿ ಯಾವ ಒಂದು ನೀತಿ ಅಥವಾ ತತ್ವಕ್ಕೆ ಸರ್ಕಾರದವರು ಕಟ್ಟುಬಿದ್ದಿದ್ದಾರೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಇವೊತ್ತಿನ ದಿವಸ ಸರ್ಕಾರದವರು ಒಂದು ಕಾನೂನನ್ನು ಮಾಡಿ ಯಾವ ಒಂದು ತೆರಿಗೆಯನ್ನೂ ಹಾಕಿದರೂ ಕೂಡ ಅನೇಕರು ತಪ್ಪಿಸಿಕೊಳ್ಳುತ್ತಾರೆ. ಆದರೆ ರೈತ ಅದರಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಇನ್‌ಕಂಟ್ಯಾಕ್ಸ್ ಹಾಕಿದರೆ ಶ್ರೀಮಂತರು ಅದನ್ನು ಕೊಡುವುದಿಲ್ಲ. ವರ್ತಕರು ತೆರಿಗೆಯನ್ನು ಕೊಡುವುದಿಲ್ಲ. ಎಲ್ಲರೂ ಕೂಡ ತೆರಿಗೆಯನ್ನು ಕೊಡುವುದನ್ನ ತಪ್ಪಿಸಿಕೊಳ್ಳುತ್ತಾರೆ. ಆದರೆ ಈ ಬಡ ರೈತ ಈ ತೆರಿಗೆಗಳನ್ನು ಸಮಾಧಾನದಿಂದ ಹೊತ್ತುಕೊಂಡು ಅವುಗಳನ್ನು ಸರ್ಕಾರಕ್ಕೆ ತೆರ ಬೇಕು. ಬಾಕಿಯವರು ಈ ತೆರಿಗೆಗಳಿಂದ ತಪ್ಪಿಸಿಕೊಳ್ಳದಂತೆ ಸರ್ಕಾರದವರು ಯಾವ ಒಂದು ಕಾನೂನನ್ನ ಮಾಡಿದ್ದಾರೆ ಎಂದು ನಾನು ಅವರನ್ನು ಕೇಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಮಳೆಯೇ ಬಿದ್ದಿಲ್ಲ. 18 ಇಂಚು ಮಳೆ ಬಿದ್ದರೆ ಆ ಪ್ರದೇಶದಲ್ಲಿ ಕಂದಾಯವನ್ನ ರಿಮಿಷನ್ ಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಮಳೆಯಾಗಿಲ್ಲ ಕಂದಾಯವನ್ನು ರಿಮಿಷನ್ ಮಾಡಿ ಎಂಧರೆ ರೆವಿನ್ಯೂ ಕೋಡನ್ನು ತೋರಿಸುತ್ತಾರೆ. ಇವೊತ್ತಿನ ದಿವಸ ಮೈಸೂರು ಸಂಸ್ಥಾನದಲ್ಲಿ 75 ಪರ್ಸೆಂಟ್ ಕಮರ್ಷಿಯಲ್ ಟ್ಯಾಕ್ಸನ್ನು ತಡೆಹಿಡಿದಿದ್ದಾರೆ. ಹೀಗಿರಬೇಕಾದರೆ, ರೈತನ ಮೇಲೆ ತೆರಿಗೆಯನ್ನು ಹಾಕುವುದು ಯಾವ ಧರ್ಮ! ಅವನು ಏನೋ ಮೂಕ ಪ್ರಾಣಿ ಎಂದು ತಿಳಿದುಕೊಂಡು ಏನು ಬೇಕಾದರೂ ಮಾಡಬಹುದು ಎಂದು ಮಾಡುವುದಾದರೆ ಅದಕ್ಕಿಂತಲೂ ಹೆಚ್ಚಿಗೆ ಜನತೆಗೆ ದ್ರೋಹ ಮಾಡತಕ್ಕದ್ದು ಬೇರೆ ಯಾವುದೂ ಇಲ್ಲ ಎಂದು ನಾನು ಖಂಡಿತವಾಗಿ ಹೇಳುತ್ತೇನೆ. ಈಗ ಎ.ಜಿ.ಆರ್. ವರದಿ ಪ್ರಕಾರ ಎಲ್ಲವನ್ನೂ ನೀವು ಜಾರಿಗೆ ತಂದಿದ್ದೀರಾ? ಎಲ್ಲಿ ನಿಮಗೆ ಅನುಕೂಲಬೇಕೋ ಅಲ್ಲಿ ಮಾತ್ರ ಅದನ್ನು ಉಪಯೋಗ ಮಾಡಿಕೊಂಡಿದ್ದೀರಿ. ಉಳಿದದ್ದನ್ನೆಲ್ಲಾ ಹಾಗೆಯೇ ಬಿಟ್ಟಿದ್ದೀರಿ ಎ. ಜಿ. ಆರ್. ಪ್ರಕಾರ ಎಷ್ಟು ಕೋಟಿ ರೂಪಾಯಿಗಳನ್ನು ನೀವು ಉಳಿಸಿದ್ದೀರಿ! ಆ ಹಣದಿಂದ ದೇಶದ ಕಲ್ಯಾಣಕ್ಕೋಸ್ಕರ ಏನು ಕೆಲಸಗಳನ್ನು ಮಾಡಿದ್ದೀರಿ! ನಾನು ನೋಡಿರುವ ಹಾಗೆ ಏನೂ ಮಾಡಿಲ್ಲ. 27 ಜನ ಮಂತ್ರಿಗಳನ್ನು ಏತಕೆ ತೆಗೆದುಕೊಂಡಿರಿ ಎಂದು ಹೇಳಿದಾಗ ಅದಕ್ಕೆ ನಾವು ಕೇವಲ 2 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡುತ್ತಿದ್ದೇವೆ ಎಂದು ಹೇಳಿದಿರಿ, ರೈತನಿಗೆ ನೀವು ತೆರಿಗೆಯನ್ನ ಹಾಕಬೇಕಾದರೆ ಈಗ ದೇಶದ ಪ್ರಜೆಗಳಿಗೆ ನೀವು ಯಾವ ರೀತಿಯ ಉತ್ತೇಜನವನ್ನು ಕೊಡುತ್ತಿದ್ದೀರಿ ಎಂದು ನಾನು ಕೇಳುತ್ತೇನೆ. ಯಾವುದರಲ್ಲಿ ಏನು ಉಳಿಸಿದ್ದೀರಿ? ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಕೋಟ್ಯಾಂತರ ರೂಪಾಯಿಗಳು ಮಿಸ್ ಅಪ್ರೋಪ್ರಿಯೇಷನ್ ಆಗುತ್ತಿದೆ ಹೀಗಿರುವಾಗ ಭೂಮಿಯನ್ನು ಉಳುಮೆ ಮಾಡತಕ್ಕ ರೈತನ ಕಲ್ಯಾಣಕ್ಕೋಸ್ಕರ ಸರ್ಕಾರದವರು ಏನಾದರೂ ಪ್ರಯತ್ನ ಮಾಡಿದ್ದಾರೆಯೇ ಎಂದರೆ ಅವರು ಎಲ್ಲೂ ಏನೂ ಕೈಹಾಕಿಲ್ಲ. ನಿಮ್ಮ ಬಾರಾ ಬಂಗಾಳಿ ಆಟಕ್ಕೋಸ್ಕರ ಮಂತ್ರಿಗಳಿಗೆ ಸುಸಜ್ಜಿತವಾದಮನೆಗಳನ್ನ ಕಟ್ಟುವುದಕ್ಕೋಸ್ಕರ, ಸುಸಜ್ಜಿತವಾದಕಾರುಗಳಿಗೋಸ್ಕರ ನೀವು ಈ ತೆರಿಗೆಯನ್ನು ಹಾಕುತ್ತಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. 17 ವರ್ಷಗಳ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಕೆಳಗೆ ನಮಗೆ ಸ್ವಾತಂತ್ರ್ಯ ಬೇಕು ಎಂದು ಹೋರಾಟ ಮಾಡಿದಂತಹ ಜನತೆಗೆ ನೀವು ಏನು ಅನುಕೂಲವನ್ನು ಮಾಡಿ ಕೊಟ್ಟಿದ್ದೀರಿ ಎಂದು ನಾನು ಕೇಳುತ್ತೇನೆ. ಈ ಹಿಂದೆ ಶ್ರೀಮಾನ್ ಕೃಷ್ಣಪ್ಪನವರು ಭಾಷಣ ಮಾಡುತ್ತಿದ್ದುದನ್ನು ನಾನು ಕೇಳಿದ್ದೇನೆ. ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದ ಮೇಲೆ ಸ್ವರ್ಗವನ್ನೇ ಭೂಮಿಯಮೇಲೆ ತಂದು ಇಳಿಸುತ್ತೇವೆ. ವೈಕುಂಠವನ್ನೇ ತಂದು ಇಳಿಸುತ್ತೇವೆ ಎಂದು ಹೇಳಿದ್ದರು. ಆದರೆ ಇವರು ಅಧಿಕಾರಕ್ಕೆ ಬಂದಮೇಲೆ ಆಗಿರುವುದನ್ನು ನೋಡಿದರೆ ಸ್ವರ್ಗವನ್ನು ವೈಕುಂಠವನ್ನು ಇಲ್ಲಿತಂದಿಳಿಸುವುದಕ್ಕೆ ಬದಲಾಗಿ ನರಕವನ್ನು ಜನತೆಯ ಬಾಗಿಲಿಗೆ ತಂದು ಇಳಿಸುತ್ತಿದ್ದಾರೆ ಎನ್ನುವಹಾಗೆ ಇದೆ. ಈ ರೀತಿ ಮಾಡಿದರೆ ರೈತ ನಿಮ್ಮಲ್ಲಿ ನಂಬಿಕೆಯನ್ನು ಇಡುತ್ತಾನೆಯೇ? ಈ ವಿಷಯವನ್ನು ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಒಬ್ಬರೇ, ಅಲ್ಲಇಡೀ ಮಂತ್ರಿಮಂಡಲದವರೆಲ್ಲರೂ ಈ ದೀರ್ಘವಾಗಿ ಯೋಚನೆ ಮಾಡಬೇಕು. ಬಿಜಾಪುರದಲ್ಲಿ ಒಂದು ರೀತಿಯ ಕಂದಾಯ, ಬೆಳಗಾಮ್‌ನಲ್ಲಿ ಒಂದು ರೀತಿಯ ಕಂದಾಯ, ಮೈಸೂರಿನಲ್ಲಿ ಒಂದು ರೀತಿಯ ಕಂದಾಯ. ಇದು ಒಂದು ತದ್ವಿರುದ್ಧವಾದ ಕಂದಾಯ. ಈ ರೀತಿ ಕಂದಾಯವನ್ನು ಹಾಕಿ ರೈತನ ತಲೆಯ ಮೇಲೆ ಹೊರೆಯನ್ನು ಹೊರಿಸಿ ಅವನಿಗೆ ಹಿಂಸೆಯನ್ನು ಮಾಡಬೇಡಿ. ರೈತ ಈಗ ಎಚ್ಚೆತ್ತಿದ್ದಾನೆ. ರೈತನಿಗೆ ಕಂದಾಯವನ್ನು ಜಾಸ್ತಿ ಮಾಡುವುದಕ್ಕೆ, ರೈತನಿಗೆ ನೀವು ಯಾವ ಬೀಜ, ಗೊಬ್ಬರಗಳ ಮುಂತಾದ ವ್ಯವಸಾಯ ಸಾಮಗ್ರಿಗಳನ್ನು ಒದಗಿಸಿ ಕೊಡುತ್ತಿದ್ದೀರಿ? ಯಾವ ಆಧಾರದ ಮೇಲೆ ನೀವು ರೈತನಿಗೆ 4 ಕೋಟಿ ರೂಪಾಯಿಗಳ ಕಂದಾಯವನ್ನು ಹಾಕುತ್ತೇವೆಂದು ಹೊರಟಿದ್ದೀರೋ ಇದು ನಾಲ್ಕು ಕೋಟಿ ಅಲ್ಲ. ಇದು 10 ಕೋಟಿ ರೂಪಾಯಿಗಳಾಗುತ್ತದೆ. ಒಂದು ಎಕರೆಯಲ್ಲಿ ಕಡಲೇಕಾಯಿ ಬೆಳೆದರೆ 410 ರೂಪಾಯಿಗಳು ಬರುತ್ತದೆ ಎಂದು ಹೇಳಿದರು. ಒಂದು ಎಕರೆಯಲ್ಲಿ ಆಲೂಗಡ್ಡೆಯನ್ನು ಬೆಳೆದರೆ 1,500 ರೂಪಾಯಿಗಳು ಬರುತ್ತದೆ ಎಂದು ಹೇಳಿದರು. ನಾನು ಹೇಳುತ್ತೇನೆ ನಮ್ಮ ತುಮಕೂರು ಜಿಲ್ಲೆಯಲ್ಲಿರತಕ್ಕ ಜಮೀನಿನಲ್ಲಿ ಬೆಳೆಯತಕ್ಕದ್ದನ್ನು ನೋಡಿದರೆ ನಮಗೆ ಒಂದು ಎಕರೆಗೆ 50 ರೂಪಾಯಿಗಳನ್ನು ಕೊಟ್ಟರೆ ಸಾಕು. ತುಮಕೂರು, ಕೋಲಾರ, ಬಿಜಾಪುರ, ಬಳ್ಳಾರಿ ಈ ಜಿಲ್ಲೆಗಳು ಯಾವಾಗಲೂ ಕಡಿಮೆ ಮಳೆ ಬೀಳುವ ಪ್ರದೇಶಗಳು. ಮತ್ತು ಡ್ರಾಟ್ 'ಎಫೆಕ್ಟೆಡ" ಏರಿಯಾ, ಇಂಥಾ ಪ್ರದೇಶಗಳಲ್ಲಿ ಜಮೀನಿಗೆ ಕಂದಾಯವನ್ನು ಮನಸ್ಸಿಗೆ ಬಂದಹಾಗೆ ಏರಿಸುತ್ತಿದ್ದೀರಿ. ಈ ದುಡ್ಡನ್ನೆಲ್ಲಾ ಯಾವ -ಡೆ ಒಯ್ಯಬೇಕೆಂದು ಮಾಡಿದ್ದೀರಿ? ಅರ್ಥವಿಲ್ಲದ ರೀತಿಯಲ್ಲಿ ನೀವು ಭೂಕಂದಾಯವನ್ನು ಏರಿಸುತ್ತಿದ್ದೀರಿ, ರಾಜ್ಯಾಂಗ ಬಂದಮೇಲೆ ಭೂಕಂದಾಯವನ್ನು ಹಾಕಬಹುದೇ, ಕಾಂಗ್ರೆಸ್ ಸರ್ಕಾರದವರು ಇದನ್ನು ಸ್ವಲ್ಪ ಯೋಚನೆಮಾಡಬೇಕು ನಿಜವಾಗಿಯೂ ನಾನು ಹೇಳುತ್ತೇನೆ, ರೈತನಿಗೆ ಕಂದಾಯವನ್ನು ಏರಿಸುವುದನ್ನು ಕೈ ಬಿಡಬೇಕು. ಈಗ ಸರ್ಕಾರದವರು ಕೆರೆಗಳನ್ನು ಕಟ್ಟಿಸುತ್ತಾರೆ, ಪಿಕ್‌ಅಪ್‌ಗಳನ್ನು ಕಟ್ಟಿಸುತ್ತಾರೆ, ವ್ಯವಸಾಯಗಾರರಿಗೆ ಸೌಕರ್ಯವನ್ನು ಒದಗಿಸುತ್ತಾರೆ, ಸರ್ಕಾರದವರು ರೈತರಿಗೆ ಮಾಡತಕ್ಕ ಸರ್ವೀಸ್‌ಗೋಸ್ಕರ ರೈತ ಸೇವಾಶುಲ್ಕ ಎಂದು ಹಣವನ್ನು ಕೊಡುತ್ತಿದ್ದಾನೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರೂ ಸಹ ಒಂದು ಸಮಗ್ರವಾದ ರೀತಿಯಲ್ಲಿ ಕಂದಾಯವನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ಸ್ವಾಮಿ, ನಾನು ಇನ್ನೊಂದು ವಿಷಯವನ್ನು ಹೇಳುತ್ತೇನೆ. ಇವೊತ್ತಿನದಿವಸ ಭೂಮಿ ಯಾರದ್ದು. ಭೂಮಿ ಸರ್ಕಾರದ್ದೆ? ಭೂಮಿ ಸರ್ಕಾರದ್ದಲ್ಲ. ಇದು ಪ್ರಜೆಗಳ ಭೂಮಿ. ಸರ್ಕಾರದವರು, ವ್ಯವಸಾಯಮಾಡತಕ್ಕ ಭೂಮಿಯ ಸಂಬಂಧದಲ್ಲಿ ರೈತನಿಗೆ ಒದಗಿಸತಕ್ಕ ಸರ್ವೀಸ್‌ಗೋಸ್ಕರ ಚಾರ್ಜ್‌ಮಾಡುತ್ತಾರೆ. ರೈತರು ಸರ್ಕಾರಕ್ಕೆ ಭೂಮಿಗೋಸ್ಕರ ದರ್ಕಾಸ್ತು ಅರ್ಜಿಯನ್ನು ಹಾಕಿದ್ದರು. ಆಪ್‌ಸೆಟ್ ಪ್ರೈಸಿಗೆ ರೈತರಿಗೆ ಸರ್ಕಾರದವರು ಭೂಮಿಯನ್ನು ಮಾರಿದ್ದಾರೆ. ಅದರ ಖರೀದಿಯನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಹೀಗಿರುವಾಗ ಕಂದಾಯವನ್ನು ನಿಮಗೆ ಏತಕ್ಕೆ ಕೊಡಬೇಕು? ಕಂದಾಯವನ್ನು ವಸೂಲು ಮಾಡುವ ಹಕ್ಕು ಸರ್ಕಾರಕ್ಕೆ ಇದೆಯೇ ಎಂದು ನಾನು ಕೇಳುತ್ತೇನೆ. ಭೂಮಿಯನ್ನು ಮಾರಾಟ ಮಾಡಿದಮೇಲೆ ಆ ಭೂಮಿಗೆ ಕಂದಾಯವನ್ನು ಹಾಕುವುದಕ್ಕೆ ನಿಮಗೆ ಅಧಿಕಾರ ಇದೆಯೇ? ಈಗ ಇಲ್ಲಿ ನಿಮಗೆ ಬಹುಮತ ಇದೆಯೆಂದು ಈ ನಿರ್ಣಯವನ್ನು ಪಾಸುಮಾಡಿಕೊಂಡು ಸರ್ಕಾರದವರು ಎಗ್ಜಿಕ್ಯೂಟೀವ್ ಡಿವಿಷನ್ ತೆಗೆದುಕೊಂಡು ಕಂದಾಯವನ್ನು ಜಾಸ್ತಿ ಮಾಡಿದರೆ, ಇದು ಕೋರ್ಟಿಗೆ ಹೋಗುತ್ತದೆ. ಆಗ ಕೋರ್ಟಿನಲ್ಲಿ ನಿಮ್ಮ ಮಾತಿಗೆ ಒಂದು ಬೆಲೆ ಇರುವುದಿಲ್ಲ. ಇದನ್ನು ಏತಕ್ಕೆ ಹೇಳುತ್ತಾ ಇದ್ದೇನೆಂದರೆ, ನನ್ನ ಜಿಲ್ಲೆಯನ್ನು 3 ಜೋನುಗಳಾಗಿ ವಿಂಗಡಿಸಿದ್ದಾರೆ. ಆದರೆ ಕೆಲವು ತಾಲ್ಲೂಕುಗಳನ್ನು ಚಿತ್ರದುರ್ಗಕ್ಕೆ ಸೇರಿಸಿದ್ದಾರೆ. ಕೆಲವು ತಾಲ್ಲೂಕುಗಳನ್ನು ಹಾಸನಕ್ಕೆ ಸೇರಿಸಿದ್ದಾರೆ, ಕೆಲವು ತಾಲ್ಲೂಕುಗಳನ್ನು ಬೆಂಗಳೂರಿಗೆ ಸೇರಿಸಿದ್ದಾರೆ. ಹಾಗೆ ನಮ್ಮ

ತುಮಕೂರು ಜಿಲ್ಲೆಯನ್ನು 3 ಭಾಗ ಮಾಡಿ, ಮೂರನ್ನೂ ಒಂದೊಂದು ಕಡೆಗೆ ಸೇರಿಸಿದ್ದಾರೆ, 4-4 ತಾಲ್ಲೂಕು, 2-2 ತಾಲ್ಲೂಕುಗಳನ್ನು ಒಂದೊಂದು ಕಡೆ ಸೇರಿಸಿದ್ದಾರೆ. ಅದಕ್ಕೆ ಏನು ಆಧಾರ ? ಒಂದೇ ಹೊಲದ ಬದಿಯಲ್ಲಿರುವ ಎರಡು ಭೂಮಿಯಲ್ಲಿ, ಒಂದನ್ನು ತರಿ ಭೂಮಿ ಎಂದು ಬರೆದಿದ್ದಾರೆ. ಹಾಗೆ ಬರೆದಿರುವಾಗ, ಅದಕ್ಕೆ ತರಿಕಂದಾಯ ಎಷ್ಟು ಕೊಡಬೇಕೆಂದು ಅರ್ಥಮಾಡಿಕೊಳ್ಳಬೇಕು. ತರಿಕಂದಾಯ 2ರಷ್ಟು-3ರಷ್ಟು ಅಂತ ಇಟ್ಟುಕೊಂಡರೆ 18 ರೂಪಾಯಿಯಾಯಿತು. ಮೇಂಟೆನೆನ್ಸ್ ಚಾರ್ಜು 5 ರೂಪಾಯಿ ; ವಾಟರ್‌ರೇಟ್ (3 ತಿಂಗಳಿಗೆ ಮತ್ತು 3 ತಿಂಗಳಿಗಿಂತ ಕಡಿಮೆ ಅವಧಿಗೆ ಸಪ್ಲೈ ಮಾಡಿದರೂ) 20 ರೂಪಾಯಿ. ಇದೆಲ್ಲಾ 43 ರೂಪಾಯಿಗೆ ಬಂತು. ಇದರ ಜೊತೆಗೆ ಕಂಟ್ರಿಬ್ಯೂಷನ್ ಕೊಡಬೇಕು—ಕೆರೆ ಕೊಟ್ಟರೆ, ಕಾಲುವೆ ತೋಡಿಕೊಂಡರೆ ಜೊತೆಗೆ 12 ರೂಪಾಯಿ ಸೆಸ್ ಕೊಡಬೇಕು. ಅಲ್ಲಿಗೆ ಒಂದು ಎಕರೆ ಭೂಮಿಗೆ 57 ರೂಪಾಯಿ ಕಂದಾಯ ಕೊಡಬೇಕು. ನಾನು ಇವತ್ತೆಲ್ಲಾ ಅಲ್ಲಿ ಬೆಳೆಯುತಕ್ಕಂಥಾದ್ದು 1-2 ಪಲ್ಲ ನವಣೆ, ಇಲ್ಲವೆ 10 ಮೂಟೆ ಕಡಲೆಕಾಯಿ, ಇಲ್ಲವೆ 50 ಸೇರು ತೊಗರಿಕಾಳು; ಅದೂ ಬಹಳ ಚೆನ್ನಾಗಿ ಬೆಳೆಯುತ್ತೇನೆಂದರೆ. ಈ 2 ಪಲ್ಲ ನವಣೆಯನ್ನು ಬೆಳೆದು 28 ರೂಪಾಯಿ ತೆಗೆದುಕೊಳ್ಳುವುದಕ್ಕೋಸ್ಕರ, ಮೈಸೂರು ಸರಕಾರಕ್ಕೆ 57 ರೂಪಾಯಿ ಕಂದಾಯ ಕೊಡಬೇಕು. ಇದು ಯಾವ ನ್ಯಾಯವೆಂದು ನನಗೆ ಅರ್ಥವಾಗುತ್ತಿಲ್ಲ. ಈ ವರದಿಯನ್ನು ಯಾವ ರೀತಿ, ಯಾವ ಶಾಸ್ತ್ರೀಯ ಆಧಾರದ ಮೇಲೆ ರಚನೆ ಮಾಡಿದರು ? ಭೂಮಿ ಸರ್ವೆಯನ್ನು ಯಾವ ಸೈಂಟಿಸ್ಟ್ ಹೇಗೆ ಮಾಡಿರಬೇಕು ? -ಅವರ ಅಭಿಪ್ರಾಯ ಅರ್ಥವಿಲ್ಲದ ಮಾತು. ತುಂಗಭದ್ರದಲ್ಲಿ 2 ತಿಂಗಳು ನೀರು ಕೊಡುತ್ತೀರಿ, ನೀವು ಹೇಳುವುದರಲ್ಲಿ ಅರ್ಥವಿದೆ ; ಕೃಷ್ಣರಾಜಸಾಗರದಿಂದ 2 ತಿಂಗಳು ನೀರು ಕೊಡುತ್ತೀರಿ, ನೀವು ಹೇಳುವುದರಲ್ಲಿ ಅರ್ಥವಿದೆ ; ಘಟಪ್ರಭಾ, ಮಲಪ್ರಭಾ ಮುಂತಾದ ದೊಡ್ಡ ದೊಡ್ಡ ಪ್ರಾಜೆಕ್ಟುಗಳಿಂದ ನೀರು ಕೊಡುತ್ತೀರಿ, ನೀವು ಹೇಳುವುದರಲ್ಲಿ ಅರ್ಥವಿದೆ. ಆರಿಡ್ ಜೋನಿನಲ್ಲಿ ಮಳೆ ಅಭಾವವಿದೆ, 18 ಇಂಚು ಮಳೆ ಬಂದಿದೆ. ಕೋಲಾರ, ತುಮಕೂರು, ಬಳ್ಳಾರಿ ಜಿಲ್ಲೆಗಳನ್ನು ಬಾಕಿ ಜಿಲ್ಲೆಗಳೊಂದಿಗೆ ಸೇರಿಸಿಕೊಂಡು ಕಂದಾಯ ಯೂನಿಫಾರಂ ಮಾಡುತ್ತೀರಾ ! ಈ ರೀತಿ ಏಕರೂಪತೆ ಸಾಧಿಸುತ್ತೀರಾ ? ಇದು ನಿಮಗೆ ಎಷ್ಟರ ಮಟ್ಟಿಗೂ ನ್ಯಾಯವಲ್ಲ, ಸರಿಯಲ್ಲ. ಇದು ನಿಮ್ಮ ಮನಸ್ಸಿಗೆ ಸರಿ ಎಂದು ಕಾಣುತ್ತದೆಯೇ ಎಂದು ನೀವೇ ಯೋಚನೆ ಮಾಡಿನೋಡಬೇಕು. ಇದರ ಜೊತೆಗೆ ಸೇಲ್ಸ್‌ಟ್ಯಾಕ್ಸ್ ಕೊಡಬೇಕು ; ಬಿಲ್ಡಿಂಗ್ ಟ್ಯಾಕ್ಸ್ ಕೊಡಬೇಕು ; ಇನ್‌ಕಂ ಟ್ಯಾಕ್ಸ್ ಕೊಡಬೇಕು. ಇದರೊಳಗೆ ತಾಲ್ಲೂಕು ಬೋರ್ಡಿನವರು 40 ಪರ್ಸೆಂಟ್‌ಟ್ಯಾಕ್ಸ್ ಹಾಕುತ್ತಾರೆ. ಮತ್ತೆ ಲೈಬ್ರರಿ ಬಿಲ್ ಬೇರೆ ಪಾಸ್ ಮಾಡಿದ್ದೇವೆ. ಅದರ ಪ್ರಕಾರ 5 ಪರ್ಸೆಂಟ್ ಹಾಕುತ್ತಾರೆ. ಈ ರೀತಿ ಹಾಕಿದರೆ ಭೂಮಿ ಇರುವವನು ಏನು ಮಾಡಬೇಕು ? ಅಮೇರಿಕದಿಂದಲೋ, ರಷ್ಯದಿಂದಲೋ, ಜಪಾನಿನಿಂದಲೋ ಟ್ರಾಕ್ಟರುಗಳನ್ನು ತೆಗೆದುಕೊಂಡು ಬಂದು ನೀವೇ ಉಳಬೇಕೇ ಹೊರತು, ಯಾವ ರೈತನೂ ಭೂಮಿ ಇಟ್ಟುಕೊಳ್ಳುವುದಕ್ಕೆ ತಯಾರಿಲ್ಲ, ಅವನು ಭೂಮಿಯನ್ನು ಬಿಟ್ಟುಬಿಡುತ್ತಾನೆ. ಇದನ್ನು ತಾವು ಯೋಚನೆ ಮಾಡಬೇಕು. ಅಗ್ರಿಕಲ್ಚರ್ ಮ್ಯಾಕನೈಸ್ ಮಾಡಬೇಕೆಂದು ಹೊರಟಿದ್ದೀರೋ ? ಮೆಕನೈಸ್ ಮಾಡಬಾರದು ಅಂತ ಇದ್ದರೆ, ಈ ತೆರಿಗೆ ಬೇಡ. ಅಥವ ಮೆಕನೈಸ್ ಮಾಡಬೇಕೆಂದು ತಮ್ಮ ಅಭಿಪ್ರಾಯವಿದ್ದರೆ, ಈ ಲ್ಯಾಂಡ್ ರಿಫಾರಂ ಅನ್ನುವುದು ಬೂಟಾಟಿಕೆ. ಭೂಸುಧಾರಣೆ ಜಾರಿಗೆತರಬೇಕೆಂಬ ಇಚ್ಛೆ ನಿಮಗಿಲ್ಲ. ನಾನು ಪತ್ರಿಕೆಯಲ್ಲಿ ಓದಿದೆ. ಇದೇ ಶಾಸನಸಭೆಯಲ್ಲಿ ಭೂಸುಧಾರಣೆಯನ್ನು ಕೆಲವು ತಿದ್ದುಪಡಿಗಳೊಂದಿಗೆ ಸರಕಾರದವರು ತರುತ್ತಾರೆಂದು. ಅಂಥ ತಿದ್ದುಪಡಿಗಳಿಂದ ಸಾಮಾನ್ಯ ಜನತೆಗೆ ಉಪಯೋಗವಾಗುವುದಿಲ್ಲ. ಇದರಿಂದ ರೈತನಿಗೆ ಭೂಮಿ ಉಳಿಯುತ್ತದೆಯೇ ? 10--20 ಎಕರೆ ಜಮೀನನ್ನು ಇಟ್ಟುಕೊಂಡು ರೈತನಿಗೆ ಜೀವನ ಮಾಡುವುದಕ್ಕೆ ಸಾಧ್ಯವೆ ಅನ್ನುವುದನ್ನು ತಾವೇ ಹೇಳಬೇಕು. ತಾವು ಇದನ್ನು ದೀರ್ಘವಾಗಿ ಯೋಚನೆ ಮಾಡಬೇಕು. ರೆವಿನ್ಯೂ ಸಚಿವರು ಮತ್ತು ಮುಖ್ಯಮಂತ್ರಿಗಳು ಮಾಡಿದ ಭಾಷಣವನ್ನು ಓದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹಾಸನದಲ್ಲಿ, ರೆವಿನ್ಯೂ ಸಚಿವರು ತುಮಕೂರಿನಲ್ಲಿ ಹೇಳಿದರು. ರೈತರು ಅಗ್ರಿಕಲ್ಚರ್ ತಮ್ಮ ಪೂರ್ಣ ವೃತ್ತಿ ಎಂದು ಭಾವಿಸಕೂಡದು ಎಂದು. ಅವರು ಕೆಲವು ಕೈಗಾರಿಕೆಗಳಲ್ಲಿ ಕೂಡ ಪ್ರವೃತ್ತರಾಗಬೇಕು ಎಂದು ಹೇಳಿದ್ದಾರೆ. ಅಂದರೆ, ಮೈಸೂರು ಸರಕಾರ ತರತಕ್ಕಂಥ ಲ್ಯಾಂಡ್ ರಿಫಾರ್ಮ್ಸಿನಿಂದ ಸಣ್ಣ ಸಣ್ಣ ಹಿಡುವಳಿದಾರರಿಗೂ ಅಥವಾ ದೊಡ್ಡ ದೊಡ್ಡ ಹಿಡುವಳಿದಾರರಿಗೂ, ಯಾರಿಗೆ ರಕ್ಷಣೆ ಕೊಡಬೇಕೆಂದು ಹೊರಟಿದ್ದಾರೆ ಎಂದು ನನ್ನ ಮನಸ್ಸಿನಲ್ಲಿ ಒಂದು ಸಂಶಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲರೂ ಸಣ್ಣ ಪುಟ್ಟ ಕೈಗಾರಿಕೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅವರು ತಮ್ಮ ವಿರಾಮ ಕಾಲದಲ್ಲಿ ಕೈಗಾರಿಕೆಗಳ ಮೂಲಕ ಹಣ ಸಂಪಾದನೆ ಮಾಡಬೇಕು ಅಂದಮೇಲೆ ರಾಜ್ಯದಲ್ಲಿ ಅಗ್ರಿಕಲ್ಚರನ್ನು ಮೆಕನೈಸ್ ಮಾಡಿ ಅದನ್ನು ವೃದ್ಧಿ ಮಾಡುತ್ತೇವೆ ಅನ್ನುವ ತರಹ ಹೇಳಿದ ಹಾಗಾಯಿತು. ಅಂದರೆ 1-2-3-4 ಎಕರೆ ಭೂಮಿ ಇಟ್ಟುಕೊಂಡ ರೈತರಿಗೆ ಮುಕ್ತಿ ಇಲ್ಲ. ತಾವು ಈ ಭೂಕಂದಾಯವನ್ನು ರೈತನಮೇಲೆ ಹೇರಿ,

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಟ್ಯಾಕ್ಸ್ ಅಂತ ಹೇಳಿ ತೆಗೆದುಕೊಳ್ಳಬೇಕೆಂದು ಏನು ಮನಸ್ಸಿನಲ್ಲಿ ಮಾಡಿಕೊಂಡಿದ್ದೀರೊ, ಅದನ್ನು ಬಿಟ್ಟುಬಿಡಬೇಕು. ಈ ರೆಸಲ್ಯೂಷನ್ ವಾಪಸು ತೆಗೆದುಕೊಳ್ಳಬೇಕು, ತಾವು ರೈತನಮೇಲೆ ಈ ಕಂದಾಯವನ್ನು ಹಾಕುವುದನ್ನು ಬಿಟ್ಟು, ಬೇರೆ ಯಾವುದಾದರೂ ರೀತಿಯಲ್ಲಿ ಈ 4 ಕೋಟಿ ರೂಪಾಯಿಯನ್ನು ತೆಗೆದುಕೊಳ್ಳಬಹುದು. ರೈತನ ಮೇಲೆ ಈ ತೆರಿಗೆ ಹಾಕುವ ಈ ಯೋಚನೆಯನ್ನು ರೆವಿನ್ಯು ಸಚಿವರು ಬಿಟ್ಟು, ಅದನ್ನು ಬೇರೆ ರೀತಿಯಲ್ಲಿ ಸಾಧಿಸಿಕೊಳ್ಳಬೇಕು. ಹಾಗೆ ಸಾಧನೆ ಮಾಡುವಾಗ, ಸಣ್ಣ ಸಣ್ಣ ಹಿಡುವಳಿದಾರರು ಮತ್ತು ಇನ್ನಾರ್ಯಾರಿಗೆ ಈ ರೆಸಲ್ಯೂಷನ್ನಿನಿಂದ ತೊಂದರೆಯಾಗುತ್ತದೆಯೋ ಅಂಥವರನ್ನು ಬಿಟ್ಟು ಅವರ ಪ್ರೀತಿ ವಿಶ್ವಾಸಗಳನ್ನು ಸಂಪಾದನೆ ಮಾಡುತ್ತೀರಿ ಎಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಸಭಾಪತಿಯವರೇ, ಮಾನ್ಯ ರೆವಿನ್ಯೂ ಸಚಿವರು ಕಂದಾಯ ಉತ್ಪತ್ತಿಯನ್ನು ಹೆಚ್ಚಿಸುವ ನಿರ್ಣಯವನ್ನು ನಮ್ಮ ಮುಂದೆ ತಂದಿದ್ದಾರೆ. ಇದು ಬಹಳ ವ್ಯಸನಕರವಾದ ಸಂಗತಿ. ಆದ್ದರಿಂದ ಈ ದಿವಸ ನಾವು ಕಂದಾಯದ ವಿಚಾರದಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ರೆವಿನ್ಯೂ ಸಚಿವರು ಯುವಕರು. ಅವರು ಕೇಂದ್ರ ಸರಕಾರದ ಆಹಾರ ಉಪಮಂತ್ರಿಗಳಾಗಿ ಜನರ ಕಷ್ಟಕಾರ್ಪಣ್ಯಗಳ ಬಗ್ಗೆ ಚೆನ್ನಾಗಿ ಅನುಭವ ಪಡೆದಿದ್ದಾರೆ. ಪ್ರತಿ ಸಲವೂ ಅವರು ಈ ಸಭೆಯಲ್ಲಿ ಉತ್ತರ ಹೇಳುವಾಗ, ರೈತರ ಬಗ್ಗೆ ಪಾಪ ಅನ್ನತಕ್ಕಂಥ ಒಂದು ಕನಿಕರದ ಮಾತನ್ನು ಆಡುತ್ತಾ ಇದ್ದಾರೆ. ಈ ದಿವಸ ಆ ಒಂದು ಕನಿಕರ ಯಾವ ಕಡೆ ಹೋಗಿದೆ ? ಅದು ಈ ದಿವಸ ಬರುತ್ತಾ ಇಲ್ಲ ಅಂತ ನಾನು ಸಚಿವರಲ್ಲಿ ಮನವಿ ಮಾಡಿಕೊಳ್ಳಬೇಕಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಇದು ನನ್ನ ರಿಪೋರ್ಟ್ ಅಲ್ಲ. 9 ವರ್ಷದ ಕೆಳಗೆ ಈ ಸರ್ವೆ ರಿವಿಜನ್ ಸೆಟಲ್‌ಮೆಂಟ್ ಶುರುವಾಯಿತು. ಆಫೀಸರುಗಳು 9 ವರ್ಷದಿಂದ ಕಷ್ಟಪಟ್ಟು, ಈ ಒಂದು ರಿಪೋರ್ಟನ್ನು ತಯಾರಿಸಿದ್ದಾರೆ, ಅದನ್ನು ಈ ಸಭೆಯ ಮುಂದೆ ಇಟ್ಟಿದ್ದೇನೆ. ಅದರ ವಿಷಯದಲ್ಲಿ ನಿಮ್ಮ ಅಭಿಪ್ರಾಯಗಳನ್ನು ಕೇಳಿದ್ದೇನೆ. ಆದ್ದರಿಂದ ನನ್ನನ್ನು ಇದರಲ್ಲಿ ಏತಕ್ಕೆ ಸೇರಿಸುತ್ತೀರಿ ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ರಾಜ್ಯದಲ್ಲಿರುವ 80 ಭಾಗ ರೈತರ ಕಷ್ಟ ಕಾರ್ಪಣ್ಯಗಳನ್ನು ತಾವು ಅರಿತಂಥವರು. ಅವರು ಕಷ್ಟಗಳನ್ನು ತಾವೇ ಪರಿಹರಿಸತಕ್ಕಂಥವರು. ತಾವು ಪರಿಹರಿಸದಿದ್ದರೆ, ಇಲ್ಲಿರತಕ್ಕಂಥ ಸದಸ್ಯರು ಎಷ್ಟು ಹೇಳಿದರೂ ಅದು ಬಗೆಹರಿಯಲಾರದು, ತಾವು ಮನಸ್ಸು ಮಾಡಿದರೆ ಒಂದು ಕ್ಷಣದಲ್ಲಿ ಬಗೆಹರಿಸಬಹುದು. ತಮ್ಮ ಕನಿಕರದಿಂದ ಈ ಒಂದು ವಿಚಾರದಲ್ಲಿ ರೈತನ ಕಷ್ಟ ಬಗೆಹರಿದೀತು ಎಂದು ನಾನು ಈ ಸಮಯದಲ್ಲಿ ರೈತರ ಪರವಾಗಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

ಇವೊತ್ತು ರೈತರ ಕಷ್ಟ ತಮಗೆಲ್ಲ ಚೆನ್ನಾಗಿ ಗೊತ್ತು. ಗಂಡ ಹೆಂಡಿರಾಗಿರತಕ್ಕವರು ಅವರವರ ಜಮೀನಿನಲ್ಲಿ ಒಂದು ಲಂಗೋಟಿ ಹಾಕಿಕೊಂಡು ಹೆಣ್ಣುಮಕ್ಕಳಿಗೆ ಬಟ್ಟೆ ಇಲ್ಲದೆ ಒಂದು ಸೆರಗನ್ನು ಮೈಮೇಲೆ ಹಾಕಿಕೊಂಡು ಜಮೀನಿನಲ್ಲಿ ಕಷ್ಟಪಡುತ್ತ ಬಿಸಿಲು ಮಳೆಗಳನ್ನು ನೋಡದೆ ಕೆಲಸ ಮಾಡಿ ಹೊಟ್ಟೆಗೆ ಅನ್ನವಿಲ್ಲದೆ ಅರ್ಧ ಹೊಟ್ಟೆ ತಿಂದು ಅವರುಗಳು ಸಂಜೆ ಮನೆಗೆ ಬಂದು ಮಕ್ಕಳನ್ನೂ ಉಪವಾಸವಿಟ್ಟು ತಾವೂ ಉಪವಾಸವಿರುವ ವಿಚಾರಗಳನ್ನೆಲ್ಲಾ ತಾವು ತಿಳಿದುಕೊಂಡಿದ್ದೀರಿ. ಏನು ವ್ಯವಸಾಯ ಮಾಡಿದರೂ ಕೂಡ ಅವರಿಗೆ ಮೂರು ತಿಂಗಳು ಅಥವಾ ಆರು ತಿಂಗಳಿಗೆ ಮೇಲ್ಪಟ್ಟು ಅವರ ಮನೆಯಲ್ಲಿ ಆಹಾರಧಾನ್ಯಗಳು ಇರಲಿಕ್ಕಿಲ್ಲ.

4-00 P.M.

SRI H. R. KESHAVA MURTHY.—On a point of order. We do not know whether the Hon'ble Member is supporting or opposing. If he wants to support, we have no objection but if he wants to oppose in the way he does, then even at the time of voting he must vote against the Government. Please ascertain from him whether he is supporting or opposing.

MR. DEPUTY SPEAKER.—He is only giving his opinion.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹೀಗಿರುವಾಗ ಕಂದಾಯದ ಹೊರೆಯನ್ನು ಅವರ ಮೇಲೆ ಹೊರಿಸುತ್ತಿದ್ದೀರಿ. ಹಿಂದೆ ಕಂದಾಯ ವಿಧಿಸಿರುವುದೂ ಕೂಡ ಒಂದೊಂದು ಭಾಗದಲ್ಲಿ ಒಂದೊಂದು ನಮೂನೆಯಲ್ಲಿದೆ, ಜಾಸ್ತಿಯಾಗಿದೆ. ಹೀಗಿರುವಾಗ ಇದರ ಬಗ್ಗೆ ಆತುರಪಡದೇ ಇದನ್ನು ಸಚಿವರು ವಿಚಾರ ಮಾಡಬೇಕಾಗಿದೆ. ಇವೊತ್ತಿನ ದಿವಸ ಆಹಾರಧಾನ್ಯ ಅವನಿಗಿರುವುದೂ ಇರಲಿ, ಒಂದು ಮನೆ ಕೂಡ ಅವನ ವಾಸಕ್ಕೆ ಇಲ್ಲ. ಹಾಗೂ ವ್ಯವಸಾಯದ ಖರ್ಚು ಒಂದು ಎಕರೆಗೆ ಸುಮಾರು 250 ರೂಪಾಯಿಗಳಷ್ಟು ತರಿ ಜಮೀನಿಗೆ ಬರುತ್ತದೆ ಎಂದು ಇದಕ್ಕೆ ಸಂಬಂಧಪಟ್ಟ ಇಲಾಖೆಯವರು ತಿಳಿಸಿದ್ದಾರೆ. ಆದರೆ ಇದರಲ್ಲಿ ಉತ್ಪತ್ತಿ ಬರುವುದು 220 ರೂಪಾಯಿಗಳಷ್ಟು ಎಂದು ತಿಳಿಸಿದ್ದಾರೆ. ಹೀಗಿರುವಾಗ ಇವರ ಬಗ್ಗೆ ಮಾನ್ಯ ಸಚಿವರು ವಿಚಾರ ಮಾಡಬೇಕು, ಆತುರಪಡಬಾರದು. ಶೇಕಡಾ 80 ಭಾಗದಷ್ಟು ರೈತರು ಇರುವ ಅವರ ಕಣ್ಣೀರಿನ ಸಂಕಟದ ಸುರಿಮಳೆ ಸಚಿವರಿಗೆ ಮನವರಿಕೆಯಾಗಿ ಈ ಒಂದು ದುಃಖದ ಮಡಿಲಲ್ಲಿ ಇರತಕ್ಕ ಈ ರೈತರನ್ನು ಇನ್ನೂ ಹೆಚ್ಚಿನ ಗೋಳಿಗೆ ಅವರು ಭಾಗಿಯಾಗುವಂತೆ ಮಾಡಬಾರದು. ಅವರ ಬಗ್ಗೆ ವಿಚಾರ ಮಾಡಬೇಕು. ರಾಜ್ಯದ ಎಲ್ಲ ಭಾಗಗಳಲ್ಲಿರುವ ಕಂದಾಯದ ಏರುಪೇರುಗಳ ವಿಚಾರದಲ್ಲಿ ಒಂದು ಸೆಲೆಕ್ಟ್ ಕಮಿಟಿಯನ್ನು ಈ ಸಭೆಯಲ್ಲಿ ಮಾಡಿ, ಆ ಕಮಿಟಿಯವರು ಕೂಡ ಇದರ ಬಗ್ಗೆ ಪರಿಶೀಲನೆ ಮಾಡಿ ಎಷ್ಟರಮಟ್ಟಿಗೆ ಇವರ ಮೇಲೆ ಕಂದಾಯವನ್ನು ವಿಧಿಸಬೇಕು, ಎಷ್ಟು ಮಟ್ಟಿಗೆ ವಿಧಿಸಬಾರದು, ಎಷ್ಟು ಎಕರೆ ಇರತಕ್ಕವರಿಗೆ ಕಂದಾಯ ವಜಾ ಮಾಡಬೇಕು; ಎಷ್ಟು ಎಕರೆ ಮೇಲ್ಪಟ್ಟು ಇದ್ದರೆ ಅವರಿಗೆ ಯಾವ ಮಟ್ಟದಲ್ಲಿ ಕಂದಾಯವನ್ನು ವಿಧಿಸಬೇಕು ಎನ್ನತಕ್ಕದ್ದನ್ನೆಲ್ಲಾ ಈ ಕಮಿಟಿಯವರು ಪರಿಶೀಲನೆ ಮಾಡಿ ಪುನಃ ಈ ಸಭೆಯ ಮುಂದೆ ತರತಕ್ಕದ್ದು ಒಳ್ಳೆಯದು ಎಂದು, ಮತ್ತು ಮಾನ್ಯ ರೆವೆನ್ಯೂ ಸಚಿವರು ಇದನ್ನು ವಿಚಾರ ಮಾಡಬೇಕೆಂದು ಅವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅನೇಕ ಸದಸ್ಯರು ಈಗ ಹಣದ ಕೊರತೆ ಇದೆ ಆದಕ್ಕಾಗಿ ಕಂದಾಯವನ್ನು ಜಾಸ್ತಿ ಮಾಡಬೇಕು ಮತ್ತು ಇದರಿಂದ ನಾವು ವಸೂಲು ಮಾಡಿದರೂ ಕೂಡ ಕೇವಲ ಮೂರು ಕೋಟಿ ಚಿಲ್ಲರೆಯಷ್ಟು ಬರಬಹುದು ಮತ್ತು ಅದಕ್ಕಿಂತ ಜಾಸ್ತಿ ಬರುವುದಿಲ್ಲ ಎಂದು ಹೇಳಿದರು. ಕೇವಲ ಮೂರು ಕೋಟಿ ರೂಪಾಯಿಗಳನ್ನು ಮಾತ್ರ ತಾವೇಕೆ ಇದರಿಂದ ಅಪೇಕ್ಷೆ ಪಡಬೇಕು ? ಈ ಹಣವನ್ನು ಬೇರೆ ವಿಧದಲ್ಲಿ ಭರ್ತಿ ಮಾಡಲಿಕ್ಕೆ ಸಾಧ್ಯವಿಲ್ಲವೇ ! ಎನ್ನತಕ್ಕದ್ದನ್ನು ನೀವು ವಿಚಾರಮಾಡಬೇಕಾಗಿದೆ. ಪಟ್ಟಣಗಳಲ್ಲಿರತಕ್ಕ ಆಸ್ತಿಗಳ ಮೇಲೆ ಏಕೆ ಹೆಚ್ಚಿನ ತೆರಿಗೆಗಳನ್ನು ಹಾಕಬಾರದು ? ಇಲ್ಲಿ ಮನೆಗಳನ್ನು ಕಟ್ಟಿಕೊಂಡು ಎಷ್ಟುಮಟ್ಟಿನ ಲಾಭಗಳನ್ನು ಪಡೆಯುತ್ತಿದ್ದಾರೆ ಎಂಬುದನ್ನು ತಾವು ವಿಚಾರ ಮಾಡಬೇಕಾಗಿದೆ. ಇವೊತ್ತು ರೈತ ಒಂದು ದನಕ್ಕೆ ಒಂದು ಕೊಟ್ಟಿಗೆ ಮತ್ತು ಸರಿಯಾದ ಒಂದು ಹುಲ್ಲು ಜೋಪಡಿಯನ್ನು ಹಾಕಿಕೊಳ್ಳುವುದಕ್ಕೆ ಅವನಿಗೆ ಶಕ್ತಿ ಇಲ್ಲ. ಇಂತಹ ಸಂಕಟದಲ್ಲಿರತಕ್ಕ ರೈತನ ಈ ಒಂದು ಗೋಳಾಟದಿಂದ ಅವನನ್ನು ಬಿಡಿಸದೆ ಅವನ ಮೇಲೆ ಇನ್ನೂ ಹೆಚ್ಚಾಗಿ ಟ್ಯಾಕ್ಸನ್ನು ಹಾಕಿ, ಅದನ್ನು ಅವನು ಕೊಡಬೇಕೆಂದು ಸರಕಾರ ತೆಗೆದುಕೊಳ್ಳುವುದು ಅಷ್ಟು ಸಮಂಜಸವಲ್ಲ. ನಮಗೆ ಮೀನುಗಳು ಬೇಕು ಎಂದು ಸರಕಾರ ಸಣ್ಣ ಸಣ್ಣ ಗುಂಡಿಗಳಲ್ಲಿ ನಿಂತಿರುವ ನೀರಿನಲ್ಲಿ ಮೀನು ಹುಡುಕಿದರೆ ಸಿಕ್ಕಲಿಕ್ಕಿಲ್ಲ. ಸಮುದ್ರದಲ್ಲಿ ದೊಡ್ಡ ದೊಡ್ಡ ಬಲೆಗಳನ್ನು ಹಾಕಿ ಬೀಸಿದರೆ ದೊಡ್ಡ ದೊಡ್ಡ ತಿಮಿಂಗಿಲದಂತೆ ಇರುವ ಮೀನುಗಳು ಸಿಕ್ಕೇ ಸಿಗುತ್ತವೆ. ಹಾಗೆ ಸಂಸ್ಥಾನದಲ್ಲಿರತಕ್ಕ ದೊಡ್ಡ ದೊಡ್ಡ ಮೀನುಗಳನ್ನು ಹಿಡಿಯತಕ್ಕ ವ್ಯವಸ್ಥೆ ಮಾಡಬೇಕು. ಸಣ್ಣ ಸಣ್ಣ ಗುಂಡಿಗಳಲ್ಲಿ ಸಿಗುವ ಸಣ್ಣ ಸಣ್ಣ ಮೀನುಗಳನ್ನು ಹಿಡಿದರೆ ಅದರಿಂದೇನು ಪ್ರಯೋಜನವಾದೀತು ? ಇದನ್ನು ಸರಕಾರ ವಿಚಾರ ಮಾಡಬೇಕು. ಶ್ರೀಮಾನ್ ಕೃಷ್ಣಪ್ಪನವರೂ ಕೂಡ ಬಹಳ ಕನಿಕರವುಳ್ಳವರು. ಹಿಂದೆ ಇದ್ದ ಕೃಷ್ಣನಂತೆ ಅವರು ಈಗ ಕಲಿಯುಗದ ಕೃಷ್ಣಪ್ಪನವರಾಗಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ದೇವೇಂದ್ರನಂತೆ ಮಳೆ ಸುರಿಸಿದರೆ ನಾನು ಹಸುವಾಗಿ ಹಾಲನ್ನು ಕರೆಸಿಕೊಡಬಹುದು. (ನಗು)

ಶ್ರೀ ಟಿ. ಡಿ. ದೇವೇಂದ್ರಪ್ಪ.—15 ದಿನಗಳ ಕೆಳಗೆ ನಮ್ಮ ವ್ಯವಸಾಯ ಮಂತ್ರಿಗಳು ಒಂದು ಕಡೆ ಭಾಷಣ ಮಾಡುತ್ತ ಒಂದು ಮಾತನ್ನು ಹೇಳಿದರು. ಅವರು ನಮ್ಮ ಸರಕಾರದಲ್ಲಿ ವ್ಯವಸಾಯ ಖಾತೆಯನ್ನು ಹೊಂದಿರತಕ್ಕ ಸಚಿವರಾಗಿದ್ದಾರೆ. ಅವರು ಈ ರೈತರ ಆರ್ಥಿಕ ಸ್ಥಿತಿ ಉತ್ತಮವಾಗದಿದ್ದರೆ ರೈತರಾಗಿರುವವರು ಇನ್ನು ಮುಂದೆ ಕ್ರಾಂತಿಕಾರರಾದಾರು ಎನ್ನುವ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಮಾನ್ಯ ವ್ಯವಸಾಯ ಶಾಖೆಯ ಮಂತ್ರಿಗಳು ಹೇಳಿರುವ ಮಾತುಗಳನ್ನು ರೆವೆನ್ಯೂ ಸಚಿವರೂ ಕೂಡ ಮನಸ್ಸಿಗೆ ತೆಗೆದುಕೊಂಡು ಇದರ ಬಗ್ಗೆ ವಿಚಾರ ಮಾಡಬೇಕು. ಇಂತಹ ಕಷ್ಟಪಡತಕ್ಕ ಜನಗಳ ಮೇಲೆ ಹೆಚ್ಚು ಹೊರೆಯನ್ನು ಹೊರಿಸಲು ಅವಕಾಶ ಸರಕಾರ ಕೊಡಬಾರದು ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಸ್ವಾಮೀ, ರೈತರಲ್ಲಿ ಇವೊತ್ತು ಕಾರ್ಮಿಕರುಗಳಲ್ಲಿರುವಂತೆ ಒಂದು ಸಂಘದ ಅಥವಾ ಸಂಸ್ಥೆಯಾಗಲೀ ಇಲ್ಲ. ಸರಕಾರದ ಎನ್. ಜಿ. ಓ. ಗಳಿಗೆ ಸಂಘಗಳಿವೆ, ಯಾವ ಡಿಪಾರ್ಟುಮೆಂಟು

(ಶ್ರೀ ಟಿ. ಡಿ. ದೇವೇಂದ್ರಪ್ಪ)

ನೋಡಿದರೂ ಅವರ ಕಷ್ಟಸುಖಗಳನ್ನು ಹೇಳಿಕೊಳ್ಳಲು ಒಂದು ಸಂಘ ಮತ್ತು ಒಂದು ಸಂಸ್ಥೆ ಇರುತ್ತದೆ. ಅವರುಗಳು ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳಲು ಸಂಘಗಳ ಮೂಲಕ ಅವಕಾಶ ಇದೆ. ಆದರೆ ದೇಶದಲ್ಲಿ ಶೇಕಡಾ 80 ಭಾಗದಷ್ಟು ಇರುವ ರೈತಾಪಿ ಜನಕ್ಕೆ ಯಾವ ಸಂಘಗಳಾಗಲೀ ಅಥವಾ ಸಂಸ್ಥೆಗಳಾಗಲೀ ಇಲ್ಲ. ಅವರುಗಳ ಪ್ರತಿನಿಧಿಗಳಾಗಿ ನಾವು ಇಲ್ಲಿ ಕುಳಿತಿರುವ 208 ಜನರೇ ಅವರ ಕಷ್ಟಸುಖಗಳನ್ನು ನೋಡತಕ್ಕವರು ಎಂದು ನಂಬಿಕೊಂಡು ಅವರು ಒಂದು ಮೂಲೆಯಲ್ಲಿ ಕೂತಿದ್ದಾರೆ. ರೈತರ ಪ್ರತಿನಿಧಿಗಳಾಗಿ ಇಲ್ಲಿರುವ ಪ್ರತಿನಿಧಿಗಳು ಬಂದಿದ್ದಾರೆನ್ನುವುದನ್ನು ತಾವು ಜ್ಞಾಪಕಕ್ಕೆ ತೆಗೆದುಕೊಳ್ಳಬೇಕು. ನಮ್ಮ ತಂದೆ ತಾಯಿಗಳು ಅವರ ಹೊಟ್ಟೆಯಲ್ಲಿ ಹುಟ್ಟಿದ ಮೇಲೆ ಅವರ ಋಣವನ್ನು ತೀರಿಸಲೇ ಬೇಕು. ಅಂತಹವರ ಮೇಲೆ ಹೆಚ್ಚು ಹೊರೆಯನು ಅವರ ಮೇಲೆ ಹೊರಿಸುವುದು ಸರಿಯಲ್ಲ. ಇದರ ಬಗ್ಗೆ ವಿಚಾರ ಮಾಡಬೇಕು. ನಮಗೆ ಇವೊತ್ತಿನ ದಿವಸ ಅವರ ಋಣವನ್ನು ತೀರಿಸಲು ನಾವು ಇಲ್ಲಿಗೆ ಬಂದಿದ್ದೇವೆನ್ನುವುದನ್ನು ಜ್ಞಾಪಕಕ್ಕೆ ತೆಗೆದುಕೊಳ್ಳಬೇಕು. ಅವರು ನಮಗೆ ಯಾವ ಸಂಘ ಅಥವಾ ಸಂಸ್ಥೆಗಳು ಇಲ್ಲ ಎಂದು ನಮ್ಮನ್ನೇ ನಂಬಿಕೊಂಡು ಒಂದು ಮೂಲೆಯಲ್ಲಿ ಕುಳಿತಿದ್ದಾರೆ. ತಾವು ಏನು ಹೇಳಿದರೂ ಅವರು ನಮ್ಮ ಅಣ್ಣ ತಮ್ಮಂದಿರು ಇವೊತ್ತು ನಮ್ಮ ರಾಜ್ಯವನ್ನು ಆಳುತ್ತಿದ್ದಾರೆಂದು ಹೇಳುತ್ತಿದ್ದಾರೆ. ಒಂದಾನೊಂದು ದಿನ ಅವರು ಎಚ್ಚೆತ್ತು ತಮ್ಮ ಕಷ್ಟ ನಿಷ್ಠೂರದ ಬಗ್ಗೆ ವಿಚಾರ ಮಾಡಲು ಹೇಳುತ್ತಾರೆ. ಆದುದರಿಂದ ಇಂಥಾದ್ದನ್ನು ಈಗಲೇ ವಿಚಾರ ಮಾಡಬೇಕು. ಇದಕ್ಕೆ ಆತುರ ಪಡಬಾರದು. ಇದನ್ನು ಪರಿಶೀಲಿಸಲು ಎಲ್ಲ ಭಾಗದಿಂದ ಬಂದಿರತಕ್ಕ ಸದಸ್ಯರು ಇರತಕ್ಕಂಥ ಒಂದು ಕಮಿಟಿ ಮಾಡಿ ಅವರು ಇದನ್ನೆಲ್ಲಾ ಸರಿಯಾಗಿ ಪರಿಶೀಲನೆ ಮಾಡಿ ಜಾಸ್ತಿ ಮಾಡುವುದು ಆಗಲಿ ಕಡಿಮೆ ಮಾಡುವುದು ಆಗಲಿ ಈ ಬಗ್ಗೆ ಒಂದು ವರದಿ ಒಪ್ಪಿಸಿದ ಮೇಲೆ ಅದರ ಬಗ್ಗೆ ಈ ಸಭೆಯಲ್ಲಿ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು ಮತ್ತು ಹಾಗೆ ಮಾಡಬೇಕೆಂದು ಅಧ್ಯಕ್ಷರ ಮುಖಾಂತರ ಸಚಿವರಿಗೆ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಪೂರೈಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇಟ್ಟಿರತಕ್ಕಂಥ ರೀ ಸೆಟ್ಲಮೆಂಟ್ ರಿಪೋರ್ಟ್ಸ್‌ಗಳ ಬಗ್ಗೆ ಮಾತನಾಡಬೇಕಾದ ಸಂದರ್ಭ ಬಂದುದು ಬಹಳ ವಿಷಾದಕರ ವಿಚಾರ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಈ ಮೊದಲು ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀಮಾನ್ ದೇವೇಂದ್ರಪ್ಪನವರು ಹೇಳಿದ ಕೆಲವು ಮಾತುಗಳನ್ನು ಒಪ್ಪಿಕೊಳ್ಳಬೇಕಾಗಿದೆ. ಈ ಹಿಂದೆ ಜನರಲ್ ಡಿಬೇಟ್ ಆಗತಕ್ಕಂಥ ಕಾಲದಲ್ಲಿ ಮಾತನಾಡಿದ ಶ್ರೀ ಎಂ. ಆರ್. ಪಾಟೀಲ್ ಅವರು ರೈತನ ವಿಚಾರದಲ್ಲಿ ಅಮೋಘವಾಗಿ ಭಾಷಣ ಮಾಡಿದರು. ರೈತನ ಕಷ್ಟವನ್ನು ಚೆನ್ನಾಗಿ ಚಿತ್ರಿಸಿದ್ದಾರೆ ಎನ್ನುವ ವಿಚಾರ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ನಾವೂ ಕೂಡ ಸಂದರ್ಭ ಒದಗಿದಾಗ ರೈತನ ಇಂದಿನ ಹೀನ ಸ್ಥಿತಿಯ ಬಗ್ಗೆ ಆಗಾಗ್ಗೆ ಸರಕಾರದ ಗಮನಕ್ಕೆ ತಂದಿದ್ದೇವೆ. ಇವತ್ತಿನ ದಿವಸ ಮಾರ್ಕೆಟ್ಟಿನಲ್ಲಿ ಇರತಕ್ಕ ಬೆಳೆಗಳ ಬೆಲೆಯಿಂದ ರೈತನಲ್ಲಿ ನಿರಾಶೆ ಬೆಳೆಯುತ್ತಿದೆ. ಈ ರಿವಿಜನ್ ಸೆಟಲ್‌ಮೆಂಟ್ ವಿಚಾರದಲ್ಲಿ ರೈತನಿಗೆ ತಪ್ಪು ತಿಳುವಳಿಕೆಯುಂಟಾಗಿದೆ. ಈಗ ಹೊಸದಾಗಿ ರೈತನ ಮೇಲೆ ಹೇರತಕ್ಕಂಥ ಕಂದಾಯದ ರೀತಿ ನೀತಿ ಬಗ್ಗೆ ಯೋಚನೆ ಮಾಡತಕ್ಕದ್ದು ಅಗತ್ಯ ಎಂದು ಹೇಳಲು ಇಷ್ಟಪಡುತ್ತೇನೆ.

ಇಂದು ರೈತ ಹೇಗೆ ಇದ್ದಾನೆ, ಅವನ ಸ್ಥಿತಿ ಏನು ಇದೆ ಎನ್ನುವುದನ್ನು ಆಳುವ ಪಕ್ಷದ ಸದಸ್ಯರು ಅವರಿಗೆ ಏನಾದರೂ ಪರಿಚಯ ಇದೆಯೇ ಎಂದು ನೋಡುವುದಾದರೆ ಒಬ್ಬರಿಗೂ ರೈತನ ಕಷ್ಟ ಅರ್ಥವಾಗಿಲ್ಲ ಎಂದು ಕಂಡು ಬರುತ್ತದೆ. ಬೆಂಗಳೂರು ಪಟ್ಟಣದಲ್ಲಿ ವ್ಯವಸಾಯವನ್ನು ಅವಲಂಬಿಸಿ ಇರತಕ್ಕಂಥ ಜನ ವರ್ಷೇ ವರ್ಷೇ ಹೊಸ ಹೊಸ ಕಟ್ಟಡಗಳನ್ನು ಕಟ್ಟಿಸುತ್ತಿದ್ದಾರೆ. ಒಂದು ಸೈಟ್ ಕೊಳ್ಳಲು ಎಷ್ಟು ಬೆಲೆಯಾದರೂ ಅಷ್ಟು ಹಣ ಕೊಡುತ್ತಿದ್ದಾರೆ ಈ ರೀತಿ ನೀತಿ ನೋಡಿದರೆ ಹಳ್ಳಿಗಳಲ್ಲಿ ಹಿಂದಿನಿಂದ ಬಂದಂಥ ತಾತ ಮುತ್ತಾತರ ಮನೆಗಳಿಗೆ ಏನಾದರೂ ಮಣ್ಣು ಮೆತ್ತುವುದಕ್ಕೆ ಸಾಧ್ಯವಾಗಿದೆಯೇ ಎನ್ನುವುದನ್ನು ಅವರು ನೋಡಿದ್ದಾರೆಯೇ ? ನಮ್ಮ ದೇಶದಲ್ಲಿ ಇರತಕ್ಕಂಥ ರೈತನು ಸಾಮಾನ್ಯವಾಗಿ ನಾಲ್ಕು ಎಕರೆ ಐದು ಎಕರೆ ಜಮೀನು ಇಟ್ಟುಕೊಂಡಿರುತ್ತಾನೆ. ಇಷ್ಟು ಜಮೀನು ಪರಮಾವಧಿಯಾಗಿರುತ್ತದೆ. ಕೆಲವರು ಹತ್ತಿಪ್ಪತ್ತು ಎಕರೆ ಇಟ್ಟುಕೊಂಡಿರಬಹುದು. ಸಾಮಾನ್ಯವಾಗಿ 5 ಎಕರೆ ಜಮೀನು ಮಡಗಿಕೊಂಡಿರತಕಂಥ ರೈತರು ಅನಕ್ಷರಸ್ಥರು ಆಗಿದ್ದು ಮಳೆ ನೀರನ್ನು ನಂಬಿಕೊಂಡು ವ್ಯವಸಾಯ ಉಪಕರಣ ಗೊಬ್ಬರ ಇಲ್ಲದೆ ಬೆಳೆ ಬೆಳೆಯುತ್ತಾರೆ. ಅಂಥ ರೈತನು ಬೆಳೆದದ್ದು ಅವನ ಸಂಸಾರಕ್ಕೆ ಸಾಕಾಗುವುದಿಲ್ಲ. ಇತ್ತೀಚೆಗೆ ಜಾಯಿಂಟ್ ಫ್ಯಾಮಿಲಿ ಇರುವುದು ಬಹು ಮಟ್ಟಿಗೆ ಕಡಿಮೆಯಾಗಿದೆ. ಒಂದು ಸಂಸಾರದಲ್ಲಿ ಎಂಟುಹತ್ತು ಜನ ಇರುತ್ತಾರೆ. ವ್ಯವಸಾಯವನ್ನು ಉತ್ತಮಪಡಿಸುವುದಕ್ಕೆ ಮನೆ ಮಂದಿಯೆಲ್ಲಾ ದುಡಿದರೆ ಚೆನ್ನಾಗಿರುತ್ತದೆ. ಆದರೆ

ಈಗಿನ ಆಧುನಿಕ ಕಾಲದಲ್ಲಿ ಒಟ್ಟು ಕುಟುಂಬ ಪದ್ಧತಿ ಹೋಗಿ ಬಿಟ್ಟಿದೆ. ಒಬ್ಬನ ಮದುವೆಯಾದ ತಕ್ಷಣ ಮನೆ ಒಡೆದು ವಿಭಾಗ ಮಾಡತಕ್ಕ ಪದ್ಧತಿ ಬಂದಿದೆ. ಜಮೀನು ಕೂಡ ಹರಿದು ಹಂಚಿ ಬಿಡುತ್ತಾರೆ. ಈ ಏರ್ಪಾಡು ಜಾರಿಗೆ ಬಂದು ಬಿಟ್ಟಿದೆ. ತಂದೆಯ ಆಸ್ತಿ ಮಕ್ಕಳು ಹಂಚಿಕೊಳ್ಳುತ್ತಾರೆ 5 ಎಕರೆ ಜಮೀನು ಇದ್ದು 10 ಜನ ಮಕ್ಕಳು ಇದ್ದರೆ ಸಮವಾಗಿ ಪಾಲು ಮಾಡಿದ ನಂತರ ಒಬ್ಬೊಬ್ಬರಿಗೆ ಅರ್ಧ ಎಕರೆ ಜಮೀನು ಬರುತ್ತದೆ. ಅದನ್ನು ನಂಬಿಕೊಂಡು ಅವನ ಮಕ್ಕಳುವಾರಿ ಬದುಕುವುದು ಹೇಗೆ? ಮಕ್ಕಳಿಗೆ ವಿದ್ಯಾಭ್ಯಾಸ ಸೌಕರ್ಯ ಒದಗಿಸುವುದು ಹೇಗೆ? ಹಣ ಸಂಪಾದನೆ ಮಾಡುವುದು ಹೇಗೆ? ಒಂದು ಎಕರೆ ಜಮೀನು ವ್ಯವಸಾಯ ಮಾಡಲು ಎಷ್ಟು ಖರ್ಚು ಬರುತ್ತದೆ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು. 5 ಎಕರೆ ಜಮೀನು ಇರತಕ್ಕಂಥ ರೈತನಿಗೆ ಉಳುಮೆ ಮಾಡುವುದಕ್ಕೆ ಗೊಬ್ಬರ ಬೀಜ ಇವುಗಳಿಗೆ 720 ರೂಪಾಯಿ ಖರ್ಚು ಬರುತ್ತದೆ. ಇದಲ್ಲದೆ ಗಂಡ ಹೆಂಡತಿ ಮಕ್ಕಳು ಎಲ್ಲರೂ ಬಿಸಿಲನಲ್ಲಿ ದುಡಿಯುತ್ತಾರೆ. ಒಂದು ಎಕರೆಗೆ ಎರಡೂವರೆ ಇಂದ ಮೂರು ಪಲ್ಲ ರಾಗಿ ಪರಮಾವಧಿ ಬೆಳೆ ಬರುತ್ತದೆ ಎಂದು ತಿಳಿದುಕೊಂಡರೆ ಒಟ್ಟು 15 ಪಲ್ಲ ರಾಗಿ ಬರುತ್ತದೆ. ಒಂದು ಪಲ್ಲ ರಾಗಿ ಬೆಲೆ 50 ರೂ. ಎಂದು ಇಟ್ಟುಕೊಂಡರೆ ಒಟ್ಟು ಅವನಿಗೆ 750 ರೂಪಾಯಿ ಆಯಿತು. ಇದರಲ್ಲಿ ಅವನು ಕಂದಾಯ ಕೊಡಬೇಕು. ಬಾಗಾಯಿತು ಜಮೀನು ಇದ್ದರೆ 23 ರೂ. ಕಂದಾಯ ಇದೆ. ತರಿ ಜಮೀನು ಇದ್ದರೆ 17ರೂ. ಕಂದಾಯ ಇವೆ. ಡ್ರೈ ಜಮೀನಿಗೆ 4ರೂ. 17ಪೈ. ಕಂದಾಯ ಕೊಡಬೇಕಾಗುತ್ತದೆ. ಇಷ್ಟು ಕಂದಾಯ ಕೊಡುವುದರ ಜೊತೆಗೆ ಪಂಚಾಯತ್ ಆಕ್ಟ್ ಪ್ರಕಾರ ಹಣ ವಸೂಲ್ಮಾಡುವುದಲ್ಲದೆ ಇತರೇ ಸೆಸ್ಸುಗಳನ್ನು ಸರಕಾರಕ್ಕೆ ಕೊಡಬೇಕಾಗುತ್ತದೆ. ಇಷ್ಟು ಹಣ ಕೊಟ್ಟ ಮೇಲೆ ರೈತ ತನ್ನ ಹೆಂಡರು ಮಕ್ಕಳನ್ನು ಸಾಕುವುದು ಹೇಗೆ? ಮಕ್ಕಳನ್ನು ಚನ್ನಾಗಿ ವಿದ್ಯಾವಂತರನ್ನಾಗಿ ಮಾಡುವುದು ಹೇಗೆ? ಇದು ರಿವಿಜನ್ ಸೆಟ್ಲಮೆಂಟ್ ರಿಪೋರ್ಟ್ ತಯಾರಿಸಿದವರ ಮನಸ್ಸಿಗೆ ಬರಲಿಲ್ಲವೇ ಎಂಬುದು ನನಗೆ ಅರ್ಥವಾಗುವುದಿಲ್ಲ. ಸಮಯಕ್ಕೆ ಬೇಕಾದಂಥ ಯಾವುದಾದರೂ ಒಂದು ಸಹಾಯ ಬೇಕಾಗಿದ್ದರೆ ಅಂಥಾ ಸಹಾಯ ಒದಗಿಸಲು ಯಾರೂ ಹೋಗುವುದಿಲ್ಲ. ಇವತ್ತು ಏನಾಗಿದೆ ಎಂದರೆ ಅನಕ್ಷರಸ್ಥನಾದ ರೈತನ ಲಾಭವನ್ನು ಎಲ್ಲರೂ ಪಡೆಯುತ್ತಿದ್ದಾರೆ. ಇಂದಿನ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಜೀವನದಲ್ಲಿ ಇರತಕ್ಕಂಥವರು ಕೆಲವರು ಅಧಿಕಾರಿಗಳು, ವಿದ್ಯಾವಂತರು ಇಂಥ ಪರಿಸ್ಥಿತಿಯ ಲಾಭಪಡೆಯುತ್ತಿದ್ದಾರೆ. ರೈತ ಅವರ ಸೇವೆ ಮಾಡಬೇಕಾಗಿದೆ. ಇದಲ್ಲದೆ ಲಾಯರುಗಳು ಒಂದಲ್ಲೊಂದು ರೀತಿಯಲ್ಲಿ ರೈತನನ್ನು ಹರಿದು ತಿನ್ನುತ್ತಿದ್ದಾರೆ. ರೈತನನ್ನು ಉಳಿಸಿಕೊಳ್ಳತಕ್ಕಂಥ ಜನ ಯಾರೂ ಇಲ್ಲ.

ಹೊಸದಾಗಿ ಜಮೀನು ಕೊಟ್ಟುಬಿಟ್ಟರೆ ಹೇಗೂ ಈ ಜನ ಸಮಾಧಾನವಾಗಿ ಸುಖವಾಗಿ ಇರುತ್ತಾರೆ ಎಂದು ತಿಳಿದುಕೊಂಡಿರತಕ್ಕದ್ದು, ಭೂಹಿಡುವಳಿಯಲ್ಲಿ ಮಿತಿ ಮಾಡುವುದರಿಂದ ಹೆಚ್ಚು ಬೆಳೆ ಬೆಳೆಯುತ್ತದೆ ಅನ್ನತಕ್ಕದು ಭ್ರಮೆಯಲ್ಲದೆ ನ್ಯಾಯವಾದ ಮಾತು ಆಗಲಾರದು ಎಂದು ನನ್ನ ಅಭಿಪ್ರಾಯ. ಏಕೆಂದರೆ ಸಣ್ಣ ಹಿಡುವಳಿಗಳಿಂದ ಅವನ ಕುಟುಂಬಕ್ಕೆ ಬೇಕಾದಂತಹ ಆಹಾರ ದಿನಸಿಗಳನ್ನು ಬೆಳೆಯುವುದಕ್ಕೆ ಕಷ್ಟವಾಗುತ್ತದೆ ಇವತ್ತು ನಮಗೆ ಈ ಆಹಾರಕ್ಕೆ ಏಕೆ ಇಷ್ಟೊಂದು ಬಿಕ್ಕಟ್ಟು ಉಂಟಾಗಿದೆ, ಇದಕ್ಕೆ ಕಾರಣವೇನು ಎಂದರೆ ಇದನ್ನು ಯಾರೂ ಯೋಚವೆ ಮಾಡಿಲ್ಲ. ಸಾಧಾರಣವಾಗಿ ಇರತಕ್ಕ ಬೆಳೆಗಳು ಎಂದರೆ ಕಬ್ಬು, ಹೊಗೇಸೊಪ್ಪು, ಆಲೂಗಡ್ಡೆ ಈ ರೀತಿಯಾದ ಬೆಳೆಗಳನ್ನು ಹೆಚ್ಚು ಪ್ರದೇಶದಲ್ಲಿ ಇವತ್ತು ಬೆಳೆಯುತ್ತಾ ಇದ್ದಾರೆ, ಆಹಾರ ಬೆಳೆಗಳಿಗೆ ಅಷ್ಟು ಹೆಚ್ಚು ಮುತುವರ್ಜಿ ಕೊಡುತ್ತಾ ಇಲ್ಲ. ಆದ್ದರಿಂದಲೇ ಆಹಾರದ ಅಭಾವ ವಿಪರೀತವಾಗಿದೆ. ಅದೂ ಅಲ್ಲದೆ ಅವನಿಗೆ ಇದು ಒಂದೇ ಕಂದಾಯವೇ ಎಂದರೆ ಅಲ್ಲ. ರೆವಿನ್ಯೂ ಕಂದಾಯ, ಎಕ್ಸೈಜ್ ಕಂದಾಯ, ಸ್ಟ್ಯಾಂಪ್ ಕಮ್ಯೂನಿಕೇಷನ್, ಫಾರೆಸ್ಟ್ ಈ ಎಲ್ಲಾ ಭಾಗದಲ್ಲೂ ಒಂದಲ್ಲಾ ಒಂದು ರೂಪದಲ್ಲಿ ಅವನು ಕಂದಾಯವನ್ನು ಕೊಡುವವನಾಗಿದ್ದಾನೆ. ಆದ್ದರಿಂದ ಅತನ ಮೇಲೆ ಈ ರೀತಿಯ ಹೆಚ್ಚಿನ ಒಂದು ಕಂದಾಯವನ್ನು ಹಾಕುವುದು ನಿಜವಾಗಿಯೂ ಬಹಳ ಪಾಪ ಮಾಡತಕ್ಕ ಕೆಲಸ, ಸರ್ಕಾರದವರು ಇದಕ್ಕೆ ಕೈಹಾಕಬಾರದು. ಇದಕ್ಕೆ ಕೈಹಾಕುವುದರಿಂದ ಮಲಗಿರತಕ್ಕ ಒಂದು ಸಿಂಹವನ್ನು ಕೆಣಕಿದ ಹಾಗೆ ಆಗುತ್ತದೆ. ಇದರ ಪರಿಣಾಮ ನೆಟ್ಟಗೆ ಆಗುವುದಿಲ್ಲ. ಕೆಳಗೆ ಬಿದ್ದವನು ಮತ್ತೆ ಏಳಬೇಕಾಗುತ್ತದೆ. ಅವನು ಎದ್ದ ಕೂಡಲೇ ಕ್ರಾಂತಿಯಾಗುತ್ತದೆ. ಆ ಕ್ರಾಂತಿಯನ್ನು ನಿಲ್ಲಿಸುವುದಕ್ಕೆ ಸರ್ಕಾರಕ್ಕೆ ಆಗಲಿ ಮತ್ತೆ ಯಾರಿಗೆ ಆಗಲಿ ಸಾಧ್ಯವಾಗುವುದಿಲ್ಲ ಎಂದು ಹೇಳಿ ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಇವತ್ತು ಒಂದು ರೂಪಾಯಿಗೆ ಒಂದು ಸೇರು ಅಕ್ಕಿ ಆಗಿರತಕ್ಕದ್ದು ನಿಜ. ಆದರೆ ಅದೇ ಪ್ರಮಾಣದಲ್ಲಿ ಅವನಿಗೆ ಬೇಕಾದಂತಹ ಇತರ ಎಲ್ಲಾ ವಿಧವಾದ ಪದಾರ್ಥಗಳೂ ಕೂಡ ಅವುಗಳ ಬೆಲೆ ಹೆಚ್ಚಾಗಿದೆ. ಹಿಂದೆ ಎರಡೂವರೆ ಆಣೆಗೆ ಒಂದು ಕುಳ ಬರುತ್ತಾ ಇತ್ತು.. ಇವತ್ತು ಅದಕ್ಕೆ ಒಂದು ರೂಪಾಯಿ ಆಗಿದೆ. ಅವನಿಗೆ ಬೇಕಾದ ಒಂದು ಅಂಗಿ, ಒಂದು ಚಡ್ಡಿ, ಬಟ್ಟೆ ಹೊಲಿಸಬೇಕಾದರೆ ಒಂದು ಎರಡು ಆಣೆಕೊಟ್ಟು ತಂದರೆ ಸಾಕಾಗುತ್ತಾ ಇತ್ತು, ಇವತ್ತು ಐದು ರೂಪಾಯಿ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಆಗಿದೆ. ಮತ್ತು ಖಾಯಿಲೆ ಬಂದಾಗ ಹಿಂದೆ ಯಾವುದೋ ಒಬ್ಬ ಪಂಡಿತರ ಹತ್ತಿರ ಹೋಗಿ ಯಾವುದೋ ಒಂದು ಮದ್ದು ತಂದು ಖಾಯಿಲೆ ವಾಸಿ ಮಾಡಿಕೊಳ್ಳುತ್ತಾ ಇದ್ದ, ಈವತ್ತು ಅವನಿಗೆ ಜ್ವರ ಬಂದರೆ ಆಸ್ಪತ್ರೆಗೆ ಹೋಗಿ ಹತ್ತಾರು ಸಾರಿ ಡಾಕ್ಟರ ಹತ್ತಿರ ಅಲೆದು 30-40 ರೂಪಾಯಿ ತರಬೇಕು. ಇಂತಹ ಪ್ರಸಂಗ ಬಂದಿದೆ. ರೈತನ ಜೀವನದಲ್ಲಿ ಹೀಗೆ ಅವನ ಇತರ ಎಲ್ಲಾ ಬಾಬುಗಳಲ್ಲೂ ಸಹ ಒಂದಕ್ಕೆ 12-15 ಪಟ್ಟು ಧಾರಣವಾಸಿ ಏರಿದ್ದದ್ದನ್ನು ಗಮನಕ್ಕೆ ತೆಗೆದುಕೊಳ್ಳದೇ ಬರೀ ಆಹಾರ ದಿನಸಿ ವಿಚಾರದಲ್ಲಿ ಜಾಸ್ತಿಯಾಗಿದೆ ಆದ್ದರಿಂದ ಅವನು ಕೊಡಬಲ್ಲ, ರೈತನೇ ಪುಣ್ಯವಂತನಾಗಿದ್ದಾನೆ ಎಂದು ತಿಳಿದುಕೊಂಡರೆ ಅದು ಶುದ್ಧಾಂಗ ತಪ್ಪು. ಈ ಅಭಿಪ್ರಾಯವನ್ನು ತಾವು ಬಿಡಬೇಕು.

ಇನ್ನೊಂದು ವಿಚಾರವನ್ನು ಹೇಳುತ್ತೇನೆ ಸೆಟ್ಲಮೆಂಟ್ ಆಫೀಸರು ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಬರೆದಿದ್ದಾರೆ ಎಂದು ಹೇಳುತ್ತಾ ಇದ್ದೀರಿ. ಕ್ಲೈಮ್ಯಾಟಿಕ್ ಕಂಡೀಷನ್, ರೈನ್ ಫಾಲ್ ಹೀಗೆ 10-12 ಕಾರಣಗಳನ್ನು ಕೊಟ್ಟಿದ್ದೀರಿ. ಒಂದು ಉದಾಹರಣೆಯನು ಕೊಡುತ್ತೇನೆ. ನಾಗಮಂಗಲ ತಾಲ್ಲೂಕು ಇದೆ ತೆಂಗಿನಕಾಯಿ ಕ್ಲಾಸಿಫಿಕೇಷನ್ ಮಾಡಿರುವುದನು ನೋಡಿದರೆ, ಕ್ಲಾಸಿಫಿಕೇಷನ್ ಮಾಡಿರತಕ್ಕ ರೀತಿನೀತಿ ನೋಡಿದರೆ ಆಶ್ಚರ್ಯವಾಗುತ್ತದೆ. ಅಲ್ಲಿ ಮೊದಲನೆಯ ತರಗತಿಯನ್ನು ನಾಲ್ಕು ಭಾಗವಾಗಿ ವಿಂಗಡಿಸಿದ್ದಾರೆ. ಈ ನಾಲ್ಕು ಭಾಗಗಳು ನಾಗಮಂಗಲ ತಾಲ್ಲೂಕಿನಲ್ಲಿ ಎಲ್ಲಿದೆಯೋ ಕಾಣೆ. ಅಲ್ಲಿಬರೀ ಕಲ್ಲು ಗುಡ್ಡ ಇರತಕ್ಕ ಪ್ರದೇಶ. ಈ ಪ್ರದೇಶದಲ್ಲಿ ತೆಂಗಿನಕಾಯಿ ಎಷ್ಟು ಬರುತ್ತದೆ ಎಂಬುದನ್ನು ಹೇಳಿದ್ದಾರೆ. ನನಗೆ 10 ಎಕರೆ ತೆಂಗಿನ ತೋಟ ಇದೆ. ತೆಂಗಿನ ತೋಟದ ಒಡೆಯ ನಾನು, ಯುಗಾದಿ ದಿವಸ 15 ರೂಪಾಯಿ ಕೊಟ್ಟು ತೆಂಗಿನಕಾಯನ್ನು ತೆಗೆದುಕೊಂಡು ಹೋದೆ. ಹೀಗಿರುವಾಗ ಸಿಕ್ಕಾಪಟ್ಟೆ ಕಂದಾಯ ಹಾಕಿದರೆ ಏನು ಮಾಡುವುದಕ್ಕಾಗುತ್ತದೆ ? ತಾವು ಪರೀಕ್ಷೆ ಮಾಡುವುದಿಲ್ಲ—ಒಂದು ಮರದಲ್ಲಿ 1000-1500 ಕಾಯಿ ಬರುತ್ತದೆ ಎಂದು ಬರೆಯುತ್ತಾರೆ. ನಾನು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಹೇಳುವುದಕ್ಕೆ ಇಷ್ಟಪಡುವುದು ಇಷ್ಟೆ, ನನಗೆ ಇರತಕ್ಕ 400 ಮರದಲ್ಲಿ ಬರತಕ್ಕ 1500 ಕಾಯಿಗಳನ್ನು ತಮಗೇ ಕಂಟ್ರಾಕ್ಟ್ ಕೊಡುವುದಕ್ಕೆ ತಯಾರಾಗಿದ್ದೇನೆ; ಅದನ್ನು ತೆಗೆದುಕೊಂಡು ಅದರಿಂದ ಬರತಕ್ಕ ಉತ್ಪನ್ನದಿಂದ ಕಂದಾಯವನ್ನು ತಾವೇ ತೆಗೆದುಕೊಂಡು ಬಿಡಿ. ಇಷ್ಟೆಲ್ಲಾ ಕಷ್ಟ ಏಕೆ ? ಇನ್ನೊ ಒಂದು ಕೆಲಸವಾಡಿ ನಿಮ್ಮ ಸೆಕ್ರೆಟೇರಿಯಟ್‌ನಲ್ಲಿರತಕ್ಕ ಕನಿಷ್ಠ ಸಂಬಳ ಬರತಕ್ಕ ಒಬ್ಬ ಜವಾನ ಎಂದರೆ ಅವನಿಗೆ 75 ರೂಪಾಯಿ ಸಂಬಳ ಬರುತ್ತದೆ, ಅದೇ ರೀತಿ ನಮ್ಮ ರೈತನ ಸಂಸಾರದಲ್ಲಿರತಕ್ಕ ಪ್ರತಿಯೊಬ್ಬರಿಗೂ ಯಜಮಾನನಿಂದ ಹಿಡಿದು ಅವನ ಮನೆಯಲ್ಲಿ ಇರತಕ್ಕ ಪ್ರತಿಯೊಬ್ಬರಿಗೂ 60 ರೂಪಾಯಿನಂತೆ ಸಂಬಳ ಕೊಡಿ, ನಿಮ್ಮ ಭೂಮಿಯನ್ನು ನೀವೇ ತೆಗೆದುಕೊಳ್ಳಿ. ರಷ್ಯಾ ವ್ಯವಸ್ಥೆ ಅಥವಾ ಚೈನಾ ವ್ಯವಸ್ಥೆಮಾಡಿ. ಸುಮ್ಮನೆ ಈ ರೀತಿ ರೈತನನ್ನು ಗೋಳು ಹುಯ್ದುಕೊಳ್ಳುವುದು ಸರಿಯಲ್ಲ. ಈ ರೀತಿ ಅನ್ಯಾಯ ಮಾಡುತ್ತಾ ಇರುವುದು, ಹೊಟ್ಟೆಕಿಚ್ಚುಪಡುವುದರಿಂದ ಅವನ ಮೇಲೆ ಮಾರಿ ಕಣ್ಣು ಹಾಕುವುದರಿಂದ ರೈತಾಪಿ ಜನರಿಗೆ ಬಹಳ ಕಷ್ಟವಾಗುತ್ತದೆ. ಅದರಲ್ಲೂ ಹೊಟ್ಟೆಗೆ ಇಲ್ಲದೇ ಇರುವುದು ಕಾಲಕ್ಕೆ ಸರಿಯಾಗಿ ಮಳೆಯಾಗದೇ ಇರುವುದು ಇವೆಲ್ಲವೂ ಕೂಡ ಈ ಅಧರ್ಮದಿಂದ ಎಂದು ಘಂಟಾಘೋಷವಾಗಿ ಈ ಸಮಯದಲ್ಲಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಮನಸ್ಸಿಗೆ ಬಹಳವಾಗಿ ವ್ಯಥೆಯಾಗುತ್ತದೆ. ಸುಮ್ಮನೆ ನೀವು 28 ಜನ ಮಂತ್ರಿಗಳು ಇದ್ದೀರಿ ರೈತನಿಗಾಗಿ ನೀವು ಮಾಡುತ್ತಾ ಇರುವುದಾದರೂ ಏನು ? ಯಾವ ರೈತನ ಕಷ್ಟ ಸುಖ ನೀವು ನೋಡುತ್ತಾ ಇದ್ದೀರಿ ? ರೈತರ ಕಷ್ಟಸುಖ ನೋಡಬೇಕಾದ ನೀವೇ ಹೀಗಾದರೆ ಇನ್ನು ಅವರ ಕಷ್ಟಸುಖವನ್ನು ಯಾರಲ್ಲಿ ಹೇಳಿಕೊಳ್ಳಬೇಕು ?

ಶ್ರೀ ಎಂ. ವಿ. ಕೃಷ್ಣಪ್ಪ.—ತಮ್ಮ ಮುಂದೆ ರಿವಿಜನ್ ಸೆಟ್ಲ್‌ಮೆಂಟ್ ರಿಪೋರ್ಟ್ ಇದೆ. ಗ್ರಾಸ್ ಇನ್‌ಕಂ ಮೇಲೆ ಆರೂಕಾಲು ಪರ್ಸೆಂಟ್ ಹಾಕಬೇಕು ಎಂಬ ಒಂದು ತತ್ವವನ್ನು ಇಟ್ಟುಕೊಂಡಿದ್ದಾರೆ ಇದು ಸರಿಯಲ್ಲ ಎನ್ನುವುದಾದರೆ ತಾವು ಎಷ್ಟು ಹಾಕಬೇಕು ಎಂಬುದನ್ನು ಹೇಳಿ.

ಶ್ರೀ ಟಿ. ಎನ್. ಮಾದಪ್ಪಗೌಡ.—5 ಎಕರೆಗಿಂತ ಕಡಿಮೆ ಇರತಕ್ಕ ಜಮೀನ್ದಾರರನು ಈ ಕಷ್ಟಕ್ಕೆ ಸಿಕ್ಕಿಸಬೇಡಿ. ಅವರನ್ನು ಬಿಟ್ಟರೆ ಬೇರೆ ಇನ್ನಾದರೂ ನಿಮಗೆ ಸಿಕ್ಕುವುದಿಲ್ಲವೇನು ? ಮೂರೂವರೆ ಕೋಟಿ ರೂಪಾಯಿ ಹೆಚ್ಚು ಸಂಪಾದನೆ ಬರಬೇಕಾದರೆ ಪ್ರೊಹಿಬಿಷನ್‌ನ್ನು ತೆಗೆದು ಹಾಕಿಬಿಡಿ ಕೋಟ್ಯಾಂತರ ರೂಪಾಯಿ ಬರುತ್ತದೆ. ಆ ರೀತಿಯಾಗಿ ಸಂಪಾದನೆ ಮಾಡುವುದನ್ನು ಬಿಟ್ಟು ಹೇಳುವುದಿಲ್ಲ, ಕೇಳುವುದಿಲ್ಲ ಮೂಕ ಬಸವಣ್ಣ ಅಂತ ಹೇಳಿ ರೈತನ ಮೇಲೆ ಏಕೆ ಬಿದ್ದು

ಅವನನ್ನೇಕೆ ಗೋಳ ಹುಯ್ದುಕೊಳ್ಳುತ್ತೀರಿ, ಈ ಮನೋಭಾವ ಏಕೆ ನಿಮಗೆ ಬಂತು ? ಆ ಬಡ ರೈತನ ಮೇಲೆ ನಿಮಗೆ ಸ್ವಲ್ಪವಾದರೂ ಕರುಣೆ ಇರಬೇಡವೆ ? ಪಟ್ಟಣದಲ್ಲಿ ನೋಡಿದರೆ ಮಹಡಿ ಮೇಲೆ ಮಹಡಿ ಕಟ್ಟುತ್ತಾ ಇದ್ದಾರೆ, ಅರಮನೆ ಮೇಲೆ ಅರಮನೆ ಆಗುತ್ತಾ ಇದೆ. ಅದೇ ನಮ್ಮ ಹಳ್ಳಿ ಊರಿನಲ್ಲಿ ಬಂದು ನೋಡಿ ಆತನದು ಮುರುಕು ಮನೆ, ಗತಿ ಇಲ್ಲದವನು ಅವನು ಏನು ತಾನೆ ಮಾಡಬೇಕು ? ಹೀಗೆಲ್ಲಾ ನೀವು ಮಾಡಿದರೆ ಖಂಡಿತವಾಗಿಯೂ ನಿಮಗೆ ಒಳ್ಳೆಯದಾಗು ವುದಿಲ್ಲ, ಮೂರು ದಿನ ಸರ್ಕಾರವನ್ನೂ ನಿಮ್ಮಿಂದ ನಡೆಸುವುದಕ್ಕಾಗುವುದಿಲ್ಲ ಎಂದು ಇವತ್ತಿನ ದಿವಸ ನಿಮಗೆ ಎಚ್ಚರಿಕೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ದಕ್ಷಿಣ).—ಸ್ವಾಮಿ, ಅಧ್ಯಕ್ಷರೇ ಈ ಮಾನ್ಯ ಸಭೆಯಲ್ಲಿ ಈ ಸರ್ವೆ ಸೆಟ್ಲ್‌ಮೆಂಟ್ ನಿರ್ಣಯದ ಮೇಲೆ ಅನೇಕ ಜನ ಸದಸ್ಯರು ಬಹಳ ಉತ್ತಮವಾದ ಸಲಹೆ ಗಳನ್ನು ಕೊಟ್ಟಿರುತ್ತಾರೆ, ಸರ್ಕಾರದವರು ಅವುಗಳ ವಿಷಯದಲ್ಲಿ ಸರಿಯಾದ ನಿಗಾ ವಹಿಸಿ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾದ್ದು ಅವರ ಮುಖ್ಯ ಕರ್ತವ್ಯವಾಗಿದೆ. ಸ್ವಾಮಿ, ಬಡವರ ಮೇಲೆ ಈಗ ಹೊರಿಸುತ್ತಾ ಇರತಕ್ಕ ಕಂದಾಯ ಬಹಳ ಜಾಸ್ತಿ ಎಂದು ನನ್ನ ಭಾವನೆ. ಇದರಲ್ಲಿ ಒಂದಕ್ಕೆ ಎರಡು, ಎರಡಕ್ಕೆ ಮೂರು ಮಾಡಿ ಕಂದಾಯವನ್ನು ವಸೂಲು ಮಾಡಬೇಕೆಂದು ಆ ಮೂಲಕ ಸರ್ಕಾರ ನಡೆಸಬೇಕೆಂದು ಯಾವ ದೇವರು ಹೇಳಿದ್ದಾನೆ ಎಂದು ಕೇಳುತ್ತೇನೆ. ತಾವು 4 ಕೋಟಿ ರೂಪಾಯಿಗಳನ್ನು ರೈತರಿಂದ ತೆಗೆದುಕೊಳ್ಳಬೇಕು ಸರ್ಕಾರವನ್ನು ನಡೆಸಬೇಕೆಂದರೆ ಇದು ಯಾವ ನ್ಯಾಯ ? ಯಾವ ಧರ್ಮ ? ನೀವು ಮಾಡುವ ಕೆಲಸ ಬೇಕಾದರೆ ಕಡಮೆ ಮಾಡಿ, ಬಡವರ ಮೇಲೆ ಏಕೆ ಈ ರೀತಿ ತೆರಿಗೆ ಹಾಕುತ್ತೀರಿ ? ಪಾಪ, ಅವನಿಗೆ ಒಂದು ವರ್ಷದಲ್ಲಿ ಬೆಳೆ ಆದರೆ ಇನ್ನೊಂದು ವರ್ಷದಲ್ಲಿ ಬೆಳೆಯಾಗುವುದಿಲ್ಲ. ಮಳೆಯನ್ನೇ ನಂಬಿಕೊಂಡು, ವ್ಯವಸಾಯದಲ್ಲಿ ನಿರತ ರಾಗಿರತಕ್ಕ ಜನ ರೈತರು ನೂರಕ್ಕೆ 90ರಷ್ಟು ಇದ್ದಾರೆ. ಈ ಬಡ ಜನರು ಕಂದಾಯ ಕಟ್ಟತಕ್ಕ ಕಾಲದಲ್ಲಿ ತಮ್ಮ ಹತ್ತಿರ ಇರತಕ್ಕ ಸಾಮಾನುಗಳನ್ನು ಮಾರಿ ಕಂದಾಯವನ್ನು ಕಟ್ಟಬೇಕಾಗಿದೆ, ಇಂತಹ ಕಷ್ಟ ಇರುವುದು ಸರ್ಕಾರದವರಿಗೆ ಗೊತ್ತಿದೆ ನಾವೇನೂ ಅವರಿಗೆ ಹೇಳಬೇಕಾಗಿಲ್ಲ, ಅಂಥಾದ್ದರಲ್ಲೂ ಕೂಡ ನೀವು ಈ ರೀತಿ ಕಂದಾಯ ಹಾಕುತ್ತೇವೆ ಎಂದರೆ ಇದು ಯಾವ ಧರ್ಮ ಎಂದು ಕೇಳಬೇಕಾಗುತ್ತದೆ, ಒಂದು ಅಧಿಕಾರ ವರ್ಗದ ಕಮಿಟಿ ಮಾಡಿದ್ದೆವು ಅವರು ಇದನ್ನೆಲ್ಲಾ ಮಾಡಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದರು, ಸರ್ಕಾರದಿಂದ ಆದೇಶ ಹೋಗದೆ ಅಧಿಕಾರ ವರ್ಗದಿಂದ ಸೆಟ್ಲಮೆಂಟ್ ರಿಪೋರ್ಟ್ ಹೇಗೆ ಬರುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೆವಿನ್ಯೂ ಆಕ್ಟ್ ಇದೆ, ಇದೇ ಸಭೆಯಲ್ಲಿ ಆ ಬಿಲ್ ಪಾಸ್ ಆಯಿತು ಅದರ ಪ್ರಕಾರ ಆರೂಕಾಲು ಪರ್ಸೆಂಟ್ ಗ್ರಾಸ್ ಪ್ರಾಡ್ಯೂಸ್ ಮೇಲೆ ಹಾಕಬೇಕೆಂದು ಇದೆ, ಅದನ್ನು ಬೇಸಿಸ್ ಆಗಿ ಇಟ್ಟುಕೊಂಡು ಅಧಿಕಾರಿಗಳು ವರ್ಕ್ಔಟ್ ಮಾಡಿದ್ದಾರೆ. ಆ ಅಂಕಿ ಅಂಶಗಳನ್ನು ಇಲ್ಲಿ ಕೊಟ್ಟಿದ್ದೇವೆ. ತಾವು ಇದು ಬೇಡ ಎನ್ನುವುದಾದರೆ ಎಷ್ಟು ಮಾಡಬೇಕು ಎಂಬುದನ್ನು ಹೇಳಿ.

4-30 P.M.

ನಾವೆಲ್ಲ ಮಾಡಿರುವುದು, ಅಧಿಕಾರವರ್ಗ ಮಾಡಿದೆ ಎಂದು ಆಗಲೇ ಹೇಳಿದರು. ಯಾರೇ ಮಾಡಿರಲಿ, ಈಗ ಮಾಡಿರುವುದು ನ್ಯಾಯವಲ್ಲ. ಮನಸ್ಸು ಮಾಡಿದರೆ ಈಗ ಮಾಡುತ್ತಿರುವ ಖರ್ಚಿನಲ್ಲಿ 4 ಕೋಟಿ ರೂಪಾಯಿಗಳನ್ನು ಉಳಿಸುವುದಕ್ಕೆ ಸಾಧ್ಯವಿಲ್ಲವೇ ? ನಮ್ಮಲ್ಲಿ ಶೇಕಡ 80 ಮಂದಿ ರೈತರಿದ್ದಾರೆ. ನಾವು ಅವರ ಕಷ್ಟಸುಖ ಹೇಳದಿದ್ದರೆ ಕರ್ತವ್ಯಲೋಪ ಮಾಡಿದಂತಾಗು ತ್ತದೆ. ಆದುದರಿಂದ ಈಗ ತಂದಿರುವ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳಿ ಅದಕ್ಕಾಗಿ ತಮ್ಮ ಮೂಲಕ ಪ್ರಾರ್ಥನೆ ಮಾಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ದಯಾನಂದ ಆರ್‌ಕಲ್ಲೆ (ಕಾರ್ಕಳ).—ಮಾನ್ಯ ಸಭಾಪತಿಯವರೇ, ಪುನರ್ವಿಮರ್ಶಿತ ಕಂದಾಯವನ್ನು ಹಾಕಲು ರಿವಿಜನ್ ಸೆಟ್ಲ್‌ಮೆಂಟಿಗೆ ಸಂಬಂಧಪಟ್ಟ ನಿರ್ಣಯವನ್ನು ಸಭೆಯ ಮುಂದಿಟ್ಟಿದ್ದಾರೆ. ಇಂದು ನಮ್ಮ ರೈತನ, ವ್ಯವಸಾಯಗಾರನ ಸ್ಥಿತಿ ಯಾವ ರೀತಿ ಇದೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ನಮ್ಮ ದೇಶದಲ್ಲಿ ಹಾಲೆಂಡ್ ದೇಶದಿಂದ ಜಾನ್ಸನ್ ದಂಪತಿಗಳಂಥ ರೈತರು ಎಷ್ಟು ಜನ ಇದ್ದಾರೆಂದು ಮಾನ್ಯ ಕೃಷ್ಣಪ್ಪನವರಿಗೆ ಗೊತ್ತಿದೆ. ನಮ್ಮ ದೇಶದಲ್ಲಿ ಏನೂ ಲಾಭವಿಲ್ಲದಿರುವ ಒಂದು ಉದ್ಯಮವೆಂದರೆ ವ್ಯವಸಾಯ, ಒಕ್ಕಲತನ. ಹಾಗಿರುವಾಗ, ದೇಶದಲ್ಲಿ ಆಹಾರ ಪರಿಸ್ಥಿತಿ ಉಲ್ಬಣಾವಸ್ಥೆಯಲ್ಲಿರುವಾಗ, ಜನ ಅನ್ನಕ್ಕಾಗಿ ಹಾಹಾಕಾರ ಪಡುತ್ತಿರುವಾಗ, ರೈತರಿಗೆ ಸರಕಾರ ಉತ್ತೇಜನ ಕೊಟ್ಟು ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯಲು ಅವಕಾಶ

(ಶ್ರೀ ದಯಾನಂದ ಆರ್ ಕಲ್ಲೆ)

ಮಾಡದೆ, ಕಂದಾಯವನ್ನು ಮಾಫಿ ಮಾಡಿ ರೈತರನ್ನು ಹುರಿದುಂಬಿಸದೆ ದೇಶದ ಬೆನ್ನು ಮೂಳೆಯಂತಿರುವ ರೈತರಮೇಲೆ ಹೆಚ್ಚು ಕಂದಾಯವನ್ನು ಹೇರುತ್ತಿದೆ. ಇದರಿಂದ ರೈತರು ವ್ಯವಸಾಯವನ್ನು ಬಿಟ್ಟು ಅವರ ಉದರಪೋಷಣೆಗಾಗಿ ಪಟ್ಟಣಗಳಿಗೆ ಹೋಗಬೇಕಾದ ಪರಿಸ್ಥಿತಿ ಬರುತ್ತದೆ ಎಂದು ಹೇಳಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ವಿಷಯ ಹೇಳುವುದಾದರೆ ಹಿಂದೆ 1934ರಲ್ಲಿ ಆ ಜಿಲ್ಲೆಯಲ್ಲಿ ಕಂದಾಯ ಹೆಚ್ಚು ಮಾಡುವಾಗ ಆಗಿನ ಸರಕಾರ ಕೆಲವು ನೀತಿಗಳನ್ನು ಪರಿಪಾಲಿಸಿ ಜಾಸ್ತಿ ಮಾಡುವುದು ಅನುವಲ್ಲ ಎಂದು ಶೇಕಡ ಹನ್ನೆರಡೂವರೆಯಷ್ಟನ್ನು ಮಾತ್ರ ಜಾಸ್ತಿ ಮಾಡಿದರು. ಆಗ ಜನತಾ ಸರಕಾರವಿಲ್ಲದಿದ್ದರೂ ಕೂಡ ಇದ್ದ ಸರಕಾರ ಇನ್ನುಮುಂದೆ ಯಾವ ಸಂದರ್ಭದಲ್ಲೂ ಕೂಡ ಕಂದಾಯವನ್ನು ಹೆಚ್ಚಿಸುವುದಿಲ್ಲ ಎಂದು ಆಶ್ವಾಸನೆ ಕೊಟ್ಟಿತ್ತು. ಅದನ್ನು ಈಗಿನ ಸರಕಾರ ಪಾಲಿಸದೆ ಕಂದಾಯದಲ್ಲಿ ಏಕರೂಪತೆಯನ್ನು ಸಾಧಿಸಬೇಕೆಂದು ಆ ದೃಷ್ಟಿಯಿಂದ ಎಲ್ಲಾ ಜಿಲ್ಲೆಗಳಿಗೂ ಸಂಬಂಧಪಟ್ಟಂತೆ ಒಂದು ರಿವಿಜನ್ ಸೆಟ್ಲ್‌ಮೆಂಟ್ ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಮಾತನಾಡುವಾಗ ಹೆಚ್ಚು ಮಾಡುವುದಿಲ್ಲ, ಶೇಕಡ 100 ರಿಂದ 150 ರವರೆಗೆ ಮಾತ್ರ ಹೆಚ್ಚಾಗುವುದು ಎಂದು ಹೇಳಿದ್ದಾರೆ. ಆದರೆ ಈ ವರದಿ ನೋಡುವಾಗ ಅಂಕಿಸಂಖ್ಯೆ ಎಷ್ಟು ವಿಲಕ್ಷಣವಾಗಿದೆ ಎಂಬುದು ಅರಿವಾಯಿತು. ಚಿಕ್ಕಮಗಳೂರು ಜಿಲ್ಲೆಯ ಎರಡನೆಯ ಜೋನ್‌ನಲ್ಲಿ ಖುಷ್ಕಿ ಕಂದಾಯ 89 ಪೈಸೆ ಇದ್ದುದು 1-78 ಆಗಿದೆ, ತರಿ ಕಂದಾಯ 5-25 ಇದ್ದುದು 13-43 ಆಗಿದೆ, ಬಾಗಾಯ್ತು ಕಂದಾಯ 13-73 ಇದ್ದುದು 67-65 ಆಗಿದೆ. ಇದರಿಂದ ಬಾಗಾಯ್ತು ಕಂದಾಯ ಶೇಕಡ 500-600ರಷ್ಟು ಜಾಸ್ತಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಜೋನ್‌ನಲ್ಲಿ ಅಡಿಕೆ ತೋಟಕ್ಕೆ ಕಂದಾಯ 121 ರೂಪಾಯಾಗಿ ಶೇಕಡ ಒಂದು ಸಾವಿರದಷ್ಟಾಗುತ್ತದೆ. ಯಾವ ನೀತಿಯ ಪ್ರಕಾರ ಸೆಟ್ಲ್‌ಮೆಂಟ್ ಆಫೀಸರು ಹೀಗೆ ಏರಿಸಿದ್ದಾರೋ ಗೊತ್ತಾಗುವುದಿಲ್ಲ, ವರದಿಯಲ್ಲಿ ಎಲ್ಲಾ ವಿಷಯಗಳನ್ನೂ ಪರಿಶೀಲಿಸಿ ಏರಿಸಿರುವುದಾಗಿ ಹೇಳಿದ್ದಾರೆ. ಬತ್ತದ ಬೆಳೆಗೆ ವರದಿಯ ಪ್ರಕಾರ ಒಂದು ಎಕರೆಯಲ್ಲಿ ಬೆಳೆಯಲು 225 ರೂಪಾಯಿ ಖರ್ಚಾಗುತ್ತದೆ, ಉತ್ಪತ್ತಿ 214 ರೂಪಾಯಿ 86 ಪೈಸೆ. ಅಡಕೆ ತೋಟದ ಸರಾಸರಿ ಉತ್ಪತ್ತಿ 1,082 ರೂಪಾಯಿ, ಖರ್ಚು 900 ರಿಂದ 1,000 ರೂಪಾಯಿ. ಈ ವರದಿಯ ಪ್ರಕಾರ ಬತ್ತದ ಬೆಳೆ ತೆಗೆದರೆ ಎಕರೆಗೆ ಸರಾಸರಿ 10 ರೂಪಾಯಿ ನಷ್ಟ, ಅಡಕೆ ಬೆಳೆಯಿಂದ ಸರಾಸರಿ 182 ರೂಪಾಯಿ ಲಾಭ. ಕೊನೆಯಲ್ಲಿ ಅವರ ಅಭಿಪ್ರಾಯವನ್ನು ಈ ರೀತಿ ತಿಳಿಸಿದ್ದಾರೆ.

"Areca is enjoying certain privilege in veiw of the risk and heavy capital involved in its cultivation. It is because of the protection it enjoyed in the past and even today in the shape of import control on foreign Arecanut the Areca gardens are thriving today. Even with the rise in the price of areca and consequential incentive to the garden owners they have not been able as yet to cover the gap of areca consequent to the depression of the thirties. Labour problems so far as areca is concerned remains the same in as much as the garden owners mostly depend upon South Kanara Labour. Moreover the, 'Koleroga' is still a source of menace and anxiety to areca cultivation.

One has to invest money continuously for 10 to 12 years in thousands sand wait without any returns. Arcea garden requires close supervision and one has to live by the side of the garden itself and also one feels helpless as outside labour is to be depended upon who at times dictate their own terms. Areca is subjected to agricultural Income Tax as well and any unduly high taxation on this is sure to affect this important cash crop of Malnad. As such this crop still requires the protection of Government."

ಇಷ್ಟು ಅಭಿಪ್ರಾಯ ಸೂಚಿಸಿ ಕೊನೆಯಲ್ಲಿ ಎಕರೆಗೆ 69 ಚಿಲ್ಲರೆ ಹಾಕಬಹುದು ಎಂದು ಹೇಳಿರುವುದು ವಿಲಕ್ಷಣವಾಗಿದೆ. ಅಡಿಕೆ ಸೊಸಿ ದೊಡ್ಡದಾಗಿ ಸರ್ವೇಸಾಧಾರಣವಾಗಿ ಉತ್ಪತ್ತಿ ನೀಡಬೇಕಾದರೆ ಸುಮಾರು 10 ವರ್ಷಬೇಕು. ಈಗ ಎಕರೆಗೆ ಸುಮಾರು 10-12 ಸಾವಿರ ರೂಪಾಯಿಗಳ ಖರ್ಚಿದೆ ಅದರೆ ಆಯುಸ್ಸು 50-60 ವರ್ಷ. ವೆಚ್ಚವನ್ನು ಸರಿತೂಗಿಸುವಷ್ಟು ಪ್ರತಿಫಲ ಪಡೆದು ಮತ್ತೆ ಹೊಸ ಗಿಡ ಹಾಕಲು ಹಣ ಉಳಿಸಿಕೊಳ್ಳಬೇಕು. ಇದಲ್ಲದೇ ಆಗಾಗ್ಗೆ ಈ ಫಸಲಿಗೆ ಕೊಳೆ ರೋಗ ಬೇರೆ ಬಂದು ನಷ್ಟವಾಗುವ ಸಂಭವವಿದೆ. ಕೊಳೆ ರೋಗದಿಂದ ಆದ ನಷ್ಟಕ್ಕೆ ನಮ್ಮ ಸರ್ಕಾರ ಒಂದೆರಡು ಸಲ ಅಡಿಕೆ ಬೆಳೆದವರಿಗೆ ವಿನಾಯ್ತಿ ಕೊಟ್ಟಿತು. ಇದನ್ನೆಲ್ಲಾ ಸರಿಯಾಗಿ ನೋಡದೆ ಲಂಗುಲಗಾಮಿಲ್ಲದೆ ಕಂದಾಯ ಹೆಚ್ಚಿಸುವುದು ನ್ಯಾಯವಲ್ಲ.

ಇನ್ನೊಂದು ಪ್ಲಾಂಟೇಷನ್ ವಿಷಯ. ಹಿಂದೆ ಕಾಫಿ ಖರಾಬು ಎಂದು ಕಾಫಿ ಬೆಳೆಯುವ ಜಮೀನನ್ನು ಕರೆಯುತ್ತಿದ್ದುದನ್ನು ಈಗ ಗಾರ್ಡನ್ ಎಂದು ಕರೆದಿದ್ದಾರೆ. ಹಿಂಧಿನಿಂದ ಕಾಫಿ ಬೆಳೆಯುವ ಜಮೀನನ್ನು ಖುಷ್ಕಿ ಎಂದು ಕರೆದಿದ್ದಾರೆ. ಹಿಂದೆ ಸೆಟ್ಲ್‌ಮೆಂಟ್ ಆದಾಗ ಕಾಫಿ ಬೆಳೆಯುವ ಜಮೀನನ್ನು ಖುಷ್ಕಿ ಎಂದು ವಿಂಗಡಿಸಿದರು. ಆದರೆ ಇಂದಿನ ವರದಿಯ ಪ್ರಕಾರ ಅದನ್ನು ಹಿಲ್ ಗಾರ್ಡನ್ ಎಂದು ಕರೆಯಲಿದ್ದಾರೆ. ಕಾಫಿ ಬೆಳೆಯು ಮಳೆಯ ಮೇಲೆ ಆಧಾರವಾಗಿರುವುದು. ಆದಕ್ಕೆ ಹೂವಿನ ಮಳೆ ಬರಬೇಕು, ರೇವತಿಮಳೆಯ ಮೇಲೆ ಅದು ಅಧಾರವಾಗಿರುತ್ತದೆ, ಎಪ್ರಿಲ್ ಮತ್ತು ಮಾರ್ಚಿಯಲ್ಲಿ ಬರುವ ಮಳೆ ಕಾಫಿ ಬೆಳೆಗೆ ಮುಖ್ಯವಾದುದು. ಆ ಮಳೆ ಬಂದರೆ ಮಾತ್ರ ಕಾಫಿ ಬೆಳೆ ಬರುತ್ತದೆ. ಇಲ್ಲವಾದರೆ ಇಡೀ ವರ್ಷ ತಲೆಮೇಲೆ ಕೈಇಟ್ಟು ವಿಚಾರ ಮಾಡತಕ್ಕ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಹಿಂದಿನವರು ಬಹಳ ಆಲೋಚವೆ ಮಾಡಿ ಕಾಫಿ ತೋಟಗಳನ್ನು ಖುಷ್ಕಿ ಎಂದು ಪರಿಗಣಿಸಿ ಒಂದು ಎಕರೆಗೆ ಒಂದೂವರೆ ರೂಪಾಯಿನಿಂದ ಮೂರು ರೂಪಾಯಿವರೆಗೂ ಕಂದಾಯವನ್ನಿಟ್ಟಿದ್ದರು. ಇದನ್ನು ಗಣನೆಗೆ ತಾರದೆ ಒಮ್ಮಿದೊಮ್ಮೆಗೆ 65 ರೂಪಾಯಿ ತನಕ ಕಂದಾಯ ಹಾಕಬೇಕೆಂದು ಸೂಚಿಸಿದ್ದಾರೆ. ಈ ಕಾಫಿ ಬೆಳೆಯ ಬಗ್ಗೆ ಅವರೇ ತಮ್ಮ ವರದಿಯಲ್ಲಿ ಒಂದು ಕಡೆ ಹೇಳಿದ್ದಾರೆ:

> "The Coffee planters, though for all outward appearance seem to pay a flat rate of Rs. 1-25 and 1-50 per acre of plantation. In reality they pay very heavily. They are paying an exicise duty on coffee to the Central Government which is deducted at source before payment to the planters. An excise duty of Rs. 55 per quintal is being levied and taking the average yield at 4 quintals per acre an amount exceeding Rs. 200 per acre is paid towards excise duty itself. Besides the planters are subjected to Agricultural Income tax. If we take into consideration all these we see that the planters are heavily taxed already. Their expenditure too is very heavy. They spend between Rs. 600 to Rs. 800 annually per acre for running plantation. They have to maintain labour as per labour Rules and provide for housing, medical and other facilities."

ಈ ರೀತಿ ಇರುವುದರಿಂದ ಕಾಫಿ ಬೆಳೆಗಾರರು ಒಂದು ಎಕರೆಗೆ 400 ರೂಪಾಯಿವರೆಗೂ ಕಂದಾಯ, ವ್ಯಾವಸಾಯದ ವರಮಾನ ತೆರಿಗೆ, ಮಾರಾಟ ತೆರಿಗೆ, ಎಕ್ಸೈಜ್‌ಡ್ಯೂಟಿ, ಪಂಚಾಯಿತಿ ಟ್ಯಾಕ್ಸ್, ಮುನಿಸಿಪಲ್ ಟ್ಯಾಕ್ಸ್ ಎಂದು ಕೊಡಬೇಕಾಗುತ್ತದೆ. ಇದರ ಮೇಲೆ ಕಾಫಿ ಬೆಳೆಗಾರರಿಗೆ ಎಕರೆಗೆ 60-65 ರೂಪಾಯಿ ಕಂದಾಯವನ್ನು ಹಾಕಿದರೆ ಒಂದು ವರ್ಷ ಮಳೆಬಾರದೆ ಇದ್ದರೆ ಕಾಫಿ ಬೆಳೆಗಾರರು ಕಂದಾಯವನ್ನು ಕೊಡುವುದಕ್ಕೆ ಸಾಧ್ಯವಿಲ್ಲದೆ ತೋಟವನ್ನು ಹರಾಜಿಗೆ ಬಿಟ್ಟು ಬಿಡತಕ್ಕ ಪ್ರಸಂಗ ಬರಬಹುದು ಎಂದು ಎಚ್ಚರಿಸ ಬಯಸುತ್ತೇನೆ ಸ್ವಾಮಿ.

ಖುಷ್ಕಿ ಜಮೀನ ಬಗ್ಗೆ ಹೇಳುವುದಾದರೆ, ಮಲೆನಾಡಿನಲ್ಲಿ ಮುಖ್ಯವಾಗಿ ಖುಷ್ಕಿ ಜಮೀನನು ಹುಲ್ಲುಗಾವಲಿಗೆ, ಸೊಪ್ಪಿನ ಬೆಟ್ಟಕ್ಕೆ ಮಾತ್ರ ಉಪಯೋಗಿಸುತ್ತಾರೆ, ಆದರಿಂದ ಲಾಭದಾಯಕವಾದ ಉತ್ಪಾದನೆಯನ್ನು ಮಾಡುವುದಿಲ್ಲ. ಇದು ಎಲ್ಲರಿಗೂ ತಿಳಿದ ವಿಷಯ. ಈ ರೀತಿಯ ಖುಷ್ಕಿ ಜಮೀನಿಗೆ ಯಾವ ರೀತಿಯಿಂದಲೂ ಕಂದಾಯವನ್ನು ಏರಿಸುವುದು ನ್ಯಾಯವಲ್ಲ ಎಂದು ನಾನು ಅಭಿಪ್ರಾಯ ಪಡುತ್ತೇನೆ.

(ಶ್ರೀ ದಯಾನಂದ ಆರ್ ಕರ್ಲೆ)

ಸ್ವಾಮಿ, ಹಿಂದೆ ಟ್ಯಾಕ್ಸೇಷನ್ ಅಂಡ್ ಎನ್‌ಕ್ವೈರಿ ಕಮಿಷನವರು ಕೂಡ ತಮ್ಮ ವರದಿಯಲ್ಲಿ ಯಾವ ವಿಧದಲ್ಲಾಗಲಿ ಯಾವ ಸಂದರ್ಭದಲ್ಲಾಗಲೀ ಹಿಂದೆ ಇರುವ ಕಂದಾಯದ ಮೇಲೆ ಸೇಕಡ 25ಕ್ಕೆ ಮೇಲ್ಪಟ್ಟು ಜಾಸ್ತಿ ಮಾಡಬಾರದು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೂ ಸಹ ಸೆಟಿಲ್‌ಮೆಂಟ್ ಅಧಿಕಾರಿಗಳು ಗಮನವಿತ್ತ ಹಾಗೆ ಕಾಣುವುದಿಲ್ಲ. ಅವರ ವರದಿಯಲ್ಲಿ ಅವರೇ ಒಪ್ಪಿಕೊಂಡಿರುವಂತೆ ವಾಯುಗುಣ ಮಣ್ಣಿನ ಗುಣ, ಅಲ್ಲಿ ಬೆಳೆಯುವ ಬೆಳೆ ಹೀಗೆ ಯಾವುದನ್ನು ತಮ್ಮ ಮುಂದಿಟ್ಟುಕೊಳ್ಳದೆ ವರದಿಯನ್ನು ತಯಾರಿಸಿದ್ದಾರೆ, ಅವರ ಆಫೀಸಿನಲ್ಲಿ ಕುಳಿತುಕೊಂಡು ತಮ್ಮದೆ ಆದ ಒಂದು ಸಂದರ್ಭ ಸನ್ನಿವೇಶದಲ್ಲಿ ಈ ವರದಿಯನ್ನು ತಯಾರಿಸಿದ್ದಾರೆ ಎಂದು ಕಾಣುತ್ತದೆ. ಇದು ಬರೀ ಒಬ್ಬಿಬ್ಬರ ಅಭಿಪ್ರಾಯವಲ್ಲ. ಈ ವಿಷಯದಲ್ಲಿ ವಿರೋಧ ಪಕ್ಷದವರಿಗೆ ಹೇಗೆ ಹೆದರಿಕೆ ಇದೆಯೋ ಅದೇ ರೀತಿ ಆಳುವ ಪಕ್ಷದ ಸದಸ್ಯರಿಗೂ ಕೂಡ ಇದೆ. ಗ್ರಾಮಾಂತರ ಪ್ರದೇಶದ ಹೆಚ್ಚಿನ ಜನತೆ ವ್ಯವಸಾಯಗಾರರು. ನಾವೆಲ್ಲ ರೈತರ ಮತವನ್ನು ಹೊಂದಿ ಬಂದವರು. ನಾಳೇ ನಾವು ಹೋಗಿ ಅವರನ್ನು ಎದುರಿಸಬೇಕಾಗಿದೆ. ಆಳುವ ಪಕ್ಷದ ಮಿತ್ರರು ಯಾರು ಕೂಡ ಇದನ್ನ ಬೆಂಬಲಿಸಿ ಮಾತನಾಡಿಲ್ಲ. ಪ್ರತಿಯೊಬ್ಬರಿಗೂ ಇದರ ಬಿಸಿ ತಟ್ಟುತ್ತದೆ. ಈಗಲಾದರೂ ಸಮಯ ದಾಟಿ ಹೋಗಿಲ್ಲ. ಜನತಾ ಸರ್ಕಾರ ಜನತೆಯ ಹಿತವನ್ನು ಕಾಪಾಡಲು ಅವರ ಹಿತಕಾಂಕ್ಷಿಗಳಾಗಿ ಅವರ ಒಲವನ್ನು ಬಯಸುವುದಾದರೆ ಇಂಥ ಒಂದು ಕರಾಳವಾದ ವಿವಾದಾತ್ಮಕವಾದ ವರದಿಯನ್ನು ಮತ್ತು ಅದರಲ್ಲಿ ಸೂಚಿಸಿದಂಥ ಹೆಚ್ಚುವರಿಯನ್ನು ಅನುಮೋದಿಸತಕ್ಕದಲ್ಲ ಎಂದು ಹೇಳಬಯಸುತ್ತೇನೆ.

ಸ್ವಾಮಿ, ಈ ವಿಚಾರದಲ್ಲಿ ಹೆಚ್ಚಿನ ಮಟ್ಟಿಗೆ ರೈತನಿಗೆ ನಾವು ಆದಷ್ಟು ಕರುಣಾದೃಷ್ಟಿಯನ್ನಿಟ್ಟು ಅವರು ಹೆಚ್ಚು ಮುತುವರ್ಜಿ ವಹಿಸಿ ಆಹಾರ ಧಾನ್ಯವನ್ನು ಬೆಳೆದು ಆಹಾರ ಉತ್ಪಾದನೆಯನ್ನು ಹೆಚ್ಚು ಮಾಡಿ ನಮ್ಮ ದೇಶಕ್ಕೆ ನೆರವಾಗುವ ರೀತಿಯಲ್ಲಿ ರೈತರಿಗೆ ಉತ್ತೇಜನ ಕೊಡಬೇಕು. ಕಂದಾಯವನ್ನ ಮಾಫಿ ಮಾಡಬೇಕೆಂದು ಯಾರೂ ಹೇಳುವುದಿಲ್ಲ. ಆದರೆ ಕಂದಾಯವನ್ನು ಜಾಸ್ತಿ ಮಾಡಬೇಕಾದರೆ ಒಂದು ನೀತಿ ನಿಯಮವನ್ನು ಬೆಳೆಸಿಕೊಂಡು ಅವರಿಗೆ ಎಷ್ಟು ಶಕ್ತಿ ಇದೆ, ಅವರು ಎಷ್ಟು ಹೊರಬಲ್ಲರು ಎಂಬುದನ್ನು ನೋಡಿಕೊಂಡು ಕಂದಾಯವನ್ನು ಜಾಸ್ತಿ ಮಾಡಬೇಕು. ಹಾಗಿಲ್ಲದೆ ಈ ವರದಿಯಲ್ಲಿ ತೋರಿಸಿರುವಂತೆ ಜಾಸ್ತಿ ಮಾಡಬಾರದು ಎಂದು ಹೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಂತಾರಾವ್ ದೇಸಾಯಿ (ಕುಷ್ಟಗಿ).—ಸಭಾಪತಿಗಳೇ, ಇವತ್ತು ನಮ್ಮ ಎದುರಿನಲ್ಲಿ ಕಂದಾಯವನ್ನು ಹೆಚ್ಚುವರಿ ಮಾಡುವ ಒಂದು ಠರಾವು ಮಂಡಿಸಲ್ಪಟ್ಟಿರುತ್ತದೆ. ಇವತ್ತು ಕಂದಾಯವನ್ನು ಹೆಚ್ಚುವರಿ ಮಾಡಲಿಕ್ಕೆ ಕಾರಣವೇನು ಎಂದರೆ, ಎಲ್ಲ ಧಾರಣೆವಾಸಿಗಳೂ ಏರಿವೆ ರೈತರಿಗೆ ಬಹಳ ಆದಾಯ ಬರಲಿಕ್ಕೆ ಹತ್ತಿದೆ, ಆ ಆದಾಯದಲ್ಲಿ ಸರ್ಕಾರಕ್ಕೂ ಒಂದು ಪಾಲು ಸಿಕ್ಕಬೇಕು ಎನ್ನುವ ದೃಷ್ಟಿಯಿಂದ ಭೂಕಂದಾಯವನ್ನು ಏರಿಸಬೇಕು ಎನ್ನುವ ದೆಸೆಯಿಂದ ಈ ಠರಾವು ನಮ್ಮ ಮುಂದೆ ಮಂಡಿಸಲ್ಪಟ್ಟಿದೆ. ಆದರೆ ಇವತ್ತು ಧಾರಣೆಗಳು ಹೇಗೆ ಏರಿವೆ ಎಂದರೆ ಅವನಿಗೆ ಏನು ಫಾಯಿದೆ ಬರುತ್ತದೆಯೋ ಅದೆಲ್ಲ ಅವನ ನಿತ್ಯಾವಶ್ಯಕ ವಸ್ತುಗಳನ್ನು ಕೊಂಡುಕೊಳ್ಳಲಿಕ್ಕೆ ಖರ್ಚಾಗಲಿಕ್ಕೆ ಹತ್ತಿದೆ. ಇದರಿಂದ ಅವನು ಮೊದಲು ಹೇಗೆ ಇದ್ದನೋ ಅದೇ ಪರಿಸ್ಥಿತಿಯಲ್ಲಿ ದ್ದಾನೆ. ಅವನಿಗೆ ಹೆಚ್ಚಿನ ಉಳಿತಾಯ ಇಲ್ಲವೇ ಇಲ್ಲ. ಅವನಿಗೆ ಯಾವ ರೀತಿಯಲ್ಲಿಯೂ ಫಾಯಿದೆ ಸಿಕ್ಕಿಲ್ಲ. ರೈತ ನಮ್ಮ ದೇಶದ ಬೆನ್ನೆಲುಬು, ಅವನು ದೇಶಕ್ಕೆ ಬೇಕಾದ ಆಹಾರ ಪದಾರ್ಥಗಳನ್ನು ಒದಗಿಸುತ್ತಿದ್ದಾನೆ. ಅಂಥ ರೈತನ ಮೇಲೆ ಹೆಚ್ಚಿನ ಹೊರೆಯನ್ನು ಹಾಕುವಂಥ ಈ ಠರಾವನ್ನು ಪಾಸು ಮಾಡಿದರೆ ಬಹಳ ಅನಾಹುತವಾಗುತ್ತದೆ. ಯಾವ ರೈತ ಇಲ್ಲಿಯ ತನಕ ಭೂ ಸಾಗುವಳಿಯನ್ನು ಮಾಡುತ್ತಿದ್ದನೋ ಅಂಥ ರೈತ ಭೂ ಸಾಗುವಳಿಯನ್ನು ಮಾಡದೆ ಅದನ್ನು ಬಿಟ್ಟು ಬೇರೆ ಉದ್ಯೋಗಕ್ಕೆ ಹೋಗಬೇಕಾದೀತು. ಹಳ್ಳಿಯ ಮಂದಿ ಹೆಚ್ಚು ಹೆಚ್ಚಾಗಿ ಪಟ್ಟಣಕ್ಕೆ ಸೇರುವ ಹೊತ್ತು ಬಂದೀತು. ಇದಕ್ಕಿಂತ ಮುಂದೆ ಹೋದರೆ, ರೈತನ ಮೇಲೆ ಭಾರವನ್ನು ಹೆಚ್ಚು ಮಾಡುವುದರಿಂದ ಅವನಲ್ಲಿ desperate spirit ಬಂದು ಹಿಂದೆ. 'No Tax campaign'. ವಗೈರೆ ಇಂಥ ಅಸ್ತ್ರಗಳನ್ನು, ಮಹಾತ್ಮ ಗಾಂಧಿಯವರು ಬ್ರಿಟಿಷ್ ಸರ್ಕಾರದ ವಿರುದ್ಧ ಉಪಯೋಗಿಸುತ್ತಿದ್ದ ಅಸ್ತ್ರಗಳನ್ನು, ನಮ್ಮ ಜನತಾ ಸರ್ಕಾರದ ವಿರುದ್ಧ ಉಪಯೋಗ ಮಾಡುವ ಕಾಲ ಬಂದೀತು. ಇದನ್ನೆಲ್ಲ ತಿಳಿದು ಇವತ್ತು ಕಂದಾಯವನ್ನು ಹೆಚ್ಚು ಮಾಡಬೇಕೆಂದು ತಂದಿರುವ ಈ ಠರಾವನ್ನು ಸರ್ಕಾರದವರು ಹಿಂತೆಗೆದುಕೊಳ್ಳಬೇಕು ಮತ್ತು ರೈತರಿಗೆ ಹೆಚ್ಚು ಹೆಚ್ಚು ಪ್ರೋತ್ಸಾಹವನ್ನು ಕೊಟ್ಟು ದೇಶದಲ್ಲಿ ಹೆಚ್ಚಿನ ಹುಟ್ಟುವಳಿ ಆಗುವುದಕ್ಕೆ ಪ್ರಯತ್ನ ಮಾಡುವುದು ಮುಖ್ಯ ಕರ್ತವ್ಯವಿದೆ. ಅಂಥದ್ದರಲ್ಲಿ ರೈತನ ಮೇಲೆ ಹೊರಲಾರದ ಹೊರೆಯನ್ನು ಹಾಕಿದರೆ ಕ್ರಾಂತಿಗೆ ಆಹ್ವಾನ ಇತ್ತ ಹಾಗೆ ಆದೀತು. ಸಮಾಜವಾದಿ ಸಮಾಜ ಸ್ಥಾಪನೆ ಮಾಡುವುದು ನಮ್ಮ ಮುಖ್ಯ ಗುರಿ ಎಂದು ಹೇಳುತ್ತ ಒಬ್ಬ ಬ[illegible] ರೈತನಿಂದ ಹಣವನ್ನು ಕಸಿದುಕೊಂಡು ಸರ್ಕಾರ ನಡೆಸಬೇಕು ಎನ್ನುವುದು ಸಮಾಜವಾದ ಸ್ವಾ[illegible]

ಯಾಗುತ್ತದೆಯೇ ? ಸಮಾಜವಾದ ಸ್ಥಾಪನೆ ಮಾಡುವುದು ಎಂದರೆ ಯಾರು ಹೆಚ್ಚು ಉಳ್ಳವರೋ ಅವರ ಕಡೆಯಿಂದ ಕಸಿದುಕೊಂಡು ಸಮಾಜ ಸ್ಥಾಪನೆ ಮಾಡಬೇಕು. ಅದನ್ನು ಮಾಡದೆ ಒಬ್ಬ ಬಡ ರೈತನಿಂದ, ಅವನ ಮೇಲೆ ಹೆಚ್ಚಿನ ಹೊರೆಯನ್ನು ಹಾಕಿ ಅವನಲ್ಲಿ ಇದ್ದುದನ್ನೆಲ್ಲ ಕಸಿದುಕೊಳ್ಳುವುದು ಬಹಳ ಅನ್ಯಾಯವಾಗುತ್ತದೆ.

ರಿವಿಷನ್ ಸೆಟಲ್‌ಮೆಂಟ್ ಅಧಿಕಾರಿಗಳು ಈ ಒಂದು ವರದಿಯನ್ನು ಕೊಟ್ಟಿದ್ದಾರೆ. ಭೂ ಕಂದಾಯವನ್ನು ಯಾವ ತತ್ವದ ಮೇಲೆ ಏರಿಸಬೇಕು ಎನ್ನುವುದಕ್ಕೆ ಅವರು ಏನು ಹೇಳುತ್ತಾರೆಂದರೆ Physical Configuration, Rainfall, Yield, ಎಂದು ಎಷ್ಟೋ ವಿಷಯಗಳನ್ನು ಹೇಳಿದ್ದಾರೆ. ಆದರೆ ಅದರಲ್ಲಿ ಒಂದು ಮುಖ್ಯವಾದ ವಿಷಯವನ್ನು ಮರೆತಿದ್ದಾರೆ. ರೈತನು ಜೀವನಾವಶ್ಯಕವಾದ ವಸ್ತುಗಳ ಸಲುವಾಗಿ ಎಷ್ಟು ಖರ್ಚು ಮಾಡಬೇಕಾಗುತ್ತದೆ ಎಂಬುದನ್ನು ಹೇಳುವುದನ್ನು ಅವರು ಮರೆತು ಬಿಟ್ಟಿದ್ದಾರೆ. ಅದು ಬಹಳ ಮುಖ್ಯವಾದುದು. ಇದನ್ನು ಬಿಟ್ಟು ಅವನಿಗೆ ಬರುವ ಒಟ್ಟು ಆದಾಯವನ್ನು ಲೆಕ್ಕ ಹಾಕಿಕೊಂಡು ಈ ಠರಾವನ್ನು ತಂದಿದ್ದಾರೆ. ಆದರೆ ಅದೇ ರೈತನಿಗೆ ಎಷ್ಟು ನಿವ್ವಳ ಉಳಿತಾಯ ವಾಗುತ್ತದೆ. ಅವನು ಅಲ್ಲಿ ಏನು ಉತ್ಪನ್ನ ಮಾಡುತ್ತಾನೋ ಅದಕ್ಕೆ ಖರ್ಚು ಎಷ್ಟಾಗುತ್ತದೆಂಬುದನ್ನು ಲೆಕ್ಕಹಾಕಿದ್ದರೆ ಯೋಗ್ಯವಾಗುತ್ತಿತ್ತು. ಅದನ್ನು ಅವನಿಗೆ ಬಿಟ್ಟು ಕೊಡಿ. ಮುಖ್ಯವಾಗಿ ಕ್ಲೈಮಾಟಿಕ್ ಕಂಡೀಷನ್ಸ್, ಮಾರ್ಕೆಟಿಂಗ್ ಫ್ಯಾಸಿಲಿಟೀಸ್, ಇವೆಲ್ಲಾ ಚಲೋ ಇರಬೇಕು. ರೈತನ ಅವಶ್ಯಕತೆಯನ್ನು ಪೂರೈಸುವುದಕ್ಕೆ ಹೆಚ್ಚು ಪ್ರಯತ್ನಪಡಬೇಕು. ಅವನು ಬೆಳೆದಂಥ ಪದಾರ್ಥಗಳ ಧಾರಣೆಯನ್ನು ಸರಿಯಾಗಿ ನಿಗದಿಮಾಡಬೇಕು. ಇದನ್ನು ತುಲನಾತ್ಮಕ ದೃಷ್ಟಿಯಿಂದ ನೋಡಬೇಕು. ಒಂದು ವೇಳೆ ಧಾರಣೆ ಹೆಚ್ಚಿದ್ದರೆ ಆ ಬಗ್ಗೆ ಸಾಕಷ್ಟು ವಿಚಾರ ಮಾಡಬೇಕು. ಯಾವುದೂ ವಿಚಾರವಿಲ್ಲದೆ ಮಾಡಬಾರದು. ಇದರಿಂದ ರೈತನಿಗೆ ಹೆಚ್ಚು ರೊಕ್ಕ ಬರುತ್ತದೆ ಎಂಬ ದೃಷ್ಟಿಯಿಂದ ಕಂದಾಯ ಏರಿಸಲಿಕ್ಕೆ ಹೋಗಬಾರದು. ಇದರಿಂದ ಜನತಾ ಸರ್ಕಾರಕ್ಕೆ ಕೆಟ್ಟ ಪರಿಣಾಮ ಉಂಟಾದೀತು. ಆ ಒಂದು ಕೆಟ್ಟ ಚಿತ್ರ ಇರಬಾರದು. ಅದಕ್ಕೆ ಯಾರೂ ಆಸ್ಪದ ಕೊಡಕೂಡದು. ಎಷ್ಟಾದರೂ ಆಳುವ ಪಕ್ಷ ಮುಂದಿನ ಚಿತ್ರವನ್ನು ಗಹನವಾದ ವಿಚಾರಗಳ ಕಡೆಗೆ ತಿರುಗಿಸಬೇಕು. ಈಗ ಅವರಿಗೆ ಎಲ್ಲಾ ಡಾರ್ಕ್ ಪಿಕ್ಚರ್ ಕಾಣುತ್ತಿದೆ ಎಂದು ನನಗನ್ನಿಸುತ್ತದೆ. ಇಂತಹ ಪರಿಸ್ಥಿತಿ ಇರುವಾಗ ಇವತ್ತು ಆಳುವ ಪಕ್ಷ ಈ ವಿಚಾರಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಬೇಕು. ದೇಶದಲ್ಲಿ ರೈತನ ಪರಿಸ್ಥಿತಿಯೇನಾಗಿದೆ ಎಂಬುದನ್ನು ಮೊದಲು ತಿಳಿಯಬೇಕು. ರೈತ ಏಳಿಗೆಯಾಗಬೇಕು, ವರ್ತಕರು ಸಮೃದ್ಧಿಯಾಗ ಬೇಕು ಎಂಬ ಬಗ್ಗೆ ಆಳುವ ಪಕ್ಷ ಪೂರ್ತಿ ಗಮನ ಕೊಟ್ಟು ಈ ಒಂದು ಠರಾವನ್ನು ಆಳುವ ಪಕ್ಷ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ನಮ್ರ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಇವತ್ತು ಸರ್ವೆ ವರದಿಗಳು ಒಂದು ಸೈಂಟಿಫಿಕ್ ಬೇಸಿಸ್ ಮೇಲೆ ಆಗಿಲ್ಲ. ಎಲ್ಲಾ ಕಡೆಯೂ ಒಂದೇ ದೃಷ್ಟಿ ಇರತಕ್ಕದ್ದು ಎಂದು ಆ ವರದಿಯಲ್ಲಿ ಇದ್ದಂತೆ ಕಾಣುತ್ತದೆ. ಒಂದೇ ಡಿವಿಜನ್ನಿನಲ್ಲಿ ಒಂದೇ ತರಹ ಭೂಮಿ, ಅದೇ ಇನ್ನೊಂದು ಡಿವಿಜನ್ನಿನಲ್ಲಿಯೂ ಇದೆ ಎಂದರೆ ಹೇಗೆ ? ಭೂಮಿಯಲ್ಲಿ ಯಾವಾಗಲೂ ವ್ಯತ್ಯಾಸವಾಗಿರುತ್ತವೆಂದು ಬೇರೆ ಇಲ್ಲಿ ತೋರಿಸುತ್ತಾರೆ. ನಮ್ಮ ರಾಯಚೂರು ಜಿಲ್ಲೆಯಲ್ಲಿ ಒಂದು ಕೊಪ್ಪಳ ಸರ್ಕಲ್ ಎಂದು ಇದೆ. ಅಲ್ಲಿ 285.6 ಶೇಕಡದಷ್ಟು 'ಎ' ಕ್ಲಾಸ್‌ಸಾಯಿಲ್ ಇದೆ. ಅಂತಹ ಕಡೆ ಹೆಚ್ಚುವರಿ ತೆರಿಗೆ ಹಾಕಬೇಕು, ಕಂದಾಯ ಏರಿಸಬೇಕೆಂದು ಒಬ್ಬ ಅಸಿಸ್ಟೆಂಟ್ ಕಮಿಷನರ್ ವರದಿಕೊಟ್ಟಿದ್ದಾರೆ. ಅದೇ ರಾಯಚೂರು ಜಿಲ್ಲೆಯಲ್ಲಿ ಇನ್ನೊಂದು ಲಿಂಗಸುಗೂರ್ ಸರ್ಕಲ್ ಇದೆ. ಅದೇ ತರಹ ಭೂಮಿ, ರೇನ್‌ಫಾಲ್ ಅಷ್ಟೇ ಇದೆ. ಅಲ್ಲಿ ಕೆಲವು ಸೌಕರ್ಯಗಳು ಹೆಚ್ಚಾಗಿವೆ. ಅಲ್ಲಿನ ಅಸಿಸ್ಟೆಂಟ್ ಕಮಿಷನರ್ 260 ಶೇಕಡ ಸಾಯಿಲ್ ಇದೆ ಎಂದು ಹೇಳಿ ಅಲ್ಲಿಯೂ ಕಂದಾಯವನ್ನು ಏರಿಸಬೇಕೆಂಬುದಾಗಿ ಹಲವಾರು ವರದಿಗಳನ್ನು ಕೊಟ್ಟಿದ್ದಾರೆ. ಅದೇ ಧಾರವಾಡ ಜಿಲ್ಲೆಯಲ್ಲಿ ನರಗುಂದ್, ರೋನ್ ವಗೈರೆ ತಾಲ್ಲೂಕ್‌ಗಳಲ್ಲಿ ನಮಗಿಂತ ಹೆಚ್ಚು ಚಲೋ ಭೂಮಿ ಇದೆ. ಫಲವತ್ತಾದ ಭೂಮಿ ಇದೆ. ಹೆಚ್ಚು ಮಳೆಯೂ ಸಹ ಆಗುತ್ತದೆ. ಸೌಕರ್ಯಗಳು ಸಹ ಇವೆ. ಇಂತಹ ಜಾಗದಲ್ಲಿ ಸರ್ಕಾರದವರು ಒಂದಕ್ಕೆ 100 ಪಟ್ಟು ಮಾತ್ರ ಹೆಚ್ಚು ಕಂದಾಯ ಮಾಡಬೇಕೆಂಬುದಾಗಿ ವರದಿ ಬಂದಿದೆ. ಆದ್ದರಿಂದ ಸೈಂಟಿಫಿಕ್ಕಾಗಿ ಹೋಗಿ ಇದನ್ನು ಮಾಡ ಬೇಕೆಂದು ನಾನು ಸಲಹೆ ಮಾಡುತ್ತೇನೆ. ಎಲ್ಲಾ ಕಡೆಯೂ ಒಂದೇ ರೀತಿ ಕಂದಾಯ ವಿರಬೇಕು. ಆದರೆ ಕೆಲವು ಕಡೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಈ ಕಂದಾಯವಿರುವುದರಿಂದ ಇವರು ಸೈಂಟಿಫಿಕ್ ಎಂದು ಹೇಗೆ ಹೇಳುತ್ತಾರೆಯೋ ನನಗೆ ತಿಳಿಯುವುದಿಲ್ಲ. ಈಗ ಈ ರೀತಿ ಧಾರಣೆಗಳು ಏರಿರುವಾಗ ಇದು ಒಂದು ಅಸ್ವಾಭಾವಿಕವಾಗಿದೆ. ಈಗ ಧಾರಣೆ ಈ ರೀತಿ ಏರಿರುವುದು ಒಂದು ಮಹತ್ವದ ವಿಷಯವಲ್ಲ. ನಮ್ಮ ಸಣ್ಣ ಹಿಡುವಳಿದಾರರಿಗೆ ಈ ರೀತಿ ಧಾರಣೆ ಹೆಚ್ಚಿತೆಂದರೆ, ಆ ರೀತಿಯಾದ ಏರಿಕೆ ಧಾರಣೆ ಯಾರಿಗೂ ಸೂಕ್ತವಾಗುವುದಿಲ್ಲ. ಬರೀ ಧಾರಣೆ ಏರುವುದೇ ಹೊರತು ಅದಕ್ಕೆ ತಕ್ಕ ಹಿಡುವಳಿ ಇಲ್ಲ. ಅದನ್ನು ತಿಳಿದುಕೊಂಡು ಈಗ ಧಾರಣೆ ಹೆಚ್ಚಿದೆ

(ಶ್ರೀ ಕಾಂತಾರಾವ್ ದೇಸಾಯಿ)

ಅದಕ್ಕಾಗಿ ಕಂದಾಯವನ್ನು ಹೆಚ್ಚು ಮಾಡಬೇಕೆಂದು ಹೇಳುವುದು ರೈತರಿಗೆ ನಿಜವಾಗಿ ಕ್ಷೇಮ ವಾಗುವುದಿಲ್ಲ. ಈ ರೀತಿ ಕಂದಾಯ ಹೆಚ್ಚುವುದರಿಂದ ಇನ್ನೊಂದು ಪರಿಸ್ಥಿತಿ ನಿರ್ಮಾಣವಾಗ ಬಹುದು. ಕೆಲವು ಕಡೆಗಳಲ್ಲಿ ಮಾರ್ಜಿನಲ್ ಲ್ಯಾಂಡ್ಸ್ ಇರುತ್ತವೆ. ಅದು just sufficient to Maintain ಆಗಿರುತ್ತದೆ. They are not profitable, they will go out of the cultivation. ಏಕೆಂದರೆ, ಹಿಂದೆ ಒಂದು ಕಾಲವಿತ್ತು. ಆಗ ಹೊಲದಿಂದ ಏನು ಆದಾಯ ಬರುವಂಥಾದ್ದಿತ್ತೋ ಆ ಆದಾಯದ ಮೇಲೆ ಕಂದಾಯ ಪೂರ್ತಿಯಾಗಿ ವಸೂಲಾಗದಿದ್ದರೆ ಆ ಸರ್ಕಾರವೇ ರಾಜೀನಾಮೆ ಕೊಡುತ್ತಿದ್ದರು. ಆದ್ದರಿಂದ ಈಗ ನಮ್ಮಲ್ಲಿ ಎಷ್ಟು lands go out of cultivation ಇದೆ ಎಂಬುದನ್ನು ನೋಡಬೇಕು. ಹಿಂದೆ ಎಷ್ಟು ಆಹಾರೋತ್ಪನ್ನವಾಗುತ್ತಿತ್ತು. ಈಗ ಎಷ್ಟಾಗುತ್ತಿದೆ ಎಂಬುದನ್ನು ನೋಡಿದರೆ ಇರತಕ್ಕ ಜಮೀನನ್ನು ಸರ್ಕಾರದವರೇ ಕಿತ್ತು ಕೊಂಡು ಭೂಮಿಯನ್ನು ದೇಶದಲ್ಲಿ ಕಡಿಮೆಮಾಡುವ ಹಾಗೆ ಕಾಣುತ್ತದೆ. ಆದರೆ ಸರ್ಕಾರದಲ್ಲಿ ಯಾವಾಗಲೂ ಒಂದು ವಾದ ಇದೆ. ಅದೇನೆಂದರೆ, ಇವರು ಬೇಕಾದಷ್ಟು ಡೆವಲಪ್‌ಮೆಂಟ್ ವರ್ಕ್ಸ್ ಮಾಡಿದ್ದೇವೆ, ದೇಶದ ಪ್ರಗತಿ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಡೆವಲಪ್‌ಮೆಂಟ್ ವರ್ಕ್ಸ್‌ನಿಂದ ಬಡ್ಜೆಟ್ಟಿನಲ್ಲಿ ಎಷ್ಟು ವರಮಾನ ಖಂಡಿತ ಬರುತ್ತದೆಂಬುದನ್ನು ಇವರು ವಿಚಾರ ಮಾಡಬೇಕು : ರೈತನಾದವನು ತನ್ನ ಕಷ್ಟದಿಂದ ಪಾರಾಗಬೇಕು ಎಂದರೆ, ಅವನಿಗೆ ಕೊಡತಕ್ಕ ಸೌಕರ್ಯಗಳು ಸರಿಯಾಗಿರಬೇಕು. ಇವರಿಗೆ ಸರಿಯಾಗಿ ರೊಕ್ಕ ಬರಬೇಕು ಎಂದರೆ, ದೊಡ್ಡ ದೊಡ್ಡ ಸಾಹುಕಾರರುಗಳು, ಪ್ಲಾಂಟರ್ಸ್ ಬೇಕಾದಷ್ಟು ಜನರಿದ್ದಾರೆ. ಅವರಲ್ಲಿ ಎಷ್ಟು ಹಣವಿದೆ. ಇಂತಹವರಿಂದ ದೇಶದ ಡೆವಲಪ್‌ಮೆಂಟ್ ಕೆಲಸ ಕಾರ್ಯಗಳಿಗಾಗಿ ಸಾಕಷ್ಟು ರೊಕ್ಕ ತೆಗೆದು ಕೊಳ್ಳ ಬಹುದು. ದೇಶದ ಬೆನ್ನೆಲುಬಿನಂತಿರುವ ರೈತರ ಮೇಲೆ ಘೋರ ಕೃತ್ಯಗಳನ್ನು ತರಬೇಡಿ ಎಂಬು ದಾಗಿ ನಾನು ಸರ್ಕಾರದವರಲ್ಲಿ ನಮ್ರತೆಯಿಂದ ವಿನಂತಿ ಮಾಡಿಕೊಂಡು ನನಗೆ ಮಾತನಾಡಲು ಇಷ್ಟು ಕಾಲಾವಕಾಶವನ್ನು ಅಧ್ಯಕ್ಷರು ಒದಗಿಸಿ ಕೊಟ್ಟುದಕ್ಕಾಗಿ ನಾನು ಅವರಿಗೆ ಆಭಾರಿ ಯಾಗಿದ್ದೇನೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಮಂತ್ರಿಗಳು ನಮ್ಮ ಮುಂದೆ ಮಂಡಿಸಿರತಕ್ಕಂಥ ಈ ಹೆಚ್ಚುವರಿ ಕಂದಾಯದ ಠರಾವನ್ನು ನಾನು ವಿರೋಧಿಸುತ್ತಾ ಹಾಗೆಯೇ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈ ದೇಶದಲ್ಲಿ ಶೇಕಡ 80ಕ್ಕಿಂತ ಹೆಚ್ಚಿಗೆ ಸಂಖ್ಯೆಯಲ್ಲಿರತಕ್ಕ ಈ ಒಂದು ರೈತವರ್ಗದಮೇಲೆ ಆರ್ಥಿಕ ವಾಗಿ, ಸಾಮಾಜಿಕವಾಗಿ ಮತ್ತು ಎಲ್ಲಾ ದೃಷ್ಟಿಯಿಂದಲೂ ದುಷ್ಪರಿಣಾಮವನ್ನು ಉಂಟುಮಾಡ ಬೇಕೆಂದು ಇಂತಹ ಕಠೋರವಾದಂಥ ಒಂದು ಬಿಲ್ಲನ್ನು ಸರ್ಕಾರ ಪುನರ್ಪರಿಶೀಲನೆ ಮಾಡತಕ್ಕದ್ದು ಬಹಳ ಅತ್ಯಾವಶ್ಯಕವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದನ್ನು ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ರೈತ ದೇಶದ ನಾಡಿನ ಬೆನ್ನುಮೂಳೆ ಎಂಬುದಾಗಿ ಮಂತ್ರಿಗಳಿಂದ ಹಿಡಿದು ಸಾಮಾನ್ಯ ಒಬ್ಬ ಅಧಿಕಾರಿಯತನಕ ಅನೂಚಾನವಾಗಿ ಬಾಯಲ್ಲಿ ಹೇಳತಕ್ಕದ್ದು ಒಂದು ರೂಢಿ ಯಾಗಿದೆ, ಅದು ಮಾಮೂಲಾಗಿ ಬಂದಿದೆ. ಆದರೆ ಎಲ್ಲಾ ಜನಗಳಿಗೂ ಅನ್ನವನ್ನು ಕೊಡತಕ್ಕ ರೈತ ನಾದವನು ಹಗಲಿರುಳೂ ದುಡಿದು ಆಹಾರಕ್ಕಾಗಿ ಕಷ್ಟಕಾರ್ಪಣ್ಯಗಳಲ್ಲಿ ತೊಡಗಿ ದೇಶಕ್ಕೆಲ್ಲಾ ನಿರಂತರವೂ ಅನ್ನವನ್ನು ಒದಗಿಸತಕ್ಕ ರೈತರ ಸ್ಥಿತಿಯನ್ನು ಯೋಚನೆ ಮಾಡತಕ್ಕ ಒಂದು ಪರಿಸ್ಥಿತಿ ಸರ್ಕಾರಕ್ಕೆ ಇಲ್ಲದೇ ಇರತಕ್ಕದ್ದು ಬಹಳ ಶೋಚನೀಯ. ಈ ಸಭೆಯ ಅನೇಕ ಮಾನ್ಯ ಸದಸ್ಯರು ಸರ್ಕಾರಕ್ಕೆ ಪರೋಕ್ಷವಾಗಿ ಹಾಗೂ ಪ್ರತ್ಯಕ್ಷವಾಗಿ ಈ ಸಭೆಯಲ್ಲಿ ಈ ಒಂದು ಮಸೂದೆಯನ್ನು ವಿರೋಧಿಸಿ ಹಾಗೂ ಈ ಬಿಲ್ಲಿಗೆ ಅನೇಕ ಮಾರ್ಪಾಡುಗಳನ್ನು ಸೂಚಿಸುವುದರ ಮೂಲಕ ರೈತರ ಹಿತವನ್ನು ಕೋರತಕ್ಕ ಸಲಹೆಗಳನ್ನೂ ಸಹ ಕೊಟ್ಟಿದ್ದಾರೆ. ಒಟ್ಟಾರೆ ಮಾನ್ಯ ರೆವಿನ್ಯೂ ಮಂತ್ರಿಗಳು ರೈತಾಪಿ ಜನಗಳಿಂದ ಬಂದಿರತಕ್ಕವರು ಆಗಿರುವುದರಿಂದ ಅವರೇ ಆತ್ಮತೃಪ್ತರಾಗಿ ಈ ಮಸೂದೆ ಯನ್ನು ಇಲ್ಲಿ ಮಂಡಿಸಿದ್ದಾರೋ ಅಥವಾ ಸರ್ಕಾರದ ಮಂತ್ರಿಮಂಡಲದಲ್ಲಿ ಅವರು ಇದ್ದು ಮಂತ್ರಿ ಮಂಡಲ ಒಟ್ಟಾರೆ ಇದ್ದು ಮಂತ್ರಿಮಂಡಲವೇ ಒಟ್ಟಾರೆ ಸೇರಿ ತೀರ್ಮಾನ ಕೈಕೊಳ್ಳಬೇಕೆಂದು ಮಾಡಿದ್ದಾರೋ ಏನೋ ಗೊತ್ತಿಲ್ಲ. ಈ ಒಂದು ಕಾರ್ಯಕ್ರಮದಲ್ಲಿ ನಾನು ಹಿಂದೆ ಬಿದ್ದರೆ ನನ್ನ ಸೂಚನೆ ಏನಾಗುತ್ತದೆಂಬುದನ್ನು ಅವರು ಯೋಚನೆ ಮಾಡಿ ಈ ಬಿಲ್ಲನ್ನು ತಂದಿದ್ದಾರೋ ಏನೋ ಎಂದು ನಾವೂ ಕೂಡ ಸ್ವಲ್ಪ ಯೋಚನೆಮಾಡ ಬೇಕಾಗುತ್ತದೆ.

5-00 P. M.

ಇದು ಬಹಳ ನೋವನ್ನು ಉಂಟುಮಾಡತಕ್ಕದ್ದಾಗಿದೆ. ದೇಶದ ಬಹುಭಾಗ ಜನತೆಯನ್ನು ಕಷ್ಟಕ್ಕೆ ಈಡು ಮಾಡತಕ್ಕಂಥ ಈ ಒಂದು ನಿರ್ಣಯವನ್ನು ಸರ್ಕಾರದವರು ಹಿಂದಕ್ಕೆ ತೆಗೆದುಕೊಳ್ಳ

ವುದು ಒಳ್ಳೆಯದು. ಮತ್ತು ಆ ರೀತಿ ಮಾಡುವುದರಿಂದ ಬಹಳ ಉತ್ತಮವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರೈತ ಬೆಳೆಯುತಕ್ಕ ದವಸ ಧಾನ್ಯಗಳ ಬೆಲೆ ಒಂದಕ್ಕೆ 6 ರಷ್ಟಾಗಿದೆ, 8 ರಷ್ಟಾಗಿದೆ ಎಂದು ಒಂದು ಕಡೆ ಹೇಳುತ್ತಾರೆ. ಭೂಮಿಯ ಬೆಲೆ ಜಾಸ್ತಿಯಾಗಿದೆ ಅದಕ್ಕೋಸ್ಕರ ಕಂದಾಯವನ್ನು ಜಾಸ್ತಿ ಮಾಡುತ್ತೇವೆ ಎಂದು ಒಂದುಕಡೆ ಹೇಳುತ್ತಾರೆ. ಇದು ಬಹಳ ದಿವಸಗಳ ಹಿಂದೆ ಕಂದಾಯವನ್ನು ನಿಗದಿ ಮಾಡಿದ್ದು, 30 ವರ್ಷಗಳಿಗೊಮ್ಮೆ ಕಂದಾಯವನ್ನು ಪುನರ್ ವಿಮರ್ಶೆ ಮಾಡತಕ್ಕದ್ದು ಸರ್ಕಾರದ ಕರ್ತವ್ಯ ಎಂದು ಇನ್ನೊಂದು ವಾದವನ್ನು ನಮ್ಮ ಮುಂದೆ ಇಡುತ್ತಾರೆ. ಈ ಎಲ್ಲಾ ವಾದಗಳನ್ನು ಒಪ್ಪಿಕೊಳ್ಳಬೇಕೆಂದು ಸರ್ಕಾರದವರು ಹೇಳುತ್ತಿದ್ದಾರೆ. ಆದರೆ ಅದೇರೀತಿ ಜನತೆಯ ಪ್ರತಿನಿಧಿಗಳಾಗಿ ರೈತರ ಪ್ರತಿನಿಧಿಗಳಾಗಿ ಬಂದಿರತಕ್ಕ ನಾವುಗಳೂಸಹ ಸರ್ಕಾರದ ಮುಂದೆ, ಈ ಸಭೆಯ ಮುಂದೆ ಇಡತಕ್ಕ ವಾದಗಳನ್ನು ಅಷ್ಟೇ ಸಹಾನುಭೂತಿಯಿಂದ ವಿಮರ್ಶೆ ಮಾಡತಕ್ಕದ್ದು ಸರ್ಕಾರದ ಪ್ರಮುಖ ಕರ್ತವ್ಯ ಎಂದು ನಾನಾದರೂ ಭಾವಿಸುತ್ತೇನೆ. ಈಗ ಆಹಾರ ಪದಾರ್ಥಗಳ ಬೆಲೆಗಳು ಜಾಸ್ತಿಯಾಗಿರಬಹುದು ನಿಜ. ಆದರೆ ಅದೇ ರೀತಿರೈತ ಕೊಳ್ಳತಕ್ಕಂಥ ಪದಾರ್ಥಗಳ ಬೆಲೆಗಳೂ ಯಾವ ಪ್ರಮಾಣದಲ್ಲಿ ಏರಿದೆ ಎನ್ನುವುದನ್ನೂ ಕೂಡ ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಒಂದಾಣೆ ಎರಡಾಣೆಗೆ ಕೊಂಡುಕೊಳ್ಳುತ್ತಿದ್ದಂತಹ ಗುಳದ ಬೆಲೆ ಇವೊತ್ತು ಒಂದೂವರೆ ರೂಪಾಯಿಗಳು ಆಗಿದೆ. ಅಷ್ಟು ಕೊಟ್ಟರೂ ಕೂಡ ಕೆಲವು ಸಂದರ್ಭದಲ್ಲಿ ಸಿಕ್ಕುವುದಿಲ್ಲ. ರೈತ ಕೊಳ್ಳತಕ್ಕ ಉಪ್ಪಿನಿಂದ ಹಿಡಿದು ಬಟ್ಟೆಯತನಕ ಪ್ರತಿಯೊಂದು ಪದಾರ್ಥದ ಬೆಲೆಯೂ ಕೂಡ ಒಂದಕ್ಕೆ 10 ರಷ್ಟು 12 ರಷ್ಟು ಕೆಲವು ಪದಾರ್ಥಗಳಬೆಲೆ 20ರಷ್ಟೋ ಆಗಿದೆ. ಈ ಒಂದು ದೃಷ್ಟಿಯಿಂದಲೂ ಕೂಡ ಸರ್ಕಾರದವರು ಏತಕ್ಕೆ ಯೋಚನೆ ಮಾಡಬಾರದು ? ಕೇವಲ ರೈತ ಬೆಳೆದ ಪದಾರ್ಥಗಳಿಗೆ ಮಾತ್ರಾ ಬೆಲೆ ಹೆಚ್ಚಾಗಿದೆ ಎನ್ನುವ ವಾದವನ್ನು ನಮ್ಮ ಮುಂದೆ ಇಡತಕ್ಕ ಸನ್ನಿವೇಶದಲ್ಲಿ ಈ ವಾದವನ್ನೂ ಸರ್ಕಾರದವರು ಏತಕ್ಕೆ ಯೋಚನೆ ಮಾಡಬಾರದು ? ರೈತನ ಆರ್ಥಿಕ ಸ್ಥಿತಿಯನ್ನೂ ಉತ್ತಮ ಪಡಿಸುವ ದೃಷ್ಟಿಯಿಂದ, ಅವನ ಕಷ್ಟಗಳನ್ನು ಬಗೆಹರಿಸುವ ದೃಷ್ಟಿಯಿಂದ ಸರ್ಕಾರದವರು ಏನು ಪ್ರಯತ್ನ ಮಾಡಿದ್ದಾರೆ ಎಂದು ನಾನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಆ ವಿಷಯವನ್ನು ಹೇಳುವುದಕ್ಕೆ ಸರ್ಕಾರದವರಿಗೆ ಮನಸ್ಸು ಇದೆಯೋ ಇಲ್ಲವೋ ಅದು ನನಗೆ ಗೊತ್ತಿಲ್ಲ. ನಾನು ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ; ಈಗ ತಾವು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯ ಏನಿದೆ ಇದರಿಂದ ದೇಶದ ಬಹು ಜನತೆಯ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಗೆ ಧಕ್ಕೆಯನ್ನು ತರತಕ್ಕದ್ದಾಗಿದೆ. ಆದ್ದರಿಂದ ಸರ್ಕಾರದವರು ದಯವಿಟ್ಟು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಮತ್ತೊಮ್ಮೆ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇನ್ನೂ ನಮ್ಮ ಡಿವಿಜನ್‌ನಲ್ಲಿ ಏನು ಮಾಡಿದ್ದಾರೆ ಎಂಬುದನ್ನು ನಾನು ಸ್ವಲ್ಪ ಹೇಳಬೇಕಾಗಿದೆ. ನಮ್ಮ ಡಿವಿಜನ್‌ನಲ್ಲಿ ಸೆಟ್ಲ್‌ಮೆಂಟ್ ಅಧಿಕಾರಿಗಳು ಉತ್ತಮವಾದ ಕೆಲವು ಸಲಹೆಗಳನ್ನು ಮಾಡಿದ್ದಾರೆ. ಅದರಲ್ಲಿ ವಾಸ್ತವಾಂಶ ವಿಚಾರಗಳು ಕೂಡ ಇದ್ದವು. ಆದರೆ ಕೊನೆಯ ಅಭಿಪ್ರಾಯದಲ್ಲಿ ಸರ್ಕಾರ ಆ ಒಂದು ವಾಸ್ತವಾಂಶಕ್ಕೂ ಕೂಡ ನಿರ್ದಿಷ್ಟವಾದ ಕೆಲವು ಸೂಚನೆಗಳನ್ನು ಕೊಟ್ಟಿರಬಹುದು ಎಂದು ಕಾಣುತ್ತಿದೆ. ಆ ಒಂದು ಸೂಚನೆಯ ಮೇಲೆ ಅವರು ವಾಸ್ತವಾಂಶಗಳನ್ನು ಬದಿಗೊತ್ತಿ ಕೆಲವರು ತಪ್ಪು ವರದಿಗಳನ್ನು ಮಾಡಿದ್ದಾರೆ. ಎಲ್ಲಾ ದೃಷ್ಟಿಯಿಂದಲೂ ಕೂಡ ಅವರ ವರದಿ ಸರಿಯಾಗಿದ್ದರೂ ಕೂಡ ಅಸೆಸ್‌ಮೆಂಟ್ ಫಿಕ್ಸ್ ಮಾಡುವುದರಲ್ಲಿ ಕೊನೆಯಲ್ಲಿ ಅದನ್ನು ಯದ್ವಾತದ್ವಾ ಮಾಡಿದ್ದಾರೆ. ಅದನ್ನು ಸರಿಯಾಗಿ ಮಾಡಿಲ್ಲ. ವಾಸ್ತವಾಂಶಗಳನ್ನು ಕಂಡೂ ಕೂಡ ಅವುಗಳನ್ನು ಬಚ್ಚಿಡತಕ್ಕದ್ದು ಸರಿಯಲ್ಲ. ತುರುವೇಕೆರೆ ತಾಲ್ಲೂಕಿಗೆ ಸಂಬಂಧಪಟ್ಟ ವರದಿಯಲ್ಲಿ

"TURUVEKERE TALUK:

The soil in the whole of Dabbeghatta hobli is red mixed with sand and so also in Kasba Hobli up to Manchenahalli in Banasandra road of Kasba Hobli. The soil is equally fertile in Dhandinashivara hobly where there are patches of good arecanut gardens under Samige and Sarigehalli Ammanikere tanks and Jodi Kurubarahalli. The soil in Mayasandra hobli adjoining Dabbeghatta hobli is brownish mixed with sand. The triangular bit commencing from Kallur road towards Mayasandra and leading on to Kunigal taluk, bordering Gubbi taluk and Kunigal taluk, is more grey and brown mixed with red

(ಶ್ರೀ ಬಿ. ಭೈರಪ್ಪಾಜಿ)

sand and very gravelly here and there, and not very fertile. The crops are mostly dry, In fact this is predominantly a millet growing area, not served with any good tanks worth mentioning except Mayasandra tank,a major tank.'' ಎಂದು ಹೇಳಿದ್ದಾರೆ.

ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿ ಬಹುಭಾಗ ಕಾಡು ಪ್ರದೇಶ. ಒಂದು ವರ್ಷದಲ್ಲಿ 3 ತಿಂಗಳಿಗೆ ಆಗುವಷ್ಟು ದವಸವನ್ನು ಬೆಳೆಯತಕ್ಕದ್ದೇ ಕಷ್ಟವಾಗಿದೆ. ಈ ವರ್ಷವಂತೂ ಕನಿಷ್ಟ ಪಕ್ಷ 2 ತಿಂಗಳಿಗೆ ಆಗುವಷ್ಟು ಬೆಳೆದರೆ ಹೆಚ್ಚು. ಈಗ ಕಂದಾಯವನ್ನು ಏರಿಸಿರತಕ್ಕ ಒಂದು ಪರಮಾವಧಿ ಏನಿದೆ ಎಂದರೆ 100ಕ್ಕೆ 190ರಷ್ಟು ಹೆಚ್ಚು ಮಾಡಿದ್ದಾರೆ. 100 ರೂಪಾಯಿ ಕಂದಾಯವನ್ನು ಕೊಡತಕ್ಕ ಒಬ್ಬ ಹಳ್ಳಿಯ ರೈತ ಈ ಒಂದು ನಿರ್ಣಯದ ಪ್ರಕಾರ ಕಂದಾಯವನ್ನು ಜಾಸ್ತಿ ಮಾಡುವುದಾದರೆ 300 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಈಗ ಅವನು 100 ರೂಪಾಯಿಗಳ ಕಂದಾಯವನ್ನು ಕೊಡಬೇಕಾದರೆ ತಹಶೀಲ್ದಾರರು ಮತ್ತು ರೆವಿನ್ಯೂ ಇನ್‌ಸ್ಪೆಕ್ಟರು ಹೋಗಿ ಅವನ ಎತ್ತು ಕರುಗಳನ್ನು ಹರಾಜು ಮಾಡುತ್ತಿದ್ದಾರೆ. ಈ ಹೊಸ ಕಂದಾಯವೇನಾದರೂ ಜಾರಿಗೆ ಬಂದರೆ ರೈತ ಚೆಂಬು ಮತ್ತು ತಟ್ಟೆಯನ್ನು ಕೂಡ ಹರಾಜು ಮಾಡಬೇಕಾದ ಸಂದರ್ಭ ಬರುತ್ತದೆಯೇನೋ ನನಗೆ ಗೊತ್ತಿಲ್ಲ. ನಿಜವಾಗಿಯೂ ಕೂಡ ಇದು ಬಹಳ ವಿಷಾದಕರವಾದದ್ದು. ಈ ತುರುವೇಕೆರೆ ತಾಲ್ಲೂಕಿನ ಸೆಟ್ಲ್‌ಮೆಂಟ್ ವರದಿಯನ್ನು ನೋಡುವುದಾದರೆ ಒಂದಕ್ಕೆ ಎರಡರಷ್ಟು ಮೂರರಷ್ಟು ಕಂದಾಯವನ್ನು ಜಾಸ್ತಿ ಮಾಡಿದ್ದಾರೆ. 100ಕ್ಕೆ 190ರಷ್ಟು 200ರಷ್ಟು ಜಾಸ್ತಿ ಮಾಡಿರತಕ್ಕ ಸಂದರ್ಭಗಳು ಇವೆ. ಯಾವ ಮೂಕ ತಾನೆ ಇದನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಸರ್ಕಾರದವರಲ್ಲಿ ನಾನು ಒಂದು ವಿಷಯವನ್ನು ಮನವಿ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಈರೀತಿ ಕಂದಾಯವನ್ನು ನಿಗದಿ ಮಾಡುವಾಗ ರೈತನಿಗೆ ಬೇಕಾದಂತಹ ಸೌಲಭ್ಯಗಳನ್ನು ಒದಗಿಸಿ ಕೊಟ್ಟಿದ್ದೀರಾ ಎಂದು ನಾನು ಹೇಳುತ್ತೇನೆ. 'ಕಡ ಹುಟ್ಟಿ ಬಡವ ಕೆಟ್ಟ' ಎಂದು ಒಂದು ಗಾದೆ ಇದೆ. ಅದನ್ನು ಈ ವರದಿಯನ್ನು ತಯಾರು ಮಾಡಿದಂತಹ ಅಧಿಕಾರಿಗಳು ಉಲ್ಲೇಖಿಸಿದ್ದಾರೆ. ಹಿಂದೆ ಕೂಡ ರೈತ ಅನಾವಶ್ಯಕವಾಗಿ ಸಾಲವನ್ನು ತೆಗೆದುಕೊಂಡು ಅದನ್ನು ಖರ್ಚುಮಾಡಿ ಅವನು ಸಾಲಗಾರನಾಗುತ್ತಿದ್ದ ಕಾಲ ಇತ್ತು. ಆದರೆ ಇವೊತ್ತು ಪರಿಸ್ಥಿತಿ ಬದಲಾವಣೆಯಾಗಿದೆ. ಹಿಂದೆ ಇದ್ದಂತಹ ಕನಡ್ನ ಗಾದೆಗೆ ಈಗ ತದ್‌ವಿರುದ್ಧವಾಗಿದೆ. ಇವೊತ್ತು ಕಡಾ ಹುಟ್ಟದೆ ಬಡವ ಕೆಡುತ್ತಿದ್ದಾನೆ ಎನ್ನುವುದು ಒಂದು ಮನೆಯ ಮಾತಾಗಿದೆ. ಇವೊತ್ತು ಸರ್ಕಾರದಿಂದ ರೈತನಿಗೆ ಸರಿಯಾಗಿ ಸಾಲ ಕೂಡ ದೊರೆಯುತ್ತಿಲ್ಲ. ರೈತ ಬಾವಿ ತೆಗೆಸುವುದಕ್ಕೆ ಸಾಲಕ್ಕೋಸ್ಕರ ಸರ್ಕಾರಕ್ಕೆ ಒಂದು ಅರ್ಜಿಯನ್ನು ಹಾಕಿದರೆ 3 ವರ್ಷ ಆದಮೇಲೆ ಅದನ್ನು ಕನ್ಸಿಡರ್ ಮಾಡುತ್ತೇವೆ ಎಂದು ಹೇಳುತ್ತಾರೆ. ಹೀಗೆ ಕಾಲವನ್ನು ಬದಲಾಯಿಸುತ್ತಾ ಅವನಿಗೆ ಆ ಸಾಲ ದೊರೆಯಬೇಕಾದರೆ 5-6 ವರ್ಷಗಳಾಗುತ್ತದೆ. ಗೊಬ್ಬರ ಕೊಡಿ ಎಂದರೆ ಅದನ್ನೂ ಕೂಡ ಸರಿಯಾಗಿ ಒದಗಿಸುತ್ತಿಲ್ಲ. ತಕಾವಿ ಸಾಲವನ್ನು ಕೊಡುವುದರಲ್ಲಿ ವಿಳಂಬ ಮಾಡುತ್ತಾರೆ. ಈರೀತಿ ರೈತನಿಗೆ ದೊರೆಯಬೇಕಾದ ಸಾಲ ಮತ್ತು ಇತರೇ ಸೌಲಭ್ಯಗಳು ಅವನಿಗೆ ಸಕಾಲದಲ್ಲಿ ದೊರೆಯುವುದಕ್ಕೆ ವ್ಯವಸ್ಥೆಯನ್ನು ಮಾಡಿಲ್ಲ. ಸರ್ಕಾರದವರು ರೈತನ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸದೇ ಇದ್ದರೆ ದೇಶವನ್ನು ಹೇಗೆ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ ? ಈಗಾಗಲೇ ರೈತ ಇನ್‌ಡೈರೆಕ್ಟಾಗಿ ಅನೇಕ ತೆರಿಗೆಗಳನ್ನು ಮೂಕ ಪ್ರಾಣಿಯಂತೆ ಸರ್ಕಾರಕ್ಕೆ ಕೊಡುತ್ತಿದ್ದಾನೆ. ಅವನ ಜೀವನವನ್ನು ಸುಧಾರಿಸುವುದಕ್ಕೆ ಸರ್ಕಾರದವರು ಯಾವ ಪ್ರಯತ್ನವನ್ನೂ ಮಾಡಿಲ್ಲ. ಈ ರೀತಿ ರೈತ ಕಷ್ಟ ಜೀವನವನ್ನು ನಡೆಸುತ್ತಿದ್ದರೂ ಕೂಡ, ಸರ್ಕಾರದವರು ರೈತನ ಗೋಳಿನ ಜೀವನವನ್ನು ನೋಡಿಯೂ ಕೂಡ ಸರ್ಕಾರದವರು ಈ ಸಭೆಯ ಮುಂದೆ ಈ ನಿರ್ಣಯವನ್ನು ತಂದಿರುವುದು ನ್ಯಾಯವೇ ಎಂದು ನಾನು ಕೇಳುತ್ತೇನೆ.

ರೈತ ತಾವು ಕೇಳಿದ್ದನ್ನು ಮೂಕ ಪ್ರಾಣಿಯಂತೆ ಕೊಡುತ್ತಾ ಇದ್ದಾನೆ. ಆದರೂ ಕೂಡ ಅವನಿಗೆ ಹೊಟ್ಟೆಗೆ ಬಟ್ಟೆಗೆ ಆಗಿ, ಅವನ ಸ್ಥಿತಿಯನ್ನು ಸುಧಾರಿಸುವುದಕ್ಕೆ ಅವಕಾಶ ಇಲ್ಲವಲ್ಲಾ. ಈರೀತಿ ಅವನ ಒಂದು ಕಷ್ಟ ಜೀವನವನ್ನು, ಗೋಳಿನ ಜೀವನವನ್ನು, ತಾವು ನೋಡುತ್ತಾ ಇದ್ದರೂ ಕೂಡ, ಈ ಒಂದು ನಿರ್ಣಯವನ್ನು ತಂದಿದ್ದೀರಿ. ಇದು ಅನ್ಯಾಯವಲ್ಲವೆ ? ಸ್ವಾಮಿ, ಹಿಂದಿನ ಪರಿಸ್ಥಿತಿಗೂ, ಈಗಿನ ಪರಿಸ್ಥಿತಿಗೂ ರೈತನಲ್ಲಿ ಏನಾದರೂ ವ್ಯತ್ಯಾಸವಾಗಿದೆಯೆ ಎಂದು ತಾವು ಮಂತ್ರಿಗಳು ಏನಾದರೂ ಯೋಚನೆ ಮಾಡಿದ್ದೀರಾ ಮಣ್ಣಿನ ಮನೆಯಲ್ಲಿದ್ದವನು ಹಂಚಿನ ಮನೆ

ಕಟ್ಟುವುದದಕ್ಕೆ ಸಾಧ್ಯವಾಗಿದೆಯೆ ? ಸಾಲ ಮಾಡಿದ್ದವರಲ್ಲ, ಎಷ್ಟು ಜನ ಸಾಲ ತೀರಿಸಿ, ಋಣ ಮುಕ್ತರಾಗುವುದಕ್ಕೆಸಾಧ್ಯವಾಗಿದೆ! ಯಾವ ರೈತನೂ ಕೂಡ ಸಾಲಗಾರನಾಗಿದ್ದವನು ಸಾಲಗಾರ ನಾಗಿಯೇ ಇದ್ದಾನೆ. ಅವನ ಯಾವ ಒಂದು ಕಷ್ಟವನ್ನೂ ನೀಗಿಸುವುದಕ್ಕೆ ಸರಕಾರ ಮುಂದೆ ಬರಲಿಲ್ಲ. ಈರೀತಿ ಇದ್ದರೂ ಕೂಡ, ಅವನ ಕಷ್ಟವನ್ನು ಕಂಡೂ ಕೂಡ ಈ ಮೂಕ ಪ್ರಾಣಿಯ ಮೇಲೆ ತಾವು ತೆರಿಗೆಯನ್ನು ಹೊರಿಸತಕ್ಕಂಥಾದ್ದು ಬಹಳ ತಪ್ಪು. ಈ ಒಂದು ನಿರ್ಣಯವನ್ನು ವಾಪಸ್ಸು ತೆಗೆದು ಕೊಳ್ಳುವುದಕ್ಕೆ ಯೋಚನೆ ಮಾಡಬೇಕಂತ ಹೇಳುತ್ತಾ ಇದ್ದೇನೆ.

ಪಟ್ಟಣವಾಸಿಗಳು ಎಲ್ಲಾ ಸೌಲಭ್ಯವನ್ನೂ ಹೊಂದಿದ್ದಾರೆ. ಆದರೂ ಕೂಡ ಅವರ ಒಂದು ಜೀವನ ಕಷ್ಟವಾಗಿದೆ; ಅವರು ಸುಖವಾಗಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ ಪಟ್ಟಣವಾಸಿ ಗಳಿಗೂ ಕಷ್ಟವಾಗಿದೆ. ಹಳ್ಳಿಯವಾಸ ಮತ್ತು ಪಟ್ಟಣವಾಸ-ಇವೆರಡರ ಹೋಲಿಕೆಗೆ ಹೋಗುವು ದಾದರೆ, ಪಟ್ಟಣವಾಸಿಗಳು ಉತ್ತಮವೆಂದು ಹೇಳ ನಾನು ಭಾವಿಸಿದ್ದೇನೆ. ಇದಕ್ಕೆ ಕಾರಣ ಕೊಡು ತ್ತೇನೆ. ಇಲ್ಲಿ ಒಬ್ಬ ಸಾಮಾನ್ಯ ಪ್ರಜೆ, ಅವನು ಗುಮಾಸ್ತೆ ದರ್ಜೆಯಲ್ಲಿದ್ದರೂ ಕೂಡ, ಅವನಿಗೆ ಎಷ್ಟೇಕಷ್ಟವಿದ್ದರೂ ಕೂಡ ಹಳ್ಳಿಯವಾಸಿಗಿಂತ ಉತ್ತಮತರದಲ್ಲಿ ಸಂಸಾರವನ್ನು ಸಾಗಿಸಿಕೊಂಡು ಹೋಗುತ್ತಿರುತ್ತಾನೆ. ಅವನ ಮಕ್ಕಳುಮರಿಗಳನ್ನು ವಿದ್ಯಾವಂತರನ್ನಾಗಿ ಮಾಡುತ್ತಾನೆ. ಸಮಾಜ ದಲ್ಲಿ ಅಂಥವರೂ ಕೂಡ ಭಾರತದ ಸತ್ಪ್ರಜೆಗಳಾಗಿ ಬಾಳಲು ಎಲ್ಲಾ ವ್ಯವಸ್ಥೆಮಾಡಿದೆ. ಅದೇ ಹಳ್ಳಿಯಲ್ಲಿರತಕ್ಕಂಥವನಿಗೆ 50 ಎಕರೆಯಲ್ಲಿ, 100 ಎಕರೆ ಜಮೀನಿದ್ದರೂ ಕೂಡ, ಅವನ ಮಕ್ಕಳನ್ನು ಕಾಲೇಜಿನ ಮಟ್ಟಕ್ಕೆ ಕಳುಹಿಸುವುದಕ್ಕೆ ಆಗುವುದಿಲ್ಲ. ಅವನ ಮಕ್ಕಳನ್ನು ಹೈಸ್ಕೂಲಿಗೆ ಕಳುಹಿಸುವುದಕ್ಕೆ ಸಾಧ್ಯವೆಂತ ಇಟ್ಟುಕೊಂಡರೂ ಕೂಡ, ಕಾಲೇಜು ಮೆಟ್ಟಲು ಹತ್ತಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ; ಇದು ಎಲ್ಲರಿಗೂ ಗೊತ್ತಿರುವ ಅಂಶ. ಈ ದಿವಸ ರೈತನ ಮಕ್ಕಳಿಗೆ ವಿದ್ಯಾವಂತರಾಗುವುದಕ್ಕೆ ಅವಕಾಶವಿಲ್ಲದೆ, ಅವಿದ್ಯಾವಂತರ ಸಂಖ್ಯೆ ಬೆಳೆಯುತ್ತಾ ಇದೆ. ಎರಡು ಹೊತ್ತು ಸುಖವಾಗಿ ಊಟಮಾಡುವುದಕ್ಕೆ ರೈತನ ಆರ್ಥಿಕ ಸ್ಥಿತಿ ಅವಕಾಶ ಕೊಡುತ್ತಾ ಇಲ್ಲ. ಶುಭ್ರವಾದ ಬಟ್ಟೆ ಹಾಕಿಕೊಳ್ಳುವುದಕ್ಕೆ ಅದು ಅವಕಾಶ ಕೊಡುತ್ತಾ ಇಲ್ಲ. ತುಪ್ಪ ಬೇಡ, ಎರಡು ಹೊತ್ತು ಮಜ್ಜಿಗೆ ಉಪಯೋಗಿಸುವುದಕ್ಕೆ ಒಬ್ಬ ದೊಡ್ಡ ರೈತನಿಗೆ ಆಗುತ್ತಾ ಇಲ್ಲ. ಇಂಥ ಕಷ್ಟ ಕಾರ್ಪಣ್ಯದ ಸ್ಥಿತಿ ಇರುವ ಈ ಮೂಕಪ್ರಾಣಿಯ ಮೇಲೆ ಕರಭಾರವನ್ನು ಹೆಚ್ಚಿಗೆ ಮಾಡಲು ಹೊರ ಟಿದ್ದೀರಿ. ಇದು ಯಾವ ಧರ್ಮನ್ಯಾಯ ಎಂದು ನಾನು ಕೇಳುತ್ತಾ ಇದ್ದೇನೆ.

ಸ್ವಾಮಿ, ಇನ್ನು ನಮ್ಮ ಮುಂದಿರತಕ್ಕಂಥ ರಿಪೋರ್ಟನ್ನು ನೋಡಿದರೆ, ಅನೇಕ ಅಂಶಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ತುರುವೇಕೆರೆ ತಾಲ್ಲೂಕನ್ನು ನೋಡುವುದಾದರೆ 20 ಹಳ್ಳಿಗಳನ್ನು ಮೊದ ಲನೆಯ ದರ್ಜೆಗೆ ಏರಿಸಿದ್ದಾರೆ; 216 ಹಳ್ಳಿಗಳನ್ನು 2ನೆ ದರ್ಜೆಗೆ ಏರಿಸಿದ್ದಾರೆ; 64 ಹಳ್ಳಿಗಳನ್ನು 3ನೆ ದರ್ಜೆಗೆ ಏರಿಸಿದ್ದಾರೆ. ಅನೇಕ ಮಂತ್ರಿಗಳು ನನ್ನ ಕ್ಷೇತ್ರದಲ್ಲಿ ತಿರುಗಿ ಬಂದಿದ್ದಾರೆ. ನಾಲ್ಕನೆ ದರ್ಜೆಗೆ ಕೂಡ ಸೇರಿಸುವುದಕ್ಕೆ ಲಾಯಕ್ಕಿರತಕ್ಕಂಥ ಹಳ್ಳಿಗಳನ್ನು ತಾವು 1-2-3ನೆ ದರ್ಜೆಗೆ ಸೇರಿಸಿದ್ದೀರಲ್ಲಾ, ಇದು ನಿಜವಾಗಿಯೂ ಕೂಡ ನ್ಯಾಯವೇ ? ಇದರಿಂದ ರೈತರ ಪರಿಸ್ಥಿತಿ ಏನಾ ಗುತ್ತದೆ ಅನ್ನುವುದನ್ನು ಸರಕಾರ ಮತ್ತೊಮ್ಮೆ ಯೋಚನೆ ಮಾಡಬೇಕು. ನಮ್ಮ ಡಿವಿಜನ್ನಿನಲ್ಲಿ ಸುಮಾರು 16 ಇಂಚು ಮಳೆಯಾಗುತ್ತದೆ. ಅದೂ ಎಲ್ಲಾ ತಾಲ್ಲೂಕಿನಲ್ಲಿ ಇಲ್ಲ. ಅನೇಕ ವರ್ಷದ ಇತಿಹಾಸವನ್ನು ತೆಗೆದುಕೊಂಡು ನೋಡುವುದಾದರೆ, ತುರುವೇಕೆರೆ ಮತ್ತು ಅಜುಬಾಜು ತಾಲ್ಲೂಕು ಗಳಲ್ಲಿ 16-20 ಇಂಚ್ ಮಳೆಯಾಗಿದೆ ಮಳೆಗಾಲದಲ್ಲಿ. ಮಳೆರಾಯನನ್ನೆ ನಂಬಿಕೊಂಡಿದ್ದಾರೆ ಈ ತಾಲ್ಲೂಕಿನ ರೈತ ಜನಾಂಗ. ಮಳೆ ಅನೇಕ ಸಲ ಸರಿಯಾದ ಕಾಲಕ್ಕೆ ಆಗುವುದಿಲ್ಲ. ಆಗ ಮಳೆರಾಯನನ್ನು ನಂಬಿಕೊಂಡ ರೈತರು ತೋಳರಾಯನಿಗೆ ಆಹುತಿಯಾಗಬೇಕಾಗುತ್ತೆಂದು ನಾನಾ ದರೂ ಹೇಳಬೇಕಾಗಿದೆ. ಮೊದಲು ಇಂದು ರೈತನಿಗೆ ಬೇಕಾದಂಥ ಎಲ್ಲಾ ಸೌಲಭ್ಯಗಳನ್ನೂ ಒದ ಗಿಸಿಕೊಡಿ; ಇನ್ನೂ ಹತ್ತಾರು ವರ್ಷ ಅವನ ಸ್ಥಿತಿಯನ್ನು ಉತ್ತಮಪಡಿಸಿ. ಅವನು ಮೊದಲು ಭಾರತದೇಶದಲ್ಲಿ ಗೌರವಸ್ಥನಾಗಿ, ಕಳಂಕರಹಿತ ಜೀವನವನ್ನು ನಡೆಸಲಿ; ಯಾವ ದಿವಸ ಅವನು ಈ ದೇಶದಲ್ಲಿ ಆ ರೀತಿ ಗೌರವ ಜೀವನವನ್ನು ನಡೆಸಲು ಸಮರ್ಥನಾಗುತ್ತಾನೊ, ಅಂದು ಈ ಒಂದು ತೆರಿಗೆಯನ್ನು, ಕರಭಾರವನ್ನು ಅವನ ಮೇಲೆ ಹೇರಿ. ಅಲ್ಲಿಯತನಕ ಇದನ್ನು ತಡೆಹಿಡಿಯಬೇಕೆಂದು ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ನಿಮ್ಮ ಆಫೀಸರುಗಳು, ಕಾಸ್ಟ್ ಆಫ್ ಕಲ್ಟಿವೇಷನ್ ಬಗ್ಗೆ ಹೇಳುವಾಗ, ಕೋಡಿ ನಾಗ ಸಂದ್ರದ ಬಗ್ಗೆ ಒಂದು ಕಡೆ ತಿಳಿಸಿದ್ದಾರೆ. ಒಂದು ಎಕರೆ ಡ್ರೈಲ್ಯಾಂಡಿಗೆ ಲೆಕ್ಕ ಹಾಕಿದ್ದಾರೆ. ಅವರು ಲೆಕ್ಕ ಹಾಕಿರುವುದು ತಪ್ಪು. 4 ಹೇರು ಮಾಡಬಹುದು ಎಂದು ಹೇಳಿದ್ದಾರೆ. ಒಂದು ಹೇರಿಗೆ ಈಗ 2 ರೂಪಾಯಿ ಕೊಟ್ಟರೂ ಬರುವುದಿಲ್ಲ. ಒಂದೂವರೆ ರೂಪಾಯಿ ಎಂದು ಅವರು ಲೆಕ್ಕ ಹಾಕಿದ್ದಾರೆ. ಕುಯ್ಯುವುದಕ್ಕೆ, ಒಕ್ಕಣೆಮಾಡುವುದಕ್ಕೆ, ಕಳೆತೆಗೆಯುವುದಕ್ಕೆ ಲೆಕ್ಕಹಾಕಿಲ್ಲ. ಒಂದು ಎಕರೆಗೆ ರೂ. 137·75 ತೋರಿಸಿದೆ. ಆ ಗ್ರಾಮದಲ್ಲಿ ಉತ್ಕೃಷ್ಟವಾಗಿ ಬೆಳೆಯುಂಥ

(ಶ್ರೀ ಬಿ. ಬೈರಪ್ಪಾಜಿ)

ಭೂಮಿ ಅಂದರೆ, ಒಂದು ಎಕರೆಗೆ 2 ಪಲ್ಲದಿಂದ ಹಿಡಿದು 3 ಪಲ್ಲದವರೆಗೆ ಬೆಳೆಯ ಬಹುದು ಎಂದು ಲೆಕ್ಕ ಹಾಕಬಹುದು; ಅದರಂತೆ ಒಂದು ಪಲ್ಲ ರಾಗಿಗೆ 40 ರೂಪಾಯಿ ಕಟ್ಟಿಕೊಂಡರೆ 120 ರೂಪಾಯಾಯಿತು ; 50 ರೂಪಾಯಿ ಒಂದು ಪಲ್ಲಕ್ಕೆ ಎಂದು ನಿಗದಿ ಮಾಡಿದರೂ 150 ರೂಪಾಯಾಯಿತು. ಇದರಲ್ಲಿ ಕಂದಾಯ ಸೇರಿಸಿಲ್ಲ. ಇದು ಎಲ್ಲಾ ಸೇರಿಸಿದರೆ 140 ರೂಪಾಯಿ ಚಿಲ್ಲರೆಗೆ ಬಂದಿತು. ಅವನಿಗೆ ಬರತಕ್ಕಂಥ ಆದಾಯ 150 ರೂಪಾಯಿ. ಭೂಮಿಗೆ ಸಣ್ಣ ಪುಟ್ಟ ಕೆಲಸ ಮಾಡುತ್ತಾನೆ. ಅದರ ಖರ್ಚನ್ನೆಲ್ಲಾ ಲೆಕ್ಕ ಹಾಕಿದರೆ, ಅವನ ಮೇಲೇ ಇನ್ನೂ ಲುಕ್ಸಾನು ಬರುತ್ತದೆ. ತಾವೇ ಕೇಳಿದ್ದೀರಿ. ವೈಶ್ಯರು ವ್ಯವಸಾಯ ಏಕೆ ಬಿಟ್ಟರು ಅಂತ ಈ ಕಸಬು ವ್ಯವಸಾಯ ವೃತ್ತಿ ಲಾಭದಾಯಕವಾಗಿರಲಿಲ್ಲ. ಅವರು ಲೆಕ್ಕ ಹಾಕಿದ ಮೇಲೆ, ಜಿಗಣಿ ಕಾಸು ಅವರ ಮೇಲೆ ಬಂತು.

[MR. SPEAKER in the Chair.]

ಇದರಿಂದೇನೂ ಪ್ರಯೋಜನವಿಲ್ಲ. ವ್ಯವಸಾಯವನ್ನು ಬಿಟ್ಟು ಬಿಟ್ಟು ಆ ಜನ ಈಗ ವ್ಯಾಪಾರ ಮಾಡಲಿಕ್ಕೆ ಹೊರಟಿದ್ದಾರೆ. ಏಕೆಂದರೆ ವ್ಯವಸಾಯ ಲಾಭದಾಯಕವಲ್ಲ ಎಂದು ಜಿಗಣಿ ಕಾಸು ಮೇಲೆ ಹೇಗೆ ಬಂತು ಎನ್ನುವುದನ್ನು ಹೇಳುತ್ತಿದ್ದೆ. ಹೀಗೆ ಕಷ್ಟದಲ್ಲಿರುವ ರೈತರ ಸ್ಥಿತಿಯನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಅವರುಗಳು ಎಷ್ಟು ಕಷ್ಟದಿಂದ ಅವರ ಜೀವಮಾನವನ್ನು ಸಾಗಿಸುತ್ತಿದ್ದಾರೆ ಎನ್ನುವುದನ್ನು ಮನಸ್ಸಿಗೆ ತೆಗೆದುಕೊಂಡು ಅವರ ಮೇಲೆ ಹೊರಲಾಗದಂತಹ ಕರಭಾರವನ್ನು ಹಾಕಲು ತರಬೇಡಿ. ರೈತನ ಸ್ಥಿತಿಯನ್ನು ಉತ್ತಮಪಡಿಸುವ ತನಕ ಅವನ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಉತ್ತಮ ಮಾಡುವ ತನಕ ಅವನ ಮೇಲೆ ಕರಭಾರವನ್ನು ಹೊರಿಸಲು ತರಬೇಡಿ ಎಂದು ಸರಕಾರಕ್ಕೆ ಸೂಚನೆ ಕೊಟ್ಟು ಅಧ್ಯಕ್ಷರು ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟಿದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri L. B. BIRJE.—(in Marathi).

5-30 P.M.

† ಶ್ರೀ ಎಚ್. ಆರ್. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೇ, ನಮ್ಮ ದೇಶದಲ್ಲಿ 30 ವರ್ಷಕ್ಕೆ ಒಂದು ಸಲ ಲ್ಯಾಂಡ್ ರೆವನ್ಯೂ ರೀ-ಸೆಟ್ಲ್‌ಮೆಂಟ್ ಮಾಡಿ ಆಗಿಂದಾಗ್ಗೆ ಅದನ್ನು ಜಾರಿಗೆ ತರುತ್ತಿದ್ದಾರೆ. ಅದಕ್ಕೆ ಅನುಸಾರವಾಗಿ ಈಗ ಅದನ್ನು ತಂದಿದ್ದರೂ ಕೂಡ ಇದರಲ್ಲಿ ವಿಪರೀತ ವ್ಯತ್ಯಾಸವಿದೆ. ಸಾಮಾನ್ಯವಾಗಿ 30 ವರ್ಷಕ್ಕೆ ತರುತ್ತಾ ಇರತಕ್ಕಂಥ ರಿವಿಜನ್ ಸೆಟ್ಲ್‌ಮೆಂಟಕ್ಕೂ ಈಗ ತಂದಿರತಕ್ಕಂಥಾದ್ದಕ್ಕೂ ವ್ಯತ್ಯಾಸ ಇದೆ. ಇದು ಬೇರೆಯಾಗಿದೆ. ರಿವಿಜನ್ ಸೆಟ್ಲ್‌ಮೆಂಟಿನ ಉದ್ದೇಶ ಏನಿವೆ ಅಂದರೆ ರೈತ ಸಾಗುವಳಿ ಮಾಡತಕ್ಕಂಥ ಜಮೀನಿನಲ್ಲಿ ಏನಾದರೂ ಮಾರ್ಪಾಟು ಆಗಿದೆಯೇ, ಸ್ಥಿತಿಗತಿಗಳು ಬದಲಿಸಿರುತ್ತವೆಯೇ, ರೈತನ ದೃಷ್ಟಿಯಿಂದ ಅನುಕೂಲ ಮಾಡಿಕೊಡುವ ಸಂದರ್ಭ ಇದೆಯೇ ಎನ್ನುವುದನ್ನು ನೋಡಿಕೊಂಡು ರಿವಿಜನ್ ಸೆಟ್ಲ್‌ಮೆಂಟ್ ತರುತ್ತಿದ್ದರೆ. ಆದರೆ ಈಗ ರಿವಿಜನ್ ಸೆಟ್ಲ್‌ಮೆಂಟಿನ ಉದ್ದೇಶ ಕಂದಾಯ ಹೆಚ್ಚಿಸಿ ದೇಶದ ಆದಾಯ ಹೆಚ್ಚು ಮಾಡತಕ್ಕಂಥ ಏಕ ಮಾತ್ರ ಉದ್ದೇಶ ಆಗಿದೆ.

ಈ ಉದ್ದೇಶ ಸಾಧುವಾದ ಉದ್ದೇಶವಲ್ಲ. ದೇಶದ ಹಿತದೃಷ್ಟಿಯಿಂದ ಸೋಷಿಯಲ್ ಎಕಾನಮಿಗೆ ತೀರ ವಿರುದ್ಧವಾದುದ್ದು. ಆರ್ಥಿಕ ದೃಷ್ಟಿಯಿಂದ ನೋಡಿದರೂ ಕೂಡ ಸರ್ಕಾರಕ್ಕೆ ಒಳ್ಳೆಯದಲ್ಲ. ಸಾಮಾಜಿಕ ದೃಷ್ಟಿಯಿಂದ ಇದು ವಿರುದ್ಧವಾಗಿದೆ. ಈ ಜಮೀನು ಕಂದಾಯವನ್ನು ಪುನರ್ವಿಮರ್ಶೆ ಮಾಡುವುದರಿಂದ ಬರಬಹುದಾದ ಹೆಚ್ಚಿನ ಪ್ರಮಾಣದ ಆದಾಯ ಏನಿದೆ ಅದು ಸಮಾಜದಲ್ಲಿ ಕಲ್ಪಿಸಬಹುದಾದ ಒಂದು ಪಾತ್ರವನ್ನು ತೆಗೆದುಕೊಂಡರೆ ಅದರಿಂದ ನಮ್ಮ ದೇಶಕ್ಕೆ ಅನರ್ಥವುಂಟಾಗುತ್ತದೆ. ಇವತ್ತು ಆರ್ಥಿಕಸ್ಥಿತಿಯಲ್ಲಿ ಕೇವಲ ಕೊನೆಯ ಮೆಟ್ಟಿಲಿನಲ್ಲಿರತಕ್ಕ ಒಬ್ಬ ರೈತನ ಮೇಲೆ ಅಧಿಕ ತೆರಿಗೆಯ ಹೊರೆ ಇಲ್ಲದೇ ಇದ್ದರೂ ಕೂಡ ಅವನ ಆರ್ಥಿಕ ಮಟ್ಟ ಬಹಳ ಕೆಳಮಟ್ಟದಲ್ಲಿದೆ. ಇನ್ನು ಈ ತರಹದಲ್ಲಿ ತೆರಿಗೆಯ ಹೊರೆಯನ್ನು ಹೆಚ್ಚಾಗಿ ಅವನ ಮೇಲೆ ಹೊರಿಸಿದ ಪಕ್ಷದಲ್ಲಿ ರೈತನ ಪ್ರಾಣವೇ ಉಳಿಯುವುದಿಲ್ಲ. ಅವನ ಅಳಿವು ಸಿದ್ಧಾಂತವಾದದ್ದು

ಎಂದು ಹೇಳಿ ಘಂಟಾಘೋಷವಾಗಿ ಊಹಿಸಬಹುದು, ಹೇಳಬಹುದು. ಇವತ್ತು ಪ್ರೋಗ್ರೆಸ್ಸೀವ್ ಸ್ಟೇಟ್ ಆದ ಅಮೆರಿಕಾ ಆಗಲಿ ರಷ್ಯಾ ಆಗಲಿ ಬ್ರಿಟನ್ ಆಗಲಿ ಯಾವುದನ್ನೇ ತೆಗೆದುಕೊಂಡರೂ ಅವರು ಟ್ಯಾಕ್ಸ್ ಫ್ರೀ ಸ್ಟೇಟ್ ಮಾಡಬೇಕು ಎಂದು ಹೇಳುತ್ತಾ ಇದ್ದಾರೆ. ರೈತವರ್ಗದವರಿಗೆ ಯಾವ ತೆರಿಗೆಯೂ ಇಲ್ಲದಂತೆ ಅವನನ್ನು ಬಿಟ್ಟುಬಿಡಬೇಕೆಂಬ ಸಮಗ್ರ ಉದ್ದೇಶವನ್ನು ಅವರೆಲ್ಲರೂ ಹೊಂದಿರುತ್ತಾರೆ. ಅದೇ ನಮ್ಮ ದೇಶದಲ್ಲಿ 1947 ನೇ ಇಸವಿಯಲ್ಲಿ ಕಾಂಗ್ರೆಸ್ ಪಕ್ಷದವರ ಧ್ಯೇಯ ಧೋರಣೆಗಳನ್ನು ಅವತ್ತಿನ ದಿವಸ ಏನಿದ್ದವು, ಇವತ್ತು ಏನಿದೆ ಎಂಬುದನ್ನು ನಾವು ನೋಡಿದ್ದೇ ಆದರೆ ಅವತ್ತಿಗೂ ಇವತ್ತಿಗೂ ಒಂದಕ್ಕೊಂದು ತದ್ವಿರುದ್ಧವಾಗಿದೆ. ಅವತ್ತಿನ ದಿವಸ ರೈತನ ಮೇಲೆ ಯಾವ ಹೊಸ ತೆರಿಗೆಯನ್ನೂ ಹಾಕುವುದಿಲ್ಲ ಇರತಕ್ಕ ತೆರಿಗೆಗಳನ್ನೆಲ್ಲಾ ಕಡಿಮೆ ಮಾಡುತ್ತೇವೆ ಮತ್ತು ಸಾಧ್ಯವಾದ ಮಟ್ಟಿಗೆ ರೈತನ ವ್ಯವಸಾಯದ ಕಸಬು ಅಭಿವೃದ್ಧಿಗೆ ಬರುವುದಕ್ಕೆ ಎಷ್ಟು ಉತ್ತೇಜನ ಕೊಡಬೇಕೋ ಅಷ್ಟೂ ಕೊಟ್ಟು, ಎಷ್ಟು ಆರ್ಥಿಕ ಸಹಾಯವನ್ನು ಸರ್ಕಾರ ಕೊಡಬಲ್ಲುದೋ ಅಷ್ಟನ್ನೂ ಕೊಡುತ್ತೇವೆ ಎಂದು ಘೋಷಣೆ ಮಾಡಿ, ರೈತನ ಬಲದಿಂದ ಹದಿನೇಳು ವರ್ಷ ರಾಜ್ಯಭಾರ ಮಾಡಿಕೊಂಡು ಬಂದಿದ್ದೀರಿ. ರೈತನಿಂದ ವರತೆಗೆದುಕೊಂಡು ಇವತ್ತು ಭಸ್ಮಾಸುರರಾಗಿ ಅವನ ಮೇಲೆ ಹಸ್ತ ಇಡುವುದಕ್ಕೆ ಹೊರಟಿದ್ದೀರಿ. ಹೀಗೆ ಮಾಡಿದರೆ ಮುಂದೆ ನಿಮ್ಮ ಭವಿಷ್ಯ ಏನಾಗುತ್ತದೆ ಎಂಬುದನ್ನು ನೀವೇ ಊಹಿಸಿಕೊಳ್ಳಬಹುದು. ಈ ರೀತಿ ಕಂದಾಯವನ್ನು ಹೆಚ್ಚು ಮಾಡಿರುವುದು ಅವರಿಗೆ ಇದು ಒಂದು ಪೊಲಿಟಿಕಲ್ ಬಾಂಬ್ ಇದ್ದಹಾಗೆ ಇದೆ. ಇದು ಒಂದು ಟೈಂ ಬಾಂಬ್, ಇದಕ್ಕೆ ಎರಡು ವರ್ಷ ಅವಧಿ ಇದೆ, ಇದು ಎಕ್ಸ್‌ಪ್ಲೋಡ್ ಆದರೆ ಯಾವ ರೀತಿಯ ರೋಗ ತಗಲುತ್ತದೆ ಎಂಬುದನ್ನು ಅವರೇ ಊಹೆ ಮಾಡಿಕೊಳ್ಳಬೇಕು. ನಾನಾದರೂ ಸಲಹೆ ಮಾಡುವುದು ಇಷ್ಟೆ. ಯಾವ ಮುಂದುವರಿದ ರಾಷ್ಟ್ರವೂ ಕೂಡ ಬೇಸಿಕ್ ಲ್ಯಾಂಡ್ ಟ್ಯಾಕ್ಸ್ ಏನಿದೆ ಅದನ್ನು ಮೆಡಲ್ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ಪ್ರಪಂಚದಲ್ಲಿ ಎಲ್ಲರೂ ನಾಗರಿಕತೆಯ ಪರಿಣಾಮವಾಗಿ ಸುಖಲೋಲುಪ್ತರಾಗಿ ಇದ್ದಾರೆ. ಸೈನ್ಸ್ ಮತ್ತು ಟೆಕ್ನಾಲಜಿಯ ಸಹಾಯದಿಂದ ಸುಖವನ್ನು ಅನುಭವಿಸತಕ್ಕ ಪಟ್ಟಣವಾಸಿಗರಿಗೆ ಎಲ್ಲಾ ಸುಖವೂ ಇರಲಿ ರೈತರು ತ್ಯಾಗಿಗಳಾಗಿ ಕಾಡು ಮೇಡುಗಳಲ್ಲಿ ವಾಸಮಾಡಿಕೊಂಡು ಇರಲಿ, ಅವರ ಪಾಲಿಗೆ ಬಂದ ಕಷ್ಟವನ್ನು ಅವರು ಅನುಭವಿಸಿಕೊಂಡು ಇರಲಿ ಎಂದು ಹೇಳಿದರೆ ಅದು ಎಷ್ಟಕ್ಕೂ ಸರಿಹೋಗುವುದಿಲ್ಲ. ರೈತ ಜನಾಂಗದ ಮೇಲೆ ಹೆಚ್ಚಿನ ತೆರಿಗೆಯ ಹೊರೆಯನ್ನು ಹೇರಿ ಅವರ ಪಾಡಿಗೆ ಅವರು ಇರದಂತೆ ಮಾಡತಕ್ಕ ಈ ಸರ್ಕಾರದ ನಿಲುವು ಸರಿಯೇ ಎಂದು ಮಾತ್ರ ನಾನು ಅವರನ್ನು ಕೇಳುತ್ತೇನೆ. ಅವರು ನೀವು ಎಷ್ಟಾದರೂ ಸುಖ ಪಡಿ, ಎಷ್ಟಾದರೂ ಮಜಾ ಮಾಡಿ ನಮ್ಮ ತಂಟೆಗೆ ಬರಬೇಡಿ ನಮ್ಮ ಮೇಲೆ ಹೆಚ್ಚಿನ ಹೊರೆಯನ್ನು ಹಾಕಬೇಡಿ ಎಂದು ಹೇಳುತ್ತಾರೆ. ಭೂಮಿ ತಾಯಿ ಬೆಳೆ ಬೆಳೆಸುತ್ತಾಳೆ; ದೇವೇಂದ್ರ ಮಳೆ ಕೊಡುತ್ತಾನೆ, ಬಸವಣ್ಣ ಹೊಲ ಉಳುತ್ತಾನೆ ನಮ್ಮಿಂದ ನಿಮಗೆ ಏನು ಅನುಕೂಲ ಬೇಕೋ ಅದನ್ನು ನಾವು ಮಾಡಿಕೊಡುತ್ತೇವೆ, ಆದರೆ ನಮ್ಮ ತಂಟೆಗೆ ಮಾತ್ರ ಬರಬೇಡಿ ಎಂದು ಅವರು ಹೇಳುತ್ತಾರೆ. ನೀವು ಎಷ್ಟೇ ಸುಖ ಲೋಲುಪ್ತರಾಗಿ, ಎಷ್ಟೇ ಮೆರೆಯುತ್ತಾ ಇದ್ದರೂ ಕೂಡ ನಿಮ್ಮನ್ನು ಕಂಡು ರೈತವರ್ಗ ಅಸೂಯೆ ಪಡುವುದಿಲ್ಲ. ಅವರ ಒಂದು ಜೀವನ ಮಟ್ಟ ಮುಂದುವರಿದ ನಾಗರಿಕ ಜೀವನ ಮಟ್ಟಕ್ಕೆ ಹೋಲಿಸಿ ನೋಡಿದರೆ ಬೃಹತ್ ಅಂತರ ಕಂಡುಬರದಿದ್ದರೂ ಕೂಡ ಅವರು ಅಸೂಯೆ ಪಡದೇ ಇರುವುದರಿಂದ ಅವರಿಗೆ ಹೆಚ್ಚು ತೊಂದರೆ ಕೊಡುವುದಕ್ಕೆ ಹೋಗಬೇಡಿ, ಕಂದಾಯವನ್ನು ಜಾಸ್ತಿಮಾಡಬೇಡಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ.

ಮೊದಲು ರಾಗಿ ಎರಡು ರೂಪಾಯಿ ಇತ್ತು, ಅಕ್ಕಿ 4 ರೂಪಾಯಿ ಇತ್ತು ಈಗ ರಾಗಿ 50 ರೂಪಾಯಿ ಆಗಿದೆ, ಅಕ್ಕಿ 100 ರೂಪಾಯಿ ಆಗಿದೆ, ಧಾರಣೆವಾಸಿ ಏರಿದೆ ಆದ್ದರಿಂದ ರೈತರು ಸಲೀಸಾಗಿ ಈ ಹೆಚ್ಚುವರಿಯನ್ನು ಕೊಡಬಹುದು ಎಂದು ಹೇಳುತ್ತೀರಿ. ನಮ್ಮ ಇಂಡಿಯಾದೇಶದಲ್ಲಿ ಹೆಚ್ಚು ಬೆಲೆ ಆಗಬೇಕಾದರೆ ಅದಕ್ಕೆ ಕಾರಣ ಕ್ಷಾಮ ಮತ್ತು ಆಹಾರ ಧಾನ್ಯಗಳ ಕೊರತೆ ಇದರಿಂದ ಆಹಾರಧಾನ್ಯಗಳ ಬೆಲೆ ಹೆಚ್ಚಾಗಿದೆ ಎಂದು ಹೇಳುತ್ತಾರೆ. ಇದೂ ಅಲ್ಲದೇ ಇನ್ನೂ ಅನೇಕ ಕಾರಣಗಳು ಇವೆ. ಆಹಾರಧಾನ್ಯದಲ್ಲಿ ಕೊರತೆ ಇರುವುದರಿಂದ ಹೆಚ್ಚು ಧಾರಣೆಯಾಗಿದೆ ಎಂಬುದು ಖಂಡಿತವಾಗಿಯೂ ನಿಜ. ಸರ್ಕಾರದ ಒಂದು ಪ್ರಯತ್ನದಿಂದ ಅಥವಾ ಸರ್ಕಾರದ ಒಂದು ಆರ್ಥಿಕ ನೀತಿಯಿಂದ ಅಥವಾ ವ್ಯವಸಾಯಕ್ಕೆ ಕೊಡತಕ್ಕ ಉತ್ತೇಜನದಿಂದ ಧಾರಣೆವಾಸಿ ಜಾಸ್ತಿಯಾಗಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನಿಮ್ಮ ಪ್ರಯತ್ನದಿಂದ ಯಾವ ರೀತಿಯಲ್ಲೂ ಕೂಡ ಬೆಲೆ ಮೇಲಕ್ಕೆ ಹೋಗಿಲ್ಲ. ಅಭಾವ ಇರುವುದರಿಂದ ಸ್ಪೆಕ್ಯೂಲೇಷನ್ ಇರುವುದರಿಂದ, ಇನ್‌ಫ್ಲೇಂಡ್ ಕರೆನ್ಸಿ ಇರುವುದರಿಂದ ಹೆಚ್ಚು ಧಾರಣೆಗೆ ಅವಕಾಶವಾಗಿದೆ. ಇವತ್ತು ರೈತನೂ ಕೂಡ ಹೆಚ್ಚು ಧಾರಣೆ ಕೊಟ್ಟು ಆಹಾರ ಧಾನ್ಯಗಳನ್ನು ಕೊಂಡು ತಿನ್ನಬೇಕಾಗಿದೆ. ಇವತ್ತು ದೊಡ್ಡ ಮನುಷ್ಯನಾಗಲಿ, ಮಧ್ಯಮ ತರಗತಿಯ ಮನುಷ್ಯನಾಗಲಿ, ರೈತನಾಗಲಿ ಅವರ ಪರಿಸ್ಥಿತಿ ಯಾವ ರೀತಿ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಯಾಗಿದೆ ಎಂಬುದನ್ನು ತಾವು ಪರೀಕ್ಷೆ ಮಾಡಿ ನೋಡಿ; ರೈತ ಹೊಟ್ಟೆಗಿಲ್ಲದೆ ಕೊನೇ ಪಕ್ಷ 3-4 ಪೌಂಡ್ ಆದರೂ ಇಳಿದಿದ್ದಾನೆ. ಆತನು ಯಾವ ರೀತಿಯಲ್ಲೂ ಮುಂದಕ್ಕೆ ಬಂದಿಲ್ಲ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಭೂಮಿಯ ಮೇಲೆ ಕಂದಾಯವನ್ನು ಹಾಕುವುದಕ್ಕೆ ತಮಗೆ ಸ್ವಲ್ಪವೂ ಕೂಡ ಅಧಿಕಾರವೇ ಇಲ್ಲ. ಭೂ ಕಂದಾಯ ಎಂದರೆ it is governed by law of diminishing returns. ಭೂಮಿಯ ಮೇಲೆ ವರ್ಷೇ ವರ್ಷೇ ಬೆಳೆ ಇಡುತ್ತಾ ಇದ್ದರೆ ಅದರ ಸಾರ ಹೋಗುತ್ತಾ ಇರುತ್ತದೆ ಆದ್ದರಿಂದ ಕಂದಾಯವನ್ನು ಯಾವ ರೀತಿಯಲ್ಲೂ ಜಾಸ್ತಿ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಹೆಚ್ಚು ಬೆಳೆ ಬರಬೇಕಾದರೆ ಅದು ರೈತನ ಪ್ರಯತ್ನದಿಂದ ಮಾತ್ರ ಸಾಧ್ಯ. ಅದೂ ಅವನು ಹಾಕತಕ್ಕ ಬಂಡವಾಳ ಮತ್ತು ಅವನು ಮಾಡತಕ್ಕ ಇನ್‌ಟೆನ್ಸೀವ್ ಕಲ್ಟಿವೇಷನ್ ಇದರಿಂದ ಮಾತ್ರ ಹೆಚ್ಚು ಆದಾಯ ಬರುತ್ತದೆ. ರೈತನ ಸ್ವಪ್ರಯತ್ನದಿಂದ ಹೆಚ್ಚು ಆದಾಯ ಬರುತ್ತಾ ಇರುವಾಗ ಅದರ ಮೇಲೆ ಸರ್ಕಾರ ಟ್ಯಾಕ್ಸ್ ಹಾಕುವುದಕ್ಕೆ ಏನು ಅಧಿಕಾರವಿದೆ ಎಂಬುದನ್ನು ತಾವು ದಯವಿಟ್ಟು ಹೇಳಬೇಕು. ಟ್ಯಾಕ್ಸ್ ಹಾಕಬೇಡಿ ಎಂದು ಹೇಳುವುದಿಲ್ಲ ಆದರೆ ಕೇವಲ ಬಡ ರೈತ 5 ಎಕರೆಗೂ ಕಡಿಮೆ ಇರತಕ್ಕ ರೈತ ಹಗಲು ರಾತ್ರಿ ಹೊಲದಲ್ಲಿ ಕೆಲಸ ಮಾಡಿ ಜೀವನ ಮಾಡಬೇಕಾಗಿರುವಾಗ ಅವನ ಮೇಲೆ ಹೊರಲಾರದ ಹೊರೆಯನ್ನು ಹೊರಿಸತಕ್ಕ ಈ ಘೋರ ರೂಪವನ್ನು ತಾಳಿದರೆ ಇದು ತಮಗೆ ತಕ್ಕದ್ದೇ ಎಂಬುದನ್ನು ಆಲೋಚನೆ ಮಾಡಿ. ಗ್ರಾಸ್‌ಯೀಲ್ಡ್ ಮೇಲೆ ಆರೂಕಾಲು ಪರ್ಸೆಂಟ್ ಹಾಕಿದ್ದೀರಿ, ಅದು ಸರ್ವಥಾ ನ್ಯಾಯವಲ್ಲ. ಶ್ರೀಮಾನ್ ರಾಮಚಂದ್ರ ರಾಯರ ಎಕಾನಮಿ ರಿಪೋರ್ಟ್ 319 ನೇ ಪುಟದಲ್ಲಿ ಒಂದು ವಾಕ್ಯವನ್ನು ಹೇಳಿದ್ದಾರೆ ಅದನ್ನು ಮಾತ್ರ ಓದುತ್ತೇನೆ: ಅದು ಈ ರೀತಿ ಇದೆ :—

> "A significant factor in the determination of incidence of land revenue demand is not the change in the net income of profit of the cultivator and not on the value of his gross produce. It would not be right to raise or reduce the demands in proportion to the increase or decrease in the price levels. A change in price by 25 per cent in either direction would call for adjustment in the land revenue demand."

ಗ್ರಾಸ್ ಇನ್‌ಕಂ ಮೇಲೆ ಸೇಕಡ ಆರೂಕಾಲರಂತೆ ಲೆಕ್ಕಹಾಕಿ ಅದರ ಆಧಾರದ ಮೇಲೆ ಕಂದಾಯ ಹಾಕಿದರೆ ಸರಿಹೋಗುವುದಿಲ್ಲ. ಗ್ರಾಸ್ ಇನ್‌ಕಂ ಬರುವುದು ಅವನ ಸಂಪಾದನೆಯಿಂದ. ಈ ರೀತಿ ತೆರಿಗೆ ಹಾಕಿದರೆ ಜಮೀನು ಹಾಳು ಬೀಳಲು ಅವಕಾಶವಾಗುತ್ತದೆ, ವ್ಯವಸಾಯ ಮಾಡುವುದಿಲ್ಲ. ಈಗ ದೇಶದಲ್ಲಿ ಆಹಾರ ಪದಾರ್ಥಗಳ ಕೊರತೆ ಬಹಳವಾಗಿರುವಾಗ ನೆಟ್ ಇನ್‌ಕಂ ಮೇಲೆ ಸೇಕಡ ಆರೂಕಾಲು ಹಾಕಬೇಕೇ ಹೊರತು ಗ್ರಾಸ್ ಇನ್‌ಕಂ ಮೇಲೆ ಹಾಕಬಾರದು. ರೆವೆನ್ಯೂ ಮ್ಯಾನ್ಯುಯಲ್‌ನಲ್ಲಿ ಗ್ರಾಸ್ ಇನ್‌ಕಂ ಮೇಲೆ ಲೆಕ್ಕಹಾಕಬೇಕೆಂದಿದೆ. ಯಾವಾಗಲೋ 50 ರೂಪಾಯಿ ಧಾರಣೆ ಇರುವಾಗ ಗೊತ್ತುಮಾಡಿದ್ದನ್ನು ಈಗ ಅನುಸರಿಸುವುದು ಸರಿಹೋಗುವುದಿಲ್ಲ. 50 ನೆಯ ಇಸವಿಯ ಧಾರಣೆ ತೆಗೆದುಕೊಂಡು ನೆಟ್ ಇನ್‌ಕಂ ನಿರ್ಧರಿಸಿ ಅದರ ಪ್ರಕಾರ ಹಾಕಿದರೆ ವಿರೋಧ ಮಾಡುವುದಿಲ್ಲ. ಅದನ್ನು ಬಿಟ್ಟು ಗ್ರಾಸ್ ಇನ್‌ಕಂ ಲೆಕ್ಕಕ್ಕೆ ತೆಗೆದುಕೊಂಡು ಆ ಆಧಾರದ ಮೇಲೆ ಕಂದಾಯ ಹಾಕಿದರೆ ಜವಾಬ್ದಾರಿ ಹೊತ್ತಿರುವ ಮಂತ್ರಿಗಳು ಹಾಗೆ ಮಾಡಿದರೆ ದೇಶದ ಜನರು ಅವರ ವಿಷಯದಲ್ಲಿ ಯಾವ ಅಭಿಪ್ರಾಯವನ್ನು ಮುಂದೆ ಹೊಂದುವರು ಎಂಬುದನ್ನು ಆಲೋಚನೆ ಮಾಡಬೇಕು. ಒಂದು ಪಕ್ಷ ತಾವು ರಚಿಸಿರುವ ಲ್ಯಾಂಡ್ ರೆವೆನ್ಯೂ ಕೋಡಿನಲ್ಲಿ ಗ್ರಾಸ್ ಇನ್‌ಕಂ ಎಂದಿದ್ದರೆ ಅದು ಸರಿಯಲ್ಲವೆಂದು ಭಾವಿಸಿ ಅದಕ್ಕೆ ಒಂದು ತಿದ್ದುಪಡಿ ತರುವುದು ನಿಮ್ಮ ಕರ್ತವ್ಯ. ಹಾಗೆ ಮಾಡಿ ಇರುವ ಲೋಪವನ್ನು ಸರಿಪಡಿಸಬೇಕು.

ಅಮೇರಿಕೆ ಪ್ರೋಗ್ರೆಸಿವ್ ಸ್ಟೇಟ್ಸ್ ಇವೆ, ಟ್ಯಾಕ್ಸ್ ಫ್ರೀ ಸ್ಟೇಟ್ಸ್ ಇವೆ, ಬ್ರಿಟನ್ ವ್ಯವಸಾಯವನ್ನು ಹೆಚ್ಚಾಗಿ ಅವಲಂಬಿಸಿಲ್ಲ. ಆದರೂ ಕೂಡ ಆ ದೇಶದವರು ವ್ಯವಸಾಯಕ್ಕೆ ಹೆಚ್ಚು ಉತ್ತೇಜನ ಕೊಡಲು ತೆರಿಗೆ ಶೇಕಡ 1.88 ನಂತೆ ವಿಧಿಸಿದ್ದಾರೆ; ಯಾವ ಸಂದರ್ಭದಲ್ಲೂ ಶೇಕಡ 5 ಕ್ಕಿಂತ ಹೆಚ್ಚು ವಿಧಿಸಿಲ್ಲ. ಹಾಗಿರುವಾಗ ಶೇಕಡ ಆರೂಕಾಲು ಹಿಂದುಳಿದಿರುವ ಇಂಡಿಯಾ ದೇಶದಲ್ಲಿ ಹಾಕುವುದು ನ್ಯಾಯವೇ ಎಂಬುದನ್ನು ಆಲೋಚನೆ ಮಾಡಿ. ತೆರಿಗೆ ಹಾಕಬಾರದೆಂದು ನಾನು ಹೇಳುವುದಿಲ್ಲ. ಇವತ್ತಿನ ಮಟ್ಟದಲ್ಲಿ ಧಾರಣೆವಾಸಿಗಳಿಗೆ ಗ್ಯಾರಂಟಿ ಕೊಡದೆ ಈ ದಿವಸ ಬೆಳೆಯುತ್ತಿರುವ ಪದಾರ್ಥಗಳಿಗೆ ಸರಿಯಾದ ಬೆಲೆ ದೊರೆಯುವಂತೆ ನೋಡಿಕೊಳ್ಳದೆ ಕಂದಾಯ ಹೆಚ್ಚಿಸಿದರೆ

ಹೇಗೆ ! ಈಗ ಬೆಲ್ಲದ ಧಾರಣೆ ಏಕ್‌ದಂ ಇಳಿದಿದೆ. ತಾವು ಪ್ರೈಸ್ ಲೆವಲ್ ಮೈನ್‌ಟೈನ್ ಮಾಡಿ ರೈತರಿಗೆ ಈ ಧಾರಣೆ ಕೊಡುತ್ತೇವೆಂದು ಹೇಳಿ. ಆಗ ಬೇಕಾದರೆ ರೈತರಿಗೆ ಸ್ವಲ್ಪ ಹೊರೆ ಹೊರಿಸಿ. ಅಕಸ್ಮಾತ್ ಈಗ ಧಾರಣೆ ಏರಿರಬಹುದು. ನಾಳೆ ಹೇಗಿರುತ್ತದೆಂಬುದಕ್ಕೆ ಗ್ಯಾರಂಟಿ ಇಲ್ಲ. ಬೆಲ್ಲದ ಧಾರಣೆ ಈಗ ಇಳಿದಿದೆ. ಕಬ್ಬನ್ನು ಬೆಳೆಯುವವರ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ, ಇದೇರೀತಿ ಪ್ರತಿಯೊಂದು ಪದಾರ್ಥದ ಬೆಲೆಯೂ ಹೆಚ್ಚುಕಡಮೆಯಾಗುತ್ತದೆ. ಹಾಗಾದಾಗ ರೈತರ ಕಷ್ಟವನ್ನು ಸರಕಾರ ನಿವಾರಣೆ ಮಾಡುತ್ತಿಲ್ಲ; ಕಾಣದಿರುವ ಹಾಗೆ ವರ್ತಿಸುತ್ತದೆ. ಆದುದರಿಂದ ಪ್ರೈಸ್ ಗ್ಯಾರಂಟಿ ಕೊಡದೆ ಈ ರೀಸೆಟ್ಲ್‌ಮೆಂಟ್ ಮಾಡುವುದು ಶುದ್ಧಾಂಗ ತಪ್ಪು.

ಈ ಸೆಟ್ಲ್‌ಮೆಂಟ್ ವಿಷಯದಲ್ಲಿ ಅನೇಕ ಲೋಪದೋಷಗಳಿವೆ. ಯಾವ ಸಮಾಚಾರ ಬೇಕಾಗಿತ್ತೋ ಅದನ್ನು ಕೊಟ್ಟಿಲ್ಲದಿರುವ ಕಾರಣ ಸದಸ್ಯರು ಚರ್ಚಿಸಲು ಸರಿಯಾಗಿ ಅವಕಾಶ ದೊರೆತಿಲ್ಲ. ಈಗ ಕೊಟ್ಟಿರುವ ಅಂಕಿಅಂಶಗಳಿಂದ ಹೆಚ್ಚಿನ ಪ್ರಯೋಜನವಾಗುತ್ತಿಲ್ಲ. ಇನ್ನೂ ಸ್ವಲ್ಪ ಹೆಚ್ಚಿನ ವಿವರ ಕೊಡಬೇಕಾಗಿತ್ತು. ಉದಾಹರಣೆಗೆ ಈ ದಿವಸ ರೆವೆನ್ಯೂ ಸೆಟ್ಲ್‌ಮೆಂಟ್ ಮಾಡುವುದಕ್ಕೆ ಮುಂಚೆ ಮೈಸೂರು ರೆವೆನ್ಯೂ ಮ್ಯಾನ್ಯುಯಲ್‌ನಲ್ಲಿ

> "Prior to the introduction of a settlement into a Taluk, it was customary to carry out in the field what is called the Pot Pahani *i.e.*, detailed inspection of every number and sub-division thereof. It comprises an examination of every field and of its boundary marks and a verification of the entries as to tenure, holder's name, etc., made by the Survey subordinates in the preliminary survey records from which the Akarband is evidently prepared."

ಎಂದಿದೆ. ಜಮೀನಿಗೆ ಬೌಂಡರಿಮಾರ್ಕು ಇದೆಯೇ, ಇಲ್ಲವೇ, ಲೆಕ್ಕದಂತೆ ಜಮೀನಿದೆಯೆ, ವ್ಯತ್ಯಾಸವಿದೆಯೇ, ಆಕಾರ ಬಂದಿಗೂ ನಕಾಸೆಗೂ ವ್ಯತ್ಯಾಸವಿದೆಯೇ ಎಂಬುದನ್ನೆಲ್ಲಾ ನೋಡಿ ಸರಿಪಡಿಸಿದ್ದರೆ ಪರವಾಗಿಲ್ಲ, ರಕ್ಷಣೆ ಇದೆ ಎಂದು ಹೇಳಬಹುದಾಗಿತ್ತು. ಖಾತೆಗಳು ಸರಿಯಾಗಿ ಬದಲಾವಣೆಯಾಗಿಲ್ಲ. ರೈತರಿಗೆ ಉಪಕಾರವಾಗುವಂತೆ ಲೆಕ್ಕಾಚಾರದ ಪ್ರಕಾರ ಸರಿಯಾಗಿ ಕೆಲಸ ಮಾಡಿರುವುದಿಲ್ಲ. ಪ್ರತಿಯೊಂದು ಗ್ರಾಮದಲ್ಲೂ ಎಷ್ಟು ಕಂದಾಯ ಇತ್ತು, ಈಗ ಎಷ್ಟು ಏರುತ್ತದೆ ಎಂದು ವಿವರ ಕೊಟ್ಟಿದ್ದೀರಾ ? ಇಲ್ಲ. ಹಾಗೆ ಸರಿಯಾದ ವಿವರ ಸಾಕಾದಷ್ಟು ಕೊಡಬೇಕಾಗಿತ್ತು. ಸದಸ್ಯರಿಗೆ ಚರ್ಚಿಸಲು ಆಧಾರ ಬೇಕು. ಅದನ್ನು ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

ಜಿಲ್ಲಾಧಿಕಾರಿಗಳು ಲ್ಯಾಂಡ್ ರೆವೆನ್ಯೂ ಕೋಡಿನಲ್ಲಿ ಖಚಿತವಾಗಿ ಹೇಳಿರುವಂತೆ ಜನರ ಅಬ್‌ಜೆಕ್ಷನ್ಸ್ ಕೇಳಿ ಸೂಕ್ತ ವರದಿಯನ್ನು ಸಲ್ಲಿಸಬೇಕಾಗಿತ್ತು. ಯಾವ ಡೆಪ್ಯುಟಿ ಕಮಿಷನರೂ ಕೂಡ ಹಾಗೆ ಮಾಡಿಲ್ಲವೆಂದು ಖಂಡಿತ ನಾನು ಛಾಲೆಂಜ್ ಮಾಡುತ್ತೇನೆ. ಕೆಲವರು ಸರಿಯಾಗಿ ಕೆಲಸ ಮಾಡಿರಬಹುದು. ಯಾರೂ ಕೂಡ ರೈತರನ್ನು ಕೇಳಿ ಅವರಿಗೆ ತಿಳಿವಳಿಕೆ ನೀಡಿ ಸರಕಾರಕ್ಕೆ ವರದಿ ಖಂಡಿತ ಸಲ್ಲಿಸಿಲ್ಲ. ಈ ಬಗ್ಗೆ ನಾನು ಒಂದು ಕಾಗದ ಬರೆದೆ. ನಮ್ಮ ಜಿಲ್ಲೆಯ ಡೆಪ್ಯುಟಿ ಕಮಿಷನರು ಖಂಡಿತ ಜನರನ್ನು ವಿಚಾರಮಾಡಿ ಯಾವ ವರದಿಯನ್ನೂ ಕೂಡ ಮಾಡಿಲ್ಲ. ನನ್ನ ಕಾಗದಕ್ಕೆ ಇದುವರೆಗೆ ಜವಾಬೂ ಬಂದಿಲ್ಲ. ಡೆಪ್ಯುಟಿ ಕಮಿಷನರ ವರದಿ ಕೂಡ ಸರಕಾರಕ್ಕೆ ಬಂದಿಲ್ಲ. ಇಂಥ ಅನಿರ್ದಿಷ್ಟ ಸನ್ನಿವೇಶದಲ್ಲಿ ಈ ವರದಿಯೇನು ನಮ್ಮ ಮುಂದಿದೆ ಅದನ್ನು ಚರ್ಚೆ ಮಾಡಿ ಎಂದು ಹೇಳುವುದು ಸರಿಯಲ್ಲ.

ನಮ್ಮ ದೇಶದಲ್ಲಿ ಖುಷ್ಕಿ ಜಮೀನಿನಲ್ಲಿ ಅಡಕೆ ಗಿಡ ಬೆಳೆಸಿ, ತೆಂಗು ಬೆಳೆಸಿ ತೋಟ ಮಾಡಿ ಬಾಗಾಯ್ತು ಮಾಡಿದ್ದಾರೆ. ಆ ರೀತಿ ಮಾಡಿದ್ದಕ್ಕೆ ಮೊದಲು ಕಂದಾಯ ಎಷ್ಟಿತ್ತು, ಬಾಗಾಯ್ತು ಬೆಳೆ ಇಟ್ಟಮೇಲೆ ಎಷ್ಟು ಹೆಚ್ಚಿಗೆ ದರ ಪ್ರಪೋಸ್ ಮಾಡಲಾಗಿದೆ, ಅದರಿಂದ ಎಷ್ಟು ಲಕ್ಷ ರೂಪಾಯಿಗಳ ಆದಾಯ ಹೆಚ್ಚಾಗಿ ಬರುತ್ತದೆ, ಖುಷ್ಕಿ ಜಮೀನು ನೀರಾವರಿ ಸೌಕರ್ಯ ಸರಕಾರ ಮಾಡಿಕೊಟ್ಟಿದ್ದರಿಂದ ಎಷ್ಟು ತರಿಗೆ ಬಂದಿದೆ, ಎಷ್ಟು ಅನ್‌ಆಥರೈಸ್ಡ್ ಸಾಗವಳಿ ಆಗಿದೆ, ಸರಕಾರಕ್ಕೆ ಒಂದು ಕಾಸೂ ಕೊಡದೆ ಎಷ್ಟು ಸಂದರ್ಭಗಳಲ್ಲಿ ಅನುಮತಿ ಇಲ್ಲದೆ ಬೆಳೆ ತೆಗೆದಿದ್ದಾರೆ, ಎಷ್ಟು ಸಂದರ್ಭಗಳಲ್ಲಿ ಅಂಥವರ ಮೇಲೆ ಕ್ರಮ ತೆಗೆದುಕೊಂಡು ಎಷ್ಟು ಹಣ ವಸೂಲುಮಾಡಲಾಗಿದೆ ಎಂಬ ವಿವರಗಳನ್ನೇನಾದರೂ ನಮಗೆ ಒದಗಿಸಿದ್ದೀರಾ ಎಂಬುದನ್ನು ಯೋಚನೆ ಮಾಡಿ.

Half-an-Hour Discussion arising out of Answers given to Starred Question No. 608.

6-00 P.M.

ಶ್ರೀ ಎಸ್. ಕರಿಯಪ್ಪ (ಕನಕಪುರ).—ಸ್ವಾಮಿ, ಕನಕಪುರ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಸಂಬಂಧವಾಗಿ ಪ್ರಶ್ನೆ ಇಲ್ಲಿ ಚರ್ಚೆಗೆ ಬಂದಾಗ ಸಂಪೂರ್ಣವಾಗಿ ಎಲ್ಲ ವಿಷಯಗಳನ್ನೂ ಚರ್ಚೆ ಮಾಡಲಿಕ್ಕೆ ಅವಕಾಶ ದೊರೆಯದೆ ಹೋದ ಪ್ರಯುಕ್ತ, ಪ್ರಶ್ನೆ ಕಾಲದಲ್ಲಿ ಪೂರ್ಣವಾಗಿ ನಾವು ಏನೇನು ಹೇಳಬೇಕು, ಏನೇನು ಕೇಳಬೇಕು ಎನ್ನುವುದೆಲ್ಲವನ್ನೂ ಕೇಳಲು, ಚರ್ಚಿಸಲು ಅವಕಾಶವಿಲ್ಲದ ಪ್ರಯುಕ್ತ ಇದನ್ನು ಅರ್ಧ ಗಂಟೆ ಚರ್ಚೆಗೆ ಇಟ್ಟುಕೊಳ್ಳಬೇಕೆಂದು ಅಧ್ಯಕ್ಷರನ್ನು ಪ್ರಾರ್ಥಿಸಿಕೊಳ್ಳಲಾಯಿತು. ಅದಕ್ಕೆ ಅಧ್ಯಕ್ಷರು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ.

ಮೊಟ್ಟ ಮೊದಲು ನಾನು ಒಂದು ಅಂಶವನ್ನು ಹೇಳುವುದಕ್ಕೆ ಬಯಸುತ್ತೇನೆ. ಯಾವುದೋ ಒಂದು ಸಂಘವನ್ನು ಹಿಡಿದುಕೊಂಡು ಅದರ ಮೇಲೆ ಪದೇ ಪದೇ ಪ್ರಶ್ನೆ ಹಾಕುವುದೆಂದರೆ ಏನು, ಅವರಿಗೂ ಇವರಿಗೂ ಏನಾದರೂ ಆಕ್ರೋಶ, ದ್ವೇಷಗಳು ಇದೆಯೋ, ಇಂಥ ಬುದ್ಧಿಯಿಂದ ಇದನ್ನು ಕೇಳುತ್ತಿದ್ದಾರೆಯೋ ಎನ್ನುವ ಸಂಶಯವನ್ನು ಯಾರೂ ಇಟ್ಟುಕೊಳ್ಳಬೇಕಾದ ಪ್ರಮೇಯವಿಲ್ಲ. ಇದೇಸಭೆಯಲ್ಲಿ ಇನ್ನೂ ಎರಡು ಪ್ರಶ್ನೆಗಳು ಬಂದಿದ್ದುವು. ಒಂದು ಸಾತನೂರು ಸಹಕಾರ ಸಂಘಕ್ಕೆ ಸಂಬಂಧಪಟ್ಟದ್ದು, ಮತ್ತೊಂದು ಅವರೆಮಾಳ ಸಹಕಾರ ಸಂಘಕ್ಕೆ ಸಂಬಂಧಪಟ್ಟದ್ದು. ಈ ಸಂದರ್ಭದಲ್ಲಿ ನನ್ನ ಕೈವಾಡವಿದೆ ಎನ್ನುವ ರೀತಿಯಲ್ಲಿ ಪ್ರಶ್ನೆಗಳು ಬಂದಿವೆ. ಆ ಸಂಘಗಳ ವಿಚಾರದಲ್ಲಿ ನಾನು ಪದೇ ಪದೇ ರಿಜಿಸ್ಟ್ರಾರ್ ಅವರಿಗೂ, ಜಾಯಿಂಟ್ ರಿಜಿಸ್ಟ್ರಾರ್ ಅವರಿಗೂ, ಡೆಪ್ಯುಟಿ ರಿಜಿಸ್ಟ್ರಾರ್ ಅವರಿಗೂ ಬರೆದು ಸಾಕಾಗಿ, ಕೊನೆಗೆ ಮಂತ್ರಿಗಳಿಗೂ ಸಹ ಬರೆದು ಹಾಗೆಯೇ ಬಿಟ್ಟರೆ ಇನ್ನೂ ಕುಲಗೆಟ್ಟು ಹೋಗುತ್ತದೆ ಎಂದು ಅದನ್ನು ಸರಿಪಡಿಸತಕ್ಕ ಕ್ರಮವನ್ನು ಈ ಸಭೆಯೇ ತೆಗೆದುಕೊಳ್ಳಲಿ ಎಂದು ಪ್ರಶ್ನೆ ಕಳಿಸಿ ಈಗ ಅರ್ಧಗಂಟೆ ಚರ್ಚೆ ಮಾಡುವುದಕ್ಕೆ ನಿಂತಿದ್ದೇನೆ. ಈ ಸಂದರ್ಭದಲ್ಲಿ ನಾನು ಬೇರೆ ಏನಾದರೂ ಊಹಿಸಿಕೊಂಡು ಯಾರನ್ನಾದರೂ ಮನಸ್ಸಿನಲ್ಲಿಟ್ಟುಕೊಂಡು ಈ ರೀತಿ ಮಾಡುತ್ತಿದ್ದೇನೇ ಎನ್ನುವುದಕ್ಕೆ ಯಾವ ಕಾರಣವೂ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕೆ ಬಯಸುತ್ತೇನೆ.

ಈ ಸಂಘದ ಜನರಲ್ ಬಾಡಿ ಮೀಟಿಂಗ್ ಮಾಡಿ ನಾಲ್ಕು ವರ್ಷಗಳಾಗಿದೆ. ಜನರಲ್ ಬಾಡಿ ಮೀಟಿಂಗ್ ನಡೆದಾಗ ಒಬ್ಬ ಉಮೇದುವಾರನ ವಿಚಾರದಲ್ಲಿ ಕೆಲವು ಲೋಪದೋಷಗಳು ಇದ್ದ ಪ್ರಯುಕ್ತ ಉಮೇದುವಾರನ ಅರ್ಜಿಯನ್ನು ತಳ್ಳಿ ಹಾಕಿದ್ದರಿಂದ ಆತನು ಸ್ಟೇ ಆರ್ಡರ್ ತೆಗೆದುಕೊಂಡು ಬಂದ. ಸ್ಟೇ ಆರ್ಡರ್ ಹಿಂತೆಗೆದುಕೊಂಡು ಎರಡು ಮೂರು ವರ್ಷವಾದರೂ ಕೂಡ ಇನ್ನೂ ಚುನಾವಣೆಗಳು ನಡೆದಿಲ್ಲ. ಇದೇ ಕನಕಪುರ ತಾಲ್ಲೂಕಿನಲ್ಲಿ 8 ವರ್ಷವಾದರೂ ಕೂಡ ಜನರಲ್ ಬಾಡಿ ಮೀಟಿಂಗ್ ಆಗದೆ ಇರತಕ್ಕ ಸಂಘಗಳು ಒಂದೆರಡು ಇವೆ. ಎರಡು ಮೂರು ವರ್ಷಗಳು ಆದರೂ ಕೂಡ ಜನರಲ್ ಬಾಡಿ ಮೀಟಿಂಗ್ ಆಗದೆ ಇರತಕ್ಕ ಸಂಘಗಳೂ ಇವೆ. ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸತಕ್ಕದ್ದು ಸಹಕಾರ ಸಂಘಗಳು ಎಂದು ತಿಳಿದುಕೊಂಡು ಅವುಗಳನ್ನು ಅಭಿವೃದ್ಧಿಪಡಿಸಿ ಆ ಮೂಲಕ ದೇಶದ ಆರ್ಥಿಕ ಸ್ಥಿತಿಯನ್ನು ಕುದುರಿಸಬೇಕು ಎಂದು ಹೇಳುವಾಗ ಸಹಕಾರ ಸಂಘಗಳ ಸ್ಥಿತಿ ಹೀಗಾದರೆ ಗತಿ ಏನು ಎಂದು ಯೋಚಿಸಿ ಪದೇ ಪದೇ ಬರೆಯಬೇಕಾಗಿ ಬಂತು. ಇದಕ್ಕೆ ಸಂಬಂಧಪಟ್ಟ ಹಾಗೆ ನಾನು ಹಲವಾರು ಪ್ರಶ್ನೆಗಳನ್ನು ಹಾಕಿದ್ದೇನೆ. ಒಂದು ಪ್ರಶ್ನೆಯೂ ಕೂಡ ಬಾರದೆ ಇರತಕ್ಕ ಪ್ರಸಂಗಗಳು ಹಲವಾರು ಇವೆ. ಹೀಗೆ ಈ ಸಂಘದ ಜನರಲ್ ಬಾಡಿ ಮೀಟಿಂಗ್ ಮಾಡದೆ ಕಾಲ ತಳ್ಳಿಕೊಂಡು ಬರುತ್ತಿರುವುದಕ್ಕೆ ಕಾರಣವೇನು ? ಕಾರಣಗಳು ಹಲವಾರು ಇವೆ. ಅಲ್ಲಿರತಕ್ಕ ಡೈರೆಕ್ಟರುಗಳು ತಾವೇ ಸಾರೋದ್ಧಾರವಾಗಿ ಡೈರೆಕ್ಟರುಗಳಾಗಿ ಆ ಸಂಘವನ್ನು ನಡೆಸಿಕೊಂಡು ಹೋಗಬೇಕು, ಅದರಿಂದ ಏನಾದರೂ ಪ್ರಯೋಜನ ಆಗುವುದಾದರೆ ಅದನ್ನು ಪಡೆಯಬೇಕು ಎನ್ನುವ ದೃಷ್ಟಿ ಒಂದು. ಅಲ್ಲದೆ ಇಲಾಖೆಯ ಕೆಳಮಟ್ಟ ನೌಕರರು ಅವರು ಹೇಳಿದಂತೆ ಕುಣಿದುಕೊಂಡು, ಇತರರು ಹೇಳಿಕೊಂಡ ಅಥವಾ ಬರೆದುಕೊಂಡ ಯಾವ ಪ್ರಾರ್ಥನೆಗಳಿಗೂ ಲವಲೇಶವೂ ಅವಕಾಶ ಕೊಡದೆ ಇದ್ದಾರೆ. ಇದಕ್ಕೆ ಕಾರಣ ಅಲ್ಲಿರುವ ಸೌಲಭ್ಯಗಳು ಎಂದು ಹೇಳಬೇಕಾಗಿದೆ. ಈ ಸಹಕಾರ ಸಂಘದ ಅಧ್ಯಕ್ಷರು ಮತ್ತು ಡೈರೆಕ್ಟರುಗಳು ಮನಸ್ಸು ಮಾಡಿದರೆ ಯಾರನ್ನು ಬೇಕಾದರೂ ಕೂಡ ಬುಟ್ಟಿಗೆ ಹಾಕಿಕೊಳ್ಳಬಹುದು ಎನ್ನುವ ಅಂಶವನ್ನು ನಾವು ಮರೆಯುವ ಹಾಗಿಲ್ಲ. ಮೊನ್ನೆ ತಾನೆ ಒಬ್ಬ ಅಧಿಕಾರಿ ಹೇಳುತ್ತಿದ್ದುದನ್ನು ಕೇಳಿದೆ. ಅವರು ಒಬ್ಬ ಗೆಜೆಟೆಡ್ ಅಧಿಕಾರಿ. ನನಗೆ ಗೆಜೆಟೆಡ್ ಹುದ್ದೆ ಬೇಕಾಗಿಲ್ಲ, ಮಾರಾಟ ಸಹಕಾರ ಸಂಘದ ಸೆಕೆಟರಿತನ ಸಿಕ್ಕಿದರೆ ಸಾಕು. ಅದರಲ್ಲಿ ಸುಖವಾಗಿ ಇರಬಹುದು

ಈ ಗೆಜೆಟೆಡ್ ಹುದ್ದೆಗಿಂತ. ಎಂದು ಹೇಳಿದ್ದರು. ಇದೊಂದನ್ನು ಮನಸ್ಸಿನಲ್ಲಿಟ್ಟುಕೊಂಡು ಆಲೋಚನೆ ಮಾಡಿದರೆ ಈ ಮಾರಾಟ ಸಹಕಾರ ಸಂಘಗಳು ಹೇಗೆ ಪಾಪದ ಕೂಪಗಳಾಗಿವೆ ಎನ್ನುವುದು ವ್ಯಕ್ತವಾಗುತ್ತದೆ.

ಈ ಸಂಘದ ಕಾರ್ಯದರ್ಶಿ ಬಂದು ನಾಲ್ಕು ವರ್ಷವಾಗಿದೆ. ಆತನನ್ನು ನಾಲ್ಕು ಸಾರಿ ವರ್ಗ ಮಾಡಿದರೂ ಕೂಡ ಆತನು ಹೊರಟು ಹೋದರೆ ಸರಿ ಇಲ್ಲ, ಅಲ್ಲಿ ನಡೆದಿರತಕ್ಕ ಕಾನೂನು ಬಾಹಿರವಾದ ಕಾರ್ಯಗಳನ್ನು ಮುಚ್ಚಿಕೊಳ್ಳುವುದಕ್ಕೆ, ಅಲ್ಲಿರುವ ಅನೇಕ ಕುಂದುಕೊರತೆಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಅವಕಾಶ ತಪ್ಪೀತು ಎಂದು ನಾಲ್ಕು ಸಾರಿಯೂ ಮೇಲಕ್ಕೆ ಬಂದು ಅಧಿಕಾರಿಗಳ ಮೇಲೆ ಪ್ರಭಾವವನ್ನು ಬೀರಿ ಆತನನ್ನು ಅಲ್ಲಿಯೇ ಇಟ್ಟುಕೊಳ್ಳಲು ಪ್ರಯತ್ನ ಪಟ್ಟಿದ್ದಾರೆ. ಈ ಸಂಘದಲ್ಲಿ ಅನೇಕ ಅಚಾತುರ್ಯಗಳು ನಡೆದಿವೆ. ಅದರ ಲೆಕ್ಕ ಪತ್ರಗಳನ್ನು ಆಡಿಟ ಸೆಲ ತನಿಖೆ ಮಾಡಬೇಕು ಎಂದು ಸದಸ್ಯರು ಹೇಳಿದರೂ ಕೂಡ ಅವರು ಬಂದಾಗ ಅಲ್ಪಸ್ವಲ್ಪ ತನಿಖೆ ಮಾಡುವ ಶಾಸ್ತ್ರ ಮಾಡಿ ಹೋಗಿದ್ದಾರೆ. ಈ ಸಂಘಕ್ಕೆ ಬರುತ್ತಿದ್ದ ಸಕ್ಕರೆ ಮೂಟೆಗಳಲ್ಲಿ 80 ಮೂಟೆಗಳನ್ನು ಬರತಕ್ಕ ದಾರಿಯಲ್ಲಿಯೇ ಮಾರಾಟ ಮಾಡಿ ಮೂರು ನಾಲ್ಕು ತಿಂಗಳಾದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳು ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಮಂತ್ರಿಗಳಿಗೆ ಬರೆದ ಮೇಲೆ ಕಣ್ಣುಬಿಟ್ಟು ನೋಡಿ ಸಂಬಂಧಪಟ್ಟವರು ವಿಚಾರಣೆ ನಡೆಸಿ ಕೇಸು ನಡೆಯುತ್ತಿದೆ. ಹೀಗೆಯೇ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಬತ್ತವನ್ನು ಕೃಷ್ಣರಾಜನಗರದಲ್ಲಿ ದಾಸ್ತಾನು ಇಟ್ಟಿದ್ದು ಅದರಲ್ಲಿ ಬಹುಭಾಗ ಬರಲಿಲ್ಲ. ಅದನ್ನೆಲ್ಲ ಅಲ್ಲಿಯೇ ಮಾರಾಟ ಮಾಡಿದ್ದಾರೆ. ಈ ರೀತಿ ಕಾರ್ಯಗಳು ನಡೆಯುತ್ತಿರುವುದರಿಂದ ಕಣ್ಣು ಬಿಟ್ಟು ನೋಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳದೆ ಹೋದರೆ ಕೊನೆಗೆ ಪರಿಸ್ಥಿತಿ ಹೇಗಾಗುತ್ತದೆಯೋ ಗೊತ್ತಿಲ್ಲ. ಇದನ್ನು ಹೀಗೆಯೇ ಬಿಟ್ಟರೆ ಅವರು ಮಾಡಿದ್ದಕ್ಕೆ ಏನೂ ಮಾಡಲಿಲ್ಲ, ನಾವೂ ಕೂಡ ಅದೇ ರೀತಿ ಏಕೆ ಮಾಡಬಾರದು ಎಂದು ತಿಳಿದುಕೊಂಡು ಒಂದರ ಹಿಂದೆ ಹಲವಾರು ಸಂಘಗಳು ಕೆಡುವುದಕ್ಕೆ ಕಾರಣವಾಗುತ್ತದೆ. ಇಂಥ ಪರಿಸ್ಥಿತಿ ನಡೆದುಕೊಂಡು ಹೋಗುವುದಕ್ಕೆ ಅವಕಾಶ ಕೊಡತಕ್ಕದ್ದು ಸರ್ವಥಾ ಸರಿಯಲ್ಲ ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳಬೇಕಾಗಿದೆ.

ಜನರಲ್ ಬಾಡಿ ಮೀಟಿಂಗ್ ಏನಾದರೂ ಆದರೆ ಈಗ ಇರುವವರಿಗೆ ಬರುವುದಕ್ಕೆ ಅವಕಾಶ ತಪ್ಪಿ ಹೋದೀತು ಎಂದು ಒಂದು ಯುಕ್ತಿಯನ್ನು ಮಾಡಿದ್ದಾರೆ. ಅವರು ಕೆಲವು ಹಾಲಿನ ಉತ್ಪಾದಕ ಸಹಕಾರ ಸಂಘಗಳನ್ನು ಮಾಡಿಕೊಂಡು ಅವುಗಳಲ್ಲಿ ತಮ್ಮ ಕಡೆ ಯಾರು ಓಟು ಕೊಡಬಲ್ಲರೋ ಅವರನ್ನು ಮಾತ್ರ 'ಎ' ಕ್ಲಾಸ್ ದರ್ಜೆಯ ಸದಸ್ಯರಾಗಿರುವಂಥ ಸೊಸೈಟಿಗಳಲ್ಲಿ ಹಾಕಿಕೊಂಡು ಉಳಿದ 18-20 ಸಂಘಗಳನ್ನು 'ಸಿ' ದರ್ಜೆ ಎಂದು ಮಾಡಿದ್ದಾರೆ. 'ಸಿ' ದರ್ಜೆಯ ಸೊಸೈಟಿಯವರಿಗೆ ಓಟು ಕೊಡತಕ್ಕ ಅಧಿಕಾರವಿಲ್ಲ. 'ಎ' ದರ್ಜೆಯವರಿಗೆ ಮಾತ್ರ ಆ ಅಧಿಕಾರವುಂಟು. ಇದರಿಂದ ನಾವು ಚುನಾಯಿಸಿ ಬರುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ತರಹ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ.

ಇಷ್ಟು ಕಾಲದಿಂದ ಜನರಲ್ ಬಾಡಿ ಮೀಟಿಂಗ್ ನಡೆಯಲಿಲ್ಲ ಎಂದು ನಾನು ಕೇಳಿದಾಗ ಮಂತ್ರಿಗಳು ಉತ್ತರವನ್ನು ಕೊಡುವುದನ್ನು ನೋಡಿ ನನಗೆ ಅಯ್ಯೋ ಎನ್ನಿಸಿತು.
ಇನ್ನು ಅಷ್ಟೊಂದು ಆಸಕ್ತಿಯಿಂದ ಕೂಡಿದ್ದರೂ ಮಂತ್ರಿಗಳು ಅವರ ಮೇಲೆ ಯಾವ ಒಂದು ಕ್ರಮವನ್ನೂ ತೆಗೆದುಕೊಂಡು ಕೆಟ್ಟು ಹೋಗಿರುವುದನ್ನು ಸರಿಪಡಿಸುವುದಕ್ಕೆ ಸಾಧ್ಯವಿಲ್ಲದೆ ಹೋಯಿತೇ ಎಂದು ನನಗನ್ನಿಸಿತು. ಅದಲ್ಲದೆ ಮಂತ್ರಿಗಳು ಮತ್ತೊಂದು ವಿಷಯವನ್ನು ಹೇಳಿದರು, ಮಾರ್ಚ್ ತಿಂಗಳಲ್ಲಿ ಅಲ್ಲಿನ ಜನರಲ್ ಬಾಡಿಮೀಟಿಂಗ್ ನಡೆಯುತ್ತದೆ ಎಂಬುದಾಗಿ. ಆದರೆ ಮಾರ್ಚ್ ತಿಂಗಳಲ್ಲಿ ಅದು ನಡೆಯಲಿಲ್ಲ. ಆ ತಿಂಗಳಲ್ಲಿ ನಡೆಯುವುದು ಅಸಂಭವ, 16 ನೇ ತಾರೀಖಿನಲ್ಲಿ ನಡೆಯುತ್ತದೆಂಬುದಾಗಿ ಬಿಚ್ಚು ಮಾತು ಹೇಳಿಕೊಂಡು ಹೊರಟಿದ್ದಾರೆ. ಅದು ನಡೆಯುವುದೂ ಕೂಡ ಅಸಂಭವ. ನನಗೆ ಗೊತ್ತಿರುವ ಹಾಗೆ, ಈ ಕಾನೂನಿನಲ್ಲಿ ಹೇಳಿರುವ ಹಾಗೆ ಒಂದು ಜನರಲ್ ಬಾಡಿ ಮೀಟಿಂಗ್ ನಡೆಯಬೇಕಾದರೆ ಒಂದು ತಿಂಗಳು ಪೂರ್ವ ಭಾವಿಯಾಗಿ ನೋಟೀಸ್ ಕೊಡಬೇಕು. ನೋಟೀಸ್ ಸದಸ್ಯರಿಗೆ ಹಂಚಬೇಕು. ಆದರೆ ಇವತ್ತಿನವರೆಗೂ ಯಾವ ಸದಸ್ಯನಿಗೂ ಮೀಟಿಂಗ್ ನೋಟೀಸೇ ಬಂದಿಲ್ಲ ಆದಕಾರಣ ರಿಪೋರ್ಟ್ ಸಹ ಬಂದಿಲ್ಲ. ಹೀಗೆ ಅಲ್ಲಿನ ಮಾರಾಟ ಸಹಕಾರ ಸಂಘದ ಪರಿಸ್ಥಿತಿ ಇದೆ.

ಇನ್ನು ಅಲ್ಲಿನ ಲೆಕ್ಕ ಪತ್ರಗಳ ತನಿಖೆ ವಿಚಾರ. ನಾನು ಈ ವಿಚಾರದಲ್ಲಿ ಪದೇ ಪದೇ ಬರೆದಿದ್ದೇನೆ. ಇದನ್ನು ಕೂಡಲೇ ತನಿಖೆ ಮಾಡಿಸಬೇಕು. ಇದು ಲಕ್ಷಾಂತರ ರೂಪಾಯಿಗಳ ವಹಿವಾಟು. ಅನೇಕ ಕಡೆ ನಡೆದಿರತಕ್ಕ ವ್ಯವಹಾರಗಳನ್ನು ನೋಡಿದ್ದೇನೆ. ಈ ರೀತಿ ಇದು ಆಗಬಾರದು ಎಂದು ಹೇಳಿದ್ದೇನೆ. ಆದರೆ ಅದಕ್ಕೆ ಈ ತನಕ ಯಾರೂ ಕೂಡ ಮನಸ್ಸು ಕೊಟ್ಟಿಲ್ಲ. ಮತ್ತೊಂದು ವಿಷಯ. ಈ ಸಂಘದಲ್ಲಿ ಅಮೋನಿಯಂ ಸಲ್ಫೇಟ್ ಮತ್ತು ಸೂಪರ್ ಫಾಸ್ ಫೇಟ್ ಸಿಕ್ಕುವುದೇ ಕಷ್ಟವಾಗಿದೆ.

(ಶ್ರೀ ಎಸ್. ಕರಿಯಪ್ಪ)

ಬೇರೆ ಬೇರೆ ಚಿಕ್ಕ ಚಿಕ್ಕ ಸಹಕಾರ ಸಂಘಗಳು ತಾವೇ ತಂದು ಮಾರಿಕೊಳ್ಳಬೇಕು. ಹೀಗಾಗಿ ವ್ಯವಸಾಯಾಭಿವೃದ್ಧಿಗೆ ಅತಿ ಮುಖ್ಯವಾಗಿ ಬೇಕಾದ ವ್ಯವಸಾಯ ರಾಸಾಯನಿಕ ಗೊಬ್ಬರಗಳು ದೊರೆಯುವುದೇ ಕಷ್ಟವಾಗಿದೆ. ಅಲ್ಲದೆ ಕ್ರಿಮಿನಾಶಕ ವಸ್ತುಗಳು ಯಾವುವು ಅವಶ್ಯಕವಾಗಿ ಬೇಕೋ, ಯಾವ್ಯಾವುದನ್ನು ಜನರು ಬಯಸುತ್ತಾರೋ ಅವನ್ನು ತೋರದೆಯೇ ಅಲ್ಲಿ ಆ ಕ್ರಿಮಿನಾಶಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ. ಆದರೆ ಅವರಿಗೂ ಇವರಿಗೂ ಏನೊಂದು ಕಮಿಷನ್ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆಯೋ ಅಂತಹ ಕಡೆಗಳಲ್ಲಿ ಕ್ರಿಮಿನಾಶಕ ವಸ್ತುಗಳನ್ನು ತೋರುತ್ತಾರೆಯೇ ಹೊರ್ತು ಅವಶ್ಯಕವಾಗಿ ಬೇಕಾದ ಫಾಲಿಡಾಲ್ ಇತ್ಯಾದಿ ವಸ್ತುಗಳನ್ನು ತೋರುವುದಿಲ್ಲ. ಪರಿಸ್ಥಿತಿ ಹೀಗೆ ಇದ್ದರೆ ಆ ಸಂಘವನ್ನೇ ನಂಬಿಕೊಂಡಿರತಕ್ಕ ಅಲ್ಲಿನ ಸದಸ್ಯರಿಗೆ ಮತ್ತು ರೈತರಿಗೆ ಯಾವ ರೀತಿ ಪ್ರಯೋಜನವಾಗುತ್ತದೆಂಬುದನ್ನು ಊಹೆಮಾಡಬಹುವುದು. ಅಲ್ಲಿ ಪ್ರತ್ಯಕ್ಷವಾಗಿ ನೋಡಿದರೆ ಇನ್ನೂ ಹಲವಾರು ವಿಷಯಗಳು ಹೊರಬೀಳುತ್ತವೆ. ಈ ತಿಂಗಳು 16ನೇ ತಾರೀಖು ಜನರಲ್ ಬಾಡಿಮೀಟಿಂಗ್ ನಡೆಯುತ್ತದೆಂದು ಇಟ್ಟು ಕೊಂಡಿದ್ದರೆ ಇನ್ನೂ ಇದುವರೆಗೆ ನೋಟೀಸ್ ಕೊಡದಿದ್ದರೆ ಏನಾಗುತ್ತದೆ ಪರಿಸ್ಥಿತಿ ಎಂಬುದನ್ನು ಯೋಚನೆ ಮಾಡಬೇಕು. ಸಾಕಷ್ಟು ನೋಟೀಸ್ ಕೊಟ್ಟಿಲ್ಲ. ಅದಕ್ಕೋಸ್ಕರ ಮೀಟಿಂಗ್ ನಡೆಯುವುದಕ್ಕಾಗುವುದಿಲ್ಲ. ಅಂದರೆ ಪುನಃ ಇನ್ನಷ್ಟು ಕಾಲ ತಾವೇ ಡೈರೆಕ್ಟರುಗಳಾಗಿದ್ದುಕೊಂಡು ಯಥಾಪ್ರಕಾರ ಇದೇ ಪರಿಸ್ಥಿತಿಯನ್ನು ಅಲ್ಲಿ ಮುಂದುವರಿಸಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆಂದು ಈ ರೀತಿ ಮಾಡಿದ್ದಾರೆಂದು ಕಾಣುತ್ತದೆ. ಆದ್ದರಿಂದ ಈ ಅಂಶಗಳನ್ನೆಲ್ಲಾ ಸರ್ಕಾರದವರು ಗಮನಕೊಟ್ಟು ನೋಡಿ ಸರಿಪಡಿಸಬೇಕಾಗಿದೆ. ಇನ್ನು ನಾನು ಮೊದಲೇ ಹೇಳಿದಹಾಗೆ ಇದು ಒಂದು ಸಂಸ್ಥೆ ಮಾತ್ರ ಕೆಟ್ಟು ಹೋಗಿದೆಯೆಂದು ಹೇಳುವುದಿಲ್ಲ. ಪದೇ ಪದೇ ಇಂತಹ ವಿಷಯಗಳು ಪ್ರಶ್ನೋತ್ತರಗಳ ಕಾಲದಲ್ಲಿ ಬಂದಾಗ ಇಂತಹ ಸಂಸ್ಥೆಗಳು ದೇಶದಲ್ಲಿ ಅನೇಕವಿವೆ ಎಂಬುದು ಚೆನ್ನಾಗಿ ಕಂಡುಬರುತ್ತವೆ. ಕನಕಪುರ ತಾಲ್ಲೂಕಿನಲ್ಲಿ ಇಂತಹ ಸಂಸ್ಥೆಗಳು ಅನೇಕ ಇವೆ. ಒಂದು ಸೊಸೈಟಿಯೊಳಗೆ ಡೈರೆಕ್ಟರ್ ಆಗಿದ್ದವರು ಪ್ರೆಸಿಡೆಂಟರಾಗಿ 8 ವರ್ಷಗಳಾದರೂ ಆ ಸೊಸೈಟಿಯ ಜನರಲ್‌ಬಾಡಿ ಮೀಟಿಂಗ್ ಇನ್ನೂ ಕರೆದಿಲ್ಲ. ಆ ಸಂಬಂಧವಾಗಿ ಕಳುಹಿಸಿದಂಥ ಪ್ರಶ್ನೆಗಳು ಎಲ್ಲಿ ಮಾಯವಾಗಿ ಹೋದವೋ ಗೊತ್ತಿಲ್ಲ. ಇನ್ನು ಒಂದು ಕಡೆ ಒಬ್ಬರು ಇನ್ನೊಂದು ಸಂಘಕ್ಕೆ ಅಧ್ಯಕ್ಷರಾಗಿದ್ದಾರೆ; ಅವರು ಅಧ್ಯಕ್ಷರಾದಾಗಿನಿಂದ ಯಾವ ಜನರಲ್ ಬಾಡಿ ಮೀಟಿಂಗನ್ನು ಮಾಡಿಲ್ಲ. ಇನ್ನು ಒಂದು ಕಡೆ ಒಬ್ಬ ಅಧ್ಯಕ್ಷರು ಮಾಡಿದಂತಹ ವಿಚಾರವನ್ನು ಹೇಳುತ್ತೇನೆ. ಒಂದು ಸಾರಿ ಆ ಸಂಘಕ್ಕೆ ಒಂದು ಸೀಲ್ ಹಾಕಬೇಕಾಗಿತ್ತು. ಅದಕ್ಕಾಗಿ ಅರ್ಧ ದಸ್ತು ಕಾಗದ ಬೇಕಾಗಿತ್ತು. ಆ ಒಂದು ಸೀಲು ಮಾಡಲು ಕಾಗದವನ್ನು ತೆಗೆದುಕೊಂಡು ಹೋಗುವುದಕ್ಕಾಗಿ ಬೆಂಗಳೂರಿಗೆ ಬಂದು ಹೋದುದು ಎಂಬುದಾಗಿ 15 ರೂಪಾಯಿಗಳ ಖರ್ಚನ್ನು ಹಾಕಿದ್ದಾರೆ. ಈ ಸಂಘದ ಬೆಳವಣಿಗೆಯಲ್ಲಿ ಅವರಿಗೆ ಇರತಕ್ಕ ಆಸಕ್ತಿ ಯಾವ ಮಟ್ಟದ್ದು ಎಂಬುದನ್ನು ಸರ್ಕಾರದವರು ಊಹಿಸಬೇಕು. ಅವು ಯಾವುದೆಂದರೆ, ಒಂದು ನಿಡುಗಲ್ ಸೊಸೈಟಿ, ಇನ್ನೊಂದು ಮರಳವಾಡಿ ಸೊಸೈಟಿ.

Sri KONDAJJI BASAPPA (Deputy Minister for Co-operation).—The question is about Taluk Marketing Society. He is referring to other two societies.

ಶ್ರೀ ಎಸ್. ಕರಿಯಪ್ಪ.—ಆ ಸಂಘದಲ್ಲಿರತಕ್ಕ ಡೈರೆಕ್ಟರ್ಸ್ ಪೈಕಿ ಇಬ್ಬರಿಗೆ ಶಿಕ್ಷೆಯಾಗಿದ್ದರೂ ಅವರು ಅಲ್ಲಿಯೇ ಹೋಗಿ ಆ ರೀತಿ ಮಾಡುತ್ತಿದ್ದಾರೆ. ಅವರು ಯಾವ ಸಂಘಕ್ಕೆ ಅಧ್ಯಕ್ಷರಾಗಿದ್ದರೋ ಅಲ್ಲೆಲ್ಲಾ ಅದೇ ರೀತಿಯೇ ಇದೆ. ಹೀಗೆಲ್ಲಾ ಇರುವುದರಿಂದಲೇ ಈ ಸಂಘ ಈ ಅವ್ಯವಸ್ಥೆಗೆ ಇಳಿದಿದೆ ಎಂಬುದನ್ನು ಸರ್ಕಾರದವರು ಮನಸ್ಸಿಗೆ ನಾಟುವಂತೆ ಹೇಳುತ್ತಿದ್ದೇನೆ.

ಶ್ರೀ ಕೊಂಡಜ್ಜಿ ಬಸಪ್ಪ.—ಬರೀ ಎರಡು ಸೊಸೈಟಿಗಳ ವಿಷಯವಲ್ಲ. 10 ಸೊಸೈಟಿಗಳ ವಿಚಾರ ಮಾತನಾಡಿ. ನೋಟೀಸ್ ಕೊಟ್ಟಿದ್ದು, ಕೊಡದೇ ಇದ್ದುದು, ಎಲ್ಲೆಲ್ಲಿ ಆ ರೀತಿ ಮಾಡಿದ್ದಾರೆನ್ನುವುದು ತಮ್ಮ ಮುಂದೆ ಸರಿಯಾದ ಮಾಹಿತಿ ಇದ್ದರೆ ಹೇಳಿ ಇವತ್ತು ಮಾರ್ಕೆಟಿಂಗ್ ಸೊಸೈಟಿಗಳಿವೆ. ಅದರ ಬಗ್ಗೆ ಸಾಕಷ್ಟು ಸಮಜಾಯಿಷಿಕೊಡಿ.

ಶ್ರೀ ಎಸ್. ಕರಿಯಪ್ಪ.—ನಮ್ಮ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳ ವಿಷಯವನ್ನು ಸಹ ಬೇಕಾದರೆ ಹೇಳುತ್ತೇನೆ.

ಶ್ರೀ ಕೊಂಡಜ್ಜಿ ಬಸಪ್ಪ.—150 ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳ ಆಡಳಿತ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರತ್ಯೇಕವಾಗಿ ಇಂತಹ ಸೊಸೈಟಿಗೆ ಸಂಬಂಧಪಟ್ಟುದು ಎಂಬುದಾಗಿ ಪ್ರಶ್ನೆಗಳನ್ನು ಹಾಕಿ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಎಸ್. ಕರಿಯಪ್ಪ.—ನಾನು ಈಗಾಗಲೇ ಪ್ರಶ್ನೆಗಳನ್ನು ಹಾಕಿದ್ದೇನೆ. ಆ ಬಗ್ಗೆ ಎರಡು ಮೂರು ಕಾಗದಗಳನ್ನು ಬೇರೆ ಬರೆದಿದ್ದೇನೆ. ಆದ್ದರಿಂದ ಈಗಿರತಕ್ಕ ಪರಿಸ್ಥಿತಿಯನ್ನು ಸುಧಾರಿಸಿ ತಕ್ಕ ಕ್ರಮಗಳನ್ನು ಆದಷ್ಟು ಶೀಘ್ರದಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೊಂಡಜ್ಜಿ ಬಸಪ್ಪ.—ಅಧ್ಯಕ್ಷರೇ, ಈ ಸೊಸೈಟಿಯ ಜನರಲ್ ಬಾಡಿ ಮೀಟಿಂಗ್ 30-9-62 ನೇ ತಾರೀಖಿನ ದಿವಸ ನಡೆಯಬೇಕೆಂದು ನಿರ್ಧಾರವಾಗಿತ್ತು. ಅದರ ಹಿಂದಿನ ದಿವಸ ಸದಸ್ಯರೊಬ್ಬರು ಆರ್ಡರ್ ಮಾಡಿಸಿ ಒಂದು ಡಿಸ್‌ಪ್ಯೂಟನ್ನು ಹಾಕಿಸಿದರು. ಆಮೇಲೆ ಎಲೆಕ್ಷನ್ ಆಫ್ ಆಫೀಸ್ ಬೇರರ್ಸ್ ಮೇಲೆ ಒಂದು ಸ್ಟೇ ಆರ್ಡರನ್ನು ತೆಗೆದುಕೊಂಡು ಬಂದರು. ಸ್ಟೇ ಆರ್ಡರ್ ತೆಗೆದುಕೊಂಡು ಬಂದು ಆ ಸ್ಟೇ ಆರ್ಡರ್ ಜಾರಿಯಾಗಿ ಬಂದದ್ದರಿಂದ ಎಲೆಕ್ಷನ್ ಆಗಲಿಲ್ಲ. ಆ ಮೇಲೆ ಯಾವ ಕೆಲಸ ಕಾರ್ಯಗಳೂ ಆಗಲಿಲ್ಲ. ಆಮೇಲೆ ಮುಂದೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಬೇಕಾದ ಆರ್ಡರ್ ಮಾಡಿಸಿ ಎಲೆಕ್ಷನ್ ನಡೆಸಬಹುದು ಎಂಬುದಾಗಿ ತೀರ್ಮಾನ ಕೊಟ್ಟರು. ಅದರ ಮೇಲೆ ರೆವಿನ್ಯೂ ಅಪ್‌ಲೇಟ್ ಟ್ರಿಬ್ಯೂನಲ್‌ಗೆ ಅದು ಹೋಗಿ ಪುನಃ ಇಂಟೆರಿಂ ಸ್ಟೇ ಆರ್ಡರ್ ಬಂತು. ಅಷ್ಟು ಆಖೈರಾಗಿ ಫೈಸಲಾದುದು. ಅಲ್ಲಿಂದಾಚೆಗೆ 29-9-63 ರವರೆಗೆ ಯಾವ ವಿಧವಾದ ಎಲೆಕ್ಷನ್ ಸಹ ನಡೆಯಲಿಲ್ಲ. ಅದನ್ನು ಮಾಡಲಿಕ್ಕಾಗಲಿಲ್ಲ. ಅನಂತರ ಆದರೂ ಕೂಡ ಸುಮಾರು ಒಂದೂವರೆ ತಿಂಗಳುಗಳಾದರೂ ಏಕೆ ಚುನಾವಣೆ ಮಾಡಲಿಲ್ಲವೆಂದು ಮಾನ್ಯ ಸದಸ್ಯರು ಕೇಳತಕ್ಕ ಪ್ರಶ್ನೆ. ಅವರಿಗೆ ನಾನು ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ. ಮುಖ್ಯವಾಗಿ partly due to election dispute and partly due to indifference of the Management ಎಂಬುದಾಗಿ ಹೇಳಿದ್ದಾರೆ. ಆದರೆ ನಮ್ಮ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಅವರಿಗೆ ಸುಮಾರು 6 ನೋಟೀಸ್‌ಗಳನ್ನು ಕೊಟ್ಟಿದ್ದಾರೆ. ಆ ನೋಟೀಸ್‌ಗಳನ್ನು ಯಾವ್ಯಾವ ತಾರೀಖಿನಲ್ಲಿ ಕೊಟ್ಟಿದ್ದಾರೆಂದರೆ, ಅದು ಈ ರೀತಿ ಇದೆ 29-10-63, 28-11-63, 11-5-64, 26-5-64, 10-3-65 ಮತ್ತು 23-3-65. ಅದರಲ್ಲಿ ಮ್ಯಾನೇಜ್‌ಮೆಂಟಿನವರು ಜನರಲ್ ಬಾಡಿ ಮೀಟಿಂಗನ್ನು ಏಕಾಏಕಿ ಏತಕ್ಕೆ ತಡೆಮಾಡುತ್ತಿದ್ದಾರೋ ಅದು ಸರಿಯಲ್ಲ, ಕೂಡಲೇ ಆ ಮೀಟಿಂಗನ್ನು ಕರೆಯಬೇಕೆಂದು ಹೇಳಿ ನೋಟೀಸ್ ಕೊಟ್ಟಿದ್ದಾರೆ. ಆ ರೀತಿ ನೋಟೀಸ್ ಕೊಟ್ಟಾಗ್ಯೂ ಇನ್ನೂ ಅವರು ಕ್ರಮ ತೆಗೆದುಕೊಂಡಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದು ನಿಶ್ಚಯವಾದ ಮಾತು. ಇತ್ತೀಚೆಗೆ ಅದಕ್ಕಾಗಿ ಒಂದು ಕಾನೂನು ಇದೆ. ಸೆಕ್ಷನ್ 22 (7) ರ ಪ್ರಕಾರ ಡಿಸ್‌ಮೆಂಬರ್ ಮಾಡತಕ್ಕ ಅಧಿಕಾರ ಈ ಇಲಾಖೆಯ ರಿಜಿಸ್ಟ್ರಾರ್ ಅವರಿಗೆ ಇದೆ. ಆ ಪ್ರಕಾರ ಅವರು ಈಗ ನೋಟೀಸ್ ಕೊಟ್ಟಿದ್ದಾರೆ. ಅದೇನೆಂದರೆ, ಅವರನ್ನು ಏತಕ್ಕೆ ಡಿಸ್‌ಮೆಂಬರ್ ಮಾಡಕೂಡದು, ಇದುವರೆಗೆ ಜನರಲ್ ಬಾಡಿ ಮೀಟಿಂಗನ್ನು ಏಕೆ ಮಾಡಲಿಲ್ಲ, ಎಂಬುದಾಗಿ ಹೇಳಿ ಅದರ ಬಗ್ಗೆ ತಕ್ಕ ಕ್ರಮವನ್ನು ಈಗಾಗಲೇ ತೆಗೆದುಕೊಂಡಿದ್ದಾರೆ. ನನಗೆ ಬಂದಿರುವ ವರ್ತಮಾನದ ಪ್ರಕಾರ ಮುಂದಿನ ತಿಂಗಳು 16 ನೇ ತಾರೀಖಿನಲ್ಲಿ ಆ ಮೀಟಿಂಗ್ ನಡೆಯುತ್ತದೆಂದು ಕೆಲವು ಮಾನ್ಯ ಸದಸ್ಯರೇ ಹೇಳಿದ್ದಾರೆ. ಆದ್ದರಿಂದ ಮುಂದಿನ ತಿಂಗಳು 16 ನೇ ತಾರೀಖು ಅದರ ಜನರಲ್ ಬಾಡಿ ಮೀಟಿಂಗನ್ನು ಇಟ್ಟಿದ್ದಾರೆ. ಒಂದು ವೇಳೆ ಆ ರೀತಿ ಮೀಟಿಂಗ್ ನಡೆದರೆ ಒಂದು ತಿಂಗಳ ನೋಟೀಸ್ ಸಾಕಷ್ಟು ಇರುತ್ತದೆ. ಕಾನೂನಿನಲ್ಲಿ ಅದಕ್ಕೆ ಒಂದು ಸೆಕ್ಷನ್, ಪ್ರಾವಿಷನ್ ಇದೆ. ಅದರಂತೆ ಕ್ರಮ ಕೈಕೊಳ್ಳಲಾಗುತ್ತದೆ ಎಂದು ಭರವಸೆಯನ್ನು ಹೇಳುತ್ತೇನೆ.

ಇದೆಲ್ಲಾ ಆಗಬೇಕಾದರೆ ಕೊನೆಯ ಪಕ್ಷ 2-3 ತಿಂಗಳು ಆಗಬಹುದು.

ಆ ಮೇಲೆ ಮಾನ್ಯ ಸದಸ್ಯರು ಇನ್ನೊಂದು ಮಾತನ್ನು ಹೇಳಿದರು ಅದೇನೆಂದರೆ, ಕೆಲವು ಸೊಸೈಟಿಗಳಿಗೆ (a) ಕ್ಲಾಸ್ ಮೆಂಬರುಗಳನ್ನು ಮಾಡಿಲ್ಲ (b) ಕ್ಲಾಸ್ ಮೆಂಬರುಗಳನ್ನು ಮಾತ್ರ ಮಾಡಿದ್ದಾರೆ ಎಂದು ಹೇಳಿದರು. ಅದರ ಕ್ಲಾಸಿಫಿಕೇಷನ್ ಹೇಗಿದೆ ಎಂದರೆ (a) ಕ್ಲಾಸ್ ಕೋ-ಆಪರೇಟೀವ್ ಸೊಸೈಟಿಗಳು (b) ಕ್ಲಾಸ್ ಇಂಡಿವಿಜುಯಲ್ಸ್ (c) ಕ್ಲಾಸ್ ಟ್ರೇಡರ್ಸ್ (d) ಕ್ಲಾಸ್ ಸ್ಟೇಟ್ ಗೌರ್ನಮೆಂಟ್ ಎಂದು ಕ್ಲಾಸಿಫೈ ಮಾಡಿದೆ. ಅವಕ್ಕೆ ಮಾನ್ಯ ಸದಸ್ಯರು (a) ಕ್ಲಾಸ್ ಎಂದು ಇರುವುದನ್ನು (b) ಕ್ಲಾಸ್ ಎಂದು ಭಾವನೆ ಮಾಡಿಕೊಂಡಿದ್ದಾರೆಂದು ಹೇಳುವಂಥಾದ್ದು ಸರಿಯಾದ ಮಾತಲ್ಲ. ಕೊ-ಆಪರೇಟಿವ್ ಸೊಸೈಟಿಗಳಿಗೆ ಯಾರೇ ಸದಸ್ಯರಾದರೂ ಕೂಡ ಅವರು (a) ಕ್ಲಾಸ್ ಸದಸ್ಯರಾಗಿರುತ್ತಾರೆ,

(ಶ್ರೀ ಕೊಂಡಜ್ಜಿ ಬಸಪ್ಪ)

ಇನ್ನು ಆ ಸೊಸೈಟಿಯ ಆಡಿಟ್ ವಿಚಾರದಲ್ಲಿ ಲೋಪದೋಷಗಳು ಇವೆಯೆಂದು ಹೇಳಿದರು. ಅದರ ಆಡಿಟ್ ರಿಪೋರ್ಟ್ ನನ್ನ ಹತ್ತಿರ ಇದೆ. ಅದರ ಅವಶ್ಯಕತೆ ಇದ್ದರೆ ಅದನ್ನು ಈ ಸಭೆಯ ಮೇಜಿನ ಮೇಲೆ ಇಡುತ್ತೇನೆ.

ಇನ್ನು ಅದರ ಆಡಿಟ್ ಮಾಡುವಾಗ ಕೆಲವು ಇರ್ರೆಗ್ಯುಲ್ಯಾರಿಟೀಸ್‌ಗಳನ್ನು ಕಂಡು ಹಿಡಿದಿದ್ದಾರೆ. The Auditor has pointed out that during the period under audit 80 bags of sugar of the value of Rs. 8856 were not delivered by the Transport Agent. ಎಂದು ಹೇಳಿದ್ದಾರೆ ಆ ಮೇಲೆ ಅದರ ಬಗ್ಗೆ A criminal and civil Case has been filed against the agent and the same is pending before the Court. ಅವರೂ ಕೂಡ ಅದರ ಬಗ್ಗೆ ಸರಿಯಾದ ಕ್ರಮಗಳನ್ನ ತೆಗೆದುಕೊಂಡಿದ್ದಾರೆ. ಇದರಲ್ಲಿ ಅಂಥಾ ಸೀರಿಯಸ್ ವಿಷಯಗಳೇನೂ ಕಂಡು ಬರುವುದಿಲ್ಲ. ಅಲ್ಲಿ ಎಲ್ಲವೂ ಕೂಡ ಸರಿಯಾಗಿ ನಡೆದಿದೆ ಎಂದು ನನಗೆ ತಿಳಿದು ಬಂದಿದೆ. ಈ ವಿಷಯದಲ್ಲಿ ನಾನು ಇಷ್ಟು ಮಾತ್ರ ತಿಳಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ವಿ. ಗೌಡ (ಪಾಳ್ಯ).—ಸ್ವಾಮಿ, ಈ ವಿಷಯದಲ್ಲಿ ನಾನು ಒಂದೆರೆಡು ಕ್ಲಾರಿಫಿಕೇಷನ್ ಕೇಳಬೇಕಾಗಿದೆ.

Mr. SPEAKER.—"A Member who has given notice may make a short statement and the Minister Concerned shall reply briefly. Any Member who has previously intimated to the speaker may be permited to ask a question for the purpose of further elucidating any matter of fact."

Sri S. V. AGNIHOTRI (Dharwar).—Point of order ಸ್ವಾಮಿ, ಈ ಮಾನ್ಯ ಸಭೆಯಲ್ಲಿ ಮಾನ್ಯ ಸದಸ್ಯರು ನಶ್ಯದ ಪುಡಿಯನ್ನು ಏರಿಸಬಹುದೇ ಹೇಗೆ?

Mr. SPEAKER.—Very nice point of order. I will have to study for ten days and then give my ruling!

(*Laughter*)

The House will now rise and re-assemble tomorrow at 1 P.M.

The House adjourned at Thirty Minutes past Six of the Clock to meet again at One of the Clock on Thursday, the 8th April 1965.

WD 4943—GPB—500—18-8-65

MYSORE LEGISLATIVE ASSEMBLY

Thursday, 8th April 1965.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Persons applied for Occupancy Rights in Jodi Guddalahalli Village, Magadi Taluk.

**Q*.—581. Sri C. R. RANGE GOWDA (Magadi),—

Will the Government be pleased to state :—

(*a*) the number of persons who have applied for Occupancy Right in Jodi Guddalahalli Village, Madabal Hobli, Magadi Taluk, to Special Deputy Commissioner for Inam Abolition, Bangalore District ;

(*b*) the action they have taken on those applications ;

(*c*) whether it is a fact that a large number of *bona fide* applicants are left out or ignored during the local enquiries by the Special Tahsildar for Inams, Magadi Taluk ?

A.—Sri M. V. KRISHNAPPA (Minister for Revenue).—

(*a*) 264.

(*b*) All the applications have been enquired into as required by the provisions of the Mysore Inam Abolition Act, 1954. Action is being taken to determine the Occupancy Rights.

(*c*) In view of reply to clause (*b*) the point does not arise.

ಶ್ರೀ ಸಿ. ಆರ್. ರಂಗೇಗೌಡ.—ಗುಡ್ಡಲಹಳ್ಳಿ ಗ್ರಾಮದಲ್ಲಿ 264 ಜನ ಅರ್ಜಿ ಕೊಟ್ಟಿದ್ದಾರೆ. ಅವರು ಅರ್ಷೇಯಿಂದಲೂ ಆ ಜಮೀನನ್ನು ಅನುಭವಿಸುತ್ತಾ ಇದ್ದಾರೆ, ಅದನ್ನು ಅವರ ಕೈತಪ್ಪಿಸಲಾಗುತ್ತದೆ ಎಂದಮೇಲೆ ಅರ್ಜಿಕೊಟ್ಟಿದ್ದಾರೆ, ಆ ಬಗ್ಗೆ ತನಿಖೆ ನಡೆಸಲಾಗಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾಗಡಿ ತಾಲ್ಲೂಕಿನಲ್ಲಿ ಬೇರೆ ತಾಲ್ಲೂಕುಗಳಿಗಿಂತ ಹೆಚ್ಚು ನಿಧಾನವಾಗಿದೆ. ಅಲ್ಲಿ ಹೆಚ್ಚು ಎಂದರೆ ಸುಮಾರು 80-85 ಗ್ರಾಮಗಳು ಇವೆ. ಆದ್ದರಿಂದ ನಿಧಾನವಾಗಿದೆ, ಕೆಲಸ ಪೂರೈಸಬೇಕಾಗಿರುವುದು ಇನ್ನೂ ಸುಮಾರು 30-34 ಗ್ರಾಮಗಳು ಉಳಿದಿದೆ. ಆಗಿರುವ ಕಡೆಯಲ್ಲೂ ಸಹ ಅನೇಕ ಗ್ರಾಮಗಳಲ್ಲಿ ಸರಿಯಾಗಿ ಎನ್‌ಕ್ವೈರಿ ನಡೆದಿಲ್ಲ ಎಂದು ರೆಪ್ರಸೆಂಟೇಷನ್‌ಗಳನ್ನು ಕೊಟ್ಟಿದ್ದಾರೆ. ಏನು ಮಾಡಬೇಕಾದರೂ ಇನಾಂ ಅಬಾಲಿಷನ್ ಆಕ್ಟ್ ಮತ್ತು ರೂಲ್ಸ್‌ಗನುಗುಣವಾಗಿ ಮಾಡಬೇಕು. ಇಲ್ಲದೇ ಇದ್ದರೆ ಇದು ಜ್ಯೂಡಿಷಿಯಲ್ ಮ್ಯಾಟರ್. ಹಿಂದೆ ರೆವಿನ್ಯೂ ಮಿನಿಸ್ಟರು ಇಂತಹ ಒಂದು ಕೇಸ್‌ನಲ್ಲಿ ಬೇಗ ಕಂಡಕ್ಟ್ ಮಾಡಿ ಎಂದು ಡೈರೆಕ್ಟ್ ಮಾಡಿದ್ದಕ್ಕೆ ಹೈಕೋರ್ಟ್‌ನವರು ಸ್ಟ್ರಿಕ್ಚರ್ ಪಾಸ್ ಮಾಡಿದ್ದಾರೆ.

(SRI M. V KRISHNAPPA)

It is not right for the Minister to tell the Officer to do a thing either fast or slow because it is put down under Inam Abolition Act and it is a judicial matter. ಇದು ಜ್ಯುಡಿಷಿಯಲ್ ಮ್ಯಾಟರ್ ಆದ್ದರಿಂದ ಅವರ ಅಧಿಕಾರ ಸ್ಥಾನವನ್ನು ಉಪಯೋಗಿಸಿ ಕೊಳ್ಳಬಾರದಾಗಿತ್ತು ಎಂದು ಸ್ಟ್ರಿಕ್ಚರ್ ಪಾಸ್ ಮಾಡಿದರು. ಆದ್ದರಿಂದ ಏನು ಮಾಡಬೇಕಾದರೂ ನಾವು ಆಕ್ಟ್‌ನ ಪರಿಮಿತಿಯೊಳಗೆ ಮಾಡಬೇಕಾಗುತ್ತದೆ.

ಶ್ರೀ ಸಿ. ಆರ್. ರಂಗೇಗೌಡ.—ಆಕ್ಟ್‌ನ ಪರಿಮಿತಿಯಲ್ಲಿ ಮಾಡಬೇಕಾಗಿದ್ದರೆ, ತಾವು ಹೇಳಿದ ಹಾಗೆ ಅದರಲ್ಲಿ ಅನೇಕ ಲೋಪದೋಷಗಳಿದ್ದು ನಾವು ಪ್ರವೇಶ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದಿರಿ. ಮಾಗಡಿ ತಾಲ್ಲೂಕಿನ 86 ಇನಾಂ ಗ್ರಾಮಗಳ ರೈತರಿಗೆ ಬಹಳ ಅನಾನುಕೂಲವಾಗಿದೆ, ಆದ್ದರಿಂದ ಆಕ್ಟ್‌ಗೆ ಒಂದು ತಿದ್ದುಪಡಿಯನ್ನು ತಂದು ಆಗಿರತಕ್ಕ ಅನ್ಯಾಯವನ್ನು ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆಕ್ಟ್ ಅಮೆಂಡ್ ಮಾಡಬೇಕೆಂದರೆ ಬಹಳ ನಿಧಾನವಾಗುತ್ತದೆ ಎಂದು ಕಾಣುತ್ತದೆ. ಆಕ್ಟ್‌ಗೆ ಒಳಪಟ್ಟು ತೊಂದರೆ ನಿವಾರಣೆ ಮಾಡುವುದಕ್ಕೆ ಸಾಧ್ಯವಿದ್ದರೆ ರೆಪ್ರಸೆಂಟೇಷನ್ ಕೊಡಿ, ವಿಚಾರ ಮಾಡುತ್ತೇವೆ.

Villages electrified in the State.

***Q.—623. Sri K. P. GADAG (Gadag).—**

Will the Government be pleased to state :—

(a) the number of villages that are electrified in the State during the last 3 years ;

(b) what is the policy that Government follows to supply electricity to villages ;

(c) the villages in Gadag Taluk that are likely to be supplied with electricity during the current year ?

A.—Sri VEERENDRA PATIL (Minister for Public Works): [on behalf of SRI S. NIJALINGAPPA (Chief Minister)].—

(a)

Year	No. of villages.
1961-62	135
1962-63	252
1963-64	232

(b) Villages within a radius of 5 miles of the existing and proposed power lines and which according to the estimates assure a revenue return of not less than 5 per cent of estimated cost, in the case of Malnad areas and $7\frac{1}{2}$ per cent in the case of Maidan areas are taken up.

(c) The following villages in Gadag Taluk are likely to be supplied with electricity :—

1 Beladhadi
2 Binkadakatti
3 Chinchalli
4 Hosur
5 Kalasapur
6 Nagavi
7 Kallur
8 Kanvi
9 Kotamachagi (Electrified on 22-2-1965)

10 Narayanapur (Electrified on 22-2-1965)
11 Kurthakoti
12 Lakkundi
13 Shirol
14 Shirnnj
15 Soratur
16 Yelesirur
17 Hombal
18 Asundi

ಶ್ರೀ ಕೆ. ಪಿ. ಗದಗ್.—ಈ ಪ್ರಾಂತ್ಯದ ಕೆಲವು ತಾಲ್ಲೂಕುಗಳಲ್ಲಿ ಬಹುಭಾಗ ಹೆಚ್ಚು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಪೂರೈಸಿದ್ದು ಮತ್ತು ಕೆಲವು ತಾಲ್ಲೂಕುಗಳಲ್ಲಿ ಅತಿ ಕಡಿಮೆ ಭಾಗ ಕಡಿಮೆ ಸಂಖ್ಯೆ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಪೂರೈಸಿದ್ದು ಈ ವಿಷಮತೆ ಅಥವಾ ಅಭ್ಯಂತರ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ಹೇಗೆ ?

ಶ್ರೀ ವಿರೇಂದ್ರ ಪಾಟೀಲ್.—ಸ್ಟೇಟ್ ರೀ ಆರ್ಗನೈಸೇಷನ್‌ಗಿಂತಲೂ ಮೊದಲು ಯಾವ ಅನುಕೂಲತೆ ಇತ್ತೋ ಅದಕ್ಕಿಂತಲೂ ಈಗ ಹೆಚ್ಚಾಗಿದೆ. ಈಗ ಎಲ್ಲಿ ಆಗಿಲ್ಲ ಅಲ್ಲಿ ಹೆಚ್ಚು ಪ್ರಮಾಣದಲ್ಲಿ ತೆಗೆದುಕೊಳ್ಳಬೇಂದು ವಿಚಾರ ಮಾಡಿ ಈಗಾಗಲೇ ಆದಕ್ಕೆ ಸಂಬಂಧಪಟ್ಟ ಟ್ರಾನ್ಸ್‌ಮಿಷನ್ ಲೈನ್ ಮುಂತಾದವುಗಳನ್ನು ಹಾಕುತ್ತಾ ಇದ್ದೇವೆ.

ಶ್ರೀ ಕೆ. ಪಿ. ಗದಗ್.—ಅಭ್ಯಂತರ ಇದೆ ಅನ್ನುವುದನ್ನು ತಾವು ಸಾಮಾನ್ಯವಾಗಿ ಒಪ್ಪಿಕೊಂಡಿರಿ. ಯಾವ ಯಾವ ತಾಲ್ಲೂಕಿನ ಹಳ್ಳಿಗಳಿಗೆ ಕಡಿಮೆ ಸಂಖ್ಯೆ ಕೊಟ್ಟಿದೆ. ಆ ತಾಲ್ಲೂಕುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವಂತಹ ಒಂದು ಯೋಜನೆ ಸರಕಾರವೇನಾದರೂ ಮಾಡಬಹುದೇ ಹೇಗೇ ?

ಶ್ರೀ ವಿರೇಂದ್ರ ಪಾಟೀಲ್.—ತಾಲ್ಲೂಕು ಅಂತ ಒಂದು ಯೂನಿಟ್ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ ಬೊಂಬಾಯಿ ಕರ್ನಾಟಕ ಏರಿಯಾಕ್ಕೆ ಶರಾವತಿ ಪವರ್ ಹೋಗುತ್ತಾ ಇದೆ. 110 ಟ್ರಾನ್ಸ್‌ಮಿಷನ್ ಲೈನ್ 33 ಕೆ.ವಿ. ಲೈನ್ ಹಾಕುತ್ತಾ ಇದ್ದೇವೆ. ಲೈನ್ ಎಲ್ಲಿ ಹೋಗುತ್ತಾ ಇದೆ. ಅದರ ಐದು ಮೈಲಿ ರೇಡಿಯಸ್‌ನಲ್ಲಿರತಕ್ಕ ಎಲ್ಲಾ ಹಳ್ಳಿಗಳನ್ನೂ ಕವರ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಒಂದು ತಾಲ್ಲೂಕನ್ನು ಟಾರ್ಜೆಟ್ ಅಂತ ಮಾಡುವುದಕ್ಕಾಗುವುದಿಲ್ಲ. ಮತ್ತು ಟ್ರಾನ್ಸ್‌ಮಿಷನ್ ಲೈನ್ ತೆಗೆದುಕೊಂಡು ಹೋಗಲಿಕ್ಕೆ ಖರ್ಚಾಗುತ್ತದೆ ಆದ್ದರಿಂದ 5-7½ ಪರ್ಸೆಂಟ್ ರಿಟರ್ನ್ ಬರಬೇಕಾಗುತ್ತದೆ. ಈಗ ಹೇರಳವಾಗಿ ಪವರ್ ಬರುವುದರಿಂದ ಎಷ್ಟು ಸಾಧ್ಯವೋ ಅಷ್ಟು ಸಂಖ್ಯೆಯಲ್ಲಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂಬ ವಿಚಾರ ಇದೆ.

ಶ್ರೀ ಎಸ್. ಎಂ. ಗುರೆಡ್ಡಿ.—ವಿಜಾಪುರ ಪ್ರಾಪರ್ ಎಂದರೆ ನಗರಕ್ಕೂ ಕೂಡ ಇನ್ನೂ ವಿದ್ಯುಚ್ಛಕ್ತಿ ಪುರವತೆ ಆಗಿಲ್ಲ, ಒಂದು ವರ್ಷದಲ್ಲಿ ಅಲ್ಲಿಗೆ ಪವರ್ ಸಪ್ಲೈ ಮಾಡುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಅಶ್ವಾಸನೆ ಕೊಟ್ಟಿದ್ದರು. ಇನ್ನೂವರೆಗೂ ಒದಗಿಸಿಲ್ಲ ಆದ್ದರಿಂದ ಬಿಜಾಪುರ ಪ್ರಾಪರ್‌ಗಾದರೂ ಈ ವರ್ಷ ಒದಗಿಸಿ ಕೊಡುತ್ತೀರಾ ?

ಶ್ರೀ ವಿರೇಂದ್ರ ಪಾಟೀಲ್.—ಬಾಗಲ್‌ಕೋಟೆಯಲ್ಲಿ 110 ಕೆ. ವಿ. ರಿಸೀವಿಂಗ್ ಸ್ಟೇಷನ್ ಈಗಾಗಲೇ ತಯಾರಾಗಿದೆ ಬಹುಶಃ ಇದೇ ಇದೇ ತಿಂಗಳಿನಲ್ಲಿ ಅದರ ಪ್ರಾರಂಭೋತ್ಸವ ಆಗಬಹುದು ಆದಾದಮೇಲೆ ಬಿಜಾಪುರ ಮತ್ತು ಇತರ ಎಲ್ಲಾ ಕಡೆಗೂ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ರಾಜ್ಯದಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುತೀಕರಣಗೊಳಿಸಲು ಸರ್ವೆ ಮಾಡಲಾಗಿದೆ, ಮತ್ತು ಎಸ್ಟಿಮೇಟ್ ತಯಾರು ಮಾಡಲಾಗಿದೆ ?

ಶ್ರೀ ವಿರೇಂದ್ರಪಾಟೀಲ್. ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೇ ಹೇಳಬಹುದು.

ಶ್ರೀ ಸಿ. ಎಸ್. ಹುಲ್ಕೋಟಿ.—ಎಲ್ಲಿ ಅಭಾವ ಪ್ರದೇಶ ಇದೆ, ಎಲ್ಲಿ ಇರಿಗೇಷನ್ ವರ್ಕ್ಸಿನ ಡಿಮ್ಯಾಂಡ್ ಇದೆ ಮತ್ತು ಅವಕ್ಕೆ ಈಗಾಗಲೇ ಹಣ ಕೊಟ್ಟಿದ್ದೀರಿ ಅಂತಹ ಕೆಲಸಗಳಿಗೆ ಪ್ರಿಫರೆನ್ಸ್ ಕೊಡಲಾಗುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಲಿಫ್ಟ್ ಇರಿಗೇಷನ್—ಪಂಪ್ ಸೆಟ್ಸ್‌ಗೆ ಆದ್ಯತೆ ಕೊಡಬೇಕೆಂದು ಕ್ರಾಷ್‌ಪ್ರೋಗ್ರಾಂನಲ್ಲಿ ಆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ಕೇಂದ್ರ ಸರ್ಕಾರದವರಿಗೆ ಸಹಾಯ ಕೇಳಿದ್ದೇವೆ ಮತ್ತು ಅಗ್ರಿಕಲ್ಚರಲ್ ಪ್ರೊಡಕ್ಷನ್ ಸಲುವಾಗಿ ಪ್ರಯಾರಿಟಿ ಕೊಡಬೇಕೆನ್ನುವುದು ಸರ್ಕಾರದ ನೀತಿಯಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಂತಿ ಮತ್ತು ಕಂಬಗಳು ಇಲ್ಲದೆ ವಿದ್ಯುಚ್ಛಕ್ತಿ ಕೊಡುವುದಕ್ಕೆ ಬಹಳ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಅದನ್ನು ನಿವಾರಣೆ ಮಾಡುವುದಕ್ಕೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

(*c*) Separate figures regarding financial commitment on account of the above revisions in respect of aided institutions, local bodies, etc., is not available, since they are paid on grant-in-aid basis.

Sanction of Drinking Water Wells in Hosanagar Taluk.

Q.—273. Sri G. T. RANGAPPA (Hosadurga).—

Will the Government be pleased to state.—

(*a*) the number of villages in Hosadurga Taluk to which drinking water wells have been sanctioned ;

(*b*) the number of villages from which representations have been received for sanctioning drinking water wells ;

(*c*) the number of wells still to be completed ?

A.—Sri RAMAKRISHNA HEGDE (Minister for Development, Panchayathi Raj and Co-operation).—

(*a*) 70.

(*b*) 24.

(*c*) 17.

Villages taken up under N.R.W.S. Programme in Bangalore Rural District.

Q.—275. Sri T. MADIAH GOWDA (Ramanagaram).—

Will the Government be pleased to state :—

(*a*) the villages in which the N. R. W. S. programme is taken up under the III Five-Year Plan period in Bangalore Rural District ;

(b) the number of villages surveyed for this purpose and the number in which the survey has been completed ;

(c) the number of villages for which estimates have been prepared;

(d) whether this programme would be completed by the end of III Five-Year Plan ?

A.—Sri RAMAKRISHNA HEGDE (Minister for Development, Panchayathi Raj and Co-operation).—

(a) 1. Attibele.
2. Solur.
3. Srigandakaval.
4. Kollenganahally.

(b) Four.

(c) Four.

(d) Yes in two villages, namely, Attibele and Srigandakaval.

Food Committees in South Kanara District.

Q.—277. Sri SANJEEVANATH AIKALA (Surathkal).—

Will the Government be pleased to state :—

(a) whether 'Food Committees' in the District of South Kanara at the District level and Taluk level have been formed for the purpose of distribution of foodgrains by the Deputy Commissioner ;

(b) if so, in which taluks of the above District such Committees have been formed ;

(c) what are the functions of such Food Committees ;

(d) the arrangements made for the distribution of rice and wheat products, to the wholesalers, retailers, co-operative stores and consumers in the above district during the period of scarcity, i.e., June, July, August, September, and October 1964 ?

A.—Sri M. V. KRISHNAPPA (Minister for Revenue).—

(a) The Local Advisory Committees constituted for the distribution of sugar in respect of the larger towns have been utilised for the purpose of advising the Deputy Commissioner in regard to the distribution of foodgrains also.

(b) Udipi and Mangalore.

(c) To advise the Deputy Commissioner on the arrangements to be made for the proper distribution of foodgrains.

(d) The foodgrains allotted to the District were got lifted through the nominees of the Deputy Commissioner and were distributed to the consumers through selected Co-operatives and retail dealers.

REPORT OF THE COMMITTEE OF PRIVILEGES

Sri Y. MANJAYYA SHETTY (Coondapur).—Sir, I beg to move :

"That the Report of the Committee of Privileges presented to the House on the 26th March 1965 be taken into consideration."

Mr. SPEAKER.—I shall put the first portion because the second portion is a consequence of the first.

The question is :

"That the Report of the Committee of Privileges presented to the House on the 26th March 1965 be taken into consideration."

The motion was adopted.

Sri Y. MANJAYYA SHETTY.—Sir, I also beg to move :

"That this House agrees with the recommendations of the Privileges Committee contained in the report presented to the House on the 26th March 1965 that Sri S. Gopala Gowda is guilty of contempt of the House and accordingly this House places on record its extreme displeasure with his conduct."

Mr. SPEAKER.—I take it that no Member wants to speak on this.

The question is :

"That this House agrees with the recommendations of the Privileges Committee contained in the report presented to the House on the 26th March 1965 that Sri S. Gopala Gowda is guilty of contempt of the House and accordingly this House places on record its extreme displeasure with his conduct."

(The motion was adopted unanimously.)

MOTION *re*: TERMINATION OF SUSPENSION OF SRI S. GOPALA GOWDA.

†Sri S. M. KRISHNA (Maddur).—Sir, I beg to move :

"That this Assembly resolves that the suspension of Sri S. Gopala Gowda from the service of the Assembly be terminated forthwith."

Mr. SPEAKER.—Motion moved :

"That the suspension of Sri S. Gopala Gowda from the service of the Assembly be terminated forthwith."

ಶ್ರೀ ಎಸ್. ಎಂ. ಕೃಷ್ಣ.—ಅಧ್ಯಕ್ಷರೇ, ಕೆಲವು ಕಾಲದ ಹಿಂದೆ ಈ ಸಭೆಯಲ್ಲಿ ನಡೆದಂತಹ ಒಂದು ಕಹಿ ಘಟನೆಯ ಪರಿಣಾಮವಾಗಿ ಈ ಮಾನ್ಯ ಸಭೆಯ ಸದಸ್ಯರೊಬ್ಬರಾದಂಥ ಶ್ರೀಮಾನ್ ಎಸ್. ಗೋಪಾಲಗೌಡರನ್ನು ಈ ಸಭೆಯಿಂದ ಸಸ್ಪೆಂಡ್ ಮಾಡಲಾಯಿತು. ಈ ಸಭೆಯಲ್ಲಿ ಹಿಂದೆ ಮಾಡಿದಂತಹ ನಿರ್ಣಯ ಈ ದಿವಸ ರದ್ದು ಮಾಡಬೇಕೆಂದು ಪ್ರಾರ್ಥನೆ ಮಾಡುವುದಕ್ಕೆ

ನಾನು ಈಗ ಎದ್ದು ನಿಂತಿದ್ದೇನೆ. ತಪ್ಪು ಮಾಡುವುದು ಮಾನವ ಸಹಜವಾದದ್ದು. ಇದರಲ್ಲಿ ಆಗಿರ ತಕ್ಕ ತಪ್ಪನ್ನು ಒಪ್ಪಿಕೊಂಡು ಅದಕ್ಕಾಗಿ ಪಶ್ಚಾತ್ತಾಪ ಪಡತಕ್ಕದ್ದು ಹಿರಿಯ ಗುಣ ಎನ್ನುವುದನ್ನು ನಾವೆಲ್ಲರೂ ಮೆಚ್ಚಬೇಕಾಗಿದೆ. ಶ್ರೀಮಾನ್ ಎಸ್. ಗೋಪಾಲಗೌಡರು ಈಗಾಗಲೇ ಈ ಸಭೆಗೆ ಪ್ರಾರ್ಥನೆ ಮಾಡಿಕೊಂಡು ತಾವು ಮಾಡಿದ ತಪ್ಪನ್ನು ಒಪ್ಪಿಕೊಂಡು ಆ ತಪ್ಪಿನ ಬಗ್ಗೆ ತಮ್ಮ ಪಶ್ಚಾತ್ತಾಪವನ್ನು ವ್ಯಕ್ತ ಮಾಡಿದ್ದಾರೆ. ಆ ತಪ್ಪನ್ನು ಅವರು ತಮ್ಮ ತಲೆಯಮೇಲೆ ಇಟ್ಟುಕೊಂಡಿದ್ದಾರೆ. ಅದನ್ನು ಮನ್ನಿಸತಕ್ಕದ್ದು ದೊಡ್ಡತನ, ಹಿರಿಯತನ, ಅದನ್ನು ಈ ಸಭೆಯು ವ್ಯಕ್ತಪಡಿಸಬೇಕು. ಎನ್ನುವ ದೃಷ್ಟಿಯಿಂದ ನಾನು ಈ ನಿರ್ಣಯವನ್ನು ಈ ಸಭೆಯಮುಂದೆ ಮಂಡಿಸುತ್ತೇನೆ. ಈ ಮಾನ್ಯ ಸಭೆಯವರು ಇದನ್ನು ಸರ್ವಾನುಮತದಿಂದ ಒಪ್ಪಿಕೊಳ್ಳಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—I am not concerned with the past but I am concerned with the present and the future. Is the Hon'ble Member sure that there is repentence on the part of the Hon'ble Member? The House will remember that such an assurance was given to me on a prior occasion when the Governor's Address was trampled upon. It was then said that there was a change of heart; it was given to me as a definite assurance.

Sri SIDDAIAH KASHIMATH (Shirahatti).—Now, he has realised it, Sir.

Mr. SPEAKER.—After that and till the next incident happened, I had occasion to see that there was very little change of heart. Are the Members satisfied that there will not be a repetition of that?

A LARGE NUMBER OF MEMBERS.—Yes.

Sri V. S. PATIL (Belgaum-I).—Sir, I should like to support the motion that is brought before the House so far as the conduct of Mr. Gopala Gowda is concerned. Since the first incident, *viz.*, the trampling of the Governor's Address, there is a vast change in his behaviour. The latest incident is a freak of his mind and that happened beceuse he suddenly lost his temper. Immediately after that, he felt that he had committed a mistake and expressed his regret. Besides, on several occasions he has tendered his apology in writing for his conduct. From this point of view, I feel that he is really feeling sorry for these acts and I also feel that all these punishments are meant only for correction. If the person concerned is ready to correct his counduct and behaviour, it appears to me that we must be a bit lenient and give more scope for correction. That is why I feel that the punishment already suffered by him is more than sufficient. Otherwise very grave consequences are likely to follow.

Mr. SPEAKER.—What is that?

Sri V. S. PATIL.—Suppose this meeting is adjourned and the next adjourned meeting is called two or three months hence. But the ban imposed upon him will continue till this session is prorogued and by that time 60 days would have been over and he would be permanently disqualified under the Constitution.

Mr. SPEAKER.—I do not know.

Sri V. S. PATIL.—Unless he remains present he is likely to be disqualified permanently. So I feel that it is better that we reconsider the question and terminate this disqualification so far as this House is concerned.

Mr. SPEAKER.—If a Member is kept out against his will, does it amount to absence ?

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಅಧ್ಯಕ್ಷರೆ, ಮೊನ್ನೆ ಈ ಸಭೆಯಲ್ಲಿ ನಡೆದ ಘಟನೆಯ ಬಗ್ಗೆ, ಮಾನ್ಯ ಸದಸ್ಯರು ಈ ಸಭೆಗೆ ಬಂದು ಕ್ಷಮಾಪಣೆ ಕೇಳಿದರೆ ಮಾತ್ರ.........

ಅಧ್ಯಕ್ಷರು.—ಈಗ ಅವರು ಇಲ್ಲಿ ಬರುವುದಕ್ಕೆ ಆಗುವುದಿಲ್ಲ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಬಂದಮೇಲೆ, ಸ್ವಾಮಿ.

ಅಧ್ಯಕ್ಷರು.—ಇದನ್ನು ರದ್ದು ಮಾಡಿದನಂತರ, ಕ್ಷಮಾಪಣೆ ಎಲ್ಲಿದೆ ?

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಅವರು ನನ್ನನ್ನು ಕ್ಷಮಾಪಣೆ ಕೇಳಿಲ್ಲ. ಕೇಳಿದರೆ ಮಾತ್ರ, ಇದಕ್ಕೆ ಒಪ್ಪುತ್ತೇನೆ. ಇಲ್ಲದಿದ್ದರೆ, ಕ್ಷಮಿಸುವುದಕ್ಕಾಗುವುದಿಲ್ಲ.

Sri S. M. KRISHNA.—The Privilege Committee Report is there.

Mr. SPEAKER.—Order, order. Is there any document ?

Sri V. S. PATIL.—I am a member of the Privileges Committee. The member has tendered an unconditional apology not only to this House but also to the Hon'ble member Smt. K. S. Nagarathnamma Hiremutt. He has tendered it unconditionally in writing.

ಅಧ್ಯಕ್ಷರು.—ಸಮಿತಿಯ ವರದಿಯ 6ನೇ ಪುಟದಲ್ಲಿ ಅವರ ಪತ್ರದ ಕಾಪಿಯಲ್ಲಿ ಹೀಗಿದೆ: ''ಈ ಕೃತಿಗಳಿಗಾಗಿ ನಾನು ವಿಷಾದಿಸುತ್ತೇನೆ ಮತ್ತು ಅದಕ್ಕಾಗಿ ಸದನದ ಮಾನ್ಯ ಅಧ್ಯಕ್ಷರ, ಅಧಿಕೃತ ವರದಿಗಾರರ ಮತ್ತು ಶ್ರೀಮತಿ ನಾಗರತ್ನಮ್ಮ ಹಿರೇಮಠ ಇವರ ಕ್ಷಮಾಪಣೆ ಕೇಳುತ್ತೇನೆ...ವರದಿಯನ್ನು ತೆಗೆದುಕೊಂಡು ಹೋಗಿ ಅವರಿಗೆ ಕೊಡಿ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಕ್ಷಮಾಪಣೆ ಕೇಳಿದ್ದರೆ ಆಗಬಹುದು.

ಶ್ರೀ ಸಿದ್ದಯ್ಯ ಕಾಶಿಮಠ.—ಇದರ ಬಗ್ಗೆ ಸಾಕಷ್ಟು ಮಾತನಾಡಿದೆ ಮತ್ತು ಶ್ರೀ ಎಸ್. ಗೋಪಾಲಗೌಡರೂ ಕ್ಷಮಾಪಣೆ ಬೇಡಿದ್ದಾರೆ. ಏನೋ ಅವತ್ತು ಒಂದು ಸಿಟ್ಟಿನ ಸ್ವಭಾವದಲ್ಲಿ ಮಾಡಿದ ಪ್ರಕರಣಕ್ಕೆ ರಿಪೆಂಟ್ ಮಾಡಿಕೊಂಡಿದ್ದಾರೆ. ಯಾವ ಕಂಡಿಶನ್ನೂ ಇಲ್ಲದೇನೆ ಅಪರಾಧ ಒಪ್ಪಿಕೊಂಡು ಹೋದಾಗ, ಕ್ಷಮಾಪಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಕಂಠಿ (ವಿದ್ಯಾಶಾಖೆಯ ಮಂತ್ರಿಗಳು).—ಸನ್ಮಾನ್ಯ ಸದಸ್ಯರು ಕ್ಷಮಾಪಣೆ ಕೇಳಿದರೆ, ಆಗಬಹುದು ಅಂತ ಹೇಳಿದ್ದಾರೆ. ತಾವೂ ಆಗಬಹುದು ಅಂತ ಹೇಳಿದರೆ, ಆಗಬಹುದು.

ಅಧ್ಯಕ್ಷರು.—ನಾನು ಆಗಬಹುದು ಅನ್ನುವ ವಿಷಯವೇ ಇಲ್ಲ. ನನಗೆ ಬುದ್ಧಿ ಇದ್ದಷ್ಟು ಮಟ್ಟಿಗೆ ನಾನು ನೋಡಿಕೊಳ್ಳುತ್ತೇನೆ. ತಮ್ಮ ಪರವಾಗಿ ಏನಾದರೂ ಇದ್ದರೆ ಹೇಳಿ.

ಶ್ರೀ ಎಸ್. ಆರ್. ಕಂಠಿ.—ನನ್ನ ಅಬ್ಜೆಕ್ಷನ್ ಇಲ್ಲ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಈ ವಿಷಯದಲ್ಲಿ ಶ್ರೀಮಾನ್ ಗೋಪಾಲಗೌಡರು ಅವರ ಪತ್ರದಲ್ಲಿ ಖಚಿತವಾಗಿ ಹೇಳಿದ್ದಾರೆ. ಅದಕ್ಕಿಂತಲೂ ಯಾವರೀತಿಯಲ್ಲಿ ಹೆಚ್ಚು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ತಾವು ಈ ದಿವಸ ಹೇಳಿದ್ದು ಜ್ಞಾಪಕ ಉಂಟೋ ? ಅದನ್ನು ಮರೆಯಬಾರದು ಹಾಗೇ ಇನ್ನೊಂದು ಸಾರಿ ಹೇಳಬಾರದು.

Sri S. SIVAPPA.—To err is human.

Mr. SPEAKER.—Do the members guarantee that such a thing will not happen hereafter ?

SEVERAL HON'BLE MEMBERS.—Certainly, Sir.

Mr. SPEAKER.—Sri Sivappa is a defaulting guarantor. I am concerned with the present and the future and so this guarantee must go on record so that there must be an effectual bar this time. I will take note of every one of those who have guaranteed here today that this change of heart has taken place. If it has not changed, then I will at once call upon these members..............

Sri C. J. MUCKANNAPPA (Sira).—Experience is a good school. He has realised his mistake by experience.

Mr. SPEAKER.—But as Sri V. S. Patil puts it, freak rises and temper is lost. What to do for that? And then he cannot control himself.

I will put the motion to the House. The question is:

> "That this Assembly resolves that the suspension of Sri S. Gopala Gowda from the service of the Assembly be terminated forthwith."

The motion was adopted.

Mr. SPEAKER.—The Hon'ble Member can be informed that he can come today if he likes.

ಶ್ರೀ ಎಸ್. ಶಿವಪ್ಪ.—ತಾವು ನಿನ್ನೆ ಅಪ್ಪಣೆ ಕೊಡಿಸಿದ್ದೀರಿ...........

ಅಧ್ಯಕ್ಷರು.—ಏನು ಅಪ್ಪಣೆ ಕೊಡಿಸಿದ್ದೆ, ಹೇಳಿ. ನೀವು ಮಾತನಾಡಿ ಅಂತ ಹೇಳಿದ್ದೆ ಮಾತನಾಡಿದಿರೊ ?

ಶ್ರೀ ಎಸ್. ಶಿವಪ್ಪ.—ಇವತ್ತಿನ ದಿವಸ ಆಗುವುದಿಲ್ಲ, ಎಂದು...............

Mr. SPEAKER.—I cannot understand Sri Sivappa. What did I say yesterday? I said that if the Chief Minister is not there, the Minister for Revenue is there and both can talk it over.

Sri S. SIVAPPA.—Accepting your advice very seriously we on this side have written a letter to the Chief Minister requsting him..............

Mr. SPEAKER.—Then it is better to wait till a reply is received.

Sri S. SIVAPPA.—Even that letter has not been replied.

Mr. SPEAKER.—I cannot understand this, I told the Hon'ble Member Sri S. Sivappa that if the Chief Minister is not there, talk it over with the Minister for Revenue. Does the member think it below his dignity to do that?

Sri S. SIVAPPA.—We do not know who is the Deputy Leader in the absence of the Leader of the House.

Mr. SPEAKER.—We will go on with the next Business. Sri H. R. Keshavamurthy has already taken 20 minutes and he must finish in 10 minutes. Before he begins, I want to know how many more members want to participate in this Debate.

(Several members rose.)

Mr. SPEAKER.—What time will be required for reply?

Sri M. V. KRISHNAPPA.—Since there are many more members to speak, we do not press that the Debate should be finished today only.

Mr. SPEAKER.—Since this is a very vital matter I will allow the whole of today for the Debate and the reply will be tomorrow.

Sri SIDDAIAH KASHIMATH.—Let tomorrow also be given for the Debate.

Mr. SPEAKER—We shall see that tomorrow. Now Sri H. R. Keshavamurthy may begin. He must close in 10 minutes.

OFFICIAL RESOLUTION

Resolution *re* : The Settlement Report

(*Debaute continued*).

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ನಿನ್ನೆಯ ದಿವಸ ನಾನು ಹೇಳುತ್ತಾ ಇದ್ದೆ. ಇವತ್ತಿನ ದಿವಸ ಬರೀ ಜಮೀನು ಕಂದಾಯ ಜಾಸ್ತಿ ಮಾಡಬೇಕು, ಸರಕಾರದ ಉತ್ಪನ್ನ ಹೆಚ್ಚುಮಾಡ ತಕ್ಕಂಥ ಮಾರ್ಗವನ್ನು ಹುಡುಕಿಕೊಂಡಿದ್ದಾರೆಯೆ ಹೊರತು, ಇವತ್ತು ಆಕ್ಚುಯಲ್ ಎಂಜಾಯ್ಮೆಂಟಿನಲ್ಲಿ ಎಷ್ಟಿದೆ, as per records, ಆಕಾರಬಂದು, ಫೂಟ್ ಖರಾಬ್ ಪ್ರಕಾರ ಎಷ್ಟು ಕಂದಾಯ ಕೊಡುತ್ತಾ ಇದ್ದಾರೆ ಎನ್ನುವುದನ್ನು ನೋಡಿಲ್ಲ. ಕೆಲವರು ಎನ್‌ಕ್ರೋಚ್ ಮಾಡಿಕೊಂಡು ಫೂಟ್ ಖರಾಬ್ ಸಾಗುವಳಿ ಮಾಡಿಕೊಂಡು, ಕಡಿಮೆ ಕಂದಾಯ ಕೊಟ್ಟುಕೊಂಡು, ಹೆಚ್ಚಿಗೆ ಎಂಜಾಯ ಮಾಡಿಕೊಂಡು ಬರುತ್ತಿದ್ದಾರೆ. ಅಂಥವರನ್ನು ಕಂಡುಹಿಡಿದು, ಹೆಚ್ಚಿಗೆ ಕಂದಾಯ ಹಾಕಿ, ಹೆಚ್ಚಿಗೆ ಕಂದಾಯ ವಸೂಲುಮಾಡಿ. ಅದು ಬಿಟ್ಟು ನಿರಪರಾಧಿಯಾದ ರೈತನಮೇಲೆ ಹೆಚ್ಚು ಕಂದಾಯ ಹೇರಬಾರದು. ನಿಮ್ಮ ಸರ್ವೆ ರಿಕಾರ್ಡಿನಲ್ಲಿ ಫೂಟ್ ಖರಾಬ್ ಎಷ್ಟು, ಖುಷ್ಕಿ ಕಂದಾಯ ಕೊಟ್ಟುಕೊಂಡು, ನೀರನ್ನು ಉಪಯೋಗಿಸಿಕೊಂಡು ಎಷ್ಟು ಜನ ತರಿ ಬೆಳೆಯುತ್ತಿದ್ದಾರೆಂಬ ವಿವರಗಳನ್ನು ಕೊಟ್ಟಿಲ್ಲ. ಇದನ್ನು ಕಂಡುಹಿಡಿಯತಕ್ಕ ಹವ್ಯಾಸಕ್ಕೇ ಹೋಗಿಲ್ಲ. ಇದು ಹೇಗಿದೆ ಎಂದರೆ ಸುಲಭವಾಗಿ ಆರಂ ಚೇರ್ ಆಫೀಸರ್ಸ್ ಎನ್ನುವ ಅಧಿಕಾರಿಗಳು ಎಲ್ಲೋ ಒಂದುಕಡೆ ಕುಳಿತುಕೊಂಡು ಯಾವುದೋ ಸ್ಟಾಟಿಸ್‌ಟಿಕ್ಸ್‌ನ್ನು ತರಿಸಿಕೊಂಡು ಅದರಮೇಲೆ ಕಂದಾಯ ಹೆಚ್ಚು ಹಾಕಬೇಕೆಂದು ಇಲ್ಲ ತಂದಿರುವುದು ನ್ಯಾಯವೇ ಎಂದು ನಾನು ತಮ್ಮನ್ನು ಇಲ್ಲಿ ಕೇಳುತ್ತೇನೆ. ಕಂದಾಯವನ್ನು ಹೆಚ್ಚು ಮಾಡುವುದಕ್ಕೆ ಮುಂಚೆ ನ್ಯಾಯವಾಗಿ ಫೀಲ್ಡ್ಸ್‌ಗಳಲ್ಲಿ ಹೋಗಿ ಕಷ್ಟಪಟ್ಟು ಜಮೀನಿನ ಮೇಲೆ ರೈತರು ಮಾಡುತ್ತಿರುವ ಪ್ರಯತ್ನಗಳೇನು ಎನ್ನುವುದನ್ನು ನೋಡಿಕೊಂಡು ಇಲ್ಲಿ ಮಾಡಿಲ್ಲ. ಅದರಂತೆ ಸೆಟಲ್‌ಮೆಂಟ್ ರಿಪೋರ್ಟನ್ನು ಕೂಡ ತಯಾರು ಮಾಡಿಲ್ಲ. ಕಂದಾಯವನ್ನು ಜಾಸ್ತಿ ಮಾಡಬೇಕಾದರೆ

2-00 P.M.

ಅದನ್ನು ಯಾವ ಶಾಸ್ತ್ರೀಯವಾದ ಆಧಾರದ ಮೇಲೆಯೂ ಮಾಡಿಲ್ಲ. ಇದಕ್ಕೆ ಉದಾಹರಣೆಗಳನ್ನೂ ಕೊಡುತ್ತೇನೆ. ಬಾಗಾಯತು ಲ್ಯಾಂಡ್ಸ್‌ಗಳಲ್ಲಿ ತೆಂಗೂ ಬರುತ್ತೆ ಎಂದು ಮಾಡಿದ್ದಾರೆ. ಇದು ಯಾವ ಬಾಗಾಯತಿನಲ್ಲಿ ಬರುತ್ತೆ ? ತೆಂಗಿನ ವ್ಯವಸಾಯ ಮಾಡಬೇಕಾದರೆ ಯಾವ ಕೆರೆ ಕಟ್ಟೆಗಳ ಆಶ್ರಯವೇ ಬೇಕಾಗಿಲ್ಲ. ಇದಕ್ಕೆ ಸಬ್ ಸಾಯಿಲ್ ವಾಟರ್ ಮಾತ್ರ ಬೇಕಾಗುತ್ತದೆ. ಸಾಮಾನ್ಯವಾಗಿ ಖುಷ್ಕಿ ಜಮೀನಿನಲ್ಲಿ ತೆಂಗು ಬರುತ್ತೆ ಎಂದು ಮಾಡಿಲ್ಲ. ಅಲ್ಲದೆ ಇದಕ್ಕಾಗಿ ಯಾವ ಕೆರೆಗಳ ನೀರೂ ಅವಶ್ಯಕವಿಲ್ಲ ಎಂದು ಹಿಂದೆ ಆಕಾರ ಬಂದಿನಲ್ಲಿ ಇದ್ದ ಒಂದು ರೂಪಾಯಿ ಎಂಟಾಣೆ ಕಂದಾಯವನ್ನು 20 ರೂಪಾಯಿಗಳಷ್ಟು ಎಂದು ಏರಿಸಿದರೆ ಇದು ಶೇಖಡಾ 2000 ದಷ್ಟು ಹೆಚ್ಚಾಯಿತು. ತಾವು ಮಾಡುತ್ತಿರುವುದು ನ್ಯಾಯವಾಗಿಯೇ ಎಂದು ನಾನು ಇಲ್ಲಿ ತಮ್ಮನ್ನು ಕೇಳುತ್ತೇನೆ. ರೆವಿನ್ಯೂ ಸರ್ವೆ ಮ್ಯಾನ್ಯುಯಲ್‌ನಲ್ಲಿ ಇರುವ ಒಂದು ಸರಕಾರದ ಆರ್ಡರಿನಲ್ಲಿ ಏನು ಹೇಳುತ್ತದೆ ಎಂದರೆ :

> "Well irrigated land brought under irrigation since last settlement be assessed at simple dry assessment if wells belong to Class I for Class II well irrigated lands recorded as such at last settlement should be assessed at dry assessment ; well irrigated gardens recorded as such at the last settlement should be assessed at dry crop rate......"

ಹೀಗಿರುವಾಗ ಕ್ರಾಪ್ಸು ರೇಟನ್ನು ತಾವು 20 ರೂಪಾಯಿಗಳಷ್ಟು ಎಂದರೆ ಶೇಕಡಾ 2000 ದಷ್ಟು ಆಗುತ್ತದೆ ಎಂದು ಯಾವ ಆಧಾರದಮೇಲೆ ಹೆಚ್ಚು ಮಾಡುತ್ತಿದ್ದೀರಿ ಎನ್ನುವುದು ಅರ್ಥವಾಗುತ್ತಿಲ್ಲ. ಬಾವಿಗಳಿಂದ ಸಾಗು ಮಾಡಿದರೆ ಅದನ್ನು ಬಾಗಾಯತು ಮಾಡುತ್ತಿದ್ದಾರೆ ಎಂದು ಆದಕ್ಕೆ 20 ರೂಪಾಯಿಗಳಿಂದ 25 ರೂಪಾಯಿಗಳಷ್ಟು ಜಾಸ್ತಿ ಕೊಡಬೇಕೆಂದು ಕಂದಾಯ ಜಾಸ್ತಿ ಹಾಕಿದ್ದಾರೆ. ಬಾವಿಗಳ ಮೂಲಕ ಸಾಗುವಳಿ ಮಾಡುತ್ತಿರಬೇಕಾದರೆ ಅವನಿಗೆ ಆದಕ್ಕಾಗಿ ಆಗಿರುವ ಕ್ಯಾಪಿಟಲ್ ಎಷ್ಟು ? ಯಾವ ಕಾನೂನು ಮೂಲಕ ಇದನ್ನು ಮಾಡುತ್ತಿದ್ದಾರೆ ? ಎಷ್ಟು ಎಕರೆಗಳಷ್ಟು ಜಮೀನು ಸಾಗುವಳಿಗೆ ಬರುತ್ತಿದೆ ಮತ್ತು ಅದಕ್ಕೆ ಖರ್ಚು ಎಷ್ಟಾಗುತ್ತದೆ ಎನ್ನುವುದೊಂದನ್ನೂ ಯೋಚನೆ ಮಾಡದೆ ಬಾವಿಯಿಂದ ಸಾಗು ಮಾಡುತ್ತಿರುವುದನ್ನು ಬಾಗಾಯತು ತೆರಿಗೆ ಮತ್ತು ವೆಟ್‌ಗಾರ್ಡನ್ ಲ್ಯಾಂಡ್ ಎಂದು ಹೆಚ್ಚು ಕಂದಾಯ ಹಾಕುವುದು ನ್ಯಾಯವೇ ಎಂದು ಇದನ್ನು ಇಲ್ಲಿ ಸರಕಾರದ

ಗಮನಕ್ಕೆ ತರಲು ಇಚ್ಛಿಸುತ್ತೇನೆ. ಇದೇ ರೀತಿಯಾಗಿ ತೆಂಗನ್ನು ಏನಾದರೂ ಪ್ರತ್ಯೇಕವಾದ ವಿಭಾಗವಾಗಿ ಮಾಡಿದ್ದೀರಾ ? ಅಲ್ಲದೆ ತೆಂಗು ಎನ್ನುವುದು ಡಾಲರ್ ಅರ್ನಿಂಗ್ ಕ್ರಾಪು ಆಗಿದೆ. ಅಲ್ಲದೆ ತೆಂಗಿನ ಬೆಳೆಯನ್ನು ಮಾಡುವ ವ್ಯವಸಾಯಗಾರನಿಗೆ ಹೆಚ್ಚು ಸಹಾಯ ಮಾಡಬೇಕು. ಅದಕ್ಕೆ ಬದಲಾಗಿ ಇದರಲ್ಲಿ ತಾವು ಹೆಚ್ಚಿಗೆ ಕಂದಾಯ ಹಾಕಲು ಹೋಗಬೇಕೇ ? ದೇಶಕ್ಕೆ ಹಣ ಬೇಕೆಂದು ಈ ರೀತಿಯಾಗಿ ತೆಂಗಿನ ತೋಟಗಳ ಮೇಲೆ ಕಂದಾಯದ ದರವನ್ನು ಏರಿಸಿದರೆ ಸರಿಯಾಗಿರುವುದಿಲ್ಲ. ಇದರಲ್ಲಿ ಶೇಕಡಾ 400 ರಷ್ಟು ಏರಿಸಿರುವುದನ್ನು ಈಗ ಶೇಕಡಾ 2000 ದಷ್ಟು ಏರಿಸುವುದು ನ್ಯಾಯ ವಲ್ಲ. ಕ್ರಾಪು ರೇಟುಗಳು ಬೇರೆ ಬೇರೆ ರೀತಿಯಾಗಿರುತ್ತವೆ. ನೀವೇ ಕೊಟ್ಟಿರತಕ್ಕ ರಿವಿಷನ್ ಸೆಟಲ್‌ಮೆಂಟ್ ಪ್ರಕಾರ ಶೇಕಡಾ 190 ರಷ್ಟು ಎಂದು ಹೇಳಿದ್ದೀರಿ. ನಿಮ್ಮ ಸರ್ವೆ ಸೆಟಲ್‌ಮೆಂಟ್ ರಿಪೋರ್ಟಿನಲ್ಲಿ :

"As regards increase in garden assessment it has been seen that there has been an increase of 439 per cent in Arsikere and 365 per cent in Turuvekere Taluk."

ಇದರಲ್ಲಿ 439 ಮತ್ತು 365 ಎಂದು ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಇದು ಕೂಡ ತಪ್ಪು. ಇದು ಸರಿಯಾದ ಅಂಕೆಯಲ್ಲ. ಖುಷ್ಕಿ ಬಾಗಾಯುತು ಮಾಡಲಿಕ್ಕೆ ಎಂದು ಶೇಕಡಾ 2000 ದಷ್ಟು ಹೆಚ್ಚು ಮಾಡುವುದು ಯಾವ ಮುಂದುವರಿದ ರಾಷ್ಟ್ರದಲ್ಲಾದರೂ ಇಷ್ಟು ಹೆಚ್ಚು ಮಾಡಿದ್ದಾರೆಯೇ ಎಂದು ನಾನು ಇಲ್ಲ ತಮ್ಮನ್ನು ಕೇಳುತ್ತೇನೆ. ಇದು ನ್ಯಾಯವೇ ? ಇದೇ ರೀತಿಯಾಗಿ ಬಾವಿಯ ಮೂಲಕ ಸಬ್ ಸಾಯಿಲ್ ವಾಟರನ್ನು ತೆಗೆದುಕೊಂಡು ಅದರ ಮೂಲಕ ಏನಾದರೂ ಪೈರನ್ನು ರೈತ ಬೆಳೆದರೆ ಅವನ ಮೇಲೆ ಕಂದಾಯವನ್ನು ಜಾಸ್ತಿ ಮಾಡಿ ವಿಧಿಸುವ ಹಕ್ಕು ಸರಕಾರಕ್ಕೆ ಇಲ್ಲ. ಮತ್ತು ಆ ರೀತಿ ಮಾಡಕೂಡದು ಎಂದು ಹೇಳುತ್ತೇನೆ. ಸುಮ್ಮನೆ ಅನ್ಯಾಯವಾಗಿ ರೈತರಮೇಲೆ ಇಲ್ಲದ ಹೊರೆಯನ್ನು ಹೊರಿಸು ತ್ತಿದ್ದೀರಿ. ಮುಂದುವರಿದ ರಾಷ್ಟ್ರಗಳಲ್ಲಿ ಒಂದಾದ ಬ್ರಿಟನ್‌ನಲ್ಲಿ ನೋಡಿ. ರಾಯಲ್ ಕಮಿಷನ್ ಆನ್ ಲ್ಯಾಂಡ್ ಎನ್ನುವ ರಿಪೋರ್ಟಿನಮೇಲೆ ಅಲ್ಲಿ 1957 ರಲ್ಲಿ ಒಂದು ಆಕ್ಟು ಮಾಡಿದ್ದರು. ಅದರಲ್ಲಿ ಈ ರೀತಿ ಇದೆ :

"The Act has provided for Government grant one-third of the cost of improvement of such agricultural fixtures, equipment, farm building, roads, permanent fencing, and the like.... ."

ಹೀಗೆ ಏನಾದರೂ ತಾವು ಮಾಡಿ ಇಲ್ಲಿ ಏನಾದರೂ ಮೂರನೇ ಒಂದರಷ್ಟು ಗ್ರಾಂಟುಗಳನು ಕೊಡುತ್ತಿದ್ದೀರಾ ? ಅವರು ಏರಿಸಿರುವುದನ್ನು ನೋಡಿದರೂ ಕೂಡ ಸುಮಾರು ಶೇಕಡಾ ಎರಡರಷ್ಟು ಬರಬಹುದು. ಹೀಗಿರುವಾಗ ನಮ್ಮ ದೇಶದ ರೈತರ ಮೇಲೆ ಸಿಕ್ಕಾಪಟ್ಟೆ ಕಂದಾಯ ಏರಿಸುವುದು ಸರಿಯೇ ? ಕಂದಾಯವನ್ನು ತೆಗೆದುಕೊಳ್ಳುವುದಕ್ಕೆ ಬದಲಾಗಿ ಬೇರೆ ಕಡೆಗಳಿಂದ ಸರಕಾರ ಹಣವನ್ನು ಪಡೆಯಲು ಅವಕಾಶವಿದೆ. ಅದರ ಮೇಲೆ ಎಲ್ಲವನ್ನೂ ಹಾಕಿ ಎಂದು ಹೇಳುತ್ತೇನೆ. ಉದಾಹರಣೆ ಗಾಗಿ ಕೆಲವನ್ನು ಇಲ್ಲಿ ಹೇಳುತ್ತೇನೆ. ಅಲ್ಲದೆ ಕಂದಾಯವನ್ನು ಜಾಸ್ತಿಮಾಡಬೇಕಾದರೆ ಸ್ವರಾಜ್ಯ ಬರುವುದಕ್ಕೆ ಮೊದಲು ಮಹಾರಾಜರುಗಳು ಇದ್ದಾಗಲೂ ಕೂಡ ಡ್ರೈ ಅಸೆಸ್‌ಮೆಂಟುಗಳನ್ನು ಶೇಕಡಾ 25 ರಿಂದ 33 ರಷ್ಟು ಏರಿಸುವುದಕ್ಕೂ ಕೂಡ ಅವಕಾಶ ಕೊಡಲಿಲ್ಲ. ಹಾಗಿರುವಾಗ ಈಗ ಶೇಕಡಾ 50 ರಷ್ಟು ಹೆಚ್ಚು ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ರೆವೆನ್ಯೂ ಸೆಟಲ್ ಮೆಂಟ್ ರೂಲ್ಸು ಪ್ರಕಾರ ಡ್ರೈ ಲ್ಯಾಂಡ್ಸ್‌ಗೆ ಶೇಕಡಾ 200 ರಷ್ಟು, ವೆಟ್ ಲ್ಯಾಂಡ್ಸ್‌ಗೆ ಶೇಕಡಾ 300 ರಷ್ಟು ಮತ್ತು ಇತರ ಬಾಗಾಯತ್ ಲ್ಯಾಂಡ್ಸ್‌ಗಾಗಿ ಶೇಕಡಾ 1244 ರಷ್ಟು ಪ್ಲಾಂಟೇಷನ್ನು ಕ್ರಾಪುಗಳಿಗಾಗಿ ಶೇಕಡಾ 5300 ರಷ್ಟು ಎಂದು ಜಾಸ್ತಿ ಮಾಡಿರುವುದು ಯಾವ ಶಾಸ್ತ್ರೀಯವಾದ ಆಧಾರದ ಮೇಲೂ ಮಾಡಿಲ್ಲ ಎಂದು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ನಮ್ಮ ಸರ್ವೇ ಸೆಟಲ್‌ಮೆಂಟು ಇನ್ನೂ ಕಾಂಪ್ರಿಹೆನ್‌ಸೀವ್ ಆಗಿಲ್ಲ. ಯಾವುದೋ ಓಬಿರಾಯನ ಕಾಲದ ವ್ಯವಸ್ಥೆ ಯನ್ನು ಮುಂದಿಟ್ಟುಕೊಂಡು ಖುಷ್ಕಿ, ತರಿ, ಬಾಗಾಯತು ಎಂದು ಮೂರು ಭಾಗ ಮಾಡಿಕೊಂಡು ಟ್ಯಾಕ್ಸನ್ನು ವಿಧಿಸುತ್ತಿದ್ದೀರಿ. ಕಾಲ ಪರಿವರ್ತನೆಯಾಗುತ್ತಿದೆ. ಅಲ್ಲದೆ ಕಂದಾಯವನ್ನು ಹಾಕು ವಾಗ lands used for orchards ಗೆ ಯಾವ ವಿಧವಾದ ಟ್ಯಾಕ್ಸನ್ನೂ ಹಾಕಿಲ್ಲ. ಇಂತಹ ದ್ರಾಕ್ಷಿ ತೋಟಗಳನ್ನು ಇಟ್ಟುಕೊಂಡಿರುವ ಸಾವಿರಾರು ರೂಪಾಯಿಗಳಷ್ಟು ಆದಾಯ ಪಡೆಯುವವರ ಮೇಲೆ ಸರ್ವೆ ಸೆಟಲ್‌ಮೆಂಟ್‌ನವರು ಏತಕ್ಕಾಗಿ ತೆರಿಗೆ ಹಾಕಿಲ್ಲ ಎಂದು ನಾನು ಇಲ್ಲಿ ಕೇಳುತ್ತೇನೆ ಹಾಗೆಯೇ: Specially farms engaged in cattle breeding, dairying and poultry : ಇವುಗಳಿಗೆ ಯಾವ ಹೆಚ್ಚು ತೆರಿಗೆ ಹಾಕಿಲ್ಲ. ಇದರ ಬಗ್ಗೆ ಯಾವ ರೀತಿ ಹಾಕಬೇಕು ಎನ್ನುವುದನೂ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಯೋಚನೆ ಮಾಡಿಲ್ಲ. ಅಲ್ಲದೆ ಷುಗರ್ ಫ್ಯಾಕ್ಟರಿಗಳಲ್ಲಿ ಷುಗರ್ ಕೇನು ಫಾರಂಗಳೆಂದು ಮಾಡಿರುತ್ತಾರೆ. ಅದರಮೇಲೆ ಯಾವ ಟ್ಯಾಕ್ಸೂ ಹಾಕಿಲ್ಲ. ಹಾಗೇ ಫಾರೆಸ್ಟು ಲ್ಯಾಂಡುಗಳಿವೆ. ಅವುಗಳ ಮೇಲೆ ತೆರಿಗೆ ಹಾಕಬಹುದು. ಯಾವುದನ್ನೂ ಸರಿಯಾಗಿ ಶಾಸ್ತ್ರೀಯವಾಗಿ ಮಾಡದೇ ಇವುಗಳನ್ನೆಲ್ಲಾ ಬಿಟ್ಟು ರೈತರ ಮೇಲೆ ಹೆಚ್ಚು ಹೊರೆ ಹಾಕುವುದು ನ್ಯಾಯವೇ ಎಂದು ನಾನು ಇಲ್ಲಿ ತಮ್ಮನ್ನು ಕೇಳಬೇಕಾಗಿದೆ. ಹಾಗೇ ಕಾರ್ಪೋರೇಷನ್ನು ಏರಿಯಾ ಅಥವಾ ಮುನಿಸಿಪಾಲಿಟಿಗಳಲ್ಲಿ ಪ್ಲೇಗ್ರೌಂಡುಗಳು ಹಾಗೂ ಪಾರ್ಕುಗಳಿರುತ್ತವೆ. ಅದರ ಮೇಲೆ ತೆರಿಗೆಗಳನ್ನು ಹಾಕಿದರೆ ಆಯಾ ಕಾರ್ಪೋರೇಷನ್ನಿನವರು ಕೊಡಬಹುದು. ಅದೇ ರೀತಿಯಾಗಿ Lands used for mining, aerodromes, etc., Urbanised lands, ಇವುಗಳ ಮೇಲೆ ತೆರಿಗೆ ಹಾಕಬಹುದು. ಅದರ ಬಗ್ಗೆ ಯೋಚಿಸಿಲ್ಲ. ಹಾಗೇ ಇಂಡಸ್ಟ್ರಿಗಳಿಗಾಗಿ ಫ್ಯಾಕ್ಟರಿಗಳನ್ನು ಮಾಡಿಕೊಂಡು ಇರುವ ಭೂಮಿಗಳ ಮೇಲೆ ಯಾವ ಟ್ಯಾಕ್ಸನ್ನೂ ಹಾಕಿಲ್ಲ. ಇವುಗಳ ಮೇಲೆ ಟ್ಯಾಕ್ಸುಗಳನ್ನು ಹೆಚ್ಚು ಮಾಡಿದರೆ ದೇಶಕ್ಕೆ ಹಣ ಸಿಗುತ್ತದೆ. ಇದರಿಂದ ಹಣ ಪಡೆದು ರೈತರ ಹೊರೆ ಕಡಿಮೆ ಮಾಡಬಹುದು. ಇದರ ಬಗ್ಗೆ ಇಂಡಿಯನ್ ಟ್ಯಾಕ್ಸೇಷನ್ನು ಎನ್‌ಕ್ವೈರಿ ಕಮಿಟಿ ರಿಪೋರ್ಟಿನಲ್ಲಿ ಒಂದು ವಿಚಾರ ಹೇಳಿದ್ದಾರೆ. ಅದು :

> "The tendencies of modern developments have summed up as follows by the Indian Taxation Enquiry Committee :—A flat rate is kept comparatively low income from land and property for purposes of income tax and death duty on exactly the same footing as other incomes of property......"

ಪಂಜಾಬದ ಬಗ್ಗೆ ಈ ರೀತಿ ಹೇಳಿದ್ದಾರೆ :

> " The grant of relief to the small holders and the levy of surcharge on large holders. "

ಬಡವರಿಗೆ ಕಂದಾಯದಲ್ಲಿ ರಿಲೀಫ್ ಕೊಟ್ಟೇ ಕೊಡಬೇಕು. ಇಲ್ಲದಿದ್ದರೆ ಅನ್ಯಾಯವಾಗುತ್ತದೆ.
Agrarian Reforms—Indian National Congress :
ಏನು ಹೇಳಿದ್ದಾರೆ ಅಂದರೆ—

> " The rent and revenue should be readjustd having regard to the present conditions and there should be substantial reduction in both. "

ಎಂದು. ಆದರೆ ಇಂದು ಅದನ್ನು ನೀವು ಜಾಸ್ತಿ ಮಾಡುತ್ತಾ ಇದ್ದೀರಿ.

> " Uneconomic holdings should be exempt from rent and land tax. "

ಐದು ಎಕರೆ ಒಳಗೆ ಇರತಕ್ಕಂಥ ರೈತ ಜೀವನ ಮಾಡುವುದು ಕಷ್ಟವಾಗುತ್ತದೆ. ಅಂದ ಮೇಲೆ ಟ್ಯಾಕ್ಸ್ ಕೊಡುವುದು ಹೇಗೆ ಸಾಧ್ಯ ಎನ್ನುವುದನ್ನು ಆಲೋಚನೆ ಮಾಡಬೇಕು.

> " Agricultural income should be assessed to income-tax like all other incomes by a progressive scale subject to prescribed minimum. "

ಆಮೇಲೆ

> " Arrears of rent for previous years should generally be wiped out. "

ಕಂದಾಯ ಬಾಕಿ ಬಗ್ಗೆ ಹೀಗೆ ಹೇಳಿದ್ದಾರೆ. ಸರ್ವೆ ಸೆಟ್ಲಮೆಂಟ್ ಮಾಡಿ ಕಂದಾಯ ಹಾಕುವಾಗ್ಗೆ ರೈತನಿಗೆ ಪೇಯಿಂಗ್ ಕೈಪಾಸಿಟಿ ಇದೆಯೇ ಎನ್ನುವುದನ್ನು ಯೋಚನೆ ಮಾಡಿಲ್ಲ. ಪೇಯಿಂಗ್ ಕೈಪಾಸಿಟಿ ಇದೆಯೇ ಇಲ್ಲವೇ ಎನ್ನುವುದನ್ನು ತಿಳಿದುಕೊಳ್ಳಲು ಹೋಗಿಲ್ಲ. ಇದು ನ್ಯಾಯವಲ್ಲ. ಈ ಕಂದಾಯ ಹಾಕಿ ರೈತ ವರ್ಗವನ್ನು ನಾಶ ಮಾಡಿದ ಹಾಗೆ ಆಗುತ್ತದೆ. ಆದುದರಿಂದ ಇದನ್ನು ಖಂಡಿತವಾಗಿ ಪುನರ್ ವಿಮರ್ಶೆ ಮಾಡಬೇಕು. ಹಾಗೂ ಈ ನಿರ್ಣಯವನ್ನು ಹಿಂದಕ್ಕೆ

ತೆಗೆದುಕೊಳ್ಳಬೇಕು ಮತ್ತು ಸೂಕ್ತ ಬದಲಾವಣೆ ಮಾಡಬೇಕು. ಇತರ ಜನರ ಮೇಲೆ ಕಂದಾಯ ಭಾರ ಹಾಕಿ ರೈತನ ಭಾರ ಕಡಿಮೆ ಮಾಡಬೇಕು ಮತ್ತು ರೈತನ ವಿಶ್ವಾಸ ಪಡೆಯಬೇಕು ಇಲ್ಲದಿದ್ದರೆ ನೀವು ನಿಮ್ಮ ಸ್ಥಾನ ಕಳೆದುಕೊಳ್ಳುತ್ತೀರಿ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸೂಳ್ಯ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಈ ರಿವಿಜನ್ ಸೆಟ್ಲಮೆಂಟ್ ರಿಪೋರ್ಟು ಬಹಳ ಪರಿಶ್ರಮದಿಂದ ಹೆಚ್ಚು ಸಮಯ ತೆಗೆದುಕೊಂಡು ತುಂಬಾ ಕೆಲಸ ಮಾಡಿ ತಯಾರಿಸಿದ ವರದಿಯಾಗಿದೆ. ಈ ವರದಿಯಲ್ಲಿ ರೈತನ ಹಿತ ದೃಷ್ಟಿಯ ಕಡೆಗೆ ಗಮನ ಕೊಟ್ಟಿಲ್ಲ ಎಂದು ಹೇಳುವುದು ಸರಿಯಲ್ಲ. ವಾಸ್ತವ ದೃಷ್ಟಿಯಿಂದ ಕೃಷಿಯ ಸುಧಾರಣೆಗೆ ಇನ್ನೂ ಹೆಚ್ಚಿನ ಗಮನ ಕೊಡಬಹುದಾಗಿತ್ತು ಎಂದು ಹೇಳಬಹುದು. ಮೂಲತಃ ಇದರಲ್ಲಿ ಗ್ರಾಸ್ ಇನ್‌ಕಂ ಮೇಲೆ ಕಂದಾಯ ಹಾಕಿದ್ದಾರೆ. ಈ ಥಿಯರಿ ಸರಿಯಲ್ಲ ಎಂದು ನಾನು ಹೇಳುತ್ತೇನೆ. ಗ್ರಾಸ್ ಇನ್‌ಕಂ ತೆಗೆದುಕೊಳ್ಳುವುದಕ್ಕಿಂತ 'ನೆಟ್ಟ್ ಇನ್‌ಕಂ' ಮೇಲೆ ಹಾಕಬೇಕು. ಉದಾಹರಣೆಗಾಗಿ ಒಂದು ಪ್ರದೇಶದಲ್ಲಿ ನಿರ್ದಿಷ್ಟವಾದ ಒಂದು ಬೆಳೆಗೆ ಉಳುಮೆ ಮಾಡಲು ಹೆಚ್ಚು ಖರ್ಚು ಬರಬಹುದು ಇನ್ನೊಂದು ಕಡೆ ಅಷ್ಟು ಬರಲಿಕ್ಕಿಲ್ಲ. ನಮ್ಮ ಜಿಲ್ಲೆಯಲ್ಲಿ ಅಡಿಕೆ ತೋಟ ಮಾಡುವುದಕ್ಕೆ ಒಂದು ಎಕರೆ ಜಮೀನನ್ನು ರೆವೆಲ್ಲು ಮಾಡಲು ಒಂದು ಸಾವಿರದಿಂದ ನಾಲ್ಕು ಸಾವಿರ ರೂಪಾಯಿಗಳವರೆಗೆ ಖರ್ಚು ಆಗಬಹುದು. ಹಳೇ ಮೈಸೂರಿನ ಮೈದಾನ ಪ್ರದೇಶದಲ್ಲಿ ಒಂದು ಎಕರೆ ಜಮೀನು ರೆವೆಲ್ಲು ಮಾಡಲು 100 ರೂಪಾಯಿ ಸಹ ಖರ್ಚಾಗಲಾರದು. (ii) ಅಡಿಕೆ ತೋಟಕ್ಕೆ ಹೆಚ್ಚು ಖರ್ಚು ಬೀಳುತ್ತದೆ. ಒಂದು ಎಕರೆ ಅಡಿಕೆ ತೋಟದಲ್ಲಿ 2,000 ರೂಪಾಯಿಗಳು ಉತ್ಪತ್ತಿಯಾದರೆ 1,000 ರೂಪಾಯಿ ಖರ್ಚು ಆಗಿ ರೈತನಿಗೆ 1,000 ರೂಪಾಯಿ ಮಾತ್ರ ಉಳಿಯುತ್ತದೆ. ಗೇರುಬೀಜ ಬೆಳೆದರೆ ಒಂದು ಎಕರೆ ಜಮೀನಿನಲ್ಲಿ 500 ರೂಪಾಯಿಗಳ ಉತ್ಪತ್ತಿ ಬಂದರೆ 50 ರೂ. ಮಾತ್ರ ಖರ್ಚಾಗಿ ಅವನಿಗೆ 450 ರೂಪಾಯಿಗಳು ಉಳಿಯುತ್ತವೆ. ಆದುದರಿಂದ ನೆಟ್ಟ್ ಇನ್‌ಕಂ ಮೇಲೆ ಕಂದಾಯ ಹಾಕಿದರೆ ಸರಿಯಾಗಿರುತ್ತದೆ. ಗ್ರಾಸ್ ಇನ್‌ಕಂ ಮೇಲೆ ಹಾಕುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ.

ಇನ್ನು ವರದಿಯಲ್ಲಿ ಕಂದಾಯದ ದರ ಬೆಳೆದ ಫಸಲಿನ ಹದಿನಾರನೇ ಒಂದು ಅಂಶ, ಇಪ್ಪತ್ತನೇ ಒಂದು ಅಂಶ ತೆಗೆದುಕೊಳ್ಳಬೇಕೆಂದು ಹೇಳಿದೆ. ಆದರೆ ಇಪ್ಪತ್ತೈದನೇ ಒಂದು ಅಂಶ ಇರಬೇಕೆಂದು ನಾನು ಹೇಳುತ್ತೇನೆ. ಭೂ ಕಂದಾಯ ವಿಧಿಸುವಾಗ್ಗೆ ಹಣದ ಅಳತೆಯಿಂದ ಇಷ್ಟಪಟ್ಟು ಆಗ ಬೇಕು ಎಂದು ಹೇಳಿದ್ದಾರೆ. ಆದರೆ ವಾಸ್ತವವಾಗಿ ಭೂಮಿಯ ಗುಣ ಮಣ್ಣಿನ ಗುಣ ಯೋಗ್ಯತೆ ಸಾರ ನೋಡಿ ಕಂದಾಯ ವಿಧಿಸುವ ತತ್ವ ಅನುಸರಿಸಬೇಕು. ಮೂಲತಃ ಮಣ್ಣಿನ ಯೋಗ್ಯತೆ ಮೇಲೆ ಕಂದಾಯ ಹಾಕುವ ಮೂಲ ತತ್ವ ಸರಿಯಾಗಿದೆ ಎಂದು ಹೇಳುತ್ತೇನೆ. ಹಣದ ಬೆಲೆಯ ಮೇಲೆ ಲೇವಿ ತೆಗೆದು ಕೊಳ್ಳುವುದು ಸರಿಯಲ್ಲ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1902ನೇ ಇಸವಿಯಲ್ಲಿ ರಿವಿಜನ್ ಸೆಟ್ಲಮೆಂಟ್ ಆಗಿದೆ. ಆ ನಂತರ 1933–34 ರಲ್ಲಿ ಮತ್ತೆ ಸೆಟ್ಲಮೆಂಟ್ ಆಗಿದೆ. ನಮ್ಮ ಜಿಲ್ಲೆಯಲ್ಲಿ ಈಗಾಗಲೇ ಎರಡು ಸಲ ಸೆಟ್ಲಮೆಂಟ್ ಆಗಿ ಕಂದಾಯ ಜಾಸ್ತಿಯಾಗಿದೆ. ಈಗ ಪುನಃ ಕಂದಾಯ ಜಾಸ್ತಿಮಾಡಲಾಗು ತ್ತದೆ. ಆದರೆ ರಾಜ್ಯದ ಕೆಲವು ಪ್ರದೇಶದಲ್ಲಿ ಒಂದೇ ಸಲ ರೀಸೆಟ್ಲಮೆಂಟ್ ಆಗಿದೆ. ಇನ್ನು ಕೆಲವು ಪ್ರದೇಶದಲ್ಲಿ 1900ಕ್ಕೆ ಮೊದಲು ಮಾತ್ರ ರಿಸೆಟ್ಲ್‌ಮೆಂಟ್ ಆಗಿದೆ. ಅಂಥ ಪ್ರದೇಶದಲ್ಲಿ ಕಂದಾಯ ಕಡಿಮೆ ಇದೆ. ನಮ್ಮ ಜಿಲ್ಲೆಯಲ್ಲಿ 1933–34ರ, ಸೆಟ್ಲ್‌ಮೆಂಟಿನಲ್ಲಿ ಕಂದಾಯ ಜಾಸ್ತಿ ಇರುವಾಗ್ಗೆ ಪುನಃ ಈಗ ಇತರರ ಮಟ್ಟದಲ್ಲಿ ಜಾಸ್ತಿಮಾಡುವುದು ನ್ಯಾಯವಲ್ಲ. ಇದಕ್ಕೆ ಸರ್ಕಾರ ಗಮನ ಕೊಡ ಬೇಕೆಂದು ಹೇಳುತ್ತೇನೆ. ಇನ್ನೊಂದು ವಿಚಾರ. 1954 ರಿಂದ 1959 ರ ವರೆಗೆ ಸರಾಸರಿ ತೆಗೆದು ಕೊಂಡು ಕಂದಾಯ ನಿರ್ಣಯ ಮಾಡಿರುವುದು ಸರಿಯಲ್ಲ. ಐದು ವರ್ಷದ ಸರಾಸರಿ ತೆಗೆದುಕೊಳ್ಳುವುದರ ಬದಲು 30 ವರ್ಷದ ಸರಾಸರಿ ತೆಗೆದುಕೊಳ್ಳಬೇಕು. ಸರ್ವೇ ಸೆಟ್ಲಮೆಂಟ್ 30 ವರ್ಷಕ್ಕೆ ಒಂದು ಸಲ ಆಗುತ್ತದೆ. 30 ವರ್ಷದ ಸರಾಸರಿ ತೆಗೆದು ಕೊಳ್ಳುವುದು ಶಾಸ್ತ್ರೀಯವಾಗಿರುತ್ತದೆ. ಕೇವಲ 5 ವರ್ಷದ್ದು ತೆಗೆದುಕೊಳ್ಳುವುದು ಸರಿಯಲ್ಲ. ಇದಲ್ಲದೆ ಅನೇಕ ಕಡೆ ಕಂದಾಯ ಸರಿಯಾಗಿ ವಸೂಲಾಗುತ್ತಿಲ್ಲ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಯಲ್ಲಿ 100 ಕ್ಕೆ 100 ರಷ್ಟು ಕಂದಾಯ ರೈತರು ಕೊಡುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕಂದಾಯ ಬಾಕಿ ಇಟ್ಟುಕೊಳ್ಳುವುದು ಗೊತ್ತಿಲ್ಲ. ಕಂದಾಯ ಬಾಕಿ ಇಟ್ಟುಕೊಳ್ಳದೇ ಇರತಕ್ಕಂಥ ಜನರ ಮೇಲೆ ಅಶಾಸ್ತ್ರೀಯವಾಗಿ ಕಂದಾಯ ಹೆಚ್ಚು ಮಾಡಿದರೆ ಸರಕಾರದವರೇ ಅವರಿಗೆ ಬೇರೆ ದಾರಿ ತೋರಿಸಿಕೊಟ್ಟಂತಾಗುತ್ತದೆ. ಹೆಚ್ಚು ತೆರಿಗೆ ಕೊಡುವುದಕ್ಕೆ ಅಸಮರ್ಥರಾದವರ ಮೇಲೆ ತೆರಿಗೆ ಹಾಕಿದರೆ ಕೊಡುವುದಕ್ಕಾಗುವುದಿಲ್ಲ. ಅವರೂ ಸಹ ಕೆಟ್ಟ ದಾರಿ ಹಿಡಿಯಬೇಕಾಗುತ್ತದೆ. ಅಂದರೆ ಕೊಡದಿರಬೇಕಾಗುತ್ತದೆ. ಆದುದರಿಂದ 30 ವರ್ಷದ ಸರಾಸರಿ ತೆಗೆದುಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ. ಈಗ ನಾನು ಹತ್ತಿ, ಶೇಂಗಾ, ಭತ್ತ, ರಾಗಿ ಬೆಳೆಗಳ ಬಗ್ಗೆ ಮಾತನಾಡುವುದಿಲ್ಲ.

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಯಾಕಂದರೆ ಹೆಚ್ಚು ಸಮಯವಿಲ್ಲ. ಮತ್ತು ಈ ಬಗ್ಗೆ ಇತರರು ಮಾತ್ನಾಡುವವರಿದ್ದಾರೆ. ಆದರೆ ನಮ್ಮ ಜಿಲ್ಲೆಯ ಮುಖ್ಯ ಬೆಳೆಯಾಗಿರುವ ಅಡಿಕೆಯ ಬಗ್ಗೆ ಮಾತ್ರ ಹೆಚ್ಚು ಹೇಳುತ್ತೇನೆ. ಅಡಿಕೆಯ ಬೆಲೆ 30 ವರ್ಷದ ಸರಾಸರಿ ತೆಗೆದುಕೊಳ್ಳಬೇಕು. 1934 ನೇ ಇಸವಿಯಲ್ಲಿ ಒಂದು ಖಂಡಿ ಅಂದರೆ 20 ಮಣ ಅಡಿಕೆಯ ಬೆಲೆ 60–80 ರೂಪಾಯಿಗಳವರೆಗೆ ಇದ್ದಿತು. 1936 ರಲ್ಲಿ ಅಷ್ಟೇ ಇತ್ತು. 1937 ರಲ್ಲಿ 140 ರೂಪಾಯಿ ಇದ್ದಿತು. 1938 ರಲ್ಲಿ ಸಹ ಬೆಲೆ 140 ರೂಪಾಯಿ ವರೆಗೇ ಇದ್ದಿತು.

ಸುಮಾರು 42ನೇ ಇಸವಿಯವರೆಗೂ ಈ ಬೆಲೆ 150 ರೂಪಾಯಿಗಳವರೆಗೂ ಹೋಗಿತ್ತು. ಯುದ್ಧ ಸಮಯ ಬಂದಾಗ ಸ್ವಲ್ಪ ಬೆಲೆ ಏರಿತು. 43ನೇ ಇಸವಿಯಲ್ಲಿ 400–500 ರೂಪಾಯಿಗಳವರೆಗೂ ಹೋಯಿತು. ಅನಂತರ 46–47 ರವರೆಗೂ ಅದೇ ಬೆಲೆ ಇತ್ತು. ಅನಂತರ ಪಂಚವಾರ್ಷಿಕ ಯೋಜನೆ ಶುರುವಾದಮೇಲೆ 52ರ ವರೆಗೆ 700 ರೂಪಾಯಿಗಳವರೆಗೂ ಬಂದದ್ದು 52ರ ನಂತರ 1200 ರಿಂದ 1300ರ ವರೆಗೂ ಹೋಯಿತು. 1942ನೇ ಇಸವಿಯ ಮೊದಲು ಸಾಧಾರಣ ರೂ. 80 ರಿಂದ 120ರ ವರೆಗೂ ಇದ್ದದ್ದು 1954–1959ರ ಬೆಲೆಯು ಲೆಕ್ಕಕ್ಕೇ ಬರುವುದಿಲ್ಲ. ಅತ್ಯಧಿಕ ಬೆಲೆ ಏರಿದ್ದ ಕಾಲದ ಸರಾಸರಿ ಲೆಕ್ಕ ಹಾಕಿದರೆ ಬಹಳ ಅನ್ಯಾಯವಾಗುತ್ತದೆ. ಈ ಬೆಲೆ ಶಾಶ್ವತವಾಗಿ ಇರುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ ಮತ್ತೊಂದು ವಿಶೇಷ ಇದೆ ಏನೆಂದರೆ ಅಡಿಕೆಗೆ ಈಗ 1200 ರಿಂದ 1300ರ ವರೆಗೂ ಇದೆ. ಇದಕ್ಕೆ ಕೇಂದ್ರ ಸರ್ಕಾರದವರು ಕಾರಣ. ಹೊರದೇಶದ ಅಡಿಕೆಗೆ ಇಂಪೋರ್ಟ್ ಡ್ಯೂಟಿ (Import duty) 20 ಮಣಕ್ಕೆ 780 ರೂಪಾಯಿಗಳವರೆಗೂ ಹಾಕಿದ್ದಾರೆ. ಅಂತರ ರಾಷ್ಟ್ರೀಯ ಮಾರ್ಕೆಟ್ ಅಥವಾ ಹೊರದೇಶದ ರಾಜ್ಯಗಳ ಜೊತೆಗೆ ಪರಸ್ಪರ ಹೊಂದಿಕೊಂಡು ಹೋಗ ಬೇಕೆಂಬ ವಿಚಾರ ಮಾಡಿದರೆ ಈ ಇಂಪೋರ್ಟ್ ಡ್ಯೂಟಿ ತೆಗೆದು ಹಾಕುವ ಸಂಭವವಿದೆ. ಈಗ ನಮಗೆ ಹೊರಗಿನಿಂದ ಬರುವಂತಹ ಅಡಿಕೆ ಕೊಲಂಬೋ—ಸಿಲೋನ್ ಮಾರ್ಕೆಟ್‌ನಿಂದ ಬರುತ್ತದೆ. ಈಗ ಇಂಪೋರ್ಟ್ ಡ್ಯೂಟಿ ಹಾಕುವುದರಿಂದ 20 ಮಣಕ್ಕೆ 780 ರೂಪಾಯಿ ಕೊಡಬೇಕಾಗುತ್ತದೆ. ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್‌ನವರು ಮಾತ್ರ ಅದರ ಲೈಸೆನ್ಸ್ ಪಡೆಯಲಿಕ್ಕೆ ಅಧಿಕೃತರು ಬಾಕಿ ಯಾರೂ ಕೂಡ ಹೊರ ದೇಶದಿಂದ ಅಡಿಕೆ ತರಿಸಲು ಸಾಧ್ಯವಿಲ್ಲ. ಆದ್ದರಿಂದ ಅವರು ಇಂಪೋರ್ಟ್ ಡ್ಯೂಟಿ ಕೊಟ್ಟು ಅಡಿಕೆ ತರಬೇಕು ಇಂತಹ ಪರಿಸ್ಥಿತಿಯಲ್ಲಿ ಇಂಪೋರ್ಟ್ ಡ್ಯೂಟಿಯನ್ನು ತೆಗೆದು ಹಾಕಿದರೆ ತನ್ನಷ್ಟಕ್ಕೆ ತಾನೆ ಅರ್ಧಾಂಶದಷ್ಟು ಬೆಲೆ ಇಳಿಯುತ್ತದೆ. ಅಂದರೆ 20 ಮಣದ ಬೆಲೆ 600–700 ರೂಪಾಯಿಗಳು ಮಾತ್ರ ಆಗುತ್ತದೆ. Import duty ಹೋದ ಪಕ್ಷದಲ್ಲಿ ರೈತ ನಿರ್ನಾಮವಾಗುವ ಪರಿಸ್ಥಿತಿ ಬರುತ್ತದೆ.

ಶ್ರೀ ಸಂಜೀವನಾಥ ಐಕಳ (ಸುರತ್‌ಕಲ್).—ಪುನಃ ಅಡಿಕೆ ಬಿಟ್ಟು ಬತ್ತ ಮಾಡಲಿಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಸ್. ಸುಬ್ಬಯ್ಯನಾಯಕ್.—ಅಡಿಕೆ ತೋಟವನ್ನು ಪುನಃ ಗದ್ದೆ ಮಾಡಲಿಕ್ಕೆ ಸಾಧ್ಯವಿಲ್ಲ. ಇದ್ದದ್ದನ್ನು ಇದ್ದಹಾಗೆಯೇ ಬಿಟ್ಟು ಮೂರು ನಾಮ ಎಳೆದುಕೊಂಡು ದೇಶ ಸಂಚಾರ ಹೋಗ ಬೇಕಾಗುತ್ತದೆ.

ಈ ಸರ್ವೆ ಸೆಟ್ಲ್‌ಮೆಂಟ್ ವರದಿಯನ್ನು ತಯಾರು ಮಾಡುವಾಗ ಕೃಷಿ ತಜ್ಞರನ್ನಾಗಲಿ, ಸರ್ಕಾರದಲ್ಲಿರತಕ್ಕ ಇತರ ಕೃಷಿ ತಜ್ಞರನ್ನಾಗಲಿ ವಿಚಾರಮಾಡಿ ಅವರ ಅನುಭವವನ್ನು ತೆಗೆದುಕೊಂಡು ಮಾಡಿದ ಹಾಗೆ ಎಲ್ಲೂ ಕಾಣುವುದಿಲ್ಲ ಯಾರನ್ನು ಅವರು ವಿಚಾರಿಸಿದ್ದಾರೆ. ಯಾರನ್ನು ಕೇಳಿದ್ದಾರೆ ಎಂಬುದು ಗೊತ್ತಾಗುವುದಿಲ್ಲ. ಏಕೆಂದರೆ ಇಲ್ಲಿ ಕಂಡ ಹಾಗೆ ಪುತ್ತೂರು ಜೋನಿನ ವರದಿಯ 18ನೇ ಪುಟದಲ್ಲಿ ಈ ರೀತಿ ಹೇಳಿದ್ದಾರೆ: "The present wholesale rate for Arecanut varies from Rs. 1,300 to Rs. 1,800 per candy". 1,800 ರೂಪಾಯಿ ಯಾವ ಕಾಲದಲ್ಲೂ ಇರಲಿಲ್ಲ. ಯಾವುದನ್ನು ಆಧರಿಸಿ ಇದನ್ನು ಹಾಕಿದ್ದಾರೋ ಗೊತ್ತಾಗುವುದಿಲ್ಲ. ಪಟ್ಟಣದಲ್ಲಿ "ಸೆಂಟರಲ್ ಅರ್ಕಾನಟ್ ರಿಸರ್ಚ ಸ್ಟೇಷನ್" ಇದೆ. ಅವರನ್ನು ಕೇಳಬಹುದಾಗಿತ್ತು. ಅಡಿಕೆ ಬೆಳೆ ಸುಲಭ ಸಾಧ್ಯವಾದುದಲ್ಲ. ಏಕೆ ಇಷ್ಟು ತೊಂದರೆ, ಕಷ್ಟಕ್ಕೆ ಗುರಿಯಾಗಿದೆ ಎಂದರೆ ನಮ್ಮ ಭಾಗದಲ್ಲಿ ಇದು ಮಳೆಯನ್ನೇ ಆಧರಿಸಿರುವಂತಹ ಬೆಳೆ, ಒಂದು ವರ್ಷ ಮಳೆ ಇಲ್ಲದೇ ಹೋದರೆ ಅಡಿಕೆ ಮರದ ತಲೆ ಸಣ್ಣದು ಆಗುತ್ತದೆ. ಅನಂತರ ಮರುವರ್ಷ ಸೊಕ್ಕಿದರೆ ತಲೆ ಮುರಿದು ಬೀಳುತ್ತದೆ. ಪುನಃ ಗಿಡ ನೆಟ್ಟರೆ ಹತ್ತು ವರ್ಷವಾಗುವವರೆಗೂ ಯಾವ ಫಸಲೂ ಇಲ್ಲದ ಪರಿಸ್ಥಿತಿ ಬರುತ್ತದೆ. ಅಡಿಕೆಗೆ ಕೊಳೆ ರೋಗ ಯಾ 'ಮೈಟ್' ರೋಗ ಬರುತ್ತದೆ. ಈಗೇನೋ ಅದಕ್ಕೆ ತಕ್ಕ ಮದ್ದು ಮಾಡಿದ್ದಾರೆ ಅದು ನಿವಾರಣೆಯಾಗುತ್ತದೆ. ಕಳ್ಳಕಾಕರಿಂದ ಕಾಯುವುದೂ ಸುಲಭದ ಕೆಲಸವಲ್ಲ. ಮೊದಲೇ ನಾನು ಹೇಳಿದಂತೆ ಅಡಿಕೆ ತೋಟ ಗುಡ್ಡ ಬೆಟ್ಟಗಳಲ್ಲಿ ಮಾಡುವಂತಹದು, ನೀರು ಹರಿ

ಯಾವ ಜರಿಯಲ್ಲಿ ಮಾಡಬೇಕಾದರೆ ಒಂದು ಎಕರೆಗೆ ಸಾವಿರಾರು ರೂಪಾಯಿ ಲೆವಲ್ ಮಾಡಲಿಕ್ಕೆ ಬೇಕಾಗುತ್ತದೆ. ಒಂದು ಸಲ ಇಟ್ಟ ಅಡಿಕೆ ತೋಟದಲ್ಲಿ 6-7 ವರ್ಷಗಳವರೆಗೂ ಫಸಲು ಬರುವುದಿಲ್ಲ ಒಂದು ಎಕರೆಗೆ ಸುಮಾರು 11 ಸಾವಿರ ರೂಪಾಯಿಗಳವರೆಗೂ ಖರ್ಚುಮಾಡಬೇಕಾಗುತ್ತದೆ ಎಂದು ಕೇಂದ್ರ ಸುಫಾರಿ ಫೆಡರೇಷನ್ ಅವರು ಲೆಕ್ಕಹಾಕಿದ್ದಾರೆ. ಪುತ್ತೂರು ಜೋನ್‌ನಲ್ಲಿ ಈಗ ಎಕರೆಗೆ 9 ರೂಪಾಯಿ ತೀರ್ವೆ ಇದೆ. ಇದರಲ್ಲಿ ಪ್ರಪೋಸ್ ಮಾಡಿದ ಹಾಗೆ 121 ರೂಪಾಯಿ 11 ಪೈಸೆ ಆಗುತ್ತದೆ, ಇದು 1246 ಪರ್ಸೆಂಟ್ ಹೆಚ್ಚಾದ ಹಾಗೆ ಆಯಿತು. ಹೀಗೆ ಮಾಡಿದರೆ ಯಾವ ನಮೂನೆಯ ಹೆಚ್ಚಿಸುವಿಕೆ ಇದೆ ಎನ್ನುವುದು ಅರ್ಥವಾಗುವುದಿಲ್ಲ. ಇನ್ನು ತೀರ್ವೆ ಒಂದೇ ಅಲ್ಲ—ಅದರ ಜೊತೆಗೆ ಲೋಕಲ್‌ಬೋರ್ಡು ಸೆಸ್ ಕೊಡಬೇಕಾಗುತ್ತದೆ. ಈಗಿನ ಹೊಸ ಕಾನೂನಿನ ಪ್ರಕಾರ ನೂರು ಪರ್ಸೆಂಟ್, ಲೋಕಲ್‌ಬೋರ್ಡ್ ಸೆಸ್ ಹಾಕಬಹುದು ಎಂದು ಒಂದು ಸೂಚನೆ ಇದೆ. 121 ರೂಪಾಯಿಗೆ 121 ರೂಪಾಯಿ ಲೋಕಲ್‌ಬೋರ್ಡು ಸೆಸ್ ಹಾಕಬಹುದು ಇನ್ನು 40 ಪರ್ಸೆಂಟ್ ಲೈಬ್ರೆರಿ ಸೆಸ್ ಎಜ್ಯುಕೇಷನ್ ಸೆಸ್, ಹೆಲ್ತ್ ಸೆಸ್ ಎಂತ ಆಗುತ್ತದೆ. ಇನ್ನು ಎಷ್ಟು ಕಮ್ಮಿ ಎಂದರೂ ಎಕ್ರೆಗೆ 20 ರೂಪಾಯಿ ಅಗ್ರಿಕಲ್ಚರಲ್ಲ ಇನ್‌ಕಂಟ್ಯಾಕ್ಸ್ ಆಗುತ್ತದೆ ಎಂದಮೇಲೆ ಒಂದು ಎಕರೆಗೆ ಭೂಕಂದಾಯ 310 ರೂಪಾಯಿ 66 ಪೈಸೆ ಆಗುತ್ತದೆ ಇದು ಎಷ್ಟುಮಾತ್ರಕ್ಕೂ ಸಾಧ್ಯವಿಲ್ಲ. ನಾನು ಒಂದು ಸೂಚನೆಯನ್ನು ಕೊಡಬಯಸುತ್ತೇನೆ. ಈಗ ತೀರ್ವೆ ಹೆಚ್ಚು ಮಾಡಬೇಡಿ ಎಂದು ಹೇಳುವವರಲ್ಲಿ ನಾನು ಒಬ್ಬನಲ್ಲ. ಹೆಚ್ಚುಮಾಡಿರಿ, ಎಲ್ಲಾ ಭಾಗದಲ್ಲೂ ಸರ್ಕಾರದ ಖರ್ಚು ಹೆಚ್ಚಾಗಿದೆ. ಅದಕ್ಕೆ ತಕ್ಕಂತೆ ಸರಕಾರಕ್ಕೆ ಉತ್ಪನ್ನ ಬರಬೇಕು ಹಾಗೆಯೇ ಭೂಮಿಯ ಮೇಲೆ ತಮಗೆ ಉತ್ಪನ್ನ ಸಿಕ್ಕುವಂಥದು ನ್ಯಾಯವಾಗಿದೆ. ಆದರೆ ರೈತರನ್ನು ಸಮೂಲವಾಗಿ ನಾಶಮಾಡಿ ತೀರ್ವೆ ವಸೂಲುಮಾಡಲಿಕ್ಕೆ ಹೋಗಬೇಡಿ. ಅದಕ್ಕೂ ಒಂದು ಇತಿ ಮಿತಿ ಇರಬೇಕು. ಅಡಿಕೆ ತೋಟಕ್ಕೆ ಈಗ 9 ರೂಪಾಯಿ ಇದೆ. ಅದನ್ನು 18 ರೂಪಾಯಿ ಮಾಡಬಹುದು. ಎಂದು ನನ್ನ ಸೂಚನೆ. 18 ರೂಪಾಯಿ ಮಾಡಿದರೂ ಮೇಲೆ ಹೇಳಿದ ಎಲ್ಲಾ ಸೆಸ್ಸು ಸೇರಿ ಒಂದು ಎಕರೆಗೆ 63 ರೂಪಾಯಿ, 20 ಪೈಸೇ ಆಗುತ್ತದೆ. ಅದು ಹೇಗೆಂದರೆ ನೂರು ಪರ್ಸೆಂಟ್ ಲೋಕಲ್‌ಬೋರ್ಡ್ ಸೆಸ್ಸೂ, ಎಂದರೆ 18 ರೂಪಾಯಿಗೆ 18 ರೂಪಾಯಿ. ಅನಂತರ 40 ಪರ್ಸೆಂಟ್ ಲೈಬ್ರೆರಿ ಸೆಸ್ಸು, ಎಜ್ಯುಕೇಷನ್ ಸೆಸ್ಸು ಹೆಲ್ತ್ ಸೆಸ್ಸು, 7 ರೂಪಾಯಿ 20 ಪೈಸೆ. 20 ರೂಪಾಯಿ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಈ ರೀತಿ 63 ರೂಪಾಯಿ 20 ಪೈಸೆ ಆಗುತ್ತದೆ. ಇದೂ ಹೆಚ್ಚೇ ಆದಂತಾಯಿತು. ಅಂತೂ ಈಗ ಇರುವ ರೂಪಾಯಿ 9ರ ಬದಲು 18. ಎಂದರೆ ಈಗ ಇರುವ ತೆರಿಗೆಗೆ ಒಂದಕ್ಕೆ ಎರಡರಷ್ಟು ಅಡಿಕೆ ತೋಟಕ್ಕೆ ಆಗುತ್ತದೆ. ಹೆಚ್ಚು ತೆರಿಗೆ ಹಾಕಿದರೆ ಕೊಡಲು ಸಾಧ್ಯವಾಗುವುದಿಲ್ಲ ಮತ್ತು ಕೃಷಿ ಸಹ ಬದುಕಿರುವುದಕ್ಕೆ ಸಾಧ್ಯವಿಲ್ಲ.

2-30 P.M.

ಇನ್ನೊಂದು ವಿಷಯ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ನವರಿಗೆ ಆಗಾಗ ಸರಕಾರದ ಉದಾರ ನೀತಿಯಿಂದಾಗಿ ದರಕಾಸ್ತು ಜಮೀನು ದೊರೆತಿದೆ. ಅವರೆಲ್ಲ ಬಡವರು, ಅವರು ಪಡೆದಿರುವ ಭೂಮಿಯನ್ನು ಇನ್ನೂ ಅಭಿವೃದ್ಧಿಮಾಡಿಲ್ಲ. ಈಗಲೇ ಅವರಿಗೆ ಕಂದಾಯದ ಹೊರೆ ಹೊರಿಸಿದರೆ ಭೂಮಿಯ ಅಭಿವೃದ್ಧಿಮಾಡುವುದಕ್ಕಾಗುವುದಿಲ್ಲ. ಆದುದರಿಂದ ಕನಿಷ್ಠ 5 ಎಕರೆ ಹೊಂದಿರುವ ಹರಿಜನರು ಮತ್ತು ಗಿರಿಜನರಿಗೆ ಯಾವುದೇ ರೀತಿಯಲ್ಲಿ ಕಂದಾಯ ಹಾಕದೆ ಮಾಫಿಮಾಡಬೇಕೆಂದು ವಿನಂತಿಮಾಡುತ್ತೇನೆ.

ಈ ಸೆಟ್ಲ್‌ಮೆಂಟ್ ವರದಿಯ ಕಾಪಿಗಳನ್ನು ಜಿಲ್ಲಾ ಹೆಡ್‌ಕ್ವಾರ್ಟರುಗಳಿಗೆ ಮಾತ್ರ ಒದಗಿಸಿದ್ದರು. ಆದುದರಿಂದ ಅವು ಅನೇಕರಿಗೆ ದೊರೆತಿಲ್ಲ. ನಮಗೆ ಸಹ ಅವು ಬೇಗ ದೊರೆಯದೆ 2 ತಿಂಗಳಲ್ಲಿ ಅಬ್‌ಜೆಕ್‌ಷನ್ಸ್ ಫೈಲುಮಾಡುವುದಕ್ಕೆ ಅವಕಾಶವಾಗಲಿಲ್ಲ. ಸರಿಯಾದ ತಜ್ಞರ, ಕೃಷಿ ಪರಿಣತರ ಮೂಲಕ ವಿಚಾರ ತಿಳಿದು ವ್ಯವಸಾಯವನ್ನು ಹೇಗೆ ಸುಧಾರಿಸಬಹುದೆಂಬುದನ್ನು ಅರಿತು ತೆರಿಗೆ ಹಾಕಬೇಕೇ ಹೊರತು ರೈತರಿಗೆ ಹೊರೆ ಆಗುವಂತೆ ಮಾಡಬಾರದು ಎಂದು ವಿನಂತಿಮಾಡುತ್ತೇನೆ.

ಈ ಮೊದಲೇ ಹೇಳಿದಂತೆ ಸರಕಾರಿ ಕೃಷಿ ಕ್ಷೇತ್ರದವರನ್ನು ವಿಚಾರಿಸಿ ಸರಕಾರೀ ಕೃಷಿಯಲ್ಲಿ ತಜ್ಞತೆ ಪಡೆದಿರುವ, ಮತ್ತು ಸ್ವತಃ ಅನುಭವ ಪಡೆದಿರುವ ಕೃಷಿ ತಜ್ಞರನ್ನು ವಿಚಾರಮಾಡಿ ಮಣ್ಣಿನ ಯೋಗ್ಯತೆ ನೋಡಿ 30 ವರ್ಷದ ಲೆಕ್ಕಾಚಾರಮಾಡಿ ಕಂದಾಯ ಏರಿಕೆಯ ವ್ಯವಸ್ಥೆ ಮಾಡಿದರೆ ಎಲ್ಲಾ ಬೆಳೆಗಳಿಗೂ ಅನುಕೂಲವಾಗುತ್ತದೆ. ಅಡಿಕೆಮಟ್ಟಿಗೆ ನಾನು ಕೆಲವು ವಿಚಾರ ಹೇಳಿದ್ದೇನೆ. ಅದನ್ನು ವಿಚಾರಮಾಡಿದರೆ ಅನುಕೂಲವಾಗಬಹುದು ಎಂದು ಇಷ್ಟುಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri V. C. PATIL.—Sir, this is one of the most important motions which we are to discuss on the floor of this House. I must however thank the Government for bringing this resolution to revise land assessment, whether it is to be enhanced or decreased. We get an opportunity to discuss the matter.

Sir, Government have done tremendous work in gathering and collecting various statistics pertaining to the whole State and have brought forward a cart load of material. We have tried to go through some of them, but it appears that the work done during the course of 5 or 6 years cannot be examined and digested, within a short space of less than a month.

I am not against levying or increasing taxes. Without taxes the Treasury would be empty and there could be no Government without money. But we have to consider the basis and the justification for imposition of taxes. We are labouring under the antiquated concept that all land belongs to the State and persons using them or occupying them have to pay something to the owner *i.e.*, the Government. If that is the basis, then the Government should not hesitate to come forward and say that they are the owners of the land. Nor does the Government say that the occupants are the owners. Thus, there is still a conflict between the two interests. It is time that the Government comes forward with a clear policy. If they want to say that they are the owners of the land and that persons in occupation should pay something, then they must nationalise all land in the country. But the Government is afraid to do it. It is not difficult, but Government is not prepared to take the step of nationalisation of the land and then asking the people using it to pay for the use and occupation of land. If we look to the development of the idea of land assessment from ancient times, the real person who can be deemed to be the owner is the person who cleared the jungles and brought the land under cultivation. Then came the community, and afterwards came King, the person who wielded power. the principle of kingship or "Prithvi Pathi" then came into vogue and all cultivators were treated as licencees., or tenants of the King. Then another class of intellectuals emerged into the picture and they constituted the Bhooswamis. They also claimed a share in the produce of the land. Thus, the King and the priest came to secure shares in the produce. This system continued for a long time in history.

The question before us is whether it is reasonable or proper for us to charge every piece of land for being used for agriculture. My submission is whether the Government is prepared to take the step of nationalisation of the entire agricultural profession and declare that Government is the owner of all land and it will give it to the cultivators on certain terms and conditions.

If they do not want to do it, then are they going to follow the old principle that the land belongs to the King? Sir, under the present circumstances or under the changed circumstances, since 1950, that is when we have declared our independence under the Constitution, every man has become the owner of this soil, that is, the place of the King is

taken by every individual in this country. Under these circumstances, Sir, is it reasonable for the Government to charge the land for cultivation ? So, I for one am of the opinion that this archaic idea or I may say this feudalistic idea of charging the land for cultivation must give way to the new trends of our society. We have now ceased to be a feudalistic or imperialistic in any sense of the term and according to that, we must change our policy of land tax. Here Sir, there is another aspect from which we can try to interpret this particular tax and that is when we are taxing land or agricultural profession, we are not taxing similarly other professions. Why only the agricultural profession is to be taxed even though the land may be one acre or even a few guntas ? That does not appear to be reasonable and that is why I should like to suggest that up to a particular extent, that is I can say which we call under the Tenancy Laws as economic holdings, that is, the extent of land which is required for the maintenance of a family consisting of about 5 or 6 members which is quite essential for their maintenance, there should be no tax. Or, I may suggest, as I have stated on several occasions, that this agricultural profession should be treated on par with other professions and as we are taxing other professions with income tax and some licence fees, etc., similarly this agricultural profession should be taxed on that basis alone and not merely on the basis of occupancy or irrespective of the extent or income which is derived from the agricultural profession. Sir, these are the basic principles on which we have to rethink regarding our policy of land tax. If the Government is prepared, Sir, I think we have to study the whole of this matter and then come to certain conclusions which will be useful not only for the Government but also for the people at large. From that point of view, I should like to suggest that the Government should think over it seriously without considering that they want money immediately in order to implement certain schemes. That should not be the criterion. The criteria is the basic principle on which we can proceed under the changed circumstances. Sir, the policy that is underlined in the present resettlement or revision is not correct, and that is why I should like to suggest that great changes will have to be made so far as the present reports and recommendations are concerned. Sir, we must see who can be taxed and why. These are the reasons which the Government also must consider. So far as the report on our part of the District is concerned, I must say, it is full of fallacies and I do not think that the Government should rely its decision on this particular report. There are so many mistakes and some are summarisations based on wrong facts and that is why I should like to request the Government to withhold acceptance of the resolution for some time and study it again. I do not mean to say that the officers have not done good work but still there are many defects that have remained in the reports. Take for instance, my taluk: this officer has given completely wrong versions of Rivers and situations and that is why great injustice is likely to be committed so far as certain villages are concerned. There are some villages in the western part of Belgaum Taluk which are jungle villages

(SRI V. S. PATIL)

and which have absolutely no roads. The land is quite inferior and the rainfall is too heavy which affects the soil and results in soil erosion, and in spite of this, the Report says that they are the best lands. That is not correct. But the best lands have been taken as second class lands. These are obvious mistakes that have been committed in this Report and I feel some corrections will have to be made so far as these recommendations and basic facts are concerned. Sir, even in this report, he has mentioned on several occasions that there are no statistics available so far as the previous survey was concerned; when the previous revision was made somewhere in 1916-17 of Belgaum.

With regard to Khanapur Taluk, the then European Officer who was the collector of Belgaum had said that to raise the dry crop rates in the lower group would be literally to tax the poor man's bread. These are the words of a foreigner who had come here only for service. He had no sympathy for any of the Indian people. Still, he says to raise the tax in that area is to tax poor man's bread and what our officers have done who are our own flesh and blood and who pose that they are sympathetic towards our poor people ? Even in this report, the present officer has also said that there is no material change in the living condition of the people. Still he recommends enhancement of the assessment. That is really strange. That is why I should like to suggest that there are a number of mistakes committed by this Officer in recommending enhancement of the assessment.

Sir,. at another place, he has stated that the revision is based upon one sixteenth of the gross yield or 6¼ per cent of the value of the gross yield of the land. Now Sir what is this gross yield and how it is calculated ? Has he taken into account the cost of cultivation of the land ? He has given only rough figures and they are completely incorrect, Sir.

He says in his report that the cost of cultivation for Jawar is like this:

Jawar	Rs.	50-100
Ragi	Rs.	30- 40
Ground-nut	Rs.	75-100
Paddy	Rs.	100-150
Sugar cane	Rs.	200-300 per acre.

This is absurd. One cart-load of manure costs Rs. 20 to Rs. 25/-. Unless a man puts ten cart-loads per acre for paddy and sugar-cane, he can get no crop at all. Mere cost of manure comes to Rs. 250/-per acre, whereas the entire cost is given here as Rs. 100-150. It is really absurd. So, I submit Sir, that all these contentions made in this report are not based upon facts at all. They are merely summaries prepared from the records supplied by the revenue. officers and they have no relation to facts and actual happenings in the countryside. That is why I should like to suggest that no reilance should be placed on these figures and as far as possible our decision should not be based merely on these reports which are not correct.

Then Sir, the next point is, we have to know what is the cost of cultivation and if there is any surplus remaining with the cultivator, then there can be some tax. Every body knows that the agriculturist's economy is one which is always deficit. Unless the persons concerned or the owners can take cheap-labour, cheap manure and all these things; then alone he can earn something. Otherwise the demand for land by the people on the country-side or the rise in the prices of agricultural land in the country side, is not a guarantee, is not a basis on which we can say that the agriculturists are prospering. Sir, in these reports, these officers have said that since the price of land has abnormally risen; that is an indication that the cultivators have become rich. That is not correct, because the cultivators or the people living in the rural areas have no other profession. They cannot survive unless they work on the lands. That is their mainstay for their subsistence. He has no other profession or he cannot get any employment in the urban area or in factories. He has to go back to the land and he is forced to do his job on agriculture. That is why the persons are investing monies on the land, because Government has full control to provide jobs for the population. That is one of the reasons why there is so much demand for land. Similarly, these ignorant agriculturists do not know where to invest money and how to invest the money which they have got. That is why they feel investment in land is the best security. That is the reasons why, they are investing money on the land. Because they have absolutely no faith in the Government. secutiries or Banks or Societies. They are ignorant of it. That is why they want to invest money in the land. That is one of the reasons why the prices have risen. Not because the condition of the agriculturist has improved. It is due to his ignorance that the cultivator is investing money on land.

Then Sir, I should like to request the Hon'ble Minister to cancel these group No. 2 and 3 in Belgaum Khanapur Taluka and have one group consisting of group 1,2. There is absolutely no distinction between these two groups suggested by this officer. On the contrary group 2 is better situated. They get better facilities, and soil conditions also are better. The assessment that is proposed by the officer for group 3 is against his own remarks. That is why I should like to suggest that group 2 and 3 may be amalgamanted into one and some of the western villages of Belgaum Taluka must be excluded from group 2 and 3 and they must be included in group 5, because all these are villages are forest villages. There is one village included in this group which can be referred to as an illustration. That is Dhamane Samad Bailure. This is a village which is not approachable by any road. There is no connection whatsoever with the outside world. It is in the centre of a jungle and if any one wants to go to that village, one must be accompanied by two or three persons from that area in order to ward off the attacks from jungle beasts like banthers, tigers, bears, etc. Without them, we cannot go to that village. And that village is included as one of the best in the group which can be taxed as the highest in the whole district. This shows the ignorance on the part of the officer concerned. He has not seen that village at all. Similarly,

(SRI V. S. PATIL)

a few villages near about that village, the western portion must be excluded from group 3 and they must be included in group 5 or 6.

These are my suggestions and I hope that the Government will reconsider all these matters and if we are to lose certain amounts, the answer may come from the Government, if we are to give up assessments on lower group agriculturists, say up to economic holding etc., then how can we run the new institutions, the panchayat raj institutions ? that question may come up. It is likely that it may come up, because they have thrown a piece of hope before the people that they are going to give 30 per cent to the panchayets, 30 per cent to the taluka boards, 10 per cent to the district boards and 10 per cent again to be given. About 80-85 per cent is transferred back to villages and if this assessment is not there it will be impossible to run these institutions. For that my answer is, let these bodies decide what tax they have to impose. Instead of taking the whole thing on the Government, let it be decentralised and sent down to these institutions to have their own taxes for their maintenance and running of these institutions. The present difficulty is that we are trying to impose this tax on the presumption that we, the Government is the owners of the land. Let the village panchayets, taluk boards take the initiative and impose their tax to maintain themselves at that level. We should not have any share in that. That is why I should like to suggest, let us have a re-thinking on these policies because this is a policy matter and we must change our out-look so far as land assessment is concerned.

Sir, I must thank the Revenue Secretary for giving us this information in a separate book-let, which is printed and supplied to us. But I should like to point out to them on page 3, paragraph 18, it is said that the Settlement Officers have formed the groups taking into account the following factors : he has enumerated so many things. But sub-clause (k) says :

> " ordinary expenses, cultivating expenses, for principal crops including the wages of the cultivator for his labour in cultivating the land."

But the Report of the officers is completely against it. Here is the officer's report which says :

> " These include items like manure, seed, removal, weeds, reaping expenses, harvesting and are exclusive of the labour of the cultivator and his family and bullocks."

So, the note given by the Government is against the very contents of the report. I should like to suggest that it is no use forcing the Hon'ble Members of this House to pass in a hurry. Let us study carefully and then you may get it passed.

MR. SPEAKER.—The House will rise now and reassemble after half-an-hour.

The House adjourned for recess at Three of the clock and reassembled at Thirty minites past Three of the clock.

[MR. SPEAKER in the Chair.]

3-30 P.M.

Mr. SPEAKER.—I have received a strange request; otherwise I would not have mentioned it in the House. The request is by some members. "We request you to postpone the election of these two committees—the Estimates Committee and the Public Accounts Committee—scheduled to be held on the 9th April 1965, as the Opposi-sition members—I do not know what they mean by opposition members comprehensively—have taken a decision to go on hunger strike to protest against the enhancement of the land revenue on the 9th instant. In view of the above circumstances, we request you to postpone the election to some other date." I am not accepting the request. I regret I am unable to accept the request, because if dates fixed for election have to be changed on grounds of this type, any section may it be postponed. The Opposition also is not a single unit. So, a request of this type may kindly not be addressed to me and place me in an embarassing situation. The Election will go on. On the ground of hunger strike-hunger strike and voting are not so radically inconsistent with each other. Just as they will be doing some thing also, they should attend to this. That is No.1.

Then, invitations are being issued to all the members of both the Houses for a Tea party tomorrow in the Banquet Hall at 6.15 P.M. The time is too short. Some members might not have received the invita-tion, or the invatation might have come to their doors and they may not be there. I am making it a plain desire that all members should attend the party given in honour of the retired Secretary Mr. G. S. Venkataramana Iyer. It wiil be in the Banquet Hall tomorrow. The invitations are under issue. Kindly take it that it is an invitation given by me, so that all members should be present to greet him tomorrow.

Now, are there anything like whips on the floor of this House? What I am saying is that whips must help me better.

Sri K. S. SURYANARAYANA RAO (Mysore City).—I was told that he has sent a list of members.

Mr. SPEAKER.—If any more members desire to speak, I will submit the second list later. That is not taking a grip over affairs. I told them from the very beginning to give me a comprehensive and conso-lidated list. However, I will allow the river to flow. Tomorrow nobody should embarass me.

I am sorry, he has sent me another list when I was not here. There are four names and each may take ten minutes.

Sri K. S. SURYANARAYANA RAO.—Mr Speaker, Sir, I would like to offer a few suggestions for the consideration of the Honourable Minister. I would look at the whole issue from the policy point of view. rather than from a tax point of view. It is just possible that by arithmetical calculations or mathematical manipulations, figures, could be added. In

(SRI K. S. SURYANARAYANA RAO)

taxation, either could be decried or supported on the ground. But a few of our members have also felt perhaps more about the burden of taxation rather than on principles. I for one would perhaps agree even if there should be an enhancement, provided it is according to certain accepted principles. I only wish that the whole agricultural pattern, the whole policy of agricultural development is taken into consideration in preparing a tax pattern for agriculture.

[MR. DEPUTY SPEAKER in the Chair.]

Sir, the pattern of agricultural taxation is an old method. But the land is taxed. Sir, there are instances where we have alternate suggestions and methods by which we could collect tax on rational basis. Therefore, Sir, any hasty decision in matters of revision-because in any revision, it is taken for granted that that taxes should go up. But it should not be that way. Any revision may be either for enhancement or decrease. It should be according to a pattern agreed or to a policy laid down. But any revision, which is a revision for enhancement is not a good policy. Or, because the tax that is proposed is high, because there is opposition, we should not allow ourselves to compromise matters. If it is any policy and principle that agriculture should support higher taxation, Government should not hesitate. But it is not by political decisions or decision by compulsion or by the weight of opposition that they should be cowed. Of course, Opposition does matter. But it should be on policy matters. What I mean to say is this, Sir Just a few days, we read a report from the American press about conditions of agriculture in India. I wish we had such a report or assessment or evaluation of our own Government or of the Planning Commission. Unfortunatey, we do not have any before us, excepting the note circulated by the Revenue Secretariat. Even there I would read that the basis is also given as 33 percent or 66 percent for a village and 100 per cent for an individual holding. If we apply this principle, there are instances where enhancement is more than 100 per cent for individual holdings. Possible, it is so for an entire village where there are commercial crops like arecanut, coconut, the plantation crop and the like. Even the basis on which the revenue officers have got this up—I do not think they seem to have this principle before them. Why I say this is--It is not the quantum, but even the method is wrong. The very approach to the problem is wrong. They should have approached the problem from the point of view of agricultural development and not from the point of view of collection of taxes. As a matter of fact, we may get three to four crores of additional revenue-in all about seven crores. We are already getting three crores and we may get an additional three to four crores. Sir, even these three or four crores we can get. It is not as if these crores is a big sum. If we avoid certain wastages and by certain economic measures, we can fill up this deficit of three to four crores. It is not as if State's balance sheet would suffer should there not be

this taxation. There are several instances where there is wastage. This is not the time for me to mention where the wastage could be avoided and where economy could be effected. Why I say this is this.

Sir, in our country agriculture consists of mostly small holdings, uneconomic holdings. The report published a few days ago shows the percentage of wooden plough as the largest in our country. In spite of 18 years of propoganda and incentives etc., etc., the fact remains so. Percentage of iron plough is very low ; it is awefully low. The reason is our agriculture pattern cannot affort heavy expenditure on mechanised cultivation. It is not lack of education alone that is responsible for this retardation of this in agriculture. It is the uneconomic holdings and the uneconomic situation in which the ryot is put to-day. Therefore, we will have to evolve a pattern by which we can improve the position. Sir, there are reports and reports in this country about fragmentation and uneconomic holding and poor agricultural standards. This is just the time when will have to think about those recommendations and reports and see how far we can implement them and see how far we improve the individual agriculturist and how far we can get better returns to the State. That is how we should look at it. We say, there should be consolidation; we say, there should be mechanisation and there should be farms. How is all this possible when he is not able to buy an iron plough paying fifty rupees? The factory may turn out iron ploughs ; but, how many can buy even the power tillers? Unless agriculture is hundred per cent subsidised, I do not think, he could afford to buy this. This is the position of the agricuturists.

Sir, Sri V. S. Patil made a suggestion that small holdings must be exempted. That does not solve the problem. We must try to induce or create such incentive as to make smaller holdings, bigger one and uneconomic holdings into economic holdings. If that should be done, I think, smaller holdings should not be exempted or given benefit though it is humanitarian that it should get it ; but, it should not be on this ground alone as a matter of policy because that whould be perpetuating smaller holdings. We must see that economic holdings should have smaller rate of taxation rather than smaller holdings, on the present pattern of Taxation. That is one of the method by which we can avoid further fragmentation but convert smaller holdings into bigger holdings. To-day, agriculture is said to be heavily burdened.

Sir, as a matter of fact, I for one, who would stand for the abolition of the present system of land tax. This land revenue system should go. It should be crop orient. It is only then small holders and small income group get exempted and it is more scientific rather than the pattern of averages irrespective of the yield from the land. We have the agriculture income-tax. By making certain adjustments in this, we can bring in some more crops under this. 90 per cent of it is supposed to go to the local authorities. We may leave it to the local authorities to think of a small tax like house tax in the Corporation areas. They can charge a small percentage, may be on acreage basis or occupancy basis,

(SRI K. S. SURYANARAYANA RAO)

whatever it is, at the taluk level and the panchayat level. So far as the State is concerned, we can do away with this land revenue system and convert it into commercial tax and collect it on the turn-over and yield of crop rather than on the holdings. Sir, the holding may be good. But, when based on the average of the neighbourhood, it may not be good, but the man will have to pay. Supposing, it is crop orient. Whatever the man grows, he has to pay on that.

So, Sir, in making this revision, the revising authority should have taken into consideration all these facts and evolved a new pattern. Possibly, they might or might not have time to do it because the way in which they have done this shows that they have rushed through the whole thing. In many places copies were not available even when the objectors were to be heard. Things have been rushed through because for financial reasons. That should not happen. For the purposes of finance, I would rather even suggest the present condition to continue; the surcharge could continue for some time. In the meantime, we can have a comprehensive pattern based on scientific principles. We can constitute a committee, may be of this House or we may invite outsiders also and take the best of suggestions and we can think of this in the new context of things and come to this House for revision. Till such time, it is better that we adopt the present system. Till an expert committee goes into the whole question and submit its report for the consideration of this House, I wish this levy according to the latest revision should be with-held.

† ಶ್ರೀ ಎಸ್. ಎಂ. ಕೃಷ್ಣ.—ಸ್ವಾಮಿ, ನಮ್ಮ ರಾಜ್ಯದ ರೈತ ಜನರ ಮರಣ ಹೋಮ ಮಾಡತಕ್ಕಂಥ ಈ ಕ್ರೂರ ಯಜ್ಞದ ಪೌರೋಹಿತ್ಯವನ್ನು ಶ್ರೀಮಾನ್ ಎಸ್. ನಿಜಲಿಂಗಪ್ಪನವರೂ ಮತ್ತು ಶ್ರೀ ಮಾನ್ ಎಂ. ವಿ. ಕೃಷ್ಣಪ್ಪನವರೂ ವಹಿಸಿ, ಇವರು ಜಂಟಿಯಾಗಿ ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ಭೂಗಂದಾಯ ಪುನರ್ವಿಮರ್ಶನಾ ನಿರ್ಣಯವನ್ನು ಸಂಪೂರ್ಣವಾಗಿ ವಿರೋಧಿಸುವುದಕ್ಕೆ ಈ ಸಭೆಯ ಕಾಲವನ್ನು ಕೇಳುತ್ತಾ ಇದ್ದೇನೆ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ನಾವು ಇದರಲ್ಲಿ ಬರೆದಿರುವುದು ತೃಣವೂ ಇಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಗಾಂಧೀಜಿಯವರು ಸ್ವಾತಂತ್ರ್ಯಕ್ಕೋಸ್ಕರ ಹೋರಾಡುತ್ತಿದ್ದ ಕಾಲದಲ್ಲಿ ಒಂದು ಮಾತನ್ನು ಹೇಳಿದರು. ಆ ಮಾತು ಈ ದಿವಸ ಗಾಂಧೀಜಿಯವರ ಶಿಷ್ಯರಾಗಿರುವ ಈ ಆಡಳಿತದವರಿಗೆ ನಾವು ಇಲ್ಲಿ ಹೇಳಬೇಕಾಗಿದೆ. ಶಾಸನವೇ ಧರ್ಮ ಬಾಹಿರವಾದಾಗ ಅಂತಹ ಧರ್ಮ ಬಾಹಿರವಾದ ಶಾಸನವನ್ನು ವಿರೋಧಿಸತಕ್ಕದ್ದು ತಮ್ಮ ಪರಮ ಧರ್ಮ ಎಂದು ಗಾಂಧೀಜಿಯವರು ಹೇಳಿದರು. ಈ ದಿವಸ ಇದೇ ಮಾತನ್ನು ಈ ಮೈಸೂರಿನ ಕೃತಘ್ನ ಸರಕಾರಕ್ಕೆ ಹೇಳಬೇಕಾಗಿದೆ. ಕೃತಘ್ನ ಸರಕಾರ ಎಂದೇಕೆ ಹೇಳಬೇಕೆಂದರೆ, ಯಾವ ಜನ ನಿಮ್ಮಿಂದ ಒಳ್ಳೆಯದನ್ನು ನಿರೀಕ್ಷೆ ಮಾಡಿ ನಿಮ್ಮನ್ನು ಚುನಾಯಿಸಿ ಅಧಿಕಾರ ಸೂತ್ರವನ್ನು ನಿಮ್ಮ ಕೈಗೆ ಕೊಟ್ಟರೋ ಅಂತಹ ಜನಕ್ಕೆ ಅವಹೇಳನ ಮಾಡ ತಕ್ಕಂತೆ ಅವರ ಹೊಟ್ಟೆಯ ಮೇಲೆ ಹೊಡೆದುಕೊಂಡು ಬರತಕ್ಕ ಸರಕಾರ ಕೃತಘ್ನ ಸರಕಾರವೇ ಹೌದು. ನಾವು ರೈತ ಜನ ಎಂದು ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಹೇಳುತ್ತ ಶೇಕಡಾ 80 ರಷ್ಟು ಜನಕ್ಕೆ ಈ ದಿವಸ ಐದು ಎಕರೆಗಳಿಗಿಂತ ಕಡಿಮೆ ಜಮೀನು ಇದೆ ಎಂದು ಅವರೇ ಹೇಳಿದ್ದರು. ನನಗೆ ಇನ್ನೂ ಒಂದು ಸೋಜಿಗವಾದ ಸಂಗತಿಯೇನು ಎಂದರೆ, ಇಲ್ಲಿ ಈ ಸಭೆಯಲ್ಲಿ ವೃದ್ಧ ಸದಸ್ಯರೊಬ್ಬರು ರಾಮನಗರದ ಕ್ಷೇತ್ರವನ್ನು ಪ್ರತಿನಿಧಿಸತಕ್ಕ ಸದಸ್ಯರು ಸರ್ಕಾರದ ನಿಲುವನ್ನು ಸಮರ್ಥನೆ ಮಾಡಿ ಒಂದು ಭಾಷಣವನ್ನು ಮಾಡಿದರು. ಸೂಕ್ತವಾದ ಭಾಷಣವೇ ಅದೂ ಆಶ್ಚರ್ಯವನ್ನುಂಟು

ಮಾಡತಕ್ಕ ಭಾಷಣವೇ ! ಅವರೂ ಇಲ್ಲ ಈಗ ಉಪಸ್ಥಿತರಿದ್ದಾರೆ. ನಾನು ಅವರನ್ನು ಒಂದು ಒಂದು ಪ್ರಶ್ನೆ ಕೇಳುತ್ತೇನೆ. ರಾಮನಗರದ ಮಹಾ ಜನತೆಯ ಅಭೀಷ್ಟಗಳನ್ನು ಈ ಸಭೆಯಲ್ಲಿ ಪ್ರತಿಬಿಂಬಿಸುತ್ತಿದ್ದೀರಾ ಎಂದು ನಾನು ಕೇಳುತ್ತೇನೆ. ಯಾವ ಮಮತೆಯಿಂದ ಯಾವ ಅಭಿಮಾನದಿಂದ ನೀವು ಆ ದಿವಸ ಕಂದಾಯವನ್ನು ಪುನರ್ವಿಮರ್ಷೆ ಮಾಡಬೇಕು ಎಂದು ಸಮರ್ಥನೆ ಮಾಡಿದಿರಿ ನಮ್ಮ ಮೇಲೆ ಈ ಒಂದು ದೋಷಾರೋಪಣೆಯನ್ನೂ ಮಾಡಿದಿರಿ. ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರೂ ಕೂಡ ಹೇಳಿದರು. ಆದರೆ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರಿಗೆ ನಾನು ಹೇಳುತ್ತೇನೆ, ಗಾಳಿ ಅವರಿಗೆ ವಿರೋಧವಾಗಿ ಬೀಸುವುದಕ್ಕೆ ಆರಂಭವಾದ ಮೇಲೆ ನಾವು ಇದನ್ನೇನೂ ಬರೆದಿಲ್ಲ, 9 ವರ್ಷಗಳ ಹಿಂದೆ ಬರೆದಿದ್ದ ರಿಪೋರ್ಟನ್ನು ಇಲ್ಲಿ ತಂದು ನಮ್ಮ ಮುಂದೆ ಇಡಲಾಗಿದೆ, ಸಭೆಯ ಮುಂದೆ ಇಟ್ಟಿದ್ದೇನೆ, ಸಭೆ ಏನು ಅಭಿಮತಕ್ಕೆ ಬರುತ್ತದೆ ಅದನ್ನು ನಾನು ಕಾರ್ಯರೂಪಕ್ಕೆ ತರುತ್ತೇವೆಂದು ಹೇಳಿದರು. ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಈ ನಿರ್ಣಯವನ್ನು ಮಂಡಿಸುವಾಗ ಮಾಡಿದ ಭಾಷಣವನ್ನು ನಾವೆಲ್ಲರೂ ಕೇಳಿದ್ದೇವೆ. ನಾವು ಈ ನಿರ್ಣಯವನ್ನು ವಿರೋಧಿಸಿದರೆ ರೈತರಿಗೆ ನೀವೇ ದ್ರೋಹ ಮಾಡಿದಹಾಗೆ ಆಗುತ್ತದೆ ಎಂದು ಹೇಳಿದಿರಿ ; ಇದರಿಂದ ತಾಲ್ಲೂಕಾ ಬೋರ್ಡುಗಳಿಗೆ ಶೇಕಡಾ 70ರಷ್ಟು ವಿಲೇಜು ಪಂಚಾಯತಿಗಳಿಗೆ ಇಷ್ಟು ಸಿಗುತ್ತದೆ, ಇದಕ್ಕಾಗಿ ರೈತರೂ ಕೂಡ ಸ್ವಲ್ಪ ಕಂದಾಯ ಜಾಸ್ತಿ ಕೊಡಬೇಕು ಎಂದು ಹೇಳಿದಿರಿ. ಇದು ನಿಮಗೆ ಹೇಗಿದೆ ಎಂದರೆ ನೀವು ಯಾವ ಒಂದು ವಿಚಾರವನ್ನೂ ಆಲೋಚನೆ ಮಾಡದೇ ತಂದಿದ್ದೀರಿ ಎಂದು ಹೇಳಬೇಕಾಗಿದೆ. ಈ ದಿವಸ ರೈತನ ಸ್ಥಿತಿಯನ್ನು ಅವಲೋಕನೆ ಮಾಡಿ ನೋಡಿದರೆ, ಅವರಿಗೆ ಇನ್ನೂ ಹೆಚ್ಚು ಕಷ್ಟಗಳನ್ನು ಕೊಡತಕ್ಕ ಸನ್ನಿವೇಶಗಳನ್ನು ಕಲ್ಪಿಸಿಕೊಡುತ್ತಿದ್ದೀರಿ. ಅವರು ಇಂದಿನ ಸ್ಥಿತಿಯಲ್ಲಿ ಹೆಚ್ಚು ಕಂದಾಯದ ಹೊರೆಯನ್ನು ಹೊರುವ ಸ್ಥಿತಿಯಲ್ಲಿದ್ದಾರೆಯೇ? ಅಲ್ಲದೆ ಇಲ್ಲಿ ಇನ್ನೂ ಕೆಲವರು ಹೇಳಿದರು ಕಂದಾಯವನ್ನು ಮೂವತ್ತು ವರ್ಷಗಳಿಗೊಮ್ಮೆ ಪುನರ್ವಿಮರ್ಷೆ ಮಾಡಬೇಕಾಗಿ ಬರುತ್ತದೆ, ಅದರಂತೆ ಈಗ 30 ವರ್ಷಗಳಾಗಿರುವಾಗ ಇದನ್ನು ಪುನರ್ವಿಮರ್ಶೆ ಮಾಡಬೇಕು ಎಂದು. ಆದರೆ ಹಿಡುವಳಿಯನ್ನು ಪುನರ್ವಿಮರ್ಶೆ ಮಾಡುವ ನಿಯಮ ಇದಲ್ಲ. ಯಾವ ವಿಧದಲ್ಲಾದರೂ ಇದನ್ನು ಪುನರ್ವಿಮರ್ಶೆ ಮಾಡಬೇಕು ಅದಕ್ಕಾಗಿ ಭೂಕಂದಾಯವನ್ನು ಹೆಚ್ಚು ಮಾಡಬೇಕು ಎನ್ನುವ ವಾದ ಸಮಂಜಸವಾದುದಲ್ಲ. ಎಲ್ಲ ಸ್ಥಿತಿಗತಿಗಳನ್ನೂ ಗಣನೆಗೆ ತೆಗೆದುಕೊಂಡು ಆ ನಂತರ ಗಂಭೀರವಾದ ಒಂದು ನಿರ್ಣಯಕ್ಕೆ ಬರಬೇಕಾಗಿದೆ. ನಾನೂ ಕೂಡ ಸರಕಾರದ ಅಸಹಾಯಕತೆಯನ್ನು ಅರ್ಥ ಮಾಡಿಕೊಳ್ಳಬಲ್ಲೆ. ಈ ದಿವಸ 27 ಜನರಿರುವ ಈ ಮಂತ್ರಿಮಂಡಲದಲ್ಲೇ ಯಾರು ಒಬ್ಬರೇ ಆಗಲೀ ಈ ನಿರ್ಣಯದ ಪರವಾಗಿ ಸಂಪೂರ್ಣ ಸಮರ್ಥನೆ ದೊರೆತಿರುವ ನಂಬಿಕೆಯೂ ಇಲ್ಲ ಎನ್ನುವುದನ್ನು ಇಲ್ಲಿರುವ ಈ ಸಭೆಯ ಎಲ್ಲ ಸದಸ್ಯರೂ ಬಲ್ಲರು. ಮೈಸೂರು ಮಂತ್ರಿಮಂಡಲದಲ್ಲೇ ಭೂಕಂದಾಯವನ್ನು ಏರಿಸುವುದರ ಬಗ್ಗೆ ಸಾಕಾದಷ್ಟು ಗೊಂದಲಗಳಿವೆ. ಸಾಕಾದಷ್ಟು ಭಿನ್ನಾಭಿಪ್ರಾಯಗಳಿವೆ. ನಿಮ್ಮಲ್ಲಿಯೇ ಭಿನ್ನಾಭಿಪ್ರಾಯಗಳು ವಿಪರೀತವಾಗಿರುವಾಗ ಈ ಸಭೆಯಲ್ಲಿ ಏತಕ್ಕಾಗಿ ಬಂದು ಇಲ್ಲಿ ಈ ನಿರ್ಣಯವನ್ನು ಮಂಡಿಸಬೇಕಾಗಿತ್ತು ! ಸರಕಾರ ಯಾವಾಗಲೂ ಯಾವುದಾದರೂ ಒಂದು ನಿರ್ಣಯವನ್ನು ಈ ಸಭೆಯ ಮುಂದೆ ತರುವುದಕ್ಕೆ ಮೊದಲು ಅಂತಹ ನಿರ್ಣಯಕ್ಕೆ ಸರಕಾರದ ವರಿಷ್ಠರ ಬೆಂಬಲ ಅಗತ್ಯವಾಗಿರಬೇಕು. ಈ ದಿವಸ ಅಂತಹ ಬೆಂಬಲವನ್ನು ಪಡೆದಿರುವುದನ್ನು ನಾವು ಕಂಡಿಲ್ಲ. ಅಂತಹ ಬೆಂಬಲವನ್ನು ಕೊಡುವುದಕ್ಕೂ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ನಾನು ಈ ದಿವಸ ಇಲ್ಲಿ ಹೇಳಬೇಕಾಗಿದೆ.

ನಾಳೆ ದಿನ ಒಂದು ಸ್ಮರಣೀಯವಾದ ಒಂದು ಘಟನೆ ನಮ್ಮ ರಾಜ್ಯದಲ್ಲಿ ನಡೆಯಲಿದೆ. ನಾವು ವಿರೋಧ ಪಕ್ಷಕ್ಕೆ ಆಯ್ಕೆಯಾಗಿ ಈ ಶಾಸನಸಭೆಗೆ ಬಂದಿರತಕ್ಕ ಜನರೆಲ್ಲರೂ ಈ ಭೂಕಂದಾಯದ ಪುನರ್ವಿಮರ್ಶೆ ಮಾಡುವ ಸರಕಾರಕ್ಕೆ ನಮ್ಮ ಮನಃಪೂರ್ವಕವಾದ ವಿರೋಧವನ್ನು ವ್ಯಕ್ತಪಡಿಸುತ್ತ ನಾವು ನಾಳೆ ಬೆಳಿಗ್ಗೆಯಿಂದ ಸಂಜೆಯವರೆಗೆ ವಿಧಾನಸೌಧದ ಮುಂದೆ ಉಪವಾಸ ಸತ್ಯಾಗ್ರಹವನ್ನು ಮಾಡುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಳಿಗೆರೆ).—ಇಲ್ಲೇ ತಮಗೆ ಅವಕಾಶವಿದೆ. ಇದಕ್ಕಾಗಿ ಉಪವಾಸ್ ಏತಕ್ಕಾಗಿ ಮಾಡಬೇಕು !

ಶ್ರೀ ಎಸ್. ಎಂ. ಕೃಷ್ಣ.—ಸರಕಾರದವರು ಇಂತಹ ಒಂದು ದೇಶದ ಬಹು ಜನರನ್ನು ತೊಂದರೆಗೆ ಸಿಕ್ಕಿಸಿ ಬಹು ಜನರಿಗೆ ವಿರೋಧವಾದ ಈ ನಿರ್ಣಯವನ್ನು ಮಾಡತಕ್ಕ ಇಂತಹ ಮಹತ್ವ ನಿರ್ಣಯವನ್ನು ವಿರೋಧ ಮಾಡಲು ನಮಗೆ ವಿರೋಧವನ್ನು ವ್ಯಕ್ತಪಡಿಸಲು ರಾಜ್ಯಾಂಗದ ಅವಕಾಶಗಳನ್ನು ಕಲ್ಪಿಸಿಕೊಟ್ಟಿರತಕ್ಕ ಮಾರ್ಗಗಳನ್ನು ನಾವು ಉಪಯೋಗಿಸುತ್ತೇವೆ. ಮತ್ತು ಚಳುವಳಿಯನ್ನು ಹೂಡುವುದನ್ನೂ ನಾವು ಉಪಯೋಗಿಸುತ್ತೇವೆ ಎನ್ನತಕ್ಕ ಭರವಸೆಯನ್ನು ಮೈಸೂರು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರಿಗೆ ಇಲ್ಲಿ ಕೊಡ

(ಶ್ರೀ ಎಸ್. ಎಂ. ಕೃಷ್ಣ)

ಬಯಸುತ್ತೇನೆ. ರಾಜ್ಯಾಂಗ ನನಗೆ ಏನು ಕಲ್ಪಿಸಿಕೊಟ್ಟಿದೆಯೋ ಅದನ್ನು ಉಪಯೋಗಿಸುತ್ತೇನೆ. ಇದರಲ್ಲಿ ತಾವು ವಿವೇಕಯುತವಾದ ಹಾದಿಯನ್ನು ತುಳಿಯದೆ ಹೋದರೆ ದೇಶದ ಸರಕಾರದ ಜವಾಬುದಾರಿ ಮತ್ತು ದೇಶದ ಆಗುಹೋಗುಗಳನ್ನು ನೋಡುವ ಅವಕಾಶ ನಿಮಗೆಲ್ಲರಿಗೂ ಸಿಗುತ್ತದೆ.

Sri D. M. SIDDIAH.—It is hypothetical, why should you presume that we are not moving in the right direction ?

Sri S. M. KRISHNA.—We are thoroughly getting confused by the way you are functioning as the ruling party in this State. We do not know what you are going to do ; much less do you know what you are doing now. Take any responsible measure *e.g.* the Survey and Settlement the Panchayatiraj Bill. You have not been able to come to any conclusion in regard to them.

ಶ್ರೀ ಜಿ. ಎ. ತಿಮ್ಮಪ್ಪ ಗೌಡ (ಅರಕಲಗೂಡು).—ನ್ಯಾಯವಾದ ತೀರ್ಮಾನವನ್ನು ಜನತೆಯ ಅಭೀಷ್ಟದಂತೆ ಅವರುಗಳಿಗೆ ಹೊಂದುವ ರೀತಿಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುವ ಭರವಸೆಯೂ ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಧೃತರಾಷ್ಟ್ರ ಮಹಾರಾಜರ ಮಾತನ್ನು ದುರ್ಯೋಧನನಂತಿರುವ ರಾಜರು ಕೇಳಬೇಕಲ್ಲಾ ? (ನಗು).

ಶ್ರೀ ಎಂ. ವಿ. ಕೃಷ್ಣಪ್ಪ.—ವಿಭೀಷಣನಂತಹ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದರೆ ಕೇಳುವುದಿಲ್ಲವೆ !

ಶ್ರೀ ಎಸ್. ಎಂ. ಕೃಷ್ಣ.—ಇನ್ನೂ ಒಂದು ಮಾತನ್ನು ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರಿಗೆ ಹೇಳಬಹುದು. ಇಲ್ಲಿ ಕುಳಿತಿರತಕ್ಕ ಜನರೇ ಇಲ್ಲಿನ ಸರಕಾರವನ್ನು ನಡೆಸುತ್ತ ಇರಬೇಕು ಎಂದು ಒಂದು ಸತ್ಯದ ನಿಷ್ಠೆಯಿಂದ ಇಂತಹ ಒಂದು ನಿರ್ಣಯ ಬಂದಾಗ ಇದನ್ನು ಪಾಸು ಮಾಡಿಸಿಕೊಂಡು ಜಾರಿಗೆ ತರುವುದಾದರೆ ಆಗ ದೇಶದಲ್ಲಿರುವ ರೈತರು ನಿಮ್ಮ ಬೆಲೆಯನ್ನು ಚೆನ್ನಾಗಿ ಕಂಡುಕೊಳ್ಳುವರು ಮತ್ತು ನೀವುಗಳು ಎಲ್ಲಿಯಾದರೂ ಭಾಷಣ ಮಾಡಲು ಬರುವಾಗ ನಿಮಗೆ ಕಪ್ಪು ಬಾವುಟಗಳ ಪ್ರದರ್ಶನ ಮಾಡುವರು ಮತ್ತು ನಿಮಗೆ ಭಾಷಣ ಮಾಡಲು ಅವಕಾಶಗಳನ್ನು ಕೊಡದೇ ಇರಬಹುದು ಅಲ್ಲದೆ 1967ರ ಚುನಾವಣೆಯಲ್ಲಿ ನೀವು ಈಗ ಏನು ವಾರಣಹೋಮ ಮಾಡಬೇಕೆಂದು ಇದನ್ನು ತರುತ್ತಿದ್ದೀರೋ ಅಂತಹ ರೈತಾಪಿ ಜನ ಇದನ್ನು ನಿಮಗೆ ಹಿಂದಿರುಗಿಸಿ ಕೊಡುತ್ತಾರೆ. ಇದೆಲ್ಲಾ ಸರಕಾರದ ದೃಷ್ಟಿಯಿಂದ ದೇಶದ ಎಲ್ಲ ಜನರ ದೃಷ್ಟಿಯಿಂದ ರೈತರ ದೃಷ್ಟಿಯಿಂದ ಒಕ್ಕಲಿಗರ ದೃಷ್ಟಿಯಿಂದ ಇಲ್ಲಿ ಹೇಳುತ್ತಿದ್ದೇನೆ. ಆದುದರಿಂದ ಇಂಥ ನಿರ್ಣಯವನ್ನು ವಾಪಸ್ ತಗೆದುಕೊಂಡರೆ ಜನ ನಿಮಗೆ ಹೆಚ್ಚು ಸಂಖ್ಯೆಯಲ್ಲಿ ಓಟು ಕೊಡಬಹುದು.

4-00 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ರಿವಿಜನ್ ಸೆಟ್ಲಮೆಂಟ್ ರಿಪೋರ್ಟ್ ಆಗಿದೆ. ಒಂಬತ್ತು ವರ್ಷದಿಂದ ಅಧಿಕಾರಿಗಳಿಗೆ ಒಂದು ಪ್ರಿನ್ಸಿಪಲ್ ಕೊಟ್ಟು ಅದರ ಪ್ರಕಾರ ವರ್ಕ್ ಅಪ್ ಮಾಡಿ ಎಂದು ಹೇಳಿದ ಪ್ರಕಾರ ಈ ರಿಪೋರ್ಟು ಬಂದಿದೆ. ರೆವಿನ್ಯೂ ಕಾನೂನು ಪ್ರಕಾರ ಇಂಥ ರಿಪೋರ್ಟು ಅಸೆಂಬ್ಲಿಯ ಮುಂದೆ ಬರಬೇಕಾಗುತ್ತದೆ. ರಿಪೋರ್ಟು ಸಭೆಯ ಮುಂದೆ ಇದೆ. ಈಗ ಸದಸ್ಯರು ಸಲಹೆ ಸೂಚನೆಗಳನ್ನು ಕೊಡಬಹುದು. ಅದನ್ನು ಬಿಟ್ಟು ಸುಮ್ಮನೆ ರಾವಣ, ವಿಭೀಷಣ, ಕುಂಭಕರ್ಣ ಎಂದು ಹೇಳುವುದು ಸರಿಯಲ್ಲ. Under the Revenue Act this report has to come before the Assembly and the Council and it has now come. It is for you to suggest to the Government what should be the rates. This is the result of the Revision Settlement report. There is nothing of mine or Nijalingappa's or anybody's contribution. This is a scientific report.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಕಂದಾಯ ಮಂತ್ರಿಗಳು ಪ್ರಾಸ್ತಾವಿಕ ಭಾಷಣದಲ್ಲಿ ಏನು ಅರಿಕೆ ಮಾಡಿಕೊಂಡರೋ ಅದರ ಹಿನ್ನೆಲೆ ಇಟ್ಟುಕೊಂಡು ನಾನು ಮಾತನಾಡುತ್ತಿದ್ದೇನೆ. ರೆವಿನ್ಯೂ ಆಕ್ಟ್ ಪ್ರಕಾರ ಈ ರಿಪೋರ್ಟು ಸಭೆಯ ಮುಂದೆ ಬರಬೇಕು ಎಂದು ಬಹು ಸುಲಭವಾಗಿ ಹೇಳಿದರು. ಹಾಗಾದರೆ ಮಂತ್ರಿಗಳು ಏತಕ್ಕೆ ಇದ್ದಾರೆ !

Sri M. V. KRISHNAPPA.—We have no power to change it before it is passed by the Assembly and the Council. If they want they can amend it or reject it or accept it. In between these two, we cannot do anything.

Sri S. M. KRISHNA.—The Ministry should have come to certain positive conclusions on this issue.

Sri M. V. KRISHNAPPA.—We cannot. We have to place the Report before the Assembly and the Council and we have done that.

ಶ್ರೀ ಎಸ್. ಎಂ. ಕೃಷ್ಣ.—ತತ್ವದ ಪ್ರಕಾರ ಒಂದು ಖಚಿತವಾದ ತೀರ್ಮಾನಕ್ಕೆ ಬರಬೇಕಾಗಿತ್ತು. ಒಂದು ವೇಳೆ ನಾವು ಅಧಿಕಾರಕ್ಕೆ ಬಂದರೆ ಭೂ ಕಂದಾಯವನ್ನು ಸಂಪೂರ್ಣವಾಗಿ ರದ್ದು ಮಾಡುತ್ತೇವೆ ಎಂದು ನಾವು ಹೇಳುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವು ಕಂದಾಯ ಕಿತ್ತುಹಾಕುತ್ತೇವೆ.

ಶ್ರೀ ಪಿ. ಎಂ. ದೇವ್ (ಗುಬ್ಬಿ).—ಅವರೂ ಸಹ ಹಿಂದಕ್ಕೆ ಜನತೆಗೆ ಮಾತು ಕೊಟ್ಟು ಈಗ ಅಧಿಕಾರಕ್ಕೆ ಬಂದಿದ್ದಾರೆ.

ಶ್ರೀ ಎಸ್. ಎಂ. ಕೃಷ್ಣ.—ದೇವೇಂದ್ರನು ಕೊಡುವ ಮಳೆಯ ಮೇಲೆ ರೈತರು ಅವಲಂಬಿಸಿದ್ದಾರೆ ಎಂದು ಮುಂತಾಗಿ ಭಾಷಣ ಮಾಡಿದ್ದನ್ನು ನಾವು ಮರೆತಿಲ್ಲ. ಜನ ಕೂಡ ನೆನಪಿನಲ್ಲಿ ಇಟ್ಟುಕೊಂಡಿದ್ದಾರೆ. ಇದಕ್ಕೆ ಗಮನ ಕೊಡದೆ ಇದ್ದರೆ ಎಚ್ಚೆತ್ತ ಜನ ಮುಂದೆ ಏನು ಮಾಡುತ್ತಾರೆ, ನಿಮಗೆ ಏನು ಆಗುತ್ತದೆ ಎನ್ನುವುದನ್ನು ಕೊಂಚ ಆಲೋಚನೆ ಮಾಡಿ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಅವರು ದೇವೇಂದ್ರಪ್ಪ ಎಂದು ಹೇಳಿದರು. ಯಾವ ದೇವೇಂದ್ರ ಅವರು ?

ಉಪಾಧ್ಯಕ್ಷರು.—ಆ ದೇವೇಂದ್ರ ಬೇರೆ.

ಶ್ರೀ ಎಸ್. ಎಂ. ಕೃಷ್ಣ.—ಇನ್ನೊಂದು ಅವರ ವಾದ ಏನು ಅಂದರೆ, ಪಂಚವಾರ್ಷಿಕ ಯೋಜನೆ ಹಾಕಿಕೊಂಡಿದ್ದೇವೆ, ಹಳ್ಳಿಗಳಲ್ಲಿ ರಸ್ತೆ ಮಾಡುತ್ತೇವೆ, ಶಾಲೆ ಕಟ್ಟಡಗಳನ್ನು ಕಟ್ಟಿಸಿಕೊಡುತ್ತೇವೆ, ನೀರಾವರಿ ಯೋಜನೆಗಳನ್ನು ಮಾಡುತ್ತೇವೆ, ಆದುದರಿಂದ ಸರಕಾರಕ್ಕೆ ಹಣ ಬೇಕು, ಹಣ ಎಲ್ಲಿಂದ ತರಬೇಕು ? ಆದುದರಿಂದ ರೈತನ ಮೇಲೆ ಕಂದಾಯ ಜಾಸ್ತಿ ಮಾಡುವುದು ನ್ಯಾಯ, ಇದು ಧರ್ಮ ಎಂಬ ಒಂದು ವಾದ ಮಂಡಿಸಿ ಕೆಲವು ಸ್ನೇಹಿತರು ಹೇಳಿದರು. ಹಳ್ಳಿಗಳಲ್ಲಿ ರಸ್ತೆ ಆಗಬಾರದು ಎಂದು ನಾನು ಹೇಳುವುದಿಲ್ಲ. ಸ್ಕೂಲು ಕಟ್ಟಡ ಕಟ್ಟಿಸಬಾರದು ಎಂದು ಆಪಾದನೆ ಮಾಡುವುದಿಲ್ಲ. ಯಾರಿಂದ ಹಣ ಪಡೆಯಬೇಕು ಎನ್ನುವುದು ಮುಖ್ಯ. ಇದಲ್ಲದೆ ರೈತನಿಂದ ಕಂದಾಯ ವಸೂಲ್ಮಾಡಿದ ಹಣವನ್ನು ದುಂದು ವೆಚ್ಚ ಮಾಡಿದ್ದಾರೆ ಎಂಬುದನ್ನು ಕೊಂಚಮಟ್ಟಿಗೆ ಹೇಳಬಯಸುತ್ತೇನೆ. ರಾಜ್ಯಾಂಗ ಕೆಲವು ಮೂಲಭೂತ ಹಕ್ಕುಗಳನ್ನು ನಮಗೆ ಕೊಟ್ಟಿದೆ. ಅದೇ ರೀತಿಯಲ್ಲಿ ರಾಜ್ಯಾಂಗದಲ್ಲಿ ರಾಜ್ಯ ನೀತಿ ನಿರ್ದೇಶಕ ತತ್ವ ಅಡಕವಾಗಿದೆ. ಈ ಹಕ್ಕು ಇಲ್ಲದೇಹೋದರೆ ಸಾಮಾನ್ಯ ರಾಜ್ಯ ನೀತಿ ತತ್ವವನ್ನು ನಮ್ಮದು ಮಾಡಿಕೊಂಡು ಅದನ್ನು ಜಾರಿಗೆ ತರತಕ್ಕ ಪ್ರಯತ್ನ ಮಾಡಬೇಕು. ಭೂಕಂದಾಯ 30 ವರ್ಷಕ್ಕೆ ಒಂದು ಸಲ ಪುನರ್‌ವ್ಯವಸ್ಥೆ ಮಾಡಬೇಕು ಎನ್ನತಕ್ಕಂಥ ಜನ ಈ ಬಗ್ಗೆ ಕೊಂಚ ಮನಸ್ಸು ಏಕೆ ಹರಿಸಬಾರದು ! ರಾಜ್ಯದ ಸಂಪತ್ತು ಉತ್ಪತ್ತಿ ಕೇಂದ್ರೀಕೃತವಾದಾಗ್ಗೆ ಆರ್ಥಿಕ ವ್ಯವಸ್ಥೆಯ ಮೇಲೆ ಪರಿಣಾಮವುಂಟಾಗುವುದು. ಈ ದಿವಸ ನಮ್ಮ ದೇಶದಲ್ಲಿ ಸಮತಾವಾದ ಕಾರ್ಯರೂಪಕ್ಕೆ ತರಲು ಎಲ್ಲ ರಾಜಕೀಯ ಪಕ್ಷಗಳು ಪ್ರಯತ್ನಪಡುತ್ತಿವೆ.

Sri C. J. MUCKANNAPPA.—I rise to a point of order. There is no Government. There is no Minister. This is a very important matter.

Sri GANJI VEERAPPA (Harihar).—The Parliamentary Secretary is there.

Sri C. J. MUCKANNAPPA.—Parliamentary Secretary cannot form the Government. This is a constitutional issue and the Speaker has to look into it.

(At this stage Sri K. Puttaswamy, Minister for Municipal Administration who was sitting somewhere in a back bench came to his seat).

I am Sorry, Sir, that point is gone because the Minister for Municipal Administration has just come to his seat. I did not know where he was

(SRI C. J. MUCKANNAPPA)

sitting. This is a very serious matter. You were pleased to observe some time back that Ministers must be present. Ignoring your directive the Ministers are going and sitting anywhere they like. I think they should obey the direction of the speaker.

Mr. DEPUTY SPEAKER.—The Revenue Minister also was just now here.

Sri C. J. MUCKANNAPPA.—I am making an earnest appeal to the Speaker to see that at least one Minister is there. There are 27 and at least one of them should be present.

Sri K. PUTTASWAMY (Minister for Municipal Administration).—When he says that there is no Minister in the House, let him at least keep in mind my presence in the House.

Sri C. J. MUCKANNAPPA.—I would like to know the reaction of the Chair. I would like to have an assurance that the Chair will take care of this and see that some Minister is present.

Mr. DEPUTY SPEAKER.—There is no point of order just now.

Sri C. J. MUCKANNAPPA.—The Chair was pleased to put so many barriers on us when it came to the question of Sri Gopal Gowda. We feel that the Chair should look into this question also very seriously because in the absence of Ministers we feel that there is no Government here.

ಶ್ರೀ ಎಸ್. ಎಂ. ಕೃಷ್ಣ.—ನಮ್ಮ ಸಂವಿಧಾನದಲ್ಲಿ ರಾಜನೀತಿ ನಿರ್ದೇಶಕ ತತ್ವ ಏನಿದೆ ಎಂದರೆ, ಹತ್ತು ವರ್ಷ ಅವಧಿಯಲ್ಲಿ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಚಿತ ಕಡ್ಡಾಯ ಶಿಕ್ಷಣ ಕೊಡಬೇಕೆಂದು ಭರವಸೆ ಇತ್ತಿದೆ. ಇದರಲ್ಲಿ ನಾವು ಎಷ್ಟರ ಮಟ್ಟಿಗೆ ಪ್ರಗತಿ ಸಾಧಿಸಿದ್ದೇವೆ ಎನ್ನುವುದನ್ನು ನೋಡಬೇಕು. ಸುಮ್ಮನೆ ಕುರುಡು ಅಂಧಶ್ರದ್ಧೆಯಿಂದ 30 ವರ್ಷಕ್ಕೊಮ್ಮೆ ಕಂದಾಯ ಪುನರ್ ವ್ಯವಸ್ಥೆಯಾಗಲೇ ಬೇಕು ಎಂದು ಹೊರಟು ವೊಂಡು ವಾದ ಮಾಡಿದರೆ ಯಾರಿಗೂ ಉಪಕಾರವಾಗುವುದಿಲ್ಲ, ಇದರಿಂದ ಪ್ರಯೋಜನವಾಗುವುದಿಲ್ಲ. ಸೆಟ್ಲ್‌ಮೆಂಟ್ ರಿಪೋರ್ಟನ್ನು ಬಹಳ ಶ್ರಮ ವಹಿಸಿ ಅಧಿಕಾರಿಗಳು ವರದಿ ತಯಾರಿಸಿದ್ದಾರೆಂದು ಶ್ರೀ ಸುಬ್ಬಯ್ಯ ನಾಯಕ್ ಅವರು ಹೇಳಿದರು. ನಾನು ವರದಿ ಓದಿದ್ದೇನೆ. ಈ ವರದಿಯಲ್ಲಿ ಪುರಾಣ ಜಾಸ್ತಿ ಇದೆ. ಸ್ಥಳ ಪುರಾಣದ ಜೊತೆಯಲ್ಲಿ ಪಶು ಸಂಗೋಪನೆ ಇಲಾಖೆ, ವ್ಯವಸಾಯ ಇಲಾಖೆ, ಸ್ಟ್ಯಾಟಿಸ್ಟಿಕಲ್ ಇಲಾಖೆ, ವ್ಯವಸಾಯ ಇಲಾಖೆಯವರು ಕೊಟ್ಟಿರತಕ್ಕಂಥ ಅಂಕಿಅಂಶಗಳನ್ನು ಜೋಡಿಸಿ ಅದನ್ನು ಅಚ್ಚು ಹಾಕಿಸಿ ಈ ವರದಿ ತಯಾರ್ಮಾಡಿದ್ದಾರೆ. ಈ ವರದಿಯಲ್ಲಿ ನಮೂದು ಆಗಿರತಕ್ಕಂಥ ಬೆಳೆಗಳನ್ನು ನಮ್ಮ ರಾಜ್ಯದಲ್ಲಿ ರೈತ ಬೆಳೆಯುತ್ತಾನೆಯೇ ! ಒಂದು ಎಕರೆ ಜಮೀನಿನಲ್ಲಿ 5 ಪಲ್ಲಾ ರಾಗಿ ಬೆಳೆಯುತ್ತದೆ ಎಂದು ಅಧಿಕಾರಿಗಳು ಈ ರಿಪೋರ್ಟ್‌ನಲ್ಲಿ ಸೇರಿಸಿದ್ದಾರೆ

ಅಷ್ಟು ಲೆಕ್ಕ ಹಾಕಿ ನೋಡಿ ಬರೆದಿದ್ದರೆ ಈ ರಾಜ್ಯದಲ್ಲಿ ಜತ್ತಿಯವರು ಬಡ್ಜೆಟ್ ಭಾಷಣದಲ್ಲಿ ಎಷ್ಟು ಲಕ್ಷ ಟನ್ ಆಹಾರ ಉತ್ಪನ್ನ ಆಯಿತು ಎಂದು ಹೇಳಿದರೋ ಅದಕ್ಕೆ ಒಂದೂವರೆಯಷ್ಟು ಜಾಸ್ತಿಯಾಗಬೇಕಾಗಿತ್ತು. ಇದೇ ಸೂಚಿಸುತ್ತದೆ ಈ ವರದಿ ವಾಸ್ತವಿಕ ಸಂಗತಿಗಳ ಬುನಾದಿಯ ಮೇಲೆ ನಿಂತಿಲ್ಲ, ಇದು ಉತ್ಪ್ರೇಕ್ಷಿತವಾದದ್ದು ಮತ್ತು ಕೆಲವು ಭ್ರಾಂತಿಯಿಂದ ಕೂಡಿರತಕ್ಕ ವರದಿ ಎಂದು ಅರ್ಥವಾಗುತ್ತದೆ. ಅದರಲ್ಲೂ ನಮ್ಮ ವ್ಯವಸಾಯದ ಇಲಾಖೆಯಲ್ಲಿ ಮತ್ತು ಅಂಕಿಅಂಶಗಳ ಇಲಾಖೆಯಲ್ಲಿ ದೊರೆಯತಕ್ಕ ಅಂಕಿಅಂಶಗಳ ವೈಖರಿಯನ್ನು ಎಷ್ಟು ಬಣ್ಣಿಸಿದರೂ ಸಾಲದು, ಕರಾರುವಕ್ಕಾದ ಮತ್ತು ರೂಢವಾದ ಅಂಕಿಗಳು ಈ ಇಲಾಖೆಗಳಲ್ಲಿ ಸಿಕ್ಕುವುದಕ್ಕೆ ಸಾಧ್ಯವೇ ಇಲ್ಲ. ನಮ್ಮ ಮೈಸೂರು ರಾಜ್ಯದ ಅಂಕಿಅಂಶಗಳ ಇಲಾಖೆಗೆ ಗೆದ್ದಲು ಹಿಡಿದಿದೆ, ಅಂಕಿಅಂಶಗಳ ಹೊರತು ಬಾಕಿ ಎಲ್ಲಾ ವಿಚಾರಗಳೂ ಸಿಕ್ಕುತ್ತವೆ, ಅಲ್ಲಿ ಇಟ್ಟಿರತಕ್ಕ ಕೆಲವು ಪುಸ್ತಕಗಳನ್ನು ನಾನು ಬಲ್ಲೆ. ಆದ್ದರಿಂದ ಅಂತಹ ಇಲಾಖೆಗಳ ವರದಿಯ ಮೇಲೆ ಅಂತಹ ಇಲಾಖೆಗಳು ಕೊಟ್ಟಿರತಕ್ಕ ಅಂಕಿಅಂಶಗಳ ಆಧಾರದ ಮೇಲೆ

ಹೊರಟಿರತಕ್ಕ ಈ ವರದಿ ಎಷ್ಟರಮಟ್ಟಿಗೆ ಆಧಾರಯುತವಾದುದು, ಈ ವರದಿಯನ್ನು ಎಷ್ಟು ಶಾಸ್ತ್ರೋಕ್ತವಾಗಿ ತಯಾರು ಮಾಡಿದ್ದಾರೆ ಎನ್ನುವುದರಲ್ಲಿ ಸಾಕಾದಷ್ಟು ಪ್ರಬಲವಾದ ಅಪನಂಬಿಕೆ, ಪ್ರಬಲವಾದ ಅನುಮಾನ ನನಗೆ ಉಂಟಾಗಿದೆ ಎಂದು ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಯಾವ ಗ್ರೂಪ್‌ನಲ್ಲಿ 5 ಪಲ್ಲಾ ರಾಗಿ ಆಗುತ್ತದೆ ಎಂದು ಹೇಳಿದ್ದಾರೆ?

ಶ್ರೀ ಎಸ್. ಎಂ. ಕೃಷ್ಣ.—ಕೋಲಾರ ಜಿಲ್ಲೆಯಲ್ಲಿ ಬರೆದಿದ್ದಾರೆ, ಮಂಡ್ಯಜಿಲ್ಲೆಯಲ್ಲೂ ಬರೆದಿದ್ದಾರೆ. ಕೋಲಾರ ಜಿಲ್ಲೆಯಲ್ಲೇ ನಿಮ್ಮ ಅಧಿಕಾರಿಗಳು 5 ಪಲ್ಲಾ ಬೆಳೆಸಿದರೆ ಇನ್ನು ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಬೆಳೆಸುತ್ತಾರೆ? ಏಕೆಂದರೆ, ಮಂಡ್ಯದಲ್ಲಿ ಸಾಂದ್ರ ವ್ಯವಸಾಯ ಪದ್ಧತಿಯ ಮೇಲೆ ಬಹಳ ವೈಭವದಿಂದ ಬೆಳೆಸುತ್ತಾ ಇದ್ದೀರಿ. ಸ್ವಾಮಿ, ನಮ್ಮ ರಾಜ್ಯದಲ್ಲಿ ಸರ್ಕಾರದವರು ಕೆಲವು ಫಾರಂಗಳನ್ನು ನಡೆಸುತ್ತಾ ಇದ್ದಾರೆ. ಅಗ್ರಿಕಲ್ಚರಲ್ ಸ್ಕೂಲ್ಸ್, ಫಾರಂಸ್ ಇವೆ. ಈ ಸಭೆಯ 208 ಜನ ಸದಸ್ಯರಲ್ಲಿ ಯಾರಾದರೂ ಬರಲಿ ನಮ್ಮ ಮದ್ದೂರು ತಾಲ್ಲೂಕಿನ ಸೋಮನ ಹಳ್ಳಿಯಲ್ಲಿ ಒಂದು ಫಾರಂ ಇದೆ. ನೀವು ಮಾಡಿದ ರೀತಿಯಲ್ಲಿ ಒಕ್ಕಲಿಗರು ವ್ಯವಸಾಯ ಮಾಡಿದರೆ, ನೀವು ಹಾಕಿಕೊಟ್ಟಂಥ ಮೇಲ್‌ಪಂಕ್ತಿಯಲ್ಲಿ ದುರದೃಷ್ಟವಶಾತ್ ರೈತರು ಹೋಗುವುದಕ್ಕೆ ಪ್ರಾರಂಭ ಮಾಡಿದರೆ ಈ ದೇಶ ಖಂಡಿತವಾಗಿಯೂ ಕೂಡ ಅಧೋಗತಿಯ ದಾರಿಹಿಡಿಯುತ್ತದೆ. ಎಕರೆ ಒಂದಕ್ಕೆ ಒಂದು ಪಲ್ಲಾ ಕೂಡ ಸೋಮನ ಹಳ್ಳಿ ಫಾರಂನಲ್ಲಿ ಬೆಳೆಯುವುದಕ್ಕೆ ಸಾಧ್ಯವಾಗಲಿಲ್ಲ. ನೀವು ಈ ರಾಜ್ಯದಲ್ಲಿ ರೈತರು ಹೆಚ್ಚು ಬೆಳೆ ಬೆಳೆಯಿರಿ ಎಂದು ಹೇಳಿ ಉದ್ದವಾದ ಭಾಷಣಗಳನ್ನು ಮಾಡುತ್ತೀರಿ. ಈ ರಾಜ್ಯದ ಯಾವ ಒಂದು ಅಗ್ರಿಕಲ್ಚರಲ್ ಫಾರಂನಲ್ಲೂಕೂಡ ಅದು ರೈತರಿಗೆ ನಂಬಿಕೆಯನ್ನು ತಂದು ಕೊಡತಕ್ಕ ಮಾರ್ಗದರ್ಶನ ಕಾರ್ಯ ಆಗುತ್ತಾ ಇಲ್ಲ. ಅದೆಲ್ಲವೂ ಕೂಡ ರೈತಾಪಿ ಜನರನ್ನು ನಿರಾಶೆಯಲ್ಲಿ ಮುಳುಗಿಸುತ್ತಾ ಇವೆ. ಆದರಿಂದ ರೈತರು ಎಷ್ಟು ಬೆಳೆಯನ್ನು ಪಡೆಯುತ್ತಾರೆ ಎನ್ನುವುದನ್ನು ನೀವು ತೂಕಮಾಡುವುದಕ್ಕೆ ಹೊರಡುವುದಕ್ಕೆ ಮುನ್ನ ನಿಮ್ಮ ಸರ್ಕಾರಿ ಫಾರಂಗಳಲ್ಲಿ ಎಷ್ಟು ಬೆಳೆದಿದ್ದಾರೆ ಎಂಬುದನ್ನು ಮೊದಲು ತೂಕಮಾಡಿ ಅನಂತರ ರೈತಾಪಿ ಜನರು ಎಷ್ಟು ಬೆಳೆಯುತ್ತಾರೆ ಎಂಬುದನ್ನು ತೂಕಮಾಡತಕ್ಕ ಗೋಜಿಗೆ ಹೋಗುವಿರಂತೆ, ಎಂದು ಹೇಳಲು ಇಷ್ಟಪಡುತ್ತೇನೆ. ಈ ದೇಶದಲ್ಲಿ ನಮ್ಮ ಜನ ಈ ದಿವಸ ಪಡುತ್ತಾ ಇರತಕ್ಕ ಸಂಕಷ್ಟವನ್ನು ಅರ್ಥ ಮಾಡಿಕೊಳ್ಳಬೇಕು. ನೀವು ಈ ದೇಶದಲ್ಲಿ ಜನಗಳಿಗೆ ಬೇಕಾದಂಥ ಅವಶ್ಯಕ ಪದಾರ್ಥಗಳ ಬೆಲೆಯನ್ನು ಹತೋಟಿಯಲ್ಲಿ ಇಡುವುದಕ್ಕೆ ನಿಮ್ಮ ಕೈಯಲ್ಲಿ ಶಕ್ಯವಿಲ್ಲ. ದಿನ ದಿನಕ್ಕೆ ಎಲ್ಲಾ ಧಾರಣವಾಸಿಗಳೂ ಕೂಡ ಗಗನಕ್ಕೆ ಮುಟ್ಟುತ್ತಾ ಇವೆ. ಜೊತೆಗೆ ರೈತಾಪಿ ಜನ ನೆಮ್ಮದಿಯಾಗಿ ಜೀವನ ನಡೆಸುವುದಕ್ಕಂತೂ ಸಾಧ್ಯವೇ ಇಲ್ಲ, ಈ ದಿವಸ ಅವರು ಬೇಕಾದಷ್ಟು ಸೆಸ್ಸುಗಳನ್ನು ಸರ್ಕಾರಕ್ಕೆ ಕೊಡಬೇಕಾಗಿದೆ. ಮತ್ತು ಈ ದಿವಸ ಅವರು ಭೂಮಿಯಲ್ಲಿ ಪಡೆಯತಕ್ಕಂಥ ಹಣದಿಂದ ಅವರ ಜೀವನವನ್ನು ಸಾಗಿಸುವುದಕ್ಕೆ ದುಸ್ತರವಾಗಿರತಕ್ಕ ಈ ಸಂದರ್ಭದಲ್ಲಿ ನೀವು ಈ ದಿವಸ ಬೆಂಕಿಯೊಡನೆ ಸರಸವಾಡುವಂತೆ ಭೂಕಂದಾಯವನ್ನು ಪುನರ್ವಿಮರ್ಶೆ ಮಾಡತಕ್ಕ ಧೈರ್ಯವನ್ನು ಸಾಹಸವನ್ನು ಪಡೆದುಕೊಂಡಿದ್ದೀರಿ. ಈ ದಿವಸ ಇನ್ನೇನು ಆಗದಿದ್ದರೂ ಮೈಸೂರು ರಾಜ್ಯದ ರೈತಾಪಿ ಜನರಿಗೂ ನಿಮಗೂ ಪ್ರಣಯ ಇದುವರೆಗೂ ಏನು ನಡೆದಿತ್ತೋ ಅದು ಈ ದಿವಸ ವಿಚ್ಛೇದನವಾಗಬೇಕಾಗಿದೆ. ಇವತ್ತು ನಮ್ಮ ರಾಜ್ಯವನ್ನು ನಿಮ್ಮ ಕೈಗೆ ಕೊಟ್ಟಿರುವುದು, ಕರಡಿಯ ಕೈಯಲ್ಲಿ ಮುದ್ದಾಡಿಸಿಕೊಂಡಂತಾಗಿದೆ. ಅದಕ್ಕಿಂತ ಕಡಿಮೆ ಏನೂ ಅಲ್ಲ. ಎಷ್ಟು ಹಿಂಸೆ ಕೊಡಬಹುದೋ ಅಷ್ಟು ತರಹವಾದ ಹಿಂಸೆಗಳನ್ನು ರೈತರಿಗೆ ಕೊಡುತ್ತಾ ಇದ್ದೀರಿ. ಇನ್ನಾದರೂ ಎಚ್ಚೆತ್ತುಕೊಳ್ಳದಿದ್ದರೆ ಈ ದೇಶದಲ್ಲಿ ಕ್ರಾಂತಿಯಾಗುತ್ತದೆ ಎಂದು ಹಿಂದೆ ಕೆಲವು ಸಾರಿ ಹೇಳಿದ್ದೇನೆ, ಈಗಲೂ ಹೇಳುತ್ತಾ ಇದ್ದೇನೆ. ಶ್ರೀಮಾನ್ ಕೆ. ಟಿ. ಭಾಷ್ಯಂ ಅವರು ಹಿಂದೆ 1947ರಲ್ಲಿ ಹೇಳುತ್ತಾ ಇದ್ದುದು ನನಗೆ ಜ್ಞಾಪಕ ಇದೆ, ಈ ಸಾರಿ ಕಾಂಗ್ರೆಸ್ ಉಡಾಫೆ ಮಾಡುತ್ತಾ ಇಲ್ಲ ಸತ್ಯಾಗ್ರಹ ಮಾಡುತ್ತೇವೆ ಎಂದು ಆಗಿನ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟರು. ಇವತ್ತು ಅದೇ ಮಾತನ್ನು ನಾನು ಪುನರುಚ್ಚಾರ ಮಾಡಬೇಕಾಗಿದೆ. ಈ ವರದಿಯನ್ನು ನೀವು ಅಂಗೀಕಾರ ಮಾಡಿದರೆ ಈ ದೇಶದಲ್ಲಿ ದೊಡ್ಡ ಆಂದೋಳನ ನಡೆಯುತ್ತದೆ, ಜನ ಕರನಿರಾಕರಣೆಯ ಚಳುವಳಿಯನ್ನು ಮಾಡಬೇಕಾಗುತ್ತದೆ ಮತ್ತು ದೇಶದಲ್ಲಿ ಶಾಂತಿಯಂತೂ ಖಂಡಿತವಾಗಿಯೂ ನೆಲೆಸುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಮತ್ತು ಇದರ ಬಗ್ಗೆ ನೀವು ಚಿಂತೆ ಮಾಡಬೇಕು. ಈ ದಿವಸ ಜನ ಅವರ ಭವಿಷ್ಯವನ್ನು ನಿಮ್ಮ ಕೈಗೆ ಕೊಟ್ಟಿರುವಾಗ ಅವರ ಭವಿಷ್ಯದೊಡನೆ ಸರಸವಾಡುವ ಧೈರ್ಯವನ್ನು ನೀವು ಮಾಡಿದ್ದೀರಿ; ಹುಚ್ಚು ಸಾಹಸ ಇದು, ಈ ಧೈರ್ಯ ಬಹಳ ಕಾಲ ನಿಲ್ಲುವುದಿಲ್ಲ. ನೀವು ಜನಗಳ ಪ್ರತಿನಿಧಿಗಳಾಗಿರತಕ್ಕವರು, ಈ ದಿವಸ ನಿಮ್ಮ ಕಡೆಯವರೇ ಕೆಲವು ಜನ ಈ ವರದಿಯನ್ನು ಪೂರ್ಣವಾಗಿ ವಿರೋಧಿಸಿದ್ದಾರೆ, ಅವರನ್ನು ದೇಶದ ಜನರ ಹೆಸರಿನ ಮೇಲೆ ಅಭಿನಂದಿಸುತ್ತೇನೆ. ಮತ್ತು ಅವರು ಈ ದಿವಸ ಈ ವರದಿಯನ್ನು ವಿರೋಧಿಸುವುದರಲ್ಲಿ ಏನೊಂದು ನಿಷ್ಠೆಯನ್ನು ತೋರಿಸಿದ್ದಾರೆ ಆ ಜನಗಳ ಬಗ್ಗೆ, ರೈತರ ಬಗ್ಗೆ, ಒಕ್ಕಲಿಗರ ಬಗ್ಗೆ, ಅದೇ ನಿಷ್ಠೆಯನ್ನು ಕೊನೆಯವರೆಗೂ ಕೂಡ

(ಶ್ರೀ ಎಸ್. ಎಂ. ಕೃಷ್ಣ)

ಉಳಿಸಿಕೊಳ್ಳದಿದ್ದರೆ ಅವರು ತತ್ವ ಭ್ರಷ್ಟರಾಗುತ್ತಾರೆ. ನಿಷ್ಟರಾಗುವುದಿಲ್ಲ ಎಂಬ ಮಾತನ್ನು ಈ ದಿವಸ ಹೇಳಬೇಕಾಗಿದೆ. ಮೈಸೂರು ಮಂತ್ರಿಮಂಡಲ ಏನಿದೆ, ಈ ದಿವಸ ನಮ್ಮನ್ನು ಆಳ್ವಾಡಿಸುವ ವರೇ ಇಲ್ಲ 1967ರವರೆಗೂ ಇದು ನಮಗೆ ಕೊಟ್ಟಿರತಕ್ಕ ಖಾಯಂ ಪಟ್ಟ ಎನ್ನತಕ್ಕ ಭ್ರಾಂತಿಯಲ್ಲಿ ಕೆಲವು ಜನ ಈ ದಿವಸ ಇದ್ದೀರಿ ಎಂಬುದನ್ನು ನಾನು ಮರೆಯಲಾರೆ, ಆದರೆ ಈ ಭ್ರಾಂತಿ ಬಹಳ ದಿವಸ ಉಳಿಯುವುದಿಲ್ಲ. ಎಷ್ಟೋ ಜನ ಚಕ್ರವರ್ತಿಗಳು ಬಂದರು ಹೋದರು, ಎಷ್ಟೋ ಜನ ಮಂತ್ರಿಗಳು ಬಂದರು ಹೋದರು ಅವರ ಹೆಸರುಗಳೆಲ್ಲಾ ಚರಿತ್ರೆಯಲ್ಲಿ ದಾಖಲಾಗಿದೆ. ಆದ್ದರಿಂದ ಈ ದಿವಸ ನೀವು ಏನು ಇದು ನಿಮ್ಮದೇ ರಾಜ್ಯ ಎಂದು ಅಂದುಕೊಂಡಿದ್ದೀರಿ ಈ ನಿಮ್ಮದೇ ಆದ ರಾಜ್ಯದಲ್ಲಿ ಜನ ಇನ್ನು ಬಹಳಕಾಲ ಸುಮ್ಮನೆ ಇರುವುದಿಲ್ಲ ಎನ್ನುವುದನ್ನು ನೀವು ಯೋಚನೆ ಮಾಡಬೇಕು. ನಿಮಗೆ ಹೇಳುತ್ತಾ ಇದ್ದೇನೆ-ಪ್ರಾರ್ಥನೆ ಮಾಡುತ್ತಾ ಇಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಪ್ರಾರ್ಥನೆಮಾಡಿ ಎಂದು ಯಾರು ಹೇಳಿದ್ದರು ?

ಶ್ರೀ ಎಸ್. ಎಂ. ಕೃಷ್ಣ.—ಇಷ್ಟು ದಿವಸ ಪ್ರಾರ್ಥನೆ ಮಾಡುತ್ತಾ ಇದ್ದೆವು, ಇನ್ನುಮೇಲೆ ಪ್ರಾರ್ಥನೆ ಮಾಡತಕ್ಕ ಹವ್ಯಾಸವನ್ನು ಬಿಟ್ಟಿದ್ದೇವೆ. ಪ್ರಾರ್ಥನೆ ಮಾಡಿ ಎಂದು ಯಾರೂ ಹೇಳಲಿಲ್ಲ, ಆದರೂ ಕೂಡ ಸೌಜನ್ಯಕ್ಕಾಗಿ ಪ್ರಾರ್ಥನೆ ಮಾಡುತ್ತಾ ಇದ್ದೇವೆ, ವಿನಯದಿಂದ ಹೇಳುತ್ತಾ ಇದ್ದೇವೆ, ಕಳಕಳಿಯಿಂದ ಕೇಳುತ್ತಾ ಇದ್ದೇವೆ ಎಂದು ಹೇಳುತ್ತಾ ಇದ್ದೆವು. ಇನ್ನು ಮೇಲೆ ಆ ವಿನಯ, ಕಳಕಳಿ ಎಲ್ಲವನ್ನೂ ಬಿಟ್ಟಿದ್ದೇವೆ, ನಾವು ಮಾಡತಕ್ಕದ್ದು ಆಗ್ರಹ ಪೂರ್ವಕ ಒತ್ತಾಯ. ಜನತೆಯ ಹೆಸರಿನಲ್ಲಿ ರಾಜ್ಯಭಾರ ಮಾಡತಕ್ಕ ಈ ಸರ್ಕಾರ ಮಣಿಯಲೇ ಬೇಕು ಇಲ್ಲದೇ ಹೋದರೆ ಈ ಸರ್ಕಾರ ತೊಲಗಬೇಕು ಎನ್ನತಕ್ಕ ಮಾತಿನಿಂದ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಪಿ. ಬಿ. ಬೊಮ್ಮಣ್ಣ (ಅರಸೀಕೆರೆ).—ಸಭಾಪತಿಗಳೇ, ಈ ದಿವಸ ನಮ್ಮ ಮುಂದೆ ಇಟ್ಟಿರುವ ಭೂಕಂದಾಯದ ಪುನರ್ವಿಮರ್ಶೆಯ ನಿರ್ಣಯದ ಬಗ್ಗೆ ಅಂಕಿಅಂಶಗಳನ್ನು ಪರಿಶೀಲನೆ ಮಾಡುವುದಕ್ಕಾಗಿ ಇದನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದರಲ್ಲಿ ಎಲ್ಲಾ ವಿಧವಾದ ಅಂಕಿಅಂಶಗಳನ್ನೂ ಕೊಟ್ಟಿದ್ದಾರೆ ಆದರೆ ಬಹಳ ಮುಖ್ಯವಾದಂಥ ಅಂಕಿಅಂಶಗಳನ್ನು ಕೊಟ್ಟಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ವಿಷಾದಿಸುತ್ತೇನೆ. ಅದೇನೆಂದರೆ, ಎಲ್ಲಾ ಕಸಬುಗಳನ್ನು ಮಾಡತಕ್ಕ ಜನರು ಈ 16 ವರ್ಷದಿಂದ ಎಷ್ಟು ಮಟ್ಟಿಗೆ ಅವರ ಮಟ್ಟವನ್ನು ಹೆಚ್ಚಿಸಿಕೊಂಡಿದ್ದಾರೆ ಮತ್ತು ರೈತ ಎಷ್ಟು ಮಟ್ಟಿಗೆ ತನ್ನ ಮಟ್ಟವನ್ನು ಹೆಚ್ಚಿಸಿಕೊಂಡಿದ್ದಾನೆ ಎನ್ನತಕ್ಕ ಅಂಕಿಅಂಶವನ್ನು ಹೇಳಿದ್ದರೆ ಬಹಳ ಚೆನ್ನಾಗಿತ್ತು. ಹಳ್ಳಿಯಲ್ಲಿ ರೈತ ವಾಸಮಾಡತಕ್ಕ ಮನೆ ಯಾವ ರೀತಿಯಲ್ಲಿ ಇದೆ, ಸಿಮೆಂಟಿನ ಉಪಯೋಗ ಮಾಡಿಕೊಂಡು ಮನೆಯನ್ನು ಕಟ್ಟಿಕೊಂಡಿದ್ದಾನೆಯೇ ಅಥವಾ ಸೋರುತ್ತಾ ಇರುವಂತಹ ಮನೆಯಲ್ಲಿ ವಾಸವಾಗಿದ್ದಾನೆಯೇ ಇದರ ಅಂಕಿಅಂಶಗಳೇನು ಎಂಬುದನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಹಳ್ಳಿಗಳಲ್ಲಿ ಯಾವ ರೈತರು ವ್ಯವಸಾಯದ ಕಸಬಿನ ಜೊತೆಗೆ ಬೇರೆ ಕಸಬುಗಳನ್ನಿಟ್ಟುಕೊಂಡಿದ್ದಾರೋ ಅವರು ಒಳ್ಳೆಯ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಅಂಥವರು ಒಂದು ಅಂತಸ್ತು ಜಾಸ್ತಿ ಮಾಡಿಕೊಂಡಿದ್ದಾರೆಯೇ ಹೊರತು ಪೂರ್ಣವಾಗಿ ರೈತಾಪಿ ಕಸಬಿನಲ್ಲೇ ಇರುವವರು ಯಾರೂ ಕೂಡ ಜೀವನಮಟ್ಟವನ್ನು ಹೆಚ್ಚಿಸಿಕೊಂಡಿಲ್ಲ, ಆದುದರಿಂದ ಕಂದಾಯವನ್ನು ಪುನರ್ವಿಮರ್ಶೆ ಮಾಡುವಾಗ ಇಷ್ಟೇ ಹಾಕಬೇಕೆಂದು ನಾನು ಒತ್ತಾಯ ಮಾಡುತ್ತಿಲ್ಲ, ನಾನು ಸಲಹೆ ಕೊಡಬಹುದು. ಹಾಗೆ ಮಾಡುವಾಗ ನನ್ನ ಜೋನಿಗೆ ಸಂಬಂಧಪಟ್ಟ ತಿಪಟೂರು, ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ, ತುರುವೇಕೆರೆ ಮುಂತಾದುವುಗಳ ವಿಚಾರದಲ್ಲಿ ಸ್ವಲ್ಪ ವಿಷಯವನ್ನು ಹೇಳುತ್ತೇನೆ. ನನ್ನ ಜೋನಿನಲ್ಲಿ ತೆಂಗಿನ ತೋಟಗಳಿವೆ, ತೆಂಗಿನ ಮರವನ್ನು ಕಲ್ಪವೃಕ್ಷವೆಂದು ಕರೆಯುತ್ತಾರೆ. ಗುರುಲಿಂಗಪ್ಪನವರು ಕವಿಯಾಗಿ ಅದನ್ನು ವರ್ಣಿಸಿದ್ದಾರೆ. ತೆಂಗಿನಗಿಡದ ಸಮಾನ ಯಾವುದೂ ಇಲ್ಲವೆಂದು ಸೆಟ್ಲ್‌ಮೆಂಟ್ ಆಫೀಸರು ನಮ್ಮ ಜೋನಿನ ವರದಿಯಲ್ಲಿ ಬರೆದಿದ್ದಾರೆ. ಆದರೆ ರಾಗಿ ಬೆಳೆಯಲ್ಲಿ ಬರುವಷ್ಟು ಉತ್ಪತ್ತಿ ತೆಂಗಿನ ಬೆಳೆಯಲ್ಲಿ ಬರುವುದಿಲ್ಲ. ರಾಗಿ ಎಕರೆಗೆ 3–4 ಪಲ್ಲ ಬೆಳೆಯಬಹುದು, ಅದಕ್ಕೆ 300 ರಿಂದ 400 ರೂಪಾಯಿಗಳ ಬೆಲೆ ಇದೆ. ಅದಕ್ಕೆ ಖರ್ಚು ಜಾಸ್ತಿ. ಎಕರೆಗೆ 40 ತೆಂಗಿನಗಿಡಗಳನ್ನು ಹಾಕುತ್ತಾರೆ, ಅದರಲ್ಲಿ ನೂರು ಕಾಯಿಗಳಿಲ್ಲದಿರುವ ಗಿಡಗಳೂ ಇರುತ್ತವೆ. ಒಂದು ಎಕರೆಯಲ್ಲಿ ಬೆಳೆಯುವ ತೆಂಗಿನ ಗಿಡಗಳಿಂದ 200 ರೂಪಾಯಿಗಳ ಉತ್ಪತ್ತಿ ಇದೆ. ತೆಂಗಿನ ಗಿಡ ಹಾಕಿದರೆ ಅದರ ಫಲಕ್ಕಾಗಿ 10 ವರ್ಷ ಕಾಯಬೇಕು. ಒಳ್ಳೆಯ ಬೀಜ ಹಾಕಿದರೆ ಒಳ್ಳೆಯ ಫಲ ಬರುತ್ತದೆ ; ಇಲ್ಲದಿದ್ದರೆ ನಿರಾಶೆಯಾಗುತ್ತದೆ. ಕಳ್ಳರ ಕಾಟ ಬೇರೆ. ಇದರಿಂದ ಜೀವನ ನಡೆಯುವುದಿಲ್ಲ. ವರ್ಷೇವರ್ಷೆ ಒಂದು ಎಕರೆಗೆ 200 ರೂಪಾಯಿಗಳಾದರೂ ಖರ್ಚುಮಾಡಬೇಕು. ಹಾಗೆ ಮಾಡಿದ ಮೇಲೆ ಮಾರನೆಯ

ವರ್ಷ ಮಳೆ ಬಂದರೆ ತಕ್ಕ ಪ್ರತಿಫಲ ದೊರೆಯುತ್ತದೆ. ಮಳೆ ಬಾರದಿದ್ದರೆ ಸಾಕವಿಲ್ಲದಂತಾಗುತ್ತದೆ. ಮತ್ತು ಉತ್ಪತ್ತಿಯೂ ಕಡಮೆಯಾಗುತ್ತದೆ. ಸಾಮಾನ್ಯವಾಗಿ ತೆಂಗಿನ ತೋಟದಲ್ಲಿ ಬೆಳೆಯುವ ಗರಿ, ತೆಂಗಿನಮಟ್ಟೆ ಮುಂತಾದುವೆಲ್ಲಾ ಬಡವರ ಪಾಲಾಗುತ್ತದೆ. ಆದುದರಿಂದ ಫಲ ಒಂದೇ ಸಮನಾಗಿ ಸಾಕಷ್ಟು ಬಾರದೆ ತೊಂದರೆಯಾಗುತ್ತದೆ. ಅದಕ್ಕಾಗಿ ನಾನು ನಮ್ಮ ಜೋನಿನ ವಿಷಯದಲ್ಲಿ ಸಲಹೆ ಮಾಡುವುದು ಅಲ್ಲ ಬಾಗಾಯ್ತನ್ನು ಮೋಟ್ ಬಾಗಾಯ್ತು ಎಂದು ಪರಿಗಣಿಸಿ ಅದರಮೇಲೆ ಹೆಚ್ಚು ಕಂದಾಯ ಹಾಕಬೇಕೆಂದಿದ್ದಾರೆ. ನಮಗೆ ಒದಗಿಸಿರುವ ಅಂಕಿಅಂಶದ ಪ್ರಕಾರ ಕೆಲವು ಕಡೆ ಖುಷ್ಕಿಗೆ 73 ಪೈಸೆ ಇದ್ದ ಕಂದಾಯವನ್ನು 1-32ರ ವರೆಗೆ, ತರಿ ಕಂದಾಯ 2 ರೂಪಾಯಿ ಇದ್ದುದನ್ನು 35 ರೂಪಾಯಿಗೆ, ಬಾಗಾಯ್ತು ಕಂದಾಯ 1-12 ಇದ್ದುದನ್ನು 15-68ಕ್ಕೆ ಏರಿಸಿ ಇದರಿಂದ 3-4 ಕೋಟಿ ರೂಪಾಯಿಗಳ ಆದಾಯ ಬರುವಂತೆ ಮಾಡಿದ್ದಾರೆ. ಹೀಗೇಕೆ ಮಾಡಿದ್ದಾರೆಂದರೆ, ಹೀಗೆ ಹಣ ತೋರಿಸದಿದ್ದರೆ ಪ್ಲಾನಿಂಗ್ ಕಮಿಷನ್ ಸಹಾಯ ಮಾಡಲು ತೊಂದರೆಯಾಗುತ್ತದೆ. ಆದುದರಿಂದ ತೋರಿಸಿರಬೇಕು. ಯಾವ ಕಾರಣವೆಂದರೇ ಅಗಲ ಕಂದಾಯವನ್ನು ಒಂದಕ್ಕೆ 50 ರಷ್ಟು ಅಥವಾ 75 ರಷ್ಟು ಜಾಸ್ತಿಮಾಡಿದ್ದಾರೆ. ಒಂದಕ್ಕೆ ಎರಡರಷ್ಟಾದರೂ ಹೆಚ್ಚು ಮಾಡಿದರೆ ಅದೊಂದು ತರಹ. ಹಾಗೆ ಮಾಡಿ ಅದರಿಂದ ಬರುವ ಪ್ರತಿಫಲವನ್ನು ರೈತರಿಗಾಗಿಯೇ ಉಪಯೋಗಮಾಡಿ ರೈತರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಬೇಕೆಂದು ಸಲಹೆಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ್.—ಮಾನ್ಯ ಅಧ್ಯಕ್ಷರೇ, ಐದಾರು ವರ್ಷಗಳಿಂದ ರಾಜ್ಯದಲ್ಲಿರುವ ರೈತರಿಗೆ ಒಂದಲ್ಲ ಒಂದು ರೀತಿಯಿಂದ......

ಶ್ರೀ ಎ. ಎಂ. ದೇವ್.—ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ. ಎಲ್ಲಾ ಮಂತ್ರಿಗಳೂ ಸಭೆಯಲ್ಲಿ ಹಾಜರಿರಬೇಕೆಂದು ತಾವು ತಿಳಿಸಬೇಕು. ಇಲ್ಲದಿದ್ದರೆ ಒಬ್ಬರ ಮಾತನ್ನು ಇನ್ನೊಬ್ಬರು ಕೇಳದೆ ತೊಂದರೆಯಾಗುತ್ತದೆ.

ಉಪಾಧ್ಯಕ್ಷರು.—ಕ್ರಿಯಾಲೋಪವೇನೂ ಇಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಅತಿವೃಷ್ಟಿ, ಅನಾವೃಷ್ಟಿ, ನೆರೆ ಹಾವಳಿ ಮುಂತಾದವುಗಳಿಂದ ಪೀಕು ನಾಶವಾಗಿ 8-10 ವರ್ಷಗಳಿಂದ ರೈತರಿಗೆ ತೊಂದರೆಯಾಗಿರುವಾಗ ಮತ್ತು ವ್ಯವಸಾಯಕ್ಕಾಗಿ ಸಹಕಾರ ಸಂಘಗಳಿಂದ ಮತ್ತು ಸರಕಾರದಿಂದ ಸಾಲ ತಂದಿರುವುದನ್ನು ತೀರಿಸುವುದಕ್ಕೇ ಕಷ್ಟವಾಗಿರುವಾಗ ರೈತರ ಮೇಲೆ ಸರ್ವೆ ಸೆಟ್ಲ್‌ಮೆಂಟ್ ಮಾಡಿ ಹೆಚ್ಚು ಕಂದಾಯ ಹೇರುವುದು ಸರಿಯಲ್ಲ, ಆದುದರಿಂದ ಇದನ್ನು ವಿರೋಧಿಸುತ್ತಿದ್ದೇನೆ. ಈಗಾಗಲೇ ಹೇಳಿದಹಾಗೆ ಕೆಲವೊಂದು ಭಾಗಗಳಲ್ಲಿ ಸರ್ವೆ ಮತ್ತು ಸೆಟ್ಲ್‌ಮೆಂಟ್ ಮಾಡಿ ಆಫೀಸರುಗಳು ಸರಕಾರಕ್ಕೆ ಯಾವ ರೀತಿ ತಿಳಿವಳಿಕೆ ಕೊಟ್ಟಿದ್ದಾರೋ ಗೊತ್ತಿಲ್ಲ. ಏಕೆಂದರೆ ಒಂದೊಂದು ಭಾಗದಲ್ಲಿ ಒಂದೊಂದು ರೀತಿ ಮಾಡಿ ಶೇಕಡ ನೂರರಿಂದ ನಾನೂರರವರೆಗೆ ಮಿತಿಮೀರಿ ಕಂದಾಯ ಏರಿಸಿದ್ದಾರೆ. ಹಿಂದೆ 1954ರಲ್ಲಿ ಜಾನ್ ಮ್ಯಾಥಾಯ್ ರವರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಟ್ಯಾಕ್ಸೇಷನ್ ಕಮಿಷನ್ ಕೊಟ್ಟಿರುವ ವರದಿ ಪ್ರಕಾರ ಆದಷ್ಟುಮಟ್ಟಿಗೆ ಕಂದಾಯವನ್ನು ಸೇಕಡ ಇಪ್ಪತ್ತೆರಡೂವರೆಗಿಂತ ಜಾಸ್ತಿ ಹೆಚ್ಚಿಸಬಾರದು. ಆ ರೀತಿ ತಿಳಿಸಿದ್ದರೂ ಕೂಡ ಸೇಕಡ 70 ರಿಂದ 400-500 ರರವರೆಗೆ ಏರಿಸಲಿದ್ದಾರೆ. ಆಫೀಸರುಗಳು ನನಗೆ ತಿಳಿದಹಾಗೆ ತಾಲೂಕುಗಳಲ್ಲಿ ಯಾವ ರೀತಿ ಸರ್ವೆಮಾಡಿದ್ದಾರೆಂದರೆ ತಾಲ್ಲೂ ಕಾಫೀಸುಗಳಲ್ಲಿರುವ ಅಂಕಿ ಅಂಶಗಳನ್ನು ತೆಗೆದುಕೊಂಡು, ರೈತರ ಪರಿಸ್ಥಿತಿ ಯಾವ ರೀತಿ ಇದೆ, ಅವರ ಆದಾಯ ಎಷ್ಟಿದೆ, ಕಷ್ಟಸುಖವೇನು ಎಂದು ವಿಚಾರಮಾಡದೆ ತಮಗೆ ಮನಬಂದಹಾಗೆ ಅಂಕಿ ಅಂಶ ಸೂಚಿಸಿರುವಂತೆ ಕಾಣುತ್ತದೆ. ಧಾರವಾಡ ಜಿಲ್ಲೆಯಲ್ಲಿ ಬಹಳಮಟ್ಟಿಗೆ ಮುಂಡರ್ಗಿ ತಾಲ್ಲೂಕಿನಲ್ಲಿ ಸದಾ ಬರಗಾಲ ಪರಿಸ್ಥಿತಿ ಇರುತ್ತದೆ. ಹಾಗಿರುವಾಗ ಅಲ್ಲಿ ಜಾಸ್ತಿ ತೋರಿಸಿದ್ದಾರೆ. ನವಲಗುಂದ ತಾಲ್ಲೂಕಿನಲ್ಲಿ ಫಲವತ್ತಾದ ಭೂಮಿಯಿದೆ, ಸರಿಯಾದ ಪೀಕು ಬರುತ್ತದೆ. ಹೀಗಿದರೂ ಅದನ್ನು ಸರಿಯಾಗಿ ವಿಚಾರಮಾಡದೆ ಮುಂಡರ್ಗಿ ತಾಲ್ಲೂಕಿನಲ್ಲಿ ಖುಷ್ಕಿಗೆ 3 ರೂಪಾಯಿ, ತರಿಗೆ 12 ರೂಪಾಯಿ, ಬಾಗಾಯ್ತಿಗೆ 8 ರೂಪಾಯಿ ಹಾಕಬಹುದೆಂದು ಸೂಚಿಸಿದ್ದಾರೆ. ಇದು ರಿಯಾದುದಲ್ಲ. ಅಲ್ಲಿ ಬಾಗಾಯ್ತು ಹೇಗಿದೆ ಎಂಬುದನ್ನು ಅವರು ಒಂದು ಸಾರಿ ನೋಡಿದ್ದರೆ ಅವರಿಗೆ ಚೆನ್ನಾಗಿ ಗೊತ್ತಾಗುತ್ತಿತ್ತು. ಆ ಸ್ಥಳದಲ್ಲಿ ಬಾಗಾಯ್ತು ಇಲ್ಲ, ಬಾಗಾಯ್ತು ಎಂದರೇನು ಅದಕ್ಕೇನು ಡೆಫೆನಿಷನ್ನಿದೆ ಎಂಬುದನ್ನು ತಿಳಿಯದೆ ಏನೋ ಸೂಚಿಸಿರುವಂತೆ ತೋರುತ್ತದೆ. ನಮಗೆ ಒದಗಿಸಿರುವ ಅಂಕಿಅಂಶ ಸರಿಯಾದ ರೀತಿಯಲ್ಲಿಲ್ಲ. ರೆವೆನ್ಯೂ ಸರ್ವೆ ಸೆಟಲ್‌ಮೆಂಟ್ ಅಧಿಕಾರಿಗಳು ರೈತನು ಇಡ ತಕ್ಕ ಪೀಕು ಮತ್ತು ಇತರ ಸರಿಯಾದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೇ ಈ ತೆರನಾದ ರೇಟುಗಳನ್ನು ಹಾಕುತ್ತಾ ಬಂದಿದ್ದಾರೆ. 30 ವರ್ಷಗಳ ಹಿಂದೆ ಮಾಡಿದ್ದ ರೇಟುಗಳನ್ನು ಬದಲಾವಣೆ ಮಾಡಬೇಕಾದಾಗ ಸರಿಯಾಗಿ ಆಲೋಚನೆ ಮಾಡಬೇಕಾಗಿದೆ. ರೈತನು ಕೊಡಬೇಕಾದ ಲೇಬರ್ ಚಾರ್ಜಸ್ ಏನು, ಒಕ್ಕಲುತನಕ್ಕೆ ಖರ್ಚು ಮಾಡಬೇಕಾದ ಹಣವೆಷ್ಟು, ಆಳುಗಳಿಗೆ ಯಾವ ತೆರನಾಗಿ

(ಶ್ರೀ ಸಿದ್ದಯ್ಯ ಕಾಶೀಮಠ್)

ಕೂಲಿಯನ್ನು ಕೊಡುತ್ತಾ ಬಂದಿದ್ದಾನೆ, ಒಕ್ಕಲುತನಕ್ಕೆ ಬೇಕಾದ ಸಲಕರಣೆಗಳೇನು, ಇವುಗಳ ಬೆಲೆ ಏನು, ಬೆಲೆಗಳು ಯಾವರೀತಿ ಆಗಿವೆ ಎನ್ನುವುದನ್ನೆಲ್ಲ ಗಣನೆಗೆ ತೆಗೆದುಕೊಂಡು ಈ ವರದಿಗಳನ್ನು ತಯಾರಿಸಿಲ್ಲ ಎನ್ನುವುದು ವ್ಯಕ್ತವಾಗುತ್ತದೆ. ಇವತ್ತಿನ ದಿವಸ ರೈತ ಬಹಳ ಕಷ್ಟದಲ್ಲಿದ್ದಾನೆ. ಅವನ ಮೇಲೆ ಈ ಹೊರೆಯನ್ನು ಕೂಡ ಹೊರಿಸಿದರೆ ಅವನ ಪರಿಣಾಮವೇನಾಗುತ್ತದೆ ಎಂದು ಕೇಳುತ್ತೇನೆ. ಸರ್ಕಾರ ಇನ್ನು ಯಾವುದಾದರೂ ರೀತಿಯಲ್ಲಿ ಟ್ಯಾಕ್ಸ್ ಹಾಕಬಹುದು. ನಮ್ಮ ರಾಜ್ಯದಲ್ಲಿ ಮೇಲಿಂದ ಮೇಲೆ ಆಹಾರಾಭಾವ ಉಂಟಾಗುತ್ತಿದೆ. ಆಹಾರ ಬೆಳೆಯುವುದು ಕಡಮೆಯಾಗಿದೆ. ಹೀಗಿರುವಾಗ ರೈತನಿಗೆ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಬೇಕು. ಸರ್ಕಾರಕ್ಕೆ ರೊಕ್ಕ ಕಡಮೆ ಆದಾಗ ಬೇರೆ ರೀತಿಯ ಟ್ಯಾಕ್ಸ್‌ಗಳಿಗೆ, ಸೇಲ್ಸ್‌ಟ್ಯಾಕ್ಸ್, ಕಮರ್ಷಿಯಲ್ ಟ್ಯಾಕ್ಸಸ್, ಇನ್‌ಕಂಟ್ಯಾಕ್ಸ್ ಮುಂತಾದವುಗಳಿಗೆ ಹೆಚ್ಚಿನ ಮಹತ್ವ ಕೊಟ್ಟು ಈ ಭಾರವನ್ನು ಇಳಿಸುವುದಕ್ಕೆ ಮನಸ್ಸು ಮಾಡಿದರೆ ಸಾಧ್ಯವಿದೆ. ರಾಜ್ಯದಲ್ಲಿ ಜನಸಂಖ್ಯೆ ಹೆಚ್ಚುತ್ತ ಬಂದಿರುವಾಗ ಆಹಾರ ಸಾಮುಗ್ರಿಗಳನ್ನು ಹೆಚ್ಚಾಗಿ ಬೆಳೆಯದೆಹೋದರೆ ಜನ ಬದುಕುವುದೇ ಕಷ್ಟವೆನಿಸುತ್ತದೆ. ಅಂಥ ಪರಿಸ್ಥಿತಿ ಬರದಂತೆ ಮಾಡಬೇಕಾದರೆ ಯಾರು ಆಹಾರ ಪದಾರ್ಥಗಳನ್ನು ಬೆಳೆಯುತ್ತಾರೆಯೋ ಅಂಥವರಿಗಾದರೂ ಕೂಡ ಕಂದಾಯದ ಮಾಫಿ ಮಾಡಿ ಹೆಚ್ಚು ಪೀಕು ತೆಗೆಯುವಂತೆ ಮಾಡಬಹುದು. ಅದೇ ರೊಕ್ಕದ ಪೀಕು ತೆಗೆಯುವವರಿಗೆ ಹೆಚ್ಚು ಕಂದಾಯವನ್ನು ಹಾಕುವುದಾದರೆ ಸರಿ ಹೋಗಬಹುದು ಎಂದು ನನಗನಿಸುತ್ತದೆ. ಆ ರೀತಿ ಏಕೆ ಮಾಡಬಾರದು ಎಂದು ನಾನು ಕೇಳಬಯಸುತ್ತೇನೆ.

4-30 P.M.

ಸರ್ಕಾರದವರು ನಡೆಸುತ್ತಿರುವ ಫಾರಂಗಳಲ್ಲಿ ಯಾವ ರೀತಿಯಲ್ಲಿ ಪೀಕು ಬರುತ್ತದೆ ಎನ್ನುವುದನ್ನು ತಿಳಿದುಕೊಳ್ಳಬಹುದು. ಅಲ್ಲಿ ಬೆಳೆಯತಕ್ಕದ್ದು ಕಡಮೆ ಇದ್ದರೂ ಕೂಡ ಸೆಟಲ್‌ಮೆಂಟಿನವರು ಕೊಟ್ಟಿರುವ ರೇಟ್ ಮೇರೆಗೆ ಸೀಡ್ ಫಾರಂನಲ್ಲಿ ಬೆಳೆಯುವುದಕ್ಕಿಂತ ಹೆಚ್ಚಿನ ಬೆಳೆಯನ್ನು ರೈತ ಬೆಳೆಯುತ್ತಾನೆ ಎಂದು ತೋರಿಸುವಂಥ ಪ್ರಮೇಯ ಇದರಲ್ಲಿದೆ. ಸಾಧ್ಯವಾದಮಟ್ಟಿಗೂ ಕಂದಾಯದ ದರಗಳನ್ನು ಹೆಚ್ಚು ಮಾಡದೆ ಹಾಗೆಯೇ ಬಿಡಬೇಕು ಎಂದು ಹೇಳುತ್ತೇನೆ.

ರೈತರ ರಾಜ್ಯ ಎಂದು ಹೇಳುವಾಗ ಪ್ರಜಾಪ್ರಭುತ್ವದಲ್ಲಿ ಪ್ರಜಾ ಪ್ರತಿನಿಧಿಗಳಾಗಿ ನಾವು ಇಲ್ಲಿರುವಾಗ ಇದರ ಮೇಲೆ ಪ್ರಜಾಭಿಪ್ರಾಯವನ್ನು ಕೇಳದೆ ಹೋದರೆ ಅದು ತಪ್ಪಾಗಬಹುದು. ಈಗಲಾದರೂ ಕೂಡ ಜನಾಭಿಪ್ರಾಯವನ್ನು ಪಡೆಯುವುದು ಒಳ್ಳೆಯದು. ಇದನ್ನು ಹೀಗೆಯೇ ಒಂದೆರಡು ವರ್ಷ ಇಟ್ಟು ಒಂದು ತಜ್ಞರ ಕಮಿಟಿಯನ್ನು ನೇಮಿಸಿ ಯಾವ ಯಾವ ಭಾಗದಲ್ಲಿ ಯಾವ ತೆರನಾಗಿ ಕಂದಾಯವನ್ನು ಕೊಡುವುದಕ್ಕಾಗುತ್ತದೆ ಎಂದು ತಿಳಿದು ಅದರಂತೆ ತಿದ್ದುಪಡಿ ಮಾಡಬೇಕು. ಇವತ್ತಿನ ದಿವಸ ಈ ವರದಿಗಳನ್ನು ಸಾರ್ವಜನಿಕರ ಅವಗಾಹನೆಗೆ ಇಟ್ಟದ್ದೇ ಆದರೆ ರಾಜ್ಯದ ಮೂಲೆ ಮೂಲೆಗಳಿಂದಲೂ ಪ್ರತಿಭಟನೆ ಬರುತ್ತದೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಕಂದಾಯವನ್ನು ಹೆಚ್ಚು ಮಾಡುವ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುವುದು ಒಳಿತು ಎಂದು ನಾನು ಹೇಳಬಯಸುತ್ತೇನೆ.

ನೂರಕ್ಕೆ 80-85 ಮಂದಿ ಇರತಕ್ಕ ರೈತರಿಂದ ಓಟು ಪಡೆದು ನಾವು ಇಲ್ಲಿಗೆ ಬಂದಿದ್ದೇವೆ. ನಾವು ಅದರ ಪ್ರತಿನಿಧಿಗಳಾಗಿರುವುದರಿಂದ ಅವರ ಹಿತವನ್ನು ಕಾಪಾಡಬೇಕಾಗಿದೆ. ಕಾಂಗ್ರೆಸ್ ಪಕ್ಷದಲ್ಲಿನ ಒಬ್ಬಿಬ್ಬರು ಸ್ನೇಹಿತರು ರೈತರಿಗೆ ಆಗುವ ತೊಂದರೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ.

ಕಂದಾಯವನ್ನು ಹೆಚ್ಚು ಮಾಡಬೇಕೆಂದಿರುವುದರಿಂದ ಸುಮಾರು ಏಳು ಕೋಟಿ ರೂಪಾಯಿ ಬರುತ್ತದೆ ಎಂದು ಹೇಳಿದ್ದಾರೆ. ನಾವು ಖರ್ಚುಮಾಡುವುದರಲ್ಲಿ ಇದು ಎಷ್ಟನೆಯ ಪಾಲು ಎಂದು ವಿಚಾರ ಮಾಡಬೇಕು. ಯಾವುದೇ ಯೋಜನೆಯನ್ನು ತೆಗೆದುಕೊಂಡರೂ ಅದಕ್ಕಾಗಿ ಹಾಕುವ ತೆರಿಗೆಯು ಹೊರೆ ರೈತನ ಮೇಲೆ ಪರೋಕ್ಷವಾಗಿ ಬೀಳುತ್ತಿದೆ. ಮಾರಾಟ ತೆರಿಗೆ ಮುಂತಾದುವನ್ನು ಸರಿಯಾಗಿ ವಸೂಲ್ಮಾಡಿದರೆ ಈ ಕೊರತೆಯನ್ನು ತುಂಬಿಕೊಳ್ಳಬಹುದು. ಅರಣ್ಯದಲ್ಲಿ ಟಿಂಬರ್ ಮುಂತಾದುದನ್ನು ಕಳ್ಳತನದಲ್ಲಿ ಸಾಗಿಸುವುದು ಇವೆಲ್ಲ ಇದೆ. ಅದರ ಮೇಲೆ ನಿಗಾ ವಹಿಸಿದರೆ ಮತ್ತು ಸರ್ಕಾರಕ್ಕೆ ಬರಬೇಕಾದ ತೆರಿಗೆಗಳನ್ನು ಸರಿಯಾಗಿ ವಸೂಲು ಮಾಡಿದರೆ ಈ ಕಂದಾಯದ ಏರಿಕೆಯಿಂದ ಬರುತ್ತದೆ ಎಂದು ಭಾವಿಸಿರುವ ಏಳು ಕೋಟಿ ರೂಪಾಯಿಗಳನ್ನು ತುಂಬಿಕೊಳ್ಳಲಿಕ್ಕೆ ಸಾಧ್ಯವಿದೆ. ರೈತನ ಮೇಲೆ ಇಂಥ ಹೊರೆಯನ್ನು ಹೊರಿಸುವುದು ಬಹಳ ಪಾಪ ಮತ್ತು ಅವನ ಅಭಿವೃದ್ಧಿಗೋಸ್ಕರವಾಗಿ ಅದನ್ನು ತೆಗೆಯಬೇಕು ಎಂದು ಈ ಸಮಯದಲ್ಲಿ ಹೇಳುತ್ತೇನೆ.

ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವ ಯೋಜನೆಯ ಸಂಬಂಧದಲ್ಲಿ ತಯಾರಿಸಿರುವ ಚಿತ್ರಗಳಲ್ಲಿ, ವಾಲ್ ಪೋಸ್ಟರುಗಳಲ್ಲಿ ದೊಡ್ಡ ದೊಡ್ಡ ತೆನೆಗಳನ್ನು ತರಕಾರಿ ಮತ್ತು ಹಣ್ಣುಗಳನ್ನು

ಬರೆದಿರುತ್ತಾರೆ. ಇವುಗಳನ್ನು ಮಾತ್ರ ನೋಡಿ ಸಂತೋಷಪಡಬೇಕಾದ ಪ್ರಮೇಯ ಬಂದಿದೆ. Grow More Food Campaign ಹೋಗಿ No More Food Campaign ಆಗಿದೆ. ಹೆಚ್ಚು ಆಹಾರವನ್ನು ಬೆಳೆಯಲು ರೈತನಿಗೆ ಬೇಕಾದ ಅನುಕೂಲತೆಗಳನ್ನು ಮಾಡಿಕೊಡಬೇಕು. ಬಡವನಾದ ವನಿಗೆ ಇರುವ 5-10 ಎಕರೆ ಜಮೀನಿನಲ್ಲಿ ಇಷ್ಟು ಕಂದಾಯವನ್ನು ಕೊಟ್ಟು ಎಷ್ಟರಮಟ್ಟಿಗೆ ತನ್ನ ಕುಟುಂಬದ ಹಾಗೂ ದಿನ ನಿತ್ಯದ ಖರ್ಚನ್ನು ನಿವಾರಿಸಿಕೊಳ್ಳಬಹುದು ಎನ್ನುವುದನ್ನು ಸವಿಸ್ತಾರ ವಾಗಿ ಸರ್ಕಾರ ವಿಚಾರ ಮಾಡಬೇಕಾಗಿದೆ. ಪ್ರತಿಯೊಂದು ಕಂದಾಯದ ಏರಿಕೆಯನ್ನು ವಿರೋಧಿಸಿ ಪ್ರತಿಯೊಂದು ತಾಲ್ಲೂಕಿನಿಂದಲೂ ಈಗಾಗಲೇ ಸಾಕಷ್ಟು ಅರ್ಜಿಗಳು ಬಂದಿವೆ. ಕೋಲಾರ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಕೂಡ ಇದನ್ನು ವಿರೋಧಿಸಿ ಒಂದು ನಿರ್ಣಯವನ್ನು ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ನೋಡಿದೆ. ಸಿರಸಿಯಲ್ಲಿ ಸಹ ಇದೇ ರೀತಿಯಲ್ಲಿ ಮಾಡಿದ್ದಾರೆ. ಕಂದಾಯದ ಪುನರ್ವಿಮರ್ಶೆ ಬಗ್ಗೆ ಜನರಿಗೆ ತಿಳಿಯುವಂತೆ ಮಾಡಿ ಒಂದು ತಿಂಗಳ ಸಮಯ ಕೊಟ್ಟರೆ ದೇಶಾದ್ಯಂತ ಎಷ್ಟೋ ಪ್ರತಿಭಟನೆಗಳು ಬರುತ್ತವೆ ಎಂಬುದನ್ನು ತಿಳಿಯಬೇಕಾಗಿದೆ. ಇದನ್ನು ನಾನು ಮಂತ್ರಿ ಗಳಿಗೆ ಮತ್ತೆ ಮತ್ತೆ ಹೇಳಬೇಕಾಗಿಲ್ಲ. ಅವರು ಯಾವಾಗಲೂ ನಾನು ರೈತನ ಮಗ, ನನಗೆ ರೈತರ ಕಷ್ಟಗಳು ಗೊತ್ತಿವೆ, ಎಂದು ಹೇಳುತ್ತಿರುತ್ತಾರೆ. ರೈತನಿಗೆ ಜಾಸ್ತಿ ಹೊರೆ ಆಗುವ ಕಂದಾಯವನ್ನು ಪುನರ್ವಿಮರ್ಶೆ ಮಾಡಬೇಕೆಂದು ಸಭೆಯ ಮುಂದೆ ಇಟ್ಟಿರುವ ನಿರ್ಣಯವನ್ನು ಅವರು ವಾಪಸು ತೆಗೆದು ಕೊಳ್ಳಬೇಕು ಈ ಸಮಯದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಹಿಂದೆ ಬ್ರಿಟಿಷರ ಕಾಲದಲ್ಲಿ ಕಾಂಗ್ರೆಸ್ ಪಕ್ಷ ಉಪ್ಪಿನ ಮೇಲೆ ತೆರಿಗೆ ಹಾಕುವುದರ ವಿರುದ್ಧ ಸತ್ಯಾಗ್ರಹವನ್ನು ಮಾಡಿ ಪ್ರತಿಭಟನೆಯನ್ನು ವ್ಯಕ್ತಪಡಿಸಿತ್ತು. ಈಗ ಅದೇ ಪಕ್ಷ ಕಂದಾಯವನ್ನು ಹೆಚ್ಚು ಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಆಡಳಿತದಲ್ಲಿರುವ ಪಕ್ಷ ಬಹುಮತದಲ್ಲಿರುವುದರಿಂದ ಕಂದಾಯದ ಏರಿಕೆಯನ್ನು ಮಾಡಬಹುದು ಎಂದು ಹೇಳಬಹುದು. ಆದರೆ ಈ ಬಗ್ಗೆ ದೊಡ್ಡ ಚಳುವಳಿಯೇ ನಡೆಯಬಹುದು. ರೈತರಲ್ಲಿ ಹುಟ್ಟಿ, ಅವರಿಂದ ಓಟು ಪಡೆದು ಅವರ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿರುವ ನಾವು, ವಿರೋಧಪಕ್ಷದ ಸದಸ್ಯರು, ರೈತರ ಸಲುವಾಗಿ ಒಂದು ದಿನದ ಸಾಂಕೇತಿಕ ಮುಷ್ಕರವನ್ನು ಮಾಡುವವರಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—Immovable Property Tax ಮಸೂದೆಯನ್ನು ಸಭೆಯ ಮುಂದೆ ಮಂಡಿಸಿ ವಾಪಸು ತೆಗೆದುಕೊಂಡರು. ಹಾಗೆಯೇ ಇದನ್ನೂ ಕೂಡ ವಾಪಸು ತೆಗೆದು ಕೊಂಡರೆ ಪ್ರತಿಷ್ಠೆ ಕಡಮೆಯಾಗುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಪ್ರತಿಷ್ಠೆ ಇನ್ನೂ ಹೆಚ್ಚಾಗುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಶ್ರೀ ಮುಕ್ಕಣ್ಣಪ್ಪನವರನ್ನು ಗವರ್ನಮೆಂಟ್ ಅಡ್ವೈಸರ್ ಆಗಿ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಏನಾದರೂ ಸಂದರ್ಭ ಬಂದರೆ ಮಂತ್ರಿಗಳ ಆಸ್ಥಾನದಲ್ಲಿ ಕುಳಿತು ಅವರಿಂದ ಸಲಹೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಅದಕ್ಕಾಗಿ ನಾನು ಹೇಳುವುದಿಷ್ಟೆ. ಮೂಲೆಮೂಲೆಗಳಲ್ಲಿರತಕ್ಕ ರೈತರು ಇಲ್ಲಿ ಏನೇನು ವಿಚಾರಗಳು ಚರ್ಚೆಯಾಗುತ್ತವೆ ಎನ್ನುವುದನ್ನು ವರ್ತಮಾನ ಪತ್ರಿಕೆಗಳ ಮುಖಾಂತರ, ರೇಡಿಯೋ ಮುಖಾಂತರ ತಿಳಿದುಕೊಳ್ಳುವ ಪರಿಸ್ಥಿತಿ ಇರುವಾಗ ರೈತರು ಯಾವ ರೀತಿಯಲ್ಲಿಯೂ ಸಿಟ್ಟಿಗೆ ಬಾರದೇ ಇರುವಂತೆ ಸರ್ಕಾರ ವರ್ತನೆ ಮಾಡುವುದು ಒಳ್ಳೆಯದು. ಇವತ್ತಿನ ಪರಿಸ್ಥಿತಿಯಲ್ಲಿ ಸರಕಾರ ಮಾಡುತ್ತಿರತಕ್ಕ ಕೆಲಸ ದುಸ್ತರವಾದುದು. ಸರ್ಕಾರಕ್ಕೆ ಇದು ಗಂಡಾಂತರ ಪರಿಸ್ಥಿತಿ ಆದೀತು ಎಂದು ನಾನು ಹೇಳುತ್ತೇನೆ. ಮೂರು ಪಾಂಚವಾರ್ಷಿಕ ಯೋಜನೆ ಗಳು ಆದರೂ ಕೂಡ ರೈತ ಇನ್ನೂ ಯಾವ ಮಟ್ಟದಲ್ಲಿದ್ದಾನೆಂಬುದನ್ನು ಅವರು ಈಗ ಹೇಳಬೇಕು. ಒಂದಕ್ಕೊಂದು ಹೋಲಿಸಿದರೆ ಯಾವ ತರಹ ಪ್ರಯೋಜನವೂ ಇಲ್ಲ. ಎಷ್ಟು ಇರ್ರಿಗೇಷನ್ ಬಾವಿಗಳನ್ನು ತೆಗೆದಿದ್ದಾರೆ, ಪಂಪ್ ಸೆಟ್ಟುಗಳಿಗೋಸ್ಕರ ಹಣ ಕೊಟ್ಟಿದ್ದಾರೆಂಬುದು ಗೊತ್ತಿದೆ. ಎಷ್ಟರಮಟ್ಟಿಗೆ ಆಹಾರ ಬೆಳೆಯಲಿಕ್ಕೆ ಇದರಿಂದ ಸಾಧ್ಯತೆ ಇದೆಯೋ ಗೊತ್ತಿಲ್ಲ. ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಿದ್ದೇವೆ. 31 ಕೋಟಿ ರೂಪಾಯಿಗಳಲ್ಲಿ ಭದ್ರಾ ಡ್ಯಾಂ ಹಾಗೂ ತುಂಗಭದ್ರಾ ಡ್ಯಾಂ ಮಾಡಿದ್ದೇವೆಂದು ಹೇಳುತ್ತಾರೆಯೇ ಹೊರತು ಅದರ ಉಪಯೋಗ ಜನಗಳಿಗೆ ಎಷ್ಟರಮಟ್ಟಿಗೆ ಆಗಿದೆಯೆಂಬುದನು ತಿಳಿಸಬೇಕು. ಆದರೆ ರೈತರಿಗೆ ಸುಲಭವಾಗಿ ನೀರು ತೆಗೆದುಕೊಳ್ಳುವುದಕ್ಕೆ ಅನುಕೂಲವಿಲ್ಲ. ಇವತ್ತೂ ರೈತನಾದವನು ತನ್ನ ಹೊಲ ಮಾಡಬೇಕಾದರೆ ಅವನಿಗೆ ಎಷ್ಟು ರೊಕ್ಕ ಬೇಕು, ಎಷ್ಟು ನೀರು ಬೇಕು, ಎಂಬುದನ್ನು ಯೋಚಿಸಬೇಕು. ಅವನು ತಾನು ಬೆಳೆದ ಬೆಳೆಯನ್ನು ವಿತರಣೆ ಮಾಡಲು ಪ್ರತಿಬಂಧಕಾಜ್ಞೆ ಇರುವುದರಿಂದ ಅಂತಹವನ ಮೇಲೆ ಈ ದಿನ ತೆರಿಗೆ ಹೊರೆಯನ್ನು

(ಶ್ರೀ ಸಿದ್ಧಯ್ಯ ಕಾಶೀಮಠ್)

ಹೊರಿಸುವುದು ಸರಿಯಲ್ಲ. ಇದರಿಂದ ಅವನು ಸರ್ವನಾಶವಾಗಲು ಎಡೆ ಕೊಟ್ಟಂತಾಗುತ್ತದೆ. ಆದ್ದರಿಂದ ಅವನ ಮೇಲೆ ಯಾವೊಂದು ತೆರಿಗೆಯನ್ನೂ ಹಾಕಬಾರದು, ಅದಕ್ಕಾಗಿ ಈ ನಿರ್ಣಯವನ್ನು ಸರ್ಕಾರದವರು ವಾಪಸು ತೆಗೆದುಕೊಂಡು ರೈತರಿಗೆ ಹಿತಕರವಾಗಿ ಅನುಕೂಲವಾಗುವಂತೆ ಅವರಿಗೆ ಆಶೀರ್ವದಿಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಅಧ್ಯಕ್ಷರೇ, ಈ ಸಭೆಯ ಮುಂದೆ ಇರತಕ್ಕಂಥ ರಿವಿಜನ್ ಸೆಟಲ್‌ಮೆಂಟ್ ವರದಿಯ ಗೊತ್ತುವಳಿಯನ್ನು ನಾನು ಸ್ವಾಗತಿಸುತ್ತಾ ನನ್ನ ಅಭಿಪ್ರಾಯಗಳನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಒಂಭತ್ತು ವರ್ಷಗಳಿಂದ ಕೈಗೊಂಡ ಕಾರ್ಯ ಇಂದು ಪೂರ್ತಿಯಾಗಿ ವರದಿಯ ರೂಪದಲ್ಲಿ ಕೈಸೇರಿದೆ. ಅಧಿಕಾರಿಗಳು ಕಷ್ಟಪಟ್ಟು ತಯಾರಿಸಿದಂಥ ಈ ಕಾರ್ಯಕ್ಕೆ ಅವರನ್ನು ಅಭಿನಂದಿಸಲೇಬೇಕು. ಮಾನ್ಯ ಮಂತ್ರಿಗಳು ಹೇಳಿದಂತೆ ದೇಶದಲ್ಲಿ 30 ಜೋನುಗಳಲ್ಲಿ 130 ಗ್ರೂಪುಗಳನ್ನಾಗಿ ಮಾಡಿದ್ದಾರೆ. ಈ ಮೊದಲಿನ ಸೆಟಲ್‌ಮೆಂಟ್ ತಾಲ್ಲೂಕವನ್ನು ಒಂದು ಯೂನಿಟ್ ಎಂದು ಆಧಾರ ಮಾಡಿಟ್ಟು ಇಂಪಿರಿಕಲ್ ಮೆಥಡ್ಸ್ ಮೇಲೆ ತಯಾರಿಸಿದ್ದರು. ಈ ಪದ್ಧತಿಯನ್ನು ಬದಲಿಸಿ ಈಗ್ಗೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ತಾಲ್ಲೂಕುಗಳನ್ನು ಅಥವಾ ತಾಲ್ಲೂಕಿನ ಭಾಗಗಳನ್ನು ಕೂಡಿಸಿ, ಪ್ರಾಮುಖ್ಯವಾಗಿ (1) Physical configuration (2) Climatic condition and Rainfall (3) soil characteristic (4) Nature and yield of crop ಇವೆಲ್ಲ ಅಂಶಗಳನ್ನೂ ಗಣನೆಗೆ ತೆಗೆದುಕೊಂಡು ಗ್ರೂಪ್ಸ್ ಮಾಡಿದ್ದಾರೆ. ಇದಕ್ಕಿಂತ ಹೆಚ್ಚಿನ ಶಾಸ್ತ್ರೀಯವಾದ ಪದ್ಧತಿ ಬೇರೊಂದು ಇಲ್ಲ.

ಬೆಳಗಾಂವ ಜಿಲ್ಲೆಯನ್ನು ಮೂರು ಜೋನುಗಳಾಗಿ ವಿಂಗಡಿಸಿದ್ದಾರೆ. ನಾನು ಬೆಳಗಾಂವಿ ಜಿಲ್ಲೆಯ ಮೂರನೆಯ ಜೋನಿನ ವಿಷಯವಾಗಿ ಮಾತ್ರ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೂರನೆಯ ಜೋನಿನಲ್ಲಿ (1) ರಾಮದುರ್ಗ, (2) ಸವದತ್ತಿ (3) ಗೋಕಾಕ್ ಮತ್ತು (4) ರಾಯಬಾಗ ತಾಲ್ಲೂಕಿನ 475 ಹಳ್ಳಿಗಳನ್ನು ಸೇರಿಸಿದ್ದಾರೆ.

ರಿವಿಜನ್ ಸೆಟಲ್‌ಮೆಂಟನ್ನು ಶುರು ಮಾಡಿದಾಗ ರಾಮದುರ್ಗ ಮತ್ತು ರಾಯಭಾಗ ತಾಲ್ಲೂಕುಗಳು ಅಸ್ತಿತ್ವದಲ್ಲಿರಲಿಲ್ಲ. ಕೇವಲ 260 ಹಳ್ಳಿಗಳಲ್ಲಿ ಮಾತ್ರ ಅಂಕಿ ಸಂಖ್ಯೆಗಳನ್ನು ದೊರಕಿಸುವುದು ಸಾಧ್ಯವಾಯಿತು. ಉಳಿದವುಗಳು ಪ್ರಿನ್ಸಿಲಿ ಸ್ಟೇಟ್‌ಗಳಿಂದ ಬಂದಹಳ್ಳಿಗಳಾದ್ದರಿಂದ ಆ ವ್ಯವಸ್ಥೆಯೇ ಅಲ್ಲಿರಲಿಲ್ಲ. ಇಂತಹ ಒಂದು ಪರಿಸ್ಥಿತಿ ಇರುವಾಗ ಆ ಜೋನುಗಳಲ್ಲಿ ಇರತಕ್ಕ ಹಳ್ಳಿಗಳಲ್ಲಿ 100ಕ್ಕೆ 25ರಷ್ಟು ರೆಪ್ರಸೆಂಟಟಿವ್ ವಿಲೇಜುಗಳಲ್ಲಿ ಇಂಟೆನ್ಸಿವ್ ಇನ್‌ಕ್ವೈರಿ ಮಾಡಬೇಕೆಂಬ ನಿಯಮಕ್ಕೆ ಮೊದಲಿನ ಸೆಟಲ್‌ಮೆಂಟ್ ಆಫೀಸರ್ ಸಮ್ಮತಿ ಇರುವಾಗ ರೆವಿನ್ಯೂ ಡಿಪಾರ್ಟ್‌ಮೆಂಟಿನಿಂದ ಕೇವಲ 15 ಪರ್ಸೆಂಟ್ ರೆಪ್ರಸೆಂಟೆಟಿವ್ ಹಳ್ಳಿಗಳಲ್ಲಿ ಮಾತ್ರ ಇಂಟೆನ್ಸಿವ್ ಇನ್‌ಕ್ವೈರಿ ಮಾಡಬೇಕೆಂದು ಆರ್ಡರ್ ಮಾಡಿದ್ದು ನ್ಯಾಯವಲ್ಲವೆಂದು ನನ್ನ ಮತ. ಅಂಕಿ ಸಂಖ್ಯೆ ಸಿಗದಂಥ ಪರಿಸ್ಥಿತಿ ಇರುವಾಗ ಹೆಚ್ಚು ಹಳ್ಳಿಗಳಲ್ಲಿ ಇನ್‌ಕ್ವೈರಿ ಮಾಡುವುದರಿಂದ ಹೆಚ್ಚಿನ ನ್ಯಾಯ ಸಿಗುವ ಸಂಬಂಧವಿರುವುದು. ಆದ್ದರಿಂದ ಇವುಗಳ ವಿಷಯದಲ್ಲಿ ರೆವಿನ್ಯೂ ಆಕ್ಟಿನಲ್ಲಿ ಹೇಳಿದಂತೆ ಹುಟ್ಟುವಳಿಯ ಹವಿನಾರನೆಯ ಒಂದರಂತೆ ಆಕರಣಿ ಮಾಡಿದರೆ ಜಾಸ್ತಿಯಾಗುತ್ತದೆ. ಸೆಟಲ್‌ಮೆಂಟ್ ಆಫೀಸರು ತಮ್ಮ ವರದಿಯಲ್ಲಿ ಬೆಳಗಾಂವಿ ಜಿಲ್ಲೆಯ ಸುಮಾರು ಅರ್ಧಕ್ಕಿಂತ ಹೆಚ್ಚು ವಿಸ್ತಾರವುಳ್ಳ ಈ ತಾಲ್ಲೂಕುಗಳು ಪ್ರತಿವರ್ಷ ಹೆಚ್ಚು ಕಡಿಮೆ ಕ್ಷಾಮವಿದ್ದೇ ಇದುತ್ತದೆ. (ಆರಿಡ್ ಜೋನ್) ಎಂದು ಹೇಳಿದ್ದರು. ಈ ಆರೂಕಾಲು ಪರ್ಸೆಂಟ್ ಎಂಬ ನಿಯಮವನ್ನು ಬದಲಿಸಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನು ವಿರೋಧಪಕ್ಷದ ಮಾನ್ಯ ಸದಸ್ಯರು ಈಗ ವಿಧಿಸಲಿರುವ ಕಂದಾಯ ಜಾಸ್ತಿಯಾಗಿದೆ, ಶಾಸ್ತ್ರೀಯವಾಗಿಲ್ಲ ಎಂದು ಹೇಳಿದರು. ಆ ರೀತಿ ಶಾಸ್ತ್ರೀಯವಾಗಿರದೇ ಹೋದರೆ, ಅದನ್ನು ಬೇರೆ ಇನ್ನಾವ ರೀತಿ ಮಾಡಬೇಕೆಂದು ಒಂದಾದರೂ ಸಲಹೆಯನ್ನು ಇಡಲಿಲ್ಲ. ನಾವು ಮೂರನೆಯ ಪಾಂಚವಾರ್ಷಿಕ ಯೋಜನೆಯ ಕೊನೆಯ ಹಂತದಲ್ಲಿದ್ದೇವೆ ಮತ್ತು ನಾಲ್ಕನೆಯ ಯೋಜನೆಯನ್ನು ರೂಪಿಸುತ್ತಿದ್ದೇವೆ. ಇದಕ್ಕೆ ಸುಮಾರು 500-600 ಕೋಟಿ ರೂಪಾಯಿಗಳು ಬೇಕು. ಅದಕ್ಕಾಗಿ ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಬೇಕು. ಇದನ್ನೂ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಈ ಕುರಿತು ವಿಧಾಯಕವಾದ ಸಲಹೆಗಳನ್ನು ಕೊಡದೆ ಸುಮ್ಮನೆ ಟೀಕೆ ಮಾಡುತ್ತಾ ಹೋದರೆ ಹಣ ಸಿಕ್ಕಂತಾಯಿತೆ ? ಯೋಜನೆ ಕೈಗೂಡಿದಂತಾಯಿತೆ ? ಹೀಗೆಯೇ ಮುಂದುವರೆದರೆ ನಮ್ಮ ಯೋಜನೆಗಳು ಕುಸಿದುಬೀಳುವುವು. ಈ ಮಾತನ್ನು ಹೇಳುತ್ತಾ ಭೂಕಂದಾಯವನ್ನು ಜಾಸ್ತಿ ಮಾಡುವುದೇ ಒಂದು ಮಾರ್ಗವೆಂದು ನಾನೂ ಕೂಡ ಒಪ್ಪುವುದಿಲ್ಲ. ಇದರಿಂದ ನಮ್ಮಗಳಿಗೆ ಬರುವ 3 ಕೋಟಿಯ ಬದಲಾಗಿ 7 ಕೋಟಿ ಬಂದರೆ ನಮ್ಮ ಯೋಜನೆಗಳೆಲ್ಲಾ ಕಾರ್ಯಗತವಾಗುತ್ತವೆಂಬ ಆಲೋಚನೆ

ನಾನು ಇಟ್ಟುಕೊಂಡಿಲ್ಲ. ಕೆಲವು ಸದಸ್ಯರು ಮಾತನಾಡುತ್ತಾ ಎರಡರಷ್ಟು ಜಾಸ್ತಿ ಕೊಡಲು ರೈತ ಒಪ್ಪುತ್ತಾನೆ ಎಂದರು. ಇದರಿಂದ ಈಗ ಪ್ರತಿಯೊಬ್ಬ ರೈತ ತಾನು ಕೊಡುತ್ತಿರುವ ಕಂದಾಯದ ಎರಡರಷ್ಟನ್ನು ಕೊಡುವುದು ಎಂದರ್ಥ ಬರುತ್ತದೆ. ನಾನು ಒಟ್ಟು ಕಂದಾಯ 3 ಕೋಟಿಯ ಎರಡರಷ್ಟಕ್ಕೆ ಒಪ್ಪುತ್ತೇನೆ. ಆದರ ಪ್ರತಿಯೊಬ್ಬ ರೈತ ತಾನು ಕೊಡುವುದರ ಎರಡರಷ್ಟು ಎಂದರೆ ಸಾಧುವಲ್ಲವೆಂದು ನನ್ನ ಖಚಿತವಾದ ಅಭಿಪ್ರಾಯ. ಏಕೆಂದರೆ, ನಮ್ಮ ದೇಶದ ಕೆಲವು ಭಾಗಗಳಲ್ಲಿ 1905 ರಲ್ಲಿ ಮತ್ತು ಕೆಲವು ಕಡೆಗಳಲ್ಲಿ 1935-36 ರಲ್ಲಿ ರಿವಿಜನ್ ಸೆಟಲ್‌ಮೆಂಟ್ ಆಗಿದೆ. ಎರಡರಷ್ಟು ಎಂಬ ತತ್ವವನ್ನು ಒಪ್ಪಿದರೆ 1905 ಮತ್ತು ಅದಕ್ಕಿಂತ ಮುಂಚೆ ಸೆಟಲ್‌ಮೆಂಟ್ ಆದವರು 1936 ರವರಿಗಿಂತ ಬಹಳ ಕಡಿಮೆ ಕೊಡಬೇಕಾಗುತ್ತದೆ. ಇದು ಶಾಸ್ತ್ರೀಯವಾಗುವುದಿಲ್ಲವೆಂಬುದು ನನ್ನ ಮತ. ಶೇಕಡ ಆರೂಕಾಲರಷ್ಟು ಏನಿದೆಯೋ ಅದರಲ್ಲಿ ಪರ್ಸಂಟೇಜು ರಿಡಕ್ಷನ್ ಕೊಡಬೇಕು. ಬೇಕಾದರೆ, 25 ಅಥವಾ 30 ಮಾಡಿ. ಇದರಿಂದ ಎಲ್ಲರಿಗೂ ರಿಯಾಯಿತು ಸಿಕ್ಕಂತಾಗುತ್ತದೆ. ಇದೂ ಕೂಡ ಜಾಸ್ತಿಯಾದರೆ, ವಾಟರ್ ರೇಟ್, ಹೆಲ್ತ್ ಸಸ್, ಎಜುಕೇಷನ್ ಸೆಸ್, ಲೈಬ್ರರಿ ಸೆಸ್—ಇವುಗಳು ಕಡಿಮೆ ಮಾಡಬೇಕು. ಇಲ್ಲದೇ ಹೋದರೆ ತೆರಿಗೆಯ ಭಾರ ಬಹಳವಾಗುತ್ತದೆ ಎಂದು ನನ್ನ ಅಭಿಪ್ರಾಯ. ವಾಟರ್ ರೇಟ್ ಕುರಿತು ಒಂದು ಡ್ರಾಫ್ಟ್ ನೋಟಿಫಿಕೇಷನ್ ಹೊರಡಿಸಿದ್ದಾರೆ. ಇಲ್ಲಿ ಬೇಕಾದರೆ let us all press for reduction ಮತ್ತು ಎಲ್ಲ ಸೆಸ್‌ಗಳು ನೂರಕ್ಕೆ 50 ರಷ್ಟು ಇಳಿಸಲೇ ಬೇಕು.

ನನ್ನ ಜೋನ್ ವಿಷಯದಲ್ಲಿ ಮತ್ತೊಮ್ಮೆ ಇದು 90 ಪರ್ಸೆಂಟ್ ಜಾಸ್ತಿಯಾದದ್ದು ಬಹಳವಾಯಿತು. ನಾವು ಪ್ರತಿವರ್ಷ ಬರಗಾಲಕ್ಕೆ ತುತ್ತಾಗುತ್ತೇವೆ. ಸಾಮಾನ್ಯವಾಗಿ 5 ವರುಷಗಳಲ್ಲಿ 3 ವರ್ಷಗಳಾದರೂ ನಮಗೆ ಕ್ಷಾಮವಿರುತ್ತದೆ. ಬೆಳಗಾವ ಜಿಲ್ಲೆಯ ಸುಮಾರು 2775 ಚದುರ ಮೈಲಿಗಳಷ್ಟು ಪ್ರದೇಶ ಎಂದರೆ ಬೆಳಗಾಂವ ಜಿಲ್ಲೆ ಅರ್ಧಭಾಗ ಪ್ರತಿ ವರುಷ ಬರಗಾಲಕ್ಕೆ ತುತ್ತಾಗುತ್ತದೆ. ಅಂದ ಮೇಲೆ ಕಂದಾಯ ಜಾಸ್ತಿಯಾದರೆ ನಮಗೆ ತೊಂದರೆಯಾಗುತ್ತದೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಒಟ್ಟಿನಲ್ಲಿ ಈಗ ಪ್ರೊಪೋಸ್ ಮಾಡಿರುವ ದರಗಳಲ್ಲಿ ಪರ್ಸಂಟೇಜ್ ರಿಡಕ್ಷನ್ ಕೊಡಬೇಕೆಂದು ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಪೂಜ್ಯ ಸಭಾಪತಿಯವರೇ ಅಪ್ಪಹಾಕಿದ ಆಲದ ಮರ ಎಂದು ಭೂಮಿಯನ್ನೇ ನಂಬಿಕೊಂಡಿರುವ ರೈತರ ಮೇಲೆ ಮೊದಲಿನಿಂದಲೂ ತೆರಿಗೆಯ ಭಾರವನ್ನು ಹೊರಿಸುತ್ತಿರುವ ಈ ಸರ್ಕಾರದವರು ಮತ್ತೆ ವಿದ್ಯಾವಂತರೆಲ್ಲ ಪಟ್ಟಣ ಸೇರಿ ಅವಿದ್ಯಾವಂತರಾದವರು ಹಳ್ಳಿಗಳಲ್ಲಿ ನೆಲಸಿರತಕ್ಕ ರೈತರುಗಳ ಮೇಲೆ ಇನ್ನು ಹೊರಲಾರದಷ್ಟು ತೆರಿಗೆಯ ಹೊರೆಯನ್ನು ಹಾಕುತ್ತಿದ್ದಾರೆ. ಆ ರೀತಿಯಾಗಿ ತೆರಿಗೆ ವಿಧಿಸಬೇಕೆಂದು ಇವತ್ತು ರಿವಿಷನ್ ಸೆಟಲ್‌ಮೆಂಟ್ ಅಧಿಕಾರಿಗಳು ತಯಾರಿಸಿದಂಥ ವರದಿಗಳ ಬಗ್ಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಈ ಸಭೆಯ ಮುಂದೆ ಒಂದು ಠರಾವನ್ನು ಮಂಡಿಸಿರುವುದನ್ನು ನಾನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಅವರ ಗಮನಕ್ಕೆ ತಮ್ಮ ಮೂಲಕ ತರಲು ಇಚ್ಛೆಪಡುತ್ತೇನೆ.

ಸ್ವಾಮಿ, ಮಾನ್ಯ ರೆವಿನ್ಯೂ ಮಂತ್ರಿಗಳು ಅವರ ಭಾಷಣದಲ್ಲಿ ಹೇಳಿದರು ಈ ರಿವಿಜನ್ ಆಫ್ ಸೆಟ್ಲ್‌ಮೆಂಟ್ ಬಹಳ ದಿವಸಗಳ ಹಿಂದೆಯೇ ಆಗಬೇಕಾಗಿತ್ತು, ಅದು ಈಗ ಬಂತು ಎಂದು ಹೇಳಿದರು. ಅದೇ ರೀತಿ ಸೆಟ್ಲ್‌ಮೆಂಟ್ ಆಫೀಸರೂ ಕೂಡ ಈ ವರದಿಯ ಪುಟ 2 ರಲ್ಲಿ ಹೇಳುತ್ತಾರೆ 1959 ನೇ ಇಸವಿಯ ಒಳಗೇ ಇದು ಆಗಬೇಕಾಗಿತ್ತು ಎಂದು ಈ ವರದಿಯಲ್ಲಿ:

> "It will be seen that the entire zone had become due for second revision between 1939 and 1954 and the continuance of current rates beyond the period of guarantee is a concession which the agriculturists have been enjoying in spite of soaring prices of agricultural produce since 1942 onwards."

ಎಂದು ಹೇಳುತ್ತಿದ್ದಾರೆ. ಯಾರು ಗ್ಯಾರೆಂಟಿ ಮಾಡಿದ್ದಾರೆ ಅದನ್ನು ಹಿಂದೆ ಮಾಡಿರಬಹುದು. ಪ್ರಜಾ ಸರ್ಕಾರ ಬಂದ ಮೇಲೆ ರಾಜ ಮಹಾರಾಜರುಗಳನ್ನು ತಪ್ಪಿಸಿ ಪ್ರಜೆಗಳಾದ ನಾವೆಲ್ಲರೂ ಸರ್ಕಾರವನ್ನು ರಚನೆ ಮಾಡಿರುವಾಗ ಅದನ್ನೂ ತಪ್ಪಿಸಿ ಕಂದಾಯವನ್ನು ಜಾಸ್ತಿ ಮಾಡಬೇಕೆಂದು ಹೋಗುವುದು ಸರಿಯಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಹಾಗೆ ವರದಿಯನ್ನು ತಯಾರು ಮಾಡುವಾಗ ಬಹಳ ಚೆನ್ನಾಗಿ ಅಂದವಾಗಿ ಅದನ್ನು ಮುದ್ರಿಸಿದ್ದಾರೆ. ಇದು ಹೇಗಿದೆಯೆಂದರೆ, ಸಮುದ್ರದ ನೀರು ತಿಳಿಯಾಗಿ ಅದು ನೋಡುವುದಕ್ಕೆ ಚೆನ್ನಾಗಿ ಕಾಣುತ್ತದೆ. ಆದರೆ ಅದರ ಆಳವನ್ನ ಇಳಿದು ನೋಡಿದರೆ ಅದರಲ್ಲಿ ಮೊಸಳೆ ಇದ್ದು ಅದು ನುಂಗುವುದಕ್ಕೆ ಬರುತ್ತದೆ. ಅದೇ

(ಶ್ರೀ ಸಿ. ಆರ್. ರಂಗೇಗೌಡ)

ರೀತಿ " ಸುಂದರವಾಗಿ ಮುದ್ರಿತವಾಗಿರುವ ಈ ಸೆಟ್ಲ್‌ಮೆಂಟ್ ವರದಿಯಲ್ಲಿ ರೈತನನ್ನು ನುಂಗುವ ಮೊಸಳೆಗಳಿವೆ. ನಮ್ಮ ತಾಲ್ಲೂಕಿನಲ್ಲಿ 190 ಪರ್ಸೆಂಟ್ ಕಂದಾಯವನ್ನು ಜಾಸ್ತಿ ಮಾಡಿದ್ದಾರೆ. ಅವರ ಒಂದು ವರದಿಯಲ್ಲಿ ಹೇಳುತ್ತಾರೆ ಮಾಗಡಿ ತಾಲ್ಲೂಕಿನಲ್ಲಿ ಅರ್ಕಾವತಿ ನದಿ ಹರಿಯುತ್ತಾ ಅದು ರಾಮ ನಗರಕ್ಕೆ ಹೋಗುತ್ತದೆ, ಅಲ್ಲಿ ತಿಪ್ಪಗೊಂಡನಹಳ್ಳಿಯಲ್ಲಿ ಒಂದು ಜಲಾಶಯವನ್ನು ಕಟ್ಟಿದೆ, ಆದರೂ ಕೂಡ ಅದರಿಂದ ಅಷ್ಟು ಅನುಕೂಲವಾಗಿಲ್ಲ, ಆದ್ದರಿಂದ ಮಾಗಡಿ ತಾಲ್ಲೂಕಿನಿಂದ ಬೆಂಗಳೂರಿಗೆ ನೀರನ್ನು ಕುಡಿಯುವುದಕ್ಕೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಅಲ್ಲಿ ವಾಟರ್‌ಲೆವೆಲ್ ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ. ನಾನು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ 50-60 ಅಡಿ ತೋಡಿದರೂ ಅಲ್ಲಿ ನೀರು ಸಿಕ್ಕುವುದಿಲ್ಲ. ಇಂಥಾದ್ದರಲ್ಲಿ ವಾಟರ್ ಲೆವೆಲ್ ಅಲ್ಲಿ ಎಲ್ಲಿ ಜಾಸ್ತಿಯಾಗಿದೆ. ಎಂಬುದನ್ನು ರಿವಿಜನ್ ಆಫ್ ಸೆಟ್ಲ್‌ಮೆಂಟ್ ವರದಿಯನ್ನು ಬರೆದ ಅಧಿಕಾರಿಗಳು ತಿಳಿಸಬೇಕಾಗಿತ್ತು. ಹೀಗಿರುವಾಗ ಅಲ್ಲಿ ನೀರಾವರಿ ಬಾವಿಗಳಿಗೆ ಅವಕಾಶವಿಲ್ಲ ಜಲಾಶಯವನ್ನು ಮಾಡಿ ಕೊಡಬೇಕು, ತರೀಬೆಳೆಗೆ ಅನುಕೂಲ ಮಾಡಿಕೊಡಬೇಕು ಎಂದರೆ ಅದಕ್ಕೂ ಅವಕಾಶವಿಲ್ಲ. ನಮ್ಮ ಸಣ್ಣ ನೀರಾವರಿ ಮಂತ್ರಿಗಳು ನಮ್ಮ ತಾಲ್ಲೂಕಿನಲ್ಲಿ ಯಾವ ಕೆಲಸವೂ ಆಗಕೂಡದು ಎಂದು ಪಣತೊಟ್ಟ ಹಾಗೆ ಕಾಣುತ್ತದೆ. ಯಾವ ಅಧಿಕಾರಿಗಳು ಅಲ್ಲಿಗೆ ಹೋಗಿ ನೋಡಿಕೊಂಡು ಬಂದರೂ ಕೂಡ ಏನೇನೋ ಕುಂಟು ನೆವವನ್ನು ಹೇಳುತ್ತಾರೆ. ಅರ್ಕಾವತಿ ನದಿಗೆ ಒಂದು ಪಿಕಪ್ ಹಾಕಿಕೊಂಡು ಸೀಪೇಜ್ ವಾಟರ್ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಇದೆ. ನೀರಾವರಿ ಬಾವಿಗಳನ್ನು ಮಾಡಿಕೊಂಡು ರೈತರು ಹೆಚ್ಚಿನ ಉತ್ಪತ್ತಿಯನ್ನು ಮಾಡಿಕೊಂಡು ಸರ್ಕಾರದವರನ್ನು ಕೇಳಿದರೆ ಅದಕ್ಕೂ ಅವಕಾಶ ಮಾಡಿಕೊಟ್ಟಿಲ್ಲ. ಒಟ್ಟಿನಲ್ಲಿ ಅಲ್ಲಿ ಸಣ್ಣ ನೀರಾವರಿ ಬಾವಿಗಳಾಗಲೀ ಅಥವಾ ಜಲಾಶಯವನ್ನು ಕಟ್ಟುವುದಕ್ಕಾಗಲೀ ಸರ್ಕಾರದವರು ಅವಕಾಶ ವನ್ನು ಮಾಡಿಕೊಟ್ಟಿಲ್ಲ. ಹೀಗಿರುವಾಗ ಯಾವ ಧೈರ್ಯದಿಂದ ಆ ಪ್ರದೇಶದಲ್ಲಿ ಕಂದಾಯವನ್ನು ಜಾಸ್ತಿ ಮಾಡುವುದಕ್ಕೆ ಹೊರಟಿದ್ದೀರಿ ಎಂದು ನಾನು ತಮ್ಮನ್ನು ಕೇಳಬೇಕಾಗಿದೆ. ಪ್ರಜಾ ಸರ್ಕಾರ ಬಂದ ಮೇಲೆ ಆ ಭಾಗದಲ್ಲಿ ಯಾವ ಜಲಾಶಯವನ್ನು ಮಾಡಿಲ್ಲ. ಹಿಂದೆ ಮಾಗಡಿ ಕೆಂಪೇಗೌಡ ಏನು ಜಲಾಶಯವನ್ನು ಕಟ್ಟಿಸಿದ್ದರೋ ಅದನ್ನು ಬಿಟ್ಟು ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಏನೂ ಮಾಡಿಲ್ಲ. ಈಗ ಕಂದಾಯವನ್ನು ಜಾಸ್ತಿ ಮಾಡುವುದಕ್ಕೆ ಯಾವ ಬೇಸಿಸ್ಸೂ ಇಲ್ಲ ಎಂದು ನಾನು ಹೇಳುತ್ತೇನೆ. ಈಗ ಅಲ್ಲಿರತಕ್ಕ ಕೆರೆಗಳೇನಾದರೂ ಅಲ್ಪ ಸ್ವಲ್ಪ ಕಿತ್ತು ಹೋಗಿದ್ದರೆ ಒಡೆದು ಹೋಗಿದ್ದರೆ ಅದನ್ನು ರಿಪೇರಿ ಮಾಡಿಕೊಡುವುದಕ್ಕೆ ಸರ್ಕಾರದವರಿಗೆ ಶಕ್ತಿ ಇಲ್ಲದೆ ಇದ್ದಮೇಲೆ ಯೋಗ್ಯತೆ ಇಲ್ಲದೆ ಇದ್ದರೆ ಕಂದಾಯವನ್ನು ಯಾವ ಆಧಾರದ ಮೇಲೆ ಜಾಸ್ತಿ ಮಾಡುತ್ತೀರಿ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ.

ಇನ್ನು ಅಗ್ರಿಕಲ್‌ಚರಲ್ ರಿಸೋರ್ಸಸ್ ಬಗ್ಗೆ ಹೇಳುತ್ತೇನೆ. ಈ ವರದಿಯ ಪುಟ 25 ಐಟಮ್ 80ರಲ್ಲಿ ಏನು ಹೇಳುತ್ತಾರೆಂದರೆ ಜಾತ್ರೆಗಳಲ್ಲಿ ರೈತರು ಎತ್ತುಗಳನ್ನು ಮಾರುತ್ತಾರೆ, ಅದರಿಂದ ಆದಾಯವನ್ನು ಪಡೆಯುತ್ತಾರೆ ಅದಕ್ಕೋಸ್ಕರ ಕಂದಾಯವನ್ನು ಕೊಡಬೇಕು ಎಂದು ಹೇಳುತ್ತಾರೆ. ನಾನಾದರೂ ತಮ್ಮ ಗಮನಕ್ಕೆ ತರುತ್ತೇನೆ, ರೈತನ ಅಜ್ಞಾನ ಯಾವ ರೀತಿ ಇದೆ ಯೆಂದರೆ, ಈಗ ರೈತ 1000 ರೂಪಾಯಿಗಳನ್ನು ಕೊಟ್ಟು ಒಂದು ಜೊತೆ ಎತ್ತನ್ನು ತರುತ್ತಾನೆ. ಆ ಎತ್ತುಗಳಲ್ಲಿ ಉತ್ತು ಬಿತ್ತಿದ ಮೇಲೆ ಆ ಎತ್ತುಗಳನ್ನು ಚೆನ್ನಾಗಿ ಮೇಯಿಸುತ್ತಾನೆ. ಅವುಗಳಿಗೆ ಕೋಳಿಮೊಟ್ಟೆ, ಹಾಲು, ಬೆಣ್ಣೆ ಇವುಗಳನ್ನೆಲ್ಲಾ ತಿನ್ನಿಸುತ್ತಾನೆ. ಮತ್ತು ತನ್ನ ಹೊಲದಲ್ಲಿ ಏನೇನು ಬೆಳೆ ಇರುತ್ತದೆಯೋ ಅದನ್ನೆಲ್ಲಾ ಆ ಎತ್ತುಗಳಿಗೆ ಮೇಯಿಸುತ್ತಾನೆ. ಸ್ವಲ್ಪ ಹೆಚ್ಚು ಕಡಿಮೆ ಅವುಗಳಿಗೆ 600—700 ರೂಪಾಯಿಗಳವರೆಗೂ ಖರ್ಚು ಮಾಡುತ್ತಾನೆ. ಆಮೇಲೆ ಆ ಎತ್ತುಗಳನ್ನು ಜಾತ್ರೆಗೆ ತೆಗೆದುಕೊಂಡು ಹೋಗಿ 1100 ರೂಪಾಯಿಗಳಿಗೆ ಅವುಗಳನ್ನು ಮಾರು ತ್ತಾನೆ. ಆ ವಿಷಯದಲ್ಲಿ ನನಗೆ ಅನುಭವ ಇದೆ. 1000 ರೂಪಾಯಿಗಳಿಗೆ ಕೊಂಡಂತ ಎತ್ತು ಗಳನ್ನು ರೈತ 1100 ರೂಪಾಯಿಗಳಿಗೆ ಮಾರಿದಾಗ ರೈತ ಏನು ಹೇಳುತ್ತಾನೆಂದರೆ ನನಗೆ 100 ರೂಪಾಯಿ ಲಾಭ ಬಂತು ಎಂದು ಹೇಳುತ್ತಾನೆ. ಅವನು ಎತ್ತುಗಳಿಗೆ ತಿನ್ನಿಸಿದ ಬೆಣ್ಣೆ, ಕೋಳಿ ಮೊಟ್ಟೆ ಮುಂತಾದ ಉತ್ಕೃಷ್ಟವಾದ ಆಹಾರಕ್ಕಾಗಿ ಖರ್ಚುಮಾಡಿದಂತಹ ಹಣವನ್ನು ಅವನು ಲೆಕ್ಕ ಮಾಡುವುದಿಲ್ಲ. ಅದೆಲ್ಲವನ್ನೂ ಲೆಕ್ಕಮಾಡಿದರೆ 700—800 ರೂಪಾಯಿಗಳಾಗುತ್ತದೆ. ಅದೆಲ್ಲ ವನ್ನು ಅವನು ಲೆಕ್ಕ ಮಾಡುವುದಿಲ್ಲ 100 ರೂಪಾಯಿ ಲಾಭ ಬಂತು ಎಂದು ಮಾತ್ರ ಹೇಳುತ್ತಾನೆ. ಅದೆಲ್ಲವನ್ನು ಅವನು ಲೆಕ್ಕ ಹಾಕಿದರೆ ಅವನು ವ್ಯವಸಾಯ ವೃತ್ತಿಯಲ್ಲೇ ಇರುತ್ತಿರಲಿಲ್ಲ. ರಿವಿಜನ್ ಆಫ್ ಸೆಟ್ಲ್‌ಮೆಂಟ್ ವರದಿಯನ್ನು ತಯಾರುಮಾಡಿದ ಅಧಿಕಾರಿಗಳು ಅದನ್ನು ಆಧಾರವಾಗಿ ಇಟ್ಟು ಕೊಂಡು ಅಗ್ರಿಕಲ್‌ಚರಲ್ ರಿಸೋರ್ಸಸ್ ಚೆನ್ನಾಗಿದೆ ಎಂದು ಹೇಳಿದ ಮಾತ್ರಕ್ಕೆ ಕಂದಾಯವನ್ನು

ಜಾಸ್ತಿಮಾಡುವುದಕ್ಕೆ ಹೋಗುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ರೈತನ ಅಜ್ಞಾನವನ್ನು ಅಪಾರ್ಥಮಾಡಿಕೊಂಡು ನೀವು ಈವೊತ್ತಿನ ದಿವಸ ಆತನ ಮೇಲೆ ಹೊರಲಾರದಂತಹ ಹೊರೆಯನ್ನು ಹೇರುವುದು ಸರಿಯಲ್ಲ.

ಇನ್ನು ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟ್ ವಿಷಯವನ್ನು ಈ ವರದಿಯಲ್ಲಿ ಹೇಳಿದ್ದಾರೆ. ನಾನು ಈಗ ಸುಮಾರು 10—12 ವರ್ಷಗಳಿಂದಲೂ ನೋಡುತ್ತಿದ್ದೇನೆ. ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟನ್ನು ರೆವಿನ್ಯೂ ಅಧಿಕಾರಿಗಳು ಅಗ್ರಿಕಲ್‌ಚರಲ್ ಇಲಾಖೆಯಲ್ಲಿರುವವರು ಮತ್ತು ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟಿನವರು ಸೇರಿ ಆ ಎಕ್ಸ್‌ಪರಿಮೆಂಟನ್ನು ಮಾಡುತ್ತಾರೆ. ಅದರಲ್ಲಿ ಅವರಿಗೆ ಬೇಕಾಗಿರುವುದು ಏನು ಎಂದರೆ ಹೆಚ್ಚಿಗೆ ಉತ್ಪತ್ತಿ ಬರುವ ಹಾಗೆ ಮಾಡುವುದು. ಆ ರೀತಿ ಹೆಚ್ಚಿಗೆ ಉತ್ಪತ್ತಿ ಬರುವ ಹಾಗೆ ಮಾಡುತ್ತಾರೆ. ಅಲ್ಲಿಗೆ ಯಾರೋ ಹೋಗುತ್ತಾರೆ. ಅದನ್ನು ಲೆಕ್ಕ ಹಾಕಿಕೊಂಡು ಬಂದು ಕೊಡುತ್ತಾರೆ. ನಮ್ಮ ದೇಶದಲ್ಲಿರತಕ್ಕ ದೊಡ್ಡ ದೊಡ್ಡ ಲೀಡರುಗಳು ಏನು ಮಾಡುತ್ತಾರೆಂದರೆ ಡಿಪಾರ್ಟ್‌ಮೆಂಟಿನವರು ಏನು ಅಂಕಿ ಅಂಶಗಳನ್ನು ಕಲೆಕ್ಟ್ ಮಾಡುತ್ತಾರೆಯೋ ಅದನ್ನೆಲ್ಲಾ ನೋಡಿ ತಪ್ಪು ಉತ್ತರವನ್ನು ಕೊಡುತ್ತಾರೆ. ಮತ್ತು ಅದನ್ನೇ ನಂಬಿ ಅವರು ನಮ್ಮ ದೇಶದಲ್ಲಿ ಬೇಕಾದಷ್ಟು ಆಹಾರ ತುಂಬಿ ತುಳುಕಾಡುತ್ತಿದೆ ಎಂದು ತಿಳಿದುಕೊಂಡಿದ್ದಾರೆ. ಒಂದು ವರ್ಷದಿಂದೀಚೆಗೆ ಸರ್ಕಾರದವರು ಎಚ್ಚೆತ್ತುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ದೇಶದಲ್ಲಿ ಆಹಾರ ಅಭಾವ ಉಂಟಾಗಿ, ಹಾಹಾಕಾರ ಜಾಸ್ತಿಯಾಗಿ ಅದಮೇಲೆ ಅವರು ಕೊಟ್ಟಿರತಕ್ಕದ್ದು ಸುಳ್ಳು ಲೆಕ್ಕ ಎಂದು ಅರ್ಥ ಮಾಡಿಕೊಂಡಿದ್ದಾರೆ. ರಿವಿಜನ್ ಆಫ್ ಸೆಟ್ಲ್‌ಮೆಂಟ್ ಅಧಿಕಾರಿಗಳು ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟ್ ಆಧಾರವನ್ನ ಇಟ್ಟುಕೊಂಡು ಕಂದಾಯವನ್ನು ಜಾಸ್ತಿ ಮಾಡುವುದಾದರೆ ಅದಕ್ಕಿಂತ ಅನ್ಯಾಯದ ಕೆಲಸ ಬೇರೊಂದಿಲ್ಲ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅಗ್ರಿಕಲ್‌ಚರಲ್ ಪ್ರೋಗ್ರೆಸೀವ್ ಕಲ್ಟಿವೇಟರ್ಸ್ ಏನು ಈ ಬಗ್ಗೆ ಲೆಕ್ಕವನ್ನು ಕೊಟ್ಟಿದ್ದಾರೆ ಎಂದರೆ ನಮ್ಮ ತಾಲ್ಲೂಕಿನಲ್ಲಿ ಚಂದೂರಾಯನ ಹಳ್ಳಿಯೊಳಗೆ ಒಂದು ಎಕ್ಸ್‌ಪರಿಮೆಂಟ್ ಫಾರಂ ಇದೆ. ಅದಕ್ಕೆ ಒಂದು ವರ್ಷಕ್ಕೆ 10 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಅಲ್ಲಿ 5—6 ಪಲ್ಲ ರಾಗಿಯನ್ನು ಬೆಳೆಯುತ್ತಾರೆ. ಸರ್ಕಾರದವರು ಈ ರೀತಿ ಬೆಳೆದದ್ದನ್ನು ಲೆಕ್ಕ ಹಾಕಿಕೊಂಡು ಒಪ್ಪಿಕೊಳ್ಳುತ್ತಾರೆ ಅದರ ರೈತ ತನ್ನ ಹೆಂಡತಿ ಮಕ್ಕಳು ಮಳೆ ಬಿಸಿಲಲ್ಲಿ ಒಣಗಿ ವ್ಯವಸಾಯಮಾಡಿ ಅದರಲ್ಲಿ ಬಂದಂತಹ ಉತ್ಪತ್ತಿಯಲ್ಲಿ ಆತನ ಸಂಸಾರದ ಅನ್ನ ಬಟ್ಟೆಗೆ ನೇರ ಮಾಡಿಕೊಳ್ಳಬೇಕು, ಮತ್ತು ಅವನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಹೀಗಿರುವಾಗ ಈ ವರದಿಯಲ್ಲಿ ಕೊಟ್ಟಿರುವ ಲೆಕ್ಕವನ್ನು ನೋಡಿದರೆ ಸ್ಮಾಲ್ ಹೋಲ್ಡರುಗಳಿಗೆ ರಾಗಿ ಬೆಳೆಗೆ 10 ರೂಪಾಯಿ, ಬತ್ತದ ಬೆಳೆಗೆ 30 ರೂಪಾಯಿಗಳು, ಆವರೇಜ್ ಕಲ್ಟಿವೇಟರಿಗೆ ರಾಗಿ ಬೆಳೆಗೆ 60 ರೂಪಾಯಿ ಬತ್ತಕ್ಕೆ 120 ರೂಪಾಯಿಗಳು ಬರುತ್ತದೆ ಎಂದು ಇಲ್ಲಿ ಲೆಕ್ಕವನ್ನು ಕೊಟ್ಟಿದ್ದಾರೆ. ದೊಡ್ಡ ಕಲ್ಟಿವೇಟರುಗಳಿಗೆ ಎಷ್ಟು ಬರುತ್ತದೆ ಎಂಬುದು ಗೊತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಏನು ಉತ್ಪತ್ತಿ ಬರುತ್ತದೆ ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ. ನಮ್ಮ ತಾಲ್ಲೂಕು ಇಳಿಜಾರು ಪ್ರದೇಶ. ಬೆಟ್ಟ ಗುಡ್ಡ ಪ್ರದೇಶ. ಅಲ್ಲಿ ಹೆಚ್ಚು ಹೆಚ್ಚಾಗಿ ಬೆಳೆ ಬೆಳೆಯುತ್ತಾರೆ ಎಂದು ತಿಳಿದುಕೊಂಡು ಅಲ್ಲಿ ಕಂದಾಯವನ್ನು ಜಾಸ್ತಿ ಹಾಕುವುದಕ್ಕೆ ಹೊರಟಿರುವುದು ಸರಿಯಲ್ಲ ಎಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸ್ಟ್ಯಾಂಡರ್ಡ್ ರೇಟು ಎಂದು ಹೇಳಿ ನಮ್ಮ ತಾಲ್ಲೂಕನ್ನು ಫಸ್ಟ್‌ಗ್ರೂಪಿಗೆ ಸೇರಿಸಿ ಡ್ರೈಲ್ಯಾಂಡಿಗೆ 5 ರೂಪಾಯಿ 30 ಪೈಸಾ, ವೆಟ್‌ಲ್ಯಾಂಡಿಗೆ 15 ರೂಪಾಯಿಗಳು, ಮತ್ತು ಗಾರ್ಡನ್ನಿಗೆ 18 ರೂಪಾಯಿಗಳು ಎಂದು ಲೆಕ್ಕವನ್ನು ಕೊಟ್ಟಿದ್ದಾರೆ. ಹಾಗೆ ಅವರು ಕೊಟ್ಟಿರುವ ನೋಟಿನಲ್ಲಿ ಡೆಪ್ಯುಟಿ ಕಮೀಷನರು ಮೇಲಕ್ಕೆ ಬರೆಯುತ್ತಾ ಅವರು ಕೊಟ್ಟಿರುವ ಸ್ಟ್ಯಾಂಡರ್ಡ್ ರೇಟ್ ತಪ್ಪು ಎಂದು ಹೇಳಿದ್ದಾರೆ. ಅದನ್ನು 16 ಆಣೆ ಕ್ಲಾಸಿಫಿಕೇಷನ್‌ನಲ್ಲಿ ಸೇರಿಸಿಕೊಳ್ಳುವುದರಲ್ಲಿ ಜಾಸ್ತಿಯಾಗುತ್ತದೆ. ಈ ಕ್ಲಾಸಿಫಿಕೇಷನ್ ಮಾಡಿರುವುದು ಸರಿಯಾಗಿ ಅರ್ಥವಾಗುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ 86 ಜೋಡಿಗ್ರಾಮಗಳಲ್ಲಿ ಸರ್ವೆ ಕ್ಲಾಸಿಫಿಕೇಷನ್ ಮಾಡಿರುವುದನ್ನು ನೋಡಿದರೆ ಭಯವಾಗುತ್ತದೆ. ಜಮೀನು ಬಿಟ್ಟು ಪಟ್ಟಣಕ್ಕೆ ಬಂದು ಇಲ್ಲಿ ಕೂಲಿ ನಾಲಿ ಮಾಡಿಕೊಂಡು ಸುಖವಾಗಿ ಜೀವನ ಮಾಡಬಹುದು ಅನಿಸುತ್ತದೆ. ಇಂಥಾ ಪರಿಸ್ಥಿತಿಯಲ್ಲಿ ಸರ್ವೆಯರ್ಸ್ ಸ್ಥಳೀಯ ಅಧಿಕಾರಿಗಳು ಮಾಡಿರುವ ಅನ್ಯಾಯವನ್ನು ನೋಡಿದರೆ ನಿಜವಾಗಿಯೂ ರೈತನನ್ನು ಇಲ್ಲದ ಸಲ್ಲದ ಕಷ್ಟಕ್ಕೆ ಗುರಿಮಾಡುತ್ತಾರೆ ಎಂದು ಕಾಣುತ್ತದೆ. ಇದನ್ನು ಯಾವರೀತಿ ಪರಿಹರಿಸುತ್ತಾರೆ ಎಂಬುದನ್ನು ನಾವು ಸರ್ಕಾರದವರಲ್ಲಿ ತಿಳಿದುಕೊಳ್ಳಬೇಕಾಗಿದೆ.

5-00 P.M.

ಹಾಗೆಯೇ ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿಗೆ ಆಕಾಶದ ಮೇಲೆ ಭೂಮಿ ಬೆಳೆ ಇರುತ್ತದೆ. ನಾಲ್ಕೈದು ಕೆರೆಗಳನ್ನು ಬಿಟ್ಟರೆ, ನಮ್ಮಲ್ಲಿ ಇವತ್ತಿಗೂ ಬಾಕೀದಕ್ಕೆ ಏನೂ ಮಾಡಿಲ್ಲ. ಅಂಥದರಲ್ಲಿ

(ಶ್ರೀ ಸಿ. ಆರ್. ರಂಗೇಗೌಡ)

ಈ ಕಂದಾಯ ಲೆವಿ ಮಾಡುವುದು ಸರಿಯಲ್ಲ. ಹಾಗೆಯೇ ಇನ್ನು ಮುಂದಾದರೂ ರೈತರನ್ನು ನೇಗಿಲಗೆ ಕಟ್ಟಿದ ಎತ್ತಿನ ಹಾಗೆ, ಪ್ರಾಣಿಗಳ ಹಾಗೆ ಗಣಿಸಬೇಡಿ. ಅವರ ಮಕ್ಕಳೂ ಮುಂದಕ್ಕೆ ಬರುವ ದೃಷ್ಟಿಯಿಂದ ಯೋಚನೆ ಮಾಡಬೇಕು. ರೈತರನ್ನು ಹೀಗೆ ಕೆಣಕಬಾರದೆಂದು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಬೆಂಗಳೂರು ಮತ್ತಿತರ ದೊಡ್ಡ ದೊಡ್ಡ ಪಟ್ಟಣಗಳಲ್ಲಿ 30-40 ವರ್ಷಗಳ ಹಿಂದೆ ಮನೆಗಳನ್ನು ಕಟ್ಟಿಕೊಂಡು, 20-30 ರೂಪಾಯಿ ಬಾಡಿಗೆ ಬರುತ್ತಿದ್ದುದನ್ನು, 200-300ಕ್ಕೆ ಏರಿಸಿ ಜಾಸ್ತಿ ಬಾಡಿಗೆ ತೆಗೆದುಕೊಳ್ಳುತ್ತಿದ್ದಾರೆ. ಅಂಥವರ ಮೇಲೆ ಟ್ಯಾಕ್ಸ್ ಹಾಕಿ, ಲ್ಡಿಂಗ್ ಟ್ಯಾಕ್ಸ್ ಮಸೂದೆಯನ್ನು ಜಾರಿಗೆ ತರಲಿಕ್ಕೆ ಸರಕಾರಕ್ಕೆ ಧೈರ್ಯವಿಲ್ಲದಿರುವಾಗ, ಏತಕ್ಕೆ ಇವರು ಹೀಗೆ ಬಡ ರೈತರ ಮೇಲೆ ಕಂದಾಯ ಹೊರಿಸುತ್ತಾರೊ ಅರ್ಥವಾಗುತ್ತಿಲ್ಲ. ಅಥವಾ ಅವರ ಅಜ್ಞಾನ ಮತ್ತು ಅವಿದ್ಯೆಯನ್ನು ದುರುಪಯೋಗಪಡಿಸಿಕೊಂಡು ಈ ಕಂದಾಯವನ್ನು ತಂದಿದ್ದಾರೋ ? ಇದು ಸರಿಯಲ್ಲ. ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇದನ್ನು ಹಿಂದಕ್ಕೆ ತೆಗೆದುಕೊಂಡು, ರೈತರ ಮೇಲೆ ಈ ತರಹ ಕಂದಾಯವನ್ನು ಹಾಕುವುದಿಲ್ಲ ಎಂದು ನಂಬಿ, ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಅಧ್ಯಕ್ಷರನ್ನು ವಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಎನ್. ದೇಸಾಯಿ (ಹನಗಲ್).—ಸನ್ಮಾನ್ಯ ಅಧ್ಯಕ್ಷರೆ, ಈ ಹೊತ್ತು ಈ ಸಭೆಯ ಮುಂದೆ ಮಂಡಿಸಲ್ಪಟ್ಟಂಥ ರಿವಿಜನ್ ಸೆಟಲ್‌ಮೆಂಟ್ ವರದಿಯನ್ನು ಸ್ವಾಗತಿಸುತ್ತಾ, ಒಂದೆರಡು ಸೂಚನೆಗಳನ್ನು ಮಾಡಬಯಸುತ್ತೇನೆ.

ಸರ್ವೆಸೆಟಲ್‌ಮೆಂಟ್ ರಿವಿಶನ್ ಸಾಮಾನ್ಯವಾಗಿ 30 ವರ್ಷಗಳಿಗೊಮ್ಮೆ ಆಗುವ ಪದ್ಧತಿ. ನಮ್ಮ ಉತ್ತರ ಕರ್ಣಾಟಕದ ಮಟ್ಟಿಗೆ ಹೇಳುವುದಾದರೆ, 1910—11ರೊಳಗೆ ಮೊದಲಾಗಿದ್ದು, ಈಗ್ಗೆ 50 ವರ್ಷವಾಯಿತು. ಆವಾಗಿನ ಒಕ್ಕಲುತನದಿಂದ ಹುಟ್ಟುವ ಬೆಳೆಗಳ ಧಾರಣೆಯನ್ನು ನೋಡಿದರೆ, ಈಗಿನ ಧಾರಣೆ ಎಷ್ಟೋ ಹೆಚ್ಚಾಗಿದೆ. ಅದನ್ನು ನೋಡಿದರೆ, ಕಂದಾಯ ಹೆಚ್ಚಾಗಬೇಕಾದ್ದು ಅನಿವಾರ್ಯವಾಗಿದೆ ; ಅನ್ನುವುದು ಎಲ್ಲರಿಗೂ ಕಾಣುವ ಮಾತು. ರಿವಿಶನ್ ಆಫ್ ಸೆಟಲ್‌ಮೆಂಟ್ 30 ವರ್ಷಗಳಿಗೊಮ್ಮೆ ಮಾಡುವ ಉದ್ದೇಶ ಒಕ್ಕಲುತನದಿಂದ ಹುಟ್ಟುವ ಬೆಳೆಗಳ ಧಾರಣೆ ಹೇಗಿದೆ, ರೈತರ ಸ್ಥಿತಿ ಸುಧಾರಿಸಿದೆಯೆ ಎಂದು ನೋಡಲು. ಅವರ ಆರ್ಥಿಕ ಸ್ಥಿತಿ ಸುಧಾರಣೆಯಾಗಿದ್ದರೆ, ಕಂದಾಯ ಹೆಚ್ಚುವರಿಯನ್ನು ಮಾಡಬೇಕು. ಅವರ ಆರ್ಥಿಕ ಸ್ಥಿತಿ ಹಿಂದಿನದಕ್ಕಿಂತ ಎಷ್ಟು ಕೆಟ್ಟಿದೆಯೊ ಅಷ್ಟರಮಟ್ಟಿಗೆ ಕಂದಾಯ ಕಡಿಮೆ ಮಾಡಬೇಕು. ಅದಕ್ಕೋಸ್ಕರವೆ 30 ವರ್ಷದ ಅವಧಿಯನ್ನು ಹಾಕಿಕೊಂಡದ್ದಾಗಿದೆ. ಆ ಪ್ರಕಾರ ರಿವಿಶನ್ ಆಫ್ ಸೆಟಲ್‌ಮೆಂಟ್ ವರದಿಯನ್ನು ಅಧಿಕಾರಿಗಳು ಒಪ್ಪಿಸಿದ್ದಾರೆ. ಈಗಿನ ಪರಿಸ್ಥಿತಿಯನ್ನು ಈವಾಗಿನ ಒಕ್ಕಲುತನದ ಹುಟ್ಟುವಳಿ ಬೆಳೆಗಳ ದೃಷ್ಟಿಯಿಂದ ನೋಡಿದರೆ, ಈಗ ಕಂದಾಯ ಹೆಚ್ಚಾಗುವುದು ಅವಶ್ಯಕವೆಂದು ನನಗೆ ಕಾಣಿಸುತ್ತದೆ. ಆದರೆ ಈಗಿನ ರಿಪೋರ್ಟಿನಲ್ಲಿ ಏನು ಬರೆದಿದ್ದಾರೊ, ಆ ಪ್ರಕಾರ ಹೆಚ್ಚು ಮಾಡಿದ್ದೇ ಆದರೆ ಕೆಲವು ಸಂದರ್ಭಗಳಲ್ಲಿ ಬಹಳ ಅನ್ಯಾಯವಾಗುತ್ತದೆ. ಅದು ಹೇಗೆ ಎಂದು ಹೇಳುತ್ತೇನೆ. ಧಾರವಾಡ ಜಿಲ್ಲೆಯಲ್ಲಿರುವ ನನ್ನ ಮತದಾರ ಕ್ಷೇತ್ರವಾದ ಹಾನಗಲ್ ಕೆ—4 ಜೋನಿಗೆ ಬಂದಿರುತ್ತದೆ. ಹಿಂದಕ್ಕೆ ಇದರಲ್ಲಿ 6 ಗ್ರೂಪುಗಳಿದ್ದವು. ಆದರೆ ಈ ಸಲ 6 ಗ್ರೂಪುಗಳ ಬದಲು, 3 ಗ್ರೂಪುಗಳನ್ನು ಮಾಡಿದ್ದಾರೆ. ಮೊದಲಿನ ಸ್ಟಾಂಡರ್ಡ್ ರೇಟ್ ಒಂದನೆ ಗ್ರೂಪಿಗೆ 131 ಪೈಸೆ ಇತ್ತು ; 2ನೆ ಗ್ರೂಪಿಗೆ 125 ಪೈಸೆ, 3ನೆ ಗ್ರೂಪಿಗೆ 232 ಪೈಸೆ, 4ನೆ ಗ್ರೂಪಿಗೆ 275 ಪೈಸೆ, 5ನೆ ಗ್ರೂಪಿಗೆ 112 ಪೈಸೆ, 6ನೆ ಗ್ರೂಪಿಗೆ 1 ರೂಪಾಯಿ. ಈರೀತಿ ಇದ್ದದ್ದು ಈಗ 4-5-6ನೆ ಗ್ರೂಪುಗಳನ್ನು ಅಬಾಲಿಶ್ ಮಾಡಿ, ಮೂರೆ ಗ್ರೂಪ್ ಮಾಡಿರುತ್ತಾರೆ. 5-6 ಗ್ರೂಪಿನ ಹಳ್ಳಿಗಳನ್ನ 2-3ನೆ ಗ್ರೂಪಿಗೆ ತಂದು ಕೂಡಿಸಿದ್ದಾರೆ. ಇದರಲ್ಲಿ 60 ಹಳ್ಳಿಗಳಿಗೆ ಅನ್ಯಾಯವಾಗುತ್ತಾ ಇದೆ. 2ನೆ ಗ್ರೂಪಿನಲ್ಲಿ ಕೂಡಿ ಸಿದ್ದ ಹಳ್ಳಿಗೆ 175 ಇದ್ದದ್ದು, ಈಗ ಸ್ಟಾಂಡರ್ಡ್ ರೇಟ್ 593 ಆಗಿದೆ. ಮೊದಲು 6ನೇ ಗ್ರೂಪ್‌ನಲ್ಲಿದ್ದ ಹಳ್ಳಿಗಳಿಗೆ ಈಗ 1 ರೂಪಾಯಿ ಇದ್ದ ಸ್ಟಾಂಡರ್ಡ್ ರೇಟ್, 2ನೆ ಗ್ರೂಪ್ ಅಥವಾ 3ನೆ ಗ್ರೂಪಿಗೆ ಬಂದಿದ್ದರಿಂದ, ಕಡಿಮೆ ಮಾಡುವುದರ ಬದಲು ಒಂದಕ್ಕೆ 5 ರಷ್ಟು ಹೆಚ್ಚಾಗಿದೆ. 2-3ನೆ ಗ್ರೂಪಿಗೆ ಹಾಕಿರುವುದರಿಂದ ಹೀಗೆ ಹೆಚ್ಚಾಗುತ್ತಾ ಇದೆ. ಈ ದಿನ ಗ್ರೂಪಿಂಗ್ ಸಿಸ್ಟಮ್ಮೇ ತಪ್ಪು ಇದೆ ಎಂದು ನನಗೆ ಅನಿಸುತ್ತದೆ. ಸೆಟಲ್‌ಮೆಂಟ್ ರಿಪೋರ್ಟ್ ಮಾಡುವಾಗ ಅಲ್ಲಿಯ ಅಧಿಕಾರಿಗಳು ಕೆಲವೊಂದು ಅಂಶವನ್ನು ಮುಖ್ಯವಾಗಿ ಹಿಡಿದುಕೊಂಡಿದ್ದಾರೆ. ಅವು ಯಾವುವು ? ಅವರು ಫಿಸಿಕಲ್ ಕಾನ್‌ಫಿಗರೇಶನ್ನಿಗೆ ವಿಶೇಷ ಮಹತ್ವ ಕೊಟ್ಟಿದ್ದಾರೆ. ಹಿಂದೆ ಫಿಸಿಕಲ್ ಕಾನ್‌ಫಿಗರೇಶನ್ನಿಗಿಂತ, ನೇಚರ್ ಆಫ್ ಸಾಯಿಲ್ ಮತ್ತು ಫರ್ಟಿಲಿಟಿ ಆಫ್ ದಿ ಸಾಯಿಲ್ಲಿಗೆ ಹೆಚ್ಚು ಮಹತ್ವ ಕೊಟ್ಟು ಗ್ರೂಪುಗಳನ್ನು ಮಾಡುತ್ತಾ ಇದ್ದರು. ಇಲ್ಲಿ ಒಂದು ಹಳ್ಳಿಯಲ್ಲಿ ಒಂದು ಜಮಿನಲ್ಲಿ ನೇಚರ್ ಆಫ್

ಸಾಯಿಲ್ ಒಂದು ತರಹ ಇದ್ದರೆ ಅದೇ ತರಹ ನೇಚರ್ ಆಫ್ ಸಾಯಿಲ್ 4 ಮೈಲಿ ಮೇಲಿರುವ ಭೂಮಿಯಲ್ಲಿರುತ್ತಿದ್ದರೆ ಆ ಹಳ್ಳಿಗಳನ್ನು ಒಂದೇ ಗ್ರೂಪ್ ಮಾಡುತ್ತಿದ್ದರು. ಫಿಸಿಕಲ್ ಕಾನ್ಫಿಗರೇಶನ್ ಪ್ರಶ್ನೆ ಆಗ ಇದ್ದಿಲ್ಲ. ಹಿಂದೆ ನೇಚರ್ ಆಫ್ ಸಾಯಿಲ್ ಮತ್ತು ಫರ್ಟಿಲಿಟಿ ಗಮನಕ್ಕೆ ತೆಗೆದುಕೊಂಡು ಬಹಳ ಸೈಂಟಿಫಿಕ್ಕಾಗಿ ಮಾಡುತ್ತಾ ಇದ್ದರು ಆದರೆ ಈಗಿನ ಅಧಿಕಾರಿಗಳು ಪದ್ಧತಿಯನ್ನು ಬದಲು ಮಾಡಿದ್ದಾರೆ. ಅವರು ನೇಚರ್ ಆಫ್ ಸಾಯಿಲ್ಗೆ ಮಹತ್ವ ಕೊಡದೆ ಕಾನ್‌ಫಿಗರೇಶನ್ನಿಗೆ ಮಹತ್ವ ಕೊಟ್ಟು, ಒಂದು ತಾಲ್ಲೂಕನ್ನು ಮಲೆನಾಡು, ಮಧ್ಯಮ ಮತ್ತು ಬಯಲುಸೀಮೆ ಎಂದು ವಿಂಗಡಿಸಿದ್ದಾರೆ. K-IV ಜೋನಿಗೆ ಧಾರವಾಡದಿಂದ ಹನಗಲ್‌ವರೆಗೆ ಇರುವ ಎಲ್ಲ ಹಳ್ಳಿಗಳನ್ನೂ ಸೇರಿಸಿ, ಅದಕ್ಕೆ ಕೂಡಿಸಿಕೊಳ್ಳುತ್ತಾ ಹೋದರು. ಅದರಿಂದ ಕೆಲವು ಹಳ್ಳಿಗಳಿಗೆ ಬಹಳ ಅನ್ಯಾಯವಾಗುತ್ತಾ ಇದೆ. ಈ ಪದ್ಧತಿಯನ್ನು ತೆಗೆದು, ಹಿಂದಿನ ಸೆಟಲ್‌ಮೆಂಟ್ ಗ್ರೂಪುಗಳು ಏನಿವೆಯೊ ಅವುಗಳಂತೆ ಈಗಿನ ಸ್ಟ್ಯಾಂಡರ್ಡ್ ರೇಟು ಲಾಗು ಮಾಡಿದರೆ, ಯೋಗ್ಯವಾಗಿದೆ. ಆದ್ದರಿಂದ ಹಿಂದಿನ 6 ಗ್ರೂಪುಗಳನ್ನೂ ಇಡಬೇಕು ಅಂತ ನನ್ನ ಸಲಹೆ ಇದೆ.

ಇನ್ನೊಂದು ಸಲಹೆ ಏನೆಂದರೆ, ಈಗ ಸರಕಾರದವರು ಎಕ್ಸಿಸ್ಟಿಂಗ್ ರೇಟುಗಳಿಗಿಂತ ನಮಗೆ ಡಬಲ್ ಬಂದರೆ ಸಾಕು ಅಂತ ಆಲೋಚನೆ ಮಾಡಿದ್ದಾರೆ. ಆದ್ದರಿಂದ ಹಳೆಯ ಗ್ರೂಪುಗಳ ಪದ್ಧತಿ ಮತ್ತು ಸ್ಟ್ಯಾಂಡರ್ಡ್ ರೇಟನ್ನು ಬದಲು ಮಾಡದೆ, ಮೊದಲು ಇದ್ದುದಕ್ಕಿಂತ 50-75 ಅಥವಾ ಹಂಡ್ರೆಡ್ ಪರ್ಸೆಂಟ್ ಇಂಕ್ರೀಸ್ ಮಾಡಿದರೆ, ಸಮಂಜಸ ಆಗುತ್ತದೆ. ಇದಕ್ಕಿಂತ ಯಾವ ಸಂದರ್ಭದಲ್ಲಿಯೂ ಹೆಚ್ಚಿಗೆ ಮಾಡಬಾರದು. ಇದನ್ನು ಗಮನಕ್ಕೆ ತೆಗೆದುಕೊಂಡು ಕಂದಾಯ ಮಂತ್ರಿಗಳು ನೆರಿಪಡಿಸುತ್ತಾರೆಂದು ನಂಬಿ, ಅಧ್ಯಕ್ಷರು ಇಷ್ಟು ಅವಕಾಶ ಕೊಟ್ಟಿದ್ದಕ್ಕೆ ಅವರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ದೇವಯ್ಯ (ಮಂಡ್ಯ).—ಸ್ವಾಮಿ, ಈ ದಿವಸ ಸರ್ವೆಸೆಟಲ್‌ಮೆಂಟ್ ವಿಚಾರ ನಮ್ಮ ಸಭೆಯ ಮುಂದೆ ಬಂದಿದೆ. ಸ್ವಾಮಿ, ದೇಶದಲ್ಲಿ ಅನ್ನದಾನ ಮಾಡತಕ್ಕಂಥವನ ಮೇಲೆ ಹೊರೆ ಹೊರಿಸುವುದು ಅಷ್ಟು ಒಳ್ಳೆಯದಲ್ಲ. ಏಕೆಂದರೆ ಅನ್ನದಾನ ಮಾಡತಕ್ಕಂಥವನು ಕಷ್ಟಪಟ್ಟು ವ್ಯವಸಾಯ ಮಾಡುತ್ತಾನೆ. ವ್ಯವಸಾಯ ಮಾಡತಕ್ಕಂಥವನ ಜಮೀನು ಸರ್ವೆಮಾಡಿ ; ಆ ಸಂಸಾರಿಕನ, ಹಳ್ಳಿಗಾಡಿನಲ್ಲಿ ವ್ಯವಸಾಯ ಮಾಡತಕ್ಕಂಥವನ, ವ್ಯವಸಾಯದಲ್ಲಿ ಜೀವನ ಮಾಡತಕ್ಕಂಥವನ ಜೀವನದ ಆರ್ಥಿಕ ಸ್ಥಿತಿಯನ್ನು ಮತ್ತಿತರ ಸ್ಥಿತಿಗಳನ್ನು ಸರ್ವೆ ಮಾಡಿ. ಅವರುಗಳ ಮನೆಮಠ ಯಾವರೀತಿ ಇದೆ, ಅವರ ಹೆಂಗಸರು ಮಕ್ಕಳು ಯಾವರೀತಿ ಇದ್ದಾರೆ ಅನ್ನುವುದನ್ನು ಮೊದಲು ಸರ್ವೆಮಾಡಿ. ಆಮೇಲೆ ಈ ನಿರ್ಣಯವನ್ನು ಸಭೆಯ ಮುಂದೆ ತಂದರೆ, ಆಗ ಸರಕಾರದವರು ಸ್ವಲ್ಪ ತಾಳ್ಮೆಯಿಂದ ವರ್ತಿಸುತ್ತಿದ್ದಾರೆಂದು ನಾನು ಹೇಳುತ್ತೇನೆ. ಏಕೆಂದರೆ ನಾಟಿ ಹಾಕತಕ್ಕಂಥ ಹೆಂಗಸರು ಯಾವ ಕಷ್ಟದಲ್ಲಿದ್ದಾರೆಂದು ನಮ್ಮ ಮಹಿಳಾ ಮೆಂಬರುಗಳು ಸ್ಥಳಕ್ಕೆ ಹೋಗಿ ನೋಡಿ ಬರಬೇಕು. ಬೆಳಿಗ್ಗೆ 8 ಗಂಟೆಗೆ ಹೋದರೆ ಸಾಯಂಕಾಲದವರೆಗೆ ಎಷ್ಟರಮಟ್ಟಿಗೆ ನಾಟಿ ಹಾಕುವುದರಲ್ಲಿ ಕಷ್ಟ ಪಡುತ್ತಾರೆ, ಅವರ ಸೀರೆ, ರೌಕೆ ಯಾವರೀತಿ ಇದೆ ಅನ್ನುವುದನ್ನು ನೋಡಬೇಕು. ಅವರು ನೋಡಿ ಬಂದಿದ್ದರೆ ಇಷ್ಟು ಚರ್ಚೆಗೆ ಅವಕಾಶವೇ ಇರುತ್ತಿರಲಿಲ್ಲ ಎಂದು ನಾನು ಹೇಳುತ್ತೇನೆ.

ನಮ್ಮ ರೆವಿನ್ಯೂ ಮಂತ್ರಿಗಳು ಇಲ್ಲಿ ಒಂದು ವಿಚಾರವನ್ನು ಯೋಚನೆ ಮಾಡಬೇಕಾಗಿದೆ. ವಿಶ್ವೇಶ್ವರಯ್ಯಾ ನಾಲಾ ಕೆಳಗೆ ಕಬ್ಬನ್ನು ರೈತರು ಬೆಳೆಯುತ್ತಿದ್ದಾರೆ. ಕಬ್ಬು ಬೆಳೆಯುವ ಈ ರೈತರ ಮೇಲೆ ನೂರು ರೂಪಾಯಿಗಳಷ್ಟು ಕಂದಾಯ ಹಾಕಬೇಕು ಎಂದು ಒಂದು ಸಲಹೆ ಇದೆ. ಈಗ ಬೆಲ್ಲದ ಧಾರಣೆ ಯಾವ ರೀತಿ ಇದೆ ಮತ್ತು ರೈತರಿಗೆ ಇದರಿಂದ ಎಷ್ಟು ಮಟ್ಟಿಗೆ ಅನುಕೂಲವಾಗುತ್ತಿದೆ ಎನ್ನುವುದನ್ನೂ ನೋಡಿದರೆ ಅವರು ತಯಾರು ಮಾಡುವ ರೇಟಿಗೂ ಮಾರುವ ರೇಟಿಗೂ ಎಷ್ಟು ವ್ಯತ್ಯಾಸ ಇದೆ ಎನ್ನುವುದು ಗೊತ್ತಾಗುತ್ತದೆ. ಇದನ್ನು ಸರಕಾರ ಯೋಚನೆ ಮಾಡಬೇಕು. ಕಬ್ಬಿಗೆ ಈಗ ಬೆಂಕಿ ಹಾಕುವ ಸ್ಥಿತಿಯಲ್ಲಿದೆ. ಒಂದು ಎಕರೆಯಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ ಎನ್ನುವುದನ್ನು ನೋಡಿಕೊಂಡು ಹೇಳಿದರೆ ಆಗ ಬೇಕಾದರೆ ಹೆಚ್ಚು ಟ್ಯಾಕ್ಸು ಕೊಡಬಹುದು. ಷುಗರು ಫ್ಯಾಕ್ಟರಿಯಲ್ಲಿ ಷುಗರ್ ಸೆಸ್ಸು ಎಂದು ವಸೂಲು ಮಾಡುವ ಏರ್ಪಾಡು ಇಟ್ಟಿದ್ದಾರೆ. ಷುಗುರು ಸೆಸ್ಸು ವಸೂಲಿ ಹೇಗಿದೆ ಎಂದರೆ 30 ಟನ್ನುಗಳಷ್ಟು ಕಬ್ಬು ಬೆಳೆಯುವವರು 180 ರೂಪಾಯಿಗಳಷ್ಟು ಸೆಸ್ಸು ಕೊಡಬೇಕು. 50ಟನ್ನು ಕಬ್ಬು ಬೆಳೆಯುವವರು 300 ರೂಪಾಯಿಗಳಷ್ಟು ಕೊಡಬೇಕು. ಹೀಗೆ 300 ರೂಪಾಯಿಗಳಷ್ಟು ಷುಗರ್ ಸೆಸ್ಸನ್ನು ಕೊಟ್ಟು ಇದರ ಮೇಲೆ ಸರಕಾರಕ್ಕೆ ಕಂದಾಯ ಕೊಡಬೇಕು. ಸರಕಾರದವರು ಅಮೋನಿಯಂ ಸಲ್ಫೇಟು, ಬೂದಿ ಇತ್ಯಾದಿಗಳನ್ನೆಲ್ಲಾ ಸಪ್ಲೈ ಮಾಡುತ್ತಿದ್ದಾರೆ. ರೈತರಿಗೆ ಇವು ಬರುವ ವೇಳೆಗೆ ಸರಕಾರದವರು ಕೊಟ್ಟಿರುವ ರೇಟಿಗೂ ಮತ್ತು ಜಮೀನಿನ ಹತ್ತಿರ ತೆಗೆದುಕೊಂಡು ಉಪಯೋಗಿಸುವ ಹೊತ್ತಿಗೆ ಸುಮಾರು ಹತ್ತು ರೂಪಾಯಿಗಳಷ್ಟು ಸಾದಿಲ್ವಾರು ಖರ್ಚು ಹೆಚ್ಚು ಬೀಳುತ್ತದೆ.

(ಶ್ರೀ ಜಿ. ದೇವಯ್ಯ)

ಯಾವರೀತಿ ಖರ್ಚು ಮಾಡುತ್ತಿದ್ದಾರೆ ಎನ್ನುವುದನ್ನು ಸರಕಾರದವರೇ ಲೆಕ್ಕ ಹಾಕಿಕೊಳ್ಳಬೇಕು. ಕಬ್ಬಿನ ಸ್ಥಿತಿ ಎಷ್ಟರಮಟ್ಟಿಗೆ ಇದೆ? ರೈತರು ಬದುಕಬಹುದೇ ಎನ್ನುವುದನ್ನು ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಮನಸ್ಸಿಗೆ ತೆಗೆದುಕೊಳ್ಳಬೇಕು. ಹಾಗೆ ಮನಸ್ಸಿಗೆ ತೆಗೆದುಕೊಳ್ಳದೆ ಇಂತಹವುಗಳಿಗೆ ಅವಕಾಶ ಕೊಡಬಾರದು. ಇದು ಬಹಳ ಸಣ್ಣ ವಿಚಾರ ಎಂದು ಕೆಲವು ವೇಳೆ ಉಡಾಫೆ ಮಾಡುವುದೂ ಉಂಟು.

ಉಪಾಧ್ಯಕ್ಷರು.—ಯಾರು ಉಡಾಫೆ ಮಾಡುತ್ತಾರೆ?

ಶ್ರೀ ಜಿ. ದೇವಯ್ಯ.—ಒಂದು ದಿನಕ್ಕೆ ಎರಡು ಸಾವಿರ ಟನ್ನುಗಳಷ್ಟು ಕಬ್ಬನ್ನು ಅರಿಯಬೇಕು ಎನ್ನುವ ಒಂದು ಅಂದಾಜನ್ನು ಮಾಡಿದ್ದಾರೆ. ಕಬ್ಬು ಬೆಳೆಸಿರುತ್ತಾರೆ. ಆ ಕಬ್ಬನ್ನು ದಿನ 1ಕ್ಕೆ 1000 ದಿಂದ 1500 ಟನ್ ಅರಿಯುವುದು ಕಷ್ಟವಾಗಿ ಕಬ್ಬೆಲ್ಲಾ ಒಣಗುತ್ತಾ ಇದೆ, ಸಕ್ಕರೆ ಇಳುವರಿ 12-13ರಷ್ಟು ಬರಬೇಕಾಗಿರುವುದು. ಅದು ಬಾರದೆ ಕೇವಲ ಏಳರಷ್ಟು ಬಂದಿದೆ. ಇದರಿಂದ ರೈತರಿಗೆ ಎಷ್ಟು ನಷ್ಟವಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಅವನಿಗೆ ಏನು ಉತ್ಪತ್ತಿ ಬರುತ್ತದೆ. ಬರತಕ್ಕ ಉತ್ಪತ್ತಿಗೆ ಸರಿಯಾದ ರೇಟುಗಳು ಅವನಿಗೆ ಸಿಕ್ಕುತ್ತಿವೆಯೇ ಎನ್ನುವುದನ್ನು ನೋಡಬೇಕಾಗಿದೆ. 1959-60ನೇ ಸಾಲಿನಲ್ಲಿ 60-61ರಲ್ಲಿ ಸೆಟ್ಲ್‌ಮೆಂಟು ಹೆಚ್ಚಿಗೆ ರೇಟು ಇಂಡಿಯಾ ಸರಕಾರದವರು ಮಾಡಿ ಅದರಂತೆ ಕಂಪನಿಯವರು ಕೊಟ್ಟಿಲ್ಲ. ರೈತರಿಗೆ ಬರಬೇಕಾಗಿರುವ ಈ ಹಣವನ್ನು ಇಂಡಿಯಾ ಸರಕಾರದವರ ಆರ್ಡರ್‌ನಂತೆ ಕೊಡಿಸಿ ಕೊಡಲು ಸರ್ಕಾರದವರು ಗಮನ ಕೊಡಬೇಕು. ಇವೆಲ್ಲಾ ಲೆಕ್ಕ ಹಾಕಿಕೊಂಡು ನೋಡಿದರೆ ಕಂದಾಯ ಯಾವ ರೀತಿ ಕೊಡುವುದಕ್ಕಾಗುತ್ತದೆ ಎನ್ನುವುದನ್ನು ನೋಡಬಹುದು. ಒಂದು ತರಿ ಜಮೀನು ನೋಡಿ. ಭತ್ತದ ಪಸಲು ಮಾಡುವಾಗ ಏನೇನು ಖರ್ಚಾಗುತ್ತದೆ, ಒಂದು ದಿವಸಕ್ಕೆ ಒಬ್ಬ ಕೂಲಿಯವನಿಗೆ ಏನು ಕೊಡುತ್ತಾನೆ? ಅಲ್ಲದೆ ಕೆಲವು ಕಡೆ ಕೂಲಿಯವರೇ ಸಿಗುವುದಿಲ್ಲ. ಅವನಿಗೆ ಅನ್ನ ಬಟ್ಟೆ ಕೊಟ್ಟುಕೊಂಡು ಅವನು ಕೇಳುವಷ್ಟು ದುಡ್ಡು ಕೊಡಬೇಕಾಗುತ್ತದೆ. ಇಷ್ಟೆಲ್ಲಾ ಮಾಡಿಕೊಂಡು ಒಬ್ಬ ಗುತ್ತಿಗೇದಾರ ಜಮೀನು ಇಟ್ಟುಕೊಂಡು ಏನೋ ಐದಾರು ಪಲ್ಲದಷ್ಟು ಬೆಳೆಯಬಹುದು. ಇದರಲ್ಲಿ ಅವನು ಜಮೀನುದಾರರಿಗೆ ಕೊಡುವುದನ್ನು ಕೊಟ್ಟು ಅದರ ಮೇಲೆ ಕಂದಾಯವನ್ನು ಕೊಡಬೇಕು. ಇದನ್ನೆಲ್ಲಾ ಮಾಡಿದ ಮೇಲೆ ಅವನಿಗೇನು ಉಳಿಯುತ್ತದೆ ಎನ್ನುವುದನ್ನು ನೋಡಬೇಕು, ಇವೆಲ್ಲಾ ದೃಷ್ಟಿಗಳಿಂದ ನೋಡಿಕೊಂಡು ಯೋಚನೆ ಮಾಡಿ ಆದಷ್ಟೂ ಕಂದಾಯವನ್ನು ಕಮ್ಮಿ ಮಾಡಬೇಕು. ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದರು. ಕಂದಾಯವನ್ನು ಕೊಡುವುದರಲ್ಲಿ ತಾಲ್ಲೂಕಾ ಬೋರ್ಡುಗಳಿಗೆ ಇಷ್ಟು ಕೊಡುತ್ತೇವೆ, ಪಂಚಾಯಿತಿಗಳಿಗೆ ಇಷ್ಟು ಕೊಡುತ್ತೇವೆ ಎಂದು ಹೇಳಿದರು ತಾಲ್ಲೂಕಾ ಬೋರ್ಡುಗಳವರಿಗೆ ಕೊಡುವುದರಿಂದ ರೈತರಿಗೇನು ಉಪಕಾರವಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಇದರಿಂದ ತಾಲ್ಲೂಕಾ ಬೋರ್ಡುಗಳಲ್ಲಿನ ಇಲಾಖೆಯವರಿಗೇ ಸಹಾಯವಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಿಲ್ಲ. ಪಂಚಾಯಿತಿಗಳಿಗೆ ಕೊಡುತ್ತೇವೆಂದು ಹೇಳುತ್ತೀರಿ. ಪಂಚಾಯಿತಿಗಳು ಕೊಡುವ ಸ್ಥಿತಿಯಲ್ಲಿವೆಯೇ ಯೋಚನೆ ಮಾಡಿ ನೋಡಬೇಕು. ಅಲ್ಲದೆ ಈಗ ಪಂಚಾಯತಿಗಳವರಿಗೆ ಕೋಳಿ ಸಾಕಾಣಿಕೆ ಫಾರಂಗಳೆಂದು ನೋಡಬೇಕು ಎಂದು ತಂದಿದ್ದಾರೆ. ಇದರಿಂದ ರೈತರಿಗೇನಾದರೂ ಉಪಕಾರವಾದಂತಾಗುತ್ತದೆಯೇ? ಇವೆಲ್ಲಾ ಫಾರಂ ನಡೆಸುವವರ ಜವಾಬುಗಳ ದಾರಿಯಲ್ಲಿರುತ್ತದೆ. ನೀವು ಕೊಡತಕ್ಕ ದುಡ್ಡು ಪಂಚಾಯಿತಿಗಳಲ್ಲಿ ಹಾಗೂ ತಾಲ್ಲೂಕಾ ಬೋರ್ಡುಗಳಲ್ಲಿ ಎಷ್ಟು ವಿಚಕ್ಷಣೆಯಾಗಿ ವಿತರಣೆಯಾಗಿ ಅದರಿಂದ ರೈತರಿಗೆ ಎಷ್ಟುಮಟ್ಟಿನ ಸಹಾಯವಾಗುತ್ತದೆ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ಇಷ್ಟೆಲ್ಲಾ ಮಾಡಿದರೂ ನಿಮಗೆ ಸುಮಾರು ನಾಲ್ಕು ಅಥವಾ ಐದು ಕೋಟಿಯಷ್ಟು ಹಣ ಬರಬಹುದು. ರೈತ ಕಷ್ಟಪಟ್ಟು ಅನ್ನ ಕೊಡತಕ್ಕ ರೈತರ ಮೇಲೆ ಹೊರೆ ಹೊರಿಸಿ ನಾಲ್ಕು ಕೋಟಿ ರೂಪಾಯಿಗಳಷ್ಟು ಎಂದು ತೆಗೆದುಕೊಳ್ಳುವುದು ಸಾಧುವಾದುದಲ್ಲ. ಅಲ್ಲದೆ ಸರಕಾರ ದೊಡ್ಡ ದೊಡ್ಡ ಕಾಂಗಾರಿ ಮಾಡಿಸುವುದಕ್ಕೆ ಮತ್ತು ತಾಲ್ಲೂಕಾ ಬೋರ್ಡುಗಳಿಗ ಗಿ ಖರ್ಚುಮಾಡುವಾಗ ಮತ್ತು ಇನ್ನು ಅನೇಕ ಬಾಬುಗಳಲ್ಲಿ ಖರ್ಚುಮಾಡುವುದನ್ನು ತಪ್ಪಿಸಿ ಮಿತವ್ಯಯಮಾಡಬಹುದು. ಹಾಗೆ ಮಿತವ್ಯಯ ಮಾಡುವುದರಿಂದ ಸರಕಾರಕ್ಕೆ ಸುಮಾರು ನಾಲ್ಕು ಕೋಟಿಯಷ್ಟು ಹಣ ಉಳಿಯುತ್ತದೆ. ಅದನ್ನು ಉಪಯೋಗಿಸಿಕೊಂಡು ಸರಕಾರ ತನ್ನ ಕೆಲಸಗಳನ್ನು ಮಾಡಬಹುದು. ಹೀಗೆ ರೈತನ ಮೇಲೆ ಹೆಚ್ಚು ಹೊರೆ ಹೊರಿಸಬೇಕೆಂದು ತಂದಿರುವ ಈ ನಿರ್ಣಯವನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ವಾಪಸು ತೆಗೆದುಕೊಳ್ಳಬೇಕೆಂದು ಈ ಸಮಯದಲ್ಲಿ ಅವರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

†ಶ್ರೀ ವಿ. ಎಂ. ದೇವ್.—ಸ್ವಾಮಿ, ಯಾರು ವ್ಯವಸಾಯ ಒಂದನ್ನೇ ಜೀವನದಲ್ಲಿ ಮಾಡಿಕೊಂಡಿದ್ದಾರೋ, ಅದರ ಅರಿವು ಇದೆಯೋ ಅಂತಹವರು ರೆವೆನ್ಯೂ ರೀ ಸೆಟಲ್‌ಮೆಂಟು ಪ್ರಕಾರ ಇಲ್ಲಿ ಸರಕಾರದವರು ತಂದಿರುವ ಪಟ್ಟಿಯನ್ನು ನೋಡಿದರೆ ಇದರ ಉದ್ದೇಶ ಅವರಿಗೆ ಪೂರ ಮನವರಿಕೆಯಾಗಿದೆಯೋ ಇಲ್ಲವೇ ಎನ್ನುವ ಒಂದು ಅನುಮಾನ ಬರುತ್ತದೆ. ಇದಕ್ಕೆ ಕಾರಣವೇನು ? ಇದರಲ್ಲಿ ಕೊಳ್ಳೆ ಹೊಡೆಯುವ ಒಂದು ಉದ್ದೇಶವಿದೆಯೇ ವಿನಾ ಬೇರೇನಿಲ್ಲ. ಪೂರ್ವದಲ್ಲಿ ಹಳ್ಳಿಗಳಲ್ಲಿ ಕೊಡತಕ್ಕ ಕೂಲಿಯೇನು ಈಗ ಕೂಲಿಗಾರರಿಗೆ ಕೊಡುವ ಕೂಲಿಯೇನು ? ಅದನ್ನು ಹೋಲಿಸಿ ನೋಡಿದರೆ ಎಷ್ಟು ಜನ ಭೂಮಿಯಲ್ಲಿ ಬಂದು ಕೆಲಸಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಮಾಡರನ್ ಟೈಂಸಗೆ ಅನುಗುಣವಾಗಿ ಹಳ್ಳಿಗಳ ಸಂಪರ್ಕವಿಲ್ಲ ಮತ್ತು ಯಾವ ಒಂದು ಸಂಘಟನೆಯೂ ಇಲ್ಲ. ಅವರಿಗೆ ಬೇಕಾಗಿರುವುದು ದುಡ್ಡು. ಅದಕ್ಕಾಗಿ ಅವರು ತಮ್ಮ ಸ್ಥಾನ ಒಂದು ಪಟ್ಟಭದ್ರವಾದುದು ಎಂದು ಅದನ್ನು ಹಿಡಿದುಕೊಂಡು ವೀಕರ್ ಸೆಕ್ಷನ್ ಎಂದು ಏನಿದೆ ಅವರನ್ನು ಕೊಳ್ಳೆ ಹೊಡೆಯಬೇಕು ಎನ್ನುವ ಉದ್ದೇಶದಿಂದ ಇದನ್ನು ಇಲ್ಲಿ ತಂದಿದ್ದಾರೆ ಎಂದು ಅನಿಸುತ್ತದೆ. ಯಾವ ರಾಷ್ಟ್ರವೇ ಆಗಿರಲಿ ಅಲ್ಲಿ ಯಾವ ತರಹದಲ್ಲಿ ವ್ಯವಸಾಯದ ವ್ಯವಹಾರಗಳು ಯಾವರೀತಿಯಾಗಿದೆ, ಮುಖ್ಯವಾಗಿ ಏನಿರಬೇಕು ಎನ್ನುವುದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಕೇಶವಮೂರ್ತಿಗಳು ಹೇಳುವಾಗ ಕೆಲವು ವಿವರಗಳನ್ನು ಓದಿ ಹೇಳಿದುದನ್ನು ಯಾರೂ ಸರಿಯಾಗಿ ಕೇಳಲಿಲ್ಲ ಎಂದು ನನಗೆ ತೋರುತ್ತೆ. ಬೆಳೆ ಮಾಡುವವರಿಗೆ ಮೂರನೆ ಒಂದು ಭಾಗದಷ್ಟು ಸಹಾಯವನ್ನು ಮತ್ತು ಅದಕ್ಕೆ ಬೇಕಾಗುವ ಕಟ್ಟಡಗಳು ಮತ್ತಿತರ ಸಲಕರಣೆಗಳನ್ನು ಒದಗಿಸಿ ಕೊಡುತ್ತಾರೆ. ಇದು ಬಂಡವಾಳ ಷಾಹಿ ರಾಷ್ಟ್ರದ ಮಾತಾಯಿತು. ಒಬ್ಬ ಮನುಷ್ಯ ಜಮೀನಿನಲ್ಲಿ ಬೆಳೆಯುವಾಗ ಅದಕ್ಕೆ ಹಿಂಡಿಯನ್ನು ಹಾಕುತ್ತಾರೆ. ಅದರಲ್ಲಿ ಅರ್ಧ ಭಾಗದಷ್ಟು ಹಿಂಡಿ ಕೊಡುತ್ತಾರೆ ಅರ್ಧ ಭಾಗದಷ್ಟು ಸಬ್ಸಿಡಿ ಎಂದು ಕೊಡುತ್ತಾರೆ. ಇವೆಲ್ಲಾ ಬಂಡವಾಳಷಾಹಿ ರಾಷ್ಟ್ರದ್ದು ಆಯಿತು. ಇನ್ನು ಸಮಾಜವಾದಂತಹ ನಮ್ಮ ರಾಷ್ಟ್ರದಲ್ಲಿ ಏನು ಮಾಡುತ್ತಿದ್ದಾರೆ ಎನ್ನುವುದು ಇಲ್ಲಿ ಖಚಿತವಾಗಿ ಗೊತ್ತಾಗುತ್ತದೆ. ಕಂದಾಯವನ್ನು ಹೆಚ್ಚು ಕೊಡಬೇಕೆಂದು ಹೇಳುವಾಗ ಅವನು ಜಮೀನಿನಲ್ಲಿ ಸರಿಯಾಗಿ ಉಳುಮೆಮಾಡಲು ಅದಕ್ಕೆ ಬೇಕಾದ ಸಾಧನ ಸಲಕಣೆಗಳು, ಗೊಬ್ಬರ ಇದನ್ನೆಲ್ಲಾ ಉಪಯೋಗಿಸುತ್ತಿದ್ದಾರೆಯೇ ? ಎಂದು ನೋಡಿಕೊಂಡು ವರ್ಷೇ ವರ್ಷೇ ಇದರ ಜನರಲ್ ಕೋಟಾವನ್ನು ಏರಿಸುತ್ತಿದ್ದಾರೆ. ಇದನ್ನೆಲ್ಲಾ ಸರಿಯಾಗಿ ಉಪಯೋಗಿಸಿಕೊಂಡು ರೈತ ಬೆಳೆಯನ್ನು ಬೆಳೆದರೆ ಆದರಿಂದ ಶೇಕಡಾ ಐವತ್ತರಷ್ಟು ಜಾಸ್ತಿ ಬೆಳೆಯಬಹುದು ಮತ್ತು ಅವರಿಗೆ ಇದರಿಂದ ಒಂದು ತರಹದ ಇನ್‌ಸೆಂಟೀವ್ ಬರುತ್ತದೆ. ಇದನ್ನು ಯಾವ ಉದ್ದೇಶದಿಂದ ಹೇಳುತ್ತಿದ್ದೇನೆ ಎನ್ನುವುದನ್ನು ತಾವು ಯೋಚನೆಮಾಡಬೇಕು. ಯಾವ ದೇಶದಲ್ಲೇ ತೆಗೆದುಕೊಳ್ಳಿ, ಎಲ್ಲೇ ಆಗಲಿ, ರೈತನಾಗಿರುವವನು ತನ್ನ ಮಕ್ಕಳನ್ನು ಎಂದರೆ ಒಬ್ಬ ಹೆಣ್ಣು ಮಗಳನ್ನು ಇನ್ನೊಬ್ಬರಿಗೆ ಕೊಟ್ಟು ಮದುವೆ ಮಾಡುವಾಗ ಅವನು ತನ್ನ ಮಗಳು ಚೆನ್ನಾಗಿ ಬದುಕಬೇಕು ಮತ್ತು ತನ್ನ ಸಂಸಾರವನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕು ಎನ್ನುವುದನ್ನು ನೋಡುತ್ತಾನೆ. ಅಲ್ಲಿ ವ್ಯವಸಾಯ ಮಾಡತಕ್ಕ ರೈತನಿಗೆ ಭೂಮಿ ಎಷ್ಟು ಇದೆ ಎನ್ನುವುದನ್ನು ನೋಡದೆ ಗೊಬ್ಬರ ಒದಗಿಸತಕ್ಕಂಥ ತಿಪ್ಪೆ ಎಷ್ಟು ಇದೆ ಎಂಬುದನ್ನು ನೋಡುತ್ತಾರೆ. ರೈತರಿಗೆ ಬೇಕಾಗತಕ್ಕ ಗೊಬ್ಬರ ಒದಗಿಸಿಕೊಡದೆ ಎಕರೆಯೇಕೀ ಕಂದಾಯ ಹೊರೆ ಹೇರಿರುವುದು ಆಶ್ಚರ್ಯವಾಗುತ್ತದೆ. ಮುಂದೆ ಏನು ಮಾಡಬೇಕು, ಸರಕಾರ ಏನು ಮಾಡಬೇಕು, ಮಾನ್ಯ ಸದಸ್ಯರು ಏನು ಮಾಡಬೇಕು ಎಂಬುದನ್ನು ಯೋಚನೆ ಮಾಡಿದ್ದಾರೆಯೇ ? ಪಂಚವಾರ್ಷಿಕ ಯೋಜನೆ ಕಾರ್ಯಗತ ಮಾಡುತ್ತೇವೆಂದು ಮಾತು ಕೊಟ್ಟು ನೀವು ಮಂತ್ರಿಗಳಾಗಿದ್ದೀರಿ. ಇದು ಸಂತೋಷ. ಕೊಟ್ಟ ಮಾತನ್ನು ನಡೆಸಿಕೊಟ್ಟರೆ ಸಂತೋಷ. ಬರೀ ನಟನಾಚಾರ್ಯನಂತೆ ಮಾತನಾಡಿದರೆ ಪ್ರಯೋಜನವಿಲ್ಲ. ನಮ್ಮ ದೇಶದಲ್ಲಿ ಅಗ್ರಿಕಲ್ಚರ್ ಮತ್ತು ಇಂಡಸ್ಟ್ರೀ ಇವುಗಳಲ್ಲಿ ನಿಕಟ ಸಂಬಂಧ ಇದೆ. ಇದು ಒಂದು ದೇಹ ಇದ್ದಹಾಗೆ. ತಲೆ ಬೇರೆ ದೇಹ ಬೇರೆ ಎಂದು ಹೇಳುವುದಕ್ಕಾಗುವುದಿಲ್ಲ. ಅನುಕೂಲಕ್ಕೋಸ್ಕರ ಈ ಎರಡು ಇಲಾಖೆಗಳನ್ನು ವಿಂಗಡಿಸಲಾಗಿದೆ. ಆದರೆ ಅವು ಬೇರೆ ಬೇರೆ ಅಲ್ಲ. ಇಂಡಸ್ಟ್ರೀಗೆ ಬೇಕಾಗುವ ಕಚ್ಚಾಮಾಲು ವ್ಯವಸಾಯದಿಂದ ಉತ್ಪಾದಿಸಲಾಗುತ್ತದೆ. ಕಚ್ಚಾ ವಸ್ತುವಿನ ಮೇಲೆ ತೆರಿಗೆ ಹಾಕಿದರೆ ಅದು ಲಾಭದಾಯಕವಲ್ಲ. ಇದು ಪ್ರಪಂಚದ ಸಿದ್ಧಾಂತ. ಇದನ್ನು ಸರಿಯಾಗಿ ಯೋಚನೆ ಮಾಡಿ ನೋಡಬೇಕು. ಅಭಿವೃದ್ಧಿಕಾರ್ಯಕಲಾಪಗಳಿಗೆ ಪಂಚವಾರ್ಷಿಕ ಯೋಜನೆಗೆ ಹಣಬೇಕು. ಹಾಗಾದರೆ ಹಣ ಎಲ್ಲಿಂದ ಬರಬೇಕು ? ಕಚ್ಚಾ ಮಾಲು ಮತ್ತು ಇಂಡಸ್ಟ್ರೀ ಇದ್ದರೆ ಹಣ ಬರುತ್ತದೆ. ದೇಶದ ಹಿತ ದೃಷ್ಟಿಯಿಂದ ಹೇಳುವುದಾದರೆ ನಾವೆಲ್ಲರೂ ಜನತೆಗೆ ಮಾತು ಕೊಟ್ಟಿದ್ದೇನೆ. ಸಮಾಜವಾದೀ ಸಮಾಜ ರಚನೆ ಮಾಡುತ್ತೇವೆಂದು ಹೇಳಿದ್ದೇವೆ. ದೇಶದಲ್ಲಿ ಇಂದು ಇಂಡಸ್ಟ್ರೀಜ್ ಬೆಳೆಯ ಬೇಕಾಗಿದೆ. ಇಂಡಸ್ಟ್ರೀಜ್ ಬೆಳವಣಿಗೆಯಾದರೆ ಸರಕಾರಕೆ

(ಶ್ರೀ ವಿ. ಎಂ. ದೇವ್)

ಅಗಾಧವಾಗಿ ಹಣ ಬರುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಶ್ರೀಮಾನ್ ಅವಲರೆಡ್ಡಿಯವರು ತಮ್ಮ ಭಾಷಣದಲ್ಲಿ ಈ ವಿಚಾರವನ್ನು ಬಹು ಚೆನ್ನಾಗಿ ಹೇಳಿದರು. ಕೈಗಾರಿಕೆಗೆ ಏಟು ಬಿದ್ದರೆ ಒಕ್ಕಲತನ ದಿವಾಳಿ ಏಳುತ್ತದೆ, ಪಂಚಾಯತ ರಾಜ್ಯ ಮುಂದಕ್ಕೆ ಯಶಸ್ವಿಯಾಗಿ ಹೋಗುವುದಿಲ್ಲ. ಬರೀ ದುಡ್ಡು ಕಿತ್ತುಕೊಳ್ಳುತ್ತಾರೆ ಎಂದು ಅವರು ಹೇಳಿದರು. ಇದರಿಂದ ಏನಾಗಿದೆ ಎಂದರೆ, ನಮ್ಮ ಮಾರಲ್ ಸ್ಟಾಂಡರ್ಡ್ ಬೀಳುತ್ತಿದೆ. ನೈತಿಕ ಮಟ್ಟ ಕೆಳಗೆ ಇಳಿಯುತ್ತಿದೆ ಎಂದು ಖಂಡಿತವಾಗಿ ನಾನು ಹೇಳುತ್ತೇನೆ. ನಮ್ಮ ದೇಶದಲ್ಲಿ ಹೆಚ್ಚು ಜನ ರೈತರು ಆಗಿದ್ದಾರೆ. ರೈತರು ಬಡವರಾಗಿ ದ್ದಾರೆ. ಇವರನ್ನು ಉಪೇಕ್ಷೆ ಮಾಡಿಬಿಟ್ಟು ಇವರ ವಿಶ್ವಾಸ ಕಳೆದುಕೊಳ್ಳುವ ವ್ಯವಹಾರ ಮಾಡು ತ್ತಿದ್ದೀರಿ. ಸ್ಟೇಟ್ ಸೆಕ್ಟರಿನ ಇಂಡಸ್ಟ್ರೀಜಿನಲ್ಲಿ ಎಲ್ಲಿ ಟೆಕ್ನೀಶಿಯನ್ ಇರಬೇಕೋ ಅಲ್ಲಿ ರೆವಿನ್ಯೂ ಆಫೀಸರ್ ಹಾಕಿದ್ದೀರಿ. ಫಾರೆನ್ ಕೊಲಾಬೊರೇಷನ್‌ನಲ್ಲಿ ಕೆಲವು ಇಂಡಸ್ಟ್ರೀಜ್ ಪ್ರಾರಂಭ ಮಾಡ ಲಾಗಿದೆ. ಅಮ್ಮಸಾಂದ್ರದಲ್ಲಿ ಸೀಮೆಂಟ್ ಫ್ಯಾಕ್ಟರಿ ಇದೆ, ಸೈಕಲ್ ಫ್ಯಾಕ್ಟರಿ ಮಾಡಿದ್ದೀರಿ. ನಿಮಗೆ ಬೇಕಾದವರ ಹಿತಾಸಕ್ತಿ ದೃಷ್ಟಿಯಿಂದ ಕೆಲಸಕಾರ್ಯ ಮಾಡಲಾಗುತ್ತಿದೆ. ಬರೀ ನಟನೆ ಮಾಡುತ್ತಿದ್ದೀರಿ. ಮನ ಮುಟ್ಟಿ ಕೆಲಸ ಮಾಡತಕ್ಕಂಥವರಿಗೆ ಉಳಿಗಾಲವಿಲ್ಲ. ದೇಶದ ದುಡ್ಡು ಹರಿದು ಹೋಗುತ್ತಿದೆ. ಇನೊಂದು ವಿಚಾರ. ದ್ವಂದ್ವಜೀವನ ನಮಗೆ ಮುಖ್ಯವಾಗಿ ಬೇಕು. ನಾವೆಲ್ಲರೂ ಈ ಸಭೆಗೆ ಸದಸ್ಯರೆಂದು ಚುನಾಯಿತರಾಗಿ ಬರಬೇಕಾದರೆ ರೈತರಿಗೆ ಮಾತು ಕೊಟ್ಟಿ ದ್ದೇವೆ. ರೈತರ ಪರವಾಗಿ ಕೆಲಸ ಮಾಡುತ್ತೇವೆಂದು ಹೇಳಿದ್ದೇವೆ. ಸರಕಾರ ಮಾಡುತ್ತಿರುವ ಕೆಲಸ ನೋಡಿದರೆ ಎಲ್ಲವೂ ಪಲ್ಲಟವಾಗಿದೆ. ಈ ರೀತಿ ಇರಕೂಡದು. ಆದುದರಿಂದ ನಾನು ಒಂದು ಸಲಹೆ ಮಾಡಲು ಬಯಸುತ್ತೇನೆ. ಜನವರಿ 26 ನೇ ತಾರೀಖಿನ ದಿನ ನಾವೆಲ್ಲರೂ ಪೂರ್ಣ ಸ್ವಾತಂತ್ರ್ಯದ ಪ್ರತಿಜ್ಞೆಯನ್ನು ಪುನಃ ತೆಗೆದುಕೊಳ್ಳೋಣ. ದೇಶದಲ್ಲಿಯ ಬಡತನ ದಾರಿದ್ರ್ಯ ತೊಡೆದು ಹಾಕಲು ಸತತ ಪ್ರಯತ್ನ ಪಡೋಣ. ಜನತೆಗೆ ಮಾತು ಕೊಟ್ಟಂತೆ ಕಾರ್ಯಾಚರಣೆ ಮಾಡೋಣ. ನಾವು ನಮ್ಮ ಕರ್ತವ್ಯ ಮಾಡಬೇಕು. ಜನತೆ ತನ್ನ ಕರ್ತವ್ಯ ಮಾಡುತ್ತದೆ. ನಮ್ಮ ಕರ್ತವ್ಯ ನೆರವೇರಿಸು ವುದಕ್ಕೆ ಇದೊಂದು ಅವಕಾಶವಿದೆ. ಎಲ್ಲರ ಕರ್ತವ್ಯದ ಬಗ್ಗೆ ಜಾಗ್ರತೆ ಉಂಟು ಮಾಡಲು ಈ ಸಭೆ ಯಲ್ಲಿ ಅಧ್ಯಕ್ಷರು ಇದ್ದಾರೆ. ಅವರು ನಿಮ್ಮನ್ನು ದಾರಿಗೆ ತರುತ್ತಾರೆ. ಇನ್ನೂ ಅನೇಕ ವಿಚಾರಗಳನ್ನು ಹೇಳಬೇಕಾಗಿದೆ. ಆದರೆ ಅವುಗಳನ್ನು ಸವಿಸ್ತಾರವಾಗಿ ಹೇಳುವುದಕ್ಕೆ ಈಗ ಕಾಲಾವಕಾಶವಿಲ್ಲ. ಇದುವರೆಗೆ ನನಗೆ ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟಿರುವುದರಿಂದ ಅಧ್ಯಕ್ಷರಿಗೆ ನಾನು ಋಣಿಯಾಗಿದ್ದೇನೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ, ಮಾನ್ಯ ಸ್ನೇಹಿತರು ಆ ಕಡೆಯಿಂದ ಮಾತನಾಡುತ್ತಾ, ಶ್ರೀಮಾನ್ ಕೃಷ್ಣ ಮತ್ತು ಇತರರು ಬಹಳ ಆಗ್ರಹಪೂರ್ವಕವಾಗಿ ಜನಗಳ ಅಭೀಷ್ಟಕ್ಕೆ ವಿರುದ್ಧವಾಗಿ ಸರ್ಕಾರದವರು ಮತ್ತು ಆಡಳಿತ ಪಕ್ಷದವರು ಈ ನಿರ್ಣಯವನ್ನು ಇಟ್ಟಿದ್ದಾರೆ ಅವರಿಗೆ ಹೊರೆಯನ್ನು ಹೊರಿಸುತ್ತಾ ಇದ್ದಾರೆ ಎಂದು ಹೇಳಿ ಮಾತನಾಡಿದ್ದಾರೆ. ಮಾನ್ಯ ರೆವಿನ್ಯೂ ಮಂತ್ರಿಗಳು ಈ ಒಂದು ರಿಪೋರ್ಟಿನಲ್ಲಿ ಏನು ನಮೂದಾಗಿದೆ ಇದನ್ನೇ ನಾವು ಅಂಗೀಕರಿಸುತ್ತಾ ಇದ್ದೇವೆ ಎಂದು ಭಾವಿಸಬಾರದು, ಲ್ಯಾಂಡ್ ರೆವಿನ್ಯೂ ಆಕ್ಟ್ ಸೆಕ್ಷನ್ 121 ರ ಪ್ರಕಾರ ಈ ಸೆಟ್ಲ್‌ಮೆಂಟ್ ರಿಪೋರ್ಟನ್ನು ನಾವು ಈ ಸಭೆಯಲ್ಲಿ ಇಟ್ಟಿದ್ದೇವೆ, ನಿಮ್ಮ ಅಭಿಪ್ರಾಯ ಗಳನ್ನು ಕೇಳುತ್ತಾ ಇದ್ದೇವೆ, ನಿಮ್ಮ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಒಂದು ತೀರ್ಮಾನವನ್ನು ಈ ಸಭೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿ ಅವರು ಈ ನಿರ್ಣಯದ ಬಗ್ಗೆ ತಿಳಿಸುತ್ತಾ ಹೇಳಿ ದರು. ಹಾಗೆಂದ ಮೇಲೆ ರೈತರಿಗೆ ಎಷ್ಟು ಕಂದಾಯವನ್ನು ವಿಧಿಸಬಹುದು, ಡ್ರೈ ವೆಟ್ ಬಾಗಾಯ್ತು ಇದು ಎಷ್ಟೆಷ್ಟರಮಟ್ಟಿಗೆ ಯಾವ ಯಾವ ದರದಲ್ಲಿ ವಿಧಿಸಬಹುದು ಎಂಬುದನ್ನು ವಿಚಾರ ಮಾಡಿ ಈ ಸಭೆ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಎಂದು ಮೇಲೆ ವಿರೋಧಪಕ್ಷದವರಿಗೆ ಮಾತ್ರ ಅವರ ಮೇಲೆ ದೃಷ್ಟಿ ಇದೆ—ರೈತರಿಗೆ ಹೊರೆ ಹೆಚ್ಚಾಗಿದೆ, ಕಂದಾಯವನ್ನು ಹೆಚ್ಚಾಗಿ ಹಾಕಬಾರದು ಅದನ್ನು ಪ್ರತಿಭಟಿಸುತ್ತಾ ಇದ್ದೇವೆ ಎಂದು ಹೇಳುವುದು ಅವರಿಗೆ ಮಾತ್ರ ಮೀಸಲು ಅಲ್ಲ, ಅವರಿಗೆ ತಿಳಿದಿರುವ ಹಾಗೆ ತಮ್ಮ ಪಕ್ಷದವರೂ ಕೂಡ ಮಾತನಾಡಿ ದಂತಹವರು ಆ ವಿಷಯವನ್ನು ತಿಳಿಸಿದ್ದಾರೆ. ಈ ರಿಪೋರ್ಟಿನಲ್ಲಿ ಯಾವ ರೀತಿ ಮಾಡಿ ದ್ದಾರೆ ಇದಕ್ಕೆ ಏನು ವಿರೋಧ ಬಂದಿದೆ ಎಂಬುದನ್ನು ತಿಳಿಸಬೇಕೆಂಬುದು ಕಾನೂನು ರೀತ್ಯಾ ಇದೆಯೇ ಹೊರತು ಸರ್ಕಾರದವರೇ ತೀರ್ಮಾನವನ್ನು ತೆಗೆದುಕೊಂಡು ಅದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಯಾವ ಒಂದು ಪ್ರಾವಿಜನ್ ಕೂಡ ಇಲ್ಲ. ಆ ರೀತಿ ಇದ್ದಿದ್ದರೆ ಈ ರೀತಿ ಮಾಡುತ್ತಾ ಇದ್ದರೇ? ಇಲ್ಲ. ಆಡಳಿತ ಪಕ್ಷದವರೂ ಕೂಡ ರೈತಾಪಿಜನಗಳಲ್ಲಿ ಪ್ರೇಮ ಉಳ್ಳವರಾಗಿದ್ದಾರೆ ಅವರ ತೊಂದರೆ ಏನು ಎಂಬುದು ಅವರಿಗೆ

ಗೊತ್ತಿದೆ. ಎಷ್ಟು ಲ್ಯಾಂಡ್ ರೆವಿನ್ಯೂ ಹಾಕಬೇಕು, ಯಾವ ಯಾವುದಕ್ಕೆ ಎಷೆಷ್ಟು ಹಾಕಬೇಕೆಂಬುದನ್ನೂ ಕೂಡ ಆ ಜವಾಬ್ದಾರಿಯನ್ನು ಅರಿತಿರತಕ್ಕವರೂ ಇಲ್ಲೂ ಕೂಡ ಇದ್ದಾರೆ. ಕುಲಂಕಷರಾಗಿ ಈಗ ಚರ್ಚೆ ನಡೆಯುತ್ತಾ ಇದೆ. ಪ್ರತಿಯೊಂದು ಜಿಲ್ಲೆಯಿಂದಲೂ ಕಳುಹಿಸಿರತಕ್ಕ ರಿಪೋರ್ಟ್‌ನ್ನು ತೆಗೆದುಕೊಂಡು ಸ್ವಲ್ಪ ಅವುಗಳ ಒಳಗಿನ ವಿಷಯಗಳಿಗೆ ಹೋದರೆ ಅಲ್ಲಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಈಗಿನ ದರಗಳನ್ನು ಪರಿಗಣನೆಗೆ ತೆಗೆದುಕೊಂಡು ಕಂದಾಯವನ್ನು ಹೆಚ್ಚು ಮಾಡುವುದು ಸೂಕ್ತ ಎಂಬುದು ಒಟ್ಟಿನ ಅಭಿಪ್ರಾಯ, ಆದರೆ ಅದು ಎಷ್ಟರಮಟ್ಟಿಗೆ ಯಾವ ವರದಲ್ಲಿ ಏರಿಸಬಹುದು ಎಂಬುದರಲ್ಲಿ ಬಿನ್ನಾಭಿಪ್ರಾಯ ಇದೆ, ಕೆಲವು ಜಿಲ್ಲೆಗಳಲ್ಲಿ ಕೊಟ್ಟಿರತಕ್ಕ ರಿಪೋರ್ಟನ್ನು ನೋಡಿದರೆ ಅವರು ಪೂರ್ಣವಾಗಿ ಎಲ್ಲವನ್ನೂ ವಿಮರ್ಶೆಮಾಡಿ ಗ್ರಾಸ್‌ಯೀಲ್ಡ್‌ನ 16 ಭಾಗದಲ್ಲಿ 1 ಭಾಗವನ್ನು ಕಂದಾಯದ ರೂಪಾದಲ್ಲಿ ಕೊಡಬೇಕೆಂದು ಹೇಳಿದ್ದಾರೆ. ಅದು ಅಲ್ಲದೆ ಸನ್ನಿವೇಶಕ್ಕೆ ತಕ್ಕಂತೆ ಕಾಸ್ಟ್ ಆಫ್ ಕಲ್ಟಿವೇಷನ್ ಎಷ್ಟು ಬೀಳುತ್ತದೆ ಮತ್ತು ಅಲ್ಲಿ ರೈತನ ಪರಿಸ್ಥಿತಿ ಹೇಗೆ ಇದೆ, ಅವರ ಆದಾಯ ವೆಚ್ಚ ಏನು ಎಂಬುದನ್ನೆಲ್ಲಾ ಪೂರ್ಣವಾಗಿ ವಿಮರ್ಶೆ ಮಾಡಿ ಕೆಲವರು 16 ನೇ ಒಂದು ಕೆಲವರು 20 ನೇ ಒಂದು ಕೆಲವರು 25 ನೇ ಒಂದು ಈ ರೀತಿ ಎಲ್ಲಾ ಮಾಡಬೇಕೆಂದು ಹೇಳಿದ್ದಾರೆ. ದಾವಾಷ ಹೇಳುತ್ತಾ ಇಷ್ಟು ಪರ್ಸೆಂಟ್ ಹೆಚ್ಚು ಮಾಡಬಹುದು ಎಂದು ಕೆಲವರು ಬಹಳ ವಿವೇಕಯುತವಾಗಿ ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಇನ್ನು ಕೆಲವರು ಗಾರ್ಡನ್ ಲ್ಯಾಂಡ್‌ಗೆ 500-600 ಪರ್ಸೆಂಟ್ ಮಾಡಿದ್ದಾರೆ, ಕೆಲವರು 1000 ಕ್ಕೆ ಮೇಲ್ಪಟ್ಟು 1200 ರವರೆಗೂ ಏರಿಸಿದ್ದಾರೆ. ಇದರಲ್ಲಿ ಮುಖ್ಯವಾಗಿ ನಾವು ಗಮನಿಸಬೇಕಾದ್ದು ಏನೆಂದರೆ ವ್ಯವಸಾಯದ ಕಸುಬು ಏನಿದೆ ಅದಕ್ಕೆ ಹೆಚ್ಚಾಗಿ ಉತ್ತೇಜನ ಕೊಡಬೇಕು, ಪ್ರೋತ್ಸಾಹ ಕೊಡಬೇಕು, ದೇಶದಲ್ಲಿ ಆಹಾರದ ಅಭಾವ ಹೆಚ್ಚಾಗುತ್ತಾ ಇದೆ, ಅಧಿಕ ಬೆಳೆಯನ್ನು ಬೆಳೆಸುವುದಕ್ಕೆ ರೈತರಿಗೆ ಹೆಚ್ಚಿನ ಪ್ರೋತ್ಸಾಹ, ಹುರುಪು ಕೊಡಬೇಕು. ಅವನಿಗೆ ಬೆನ್ನು ತಟ್ಟಿ ಹೆಚ್ಚಾಗಿ ಬೆಳೆಯಲು ಅವನಿಗೆ ಸಕಲ ಸೌಕರ್ಯಗಳನ್ನೂ ಒದಗಿಸಬೇಕಾದ್ದು ಸರ್ಕಾರದವರ ಆದ್ಯ ಕರ್ತವ್ಯವಾಗಿದೆ. ಇತಂಹ ಒಂದು ಸನ್ನಿವೇಶದಲ್ಲಿ ಈಗ ಈ ಒಂದು ಕಂದಾಯವನ್ನು ಅಧಿಕಗೊಳಿಸಬೇಕೆಂದು ಹೇಳುವುದು ನ್ಯಾಯವಲ್ಲ ಎಂದು ಅನ್ನುವುದು ಎಲ್ಲ ಕಡೆಯವರ ಅಭಿಪ್ರಾಯವೂ ಕೂಡ ಆಗಿದೆ. ವ್ಯವಸಾಯದ ಕಸುಬು ಅಷ್ಟು ಲಾಭದಾಯಕವಾಗಿಲ್ಲ. ಕೆಲವು ರಿಪೋರ್ಟ್‌ಗಳಲ್ಲಿ ನಾನು ನೋಡಿದ್ದೇನೆ ಒಂದು ಎಕರೆ ತರೀಗೆ 258 ರೂಪಾಯಿ 13 ಪೈಸೆ, ಗಾರ್ಡನ್‌ಗೆ 1082 ರೂಪಾಯಿ, ಡ್ರೈಗೆ 113 ರೂಪಾಯಿ 56 ಪೈಸೆ, ಈ ರೀತಿ ಉತ್ಪನ್ನ ಬರುತ್ತದೆ ಎಂದು ಹೇಳಿದ್ದಾರೆ, ಇನ್ನು ಕೆಲವು ಕಡೆ ಇನ್ನೂ ಕಡಿಮೆ ಆಗಿದೆ. ಕಾಸ್ಟ್ ಆಫ್ ಪ್ರೊಡಕ್ಷನ್ ಕೂಡ ತಮಗೆಲ್ಲಾ ಗೊತ್ತಿರುವ ಹಾಗೆ ತರೀ ಜಮೀನಿಗೆ 250 ರೂಪಾಯಿ ಮೇಲ್ಪಟ್ಟು ಆಗುತ್ತದೆ ಖುಷ್ಕಿ ಜಮೀನಿಗೆ 100—120—150ರ ವರೆಗೂ ಹೋಗುತ್ತದೆ. ಗಾರ್ಡನ್ ಲ್ಯಾಂಡ್‌ಗೆ 500ರಿಂದ 1000 ರೂಪಾಯಿಗಳವರೆಗೂ ಹೋಗುತ್ತದೆ, ಹೀಗಿರುವಾಗ 16ನೇ ಒಂದು ಎಂಬ ತತ್ವದ ಮೇಲೆ ಮಾಡಿದರೆ ಅದು ಸರಿಯಾಗುವುದಿಲ್ಲ. ಒಂದು ಎಕರೆ ಜಮೀನಿನಲ್ಲಿ ಏನು ಬೆಳೆಯುತ್ತಾನೆ, ಅದಕ್ಕೆ ಎಷ್ಟು ಖರ್ಚಾಗುತ್ತದೆ, ಎಂಬ ಅಂಶವನ್ನು ಗಮನಕ್ಕೆ ತೆಗೆದುಕೊಂಡು ಮಾಡಬೇಕೇ ಹೊರತು ಈ ರೀತಿಯಾಗಿ ಕಂದಾಯವನ್ನು ಹಾಕುವುದಕ್ಕೆ ಯಾವ ಆಧಾರವೂ ಇಲ್ಲ ಎಂದು ಖಚಿತವಾಗಿ ತಿಳಿಸಬಹುದು. ಅನೇಕ ಮಾನ್ಯ ಮಿತ್ರರು ತಿಳಿಸಿದ ಹಾಗೆ ಪಂಚವಾರ್ಷಿಕ ಯೋಜನೆಗಳನ್ನು ನಾವು ಜಯಪ್ರದವಾಗಿ ನಡೆಸಬೇಕಾದರೆ ನಮ್ಮ ಆದಾಯವನ್ನೂ ಕೂಡ ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಹಿಂದೆ ಇರತಕ್ಕ ಕಂದಾಯಕ್ಕೆ ಅಂಟಿಕೊಂಡಿರಬೇಕೆಂದೂ ಕೂಡ ಹೇಳುವುದಕ್ಕೆ ಆಗುವುದಿಲ್ಲ ಆದರೆ ರೈತನ ಮೇಲೆ ಹೆಚ್ಚಿನ ಹೊರೆಯನ್ನು ಹಾಕುವುದಕ್ಕೂ ಆಗುವುದಿಲ್ಲ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಯಾವ ರೀತಿಯಲ್ಲಿ ಒಂದು ಕಂದಾಯವನ್ನು ಹಾಕಬೇಕೆಂದರೆ ಓವರ್ ಆಲ್ ತೆಗೆದುಕೊಂಡರೆ ಇದರಲ್ಲಿ ಭಿನ್ನಾಭಿಪ್ರಾಯ ಹೆಚ್ಚಾಗಿ ಬಂದಿರತಕ್ಕದ್ದು ಗಾರ್ಡನ್ ಲ್ಯಾಂಡ್ ವಿಚಾರದಲ್ಲಿ, ಕಾಫಿ, ತೆಂಗಿನಕಾಯಿ, ಏಲಕ್ಕಿ, ಅಡಿಕೆ ಇವುಗಳಿಗೆ ಬಹಳ ಹೆಚ್ಚಾಗಿ ಹಾಕಿದ್ದಾರೆ. ನಮ್ಮ ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಮತ್ತು ಚಿಕ್ಕಮಗಳೂರು ತಾಲ್ಲೂಕಿನ ವಿಚಾರದಲ್ಲಿ ಹೇಳುವುದಾದರೆ 800ರಿಂದ 1000 ರೂಪಾಯಿಗಳವರೆಗೂ ಬೀಳುತ್ತದೆ, ಅದರ ಮೇಲೆ ಎಕ್ಸೈಜ್ ಡ್ಯೂಟಿ 200ರಿಂದ 220ರೂಪಾಯಿಗಳವರೆಗೂ ಬೀಳುತ್ತದೆ ಮತ್ತು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕೊಡಬೇಕಾಗುತ್ತದೆ ಇದನ್ನೆಲ್ಲಾ ಗಣನೆಗೆ ತೆಗೆದುಕೊಂಡರೆ 100 ಪರ್ಸೆಂಟ್ ಹೆಚ್ಚು ಮಾಡಬಹುದು ಎಂದು ಹೇಳಿದ್ದಾರೆ. ಅದೇ ಕೊಡಗು ಮತ್ತು ಇತರ ಕೆಲವು ಜಿಲ್ಲೆಗಳಲ್ಲಿ ಎಕರೆಗೆ 76 ರೂಪಾಯಿ ಹಾಕಬಹುದು ಎಂದು ಹೇಳಿದ್ದಾರೆ. ಈ ರೀತಿ ಹಾಕುವುದು ನ್ಯಾಯವಲ್ಲ ಇದು ಬಹಳ ಹೆಚ್ಚಾಗುತ್ತದೆ. ಒಟ್ಟಿನಲ್ಲಿ ನಾವು ಯಾವ ಕಂದಾಯವನ್ನು ಹಾಕಬೇಕಾದರೂ ಕೂಡ ವ್ಯವಸಾಯಕ್ಕೆ ಹೆಚ್ಚಿನ ಗಮನವನ್ನು ಕೊಡಬೇಕಾದ್ದು, ಪ್ರೋತ್ಸಾಹ ಕೊಡಬೇಕಾದ್ದು ಬಹಳ ಮುಖ್ಯವಾದ ಅಂಶ, ರೈತರಲ್ಲಿ ನಿರುತ್ಸಾಹವನ್ನು ಉಂಟುಮಾಡಭಾರದು. ನೂರಕ್ಕೆ 80 ಭಾಗ ರೈತಾಪಿ ಜನರೇ ಇದ್ದಾರೆ ಅವರಿಗೆ ಇದು ತೊಂದರೆಯನ್ನುಂಟುಮಾಡತಕ್ಕ ವಿಚಾರವಾಗಿರುವುದರಿಂದ ಮತ್ತು ನಮ್ಮ

(ಶ್ರೀ ಜಿ. ಎ. ತಿಮ್ಮಪ್ಪ ಗೌಡ)

ಹೇಳಿದ ಹಾಗೆ ಬಹುಭಾಗ ಜನರು 5 ಎಕರೆ 6 ಎಕರೆಗಿಂತಲೂ ಕಡಿಮೆ ಜಮೀನನ್ನು ಉಳ್ಳವರಾಗಿರುವುದರಿಂದ, ವ್ಯವಸಾಯವೇ ಅವರ ಮುಖ್ಯವಾದ ಆದಾಯವಾಗಿರುವುದರಿಂದ, ಮತ್ತು ಅವರಿಗೆ ಬೇರೆ ಯಾವ ಕಸಬೂ ಇಲ್ಲದೇ ಇರುವುದರಿಂದ, ವ್ಯವಸಾಯದ ಉತ್ಪನ್ನ ದಿಂದಲೇ ಅವರು ಬೇರೆ ಎಲ್ಲಾ ವ್ಯವಹಾರಗಳನ್ನೂ ಮಾಡಬೇಕಾಗಿರುವುದರಿಂದ, ಈ ಹೊರೆಯನ್ನು ಹೆಚ್ಚಿನ ರೀತಿಯಲ್ಲಿ ಎಂದರೆ 75 ಪರ್ಸೆಂಟ್ ಅಥವಾ 100 ಪರ್ಸೆಂಟ್‌ಗಿಂತಲೂ ಹೆಚ್ಚಿಗೆ ಮಾಡಕೂಡದು ಅದೇ ರೀತಿಯಲ್ಲಿ ಗಾರ್ಡನ್ ಲ್ಯಾಂಡಿಗೂ ಕೂಡ ಬಹಳ ತೊಂದರೆಗಳಿರುವುದರಿಂದ ಅದಕ್ಕೂ ಸಹ ಒಂದು ನ್ಯಾಯವಾದ ರೀತಿಯಲ್ಲಿ ಕಂದಾಯವನ್ನು ನಿಗದಿ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ವಿರೋಧ ಪಕ್ಷದವರು ಏನು ಹೇಳಿದರು ರೈತರ ಹಿತವನ್ನು ಕಾಪಾಡುವುದಕ್ಕೆ ನಾವು ಮಾತ್ರ ಹೋರಾಡುತ್ತಾ ಇದ್ದೇವೆ ಎಂದು ಹೇಳಿ ಯಾವ ವಾದವನ್ನು ಮಾಡಿದರು ಆ ವಾದ ಸರಿಯಾದ್ದಲ್ಲ. ನಮ್ಮ ಕಡೆ ಯಲ್ಲೂ ಕೂಡ ಆ ರೀತಿ ಹೋರಾಡುತ್ತಾ ಇದ್ದೇವೆ ಸರ್ಕಾರದವರೂ ಕೂಡ ಅದೇ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ. ನಮ್ಮ ಮತ್ತು ತಮ್ಮ ಅಭಿಪ್ರಾಯಗಳನ್ನು ನಾವೆಲ್ಲರೂ ಸೇರಿ ಸರ್ಕಾರದ ವರ ಮುಂದೆ ಇಟ್ಟು ಸರ್ಕಾರದವರು ಅದನ್ನು ಗಮನಕ್ಕೆ ತೆಗೆದುಕೊಂಡು ರೈತರಿಗೆ ಯಾವ ವಿಧ ವಾದ ತೊಂದರೆಯೂ ಆಗದಂತೆ ಮಾಡುತ್ತಾರೆ ಎಂಬ ಭರವಸೆಯಿಂದ ನನ್ನ ಮಾತನ್ನು ಪೂರೈಸು ತ್ತೇನೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ) ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಮುಂದಿರುವ ಸರ್ವೆ ಮತ್ತು ಸೆಟ್ಲ್‌ಮೆಂಟ್‌ಗೆ ಸಂಬಂಧಿಸಿದ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ವಿರೋಧಿ ಸುತ್ತೇನೆ. ಸ್ವಾಮಿ, ಈ ನಿರ್ಣಯ ತಂದಿರುವುದು ಯಾವ ತತ್ವದ ಮೇಲೂ ಅಲ್ಲ ಮತ್ತು ಧೋರ ಣೆಯ ಮೇಲೂ ಅಲ್ಲ ಎಂದು ನಿಸ್ಸಂಕೋಚವಾಗಿ ಹೇಳಬಯಸುತ್ತೇನೆ. ಭೂ ಕಂದಾಯ ಹೆಚ್ಚುವರಿ ಇಲ್ಲ, ಈ ಒಂದು ನಿರ್ಣಯವನ್ನು ಸಭೆಯಲ್ಲಿ ಚರ್ಚೆ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು.

ಶ್ರೀ ಎಂ. ವಿ. ಕೃಷ್ಣಪ್ಪ.—ಹೆಚ್ಚುವರಿ ಇಲ್ಲ ಎಂದು ನಾನು ಹೇಳಲಿಲ್ಲ.

ಶ್ರೀ ಜಿ. ರಾಮೇಗೌಡ.—ಈ ವರದಿಯನ್ನು ಕೊಟ್ಟಿರುವ ಅಧಿಕಾರಿಗಳು ಒಂದು ಪ್ಯಾರಾದಲ್ಲಿ ರೈತರು 12 ವರ್ಷಗಳಿಂದ ಬಹಳ ಆದಾಯ ಪಡೆದು ಬಹಳ ಚೆನ್ನಾಗಿ ಬದುಕಿದ್ದಾರೆ ಎಂದು ಹೇಳಿ ದ್ದಾರೆ. ಇದು ಶುದ್ಧ ಅನ್ಯಾಯ. ಇದರಿಂದ ಸರಕಾರದವರು ಅಧಿಕಾರಿಗಳನ್ನು ಈ ರೀತಿ ವರದಿ ಮಾಡಲು ಪ್ರೇರೇಪಿಸಿರುವರೆಂದು ಅರ್ಥವಾಗುತ್ತದೆ. ಇದೇ ರೀತಿಯಾಗಿ ಕೊಟ್ಟಿರುವ ಅನೇಕ ವಿಷಯಗಳನ್ನು ಪರಿಶೀಲಿಸಬಹುದು. ಒಂದು ಹಸು ಒಂದು ದಿನಕ್ಕೆ 30 ಪೌಂಡು ಸಗಣಿ ಹಾಕುತ್ತ ದೆಂದು ಒಂದು ಕಡೆ ಹೇಳಿದ್ದಾರೆ. ಅದನ್ನು ಯಾವ ತಕ್ಕಡಿಯಲ್ಲಿ ತೂಕ ಮಾಡಿ ಹೇಳಿದರೋ ಅರ್ಥ ವಾಗುವುದಿಲ್ಲ. ಆದರೆ ಹಸು 30 ಪೌಂಡು ಸಗಣಿ ಹಾಕಬೇಕಾದರೆ ಎಷ್ಟು ಪೌಂಡು ಹುಲ್ಲು ಅದಕ್ಕೆ ಹಾಕಬೇಕೆಂಬುದನ್ನು ಹೇಳಿಲ್ಲ. ಬಹುಶಃ ಸರಕಾರ ಹುಲ್ಲು ಸರಬರಾಯಿ ಮಾಡುತ್ತದೆಂದು ತಿಳಿ ದಿರಬಹುದು. ಆಮೇಲೆ 467 ದಿನಗಳಲ್ಲಿ 213 ಮೈಲಿಗಳನ್ನು ನಡೆದಿರುವುದಾಗಿ ಹೇಳಿದ್ದಾರೆ. ಬಹುಶಃ ಊರೊಳಗಿನಿಂದ ಜಟಕಾ ಗಾಡಿ ಹತ್ತುವವರೆಗೆ ನಡೆದಿರುವುದನ್ನು ಲೆಕ್ಕ ಹಾಕಿ ಹೇಳಿರ ಬಹುದು, ಇದನ್ನು ನೋಡಿದರೆ ಅಧಿಕಾರಿ ಏನೂ ನೋಡಿಲ್ಲ ಎಂದು ಹೇಳಬಹುದು. ರೈತನ ಹೆಂಡತಿ ಉಟ್ಟಿರುವ ಸೀರೆ ನೋಡಿ ತನ್ನ ಹೆಂಡತಿ ಉಡುವ ಸೀರೆಯೊಂದಿಗೆ ತಾಳೆ ಮಾಡಿ ನೋಡಿಲ್ಲ. ಆತುರದಿಂದ ಮಾಡಿರುವ ವರದಿಯೇ ಹೊರತು ಇದು ನಿಜವಾದ ಅಂಶದ ಮೇಲೆ ಆಧಾರ ಪಟ್ಟಿರುವು ದಿಲ್ಲ ಎಂದು ಧಾರಾಳವಾಗಿ ಹೇಳಬಹುದು. ಆದುದರಿಂದ ಇದನ್ನು ಬಹಳ ಕೂಲಂಕಷವಾಗಿ ಆಳ ವಾಗಿ ಚರ್ಚೆ ಮಾಡಬೇಕು. ಮಾನ್ಯ ಮಿತ್ರರು ನೀವು ಮಾತ್ರ ವಿರೋಧಿಸುವದಿಲ್ಲ, ನಾವೂ ಸಹ ವಿರೋಧಿಸುತ್ತೇವೆ ಎಂದು ಹೇಳಿದರು. ಖಂಡಿತ ಅವರು ಹೇಳುವುದು ನಿಜ. ಹೊರಗೆ ನಮ್ಮ ಜೊತೆ ಯಲ್ಲಿದ್ದಾಗ ನಮಗಿಂತ ಈ ವಿಚಾರದಲ್ಲಿ ಎರಡರಷ್ಟು ಆಕ್ರೋಶ ತೋರಿಸುತ್ತಾರೆ, ಅವರಿಗೂ ಕೂಡ ನಮ್ಮಂತೆ ಸಹಾನುಭೂತಿ ಇದೆ. ಆದುದರಿಂದ ಅವರು ಸಂಕೋಚಪಡಬೇಕಾಗಿಲ್ಲ. ಆದರೆ ಪಕ್ಷದ ನಿಯಮಕ್ಕೆ ಕಟ್ಟುಬಿದ್ದು ಇಲ್ಲಿ ಅವರು ನಮ್ಮಂತೆ ಹೆಚ್ಚಾಗಿ ವಿರೋಧಿಸುವುದಕ್ಕಾಗುವುದಿಲ್ಲ. ರೈತರು ಕಳೆದ 18 ವರ್ಷಗಳಿಂದ ಯಾವ ರೀತಿ ಅಭಿವೃದ್ಧಿ ಸ್ಥಿತಿಗೆ ಬಂದಿದ್ದಾರೆ ಎಂದು ಹೇಳಿದ್ದಾರೆ. ಹಳ್ಳಿ ಗಾಡಿನವರಿಗೆ ರೋಗರುಜಿನಗಳೇ ಇಲ್ಲವೆಂದು ಒಂದು ಕಡೆ ಹೇಳಿದ್ದಾರೆ. ಇದನ್ನು ಹೇಳಿದ ಅಧಿ ಕಾರಿ ಎಂಥ ಪಾಪಿ ಇರಬೇಕು? ಇದನ್ನು ಯಾವ ಆಧಾರದ ಮೇಲೆ ಹೇಳಿರುವುದು! ರೈತರಿಗೆ ಮಾರ್ಕೆಟಿಂಗ್ ವಿಚಾರದಲ್ಲಿ ಹೆಚ್ಚು ಅನುಕೂಲವಾಗಿದೆ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ಆತನಿಗೆ ಮಾರ್ಕೆಟಿಂಗ್ ವಿಚಾರವೇ ತಿಳಿಯದು ಎಂಬುದು ವ್ಯಕ್ತವಾಗುತ್ತದೆ. ಆತನಿಗೆ ನಾವು ಕೋಳಿಮೊಟ್ಟೆ ಕೊಟ್ಟದ್ದೇ ತಪ್ಪು ಎಂದು ತೋರುತ್ತದೆ. ಕೋಳಿಮೊಟ್ಟೆ ತಿಂದು ಅಧಿಕಾರಿಯು

ಮಾಡಿರುವ ಕೆಲಸ ಇದು. 467 ದಿನಗಳಲ್ಲಿ ಅಧಿಕಾರಿಯು ಯಾವ ರೈತನ ಮನೆಯಲ್ಲಾದರೂ ಊಟ ಮಾಡಿದ್ದಾನೆಯೇ? ಟಿಫನ್ ಕ್ಯಾರಿಯರ್‌ನಲ್ಲಿ ತಂದಿರುವ ಊಟ ತಿಂದು ಎಳನೀರು ಕುಡಿದು ರೈತರು ಸಾಹುಕಾರರು ಆಗಿದ್ದಾರೆಂದು ಹೇಳಿರುವುದನ್ನು ನಂಬುವುದಕ್ಕಾಗುವುದಿಲ್ಲ. ಹಾಗಿರುವಾಗ ಮಾನ್ಯ ಸದಸ್ಯರ ಒಂದು ಸಮಿತಿ ಮಾಡಿ ಅಧಿಕಾರಿಯನ್ನು ಕರೆಸಿ ಅವರು ಬರೆದಿರುವುದು ಸೇಕಡ ಒಂದರಷ್ಟು ನಿಜವಾಗಿದ್ದರೆ ಕಂದಾಯ ಏರಿಸೋಣ. ಇಲ್ಲದಿದ್ದರೆ ಕಂದಾಯ ಇಳಿಸಬೇಕು ಎಂದು ಮನವಿ ಮಾಡುತ್ತೇನೆ. ಇದು ಹರಿಶ್ಚಂದ್ರನ ಮೇಲೆ ನಕ್ಷತ್ರಿಕನನ್ನು ಹಾಕಿದಂತೆ ಸೆಟ್ಲ್‌ಮೆಂಟ್ ಅಧಿಕಾರಿಯನ್ನು ರೈತರ ಮೇಲೆ ಹಾಕಿದಂತಿದೆ. ಇದು ಸರ್ವಥಾ ಉಚಿತವಲ್ಲ.

ಇನ್ನೂ ಹೇಳಿರುವುದು ಎತ್ತು ಮಾರಿ ದನ ಮಾರಿ ಲಾಭ ಸಂಪಾದನೆ ಮಾಡಿದ್ದಾನೆ ಎಂದು. ಲಾಭ ಎಂದರೆ ಅರ್ಥವಾಗುತ್ತದೆಯೆ ? ಏಕೆ ಇಂಥ ವರದಿ ಕೊಡಬೇಕು ? ಬೆಂಗಳೂರು ಡಿವಿಜನ್‌ನಲ್ಲಿ ಈ ಸಂಬಂಧವಾದ ವರದಿ ತಯಾರಿಸಲು 47 ಸಾವಿರ ರೂಪಾಯಿ ಅನ್ಯಾಯ ಮಾಡಿದ್ದಾರೆ. ಹೀಗೇಕೆ ಮಾಡಿ ಅಷ್ಟು ಖರ್ಚುಮಾಡಬೇಕಾಗಿತ್ತು? ನಾವೇ ಇದಕ್ಕಿಂತ ಉತ್ತಮವಾದ ವರದಿ ಕೊಡುತ್ತಿದ್ದೆವು. ಈಗ ಸರಕಾರಿ ಹಣ ಅನ್ಯಾಯವಾಗಿದೆ. ಹಳ್ಳಿಯ ಜನರಲ್ಲಿ ಎಷ್ಟು ಮಂದಿ ವಿದ್ಯಾವಂತರಿದ್ದಾರೆ? ಹಳ್ಳಿಗರಿಗೆ ಅಧಿಕಾರಿಗಳು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಲು ಶಕ್ತಿಸಾಮರ್ಥ್ಯವಿದೆಯೇ ? ಇದನ್ನು ಅಧಿಕಾರಿಗಳು ಗಮನಿಸಿಲ್ಲ. ರೈತರೇನು ಊಟಮಾಡುತ್ತಾರೆ, ಅವರ ಬಟ್ಟೆ ಹೇಗಿದೆ, ಮನೆ ಹುಲ್ಲುಮನೆಯೋ, ಮಣ್ಣಿನ ಮನೆಯೋ ಅಥವಾ ತಾರಸಿ ಮನೆಯೋ ಎಂಬುದನ್ನು ಆಲೋಚನೆ ಮಾಡಿರುವುದಿಲ್ಲ. ಈ ದಿವಸ ಸರಕಾರ ನಡೆಸಲು ಹಣ ಎಲ್ಲಿಂದ ಬರಬೇಕು ಎಂದು ಕೇಳಬಹುದು. ಅದು ನ್ಯಾಯ. ಆದರೆ ಬಡ ರೈತರ ಮೇಲೆ ಹೊರೆ ಹೇರಬಾರದು, ಹಣ ವಸೂಲು ಮಾಡಲು ಸರಕಾರಕ್ಕೆ ನಾನಾ ವಿಧಾನಗಳಿವೆ. ಕಾಂಗ್ರೆಸ್ ಸಂಸ್ಥೆಗೆ ಹಣ ಶೇಖರಿಸಲು ಈಗ ಎಗ್ಸಿಬಿಷನ್ ಏರ್ಪಡಿಸಿದ್ದಾರೆ. ಇದರಿಂದ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಗೆ ಹಣ ಬರುತ್ತದೆ. ಆದರೆ ಖರ್ಚುಮಾಡುವ ಹಣ ಯಾರದು ? ಇಂಥ ಉಪಾಯಗಳು ಅನೇಕವಾಗಿವೆ. ಎಷ್ಟೋ ಅಂಗಡಿಗಳ ಎಗ್ಸಿಬಿಷನ್ನಿನಲ್ಲಿವೆ. ಅದರಿಂದ ರೈತರಿಗೇನಾದರೂ ಆದಾಯವಿದೆಯೇ ? ಆದಾಯವೆಲ್ಲಾ ಕಾಂಗ್ರೆಸ್ ಕಮಿಟಿಗೆ ಹೋಗುವುದು ಬಹುಭಾಗ ಎಗ್ಸಿಬಿಷನ್ ಸ್ಟಾಲ್‌ಗಳ ಏರ್ಪಾಡು ಖರ್ಚು ಸರ್ಕಾರದ್ದು. ಇಂಥಾದ್ದೆಲ್ಲಾ ಇದ್ದರೂ ರೈತರ ಮೇಲೆ ಹೊರೆ ಹೇರಿ ಅವರು ಕಣ್ಣೀರು ಸುರಿಸುವಂತೆ ಮಾಡುವುದರ ಬದಲು ಬೇರೆ ಆದಾಯ ಮಾರ್ಗಗಳನ್ನು ಏಕೆ ಯೋಚನೆ ಮಾಡಲಿಲ್ಲ ? ಶ್ರೀಮಾನ್ ತಿಮ್ಮಪ್ಪ ಗೌಡರು ತಿರುಪತಿ ತಿಮ್ಮಪ್ಪನ ಹಾಗೆ ಕರುಣೆ ಇದೆ ಎಂದು ಹೇಗೆ ಹೇಳಲು ಮನಸ್ಸು ಮಾಡಿದರೋ ಗೊತ್ತಾಗಲಿಲ್ಲ. 16 ಸ್ಕೀಮುಗಳನ್ನು ಹಾಕಿದ್ದಾರೆಂದು ಹೇಳಿದರು. ಆದರೆ ಅವುಗಳಲ್ಲಿ ಯಾವುದು ಸಫಲವಾಗಿದೆ ? ಮಾರ್ಚಿ 31ನೆಯ ತಾರೀಖು ಎಷ್ಟು ಹಣ ಲ್ಯಾಪ್ಸ್ ಆಗಿದೆ ಎಂಬುದನ್ನು ನೋಡಿ. ನೇಗಿಲಿಗಾಗಿ ಆಫೀಸರುಗಳ ಬಳಿ ಕೊಟ್ಟಿರುವ ಹಣ ಸಹ ಲ್ಯಾಪ್ಸ್ ಆಗಿದೆ. ಹೀಗಾದರೆ ರೈತರಿಗೆಷ್ಟು ಸಹಾಯವಾದೀತು ? ಒಂದು ಎಕರೆ ಭೂಮಿಯನ್ನು ಸಾಗುವಳಿ ಮಾಡಲು ಖರ್ಚು ಮತ್ತು ಅದರ ಉತ್ಪತ್ತಿ ಎಷ್ಟು ಎಂಬುದನ್ನು ಹೇಳಿದ್ದಾರೆ. ಆದರೆ ಅದರಮೇಲೆ ಸಾಲವೆಷ್ಟಿದೆ ಎಂಬುದನ್ನು ನೋಡಿದ್ದೀರಾ ? ಕಂದಾಯ, ತಕಾವಿ ಮುಂತಾದ ಸಾಲಗಳು, ಅವುಗಳ ಮೇಲಿನ ಬಡ್ಡಿ ಇವುಗಳಿಗಾಗಿ ಜಮೀನು ಹರಾಜಿಗೆ ಬಂದಿರುವುದನ್ನು ನಮೂದು ಮಾಡಿದ್ದಾರೆಯೇ ? ಹೀಗೆ ಸತ್ಯಕ್ಕೆ ದೂರವಾದ ಅಂಶಗಳನ್ನು ಹೇಳಿ ಬಡ ರೈತನ ಮೇಲೆ ಕಂದಾಯದ ಹೊರೆ ಹೇರುವುದು, ಅವನ್ನು ಹೆಚ್ಚಿಸುವುದು ಖಂಡಿತ ಸರಿಯಲ್ಲ. ಶ್ರೀಮಾನ್ ಕೃಷ್ಣಪ್ಪನವರಿಗೆ ಇದೆಲ್ಲಾ ಚೆನ್ನಾಗಿ ಗೊತ್ತು, ಆದರೆ ಅವರು ಹೇಳುವುದಿಲ್ಲ. ಒಳಗೇ ಅವರು ನೋಯುತ್ತಾರೆ, 3 ದಿವಸಗಳಿಂದ ಅವರು ಅನ್ನ ತಿಂದಿಲ್ಲ. ಒಂದು ಕಡೆ ಸಮುದ್ರ ಇನ್ನೊಂದು ಕಡೆ ಬಾವಿ, ಯಾವುದಕ್ಕೆ ಹಾರಬೇಕೆಂಬುದು ಅವರಿಗೆ ಗೊತ್ತಾಗಿಲ್ಲ. ಈ ರೀತಿ ಸಾಲ ಸೋಲಗಳಿಂದ ಕಷ್ಟಪಡುತ್ತಿರುವ ರೈತರ ವಿಚಾರವನ್ನು ಗಮನಿಸಬೇಕು. ವಿಲೇಜ್ ಕಮ್ಯೂನಿಕೇಷನ್ ಎಷ್ಟು ಚೆನ್ನಾಗಿದೆ ಎಂಬುದನ್ನು ನೋಡಬಹುದು. ಅದು ಬಹಳವಾಗಿ ಕೆಟ್ಟಿರುವಾಗ ಬಹಳ ಚೆನ್ನಾಗಿದೆಯೆಂದು ವರದಿಯಲ್ಲಿ ತಿಳಿಸಿದ್ದಾರೆ. ಇದನ್ನು ನೋಡಿದರೆ ಬಹಳ ಸಂಕಟವಾಗುತ್ತದೆ. ಹಳ್ಳಿ ರಸ್ತೆಗಳಲ್ಲಿ ಎಷ್ಟೋ ಕಡೆ ಗಾಡಿಗಳು ಸಹ ಹೋಗಲು ಅವಕಾಶವಿಲ್ಲ, ಅಷ್ಟು ಕೆಟ್ಟಿವೆ. ಹಾಗಿರುವಾಗ ಒಂದಕ್ಕೆ ಹತ್ತರಷ್ಟು ಕಂದಾಯ ಹೆಚ್ಚುಮಾಡಬೇಕೆಂದಿದ್ದೀರಿ. ಸರಕಾರ ತಾನು ಹೇಳುವುದನ್ನು ಸಮರ್ಥನೆ ಮಾಡುವುದು ವಾಡಿಕೆ. ಆದರೆ ಇರುವ ಲೋಪದೋಷಗಳನ್ನು ಬಚ್ಚಿಡುವುದಕ್ಕಾಗುವುದಿಲ್ಲ, ರೀಸೆಟ್ಲ್‌ಮೆಂಟ್ ಮಾಡಿದರೆ ಕಂದಾಯ ಹೆಚ್ಚಿಸಲೇಬೇಕೆಂದಿಲ್ಲ, ತಗ್ಗಿಸಲೂ ಬಹುದು. ಮಾನ್ಯ ಮಂತ್ರಿಗಳು ಕೂಡ ಇದನ್ನು ಒಪ್ಪಿದ್ದಾರೆ. ಆದುದರಿಂದ ಇರುವ ತೊಂದರೆಗಳನ್ನು ಗಮನಿಸಿ ಕಂದಾಯವನ್ನು ಕಡಮೆ ಮಾಡಬೇಕು. ರೈತರು ದೇಶದ ಬೆನ್ನುಮೂಳೆ ಎಂದು ಹೇಳುತ್ತಾರೆ, ವ್ಯವಸಾಯವೆಂಬುದು ಒಂದು ಕೈಗಾರಿಕೆಯೆಂದು ಭಾವಿಸಿದರೆ ಅದರಿಂದ ಲಾಭ ಬಂದರೆ ಸುಂಕ ಹಾಕುವುದುಂಟು. ಆದರೆ ಭೂಮಿ ಪಡೆದಿರುವವರ ಮೇಲೆ ಹೀಗೆ ಹೆಚ್ಚು ಸುಂಕ ಹಾಕುವುದು ಉಚಿತವಲ್ಲ. ಹೀಗೆ ಹಾಕುವುದಾದರೆ ಆದಾಯವಿಲ್ಲದಿದ್ದರೂ ಕೂಡ ದೇಶದಲ್ಲಿ

(ಶ್ರೀ ಜಿ. ರಾಮೇಗೌಡ)

ಡಿಗ್ರಿ ಪಡೆದವರ ಮೇಲೆ ಕೂಡ ಪ್ರತಿಯೊಬ್ಬರಿಗೂ ಸುಂಕ ಹಾಕಬೇಕು. ಇದು ಖಂಡಿತ ಸರಿಯಿಲ್ಲ. ಭೂಮಿಯಿಂದ ಲಾಭ ಪಡೆಯುವರ ಮೇಲೆ ಮಾತ್ರ ಕಂದಾಯ ವಿಧಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಸಭೆಯ ಮುಂದೆ ಇಟ್ಟಿರುವ ಈ ಸರ್ವೆ ಸೆಟಲ್‌ಮೆಂಟ್ ರಿಪೋರ್ಟ್ ಸರಿಯಾಗಿಲ್ಲ. ಜಮೀನಿನಲ್ಲಿ ಹೆಚ್ಚು ಲಾಭ ಬರುತ್ತದೆಂದು ಮಂತ್ರಿಗಳ ಅಭಿಪ್ರಾಯವಿದ್ದ ಹಾಗೆ ಕಾಣುತ್ತದೆ. ನೂರು ಎಕರೆ ಜಮೀನನ್ನು ಎಲ್ಲಿ ಕೇಳಿದರೆ ಅಲ್ಲಿ ಕೊಡುತ್ತೇನೆ. ಮಂತ್ರಿಪದವಿಗೆ ರಾಜಿನಾಮೆಯನ್ನು ಕೊಟ್ಟು ಆ ಜಮೀನಿನಲ್ಲಿ ಏನು ಲಾಭ ಬರುತ್ತದೆ ಎನ್ನುವುದನ್ನು ನೋಡಿಕೊಂಡು ಆ ಮೇಲೆ ಕಂದಾಯವನ್ನು ನಿರ್ಧರ ಮಾಡಲಿ.

ಶ್ರೀ ಡಿ. ದೇವರಾಜ ಅರಸ್ (ಕಾರ್ಮಿಕ, ವಸತಿ ಮತ್ತು ಸಾರಿಗೆ ಶಾಖೆಯ ಮಂತ್ರಿಗಳು).—ಮಂತ್ರಿಗಳಾಗಿರುವವರಿಗೆ ವ್ಯವಸಾಯದ ಅನುಭವವಿಲ್ಲ ಎಂದು ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆಂದು ಕಾಣುತ್ತದೆ. ಅದಿರಲಿ. ನಾವು ಮಾನ್ಯ ಸದಸ್ಯರಿಗೆ ನೂರು ಎಕರೆ ಜಮೀನು ಕೊಡುತ್ತೇವೆ. ಅವರು ಈ ಸಭೆಯ ಸದಸ್ಯತ್ವವನ್ನು ಬಿಟ್ಟು ವ್ಯವಸಾಯ ಮಾಡುವುದಕ್ಕೆ ಹೋಗುತ್ತಾರೆಯೇ ಸ್ವಾಮಿ ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಂತ್ರಿಗಳು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ, ಆದರೆ ಒಳ್ಳೆಯ ಜಮೀನನ್ನು ಕೊಡಬೇಕು.

ಶ್ರೀ ಡಿ. ದೇವರಾಜ ಅರಸ್.—ನಾವು ಕೊಟ್ಟ ಕಡೆ ತೆಗೆದುಕೊಳ್ಳಬೇಕು. ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಬೇಕಾದಷ್ಟು ಜಮೀನು ಇದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಾನ್ಯ ಮಂತ್ರಿಗಳು ಕೇಳುವ ಕಡೆ ನಾವು ಜಮೀನು ಕೊಡುತ್ತೇವೆ. ಅವರು ಮಂತ್ರಿ ಪದವಿಯನ್ನು ಬಿಟ್ಟು ಹೋಗುತ್ತಾರೆಯೇ ?

ಜನಾಭಿಪ್ರಾಯಕ್ಕೆ ತಕ್ಕಂತೆ ಸರ್ಕಾರ ನಡೆಯುತ್ತದೆ ಎಂದು ಹೇಳಿದರು. ನಾವೂ ರಾಜಿನಾಮೆ ಕೊಡುತ್ತೇವೆ, ನೀವೂ ರಾಜಿನಾಮೆ ಕೊಡಿ. ಇಬ್ಬರೂ ಕಂದಾಯ ಹೆಚ್ಚುಮಾಡುವ ವಿಷಯದ ಮೇಲೆ ಚುನಾವಣೆಗೆ ನಿಲ್ಲೋಣ. ನೀವು ಗೆದ್ದರೆ ನೀವು ಹಾಕಿರುವ ಕಂದಾಯವನ್ನು ಒಪ್ಪಿಕೊಳ್ಳುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಹಾಗೆ ಮಾಡುವುದು ಪ್ರಜಾಪ್ರಭುತ್ವದ ಲಕ್ಷಣ.

ಶ್ರೀ ಕೆ. ಪುಟ್ಟಸ್ವಾಮಿ.—17 ವರ್ಷಗಳಿಂದ ಇದೇ ತರಹ ಸವಾಲು ಆ ಕಡೆಯಿಂದ ಬರುತ್ತಿದೆ. ಯಾವ ರೀತಿ ಮಾಡಿದರೂ ಕೂಡ ಚುನಾವಣೆಯ ಸಂದರ್ಭದಲ್ಲಿ ಇವೆಲ್ಲ ಒಂದೇ ಬರುತ್ತವೆ. 1967ಕ್ಕೆ ಚುನಾವಣೆಗಳು ನಡೆಯಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1967ರಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆ ಬರುತ್ತದೆ ಎಂದು ಅನೇಕ ಜನ ಮಂತ್ರಿಗಳೇ ಹೇಳುತ್ತಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರು ಯಾವುದಾದರೂ ಒಂದು ದಾರಿಗೆ ಬರಬೇಕು. ಇಲ್ಲವಾದರೆ ನಮ್ಮ ಕೈಯಲ್ಲಿ ಆಗುವುದಿಲ್ಲ, ನಮ್ಮ ಕೈಯಲ್ಲಿ ದೇಶವನ್ನು ಆಳುವುದಕ್ಕಾಗುವುದಿಲ್ಲ ಎಂದು ಮಂತ್ರಿ ಪದವಿಯನ್ನು ಬಿಟ್ಟು ಮನೆಗೆ ಹೋಗಬೇಕು. ಭೂ ಕಂದಾಯವನ್ನು ಹಾಕುವುದಕ್ಕೆ ಯಾವ ಆಧಾರವನ್ನು ಇಟ್ಟುಕೊಂಡು ಅಧಿಕಾರಿಗಳು ರಿಪೋರ್ಟ್ ತಯಾರಿಸಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ಸ್ವಲ್ಪ ಮಣ್ಣು ತೆಗೆದು ಬಾಯಿಗೆ ಹಾಕಿಕೊಂಡು ಉಪ್ಪಾಗಿದೆಯೇ ಏನು ಎಂದು ನೋಡಿಕೊಂಡು ಒಂದು ಕಾಲಂನಲ್ಲಿ ಬರೆದುಕೊಳ್ಳುತ್ತಾರೆ. ಮನೆಯ ಉಪಯೋಗಕ್ಕೆಂದು ನಾಲ್ಕು ಮೆಣಸಿನ ಗಿಡಗಳನ್ನು ಹಾಕಿಕೊಂಡಿದ್ದರೆ, ಏನಾದರೂ ಅಲ್ಪಸ್ವಲ್ಪ ತರಕಾರಿಯನ್ನು ಬೆಳೆಯುತ್ತಿದ್ದರೆ, ತರಕಾರಿಯನ್ನು ಬೆಳೆಯುತ್ತಿದ್ದಾರೆಂದು ಬರೆದುಕೊಳ್ಳುತ್ತಾರೆ. ನಾಲ್ಕಾರು ಫರಂಗಿ ಕಾಯಿ ಗಿಡಗಳಿದ್ದರೆ ಪ್ಲಾಂಟೇಷನ್ ಏರಿಯಾ ಎಂದು ಬರೆದುಕೊಳ್ಳುತ್ತಾರೆ. ಈ ರೀತಿ ತಯಾರು ಮಾಡಿರುವ ರಿಪೋರ್ಟ್ ಶಾಸ್ತ್ರೀಯವಾಗಿದೆ ಎಂದು ಹೇಗೆ ಹೇಳುವುದು ? ಮಾನ್ಯ ಮಂತ್ರಿಗಳು ಯಾವಾಗಲೂ ನಾನು ರೈತನ ಮಗ, ಎಂದು ಹೇಳುತ್ತಾರೆ. ಇವರು ರೈತರಾಗಿರುವುದು ನಿಜವಾದರೆ ಕಂದಾಯವನ್ನು ಏರಿಸುವುದಕ್ಕೆ ಹೋಗುತ್ತಿರಲಿಲ್ಲ. ಇವರು ರೈತರಲ್ಲ. ಇವರ ಯಜಮಾನರು ರೈತರು. ಶ್ರೀ ಎಂ. ವಿ. ಕೃಷ್ಣಪ್ಪನವರು ರೈತರಾದರೆ ದೇಶ ಉದ್ಧಾರವಾದ ಹಾಗೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ರೈತ ; ರೈತರ ಮಗ. ಮಾನ್ಯ ಸದಸ್ಯರು ವರ್ತಕರು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಾನ್ಯ ಮಂತ್ರಿಗಳ ಯಜಮಾನರು ರೈತರು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಹಸುವಿಗೆ ಜೋಳದ ಕಡ್ಡಿಯನ್ನು ಕುಯ್ಯುವಾಗ ಕತ್ತರಿಸಿಕೊಂಡು ಆದ ಗಾಯದ ಗುರ್ತು ಬೆರಳಿನ ಮೇಲೆ ಈಗಲೂ ಇದೆ (ನಗು)

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನ್ಯಾಯವಾದ ರೈತರಲ್ಲದ್ದರಿಂದ ಕುಯ್ಯುವುದಕ್ಕೆ ಬರಲಿಲ್ಲ. ಅನುಭವವಿಲ್ಲ ಎಂದಾಯಿತು.

ಜಮೀನಿನ ಬೆಲೆ ಏರಿದೆ ಎಂದು ಹೇಳುತ್ತಾರೆ. ಬೆಲೆ ಏರಿದ್ದರೆ ಜಮೀನನ್ನು ಮಾರಿಬಿಟ್ಟು ಹೋಗಿ ಎಂದು ಹೇಳುತ್ತಾರೆಯೇ ! ಜಮೀನಿನ ಬೆಲೆ ಏರಲಿ, ಇಳಿಯಲಿ ವ್ಯವಸಾಯ ಮಾಡತಕ್ಕ ಜನಯಾರು ಎಂದರೆ ಏನೂ ಅರಿವಿಲ್ಲದೆ, ಎಲ್ಲಿಯೂ ಉದ್ಯೋಗ ಸಿಕ್ಕದೆ, ಇನ್ನು ಏನೂ ಮಾಡಲು ಸಾಧ್ಯವಿಲ್ಲವೆಂದರೆ ಆಗ ಜಾಲಿ ಮರದ ಒಂದು ಮೋಟು ನೇಗಿಲನ್ನು ತೆಗೆದುಕೊಂಡು ಉಳುತ್ತಾನೆ. ಇದರಿಂದ ಎಷ್ಟು ಉತ್ಪತ್ತಿ ಅವನಿಗೆ ಬಂದೀತು. ಸರ್ಕಾರದ ಸೀಡ್ ಫಾರಂಗಳಿವೆ. ಅವುಗಳ ಮೇಲ್ವಿಚಾರಣೆಗೆ ವ್ಯವಸಾಯ ಇನ್‌ಸ್ಪೆಕ್ಟರು, ಫೀಲ್ಡ್‌ಮೆನ್ ಹೀಗೆ ಎಷ್ಟೋ ಜನ ಇರುತ್ತಾರೆ. ಅದಕ್ಕೆ ಎಷ್ಟು ಖರ್ಚಾಗುತ್ತದೆ, ಅದು ಎಷ್ಟು ಲಾಭಕರವಾಗಿದೆ ಎನ್ನುವುದನ್ನು ಲೆಕ್ಕ ಹಾಕಿ ತಿಳಿದುಕೊಳ್ಳಬಹುದು. ಸರ್ಕಾರದ ನೇತೃತ್ವದಲ್ಲಿ ನಡೆಯುವ ಫಾರಂಗಳಲ್ಲಿಯೇ ಬಹಳ ಕಡಮೆ ಬೆಳೆಯಾಗುತ್ತಿರುವಾಗ ರೈತರು ಮಾಡುವ ಜಮೀನಿನಲ್ಲಿ ಬೆಳೆ ಅದಕ್ಕಿಂತ ಹೆಚ್ಚಾಗಿ ಬರುತ್ತದೆ ಎಂದು ಲೆಕ್ಕ ಹಾಕಿ ರೈತರ ಮೇಲೆ ಇಷ್ಟು ಕಂದಾಯವನ್ನು ಹಾಕಬೇಕು ಎಂದು ಹೇಳಿದ್ದಾರೆ. ಈ ರೀತಿ ಕಂದಾಯವನ್ನು ಹೇರುವುದರಿಂದ ಬಹಳ ಅನ್ಯಾಯವಾಗುತ್ತದೆ.

ರೈತರಿಗೆ ಬೇಕಾದ ಸೌಲಭ್ಯಗಳನ್ನು ಕೊಡುತ್ತೇವೆಂದು ಮಾರ್ಚಿ 31ನೇ ತಾರೀಖು ದುಡ್ಡು ಕಳಿಸುತ್ತಾರೆ. ಒಂದನೇ ತಾರೀಖಿನೊಳಗಾಗಿ ಬಾವಿ ತೆಗೆದು ಬೆಳೆ ತೆಗೆಯಬೇಕು, ಸರ್ಕಾರಕ್ಕೆ ಆದಾಯ ಬೇಕು ಇಲ್ಲದೆ ಇದ್ದರೆ ಸರ್ಕಾರವನ್ನು ನಡೆಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಏನು ಮಾಡಬೇಕು ಎನ್ನುವುದನ್ನು ಮಾನ್ಯ ಸದಸ್ಯರು ಹೇಳಲಿ.

ಶ್ರೀ ಕೆ. ಪಿ ರೇವಣ್ಣಸಿದ್ದಪ್ಪ.—ಪಾನನಿರೋಧವನ್ನು ರದ್ದು ಮಾಡುವುದು. ಸಂಬಳ ಬೇಕಾದರೆ ಜಾಸ್ತಿ ತೆಗೆದುಕೊಳ್ಳಲಿ. ಅಡ್ಡಿ ಇಲ್ಲ. ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ತೆಗೆದು ನೀರಿಗೆ ಹಾಕುವುದು. ಈ ಯೋಜನೆಯೇ ದೇಶವನ್ನು ಹಾಳು ಮಾಡಿದ್ದು. ಅನೇಕ ಜನರನ್ನು ತೆಗೆದರೆ ಏನಾಗುತ್ತದೆಯೋ ಎಂದು ಇಟ್ಟಿದ್ದಾರೆ. ಮೊದಲು ಈ ಇಲಾಖೆಯನ್ನು ತೆಗೆದು ಹಾಕಲು ಪ್ರಯತ್ನ ಮಾಡಬೇಕು. ಮಂತ್ರಿಗಳಿಗೆ ಬೇಕಾದವರು, ಮತ್ತೊಬ್ಬರಿಗೆ ಬೇಕಾದವರು ಎಂದು ಯಾರನ್ನೂ ಬಡಿಸುವುದಕ್ಕೆ ಹೋಗಬಾರದು. ಭೂಮಿಯನ್ನು ಹಂಚುವಾಗ ಯಾರು ಭೂಮಿಯನ್ನು ಉಳಬಲ್ಲರೋ ಅಂಥವರಿಗೇ ಕೊಡಿ. ರೈತರು ಭೂಮಿಯನ್ನು ಕೇಳಿದಾಗ ಕೊಡುವುದಕ್ಕಾಗುವುದಿಲ್ಲವೆಂದು ಬೆಂಗಳೂರಿನಲ್ಲಿ ಇರುವವರಿಗೆ, ಮದ್ರಾಸಿನಲ್ಲಿರುವವರಿಗೆ ಕೊಡುವುದಕ್ಕೆ ಹೋಗುತ್ತಾರೆ. ಅವರು 30–40 ಸಾವಿರ ರೂಪಾಯಿಗಳನ್ನು ಚುನಾವಣೆಗಳಿಗೆ ಕೊಡುತ್ತಾರೆ. ಇಂಥ ಕೆಲಸವನ್ನು ಏಕೆ ಮಾಡುತ್ತಾರೆ ? ಅರಣ್ಯ ಸಂಪತ್ತನ್ನು ಮಾರುವಾಗ ಹರಾಜಿನಲ್ಲಿ ಏನು ದರ ಇರುತ್ತವೆಯೋ ಅದೇ ದರವನ್ನು ಕಾರ್ಖಾನೆಯವರಿಗೂ ಹಾಕಿ. ಹರಾಜಿನಲ್ಲಿ ನಾಲ್ಕು ರೂಪಾಯಿಗಳಿಗೆ ಹೋದರೆ ಕಾರ್ಖಾನೆಗಳವರಿಗೆ ಒಂದು ರೂಪಾಯಿ ಎರಡಾಣೆ ಪ್ರಕಾರ ಕೊಟ್ಟು ಪರೋಕ್ಷವಾಗಿ ಅವರಿಂದ 30 ಸಾವಿರ ರೂಪಾಯಿಗಳನ್ನು ಚುನಾವಣೆಗೆ ತೆಗೆದುಕೊಳ್ಳುತ್ತಾರೆ. ರೈತನ ಮೇಲೆ ಕಂದಾಯವನ್ನು ಜಾಸ್ತಿ ಮಾಡಿ, ತಮ್ಮ ಪಕ್ಷವನ್ನು ಬೆಳೆಸಿಕೊಂಡು ತಮಗೆ ಬೇಕಾದ ಜನರ ಉದ್ಧಾರ ಮಾಡಿದರೆ ದೇಶ ಜನ ಉದ್ಧಾರವಾಗುತ್ತಾರೆ ಎನ್ನುವ ಭಾವನೆ ಇರಬಾರದು.

ಅನೇಕ ವಿಧವಾಗಿ ಮುಡಿವಂತಿಕೆ ವಿಷಯ ಹೇಳುತ್ತಾರೆ. ವ್ಯವಸಾಯ ಇಲಾಖೆಯ ಡೈರೆಕ್ಟರ ಆಫೀಸಿಗೆ ಹೋದರೆ ಅಲ್ಲಿ ಉದ್ದವಾದ ರಾಗಿ ತೆನೆ, ಜೋಳದ ತೆನೆ ಬತ್ತದ ತೆನೆ, ಇವುಗಳನ್ನೆಲ್ಲ ಚಿತ್ರಗಳಲ್ಲಿ ಬರೆದಿರುತ್ತಾರೆ. ರೈತರಿಗೆ ಪಂಪ್ ಸೆಟ್‌ಬೇಕು ಎಂದರೆನಾಲ್ಕು ವರ್ಷವಾದರೂ ಕೊಡುವುದಿಲ್ಲ, ಬಾವಿ ತೆಗೆಯಲು ದುಡ್ಡು ಕೊಡಿ ಎಂದರೆ ದುಡ್ಡಿಲ್ಲ, ಗೊಬ್ಬರಬೇಕು ಎಂದರೆ ಅದನ್ನು ಕೊಡುವ ಹಾಗೆಯೇ ಇಲ್ಲ. ಹೀಗಾದರೆ ರೈತರಿಗೆ ಯಾವ ರೀತಿಯ ಉತ್ತೇಜನವನ್ನು ಕೊಡುತ್ತಾರೆ ಸ್ವಾಮಿ ? ತಿಪಟೂರಿನಲ್ಲಿ ಗೊಬ್ಬರವನ್ನು ಹರಾಜು ಮಾಡಿ ಸಬ್ಸಿಡಿ ಕೊಡುವುದಕ್ಕೆ ಎರಡು ವರ್ಷವಾದರೂ ಕೊಟ್ಟಿಲ್ಲ. ಇಲಾಖೆಯ ಡೈರೆಕ್ಟರನ್ನು, ಮಂತ್ರಿಗಳನ್ನ ಮತ್ತು ವ್ಯವಸಾಯ ಖಾತೆಯ ಮಂತ್ರಿಗಳನ್ನು ನೋಡಿ ನೋಡಿ ಸಾಕಾಯಿತು. ಆ ವಿಚಾರ ಏನಾಯಿತು ಎನ್ನುವುದು ಗೊತ್ತಿಲ್ಲ. ಬಾವಿ ಕೆಲಸವನ್ನು ತೆಗೆದುಕೊಳ್ಳಲು ಅನೇಕ ತೊಂದರೆಗಳಿವೆ ಎನ್ನುವುದನ್ನು ಮಂತ್ರಿಗಳ ಗಮನಕ್ಕೆ ತಂದರೂ ಏನೂ ಪ್ರಯೋಜನವಾಗಿಲ್ಲ.

ಇನ್ನು ತೆಂಗಿನಕಾಯಿ ವಿಷಯ. ಆ ಬೆಳೆಗೆ ಒಂದು ಎಕರೆಗೆ ಎಷ್ಟು ಖರ್ಚು ಬೀಳುತ್ತದೆ ಎಂಬುದನ್ನು ಸರಿಯಾಗಿ ಇವರು ತಿಳಿಯಬೇಕು. ಯಾವ ಬೆಳೆ ಉತ್ತಮವಾಗಿ ಆಗುತ್ತದೆ ರೈತ ಅದಕ್ಕಾಗಿ ಎಷ್ಟು ಹಣವನ್ನು ಖರ್ಚುಮಾಡಬೇಕು, ಎಷ್ಟು ದುಡ್ಡನ್ನು ಭೂಮಿಗೇ ಹಾಕುತ್ತಾನೆಂಬುದನ್ನು ವಿಚಾರ ಮಾಡುವುದಾದರೆ ಅದು ಅವನಿಗೆ ಬರತಕ್ಕ ಆದಾಯಕ್ಕಿಂತ ಮೇಲೆ ಹೋಗುತ್ತದೆ.

6-00 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ತೆಂಗಿನ ಕಾಯಿಯೊಳಗೆ ನೀರು ಹೇಗೆ ಹೋಗುತ್ತದೆಂಬುದು ಮಾನ್ಯ ಸದಸ್ಯರಿಗೆ ಗೊತ್ತೇ ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದರಲ್ಲಿ ಆ ಮಾನ್ಯ ಮಂತ್ರಿಗಳು ಎಕ್ಸ್‌ಪರ್ಟ್ ಅಲ್ಲವೇ ? ಯಾವುದೇ ಬೆಳೆ ರೈತ ಬೆಳೆಯಲ್ಲಿ, ಅವನ ಖರ್ಚು ಜಾತ ಅವನ ಆದಾಯದ ಮೇಲೆ ತೆರಿಗೆ ಹಾಕಿ, ಸಾಮಾನ್ಯ ಜನಗಳ ಮೇಲೆ ಅನ್ಯಾಯವಾಗಿ ತೆರಿಗೆಗಳನ್ನು ಹೇರಬೇಡಿ: ಸುಮಾರು 10-20 ಸೈಟು ಗಳನ್ನು ಪಟ್ಟಣವಾಸಿಗಳು ಇಟ್ಟುಕೊಂಡಿರುವವರು ಇತ್ತೀಚೆಗೆ ಹರಾಜು ಮಾಡಿ ಅವುಗಳಿಂದ ಬೇಕಾದಷ್ಟು ಲಾಭ ಪಡೆಯುತ್ತಿದ್ದಾರೆ. ಈ ರೀತಿ ಇನ್ನೂ ಅನೇಕ ಅವ್ಯವಸ್ಥೆಗಳಿವೆ. ತಮ್ಮ ಮೂಲಕ ಸರ್ಕಾರದವರಿಗೆ ಎಷ್ಟೋ ಅಹವಾಲುಗಳನ್ನು ಹೇಳಿಕೊಂಡಿದ್ದರೂ ಏನೂ ಉಪಯೋಗ ವಾಗಲಿಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗೋಪಾಲಸಾಲೆನ್ನ (ಮೂಡಬಿದ್ರಿ).—ಸ್ವಾಮಿ, ಹೊಸ ಕಂದಾಯವನ್ನು ಹಾಕುವ ಸಂದರ್ಭದಲ್ಲಿ ಸರ್ವೆಸೆಟಲ್‌ಮೆಂಟ್ ಅಧಿಕಾರಿಗಳಿಂದ ವರದಿ ಬಂದಿದೆ. ಆ ವರದಿಯನ್ನು ನಾವೀಗ ಚರ್ಚೆ ಮಾಡುತ್ತಿದ್ದೇವೆ, ಮತ್ತೆ ಈಗ ಅದನ್ನು ಹೆಚ್ಚು ಕಡಿಮೆ ಮಾಡುವ ಅಧಿಕಾರ ಈಸಭೆಗೆ ಇದೆ. ಆ ವರದಿಯ ಅಭಿಪ್ರಾಯವನ್ನು ಮಾನ್ಯ ಸಚಿವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ ಅದು ಮಾತ್ರವಲ್ಲದೆ ಹೆಚ್ಚಿಗೆ ಅಧಿಕಾರ ಪಕ್ಷದ ಸದಸ್ಯರೂ ಕೂಡ ಸಹಾನುಭೂತಿಯಿಂದ ಇದನ್ನು ಖಡಾಖಂಡಿತವಾಗಿ ಬದಲಾವಣೆ ಮಾಡುವುದು ಅಗತ್ಯವೆಂಬುದಾಗಿ ಹೇಳಿರುವುದು ಅಗತ್ಯವೆಂದು ಅವರ ಭಾಷಣ ಗಳಿಂದಲೇ ತಿಳಿದು ಬರುತ್ತದೆ. ಆದರೆ ಈ ವಿಚಾರಗಳನ್ನು ವಿರೋಧ ಪಕ್ಷದ ನಾವು ಅನ್ನ ಸತ್ಯಾಗ್ರಹ ಮಾಡುವ ಮೊದಲೇ ಅವರು ಆರಂಭದಲ್ಲಿಯೇ ಏಕೆ ಆಲೋಚನೆ ಮಾಡಲಿಲ್ಲವೆಂಬ ಪ್ರಶ್ನೆ ಈಗ ತನ್ನಷ್ಟಕ್ಕೆ ತಾನೇ ಉದ್ಭವಿಸುತ್ತದೆ. ಕಾಯಿದೆಯ ಪ್ರತಿ ಬಂಧಕವಿದೆ, ಅದಕ್ಕಾಗಿ ಯಾವುದಾದರೂ ಬೇರೆ ಒಂದು ರೂಪದಲ್ಲಿ ಅದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೆಂಬ ಅಭಿಪ್ರಾಯ ಬಂತು. ಆದರೂ ಕೂಡ ಈಗ ಒಂದು ಸರ್ಕಾರ ಇದೆಯೆಂದು ಹೇಳಿ ಆ ಸರ್ಕಾರ ತಮ್ಮ ಅಧಿಕಾರಿಗಳಿಂದ ಬಂದ ವರದಿಗಳನ್ನು ಪರಿಶೀಲನೆ ಮಾಡಿ ಸರ್ಕಾರದ ಅಭಿಪ್ರಾಯವನ್ನು ಈ ಸಭೆಯ ಮುಂದೆ ಇಡುವುದು ಸರ್ಕಾರದ ಜವಾಬ್ದಾರಿ. ಆ ರೀತಿಯಲ್ಲಿ ಅವರ ಅಭಿಪ್ರಾಯವನ್ನು ಈ ಸಭೆಯ ಆರಂಭದಲ್ಲಿ, ವರದಿಯನ್ನು ಈ ಸಭೆಯ ಮುಂದೆ ಇಡುವಕಾಲದಲ್ಲಿ ಸ್ಪಷ್ಟ ಪಡಿಸದೇ ಇದ್ದುದರಿಂದ ಅವರ ಅಭಿಪ್ರಾಯದಲ್ಲಿ ಈಗಿರುವಂತಹ ಒಂದು ಬದಲಾವಣೆ ಮನೋಭಾವನೆ ಅದರಲ್ಲಿ ಯಾವತ್ತು ಕಂಡುಬರಲಿಲ್ಲ. ಅದಕ್ಕಾಗಿಯೇ ವಿರೋಧ ಪಾರ್ಟಿಯ ಎಲ್ಲಾ ಪಕ್ಷಗಳೂ ಸಹ ಸಾಮೂಹಿಕವಾಗಿ ಪ್ರತಿಭಟನೆ ತೋರಿಸಬೇಕಾಗಿಬಂತು. ಆ ರೀತಿ ಈಗಾಗಲೇ ಸತ್ಯಾಗ್ರಹ ವನ್ನು ಆರಂಭಿಸಿದ್ದಾರೆ. ಇನ್ನು ನಾಳೆಯೂ ಕೂಡ ಸತ್ಯಾಗ್ರಹವನ್ನು ನಡೆಸಲಿಕ್ಕೆ ಇದ್ದೇವೆ. ಈ ರೀತಿ ಯಾಗಿ ಅನ್ನಸತ್ಯಾಗ್ರಹ ನಡೆಯುವುದು ಸರ್ಕಾರದ ಎದುರು ಹೊಸದೇನಲ್ಲ. ಎಲ್ಲಾ ಸಮಸ್ಯೆ ಗಳಲ್ಲೂ ಕೂಡ ಈ ಸರ್ಕಾರ ಜನರ ಹಿತಕ್ಕೆ ವಿರೋಧವಾಗುವ ನೀತಿಯನ್ನು ಆರಂಭಿಸಿದಾಗಲೆಲ್ಲಾ ಆಗಾಗ್ಗೆ ಇಂತಹ ಅನ್ನಸತ್ಯಾಗ್ರಹಗಳು ಅಲ್ಲಲ್ಲಿ ಜರುಗುತ್ತಲೇ ಇರುತ್ತವೆ. ವಿಧಾನಸೌಧದ ಹಿಂಭಾಗದಲ್ಲಿ ವಿಧಾನಸಭಾ ಸದಸ್ಯರಿಂದ ಎರಡನೆಯ ಸತ್ಯಾಗ್ರಹ ಆರಂಭವಾದ್ದರಿಂದ ಬೇರೆ ಬೇರೆ ಜನಗಳೂ ಕೂಡ ಸತ್ಯಾಗ್ರಹಗಳನ್ನು ಮಾಡಿ ಅವರ ಫಲಗಳನ್ನು ಈಡೇರಿಸುವಂತಹ ಸಂದರ್ಭಗಳು ಇತ್ತು. ಈ ರೀತಿಯಾಗಿ ಜನತೆಗೆ ವಿರೋಧವಾದಂಥ ಯಾವ ಒಂದು ನೀತಿಯನ್ನು ಅನುಸರಿಸುವು ದರಲ್ಲಿ ಯಾವಾಗಲೂ ಸರ್ಕಾರ ಆಲೋಚನೆ ಮಾಡಿದರೆ ಚೆನ್ನಾಗಿರುತ್ತದೆ. ಇಲ್ಲದಿದ್ದರೆ ಅದು ಸಾಮಾನ್ಯ ಜನರಮೇಲೆ ಒಂದು ದೊಡ್ಡ ಹೊರೆಯಾಗುತ್ತದೆ ಎಂಬುದಾಗಿ ತಿಳಿಯಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1934 ನೇ ಇಸವಿಯಲ್ಲಿ ಈ ಸರ್ವೆ ಮತ್ತು ರಿಸೆಟಲ್‌ಮೆಂಟ್ ಕಾರ್ಯ ನಡೆದಿದೆ. ಅಲ್ಲಿಹಾಕಿರುವಂಥ ತೆರಿಗೆಯನ್ನು ಪ್ರತಿಯೊಂದು ವಿಭಾಗಕ್ಕೂ ಹೋಲಿಸಿ ನೋಡಿದರೆ ಬಾಕಿ ವಿಭಾಗಗಳಿಗಿಂತ ಅಲ್ಲಿ ಇನ್ನೂ ಜಾಸ್ತಿಯಾಗಿದೆ. ಆದರೆ ಈಗ ಪುನಃ ತೆರಿಗೆಯನ್ನು ಅಲ್ಲಿ ಬಹಳ ವಾಗಿ ಏರಿಸಲ್ಪಟ್ಟಿದೆ. ಆ ರೀತಿ ತೆರಿಗೆಗಳನ್ನು ಏರಿಸಲ್ಪಡುವಾಗ ಅಲ್ಲಿನ ಪರಿಸ್ಥಿತಿಯನ್ನು ಸರಿ ಯಾಗಿ ಪರಿಶೀಲನೆ ಮಾಡದಂತಹ ವರದಿಗಳು ಬಂದಿದ್ದರೆ ಆ ವರದಿಗಳು ನಿಜವಾಗಿಯೂ ಅಲ್ಲಿನ ನಿಜ ಸ್ಥಿತಿಯನ್ನು ತೋರಿಸಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ ಈ ಜಿಲ್ಲೆಯಲ್ಲಿ ಗುಡ್ಡಗಾಡಿನ ಪ್ರದೇಶ ಹೆಚ್ಚು. ಅಲ್ಲಿನ ಜನಜೀವನ ಬಹಳ ಕಷ್ಟಜೀವನ. ಮತ್ತೆ ಅಲ್ಲಿ ಕೆಲವು ಸಮಯ ವಿಪರೀತ ಮಳೆಯ ಹಾವಳಿಗೆ ಕಾಡುಪ್ರಾಣಿಗಳ ಹಾವಳಿ ಮತ್ತು ಸಮುದ್ರದ ನೆರೆಯ ಹಾವಳಿಗೆ ತುತ್ತಾಗುವ ಸಂದರ್ಭಗಳು ಜಾಸ್ತಿ ಇರುತ್ತವೆ. ಇವನ್ನೆಲ್ಲಾ ಗಣನೆಗೆ ತೆಗೆದುಕೊಂಡು ಕಂದಾಯವನ್ನು ಏರಿಸುವಾಗ ಸಮತೂಕದಲ್ಲಿ ರೈತರಕಷ್ಟ ಕಾರ್ಪಣ್ಯಗಳನ್ನು ವಿಚಾರಮಾಡ ಬೇಕಾಗಿತ್ತು. ಇವರು ಇದುವರೆಗೂ ಅವನೆಲ್ಲಾ ಗಣನೆಗೆ ತೆಗೆದುಕೊಳ್ಳಲಿಲ್ಲವೆಂಬುದು ಇದ

ರಿಂದಲೇ ಸ್ಪಷ್ಟವಾಗಿ ಕಾಣುತ್ತದೆ. ಇಷ್ಟು ಮಾತ್ರವಲ್ಲ. ನೀರಾವರಿ ಕೆಲಸಗಳೂ ಕೂಡ ಬಾಕಿ ಜಿಲ್ಲೆಗಳಲ್ಲಿ ಆದಷ್ಟು ಅಲ್ಲಿ ಆಗಿಲ್ಲ. ದೊಡ್ಡ ದೊಡ್ಡ ಯೋಜನೆಗಳು ಸಾಕಷ್ಟು ಅಲ್ಲಿ ಆಗಿಲ್ಲ. ಸಣ್ಣ ನೀರಾವರಿ ಯೋಜನೆಗಳು ಅಷ್ಟು ಪರಿಣಾಮಕಾರಿಯಾಗಿ ಅಲ್ಲಿ ಕಾರ್ಯಗತವಾಗಿಲ್ಲ. ಹೀಗಿರುವಾಗ ಕಂದಾಯವನ್ನು ಏರಿಸುವುದಾದರೆ ಯಾವ ಆಧಾರದಮೇಲೆ ಏರಿಸಲಾಗಿದೆಯೆಂಬುದು ಪರಿಶಿಲೀನೆ ಮಾಡತಕ್ಕ ವಿಚಾರ. ರಿಸೆಟಲ್‌ಮೆಂಟ್ ಮಾಡುವಾಗ 30 ವರ್ಷಗಳಿಗೊಮ್ಮೆ ಆಗತಕ್ಕಂಥ ಕಂದಾಯ ಪುನರ್ವಿಮರ್ಶೆ ಪರಿಶೀಲನ ವಿಚಾರ ಕೇವಲ ಕಂದಾಯ ಜಾಸ್ತಿಮಾಡಬೇಕೆಂಬದೇ ಅಲ್ಲ. ರಿಸೆಟಲ್‌ಮೆಂಟ್ ಸಮಯದಲ್ಲಿ ಶೇಕಡ 12 ರಷ್ಟು ಜಾಸ್ತಿಮಾಡಿತ್ತು. ಅದೇ ಸಮಯದಲ್ಲಿ ಏನು ನಾವು ಡ್ರೈಲ್ಯಾಂಡ್ ಎಂದು ಕರೆಯುತ್ತೇವೋ ಅದಕ್ಕೆ ಕಂದಾಯ ಕಡಿಮೆ ಕೂಡ ಮಾಡಿತ್ತು. ಆದೇ ರೀತಿಯಲ್ಲಿ ಇಲ್ಲಿ ಈಗ ಆಗಿಲ್ಲ. ಇಲ್ಲಿ ಪ್ರತಿಯೊಂದಕ್ಕೂ ಎರಡುಪಾಲು, ಮೂರುಪಾಲು, ನಾಲ್ಕು ಪಾಲುಗಳಷ್ಟು ಜಾಸ್ತಿಯಾಗಿದೆ. ಇನ್ನು ನಾನು ಹೇಳುವುದಿಷ್ಟೇ.- ಆಹಾರ ಸಾಮಾಗ್ರಿಗಳನ್ನು ಬೆಳೆಸತಕ್ಕ ಭೂಮಿಗಾದರೂ ಕೂಡ ಕಂದಾಯ ಜಾಸ್ತಿಮಾಡತಕ್ಕದ್ದು ದೊಡ್ಡ ದ್ರೋಹವಾಗುತ್ತದೆ. ಇದರಿಂದಲೇ ರೈತರಲ್ಲಿ ಆಹಾರ ಸಾಮಾಗ್ರಿಗಳನ್ನು ಬೆಳೆಯುವಂತಹ ಉತ್ಸಾಹವನ್ನು ನಾವಾಗಿಯೇ ಕಡಿಮೆ ಮಾಡಿಸುತ್ತಿದ್ದೇವೆಂಬುದನ್ನು ನಾನು ನಿಜವಾಗಿ ಸ್ಪಷ್ಟ ಪಡಿಸುತ್ತೇನೆ. ಅದರಲ್ಲಿಯೂ ಕೂಡ ವೀಕರ್ ಸೆಕ್ಷನ್ ಎಂದು ನಾವು ಯಾರನ್ನು ಕರೆಯುತ್ತೇವೋ ಆವರಿಗೆ ಇತ್ತೀಚೆಗೆ ಭೂರಹಿತ ಜನಗಳಿಗೆ ಸರ್ಕಾರಿ ಬಂಜರು ಭೂಮಿಗಳನ್ನು ದೊರಕಿಸಿದಂತೆ ಕೇವಲ 4–5 ಎಕರೆ ಜಮೀನುಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರಿಗೆ ಸಾಗುಮಾಡುವಷ್ಟು ಆರ್ಥಿಕ ಅನುಕೂಲತೆ ಇಲ್ಲ. ಆವರು ಈಗಾಗಲೇ ಆರಂಭ ಮಾಡಿರಬಹುದು. ಆದರೆ ಅದುಫಲ ಕೊಡಬೇಕಾದರೆ ಇನ್ನು ನಾಲ್ಕೈದು ವರ್ಷಗಳ ಸಂದರ್ಭ ಬೇಕಾದೀತು ಎಂದು ಎಲ್ಲರಿಗೂ ತಿಳಿದಿದೆ. ಕಂದಾಯ ಉತ್ಪಾದನಾ ದಾಮೊಷಾ ಪ್ರಕಾರ ಜನರಮೇಲೆ ಬೀಳುವಂತಾಗಬೇಕು. ಹೊರಲಾರದಂತೆ ಹಾಕುವುದಲ್ಲ. ಮದ್ರಾಸ್ ರಾಜ್ಯದಲ್ಲಿ ಮಾಡಿದಂತೆ ಇಲ್ಲಿ ರೆವಿನ್ಯೂ ಕಾಯಿದೆಗಳು ರಚಿತವಾಗಿಲ್ಲ. ಇದರಿಂದ ದರಖಾಸ್ತು ಜಮೀನುಗಳನ್ನು ವಿಲೇವಾರಿ ಮಾಡುವುದರಲ್ಲಿ ಅಧಿಕಾರಿಗಳಿಗೆ ಇಲ್ಲಿ ತೊಂದರೆಯಾಗಿದೆ. ಆದ್ದರಿಂದ ಕಂದಾಯವನ್ನು ಆದಷ್ಟು ಕಡಿಮೆಯಾಗಿ ನಿರ್ಧರಿಸಬೇಕು. ದಲಿತರ ಮತ್ತು ಗಿರಿಜನರಿಗೆ ಕೊಟ್ಟಂಥ ಭೂಮಿಗಳೇನಾದರೂ ಇದ್ದರೆ ಕೆಲವು ವರ್ಷಗಳಾದರೂ ಅವುಗಳ ಮೇಲೆ ಕಂದಾಯ ಹಾಕುವ ಬಗ್ಗೆ ಪೂರ್ತಿ ವಿನಾಯಿತಿ ಪಡಿಸುವುದು ತೀರಾ ಅಗತ್ಯವಿದೆ. ಆದ್ದರಿಂದ ಸರ್ಕಾರದವರು ಪೂರ್ತಿಯಾಗಿ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ನಂಜೇಗೌಡ (ಕೃಷ್ಣರಾಜಪೇಟೆ).—ಮಾನ್ಯ ಸಭಾಪತಿಗಳೇ ಈಗ ನಮ್ಮ ಮುಂದೆ ಇರತಕ್ಕಂಥ ಲ್ಯಾಂಡ್ ರೇವಿನ್ಯೂ ಸೆಟ್ಲ್‌ಮೆಂಟ್ ವರದಿಯ ಬಗ್ಗೆ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಈಗ ಕಂದಾಯವನ್ನು ಹೆಚ್ಚಿಸಬೇಕೆಂದು ನಮ್ಮ ಸರ್ಕಾರದವರು ಈ ಒಂದು ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈಗ ಸರ್ಕಾರದವರು ಮಾಡಿರತಕ್ಕ ದೇಶಾಭಿವೃದ್ಧಿಯ ಯೋಜನೆಗಳಿಗೆ ದುಡ್ಡು ಸಾಲುವುದಿಲ್ಲ. ಆ ಯೋಜನೆಗಳನ್ನು ನೆರವೇರಿಸಬೇಕಾದರೆ ಈ ಒಂದು ತೆರಿಗೆಯನ್ನು ಹಾಕಬೇಕು ಎಂದು ಹೇಳಿ ಸರ್ಕಾರದ ಅಭಿಪ್ರಾಯ ಇದೆ. ಹಿಂದೆ ರಾಜ್ಯದ ಆದಾಯ 3 ಕೋಟಿ ರೂಪಾಯಿಗಳ ರೆವಿನ್ಯೂ ಆದಾಯವೇ ರಾಜಾದಾಯವಾಗಿತ್ತು. ಈಗ ನಮ್ಮ ರಾಜ್ಯದ ಆದಾಯ 120 ಕೋಟಿ ರೂಪಾಯಿಗಳಿಗೆ ಏರಿದೆ. ಈ 120 ಕೋಟಿ ರೂಪಾಯಿಗಳನ್ನು ಕೊಡತಕ್ಕ ಜನ ಯಾರು ಎಂದರೆ 100 ಕ್ಕೆ 85 ಭಾಗ ಇರತಕ್ಕಂಥ ಹಳ್ಳಿಗಾಡಿನ ರೈತರು. ಈ ರೀತಿ ರೈತನಿಂದ ಡೈರೆಕ್ಟಾಗಿ ಮತ್ತು ಇಂಡೈರೆಕ್ಟಾಗಿ 120 ಕೋಟಿ ರೂಪಾಯಿಗಳ ತೆರಿಗೆ ಸರ್ಕಾರಕ್ಕೆ ಬರುತ್ತಿದೆ. ಇದು ಅಲ್ಲದೆ ರೈತ ಡೈರೆಕ್ಟಾಗಿ ಕೊಡತಕ್ಕ ಇತರ ತೆರಿಗೆಗಳು ಏನೇನು ಎಂದರೆ, ರೈತ ಒಂದು ಕುಡಿಯುವ ನೀರಿನ ಬಾವಿಯನ್ನು ಕೊಡಿ ಎಂದರೆ ಅದಕ್ಕೆ ಅವನು 25 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಡಬೇಕೆಂಬ ನಿರ್ಬಂಧ ಇದೆ. ರೈತನ ಮಕ್ಕಳು ವಿದ್ಯಾಭ್ಯಾಸ ಮಾಡುವುದಕ್ಕೆ ಒಂದು ಸ್ಕೂಲ್ ಬಿಲ್ಡಿಂಗ್ ಕಟ್ಟಿಸಿಕೊಡಿ ಎಂದರೆ ಎರಡು ಸಾವಿರ ರೂಪಾಯಿಗಳನ್ನು ಕೊಡಿ, 2500 ರೂಪಾಯಿಗಳನ್ನು ಕೊಡಿ ಎಂದು ಕೇಳುತ್ತಾರೆ. ಹಳ್ಳಿಗಾಡಿನ ಕಡೆಗೆ ಒಂದು ರಸ್ತೆ ಮಾಡಿಸಿಕೊಡಿ ಎಂದರೆ ಆದಕ್ಕೆ ರೈತ ಕಾಂಟ್ರಿಬ್ಯೂಷನ್ ಕೊಡಬೇಕು. ಒಂದು ಹೈಸ್ಕೂಲು ಕೊಡಿ ಎಂದರೆ 3 ವರ್ಷ ಸರ್ಕಾರದವರು ಅದಕ್ಕೆ ಏನೂ ಸಹಾಯಮಾಡುವುದಿಲ್ಲ. ನೀವೇ ಸ್ವಂತವಾಗಿ ನಡೆಸಬೇಕು ಆ ಮೇಲೆ ನಾವು 85 ಪರ್ಸೆಂಟ್ ಮೇಂಟೆನೆನ್ಸ್ ಗ್ರಾಂಟನ್ನು ಕೊಡುತ್ತೇವೆಂದು ಹೇಳುತ್ತಾರೆ. ಹೀಗೆ ರೈತನಿಗೆ ಸರ್ಕಾರದವರು ನಾನಾ ತರದಲ್ಲಿ ತೆರಿಗೆಯನ್ನು ಹಾಕಿದ್ದೀರಿ, ಅವನು ಇವೊತ್ತು ಬಹಳ ಕಷ್ಟಸ್ಥಿತಿಯಲ್ಲಿ ಇದ್ದಾನೆ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಜಾರಿಗೆ ತರಬೇಕೆಂದು ಸುಮಾರು 150 ವರ್ಷಗಳಿಂದ ಪ್ರಯತ್ನಪಟ್ಟು ನಮ್ಮ ಹಿಂದಿನ ಮಹಾನುಭಾವರು ನಮಗೆ ಪ್ರಜಾಪ್ರಭುತ್ವವನ್ನು ತಂದು ಕೊಟ್ಟಿದ್ದಾರೆ. ಈಗ ಆದನ್ನು ನಾವು

(ಶ್ರೀ ಎನ್. ನಂಜೇಗೌಡ)

ಉಳಿಸಿಕೊಳ್ಳಬೇಕಾದ್ದು ನಮ್ಮ ಕರ್ತವ್ಯ ಇದೆಯೆಂದು ನನಗೆ ಭಾಸವಾಗುತ್ತದೆ. ಮಹಾಭಾರತ ಯುದ್ಧವಾಗಬೇಕಾದರೂ ಶಕುನಿಯೇ ಕಾರಣ. ಕುರುವಂಶ ನಾಶವಾಗಬೇಕಾದರೂ ಶಕುನಿಯೇ ಕಾರಣ. ಅದೇರೀತಿ ಯಾರು ಪ್ರಜಾಪ್ರಭುತ್ವವನ್ನು ಸ್ಥಾಪನೆ ಮಾಡಿದರೋ ಅವರೇ ಇಂಥಾ ಒಂದು ವರದಿಯನ್ನು ಈ ಸಭೆಯ ಮುಂದೆ ತರುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ, ಎಂದು ನಾನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಇವೊತ್ತಿನ ದಿವಸ ನಮ್ಮ ದೇಶದ ರೈತನ ಸ್ಥಿತಿ ಏನಿದೆ ಎಂದರೆ ಮೊನ್ನೆ ಕೇಂದ್ರದ ಸಚಿವರಾದ ಶ್ರೀಮಾನ್ ಸಂಜೀವರೆಡ್ಡಿಯವರು ಜಂಷೆಡ್ ಪುರಕ್ಕೆ ಹೋಗಿದ್ದಾಗ ಅಲ್ಲಿಗೆ ಡೆನ್ಮಾರ್ಕ್ ದೇಶದ ಒಬ್ಬರು ಆರ್ಥಿಕ ವ್ಯವಸಾಯ ತಜ್ಞರು ಬಾಂಗನ್ನರ್ ಬಂದಿದ್ದರು. ಅವರು ಶ್ರೀಮಾನ್ ಸಂಜೀವರೆಡ್ಡಿಯವರನ್ನು ಕುರಿತು ನಿಮ್ಮ ದೇಶದ ರೈತನ ವರಮಾನ ಒಂದು ತಿಂಗಳಿಗೆ ಎಷ್ಟು ರೂಪಾಯಿ ಎಂದು ಕೇಳಿದರು. ಆಗ ಅದಕ್ಕೆ ಇವರು ನಮ್ಮ ದೇಶದಲ್ಲಿ ಒಬ್ಬ ರೈತನಿಗೆ ತಿಂಗಳಗೆ 18 ರೂಪಾಯಿ ವರಮಾನ ಇದೆ ಎಂದು ಹೇಳಿದ್ದನ್ನು ಕೇಳಿ ಅವರು ಆಶ್ಚರ್ಯ ಪಟ್ಟರು. ಡೆನ್ಮಾರ್ಕಿನಲ್ಲಿ ಒಬ್ಬ ರೈತನ ಆದಾಯ ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿಗಳು ಇದೆ. ನಮ್ಮ ದೇಶದಲ್ಲಿ ಒಬ್ಬ ರೈತನ ಆದಾಯ ಒಂದು ತಿಂಗಳಿಗೆ 18 ರೂಪಾಯಿಗಳಿವೆ ಎಂದರೆ ಇದಕ್ಕಿಂತ ನಾಚಿಕೆಗೇಡು ಬೇರೊಂದಿಲ್ಲ. ನಮ್ಮ ದೇಶದಲ್ಲಿ ಸರ್ಕಾರದವರು ರೈತನಿಗೆ ವ್ಯವಸಾಯಕ್ಕೆ ಬೇಕಾದ ನೀರಾವರಿ ಸೌಲಭ್ಯ ಗೊಬ್ಬರ, ಒಳ್ಳೆಯ ಬೀಜ, ಉಪಕರಣ ಇತ್ಯಾದಿಗಳನ್ನು ಸರಿಯಾಗಿ ಒದಗಿಸಿಕೊಟ್ಟಿಲ್ಲ. ಹೀಗಿರುವಾಗ ಒಂದು ತಿಂಗಳಿಗೆ 18 ರೂಪಾಯಿಗಳ ವರಮಾನ ಬರತಕ್ಕ ರೈತನಿಗೆ ಸರ್ಕಾರದವರು ಇಷ್ಟೊಂದು ತೆರಿಗೆಯನ್ನು ಹೊರಿಸುವಾಗ ರೈತ ಇಷ್ಟು ಭಾರದ ತೆರಿಗೆಯನ್ನು ಹೊರುವುದಕ್ಕೆ ಅವನಿಗೆ ಶಕ್ತಿ ಇದೆಯೇ ಎಂಬುದನ್ನು ಸರ್ಕಾರ ಕೂಲಂಕಷವಾಗಿ ವಿಮರ್ಶೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ನಮ್ಮ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಒಂದು ಜಮೀನನ್ನು ವ್ಯವಸಾಯ ಮಾಡಬೇಕಾದರೆ 207 ರೂಪಾಯಿಗಳು ಖರ್ಚಾಗುತ್ತದೆ ಎಂದು ಸರ್ವೆಯರ್ ಅವರು ರಿಪೋರ್ಟ್‌ನಲ್ಲಿಯೇ ಕೊಟ್ಟಿದ್ದಾರೆ. ಪ್ಯಾಕೇಜ್ ಪ್ರೋಗ್ರಾಮ್ ಜಾರಿಯಲ್ಲಿರುವ ಪ್ರದೇಶಗಳಲ್ಲಿ ಒಂದು ಎಕರೆಗೆ 300 ರೂಪಾಯಿಗಳು ಖರ್ಚಾಗುತ್ತದೆ. ಇದರಲ್ಲಿ ಸರ್ಕಾರ ಒಂದು ಎಕರೆಗೆ 150 ರೂಪಾಯಿಗಳ ಸಾಲವನ್ನು ಕೊಡುತ್ತಾರೆ. ಇನ್ನು 150 ರೂಪಾಯಿಗಳನ್ನು ರೈತ ತನ್ನ ಸ್ವಂತ ಶ್ರಮದಿಂದ ಖರ್ಚುಮಾಡಬೇಕಾಗುತ್ತದೆ ಎಂದು ಸರ್ವೇಯರು ಏನು ತಮ್ಮ ವರದಿಯಲ್ಲಿ ಕೊಟ್ಟಿದ್ದಾರೆಯೋ ಅದು ಸತ್ಯಕ್ಕೆ ದೂರವಾದದ್ದು. ಇವೊತ್ತಿನ ದಿವಸ ರೈತ ಕಷ್ಟಕ್ಕೆ ಸಿಕ್ಕಿ ಅವನು ಭೂಮಿಯಲ್ಲಿ ವರಮಾನವನ್ನು ತೆಗೆಯುವುದು ಕಷ್ಟವಾಗಿದೆ. ಇಂಥಾ ಒಂದು ಸಂದರ್ಭದಲ್ಲಿ ರೈತನಿಗೆ ಹೆಚ್ಚು ಕಂದಾಯವನ್ನು ಹಾಕಿದರೆ ಅದನ್ನು ಯಾವ ರೀತಿ ವಸೂಲು ಮಾಡುತ್ತೀರಿ ಎಂಬುದನ್ನು ಕೂಡ ಸರ್ಕಾರದವರು ಗಮನದಲ್ಲಿಟ್ಟು ಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ನಾನು ಒಬ್ಬ ಸಾಮಾನ್ಯವಾದ ದೊಡ್ಡ ರೈತ. ಈಗ ನನಗೆ ಹೆಚ್ಚಿನ ಉತ್ಪತ್ತಿಯೇನೋ ಇದೆ. ಆದರೆ ನಮಗೆ ಒಬ್ಬ ಕೆಳದರ್ಜೆಯ ಸಣ್ಣ ನೌಕರನ ಸಂಬಳವನ್ನು ಕೊಡುವುದಾದರೆ ನಮ್ಮ ಸಂಸಾರದವರೆಲ್ಲರೂ ಸರ್ಕಾರದ ಕೆಲಸಕ್ಕೆ ಬರುತ್ತೇವೆ. ಮತ್ತು ನಮ್ಮಲ್ಲಿರತಕ್ಕ ಸರ್ವಸ್ವವನ್ನೂ ಸರ್ಕಾರಕ್ಕೆ ಸಮರ್ಪಿಸುತ್ತೇವೆ. ನಮ್ಮ ಸಂಸಾರದಲ್ಲಿರತಕ್ಕವರಿಗೆ ಪ್ರತಿಯೊಬ್ಬರಿಗೂ ಒಂದು ತಿಂಗಳಿಗೆ 60 ರೂಪಾಯಿಗಳಂತೆ ಸಂಬಳ ಕೊಟ್ಟರೆ ಸಾಕು. ನೀವು ಹೇಳಿದ ಕೆಲಸವನ್ನು ಒಂದು ದಿವಸಕ್ಕೆ 6 ಗಂಟೆ ಕೆಲಸ ಮಾಡುತ್ತೇವೆ. ಕೊನೆಗೆ ನಮ್ಮನ್ನು ಬೀದಿಗುಡಿಸಿ ಎಂದು ಹೇಳಿದರೂ ಅದನ್ನು ನಾವು ಮಾಡುವುದಕ್ಕೆ ಸಿದ್ಧರಾಗಿದ್ದೇವೆ. ನಮಗೆ ಪ್ರತಿಯೊಬ್ಬರಿಗೂ ಒಂದು ತಿಂಗಳಿಗೆ 60 ರೂಪಾಯಿ ಸಂಬಳವನ್ನು ಕೊಟ್ಟರೆ ಸಾಕು. ತಾವು ಆ ರೀತಿ ಮಾಡುವುದಾದರೆ ನಮ್ಮ ಆಸ್ತಿ ವಗೈರೆ ಸರ್ವಸ್ವವನ್ನೂ ಕೂಡ ಸರ್ಕಾರಕ್ಕೆ ವಹಿಸುವುದಕ್ಕೆ ನಾನು ಸಿದ್ಧವಾಗಿದ್ದೇನೆ. ಖಂಡಿತವಾಗಿಯೂ ನಾನು ಆ ರೀತಿ ಬರೆದುಕೊಡುವುದಕ್ಕೆ ನಾನು ತಮಗೆ ಭರವಸೆಯನ್ನು ಕೊಡುತ್ತೇನೆ. ಈ ಸಭೆಯಲ್ಲಿ ನಾನು ಅಂಥಾ ಸತ್ಯಕ್ಕೆ ದೂರವಾದ ಮಾತನ್ನು ಆಡುವುದಿಲ್ಲ. ನಮ್ಮ ಮನೆಯಲ್ಲಿ 16 ಜನಗಳಿದ್ದಾರೆ. 16 ಜನಗಳಿಗೆ ಪ್ರತಿಯೊಬ್ಬರಿಗೂ ಒಂದು ತಿಂಗಳಿಗೆ 60 ರೂಪಾಯಿಗಳಂತೆ ನಮಗೆ ಸಂಬಳವನ್ನು ಕೊಟ್ಟರೆ ಸಾಕು. ನಮಗೆ ಅಷ್ಟೇ ಸಾಕು. ಇವೊತ್ತಿನ ದಿವಸ ರೈತ ತುಂಬಾ ಕಷ್ಟಪರಿಸ್ಥಿತಿಯಲ್ಲಿದ್ದಾನೆ. ಒಬ್ಬ ಬಡರೈತ ಇಂಥಾ ಒಂದು ಕಷ್ಟ ಪರಿಸ್ಥಿತಿಯಲ್ಲಿ ಅವನು ಜೀವನವನ್ನು ನಡೆಸುವುದೇ ಕಷ್ಟವಾಗಿರುವಾಗ ಈ ರೀತಿ ಸರ್ಕಾರದವರು ಕಂದಾಯವನ್ನು ಜಾಸ್ತಿ ಮಾಡುವುದು ಸರಿಯೇ ಎಂಬುದನ್ನು ಸರ್ಕಾರದವರು ಸ್ವಲ್ಪ ಯೋಚನೆ ಮಾಡಬೇಕು. ಇವೊತ್ತು ರೈತನ ಆರ್ಥಿಕ ಪರಿಸ್ಥಿತಿ ಯಾವ ಮಟ್ಟದಲ್ಲಿ ಇದೆ, ಅವನು ಜೀವನ ಮಾಡತಕ್ಕ ಸ್ಥಿತಿಯಲ್ಲಿ ಇದ್ದಾನೆಯೇ, ಅವನ ಬಂಡವಾಳ

ಏನಿದೆ ಎಂಬುದನ್ನೇನಾದರೂ ಸರ್ಕಾರದವರು ವಿಮರ್ಶೆ ಮಾಡಿದ್ದಾರೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಹಿಂದೆ ಹಳ್ಳಿಗಾಡಿನಲ್ಲಿ ಒಬ್ಬ ಕೂಲಿಗೆ 3 ಆಣೆ 4 ಆಣೆ ಇತ್ತು. ಇವೊತ್ತು ಒಬ್ಬ ಕೂಲಿಯವನಿಗೆ ಊಟ ಹಾಕಿ ಒಂದು ದಿವಸಕ್ಕೆ 2½ ರೂಪಾಯಿ ಕೂಲಿಯನ್ನು ಕೊಡಬೇಕಾಗಿದೆ. ಈ ರೀತಿ ಕೂಲಿಯವರಿಗೆ ರೈತ ಒಂದು ದಿನಕ್ಕೆ 2½ ರೂಪಾಯಿ ಕೂಲಿ ಕೊಟ್ಟು ಊಟಕೊಟ್ಟು ವ್ಯವಸಾಯ ಮಾಡಿದರೆ ಅವನಿಗೆ ಉತ್ಪತ್ತಿ ಎಷ್ಟು ಬರುತ್ತದೆ ಅವನು ಹೇಗೆ ಉದ್ಧಾರವಾಗುತ್ತಾನೆ. ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ನಿಜವಾಗಿಯೂ ಸರ್ಕಾರದವರು ಈ ಮಟ್ಟದಲ್ಲಿ ರೈತನಿಗೆ ಕಂದಾಯವನ್ನು ಜಾಸ್ತಿ ಮಾಡುವುದಾದರೆ ಆಹಾರದ ಸಮಸ್ಯೆ ಬಿಗಡಾಯಿಸಿ ಆಹಾರದ ಪರಿಸ್ಥಿತಿ ಉತ್ಕಟ ಪರಿಸ್ಥಿತಿಗೆ ಬಂದು ರೈತನಿಗೆ ಸಬ್ಸಿಡಿ ರೂಪದಲ್ಲಿ ಹಣವನ್ನು ಕೊಟ್ಟು ವ್ಯವಸಾಯವನ್ನು ಮಾಡಿಸುವಂತಹ ಕಾಲ ಬರುತ್ತದೆ. ಮತ್ತು ಹಳ್ಳಿ ಗಾಡಿನಲ್ಲಿರತಕ್ಕವರೆಲ್ಲರೂ ವ್ಯವಸಾಯವನ್ನು ಬಿಟ್ಟು ಸಿಟಿಗಳಿಗೆ ಬಂದು ಯಾವುದಾದರೂ ಒಂದು ಫ್ಯಾಕ್ಟರಿಗೋ ಅಥವಾ ಮತ್ತಾವುದಾದರೂ ಒಂದು ಉದ್ಯೋಗಕ್ಕೆ ಸೇರಿಕೊಂಡು ತಮ್ಮ ಜೀವನವನ್ನು ನಡೆಸುವಂತಹ ಒಂದು ಪರಿಸ್ಥಿತಿ ಬರುತ್ತದೆ ಎಂದು ಹೇಳಿ ಈ ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri N. O. SAMAJI (Belgaum II).—(Marathi).

Mr. DEPUTY SPEAKER.—If the Hon'ble Member give a gist of his speech in English, I will see that it is inserted in the proceedings.

The House will now rise and reassemble at one o'clock tomorrow.

The House adjourned at Thirty Minutes past Six of the Clock to meet again at One of the Clock on Friday, the 9th April 1965.

WD 4954—GPB—500—24.8·1965